ಪ್ರಾಚೀನ ಗದ್ಯಸಾಹಿತ್ಯಮಾಲೆ : ೮

ಕರ್ನಾಟಕ ಸರ್ಕಾರ

ನಾರಾಯಣಶರ್ಮ ವಿರಚಿತ

ಮುದ್ರಾಮಂಜೂಷವು

ಪ್ರಧಾನ ಸಂಪಾದಕರು : ಡಾ. ಸಿದ್ಧಲಿಂಗಯ್ಯ
ಗೌರವ ಸಂಪಾದಕರು : ಡಾ. ಎಂ. ಎಂ. ಕಲಬುರ್ಗಿ
ಸಂಪಾದಕರು : ಜಿ. ಎ. ಶಿವಲಿಂಗಯ್ಯ

ಕನ್ನಡ ಪುಸ್ತಕ ಪ್ರಾಧಿಕಾರ

ನಾರಾಯಣಶರ್ಮ ವಿರಚಿತ

ಮುದ್ರಾಮಂಜೂಷವು

ಪ್ರಾಚೀನ ಗದ್ಯಸಾಹಿತ್ಯಮಾಲೆ : ೮

ನಾರಾಯಣಶರ್ಮ ವಿರಚಿತ

ಮುದ್ರಾಮಂಜೂಷವು

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಗೌರವ ಸಂಪಾದಕರು

ಡಾ. ಎಂ.ಎಂ. ಕಲಬುರ್ಗಿ

ಸಂಪಾದಕರು

ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಬೆಂಗಳೂರು–೫೬೦ ೦೦೨.

Mudramanjushavu– An Ancient Kannada Prose-classic (1823 A.D.)
by Narayana Sharma (Kempu Narayana)
Edited by T.V. Venkatachala Sastry
Published by B.H. Mallikarjuna
Administrative Officer, Kannada Pustaka Pradhikara,
Kannada Bhavana. J.C. Road, Bangalore-560 002.

First Impression	:	2012
Pages	:	cx+351=461
Copies	:	1000
Price	:	₹280/-

■

ಮೊದಲ ಮುದ್ರಣ	:	೨೦೧೨
ಪುಟಗಳು	:	cx + ೩೫೧ = ೪೬೧
ಪ್ರತಿಗಳು	:	೧೦೦೦
ಬೆಲೆ	:	₹ ೨೮೦/-

ಸಂಪಾದಕರು :
ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ

ಪ್ರಕಾಶಕರು
ಬಿ.ಹೆಚ್. ಮಲ್ಲಿಕಾರ್ಜುನ
ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨.

ಅಕ್ಷರ ಜೋಡಣೆ :
ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್
ಜಯನಗರ, ಮೈಸೂರು

ಮುದ್ರಕರು :
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.
ನಂ. ೧೬/೧, ೨ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ
ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು-೫೬೦ ೦೨೬
ದೂರವಾಣಿ : ೦೮೦-೨೬೭೪ ೨೮೧೧; ಮೊ : ೯೩೪೨೮ ೬೪೭೬೧

*

ಸಲಹಾಮಂಡಳಿ

■

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಗೌರವ ಸಂಪಾದಕರು

ಡಾ. ಎಂ.ಎಂ. ಕಲಬುರ್ಗಿ

ಸಂಪಾದಕರು

ಡಾ. ಸಿ.ಪಿ. ಕೃಷ್ಣಕುಮಾರ್

ಡಾ. ಕೆ. ಮರಳಸಿದ್ದಪ್ಪ

ಪ್ರೊ. ಸುಧಾಕರ

ಡಾ. ಕೆ.ಆರ್. ಗಣೇಶ್

ಪ್ರೊ. ಸಿ.ವಿ. ಕೆರಿಮನಿ

ಎ.ಕೆ. ರಾಮೇಶ್ವರ

ಆಡಳಿತಾಧಿಕಾರಿಗಳು

ಬಿ.ಹೆಚ್. ಮಲ್ಲಿಕಾರ್ಜುನ

*

ಪ್ರಾಚೀನ ಗದ್ಯಸಾಹಿತ್ಯಮಾಲೆಯ ಕೃತಿಗಳು

■

	ಕೃತಿ ಶೀರ್ಷಿಕೆ	ಸಂಪಾದಕರು
೧.	ಆರಾಧನಾ ಕರ್ಣಾಟಟೀಕಾ (ವಡ್ಡಾರಾಧನೆ)	: ಡಾ. ಶಾಂತಿನಾಥ ದಿಬ್ಬದ
೨.	ಚಾವುಂಡರಾಯ ಪುರಾಣಂ	: ಡಾ. ಎಂ.ಎ. ಜಯಚಂದ್ರ
೩.	ಕರ್ಣಾಟಕ ಪಂಚತಂತ್ರಂ	: ಡಾ. ಪಿ.ವಿ. ನಾರಾಯಣ
೪.	ಧರ್ಮಾಮೃತಂ	: ಶ್ರೀ ಶುಭಚಂದ್ರ
೫.	ಕನ್ನಡ ಶರಣರ ಕಥೆಗಳು	: ಡಾ. ಎಂ.ಎಂ. ಕಲಬುರ್ಗಿ
೬	ವಿವೇಕ ಚಿಂತಾಮಣಿ	: ಶ್ರೀ ಜಿ.ಎ. ಶಿವಲಿಂಗಯ್ಯ
೭	ಚಿಕ್ಕದೇವರಾಯ ವಂಶಾವಳಿ	: ಶ್ರೀ ಹೆಚ್.ಎಂ. ನಾಗರಾಜರಾವ್
೮.	ಮುದ್ರಾಮಂಜೂಷವು	: ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ
೯.	ರಾಜಾವಳಿ ಕಥೆ	: ಡಾ. ರಾಮೇಗೌಡ
೧೦.	ರಾಮಾಶ್ವಮೇಧಂ	: ಡಾ. ಗಾಯತ್ರಿ ನಾವಡ

■

*

ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿ ಸ್ಥಾಪಿಸಿರುವ ಸಂಸ್ಥೆಯಾಗಿದೆ. ವಿಶೇಷವಾಗಿ ಜನಪ್ರಿಯ ಪ್ರಕಾರಕ್ಕೆ ಸೇರಿದ ಪುಸ್ತಕಗಳನ್ನು ಪ್ರಕಟಿಸಿ, ಜನಸಾಮಾನ್ಯರಿಗೆ ಸುಲಭ ದರದಲ್ಲಿ ತಲುಪಿಸಬೇಕೆನ್ನುವುದು ಪ್ರಾಧಿಕಾರದ ಆಶಯವಾಗಿದೆ. ಸೃಜನಶೀಲ ಸಾಹಿತ್ಯಪ್ರಕಾರಕ್ಕೆ ಸೇರಿದ ಕೃತಿಗಳನ್ನು ಪ್ರಕಟಿಸಿರುವುದು ಹೆಚ್ಚಿಲ್ಲವಾದರೂ, ಪ್ರಕಟಿಸಿರುವಷ್ಟು ಮೌಲಿಕವಾದದ್ದಾಗಿದೆ. ಉಳಿದಂತೆ ವಿಮರ್ಶೆ, ಜೀವನಚರಿತ್ರೆ, ಶಾಸ್ತ್ರವಿಷಯ ಕುರಿತಾದ ಗ್ರಂಥಗಳು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳನ್ನು ಹೊರತರಲಾಗಿದೆ. ಹಳಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕುಮಾರವ್ಯಾಸ ಭಾರತವನ್ನು ಹೊರತುಪಡಿಸಿದರೆ ಇತರೆ ಯಾವುದೇ ಪ್ರಾಚೀನ ಸಾಹಿತ್ಯಕೃತಿಗಳನ್ನು ಹೊರತರುವಲ್ಲಿ ಪ್ರಾಧಿಕಾರವಾಗಲೀ, ಅಕಾಡೆಮಿಗಳಾಗಲೀ ಈವರೆಗೆ ಪ್ರಯತ್ನ ಮಾಡಿದಂತಿಲ್ಲ. ಕನ್ನಡ ಸಾಹಿತ್ಯದ ಪ್ರಾಚೀನಗ್ರಂಥಗಳನ್ನು ಈವರೆಗೂ ಹೆಚ್ಚು ಪ್ರಕಟಿಸಿರುವುದು ರಾಜ್ಯದ ವಿಶ್ವವಿದ್ಯಾಲಯಗಳೇ ಎನ್ನಬಹುದು.

ಕನ್ನಡಿಗರಿಗೆ ಪ್ರಾಚೀನ ಕನ್ನಡ ಗದ್ಯಕೃತಿಗಳು ಸುಲಭ ದರದಲ್ಲಿ, ಪರಿಶುದ್ಧ ರೂಪದಲ್ಲಿ ದೊರೆಯಬೇಕೆಂಬ ಆಶಯದಿಂದ ಹಳಗನ್ನಡ, ನಡುಗನ್ನಡದ ಹತ್ತು ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಲಾಯಿತು. ನಾಡಿನ ಹಿರಿಯ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಅವರು ಈ ಮಾಲೆಯ ಸಂಪಾದನಕಾರ್ಯದ ನೇತೃತ್ವ ವಹಿಸಲು ಒಪ್ಪಿಕೊಂಡು, ಸಕಾಲದಲ್ಲಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಈ ಮಾಲಿಕೆಯ ಸಂಪಾದನ ಸಮಿತಿಯ ಸದಸ್ಯರಾದ, ಡಾ. ಸಿ.ಪಿ. ಕೃಷ್ಣಕುಮಾರ್ ಡಾ. ಕೆ. ಮರುಳಸಿದ್ಧಪ್ಪ, ಡಾ. ಕೆ.ಆರ್. ಗಣೇಶ್, ಶ್ರೀ ಸುಧಾಕರ, ಪ್ರೊ. ಸಿ.ವಿ. ಕೆರಿಮನಿ, ಶ್ರೀ ಎ.ಕೆ. ರಾಮೇಶ್ವರ, ಇವರಿಗೆ ಕೃತಜ್ಞತೆಗಳು. ಈ ಮಾಲೆಯಲ್ಲಿ ಹತ್ತು ಕೃತಿಗಳನ್ನು ಸಂಪಾದಿಸಿಕೊಟ್ಟ ಎಲ್ಲ ವಿದ್ವಾಂಸರುಗಳಿಗೆ ಆಭಾರಿಯಾಗಿದ್ದೇನೆ.

ಈ ಮಾಲೆಯನ್ನು ಹೊರತರುವಲ್ಲಿ ಆಸಕ್ತಿ ವಹಿಸಿದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ, ನನ್ನ ಆಪ್ತ ಕಾರ್ಯದರ್ಶಿಯಾದ ಶ್ರೀ ಕೆ. ಮುಕುಂದನ್ ಹಾಗೂ ಪ್ರಾಧಿಕಾರದ ಎಲ್ಲ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು. ಕನ್ನಡ ವಾಚಕವೃಂದ ನಮ್ಮ ಈ ಪ್ರಯತ್ನವನ್ನು ತುಂಬುಹೃದಯದಿಂದ ಸ್ವಾಗತಿಸುತ್ತದೆಂದು ಆಶಿಸುತ್ತೇನೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

*

ಗೌರವ ಸಂಪಾದಕರ ಮಾತು

ಡಾ. ಎಂ.ಎಂ. ಕಲಬುರ್ಗಿ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪದ್ಯಕ್ಕೆ ಪ್ರಧಾನ ಪಟ್ಟ; ಗದ್ಯಕ್ಕೆ ಗೌಣಸ್ಥಾನ. ವಸ್ತು ಸ್ಥಿತಿ ಹೀಗಿರುವಾಗ, ಹೆಚ್ಚಿನದಾಗಿ ಆಧುನಿಕ ವಿದ್ವಾಂಸರು ಪ್ರಾಚೀನ ಪದ್ಯಸಾಹಿತ್ಯಕ್ಕೆ ಆಕರ್ಷಿತರಾಗಿ, ಅಂದಿನ ಗದ್ಯ ಸಾಹಿತ್ಯದ ಪ್ರಕಟನೆ– ಅಧ್ಯಯನಗಳನ್ನು ಅವಗಣಿಸುತ್ತ ಬಂದರು. ಇದರಿಂದಾಗಿ ಮೂಲೆಗೆ ಸರಿದಿರುವ ಈ ಸಾಹಿತ್ಯಪ್ರಕಾರವನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರ 'ಪ್ರಾಚೀನ ಗದ್ಯ ಸಾಹಿತ್ಯ ಮಾಲೆ' ಹೆಸರಿನ ಯೋಜನೆಯನ್ನು ಕೈಗೆತ್ತಿಕೊಂಡು, ಹತ್ತು ಮುಖ್ಯಕೃತಿಗಳನ್ನು ಪ್ರಕಟಿಸುತ್ತಿದೆ.

ಭಾವನೆ, ಚಿಂತನೆಗಳು ಭಾಷೆಯ ಮೂಲಕ ತಮ್ಮ ಸೆರೆ ಬಿಡಿಸಿಕೊಳ್ಳುವ ಸಂದರ್ಭದಲ್ಲಿ ಅವಲಂಬಿಸುವ ಮುಖ್ಯ ಮಾರ್ಗಗಳು ಎರಡು: ಗದ್ಯ ಮತ್ತು ಪದ್ಯ. ಗದ್ಯಕ್ಕೆ ಲಯ ಕೂಡಿದರೆ ಪದ್ಯವಾಗುತ್ತದೆ. ಆಗ ಅದಕ್ಕೆ ಒಂದು ಬಗೆಯ ಹೆಚ್ಚಿನ ಸೌಂದರ್ಯ ಪ್ರಾಪ್ತವಾಗುತ್ತದೆ. ಹೀಗೆ ಒದಗಿ ಬರುವ ಲಯಸೌಂದರ್ಯದ ಸವಲತ್ತು ಬಳಸಿಕೊಂಡು ಪದ್ಯವು ಕವಿತ್ವದ ಕೊರತೆಯನ್ನು ತುಂಬಿಕೊಳ್ಳುತ್ತದೆ ಎಂಬ ವಾದವನ್ನು ಮಂಡಿಸಿ, 'ಗದ್ಯಂ ಕವೀನಾಂ ನಿಕಷಂ ವದಂತಿ' ಅಂದರೆ ಗದ್ಯವೇ ಕವಿಯ ಸಾಹಿತ್ಯದ ನಿಜವಾದ ಒರೆಗಲ್ಲು ಎಂದು ಗದ್ಯಕವಿಗಳು ಸಾರುತ್ತ ಬಂದಿದ್ದಾರೆ. ಇದು, ಈ ಸಾಹಿತ್ಯ ಪ್ರಕಾರದ ಸೃಜನಕ್ರಿಯೆಯು ಒಂದು ಆಹ್ವಾನವೆಂಬುದನ್ನು ಸೂಚಿಸಿದರೆ, ಕನ್ನಡದ ಮುದ್ದಣನ 'ಗದ್ಯಂ ಹೃದ್ಯಂ ಪದ್ಯಂ ವಧ್ಯಂ' ಎಂಬ ಮಾತು ಅದರ ಶ್ರೇಷ್ಠತೆಯನ್ನು ಸಾರುತ್ತದೆ.

ಗದ್ಯವೇ ಇರಲಿ, ಪದ್ಯವೇ ಇರಲಿ, ಕವಿಯ ಕೈಯಲ್ಲಿ ಸಾಹಿತ್ಯವಾಗುವುದರಲ್ಲಿ ಅದರ ಸಾರ್ಥಕತೆ ಇರುತ್ತದೆ. ಇಂಥ ಸಾರ್ಥಕತೆಯನ್ನು ಭಾಷೆಯ ಸಂಕ್ಷೇಪೀಕರಣ ಕಲೆಯಾದ ಪದ್ಯದಲ್ಲಿ ಸಾಧಿಸುವುದು ಸುಲಭ, ವಿಶದೀಕರಣ ಕಲೆಯಾದ ಗದ್ಯದಲ್ಲಿ ಸಾಧಿಸುವುದು ಕಷ್ಟ. ಹೀಗಿದ್ದೂ ಪ್ರಾಚೀನ ಕನ್ನಡದ ಕೆಲವು ಕವಿಗಳು ಇದನ್ನು ಆಹ್ವಾನವಾಗಿ ಸ್ವೀಕರಿಸಿ ಜಯಶಾಲಿಯಾಗಿದ್ದಾರೆ.

ಒಂದು ರಚನೆ ಅಭಿವ್ಯಕ್ತಿ (Expression) ಯೆಂದೂ, ನಿರೂಪಣೆ (Narration)ಯೆಂದೂ ಎರಡು ರೀತಿಯಲ್ಲಿ ಪ್ರಕಟವಾಗುತ್ತದೆ. ನಮ್ಮ ನೆನಪಿನಲ್ಲುಳಿಯುವ ಕವಿಯೊಬ್ಬನ ಗದ್ಯದ ಸಾಲು ಇಲ್ಲವೆ ಪದ್ಯದ ಸಾಲುಗಳೇ ಅಭಿವ್ಯಕ್ತಿ. ಅದು ತನ್ನ ಸೃಜನಶೀಲ ಗುಣದಿಂದಾಗಿ ನಮ್ಮ ಮನಸ್ಸಿನಲ್ಲಿ ಆಳವಾಗಿ ಬೇರೂರುತ್ತದೆ. ಇಂಥ ಸುಂದರ ಅಭಿವ್ಯಕ್ತಿತ್ವವನ್ನೊಳಗೊಂಡ ಮತ್ತು ಐತಿಹಾಸಿಕ ಕಾರಣದಿಂದಾಗಿ ಮಹತ್ತ್ವವೆನಿಸುವ ಪ್ರಾಚೀನ ಕನ್ನಡ ಕೃತಿಗಳ ಪ್ರಕಟನ ಯೋಜನೆಯಿದು.

ದಂಡಿಯ ಸಂಸ್ಕೃತ ಕಾವ್ಯಾದರ್ಶವು ಸಾಹಿತ್ಯವನ್ನು ಗದ್ಯ, ಪದ್ಯ, ಮಿಶ್ರ (ನಾಟಕ)ವೆಂದು ಮೂರು ಬಗೆಯಾಗಿ ವರ್ಗೀಕರಿಸಿದೆ. ಇದರ ಆದರ್ಶದಲ್ಲಿ ಆಕಾರ ಪಡೆದ ಕನ್ನಡ ಕವಿರಾಜಮಾರ್ಗವು ಪದ್ಯ, ಗದ್ಯಕಥಾ ಎಂದು ಎರಡು ಬಗೆಯಾಗಿ ವರ್ಗೀಕರಿಸುತ್ತದೆ. ಬಹುಶಃ ಅಂದು ಮಿಶ್ರ(ನಾಟಕ)ವು ಸಂಸ್ಕೃತದಲ್ಲಿ ದೃಶ್ಯ ಪಾತಳಿಯಿಂದ ವಾಚನಪಾತಳಿಗೆ ಇಳಿದಿದ್ದರೆ, ಕನ್ನಡದಲ್ಲಿ ಅದು ಇನ್ನೂ ದೃಶ್ಯಪಾತಳಿಯಲ್ಲಿ ವ್ಯವಹರಿಸುತ್ತಲಿದ್ದುದೇ ಹೀಗೆ ಹೇಳಲು

ಕಾರಣವಾಗಿರಬೇಕು. ಅದೇನೇ ಇರಲಿ, "ಅಗಣಿತ ಗುಣ ಗದ್ಯಪದ್ಯಗಳ ಮಿಶ್ರಣರೂಪದ 'ಗದ್ಯಕಥಾ' ಹೆಸರಿನ ಗದ್ಯಪ್ರಕಾರವನ್ನು ಕನ್ನಡದಲ್ಲಿ ಚಿರಂತನಾಚಾರ್ಯರು ರಚಿಸಿರುವರು" ಎಂದು ಕವಿರಾಜಮಾರ್ಗದಲ್ಲಿ ಹೇಳಲಾಗಿದೆ. ಇದು ಚಂಪೂವನ್ನು ಸೂಚಿಸುವುದೆಂದು ಕೆಲವರು ಹೇಳುವವರಾದರೂ ಗದ್ಯಪ್ರಧಾನ ಪದ್ಯಗೌಣವಾಗಿರುವ ಆರಾಧನಾ ಕರ್ಣಾಟ ಟೀಕಾ(ವಡ್ಡಾರಾಧನೆ)ದಂಥ ಕೃತಿಗಳನ್ನು ಸೂಚಿಸುವುದೆಂದು ಬಹುಜನ ವಿದ್ವಾಂಸರು ಒಪ್ಪಿದ್ದಾರೆ.

ಸಂಸ್ಕೃತ ಆಲಂಕಾರಿಕ ಭಾಮಹನು ಗದ್ಯವನ್ನು ಆಖ್ಯಾಯಿಕಾ, ಕಥಾ ಎಂದು ವರ್ಗೀಕರಿಸುತ್ತ, ಆಖ್ಯಾಯಿಕಾ ಸಂಸ್ಕೃತದಲ್ಲಿ, ಕಥಾ ಎಲ್ಲ ಭಾಷೆಗಳಲ್ಲಿರಬಹುದೆಂದು ಹೇಳುತ್ತಾನೆ. ಮುಂದುವರಿದು ದಂಡಿಯು ಈ ಕಥೆಯಲ್ಲಿ ಆರ್ಯಾ ಮುಂತಾದ ವೃತ್ತಗಳು ಪ್ರವೇಶ ಪಡೆಯುವವೆಂದು ತಿಳಿಸುತ್ತಾನೆ. ಕವಿರಾಜಮಾರ್ಗಕಾರ ತಿಳಿಸುವ 'ಗದ್ಯಕಥಾ' ಇಲ್ಲಿಯ 'ಕಥಾ' ಪ್ರಕಾರವೇ ಆಗಿದೆ. ಈ 'ಗದ್ಯಕಥೆ'ಯು ಬಾಣ ಕಾದಂಬರಿಯಂತೆ ಅಖಂಡವೂ ಬೃಹತ್ಕಥೆಯಂತೆ ಬಿಡಿ ಕಥಾಕೋಶವೂ ಆಗಿರಬಹುದಾಗಿದೆ. ಮುಂದುವರಿದು ಕವಿರಾಜಮಾರ್ಗಕಾರನು ಗದ್ಯಕಥೆಯು ಸಕಲಕಲಾಭೂಯಿಷ್ಠವಾಗಿರಬೇಕು, ಉತ್ಕೃಷ್ಟ ಭಾಷಾಶೈಲಿಯಲ್ಲಿ ಎರಕಗೊಂಡಿರಬೇಕು, ಲೌಕಿಕ ಮತ್ತು ಪಾರಮಾರ್ಥಿಕ ವರ್ಣನಾನಿರ್ಣಿಕ್ತವಾಗಿರಬೇಕು, 'ಪ್ರಕಟತರ ವಸ್ತು'ವನ್ನೊಳಗೊಂಡಿರಬೇಕೆಂದು ಹೇಳುತ್ತಾನೆ.

ಒಟ್ಟಿನಲ್ಲಿ, ಪ್ರಾಚೀನ ಕರ್ನಾಟಕದ 'ಗದ್ಯಕಥಾ'ಪ್ರಕಾರದ ಲಕ್ಷಣವನ್ನು ಹೀಗೆ ಹೇಳಬಹುದು. ೧. ಗದ್ಯ ಪ್ರಧಾನ, ಪದ್ಯ ಗೌಣಪ್ರಮಾಣದಲ್ಲಿರುತ್ತದೆ. ೨. ಅಖಂಡ ಕಥೆ, ಇಲ್ಲವೆ ಬಿಡಿ ಕಥಾಗುಚ್ಛ ರೂಪದಲ್ಲಿರುತ್ತದೆ. ೩. ಸಕಲಕಲಾಭೂಯಿಷ್ಠವೂ ಉತ್ಕೃಷ್ಟ ಭಾಷಾಶೈಲಿಯದೂ, ಲೌಕಿಕ ಪಾರಮಾರ್ಥಿಕ ವರ್ಣನಾ ನಿರ್ಣಿಕ್ತವೂ ಪ್ರಕಟತರ ವಸ್ತುವನ್ನೊಳಗೊಂಡುದೂ ಆಗಿರುತ್ತದೆ. ೪. ಇನ್ನೂ ಒಂದು ಲಕ್ಷಣವೆಂದರೆ ಈ ಗದ್ಯವನ್ನು 'ಕಥಾ' ಎಂದು ಕರೆದಿರುವುದರಿಂದ 'ಕಥಾ ಪುರಾಣಸಂಬದ್ಧಾ' ಎಂಬ ವ್ಯಾಖ್ಯೆಯ ಪ್ರಕಾರ ಇದು, ಲೌಕಿಕ(ಚರಿತ್ರೆ) ವಸ್ತುವನ್ನಲ್ಲ, ಪೌರಾಣಿಕ ವಸ್ತುವನ್ನೊಳಗೊಂಡಿರುತ್ತದೆ.

ಇಂಥ ಲಕ್ಷಣದ ಕೃತಿಗಳನ್ನು ಕನ್ನಡದಲ್ಲಿ ಬರೆದವರು ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮೊದಲಾದವರೆಂದು ಕವಿರಾಜಮಾರ್ಗ ಹೇಳುವುದಾದರೂ ಇವರ ಒಂದೂ 'ಗದ್ಯಕಥಾ' ಲಭ್ಯವಿಲ್ಲ. ಇವರಲ್ಲಿ ದುರ್ವಿನೀತನು ಬಹುಶಃ ಗಂಗ ಅರಸನಾಗಿದ್ದು, ಶಾಸನಗಳಲ್ಲಿ ಇವನು ರಚಿಸಿರುವನೆಂದು ಹೇಳಲಾಗಿರುವ ಕಿರಾತಾರ್ಜುನೀಯದ ೧೫ನೆಯ ಸರ್ಗಕ್ಕೆ ಟೀಕೆ, ಶಬ್ದಾವತಾರಗಳನ್ನು ಹೊರತುಪಡಿಸಿ, ಬೃಹತ್ಕಥೆ(ವಡ್ಡಕಥೆ)ಯೇ ಗದ್ಯಕಥೆಗೆ ಉದಾಹರಣೆಯಾಗಿರಬೇಕೆನಿಸುತ್ತದೆ. ಇದು ಗುಣಾಢ್ಯನ ಪೈಶಾಚಿಭಾಷಾಕೃತಿಯ ದಾಕ್ಷಿಣಾತ್ಯಪಾಠವೆಂದೂ, ಇದನ್ನು ಆಧರಿಸಿ ತಮಿಳಿನ ಪೆರುಂಗದೈ ಹುಟ್ಟಿದೆಯೆಂದೂ, ಇದು ಒಂದಿಷ್ಟು ಜೈನೀಯವಾಗಿದೆಯೆಂದೂ ವಿದ್ವಾಂಸರು ಭಾವಿಸಿದ್ದಾರೆ. ಈವರೆಗಿನ ವಿವರಣೆ ಕಳೆದುಹೋದ ಕನ್ನಡ ಗದ್ಯಸಾಹಿತ್ಯವನ್ನು ಕುರಿತುದಾಗಿದೆ.

***

ಕವಿರಾಜಮಾರ್ಗೋತ್ತರ ಕಾಲೀನ ಗದ್ಯಸಾಹಿತ್ಯದಲ್ಲಿ ಎದ್ದು ಕಾಣುವ ಕೆಳಗಿನ ಕೃತಿಗಳನ್ನು ಪ್ರಸ್ತುತ ಯೋಜನೆಯ ಅಡಿಯಲ್ಲಿ ಪ್ರಕಟಣೆಗೆ ಆಯ್ದುಕೊಳ್ಳಲಾಗಿದೆ.

೧.	ಆರಾಧನಾ ಕರ್ಣಾಟಟೀಕಾ (ವಡ್ಡಾರಾಧನೆ)	: ಡಾ. ಶಾಂತಿನಾಥ ದಿಬ್ಬದ
೨.	ಚಾವುಂಡರಾಯ ಪುರಾಣಂ	: ಡಾ. ಎಂ.ಎ. ಜಯಚಂದ್ರ
೩.	ಕರ್ಣಾಟಕ ಪಂಚತಂತ್ರಂ	: ಡಾ. ಪಿ.ವಿ. ನಾರಾಯಣ
೪.	ಧರ್ಮಾಮೃತಂ	: ಶ್ರೀ ಶುಭಚಂದ್ರ
೫.	ಕನ್ನಡ ಶರಣರ ಕಥೆಗಳು	: ಡಾ. ಎಂ.ಎಂ. ಕಲಬುರ್ಗಿ
೬.	ವಿವೇಕ ಚಿಂತಾಮಣಿ	: ಶ್ರೀ ಜಿ.ಎ. ಶಿವಲಿಂಗಯ್ಯ

೭. ಚಿಕ್ಕದೇವರಾಯ ವಂಶಾವಳಿ : ಶ್ರೀ ಹೆಚ್.ಎಂ. ನಾಗರಾಜರಾವ್
೮. ಮುದ್ರಾಮಂಜೂಷವು : ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ
೯. ರಾಜಾವಳಿ ಕಥೆ : ಡಾ. ರಾಮೇಗೌಡ
೧೦. ರಾಮಾಶ್ವಮೇಧಂ : ಡಾ. ಗಾಯತ್ರಿ ನಾವಡ

ಇವುಗಳಲ್ಲಿ ಮೊದಲಿನ ನಾಲ್ಕು ಹಳಗನ್ನಡಕ್ಕೆ, ಆಮೇಲಿನವು ನಡುಗನ್ನಡ-ನಡುಗನ್ನಡೋತ್ತರಕ್ಕೆ ಸಂಬಂಧಿಸಿವೆ. ಪ್ರಾಚೀನ ಪದ್ಯಸಾಹಿತ್ಯದಲ್ಲಿ ಕಾಣಸಿಗದ ಹಳಗನ್ನಡ-ನಡುಗನ್ನಡ-ನಡುಗನ್ನಡೋತ್ತರ ಪ್ರಾಚೀನ ಭಾಷಾವಿಕಾಸದ ಸ್ಪಷ್ಟ ಹೆಜ್ಜೆ ಗುರುತುಗಳು ಈ ಗದ್ಯಸಾಹಿತ್ಯದಲ್ಲಿ ಕಾಣುತ್ತಲಿರುವುದು ವಿಶೇಷ. ಹೀಗಾಗಿ ಪ್ರಾಚೀನ ಕನ್ನಡ ಭಾಷಾ ಚರಿತ್ರೆಯನ್ನು ಬರೆಯುವಲ್ಲಿ ಪದ್ಯಕೃತಿಗಳಿಗಿಂತ ಗದ್ಯಕೃತಿಗಳೇ ಹೆಚ್ಚು ನೆರವಾಗುತ್ತವೆ. ಇಲ್ಲಿಯ ಆರಾಧನಾ ಕರ್ಣಾಟಟೀಕಾ, ಕರ್ಣಾಟ ಪಂಚತಂತ್ರ, ಧರ್ಮಾಮೃತಗಳನ್ನು ಕಥಾಕೋಶಗಳೆಂದು; ಕನ್ನಡ ಶರಣರ ಕಥೆಗಳು, ಚಿಕ್ಕದೇವರಾಯವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು ಚರಿತ್ರೆಗಳೆಂದು; ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ, ರಾಮಾಶ್ವಮೇಧಗಳನ್ನು ಪುರಾಣಗಳೆಂದು; ವಿವೇಕ ಚಿಂತಾಮಣಿಯನ್ನು ಜ್ಞಾನಕೋಶವೆಂದು ಕರೆಯಬಹುದಾಗಿದೆ. ಹೀಗೆ ಈ ಮಾಲೆಯ ಕೃತಿಗಳು ವೈವಿಧ್ಯಪೂರ್ಣ ವಿಷಯಗಳನ್ನೊಳಗೊಂಡಿವೆ. ಗದ್ಯಶೈಲಿಯ ದೃಷ್ಟಿಯಿಂದ ಹೇಳುವುದಾದರೆ ಆರಾಧನಾ ಕರ್ಣಾಟಟೀಕಾ, ಕನ್ನಡ ಶರಣರ ಕಥೆಗಳು, ರಾಮಾಶ್ವಮೇಧ ವಿಶಿಷ್ಟ ಗದ್ಯ ಚಹರೆಯನ್ನು ಹೊಂದಿವೆ.

***

"ವಡ್ಡಾರಾಧನೆಯೆಂಬುದು ಕೃತಿಯ ಹೆಸರಲ್ಲ, ಶಿವಕೋಟ್ಯಾಚಾರ್ಯನೆಂಬುದು ಕವಿಯ ಹೆಸರಲ್ಲ" ಎಂದು ಹೇಳುತ್ತ, ಈ ಕೃತಿನಾಮ ಆರಾಧನಾ ಕರ್ಣಾಟಟೀಕಾ, ಕವಿನಾಮ ಭ್ರಾಜಿಷ್ಣು ಎಂದು ೧೯೭೦ರಲ್ಲಿಯೇ ನಾನು ಹೇಳಿದ್ದ ಮಾತು, ಇಂದು ಹೊಸ ಆಧಾರ ಲಭಿಸಿ ನಿಜವಾಗುತ್ತಲಿರುವುದರಿಂದ 'ಆರಾಧನಾ ಕರ್ಣಾಟಟೀಕಾ' ಎಂಬ ಹೊಸ ಶೀರ್ಷಿಕೆಯನ್ನು - ಭ್ರಾಜಿಷ್ಣುವೆಂಬ ಹೊಸ ಕವಿನಾಮವನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ. ಈ ಬಗೆಯ ಟೀಕಾರಚನೆ ಕವಿರಾಜಮಾರ್ಗಪೂರ್ವಸಾಹಿತ್ಯದ ಲಕ್ಷಣವಾಗಿರುವುದರಿಂದ, ಇದರ ಕಾಲ ಅಷ್ಟು ಹಿಂದೆ ಇರಬಹುದಾದರೂ, ಕ್ರಿ.ಶ. ೯೪೦ ಎಂದು ವಿದ್ವಾಂಸರು ಭಾವಿಸಿದ್ದಾರೆ. ದೇಶೀಯ ಗದ್ಯಶೈಲಿ, ಮನೋಜ್ಞ ಕಥನಕಲೆ, ವಿಶಿಷ್ಟ ಕಥಾತಂತ್ರ, ಸಾಂಸ್ಕೃತಿಕ ಜೀವನಪ್ರಜ್ಞೆ ಇತ್ಯಾದಿಗಳಿಂದಾಗಿ ಇದು ಕನ್ನಡದ ಸರ್ವಶ್ರೇಷ್ಠ ಕಥಾಕೋಶವೆನಿಸಿದೆ. ಈ ಗದ್ಯದ ಒಡಲಲ್ಲಿ ಆಗಾಗ ಉದ್ಧೃತ ಪ್ರಾಕೃತ, ಸಂಸ್ಕೃತ ಪದ್ಯಗಳು ಕಂಡುಬರುತ್ತವೆ. ಅಲ್ಲಲ್ಲಿ ತೋರುವ ವೈದಿಕ - ಜೈನ ಘರ್ಷಣೆಗಳು ಆ ಕಾಲದ ಧಾರ್ಮಿಕ ಸಂಘರ್ಷವನ್ನು ಸೂಚಿಸುತ್ತವೆ. ಜೈನ ಶ್ರಾವಕವರ್ಗ ಮತ್ತು ಮುನಿವರ್ಗ, ರಾಜವರ್ಗ, ಜೈನೇತರ ಸಾಮಾಜಿಕ ವರ್ಗಗಳಿಂದಾಗಿ ಇಲ್ಲಿ ಸಾಮುದಾಯಿಕ ಬದುಕು ದಟ್ಟವಾಗಿ ಮೂಡಿ, ಇದು ಒಂದು ಮಹತ್ವದ ಸಾಂಸ್ಕೃತಿಕ ಕೃತಿಯ ಆಕಾರ ಪಡೆದಿದೆ.

ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ (೯೭೮) ಜೈನ ೬೩ ಶಲಾಕಾಪುರುಷರನ್ನು ಕುರಿತ ಕೃತಿ. ಜಿನಸೇನ ಗುಣಭದ್ರರ ಸಂಸ್ಕೃತ ಮಹಾಪುರಾಣವನ್ನಾಧರಿಸಿ ಹುಟ್ಟಿದ ಇದರ ಕರ್ತೃ ಗಂಗಮಂತ್ರಿ ಚಾವುಂಡರಾಯ. ಈ ಕೃತಿಯ ಗದ್ಯ ಮಾರ್ಗೀಯ ಶೈಲಿಯದು. ಮಧ್ಯ ಮಧ್ಯ ಪ್ರಾಕೃತ, ಸಂಸ್ಕೃತ ಉದ್ಧೃತಿಗಳಿವೆ. ವಡ್ಡಾರಾಧನೆ ಬಿಡಿ ಕಥಾಕಕೋಶವಾಗಿದ್ದರೆ ಇದು ಬಿಡಿಯಲ್ಲಿಯೂ ಅಖಂಡತೆ-ಯನ್ನೊಳಗೊಂಡ ಕೃತಿಯಾಗಿದೆ. ಹೀಗಿದ್ದೂ ಇದರ ಅಖಂಡ ಶಿಲ್ಪಕ್ಕೆ ಅಲ್ಲಲ್ಲಿ ಸಮನ್ವಯದ ಚ್ಯುತಿ ಬಂದಿವೆ.

ದುರ್ಗಸಿಂಹನ ಕರ್ಣಾಟ ಪಂಚತಂತ್ರ ಅನುಪಲಬ್ಧ ವಸುಭಾಗಭಟ್ಟನ ಸಂಸ್ಕೃತ ಕಥಾಪರಂಪರೆಗೆ ಸಂಬಂಧಿಸಿದೆ. ಮೂಲತಃ ಪಂಚತಂತ್ರ ವೈದಿಕ ಕಥಾಕೋಶವಾಗಿದ್ದರೂ,

ಇದರಲ್ಲಿ ಜೈನೀಯ ಅಂಶಗಳಿರುವುದು ವಿಶೇಷ. ಮಾರ್ಗೀಯ ಕೃತಿಯಾಗಿದ್ದರೂ ಸೊಗಸಾದ ಕಥಾಶೈಲಿ, ದೇಶೀ ಒಲವುಗಳನ್ನೊಳಗೊಂಡಿದೆ. ೪೫೮ ಕನ್ನಡ ಪದ್ಯಗಳಲ್ಲಿ ೨೦೪ರಷ್ಟು ಕಂದಗಳಿವೆ. ಮಿಕ್ಕವುಗಳಲ್ಲಿ ಅಕ್ಷರವೃತ್ತದ ಜೊತೆ ಪಡ್ಡಳಿ, ಅಕ್ಕರ, ಪಿರಿಯಕ್ಕರ, ತ್ರಿಪದಿಗಳೆಂಬ ದೇಶೀ ಬಂಧಗಳಿರುವುದೂ ಒಂದು ವಿಶೇಷ. ಮುಖ್ಯವಾಗಿ ರಾಜನೀತಿ ಗ್ರಂಥವಾಗಿರುವುದರಿಂದ ರಾಜ್ಯಾಡಳಿತಕ್ಕೆ ಹೆಚ್ಚು ಅವಕಾಶ ನೀಡಿದ್ದರೂ, ಸಂಸಾರ –ಸಮಾಜ ಸಂಬಂಧಿ ವೈವಿಧ್ಯಮಯ ಜೀವನ ಚಿತ್ರಗಳೂ ಇಲ್ಲಿ ಎಡೆಪಡೆದಿವೆ.

ಕನ್ನಡ ಗದ್ಯಪರಂಪರೆಯಲ್ಲಿ ವಡ್ಡಾರಾಧನೆಯನ್ನು ಬಿಟ್ಟರೆ ಒಂಧಿಷ್ಟು ಭಿನ್ನ ರೀತಿಯ ಜೈನಕಥಾಕೋಶವೆನಿಸಿದೆ, ನಯಸೇನನ (೧೧೧೨) ಧರ್ಮಾಮೃತ. ೧೪ ಆಶ್ವಾಸಗಳಲ್ಲಿ ೧೪ ಕಥೆಗಳನ್ನೊಳಗೊಂಡ ಈ ಕೃತಿ ಮಾರ್ಗೀಯವಾಗಿದ್ದರೂ ದೇಶೀಯ ಒಲವು ಅಧಿಕವಾಗಿದೆ. ಹೀಗಾಗಿ ನಾಣ್ನುಡಿಯ ಬಳಕೆಯಲ್ಲಿ, ಇದಕ್ಕಿಂತ ವೆಗ್ಗಳವಾಗಿ ಬಳಸಿರುವ ಉಪಮೆಗಳಲ್ಲಿ ಇವನ ವಿಶೇಷತೆ ಅಡಗಿದೆ. ಮಾಲೋಪಮೆಯೆಂದು ಹೇಳುವಷ್ಟರ ಮಟ್ಟಿಗೆ ಅವು ಮಾಲೆಮಾಲೆಯಾಗಿ ಬರುವುದರಿಂದ ವಿದ್ವಾಂಸರು ಇವನನ್ನು ಉಪಮಾಲಂಪಟನೆಂದು ಕರೆದುದು ಸೂಕ್ತವಾಗಿದೆ. ಇದಕ್ಕೆ ಕಳಸವಿಟ್ಟಂತೆ ವಿಡಂಬನೆ ಈ ಕೃತಿಯ ವೈಶಿಷ್ಟ್ಯವಾಗಿದ್ದು, ವೈದಿಕ ಬೌದ್ಧಗಳ ದೋಷವನ್ನು ಎತ್ತಿ ಹೇಳುವಲ್ಲಿ ಇದು ಸಾರ್ಥಕತೆ ಪಡೆದಿದೆ. ಇವೆಲ್ಲ ಮೇಳವಿಸುವಲ್ಲಿ ಅವನ ವೈವಿಧ್ಯಪೂರ್ಣ ಜೀವನಾನುಭವ ಅಚ್ಚರಿ ಹುಟ್ಟಿಸುತ್ತದೆ. ದುರ್ಗಸಿಂಹನಂತೆ ಮಾರ್ಗೀಯ ಕವಿಯಾಗಿದ್ದರೂ ಅವನಿಗಿಂತ ಹೆಚ್ಚು ಜಾನಪದೀಯವಾಗಿ ಕಾಣುತ್ತಾನೆ.

'ಕನ್ನಡ ಶರಣರ ಕಥೆಗಳು' ಹೆಸರೇ ಸೂಚಿಸುವಂತೆ ಕರ್ಣಾಟಕಕ್ಕೆ ಸಂಬಂಧಿಸಿದ, ಗದ್ಯ – ಪದ್ಯ ಮಿಶ್ರಿತ ರೂಪದ ರಗಳೆಗೆ ವಸ್ತುವಾಗಿರುವ, ಶರಣರ ಕೃತಿಗಳನ್ನೊಳಗೊಂಡಿದೆ. ಶರಣರ ವಚನಗಳ ಗದ್ಯವನ್ನು ಶುದ್ಧಸಾಹಿತ್ಯಕ್ಕೆ ಅಳವಡಿಸಿದ ನಡುಗನ್ನಡ ಸಾಹಿತ್ಯದ ಆದಿಕವಿಯಾಗಿದ್ದಾನೆ, ಹರಿಹರ (೧೩ನೆಯ ಶತಮಾನ). ಭಕ್ತಿಕೇಂದ್ರಿತ ಆಶಯ, ಸ್ಥಳೀಯ ಶರಣಚರಿತ್ರೆನಿಷ್ಠ ವಸ್ತು, ರಗಳೆ ಸಾಹಿತ್ಯಪ್ರಕಾರ, ನಡುಗನ್ನಡ ಭಾಷೆ ಇತ್ಯಾದಿ ಹೊಸ ಉಪಕರಣಗಳನ್ನು ಶೋಧಿಸಿ, ಸೃಜನಶೀಲತೆಯಲ್ಲಿ ಎರಕಹೊಯ್ದವನೀತ. ಭಾಷೆಯ ಲಾಲಿತ್ಯ, ಶೈಲಿಯ ಉತ್ಸಾಹ, ಲಯಬದ್ಧವಾಕ್ಯ, ವೈವಿಧ್ಯಪೂರ್ಣ ಕಲ್ಪನೆ ಮೊದಲಾದವುಗಳಿಂದಾಗಿ ಇವನ ಗದ್ಯಕ್ಕೆ ಈ ಮೊದಲು ಕನ್ನಡದಲ್ಲಿಲ್ಲದ ಹೊಸ ಸೊಬಗು ಪ್ರಾಪ್ತವಾಗಿದೆ. ವಡ್ಡಾರಾಧನೆಯನ್ನು ಬಿಟ್ಟರೆ ಕನ್ನಡ ಗದ್ಯವನ್ನು ಹೊಸ ಬಗೆಯಲ್ಲಿ ಹದಗೊಳಿಸಿದ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಒಂದು ಸ್ಥಲ ಗದ್ಯ, ಒಂದು ಸ್ಥಲ ರಗಳೆಯೆಂಬ ಯೋಜನೆಯಲ್ಲಿ ರಗಳೆಯೇ ಗದ್ಯವಾದ, ಗದ್ಯವೇ ರಗಳೆಯಾದ ಅನುಭವ ಓದುಗನಿಗೆ ಉಂಟಾಗುತ್ತದೆ. ಹೇಳಲೇಬೇಕಾದ ಇನ್ನೊಂದು ಅಂಶವೆಂದರೆ, ಕನ್ನಡ ಸಾಹಿತ್ಯದ ಪ್ರಥಮ ಭಾವಗೀತ ಕವಿಯಾಗಿರುವ ಈತ, ಕನ್ನಡ ಸಾಹಿತ್ಯದ ಪ್ರಥಮ ಸಂತಕವಿ. ಹೀಗಾಗಿ ಇವನ ಬರೆಹ ಮನೋಪಾತಳಿಗೆ ನಿಲ್ಲದೆ, ಆತ್ಮಪಾತಳಿಯಲ್ಲಿ ವಿಹರಿಸುತ್ತದೆ, ವಿರಮಿಸುತ್ತದೆ.

ನಿಜಗುಣಶಿವಯೋಗಿ ಶೈವದಲ್ಲಿಯೇ ಶಾಂತಪರಂಪರೆಗೆ ಸಂಬಂಧಿಸಿರಬಹುದಾಗಿದ್ದು (೧೫ ಶತಮಾನ), ಕವಿತ್ವ – ಅನುಭಾವಗಳ ಸಂಗಮವಾಗಿರುವ ಇವನ 'ವಿವೇಕ ಚಿಂತಾಮಣಿ' ವಿಶ್ವಕೋಶ ಪ್ರಕಾರದ ಗದ್ಯಕೃತಿ. ಈ ಹಿಂದಿನ ಗದ್ಯಕೃತಿಗಳು ಕವಿತ್ವವನ್ನೊಳಗೊಂಡಿದ್ದರೆ, ಇದರಲ್ಲಿ ಶಾಸ್ತ್ರಯೋಗ್ಯ ನಿರೂಪಣಾಗದ್ಯ ನೆಲೆ ಪಡೆದಿದೆ. ಈ ಗುಣದಿಂದಾಗಿ ಈ ಗದ್ಯಕ್ಕೆ ಪ್ರಾಚೀನ ಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನ ಸಲ್ಲುತ್ತದೆ. ವಿಶ್ವಕೋಶವರ್ಗದ ಇದು ಸಹಜವಾಗಿಯೇ ಬದುಕಿನ ವಿವಿಧ ಆಯಾಮಗಳ ಜ್ಞಾನಸಂಪತ್ತನ್ನೊಳಗೊಂಡಿದೆ.

ಮೈಸೂರು ಒಡೆಯರ ಕಾಲದಲ್ಲಿ ಪದ್ಯ ಹಿಂದು ಬಿದ್ದು, ಗದ್ಯ ವಿಪುಲ ಪ್ರಮಾಣದಲ್ಲಿ ಬೆಳೆಯಿತು. ಪಾಂಡಿತ್ಯ ಪ್ರದರ್ಶನದ ಹಂಬಲ, ನಡುಗನ್ನಡ – ಹೊಸಗನ್ನಡ ಮಿಶ್ರಶೈಲಿಗಳಿಂದಾಗಿ ಒಂದು ಬಗೆಯ ಮಧ್ಯಮ ಗುಣಮಟ್ಟದ ಸಾಹಿತ್ಯ ಈ ಕಾಲದಲ್ಲಿ ಹುಟ್ಟಿತು. ಇದಕ್ಕೆ

ನಿದರ್ಶನವೆನಿಸುವ ಚಿಕದೇವರಾಯ ವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು ಇಲ್ಲಿ ಒಟ್ಟಿಗೆ ಪರಿಶೀಲಿಸಬಹುದು. ಚಿಕದೇವರಾಯ ವಂಶಾವಳಿಯ ಕರ್ತೃ ತಿರುಮಲಾರ್ಯ (೧೬೪೫–೧೭೦೬) ಮೈಸೂರು ಚಿಕದೇವರಾಯನ ಸಚಿವ. ಧಾರ್ಮಿಕ ಮುಖವಾಡದಲ್ಲಿ ತಮಿಳು ನಾಡಿನಿಂದ ಕರ್ನಾಟಕವನ್ನು ಪ್ರವೇಶಿಸಿದ ಶ್ರೀವೈಷ್ಣವರು, ಈ ಹೊತ್ತಿಗೆ ರಾಜಕೀಯವಾಗಿಯೂ ಪ್ರಬಲರಾಗಿ, ತಮ್ಮ ಶ್ರೀವೈಷ್ಣವ ಸಾಹಿತ್ಯವನ್ನು ಕನ್ನಡದಲ್ಲಿ ಸೃಷ್ಟಿಸಲು ಆರಂಭಮಾಡಿದ ಕಾಲಘಟ್ಟದ ಕೃತಿಯಿದು. ಅನ್ಯರಾಜ್ಯದಿಂದ ಬಂದ ಇವರಿಗೆ ಒಂದು ಕಡೆ ತಮ್ಮ ಧರ್ಮಪ್ರಚಾರವೂ, ಇನ್ನೊಂದು ಕಡೆ ರಾಜನ ಪ್ರೀತಿಸಂಪಾದನೆಯೂ ಅಗತ್ಯವಾಗಿದ್ದ ಕಾರಣ, ತಮ್ಮ ಧಾರ್ಮಿಕ ಕೃತಿಗಳೊಂದಿಗೆ ರಾಜಸ್ತುತಿ ಕಾವ್ಯಗಳನ್ನೂ ಬರೆದರು. ಈ ಮನೋಧರ್ಮ ಕಾರಣವಾಗಿ ಈ ಗದ್ಯಕೃತಿಯಲ್ಲಿ ರಾಜವಂಶಾವಳಿ, ಶ್ರೀವೈಷ್ಣವಧರ್ಮ ಪ್ರಶಂಸೆಯೊಂದಿಗೆ ಇವನ ವಂಶಾವಳಿಯೂ ಸೇರಿಕೊಂಡಿದೆ. ಸಮಕಾಲೀನತೆಗಿಂತ ಪ್ರಾಚೀನತೆಯ ಒಲವು ಈ ಗದ್ಯದ ಲಕ್ಷಣವಾಗಿದೆ.

ದೇವಚಂದ್ರನ (೧೭೭೦–೧೮೪೧) ರಾಜಾವಳಿ ಕಥೆ ಮೆಕೆಂಝಿಯ ಸೂಚನೆಯಂತೆ ರಚಿಸಿದ ಕೃತಿಯಾಗಿದೆ. ಸಮಕಾಲೀನ ಮುಖ್ಯ ಘಟನೆಗಳನ್ನು, ಅವುಗಳ ಇತಿಹಾಸವನ್ನು ತುಂಬ ವಿವರವಾಗಿ ಬಿಂಬಿಸುವ ಇದು ಚರಿತ್ರೆ, ಪುರಾಣ, ದಂತಕಥೆಗಳ ಮಿಶ್ರಣವಾಗಿದ್ದು, ಮೌಖಿಕ ಇತಿಹಾಸದ ಸ್ವರೂಪ ಪಡೆದಿದೆ. ಜೈನಪರ ಧೋರಣೆಯ ರಾಜಕೀಯ, ಧಾರ್ಮಿಕ, ಸಾಮಾಜಿಕ ಸಂಗತಿಗಳನ್ನು ಒಳಗೊಂಡ ಇದರ ಗದ್ಯಶೈಲಿ ಆಧುನಿಕತೆಯತ್ತ ಮುಖಮಾಡಿದೆ.

ನಂದವಂಶೀಯರ ಮಂತ್ರಿಯಾದ ರಾಕ್ಷಸನನ್ನು ಮೌರ್ಯವಂಶೀಯರ ಮಂತ್ರಿ ಚಾಣಕ್ಯನು ಒಲಿಸಿಕೊಂಡ ಕಥೆಯನ್ನು 'ಮುದ್ರಾಮಂಜೂಷ' ಹೆಸರಿನಿಂದ ರಚಿಸಿದವ, ಕೆಂಪುನಾರಾಯಣ (೧೯ನೆಯ ಶತಮಾನ). ಉತ್ತರ ಭಾರತದ ಐತಿಹಾಸಿಕ ವಸ್ತುವನ್ನು ಸಮಕಾಲೀನ ಗ್ರಂಥಸ್ಥ ಗದ್ಯದಲ್ಲಿ ಎರಕಹೊಯ್ದಿದ್ದು, ಶೈಲಿಯಲ್ಲಿ ಹಳಗನ್ನಡ–ಹೊಸಗನ್ನಡಗಳ ಮಿಶ್ರಣ ಎದ್ದುಕಾಣುತ್ತದೆ.

ಮೈಸೂರು ಅರಸರ ಕಾಲದ ಗ್ರಂಥಸ್ಥ ಅರೆಬೆಂದ ಗದ್ಯಕ್ಕೆ ಭಿನ್ನವಾಗಿ ನಿಲ್ಲುತ್ತದೆ, ಮುದ್ದಣನ ರಾಮಾಶ್ವಮೇಧ ಗದ್ಯ. "ಗದ್ಯಂ ಹೃದ್ಯಂ" ಎನ್ನುತ್ತ ಅವನು ಆಧುನಿಕ ಸಾಹಿತ್ಯದ, ಅದರಲ್ಲಿಯೂ ಗದ್ಯಸಾಹಿತ್ಯದ ಬಾಗಿಲನ್ನೇ ತೆರೆದನು. ಮೋಡ ಮುಸುಕಿದ ವಾತಾವರಣದಿಂದ ಆರಂಭವಾಗಿರುವ ಈ ಕೃತಿ, ಆ ಕಾಲದ ಕನ್ನಡದ ಮೇಲೆ ಮುಸುಕಿದ್ದ ಕತ್ತಲೆಯನ್ನು ಸಂಕೇತಿಸುತ್ತದೆ. ಇಂಥ ಸಂದರ್ಭದಲ್ಲಿ ಕಲ್ಪಿತ ಪಾತ್ರವಾಗಿ ಬರುವ ಹೆಂಡತಿ ಹೊಸ ಭಾಷೆ, ಹೊಸ ವಸ್ತು, ಹೊಸ ಬಗೆಯ ನಿರೂಪಣೆ ಇತ್ಯಾದಿಗಳ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರಗಳಿಂದ ಮುಂದುವರಿಯುವ ಇದು, ಆಧುನಿಕ ಗದ್ಯಯುಗಕ್ಕೆ ನಾಂದಿ ಹಾಡಿದೆ. ಆದುದರಿಂದ ಮುದ್ದಣನನ್ನು ನವೋದಯದ ಮುಂಗೋಳಿಯೆಂದು ಕರೆದುದು ನ್ಯಾಯವಾಗಿದೆ.

ಹೀಗೆ ಒಂದು ಸಾವಿರ ವರ್ಷದ ಗದ್ಯ ಸಾಹಿತ್ಯೇತಿಹಾಸದಲ್ಲಿ ಮೈಲಿಗಲ್ಲು ಎನಿಸಿದ ೧೦ ಕೃತಿಗಳು ಒಂದು ಮಾಲೆಯಡಿಯಲ್ಲಿ ಈಗ ಪ್ರಕಟವಾಗುತ್ತಲಿವೆ. ಇವು ಒಂದರ್ಥದಲ್ಲಿ ನಮ್ಮ ಗದ್ಯ ಸಾಗಿಬಂದ ಹಾದಿಯನ್ನು ತಿಳಿಸುವ ಕೈಮರಗಳಾಗಿವೆ.

ಕೃತಜ್ಞತೆಗಳು :

ಸಂಪಾದಕನಾಗಿ ಈ ಯೋಜನೆಯನ್ನು ಪೂರೈಸುವ ಹೊಣೆಯನ್ನು ನನಗೆ ವಹಿಸಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರಿಗೂ, ಕನ್ನಡದ ಮೇಲಿನ ಪ್ರೀತಿಯಿಂದ ಈ ಗದ್ಯಕೃತಿಗಳನ್ನು ಸಂಪಾದಿಸಿಕೊಟ್ಟ ಎಲ್ಲ ವಿದ್ವಾಂಸ ಮಿತ್ರರಿಗೂ, ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಎಚ್. ಮಲ್ಲಿಕಾರ್ಜುನ ಅವರಿಗೂ, ಸಲಹಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳು.

ಆರಿಕೆ

ಹೊಸಗನ್ನಡ ಗದ್ಯಸಾಹಿತ್ಯದ ಅರುಣೋದಯ ಕಾಲದಲ್ಲಿ ಸ್ವಯಂಭುವಿನಂತೆ ಆವಿರ್ಭವಿಸಿದ ಅನನ್ಯ, ಅನರ್ಘ್ಯ ಕೃತಿ ಕೆಂಪುನಾರಾಯಣನ ಮುದ್ರಾಮಂಜೂಷ. ೧೮೨೩ರಲ್ಲಿ ರಚಿತವಾದ ಈ ಕೃತಿ ೫೦ ವರ್ಷಗಳ ಮೇಲೆ, ೧೮೭೩ರಲ್ಲಿ ಮೊದಲ ಸಲ ಬಾಸೆಲ್ ಮಿಷನರಿ ಎಂಬ ಸಂಸ್ಥೆಯ ರೆ|| ಜೆ. ಸ್ಟೀವನ್‌ಸನ್ ಅವರಿಂದ ಹಲವು ತಿದ್ದುಪಾಟುಗಳೊಂದಿಗೆ ಪುಸ್ತಕವಾಗಿ ಹೊರಬಂದಿತು. ಅನಂತರದಲ್ಲಿ ಕೂಡ, ಕನ್ನಡ ಭಾಷೆಯಲ್ಲಿ, ಮುಖ್ಯವಾಗಿ ಗದ್ಯದ ಭಾಷೆ ಶೈಲಿಗಳಲ್ಲಿ, ಉಂಟಾಗುತ್ತಿದ್ದ ಸ್ಥಿತ್ಯಂತರಗಳು ಒಂದು ಕಾರಣವಾಗಿಯೂ ಶಾಲೆಕಾಲೇಜುಗಳಲ್ಲಿ ಪಠ್ಯವಾಗಿ ಆಯ್ಕೆಯಾಗುತ್ತಿದ್ದುದು ಒಂದು ಕಾರಣವಾಗಿಯೂ ಈ ಕೃತಿ ತಿದ್ದುಪಾಟುಗಳಿಗೆ ಒಳಗಾಗುತ್ತಲೇ ಇದ್ದಿತು. ಹೀಗೆ ಹಲವು ಪರಿಷ್ಕರಣ ಮುದ್ರಣಗಳನ್ನು (ಎಂಟನೆಯ ಮುದ್ರಣ: ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು, ೧೯೪೫) ಪಡೆದ ಈ ಕೃತಿ ಕವಿಲಿಖಿತ ಮೂಲಪಾಠದಿಂದ ದೂರ ಸರಿಯುತ್ತಲೇ ಹೋದುದು ಒಂದು ದುರ್ದೈವದ ಸಂಗತಿ.

ಈ ಗದ್ಯಕೃತಿಯ ಒಂದು ಸಂಪಾದಿತ ಆವೃತ್ತಿಯನ್ನು ಈಗ್ಗೆ ಕೆಲವು ವರ್ಷಗಳ ಹಿಂದೆ ನಾನು ಲಭ್ಯವಿದ್ದ ತಾಳೆಯೋಲೆ ಪ್ರತಿಗಳ, ಕಾಗದದ ಪ್ರತಿಯ ಹಾಗೂ ಮುದ್ರಿತ ಪರಿಷ್ಕರಣಗಳ ಆಧಾರದ ಮೇಲೆ ಸಿದ್ಧಪಡಿಸಿದೆ. ಅದನ್ನು ಕೇಂದ್ರ ಸಾಹಿತ್ಯ ಅಕಾದೆಮಿ ೧೯೯೯ರಲ್ಲಿ ಪ್ರಕಟಿಸಿತು. ಸಂಪಾದನೆಗೆ ಬಳಸಿದ ಪಾಠಸಾಮಗ್ರಿಯ ವಿವರಗಳನ್ನು ನಾನು ಪೀಠಿಕೆಯಲ್ಲಿ ಕೊಟ್ಟಿರುತ್ತೇನೆ. ವಿಶೇಷವಾಗಿ ಹೇಳಬೇಕಾದ ಸಂಗತಿಯೆಂದರೆ: ಕವಿಯ ಮನೆತನದವರಲ್ಲಿ (ಶ್ರೀಮತಿ ಎಚ್. ಕೆ. ಲಲಿತಾ ನಾಡಿಗ್ ಮತ್ತು ಅವರ ಪುತ್ರ ಶ್ರೀ ಪ್ರಭಾಶಂಕರ ನಾಡಿಗ್ ಅವರು) ದೊರೆತ ಒಂದು ತಾಳೆಯೋಲೆ ಪ್ರತಿಯನ್ನು ನಾನು ಆಧಾರವಾಗಿಟ್ಟುಕೊಂಡು ಇತರ ಹಸ್ತಪ್ರತಿಗಳನ್ನೂ ಮುದ್ರಿತಪ್ರತಿಗಳನ್ನೂ ಪಾಠ ಸಂಕಲನದ ಸಲುವಾಗಿ ಬಳಸಿದ್ದೇನೆ.

ಈಗ ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರ ತಾನು ಪ್ರಕಟಿಸಲು ಉದ್ದೇಶಿಸಿರುವ ಪ್ರಾಚೀನ ಗದ್ಯಸಾಹಿತ್ಯಮಾಲೆಗೆ ಒಂದು ಪುಷ್ಪವನ್ನಾಗಿ ಮುದ್ರಾಮಂಜೂಷವನ್ನು ಕೂಡ ಸೇರಿಸಿಕೊಂಡಿರುವುದು ಸೂಕ್ತವಾದ ನಿರ್ಧಾರವಾಗಿದೆ. ಈ ಸಂಬಂಧದಲ್ಲಿ ನಾನು ಪ್ರಾಧಿಕಾರದ ಆಡಳಿತವರ್ಗದವರಿಗೂ ವಿಶೇಷವಾಗಿ ಈ ಮಾಲೆಯ ಪ್ರಧಾನ ಸಂಪಾದಕರಾದ, ನನ್ನ ಮಾನ್ಯಮಿತ್ರರಾದ ಡಾ. ಎಂ. ಎಂ. ಕಲಬುರ್ಗಿಯವರಿಗೂ ನನ್ನ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಸುಂದರವಾಗಿ ಅಕ್ಷರ ಜೋಡಣೆ ಮಾಡಿಕೊಟ್ಟಿರುವ ಮೈಸೂರಿನ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್ ಒಡೆಯರಾದ ಶ್ರೀ ಮೋಹನಮೂರ್ತಿ ಅವರಿಗೆ ನಾನು ಕೃತಜ್ಞ.

ಮೈಸೂರು
೨-೩-೨೦೧೧

ಟಿ. ವಿ. ವೆಂಕಟಾಚಲ ಶಾಸ್ತ್ರೀ

ವಿಷಯಾನುಕ್ರಮಣಿಕೆ

ಪೀಠಿಕೆ

೧. ಚಂದ್ರಗುಪ್ತ ಚಾಣಕ್ಯರ ವೃತ್ತಾಂತ

(೧) ಬೌದ್ಧ ಸಂಪ್ರದಾಯದಲ್ಲಿ

'ಮಹಾವಂಶ' (ಕ್ರಿ. ಶ. ೫ನೆಯ ಶ.) ಮತ್ತು ಅದರ ಟೀಕೆಯಲ್ಲಿ ಈ ವೃತ್ತಾಂತ ಬಂದಿದೆ. ಉತ್ತರವಿಹಾರದ ಭಿಕ್ಷುಗಳ 'ಅತ್ಥಕಥಾ'ದಲ್ಲಿ ಇದರ ಸಮಗ್ರಕಥನವುಂಟೆಂದು ಟೀಕೆಯಲ್ಲಿ ಹೇಳಿದೆ.

ಶಿಶುನಾಗನ ಮಗ ಕಾಲಾಶೋಕನ ಹತ್ತು ಮಕ್ಕಳಲ್ಲಿ ಸರ್ವಜ್ಯೇಷ್ಠನು ತಾಯಿಯ ಕಡೆಯಿಂದ ಹೀನಕುಲಜ ; ಉಳಿದವರೇ ಒಂಬತ್ತು ಮಂದಿ ನಂದರು. ಪಾಟಲೀಪುತ್ರವನ್ನು ಆಕ್ರಮಿಸಿ ರಾಜ್ಯಸೂತ್ರ ಹಿಡಿದ ಇವರಲ್ಲಿ ಕಡೆಯವನು ಧನನಂದ. ಇವನು ಮೊದಲು ಧನಲುಬ್ಧನಾಗಿ, ಆರ್ಜಿಸಿದ ಬಹುದ್ರವ್ಯವನ್ನು ಗಂಗಾತೀರದ ಗುಹೆಯೊಂದರಲ್ಲಿ ಅವಿತಿರಿಸಿದ್ದನು. ಕಾಲಕ್ರಮದಲ್ಲಿ ಇವನು ಉದಾರಿಯಾಗಿ, ತನ್ನ ದಾನಶಾಲೆಯಲ್ಲಿ ಸತ್ಪಾತ್ರರಾದ ಬ್ರಾಹ್ಮಣರನ್ನು ಹೇರಳದ್ರವ್ಯದಿಂದ ಸಮ್ಮಾನಿಸ ತೊಡಗಿದನು. ಒಮ್ಮೆ ತಕ್ಷಶಿಲೆಯ ಬ್ರಾಹ್ಮಣನಾದ ಚಾಣಕ್ಯನು ವಾದಾರ್ಥವಾಗಿ ಪಾಟಲೀಪುರಕ್ಕೆ ಬಂದು, ಅಲ್ಲಿಯ ದಾನಶಾಲೆಯಲ್ಲಿ ಮುಖ್ಯಬ್ರಾಹ್ಮಣನಿಗೆಂದು ಹಾಕಿದ್ದ ಆಸನದ ಮೇಲೆ ಕುಳಿತನು. ಶಾಲೆಗೆ ಬಂದ ಧನನಂದ ಅದನ್ನು ನೋಡಿ, ಅವನನ್ನು ಅಲ್ಲಿಂದ ಹೊರಡಿಸುವಂತೆ ಸೇವಕರಿಗೆ ಹೇಳಿದನು. ಸೇವಕರು ಹಾಗೆ ಮಾಡಲು ಹೋದಾಗ, ಚಾಣಕ್ಯನು ಕೆರಳಿ ಎದ್ದು ನಿಂತು ಜನಿವಾರವನ್ನು ಕಿತ್ತೆಸೆದು ಆಜೀವಕನಾಗಿ ಅಲ್ಲಿಂದ ಹೊರಟು ತಲೆಮರಸಿಕೊಂಡನು.

ಅದೇ ರಾತ್ರಿ ಧನನಂದನ ಪರಿವಾರದಲ್ಲಿದ್ದ ಪರ್ವತನೆಂಬ ರಾಜಪುತ್ರನನ್ನು ಕಂಡು ಅವನಿಗೆ ರಾಜ್ಯಲೋಭ ತೋರಿಸಿ ಅವನನ್ನು ಕರೆದುಕೊಂಡು ವಿಂಧ್ಯದತ್ತ ತೆರಳಿದನು. ಅಲ್ಲಿ ಅಪಾರ ಧನಸಂಗ್ರಹ ಮಾಡಿಕೊಂಡು ರಾಜ್ಯಕ್ಕೆ ಉತ್ತರಾಧಿಕಾರಿಯಾಗಬಲ್ಲ ಇನ್ನೊಬ್ಬನಿಗಾಗಿ ಶೋಧಿಸುತ್ತಿರಲು, ಕಷ್ಟದ ಸಂದರ್ಭದಲ್ಲಿ ಹುಟ್ಟಿ ಬೆಳೆದರೂ ರಾಜಲಕ್ಷಣಗಳಿಂದ ಕೂಡಿದ ಮೋರಿಯ ವಂಶದ ಚಂದ್ರಗುಪ್ತನು ಅವನಿಗೆ ಗೋಚರಿಸಿದನು. ಸಾವಿರ ಕಾರ್ಷಾಪಣಗಳನ್ನು ಕೊಟ್ಟು, ಅವನನ್ನು ಕೊಂಡುಕೊಂಡನು.

ಒಮ್ಮೆ ಪರ್ವತ ಚಂದ್ರಗುಪ್ತರಿಬ್ಬರಿಗೂ ಬಿದ್ದ ಸ್ವಪ್ನವನ್ನು ಅವರಿಂದಲೇ ಕೇಳಿ ತಿಳಿದು, ಅದರ ಫಲವನ್ನು ವಿಮರ್ಶಿಸಿದಾಗ, ಆ ಇಬ್ಬರಲ್ಲಿ ಚಂದ್ರಗುಪ್ತನಿಗೆ ಮಾತ್ರವೇ ಚಕ್ರವರ್ತಿಯೋಗವುಂಟೆಂದು ತಿಳಿಯಿತು. ಹೀಗಿದ್ದಾಗ, ಒಂದು ಸಲ ಇಬ್ಬರಿಗೂ ಪ್ರತ್ಯೇಕವಾಗಿ ಒಂದು ಪರೀಕ್ಷೆಯನ್ನು ಏರ್ಪಡಿಸಿದಾಗ, ಆ ವಿಲಕ್ಷಣಪರೀಕ್ಷೆಯಲ್ಲಿ ಚಂದ್ರಗುಪ್ತ ಮಾತ್ರ ಸಫಲನಾದನು. ಆ ಪರೀಕ್ಷೆಯಲ್ಲಿ ಪರ್ವತ ಚಂದ್ರಗುಪ್ತನಿಂದಲೇ ಮೃತನಾದನು. ಚಾಣಕ್ಯ ಏಳುವರ್ಷ ಚಂದ್ರಗುಪ್ತನಿಗೆ ವಿದ್ಯೆ ಕಲಿಸಿದನು. ಸಂಗ್ರಹಿಸಿದ ಹಣದಿಂದ ಸೈನ್ಯ ಕಟ್ಟಿ ಇಬ್ಬರೂ ಗ್ರಾಮ ನಗರಗಳನ್ನು ಮುತ್ತತೊಡಗಿದರೂ ಅವರಿಗೆ ಜಯ ಲಭಿಸಲಿಲ್ಲ. ಆಗ ಮುದುಕಿಯೊಬ್ಬಳ ವ್ಯವಹಾರನೀತಿಯಿಂದ ರಾಜನೀತಿಯ ಮರ್ಮವರಿತು (ಇದು ಜೈನಸಂಪ್ರದಾಯದ ಹೇಮಚಂದ್ರ ವಡ್ಡಾರಾಧನೆಕಾರರು ಕೊಡುವ ಕಥೆಗೆ ಸದೃಶವಾದುದು) ಇಬ್ಬರೂ ಪಾಟಲೀಪುತ್ರವನ್ನು ಮುತ್ತಿ ಧನನಂದನನ್ನು ಎದುರಿಸಿ ಕೊಂದು

ರಾಜ್ಯವನ್ನು ವಶಪಡಿಸಿಕೊಂಡರು. ಧನನಂದನು ಅವಿತಿರಿಸಿದ್ದ ಅಪಾರದ್ರವ್ಯವನ್ನು ಉಪಾಯಾಂತರದಿಂದ ಹೊರತೆಗೆಸಿದ ಮೇಲೆ ಚಂದ್ರಗುಪ್ತನಿಗೆ ಪಟ್ಟವಾಯಿತು.

ಟೀಕೆಯಲ್ಲಿ ಮುಂದಿನ ಸ್ವಲ್ಪ ಕಥೆ ಸಹ ಉಂಟು. ಹಾಗೆಯೇ ಮಿಲಿಂದಪನ್ಹದಲ್ಲಿಯೂ ನಂದ-ಚಾಣಕ್ಯ ಚಂದ್ರಗುಪ್ತರ ಸಂಘರ್ಷದ ಕಥೆ ಬಂದಿದೆ. ಆರ್ಯಮಂಜುಶ್ರೀಮೂಲ ಕಲ್ಪದಲ್ಲಿ ಸಹ ಇವರ ವೃತ್ತಾಂತವುಂಟು.ಇದರ ಪ್ರಕಾರ ನಂದನ ಕಾಲದಲ್ಲಿ ಬ್ರಾಹ್ಮಣ್ಯದ ಉಚ್ಛ್ರಾಯವಿತ್ತೆಂದೂ ನಂದನ ಬಳಿಕ ರಾಜ್ಯವಾಳಿದ ಬೌದ್ಧೇತರನಾದ ಚಂದ್ರಗುಪ್ತನು ನಟ್ಟಿರುಳಿನಲ್ಲಿ ಪ್ರಾಣ ತೊರೆದನೆಂದೂ ಇವರ ಪ್ರಸಿದ್ಧಮಂತ್ರಿ ಚಾಣಕ್ಯನು ಮಹಾ ಕೋಪಿಷ್ಠನೆಂದೂ ಮುಂತಾಗಿ ತಿಳಿಯುವುದು. ಈ ಬೌದ್ಧಸಂಪ್ರದಾಯದ ಕಥೆಯಲ್ಲಿ ಚಾಣಕ್ಯನಿಗಾದ ಅಪಮಾನದ ಭಾಗ ಗಮನಾರ್ಹವಾದುದು.

(೨) ಗ್ರೀಕ್ ಲೇಖಕರ ಲಿಖಿತಗಳಲ್ಲಿ

ಕರ್ಟಿಯಸ್ ಡಿಯೊಡೊರೊಸ್ ಪ್ಲುಟಾರ್ಕ್ ಜಸ್ಟಿನ್ ಅರ್ರಿಯನ್ ಮೆಗಾಸ್ತನೀಸ್ ಮೊದಲಾದವರು ಅಲೆಕ್ಸಾಂಡರ್ ಪೋರಸ್ ಇವರಿಗೆ ಸಮಕಾಲೀನನಾಗಿದ್ದ ಚಂದ್ರ ಗುಪ್ತನ ವಿಚಾರವನ್ನು (ಸಂದ್ರೊಕೊಟ್ಟೋಸ್, ಸಂದ್ರಕೊಟ್ಟಾಸ್, ಸಂದ್ರೊಕುಪ್ಟೋಸ್ ಇ. ಈ ಸಮೀಕರಣವನ್ನು ಮೊದಲು ಸೂಚಿಸಿದವರು ವಿಲಿಯಂ ಜೋನ್ಸ್ ಅವರು) ಪ್ರಸ್ತಾವಿಸಿದ್ದಾರೆ. ಚಂದ್ರಗುಪ್ತನು ನಾಪಿತನ ಮಗನಾಗಿದ್ದು, ತಂದೆ ಮಕ್ಕಳಿಬ್ಬರೂ ದುರಾ ಚಾರಗಳನ್ನು ಮಾಡಿದವರೆಂದು ಮುಂತಾಗಿ ಹೇಳಿದ್ದಾರೆ. ಚಂದ್ರಗುಪ್ತನ ಸೈನ್ಯಬಲ ಅಪಾರವಾದುದೆಂದು ಪೋರಸನ ಸಾಕ್ಷ್ಯಾಧಾರಗಳಿಂದ ತಿಳಿಸಿದ್ದಾರೆ (ಕರ್ಟಿಯಸ್, ಡಿಯೊ ಡೊರೊಸ್). ಜಸ್ಟಿನ್ ಹೇಳುವ ಪ್ರಕಾರ ಅಲೆಕ್ಸಾಂಡರನ ಮೃತಿಯ ತರುವಾಯ ಚಂದ್ರ ಗುಪ್ತನು ಸ್ವತಂತ್ರವಾದವರಲ್ಲಿ ಅಗ್ರಗಣ್ಯನೆಂದೂ ಅಲೆಕ್ಸಾಂಡರ್ ಮತ್ತು ನಂದರ ಆಗ್ರಹಕ್ಕೆ ಗುರಿಯಾದ ಆತನು ತನ್ನ ಮರಣದಂಡನೆಯನ್ನು ತಪ್ಪಿಸಿಕೊಳ್ಳಲು ಓಡಿಹೋದ ನೆಂದೂ ಕೆಲವು ಶುಭಶಕುನಗಳಿಂದ ಉತ್ತೇಜಿತನಾಗಿ ಅಲೆಕ್ಸಾಂಡರನ ನಿಯುಕ್ತ ಅಧಿಕಾರಿ ಗಳನ್ನು ಎದುರಿಸಿ, ತನ್ನ ಸಾಮರ್ಥ್ಯದಿಂದ ರಾಜ್ಯಸಿಂಹಾಸನವೇರಿದನೆಂದೂ ಅಭಿಪ್ರಾಯ ವಾಗುವುದು.

ಈ ಲೇಖಕರಲ್ಲಿ ಯಾರೂ ಚಾಣಕ್ಯನ ವಿಚಾರವಾಗಿ ಏನೂ ಹೇಳುವುದಿಲ್ಲ. ಚಂದ್ರ ಗುಪ್ತನಿಗೆ ರಾಜ್ಯಲಾಭವಾದುದರ ಸಂಬಂಧದಲ್ಲಿ ಚಾಣಕ್ಯನ ಪಾತ್ರವೇನೆಂದು ಇವರ ಬರಹಗಳಿಂದ ಏನೂ ತಿಳಿಯುವುದಿಲ್ಲ. ಇದು ವಿಚಾರಾರ್ಹ ಸಂಗತಿ.

(೩) ಜೈನ ಸಂಪ್ರದಾಯದಲ್ಲಿ

ಜೈನ ಕಥಾಕೋಶಗಳಲ್ಲಿ ವಿಶಿಷ್ಟರೀತಿಯಲ್ಲಿ ಈ ವೃತ್ತಾಂತ ಸ್ಥಾನ ಪಡೆದುಕೊಂಡಿದೆ. ಇವುಗಳಲ್ಲಿ ಹರಿಷೇಣನ (ಕ್ರಿ. ಶ. ೯೩೧) 'ಬೃಹತ್ಕಥಾಕೋಶ'ದಲ್ಲಿ ಬರುವುದನ್ನು ಪ್ರಾತಿನಿಧಿಕವಾಗಿ ತಿಳಿಯಬಹುದು. ಇಲ್ಲಿ ೧೪೩ನೆಯ ಕಥೆ ಚಾಣಕ್ಯಮುನಿಕಥಾನಕವೆಂಬು ದಾಗಿದ್ದು, ಪಾಟಲೀಪುತ್ರದ ಅರಸು ನಂದನ ದುರ್ವರ್ತನೆ, ಚಾಣಕ್ಯನಿಗೆ ನಂದನಿಂದ ಉಂಟಾದ ಅಪಮಾನ ಮತ್ತು ಆತನ ನಂದವಿನಾಶಪ್ರತಿಜ್ಞೆ ಈ ಕೆಲವು ಮುಖ್ಯ ಕಥಾಂಶ ಗಳಲ್ಲಿ ಮುದ್ರಾರಾಕ್ಷಸನಾಟಕ ಮುಂತಾದ ಪ್ರಚಲಿತ ವೃತ್ತಾಂತಕಥೆಗಳೊಂದಿಗೆ ಸಾದೃಶ್ಯ

ವನ್ನು ಕಾಣಬಹುದಾಗಿದೆ. ಆದರೆ ಬೇರೆ ವ್ಯತ್ಯಾಸಗಳು ಹೆಚ್ಚು.

ನಂದರಾಜನ ಮಂತ್ರಿಗಳಲ್ಲಿ ಒಬ್ಬನಾದ ಕವಿಯೆಂಬವನು ಚಾಣಕ್ಯನ ಬಂಧು. ಭಂಡಾರದ ಹಣದ ವಿಲೇವಾರಿ ನಿಮಿತ್ತವಾಗಿ ಕುಪಿತನಾದ ನಂದನು ಕವಿಯನ್ನು ಅವನ ಹೆಂಡತಿ ಮಕ್ಕಳೊಂದಿಗೆ ಅಂಧಕೂಪದಲ್ಲಿ ನೂಕಿಸಿದನು. ಅಲ್ಲಿಗೆ ಸ್ವಲ್ಪವೇ ಆಹಾರ ಕಳಿಸಿಕೊಡುತ್ತ ಅವರನ್ನೆಲ್ಲ ನರಳುವಂತೆ ಮಾಡಿದನು. ಮೂರು ವರ್ಷಗಳಾದುವು. ಪ್ರತ್ಯಂತವಾಸಿಗಳು ನಂದನ ಪಟ್ಟಣವನ್ನು ಮುತ್ತಿದಾಗ, ನಂದನು ಅಂಧಕೂಪದಲ್ಲಿ ಬದುಕಿ ಉಳಿದಿದ್ದ ಕವಿಯನ್ನು ಸ್ಮರಿಸಿ ಹೊರಕ್ಕೆ ತೆಗೆಯಿಸಿ ಕ್ಷಮಿಸಿದನು. ಹೀಗೆ ಇರುತ್ತಿರಲು, ದಾರಿಯಲ್ಲಿ ಹೋಗುತ್ತ ಕಾಲಿಗೆ ಚುಚ್ಚಿದ ದರ್ಭಸೂಚಿಯನ್ನು ಅಗೆಯುತ್ತಿದ್ದ ಚಾಣಕ್ಯ ಕವಿಯ ಕಣ್ಣಿಗೆ ಬಿದ್ದನು ; ನಂದವಂಶನಿರ್ಮೂಲನಕ್ಕೆ ಅವನೇ ತಕ್ಕವನೆಂದು ಅವನ ವರ್ತನೆಯಿಂದ ಗ್ರಹಿಸಿದನು ; ಅವನನ್ನು ವಿಶ್ವಾಸದಿಂದ ಕಂಡನು. ಕವಿಯ ಸೂಚನೆಯಂತೆ ನಂದನು ಅವನಿಗೆ ಗೋಸಹಸ್ರವನ್ನು ದಾನಮಾಡಲು ಒಪ್ಪಿದನು. ಚಾಣಕ್ಯನನ್ನು ಕವಿ ಅಗ್ರಾಸನದಲ್ಲಿ ಕುಳ್ಳಿರಿಸಿದನು. ಆದರೆ ಇತರ ಬ್ರಾಹ್ಮಣರ ಸಲುವಾಗಿ ಆಸನವನ್ನು ತೆರವುಮಾಡುವಂತೆ ದೊರೆ ಆಗ್ರಹಪಡಿಸಿ, ರಾಜಗೃಹದಿಂದ ದೂರದಲ್ಲಿ ಬಹಿರ್ಗೃಹದ್ವಾರದಲ್ಲಿ ನಿಂತಿರಬೇಕೆಂದು ತಿಳಿಸಿದಾಗ ಅಪಮಾನಿತನಾದ ಚಾಣಕ್ಯನು ನಂದ ವಂಶಕ್ಷಯದ ಪ್ರತಿಜ್ಞೆ ಮಾಡಿದನು. ಬಳಿಕ ಪ್ರತ್ಯಂತವಾಸಿಭೂಪಾಲರ ಸಹಾನುಭೂತಿ ಅವನಿಗೆ ದೊರೆಯಿತು. ರಾಜರು ನಂದನನ್ನು ದಂಡ ತೆರುವಂತೆ ಕೇಳಿದಾಗ ಅವನು ಒಪ್ಪಲಿಲ್ಲ. ಚಾಣಕ್ಯನು ಅವನ ಸೈನ್ಯವನ್ನು ಮಂತ್ರಬಲದಿಂದ ತಾನೇ ಭೇದಿಸಿ, ಅವನನ್ನು ಕೊಂದು ತಾನೇ ಕುಸುಮಪುರದಲ್ಲಿ ರಾಜ್ಯವಾಳಿದನು. ಸ್ವಲ್ಪ ಕಾಲದ ಮೇಲೆ ತನ್ನ ಅಪಮಾನದ ವೇಳೆ ತನ್ನ ಜೊತೆಗಿದ್ದ ಒಬ್ಬ ಮನುಷ್ಯನಿಗೆ ರಾಜ್ಯ ಕೊಟ್ಟು ತಾನು ಜಿನದೀಕ್ಷಾಗ್ರಹಣ ಮಾಡಿದನು. ಇಲ್ಲಿಂದ ಮುಂದೆ ಮುನಿಯಾಗಿ ಅವನ ಕಥೆ ಮುಂದುವರಿದಿದೆ.

ಇಲ್ಲಿ ಚಂದ್ರಗುಪ್ತನ ಪ್ರಸ್ತಾವವೇ ಇಲ್ಲ. ಅಂಧಕೂಪದಲ್ಲಿ ಸೆರೆಯಾದವರು ಮೌರ್ಯನಾಗಲಿ ಅವನ ನೂರ್ವರು ಮಕ್ಕಳಾಗಲಿ ಅಲ್ಲ, ನಂದಮಂತ್ರಿಯಾದ ಕವಿ. ಇಲ್ಲಿ ನಂದ ನಿಗ್ರಹವನ್ನು ಚಾಣಕ್ಯನು ತಾನೇ ಮಾಡುತ್ತಾನೆ ; ತಾನೇ ಅರಸನಾಗುತ್ತಾನೆ. ಚಂದ್ರಗುಪ್ತನ ಸಲುವಾಗಿ ಹೋರಾಟವೆಂಬುದಿಲ್ಲ.

ಬೃಹತ್ ಕಥಾಕೋಶದ ೧೫೭ ನೆಯ ಕಥೆಯಲ್ಲಿ ಶಕಟಾಲ ಮುನಿಯ ಚರಿತೆ ಬಂದಿದ್ದು, ೧೪೩ನೆಯದರಲ್ಲಿ ಬಂದಿರುವಂತೆಯೇ ಶಕಟಾಲನು ನಂದನ ಮೂವರು ಮಂತ್ರಿಗಳಲ್ಲಿ ಒಬ್ಬನು. ನಂದಪತ್ನಿ ಇಲ್ಲಿ ಸುನಂದೆ. ಇಲ್ಲಿಯ ಕಥೆ ಕಥಾಸರಿತ್ಸಾಗರದಲ್ಲಿ ಬಂದಿರುವ ಹಾಗೆ ನಂದ ವರರುಚಿ ಇಂದ್ರದತ್ತ ಮುಂತಾದವರನ್ನು ಒಟ್ಟಿಗೆ ತಂದಿದೆ. ಶಕಟಾಲನಿಗೆ ನೂರು ಮಂದಿ ಪುತ್ರರೆಂದೂ ನಂದನು ಇವರನ್ನೆಲ್ಲ ಅಂಧಕೂಪಕ್ಕೆ ಹಾಕಿಸಿ ಅಲ್ಪಾಹಾರ ಕೊಡುತ್ತ ನರಳಿಸಿದನೆಂದೂ ಇಲ್ಲಿ ಹೇಳಿರುವುದು ೧೪೩ನೆಯ ಕಥೆಯಲ್ಲಿ ಹಿಂದೆ ಹೇಳಿರುವುದಕ್ಕೆ ಸ್ವಲ್ಪ ಬೇರೆಯೇ ಆಗಿದೆ.

ಹೇಮಚಂದ್ರನ 'ತ್ರಿಷಷ್ಟಿ ಶಲಾಕಾಪುರುಷ ಚರಿತ'ದ ಅನುಬಂಧವಾದ ಸ್ಥವಿರಾವಲಿ ಚರಿತ ಅಥವಾ ಪರಿಶಿಷ್ಟಪರ್ವದ ೮ನೆಯ ಅಧ್ಯಾಯದಲ್ಲಿ ನಂದ-ಚಂದ್ರಗುಪ್ತ ಚಾಣಕ್ಯರ ವೃತ್ತಾಂತ ಬಂದಿದೆ. ಶಕಟಾಲ, ಯೋಗನಂದ, ವರರುಚಿಗಳ ಕಥೆ ಹೇಳಿ ಆದ ಮೇಲೆ

ಕ್ಷೇಮೇಂದ್ರ ಇದನ್ನು ಕುರಿತಿದ್ದಾನೆ. ಈ ಕಥೆಯಲ್ಲಿ ಚಾಣಕ್ಯನು ಗೊಲ್ಲದೇಶದ ಚಣಕ ಗ್ರಾಮದ ಚಣಿ-ಚಣೇಶ್ವರಿ ಎಂಬ ವಿಪ್ರದಂಪತಿಗಳ ಪುತ್ರನೆಂದು ಮುಂತಾಗಿ ಅವನ ಹುಟ್ಟನ್ನು ಹೇಳಿದೆ. ಧನಾಶಿಯಾಗಿ ಚಾಣಕ್ಯನು ನಂದರಾಜಧಾನಿ ಪಾಟಲೀಪುತ್ರಕ್ಕೆ ತೆರಳಿ, ಅಲ್ಲಿ ಅರಮನೆಯಲ್ಲಿ ನಂದರು ಸ್ವತಃ ಕುಳಿತುಕೊಳ್ಳುವ ಆಸನವನ್ನು, ಅಗ್ರಾಸನವನ್ನು, ಹತ್ತಿ ಕುಳಿತು ಪರಿಣಾಮವಾಗಿ ಅವನಿಂದ ಅಪಮಾನಿತನಾದನೆಂದೂ ನಂದವಿನಾಶದ ಪ್ರತಿಜ್ಞೆ ಮಾಡಿ ಅರಸನಾಗಲು ತಕ್ಕವನನ್ನು ಅರಸುತ್ತ ಹೊರಟನೆಂದೂ ಇಲ್ಲಿ ನಿರೂಪಣೆ ಯಿದೆ. ಹೀಗೆ ಹೊರಟವನು ಮಯೂರಪೋಷಕ ಗ್ರಾಮಕ್ಕೆ ಬಂದು ಅಲ್ಲಿಯ ಮುಖ್ಯಸ್ಥ ನಾದವನ ಮಗ ಚಂದ್ರಗುಪ್ತನೆಂಬವನಲ್ಲಿ ರಾಜಲಕ್ಷಣ ಗುರುತಿಸಿ ಅವನ ಸಹಾಯದಿಂದ ನಂದನಿಗ್ರಹಕ್ಕೆ ಯತ್ನಿಸಿದನೆಂದೂ ತನ್ನ ಪ್ರಯತ್ನದಲ್ಲಿ ಕೆಲವು ಸಲ ವಿಫಲವಾದ ಮೇಲೆ ಕೊನೆಗೆ ಒಮ್ಮೆ ವೃದ್ಧೆಯೊಬ್ಬಳ ವ್ಯಾವಹಾರಿಕ ಸಲಹೆಯಂತೆ ರಾಜನೀತಿಯ ಮರ್ಮ ವರಿತು ಅರ್ಧರಾಜ್ಯ ಕೊಡುವ ಒಪ್ಪಂದದ ಮೇಲೆ ಪರ್ವತಪ್ರಾಂತದ ಪರ್ವತಕನೆಂಬವನ ಸಹಾಯ ಪಡೆದು ನಂದನನ್ನು ಎದುರಿಸಿ ಸೋಲಿಸಿದನೆಂದೂ ಅವನನ್ನು ಪಟ್ಟಣದಿಂದ ಓಡಿಸಿದನೆಂದೂ ಇಲ್ಲಿ ಕಥಾಗತಿಯಿದೆ. ನಂದಪುತ್ರಿ ಚಂದ್ರಗುಪ್ತನಲ್ಲಿ ಮೋಹಗೊಂಡು ಅವನನ್ನು ವರಿಸಿದಳೆಂದೂ ನಂದನ ಅರಮನೆಯಲ್ಲಿದ್ದ ವಿಷಕನ್ಯೆಯನ್ನು ಪರ್ವತರಾಜನು ಮೋಹಿಸಿ ಕೂಡಿದಾಗ ವಿಷವೇರಿ ಮೃತಪಟ್ಟನೆಂದೂ ಅವನಿಗೆ ಅರ್ಧರಾಜ್ಯ ಸಲ್ಲುವ ಪ್ರಸಕ್ತಿ ತಪ್ಪುವುದೆಂದು ಚಾಣಕ್ಯ ಅದಕ್ಕೆ ಅವಕಾಶವಿತ್ತನೆಂದೂ ಬಳಿಕ ಚಂದ್ರಗುಪ್ತನು ನಂದರಾಜ್ಯಾಧಿಪತಿಯಾದನೆಂದೂ ಇಲ್ಲಿ ಕಥಾಸಂದರ್ಭ ಮುನ್ನಡೆದಿದೆ. ಮುಂದೆ ಬಿಂದು ಸಾರನ ಕಥೆ ಬಂದಿದ್ದು, ಚಾಣಕ್ಯನು ಅವನ ಕಾಲದಲ್ಲಿ ಸಹ ಮಂತ್ರಿಯಾಗಿದ್ದನೆಂದಿದೆ. ಚಾಣಕ್ಯಾಪಮಾನ ಮತ್ತು ವಿಷಕನ್ಯಾವ್ಯತಿಕರ ಎರಡೂ ಇಲ್ಲಿ ಗಮನಾರ್ಹವಾದವು.

ಹರಿಷೇಣನ ಬೃಹತ್ ಕಥಾಕೋಶದ ಚಂದ್ರಗುಪ್ತ-ಚಾಣಕ್ಯ ವೃತ್ತಾಂತದ ಹಲವು ವಿವರಗಳೂ ಹೇಮಚಂದ್ರನ ಪರಿಶಿಷ್ಟಪರ್ವದ ವೃತ್ತಾಂತವಿವರಗಳೂ ಸಾಕಷ್ಟು ಭಿನ್ನವಾಗಿವೆ.

ಕೆಲವು ಹೊಂದಿಕೆ ಮಾರ್ಪಾಟುಗಳೊಂದಿಗೆ ಪರಿಶಿಷ್ಟಪರ್ವದ ವಿವರಗಳು ರೂಢಿಯಲ್ಲಿ ವಡ್ಡಾರಾಧನೆಯೆಂದು ವ್ಯವಹರಿಸುತ್ತಿರುವ ಪ್ರಾಚೀನ ಜೈನ ಕನ್ನಡ ಕಥಾಕೋಶ / ಆರಾಧನಾಕವಚ ಕಥಾಕೋಶದಲ್ಲಿ ಸಹ ಕಂಡುಬರುತ್ತಿವೆ. ವಸ್ತುವಿನ ವಿಸ್ತಾರದಲ್ಲಿ, ಕಥೆಯ ವಿನ್ಯಾಸದಲ್ಲಿ, ಕಥನಕೌಶಲದಲ್ಲಿ ಕನ್ನಡ ಕಥಾಕೋಶದ ನಿರೂಪಣೆಯೇ ಹೆಚ್ಚು ಸೊಗಸಾದುದು. ಸಣ್ಣಪುಟ್ಟ ವ್ಯತ್ಯಾಸಗಳು ಹೇಗೇ ಇರಲಿ, ಕನ್ನಡ ಕಥಾಕೋಶದ ಚಾಣಾಕ್ಯರಿಸಿಯ ಕಥೆಯಲ್ಲಿ ಸಹ ಮೌರ್ಯ ಮತ್ತು ಮೌರ್ಯಪುತ್ರರನ್ನು ನೆಲಮಾಳಿಗೆಯಲ್ಲಿ ಕೊಲ್ಲಿಸುವ ಪ್ರಯತ್ನಕ್ಕೆ ಸದೃಶವಾಗಿ ನಂದವಂಶದ ಮಹಾಪದ್ಮನು ಮಂತ್ರಿಯಾದ ಕಾಪಿಯನ್ನು ಪುತ್ರ ಮಿತ್ರರು ಮೊದಲಾದವರೊಂದಿಗೆ ನೆಲಮನೆಗೆ ಹಾಕಿಸಿದ್ದು (ಕಾಪಿ ಮಹಾಪದ್ಮನ ತಂದೆಯನ್ನು ಮೋಸದಿಂದ ಬಾವಿಗೆ ನೂಕಿ ಕೊಂದಿರುತ್ತಾನೆ), ಚಾಣಕ್ಯನು ಶೋಣಾನದಿಯ ದಂಡೆಯ ಮೇಲೆ ಹೋಗುತ್ತಿದ್ದಾಗ ದರ್ಭಾಂಕುರವು ಚುಚ್ಚಿ ನೆತ್ತರು ಹರಿದುದರಿಂದ ಕ್ರುದ್ಧನಾಗಿ ದರ್ಭೆಯ ಬುಡವನ್ನೇ ಅಗೆದು ಸುಟ್ಟುದನ್ನು ಕಂಡು ನೆಲಮನೆಯಲ್ಲಿ ಒಬ್ಬನೇ ಬದುಕುಳಿದು ವೈರಿನಾಶದ ಪ್ರತೀಕ್ಷೆಯಲ್ಲಿದ್ದ ಕಾಪಿಯ ಮಗ

ಸುಬಂಧು (ಚಂದ್ರಗುಪ್ತನಿಗೆ ಭಾಗಶಃ ಸದೃಶವಾದ ಪಾತ್ರ) ಸ್ವವೈರಿವಿಧ್ವಂಸನಕ್ಕೆ ತಕ್ಕವನು ಸಿಕ್ಕಿದನೆಂದು ತಿಳಿದದ್ದು, ಅಗ್ರಾಸನದ ಮರ್ಯಾದೆಯನ್ನು ಪಡೆಯಲು ಹೋಗಿ ಚಾಣಕ್ಯನು ಮಹಾಪದ್ಮ ಮತ್ತು ಅವನ ಆಜ್ಞಾಚರನಾದ ಸುಬಂಧುವಿನಿಂದ ಅಪಮಾನಿತನಾದುದು ಈ ಕೆಲವು, ಸಾಮಾನ್ಯರೀತಿಯಿಂದ ನಾಟಕಾದಿಗಳ ಕಥನರೀತಿಗೆ ಸದೃಶವಾದ ಕಥಾಂಶಗಳಾಗಿವೆ. ಮೂಲದ ಚಂದ್ರಗುಪ್ತನ ಸ್ಥಾನದಲ್ಲಿ ಇಲ್ಲಿ ಮಹೋದಕವೆಂಬ ಪಟ್ಟಣವಾಳುತ್ತಿದ್ದ ಮಯೂರವಂಶದ ಚಂದ್ರಭುಕ್ತನೆಂಬ ರಾಜಪುತ್ರನು ಕಾಣಿಸಿಕೊಂಡಿದ್ದಾನೆ. (ಈ ಮಯೂರವಂಶ ಮೌರ್ಯವಂಶದ ನೆನಪು ಸಹಜವಾಗಿ ತರುತ್ತದೆ.) ಮುಂದೆ ನಂದವಂಶದ ರಾಜ್ಯದ ಅಧಿಪತಿಯಾಗುವವನು ಇವನೇ.

ಕನ್ನಡ ಜೈನಕವಿ ದೇವಚಂದ್ರನ 'ರಾಜಾವಳೀ ಕಥಾಸಾರ'ದಲ್ಲಿ (೧೮೩೮) ನಂದರಾಜ-ಸಕಟಾಳ ಮಂತ್ರಿಯ ಕಥೆಯಾಗಿ, ನೆಲಮಾಳಿಗೆಯಲ್ಲಿ ಮಂತ್ರಿಯನ್ನು ನೂಕಿ ಕೊಲ್ಲಲೆಳಸಿದ್ದು, ಕಾಲಾಂತರದಲ್ಲಿ ಛತ್ರಶಾಲೆಯ ನಿಯೋಗದಲ್ಲಿದ್ದ ಆತನು ಚಾಣಕ್ಯನ ಸಹಾಯದಿಂದ ನಂದನಿಗ್ರಹ ಮಾಡಿದ್ದು ಈ ವಿವರಗಳೊಂದಿಗೆ ೬ನೆಯ ಅಧಿಕಾರದಲ್ಲಿ ಈ ಕಥೆ ಕಾಣಿಸಿಕೊಂಡಿದೆ. ಮುಖ್ಯಾಂಶದಲ್ಲಿ ಈ ಮೇಲೆ ನೋಡಿದ ಬೃಹತ್ ಕಥಾಕೋಶದ ಎರಡು ಕಥೆಗಳನ್ನು ಇದು ಹೋಲುವುದು ; ಇಲ್ಲಿಂದ ಮುಂದೆ ಚಂದ್ರಗುಪ್ತನ ಪ್ರಸ್ತಾವವಿದೆಯಾದರೂ ಇದು 'ಮುದ್ರಾಮಂಜೂಷ'ದ ಕಥಾಸ್ವರೂಪವನ್ನು ಹೋಲುವಂತಹುದಲ್ಲ.

(೪) ವೈದಿಕಪುರಾಣಗಳಲ್ಲಿ

ಪುರಾಣಗಳಲ್ಲಿ, ವಿಷ್ಣು, ಭಾಗವತ, ವಾಯು ಮತ್ತು ಮತ್ಸ್ಯಪುರಾಣಗಳಲ್ಲಿ ಈ ವೃತ್ತಾಂತವು ತುಂಬ ಸಂಕ್ಷಿಪ್ತವಾಗಿ ಕಂಡುಬರುತ್ತದೆ.

ವಿಷ್ಣುಪುರಾಣ : ಅನುಲ್ಲಂಘಿತ ಶಾಸನನಾದ ಮಹಾಪದ್ಮನು ಏಕಚ್ಛತ್ರಾಧಿಪತಿಯಾಗಿ ಭೂಮಿಯನ್ನು ಅನುಭವಿಸುವನು. ಅವನಿಗೆ ಸುಮಾಲ ಮೊದಲಾಗಿ ಎಂಟುಜನ ಮಕ್ಕಳು. ಮಹಾಪದ್ಮನೂ ಈ ಮಕ್ಕಳೂ ೧೦೦ವರ್ಷಗಳ ವರೆಗೆ ರಾಜರಾಗಿರುವರು. ಬಳಿಕ ಒಂಬತ್ತು ಜನ ನಂದರನ್ನು ಕೌಟಿಲ್ಯನೆಂಬ ಬ್ರಾಹ್ಮಣನು ನಾಶಮಾಡುವನು. ಆಮೇಲೆ ಮೌರ್ಯರು ರಾಜರಾಗುವರು. ಕೌಟಿಲ್ಯನೇ ಚಂದ್ರಗುಪ್ತನನ್ನು ರಾಜನನ್ನಾಗಿ ಅಭಿಷೇಕ ಮಾಡುವನು. ಅವನ ಮಗನೇ ಬಿಂದುಸಾರ.

ವಾಯುಪುರಾಣ : ಮಹಾನಂದಿಯ ಕುಮಾರನೂ ಶೂದ್ರಸ್ತ್ರೀಸಂಜಾತನೂ ಆದ ಮಹಾಪದ್ಮನು ರಾಜನಾಗಿ ಆಳುವನು. ಅನಂತರದಲ್ಲಿ ಶೂದ್ರರೇ ರಾಜರಾಗುವರು. ಆ ಮಹಾಪದ್ಮನು ಏಕಚ್ಛತ್ರಾಧಿಪತಿಯಾಗಿ ೨೮ ವರ್ಷಕಾಲ ಭೂಮಿಯನ್ನು ಪಾಲಿಸುವನು. ಅವನ ಮಕ್ಕಳಾದ ೧೨ ಜನ ರಾಜರು ಅವನ ಅನಂತರದಲ್ಲಿ ೧೦೦೮ ವರ್ಷ ಕ್ರಮವಾಗಿ ರಾಜ್ಯವಾಳುವರು. ಈ ಮಹಾಪದ್ಮನ ಪರ್ಯಾಯಕಾಲ ಹೀಗೆ ಆಗುವದು. ಕೌಟಿಲ್ಯ ನಾಮಕನಾದವನು ಇವರನ್ನು ನಿಗ್ರಹಿಸಿ, ನಂದರ ಶತ್ರುವಾದ ಚಂದ್ರಗುಪ್ತನನ್ನು ಆ ರಾಜ್ಯದಲ್ಲಿ ಸ್ಥಾಪಿಸುವನು. ಚಂದ್ರಗುಪ್ತನು ೨೪ ವರ್ಷಕಾಲ ರಾಜ್ಯವಾಳುವನು.

ಮತ್ಸ್ಯಪುರಾಣ : ಮಹಾನಂದಿಗೆ ಶೂದ್ರಸ್ತ್ರೀಯೊಬ್ಬಳ ಹೊಟ್ಟೆಯಲ್ಲಿ ಕಲಿಯ ಅಂಶದಿಂದ ಮಗನಾಗಿ ಮಹಾಪದ್ಮನೆಂಬವನು ಹುಟ್ಟುವನು. ಅವನು ಅರಸನಾಗಿ ಸಕಲ

ಕ್ಷತ್ರಿಯರ ವಿನಾಶಕ್ಕೆ ಕಾರಣನಾಗುವನು. ಅಲ್ಲಿಂದ ಮುಂದೆ ಶೂದ್ರರು ರಾಜರಾಗುವರು. ಆ ಮಹಾಪದ್ಮನು ಏಕಚ್ಛತ್ರಾಧಿಪತಿಯೆನಿಸುವನು. ಅವನು ೮೮ ವರ್ಷಕಾಲ ಅರಸನಾಗಿರುವನು. ಕ್ಷತ್ರಿಯಕುಲವನ್ನು ನಾಶಮಾಡುವನು. ಮುಂದೆ ಹಾಗಾಗಬೇಕೆಂಬುದು ಇದ್ದಿತೆಂದೇ ಅವನಿಗೆ ಹಾಗೆ ಬುದ್ಧಿ ಹುಟ್ಟಿತು. ಸುಕಲ್ಪ ಮೊದಲಾದ ೮ ಮಂದಿ ಮಹಾಪದ್ಮನ ಮಕ್ಕಳು. ಅವನ ತರುವಾಯ ಅವರು ೧೨ ವರ್ಷಕಾಲ ಅರಸರಾಗಿರುವರು. ಆ ಬಳಿಕ ಕೌಟಿಲ್ಯನು ಮಹಾಪದ್ಮನ ಪುತ್ರರನ್ನು ನಿರ್ಮೂಲನಮಾಡಿ ಚಂದ್ರಗುಪ್ತನಿಗೆ ರಾಜ್ಯಾಭಿಷೇಕ ಮಾಡುವನು. ಆ ಚಂದ್ರಗುಪ್ತನು ೧೦೦ ವರ್ಷ ಆಳಿದ ಬಳಿಕ ರಾಜ್ಯ ಮೌರ್ಯವಂಶದ ಮುಂದಿನ ಅರಸರನ್ನು ಸೇರುವುದು.

ಭಾಗವತಪುರಾಣ : ಪಾಪಿಷ್ಠರಾದ ನವನಂದರನ್ನು ಬ್ರಾಹ್ಮಣನೊಬ್ಬನು ಕೊಲ್ಲುವನು. ಅವರು ನಷ್ಟರಾದ ಮೇಲೆ ಈ ಭೂಮಿಯನ್ನು ಮೌರ್ಯರು ಆಳುವರು. ಆ ಬ್ರಾಹ್ಮಣನೇ ಚಂವ್ರಗುಪ್ತನಿಗೆ ರಾಜ್ಯಾಭಿಷೇಕ ಮಾಡುವನು. ಚಂದ್ರಗುಪ್ತನ ಮಗನೇ ವಾರಿಸಾರನು.

ಹೀಗೆ ಪುರಾಣಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಸಂಕ್ಷೇಪವಾಗಿ ತಿಳಿಸಿರುವ ಈ ವೃತ್ತಾಂತದಲ್ಲಿ ನಂದವಂಶದ ಅರಸು ಮಹಾಪದ್ಮನೆಂದೂ (ಆತನು ಶೂದ್ರಸ್ತ್ರೀ ಸಂಜಾತನೆಂದೂ) ಅವನ ಮಕ್ಕಳಾದ ನಂದರನ್ನು ಕೌಟಿಲ್ಯನು ನಿಗ್ರಹಿಸಿ ರಾಜ್ಯ ಮೌರ್ಯವಂಶದ ಚಂದ್ರಗುಪ್ತನಿಗೆ ಕೈಸೇರುವಂತೆ ಮಾಡಿದನೆಂದೂ ಅಭಿಪ್ರಾಯವಾಗುವ ಸಾಮಾನ್ಯಾಂಶ ಗೋಚರಿಸುತ್ತದೆ. 'ಮುದ್ರಾಮಂಜೂಷ'ದ ಕಥೆಗೆ ಸಾಲುವಷ್ಟು ವಸ್ತುವಿವರಗಳು ಇಲ್ಲಿ ಇಲ್ಲವೆಂಬುದು ಸ್ಪಷ್ಟ. ಇಲ್ಲಿ ಚಂದ್ರವಂಶದ ಸರ್ವಾರ್ಥಸಿದ್ಧಿರಾಯನ ಪುತ್ರರಾದ ನವನಂದರನ್ನು ನಿಗ್ರಹಿಸಿ, ಚಾಣಕ್ಯನು ಆ ರಾಯನ ಪ್ರಿಯಪತ್ನಿ ಶೂದ್ರಸ್ತ್ರೀಯ ಪುತ್ರನಾದ ಮೌರ್ಯನೆಂಬವನ ಮಗ ಚಂದ್ರಗುಪ್ತನಿಗೆ ರಾಜ್ಯ ದೊರೆಯುವಂತೆ ಮಾಡಿದನೆಂದು ಕಥೆ ಬಂದಿದೆ.

(ಇ) ಬೃಹತ್ಕಥಾಮೂಲದ ಕಥಾಕೋಶಗಳಲ್ಲಿ

ಕ್ಷೇಮೇಂದ್ರನ 'ಬೃಹತ್ಕಥಾಮಂಜರಿ', ಸೋಮದೇವನ 'ಕಥಾಸರಿತ್ಸಾಗರ'ಇವುಗಳಲ್ಲಿ ನಿರೂಪಿತವಾಗಿರುವಂತೆ ಈ ವೃತ್ತಾಂತ ಹೀಗಿದೆ :

ವರರುಚಿ ಇಂದ್ರದತ್ತ ಮತ್ತು ವ್ಯಾಡಿ ಇವರು ವ್ಯಾಸಂಗಕ್ಕೆಂದು ವರ್ಷ ಉಪವರ್ಷರಲ್ಲಿಗೆ ಬಂದಾಗ್ಗೆ ಪಾಟಲೀಪುತ್ರದಲ್ಲಿ ನಂದನು ಆಳುತ್ತಿದ್ದನು. ವಿದ್ಯಾಭ್ಯಾಸದ ಕೊನೆಗೆ ಗುರುದಕ್ಷಿಣೆಯಾಗಿ ಕೋಟಿರೂಪಾಯಿ ವರ್ಷನಿಗೆ ಸಲ್ಲಿಸಬೇಕಾಯಿತು. ಅಷ್ಟು ಹಣ ಹೊಂದಿಸುವುದು ಸುಲಭವೇ ? ನವಕೋಟಿಧನಪತಿಯಾದ ನಂದನನ್ನು ತಾನೇ ಕೇಳಬೇಕು? ಆಗ ನಂದ ವಾರಣಾಸಿಯಲ್ಲಿ ಬೀಡು ಬಿಟ್ಟಿದ್ದನು. ದೊರೆಯ ಶಿಬಿರಕ್ಕೆ ಬರುವ ಹೊತ್ತಿಗೆ ಅವನು ತೀರಿಕೊಂಡಿದ್ದನು. ಕೂಡಲೇ ಇಂದ್ರದತ್ತನು ತನ್ನ ಯೋಗಶಕ್ತಿಯ ಬಲದಿಂದ ತನ್ನ ಕಳೇವರವನ್ನು ವ್ಯಾಡಿಯ ರಕ್ಷಣೆಗೆ ಬಿಟ್ಟು ತಾನು ನಂದನ ಶವದೊಳಗೆ ಪ್ರವೇಶಿಸಿದನು. ಈಗ ಜೀವಂತಗೊಂಡ ನಂದ ಯೋಗನಂದನಾದನು. ಈತನಲ್ಲಿ ವರರುಚಿ ಹಣಕ್ಕೆ ಬೇಡಿಕೆ ಸಲ್ಲಿಸಿದನು. ಯೋಗನಂದ ಮಂತ್ರಿ ಶಕಟಾಲನಿಗೆ ಹಣ ಕೊಡುವಂತೆ ಅಪ್ಪಣೆ

ಮಾಡಿದನು. ಆದರೆ ಚತುರನಾದ ಈ ಮಂತ್ರಿ ನಂದನ ಮೃತಿ ಮೊದಲಾಗಿ ಜರುಗಿದ ವಿಸ್ಮಯಕರ ಘಟನಾವಳಿಯನ್ನು ಅರ್ಥಮಾಡಿಕೊಂಡನು. ಯಾರೇ ಸತ್ತಿರಲಿ, ಅವರೆಲ್ಲರ ಕಳೇವರಗಳನ್ನು ಅಗ್ನಿಸ್ಪರ್ಶ ಮಾಡುವಂತೆ ವಿಧಿಸಿದನು. ಪರಿಣಾಮವಾಗಿ ಇಂದ್ರದತ್ತನ ಕಳೇವರವನ್ನೂ ಬಲಾತ್ಕಾರದಿಂದ ಒಯ್ದು ದಹಿಸಲಾಯಿತು. ವ್ಯಾಡಿ ನಂದದೇಹಧಾರಿ ಯಾದ ಗೆಳೆಯ ಇಂದ್ರದತ್ತನಿಗೆ ಈ ವಿಷಯ ತಿಳಿಸಿದನು. ಅವನಾದರೂ ಶಾಶ್ವತವಾಗಿ ಶೂದ್ರನೊಬ್ಬನ ಶರೀರದಲ್ಲೇ ಇದ್ದುಕೊಳ್ಳುವಂತಾಯಿತಲ್ಲ ಎಂದು ಮರುಗಿದನು. ವ್ಯಾಡಿಯು ಶಕಟಾಲನ ಕೈಯಲ್ಲಿ ತನ್ನ ಗೆಳೆಯನ ಶರೀರಕ್ಕೆ ಕ್ಷೇಮವಿಲ್ಲ ಎಂದು ಈಗ ಅರಿತು, ವರರುಚಿಯನ್ನು ಮಂತ್ರಿಯನ್ನಾಗಿ ಮಾಡಿಕೊಳ್ಳಬೇಕೆಂದು ಯೋಗನಂದನಿಗೆ ಸಲಹೆ ಮಾಡಿದನು. ಯೋಗನಂದ ಹಾಗೆಯೇ ಮಾಡಿದನು. ಶಕಟಾಲನನ್ನೂ ಅವನ ಮೂವರು ಪುತ್ರರನ್ನೂ ಹಾಳುಬಾವಿಗೆ ನೂಕಿಸಿ, ದಿನವೊಂದಕ್ಕೆ ಒಬ್ಬರಿಗೆ ಸಾಲುವಷ್ಟೇ ಆಹಾರ ಪಾನೀಯವನ್ನು ಅಲ್ಲಿಗೆ ಕಳಿಸುವಂತೆ ಏರ್ಪಾಡುಮಾಡಿದನು.

ಶಕಟಾಲನು ಈಗ ಯೋಗನಂದನ ಮೇಲೆ ಸೇಡು ತೀರಿಸಿಕೊಳ್ಳಲು ಬಯಸಿದನು. ಪ್ರತಿದಿನ ಕಳುಹುವ ಆಹಾರ ಪಾನೀಯವನ್ನು ಆತನೊಬ್ಬ-ಬಳಸಿ ಜೀವ ಹಿಡಿದು ಕೊಂಡಿರುವಂತೆ ತಿಳಿಸಿ, ಅವನ ಮಕ್ಕಳು ತಾವು ಸಾಯಲೊಪ್ಪಿದರು. ಇವೆಲ್ಲ ವಾರ ಣಾಸಿಯ ಬಿಡಾರದಲ್ಲಿ ನಡೆಯಿತು.

ದೊರೆ ಯೋಗನಂದನೂ ಮಂತ್ರಿ ವರರುಚಿಯೂ ಪಾಟಲೀಪುತ್ರಕ್ಕೆ ಮರಳಿದರು. ವರರುಚಿ ಗಂಗೆಯನ್ನು ಪೂಜಿಸಲಾಗಿ, ಅವನಿಗೆ ದಿನಂಪ್ರತಿ ಚಿನ್ನ ಸಿಕ್ಕುತ್ತಿತ್ತು. ಅದರ ಬಲದಿಂದ ಯೋಗನಂದನು ಈಗ ಧನದಾಹಿಯಾದನು. ವರರುಚಿ ಈಗ ಶಕಟಾಲನನ್ನು ಸ್ಮರಿಸಿ, ಅವನನ್ನು ಬಾವಿಯಿಂದ ತೆಗೆಸಿ ಮತ್ತೆ ಅವನಿಗೆ ಮಂತ್ರಿಪದವಿ ದೊರಕಿಸಿದನು. ಮಂತ್ರಿಯಾಗಿರುತ್ತ ಶಕಟಾಲನು ಒಳಗೇ ಕುದಿಯುತ್ತಿದ್ದನು. ವರರುಚಿ ತನಗಿದ್ದ ಅತೀಂ ದ್ರಿಯ ಶಕ್ತಿಯಿಂದ ದೊರೆಯ ಪತ್ನಿಯ ಸೊಂಟದಲ್ಲಿ ಮಚ್ಚೆಯುಂಟೆಂದು ತಿಳಿಸಿದಾಗ, ದೊರೆಗೆ ಆ ಇಬ್ಬರ ವಿಷಯದಲ್ಲಿ ಸಲ್ಲದ ಸಂಶಯ ಹುಟ್ಟಿತು. ಪರಿಣಾಮವಾಗಿ ವರ ರುಚಿಯ ವಧೆಗೆ ಅಪ್ಪಣೆ ಮಾಡಿದನು. ಆದರೆ ಶಕಟಾಲನು ತನಗೆ ವರರುಚಿಯಿಂದ ಬಿಡುಗಡೆ ದೊರೆತ ಉಪಕೃತಿಯನ್ನು ಸ್ಮರಿಸಿ, ಅವನನ್ನು ತನ್ನ ಮನೆಯಲ್ಲೇ ಬಚ್ಚಿಟ್ಟು ವಧೆಗೆ ಬದಲಿ ಏರ್ಪಾಡು ಮಾಡಿದನು. ಈಗ ಶಕಟಾಲ ವರರುಚಿಗಳ ನಡುವೆ ಸೌಮನಸ್ಯ ಹೆಚ್ಚಿತು. ವರರುಚಿ ತನಗೆ ರಾಕ್ಷಸನೊಬ್ಬನ ಸೇವೆಯ ಬಲವಿರುವುದರಿಂದ ತನ್ನನ್ನು ಯಾರೂ ವಧಿಸಲಾರರೆಂದು ತಿಳಿಸಿ, ಆ ರಾಕ್ಷಸನನ್ನೂ ತನ್ನಿಂದ ಪೂಜೆಗೊಳ್ಳುತ್ತಿದ್ದ ಗಂಗೆಯನ್ನೂ ಶಕಟಾಲನಿಗೆ ತೋರಿಸಿದನು.

ಯೋಗನಂದನ ಪುತ್ರ ಹಿರಣ್ಯಪುತ್ರನಿಗೆ ಒಂದು ನಿಮಿತ್ತದಿಂದಾಗಿ ಹುಚ್ಚು ಹಿಡಿಯಿತು. ಆಗ ಅವನು ವರರುಚಿ ಇದ್ದಿದ್ದರೆ ಕಾರಣ ತಿಳಿಯುತ್ತಿತ್ತು ಎಂಬುದಾಗಿ ಅವನನ್ನು ಸ್ಮರಿಸಿದನು. ಆಗ ಶಕಟಾಲ ಆ ಸಮಯವನ್ನು ಬಳಸಿಕೊಂಡು ಅವನನ್ನು ತಂದು ಕಾಣಿಸಿದನು. ವರರುಚಿ ಈಗ ಆ ಹುಚ್ಚಿನ ಕಾರಣವನ್ನೂ ರಾಣಿಯ ಮೈಯ ಮಚ್ಚೆಯನ್ನು ತಾನು ಅತೀಂದ್ರಿಯಶಕ್ತಿಯಿಂದ ಊಹಿಸಿದ್ದನ್ನೂ ನಿವೇದಿಸಿದನು. ದೊರೆಗೆ ಈಗ ಅವನಲ್ಲಿ ವಿಶ್ವಾಸ ಹುಟ್ಟಿತು. ಈ ವೇಳೆಗೆ ಜೀವನದಲ್ಲಿ ಜುಗುಪ್ಸೆಗೊಂಡಿದ್ದು, ವರರುಚಿ ತಪಸ್ಸಿಗೆ

ಹೊರಟುಹೋದನು.

ವರರುಚಿಯ ನಿವೃತ್ತಿಯಿಂದಾಗಿ ಶಕಟಾಲನಿಗೆ ಯೋಗನಂದನ ಮೇಲೆ ಸೇಡು ತೀರಿಸಿಕೊಳ್ಳಲು ಒಳ್ಳೆಯ ಅವಕಾಶ ಸಿಕ್ಕಿತು. ಒಮ್ಮೆ ಚಾಣಕ್ಯನೆಂಬ ಬ್ರಾಹ್ಮಣನು ಕಾಲಿಗೆ ಚುಚ್ಚಿದ ದರ್ಭೆಯನ್ನು ಸಮೂಲ ಕೀಳುತ್ತಿರುವುದನ್ನು ನೋಡಿ, ಯೋಗನಂದನ ವಿನಾಶಕ್ಕೆ ಅವನು ತಕ್ಕವನೆಂದು ಮನಗಂಡನು. ಶಕಟಾಲನು ಚಾಣಕ್ಯನನ್ನು ಅರಮನೆಯ ಶ್ರಾದ್ಧವೊಂದರಲ್ಲಿ ಭಾಗವಹಿಸಿ, ಲಕ್ಷ ಹಿರಣ್ಯವನ್ನು ದಕ್ಷಿಣೆಯಾಗಿ ಪಡೆಯುವಂತೆ ಕೋರಿದನು; ಚಾಣಕ್ಯ ಒಪ್ಪಿದನು.

ಚಾಣಕ್ಯ ಅರಮನೆಗೆ ಹೊರಟನು. ಆದರೆ ಅಲ್ಲಿ ಆಗಲೇ ಸುಬಂಧುವೆಂಬ ಇನ್ನೊಬ್ಬ ಬ್ರಾಹ್ಮಣನಿದ್ದು, ಅವನಿಗೆ ಅಗ್ರಾಸನವೆಂದು ದೊರೆ ನಿಶ್ಚಯಿಸಿದ್ದನು. ಇದರಿಂದ ಚಾಣಕ್ಯನಿಗೆ ಅಪಮಾನವಾಯಿತು. ಅವನು ತನ್ನ ಶಿಖೆಯನ್ನು ಬಿಚ್ಚಿ, ವಾರದೊಳಗೆ ಯೋಗನಂದನನ್ನು ಮುಗಿಸುವುದಾಗಿ ಪ್ರತಿಜ್ಞೆ ಮಾಡಿದನು. ಆ ಸಲುವಾಗಿ ಅವನು ಕೆಟ್ಟ ಶಕ್ತಿಯನ್ನು ಆವಾಹಿಸಲಾಗಿ, ಯೋಗನಂದನು ಸತ್ತನು. ಬಳಿಕ ಶಕಟಾಲನು ಹಿರಣ್ಯಗುಪ್ತನನ್ನು ಕೊಂದನು. ಮೊದಲೇ ಮೃತನಾಗಿದ್ದ ದಿಟದ ನಂದನ ಮಗ ಚಂದ್ರಗುಪ್ತನನ್ನು ದೊರೆತನಕ್ಕೆ ಏರಿಸಿದನು. ಚಾಣಕ್ಯನನ್ನು ಅವನ ಮಂತ್ರಿಯನ್ನಾಗಿ ಮಾಡಿ ತಾನು ತಪಸ್ಸಿಗೆ ತೆರಳಿದನು.

ಈ ಪರಿಷ್ಕರಣದ ಪ್ರಕಾರ ನಂದ ಒಬ್ಬ ಶೂದ್ರರಾಜ ; ಚಂದ್ರಗುಪ್ತ ಅವನ ಮಗ. ಆ ಚಂದ್ರಗುಪ್ತನು ದೊರೆಯಾಗುವ ಮೊದಲು ವಧಿಸಬೇಕಾಗಿ ಬಂದದ್ದು ಮಿಥ್ಯಾನಂದನನ್ನು, ಅವನ ಪುತ್ರ ಹಿರಣ್ಯಗುಪ್ತನನ್ನು. ಮಿಥ್ಯಾನಂದನನ್ನು ಕೊಂದದ್ದು ಚಾಣಕ್ಯ ತನ್ನ ಅಭಿಚಾರವಿದ್ಯೆಯ ಬಲದಿಂದ. ಅನ್ಯಾಯವಾಗಿ ದೊರೆತನ ಪಡೆದ ಯೋಗನಂದನ ಮೇಲೆ ಸೇಡಿಗೆ ಚಾಲಕಶಕ್ತಿಯಾದುದು ಕೌಟುಂಬಿಕ ಅಸಹನೆ ಕಲಹಗಳಲ್ಲ, ಮಂತ್ರಿ ಶಕಟಾಲನಿಗೆ ಉಂಟಾದ ಅನ್ಯಾಯ ದೌರ್ಜನ್ಯಗಳು. ಮುದ್ರಾರಾಕ್ಷಸ ನಾಟಕ ಮೊದಲಾದ ಮೂಲಗಳಲ್ಲಿ ಬಂದಿರುವ ಹಾಗೆ ಚಾಣಕ್ಯನ ಸಂಕಲ್ಪಗಳು ಚಂದ್ರಗುಪ್ತರಾಜ್ಯಾಭಿಷೇಕ ಮತ್ತು ರಾಕ್ಷಸ ಸಂಗ್ರಹ ಎಂಬವಲ್ಲ ; ಸ್ವತಃ ಚಾಣಕ್ಯನ ಅಪಮಾನಕ್ಕೆ ನಿಷ್ಕೃತಿಯೆಂಬ ಸೀಮಿತವಾದ ಉದ್ದೇಶ. ಹೀಗಿದ್ದೂ ತಂದೆ ಮಕ್ಕಳನ್ನು ಹಾಳುಬಾವಿಗೆ ಹಾಕಿ ಅಲ್ಪಾಹಾರವಿತ್ತು ಸಮೆದು ಸಾಯುವಂತೆ ಮಾಡಿದ ಸನ್ನಿವೇಶ, ಚಾಣಕ್ಯನನ್ನು ದೊರೆ ಅಪಮಾನಿಸಿದ್ದು ಮತ್ತು ಅವನು ಪ್ರತಿಜ್ಞೆ ಮಾಡಿದ್ದು ಈ ಕೆಲವು ಮುಖ್ಯವಾದ ಆಶಯಗಳಲ್ಲಿರುವ ಸಾದೃಶ್ಯ ಗಮನಾರ್ಹವಾಗಿದೆ.

೨. ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕ

ವಿಶಾಖದತ್ತ 'ಮುದ್ರಾರಾಕ್ಷಸ' ಎಂಬ ಏಳು ಅಂಕಗಳ ಐತಿಹಾಸಿಕನಾಟಕದ ಕರ್ತೃವಾಗಿ ಪ್ರಸಿದ್ಧನಾಗಿದ್ದಾನೆ. ನಾಟಕದ ಆರಂಭಭಾಗದಿಂದ ಈತನ ಬದುಕಿನ ಕೆಲವಂಶಗಳು ತಿಳಿಯುತ್ತವೆ. ಅದರ ಪ್ರಕಾರ, ವಿಶಾಖದತ್ತನು ಸಾಮಂತ ವಟೇಶ್ವರದತ್ತನ ಮೊಮ್ಮಗ, ಮಹಾರಾಜ ಭಾಸ್ಕರದತ್ತನ ಮಗ (ಕೆಲವು ಹಸ್ತಪ್ರತಿಗಳಲ್ಲಿ ಕವಿಯ ಹೆಸರನ್ನು ವಿಶಾಖದೇವನೆಂದೂ ಅವನ ತಂದೆಯ ಹೆಸರನ್ನು ಮಹಾರಾಜ ಪೃಥುವೆಂದೂ ಹೇಳಿದೆ). ಈತನ ಕಾಲವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೆ ಬಹುಜನ ವಿದ್ವಾಂಸರ ಅಭಿಪ್ರಾಯ

ದಂತೆ 'ಮುದ್ರಾರಾಕ್ಷಸ' ರಚಿತವಾದುದು ಇಮ್ಮಡಿ ಚಂದ್ರಗುಪ್ತನ (ಕ್ರಿ. ಶ. ೩೭೫-೪೧೩) ಕಾಲದಲ್ಲಿ ಎಂಬುದರಿಂದ, ಕವಿಯ ಜೀವಿತಕಾಲವನ್ನು ಸು. ೪೦೦ ಅಥವಾ ಸು. ೪೫೦ ಎಂಬುದಾಗಿ ಗುರುತಿಸಲಾಗುತ್ತದೆ. ನಾಟಕದ ಭಾಷೆ ಶೈಲಿಗಳ ದೃಷ್ಟಿಯಿಂದ ಕಾಲಿದಾಸನ ಕಾಲದವನು ಅಥವಾ ಅವನಿಗಿಂತ ಈಚಿನವನು ಎಂದು ತಿಳಿಯುವುದು ಸಾಧ್ಯವಿದೆ.

ಈ ಕವಿ ಸಂಸ್ಕೃತ ಪ್ರಾಕೃತಗಳಲ್ಲಿ ತಜ್ಞತೆಯಿದ್ದವನಲ್ಲದೆ, ನಾಟ್ಯಶಾಸ್ತ್ರ ತರ್ಕ ಜ್ಯೋತಿಷ್ಯ ದರ್ಶನಗಳಲ್ಲಿ ಸಹ ಒಳ್ಳೆಯ ಪ್ರವೇಶವಿದ್ದವನೆಂದು ಅವನ ನಾಟಕದ ಪರಿಶೀಲನೆಯಿಂದ ತಿಳಿಯಬಹುದಾಗಿದೆ. ಅಲ್ಲದೆ ಆತನಿಗೆ ಚಾಣಕ್ಯನ ಅರ್ಥಶಾಸ್ತ್ರದ ಪರಿಚಯವಿದ್ದುದರಿಂದ, ಅಲ್ಲಿಂದಲೇ ನೇರವಾಗಿ ರಾಜನೀತಿಯ ಪ್ರಯೋಗ ಪರಿಭಾಷೆಗಳನ್ನು ಗ್ರಹಿಸಿರುವಂತೆಯೂ ತೋರುವುದು.

ಗುಪ್ತಸಾಮ್ರಾಜ್ಯದ ಅತ್ಯುನ್ನತಿಯ ದಿನಗಳಲ್ಲಿ ಕಲೆ, ಸಾಹಿತ್ಯ, ವಿಜ್ಞಾನಗಳ ಉತ್ಕರ್ಷವುಂಟಾಗಿ ಕ್ರಿ.ಪೂ.ದ ಮೌರ್ಯಸಾಮ್ರಾಜ್ಯದ ಹಿರಿಮೆ ಆವರ್ತಿಸಿದಾಗ ವಿಶಾಖದತ್ತ ಆ ಯುಗದ ಮಧುರಫಲವಾಗಿ ಕಾಣಿಸಿಕೊಂಡನು. ಅವನ 'ಮುದ್ರಾರಾಕ್ಷಸ' ನಾಟಕ ಮೊದಲ ಸಲ ಚಕ್ರವರ್ತಿ ಇಮ್ಮಡಿ ಚಂದ್ರಗುಪ್ತನ ಸಭಾಸದರ ನಡುವೆ ಪ್ರಕಟಗೊಂಡಿತೆನ್ನಬೇಕು. ನಾಟಕಕಾರನು ತನ್ನ ಕಲ್ಪನೆಯ ಬಲದಿಂದ ಕ್ರಿ. ಪೂ. ೪ನೆಯ ಶತಮಾನದ ಕೊನೆಯ ಪಾದದ ಶ್ರೀಮಂತನಗರಿ ಪಾಟಲೀಪುತ್ರದ ಸನ್ನಿವೇಶಕ್ಕೆ ಕರೆದೊಯ್ಯುತ್ತಾನೆ ; ಗ್ರೀಕ್ ಜೇತಾರನಾದ ಚಕ್ರವರ್ತಿ ಚಂದ್ರಗುಪ್ತಮೌರ್ಯನಿಗೆ ಚಾಣಕ್ಯನ ಬುದ್ಧಿಬಲದ ಉಪಾಯಾಂತರಗಳಿಂದ ನಂದರಾಜ್ಯದ ಒಡೆತನ ಪ್ರಾಪ್ತವಾಗಿ ಮೌರ್ಯಸಾಮ್ರಾಜ್ಯ ಸ್ಥಾಪನೆಯಾದುದನ್ನು ತಿಳಿಸುತ್ತಾನೆ.

'ಮುದ್ರಾರಾಕ್ಷಸ' ನಾಟಕದ ರಚನೆಗೆ ತತ್ಕಾಲದ ಯಾವ ಐತಿಹಾಸಿಕ ಸಂದರ್ಭಗಳು ಪ್ರೇರಣೆ ನೀಡಿದುವು ಎನ್ನುವುದು ಸ್ಪಷ್ಟವಿಲ್ಲದಿದ್ದರೂ, ವಿಶಾಖದತ್ತನಿಗೆ ಹಿಂದೆ ಬೇರೆ ಬೇರೆ ಆಕರಗಳಲ್ಲಿ ಅದರ ವಸ್ತುವಿನ ಹಿನ್ನೆಲೆಯ ಕಥಾಂಶಗಳು ಹುದುಗಿದ್ದುದಂತೂ ನಿಜ. ಭಾಗವತ ವಿಷ್ಣುಪುರಾಣ ಮುಂತಾದ ಪುರಾಣಗ್ರಂಥಗಳಲ್ಲಿ ತುಂಬ ಹ್ರಸ್ವವಾಗಿ ಕೆಲವು ಸಂಗತಿಗಳು ಬಂದಿವೆ ; ಆದರೆ 'ದಶರೂಪಕ'ದ ವ್ಯಾಖ್ಯಾನಕಾರನಾದ ಧನಿಕನೋ ಮತ್ತೊಬ್ಬನೋ ಹೇಳುವಂತೆ ವಿಶಾಖದತ್ತನಿಗೆ ಬೃಹತ್ಕಥೆಯೇ ಮೂಲವಾಗಿರುವುದು ಸಂಭಾವ್ಯವಾದುದು. ಇದಲ್ಲದೆ ಬೇರಾವುದಾದರೂ ಇತಿಹಾಸದ ಆಕರವಿದ್ದಿತೋ ತಿಳಿಯದು. ಚರಿತ್ರೆಯ ಕಥಾಬೀಜವನ್ನು 'ಬೃಹತ್ಕಥೆ' ಮೊದಲಾದ ಮೂಲಗಳ ಅಲ್ಪಸ್ವಲ್ಪ ಕಥಾಂಶಗಳಿಂದ ಸ್ವೀಕರಿಸಿ, ಸ್ವಂತಕಲ್ಪನೆಯ ವಿವರಗಳಿಂದ ಬೆಳಸಿರುವನೆಂದೂ ಊಹಿಸಬಹುದಾಗಿದೆ. ಮನುಷ್ಯಸ್ವಭಾವದ ಸೂಕ್ಷ್ಮವಾದ ಅರಿವುಳ್ಳ ಕವಿ ಅದರ ಬಹುಮುಖ ಸಂಕೀರ್ಣತೆಯನ್ನು ಪ್ರಕಟಿಸುವ, ಜೀವನವಿವೇಕವನ್ನು ತಕ್ಕ ಸೂಕ್ತಿಗಳಿಂದ ವ್ಯಕ್ತಗೊಳಿಸುವ ಸಾಮರ್ಥ್ಯವನ್ನೂ ಪಡೆದಿರುತ್ತಾನೆ ಎನ್ನುವುದಕ್ಕೆ ವಿಶಾಖದತ್ತನು ಆ ಸ್ವಕಲ್ಪಿತ ವಿವರಗಳಲ್ಲಿ ಅವಕಾಶಮಾಡಿಕೊಂಡಿದ್ದಾನೆ.

ವಸ್ತು, ಪಾತ್ರರಚನೆ, ಸನ್ನಿವೇಶಕಲ್ಪನೆ ಇವುಗಳ ದೃಷ್ಟಿಯಿಂದ 'ಮುದ್ರಾರಾಕ್ಷಸ' ನಾಟಕಕ್ಕೆ ಒಂದು ಮಹತ್ವದ ಸ್ಥಾನವಿದೆ. ಚಾಣಕ್ಯ ಚಂದ್ರಗುಪ್ತರೂ ಬಹುಶಃ ಅಮಾತ್ಯ ರಾಕ್ಷಸನೂ ಪರ್ವತಕನೂ ಐತಿಹಾಸಿಕ ವ್ಯಕ್ತಿಗಳಿದ್ದು, ಇತರ ವ್ಯಕ್ತಿಗಳು ನಾಟಕದ

ಉದ್ದೇಶಕ್ಕೆ ಕಲ್ಪಿಸಿದ ಪೋಷಕಪಾತ್ರಗಳೆಂದು ಹೇಳಬಹುದಾಗಿದೆ. ಧನಮದ ಕುಲಮದ ಮತ್ತು ಜಾತಿಮದಗಳಿಂದ ಸೊಕ್ಕಿ ಕಾರ್ಯಾಕಾರ್ಯವಿವೇಚನೆಯಿಲ್ಲದೆ ನಡೆದುಕೊಳ್ಳುತ್ತಿದ್ದ ನಂದರನ್ನು, ಅವರಿಂದ ಒಂದಾನೊಂದು ಸಂದರ್ಭದಲ್ಲಿ ಅಪಮಾನಿತನಾದ ಬ್ರಾಹ್ಮಣ ಚಾಣಕ್ಯನು ಸಾಮಾನ್ಯವಾದ ಸಹಾಯಸಂಪತ್ತಿಯಿಂದಲೂ ವಿಶೇಷವಾದ ಭೇದೋಪಾಯ ಚಾತುರ್ಯದಿಂದಲೂ ನಿಗ್ರಹಿಸಿ, ಪ್ರತಿಜ್ಞೆ ಮಾಡಿದಂತೆ ಅವರ ಜ್ಞಾತಿಯಾದ ಚಂದ್ರಗುಪ್ತ ನನ್ನು ಅವರ ಸ್ಥಾನದಲ್ಲಿ ಪ್ರತಿಷ್ಠಾಪಿಸುವುದರಲ್ಲಿ ಕೃತಕೃತ್ಯನಾದ ಹಾಗೂ ಅವನ ಸಾಮ್ರಾಜ್ಯದ ಸುಸ್ಥಿತಿಗಾಗಿ ನಂದರ ಅಮಾತ್ಯನಾಗಿದ್ದ, ಸಾತ್ವಿಕನೂ ಬುದ್ಧಿಶಾಲಿಯೂ ಆಗಿದ್ದ ರಾಕ್ಷಸನನ್ನು ಉಪಾಯಾಂತರದಿಂದ ಒಲಿಯುವಂತೆ ಮಾಡಿದ ವಿಸ್ತಾರವಾದ ಹರವಿನ ಕಥೆಯಲ್ಲಿ ನಂದವಿನಾಶಾನಂತರದ ಕಥೆಯೇ ಈ ನಾಟಕದ ವಸ್ತುವಾಗಿದೆ. ಚಾಣಕ್ಯನು ಅಂತ್ಯದಲ್ಲಿ ತನ್ನ ಪ್ರಯತ್ನದಲ್ಲಿ ಜಯಶಾಲಿಯಾಗುವುದರಿಂದ ಆತನೇ ನಾಟಕದ ನಾಯಕನು.

ಮುದ್ರಾರಾಕ್ಷಸ ನಾಟಕದ ವಸ್ತುವಿನ ಆಯ್ಕೆ, ಅದರ ವಿನ್ಯಾಸ ಎರಡೂ ಅನನ್ಯವಾದವು. ಏಕೆಂದರೆ, ಆ ಮೊದಲಿನ ರೂಢಿಯ ಸಂಸ್ಕೃತನಾಟಕಗಳಲ್ಲಿ ಶೃಂಗಾರಪ್ರಿಯ ಸ್ತ್ರೀಪುರುಷ ಪಾತ್ರಗಳ ಪ್ರಣಯದ ಕಥೆ ಸಾಮಾನ್ಯವಾಗಿತ್ತು. ಈ ಕಥೆಗಳಿಗೆ ವಸ್ತು ಪುರಾಣಗಳಿಂದಲೋ ಮಹಾಕಾವ್ಯಗಳಿಂದಲೋ ರಮ್ಯಾದ್ಭುತ ಕಥಾಕೋಶಗಳಿಂದಲೋ ಒದಗುತ್ತಿದ್ದಿತು. ಆದರೆ ವಿಶಾಖದತ್ತ ವಸ್ತುವಿನ ಆಯ್ಕೆಯಲ್ಲಿ ವಹಿಸಿದ ಧೈರ್ಯ, ನಾವೀನ್ಯ ಇವು ಮೆಚ್ಚತಕ್ಕವು. ಈತನ ನಾಟಕಕ್ಕೆ ವಸ್ತು ಪುರಾಣಗಳಿಂದಲೋ ಕಥಾಕೋಶದಿಂದಲೋ ಬಂದಿದ್ದರೂ ಅದರ ತಿರುಳು ಇತಿಹಾಸದ ಘಟನೆಯಾಗಿದೆ. ಇಲ್ಲಿಯ ವ್ಯಕ್ತಿಗಳು ಯುದ್ಧಾಸಕ್ತರಾಗಿದ್ದು ಅಧಿಕಾರಗ್ರಹಣಕ್ಕೆ ಹೋರಾಡುವವರೋ ಸಹಾಯ ಮಾಡುವವರೋ ಆಗಿದ್ದಾರೆ. ಇವರು ರಾಜನೀತಿವಿಶಾರದರು, ಅಧಿಕಾರಿಗಳು, ಬುದ್ಧಿಶಾಲಿಗಳಾದ ಗೂಢಚಾರರು. ಹಾಗಾಗಿ ಇಲ್ಲಿ ನಾಯಿಕೆಯಿಲ್ಲ, ವಿದೂಷಕನಿಲ್ಲ. ಒಬ್ಬಿಬ್ಬರು ಗೌಣವ್ಯಕ್ತಿಗಳನ್ನು ಬಿಟ್ಟರೆ ಸ್ತ್ರೀಪಾತ್ರಗಳೇ ನಾಟಕದಲ್ಲಿ ಇಲ್ಲ. ಗೌಣಸ್ತ್ರೀಪಾತ್ರಗಳಿಂದ ನಾಟಕದ ಬಿಕ್ಕಟ್ಟು ಕೊಂಚಮಟ್ಟಿಗೆ ಮಾರ್ದವ ದೊಂದಿಗೆ ಬೆರೆಯುವಂತಾಗಿದೆ. ಆದರೆ ಇಲ್ಲಿಯೂ ಉದ್ದೇಶ ಶೃಂಗಾರವಲ್ಲ, ರಾಜ ನೀತಿಯೇ.

ವಿಶಾಖದತ್ತನ ನಾಟಕದಲ್ಲಿ ಶೃಂಗಾರ ಹಾಸ್ಯಗಳಿಗೆ ತಕ್ಕ ಸ್ಥಾನವಿಲ್ಲವೆಂದೂ ವೀರ ರಸವೇ ಇಲ್ಲಿ ಪ್ರಧಾನವೆಂದೂ ಹೇಳುವುದುಂಟು. ಆ ವೀರ ವಿಶೇಷರೀತಿಯದು. ಹಾಗೆ ನೋಡಿದರೆ, ಸ್ವಪಕ್ಷದ ಸ್ಥಾಪನೆ ಮೇಲ್ಮೆಗಳಿಗಾಗಿ ಬುದ್ಧಿಶಾಲಿಗಳಾದ ಇಬ್ಬರು ಬ್ರಾಹ್ಮಣರ ಹಠಸಾಧನೆಯ ಭಾವವೇ ರಸದ ಸ್ಥಾನದಲ್ಲಿದೆಯೆಂದರೂ ತಡೆಯುವುದು. ಪಾತ್ರಗಳು ಖಚಿತವಾದ ರೀತಿಯಲ್ಲಿ ರಚನೆಗೊಂಡು, ತಂತಮ್ಮ ಸ್ವಭಾವದ ಆಕಾರ ವಿಕಾರಗಳಿಗೆ ಅನುಸಾರವಾಗಿ ಘಟನೆಗಳನ್ನು ರೂಪಿಸುತ್ತ ಹೋಗುತ್ತವೆ. ಹೀಗೆ ಘಟನೆ ಗಳು ನೈಜವಾಗಿ ಹುಟ್ಟಿ ಬೆಳೆದು ಉದ್ದೇಶಿತ ಪರಿಣಾಮ ಸಾಧಿತವಾಗುತ್ತದೆ. ಎರಡು ಬೇರೆ ಬೇರೆ ಆಸ್ಥಾನಗಳಲ್ಲಿ ಪರಸ್ಪರಸಂಬದ್ಧವಾಗಿ ಎಡೆಗಡಿಯದೆ ಸಾಗುವ ವಿಭಿನ್ನ ಚಟುವಟಿಕೆ ಗಳಿಂದ ಈ ಪರಿಣಾಮದ ಸಾಧ್ಯತೆಯನ್ನಬೇಕು. ಇಲ್ಲಿ ರಸಕ್ಕಿಂತ ವಸ್ತುವೂ ವಸ್ತುವಿಗಿಂತ ಪಾತ್ರಗಳೂ ಮುಖ್ಯವಾಗಿದ್ದು, ಬಿಕ್ಕಟ್ಟಾದ ಸಂವಾದಗಳು ಕುಶಲ ನಾಟಕೀಯ ಗುಣದಿಂದ

ಆ ಪಾತ್ರಗಳ ಗುಣ ಸ್ವಭಾವಗಳನ್ನು ರೇಖಿಸಿರುತ್ತವೆ.

'ಮುದ್ರಾರಾಕ್ಷಸ'ದ ಕಥೆ ವಿರುದ್ಧವಾದ ಎರಡು ಪಕ್ಷಗಳ, ಧ್ಯೇಯಾದರ್ಶಗಳ ಹೋರಾಟದ ಕಥೆ ; ಇಬ್ಬರು ಚತುರವ್ಯಕ್ತಿಗಳ ಬುದ್ಧಿಬಲದ ಮೇಲಾಟದ ಕಥೆ. ಭಿನ್ನವಾದ ಆಸಕ್ತಿಗಳೂ ಸಂಘರ್ಷಗಳೂ ಸಂಕೀರ್ಣವಾಗಿ ಹೆಣೆದ ಘಟನಾವಳಿಯಿಂದ ಕಥಾಗತಿ ರೋಚಕವಾಗಿ ಸಾಗುತ್ತದೆ. ವಿಶಾಖದತ್ತನು ತನ್ನ ಕಾಲದ ಸಾಮಾಜಿಕರಿಂದ ಕೇಳಿ ಬಲ್ಲ ಜನಶ್ರುತಿಯ ಇತಿಹಾಸದ ಕಥೆಯನ್ನು ತಾನು ಲಕ್ಷಿಸಿದ ಸಾಹಿತ್ಯಮೂಲದ ಕಥೆಯೊಂದಿಗೆ ಹದವಾಗಿ ಮಿಳಿತಗೊಳಿಸಿ ಹೊಸ ರೂಪದಲ್ಲಿ ನಾಟಕದ ಹಂದರಕ್ಕೆ ಹಬ್ಬಿಸಿದ್ದಾನೆಯೆಂದು ತಿಳಿದರೆ ತಪ್ಪಾಗಲಾರದು. ಐತಿಹಾಸಿಕವೆಂದೇ ತೋರುವ ಪ್ರಾಚೀನಘಟನೆಯೊಂದನ್ನು ಅವಲಂಬಿಸಿ ಸಂಭಾವ್ಯವೆನ್ನುವಂತೆ ಹೊಸತುಗೊಳಿಸಿದ್ದಾನೆ ; ವಾಸ್ತವವಾದಿಯ ನೆಲೆಯಲ್ಲಿ ನಿಂತು ವಿವರಗಳನ್ನು ಬಿಡಿಸಿದ್ದಾನೆ. ಅಲಂಕಾರಗಳ ಆರ್ಭಟವಿಲ್ಲದೆ, ವರ್ಣನೆಗಳ ಕೃತಕವಿಸ್ತರಣೆಯಿಲ್ಲದೆ ಸ್ವಾಭಾವಿಕವಾದ ಭಾಷೆ ಶೈಲಿಗಳಲ್ಲಿ ನಾಟಕವನ್ನು ರೂಪಿಸಿದ್ದಾನೆ. ಕಾರ್ಯಸಾಧನೆಗೆ ಅನಿವಾರ್ಯವಾದಾಗ ಮಾತ್ರ ದಂಡನೀತಿ ; ಅನ್ಯತ್ರ, ಉಳಿದ ಉಪಾಯಗಳೇ ಉಪಾದೇಯಗಳು ಎನ್ನುವುದು ನಾಟಕ ತಿಳಿಸಬಯಸುವ ವ್ಯವಹಾರನೀತಿ. ರಾಕ್ಷಸನಂತಹ ಸಾತ್ತ್ವಿಕ ಸ್ವಾಮಿನಿಷ್ಠ ವ್ಯಕ್ತಿಯನ್ನು ನಿಗ್ರಹಿಸದೆ ಸ್ವಪಕ್ಷಕ್ಕೆ ತಂದುಕೊಳ್ಳುವ ಗುಣಪಕ್ಷಪಾತ ಮೌಲ್ಯವೇ ಚಾಣಕ್ಯನ ಮೂಲಕ ಎತ್ತಿ ಹಿಡಿದ ಆದರ್ಶ. ಇವು ಸಾರ್ವಕಾಲಿಕವಾಗಿ ಅನ್ವಯಿಸುವವಾದ್ದರಿಂದಲೇ ನಾಟಕ ಕಾಲಗತಿಯನ್ನು ಮೀರಿ ಉಳಿದುಕೊಂಡು ಬಂದಿದೆ. 'ಮುದ್ರಾರಾಕ್ಷಸ'ದ ವಸ್ತು 'ಅರ್ಥಶಾಸ್ತ್ರ'ದ ರಾಜನೈತಿಕ ನಿರೂಪಣೆಗಳಿಗೆ ಸಂಗತವಾಗಿದೆಯೆಂದೂ ದಂಡನೀತಿಯ ಸಾಹಿತ್ಯದಲ್ಲಿ ಕೌಟಿಲ್ಯನ 'ಅರ್ಥಶಾಸ್ತ್ರ'ವೂ ಐತಿಹಾಸಿಕರಚನೆಗಳಲ್ಲಿ ಕಲ್ಹಣನ 'ರಾಜತರಂಗಿಣಿ'ಯೂ ಹೇಗೆ ಮಾನ್ಯವಾದವೋ ಹಾಗೆಯೇ ರಾಜಕೀಯ ವಸ್ತುವಿನ ನಾಟಕಗಳಲ್ಲಿ 'ಮುದ್ರಾರಾಕ್ಷಸ' ಮಾನ್ಯವಾದುದೆಂದೂ ಭಾವಿಸಲಾಗಿದೆ (JOR., xii, p.147, 158).

'ಮುದ್ರಾರಾಕ್ಷಸ' ನಾಟಕದ ಕರ್ತೃ ವಿಶಾಖದತ್ತನೇ 'ದೇವೀಚಂದ್ರಗುಪ್ತ' ಎಂಬ ನಾಟಕವನ್ನೂ ರಚಿಸಿದ್ದಂತೆ ತಿಳಿದು ಬಂದಿದ್ದು, ಅದು ಈವರೆಗೆ ಪೂರ್ತಿಯಾಗಿ ದೊರೆತಿಲ್ಲ. ಈ ನಾಟಕ ಸಹ ರೂಢಿಯ ಸಂಸ್ಕೃತನಾಟಕಗಳ ಹಾಗೆ ಅಲ್ಲದೆ, ವಸ್ತುವಿನ ದೃಷ್ಟಿಯಿಂದ ಭಿನ್ನವಾದುದಾಗಿದೆ. ಪ್ರಾಚೀನ ಸಂಸ್ಕೃತ ಲಕ್ಷಣಗ್ರಂಥಗಳಲ್ಲಿ ಈ ನಾಟಕದ ಉದ್ಧೃತಭಾಗಗಳಿದ್ದು, ಅವನ್ನು ಪರಿಶೀಲಿಸಿದಾಗ ಇದು ತಿಳಿಯುತ್ತದೆ. ಭೋಜನ 'ಶೃಂಗಾರಪ್ರಕಾಶ', ರಾಮಚಂದ್ರ ಗುಣಚಂದ್ರರ 'ನಾಟ್ಯದರ್ಪಣ', ರಾಜಶೇಖರನ 'ಕಾವ್ಯಮೀಮಾಂಸೆ' ಇವುಗಳಲ್ಲಿ ಉದ್ಧೃತವಾಗಿರುವ ನಾಟಕದ ಭಾಗಗಳನ್ನು ಕೂಡಿಸಿ ವಿಮರ್ಶಿಸಿದರೆ, ನಾಟಕದ ಕಥೆ ಏನೆಂಬುದು ಸ್ಥೂಲವಾಗಿ ತಿಳಿಯುತ್ತದೆ. ಗುಪ್ತರ ಕಾಲದ ಕೆಲವು ಚರಿತ್ರೆಯ ವಿಷಯಗಳನ್ನು, ವಿಶೇಷವಾಗಿ ಇಮ್ಮಡಿ ಚಂದ್ರಗುಪ್ತನ ಕಾಲದ ಹಾಗೂ ಅವನ ಜೀವನದ ಐತಿಹಾಸಿಕ ಅಂಶಗಳನ್ನು ಅಲ್ಲಿ ಗಮನಿಸಬಹುದಾಗಿದೆ. ಇಮ್ಮಡಿ ಚಂದ್ರಗುಪ್ತನು ತನ್ನ ಅಣ್ಣ ರಾಮಗುಪ್ತನ ಹೆಂಡತಿಯನ್ನು ಕಾಮಿಸಿದ ಶಕಪತಿಯೊಬ್ಬನನ್ನು ನಿಗ್ರಹಿಸಿದುದಲ್ಲದೆ, ಹೇಡಿಯಾದ ತನ್ನ ಅಣ್ಣನನ್ನೂ ನಿಗ್ರಹಿಸಿ, ಅವನ ಪತ್ನಿಯನ್ನು ತಾನೇ ಮದುವೆಯಾದನೆಂಬುದು ಇಲ್ಲಿ ವಿಷಯ.

ನಾಟ್ಯಶಾಸ್ತ್ರದ ಅಭಿನವಗುಪ್ತಕೃತವಾದ 'ಅಭಿನವಭಾರತೀ' ಎಂಬ ವ್ಯಾಖ್ಯಾನದಲ್ಲಿಯ ಉದ್ಧೃತಿಗಳಿಂದ ಚಾಣಕ್ಯನ ಪ್ರತಿಜ್ಞೆ ವಿಷಯವಾದ ಚಂದ್ರಗುಪ್ತ-ಚಾಣಕ್ಯ ಕಥಾವಸ್ತುವಿನ 'ಪ್ರತಿಜ್ಞಾಚಾಣಕ್ಯ' ಎಂಬ ಹೆಸರಿನ ನಾಟಕವೊಂದು ಮಹಾಕವಿ ಭೀಮನೆಂಬವನಿಂದ ರಚಿತವಾಗಿದ್ದಿತೆಂದು ತಿಳಿಯುವುದು. ಈ ನಾಟಕದಲ್ಲಿ ಮಲಯಕೇತುವಿನ ಪಾತ್ರಕ್ಕೆ ವಿಂಧ್ಯಕೇತು ಎಂಬುದಾಗಿ ಹೆಸರನ್ನು ಹೇಳಿದ್ದು, 'ಮೃಚ್ಛಕಟಿಕ'ದ ಶಕಾರನ ಹಾಗೆ ಅವನು ಇಲ್ಲಿ ಶಕಾರನಾಗಿದ್ದಾನೆ. ಈ ನಾಟಕ ಬೆಳಕಿಗೆ ಬಂದರೆ, ವಿಭಿನ್ನ ಚಾಣಕ್ಯಕಥಾಪರಿಷ್ಕರಣಗಳ ವಿವರಣೆಗೆ ಕೊಂಚ ಮಟ್ಟಿಗೆ ಸಹಾಯವಾಗಬಹುದಾಗಿದೆ.

ಪೂರ್ವಕಥೆಗಳು ಮತ್ತು ಸಂಕ್ಷಿಪ್ತ ಕಥಾರೂಪಗಳು

ವಿಶಾಖದತ್ತನ 'ಮುದ್ರಾರಾಕ್ಷಸ'ವೆಂಬ ನಾಟಕ ಕಥೆಯ ದೃಷ್ಟಿಯಿಂದ ತನಗೆ ತಾನೇ ಒಂದು ಆಕರ್ಷಕವಾದ ನಾಟಕವಾಗಿದ್ದರೂ ಅಲ್ಲಿಯ ಕಥಾವಸ್ತುವನ್ನು ಚಾರಿತ್ರಿಕ ವಿದ್ಯಮಾನಗಳ ಹಿನ್ನೆಲೆಯಲ್ಲಿ ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾದರೆ, ನಂದವಿನಾಶದ ಮೊದಲಿನ ಕಥೆಯ ವಿವರಗಳು ಸ್ಪಷ್ಟವಾಗಬೇಕಾಗುತ್ತವೆ. ನಾಟಕದಲ್ಲಿಯೇ ದೊರೆಯುವ ಈ ಸಂಬಂಧವಾದ ಸೂಚನೆಗಳು ಸಾಲುವುದಿಲ್ಲ. ಅಲ್ಲದೆ ಕ್ಲಿಷ್ಟವೂ ಸಂಕೀರ್ಣವೂ ಆದ ನಾಟಕದ ಕಥಾವಸ್ತುವಿನ ಘಟನೆಗಳ ಸಂಯೋಜನೆ ವಿಶದವಾಗುವುದಕ್ಕೆ ರೂಢಿಯ ವ್ಯಾಖ್ಯಾನಗಳು ಮಾತ್ರವೇ ಅಲ್ಲದೆ, ಪೂರ್ವಕಥೆಯ ವಿವರಗಳ ನೆರವು ತುಂಬ ಅಗತ್ಯವಾಗಿದ್ದಿತು. ಆ ಕೆಲಸವನ್ನು ಕೆಲವರು ಮಧ್ಯಕಾಲದ ಕವಿಗಳು ತಕ್ಕಮಟ್ಟಿಗೆ ನಿರ್ವಹಿಸಿದರೆಂದು ಹೇಳಬಹುದು. ಅದರ ಒಂದು ಸಂಕ್ಷಿಪ್ತಸಮೀಕ್ಷೆ :

'ಮುದ್ರಾರಾಕ್ಷಸ'ದ ವ್ಯಾಖ್ಯಾನಕಾರ ಜಗದ್ಧರನು (ಸು. ೧೩೦೦-೧೪೦೦) ತನ್ನ ವ್ಯಾಖ್ಯಾನದ ಆರಂಭದಲ್ಲಿ ಪೂರ್ವಕಥೆಯ ಒಂದು ಸಾರಾಂಶವನ್ನು ಸೇರಿಸಿದ್ದಾನೆ. ಸೋಮವಂಶದ ದೊರೆ ನಂದನಿಗೆ ಶಕಟಾರನೆಂಬವನು ಮುಖ್ಯನಾದ ಅಮಾತ್ಯ ಎಂದು ಮುಂತಾಗಿ ಅದು ಆರಂಭಗೊಂಡಿದೆ. ನಾಟಕದ ತಿರುವನಂತಪುರದ ಹಸ್ತಪ್ರತಿಯಲ್ಲಿ ಗ್ರಂಥಾಂತ್ಯಕ್ಕೆ ಹೆಚ್ಚಿನ ಬರಹವಾಗಿ ಬಂದಿರುವ ಭಾಗದಲ್ಲಿ ನಂದ-ಚಂದ್ರಗುಪ್ತರ ಬಾಂಧವ್ಯವಿವರದ ಒಂದು ಪ್ರತ್ಯೇಕ ಕಥನವಿದೆ. ಗೋದಾವರೀ ತೀರದ ಪುಣ್ಯಸ್ತಂಭವೆಂಬ ಪ್ರದೇಶದವನಾದ ಅನಂತಭಟ್ಟನು (೧೬೪೫) ಸ್ವತಂತ್ರವಾಗಿ 'ಮುದ್ರಾರಾಕ್ಷಸ ಪೂರ್ವಪೀಠಿಕಾ' ಅಥವಾ 'ಮುದ್ರಾರಾಕ್ಷಸ ಪೂರ್ವಸಂಕಥಾನಕ' ಎಂಬ ಲಘುಕೃತಿ ರಚಿಸಿದ್ದಾನೆ. ಇದು ಗದ್ಯದಲ್ಲಿದ್ದು, ನಾಟಕದ ಕಥಾವಸ್ತುವಿಗೆ ಪೀಠಿಕೆಯಾಗಿ ಬರುವ ಕಥಾವಿವರಗಳಿಂದ ಕೂಡಿದೆ. ಅಜ್ಞಾತಕರ್ತೃಕವಾದ ಇನ್ನೊಂದು ಗದ್ಯಕಥೆ ಬಿಕನೇರ್ ಹಸ್ತಪ್ರತಿಭಂಡಾರದಲ್ಲಿ ನಿಕ್ಷೇಪಗೊಂಡಿದ್ದು, ಅನಂತಭಟ್ಟನ ರಚನೆಯಂತೆಯೇ, ಅದೇ ವಿಷಯವನ್ನು, ಎಂದರೆ ನಾಟಕದ ಆರಂಭಕ್ಕೆ ಹೊಂದಿಕೊಂಡು ಬರುವ ಮೊದಲ ಕಥಾವಿವರಗಳನ್ನು, ಅದರಲ್ಲಿ ಕುರಿತಿದೆ.

'ಮುದ್ರಾರಾಕ್ಷಸ'ದ ಪ್ರಸಿದ್ಧನಾದ ವ್ಯಾಖ್ಯಾನಕಾರನೆಂದರೆ, ಢುಂಢಿರಾಜ. ಈತನ ವ್ಯಾಖ್ಯಾನದ (೧೭೧೩) ಮೊದಲಲ್ಲಿ ನಾಟಕದ ವಸ್ತುವಿನ ಆರಂಭಕ್ಕೆ ಹಿಂದಿನ ಘಟನೆಗಳನ್ನು ಕುರಿತ ಒಂದು ಪದ್ಯನಿಬದ್ಧವಾದ ಕಥಾಸಾರವುಂಟು. ಈ ಕಥಾಸಾರವು ನಾಟಕದ

ಕ್ರಿಯೆ ಆರಂಭವಾಗುವ ಮೊದಲಲ್ಲಿ ಘಟಿಸುವ ಸಂದರ್ಭಗಳನ್ನು ಹೇಳುತ್ತದೆ. ಈ ವ್ಯಾಖ್ಯಾನಕಾರನು ತಂಜಾವೂರು ಪ್ರಾಂತ್ಯಕ್ಕೆ ಸೇರಿದ ದಾಕ್ಷಿಣಾತ್ಯನೆಂಬುದು ಗಮನಿಸಬೇಕಾದ ಸಂಗತಿ.

ವಿಶಾಖದತ್ತನ ಕೃತಿಯ ಕಥಾವಿವರಗಳನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಲು ಸಹಾಯಕವಾದ ರಚನೆಯೆಂದರೆ ಮಹಾದೇವನೆಂಬವನ (ಕ್ರಿ. ಶ. ೧೬೦೦) 'ಮುದ್ರಾರಾಕ್ಷಸ ನಾಟಕಕಥಾ' ಎಂಬುದು. ಇವನು ಶ್ರೀವತ್ಸಗೋತ್ರದ ಬ್ರಾಹ್ಮಣ ; ಕಾವ್ಯ, ಅಲಂಕಾರ ಮತ್ತು ಶಾಸ್ತ್ರಗಳಲ್ಲಿ ತಜ್ಞತೆ ಗಳಿಸಿದ್ದವನು ; ದಾಕ್ಷಿಣಾತ್ಯನೇ ಆಗಿದ್ದು ಬಹುಶಃ ತಂಜಾವೂರುಪ್ರಭುಗಳ ಆಶ್ರಿತನಾಗಿದ್ದವನು. ಅನಂತಭಟ್ಟ, ಪೂರ್ವೋಕ್ತ ಗದ್ಯಕಥೆಯ ಅಜ್ಞಾತಕರ್ತೃ ಹಾಗೂ ಢುಂಢಿರಾಜ ಇವರು ನಾಟಕದ ಪೂರ್ವಪೀಠಿಕೆಯ ಘಟನೆಗಳನ್ನು ಮಾತ್ರವೇ ನಿರೂಪಿಸಿದ್ದರೆ, ಮಹಾದೇವನು ಅವುಗಳೊಂದಿಗೆ ನಾಟಕದ ಕಥೆಯ ಸಮಗ್ರ ಸುಂದರ ಕಥನವನ್ನೂ ಸೇರಿಸಿರುವುದು ಒಂದು ವಿಶೇಷವಾಗಿದೆ. ಈತನು ವಿಶಾಖದತ್ತನ ನಾಟಕವನ್ನು ಹತ್ತಿರದಿಂದ ಅನುಸರಿಸಿರುವುದನ್ನು, ಉದ್ಧೃತಿಗಳನ್ನು ಎತ್ತಿ ತೋರಿಸಿ ವಿಶದಪಡಿಸಬಹುದಾಗಿದೆ. ಆದರೆ ಪೂರ್ವಪೀಠಿಕೆಯ ಕಥಾವಿವರಗಳಿಗೆ ಅವನು ಯಾವ ಮೂಲಗಳನ್ನು ನೋಡಿರಬಹುದೆಂಬುದು ತಿಳಿಯುವುದಿಲ್ಲ. ಈ ವಿಷಯ ಏನೇ ಇದ್ದರೂ, ನಾಟಕದ ಜಟಿಲವಾದ ಸಂವಿಧಾನದಲ್ಲಿ ಹೆಣೆದುಕೊಂಡಿರುವ ಕಥೆಯ ವಿವರಗಳನ್ನು ಓದುಗರಿಗೆ ಮನವರಿಕೆಯಾಗುವಂತೆ ಸರಳವಾದ, ನಿರರ್ಗಳವಾದ ಗದ್ಯರೂಪದಲ್ಲಿ ನಿರೂಪಿಸಿರುವುದು ಮೆಚ್ಚತಕ್ಕುದಾಗಿದೆ. ನಾಟಕದೊಳಗೆ ಬರುವ ಚಾಣಕ್ಯನ ಹಾಗೂ ಅನ್ಯವ್ಯಕ್ತಿಗಳ ಹಲವು ಸಂಚುಗಳೂ ಸಂಚಿನ ಹಿಂದಿನ ಉದ್ದೇಶಗಳೂ, ಮೋಸದ ತಂತ್ರಗಳೂ ಧೂರ್ತತನದ ಮಾತುಗಳೂ, ಘಟನೆಗಳೂ ಅವುಗಳ ಪರಸ್ಪರ ಸಂಬಂಧಗಳೂ ಸ್ಫುಟಗೊಂಡು ಆ ಮೂಲಕ ಚಾಣಕ್ಯನ ಬುದ್ಧಿವಂತಿಕೆಯೂ ನಾಟಕಕಾರ ವಿಶಾಖದತ್ತನ ರಚನಾನೈಪುಣ್ಯವೂ ಹೃದ್ಗತವಾಗುತ್ತವೆ.

ಕೇರಳದ ಮೇಲ್‌ಪುತ್ತೂರಿನ ವಿದ್ವಾಂಸ ನಾರಾಯಣ ಭಟ್ಟನೆಂಬವನು (೧೫೫೯-೧೬೬೬) ತನ್ನ ಗೆಳೆಯ ರವಿಯೆಂಬವನ ಸಲುವಾಗಿ ಚಾಕ್ಯಾರ್ ಕೂತ್ತು ಎಂಬ ನರ್ತನ ಪ್ರಬಂಧಗಳನ್ನು ರಚಿಸಿದಂತೆ ಅಲ್ಲಿಯ ಸಾಂಪ್ರದಾಯಿಕ ಕಥನವಿದೆ. ಆ ರವಿಯೇ ರವಿನರ್ತಕನೆಂಬುದಾಗಿ ತಿಳಿಯಲಾಗಿದೆ. ಈ ರವಿನರ್ತಕನು ವಿಶಾಖದತ್ತನ ನಾಟಕದ ಸಮಗ್ರಕಥೆಯನ್ನು ಅದರ ಪೂರ್ವಕಥೆಯ ಸಹಿತವಾಗಿ ಒಂದು ಪದ್ಯನಿಬದ್ಧರಚನೆಯನ್ನಾಗಿ ನಿರ್ಮಿಸಿದನೆಂದು ತಿಳಿದಿದೆ. ಈ ರಚನೆಯನ್ನು 'ಮುದ್ರಾರಾಕ್ಷಸಕಥಾಸಾರ', 'ಮುದ್ರಾರಾಕ್ಷಸಕಥಾಸಂಗ್ರಹ', 'ಕೌಟಿಲ್ಯಕಥಾಸಾರ' ಎಂಬ ಬೇರೆ ಬೇರೆ ಹೆಸರುಗಳಿಂದ ಪ್ರತಿಕಾರರು ಕರೆದಿದ್ದಾರೆ. ಇದರ ಮೇಲೆ ಒಂದು ವ್ಯಾಖ್ಯಾನವೂ ಹುಟ್ಟಿದೆ. ಮೊದಲು ಗದ್ಯರೂಪವಾಗಿದ್ದುದನ್ನು ತಾನು ಪದ್ಯರೂಪವಾಗಿ ಮಾಡಿದಂತೆ ಕವಿ ತಿಳಿಸಿರುವುದನ್ನು ಲಕ್ಷಿಸಿ, ಪರಿಶೀಲಿಸಿದಾಗ ಮಹಾದೇವನ ಕೃತಿಯನ್ನೇ ಆತ ಉದ್ದೇಶಿಸಿರುವುದು ವಿದಿತವಾಗುತ್ತದೆ. ಏಕೆಂದರೆ ಪೂರ್ವಕಥೆಯೊಂದಿಗೆ ನಾಟಕದ ಕಥೆಯನ್ನು ಹೇಳುವುದು, ಮುಖ್ಯ ವಿವರಗಳು ಸದೃಶವಾಗಿರುವುದು, ನಿರೂಪಣೆಯಲ್ಲಿ ವಾಕ್ಯಗಳು ಪರಸ್ಪರವಾಗಿ ಹೋಲುವುದು ಕಾಣುತ್ತದೆ. ಹೀಗಿದ್ದರೂ, ಕುರುಡು ಪರಿವರ್ತನೆ ಎನ್ನುವಂತಿಲ್ಲ. ಕೆಲವು ಹೆಚ್ಚಿನ

ವಿವರಗಳನ್ನು ಸೇರಿಸಿದೆ ; ಸಾಮಾನ್ಯರೀತಿಯ ಮೇಲ್ಪಾಡುಗಳನ್ನು ತಂದಿದೆ. ಒಟ್ಟಿನಲ್ಲಿ ಸರಣಿ ಅಲ್ಲಿಯದೇ.

ಈ ಕೆಲವು ಅಲ್ಲದೆ ನಾಕಿಪುರ ಎಂಬಲ್ಲಿಂದ ಪ್ರಕಟವಾದ 'ಮುದ್ರಾರಾಕ್ಷಸ'ದ ಒಂದು ವಂಗಪರಿಷ್ಕರಣದಲ್ಲಿ ಹರಿದಾಸಸಿದ್ಧಾಂತ ವಾಗೀಶಭಟ್ಟಾಚಾರ್ಯ ಎಂಬವರ ವ್ಯಾಖ್ಯಾನ ವಿದ್ದು, ಬೇರೊಂದು ರೀತಿಯಲ್ಲಿ ಚಾಣಕ್ಯ-ಚಂದ್ರಗುಪ್ತರ ಕಥೆಯನ್ನು ಅಲ್ಲಿ ಹೇಳಿದೆ.

ಹೀಗೆ ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕದ ಕಥೆಗೆ ಸಮೀಪವಾಗಿದ್ದು ಅದರ ಕಥೆ ಆಶಯಗಳನ್ನು ವಿವರಿಸುವುದಕ್ಕೆಂದು ಹುಟ್ಟಿದ ರಚನೆಗಳಲ್ಲಿ ಮಹಾದೇವ, ರವಿನರ್ತಕ ಮತ್ತು ಢುಂಢಿರಾಜರ ಕಥಾನಿರೂಪಣೆ ಮುಖ್ಯವಿವರಗಳ ಮಟ್ಟಿಗೆ ಸಮಾನ ವಾಗಿದೆ. ನಂದರಿಗೂ ಚಾಣಕ್ಯ-ಚಂದ್ರಗುಪ್ತರಿಗೂ ನಡೆದ ಸಂಘರ್ಷವನ್ನು ಕುರಿತ ಹಾಗೆ ಉಪಲಬ್ಧವಿರುವ ಕಥೆಗಳಿಗೆ ಸಂಪ್ರದಾಯಭೇದಗಳು ಹೆಚ್ಚಾಗಿದ್ದು, ಅವುಗಳಲ್ಲಿ ವಿಶಾಖ ದತ್ತನ ನಾಟಕದ ಕಥೆಯನ್ನು ಅಕ್ಷಕೇಂದ್ರವಾಗಿಟ್ಟುಕೊಂಡು ಸಿದ್ಧವಾದ ಕಥೆಗಳಲ್ಲಿಯೂ ಆ ಭಿನ್ನತೆಯ ಎಳೆಗಳಲ್ಲಿ ಒಂದೊಂದನ್ನೂ ಅಂತರ್ಗತ ಸಾದೃಶ್ಯ-ವೈಸಾದೃಶ್ಯಗಳ ಜೊತೆ ಜೊತೆಗೇ ಗುರುತಿಸುವುದು ಅನಿವಾರ್ಯವಾಗಿದೆ.

೩. ಚಂದ್ರಗುಪ್ತ ಚಾಣಕ್ಯರ ವೃತ್ತಾಂತಕಥೆಗೆ ಐತಿಹಾಸಿಕಭೂಮಿಕೆ

ಚಂದ್ರಗುಪ್ತ : ಮೌರ್ಯಸಂತತಿಯ ಮೂಲಪುರುಷನಾದ ಚಂದ್ರಗುಪ್ತನು ಪ್ರಾಚೀನ ಭಾರತದ ದೊರೆಗಳಲ್ಲಿ ಹೆಸರಾದವನು (ಕ್ರಿ. ಪೂ. ೩೨೪-೩೦೦). ಈತನು ಮಗಧ ಸಾಮ್ರಾಜ್ಯವನ್ನು ಪ್ರಬಲವಾಗಿ, ಉಜ್ವಲವಾಗಿ ಕಟ್ಟಿ ಬೆಳಸಿದ ನಂದವಂಶದ ಅರಸರ (ಸು. ಕ್ರಿ. ಪೂ. ೩೪೫-೩೨೩) ಕೊನೆಯ ದೊರೆ ಧನನಂದನ ದೌರ್ಜನ್ಯದ ಆಳಿಕೆಯನ್ನು ಕಿತ್ತೊಗೆದುದಲ್ಲದೆ, ಭಾರತವನ್ನು ವಿದೇಶೀಯರಾದ ಮ್ಯಾಸಿಡೋನಿಯನರಿಂದ ಮುಕ್ತ ಗೊಳಿಸಿ ಅದರ ಬಹುಭಾಗವನ್ನು ರಾಜಕೀಯವಾಗಿ ಒಂದು ಆಡಳಿತದ ಅಂಕೆಗೆ ತಂದ ನೆಂದು ಗುರುತಿಸಲಾಗಿದೆ. ತರುಣ ಚಂದ್ರಗುಪ್ತನು ಪಂಜಾಬ್ ಪ್ರಾಂತದಲ್ಲಿ ಮ್ಯಾಸಿ ಡೋನಿಯದ ದೊರೆ ಅಲೆಕ್ಸಾಂಡರನನ್ನು ಸಂಧಿಸಿದನೆಂದೂ ಆಳುವ ದೊರೆಯ ವಿರುದ್ಧ ವಾಗಿ ನೆರವು ಕೋರಿದನೆಂದೂ ಅವನ ಉದ್ಧತವಾದ ಮಾತಿನ ರೀತಿಯಿಂದ ಅಲೆಗ್ಸಾಂಡ ರಿನ ಆಗ್ರಹಕ್ಕೆ ಗುರಿಯಾಗಿ ಮೃತ್ಯುದಂಡವನ್ನು ತಪ್ಪಿಸಿಕೊಳ್ಳಲು ಅಲ್ಲಿಂದ ಓಡಿ ಹೋದ ವನು ತಕ್ಷಶಿಲೆಯ ಬ್ರಾಹ್ಮಣ ಕೌಟಿಲ್ಯನನ್ನು ಕೂಡಿಕೊಂಡು ಪಾಟಲೀಪುತ್ರಕ್ಕೆ ಬಂದ ನೆಂದೂ ಅಲ್ಲಿ ಪ್ರಜಾಪೀಡಕನಾಗಿದ್ದ ಧನನಂದನನ್ನು ನಿಗ್ರಹಿಸಿ ತಾನೇ ಅರಸಾಗಿ ತನ್ನ ಸಾಮ್ರಾಜ್ಯವನ್ನು ನೆಲೆಗೊಳಿಸಿದನೆಂದೂ ಚರಿತ್ರಕಾರರು ತಿಳಿದಿದ್ದಾರೆ. ಅವರ ಗ್ರಹಿಕೆ ಯಂತೆ ಈ ಮೌರ್ಯಕ್ರಾಂತಿ ಅನಿವಾರ್ಯವೂ ದೀರ್ಘಕಾಲಿಕವೂ ಆದ ರಕ್ತಕ್ರಾಂತಿ ; ಇದರಲ್ಲಿ ಚಂದ್ರಗುಪ್ತ ಯಶಸ್ಸು ಗಳಿಸಿ ಕಟ್ಟಿದ ಸಾಮ್ರಾಜ್ಯ ನಂದರ ಸಾಮ್ರಾಜ್ಯಕ್ಕಿಂತ ಘನ ವಾದುದು.

ಭಾರತದ ಫಲವತ್ತಾದ ಗಂಗಾನದಿಯ ಬಯಲಿನ ಹಾಗೂ ಸಂಪನ್ನವಾದ ಮಗಧ ರಾಜ್ಯದ ಆಕ್ರಮಣ ಅಲೆಕ್ಸಾಂಡರಿನ ಮನಸ್ಸಿನಲ್ಲಿದ್ದುದಾದರೂ ಹಲವು ಕಾರಣಗಳಿಂದ ಅದು ಸಾಧ್ಯವಾಗದೆ ಅವನು ಹಿಂದಿರುಗಿದನು. ಅಲ್ಲಲ್ಲಿಯ ಯವನ ಕ್ಷತ್ರಪರ ನಡುವೆ

ಅಂತಃಕಲಹಗಳು ಹೆಚ್ಚಿ ಅವರು ಭಾರತದಿಂದ ನಿರ್ಗಮಿಸಿದರು. ಅಂದು ಭಾರತದ ವಾಯವ್ಯಭಾಗದಲ್ಲಿ ತಲೆದೋರಿದ ವಿಪ್ಲವಕ್ಕೆ ಚಂದ್ರಗುಪ್ತನು ನಾಯಕನಾಗಿದ್ದನೆಂದು ಗ್ರೀಕ್ ಇತಿಹಾಸಕಾರ ಜಸ್ಟಿನ್ ಬರೆದಿದ್ದಾನೆ. ಚಂದ್ರಗುಪ್ತನಿಗೆ ಚಾಣಕ್ಯನ ತಂತ್ರಶಕ್ತಿಯೂ ಪರ್ವತಕನೆಂಬ ಅರಸನ ಸೇನಾಸಹಾಯವೂ ದೊರಕಿದುವೆಂದು 'ಮುದ್ರಾರಾಕ್ಷಸ' ನಾಟಕದಿಂದ ತಿಳಿಯಬಹುದಾಗಿದೆ. ಹೀಗೆ ಚಂದ್ರಗುಪ್ತ ಸುತ್ತಣ ಕ್ಷತ್ರಿಯರಾಜರ ಸಹಾಯ ಪಡೆದು ನಂದರನ್ನು ನಿಗ್ರಹಿಸಿ ಸಿಂಧೂನದಿಯಿಂದ ಬಂಗಾಲ ಕೊಲ್ಲಿಯವರೆಗೆ ಹಬ್ಬಿದ್ದ ವಿಶಾಲವಾದ ಮಗಧಸಾಮ್ರಾಜ್ಯದ ಅಧಿಪತಿಯಾದನು.

ಚಂದ್ರಗುಪ್ತನು ತನ್ನ ಹೀನಕುಲತ್ವ, ಸಹೋದರರ ಅಸಹನೆ ಇಂತಹ ನಿಸ್ಸಹಾಯಕ ಪರಿಸ್ಥಿತಿಯಲ್ಲಿ ಬುದ್ಧಿಶಾಲಿಯಾದ ಒಬ್ಬ ಬ್ರಾಹ್ಮಣನನ್ನು ಆಶ್ರಯಿಸಿ, ಶತ್ರುನಿಗ್ರಹ ಮಾಡಿ, 'ಮುದ್ರಾರಾಕ್ಷಸ' ನಾಟಕಕರ್ತೃ ತಿಳಿಸುವ ಹಾಗೆ ರಾಜ್ಯವನ್ನು ಸಚಿವಾಯತ್ತಸಿದ್ಧಿಯಿಂದ ಪಡೆದುಕೊಂಡುದು ಸ್ವಾಭಾವಿಕವಾಗಿಯೇ ತೋರುತ್ತದೆ (ಮುದ್ರಾರಾ. ೩-೧೯). ದಕ್ಷ, ಪ್ರಾಮಾಣಿಕ, ಸ್ವಾಮಿಭಕ್ತ ಆದ ಇನ್ನೊಬ್ಬ ಬ್ರಾಹ್ಮಣನನ್ನು ಕಷ್ಟದಿಂದ ಒಲಿಸಿ, ಒಪ್ಪಿಸಿ ರಾಜ್ಯ ಸುಭದ್ರಗೊಳ್ಳುವಂತೆ ಮಾಡಿದ ಕಥೆಯೇ ಸಂಸ್ಕೃತ 'ಮುದ್ರಾರಾಕ್ಷಸ', ಕನ್ನಡ 'ಮುದ್ರಾಮಂಜೂಷ'ಗಳ ತಿರುಳೆಂದು ಹೇಳಬಹುದಾಗಿದೆ.

'ಮುದ್ರಾರಾಕ್ಷಸ' ನಾಟಕದಲ್ಲಿ, ಹಾಗೆಯೇ ಕನ್ನಡ 'ಮುದ್ರಾಮಂಜೂಷ'ದಲ್ಲಿಯೂ, ಪರ್ವತರಾಜನದು ಒಂದು ಪ್ರಮುಖಪಾತ್ರ. ಸಮಕಾಲೀನ ಇತಿಹಾಸದಲ್ಲಿ ಈತನು ಯಾರು, ರಾಜ್ಯ ಯಾವುದು ಇವು ಹಲವು ಸಲ ಚರ್ಚೆಯಾಗಿರುವ ವಿಷಯಗಳಾಗಿವೆ. ಜೆ.ಎಫ್. ಫ್ಲೀಟ್, ಎಫ್. ಡಬ್ಲ್ಯು. ಥಾಮಸ್, ಎಚ್. ಸಿ. ಸೇಠ್ ಮೊದಲಾದವರ ಚರ್ಚೆಗಳುಂಟು. ಜೀಲಂ ಮತ್ತು ಚೀನಾಬ್ ನದಿಗಳ ನಡುವಣ ಪ್ರದೇಶವನ್ನು ಕ್ರಿ. ಪೂ. ೩೨೬ರಲ್ಲಿ ಆಳುತ್ತಿದ್ದ ಪೌರವನೊಂದಿಗೆ (ಥಾಮಸ್, ಸೇಠ್), ನೇಪಾಳದ ಬುದ್ಧ ಪರ್ವತೀಯ ವಂಶಾವಳಿಯ ಪ್ರಕಾರ ಕಿರಾತರ ತೃತೀಯ ರಾಜವಂಶದಲ್ಲಿ ೧೧ನೆಯ ದೊರೆಯಾಗಿರುವ ಪರ್ಬ ಎಂಬುವನೊಂದಿಗೆ (ಯಾಕೊಬಿ), ಜೀಲಂ-ಚೀನಾಬ್ ನದಿಗಳ ನಡುವಣ ಪ್ರದೇಶದಲ್ಲಿ ಕೆಳ ಹಾಗೂ ಮಧ್ಯ ಬೆಟ್ಟಸಾಲುಗಳಲ್ಲಿ ಹರಡಿಕೊಂಡಿದ್ದ ಸಮಗ್ರ ಭೂಭಾಗವನ್ನು, ಅಭಿಸಾರ ಅಥವಾ ದ್ವಾರಾಭಿಸಾರಪ್ರಾಂತವೆನಿಸಿದ್ದುದನ್ನು (ಈಗಿನ ಪೂಂಛ್, ಕಾಶ್ಮೀರದ ಸ್ವಲ್ಪಭಾಗ, ವಾಯವ್ಯ ಗಡಿಪ್ರಾಂತಗಳ ನೌಷೇರ ಮತ್ತು ಹಜಾರಾ ಜಿಲ್ಲೆಗಳ ಭಾಗ), ತಕ್ಷಶಿಲೆಯಿಂದ ಆಳುತ್ತಿದ್ದ ಅಂಭಿಯೊಂದಿಗೆ (ಓಂ ಪ್ರಕಾಶ್) ಸಮೀಕರಿಸುವ ಪ್ರಯತ್ನಗಳು ನಡೆದಿವೆ. ಇವುಗಳಲ್ಲಿ 'ಮುದ್ರಾರಾಕ್ಷಸ', ಬೌದ್ಧ ಮತ್ತು ಜೈನಮೂಲಗಳ ಕಥಾಂಶಗಳೊಂದಿಗೆ ಹೋಲಿಸಿ ಮಂಡಿಸಿರುವ ಮೂರನೆಯ ಸಮೀಕರಣವು (Om Prakash, *On the Identity of Parvataka*, JIH., 47-1) ಸಯುಕ್ತಿಕವಾಗಿ ತೋರುತ್ತದೆ. ನಾಟಕದೊಳಗೆ ಪರ್ವತೇಶ್ವರನ ಸೋದರ ವೈರೋಚಕನ ಪಾತ್ರವಿದೆಯಷ್ಟೆ; ಐತಿಹಾಸಿಕವಾಗಿ ಅಂಭಿಗೆ ಒಬ್ಬ ಸೋದರನಿದ್ದುದೂ ಸ್ಪಷ್ಟಪಟ್ಟಿದೆ. ಆಳಿಕೆಯ ಸೀಮೆ ಮೊದಲಾದ ವಿವರಗಳಲ್ಲಿಯೂ ಅನುಕೂಲಸಾಕ್ಷ್ಯಗಳಿವೆ.

ಅಲೆಕ್ಸಾಂಡರಿನ ಮರಣದ ಬಳಿಕ ಅವನ ಒಬ್ಬ ಸೇನಾನಿಯಾದ ಸೆಲ್ಯೂಕಸ್ ತನ್ನ ನಾಯಕ ಕೈಬಿಟ್ಟುದನ್ನು ತಾನು ಸಾಧಿಸಬೇಕೆಂದುಕೊಂಡು ಬ್ಯಾಕ್ಟ್ರಿಯ ದೇಶವನ್ನು ವಶ

ಪಡಿಸಿಕೊಂಡ ಮೇಲೆ ಭಾರತಕ್ಕೆ ಬಂದನಾದರೂ ಚಂದ್ರಗುಪ್ತನ ಅಪಾರ ಸೇನಾಬಲದೊಂದಿಗೆ ಸೆಣಸಲಾಗದೆ ಸೋಲನ್ನೊಪ್ಪಿದನು. ಸ್ನೇಹಹಸ್ತವನ್ನೂ ಚಾಚಿ, ಯವನ ಕ್ಷತ್ರಪರಿಗೆ ಸೇರಿದ್ದ ಈಗಿನ ಆಫ್ಘನೀಸ್ಥಾನ ಬಲೂಚಿಸ್ಥಾನಗಳನ್ನು ಚಂದ್ರಗುಪ್ತನಿಗೆ ಕೊಟ್ಟು, ಅವನಿಂದ ಐನೂರು ಆನೆಗಳನ್ನೂ ಬೇರೆ ಧನಕನಕ ವಸ್ತು ವಾಹನಗಳನ್ನೂ ಪಡೆದುಕೊಂಡನು. ತನ್ನ ಮಗಳನ್ನು ಚಂದ್ರಗುಪ್ತನಿಗೆ ಮದುವೆಮಾಡಿಕೊಟ್ಟನೆಂದೂ ಹೇಳಲಾಗಿದೆ. ಚಂದ್ರಗುಪ್ತನಿಗೆ ಒಪ್ಪಿಸಿದ ನಾಲ್ಕು ಸತ್ರಪಗಳ ವ್ಯಾಪ್ತಿ ಸ್ವರೂಪಗಳ ಬಗೆಗೆ ಇತಿಹಾಸಕಾರರಲ್ಲಿ ಸ್ವಲ್ಪ ಭಿನ್ನಾಭಿಪ್ರಾಯಗಳಿದ್ದರೂ, ಚಂದ್ರಗುಪ್ತನೋ ಅವನ ಮಗ ಬಿಂದುಸಾರನೋ ಯವನಕನ್ಯೆಯನ್ನು ವಿವಾಹವಾದ ವಿಷಯವನ್ನು ವಸ್ತುಸ್ಥಿತಿಯೆಂದೇ ಒಪ್ಪುತ್ತಾರೆ. ಈ ಒಪ್ಪಂದದ ಬಳಿಕ ಸೆಲ್ಯೂಕಸ್ ತನ್ನ ಪ್ರತಿನಿಧಿಯಾಗಿ ಮೆಗಾಸ್ತನೀಸನನ್ನು ಪಾಟಲೀಪುತ್ರಕ್ಕೆ ಕಳುಹಿಸಿಕೊಟ್ಟನೆಂದು ತಿಳಿಯುವುದು. ಈ ಪ್ರತಿನಿಧಿಯ ಪ್ರವಾಸಿಕಥನ 'ಇಂಡಿಕ' ಭಾಗಶಃ ದೊರೆತಿದ್ದು, ಇಲ್ಲಿ ಚಂದ್ರಗುಪ್ತನ ವೃತ್ತಾಂತ ಸಂದರ್ಭೋಚಿತವಾಗಿ ಬಂದಿದೆ ; ಅವನ ಸೈನ್ಯ, ನ್ಯಾಯವಿಚಾರಣೆ, ಅಂಗರಕ್ಷೆ ಮುಂತಾದವುಗಳ ಬಗೆಗೆ ಕುತೂಹಲಕರ ವಿವರಗಳು ದಾಖಲಾಗಿವೆ.

ಸುಮಾರು ಕಾಲು ಶತಮಾನಕಾಲ ಶಾಂತಿ ಸುಭಿಕ್ಷೆಗಳಿಂದ ರಾಜ್ಯವು ಕೂಡಿರುವ ಹಾಗೆ ನೋಡಿಕೊಂಡ ಚಂದ್ರಗುಪ್ತನ ಅಂತ್ಯಕಾಲದ ಬಗೆಗೆ ಸ್ಪಷ್ಟವಾದ ದಾಖಲೆಗಳು ಕಾಣುವುದು ಜೈನಸಂಪ್ರದಾಯದ ಕಥಾಕೋಶಗಳಲ್ಲಿ, ಶ್ರವಣಬೆಳ್ಗೊಳ ಮೊದಲಾದೆಡೆಯ ಶಾಸನಗಳಲ್ಲಿ. ಅವುಗಳ ಪ್ರಕಾರ "ಚಂದ್ರಗುಪ್ತನ ಆಳಿಕೆಯ ಕೊನೆಯ ವರ್ಷಗಳಲ್ಲಿ ಉತ್ತರಭಾರತದಲ್ಲಿ ತೀವ್ರವಾದ ಬರ ಬಿದ್ದಿತು ; ಆಗ ಅವನು ಪಂಚಮಶ್ರುತಕೇವಲಿ ಭದ್ರಬಾಹುವಿನ (ಮೃತಿ : ಕ್ರಿ. ಪೂ. ೩೦೫/೨೯೭) ಜೊತೆಯಲ್ಲಿ, ಅವನ ೧೨ ಸಾವಿರ ಅನುಯಾಯಿಗಳೊಂದಿಗೆ ತಾನೂ ಒಬ್ಬ ಶಿಷ್ಯನಾಗಿ ದಕ್ಷಿಣಕ್ಕೆ ಹೊರಟುಬಂದನು ; ಶ್ರವಣಬೆಳಗೊಳದಲ್ಲಿ ನೆಲಸಿ, ಗುರುವಿನ ಸೇವೆಯಲ್ಲಿರುತ್ತ, ಗುರುವಿನ ದೇಹಾಂತವಾದ ಮೇಲೆ ೧೨ ವರ್ಷಕ್ಕೆ ತಾನು ತೀರಿಕೊಂಡನು." ಕ್ರಿ. ಶ. ೭ ನೆಯ ಶತಮಾನದ ಬಳಿಕ ಕಾಣಿಸಿಕೊಳ್ಳುವ ಈ ಹೇಳಿಕೆಗಳನ್ನು ಮುಖ್ಯಾಂಶದಲ್ಲಿ ಐತಿಹಾಸಿಕವೆಂದೇ ಈಗ ಸಾಮಾನ್ಯವಾಗಿ ತಿಳಿಯಲಾಗುತ್ತಿದೆ. ಆದರೆ ಕ್ಷಾಮಭೀತಿಗೆ ಸಿಂಹಾಸನ ತೊರೆದು ಹೊರಡುವುದು ಅಸಹಜವೆಂದೂ, ಭದ್ರಬಾಹುವಿನೊಂದಿಗೆ ದಕ್ಷಿಣಕ್ಕೆ ಹೊರಟು ಬಂದುದು ಚಂದ್ರಗುಪ್ತ ಮೌರ್ಯನಲ್ಲ, ಅಶೋಕನ ಮೊಮ್ಮಗನಾದ ಸಂಪ್ರತಿ ಚಂದ್ರಗುಪ್ತನೆಂದೂ ಗೋವಿಂದ ಪೈ ಮುಂತಾಗಿ ಕೆಲವರು ತಿಳಿದಿದ್ದಾರೆ. ಆದರೆ ಪಂಚಮಶ್ರುತಕೇವಲಿ ಭದ್ರಬಾಹುವಿನ ಕಾಲ ಎಂದೂ ವಿವಾದಾಸ್ಪದವಾಗಿಲ್ಲದಿರುವುದರಿಂದ, ಅವನ ಕಾಲದೊಂದಿಗೆ ತಾಳೆಯಾಗುವುದು ಚಂದ್ರಗುಪ್ತಮೌರ್ಯನ ಕಾಲವೇ ಎಂಬುದಾಗಿ ಹೇಳಬೇಕಾಗಿದೆ. ಆದಕಾರಣ ಫ್ಲೀಟ್, ಡಿ. ಎಸ್. ಮುಖರ್ಜಿ, ಶಾಮಶಾಸ್ತ್ರಿ ಮುಂತಾದವರು ಬೇರೆ ಚಂದ್ರಗುಪ್ತರನ್ನು ಉಲ್ಲೇಖಿಸುವದು ವಿಚಾರಣೀಯವಾಗಿ ತೋರುತ್ತದೆ.

ಚಂದ್ರಗುಪ್ತನ ಜೀವಿತಕಾಲದ ಚಟುವಟಿಕೆಗಳನ್ನು ಒಗ್ಗೂಡಿಸಿ ವಿಮರ್ಶಿಸಿದರೆ, ಅದು ಭಾರತದ ತತ್ಕಾಲದ ರಾಜನೈತಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಏಕೀಕರಣದ ಕಥೆಯಾಗಿ ಪರಿಣಮಿಸುತ್ತದೆ. ಅವನ ಜೀವನ ಸಾಧನೆಗಳನ್ನು ಉಲ್ಲೇಖಿಸುವ ಆಕರಗಳು ಮುಖ್ಯವಾಗಿ

ಹಿಂದೂಪುರಾಣಗಳು, ಜೈನ ಮತ್ತು ಬೌದ್ಧ ಸಾಹಿತ್ಯೋಲ್ಲೇಖಗಳು ಹಾಗೂ ಗ್ರೀಕ್ ಇತಿಹಾಸಕಾರರ ಕಥನಗಳು. ಆದರೆ ಈ ಆಕರಗಳಲ್ಲಿ ವ್ಯತ್ಯಾಸದ ಅಂಶಗಳೇ ಹೆಚ್ಚು. ದೂರದ, ಭಿನ್ನ ಭಾಷಾಮೂಲದ ಬೌದ್ಧಾದಿ ಸಂಪ್ರದಾಯದ ವೃತ್ತಾಂತಗಳಿಗಿಂತ ಬ್ರಾಹ್ಮಣಸಂಪ್ರದಾಯದ ಉತ್ತರ ಭಾರತೀಯ ಮೂಲದ ವೃತ್ತಾಂತಗಳೇ ನಂಬಿಕೆಗೆ ಹೆಚ್ಚು ಅರ್ಹವಾದವು ಎನ್ನಲಾಗಿದೆ.

ಭಾರತೀಯ ಪುರಾಣಗಳು "ನಂದಾಂತಂ ಕ್ಷತ್ರಿಯಕುಲಮಿತಿ ಪೌರಾಣಶಾಸನಾತ್" (ಮುದ್ರಾರಾ. ಉಪೋದ್ಘಾತ ೨೩) ಎಂದು ತಿಳಿಯುತ್ತವೆ. ಬೌದ್ಧಮೂಲಗಳ ಪ್ರಕಾರ ಚಂದ್ರಗುಪ್ತನು ಬುದ್ಧನ ಶಾಕ್ಯಕುಲದ ಒಂದು ಕವಲಾದ ಪರ್ವತಪ್ರಾಂತದ ಮೋರಿಯ ವಂಶದ ರಾಜಪುತ್ರನೆಂಬುದನ್ನು ಹೊರತುಪಡಿಸಿದರೆ ಜೈನ ಮತ್ತು ಗ್ರೀಕ್ ಮೊದಲಾದ ಮೂಲಗಳು ಅವನನ್ನು ಹೀನಕುಲಜನೆಂದು ಗುರುತಿಸಿವೆ. ವಿಷ್ಣುಪುರಾಣ ಮೊದಲಾದವು ಮಗಧಪತಿ ಶಿಶುನಾಗವಂಶದ ಮಹಾನಂದಿಗೆ ಶೂದ್ರಸ್ತ್ರೀಯಿಂದ ಮಹಾಪದ್ಮ ಹುಟ್ಟಿದ ಮೇಲೆ ಮುಂದೆ ಶೂದ್ರದೊರೆಗಳ ಆಳಿಕೆ ತೊಡಗಿತೆಂದೂ ಕೌಟಿಲ್ಯನಿಂದ ಆ ಮಹಾಪದ್ಮ ನಂದನೂ ಅವನ ಮಕ್ಕಳೂ ಹತರಾದ ಮೇಲೆ ಮೌರ್ಯವಂಶದ ಚಂದ್ರಗುಪ್ತನು ರಾಜನಾದನೆಂದೂ ಹೇಳುತ್ತವೆ. ವಿಷ್ಣುಪುರಾಣದ ಭಾಷ್ಯಕಾರನೊಬ್ಬ, ಸ್ಪಷ್ಟವಾಗಿ ಚಂದ್ರಗುಪ್ತನನ್ನು ಹೀನಕುಲಜನೆಂದೇ ತಿಳಿಸಿದ್ದಾನೆ. ವಿಶಾಖದತ್ತನ ನಾಟಕದಲ್ಲಿ, ಮುಖ್ಯವಾಗಿ ಅದರ ಕಥಾವಿವರಣೆಗೆ ಹುಟ್ಟಿದ ರಚನೆಗಳಲ್ಲಿ, ಸಾಮಾನ್ಯವಾಗಿ ಎನ್ನುವಂತೆ ಹೀನಕುಲತ್ವವನ್ನೇ ಹೇಳಿದೆ. 'ಮುದ್ರಾರಾಕ್ಷಸ'ದಲ್ಲಿಯ 'ವೃಷಲ'ಶಬ್ದ ಶೂದ್ರ ಎಂಬರ್ಥವನ್ನು (ಅಮರಕೋಶ, ೯೯೮) ಹೇಳುತ್ತಿದ್ದು, ನಾಟಕದ ಉಪೋದ್ಘಾತದಲ್ಲಿ "ರಾಜ್ಞಃ ಪತ್ನೀ ಸುನಂದಾಸೀಜ್ಜ್ಯೇಷ್ಠಾನ್ಯಾ ವೃಷಲಾತ್ಮಜಾ | ಮುರಾಖ್ಯಾ ಸಾ ಪ್ರಿಯಾ ಭರ್ತುಃ ಶೀಲಲಾವಣ್ಯ ಸಂಪದಾ" (ತೆಲಾಂಗ್ ಪರಿಷ್ಕರಣದ ಮುದ್ರಾರಾ. ಪು. ೪೨) ಎಂದು ಸ್ಪಷ್ಟವಾಗಿದ್ದು, ಇದು ಹೇಗೂ ಚಂದ್ರಗುಪ್ತನನ್ನು ರಾಜಬೀಜೋತ್ಪನ್ನನೆಂದೇ ತೋರಿಸುವುದಲ್ಲದೆ ಅವನನ್ನು ಜಾರಜನೆಂದೇನೂ ತೋರಿಸುವುದಿಲ್ಲ. ವೃಷಲನೆಂದರೆ ಮಹಾರಾಜನೆಂಬುದಾಗಿ ಗೌರವದ ಅರ್ಥವೇ ಉಂಟೆಂದು ಕೆಲವರು ವಾದಿಸುವರಾದರೂ (ಅಭಿನಂದನೆ, ೧೯೫೬; M. Govinda Pai, *Indiana*, 1991, p. 719-30) ಆ ವಾದದಲ್ಲಿ ದೌರ್ಬಲ್ಯಗಳೇ ಹೆಚ್ಚು.

ಬೃಹತ್ಕಥೆ ಮೂಲವಾಗಿ ಹುಟ್ಟಿದ ಜೈನ ಕಥಾಕೋಶಗಳಲ್ಲಿ ನಂದನನ್ನೇ ಶೂದ್ರನೆಂದೂ ಚಂದ್ರಗುಪ್ತನು ಅವನ ಮಗನೆಂದೂ ಹೇಳುವಲ್ಲಿ ನಿರೂಪಣೆ ಸ್ಪಷ್ಟವೇ ಇದೆ. ಜೈನ ಮೂಲಗಳಲ್ಲಿ ಕುಲೀನತೆ ಹೀನಕುಲತ್ವ ಎರಡೂ ಕಥಾಭೇದಗಳನ್ನು ಹಿಡಿದು ಕಂಡುಬರುತ್ತದೆ (ಉದಾ. 'ವಡ್ಡಾರಾಧನೆ', ಹೇಮಚಂದ್ರನ ಪರಿಶಿಷ್ಟಪರ್ವ). ಗ್ರೀಕ್‌ಮೂಲಗಳು ಹಿಂದೂಪುರಾಣಗಳು ಹೇಳುವಂತೆಯೇ ನಂದರಿಗೇ ಹೀನಕುಲತ್ವ ಹೇಳುವುವು. ಆದರೆ ಪುರಾಣಗಳು ನಂದರ ಹೀನಕುಲತ್ವವನ್ನು ತಾಯಿಯ ಕಡೆಯದಾಗಿ ಗುರುತಿಸಿದರೆ, ಗ್ರೀಕ್ ಮೂಲಗಳು ತಂದೆಯ ಕಡೆಯದಾಗಿ (ನಂದನ ರಾಣಿಗೆ ಕ್ಷೌರಿಕನೊಬ್ಬನನ್ನು ಪ್ರಿಯಕರನೆಂದಿದೆ) ಗುರುತಿಸುತ್ತವೆ. ಈ ಗೊಂದಲಗಳಿಂದ ನಂದರೇ ಶೂದ್ರಸಂತತಿಯವರೋ ನಂದರಿಗೆ ಶೂದ್ರಸ್ತ್ರೀಸಂಪರ್ಕದಿಂದ ಆದ ಪುತ್ರನಿಂದ ಮುಂದುವರಿದುದು ಶೂದ್ರಸಂತತಿಯೋ ಹೇಳುವುದು ಕಷ್ಟ. ಆದರೆ ಬ್ರಾಹ್ಮಣ ಆಕರಗಳ, ಅವನ್ನು ಆಧರಿಸಿದ ಅನ್ಯ

ಆಕರಗಳ ಹೇಳಿಕೆಗಳಲ್ಲಿ, ಎಂದರೆ ಚಂದ್ರಗುಪ್ತನ ಹೀನಕುಲತ್ವದ ವಿಷಯದಲ್ಲಿ, ತಥ್ಯವುಂಟೆಂದೇ ಇತಿಹಾಸಕಾರರು ಭಾವಿಸುತ್ತಾರೆ.

ಈ ಹಿನ್ನೆಲೆಯಲ್ಲಿ ನೋಡಿದಾಗ, ಉತ್ತಮಕುಲದವರ ಕುಲಪ್ರತಿಷ್ಠೆ, ಅವರು ಹೀನಕುಲರ ವಿಷಯದಲ್ಲಿ ಅನುಸರಿಸುವ ದಮನನೀತಿ, ಅವರನ್ನು ಎದುರಿಸಿ ಹೀನಕುಲರು ತಮ್ಮ ಅಭ್ಯುದಯಕ್ಕೆ ನಡಸುವ ಸಂಘರ್ಷ ಇವುಗಳಿಗೆ ಚಂದ್ರಗುಪ್ತನದು ಒಂದು ದೃಷ್ಟಾಂತಕಥೆ ಎನ್ನಬೇಕು.

ಚಾಣಕ್ಯ : ಚಂದ್ರಗುಪ್ತ ಮೌರ್ಯನಿಗೆ (ಕ್ರಿ. ಪೂ. ೩೨೪-೩೦೦) ಸಮಕಾಲಿಕನಾಗಿ ಪ್ರಾಚೀನಭಾರತದ ವಿಖ್ಯಾತರಾಜನೀತಿಜ್ಞನೆಂದು ಹೆಸರಾಗಿರುವ ಚಾಣಕ್ಯನ ಐತಿಹಾಸಿಕತೆ ಆತನ ಅರ್ಥಶಾಸ್ತ್ರವೆಂಬ ಪ್ರಸಿದ್ಧಕೃತಿಯ ಮೂಲಕವಾಗಿಯೂ ಭಾರತೀಯ ಸಾಹಿತ್ಯದ ವಿಭಿನ್ನ ಕಾಲಘಟ್ಟದ ನಾನಾ ಕೃತಿಕರ್ತರ ಉಲ್ಲೇಖಗಳ ಮೂಲಕವಾಗಿಯೂ ಈಗ ಸಿದ್ಧವಾಗಿರುವ ಸಂಗತಿಯಾಗಿದೆ. ಆದರೆ ಚಂದ್ರಗುಪ್ತನ ಕಾಲಕ್ಕೆ, ಅವನ ಆಸ್ಥಾನಕ್ಕೆ ಸಿರಿಯದ ದೊರೆ ೧ನೆಯ ಸೆಲ್ಯುಕಸ್ಸನ ಪ್ರತಿನಿಧಿಯಾಗಿ ಬಂದಿದ್ದ ಗ್ರೀಕ್‌ಲೇಖಕ ಮೆಗಾಸ್ತನೀಸನ 'ಇಂಡಿಕ'ದ ಬರಹದಲ್ಲಿ ಚಾಣಕ್ಯನ (ವಿಷ್ಣುಗುಪ್ತ/ಕೌಟಿಲ್ಯ) ಉಲ್ಲೇಖವಿಲ್ಲವೆಂಬ ಕಾರಣವನ್ನೆತ್ತಿ ಒಟ್ಟೊ ಸ್ಟೈಯಿನ್ ಎಂಬ ವಿದ್ವಾಂಸರು ಆ ಸಮಕಾಲಿಕತ್ವವನ್ನು ಪ್ರಶ್ನಿಸಲು ಅವಕಾಶವಿದೆಯೆಂದಿದ್ದಾರೆ. ಈ ಪ್ರಶ್ನೆಗೆ ಈಗಾಗಲೇ ಕೆಲವರು ತೃಪ್ತಿಕರ ಉತ್ತರಗಳನ್ನು ನೀಡಿದ್ದಾರೆ. ಮೆಗಾಸ್ತನೀಸನ ಬರಹ ಮೂಲತಃ ನಾಲ್ಕುಭಾಗಗಳಾಗಿದ್ದು, ಈಗ ನಮಗೆ ದೊರೆತಿರುವುದು ಕೆಲವು ತುಣುಕುಗಳು ಮಾತ್ರ ಎಂದೂ ಹೆಸರು ಹೇಳಿಲ್ಲವೆಂದಾಕ್ಷಣ ಅಸ್ತಿತ್ವ ಪ್ರಶ್ನಾರ್ಹವಾಗಬೇಕಾಗಿಲ್ಲ ಎಂದೂ ವಾದಿಸಿರುವುದಲ್ಲದೆ, ಅರ್ಥಶಾಸ್ತ್ರದ ಆಂತರಿಕಪ್ರಮಾಣಗಳು ಸೇರಿದಂತೆ ವಿಪುಲವಾಗಿ ಲಭ್ಯವಿರುವ ಭಾರತೀಯ ಸಾಹಿತ್ಯದ ಉಲ್ಲೇಖಗಳನ್ನು ಎತ್ತಿ ತೆಗೆದು ಸಮಕಾಲಿಕತ್ವ ಐತಿಹಾಸಿಕಗಣ್ಯತೆಗಳಿಗೆ ಸಮರ್ಥನೆ ಒದಗಿಸಿದ್ದಾರೆ.

'ಅರ್ಥಶಾಸ್ತ್ರ'ದ ಕರ್ತೃ ತನ್ನನ್ನು ಕೌಟಿಲ್ಯ(ಕೌಟಲ್ಯ)ನೆಂದು ಕರೆದುಕೊಂಡಿರುವುದು ಗ್ರಂಥವಿಭಜನೆಯ ಉಪಸಂಹಾರವಾಕ್ಯಗಳಲ್ಲಿಯೂ ವಿಶೇಷಸಂದರ್ಭಗಳಲ್ಲಿಯೂ ಆ ಗ್ರಂಥದಲ್ಲಿಯೇ ಕಂಡುಬರುತ್ತಿದೆ. ಅಲ್ಲದೆ ಗ್ರಂಥಾಂತ್ಯದಲ್ಲಿ ತನ್ನ ಶಸ್ತ್ರಶಾಸ್ತ್ರನೈಪುಣ್ಯವನ್ನೂ ಪ್ರಯೋಗಸಾಮರ್ಥ್ಯವನ್ನೂ ಸೂಚಿಸಿ, ಸಿಟ್ಟಿನಿಂದ ನಂದರಾಜ್ಯವನ್ನು ತಾನು ಕಿತ್ತುಕೊಂಡ ಐತಿಹಾಸಿಕಸಂಗತಿಯನ್ನೂ ಸ್ಪಷ್ಟವಾಗಿಯೇ ತಿಳಿಸಿದ್ದಾನೆ. ಇದು ಮೂಲದ ಮಾತು (ಕೌಟಿಲೀಯಾರ್ಥಶಾಸ್ತ್ರಮ್, ೧೫-೩೮೧):

> ಯೇನ ಶಾಸ್ತ್ರಂ ಚ ಶಸ್ತ್ರಂ ಚ ನಂದರಾಜಗತಾ ಚ ಭೂಃ
> ಅಮರ್ಷೇಣೋದ್ಧೃತಾನ್ಯಾಶು ತೇನ ಶಾಸ್ತ್ರಮಿದಂ ಕೃತಮ್ ||

ಈ ಸಂಗತಿಯನ್ನು ವಿವಿಧವಾದ ಪರಿಷ್ಕರಣಗಳೊಂದಿಗೆ ಭಾರತೀಯ ಸಾಹಿತ್ಯದ ಚಂದ್ರಗುಪ್ತ-ಚಾಣಕ್ಯರ ಕಥಾವೃತ್ತಾಂತಗಳು ವಿಸ್ತಾರವಾಗಿ ತಿಳಿಸಿವೆ. 'ಅರ್ಥಶಾಸ್ತ್ರ'ದ ಆಶಯ ಸುವಿದಿತವಾಗಲೆಂದು ಸೂತ್ರವನ್ನೂ ಭಾಷ್ಯವನ್ನೂ ತಾನೇ ಬರೆದುದಾಗಿ ತಿಳಿಸುವಾಗ ತನ್ನನ್ನು ವಿಷ್ಣುಗುಪ್ತನೆಂದು ಸಹ ಕರೆದುಕೊಂಡಿದ್ದಾನೆ.

ಈ ಚತುರರಾಜನೀತಿಜ್ಞನ 'ಕೌಟಿಲ್ಯ'ನೆಂಬ ಹೆಸರು ಗೋತ್ರಪ್ರವರ್ತಕಋಷಿ ಕುಟಿಲ

ನೆಂಬವನ ಮೂಲಕ ಬಂದ ಗೋತ್ರನಿಮಿತ್ತ ನಾಮಧೇಯವೆಂದು ತಿಳಿಯಲಾಗಿದೆ. ಕಾಮಂದಕನ 'ನೀತಿಸಾರ'ದ ಜಯಮಂಗಲ ವ್ಯಾಖ್ಯಾನದಲ್ಲಿ ಇದಕ್ಕೆ ಸಮರ್ಥನೆ ಇದೆ. "ಕೌಟಿಲ್ಯಃ ಕುಟಿಲಮತಿಃ ಸ ಏಷ ಯೇನ | ಕ್ರೋಧಾಗ್ನೌ ಪ್ರಸಭಮದಾ ಹಿ ನಂದವಂಶಃ" (ಮುದ್ರಾರಾ. ೧-೭). ಇದು ಸಾಹಿತ್ಯದ ಚಮತ್ಕಾರೋಕ್ತಿ. ಹೀಗೆಯೇ ವಿಷ್ಣುಗುಪ್ತನೆಂಬುದು ವಿಷ್ಣುಭಕ್ತರಾದ ತಾಯಿ ತಂದೆಗಳು ನಾಮಕರಣಮಾಡಿದ ನಿಜನಾಮಧೇಯವೆಂದೂ ಚಣಕದೇಶದಲ್ಲಿ ಹುಟ್ಟಿದವನೆಂಬ ಕಾರಣದಿಂದ ಚಾಣಕ್ಯನೆಂಬುದು ಅನ್ವರ್ಥನಾಮವೆಂದೂ ಭಾವಿಸಲಾಗಿದೆ. ಚಂದ್ರಗುಪ್ತ-ಚಾಣಕ್ಯ ಕಥಾಸಾಹಿತ್ಯದಲ್ಲಿ ಚಾಣಕ್ಯ (ಚಾಣೆಕ್ಯ)ನೆಂಬ ಹೆಸರೇ ಹೆಚ್ಚಾಗಿ ಕಂಡುಬರುತ್ತದೆ.

ಚಾಣಕ್ಯನು ಅರ್ಥಶಾಸ್ತ್ರವನ್ನು ಚಂದ್ರಗುಪ್ತನ ಬುದ್ಧಿವೈಶದ್ಯಕ್ಕೆಂದು ರಚಿಸಿರುವುದು ಸಂಭಾವ್ಯವಾದುದು ಎನ್ನುವುದು ಆ ಗ್ರಂಥದ ಅಧಿಕರಣ ೨. ಅಧ್ಯಾಯ ೧೦ರ ಕೊನೆಯ ಶ್ಲೋಕದಿಂದ ತಿಳಿಯಲವಕಾಶವಿದೆ. ಇಲ್ಲಿ ಬಂದಿರುವ ನರೇಂದ್ರನೆಂಬ ಮಾತು ಸರ್ವಪ್ರಭುಸಾಮಾನ್ಯವಾದ ಮಾತೇ ಆಗಿರಲೂ ಬಹುದು. ಆದರೂ ಆ ಗ್ರಂಥ ೧೫ ಅಧಿಕರಣಗಳೆಂಬ ದೊಡ್ಡ ವಿಭಾಗಗಳಲ್ಲಿ, ೧೮೦ ಪ್ರಕರಣಗಳೆಂಬ ಚಿಕ್ಕವಿಭಾಗಗಳಿಂದಲೂ ಕೂಡಿ ರಾಜಶಾಸನ ಪ್ರಜಾಜೀವನಸಂಬಂಧವಾದ ನಾನಾ ಸಂಗತಿಗಳನ್ನು ಅಂದಿನ ಸಾಮಾಜಿಕ ಶ್ರದ್ಧೆ ಆಚರಣೆಗಳ ಭೂಮಿಕೆಯ ಮೇಲೆ ಮೊದಲ ಸಲ ವಿಸ್ತಾರವಾಗಿ ದಾಖಲಿಸುವ, ವ್ಯಾಖ್ಯಾನಿಸುವ ಹಾಗೂ ಶಾಸನರೂಪದಲ್ಲಿ ನಿರೂಪಿಸುವ ಒಂದು ಉತ್ಕೃಷ್ಟ ಆಕರವಾಗಿದ್ದು, ಉತ್ತರಕಾಲೀನ ಅರ್ಥಶಾಸ್ತ್ರಕೃತಿಗಳಿಗೆ ಸ್ಫೂರ್ತಿನೀಡಿದೆ.

ಚಾಣಕ್ಯನನ್ನು ಉಲ್ಲೇಖಿಸುವ ಭಾರತೀಯ ಸಾಹಿತ್ಯಕೃತಿಗಳಲ್ಲಿ, ಎಂದರೆ ವಿಷ್ಣು, ವಾಯು, ಮತ್ಸ್ಯ, ಭಾಗವತ ಪುರಾಣಗಳಲ್ಲಿ "ತಾನ್ ನಂದಾನ್ ಕೌಟಿಲ್ಯೋ ಬ್ರಾಹ್ಮಣಃ ಸಮುದ್ಧರಿಷ್ಯತಿ" ಎಂಬಂತಹ (ವಿಷ್ಣುಪುರಾಣ) ಮಾತುಗಳು ಚಾಣಕ್ಯನಿಂದಾದ ನಂದ ವಿನಾಶವನ್ನು ಕುರಿತಿದೆ. ಕಾಮಂದಕನು 'ನೀತಿಸಾರ'ದಲ್ಲಿ ವಜ್ರಜ್ವಲನತೇಜಸನಾದ ವಿಷ್ಣುಗುಪ್ತನು ತನ್ನ ಅಭಿಚಾರವಜ್ರದಿಂದ ನಂದಪರ್ವತವನ್ನು ಸಮೂಲವಾಗಿ ಕೆಡವಿದವನೆಂದೂ ತಾನೊಬ್ಬನೇ ತನ್ನ ಮಂತ್ರಶಕ್ತಿಯ ಬಲದಿಂದ ನೃಚಂದ್ರನಾದ ಚಂದ್ರಗುಪ್ತನಿಗೆ ರಾಜ್ಯಲಾಭವಾಗುವಂತೆ ಮಾಡಿದನೆಂದೂ ಅರ್ಥಶಾಸ್ತ್ರಮಹೋದಧಿಯನ್ನು ಕಡೆದು ನೀತಿಶಾಸ್ತ್ರದ ಅಮೃತವನ್ನು ತೆಗೆದನೆಂದೂ ಕೊಂಡಾಡಿ ಅವನಿಗೆ ತನ್ನ ನಮಸ್ಕಾರವನ್ನು ಸಲ್ಲಿಸಿದ್ದಾನೆ. ಆರ್ಯಶೂರನ 'ಜಾತಕಮಾಲಾ'(ಸು. ಕ್ರಿ. ಶ. ೪ನೆಯ ಶ.)ದಲ್ಲಿ ಕೌಟಿಲ್ಯನನ್ನು 'ಅರ್ಥಶಾಸ್ತ್ರ'ದ ಕರ್ತೃವೆಂದಿದೆ ; ಆತನ ಇನ್ನೊಂದು ಕೃತಿ 'ಲಂಕಾವತಾರ'ದಲ್ಲಿ ಋಷಿಯೆಂದು ಹೇಳಿ ಗೌರವಿಸಿದೆ. ಪ್ರಸಿದ್ಧ ಗದ್ಯಕಾರನಾದ ದಂಡಿಯು "ದಂಡನೀತಿಯನ್ನು ಕಲಿಯುವುದಾಗಲಿ ; ಇದು ಆಚಾರ್ಯ ವಿಷ್ಣುಗುಪ್ತನಿಂದ ಮೌರ್ಯನ (ಚಂದ್ರಗುಪ್ತನ) ಸಲುವಾಗಿ ೬೦೦೦ ಶ್ಲೋಕಗಳಿಗೆ ಸಂಕ್ಷೇಪಗೊಂಡಿದೆ ; ಇದರ ಅಭ್ಯಾಸ ಅನುಷ್ಠಾನಗಳಿಂದ ಅದು ಉದ್ದೇಶಿತಫಲ ನೀಡುತ್ತದೆ" ಎಂದು ತಿಳಿಸಿರುವುದು ಸಹ, ಕೃತಿಕರ್ತೃತ್ವ, ಯಾರನ್ನು ಉದ್ದೇಶಿಸಿದೆಯೆಂಬುದು, ಗ್ರಂಥಪ್ರಮಾಣ ಈ ಮೂರು ಸಂಗತಿಗಳನ್ನೂ ಸ್ಪಷ್ಟಪಡಿಸುತ್ತದೆ. ಹೀಗೆಯೇ ಬಾಣಕವಿ 'ಕೌಟಿಲ್ಯಶಾಸ್ತ್ರ'ವನ್ನು ಉಲ್ಲೇಖಿಸಿದ್ದಾನೆ ; ಅಲ್ಲಿಯ ಕೆಲವು ಸಲಹೆಗಳ ವಿಷಯದಲ್ಲಿ ಅವನಿಗೆ ಸಹಮತಿಯಿಲ್ಲ. ಆದರೆ ಕಾಲದಿಂದ

ಕಾಲಕ್ಕೆ ಆ ಗ್ರಂಥ ಗಳಿಸಿದ್ದ ಪ್ರಾಶಸ್ತ್ಯವನ್ನೇ ಅದು ಬೇರೆ ರೀತಿಯಲ್ಲಿ ಸೂಚಿಸುತ್ತದೆ. 'ಪಂಚತಂತ್ರ'ದ ಕರ್ತೃ ಚಾಣಕ್ಯಾದಿಗಳ ಅರ್ಥಶಾಸ್ತ್ರಕೃತಿಗಳನ್ನು ನೆನೆಯುತ್ತಾನೆ. ನೇರವಾದ ಉಲ್ಲೇಖಗಳಲ್ಲದೆ, ಅರ್ಥಶಾಸ್ತ್ರದ ಉದ್ಧೃತಿಗಳನ್ನು ಒಳಕೊಂಡ ಹಲವು ಸಾಹಿತ್ಯಕೃತಿಗಳೂ ಇವೆ. ನಾಟಕಕಾರನಾದ ವಿಶಾಖದತ್ತನಂತೂ ಚಾಣಕ್ಯನನ್ನು ರಾಕ್ಷಸನ ಬಾಯಿಂದ "ಮಹಾತ್ಮಾ ಕೌಟಿಲ್ಯಃ" ಎಂದು ಹೇಳಿಸಿದ್ದಾನೆ (೭-೭).

ಇತಿಹಾಸಕಾರರು ಚಂದ್ರಗುಪ್ತನ ಮಂತ್ರಿಯಾಗಿ ಚಾಣಕ್ಯನು ಸಾಮ್ರಾಜ್ಯದ ಸ್ಥಿರತೆಗೆ ಶ್ರಮಿಸಿದ ಮೇಲೆ ಕೆಲಕಾಲ ಅವನ ಮಗ ಬಿಂದುಸಾರನ ಮಂತ್ರಿಯಾಗಿಯೂ ಇದ್ದಿರಬಹುದೆಂದು ತಿಳಿಯುತ್ತಾರೆ ; ಆದರೆ ಕಥಾಸಾಹಿತ್ಯ ಅವನು ರಾಕ್ಷಸನನ್ನು ಮಂತ್ರಿಯಾಗಿ ನೆಲೆಗೊಳಿಸಿ ತಾನು ತಪೋಭಿಮುಖನಾದನೆಂದು ಸಾಮಾನ್ಯವಾಗಿ ತಿಳಿಸುತ್ತದೆ. ಇತಿಹಾಸಕಾರರ ಗ್ರಹಿಕೆಗಳಿಗೆ ಸಾಹಿತ್ಯೇತರ ಆಧಾರಗಳೇನೋ ತಿಳಿಯದು.

೪. 'ಮುದ್ರಾಮಂಜೂಷವು': ಕೃತಿಯ ವಿಮರ್ಶೆ

(೧) ಕವಿವಿಚಾರ

ಮೈಸೂರಿನ ವೆಸ್ಲಿಯನ್ ಮಿಷನ್ ಪ್ರೆಸ್ ಎಂಬ ಸಂಸ್ಥೆಯ ಮೂಲಕ ಹಲವು ಸಲ ಮುದ್ರಣಗೊಂಡು (೧೮೭೩, ೧೮೯೮, ೧೯೦೫, ೧೯೧೨, ೧೯೧೯, ೧೯೨೩, ೧೯೨೯, ೧೯೪೫, ೧೯೫೩, ೧೯೮೫) ಈಗ ಪ್ರಚಾರದಲ್ಲಿರುವ ರೂಪದ 'ಮುದ್ರಾಮಂಜೂಷವು' ಎಂಬ ಗದ್ಯಗ್ರಂಥದ ಕರ್ತೃ, ಅಲ್ಲಿಯೇ ತಿಳಿಸಿರುವ ಪ್ರಕಾರ ಕೆಂಪು ನಾರಾಯಣ ಎಂಬುದಾಗಿ ಕಂಡುಬರುತ್ತಿದೆ. ಅನಂತರದಲ್ಲಿ ಈ ಗ್ರಂಥದ ವಿಚಾರವಾಗಿ ಬಂದಿರುವ ಎಲ್ಲ ಲಿಖಿತಸಂದರ್ಭಗಳಲ್ಲಿಯೂ ಹಾಗೆಯೇ ಉಲ್ಲೇಖವಾಗಿದೆ. ಕೃತಿಕರ್ತೃವಿನ ಹೆಸರು ಹಾಗೆ ಇರುವುದು ಅಸಂಭಾವ್ಯವಲ್ಲ ಎಂದು ಇಟ್ಟುಕೊಂಡರೂ, ಇಲ್ಲಿ ವಿಚಾರಕ್ಕೆ ಕೆಲಮಟ್ಟಿಗೆ ಅವಕಾಶವಿದೆ. ಏಕೆಂದರೆ, ಈಗ ಲಭ್ಯವಿರುವ ಹಸ್ತಪ್ರತಿಗಳಲ್ಲಿ, ಮುದ್ರಿತ ಪ್ರತಿಯಲ್ಲಿ ಅದು ಕಂಡುಬಂದಿರುವ ಸ್ಥಾನದಲ್ಲಿಯಾಗಲಿ, ಇತರತ್ರ ಆಗಲಿ ಆ ಹೆಸರು ಹಾಗೆ ಉಲ್ಲೇಖವಾಗಿಲ್ಲ ; ಪ್ರತಿಯಾಗಿ, ಅವತರಣಿಕೆಯೆನ್ನಬಹುದಾದ ಆರಂಭಭಾಗದಲ್ಲಿ ಕರ್ತೃವಿನ ಹೆಸರೇ ಇಲ್ಲ, ಗ್ರಂಥಾಂತ್ಯದಲ್ಲಿ ಮೊದಲು ನಾರಾಯಣ ಶರ್ಮ ಎಂದೂ, ಬಳಿಕ ಸಂಕ್ಷೇಪವಾಗಿ ನಾರಾಯಣ ಎಂದು ಮಾತ್ರವೇ ಕಂಡುಬಂದಿದೆ. ಅಲ್ಲದೆ ಪ್ರತಿಯೊಂದು ಆಶಯದ ಕೊನೆಗೆ ಬರುವ ಉಪಸಂಹಾರಗದ್ಯದಲ್ಲಿ ಸಹ ಕ್ರಮತಪ್ಪದೆ ನಾರಾಯಣ ಶರ್ಮ ಎಂಬ ಹೆಸರೇ ಆವೃತ್ತಿಗೊಂಡಿದೆ.

ಹೀಗಿರುವಾಗ, 'ಮುದ್ರಾಮಂಜೂಷ'ದ ಕರ್ತೃವಿನ ಹೆಸರನ್ನು ಕೆಂಪು ನಾರಾಯಣ ಎಂಬುದಾಗಿ ತಿಳಿಯಬೇಕೆ ? ಅಥವಾ ನಾರಾಯಣ ಶರ್ಮ ಎಂಬುದಾಗಿ ತಿಳಿಯಬೇಕೆ ? ಎಂಬ ಪ್ರಶ್ನೆಯೇಳುತ್ತದೆ. ಮುದ್ರಿತಪ್ರತಿಯ ಪರಿಷ್ಕರಣಕರ್ತರಿಗೆ ದೊರೆತ ಹಸ್ತಪ್ರತಿಯಲ್ಲಿ ಕೆಂಪು ನಾರಾಯಣ ಎಂಬ ಹೆಸರು ಇದ್ದಿರುವುದು ಸಾಧ್ಯ ಎಂದು ತಿಳಿಯುವುದಕ್ಕೆ ಅವಕಾಶವೇನೋ ಉಂಟು; ಆದರೆ ಅವರು ಆ ವಿಷಯವಾಗಿ ತಮ್ಮ ಸಂಕ್ಷಿಪ್ತವಾದ ಮುನ್ನುಡಿಯಲ್ಲಿ ಏನನ್ನೂ ಹೇಳಿಲ್ಲವಾದ್ದರಿಂದ ಸಂದಿಗ್ಧತೆಗೆ ಇಲ್ಲಿ ಎಡೆಯಿದೆ.

'ಮುದ್ರಾಮಂಜೂಷ'ದ ಕರ್ತೃ ಬದುಕಿ ಕೃತಿರಚನೆ ಮಾಡಿದ ಕಾಲ ಮುಮ್ಮಡಿ

ಕೃಷ್ಣರಾಜ ಒಡೆಯರ ಆಳಿಕೆಯ ಕಾಲ. ಇದು ಆ ಕೃತಿಯ ಉಪಸಂಹಾರಗದ್ಯದಲ್ಲಿ ನಿಚ್ಚಳವಾಗಿ ಉಲ್ಲೇಖಗೊಂಡ ಸ್ವವಿಚಾರನಿವೇದನದಿಂದ ಸ್ಪಷ್ಟವಾಗುತ್ತದೆ. ಆ ಕಾಲದಲ್ಲಿ ಕವಿ ಕೆಂಪು ಶಾಸ್ತ್ರಿಗಳು ಎಂಬ ರೂಢಿಯ ಹೆಸರಿನಿಂದ ಪ್ರಸಿದ್ಧನಾಗಿದ್ದರೆಂದು ಈಚೆಗೆ ತಿಳಿದಿದೆ. (ಸಿ. ವೆಂಕಟರಮಣ ಶಾಸ್ತ್ರೀ, 'ಸೋಸಲೆ ಗರಳಪುರೀ ಶಾಸ್ತ್ರಿಗಳ ಚರಿತ್ರೆ', ಮೈಸೂರು, ೧೯೧೯, ಪು. ೧೭). ಮುಮ್ಮಡಿಯವರು ತಮ್ಮ ಕಾಲದ ಗಣ್ಯವ್ಯಕ್ತಿಗಳನ್ನು ಗುರುತಿಸಲೆಂದು ಬರೆಯಿಸಿ, ಈಗ ಜಗನ್ಮೋಹನ ಅರಮನೆಯಲ್ಲಿ ನಿಕ್ಷೇಪಗೊಂಡಿರುವ ವರ್ಣಚಿತ್ರಸಂಪುಟದಲ್ಲಿ ಕೆಂಪುಶಾಸ್ತ್ರಿಗಳೆಂಬವರ ಒಂದು ಚಿತ್ರವೂ ಇದ್ದು, ಅದು ಬಲು ಮಟ್ಟಿಗೆ ಈ ಕವಿಯದೇ ಇರಬಹುದು. ಈ ಕವಿಯ ಪುತ್ರ ಕೆಂಪು ರಾಮಾಶಾಸ್ತ್ರಿಗಳೆಂದೂ ಈ ಶಾಸ್ತ್ರಿಗಳ ಮೊಮ್ಮಗ ಕೆಂಪು ರಾಮಾಪಂಡಿತರೆಂದೂ ಮೇಲೆ ಉಲ್ಲೇಖಿಸಿದ ಆಕರದಿಂದಲೇ ತಿಳಿದುಬರುತ್ತದೆ. ಹೀಗಾಗಿ ಮನೆತನ ಹಾಗೂ ವ್ಯವಹಾರದ ವಲಯಗಳಲ್ಲಿ ಈ ಕೆಂಪುಶಾಸ್ತ್ರಿ, ಕೆಂಪು ನಾರಾಯಣ(ಶಾಸ್ತ್ರಿ) ಎಂಬ ಉಪನಾಮಗಳಿಂದಲೇ ಕವಿ ಪರಿಚಿತನಾಗಿದ್ದನೆಂದು ತಿಳಿಯವುದು ಶಕ್ಯ. 'ಮುದ್ರಾಮಂಜೂಷ'ದ ಪ್ರಥಮಪರಿಷ್ಕರಣದ ಕಾಲಕ್ಕೆ, ಅದರ ಪರಿಷ್ಕರಣಕರ್ತರು ಆ ಉಪನಾಮದ ಪ್ರಚುರತೆಯನ್ನು ಲಕ್ಷಿಸಿ, ಮನೆತನದ ಜನದ ಒಪ್ಪಿಗೆಯನ್ನು ಬಹುಶಃ ಪಡೆದು, ಗ್ರಂಥಾದಿಯಲ್ಲಿ ಅದು ಬರಬೇಕಾದ ಆವಶ್ಯಕತೆಯನ್ನು ಮನಗಂಡು, ಹಾಗೆ ತಿದ್ದಿ ಸೇರಿಸಿರಬಹುದೆಂದು ತೋರುತ್ತದೆ. ಈಗ ಅದೇ ಕರ್ತೃನಾಮವಾಗಿ ಪ್ರತಿಷ್ಠೆಗೊಂಡಿದೆ.

ಕೆಂಪು ನಾರಾಯಣ ಎಂಬ ಹೆಸರಿನಲ್ಲಿ 'ಕೆಂಪು' ವಿಶೇಷಣ ಏನು ಹೇಳುತ್ತದೆ ? ಅದು ಸುಂದರವೆಂಬರ್ಥವನ್ನು (ಸುಂದರ/ಚೆನ್ನ/ಚೆಲುವ/ಅಳಹಿಯ) ಹೇಳುವುದೇ ? ಮನೆತನಕ್ಕೆ ಪರಂಪರೆಯಿಂದ ಬಂದುದೇ ? ಬಹುಶಃ ಇರಲಾರದು. ಕವಿಯ ದೇಹಾಕೃತಿಯ ಮಿರುಗುವ ಹೊಂಬಣ್ಣ/ಗೌರಚ್ಛಾಯೆ ಆ ವಿಶೇಷಣಕ್ಕೆ ಕಾರಣವಾಗಿದ್ದು, ಆ ಹೆಸರಿನ ಪ್ರಸಿದ್ಧಿಯಿಂದ ಸಂತತಿಯವರ ಹೆಸರಿಗೂ ಅದು ಸೇರುವಂತಾಗಿರಬೇಕು. ಈಗಲೂ ಈ ಕುಟುಂಬದ ಸದಸ್ಯರಲ್ಲಿ ಕೆಲವರ ದೇಹಾಕೃತಿ ಇದನ್ನು ಸಮರ್ಥಿಸುವಂತೆಯೇ ಇದೆ. ಮುಮ್ಮಡಿಯವರ ಕಾಲದಲ್ಲಿ ಒಂದೇ ಹೆಸರಿನ ವೈದಿಕರೂ ವಿದ್ವಾಂಸರೂ ಹಲವರಿರುತ್ತಿದ್ದುದರಿಂದ, ಗುರುತಿಟ್ಟುಕೊಳ್ಳಲು ಅನುಸರಿಸಿದ ವಿಧಾನಗಳಲ್ಲಿ ಈ 'ಕೆಂಪು' ವಿಶೇಷಣ ದೊರೆಗೆ, ಅವನ ಪಂಡಿತಮಂಡಲಿಗೆ ಸಹಕಾರಿಯಾಯಿತೆಂದು ತೋರುತ್ತದೆ. ದೊರೆ ಬರಸಿದ ವರ್ಣಚಿತ್ರಗಳಲ್ಲಿ ಇನ್ನೊಬ್ಬರಿದ್ದಾರೆ ; ಇವರು ರಾಮಾಯಣದ ಕೆಂಪು ಶಾಸ್ತ್ರಿಗಳು. ಇವರ ಪ್ರತ್ಯೇಕತೆಯನ್ನು 'ರಾಮಾಯಣದ' ಎಂಬ ವಿಶೇಷಣ ಹೇಳುತ್ತದೆ.

ಈ ವಿವೇಚನೆಯ ಬೆಳಕಿನಲ್ಲಿ ಕವಿಯ ಹೆಸರಿನ ವಿಚಾರವಾಗಿ ಹೇಳಬಹುದಾದ ಮಾತು ಎಂದರೆ : ಕವಿಯ ನಿಜವಾದ, ಎಂದರೆ ತಂದೆತಾಯಿಗಳಿಟ್ಟ, ಹೆಸರು ನಾರಾಯಣ ಶಾಸ್ತ್ರಿ ಎಂದಿರುತ್ತದೆ. ಕೃತಿಯೊಳಗಿನ ನಾರಾಯಣ ಶರ್ಮ ಎಂಬ ಪ್ರಕಟವಾದ ಹೆಸರು ಪ್ರವರಪೂರ್ವಕವಾಗಿ ಹೇಳುವ ಒಂದು ಅಭಿಧಾನವಿಶೇಷವಾಗಿರುತ್ತದೆ. ಇವುಗಳ ಸಂಕ್ಷಿಪ್ತ ರೂಪವನ್ನು, ನಾರಾಯಣ ಎಂಬುದನ್ನು, ತನ್ನ ವಿನಯವನ್ನು ಸೂಚಿಸಲು ಕವಿ ಒಮ್ಮೆಯಷ್ಟೇ ಬಳಸಿದ್ದಾನೆ. ರೂಢಿಯ ಉಪನಾಮಗಳಲ್ಲಿ ಕೆಂಪು ಶಾಸ್ತ್ರಿ, ಕೆಂಪು ನಾರಾಯಣ ಶಾಸ್ತ್ರಿ ಮೊದಲಾದುವನ್ನು ಲಕ್ಷಿಸಿ, ಕೃತಿಯ ಮಟ್ಟಿಗೆ ಕೆಂಪು ನಾರಾಯಣ ಎಂದು ಗ್ರಹಿಸಿ

ದಾಖಲಿಸಲು ಬಹುಶಃ ಕಾರಣವಾದ ವ್ಯಕ್ತಿ ಪ್ರಥಮಪರಿಷ್ಕರಣದ ಕರ್ತೃ ಜೆ. ಸ್ಟೀವೆನ್ ಸನ್ ಅವರು. ಕಾಲಕ್ರಮದಲ್ಲಿ ನಿಜನಾಮ ಪೂರ್ತಿಯಾಗಿ ಮರೆಯಾಯಿತು.

ಕವಿ ನಾರಾಯಣ ಶರ್ಮ (ಎಂದರೆ ನಾರಾಯಣ ಶಾಸ್ತ್ರಿ) ತನ್ನ ವಿಚಾರವಾಗಿ 'ಮುದ್ರಾಮಂಜೂಷ'ದಲ್ಲಿ ಹೆಚ್ಚಾಗಿ ಏನೂ ಹೇಳಿಕೊಂಡಿಲ್ಲ. ಈ ಕಾಲದಲ್ಲಿಯೇ ಜೀವಿಸಿದ್ದ ರಾಮಕೃಷ್ಣ ಶಾಸ್ತ್ರಿ ('ಭುವನ ಪ್ರದೀಪಿಕೆ'ಯ ಕರ್ತೃ),ಚಂದ್ರಸಾಗರವರ್ಣಿ ('ಜಿನರಾಮಾಯಣ' ಮೊದಲಾದ ಕೃತಿಗಳ ಕರ್ತೃ), ಶಾಂತಿರಾಜ ಪಂಡಿತ (ಹಾಡುಗಳ ಕರ್ತೃ), ವೆಂಕಟರಾಮಾಶಾಸ್ತ್ರಿ ಮೊದಲಾದವರ ಹಾಗೆ ಏಕೆ ತನ್ನ ಇತಿವೃತ್ತವಿವರಗಳನ್ನು ಇವನು ಕೊಡುವುದಿಲ್ಲವೋ ತಿಳಿಯದು. ಇಂತಹ ಬೃಹತ್ ಪ್ರಮಾಣದ, ವಸ್ತುನಾವೀನ್ಯದ, ಅತಿಶಯ ಕಲಾತ್ಮಕವೂ ಹೊಸಗನ್ನಡ ಸಾಹಿತ್ಯದ ಚಿರಕೃತಿಯೂ ಆಗಿರುವ ಗದ್ಯಗ್ರಂಥವನ್ನು ರಚಿಸಿದ ಕವಿಗೆ ಈ ವಿಷಯದಲ್ಲಿ ಇಷ್ಟು ನಿರಾಸಕ್ತಿ ಹುಟ್ಟಲು ವಿನಯಗುಣವೇ ಕಾರಣವಿರಬಹುದೇನೋ.

ಕವಿ ತಾನು ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಿತನಾಗಿದ್ದುದನ್ನು ಹೇಳಿದ್ದಾನೆ. ಈ ದೊರೆ ೧೭೯೪ ರಲ್ಲಿ ಹುಟ್ಟಿ, ೧೭೯೯ರಿಂದ ೧೮೬೮ರ ವರೆಗೆ ಮೈಸೂರುಸಂಸ್ಥಾನವನ್ನು ಆಳಿದರು ; ಇವರ ಕಾಲದಲ್ಲಿ ವಿದ್ಯೆಗೆ, ವಿದ್ವಾಂಸರಿಗೆ ದೊರೆತ ಪ್ರೋತ್ಸಾಹ ಮೈಸೂರು ಸಂಸ್ಥಾನದ ಸಾಹಿತ್ಯೇತಿಹಾಸದಲ್ಲಿ ಒಂದು ಸುವರ್ಣಾಧ್ಯಾಯವನ್ನೇ ಬರೆಯುವ ಮಟ್ಟಿಗೆ ಉತ್ಕೃಷ್ಟವಾದುದು. ಸಂಗೀತ ಚಿತ್ರ ಮುಂತಾದ ಲಲಿತಕಲೆಗಳಲ್ಲಿಯೂ ಸಂಸ್ಕೃತ ಕನ್ನಡ ಭಾಷಾಸಾಹಿತ್ಯಗಳಲ್ಲಿಯೂ ತರ್ಕ ವ್ಯಾಕರಣ ಅಲಂಕಾರ ವೈದ್ಯ ಜ್ಯೋತಿಷ ಮಂತ್ರಶಾಸ್ತ್ರ ವೇದಾಂತ ಮೊದಲಾದ ಶಾಸ್ತ್ರಭಾಗಗಳಲ್ಲಿಯೂ ಪ್ರಸಿದ್ಧರಾದ ಹಲವರು ಇವರ ಆಸ್ಥಾನದಲ್ಲಿ ಭೂಷಣಪ್ರಾಯರಾಗಿ ಶೋಭಿಸುತ್ತಿದ್ದರು. ಜೊತೆಗೆ, ಇವರೇ ಸ್ವತಃ ೫೦ರ ಮೇಲ್ಪಟ್ಟು ಕೃತಿಗಳನ್ನು ರಚಿಸಿದ್ದಾಗಿಯೂ ತಿಳಿದಿದೆ. ಇವೆಲ್ಲ ಬಲುಮಟ್ಟಿಗೆ ಆಸ್ಥಾನದ ಕವಿಗಳ ಇಲ್ಲವೆ ಪ್ರತ್ಯಕ್ಷ ಪರೋಕ್ಷ ಆಶ್ರಯದಲ್ಲಿ ಬೆಳೆದ ಬೇರೆ ಕವಿಗಳ, ಪಂಡಿತರ ರಚನೆಗಳಾಗಿದ್ದು, ಪ್ರಭುಗಳಿಗೆ ಅಂಕಿತವಾಗಿರುವಂತೆ ತೋರುವುದು. ಇಂತಹ ಉದಾರ ಪ್ರಭುವಿನ ಆಶ್ರಯ ಕವಿ ನಾರಾಯಣ ಶರ್ಮನಿಗೆ ಕೃತಿರಚನೆಗೆ ತಕ್ಕ ಪ್ರೋತ್ಸಾಹಕ ವಾತಾವರಣವನ್ನು ನಿರ್ಮಿಸಿದುದು ಸ್ವಾಭಾವಿಕವಾಗಿಯೇ ಇದೆ. ಕವಿ ಮುಮ್ಮಡಿಯವರ ಆಶ್ರಯದ ಕವಿಯೆಂಬುದು ಕೃತಿಯ ಉಪಸಂಹಾರಭಾಗದಿಂದ ವಿದಿತವೇ ಇದೆ.

ಚಿಕ್ಕದೇವರಾಜ ಒಡೆಯರ ಕಾಲದ ಹಾಗೂ ತತ್ಕಾಲದ ರಾಜಕೀಯ ಸಂದರ್ಭಗಳು, ಮುಖ್ಯವಾಗಿ ಟಿಪ್ಪುವಿನ ಪತನಾನಂತರ ಬ್ರಿಟಿಷ್ ಮತ್ತು ದೇಶೀಯ ಸಂಸ್ಥಾನಿಕರ ನಡುವೆ ನಡೆಯುತ್ತಿದ್ದ ಸಂಘರ್ಷಗಳು ಯಾವುದೋ ಒಂದು ರೀತಿಯಲ್ಲಿ ಈ ತೆರನ ಇತಿಹಾಸಕಥೆಯ ರಚನೆಗೆ ಪ್ರೇರಣೆ ಪ್ರಚೋದನೆಗಳನ್ನು ನೀಡಿರಬಹುದು (ನೋಡಿ : ಎಚ್. ಎಂ. ಎಸ್. ರಾವ್, 'ಕೆಂಪು ನಾರಾಯಣ : ಕವಿ ಮತ್ತು ಕೃತಿ', ೧೯೭೭, ಪು. ೧೫೪-೫೭; ಟಿ. ವಿ. ವಿ. ಶಾಸ್ತ್ರೀ, 'ಹೊಸಗನ್ನಡ ಸಾಹಿತ್ಯ : ಕೆಲವು ನೋಟಗಳು' ೧೯೮೨, ಪು. ೯೮-೧೦೩). ಆದರೆ ಸೃಜನಶೀಲಪ್ರತಿಭೆ ಪ್ರಖರವಾಗಿದ್ದುದರಿಂದ, ತಾನು ಅಭ್ಯಾಸಮಾಡಿದ 'ಮುದ್ರಾರಾಕ್ಷಸ'ನಾಟಕವೂ ಅದಕ್ಕೆ ಇರುವ ಪೂರ್ವಕಥಾವಿವರಗಳಿರುವ ಉಪೋದ್ಘಾತವೂ ತಾವೇ ಕೃತಿರಚನೆಗೆ ಪ್ರೇರಣೆ ನೀಡಿರುವುದು ಹೆಚ್ಚು ಸಂಭಾವ್ಯವಾದುದು.

ಕವಿ ತನ್ನ ಗ್ರಂಥಕ್ಕೆ ಮುಖ್ಯ ಆಧಾರವಾಗಿ ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕವನ್ನು ಉತ್ತರಾರ್ಧದಲ್ಲಿ ಅವಲಂಬಿಸಿದ್ದರೂ ಸ್ವಾರ್ಜಿತವಾದ ಸಂಸ್ಕೃತ ಭಾಷಾಸಾಹಿತ್ಯಗಳ ಅಧ್ಯಯನದ ಫಲವಾಗಿ ಕೌಟಲೀಯ 'ಅರ್ಥಶಾಸ್ತ್ರ', 'ಶುಕ್ರನೀತಿಸಾರ', 'ಕಾಮಂದಕ ನೀತಿಸಾರ' ಭರ್ತೃಹರಿ ಶತಕತ್ರಯ, ಸಂಸ್ಕೃತ ಪುರಾಣಗಳು ಹಾಗೂ ರಾಮಾಯಣ ಮಹಾಭಾರತಗಳು, ವೇದಾಂತಗ್ರಂಥಗಳು, ತರ್ಕ ನ್ಯಾಯ ಮತ್ತು ವೈದ್ಯಶಾಸ್ತ್ರ ಗ್ರಂಥಗಳು ಈ ಮೂಲಗಳಿಂದಲೂ ಯಥೋಚಿತವಾಗಿ ಪ್ರಯೋಜನ ಪಡೆದಿರುವನೆಂದು ಹೇಳಬಹುದು. ಯಜ್ಞಯಾಗಗಳ ನಿರ್ವಹಣೆ, ಸ್ವಶಾಖೆಯ ವೇದಪಾಠ ಇವುಗಳನ್ನು ಕವಿ ಬಲ್ಲವನೆಂದು ಸುಲಭವಾಗಿ ತಿಳಿಯಲವಕಾಶವಿದೆ.

ಕವಿ ತಾನು ಹೊಯಿಸಣಿಗೆ ಕುಲದಲ್ಲಿ ಹುಟ್ಟಿದವನಾಗಿ ಹೇಳಿಕೊಂಡಿದ್ದಾನೆ. ಈ ಕುಲ ಕನ್ನಡ ಮನೆಮಾತಾಗಿರುವ, ವಿಶೇಷವಾಗಿ ಹಳೆಯ ಮೈಸೂರು ಸಂಸ್ಥಾನದ ಹಾಸನ, ಮೈಸೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ವಾಸವಾಗಿರುವ, ಹೊಯ್ಸಳ ಕರ್ಣಾಟಕರೆಂಬ ಸ್ಮಾರ್ತಬ್ರಾಹ್ಮಣ ಪಂಗಡವೇ ಆಗಿದೆ. ಸಾಹಿತ್ಯಕ್ಷೇತ್ರದಲ್ಲಿ ಈ ಪಂಗಡದವರ ಕೊಡುಗೆ ವಿಶೇಷ ಉಲ್ಲೇಖಕ್ಕೆ ಅರ್ಹವಾದುದು. ನಾರಾಯಣ ಶರ್ಮ ಈ ಪಂಗಡದ ಒಂದು ಉಜ್ಜ್ವಲವಾದ ನಕ್ಷತ್ರ.

ಈಚೆಗೆ ಈ ಕವಿಯ ಹಾಗೂ ಕೃತಿಯ ಸಂಬಂಧದಲ್ಲಿ ನಡೆದಿರುವ ಅಧ್ಯಯನದ ಮೂಲಕ (ಕೆ. ಶಂಕರ ನಾರಾಯಣ ಉಡುಪ, 'ಮುದ್ರಾಮಂಜೂಷ': ಒಂದು ಸಮಗ್ರ ಅಧ್ಯಯನ, ಅಪ್ರಕಟಿತ ಮಹಾಪ್ರಬಂಧ, ೧೯೯೫) ಕವಿ ಆತ್ರೇಯಸ ಗೋತ್ರಜನೆಂದೂ ಶಾಲಿವಾಹನ ಶಕೆ ೧೬೯೫ ರಲ್ಲಿ ಎಂದರೆ, ಕ್ರಿ. ಶ. ೧೭೭೩ರಲ್ಲಿ ಜನಿಸಿದನೆಂದೂ ತಂದೆ ರಾಮಾಶಾಸ್ತ್ರಿಯೆಂದೂ ತಿಳಿದಿದೆ. ಕವಿಯ ಮನೆತನದ ಬೆಂಗಳೂರು ಶಾಖೆಯವರಲ್ಲಿ ದೊರೆತು ಈಗ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದ ಗ್ರಂಥಭಂಡಾರದಲ್ಲಿ ನಿಕ್ಷಿಪ್ತವಾಗಿರುವ ಹಸ್ತಪ್ರತಿಗಳಲ್ಲಿ ಒಂದರ ಬಿಡಿಹಾಳೆಗಳಲ್ಲಿ ಕವಿಯ ಜನನಕಾಲವನ್ನು ಪರೋಕ್ಷವಾಗಿ ತಿಳಿಸುವ ಮಾಹಿತಿ ಹೀಗಿದೆ :

"ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೬೯೫ನೇ ಸಂದ ವರ್ತಮಾನ ವಿಜಯಸಂವತ್ಸರದ ಚೈತ್ರ ಬಹುಳ ೯ (ಕುಜ) ಶ್ರವಣ ೩೫ || ಸಾಧ್ಯ ೧೧.೩೦ ತೈತಲೆ ೮ ಈ ಶುಭದಿವ್ಸದಲ್ಲಿ ರಾತ್ರಿ ೧೯ || ಘಳಿಗೆ ಮೇಲೆ ಚಂದ್ರೋದಯ ಕಾಲದಲ್ಲಿ ರಾಮಾಶಾಸ್ತ್ರಿಗಳಿಗೆ ಕೊಮಾರ ಜನನ."

'ಮುದ್ರಾಮಂಜೂಷ'ದ ಕರ್ತೃವೇ ಈ ಉಲ್ಲೇಖದಲ್ಲಿ ಉಕ್ತನಾಗಿರುವ ಕುಮಾರನೆಂಬುದು ಒಂದು ಸಂಭಾವ್ಯವಾದ ಊಹೆ. ಈ ತೇದಿಯ ವಿವರಗಳು ಕ್ರಿ. ಶ. ೧೫-೪-೧೭೭೩ (ವಾರ ಗುರುವಾರವಾಗುತ್ತದೆ) ಸರಿಬರುತ್ತವೆ ; ಮತ್ತು ಈ ಕಾಲಮಾನ ಕವಿಯ ಸಂಬಂಧವಾದ ಇತರ ಜೀವಿತವಿವರಗಳೊಂದಿಗೆ ಹೊಂದಿಕೊಳ್ಳುತ್ತದೆ. 'ಮುದ್ರಾಮಂಜೂಷ'ದ ರಚನೆಯ ಕಾಲಕ್ಕೆ ಕವಿಗೆ ೫೦ ವರ್ಷಗಳ ವಯಸ್ಸು ಎಂಬುದು ಸಹ ಇದರಿಂದ ತಿಳಿಯುತ್ತದೆ.

ಕವಿ, ಮೈಸೂರು ಜಿಲ್ಲೆಯ ತಿ. ನರಸೀಪುರದ ಗುಂಜಾ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯೆಂದೂ ಬಹುಶಃ ಅದೇ ಊರಿನಲ್ಲಿ ಅವನ ಜನನವಾಗಿರಬೇಕೆಂದೂ ತಿಳಿಯಲವಕಾಶ

ವಿದೆ. ಮನೆತನದ ಹಸ್ತಪ್ರತಿಯ ಮೊದಲಲ್ಲಿ ಆ ದೇವರಿಗೆ ನಮಸ್ಕಾರ ಹೇಳಿದೆಯೆಂಬುದನ್ನು ಈ ಸಂದರ್ಭದಲ್ಲಿ ನೆನೆಯಬಹುದು.

ಗ್ರಂಥಾಂತ್ಯದ ಗದ್ಯಭಾಗದಲ್ಲಿ ಪ್ರಭುವಿನ ಶುಭಾಶಂಸನೆಯೂ ಗ್ರಂಥರಚನ ಕಾಲವೂ ಹೆಚ್ಚಾಗಿ ಸೇರಿದೆ. ಗ್ರಂಥರಚನೆಯ ಕಾಲಸೂಚನೆ ಸಂಖ್ಯಾವಿಶಿಷ್ಟ ಸಂಕೇತಶಬ್ದಗಳಲ್ಲಿದ್ದು ("ಶಾಲೀವಾಹನಶರತ್ಸು ಗತಾಸು ಬಾಣಯುಗಮುನೀಂದುಸಂಖ್ಯಾಸು"), "ಅಂಕಾನಾಂ ವಾಮತೋ ಗತಿಃ" ಎಂಬ ಗಣನಪದ್ಧತಿಗೆ ಅನುಸಾರವಾಗಿ ವಿಶ್ಲೇಷಿಸಿದರೆ, ಅದು ಶಾಲಿವಾಹನ ಶಕವರ್ಷ ೧೭೪೫ ಎಂದಾಗುತ್ತದೆ ; ಇದಕ್ಕೆ ಸಂವಾದಿಯಾದ ಕ್ರಿಸ್ತಶಕ ವರ್ಷ ೧೮೨೩. ಈ ತೇದಿಯೇ 'ಮುದ್ರಾಮಂಜೂಷ'ದ ರಚನೆಯ ಕಾಲ. ಈ ವೇಳೆಗೆ ಮುಮ್ಮಡಿಯವರಿಗೆ ೨೯ರ ಹರಯ. ಕವಿ ತಾನು ಬ್ರಾಹ್ಮಣನೆಂಬ ಕಾರಣಕ್ಕಾಗಿಯೇ ಅಲ್ಲದೆ ವಯಸ್ಸಿನಿಂದ ಹಿರಿಯವನೂ ಇದ್ದುದರಿಂದ ಪ್ರಭುವಿನ ಶುಭಾಶಂಸನೆ ಸ್ವಾಭಾವಿಕವಾಗಿಯೇ ಇದೆ. ಗ್ರಂಥದ ಆದಿಯಲ್ಲಿ ಚಾಮುಂಡಿಯ ಸ್ತುತಿಯಿದ್ದು, ಇದು ಪ್ರಭುವಿನ ಸಲುವಾಗಿ ಎನ್ನುವುದು ರಚನೆಯ ರೀತಿಯಿಂದಲೇ ತಿಳಿಯುತ್ತದೆ ; ಅಂತ್ಯದಲ್ಲಿ ಕವಿಯ ಸ್ವವಿನಯದ ನಿವೇದನೆಯಿದೆ.

ನಾರಾಯಣ ಶರ್ಮನು ಮುಮ್ಮಡಿಯವರ ಆಶ್ರಿತನಾಗಿದ್ದನೆನ್ನುವಾಗ ಆತ ಆಸ್ಥಾನ ವಿದ್ವಾಂಸನಾಗಿ ಮನ್ನಣೆ ಪಡೆದಿದ್ದನೇ ಎಂಬ ಪ್ರಶ್ನೆಗೆ ಅವಕಾಶವಾಗುತ್ತದೆ. ಉತ್ತರ ಸ್ಪಷ್ಟವಿಲ್ಲ. ಆ ಕಾಲದ ಗಣ್ಯವಿದ್ವಾಂಸರೆಂದು ಗುರುತಿಸಿರುವ ಸಾಂದರ್ಭಿಕಸಾಹಿತ್ಯದ ಉಲ್ಲೇಖಗಳಲ್ಲಿ ಆತನ ಹೆಸರು, ಜೀವನ ಸಾಧನೆಗಳನ್ನು ಯಾರಾದರೂ ಉಲ್ಲೇಖಿಸಿರುವಂತೆ ತೋರದು. ಪಟ್ಟಿಗಳಲ್ಲಿ ಶಾಸ್ತ್ರಸಾಹಿತ್ಯ ವೇದಾಂತವಿಷಯಗಳಲ್ಲಿ ತಜ್ಞರಾಗಿದ್ದವರ ಉಲ್ಲೇಖಗಳೇ ಸಾಮಾನ್ಯ. ಇದು ಏನೇ ಇದ್ದರೂ ಒಂದು ಊಹೆಗೆ ಅವಕಾಶವಿದೆ. ಅದೆಂದರೆ, ಕವಿಯ ಮಗ ಕೆಂಪು ರಾಮಾಶಾಸ್ತ್ರಿಯೂ ಆ ಸಂತತಿಯಲ್ಲಿ ಬಂದ ಇತರರೂ, ಮುಖ್ಯವಾಗಿ ಕವಿಯ ಪ್ರಪೌತ್ರ ಕೆಂಪು ರಾಮಾಪಂಡಿತನೂ, ವೈದ್ಯವೃತ್ತಿಯಲ್ಲಿ ಗಣ್ಯರಾಗಿದ್ದುದು ಗರಳಪುರೀ ಶಾಸ್ತ್ರಿಗಳ ಜೀವನಚರಿತ್ರೆಯನ್ನು ಕುರಿತ ಆಕರದಲ್ಲಿ ಉಕ್ತವಾಗಿದೆ. ಕೆಂಪು ರಾಮಾಶಾಸ್ತ್ರಿ ಅರಮನೆಯ ವೈದ್ಯಪಂಡಿತನಾಗಿದ್ದನೆಂಬುದರಿಂದ ಅವರ ತಂದೆಯ ಸ್ಥಾನವೇ ಆತನಿಗೆ ದೊರೆತಿರಬೇಕು. ಎಂದರೆ ನಾರಾಯಣ ಶರ್ಮ ಮುಮ್ಮಡಿಯವರ ಆಸ್ಥಾನದಲ್ಲಿ ವೈದ್ಯಪಂಡಿತನಾಗಿ ಸ್ಥಾನ ಪಡೆದಿದ್ದಿರಬೇಕು. ಇದನ್ನು ಸಮರ್ಥಿಸುವಂತೆ, ಕವಿಯ ಸಂತತಿಯ ಈಗಿನ ಒಂದು ಕುಟುಂಬದಲ್ಲಿ, 'ಮುದ್ರಾರಾಕ್ಷಸ', 'ಮುದ್ರಾಮಂಜೂಷ', 'ಶಿಶುಪಾಲ ವಧ' ಇವುಗಳ ಹಸ್ತಪ್ರತಿಗಳ ಜೊತೆಗೇ ಹಲವು ವೈದ್ಯಗ್ರಂಥಗಳು ನಿಕ್ಷೇಪಗೊಂಡಿದ್ದುದನ್ನು (ಈಗ ಇವು ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದ ಹಸ್ತಪ್ರತಿಭಂಡಾರವನ್ನು ಸೇರಿವೆ) ಇಲ್ಲಿ ಉಲ್ಲೇಖಿಸಬಹುದಾಗಿದೆ. ಅಲ್ಲದೆ ಕೃತಿಯೊಳಗಿನ ವೈದ್ಯಕೀಯ ವಿವರಗಳು ಇದನ್ನು ಸಮರ್ಥಿಸುವಂತಿವೆ.

ನಾರಾಯಣ ಶರ್ಮನ ಕುಟುಂಬದೊಂದಿಗೆ ಅವನ ಜೀವಿತಕಾಲದಲ್ಲಿಯೂ ಅನಂತರದಲ್ಲಿಯೂ ಪ್ರಖ್ಯಾತ ಸಂಸ್ಕೃತ ಕನ್ನಡ ವಿದ್ವಾಂಸರ ಬಾಂಧವ್ಯ ಬೆಸೆದುಕೊಂಡಿದೆಯೆಂಬುದು ಈಚಿನ ಶೋಧನೆಗಳಿಂದ ತಿಳಿದಿದೆ. ಆ ವಿವರಗಳು ಇಲ್ಲಿಗೆ ಅಗತ್ಯವಿಲ್ಲದಿದ್ದರೂ, ಸೋಸಲೆ ಗರಳಪುರೀ ಶಾಸ್ತ್ರಿ, ಸೋಸಲೆ ಅಯ್ಯ ಶಾಸ್ತ್ರಿ, ಎಸ್. ಜಿ. ಶಾಸ್ತ್ರಿ,

ಚಾಮರಾಜ ನಗರದ ಶ್ರೀಕಂಠ ಶಾಸ್ತ್ರಿ, ಚಾಮರಾಜ ನಗರದ ರಾಮಶಾಸ್ತ್ರಿ, ಎಂ. ಎಸ್. ಪುಟ್ಟಣ್ಣ ಹೀಗೆ ಕೆಲವರು ಆ ಬಂಧುವರ್ಗಕ್ಕೆ ಸೇರಿದವರು ಎಂಬುದನ್ನು ಇಲ್ಲಿ ನೆನೆಯ ಬಹುದಾಗಿದೆ. ಕನ್ನಡ ಮನೆಮಾತಿನ ಈ ಹೊಯ್ಸಳ ಕರ್ಣಾಟಕ ಬ್ರಾಹ್ಮಣಪಂಗಡದ ಸಾಹಿತ್ಯ ಮತ್ತು ವಿದ್ವತ್ತೆಗಳ ಪ್ರೀತಿ ಅನನ್ಯವಾದವು.

(೨) ಕೃತಿಪರಿಚಯ

'ಮುದ್ರಾಮಂಜೂಷ' ಎಂಬ ಕೃತಿ ಒಂದು ಗದ್ಯಗ್ರಂಥ. ಇದರ ಸ್ವರೂಪವನ್ನು ತಿಳಿಸುವ ಗ್ರಂಥಾದಿಯ ಭಾಗ ಪ್ರಚಲಿತಪರಿಷ್ಕರಣಗಳಲ್ಲಿ "ಈಗ ಕೆಂಪು ನಾರಾಯಣನೆಂಬ ಕವಿಯು ಕರ್ನಾಟಭಾಷೆಯಿಂದ ವಿಸ್ತರಿಸಿ ಇದಕ್ಕೆ ಮುದ್ರಾಮಂಜೂಷವೆಂಬ ಪೆಸರಿಟ್ಟು ಪೇಳ್ವನದೆಂತೆನೆ—" ಎಂಬುದಾಗಿದೆ ; ಗ್ರಂಥಾಂತ್ಯದಲ್ಲಿ "ಮುದ್ರಾಮಂಜೂಷಮೆಂಬ ಚಂಪೂಗ್ರಂಥದಲ್ಲಿ" ಎಂದೂ ಅಲ್ಲಿಯೇ ಕಾಲಸೂಚಕಪದ್ಯದಲ್ಲಿ "ಮುದ್ರಾಮಂಜೂಷಾಹ್ವಯಂ ಕಾವ್ಯಂ" ಎಂದೂ ಸೂಚನೆಗಳಿವೆ. ಆದರೆ ಹಸ್ತಪ್ರತಿಗಳಲ್ಲಿಯ ಗ್ರಂಥಾದಿಯ ಭಾಗ ಈ ರೀತಿಯಾಗಿದೆ : "ಈಗ ಮುದ್ರಾಮಂಜೂಷವೆಂಬ ಗ್ರಂಥದಿಂದ ಅನುಪೂರ್ವಕವಾಗಿ ಸುಲಭದಿಂ ಕಾವ್ಯಸರಣಿಯುಕ್ತವಾದ ಕನ್ನಡ ಭಾಷಾರೂಪದಿಂ ವಿವರಿಸಿ ಹೇಳುತ್ತಲಿದೇನೆ. ಅದೆಂತೆಂದರೆ—". ಗ್ರಂಥಾಂತ್ಯಕ್ಕೆ ಬಂದರೆ, ಇಲ್ಲಿ "ಮುದ್ರಾಮಂಜೂಷವೆಂಬ ಕಾವ್ಯಗ್ರಂಥದಲ್ಲಿ" ಎಂದೂ, ಅಲ್ಲಿಯೇ ಕಾಲಸೂಚಕಪದ್ಯದಲ್ಲಿ "ಮುದ್ರಾಮಂಜೂಷಾಹ್ವಯಂ ಕಾವ್ಯಂ" ಎಂದೂ ಅನುಕ್ರಮವಾಗಿ ಸೂಚನೆಗಳಿವೆ. ಈ ವ್ಯತ್ಯಾಸ ಗಮನಾರ್ಹವಾದುದು.

ಕವಿ ನಾರಾಯಣ ಶರ್ಮನಿಗೆ ತನ್ನ ರಚನೆಯನ್ನು ಕಾವ್ಯಸರಣಿಯುಕ್ತವಾದ ಕನ್ನಡ ಭಾಷೆಯಲ್ಲಿ ಸುಲಭವಾಗಿರುವಂತೆ ಬರೆಯುವುದೇ ಮುಖ್ಯವಾದ ಸಂಕಲ್ಪವಾಗಿತ್ತು. ಅದು ಅವನ ಮಟ್ಟಿಗೆ ಒಂದು ಕಾವ್ಯಗ್ರಂಥ. ಹೀಗಿರುವಾಗ, ಪ್ರಚಲಿತ ಪರಿಷ್ಕರಣಗಳಲ್ಲಿ 'ಮುದ್ರಾಮಂಜೂಷ'ವನ್ನು ಒಂದು ಚಂಪೂಗ್ರಂಥವೆಂದು ತಿದ್ದಿರುವುದಕ್ಕೆ ಕಾರಣವೇನು? ಕಾರಣ ಸ್ಪಷ್ಟ : ಹಸ್ತಪ್ರತಿಗಳಲ್ಲಿ ಇಲ್ಲದಿರುವ ಹಲವು ಸಂಸ್ಕೃತ ಸುಭಾಷಿತಗಳನ್ನು ಪ್ರಚಲಿತ ಪರಿಷ್ಕರಣಕರ್ತರು ಅಲ್ಲಲ್ಲಿ ಧಾರಾಳವಾಗಿ ತಾವೇ ಸೇರಿಸಿರುವದರಿಂದ (ಅಥವಾ ಅವರ ಸಲಹೆಯಂತೆ ಬೇರೊಬ್ಬರು ಸೇರಿಸಿರುವುದರಿಂದ) ರಚನೆ ಈಗ ಗದ್ಯಪದ್ಯನಿಬದ್ಧವಾಗಿ ಚಂಪುವಿನ ಲಕ್ಷಣವನ್ನು ಪಡೆಯಿತೆಂದು ಭಾವಿಸಿ, ಆ ತಿದ್ದುಪಾಡು ಮಾಡಿರಬೇಕು. ಅದಕ್ಕೆ ಅನುಸಾರವಾಗಿ ಗ್ರಂಥಾದಿಯಲ್ಲಿ ಸಹ 'ಕಾವ್ಯಸರಣಿಯುಕ್ತವಾದ' ಎಂಬ ಮಾತನ್ನು ಅವರು ತೆಗೆದಂತಿದೆ. ಒಂದು ಗದ್ಯಗ್ರಂಥದಲ್ಲಿ ಹತ್ತಾರು ನೂರಾರು ಸುಭಾಷಿತಗಳು ಸೇರಿದ ಮಾತ್ರಕ್ಕೆ ಅದು ಚಂಪುವಿನ ಲಕ್ಷಣ ಪಡೆಯುವುದಿಲ್ಲ ಎನ್ನುವುದು ಬಹುಶಃ ಪ್ರಚಲಿತ ಪರಿಷ್ಕರಣಕರ್ತರಿಗೆ ತಿಳಿದಿರಲಾರದು. ಅದಿರಲಿ. ಈ ವ್ಯತ್ಯಾಸದಿಂದಾಗಿ ಮುದ್ರಾಮಂಜೂಷ ಒಂದು ಗದ್ಯಗ್ರಂಥವಲ್ಲ, ಚಂಪೂಗ್ರಂಥ ಎಂಬುದಾಗಿ ತಪ್ಪಾಗಿ ಗ್ರಹಿಸುವುದಕ್ಕೆ ಅವಕಾಶವಾಗಿದೆ (ಎಚ್. ಎಮ್. ಎಸ್. ರಾವ್, ಪೂರ್ವೋಕ್ತ, ಪು. ೨೭). ಒಂದು ರಚನೆ ಏಕಕಾಲದಲ್ಲಿ ಒಂದು ಗದ್ಯಗ್ರಂಥವೂ ಚಂಪೂಗ್ರಂಥವೂ ಆಗಿರುವುದು ಶಕ್ಯವಿಲ್ಲವಷ್ಟೆ. 'ಮುದ್ರಾಮಂಜೂಷ' ನಿಸ್ಸಂದೇಹವಾಗಿ ಒಂದು ಶುದ್ಧ

ಗದ್ಯಗ್ರಂಥ ; ಹಳೆಯ ಪರಿಭಾಷೆಯಂತೆ ಗದ್ಯಕಥೆ ; ಹೊಸ ಪರಿಭಾಷೆಯಂತೆ ಕಾದಂಬರಿ. ಈಗಿನ ರೂಢಿಯಂತೆ ಅದನ್ನು ಒಂದು ಐತಿಹಾಸಿಕ ಕಾದಂಬರಿಯೆಂದು ಕರೆಯಬಹುದು. ಆದರೆ ಕವಿ ಇದನ್ನು ಕಾವ್ಯವೆಂದು ಏಕೆ ತಿಳಿದಿದ್ದಾನೆ ? ಅವನು ತನ್ನ ಗದ್ಯಗ್ರಂಥವನ್ನು ಕಾವ್ಯವೆಂದು ಕರೆದುದು ತಪ್ಪಲ್ಲ. ಅದು ಸಂಪ್ರದಾಯಕ್ಕೆ ಅವನು ಸಲ್ಲಿಸಿದ ಮನ್ನಣೆ. ದಂಡಿ ಭಾಮಹರು ಗದ್ಯರಚನೆಗಳನ್ನೂ ಕಾವ್ಯಪ್ರಭೇದಗಳಾಗಿಯೇ ಗಣಿಸಿದ್ದಾರೆ. ಸುಬಂಧು ಬಾಣ ದಂಡಿ ಮೊದಲಾದವರ ಪ್ರಾಚೀನ ಗದ್ಯಗ್ರಂಥಗಳು ಗದ್ಯಕಾವ್ಯಗಳೆಂದೇ ಮನ್ನಣೆ ಪಡೆದಿವೆ. ಕಾವ್ಯವೆನ್ನುವಲ್ಲಿಯೂ ಕಾವ್ಯಸರಣಿಯುಕ್ತವಾದುದು ಎನ್ನುವಲ್ಲಿಯೂ ಕವಿಗೆ ಪ್ರಕರಣವಿಭಜನೆ, ಸಮಾಸಭೂಯಸ್ತ್ವಲಕ್ಷಣ, ಕೃತಿವಸ್ತುವಿನ ಸ್ವರೂಪ ಎಲ್ಲ ಲಕ್ಷ್ಯದಲ್ಲಿ ಇದ್ದೇ ಇವೆ. ಆದರೆ ಪ್ರಕರಣಗಳ ಸೂಚನೆಗೆ ಅವನ ಬಳಸುವ 'ಆಶಯ' ಎಂಬ ಮಾತು ಮಾತ್ರ ಅಪ್ರಸಿದ್ಧವಾದುದು ಎಂದೇ ತೋರುತ್ತದೆ.

'ಮುದ್ರಾಮಂಜೂಷ' ಕಥೆಯೋ ಆಖ್ಯಾಯಿಕೆಯೋ ? ಈ ವಿಭಜನೆಯು ಅಷ್ಟು ಖಚಿತವಾದುದಲ್ಲ ಎನ್ನುವ ಚರ್ಚೆ ಪ್ರಾಚೀನ ಸಂಸ್ಕೃತ ಆಲಂಕಾರಿಕರಲ್ಲಿಯೇ ಬಂದಿದೆ. ಆದರೆ ಇತಿಹಾಸದ ಕಥಾಭಿತ್ತಿಯಿದ್ದು ಸಹ, ಕವಿಗೆ ಸಮಕಾಲೀನರಚನೆಯಲ್ಲವಾದ್ದರಿಂದಲೂ ಬೃಹತ್ಕಥೆ ಮೊದಲಾದ ಕಥಾಕೋಶಗಳಲ್ಲಿ ವಸ್ತು ಬೀಜಸ್ವರೂಪದಲ್ಲಿ ಗೋಚರಿಸುವುದರಿಂದಲೂ ಕಥೆಯ ಸ್ವಲ್ಪಭಾಗಕ್ಕೆ ಮೂಲವಾದ ವಿಶಾಖದತ್ತನ 'ಮುದ್ರಾರಾಕ್ಷಸ' ಸಹ ಅಂತಹ ಕಥಾಕೋಶಗಳನ್ನೇ ಆಶ್ರಯಿಸಿರುವುದರಿಂದಲೂ 'ಮುದ್ರಾಮಂಜೂಷ'ವನ್ನು ಒಂದು 'ಕಥೆ'ಯೆಂದು ತಿಳಿಯಬಹುದಾಗಿದೆ.

'ಮುದ್ರಾಮಂಜೂಷ'ದಲ್ಲಿ ಪ್ರಮಾಣಭೇದವಿರುವ ಆಶಯಗಳೆಂಬ ೧೮ ಪ್ರಕರಣಗಳಿವೆ. ಪ್ರತಿಯೊಂದು ಆಶಯವೂ ಘಟನೆಯ ಮುಖ್ಯವಾದ ತಿರುವು ಹಿಡಿದು ಮುಗಿಯುತ್ತ, ಮೊದಲಾಗುತ್ತ, ಕಥೆಯನ್ನು ಗಟ್ಟಿಯಾದ ಹಂದರದ ಮೇಲೆ ಕಟ್ಟಿ ನಿಲ್ಲಿಸುತ್ತದೆ. ಆಶಯಸಂಖ್ಯೆ ಮಹಾಭಾರತದ ಪರ್ವಸಂಖ್ಯೆಯನ್ನು ನೆನಪಿಸುವಂತಿರಬೇಕೆಂಬುದು ಕವಿಯ ಉದ್ದೇಶವಿರಬಹುದು. ಒಂದು ಬಗೆಯಲ್ಲಿ ಕಥೆಯ ಅಥವಾ ಆಶಯಗಳ ಸಾಮ್ಯವನ್ನು ಆಯೆರಡರ ನಡುವೆ ಗುರುತಿಸುವುದೂ ಸಾಧ್ಯ (ಎಚ್. ಎಂ. ಎಸ್. ರಾವ್, ಪೂರ್ವೋಕ್ತ, ಪು. ೫೫-೫೭). ನಾರಾಯಣ ಶರ್ಮನು ಆಗಾಗ್ಗೆ ಭಾರತಕಥೆಯ ಸಂದರ್ಭಗಳನ್ನು ಸಾದೃಶ್ಯಗಳಾಗಿ ತಂದಿರುವುದನ್ನೂ ಇಲ್ಲಿ ನೆನೆಯಬಹುದು.

ವಿಶಾಖದತ್ತನ ನಾಟಕ 'ಮುದ್ರಾರಾಕ್ಷಸ' ; ಕನ್ನಡಕೃತಿ 'ಮುದ್ರಾಮಂಜೂಷ'ಕ್ಕೆ ನಾಟಕದ ಹೆಸರು ಪ್ರೇರಣೆ ನೀಡಿರುವುದು ನಿಶ್ಚಯ. ನಾಟಕದ ಹೆಸರು ಪಾತ್ರ ಘಟನೆಗಳ ಪ್ರಾಶಸ್ತ್ಯದ ಮೇಲೆ. ಕಾದಂಬರಿಯ ಹೆಸರು ಪಾತ್ರ ಘಟನೆಗಳ ಮಹತ್ತ್ವವುಂಟು ಎನ್ನಬಹುದು. ಸಿದ್ಧಾರ್ಥಕನು ತಂದ ಕಪಟಲೇಖದಲ್ಲಿ ಪ್ರಸ್ತಾವಗೊಂಡ ಪರ್ವತರಾಜನ ಆಭರಣಗಳ ಮೂರು ಮಂಜೂಷಗಳೂ ಅವನೇ ಜೊತೆಗೆ ತಂದ, ಮಲಯಕೇತುವಿಂದ ರಾಕ್ಷಸನಿಗೆ ದತ್ತವಾಗಿ ಬಳಿಕ ಸಿದ್ಧಾರ್ಥಕನಿಗೆ ಮೆಚ್ಚಾಗಿ ದೊರೆತಿದ್ದ ಆಭರಣದ ಒಂದು ಮಂಜೂಷವೂ ರಾಕ್ಷಸನ ನಿರಸನ, ಚಂದನದಾಸನ ಬಂಧಮುಕ್ತಿಗೆ ರಾಕ್ಷಸನ ನಿಶ್ಚಯ, ಚಾಣಕ್ಯ-ರಾಕ್ಷಸರ ಸಮಾಗಮ ಮೊದಲಾದ ಪ್ರಮುಖಘಟನೆಗಳ ಸರಣಿಗೆ ದಾರಿಮಾಡಿದುವು. ರಾಕ್ಷಸಸಂಗ್ರಹವೆಂಬ ಚಾಣಕ್ಯನ ಅಂತಿಮಧ್ಯೇಯ ಫಲಿಸುವಂತೆ ಸಹಕರಿಸಿದುವು

ಎನ್ನುವುದರಿಂದ ಹೆಸರಿನ ಸಾರ್ಥಕತೆ ಸ್ಪಷ್ಟವಾಗಿದೆ.

(೩) ವಸ್ತುವಿವೇಚನೆ

೧. ಕಥೆಯ ಕೇಂದ್ರಸ್ಥಾನ ಗೌಡದೇಶದ ರಾಜಧಾನಿ ಪಾಟಲೀಪುರ. ವಂಶದ ಹಿರಿಯ ಸರ್ವಾರ್ಥಸಿದ್ಧಿಯೆಂಬ ರಾಜ. ಇವನ ಪತ್ನಿ ಸುನಂದೆ ರಾಜಪುತ್ರಿ ; ಪ್ರಿಯಪತ್ನಿ ಮುರೆ ಶೂದ್ರಪುತ್ರಿ. ಅರಸರ ವಿಚಾರದಲ್ಲಿ ಈ ತೆರನ ಸಂಬಂಧ ಹಿಂದಿನಿಂದಲೂ ಇದ್ದುದೇ ; ಮಹಾಭಾರತದ ಕಾಲದಿಂದಲೂ ಇದು ಒಂದು ಸಾಮಾಜಿಕಸಮಸ್ಯೆಗೆ, ಸಂಘರ್ಷಕ್ಕೆ ಕಾರಣವಾಗಿ, ತಾನು ಹುಟ್ಟುಹಾಕಿದ ನೀಚೋಚ್ಚಭಾವನೆಗೆ ಜನತೆ ತೆತ್ತಿರುವ ಬೆಲೆ ದೊಡ್ಡದು. ದಿಟವಾಗಿ ನಂದ ಚಂದ್ರಗುಪ್ತರ ವೈಷಮ್ಯದ ನೆಲೆ ಇರುವುದು ಇಲ್ಲಿಯೇ. ಇದಕ್ಕೆ ನಂದರು ತಮ್ಮ ತಲೆಗಳನ್ನೇ ಬಲಿಕೊಟ್ಟರು. ಕವಿಯ ಆಶ್ರಯದಾತನ ಕಾಲದಲ್ಲಿ ರಾಜ್ಯದ ಉತ್ತರಾಧಿಕಾರತ್ವನಿರ್ಣಯ ಸಮಸ್ಯೆಯಾದುದು ಇಂತಹ ಕಾರಣಗಳಿಂದಲೇ.

ಸರ್ವಾರ್ಥಸಿದ್ಧಿಗೆ ದಂಡನೀತಿಪ್ರವೀಣನೂ ದಕ್ಷನೂ ಆದ ರಾಕ್ಷಸನು ಮಂತ್ರಿ. ಈತನೇ ಕಥೆಯಲ್ಲಿ ಚಂದ್ರಗುಪ್ತ ಚಾಣಕ್ಯರಿಗೆ ಪ್ರತಿಕಕ್ಷಿಯೆಂದು ಎಲ್ಲ ಆಕರಗಳೂ ಚಿತ್ರಿಸಿವೆ. ರಾಕ್ಷಸ ಎಂಬ ಹೆಸರು ವಿಲಕ್ಷಣವಾದ್ದು ; ಅದರಲ್ಲಿಯೂ ಬ್ರಾಹ್ಮಣನಾದ ಮಂತ್ರಿಗೆ ಅದು ತಕ್ಕುದಲ್ಲ. ಸುಬುದ್ಧಿಶರ್ಮನೆಂಬ ಬ್ರಾಹ್ಮಣನು ನಂದರ ಮಂತ್ರಿಯಾದ ಮೇಲೆ ತನ್ನ ಶೌರ್ಯದಿಂದಾಗಿ ಹಾಗೆ ಹೆಸರಾದನೆಂದು ಅನಂತಭಟ್ಟನ ಸೂಚನೆಯಿದೆ. ಬಿರುದುಗಳಲ್ಲಿ ಉತ್ತರಪದವಾಗಿ ಆ ಮಾತು ಬರುವಂತಿದೆಯಾದ್ದರಿಂದ ಅದು ದಿಟವಿರಬಹುದು; ಅಮಾತ್ಯರಲ್ಲಿ ಅವನು ಅಪ್ರತಿಹತಶೌರ್ಯ ಬುದ್ಧಿಶಕ್ತಿಗಳುಳ್ಳವನು. ಮುದ್ರಾಮಂ.ದಲ್ಲಿ ದೊರೆಯ ಅಷ್ಟಮಂತ್ರಿಗಳಲ್ಲಿ ಇವನೇ ಪ್ರಮುಖನೆಂದೂ ಸಂಧಿವಿಗ್ರಹಿಯೆಂದೂ ಹೇಳಿರುವುದಲ್ಲದೆ, ನವನಂದರ ಯೋಗಕ್ಷೇಮವೆಲ್ಲ ಅವನ ಜವಾಬ್ದಾರಿಯೆಂದೇ ದೊರೆ ನಿಯಮಿಸಿದ್ದಂತೆಯೂ ತಿಳಿಯುತ್ತದೆ.

ಸರ್ವಾರ್ಥಸಿದ್ಧಿಗೆ ಮಕ್ಕಳಿರಲಿಲ್ಲ. ಅದು ಪರಿಹಾರವಾದುದು ವೀತಿಹವ್ಯರೆಂಬ ಮುನಿಶ್ರೇಷ್ಠರ ಅನುಗ್ರಹದಿಂದ (ಉಳಿದ ಆಕರಗಳಲ್ಲಿ ತಪಸ್ವಿಯೆಂದೋ ಬ್ರಾಹ್ಮಣಶ್ರೇಷ್ಠನೆಂದೋ ಹೇಳಿದೆ). ಮುನಿಯ ಪಾದೋದಕದ ಒಂಬತ್ತು ಹನಿಗಳು ಹಿರಿಯ ರಾಣಿಯ ತಲೆಯ ಮೇಲೆ, ಒಂದು ಉಪಪತ್ನಿಯ ತಲೆಯ ಮೇಲೆ ಬಿದ್ದುವು ಎನ್ನುವಾಗ, ಮುದ್ರಾಮಂ.ದಲ್ಲಿ ದೊಡ್ಡವಳ ತಲೆಯ ಮೇಲೆ ಬಿದ್ದವು ಕ್ಷಣಕಾಲ ಮಾತ್ರ ನಿಂತು ಬಳಿಕ ಜಾರಿಹೋದವು, ಮುರೆಯ ತಲೆಯ ಮೇಲೆ ಬಿದ್ದುದು ಸ್ಥಿರವಾಗಿ ನಿಂತಿತು ಎಂಬ ಸಂಕೇತ ನಂದರ ಶೀಘ್ರಪತನವನ್ನೂ ಚಂದ್ರಗುಪ್ತನ ದೃಢವಾದ ಅಭ್ಯುದಯವನ್ನೂ ಸೂಚಿಸುತ್ತದೆ. ಈ ಸಂದರ್ಭದಲ್ಲಿ "ನಭೋಮಂಡಲದಲ್ಲಿ ರಾಜಿಸುವ ಚಂದ್ರಮಂಡಲವೊಂದೇ; ಜಲತರಂಗಗಳಲ್ಲಿ ಪ್ರತಿಬಿಂಬಿಸಿ ಬಹುಬಿಂಬಗಳಂತೆ ತೋರಿ, ತರಂಗವು ಸ್ತಿಮಿತವಾಗಲು ಜಲದಲ್ಲಿ ಒಂದೇ ಚಂದ್ರಬಿಂಬ ತೋರುವಂತೆ ಆ ಉದಕಬಿಂದು ಚಲಿಸದೆ ನಿಂತಿತು" ಎಂಬುದು ಮುನಿವಾಕ್ಯ ; ಇದು ಧ್ವನಿಪೂರ್ಣವಾದ ವಾಕ್ಯವೇ. ಈ ಸನ್ನಿವೇಶ ಅನ್ಯತ್ರ ಸಹ ಉಂಟು (ಮುದ್ರಾರಾ. ಉ. ೨೮-೩೩). ಆದರೆ ಮುದ್ರಾಮಂ.ದಲ್ಲಿ ಬಂದಿರುವ ರೀತಿಯಲ್ಲಿ ಭವಿಷ್ಯಸೂಚನೆ ಅಲ್ಲಿ ಬಂದಿರುವಂತಿಲ್ಲ. ಈ ಕಲ್ಪನೆ ಸ್ವೋಪಜ್ಞವಾದುದು,

ಮನೋಜ್ಞವಾದುದು.

ನಂದೋತ್ಪತ್ತಿವಿಚಾರದಲ್ಲಿ ಉಳಿದ ಆಕರಗಳು ಮಹಾಭಾರತದೊಳಗಿನ ದುರ್ಯೋಧನಾದ್ಯರ ಜನನರೀತಿಯನ್ನು ಜ್ಞಾಪಿಸುವಂತೆ ವಾಚ್ಯವಾಗಿ ಹೇಳಿದ್ದರೆ, ಎಂದರೆ ಸುನಂದೆ ಅಖಂಡವಾದೊಂದು ಮಾಂಸಪಿಂಡವನ್ನು ಹಡೆದಳೆಂದೂ ರಾಕ್ಷಸನು ಅದನ್ನು ಒಂಬತ್ತು ಭಾಗಗಳಾಗಿ ಮಾಡಿ ಘೃತ/ತೈಲಪಾತ್ರದೊಳಗೆ ಇರಿಸಿ ನಂದರು ಹುಟ್ಟಿದರೆಂದೂ ವಿವರಿಸಿದ್ದರೆ, ಮುದ್ರಾಮಂ.ದಲ್ಲಿ ಸಹಜಕ್ರಮದಲ್ಲಿ ಅವರ ಜನನವನ್ನು ಹೇಳಿದೆ. ನಾರಾಯಣ ಶರ್ಮನು ಲೌಕಿಕವಾಗಿ ಸಂಗತಿಯನ್ನು ನಿರೂಪಿಸುವಾಗ ಪೌರಾಣಿಕದೃಷ್ಟಿಯ, ಇತಿಹಾಸ ವಸ್ತುವಿನ ಕಥೆಗೆ ಅಸಂಭಾವ್ಯವೇ ಆಗಿರುವ, ಜನನಕ್ರಮವನ್ನು ಕೈಬಿಟ್ಟಿರುವುದು ಉಚಿತವೇ ಆಗಿದೆ. ಹೀಗೆ ಮಾಡಿದ್ದರಿಂದ ಹೊಸಕಾಲದ ಕಾದಂಬರಿಯ ಲಕ್ಷಣ ಮೈಗೂಡುವಂತಾಗಿದೆ. ಕವಿಯ ವಿವೇಕವನ್ನು ಮೆಚ್ಚುವಂತೆಯೂ ಆಗಿದೆ.

ಆರಂಭದ ಪಾಟಲೀಪುರದ ವರ್ಣನೆ ಸಾಂಪ್ರದಾಯಿಕಶೈಲಿಯ ಪುರವರ್ಣನೆಯೇ ಆಗಿದ್ದು, ಕವಿ ತನ್ನ ವಾಗ್ಮಿತೆ ವಿದ್ವತ್ತೆಗಳನ್ನು ಇಲ್ಲಿ ಮೆರೆದಿದ್ದಾನೆ. ಅನಂತರದ ರಾಜ ವೈಭವ ಕ್ರೀಡಾವಿಲಾಸಗಳ, ಸುನಂದೆಯ ರೂಪೈಶ್ವರ್ಯದ ವರ್ಣನೆಗಳ ರೀತಿಯೂ ಹೀಗೆಯೇ. ಮುದ್ರಿತ ಪರಿಷ್ಕರಣಕರ್ತರು ಇವನ್ನು ಕೈಬಿಡುವುದಕ್ಕೆ ವರ್ಣನೆಗಳ ವಿಸ್ತಾರವೂ ವರ್ಣನಾಂಶಗಳ ಶೃಂಗಾರರಸಸ್ಪರ್ಶವೂ ಕಾರಣವೆಂದು ಊಹಿಸಬಹುದಾಗಿದೆ. ಮುನಿಸಂದರ್ಶನದ ಭಾಗ ಒಂದು ಸನ್ನಿವೇಶದ ವ್ಯಾಪ್ತಿಗೆ ಹಿಗ್ಗಿರುವುದು ಕಥನ ಕೌಶಲದ ನಿದರ್ಶನವೇ ಆಗಿದೆ.

೨. ಮುದ್ರಾಮಂ.ದ ಕಥಾಬೀಜವಿರುವುದು ಸವತಿಯರ ಮಾತ್ಸರ್ಯದಲ್ಲಿ ಅಲ್ಲ ; ಮಲ ಮಕ್ಕಳ ಹೆಚ್ಚುಗಾರಿಕೆಯ ಸ್ಪರ್ಧೆಯಲ್ಲಿ. ಬೇರೆ ಆಕರಗಳಲ್ಲಿ, ನಂದರ ವಿಷಯದಲ್ಲಿ ಮೌರ್ಯನ ಅಸಹನೆಯನ್ನು ಕುರಿತಿದ್ದರೂ ಮುದ್ರಾಮಂ.ದಲ್ಲಿ ಭೃತ್ಯಭಾವವನ್ನೇ ಹೇಳಿದೆ. ಹಾಗೆಯೇ ಅನ್ಯತ್ರ ನಂದರೂ ರಾಕ್ಷಸನೂ ಕೂಡಿಯೇ ಮೌರ್ಯನಾಶಕ್ಕೆ ಪ್ರಯತ್ನ ಮಾಡಿದರೆಂದು ಹೇಳಿದ್ದರೆ (ಮುಖ್ಯವಾಗಿ ಮಹಾದೇವ-ರವಿನರ್ತಕರ ರಚನೆಗಳಲ್ಲಿ), ಮುದ್ರಾಮಂ.ದಲ್ಲಿ ರಾಕ್ಷಸನು ಅದಕ್ಕೆ ಸ್ಪಷ್ಟವಾಗಿ ಅಸಮ್ಮತಿ ಸೂಚಿಸಿ, ರಾಜನೈತಿಕವಾಗಿ ಮೌರ್ಯರನ್ನು ಸ್ವಕೀಯ ರಾಜ್ಯಾಭ್ಯುದಯಕ್ಕೆ ಹೇಗೆ ಉಪಯೋಗಿಸಿಕೊಳ್ಳಬಹುದೆಂದು ಸಲಹೆ ನೀಡುತ್ತಾನೆ. ಹೀಗೆ ಸಲಹೆ ಮಾಡಿದರೂ, ಅವನು ದಾಕ್ಷಿಣ್ಯಪರನಾದುದರಿಂದ, ಮುಂದೆ ನಂದರು ಮೌರ್ಯರನ್ನು ನಿಗ್ರಹಿಸದೆ ಬಿಡುವುದಿಲ್ಲವೆಂದು ತಿಳಿದು ಆ ಅಪಖ್ಯಾತಿಗೆ ತಾನು ಗುರಿಯಾಗಬಾರದೆಂದು ಯೋಚಿಸಿ ಸರ್ವಾರ್ಥಸಿದ್ಧಿಯೊಂದಿಗೆ ಪುಣ್ಯಕ್ಷೇತ್ರದ ಪ್ರಯಾಣಕ್ಕೆಂದು ಹೊರಟುಬಿಡುತ್ತಾನೆ. ದೊರೆಗೆ ಸಹಾಯಕನಾಗಿ ಇರಬೇಕೆಂಬುದು ನಿಮಿತ್ತ ; ದುಷ್ಟರ ಹಂಚಿಕೆಯಲ್ಲಿ ತಾನು ಪಾಲುದಾರನಾಗಬಾರದೆಂಬುದು ಉದ್ದೇಶ.

ನಂದರ ನೀಚಬುದ್ಧಿ ಹೇಗೆ ಕೆಲಸ ಮಾಡುವುದೆಂಬುದನ್ನು ಅವರ ನಡುವಣ ಸಂವಾದದಲ್ಲಿ ಮಂಜೂಷಕಾರನು ಚೆನ್ನಾಗಿ ಮನವರಿಕೆ ಮಾಡಿದ್ದಾನೆ. ಅವರ ಸಂವಾದಕಾಲದಲ್ಲಿ ಜತೆಗಿದ್ದು ಅವರ ಆಂತರ್ಯವನ್ನು ಬಲ್ಲವನಾಗಿಯೂ ರಾಕ್ಷಸನು ಪಲಾಯನವಾದಿಯಂತೆ ನಡೆದುಕೊಂಡುದೀಗ ಆತನ ರಾಜನೀತಿಕೌಶಲಕ್ಕೆ ಒಪ್ಪತಕ್ಕುದಲ್ಲ. ಸರ್ವಾರ್ಥಸಿದ್ಧಿಯು ಪ್ರಯಾಗಕ್ಕೆ ಪ್ರಯಾಣಮಾಡಲು ನಂದರ ಪ್ರೇರಣೆಯಂತೆ ಪೌರಾಣಿಕರು ಮಾಡಿದ ಕ್ಷೇತ್ರ

ಮಾಹಾತ್ಮ್ಯವರ್ಣನವೇ ಕಾರಣವಾಯಿತೆನ್ನುವುದೂ ಅಲ್ಲಿ ಮುರಾದೇವಿ ಗಂಗೆಯಲ್ಲಿ ಐಕ್ಯಳಾದಳೆಂಬುದೂ ಮಂಜೂಷಕಾರನ ಹೊಸ ಸೇರ್ಪಡೆ ಎನ್ನುವಂತಿದೆ. ಮುರಾದೇವಿಯ ಸ್ವಪ್ನವೃತ್ತಾಂತವೂ ಗಂಗೆ ಕೈನೀಡಿ ತನ್ನ ಒಡಲಿಗೆ ಕರೆದುಕೊಂಡಳೆಂಬುದೂ ಪ್ರಾಚೀನ ಭಾರತೀಯ ಶ್ರದ್ಧೆಗೆ ಅಸಾಮಾನ್ಯವಾದ ವಿದ್ಯಮಾನವೇನಲ್ಲ. ಹಾಗೆಂದೇ ಇಲ್ಲಿ ಅದಕ್ಕೆ ಅವಕಾಶ ದೊರೆತಿದೆ. ದೊರೆಯ ಈ ಪ್ರಿಯಪತ್ನಿ ಜಾತಿಯಿಂದ ಶೂದ್ರಸ್ತ್ರೀಯಾದರೂ ಪಾತಿವ್ರತ್ಯ, ಗುಣಸಂಪನ್ನತೆ, ಆಚಾರನಿಷ್ಠೆಗಳಲ್ಲಿ ಮಿಗಿಲಾದವಳು ಎನ್ನುವುದು ಇಲ್ಲಿ ಸ್ಪೃಹಣೀಯವಾದ ಅಂಶ. ಕಥೆಯೊಳಗಿನ ಪೌರಾಣಿಕರ ಪ್ರಸಂಗ ಮುಮ್ಮಡಿಯವರ ಕಾಲದಲ್ಲಿ ಅವರ ಅರಮನೆಯಲ್ಲಿಯೇ ನಡೆವಳಿಯಾಗಿದ್ದ ಒಂದು ಪದ್ಧತಿಯ ಪ್ರತಿಬಿಂಬದಂತಿದೆ.

ನಂದರು ಬೇಟೆಯ ನೆವ ಹೂಡಿ ಮೌರ್ಯರನ್ನು ಹೊರಗೆ ಕರೆದೊಯ್ದು ಪುರದ ಬಹಿರುದ್ಯಾನದ ನೆಲಮಾಳಿಗೆಯಲ್ಲಿ ಕೂಡಿ ಕೊಂದುಹಾಕಿದ ಪ್ರಸಂಗ ಮಾರ್ಮಿಕವಾದುದು. ಹಲವು ಆಕರಗಳಲ್ಲಿ ಇದು ತಪ್ಪದೆ ಬಂದಿದೆ. ಮುದ್ರಾಮಂ.ದಲ್ಲಿ ಇದು ಕಥೆಗೆ ಉಚಿತವಾದ ವಿಸ್ತಾರದಲ್ಲಿ ಚಿತ್ರವತ್ತಾಗಿದ್ದು, ಚಂದ್ರಗುಪ್ತನು ಸ್ವತಃ ಪಾರಾಗುವ ತಂತ್ರ ರೂಪಿಸಿದ್ದು, ಈ ಆಕರದಲ್ಲಿಯಷ್ಟೇ ಇರುವಂಥದು. ಅಲ್ಲದೆ ತಮಗೆ ಬರಲಿದ್ದ ಅಪಖ್ಯಾತಿಯನ್ನು ತಪ್ಪಿಸಿಕೊಳ್ಳಲು ನಂದರು ಬರಸಿದ ನಯವಂಚಕತನದ ಪತ್ರದ ಒಕ್ಕಣೆ ಚಮತ್ಕಾರಿಕವಾಗಿದ್ದು, ಇದೂ ಕವಿಕಲ್ಪಿತವೇ ಇರುವಂತಿದೆ. ಈ ಸಂದರ್ಭದಲ್ಲಿ ರಾಕ್ಷಸನ ವಿಚಾರಲಹರಿ ಮೇಲುನೋಟದಲ್ಲಿ ಅನ್ಯಾಯಕ್ಕೆ ಒಪ್ಪಿಗೆ ಕೊಡುತ್ತಿರುವಂತೆ ಅಭಿಪ್ರಾಯ ವುಂಟುಮಾಡಿದರೂ, ರಾಜ್ಯದ ಸುಸ್ಥಿತಿ, ವೃದ್ಧರಾಜನ ಮನಃಸ್ಥಿತಿ, ತನ್ನ ವಶದಲ್ಲಿ ಬದುಕಿ ಬೆಳೆದ ನಂದರ ಏಳಿಗೆಗೆ ದುರ್ಬಲಮನಸ್ಸಿನ ಒಲವರ ಇವೆಲ್ಲ ಕಾರಣವಾಗಿ ಅವನು ದುರ್ಘಟನೆಯನ್ನು ಹಿಕ್ಕಿ ದೊಡ್ಡದು ಮಾಡದೆ, ಹಾಗೆಯೇ ಈ ಅಂತಃಕಲಹವನ್ನು ಸರಿ ಮಾಡುವ ದೂರದೃಷ್ಟಿಯನ್ನೇ ಪ್ರಕಟಿಸಿದನೆನ್ನಬೇಕು.

ಚಂದ್ರಗುಪ್ತನ ಬಿಡುಗಡೆಗೆ ಒದಗಿದ ಸಂದರ್ಭ ಹಲವು ದೃಷ್ಟಿಗಳಿಂದ ಸ್ವಾರಸ್ಯಕರವಾದುದು. ಇದು ಸನ್ನಿವೇಶವನ್ನು ನಾಟಕೀಯವಾಗಿ ಸೊಗಸುಗೊಳಿಸುವ ಕವಿಕಲ್ಪನೆಗೂ ಭಾಷೆಯ ಸರಸತೆಗೂ ತಕ್ಕ ಸ್ಥಾನವಾಗಿದೆ. ಪರ್ವತರಾಜನ ಆಸ್ಥಾನದ ಮಂತ್ರಿ ಶಬರವರ್ಮನು ನಂದರ ದುಷ್ಕೃತವನ್ನು ನೆನೆಯುವ ರೀತಿ ನಾಟಕದೊಳಗಿನ ಪ್ರವೇಶಕದ ಛಾಯೆಯಂತಿದ್ದು, ವಿಮರ್ಶಿಸಿದರೆ ಕವಿಯೇ ಆ ದುಷ್ಕೃತದ ದೀರ್ಘಕಾಲಿಕ ಪರಿಣಾಮಗಳನ್ನು ಚಿಂತಿಸುತ್ತಿರುವಂತಿದೆ. ದಿಟವಾಗಿ ಪರಿಣಾಮದಲ್ಲಿ ಹಾಗೆಯೇ ಘಟನೆಗಳು ಜರುಗಿದುವು. ನಂದರು ನಿಗ್ರಹಕ್ಕೆ ಯೋಗ್ಯರೆಂಬುದಕ್ಕೆ ಮಂತ್ರಿ ಕೊಡುವ ಕಾರಣಗಳೇನೇ ಇರಲಿ, ಪಾಟಲೀಪುರದ ವಾರ್ತಾಸಂಗ್ರಹ ಅಮಾತ್ಯರ ಬುದ್ಧಿಶಕ್ತಿಪರೀಕ್ಷೆಗಳಿಗಾಗಿ ಕಪಟಶಿಲ್ಪದ ವಿಚಾರವನ್ನು ಮಾಡಿದ್ದು, ಚಂದ್ರಗುಪ್ತನ ಮಟ್ಟಿಗೆ ಬಂಧವಿಮೋಚನೆಗೆ ಅನುಕೂಲವೇ ಮಾಡಿತು.

ಮುಂದೆ ರಾಜಕಾರ್ಯದಲ್ಲಿ ಚಾಣಕ್ಯನು ಪರ್ವತರಾಜನ ಕೆಳೆಗೆ ಬಳಸಿದ ಲಂಪಾಕಾಧಿಪತಿಯ ಸಂಗತಿ ಈ ಘಟ್ಟದಲ್ಲಿ ಬಂದಿದೆ. ಆತ ಪರ್ವತರಾಜನಿಗೆ ಪೂರ್ವವೈರಿಯೆಂದೂ ಯುದ್ಧಸಿದ್ಧತೆಯಲ್ಲಿರುವವನೆಂದೂ ಚಾರರಿಂದ ತಿಳಿಯುತ್ತದೆ. ಅಲ್ಲದೆ ಮೊದಲ ಸಲ

ರಾಜಕೀಯವಾಗಿ ಅರಸರ ನಡುವೆ ಸಂಘರ್ಷಗಳು ಹೇಗೆ ಹುಟ್ಟಿಕೊಳ್ಳುತ್ತವೆ, ತೊಡಕುಗಳ ಪರಿಹಾರಕ್ಕೆ ಪ್ರಯತ್ನಗಳು ಹೇಗೆ ಸಾಗುತ್ತವೆ ಎಂಬುವು ಇಲ್ಲಿಂದ ಮುಂದೆ ಓದುಗರಿಗೆ ಪರಿಚಯವಾಗತೊಡಗುತ್ತವೆ.

ಪಂಜರಪರೀಕ್ಷೆಯ ಪ್ರಸಂಗ ಹಲವು ಆಕರಗಳಲ್ಲಿವೆ. ಅವುಗಳಲ್ಲಿ ಸಾಮ್ಯವೂ ಉಂಟು. ಮುದ್ರಾರಾ.ದಲ್ಲಿ (ಉಪೋದ್ಘಾತ) ಕೃತ್ರಿಮಸಿಂಹವನ್ನು ಕಳಿಸಿದ್ದು ಸಿಂಹಳರಾಜ; ಮುದ್ರಾಮಂ.ದಲ್ಲಿ ಪರ್ವತರಾಜ. ಮಹದೇವ-ರವಿನರ್ತಕರು ಕೊಡುವ ವಿವರಗಳ ಪ್ರಕಾರ; ಮೌರ್ಯಪಕ್ಷಪಾತದ ಮಂತ್ರಿಯ ಸಲಹೆಯಂತೆ ಚಂದ್ರಗುಪ್ತನನ್ನು ಪಂಜರ ಪರೀಕ್ಷೆಗಾಗಿಯೇ ನೆಲಮಾಳಿಗೆಯಿಂದ ಬಿಡಿಸಿ ತಂದು, ಪರೀಕ್ಷೆಯನ್ನು ಯಶಸ್ವಿಗೊಳಿಸಿದ ಮೇಲೆ ಪ್ರತಿಫಲವಾಗಿ ಭೋಜನಶಾಲೆಯ ಅಧಿಕಾರವನ್ನು ಅವನಿಗೆ ನೀಡಿದಂತೆ ಅಲ್ಲಿ ಕಥನವಿದೆ. ಆದರೆ ನಂದರು ಈ ಒಂದು ಸಣ್ಣ ವಿದ್ಯಮಾನಕ್ಕೆ ತಿಳಿದೂ ತಿಳಿದೂ ತಮ್ಮ ಹಗೆಯನ್ನು ಆಹ್ವಾನಿಸುತ್ತಿದ್ದರೆಂದು ನಂಬುವುದು ಕಷ್ಟವೆಂದು ಭಾವಿಸಿಯೋ ಏನೋ ಮುದ್ರಾಮಂ.ದಲ್ಲಿ ಹೆಚ್ಚು ಸಹಜವಾಗಿ ಸನ್ನಿವೇಶವನ್ನು ರೂಪಿಸಿದೆ. ಆಕಸ್ಮಿಕವಾಗಿ ಡಂಗುರದ ಮೂಲಕ ವಿಷಯ ಹೊಸ ಕಾರಾಗೃಹದಲ್ಲಿದ್ದ ಚಂದ್ರಗುಪ್ತನಿಗೆ ತಿಳಿದು, ಅವನು ಯಾರೆಂದು ತಿಳಿಯದೆ ಅವನನ್ನು ಬರಮಾಡಿಕೊಂಡಂತೆ, ಅವನಿಂದ ಪರೀಕ್ಷೆ ಯಶಸ್ವಿಯಾಗಿ ನಡೆದ ಹಾಗೆ ಇಲ್ಲಿ ಕಥನವಿದೆ. ಪರೀಕ್ಷೆ ಯಶಸ್ವಿಯಾದ ಮೇಲೆ ಅದು ನಂದರ ಹಾಗೂ ರಾಕ್ಷಸನ ಗಮನಕ್ಕೆ ಬರುವ ಹಾಗೆ ಮಾಡಿರುವುದು ಒಂದು ಒಳ್ಳೆಯ ಮಾರ್ಪಾಡು. ಇಲ್ಲಿಯೂ ಚಂದ್ರಗುಪ್ತನಿಗೆ ಪ್ರತಿಫಲವಾಗಿ ಅನ್ನಸತ್ರಾಧಿಕಾರವನ್ನು ಹೇಳಿದೆ.

ಇನ್ನು ಪಂಜರಪರೀಕ್ಷೆಯ ಸಂದರ್ಭದ ವಿವರಗಳಂತೂ ದೃಶ್ಯಮಾನವಾಗಿ, ಆಕರ್ಷಕ ವಾಗಿ ನಿರೂಪಿತವಾಗಿವೆ. ಪಂಜರರಕ್ಷಕರಿಗೂ ಚಂದ್ರಗುಪ್ತನಿಗೂ ನಡೆಯುವ ಸಂವಾದದ ಮೂಲಕ ಅವು ಹೆಜ್ಜೆಹೆಜ್ಜೆಯಾಗಿ ಬಣ್ಣವೇರುತ್ತ ಹೋಗಿವೆ. ಕಪಟಶಿಲ್ಪದ ಪಂಜರ ಪ್ರೇಷಣದ ಕಾರಣವನ್ನು ಚಂದ್ರಗುಪ್ತನು ಸರಿಯಾಗಿ ತರ್ಕಿಸಿದನೆಂಬುದು ಅವನ ಸ್ವಾಭಾವಿಕ ಬುದ್ಧಿಶಕ್ತಿಯನ್ನೂ ಮುಂದೆ ಅವನು ಕೈಕೊಳ್ಳಲಿರುವ ಶತ್ರುನಿಗ್ರಹದ ಸಂಕಲ್ಪ ಶಕ್ತಿಯನ್ನೂ ಸಮರ್ಥವಾಗಿ ಇಂಗಿತಗೊಳಿಸುತ್ತದೆ. ಶತ್ರುಶೇಷ ಇನ್ನೂ ಉಳಿದಿರುವುದಕ್ಕೆ ನಂದರು ಅಧೀರರಾಗುತ್ತಾರೆ. ಮಂತ್ರಿಗಳ ಸಮಾಲೋಚನೆಯ ಒಂದೊಂದು ಎಳೆಯೂ ಚಂದ್ರಗುಪ್ತನು ನಂದರ ಅಧಿಕಾರ ಅಭ್ಯುದಯಗಳಿಗೆ ಮುಳ್ಳಿನ ಮೊನೆಯಾಗಿರುವುದನ್ನು ತೋರಿಸುತ್ತದೆ. ಚಂದ್ರಗುಪ್ತನು ಅನ್ನಸತ್ರಾಧಿಕಾರದಲ್ಲಿ ಇದ್ದುಕೊಂಡರೆ, ಚಿಕ್ಕ ಅಧಿಕಾರ ವೆಂದು ಅಲಕ್ಷ್ಯಮಾಡಿ ಬ್ರಾಹ್ಮಣಶಾಪಕ್ಕೆ ಗುರಿಯಾಗಿ ನಾಶವಾಗುವನೆಂದು ಮಾಡಿದ ಸುಮತಿಯ ಸಲಹೆ ಅಮಾತ್ಯ ರಾಕ್ಷಸನ ಸಮ್ಮತಿಯೆಂದೇ ಅಂಗೀಕಾರವಾಗಿ, ಅದು ಭವಿಷ್ಯದಲ್ಲಿ ನಂದರಿಗೆ ತಿರುಗುಬಾಣವಾದುದು ಒಂದು ನಾಟಕೀಯ ವ್ಯಂಗ್ಯವೇ ಸರಿ.

೩. ಮಂತ್ರಿಗಳ ಮನೋಗತವೇನೇ ಇರಲಿ, ಚಂದ್ರಗುಪ್ತನು ತನಗೆ ಒಪ್ಪಿಸಿದ ಸತ್ರಾಧಿಕಾರದಲ್ಲಿ ಉದಾಸೀನಮಾಡಲಿಲ್ಲವೆನ್ನುವುದು ಮೊದಲಲ್ಲಿಯೇ ಗಮನಿಸಬೇಕಾದ ಸಂಗತಿ. ಒಳ್ಳೆಯ ಆತಿಥೇಯನಾಗಿ ಅವನು ತೋರಿಸಿದ ಸೌಜನ್ಯ ಸೌಶೀಲ್ಯಗಳೇ ಅವನಿಗೆ ಚಾಣಕ್ಯನ ಸಹವಾಸಭಾಗ್ಯವನ್ನು ಕಲ್ಪಿಸಿದುವು. ಚಾಣಕ್ಯನ ಒಂದು ವಿಲಕ್ಷಣವರ್ತನೆ

ನಿಮಿತ್ತವಾಗಿ ಸತ್ರದಲ್ಲಿ ಸಂಘಟಿಸಿದ ಬ್ರಾಹ್ಮಣಾಪಮಾನದ ಒಂದು ದುರ್ಘಟನೆ ನಂದರ ಅವನತಿಗೆ ದಾರಿಮಾಡಿತು. ಚಂದ್ರಗುಪ್ತನ ಭಾಗ್ಯೋದಯವನ್ನು ಬೆಳಸಿತು.

ಬ್ರಾಹ್ಮಣಾಪಮಾನದ ಮಾರ್ಮಿಕವಾದ ಕಥಾಂಶ ಎಲ್ಲ ಆಕರಗಳಲ್ಲಿಯೂ ಬಂದಿದೆ. ಸತ್ರದ ಎದುರು ದಾರಿ ನಡೆಯುವಾಗ ಕಾಲಿಗೆ ತೊಡರಿದ ಹುಲ್ಲನ್ನೋ ಹಂಬನ್ನೋ ಛೇದಿಸಿ ಅರೆದು ಕುಡಿದೋ ಸುಟ್ಟು ಬೂದಿಮಾಡಿಯೋ ಮುಗಿಸುವ ಸಂಕಲ್ಪವನ್ನು ಚಾಣಕ್ಯನ ವ್ಯಕ್ತಿತ್ವದಲ್ಲಿ ಅನ್ಯ ಆಕರಗಳು ಗುರುತಿಸಿದ್ದರೆ, ಮುದ್ರಾಮಂ. ಅದನ್ನು ಹೆಚ್ಚು ಸಹಜವಾಗಿ, ಎಂದರೆ ದಂಡಾಗ್ರದಿಂದ ಗರುಕೆಯ ಬಳ್ಳಿಯನ್ನು ಸಮೂಲವಾಗಿ ಅಗೆದು ಛೇದಿಸಿದ ನೆಂಬುದಾಗಿ ಮಾತ್ರ ಚಿತ್ರಿಸಿದೆ. ಕ್ಷುದ್ರವಾದೊಂದು ಘಟನೆಯ ಮೂಲಕ ಚಾಣಕ್ಯನ ಕಾರ್ಯಕ್ಷಮತೆಯನ್ನು ತಿಳಿದ ಚಂದ್ರಗುಪ್ತನ ಬುದ್ಧಿ ಹರಿತವಾದುದೆನ್ನಬೇಕು. ಹಾಗೆಯೇ ತನ್ನ ವಿಪನ್ನಾವಸ್ಥೆಯನ್ನು ಚಾಣಕ್ಯನಿಗೆ ಮನವರಿಕೆಮಾಡಿದ ಅವನ ವಚಃಕೌಶಲವನ್ನೂ ಮೆಚ್ಚಬೇಕು. ಚಾಣಕ್ಯನು ಅರಸರನ್ನು ಸಹ ತಾನು ನಿಗ್ರಹಿಸಬಲ್ಲೆ ಎಂದು ಹೇಳಿಕೊಳ್ಳು ವುದು ಮಂಜೂಷಕಾರನಿಗೆ ಸಮ್ಮತವಾಗಿಲ್ಲ ; ಇಲ್ಲಿ ಆತ ಚಂದ್ರಗುಪ್ತನ ಪರಿಸ್ಥಿತಿ ಕೇಳಿದ ಮೇಲೆ ಮಾತ್ರವೇ ನಂದನಿಗ್ರಹದ ವಿಚಾರ ಮಾಡುತ್ತಾನೆ.

ನಂದರ ವಿಷಯದಲ್ಲಿ ತಾನು ಅನಿಮಿತ್ತವೈರವನ್ನು ಹಿಡಿಯದೆ, ಒಂದು ಧರ್ಮಾ ವಿರುದ್ಧವಾದ ದುಶ್ಚೇಷ್ಟೆಯನ್ನು ಮಾಡಿ ನಂದರನ್ನು ಚಾಣಕ್ಯ ಕೆರಳಿಸಿದನು. ಸ್ವಲ್ಪ ವ್ಯತ್ಯಾಸಗಳೊಂದಿಗೆ ಈ ಬ್ರಾಹ್ಮಣಾಪಮಾನದ ಪ್ರಸಂಗ ಎಲ್ಲ ಆಕರಗಳಲ್ಲಿಯೂ ಇದೆ; ಅಲ್ಲದೆ ಅವೆಲ್ಲ ನಂದರು ದುಡುಕಿ ನಡೆದರೆಂಬುದನ್ನೇ ಎತ್ತಿ ಹೇಳುತ್ತವೆ. "ಮತ್ತರಾಗಿ, ದೈವಸಂಕಲ್ಪದಿಂದ ವಿಮರ್ಶೆಯಂ ಮಾಡದೆ" ನಡೆದರೆಂದು ನಾರಾಯಣ ಶರ್ಮ ಹೇಳು ವುದು ಸೂಕ್ತವಾಗಿಯೇ ಇದೆ. ನಂದರು ಕೊಂಚ ಸಂಯಮದಿಂದ ನಡೆದುಕೊಂಡು ಚಾಣಕ್ಯನನ್ನು ನಿವಾರಿಸುವುದು ಸಾಧ್ಯವಿತ್ತು. ಪ್ರತಿಯಾಗಿ ಅವರ ಸೊಕ್ಕಿನ ಮಾತು ವರ್ತನೆಗಳು ಅವನ ಉಗ್ರಶಪಥಕ್ಕೆ ಅನುವು ಮಾಡಿದುವು. ಕವಿಗೆ ಇಲ್ಲಿ ಇದಕ್ಕೆ ಮುಖ್ಯ ಕಾರಣ ದೈವವಿಕೋಪವೆಂದೇ ಅಭಿಪ್ರಾಯವಿರುವಂತಿದೆ. ಅಪಶಕುನಗಳಾದುವೆನ್ನುವ ವಿಚಾರ ಭಾರತೀಯ ಶ್ರದ್ಧೆಗೆ ಅನುಗುಣವಾಗಿ ಕವಿ ಕಲ್ಪಿಸಿರುವ ಸಂಗತಿ. ಈ ಸಂದರ್ಭ ನಿಮಿತ್ತವಾಗಿ ಬಂದಿರುವ ಬ್ರಾಹ್ಮಣ್ಯದ ಅಗ್ಗಳಿಕೆಯ ಕೊಂಡಾಟ, ಗ್ರಂಥಸ್ಥ ಪಾತ್ರ ನಿಮಿತ್ತವಾಗಿ ಕವಿ ಸ್ವತಃ ಹರಿಯಬಿಟ್ಟಿರುವ ಸ್ವರಸ ವಿಚಾರಲಹರಿಯೇ ಆಗಿದೆ.

ಮುದ್ರಾಮಂ.ದ ಸಂವಾದಗಳ ಸೊಗಸುಗಾರಿಕೆ ಪಾತ್ರಗಳು ಮಾಡುವ ವಸ್ತುವಿಶ್ಲೇ ಷಣದ ತಾರ್ಕಿಕಶಕ್ತಿಯಿಂದ ಹೆಚ್ಚುತ್ತದೆ. ಉದಾ.ಗೆ ಪುಷ್ಪದಂತನೆಂಬ ಮಂತ್ರಿಯ ಮನಸ್ಸಿನ ದ್ವಿಮುಖಚಿಂತನವನ್ನೂ ಸತ್ರದ ಸಭಾಜನರು ಮಾಡುವ ನಂದರ ವರ್ತನೆಯ ವಿಮರ್ಶೆ, ಸಾಮಾನ್ಯ ರಾಜಸ್ವಭಾವಪರಾಮರ್ಶೆ ಎಂಬವನ್ನೂ ನೋಡಿದರೆ ತಿಳಿಯುತ್ತದೆ. ಸತ್ರದ ಸಭಾಜನರ ಸಾಮಾನ್ಯ ರಾಜಸ್ವಭಾವಪರಾಮರ್ಶೆಯ ಬಹುಭಾಗ ಬಾಣನ ಕಾದಂಬರಿಯ ಲಕ್ಷ್ಮೀವಿಡಂಬನದ ಭಾಗದಿಂದ ಪ್ರೇರಿತವಾಗಿದ್ದು, ದೊಡ್ಡ ಉಪನ್ಯಾಸ ದಂತೆ ಕಂಡರೂ, ತನ್ನ ಆಶ್ರಯದಾತನಿಗೆ, ತನ್ನ ಗೌರವದ ಧರ್ಮಭೀರು ಪ್ರಭುವಿಗೆ 'ಉಪದೇಶಚಿಂತಾಮಣಿ' ಎನ್ನುವಂತೆ ಕರ್ತೃವಿಂದ ವಿನ್ಯಾಸಗೊಂಡಿದೆಯೆನ್ನಬೇಕು.

ಪರ್ವತರಾಯನಿಗೆ ಒಂದು ಕಡೆ ಪಂಜರರಕ್ಷಕರಿಂದಲೂ ಇನ್ನೊಂದು ಕಡೆ ಸತ್ರದ

ಬೇಹುಗಾರರಿಂದಲೂ ಚಂದ್ರಗುಪ್ತನ ವಿಮೋಚನೆಯ ವರ್ತಮಾನ ತಿಳಿಯುತ್ತದೆ. ಮಂತ್ರಿ ಶಬರವರ್ಮನ ಗ್ರಹಿಕೆಯಂತೆ ರಾಜಕಾರ್ಯಾರ್ಥವಾಗಿ ಪರ್ವತನ ರಾಜ್ಯಕ್ಕೆ ಅವರು ಬರಬಹುದೆಂಬ ಮುನ್ಸೂಚನೆ ಇಲ್ಲಿಯೇ ಓದುಗರಿಗೆ ಸಿಕ್ಕುತ್ತದೆ. ಯಾವುದೇ ರಾಜಕಾರ್ಯದ ತಂತ್ರ ಪ್ರತಿತಂತ್ರಗಳು ಮೊದಲಲ್ಲಿ ಗೂಢವಾಗಿದ್ದು, ಬಳಿಕ ಕಾಲ ದೇಶ ಪಾತ್ರಗಳನ್ನು ಅನುಸರಿಸಿ ಅವುಗಳ ರಹಸ್ಯಭೇದನವಾಗುವುದು ಸಂವಿಧಾನದಲ್ಲಿ ಕಥೆಗಾರನು ಅನುಸರಿಸುವ ಒಂದು ಕ್ರಮವಾಗಿದೆ. ಇದರಿಂದ ಓದುಗರ ಮನಸ್ಸಿನ ಗೊಂದಲ ತೊಲಗಿ ವಿವಕ್ಷಿತಾರ್ಥವು ಸ್ಪಷ್ಟವಾಗುತ್ತದೆ.

ಚಾಣಕ್ಯನು ನಂದನಾಶಕ್ಕೆ ಕಾರ್ಯೋನ್ಮುಖವಾಗುವ ಮೊದಲು ಏಕೆ ತಾನು ನಂದರನ್ನು ನಿಗ್ರಹಿಸಬೇಕು, ಚಂದ್ರಗುಪ್ತನಿಗೆ ಸಹಾಯವಾಗಬೇಕು ಎಂದು ಚಿಂತಿಸಿ ಒಂದು ನಿರ್ಧಾರಕ್ಕೆ ಬಂದನೆಂದು ಮುದ್ರಾಮಂ.ದಲ್ಲಿದೆ. ವಾಸ್ತವವಾಗಿ ಇದು ವಾಚಕರಿಗೆ ಕವಿ ಹೇಳುವ ಸಮಾಧಾನ. ಕ್ಷುದ್ರಸತ್ತ್ವರಾದ ನಂದರನ್ನು ನಿಗ್ರಹಿಸಿ ವೃಷಲನೊಬ್ಬನಿಗೆ ಪಟ್ಟಕಟ್ಟುವುದಾಗಿ ಚಾಣಕ್ಯ ಪ್ರತಿಜ್ಞೆಮಾಡಿದನೆಂದು ರವಿನರ್ತಕನ ಕೃತಿಯಲ್ಲಿದೆ. ವ್ಯಕ್ತವಾಗಿ ಚಂದ್ರಗುಪ್ತನನ್ನು ಪಕ್ಷೀಕರಿಸುವ ಈ ಕಥಾಂಶವನ್ನು ಕನ್ನಡಕವಿ ಬಿಟ್ಟಿರುವುದು ಸರಿ. ಮುಂದಿನ ಕಾರ್ಯಾಚರಣೆಗೆ ಚಾಣಕ್ಯ ಚಂದ್ರಗುಪ್ತನಿಂದ ನಂದರ ಶತ್ರುಗಳು ಯಾರು, ಮಿತ್ರರು ಯಾರು ಎಂಬುದರ ಮಾಹಿತಿ ಪಡೆಯುತ್ತಾನೆ. ಈ ಅವಸರದಲ್ಲಿ ಅಮಾತ್ಯ ರಾಕ್ಷಸನ ಗುಣಶೀಲಗಳನ್ನೂ ಶಕ್ತಿಸಾಮರ್ಥ್ಯಗಳನ್ನೂ ಚಂದ್ರಗುಪ್ತನಿಂದ ಕೇಳಿ ತಿಳಿದ ಮೇಲೆ, ರಾಕ್ಷಸನು ನಿಗ್ರಹಯೋಗ್ಯನಲ್ಲ, ಸಂಗ್ರಹಯೋಗ್ಯನೇ ಎಂದು ಚಾಣಕ್ಯನು ತಿಳಿಯುವುದು ಅವನ ನಿಷ್ಪಕ್ಷಪಾತವಾದ ಗುಣಗ್ರಹಣದೃಷ್ಟಿಯನ್ನೂ ರಾಜನೀತಿಕೌಶಲವನ್ನೂ ತೋರಿಸುತ್ತದೆ. ಹಾಗೆಯೇ ಮೌರ್ಯನ ವಿಷಯದಲ್ಲಿ ರಾಕ್ಷಸನು ತಟಸ್ಥನಾಗಿದ್ದನೆಂಬುದನ್ನು ಕೇಳಿದಾಗ, ರಾಕ್ಷಸನ ನಂದಪಕ್ಷಪಾತವೂ ಅವನಿಗೆ ಹೊಳೆದಿರಲೇ ಬೇಕು.

ಚಾಣಕ್ಯನು ಹೂಡಿದ ಮೊದಲ ರಾಜನೀತಿಕೌಶಲದ ತಂತ್ರವೆಂದರೆ, ಮೌರ್ಯಪಕ್ಷಪಾತಿಗಳಾಗಿದ್ದ ಬಾಗುರಾಯಣಾದಿ ಮಂತ್ರಿಗಳ ಸ್ವಹಸ್ತಾಕ್ಷರದ ಕಾಗದವನ್ನು ದೇವತಾಕಾರ್ಯವೊಂದರ ವ್ಯಾಜದಿಂದ ಬರಸಿಟ್ಟುಕೊಂಡದ್ದು. ಕಪಟಲೇಖಗಳ ಸೃಷ್ಟಿ, ಅವುಗಳ ಕಾರ್ಯಶಕ್ತಿ ಇವು ಎಷ್ಟು ಮುಖ್ಯ ಎನ್ನುವುದು ಇಲ್ಲಿ ವಿದಿತವಾಗುತ್ತದೆ. ಈ ಮಂತ್ರಿಗಳಿಗೆ ಚಾಣಕ್ಯನ ಕಾರ್ಯತಂತ್ರದ ನಿಗೂಢತೆ ಈ ಘಟ್ಟದಲ್ಲಿ ತಿಳಿಯದೆ ಇರುವುದು ಸ್ವಾಭಾವಿಕವೇ. ಚಂದ್ರಗುಪ್ತನನ್ನು ಕುರಿತು ಆಡಿದ ಸಾಂತ್ವನವಚನಗಳಿಂದ ಅವರ ನಂದವಿರೋಧವೂ ಮೌರ್ಯಪರ ಸಹಾನುಭೂತಿಯೂ ಸುವ್ಯಕ್ತವಾಗಿ ಮುಂದೆ ಚಂದ್ರಗುಪ್ತನ ರಾಜಕೀಯ ಚಟುವಟಿಕೆಗಳಲ್ಲಿ ಅವನನ್ನೇ ಅವರು ಸೇರತಕ್ಕವರೆಂದು ತಿಳಿಯುವಂತಿದೆ. ಪಾತ್ರಪೋಷಣೆ ಸನ್ನಿವೇಶಸೃಷ್ಟಿಯಲ್ಲಿ ಸಂದಿಗ್ಧತೆಗಳಿಗೆ, ಪರಸ್ಪರ ಪೂರ್ವಾಪರವಿರೋಧಗಳಿಗೆ ಅವಕಾಶಗಳೇ ಇಲ್ಲದಂತೆ ವೈಶದ್ಯವೂ ಸಾಮಂಜಸ್ಯವೂ ಇರುವುದು ಈ ಕಾದಂಬರಿಯ ಒಂದು ಒಳ್ಳೆಯ ಲಕ್ಷಣ. ಅದೇ ಕಾದಂಬರಿಯ ಗೆಲವು ಕೂಡ.

ಚಂದ್ರಗುಪ್ತನ ಯಶಸ್ಸು ಚಾಣಕ್ಯನ ಬುದ್ಧಿಶಕ್ತಿ ಕಾರ್ಯತಂತ್ರಗಳಲ್ಲಿರುವುದು ದಿಟವಾಗಿದ್ದರೂ, ಅವನಲ್ಲಿ ಸ್ವಬುದ್ಧಿಯೂ ಉಂಟು ಎನ್ನುವುದು ತಾಯಿ ಮತ್ತು ಪತ್ನಿಯ ರಕ್ಷಣೆಗೆ ಅವನು ಮಾಡುವ ಏರ್ಪಾಡಿನಿಂದ ತಿಳಿಯುವುದು. ಚಂದ್ರಗುಪ್ತನ ಈ ಗುಣವಿಶೇಷವು

ಮುಂದಿನ ಕಥಾಘಟ್ಟಗಳಲ್ಲಿಯೂ ಪರಿಸ್ಫುಟಗೊಳ್ಳುವಂತೆಯೇ ಇದೆ.

ಚಾಣಕ್ಯನು ತನ್ನ ಸಹಾಧ್ಯಾಯಿ ಇಂದುಶರ್ಮನನ್ನು ಕಂಡು ಅವನ ನೆರವು ಬೇಡುವಾಗ, ನಂದರ ನಿಗ್ರಹಕ್ಕೆ ತನಗೆ ಒಂದು ನಿಮಿತ್ತವನ್ನು ಸ್ಪಷ್ಟಪಡಿಸಿದ್ದು ಯುಕ್ತವಾಗಿಯೇ ಇದೆ. ಅವನು ಯಾವುದೇ ಕಾರ್ಯದಲ್ಲಿ, ವ್ಯಕ್ತಿಗಳಲ್ಲಿ ವಿಶ್ವಾಸ ಹುಟ್ಟುವಂತೆ ಮೊದಲು ಒಪ್ಪಿಸಿದಲ್ಲದೆ ಮುಂದುವರಿಯುವುದಿಲ್ಲ ಎನ್ನುವುದಕ್ಕೆ ಇದೂ ನಿದರ್ಶನವೇ. ನಂದನಿಗ್ರಹದಿಂದ ರಾಕ್ಷಸಸಂಗ್ರಹದ ವರೆಗೆ ಮಾಡತಕ್ಕ ಉಪಾಯ ರಹಸ್ಯಗಳನ್ನೆಲ್ಲ ವಿನಯಪರನೂ ವಿಶ್ವಾಸಿಯೂ ಆದ ಆತನಿಗೆ ತಿಳಿಸಿದ ಮೇಲೆಯೇ ಕಥೆಗೆ ಇಂದುಶರ್ಮಾದಿಗಳು ಮುಂದೆ ಭದ್ರವಾದ ಬುನಾದಿಯನ್ನು ಹಾಕುವುದು ಇಲ್ಲಿಂದ ತೊಡಗುತ್ತದೆ. ಆದರೆ ರಾಜಕೀಯದ ತಿರುವುಗಳು ಸನ್ನಿವೇಶದ ಒತ್ತಡಗಳನ್ನು ಅನುಸರಿಸಿರುತ್ತವೆಯಾದ್ದರಿಂದ ಎಲ್ಲ ಉಪಾಯ ರಹಸ್ಯಗಳನ್ನೂ ಮೊದಲೇ ತಿಳಿಸಿದನೆನ್ನುವುದು ಅಸಹಜವೆನ್ನಬೇಕು.

೪. ಚಾಣಕ್ಯನಿಗೆ ಬುದ್ಧಿಬಲ ಅಗಾಧವಾಗಿತ್ತು ; ಜನಬಲ ಬೇಕಾಗಿತ್ತು. ಮಿತ್ರಕಾರ್ಯದಲ್ಲಿ ಅವನಿಗೆ ಇಂದುಶರ್ಮಾದಿಗಳು ಒದಗಿದರು ; ನಂದಸಾಮ್ರಾಜ್ಯದ ಒಳಕೋಟೆಯನ್ನು ಒಳಗಿಂದೊಳಗೇ ಭೇದಿಸಲು ಅವರಲ್ಲಿ ಒಬ್ಬೊಬ್ಬರೂ ಶಕ್ತರಾಗಿದ್ದರು. ಗೂಢಚರ್ಯೆಯ ದಳವೆಂದೇ ಅವರ ಗುಂಪನ್ನು ಕರೆಯಬಹುದು. ಪಾಟಲೀಪುತ್ರದ ಅನ್ನಸತ್ರದಲ್ಲಿ ಜರುಗಿದ ಬ್ರಾಹ್ಮಣಾಪಮಾನದ ವಾರ್ತೆ ಪರ್ವತರಾಜನಿಗೆ ತಲುಪಿದ ಮೇಲೆ ಆತನಿಗೂ ಮಂತ್ರಿ ಶಬರವರ್ಮನಿಗೂ ಆ ಸಂಬಂಧವಾಗಿ ವಿಚಾರ ವಿಮರ್ಶೆಯ ಸಂವಾದ ನಡೆಯಿತು. ಸಂದರ್ಭದ ಸೂಕ್ಷ್ಮವನ್ನು ವಿಶ್ಲೇಷಿಸುವಲ್ಲಿ ಶಬರವರ್ಮನ ಬುದ್ಧಿಮತ್ತೆ ಚಾಣಕ್ಯ ರಾಕ್ಷಸರ ಬುದ್ಧಿಮತ್ತೆಗೆ ಕಡಮೆಯಾದುದೇನೂ ಅಲ್ಲ. ಅವನು ಇಡಿಯ ಘಟನೆಗೆ, ಚಂದ್ರಗುಪ್ತನ ಬೆಂಬಲಕ್ಕೆ ನಿಂತ ಚಾಣಕ್ಯನೇ ಕರ್ತೃವೆಂದು ಸರಿಯಾಗಿಯೇ ಊಹಿಸಿದನು. ಅಮಾತ್ಯನಾದ ರಾಕ್ಷಸನ ಪರೋಕ್ಷದಲ್ಲಿಯೇ ಈ ಅವಿವೇಕ ಜರುಗಿರಬೇಕೆಂದು ಅವನು ಊಹಿಸಿದ್ದು, ರಾಕ್ಷಸನ ವ್ಯಕ್ತಿತ್ವ ಎಷ್ಟು ಪ್ರಭಾವಶಾಲಿಯೆನ್ನುವುದನ್ನು ಒಂದೇ ಮಾತಿನಲ್ಲಿ ಹೊಳೆಯುವಂತೆ ಮಾಡುತ್ತದೆ. ನಂದರು ಮುಂದಿಟ್ಟಿಯಿಲ್ಲದವರು ಎನ್ನುವುದನ್ನು ಶಬರವರ್ಮ ಬಾಯಿಬಿಟ್ಟು ಹೇಳುವುದು, ಅವರ ಮುಖ್ಯವಾದ ದೌರ್ಬಲ್ಯವನ್ನೂ ಅದರ ಪರಿಣಾಮವನ್ನೂ ಸ್ಪಷ್ಟವಾಗಿ ತೆರೆದಿಡುತ್ತದೆ. ಚಾಣಕ್ಯ ಒಬ್ಬ ದರಿದ್ರಬ್ರಾಹ್ಮಣ, ಚಂದ್ರಗುಪ್ತ ಒಬ್ಬ ಬಲಹೀನಮನುಷ್ಯ ಎಂದ ದೊರೆಯ ಮಾತನ್ನು ಪರೋಕ್ಷವಾಗಿ ಅನುಮೋದಿಸುತ್ತಲೇ ದೈವಬಲದಿಂದ ಅಘಟಿತಘಟನೆ ಸಾಧ್ಯವೆಂದು ಅವನು ಸಮರ್ಥಿಸುವುದು, ಆತ್ಯಂತಿಕವಾಗಿ ಕಥಾಗತಿಯ ನಿರ್ಧಾರಕಶಕ್ತಿ ದೈವವೇ ಎಂಬುದನ್ನು ಸಾರುವಂತಿದೆ.

ಲಂಪಾಕಾಧಿಪತಿಯು ಪರ್ವತರಾಜನ ಮೇಲೆ ಪೂರ್ವವೈರದಿಂದ ದಂಡೆತ್ತಿ ಬಂದ ಒಂದು ವಿಷಮಸಂದರ್ಭದಲ್ಲಿಯೇ ಚಂದ್ರಗುಪ್ತ ಚಾಣಕ್ಯರು ಪರ್ವತರಾಜನ ಶಾಹುರೀ ನಗರಕ್ಕೆ ಕಾಲಿಡುತ್ತಾರೆ. ಅದು ಇಕ್ಕಟ್ಟಿನ ಸಮಯ, ನೆರವು ಸಿಕ್ಕುವುದು ಕಷ್ಟ ಎಂದು ಚಂದ್ರಗುಪ್ತನಿಗೆ ತೋರಿದರೆ, ಚಾಣಕ್ಯನು ಅದನ್ನೇ ತನ್ನ ಕಾರ್ಯಸಾಧನೆಗೆ ಬಳಸಿದನೆಂಬುದು ಆತನ ಬುದ್ಧಿಯ ಓಟ ಹೇಗೆ ಹೊಸ ದಾರಿಗಳನ್ನು ಹುಡುಕುತ್ತದೆ ಎನ್ನುವುದನ್ನು ತೋರಿಸುತ್ತದೆ.

ಜನಕ್ಷಯವಾಗದ ಹಾಗೆ ತನ್ನ ಮಿತ್ರರಾಜನಿಗೆ ಶತ್ರುಬಾಧೆಯನ್ನು ತೊಲಗಿಸಿ, ಸ್ವಪಕ್ಷಕ್ಕೆ

ಸಂದರ್ಭವನ್ನು ಅನುಕೂಲಮಾಡಿಕೊಂಡ ಆತ ಇಲ್ಲಿ ಬಳಸಿದ್ದು ಭೇದೋಪಾಯದ ತಂತ್ರವನ್ನು. ಚಂದ್ರಗುಪ್ತನಿಗೆ ಉಂಟಾದ ವಿಷಾದ ವಿಪನ್ನಾವಸ್ಥೆಯ ತರುಣರಾಜಪುತ್ರನಿಗೆ ಸಹಜವಾದದ್ದು ; ಆದರೆ ಅಲ್ಲಿಯೇ ಆತನ ಸಂಕಲ್ಪಶಕ್ತಿಯ ಬೀಜ ಮೊಳೆಯಲಿರುವುದರ ಸೂಚನೆಯೂ ಉಂಟು.

ಚಂದ್ರಗುಪ್ತ ಚಾಣಕ್ಯರು ಪರ್ವತರಾಜನ ಆಸ್ಥಾನಕ್ಕೆ ಬಂದರು. ಚತುರನಾದ ಚಾಣಕ್ಯ ಪರ್ವತರಾಜನನ್ನು ಮುಖೋಲ್ಲಾಸದ ಮಾತುಗಳನ್ನಾಡಿ ಒಲಿಸಿದನು. ಅದನ್ನು ಕೃತಕ ವಿನಯವೆಂದು ತಿಳಿಯುವದೇ ಸರಿ. ಮೊದಲೇ ಸಿದ್ಧಪಡಿಸಿಟ್ಟುಕೊಂಡಿದ್ದ ಹಿರಿಯರ ಸಹಿಯ ಪತ್ರವನ್ನು ದೊರೆಗೆ ಒಪ್ಪಿಸಿದಾಗ, ಅದು ಸಮಯಾನುಕೂಲದ ಕಪಟಲೇಖವೆಂಬುದನ್ನು ಪರ್ವತರಾಜನಾಗಲಿ ಅವನ ಮಂತ್ರಿಗಳಾಗಲಿ ಯಾರೂ ತಿಳಿಯುವಂತಿರಲಿಲ್ಲ. ಅದರ ಒಕ್ಕಣೆ, ಚಂದ್ರಗುಪ್ತನ ಪ್ರಭುಲಕ್ಷಣ, ಪಂಜರಪರೀಕ್ಷೆಯ ಅವನ ಚಾತುರ್ಯ ಎಲ್ಲವೂ ಕಾರ್ಯಕ್ಕೆ ಒದಗಿದುವು.

ಪರ್ವತರಾಜನು ಮಂತ್ರಿಗಳೊಂದಿಗೆ ಸಮಾಲೋಚಿಸಿದ ವಿವರಗಳು ರಾಜನೀತಿಗೆ ಬರೆದ ಟೀಕೆಗಳೆಂಬಂತಿವೆ. ವೃದ್ಧಮಂತ್ರಿ ಉಲೂಕನು ಪ್ರಬಲರಾದ ನಂದರ ನಿಗ್ರಹವಿಲ್ಲದೆ ರಾಕ್ಷಸನ ಮೂಲಕ ಚಂದ್ರಗುಪ್ತನಿಗೆ ಅನುಕೂಲ ಮಾಡಿಕೊಡುವ ಸಾಮೋಪಾಯದ ಸಾತ್ವಿಕಮಾರ್ಗವನ್ನು ಸಲಹೆಮಾಡಿದನು ; ತರುಣಮಂತ್ರಿ ಶಬರವರ್ಮನಾದರೋ ಮುಂದೆ ತಮಗೆ ವಿಪತ್ಕಾರಕರಾಗುವ ನಂದರನ್ನು ಸೈನ್ಯಬಲದಿಂದ ನಿಗ್ರಹಿಸಿ ಚಂದ್ರಗುಪ್ತನನ್ನು ವಿಧೇಯನಾದ ಅಧೀನವ್ಯಕ್ತಿಯನ್ನಾಗಿ ಮಾಡಿಕೊಳ್ಳುವ ದಂಡೋಪಾಯದ ರಾಜಸಮಾರ್ಗವನ್ನು ಪ್ರತಿಯಾಗಿ ಸಲಹೆಮಾಡಿದನು. ತರುಣಮಂತ್ರಿಯ ವಾದ ದೊರೆಗೆ ಹಿಡಿಸಿತು. 'ಸಾಮ ಫಲಕೊಡದಿದ್ದರೆ ಉಳಿದ ಉಪಾಯಗಳು' ಎನ್ನುವ ವಿವೇಚನೆ ಅವನಿಗೆ ಆಗ ಬರಲಿಲ್ಲ.

ಪರ್ವತರಾಜನೊಂದಿಗೆ ನಡೆದ ಮರುದಿನದ ಭೇಟಿಯಲ್ಲಿ ನಂದನಿಗ್ರಹವನ್ನು ಚಾಣಕ್ಯ ಸಮರ್ಥವಾಗಿ ಪ್ರತಿಪಾದಿಸಿದನು. ಇಲ್ಲಿ ಬರುವ ಕ್ರೋಧಮೀಮಾಂಸೆ ಕೊಂಚ ಅಧಿಕ ಪ್ರಸಂಗವೆಂಬುದು ನಿಜ. ಅಲ್ಲದೆ ಚಂದ್ರಗುಪ್ತನ ರಾಜ್ಯಪ್ರಾಪ್ತಿಯ ಕಾರಣಕ್ಕಿಂತ ತನಗೆ ಉಂಟಾದ ಅಪಮಾನದ ನಿಷ್ಕೃತಿಯೇ ಅವಶ್ಯಕರ್ತವ್ಯವೆಂದು ಚಾಣಕ್ಯನು ಪ್ರತಿಪಾದಿಸಿದ್ದು ಸಹ ಸಾಂದರ್ಭಿಕವೆನ್ನುವಂತಿಲ್ಲ. ಪರ್ವತರಾಜನು ತನಗೆ ಶರಣಾಗತರ ರಕ್ಷಣೆಗಿಂತ ಲಂಪಾಕಪತಿಯ ನಿಗ್ರಹವೇ ಆದ್ಯಕರ್ತವ್ಯವೆಂದು ವಿನಯದಿಂದಲೇ ಚಾಣಕ್ಯನಿಗೆ ಮನವರಿಕೆ ಮಾಡಿದನು. ಆಗ ಚಾಣಕ್ಯನು ಅದನ್ನು ಉಪಾಯಾಂತರದಿಂದ ಸಾಧ್ಯಮಾಡಬಹುದೆಂದು ಸೂಚಿಸಿ, ಕಾರ್ಯಾಂತದಲ್ಲಿ ಅದನ್ನು ತಿಳಿಯಬಹುದೆಂದು ತನ್ನ ಕಾರ್ಯವಿಧಾನವನ್ನು ನಿವೇದಿಸಿದನು.

ಈ ಸಂಬಂಧವಾದ ಮಾತುಕತೆಗಳು ರಾಜನೀತಿಯ ವಿವರಗಳನ್ನು ಸೂಕ್ಷ್ಮವಾಗಿ ಬಿಡಿಸಿಡುತ್ತ ಹೃದಯಂಗಮವಾಗಿ ನಿರರ್ಗಳವಾಗಿ ಸಾಗುತ್ತವೆ. ಇವು ಅನ್ಯಮೂಲಗಳಲ್ಲಿ ಕಾಣದ ಸ್ವೋಪಜ್ಞ ಸಂಗತಿಗಳು. ಕಾರ್ಯವಿಧಾನವನ್ನು ಮುಂದೆ ತಿಳಿಯಬಹುದು ಎಂದು ಚಾಣಕ್ಯನು ನುಡಿದುದು ಆತನ ಬುದ್ಧಿಕೌಶಲವನ್ನು ಮಾತ್ರವಲ್ಲದೆ ಕಾದಂಬರಿಯ ತಂತ್ರ ಕೌಶಲವನ್ನು ಸಹ ಸೂಚಿಸುತ್ತದೆ. ಮುದ್ರಾಮಂಜೂಷದ ಯಶಸ್ಸು ಇರುವುದು ಇಂತಹ

ಸಂವಾದಗಳಲ್ಲಿಯೇ, ಇಂತಹ ನಿಗೂಢತೆಯಲ್ಲಿಯೇ.

ಭೇದೋಪಾಯದ ಒಂದು ಮಾದರಿ ನಮಗೆ ಮುಂದಿನ ವಿವರಗಳಿಂದ ದೊರೆಯುತ್ತದೆ. ಲಂಪಾಕಪತಿಯನ್ನು ಅಡಗಿಸಲು ಒಂದು ಕಪಟ ವೈವಾಹಿಕಸಂಬಂಧದ ವ್ಯಾಜಾಂತರವನ್ನು ಕಲ್ಪಿಸಿ ಕಾಮರೂಪಾಧಿಪತಿಗೂ ಲಂಪಾಕಪತಿಗೂ ವೈಮನಸ್ಯವೂ ಯುದ್ಧವೂ ಏರ್ಪಡುವಂತೆ ಕಪಟಲೇಖಗಳ ಸೃಷ್ಟಿ ಹಾಗೂ ನಿಯೋಗಿಗಳ ರಾಯಭಾರ ಇವನ್ನು ಶಸ್ತ್ರಗಳಾಗಿ ಚಾಣಕ್ಯನು ಬಳಸಿದ್ದಾನೆ. ಇದು ನಿರೀಕ್ಷಿತ ಫಲವನ್ನೇ ನೀಡಿತು.

ಈ ಘಟನೆಯಿಂದ ಪರ್ವತರಾಜನಿಗೆ ಲಂಪಾಕಪತಿಯ ದೆಸೆಯಿಂದ ಒದಗಬಹುದಾದ ಕಷ್ಟ ತಪ್ಪಿ ಈಗ ಅವನೇ ಚಂದ್ರಗುಪ್ತನಿಗೆ ಋಣಪಡುವಂತಾಯಿತು. ವೃದ್ಧಮಂತ್ರಿ ಉಲೂಕನು ಆ ಋಣವನ್ನು ಆತನ ಕಾರ್ಯಕ್ಕೆ ಸೇನಾಸಹಾಯವನ್ನು ಕೊಡುವ ಮೂಲಕ ತೀರಿಸಿದರೆ ಸಾಕಾಗುತ್ತದೆ ಎಂದು, ಮಧ್ಯಮಮಾರ್ಗದ ಒಂದು ಸಮಂಜಸವಾದ ಸಲಹೆಯನ್ನು, ತುಂಬ ವ್ಯಾವಹಾರಿಕವಾದುದನ್ನು, ಕೊಡುತ್ತಾನೆ. ಚಾಣಕ್ಯನ ಶಪಥದ ಹಿನ್ನೆಲೆಯಲ್ಲಿ ಚಂದ್ರಗುಪ್ತನಿಗೆ ನಂದನಿಗ್ರಹ ಮತ್ತು ಏಕಭೋಗ್ಯವಾದ ರಾಜ್ಯಪ್ರಾಪ್ತಿ ಎರಡೂ ಸಂಪೂರ್ಣವಾಗಿ ಆಗಬೇಕಾಗಿರುವಾಗ, ಈಗ ಮಾಡಿರುವ ಉಪಕಾರಕ್ಕೆ ಅಷ್ಟು ಪ್ರತ್ಯುಪಕಾರ ಸಾಕು ಎನ್ನುವುದು ಆತನ ಅಭಿಪ್ರಾಯ. ಆದರೆ ತರುಣಮಂತ್ರಿ ಶಬರವರ್ಮನು ಪರ್ವತರಾಜನಲ್ಲಿ ಅತ್ಯಾಶೆಯ ಬುದ್ಧಿ ಹುಟ್ಟುವಂತೆ ಮಾಡುತ್ತಾನೆ ; ಚಂದ್ರಗುಪ್ತನ ರಾಜ್ಯದಲ್ಲಿ ಸ್ವಲ್ಪ ಭಾಗ ಸಿಕ್ಕುವಂತೆ ವ್ಯವಹಾರ ಕುದುರಲಿ ಎನ್ನುತ್ತಾನೆ. ದೊರೆಗೆ ಇದೇ ಇಷ್ಟವಾಗುತ್ತದೆ ; ಮಗನ ಮೂಲಕ ಈ ವ್ಯವಹಾರ ಕುದುರಿಸಲು ಅವನು ನೋಡುತ್ತಾನೆ.

ಈ ಭಾಗವನ್ನು ಚಿತ್ರಿಸುವಾಗ ರವಿನರ್ತಕ ಮಹಾದೇವ ಮೊದಲಾದವರು ಚಾಣಕ್ಯನೇ ಪರ್ವತರಾಜನಿಗೆ ಅರ್ಧರಾಜ್ಯದ ಆಮಿಷವನ್ನು ತೋರಿಸಿದನೆಂದು ನಿರೂಪಿಸಿದ್ದಾರೆ. ಆದರೆ ಮುದ್ರಾಮಂ. ದ ಕರ್ತೃ ಇದನ್ನು ಸೂಕ್ಷ್ಮವಾಗಿ ಪರಿವರ್ತಿಸಿದ್ದಾನೆ. ಇಲ್ಲಿ ಚಾಣಕ್ಯನಿಗೆ ಇದು ದುರಾಶೆಯೆಂದು ಕಾಣುತ್ತದೆ ; ಪರ್ವತರಾಜನು ನಂಬಿಕೆಗೆ ಅರ್ಹನಲ್ಲವೆಂದು ಅವನು ಸುಲಭವಾಗಿ ತಿಳಿಯುತ್ತಾನೆ. ಚತುರನಾದ ಆತ ಸಂಧಾನಕ್ಕೆ ಬಂದ ಪರ್ವತರಾಜನ ಪುತ್ರ ಮಲಯಕೇತುವನ್ನು ಮತ್ತೆ ಕೃತಕವಿನಯದಿಂದ ಮರುಳುಮಾಡಿ, ಅರ್ಧರಾಜ್ಯದ ಆಮಿಷವನ್ನು ಸ್ವಯಂ ಎರೆ ಮಾಡಿ ಒಡ್ಡಿ, ಇವರಿಗೆ ಕಾರ್ಯಾಂತದಲ್ಲಿ ತಕ್ಕ ಶಾಸ್ತಿ ಮಾಡಬೇಕೆಂದು ಆಗಲೇ ಕಲ್ಪಿಸುತ್ತಾನೆ. ಈ ಪರಿವರ್ತನೆ ಮನೋಜ್ಞವಾದುದು. ಮುಂದೆ ರಾಜ್ಯಲೋಭಿಯಾದ ಪರ್ವತರಾಜನ ಸೇನೆ ಹೆಚ್ಚಿನ ಉತ್ಸಾಹದಿಂದ ನಂದರಾಜ್ಯಾಭಿಮುಖವಾಗಿ ನಡೆಯುತ್ತದೆ.

೫. ಪರ್ವತರಾಜನ ಸೇನೆಯವರಿಂದ ನಂದರ ಗೂಢಚಾರರ ಸೆರೆ, ಶಿಕ್ಷೆ ಮತ್ತು ಗಡೀಪಾರು ಇವುಗಳ ಮೂಲಕ ಆಶ್ವಾಸ ನಾಟಕೀಯವಾಗಿ ಆರಂಭಗೊಂಡಿದೆ. ಮುಂದೆ ದೃಶ್ಯಮಾಲೆಯಂತೆ ಅನ್ಯ ಗೂಢಚಾರರಲ್ಲಿ ಒಬ್ಬೊಬ್ಬರೂ ಬಂದು ರಾಕ್ಷಸನಿಗೆ ಕಾಣಿಸಿಕೊಂಡು ನಂದರ ಗಡಿಪ್ರಾಂತಗಳಲ್ಲಿ ಪರರಾಜರಿಂದ ಉಂಟಾಗುತ್ತಿದ್ದ ಕೋಲಾಹಲವನ್ನು ವಿಜ್ಞಾಪಿಸಿದ ವಿವರಗಳಿವೆ. ಏಕಕಾಲದಲ್ಲಿಯ ಈ ಘಟನಾವಳಿ ಕೊಂಚ ಕೃತಕ ಎನ್ನುವಂತಹುದು. ರಾಕ್ಷಸನು ಮಂತ್ರಿ ಸುಮತಿಯೊಂದಿಗೆ ಇವನ್ನು ವಿಮರ್ಶಿಸುತ್ತಾನೆ; ಅವನು ದಕ್ಷನೆನಿಸಿದ್ದೂ ಈ ಘಟನಾವಳಿಯ ಸುಳಿವುಗಳು ಅವನಿಗೆ ಮೊದಲೇ ಏಕೆ ತಲುಪ

ದಾದವು, ತಿಳಿಯದು. ಈ ವಿವರಗಳನ್ನು ಲಕ್ಷಿಸಿದರೆ, ನಂದರಾಜ್ಯದ ಸುವ್ಯವಸ್ಥೆಯಲ್ಲಿ ವ್ಯತ್ಯಯಗಳಿಗೆ ಅವಕಾಶವಿರಲಿಲ್ಲವಾದರೂ ಮಂತ್ರಿ ಸುಮತಿ ಪ್ರಬಲವಾದ ದೋಷತ್ರಯ ಗಳಿಂದ ನಂದರ ಅನುಚಿತಕಾರ್ಯಗಳೇ ಅವರ ರಾಜ್ಯದ ಪತನಕ್ಕೆ ಹೇತುಗಳಾದುವು ಎಂದು ಹೇಳಬೇಕಾಗುತ್ತದೆ. ರಾಕ್ಷಸನಿಗೇನೋ ಇದು ದೈವದುರ್ವಿಪಾಕವೆಂದೇ ತೋರುತ್ತದೆ. "ಅರಸುಗಳಿಗೆ ಮಹಾಲಾಭಭ್ರಾಂತಿ ಉಂಟಾದರೆ ಸಖ್ಯವನ್ನಾಗಲಿ ಸತ್ಯವನ್ನಾಗಲಿ ದಾಕ್ಷಿಣ್ಯ ವನ್ನಾಗಲಿ ತ್ಯಜಿಸುವರೆಂಬುದು ಈ ಕಲಿಯುಗಧರ್ಮವು" ಎಂದು ಅವನು ಪರ್ವತರಾಜನ ವರ್ತನೆಯನ್ನು ವಿಮರ್ಶಿಸಿದ್ದು ಸೂಕ್ತವಾಗಿಯೇ ಇದೆ.

ಪರ್ವತರಾಜನ ಪಾಳಯದಿಂದ ಬಂದ ಗೂಢಚಾರರು ರಾಕ್ಷಸನಿಗೆ ಅಲ್ಲಿಯ ವಿದ್ಯ ಮಾನವನ್ನೂ ಸೇನಾಸನ್ನಾಹವನ್ನೂ ಅರಿಕೆಮಾಡಿದಾಗ ರಾಕ್ಷಸನು ನಡೆದ ಘಟನೆಗಳಿಗೆ ಕಾರ್ಯಕಾರಣಸಂಬಂಧಗಳನ್ನು ಸರಿಯಾಗಿ ತರ್ಕಿಸಿದರೂ, ಮೊದಲೇ ಏಕೆ ಈ ವಿಚಾರ ಗಳನ್ನು ಅವನು ಚಿಂತಿಸಿ ಭದ್ರತೆಯ ವ್ಯವಸ್ಥೆ ಮಾಡದೆ ಹೋದನೋ, ತಿಳಿಯದು. ಆ ವ್ಯವಸ್ಥೆ ಅನಿವಾರ್ಯವಾದಾಗ, ಮಿತ್ರರಾಜನಿಗೆ ಪತ್ರ ಬರಸಿ ಸಹಾಯ ಕೋರಿದನು. ನಂದ ರನ್ನು ಕುರಿತು, ಚಾಣಕ್ಯ ಚಂದ್ರಗುಪ್ತರನ್ನು ಕುರಿತು ದೀರ್ಘವಾಗಿ ವಿಶ್ಲೇಷಿಸುವಾಗಲೂ ಶತ್ರುಗಳ ಸಾಮರ್ಥ್ಯವನ್ನು ಅವನು ಸರಿಯಾಗಿ ಗ್ರಹಿಸದೆ ಕೀಳಾಗಿ ಕಂಡದ್ದು ಮೆಚ್ಚುವಂಥ ದಲ್ಲ. ನಂದರಿಂದುಂಟಾದ ಬ್ರಾಹ್ಮಣಾಪಮಾನ ಗಂಭೀರವಾದ ವಿಷಯವೆಂದೇ ಅವನಿಗೆ ತೋರಲಿಲ್ಲ ; ಆ ವಿಷಯಕ್ಕೆ ಅವನು ಅವರನ್ನು ಆಕ್ಷೇಪಿಸಿಲೂ ಇಲ್ಲ. 'ನಡೆದು ಹೋದ ಮಾತಿಗೆ ಈಗ ನುಡಿದು ಫಲವೇನು ?' ಎಂದು ತೇಲಿಸಿಬಿಟ್ಟನು. ನಂದರು ಸಹ ರಾಕ್ಷಸನ ರಾಜ್ಯಕಾರ್ಯನಿರ್ವಹಣೆಯಲ್ಲಿ ಪೂರ್ಣಭರವಸೆಯಿಟ್ಟು, ತಾವು ಸ್ವತಂತ್ರ ರಾಜನೀತಿಕುಶಲ ರೇನೂ ಅಲ್ಲ, 'ಸಚಿವಾಯತ್ತ ಪ್ರಭುತ್ವ'ವನ್ನು ಅನುಭವಿಸುವವರು ಎಂದೇ ತೋರಿಸಿ ಕೊಂಡರು.

ಮುಂದೆ ರಾಕ್ಷಸನು ಬಂದ ವಿಪತ್ತಿಗೆ ಪ್ರತೀಕಾರವಾಗಿ, ಮುಖ್ಯವಾದ ರಾಯಸಗಳನ್ನು ಬರಸಬೇಕಾಗಿ ಬಂದ ಸಂದರ್ಭದಲ್ಲಿ ಅವನು ಮಾಡಿದ ವಿವೇಕಯುತವಲ್ಲದ ನಡವಳಿಕೆ ಯೆಂದರೆ, ಕ್ಷಪಣಕನನ್ನು ಹತ್ತಿರ ಇರಗೊಟ್ಟದ್ದು. ರಾಜನೀತಿಜ್ಞನಾಗಿಯೂ, ಇಲ್ಲಿ ಈ ಹೊಸಪರಿಚಯದ ಮನುಷ್ಯನನ್ನು ಹೇಗೆ ನಂಬಿದನೋ, ತಿಳಿಯದು. ಅವನು ತುಂಬ ಸಾತ್ವಿಕವ್ಯಕ್ತಿ, ಸಾಧು ಸಂತರಲ್ಲಿಯೂ ದೈವದಲ್ಲಿಯೂ ತುಂಬ ಗೌರವಬುದ್ಧಿಯುಳ್ಳವನು, ನಿಷ್ಕಪಟಿ, ದಾಕ್ಷಿಣ್ಯಪರ ಎಂಬುದರಿಂದ ಆ ಗುಣಗಳೇ ಇಲ್ಲಿ ದೌರ್ಬಲ್ಯವಾಗಿ ಪರಿಣಮಿಸಿ ತೆನ್ನಬೇಕು. ಅಲ್ಲದೆ ಜನರನ್ನು ನಂಬಿಸಿ ಮರುಳುಮಾಡುವ ಶಕ್ತಿ ಕ್ಷಪಣಕವೇಷದ ಇಂದು ಶರ್ಮನಿಗೆ ಇತ್ತು ಎನ್ನಬೇಕು. ಅವನ ಮಾತು ವರ್ತನೆಗಳನ್ನು ಗಮನಿಸಿದರೆ ಇದು ತಿಳಿಯುತ್ತದೆ. ಮಹಾದೇವ ರವಿನರ್ತಕರ ಕಥನದಲ್ಲಿ ಬರುವ ಚಾಣಕ್ಯನು ಮಾಡಬಹು ದಾದ ಆಭಿಚಾರಿಕದ ಪ್ರತಿಯಾಗಿ ಮಾಂತ್ರಿಕನಾದ ಕ್ಷಪಣಕನನ್ನು ತನ್ನಲ್ಲಿರಿಸಿಕೊಂಡು ರಾಕ್ಷಸನು ಪೋಷಿಸುತ್ತಿದ್ದನೆಂಬುದಾಗಿರುವ ವಿವರಗಳನ್ನು ಮುದ್ರಾಮಂ. ಕರ್ತೃ ಆ ಎರಡೂ ಪಾತ್ರಗಳ ಘನತೆಯ ದೃಷ್ಟಿಯಿಂದ ಲೋಪಿಸಿರುವುದು ತೃಪ್ತಿಕರವಾಗಿಯೇ ಇದೆ. ಚಾಣಕ್ಯನ ಸಲಹೆಯೋ ಇಂದುಶರ್ಮನ ಸ್ವಯಂಸ್ಫೂರ್ತಿಯೋ ಏನಾದರಿರಲಿ, ಶತ್ರು ಪಲಾಯನಜಪವೆಂಬ ಕಪಟ ಧಾರ್ಮಿಕವಿಧಿಯೊಂದನ್ನು ತನ್ನ ಸಹಚರರೊಂದಿಗೆ ಸೇರಿ

ಅವನು ಕಲ್ಪಿಸಿ ಧರ್ಮಶ್ರದ್ಧೆಯ ರಾಕ್ಷಸನನ್ನು ಕಷ್ಟಗಳ ಹೊಂಡಕ್ಕೆ ತಳ್ಳುತ್ತಾನೆ.

ಪರರಾಜರ ಬಳಿಯಲ್ಲಿ ವರ್ತಕವೇಷದಲ್ಲಿದ್ದ ನಂದರ ಕೆಲವರು ನಿಯೋಗಿಗಳಿಗೆ ಚಂದ್ರಗುಪ್ತನ ವಧೆ ಇಲ್ಲವೆ ಪರ್ವತರಾಜನ ಮಿತ್ರರಾಜರು ಅವನ ಕಾರ್ಯದಲ್ಲಿ ಒದಗದೆ ಹೋಗುವುದು ಈ ಎರಡು ಆಶಯಗಳ ಪತ್ರಗಳನ್ನು ರಾಕ್ಷಸನು ಬರಸುವ ಸಂದರ್ಭ ತುಂಬ ರಹಸ್ಯವಾದ್ದು, ಮುಖ್ಯವಾದ್ದು. ಇಲ್ಲಿ ಕ್ಷಪಣಕನು ಕಪಟಮೌನವನ್ನಾಚರಿಸಿ ವಿಷಯವನ್ನು ಗ್ರಹಿಸಿ ಚಾಣಕ್ಯನಿಗೆ ಅದನ್ನು ಮುಟ್ಟಿಸಿದನು. ಅದು ಪರಿಣಾಮಕಾರಿ ಯಾಯಿತು.

ರಾಕ್ಷಸನು ಈಗ ನಂದರ ವಿಧೇಯ ಅಧಿಕಾರಿಗಳು ನಿಷ್ಕಾರಣವಾದ ಮೌರ್ಯಪುತ್ರರ ವಧೆಯಿಂದ ಚಂದ್ರಗುಪ್ತನಿಗೆ ಪಕ್ಷಪಾತಿಗಳಾಗಿರುವುದನ್ನು ಗುರುತಿಸಿದ್ದಾನೆ. ಅವರನ್ನು ತನ್ನತ್ತ ಸೆಳೆದುಕೊಳ್ಳಲು ಆಸ್ಥಾನಕ್ಕೆ ಬರಮಾಡಿ ನಂದರ ಶ್ರೇಯಸ್ಸಿಗೆ ಶ್ರಮಿಸುವಂತೆ ಅವರಲ್ಲಿ ಕೋರುತ್ತಾನೆ. ಅದರ ಜೊತೆಗೆ ಚಂದ್ರಗುಪ್ತನ ರಾಜ್ಯಾನರ್ಹತೆಯನ್ನು ಹೇಳಲು ಅವನು ಮರೆಯುವುದಿಲ್ಲ. ಬಾಗುರಾಯಣ ಡಿಂಗಿರಾತ ಮೊದಲಾದವರಿಗೆ ಯುದ್ಧಕಾಲದ ಏರ್ಪಾಡುಗಳನ್ನೂ ಅವರ ಕರ್ತವ್ಯಗಳನ್ನೂ ಸ್ಪಷ್ಟಪಡಿಸುತ್ತಾನೆ. ಈ ಸಂದರ್ಭವನ್ನು ಬಳಸಿ ಮುದ್ರಾಮಂ.ದ ಕರ್ತೃ ಅರ್ಥಶಾಸ್ತ್ರ ಮೊದಲಾದ ಆಕರಗಳ ಅವಲಂಬನೆಯಿಂದ ಯುದ್ಧಸನ್ನಾಹ, ಸೇವಾನಿರ್ವಹಣೆ, ಗೂಢಚರ್ಯೆ, ಪ್ರಭು ಮತ್ತು ಯೋಧಲಕ್ಷಣ, ಅಧಿಕಾರಿಗಳ ಕರ್ತವ್ಯ ಇತ್ಯಾದಿ ಸಂಗತಿಗಳನ್ನು ಪ್ರಾಸಂಗಿಕವಾಗಿ ತರುವುದರ ಮೂಲಕ ತನ್ನ ಗ್ರಂಥ ರಾಜನೀತಿಯಲ್ಲಿ ಆಸಕ್ತರಾದವರಿಗೆ ಒಂದು ಕೈಪಿಡಿಯಾಗುವಂತೆಯೂ ಮಾಡಿದ್ದಾನೆ.

ಕ್ಷಪಣಕನ ಶಿಷ್ಯ ವೇಗಶರ್ಮನ ಪತ್ರವನ್ನು ಓದಿಕೊಂಡ ಚಾಣಕ್ಯನು ಕೂಡಲೇ ಜಾಗೃತನಾಗಿ, ಉಭಯ ಸೇನಾಬಲದ ಹೆಚ್ಚುಕಡಮೆಗಳನ್ನು ತನ್ನಲ್ಲಿಯೇ ವಿಚಾರಮಾಡಿ, ನಂದರನ್ನು ಸೇನೆಯಿಂದ ಪ್ರತ್ಯೇಕಿಸಿ ಕೊಲ್ಲುವ ಹೂಟವನ್ನು ಆಲೋಚಿಸಿದನು. ಪರ್ವತ ರಾಜನಿಗೆ ರಾಕ್ಷಸನ ಸಂಚನ್ನು ವಿವರಿಸಿದನು.

ಈ ವೇಳೆಗೆ ರಾಕ್ಷಸನು ಧನಗುಪ್ತಾದಿ ನಿಯೋಗಿಗಳಿಗೆ ಬರೆದಿದ್ದ ಪತ್ರಗಳನ್ನು ತಂದ ಗೂಢಚಾರರನ್ನು ಗುರುತಿಸಿ, ಪರ್ವತರಾಜನ ಪಾಳೆಯದಲ್ಲಿ ಪತ್ರಗಳನ್ನು ಓದಿಸಿ ತಿಳಿಯ ಲಾಯಿತು. ವಿವರಗಳು ವೇಗಶರ್ಮನು ತಂದ ಪತ್ರದ ವಿವರಗಳೊಂದಿಗೆ ತಾಳೆಯಾದವು. ನಿಯೋಗಿಗಳನ್ನು ಪ್ರತ್ಯೇಕವಾಗಿ ಕಾವಲಿಟ್ಟು ಹೊರಡಿಸಲಾಯಿತು. ಮುಂದಿನ ತಂತ್ರವಾಗಿ ಪರ್ವತರಾಜನ ಗಮನಕ್ಕೆ ತಂದು ಕಾಶೀರಾಜ ಮುಖ್ಯರಾದ ಮೂವರಿಗೆ ಸಹಾಯಕ್ಕೆ ಚಾಣಕ್ಯನು ಪತ್ರಗಳನ್ನು ಬರಸಿ ಕಳಿಸಿದನು. ನಂದರಿಗೆ ತುಂಬ ಆಪ್ತರಾದ ಈ ದೊರೆಗಳಿಗೆ ಚಾಣಕ್ಯನು ಪತ್ರಗಳನ್ನು ಬರಸಿ ಸಹಾಯ ಕೋರಿದನೆಂಬುದು ಒಂದು ನಿಗೂಢವಾದ ರಾಜತಂತ್ರದ ಭಾಗವೇ ಸರಿ.

ಕ್ಷಪಣಕವೇಷದ ಇಂದುಶರ್ಮನ ವಿಷಯದಲ್ಲಿ ಈಗ ರಾಕ್ಷಸನಿಗೆ ಸಂಶಯ ಹುಟ್ಟು ವುದು ಸ್ವಾಭಾವಿಕವಾಗಿತ್ತು. ಹಾಗೆಂದೇ ಅವನು ಎಚ್ಚರವಹಿಸಿ ಪುರಬಹಿರ್ಭಾಗದ ಜಗತಿ ಕಟ್ಟೆಯನ್ನು ಆಶ್ರಯಿಸಿದನು. ಚಾಣಕ್ಯನು ವೇಗಶರ್ಮನ ಮೂಲಕ ಇಂದುಶರ್ಮಾದಿಗಳು ಪಾಟಲೀಪುರದ ರಾಜ್ಯಾಧಿಕಾರಿಗಳಲ್ಲಿ ಹೇಗೆ ರಹಸ್ಯವಾಗಿ ಸೇರಿದ್ದಾರೆಂಬುದನ್ನು ತಿಳಿದನು.

ಅವನ ಭಾಗಕ್ಕೆ ಅವರ ಕಾರ್ಯಾಚರಣೆ 'ನಂದಸಂಹಾರಸಾಧನಂಗಳು'. ಜಪಶಾಲೆಯಲ್ಲಿ ನಡೆಯುವ ಹೋಮದ ಪೂರ್ಣಾಹುತಿ ನಿಮಿತ್ತವಾಗಿ ಅಲ್ಲಿ ಪ್ರತ್ಯೇಕವಾಗಿ ಸೇರುವ ನಂದರನ್ನು ವಧಿಸುವಂತೆ ಚಾಣಕ್ಯನು ಮಾಸೋಪವಾಸಿಗೆ ಪ್ರತಿಸಂದೇಶ ಕಳಿಸಿದನು. ಇದೇನೂ ಸಾಧಾರಣವಾದ ಷಡ್ಯಂತ್ರವಲ್ಲ.

ಸ್ವಪಕ್ಷಕ್ಕೆ ಸಹಾಯ ಕೋರಿ ಪರ್ವತರಾಜನಿಂದ ನಂದರ ಮಿತ್ರರಾಜರಿಗೆ ರವಾನೆಯಾದ ನಿಯೋಗದ ಆಳ ಅಗಲಗಳನ್ನು ಆ ದೊರೆಗಳಿರಲಿ, ಅಮಾತ್ಯ ರಾಕ್ಷಸನಂಥ ವಿಚಕ್ಷಣ ರಾಜನೀತಿಜ್ಞನೂ ತಿಳಿಯಲಿಲ್ಲವೆನ್ನುವುದು ಸೋಜಿಗದ ಸಂಗತಿ. ಕಾಶಿರಾಜನು ರಹಸ್ಯವಾಗಿ ಪಾಟಲೀಪುರಕ್ಕೆ ಬರಸಿದ ಪತ್ರಕ್ಕೆ ಉತ್ತರಿಸುತ್ತ ರಾಕ್ಷಸನು ಚಂದ್ರಗುಪ್ತನ ಸಂಹಾರವನ್ನು ಸೂಚಿಸಿದ್ದೇನೋ ನಿರೀಕ್ಷಿತವೇ. ಆದರೆ ಅದನ್ನು ಚಾಣಕ್ಯನು ತರ್ಕದಿಂದಲೇ ಊಹಿಸಿದನು; ಜಪಶಾಲೆಯ ವ್ಯತಿಕರವೂ ಪರ್ವತರಾಜಸೇನಾನಿಯಾದ ಶೇಖರನ ಸೈನಿಕ ಆಚರಣೆಯೂ ನಂದರ ನಿಗ್ರಹಕ್ಕೆ ಸಮರ್ಥಸಾಧನಗಳೆಂದೂ ಅದಕ್ಕೆ ಕಮಲಾಪೀಡನು ನಿರ್ವಹಿಸಿದ ಈ ನಿಯೋಗವು ಸೂಕ್ತವಾದ ಭೂಮಿಕೆಯೆಂದೂ ಅವನು ಖಚಿತಪಡಿಸಿಕೊಂಡನು. ರಾಜ ಕಾರ್ಯ ನಿರ್ವಹಣೆಯಲ್ಲಿ ಕಾಲವಂಚನೆಯ ಸ್ಥಾನ ಪರಿಣಾಮಗಳನ್ನು ಈ ನಿಯೋಗ ಸಂದರ್ಭ ವಿದಿತಪಡಿಸುತ್ತದೆ.

೬. ರಾಕ್ಷಸನ ಭೇದೋಪಾಯ ಭಗ್ನವಾಯಿತು. ವೇಗಶರ್ಮನು ಚಾಣಕ್ಯನ ಸಂದೇಶ ವನ್ನು ಮಾಸೋಪವಾಸಿಗೂ ಕ್ಷಪಣಕನಿಗೂ ಮುಟ್ಟಿಸಿದನು. ಈ ಸಂದೇಶವೆಂದರೆ ನಂದರ ವಧೆಯೇ. ರಾಕ್ಷಸನು ಮಿತ್ರರಾಜರ ಒಕ್ಕೂಟವನ್ನು ಒಡೆಯಲು ಸಂದೇಶಗಳೊಂದಿಗೆ ಪರ್ವತರಾಜನ ಪ್ರಾಂತಕ್ಕೆ ಕಳುಹಿದ್ದ ಚಾರರಲ್ಲಿ ಕೆಲವರು ತಪ್ಪಿಸಿಕೊಂಡು ಬಂದು ನೀಡಿದ ವರದಿಯಿಂದ ರಾಕ್ಷಸನಿಗೆ ಆಶ್ಚರ್ಯವಾಯಿತು. ಈಗ ಮೊದಲ ಸಲ ಅವನಿಗೆ ಚಾಣಕ್ಯನು ಸಾಹಸವಂತನೆಂದು ಕಂಡಿತು ; ನಂದರ ಅದೃಷ್ಟದ ವಿಷಯದಲ್ಲಿ ಶಂಕೆ ಹುಟ್ಟಿತು. ಅವನ ನಡೆ ಹೀಗೆಯೇ ; ಕೆಟ್ಟ ಮೇಲೆಯೇ ವಿಚಾರ ಮನಸ್ಸಿಗೆ ಮುಟ್ಟುವುದು. ಅವನಿಗೆ ಈಗ ಕ್ಷಪಣಕನ ಮೇಲೆ ಅನುಮಾನ ಬಂತು. ಪರೋಕ್ಷವಾಗಿ ಅವನನ್ನು ಪರೀಕ್ಷಿಸಲು ಒಬ್ಬ ಬ್ರಾಹ್ಮಣನನ್ನು ಗೊತ್ತುಮಾಡಿದನು. ಶತ್ರುಪಕ್ಷದ ಸೇನೆಯ ಸಜ್ಜು ಸನ್ನಾಹಗಳನ್ನು ಚಾರರಿಂದ ಕೇಳಿ ತಿಳಿದನು. ಆ ಚಾರರು ಕೊಡುವ ಸೇನೆಯ ವಿವರಗಳು ವರ್ಣಾನಾತ್ಮಕ ವಾದುವು ; ಸಾಂಪ್ರದಾಯಿಕವಾದ ಕಥನವೈಖರಿಯಿಂದ ಕೂಡಿದವು ; ಹೊಸಕಾಲದ ಕಾದಂಬರಿಗಳಿಗೆ ಹೊಂದಿಕೊಳ್ಳದ ರೀತಿಯಲ್ಲಿ ಢಾಳಾಗಿ ಎದ್ದು ಕಾಣುವಂಥವು.

ಸರ್ವಾರ್ಥಸಿದ್ಧಿರಾಜನು ಪುತ್ರರಾದ ನಂದರನ್ನು ಕಂಡು ಸನ್ನಿವೇಶವನ್ನು ವಿಮರ್ಶಿಸಿ ಪರ್ವತರಾಜನೊಂದಿಗೆ ತಾತ್ಕಾಲಿಕವಾಗಿ ಸಂಧಿಗೆ ಸಲಹೆ ಮಾಡಿದನು. ಇದು ವೃದ್ಧರಾಜ ನಿಗೆ ಉಚಿತವಾದ ಸಲಹೆ. ರಾಕ್ಷಸನೂ ಸನ್ನಿವೇಶವನ್ನೂ ಸೂಕ್ಷ್ಮವಾಗಿ ವಿಮರ್ಶಿಸಿ ಮೊದಲು ಯುದ್ಧ, ಬಳಿಕ ಸಂಧಿ ಎಂಬುದನ್ನು ಸಮರ್ಥಿಸಿದನು. ನಂದರು ಹಿಂದಿನ ಜಯಗಳನ್ನು ಸ್ಮರಿಸಿ, 'ಈಗಲೂ ಜಯವೇ ಸಿದ್ಧ' ಎಂದು ಉತ್ಸಾಹದಿಂದ ಬೀಗಿದರು.

ಪರೀಕ್ಷೆಗೆ ಬಂದ ಬ್ರಾಹ್ಮಣನ ಮನೋಗತವನ್ನು ಕ್ಷಪಣಕನು ಸುಲಭವಾಗಿ ಗುರುತಿಸಿ ದನು. ಅವನು ದಿಟವಾಗಿ ಬೌದ್ಧನಲ್ಲ, ರಾಕ್ಷಸನಿಂದ ಪ್ರೇಷಿತನಾದ ವೇಷಧಾರಿಯೆಂದು ಪತ್ತೆಯಾದ ಕೂಡಲೇ ಅವನಿಗೆ ಕಠಿನವಾದ ವ್ರತ ವಿಧಿಸಿ ಗೋಳುಗುಟ್ಟಿಸಿದನು. ಸದ್ಯ

ಬಿಡುಗಡೆಯಾದರೆ ಸಾಕೆಂದು ಅವನು ಕ್ಷಪಣಕನನ್ನು ದಿಟದ ಸಂನ್ಯಾಸಿಯೆಂದೇ ರಾಕ್ಷಸನಿಗೆ ಹೇಳಿಬಿಟ್ಟನು. ಈಗ ರಾಕ್ಷಸ ತನ್ನ ಭೇದೋಪಾಯ ಭಗ್ನವಾದುದಕ್ಕೆ ಬೇರೆ ಕಾರಣವನ್ನು ಊಹಿಸಿ, ಯುದ್ಧಸಿದ್ಧತೆಗೆ ಮನಸ್ಸು ಕೊಟ್ಟನು.

ಪರ್ವತರಾಜನಿಗೆ ನಂದರ ಸೇನೆಯ ಆಕ್ರಮಣದ ಗತಿ ತಿಳಿದು, ಅವನು ಶಬರವರ್ಮನೊಂದಿಗೆ ಸಮಾಲೋಚಿಸಿ, ಪಾಟಲೀಪುರದ ಮುತ್ತಿಗೆಯೂ ಸೇರಿದಂತೆ ಬೇರೆ ಬೇರೆ ನೆಲೆಗಳಲ್ಲಿ ನಂದರ ಮೇಲೆ ಕಾರ್ಯಾಚರಣೆಗೆ ಅಪ್ಪಣೆ ಮಾಡಿದನು. ಇಲ್ಲಿ ಬರುವ ಭೌಗೋಳಿಕ ಸೈನ್ಯಕೀಯ ವಿವರಗಳು ಮುದ್ರಾಮಂ. ಕರ್ತೃವಿನ ಅಗಾಧವಾದ ವಸ್ತುಜ್ಞಾನದ ಪ್ರೌಢಿಮೆಗೆ ನಿದರ್ಶಕಗಳಾಗಿವೆ.

ನಂದರು ಯುದ್ಧಕ್ಕೆ ಹೊರಡುವ ಮೊದಲು ತಮ್ಮ ಪತ್ನಿಯರನ್ನು ಅಂತಃಪುರದಲ್ಲಿ ಕಂಡು, ಅವರನ್ನು ಒಪ್ಪಿಸಿ, ಬೀಳ್ಕೊಳ್ಳುವ ಕಥನ ಮುದ್ರಾಮಂ.ದಲ್ಲಿ ವಿಸ್ತಾರವಾಗಿ ಬಂದಿದೆ. ಇದು ಪ್ರಾಚೀನ ಸಂಸ್ಕೃತ ಕನ್ನಡ ಕಾವ್ಯಗಳ ಸದೃಶಸಂದರ್ಭಗಳ ಪ್ರತಿಫಲನಗಳೆಂಬಂತೆ ಸಾಂಪ್ರದಾಯಿಕವಾಗಿದೆ. ಇಲ್ಲಿ ಕರುಣ ಶೃಂಗಾರಗಳು ಸ್ವಾಭಾವಿಕವಾಗಿಯೇ ಎಡೆಪಡೆದಿದ್ದು, ಕಥೆಯ ರಂಜನೆಗೆ ಪೌರಾಣಿಕತೆಯ ಕಳೆಯನ್ನು ಕೂಡಿಸಿದೆ. ವರ್ಣನೆಯಲ್ಲಿ ಅಶ್ಲೀಲತೆಯೇನೂ ಇಲ್ಲ. (ಈ ಸಂದರ್ಭದಲ್ಲಿ ನಂದನ ಜ್ಯೇಷ್ಠಪತ್ನಿ ಪತಿಗೆ ಹೇಳಿದ ಬುದ್ಧಿವಾದ ಮನೋಜ್ಞವಾದುದು (ಇದು ಘ ಪ್ರತಿಯಲ್ಲಿ ಮಾತ್ರ). 'ನಿರ್ವ್ಯಾಜವಾಗಿ ಸ್ವಜನಸಂಹೃತಿದೋಷ'ದ ನಂದರ ಅಕಾರ್ಯವನ್ನೂ ಅಪಕಾರಕ್ಕೆ ಪ್ರತಿಯಾಗಿ ಅಪಕಾರವನ್ನೇ ಮಾಡಲಿಚ್ಛಿಸಿದ ಚಂದ್ರಗುಪ್ತನ ಕ್ಷಾತ್ರಧರ್ಮದ ಅನಿವಾರ್ಯವನ್ನು ಆಕೆ ಸ್ಪಷ್ಟವಾಗಿ ಎತ್ತಿ ಆಡಿದ್ದಲ್ಲದೆ, ಕುಲಕ್ರಮಾಗತವಾದ ಸೇನಾಧಿಪತ್ಯವನ್ನು ಚಂದ್ರಗುಪ್ತನಿಗೆ ನೀಡಿ ಚಾಣಕ್ಯನಿಗೆ ಎಸಗಿದ ಅಪರಾಧಕ್ಕೆ ಅವನಲ್ಲಿ ಕ್ಷಮೆ ಕೋರಬೇಕೆಂದು ಸಹ ಸಲಹೆ ಮಾಡಿದಳು. ಈ ನಿರೂಪಣೆ ಸ್ವಾರಸ್ಯಕರವಾದುದು. ಆದರೆ ದೈವಬಲಹೀನರಾದ ನಂದರಿಗೆ ಅದು ಇಷ್ಟವಾಗಲಿಲ್ಲ.)

ಕ್ಷಪಣಕನು ರಾಕ್ಷಸನಿಗೆ ಅನನುಕೂಲವಾಗುವಂತೆ ಯುದ್ಧಕ್ಕೆ ಲಗ್ನನಿಷ್ಕರ್ಷೆ ಮಾಡಿಕೊಟ್ಟನೆಂದು ಮುದ್ರಾಮಂ.ದ ಸೌಮ್ಯೋಕ್ತಿ ; ರವಿನರ್ತಕ-ಮಹಾದೇವರ ಆಕರಗಳಲ್ಲಿ ಯಾದರೋ, ಏನೋ ವಿಪತ್ತು ಹೇಳಿ ರಾಕ್ಷಸ ಹೊರತಾಗಿ ಉಳಿದ ಸೇನಾಧಿಕಾರಿಗಳು ಯುದ್ಧಕಾರ್ಯದಲ್ಲಿ ಸಹಕರಿಸದಿರುವಂತೆಯೇ ಅವನು ಮಾಡಿದನೆಂದಿದೆ. ರಾಕ್ಷಸನಿಗೆ ಸಂಶಯ ಹೆಚ್ಚಿಸುವ ಈ ಸಂಗತಿಯನ್ನು ಮುದ್ರಾಮಂ. ಕರ್ತೃ ಕೈಬಿಟ್ಟಿರುವುದೇ ಸರಿ.

ಯುದ್ಧ ಪರ್ವತರಾಜನ ಎಣಿಕೆಯಂತೆ ಒಮ್ಮಿಂದೊಮ್ಮೆಗೇ ಆರಂಭಗೊಳ್ಳುತ್ತದೆ. ಅದರ ವಿವರಗಳು ಡಿಂಗಿರಾತ ಭದ್ರಭಟರ ಚಾರರ ಮೂಲಕ ರಾಕ್ಷಸನಿಗೆ ತಿಳಿಯುತ್ತದೆ. ಈ ಯುದ್ಧದ ವಿವರಗಳಾದರೋ ಕಾದಂಬರಿಕಾರನು ಸ್ವತಃ ಪರಿಶ್ರಮವುಳ್ಳವನೇನೋ ಎಂಬಂತೆ ನೈಜವಾಗಿ ವರ್ಣಿತವಾಗಿವೆ. ಕಾದಂಬರಿಯ ಐತಿಹಾಸಿಕತೆಗೆ ಬಣ್ಣವೇರಿಸಿದೆ.

ನಂದರು ಸ್ವತಃ ಯುದ್ಧಕ್ಕೆ ತೆರಳುವರು. ತಾಯಿ ಸುನಂದೆ ಅವರಿಗೆ ಒಳ್ಳೆಯದು ಹಾರೈಸುತ್ತ "ನೀವು ಆಚರಿಸುವ ಧರ್ಮವೇ ನಿಮ್ಮಂ ಕಡೆಹಾಯಿಸಲಿ" ಎಂದುದು, ಒಂದು ಮಾರ್ಮಿಕಸತ್ಯವನ್ನು ಅನ್ಯೋಕ್ತಿವಿಧಾನದಲ್ಲಿ ಆಡಿದಂತಿದೆ. ನಂದರ ಪ್ರಯಾಣದ ವೈಖರಿಯನ್ನು ಪ್ರೌಢವಾಗಿ ವರ್ಣಿಸಿದೆ. ಕರ್ತೃ ತಾನು ಕಂಡು ಬಲ್ಲ ರಾಜತ್ವದ ವೈಭವಕ್ಕೆ

ಅದು ಅನುಗುಣವಾದುದು ; ಅವನ ಪ್ರಾಚೀನಕಾವ್ಯಾಭ್ಯಾಸಸಂಸ್ಕಾರಫಲವಾದುದು.

ಭದ್ರಭಟನ ಚಾರರ ಮೂಲಕ, ತಮ್ಮದಾದ ಸುಂದರಗಡವೆಂಬ ದುರ್ಗವನ್ನು ಆಕ್ರಮಿಸಲು ಪರ್ವತರಾಜನ ಪಕ್ಷದ ಮಿತ್ರರಾಜರಿಂದ ನಡೆದ ವಿಫಲಪ್ರಯತ್ನವೂ ದುರ್ಗರಕ್ಷಕ ಶಿವವರ್ಮ ಮೆರೆದ ಸಾಹಸವೂ ರಾಕ್ಷಸನಿಗೆ ತಿಳಿದು ಅವನಿಗೆ ಹರ್ಷವಾಗುತ್ತದೆ. ಐತಿಹಾಸಿಕ ಕಾದಂಬರಿಯ ಘನತೆಗೆ ತಕ್ಕಂತೆ ದುರ್ಗಾಕ್ರಮಣದ ಯುದ್ಧತಂತ್ರದ ವಿವರಗಳು ತುಂಬ ಸೊಗಸಾಗಿ ಬಂದಿವೆ.

ಬಾಗುರಾಯಣನ ಪುರರಕ್ಷಣೆಯ ಏರ್ಪಾಡು ನೋಡಲು ಇತ್ತ ರಾಕ್ಷಸನೂ ಗಂಗಾ-ಸರಯೂ ನದೀಪ್ರಾಂತದ ಕಡೆಗೆ ಸಸೈನ್ಯರಾಗಿ ಅತ್ತ ನಂದರೂ ಹೊರಟರು. ಅಮಾತ್ಯ ರಾಕ್ಷಸನ ಅಂಗರಕ್ಷೆ ತಪ್ಪುವುದನ್ನೇ ಕಾದಿದ್ದರೆಂಬಂತೆ ಜಪಶಾಲೆಯಲ್ಲಿ ಚಾಣಕ್ಯನ ಜನ ನಂದರಿಗಾಗಿ ಕಾದಿದ್ದರು. ಅದು ದಿಟವಾಗಿ ಅವರ ವಧೆಗೆ ಸಜ್ಜಾಗಿದ್ದ ಬಲಿಪೀಠವೇ. ಅವರು ನಂದರನ್ನು ಸ್ವಾಗತಿಸಿ, ಜಪಶಾಲೆಯಲ್ಲಿ ಶತ್ರುಪಲಾಯನಜಪಕ್ಕೆ ಮಾಡಲಿದ್ದ ಹೋಮ ವಿಧಿಗಳನ್ನೂ ದೇವತಾಹಸ್ತದರ್ಶನದ ಬಳಿಕ ಶತ್ರುಸೇನೆಯ ನಿಶ್ಚಿತಮರಣವನ್ನೂ ಬಣ್ಣ ಬಣ್ಣವಾಗಿ ನಂದರಿಗೆ ವಿವರಿಸಿ ಅವರನ್ನು ಮರುಳುಮಾಡಿದರು. ಪೂರ್ಣಾಹುತಿಯ ವೇಳೆ ಶೂದ್ರಾದಿಗಳನ್ನು ನಿಷೇಧಿಸಿದ್ದು, ನಂದರನ್ನಷ್ಟೇ ವಧೆಗೆ ಪ್ರತ್ಯೇಕಿಸುವ ಸಂಚು. ಇದನ್ನು ನಂದರು ನಂಬಿ ಕೆಟ್ಟರು.

೭. ಪಾಟಲೀಪುರದ ಸುತ್ತಮುತ್ತ ಶತ್ರುರಾಜರ ಆಕ್ರಮಣದ ಮೋಡಗಳು ದಟ್ಟೈಸಿದುವು. ಪ್ರಜೆ ಅವರವರ ಜಾತಿಸಂಸ್ಕಾರಕ್ಕೆ ಅನುಗುಣವಾಗಿ ಮಾತಾಡಿಕೊಳ್ಳುತ್ತಿದ್ದರೆಂದು ಗ್ರಂಥಕರ್ತೃ ವರ್ಣಿಸುವಾಗ ವೈದಿಕರ ಭೋಜನಪ್ರಿಯತೆ ದ್ರವ್ಯಮೋಹಗಳನ್ನು ಪರಿಹಾಸ ಮಾಡುವಲ್ಲಿ ಸ್ವಮತವಿಡಂಬನೆಗೆ ಬೇಸರಿಸಿಲ್ಲ. ಕರ್ತೃ ಹಾಸ್ಯಪ್ರಿಯ ಎನ್ನುವುದನ್ನು ತೋರಿಸುವ ನಿದರ್ಶನಗಳಲ್ಲಿ ಇದು ಸಹ ಒಂದು ; ಗಂಭೀರ ಕ್ರಿಯಾಘಟ್ಟಗಳ ನಡುವೆ ಕಾಣಿಸಿಕೊಳ್ಳುವ ಆಂಗ್ಲ ಮತ್ತು ಸಂಸ್ಕೃತ ನಾಟಕಗಳ ನಡುವಣ ಹ್ರಸ್ವ ಹಾಸ್ಯಸಂವಾದಗಳ ಹಾಗೆಯೇ ಇದು.

ಜಪಶಾಲೆಗೆ ನಂದರ ಬರವು ಚಾಣಕ್ಯನಿಗೆ ವರದಿಯಾಯಿತು. ವೈದ್ಯವೇಷದ ಸಿದ್ಧಾರ್ಥಕ ಬಾಗುರಾಯಣನನ್ನು ಕಂಡು ಚಾಣಕ್ಯನ ಜಾಣ್ಮೆ, ಚಂದ್ರಗುಪ್ತನ ಸದ್ಗುಣ, ಪರ್ವತರಾಜನ ಶೌರ್ಯ ಮತ್ತು ಅವನಿಗೆ ಮಿತ್ರರಾಜರ ಸಹಕಾರ ಮೊದಲಾದುವನ್ನು ಒತ್ತಿಹೇಳಿ ನಂದರೊಂದಿಗೆ ಸಹಕರಿಸದಿರುವಂತೆ ಕೋರಿದನು. ಅವನ ಮಾತಿನ ವರಸೆ ನಯವಾಗಿದ್ದರೂ ಅಪ್ರತಿಹತವಾಗಿತ್ತು. ಬಾಗುರಾಯಣನು ಪೂರ್ವಸ್ಮರಣೆಯೊಂದಿಗೆ ಸನ್ನಿವೇಶವನ್ನು ನಿರ್ವಿಕಾರವಾಗಿ ವಿಮರ್ಶಿಸಿ ಅದಕ್ಕೆ ಸಹಮತಿಸಿದನು. ಭದ್ರಭಟಾದಿಗಳಿಗೆ ಕೂಡ ತಾಟಸ್ಥ್ಯವಹಿಸುವಂತೆ ಸಂದೇಶ ಕಳುಹಿಸಿದನು. ಚಾಣಕ್ಯಪೂರ್ವಕಥಾನಕದ ಆಕರಗಳಲ್ಲಿ ಕ್ಷಪಣಕ ಮಾಡಿದ ಕೆಲಸವನ್ನು ಇಲ್ಲಿ ಸಿದ್ಧಾರ್ಥಕ ಮಾಡಿದನೆಂದಿದೆ. ಬಾಗುರಾಯಣನ ವರ್ತನೆ ಸ್ವಾಮಿದ್ರೋಹವಲ್ಲವೇ ಎಂಬ ಪ್ರಶ್ನೆ ಸಹಜ. ನಂದರ ಜ್ಞಾತಿವಧೆಯ ಪಾಪದ ಫಲ ಅವರ ದುರ್ವರ್ತನೆಯ ವಿಷಬೀಜದಿಂದ ಹುಟ್ಟಿದ್ದು; ಅವರು ದೈವಬಲವಿಮುಖರಾದವರು. ಆದುದರಿಂದ ಇಲ್ಲಿ ಕುಟಿಲಗತಿಯಲ್ಲಿಯೇ ರಾಜಕಾರಣ ಸಾಗುತ್ತ ಹೋಗುತ್ತದೆ.

ಪುರಸನ್ನಾಹ ಕುರಿತು ರಾಕ್ಷಸನು ಬಾಗುರಾಣನೊಂದಿಗೆ ಮಾತಾಡಿದಾಗ, ನಂದರು

ಕಾಶೀರಾಜನಿಂದ ಒದಗಬಹುದಾದ ನೆರವನ್ನು ಕುರಿತು ಪ್ರಶ್ನಿಸಿದಾಗ ಚಾಣಕ್ಯನ ಕಪಟತಂತ್ರ ತನ್ನ ಕೆಲಸ ಮುಗಿಸಿ ಆಗಿತ್ತು. ಹೀಗಾಗಿ ರಾಕ್ಷಸನ ಬಗೆಗೆ ನಮಗೆ ಕನಿಕರವೇ ಆಗುತ್ತದೆ. ಅವನು ಪ್ರಾರ್ಥಿಸುವ ದೈವಸಹಾಯ ನಂದರ ಪಾಲಿಗೆ ಲಭಿಸುವುದು ಸಾಧ್ಯವಿರಲಿಲ್ಲ. ಅತ್ತ ಶತ್ರುಪಕ್ಷದಲ್ಲಿ, ಭದ್ರಭಟಾದಿಗಳ ತಾಟಸ್ಥ್ಯದಿಂದಾಗಿ ಸೇನಾಗತಿಗೆ ಅನುಕೂಲವೇ ಆಯಿತು. ಪರ್ವತರಾಜನ ಸೇನೆ ಮಾರ್ಗನಿರೋಧವಿಲ್ಲದೆ ಗಂಗಾಸಂಗಮಕ್ಕೆ ಸಾಗಿ ಪಾಟಲೀಪುರದ ಮುತ್ತಿಗೆಗೆ ಸಜ್ಜಾಯಿತು. ಇತ್ತ ನಂದರ ಬಳಿಗೆ ಯುದ್ಧದ ವಿವರಗಳು ಬರತೊಡಗಿ, ಭದ್ರಭಟಾದಿಗಳು ಮನಮುಟ್ಟಿ ಯುದ್ಧಮಾಡಲಿಲ್ಲವೆಂಬ ಸಂಗತಿ ಮನವರಿಕೆಯಾಯಿತು. ನಿಷ್ಕಪಟಿ ರಾಕ್ಷಸನು ಅದನ್ನು ಒಂದು ಯುದ್ಧತಂತ್ರವೆಂದು ಭಾವಿಸುತ್ತಾನೆ. ಮತ್ತೆ ಚಾರರಿಂದ ಇನ್ನಷ್ಟು ಯುದ್ಧವಿವರಗಳು ಬರುತ್ತವೆ. ಆಗ ನಂದರು ಸೇನಾನಿಗಳ ಛದ್ಮನೆಯನ್ನು ತಾವೇ ದೃಢಪಡಿಸಿಕೊಂಡು ಯುದ್ಧಕ್ಕೆ ತೆರಳಲು ಸಿದ್ಧರಾಗುತ್ತಾರೆ. ಮತ್ತೆ ಬಂದ ವಾರ್ತೆಯಿಂದ ಗಂಗೆಯನ್ನು ಉತ್ತರಿಸಿದ ಶತ್ರುಸೇನೆ ಪಾಟಲೀಪುರಕ್ಕೆ ಬಾಧೆಯೊಡ್ಡಲಿದೆಯೆಂದು ತಿಳಿಯುತ್ತದೆ. ರಾಕ್ಷಸನು ನಂದರನ್ನು ತಡೆದು, ತಾನೇ ಯುದ್ಧಕ್ಕೆ ನಡೆಯುತ್ತಾನೆ.

ಈ ಯುದ್ಧದ ವಿವರಗಳೆಲ್ಲ ಕುತೂಹಲಜನಕವಾದವು ; ಆದರೆ ಹೆಚ್ಚಿನ ಮಟ್ಟಿಗೆ ನಿರೂಪಣರೀತಿ ಪೌರಾಣಿಕವಾದುದು ಇಲ್ಲವೆ ಕಾವ್ಯಸಂಪ್ರದಾಯಸ್ಥವಾದುದು.

ಅಮಾತ್ಯ ರಾಕ್ಷಸನು ನಂದರಾಜ್ಯದ ಸಂರಕ್ಷಣೆಗೆ ಒಂದು ಸುಭದ್ರ ಮನುಷ್ಯದುರ್ಗ. ಅವನು ಅನ್ಯಾದೃಶವಾದ ಶೌರ್ಯ ಪ್ರತಾಪಗಳನ್ನು ಮೆರೆದು ಒಂದು ದಿನದ ಯುದ್ಧದಲ್ಲಿ ನಂದರಿಗೆ ಜಯ ದೊರಕಿಸಿದನು. ಮುಂದೆಯೂ ಯುದ್ಧನಿರ್ವಹಣೆಯ ಜವಾಬ್ದಾರಿ ಆತನದೆಂದೇ ನಂದರು ಕೋರಿದರು. ಈ ವರ್ಣನಭಾಗ ಭೋರ್ಗರೆವ ಜಲಪಾತದಂತೆ, ಒಂದು ಸುಂದರದೃಶ್ಯವೆನ್ನುವಂತೆ, ಚಿತ್ರಮಯ ವಿವರಗಳಿಂದ ಸಮೃದ್ಧವಾಗಿ ಕೂಡಿ ಏಕಾಖಂಡ ವರ್ಣನಪಿಂಡವಾಗಿ ನಿರೂಪಿತವಾಗಿದೆ. ಏಕಾಂಗಸಾಹಸದ ಒಂದು ಯುದ್ಧಪ್ರಕ್ರಿಯೆ ಇಲ್ಲಿ ನಿದರ್ಶಿತವಾಗಿದೆ. ಶೈಲಿ ಸಂಸ್ಕೃತಮಯ, ಕೃತಕ ಎಂದು ಹೇಳುವಂತಿಲ್ಲ; ದೇಶೀಯವೆಂದೂ ಸಹಜವೆಂದೂ ಮೆಚ್ಚುವಂತಿದೆ. ಯುದ್ಧದಲ್ಲಿ ಕೆಳಗೈಯಾಗಿ ಹೋರಿದ, ಪರಾಜಿತರಾದ ಸ್ವಪಕ್ಷದವರನ್ನು ಅವಮಾನಿಸಲು ಅವನು ವಿಧಿಸಿದ ಶಿಕ್ಷೆ ಬಹುಶಃ ತತ್ಕಾಲದ ಪದ್ಧತಿಯ ಅನುಸರಣೆಯೇ ಇರಬೇಕು.

ಮುಂದೆ ರಾಕ್ಷಸನೂ ನಂದರೂ ಕೂಡಿಯೇ ಪ್ರತಿಪಕ್ಷದೊಂದಿಗೆ ನಡಸಿದ ತುಮುಲ ಯುದ್ಧದ ವರ್ಣನೆಯಿದ್ದು, ಇದು ಸಾಂಪ್ರದಾಯಿಕವಾದುದೆಂದರೂ ಉತ್ಸಾಹಜನಕವಾಗಿದೆ. ಯುದ್ಧ ಸಮಯುದ್ಧವಾದಾಗ, ಜಯಾಪಜಯಗಳು ಅನಿಶ್ಚಿತವಾಗಿ, ಹೆಚ್ಚಿನ ಬಲದ ನಿರೀಕ್ಷೆಯಲ್ಲಿ ರಾಕ್ಷಸನು ಕಾಲವಂಚನೆಯ ತಂತ್ರವನ್ನು ಅನುಸರಿಸಿದನು. ಆ ತಂತ್ರವನ್ನು ಚಾಣಕ್ಯನು ಅಸಾಮಾನ್ಯರೀತಿಯಲ್ಲಿ ಭೇದಿಸಿದನು. ಅದೆಂದರೆ, ವೇಷಾಂತರದ ಸೇನಾಬಲವನ್ನು ಸಜ್ಜುಗೊಳಿಸಿ ರಾಕ್ಷಸನನ್ನು ಭ್ರಮೆಗೊಳಿಸಿದ್ದು. "ಏನೋ ಮಹತ್ಕಾರ್ಯವಂ ಚಾಣಕ್ಯರು ಎಣಿಸಿ ಇದ್ದಾರೆ. ಇದರ ಫಲಮಂ ಪರ್ಯವಸಾನದಲ್ಲಿಯೇ ತಿಳಿಯಬೇಕು" ಎಂಬ ಶೇಖರನ ಮೆಚ್ಚುಮಾತು ಚಾಣಕ್ಯನ ಕಾರ್ಯವಿಧಾನವನ್ನೇ ಸೂಚಿಸುವ ಮಾತು. ಇದು ಹೀಗಿದ್ದರೆ, ದೂತಮುಖೇನ ನಂದರಿಗೆ ದಕ್ಷಿಣದಿಕ್ಕಿನ ಮೇಲುಬಲದ ನೆರವು ಒದಗಲಿರುವ

ಹಾಗೂ ದಶಾರ್ಣ ಶೂರಸೇನ ರಾಜರು ಪರ್ವತರಾಜನ ಪ್ರಾಂತ ಗಳಿಗೂ ಅವನ ರಾಜಧಾನಿಗೂ ಮುತ್ತಿಗೆ ಹಾಕಲಿರುವ ವಿಚಾರ ಎರಡೂ ಅವನನ್ನು ಗಾಬರಿಪಡಿಸಿದುವು. ಅವನು ವೃದ್ಧಮಂತ್ರಿ ಉಲೂಕನ ಮಾತನ್ನು ಕೇಳದೆ ತಾನು ಕೆಟ್ಟೆನೆಂದು ಹಳಹಳಿಸಿದನು.

ರಾಕ್ಷಸನ ನಿಯೋಗಿ ವಿಷ್ಣುದಾಸನು ಸಂಧಿಯ ಮಾತನ್ನು ಪರ್ವತರಾಜನಿಗೆ ಮುಟ್ಟಿಸಿದನು. ಇದು ನಂದರ ಪರವಾಗಿ, ಒಂದು ಕಾರ್ಯತಂತ್ರದ ಭಾಗವಾಗಿ. ರಾಜ ತನ್ನ ಆತಂಕವನ್ನು ಮರೆಮಾಡಿಕೊಂಡು ಅವನೊಂದಿಗೆ ತಕ್ಕ ಮಾತು ಆಡಿದರೂ ಶಬರವರ್ಮನೊಂದಿಗೆ ಸಮಾಲೋಚಿಸುವಾಗ ಸಂಧಿಯ ಷರತ್ತಿನಂತೆ ಚಂದ್ರಗುಪ್ತನನ್ನು ನಂದರಿಗೆ ಒಪ್ಪಿಸಿ ಬಿಡುವುದೇ ಸರಿಯೆಂದು ಪರ್ಯಾಯವಾಗಿ ಹೇಳುತ್ತಾನೆ. ಮಂತ್ರಿ ಅದನ್ನು ಗ್ರಹಿಸಿದರೂ, ಅಪವಾದಭೀತಿ ಚಾಣಕ್ಯನ ಅವಕೃಪೆ ಇವುಗಳಿಗಾಗಿ ಹೆದರಿ, ಚಾಣಕ್ಯನೊಂದಿಗೆ ಸಮಾಲೋಚನೆಗೆ ಸಲಹೆಮಾಡುತ್ತಾನೆ. ಚಾಣಕ್ಯನಿಗೆ ಕರೆ ಬರುತ್ತದೆ. ಕಣ್ಣಿಗೆ ಬಿದ್ದರೂ ಕಣ್ಮರೆಯಾಗಿದ್ದುಕೊಂಡ ಶಬರವರ್ಮನ ಚರ್ಯೆಯಿಂದ ಆವನಿಗೆ ಪರ್ವತರಾಜ ಅನುಚಿತವಾದುದನ್ನು ಯೋಚಿಸಿರಬೇಕೆಂಬ ಸುಳುಹು ಸಿಕ್ಕುತ್ತದೆ. ಮಂತ್ರಿಯನ್ನು ಹೊರಬರುವಂತೆ ಮಾಡಿ ನಿಜ ಹೊರಡಿಸಿದಾಗ, ಅವನು ಚಾಣಕ್ಯನ ಬುದ್ಧಿಮತ್ತೆಗೆ ವಿಸ್ಮಿತನಾಗಿ ಆಡಿದ ಮಾತು "ತಾವು ಪರೋಕ್ಷದಲ್ಲಿ ನಿಶ್ಚಯಿಸಿದರ್ಥಕ್ಕೆ, ಅನ್ಯರು ಪ್ರತ್ಯಕ್ಷವಾಗಿ ನಿಶ್ಚಯಿಸಿದ್ದು ಸಮವಾಗಲಾರದು" ಎಂಬುದು. ಇನ್ನು ಇದಕ್ಕೆ ಮೇಲಿಲ್ಲವೆಂಬ ಮೆಚ್ಚುಮಾತೇ ಸರಿ.

ಪರ್ವತರಾಜನು ಪ್ರತಿಪಕ್ಷದ ಸಂಧಿಯ ಪ್ರಯತ್ನ ಕುರಿತು ಚಾಣಕ್ಯನಲ್ಲಿ ವಿಮರ್ಶಿಸಿದಾಗ, ರಾಕ್ಷಸನ ಕಾಲವಂಚನೆಯ ತಂತ್ರ ಅವನಿಗೆ ಅರ್ಥವಾಗಿ ಅವನು ರಾಕ್ಷಸನ ರಾಜತಂತ್ರದ ಕೌಶಲವನ್ನು ಮೆಚ್ಚಿದನು. ಆದರೆ ಜಯದ ಪಾಲು ನಂದರದೇ ಹೆಚ್ಚಾಗಿರುವುದರಿಂದ ಈ ಸಂಧಿಯ ಪ್ರಯತ್ನ ಒಂದು ಜಾಲವೇ ಸರಿಯೆಂಬುದನ್ನು ಪರ್ವತರಾಜನಿಗೆ ಮನವರಿಕೆ ಮಾಡಿಕೊಟ್ಟನು. ಅಲ್ಲದೆ ಅವನ ಆತಂಕದ ಮೂಲಗಳನ್ನು ತಿಳಿದು ನಂದರ ಸಂಹಾರ ಮತ್ತು ರಾಕ್ಷಸನ ಪಲಾಯನ ಎಂಬ ಯುದ್ಧಸಂಬಂಧಿ ಮೃಷಾವಾರ್ತೆಗಳನ್ನು ಪರ್ವತರಾಜನ ಪ್ರಾಂತಗಳಲ್ಲಿ ಹಬ್ಬಿಸುವ ಮೂಲಕ ಅದರ ಪರಿಹಾರವನ್ನೂ ಹೇಳಿಕೊಟ್ಟನು. ಅವನ ಹಿಂದಿನ ಒಂದು ಯುದ್ಧತಂತ್ರ ಫಲಿಸಿ, ಲಂಪಾಕಾಧಿಪತಿಯಿಂದ ಉಂಟಾಗಿದ್ದ ದಾಳಿಯ ವಿಪತ್ತು ಕಾಮರೂಪಾಧಿಪತಿಯ ಮೂಲಕ ತೊಲಗಿದ ವಾರ್ತೆಯೂ ತಕ್ಕ ವೇಳೆಗೆ ಬಂದಿತು. ಆದರೆ ಶರಣಾಗಿ ಬಂದ ಚಂದ್ರಗುಪ್ತನನ್ನು ನಂದರಿಗೆ ಒಪ್ಪಿಸುವ ಪರ್ವತರಾಜನ ಹೀನಬುದ್ಧಿ ಅವನಲ್ಲಿ ಜುಗುಪ್ಸೆಯನ್ನು ತಂದಿತು.

ಆ. ಚಾಣಕ್ಯ ರೂಪಿಸಿದ ಕಾರ್ಯತಂತ್ರ ಅಮಾತ್ಯ ರಾಕ್ಷಸನಿಂದ ನಂದರನ್ನು ಬೇರ್ಪಡಿಸಿ ಅವರು ಜಪಶಾಲೆಗೆ ಬರುವಂತೆ ಮಾಡುವುದು. ಅಲ್ಲಿ ಅವರ ವಧೆಯಾಗುವುದು ಇವಕ್ಕೆ ಸಂಬಂಧಿಸಿದ್ದು. ಆ ಪ್ರಕಾರ ನಂದರ ಸೈನ್ಯದಲ್ಲಿ ಕ್ಷೋಭೆಯನ್ನೂ ನಂದರ ಮನಸ್ಸಿನಲ್ಲಿ ಭ್ರಮೆಯನ್ನೂ ಉಂಟುಮಾಡುವಂತೆ ಪರ್ವತರಾಜನ ಪುತ್ರ ಮಲಯಕೇತುವಿನ ವೇಷಧಾರಿಯೊಬ್ಬ, ಆರು ಮಂದಿ ತುರಗಾರೂಢರಾದ ಜನ ಕೃತಸಂಕೇತರಾಗಿ ಪಾಟಲೀಪುರದ ಕಡೆಯ ಕಾಶೀಮಾರ್ಗದಲ್ಲಿ ಗೊತ್ತಾದ ಎಡೆಗಳಲ್ಲಿ ಕಾಯುತ್ತಿರುವುದು ಎಂದಾಯಿತು. ನಿಯೋಗಿ ವಿಷ್ಣುದಾಸನು ತಂದ ಸ್ನೇಹಸಂದೇಶ ನಿಮಿತ್ತವಾಗಿ ನಂದರೂ ರಾಕ್ಷಸನೂ ಯುದ್ಧದ ಪ್ರಸಕ್ತಿ ಇಲ್ಲವೆಂದು ಸ್ವಲ್ಪ ಅಜಾಕರೂಕತೆಯಿಂದ ಇದ್ದರು. ಈ ಸಮಯ

ಸಾಧಿಸಿ ಜಪಶಾಲೆಯ ಚಾಣಕ್ಯನ ಜನ ನಂದರನ್ನು ಸಂಧಿಸಿ ದೇವತಾಹಸ್ತದರ್ಶನವಾಗುವ ಪೂರ್ಣಾಹುತಿಸಂದರ್ಭಕ್ಕೆ ಸ್ವಾಗತ ನೀಡಿದರು.

ಚಾಣಕ್ಯನು ಎಣಿಸಿದಂತೆ ಶೇಖರನ ಕಡೆಯ ಕಪಟದೂತರು ನಂದರೂ ಅವರ ಮೈಗಾವಲಿನವರೂ ನಂಬುವಂತೆ ಮಲಯಕೇತು ಸೆರೆಯಾದನೆಂದು ವಾರ್ತೆ ಹಬ್ಬಿಸಿ, ಆ ಘಟನೆಯನ್ನು ಬಣ್ಣಬಣ್ಣವಾಗಿ ವಿವರಿಸಿ, ಅವರಲ್ಲಿ ಸಲ್ಲದ ಕುತೂಹಲ ಹುಟ್ಟಿಸಿ, ವೇಷಧಾರಿ ಮಲಯಕೇತುವನ್ನು ಜಪಶಾಲೆಗೆ ಮೇನೆಯಲ್ಲಿ ಕರೆತಂದರು. ಅವನನ್ನು ನಂದರು ದಿಟದ ರಾಜಕುಮಾರನೆಂದೇ ತಿಳಿದು ಪ್ರಶ್ನಿಸತೊಡಗಿದಾಗ ಅವನ ಮಾತು ವರ್ತನೆಗಳಿಂದ ತಾವು ಮೋಸಹೋಗಿರುವುದು ಅವರಿಗೆ ಸ್ಪಷ್ಟವಾಯಿತು. ಅವರು ಸೇನಾ ಸಹಾಯವಿಲ್ಲದೆ ಸ್ವರಕ್ಷಣೆಗೆ ಕಾದುವುದು ಅನಿವಾರ್ಯವಾಯಿತು. ಈಗ ಅವರಿಗೆ ಸನ್ನಿವೇಶದ ಗಹನತೆ, ತಮ್ಮ ಅಕಾರ್ಯ, ದೈವಬಲ ತಮಗೆ ವಿಮುಖವಾಗಿರುವುದು ಎಲ್ಲವೂ ಅರಿವಿಗೆ ಬಂದಿತು ; ಆದರೆ ಕಾಲ ಮಿಂಚಿತ್ತು. ಮೌರ್ಯಹಿಂಸಾದೋಷವೇ ಅವರ ನಾಶಕ್ಕೆ ಕಾರಣ ವಾಯಿತೆಂದು ಮಾಸೋಪವಾಸಿ ಸಹ ಹೇಳಿದನು. ಈಗ ನಂದರು ತಾವೇ ಒಬ್ಬೊಬ್ಬರೂ ಒಂದು ಸೈನ್ಯವೆಂಬಂತೆ ವಿಜೃಂಭಿಸಿ ಕಾದಿದರು. ಆದರೆ ಈ ವೇಳೆಗೆ ಸಮೀಪಸ್ಥವಾಗಿದ್ದ ಪರ್ವತರಾಜನ ಸೇನೆಯಿಂದಾಗಿ ಅವರ ಪ್ರಯತ್ನ ಸಾಗಲಿಲ್ಲ. ಹೀಗಿದ್ದೂ ರಾಕ್ಷಸನ ಏಕಾಂಗಸಾಹಸದ ಹಿಂದಿನ ದಿನದ ಕಾಳೆಗಕ್ಕೆ ಸಮನಾಗಿ ಅವರ ಕಾಳಗವಿದ್ದು, ಒಂದು ಘಟ್ಟದಲ್ಲಿ ಶತ್ರುವಧೆ ತಡವಾಯಿತೆಂದು ಚಾಣಕ್ಯನೇ ಯುದ್ಧಕ್ಕೆ ಸಿದ್ಧನಾದಂತೆ ಹೇಳಿದೆ. ಭಾರತಯುದ್ಧದಲ್ಲಿ ಭೀಷ್ಮಾರ್ಜುನರ ಯುದ್ಧದ ನಡುವೆ ಭೀಷ್ಮನ ಕೈ ಮೇಲಾಯಿತೆಂದು ಕೃಷ್ಣ ಸ್ವತಃ ಚಕ್ರಾಯುಧ ಹಿಡಿದು ನುಗ್ಗಿದುದನ್ನು ಕವಿ ನೆನೆದಿರಬೇಕು. ಇಲ್ಲಿ, ಇಡಿ ಸನ್ನಿವೇಶದ ಕಲ್ಪನೆ ಸಂಯೋಜನೆಗಳು ಸರಣಿಗೊಂಡ ಕಾರ್ಯಾಚರಣೆಗೆ ಅನುಗುಣವಾಗಿದ್ದು, ಒಂದು ದೃಷ್ಟಿಯಿಂದ ಪಂಜರಪರೀಕ್ಷೆಯ ಸನ್ನಿವೇಶದಂತೆಯೇ ಕುತೂಹಲಜನಕವಾಗಿವೆ.

ರಾಕ್ಷಸನಿಗೆ ದೂತರಿಂದ ಜಪಶಾಲೆಯ ಹಗರಣ ಅರಿಕೆಯಾಗುತ್ತದೆ. ಅವನು ವಿದ್ಯಮಾನಗಳನ್ನು ಊಹಿಸಿದನು. ವಿಪಕ್ಷನಾಶಕ್ಕೆ ತಾನು ಮಾಡಿದ ಕಪಟವೆಲ್ಲವೂ ಅವರಿಗೆ ಅನುಕೂಲವಾಗಿ ನಂದವಿಪತ್ತಿಗೇ ಕಾರಣವಾಯಿತಲ್ಲ ಎಂಬುದಾಗಿ ಅವನು ಕಳವಳಿಸಿದ್ದು, ಚಾಣಕ್ಯನ ಕಾರ್ಯತಂತ್ರದ ಸಾಮರ್ಥ್ಯವನ್ನೇ ಸೂಚಿಸುತ್ತದೆ. ಜಪಶಾಲೆಯ ವಿದ್ಯಮಾನಗಳಿಂದ ಅವನಿಗೆ ನಂದರ ಪಾಡು ತಿಳಿದುಹೋಯಿತು. ಅವನು ಅವರೆಗೆ ಅನುಭವಿಸದ ಮಾನಸಿಕ ಕ್ಷೋಭೆಗೆ ಗುರಿಯಾದನು. ಅವನ ಪ್ರಲಾಪ ನಂದರ ಬಗೆಗೆ ಅವನೊಬ್ಬನೇ ಮರುಕಪಡುವವನು ಎನ್ನುವಂತಿದೆ. ಕೆಟ್ಟರೂ ಮಕ್ಕಳು ತನ್ನ ಮಡಿಲ ಕೂಸುಗಳಲ್ಲವೇ ಎಂದು ಆದರಿಸುವ ಮಾತೃವಾತ್ಸಲ್ಯ ರಾಕ್ಷಸನದು. ತನ್ನ ಮೈಗಾವಲಿನ ವಿನತ ನಂದಸಂಹೃತಿಯ ಬಳಿಕ ರಾಕ್ಷಸನಿಗಿರುವುದು ವೃದ್ಧರಾಜನ ಆರೈಕೆ, ಅಂತಃಪುರದ ಸ್ತ್ರೀಯರ ಜೋಕೆ ಎಂಬುದಾಗಿ ನೆನಪು ಕೊಟ್ಟನು. ವಿನತ ಬಂಗಾರದವಳ ಮಗನಾದರೂ ಅವನ ಮಾತು ಯೋಗ್ಯವೆಂದು ರಾಕ್ಷಸನಿಗೆ ಕಂಡು, ಮತ್ತೆ ಯುದ್ಧದ ಪ್ರಸಕ್ತಿಗೆ ಅವನು ಹೋಗಲಿಲ್ಲ. ಇಲ್ಲಿ ರಾಜಬೀಜೋತ್ಪನ್ನನಾದ ವಿನತ ವಿವೇಕಿಯಾಗಿ ವಿಹಿತವಾದುದನ್ನೇ ಆಡುವುದು ಭಾರತದ ವಿದುರನ ನೆನಪು ತರುತ್ತದೆ. ಮುದ್ರಾಮಂಜೂಷಕಾರನಿಗೆ ನಂದ-

ಚಂದ್ರಗುಪ್ತರ ಕಾಳಗ ಭಾರತದ ಕೌರವ-ಪಾಂಡವರ ಜ್ಞಾತಿಕಲಹದ ನೆನಪನ್ನು ಉತ್ಕಟವಾಗಿ ತಂದಿರುವಂತೆ ತೋರುತ್ತದೆ.

ನಂದರ ಏಕಾಂಗಸಾಹಸದ ಭೀಕರಕದನ ಮತ್ತೆ ಚಾಣಕ್ಯನನ್ನು ಕೆರಳಿಸಿತು. ಆಗ ಸೇನಾನಿ ಶೇಖರ ಮೊದಲಾದವರು ನೇರವಾಗಿ ನುಗ್ಗಿ ನಂದರ ವಧೆಗೆ ಮೊದಲಿಟ್ಟರು. ಈ ಯುದ್ಧದ ವರ್ಣನೆ ಭಾರತದಲ್ಲಿ ವರ್ಣಿತವಾಗುವ ವೀರಶ್ರೇಷ್ಠರ ಪರಸ್ಪರ ಹೋರಾಟದ ಚಿತ್ರಗಳಿಗೆ ಸದೃಶವೆನ್ನುವಂತಿದೆ ; ಕಾದಂಬರಿಯ ಆವರಣಕ್ಕೆ ಸ್ವಲ್ಪ ಹೆಚ್ಚು ಎನ್ನುವ ಪೌರಾಣಿಕತೆಯ ಸ್ಪರ್ಶ ಕೊಟ್ಟಿದೆ.

ನಂದರ ಸಂಹಾರದಿಂದ ರಾಕ್ಷಸನು ಸೊರಗಿ ಸೋತುಹೋದನು. ಮೌರ್ಯವಧೆಯ ದೋಷದಿಂದಾಗಿಯೇ ನಂದರ ಭಾಗ್ಯ ಬಯಲಾಯಿತೆಂದು ಮರುಗಿದನು. ತನ್ನ ಏಕಾಕಿತನಕ್ಕೆ ಚಡಪಡಿಸಿದನು. ಚಂದ್ರಗುಪ್ತನು ಜ್ಞಾತಿವಧೆಯಿಂದ ದುಃಖಿತನಾಗಿರಲು, ಅವನನ್ನು ಸಂತೈಸಿ ಚಾಣಕ್ಯನು ಆಡಿದ ಮಾತುಗಳು ರಾವಣವಧೆಯ ಅನಂತರದಲ್ಲಿ ಅಣ್ಣನಿಗಾಗಿ ದುಃಖಿಪಟ್ಟ ವಿಭೀಷಣನನ್ನು ಸಮಾಧಾನಪಡಿಸಿದ ರಾಮನ ನೆನಪು ತರುವಂತಿದೆ. ಮುಂದಿನ ಕಾರ್ಯಗಳನ್ನು ಶೇಖರನಿಗೆ ತಿಳಿಸಿ, ಚಾಣಕ್ಯನು ಗಂಗಾಸ್ನಾನದ ತರುವಾಯ ಪ್ರತಿಜ್ಞೆ ತೀರಿತೆಂದು ತನ್ನ ಬಿಚ್ಚಿದ ಶಿಖೆಯನ್ನು ಕಟ್ಟಿದನು.

ಸರ್ವಾರ್ಥಸಿದ್ಧಿರಾಜನಿಗೆ ಪುತ್ರವಧೆ ಅತೀವದುಃಖಕ್ಕೆ ಕಾರಣವಾಯಿತು. ಬಾಗುರಾಯಣನು ನಂದಪತ್ನಿಯರ ದುಃಖಶಮನಕ್ಕೆ ನೆರವಾದನು. ಜ್ಯೇಷ್ಠನಂದಪತ್ನಿ ಧೃತಿಗುಂದದೆ ಮುಂದಿನ ಕಾರ್ಯಗಳಿಗೆ ಅವನ ಸಹಾಯ ಕೋರಿದಳು. ಈ ವಿಷಮಸಮಯದಲ್ಲಿ ರಾಕ್ಷಸನು ತಾನೂ ಸಲಹೆಗಾಗಿ ಬಾಗುರಾಯಣನನ್ನು ಕರಸಿದನು. ಅವನ ವಿಚಾರ ಕೇಳಿದಾಗ, ಅವನಿಗೆ ಯುದ್ಧ ಮುಂದುವರಿಸುವುದರಲ್ಲಿ ಮನಸ್ಸಿಲ್ಲವೆಂಬುದು ವಿದಿತವಾಯಿತು. ರಾಜಪತ್ನಿಯರ ರಕ್ಷಣೆ ಸಲುವಾಗಿ ಪುರದ ಬೀಗದ ಕೈ ಚಂದ್ರಗುಪ್ತನಿಗೆ ಒಪ್ಪಿಸುವುದೆಂದೂ ತಾನು ಕಣ್ಮರೆಯಾಗಿದ್ದು ತನ್ನ ಕಾರ್ಯೋದ್ಯೋಗವನ್ನು ಮುನ್ನಡಸುವುದೆಂದೂ ನಿರ್ಧರಿಸಿದನು. ಅವನು ನಂದರಲ್ಲಿ ದುರ್ಗುಣಕಥನವನ್ನು ಮಾಡಲಿಚ್ಛಿಸದೆ ನಂದರ ಅಪದೆಸೆಗೆ ದೈವಯತ್ನವನ್ನೂ ದೇಶದಲ್ಲಿ ಬ್ರಾಹ್ಮಣಾಪಮಾನದ ಜನರನ್ನು ದಂಡಿಸದ ನಂದರ ದಾಕ್ಷಿಣ್ಯವರ್ತನೆಯನ್ನೂ ಕಾರಣವಾಗಿ ತಿಳಿದುದೀಗ ವಿಚಿತ್ರ. ಚಂದ್ರಗುಪ್ತನ ವಿಷಯದಲ್ಲಿ ಹೇಗೆ ನಡೆದರೆ ಒಳಿತೆಂದು ಸರ್ವಾರ್ಥಸಿದ್ಧಿಗೆ ತಿಳಿಸಿ ತೆರಳಿದನು.

ಚಾಣಕ್ಯನು ಪುರವನ್ನು ವಶಪಡಿಸಿಕೊಳ್ಳುವ ಸನ್ನಾಹದಲ್ಲಿರುವಾಗ, ಬಾಗುರಾಯಣನು ಪುರವನ್ನು ಚಂದ್ರಗುಪ್ತನಿಗೆ ಒಪ್ಪಿಸಲಿರುವುದನ್ನು ತಾನೇ ನಿವೇದಿಸಿದನು. ಒಂದು ಕಾರ್ಯತಂತ್ರದ ಭಾಗವಾಗಿ ಬಾಗುರಾಯಣಾದಿಗಳು ತಾವೇ ಚಂದ್ರಗುಪ್ತನಿಗೆ ಕಾಣಿಸಿಕೊಳ್ಳಲಿಲ್ಲ. ಪ್ರಭುವಾದರೂ ಚಂದ್ರಗುಪ್ತ ವೃದ್ಧರಾಜನೊಂದಿಗೆ ನಂದಪತ್ನಿಯರೊಂದಿಗೆ ವಿಹಿತವಾದ ನಡೆವಳಿಕೆಯಿಂದ ನಡೆದುಕೊಂಡನು. ನಂದಪತ್ನಿಯರು ಸಹಗಮನದ ಸಂಕಲ್ಪ ಮಾಡಿದರು. ಅವರು ತಮ್ಮ ಪತಿಗಳಿಗಾಗಿ ವಿಲಪಿಸಿದ್ದು ಸಾಂಪ್ರದಾಯಿಕ ವರ್ಣನೆಯ ಭಾಗ. ಸಪತ್ನಿಕನಾಗಿದ್ದಾಗ ತಮಗೆ ಮಕ್ಕಳಾಗುವ ಸಂದರ್ಭದಲ್ಲಿ ಶ್ರುತವಾದ ಋಷಿವಾಕ್ಯದ ಅರ್ಥ ಈಗ ಹೊಳೆದಂತಾಗಿ ಸರ್ವಾರ್ಥಸಿದ್ಧಿರಾಯನ ಮನಸ್ಸು ಸ್ಥಿರಗೊಂಡಿತು.

೯. ಈಗ ರಾಕ್ಷಸನಿಗೆ ನಂದಸಂಹಾರದ ಪ್ರತಿಯಾಗಿ ಚಂದ್ರಗುಪ್ತನ ಸಂಹಾರವೇ

ಪ್ರತೀಕಾರವೆಂಬ ಹಠ ಬಲಿಯಿತು. ಪರ್ವತರಾಜನಿಂದ ಪೂರ್ವದ ಉಪಕಾರಸ್ಮರಣೆ ನೆಚ್ಚುವಂತಿರಲಿಲ್ಲ. ವೈರವೆಂಬುದು ಶತ್ರುಗಳ ಮರಣಾವಧಿಕವೆಂಬ ಆರ್ಯೋಕ್ತಿಯನ್ನು ಸಹ ಮೀರಿ, ಸ್ವಾಮಿಭಕ್ತಿಯ ಅತಿರೇಕದಿಂದಾಗಿ ತಪ್ಪುಹಾದಿ ಹಿಡಿದನು. ತನ್ನ ಕುಟುಂಬ ರಕ್ಷಣೆಯನ್ನು ಮಿತ್ರ ಚಂದನದಾಸನೆಂಬ ವರ್ತಕನಿಗೆ ಒಪ್ಪಿಸಿದನು ; ವಿಷಕನ್ಯೆಯ ಮೂಲಕ, ತಪ್ಪಿದರೆ ಚಂದ್ರಗುಪ್ತ ಪ್ರಭುವಾಗಿ ಮೆರವಣಿಗೆಯಲ್ಲಿ ಬರುವಾಗ ಪಟ್ಟದಾನೆಯ ಮಾವುತ, ಶಿಲ್ಪಿ ದಾರುವರ್ಮ ಇವರ ಮೂಲಕ, ಭವನಾಧಿಕಾರಿ ಇಲ್ಲವೆ ರಾಜವೈದ್ಯನ ಮೂಲಕ ತನ್ನ ಕೆಲಸ ಸಾಧಿಸಬೇಕೆಂದು ನಿಶ್ಚಯಿಸಿದನು. ಇವರಲ್ಲಿ ಒಬ್ಬೊಬ್ಬರಿಗೂ ಸಲಹೆ ಕೊಡುವಾಗ ಎಚ್ಚರಿಕೆ ವಹಿಸಿದರೂ, ಕ್ಷಪಣಕನು ಇವನ ಮಾತಿನ ನೈಜವನ್ನು ಸುಲಭವಾಗಿ ಗ್ರಹಿಸಿದನು ; ಪರೀಕ್ಷೆಯಿಂದ ಅದನ್ನು ಸ್ಪಷ್ಟಮಾಡಿಕೊಂಡನು.

ಚಂದ್ರಗುಪ್ತನನ್ನು ಉದ್ದೇಶಿಸಿ ಚಾಣಕ್ಯನು ಇತರ ಅಧಿಕಾರಿಗಳು ಪ್ರಭುಸನ್ನಿಧಿಗೆ ಬಂದು ಕಾಣಿಸಿಕೊಂಡಂತೆ ಅಮಾತ್ಯ ರಾಕ್ಷಸ ಏಕೆ ಕಾಣಿಸಿಕೊಂಡಿಲ್ಲ ಎಂಬ ಪ್ರಶ್ನೆಯನ್ನೆತ್ತಿದನು. ಹುಡುಕಿಸಲಾಗಿ ಎಲ್ಲಿಯೂ ಇಲ್ಲವೆಂದು ಸುದ್ದಿ ಬಂತು. ಶಕಟದಾಸನೂ ತಿಳಿಯದೆಂದನು. ಚಾಣಕ್ಯನು ರಾಕ್ಷಸನ ಕಣ್ಮರೆಯನ್ನು ಸರಿಯಾಗಿ ಊಹಿಸಿದನು ; ಆದರೆ ಚಂದ್ರಗುಪ್ತನ ರಾಜ್ಯಸುಸ್ಥಿತಿಗೆ ರಾಕ್ಷಸನ ಸೇವೆ ಅವಶ್ಯವೆಂದು ಅವನು ಮನಗಂಡಿದ್ದ ಕಾರಣ ಅವನನ್ನು ಸಭೆಯಲ್ಲಿ ಬಹುವಾಗಿ ಪ್ರಶಂಸಿಸಿ ಮತ್ತೆ ಅವನಿಗಾಗಿ ಶೋಧಿಸುವಂತೆ ಸೂಚಿಸಿದನು. ತನ್ನಲ್ಲಿಯೇ, ರಾಕ್ಷಸನು ಭೀತಿಯಿಂದಲ್ಲ, ದ್ವೇಷಸಾಧನೆಗೆಂದೇ ಕಣ್ಮರೆಯಾಗಿರಬೇಕೆಂದು ಚಿಂತಿಸಿ, ಅವನ ಕ್ರಿಯೆಗೆ ಬಳಿಕ ಪ್ರತಿಕ್ರಿಯೆ ಆಚರಿಸಿದರೆ ಆಯಿತು ಎಂದು ಸಮಾಧಾನಗೊಂಡು, ಷರತ್ತಿನಂತೆ ಪರ್ವತರಾಜನಿಗೆ ಸಲ್ಲಿಸಬೇಕಾದ ಅರ್ಧರಾಜ್ಯದ ಸಮಸ್ಯೆಗೆ ಪರಿಹಾರ ಯೋಚಿಸತೊಡಗಿದನು. ನಂದರಿಗೆ ಆಪ್ತರಾಗಿದ್ದ ಮಿತ್ರರಾಜರೆಲ್ಲ ಚಂದ್ರಗುಪ್ತನಿಗೆ ಕಾಣಿಸಿಕೊಂಡು ತಮ್ಮ ಅಧೀನತೆ ಒಪ್ಪಿಕೊಂಡರು. ಚಂದ್ರಗುಪ್ತನು ದೇಶದ ಅಧಿಕಾರಿಗಳಿಗೆ ಚಾಣಕ್ಯರು ಮಂತ್ರಿತ್ವದ ಪ್ರಾಧಾನ್ಯಶಸ್ತ್ರವನ್ನು ಅಂಗೀಕರಿಸಿರುವರೆಂದೂ ಅವರ ಆಜ್ಞೆಯಂತೆ ಸಕಲರೂ ನಡೆಯತಕ್ಕುದೆಂದೂ ಘೋಷಿಸಿದನು. ಅವನು ಅವರ ಬಗೆಗೆ ಆಡಿದ ಮಾತು ಅವನ ಕೃತಜ್ಞತೆಯ ಬುದ್ಧಿ, ಗುರುಭಕ್ತಿಗೆ ತಕ್ಕಂತೆ ಇತ್ತು.

ಪರ್ವತರಾಜನ ಸೇನಾನಿ ಶೇಖರನನ್ನು ಬರಮಾಡಿ ಚಾಣಕ್ಯನು, ಅವನಿಗೆ ಅನುಮಾನ ಹುಟ್ಟದ ಹಾಗೆ ಕ್ಷಾಮ ರೋಗೋಪದ್ರವ ಮುಂತಾಗಿ ಕಾರಣಗಳನ್ನು ಹೇಳಿ, ಸಹಾಯಕ್ಕೆ ಬಂದಿದ್ದ ಸೈನ್ಯದಲ್ಲಿ ಬಹುಭಾಗವನ್ನು ಸ್ವದೇಶಗಳಿಗೆ ಹಿಂದಿರುಗಿಸುವಂತೆ ಕೋರಿದನು. ಹೀಗೆ ತಿಳಿಸುವಾಗ, ಷರತ್ತಿನಂತೆ ಅರ್ಧರಾಜ್ಯ ಕೊಡಲಿರುವುದನ್ನು ಹೇಳಲು ಮರೆಯಲಿಲ್ಲ. ಎಣಿಸಿದಂತೆ ಪರಸೈನ್ಯ ನಿರ್ಗಮಿಸಿದಾಗ, ಅವನಿಗೆ ಕೊಂಚ ಸಮಾಧಾನವಾಯಿತು.

ಸಮಯ ನೋಡಿ ಕ್ಷಪಣಕನು ರಾಕ್ಷಸನ ಅಪೇಕ್ಷೆಯಂತೆ ವಿಷಕನ್ಯೆಯನ್ನು ಚಂದ್ರಗುಪ್ತ ಚಾಣಕ್ಯರಿದ್ದ ಆಸ್ಥಾನಕ್ಕೆ ಕರೆತಂದನು. ಈ ಸಂದರ್ಭದಲ್ಲಿ ಆಕೆಯ ಸೌಂದರ್ಯವನ್ನು ಉತ್ತಾನಶೈಲಿಯಲ್ಲಿ ಕರ್ತೃ ವರ್ಣಿಸಿದ್ದು, ಶೈಲಿಯ ಮುಖ್ಯಲಕ್ಷಣ ಅದರ ಸಂಸ್ಕೃತಪದ ಪ್ರಯೋಗದಲ್ಲಿದೆ. ಚಾಣಕ್ಯನು ಅಪರಿಚಿತನೆಂಬಂತೆ ಕ್ಷಪಣಕನನ್ನು ಮಾತಾಡಿಸಿ, ಕನ್ನೆಯ ಬಗೆಗೆ ಪ್ರಶ್ನಿಸಿದನು. ಆತನಾದರೋ ತಾನೂ ಹೊಸಬನೆಂಬಂತೆ ತನ್ನ ಪರಿಚಯ ಹೇಳಿಕೊಂಡು, ರಾಕ್ಷಸನು ತನಗೆ ಹೇಳಿ ಕಳಿಸಿದ್ದಂತೆಯೇ ಆಕೆಯ ವಿಚಾರವನ್ನು ತಿಳಿಸಿ, ಚಂದ್ರ

ಗುಪ್ತನು ಆಕೆಯನ್ನು ತನ್ನ ಸೇವೆಗೆ ನೇಮಿಸಿಕೊಳ್ಳಬಹುದೆಂದು ಸೂಚಿಸಿದನು. ಅಲ್ಲದೆ ಗೂಢಾರ್ಥದಿಂದ ಅನ್ಯಾಪದೇಶವಾಗಿ ಆಕೆ ಅಪಾಯಕಾರಿಯಾದ ವಿಷಕನ್ಯೆಯೆಂಬುದನ್ನೂ ಮುಂದೆ ಅಮಾತ್ಯ ರಾಕ್ಷಸ, ಪರ್ವತರಾಜ, ಮಲಯಕೇತು ಇವರ ವಿಚಾರದಲ್ಲಿ ಯಾವ ನಡವಳಿಕೆ ಯೋಗ್ಯವೆಂಬುದನ್ನೂ ಮನವರಿಕೆ ಮಾಡಿದನು. ಈ ಅನ್ಯಾಪದೇಶದ ಸಲುವಾಗಿ ಕ್ಷಪಣಕನು ಬಳಸಿದ ದೃಷ್ಟಾಂತ ಪರ್ವತಗಳ ಪಕ್ಷಗಳನ್ನು ಛೇದಿಸಿದ ಇಂದ್ರನ ಸಾಹಸ ಕಥನವೆಂಬ ಪೌರಾಣಿಕ ಆಖ್ಯಾನವೇ ಆಗಿದ್ದು, ಯಾವ ಸಮಸ್ಯೆ ಚಾಣಕ್ಯನನ್ನು ತತ್ಕಾಲದಲ್ಲಿ ಕಾಡುತ್ತಿದ್ದಿತೋ, ಆ ಸಮಸ್ಯೆಯ ಮೂಲದಲ್ಲಿಯೇ ಪರಿಹಾರವೂ ಇರುವುದನ್ನು ಆತ ಶೀಘ್ರವಾಗಿ ಕಂಡುಕೊಳ್ಳುವಂತಾಯಿತು. ಮುದ್ರಾಮಂ. ಕರ್ತೃ ಈ ಆಖ್ಯಾನವನ್ನು ತಾನೇ ಕಲ್ಪಿಸಿದ್ದು, ಇದು ಆತನ ಪುರಾಣವ್ಯಾಸಂಗದ ವೈದುಷ್ಯಕ್ಕೆ ಕನ್ನಡಿ ಹಿಡಿಯುತ್ತದೆ.

ಈಗ ಚಾಣಕ್ಯನಿಗೆ ಎದುರಾದ ಸಮಸ್ಯೆ ಎಂದರೆ, ಪರ್ವತರಾಜ, ರಾಕ್ಷಸ ಈ ಇಬ್ಬರಲ್ಲಿ ಒಡನಾಟಕ್ಕೆ ಅವಕಾಶ ಕೊಡದಿರುವುದು ಹೇಗೆ, ಇಬ್ಬರಲ್ಲಿ ಒಬ್ಬನನ್ನು ಉಳಿಸಿಕೊಳ್ಳುವುದಾದರೆ ಯಾರನ್ನು ಎಂಬುದು. ಪೌರುಷ ಬುದ್ಧಿಬಲಗಳಲ್ಲಿ, ಸ್ವಾಮಿಭಕ್ತಿಯಲ್ಲಿ ಅಸಮಾನನಾದ ರಾಕ್ಷಸನೇ ಸಂಗ್ರಹಯೋಗ್ಯನೆಂದೂ ಕೃತಘ್ನನೂ ಆಸೆಗಾರನೂ ಆದ ಪರ್ವತರಾಜನು ನಿಗ್ರಹಯೋಗ್ಯನೆಂದೂ ಕೊನೆಯಲ್ಲಿ ಅವನು ನಿಶ್ಚಯಿಸಿದನು. ಇಬ್ಬರ ಗುಣಾವಗುಣಗಳನ್ನೂ ಅವನು ತೂಗಿ ನೋಡಿಯೇ ಈ ನಿಶ್ಚಯಕ್ಕೆ ಬಂದನು. ಕ್ಷಪಣಕನು ಮಾಡಿದಂತೆ ತಾನೂ ವಿಷಕನ್ಯೆಯ ಲಕ್ಷಣವನ್ನು ಹಕ್ಕಿಗಳ ಮೂಲಕ ಪತ್ತೆಮಾಡಿ ಆಕೆಯ ಮೂಲಕ ಪರ್ವತರಾಜನನ್ನು ನಿಗ್ರಹಿಸುವುದೆಂದುಕೊಂಡನು. "ವಿಷಸಂಪರ್ಕಪದಾರ್ಥಪರೀಕ್ಷೆಯಂ ಹೇಳಿದ ವೈದ್ಯಶಾಸ್ತ್ರವು ಸತ್ಯ"ವೆಂದು ಚಾಣಕ್ಯನು ಭಾವಿಸಿದನಂತೆ. ಮುದ್ರಾಮಂ. ಕರ್ತೃ ನಾರಾಯಣಶರ್ಮ ಸ್ವತಃ ವೈದ್ಯನಾಗಿದ್ದುದು ಸಂಭಾವ್ಯವಾದ್ದರಿಂದ ಇಲ್ಲಿ ನೇರವಾಗಿ ವೈದ್ಯಶಾಸ್ತ್ರದ ಮಾತು ಬಂದಿರಬಹುದು.

ಮಹಾದೇವ ರವಿನರ್ತಕರ ಕಥನಗಳಲ್ಲಿ (ನಾಟಕದ ಉಪೋದ್ಘಾತದಲ್ಲಿ ಸಹ) ವಿಷಕನ್ಯೆಯನ್ನು ಕ್ಷಪಣಕನೇ ಅಭಿಚಾರಕ್ರಿಯೆಯಿಂದ ನಿರ್ಮಿಸಿದನೆಂದೂ. ರಾಕ್ಷಸನೇ ಅವಳನ್ನು ಕರೆದೊಯ್ದು ಚಂದ್ರಗುಪ್ತನಿಗೆ ಒಪ್ಪಿಸಿದನೆಂದೂ ಚಾಣಕ್ಯನು ಅವಳ ಸಮಾಗಮವನ್ನು ಪರ್ವತರಾಜನೊಂದಿಗೆ ವ್ಯವಸ್ಥೆಮಾಡಿ ಅವನ ಮರಣಕ್ಕೆ ಕಾರಣವಾದನೆಂದೂ ಉಕ್ತವಾಗಿದೆ. ಕ್ಷಪಣಕ ಮತ್ತು ರಾಕ್ಷಸರ ಪಾತ್ರಗಳ ಘನತೆಗೆ ಅಲೌಕಿಕನಿರೂಪಣೆ ಅನುಚಿತವೆಂದು ತಿಳಿದು ಮುದ್ರಾಮಂ. ಕರ್ತೃ ತುಂಬ ಉಚಿತವಾಗಿ ಕಥೆಯನ್ನು ವ್ಯತ್ಯಾಸಮಾಡಿದ್ದಾನೆ. ಢುಂಢಿರಾಜನ ವ್ಯಾಖ್ಯೆಯಲ್ಲಿ ಈ ಕನ್ಯೆ ವಿಜಯದ ಉಪಹಾರವಾಗಿ ಚಂದ್ರಗುಪ್ತನಿಗೆ ಒಪ್ಪಿಸಿದ ಮೇಲೆ ರಹಸ್ಯವರಿತ ಚಾಣಕ್ಯ ಅವಳಿಂದ ಪರ್ವತರಾಜ ಮರಣಿಸುವಂತೆ ಮಾಡಿದನೆಂದು ಹೇಳಿದೆ.

೧೦. ವಿಷಕನ್ಯೆಯ ಮೂಲಕ ಪರ್ವತರಾಜನನ್ನು ಮುಗಿಸಿದ ಮೇಲೆ, ಅವನ ಮಗ ಮಲಯಕೇತುವನ್ನು ಅವನ ದೇಶಕ್ಕೆ ಹೇಗೋ ಓಡಿಸಿ, ಚಂದ್ರಗುಪ್ತನಿಗೆ ಅಖಂಡ ಮಗಧ ಸಾಮ್ರಾಜ್ಯದ ರಾಜ್ಯಾಭಿಷೇಕವಾಗುವಂತೆ ಮಾಡಬೇಕೆನ್ನುವುದು ಚಾಣಕ್ಯನ ಸಂಕಲ್ಪ. ಆದ ಕಾರಣ ಸಬೂಬು ಹೇಳಿ ಕನ್ಯೆಯನ್ನು ಪರ್ವತರಾಜನಿಗೆ ಒಪ್ಪಿಸಬೇಕೆಂದೂ ಹಾಗೆ ಮಾಡಿದರೆ ಚಂದ್ರಗುಪ್ತನಿಗೆ ರಾಕ್ಷಸನ ಮೇಲಿರುವ ಕೋಪ ಶಮನವಾಗುವುದೆಂದೂ ಅವನು

ಕ್ಷಪಣಕನಿಗೆ ತಿಳಿಸಿದನು.

ಚಾಣಕ್ಯನ ಕಡೆಯಿಂದ ಹೊರಟ ಒಂದು ಕಾಗದ ಸಿದ್ಧಾರ್ಥಕನನ್ನು ಸೇರಿತು ; ಅದರ ಪ್ರಕಾರ ಅವನು ಬಾಗುರಾಯಣನನ್ನು ಕಲೆತು ಅವನನ್ನು ಮುಂದಿನ ರಾಜಕಾರಣಕ್ಕೆ ಸಜ್ಜು ಮಾಡಿದನು. ಬಾಗುರಾಯಣನ ಆಪ್ತರಾದ ಸೇನೆಯ ಅಧಿಕಾರಿಗಳಿಗೂ ಸಂದೇಶ ಹೋಯಿತು. ಈತ ತಾನು ನಿರ್ವಹಿಸಲಿರುವ ಕಾರ್ಯದ ಸ್ವರೂಪವನ್ನು ತನ್ನಲ್ಲಿಯೇ ವಿಮರ್ಶಿಸಿದನು. ಇವುಗಳಲ್ಲಿ ತಂದೆಯ ಮರಣಾನಂತರ ಮಲಯಕೇತುವನ್ನು ಪಾಟಲೀಪುರದ ಸೇನೆಯ ಠಾಣ್ಯದಿಂದ ಓಡಿಸುವುದು, ಒಂದು ಪಕ್ಷ ರಾಕ್ಷಸನೇನಾದರೂ ಅವನನ್ನು ಆಶ್ರಯಿಸಿದರೆ ರಾಕ್ಷಸನ ಮೇಲೆ ಅಪವಾದ ಬರುವಂತೆ ಮಾಡಿ ಅವನನ್ನು ಅಲ್ಲಿಂದ ನಿರ್ವಾಸಿತಗೊಳಿಸುವುದು ಎಂಬ ಎರಡು ಮುಖ್ಯವಾದವು.

ಇತ್ತ ಕ್ಷಪಣಕನು ಪಾಳೆಯದಲ್ಲಿ ಪರ್ವತರಾಜನನ್ನು ವಿಷಕನ್ಯೆಯೊಂದಿಗೆ ಸಂದರ್ಶಿಸಿದನು. ಪರ್ವತರಾಜನು ಅವಳನ್ನು ಕಾಣುತ್ತಲೇ ಮೋಹಗೊಂಡನು. "ಇವಳು ಕೇಳಿದರೆ ನನ್ನ ಪ್ರಾಣವನ್ನಾದರೂ ಕೊಡುವೆನಲ್ಲದೆ ತಪ್ಪುವನಲ್ಲ" ಎಂದು ಮೋಹಪರವಶನಾಗಿ ಅವನು ಆಡಿದ ಮಾತು ನಾಟಕೀಯ ವ್ಯಂಗ್ಯ ಧ್ವನಿಯ ಸಾಕ್ಷ್ಯವೆನ್ನಬಹುದಾದ್ದು. ಇಂತಹ ಮಾತುಗಳನ್ನು ಆಗಾಗ ಮುದ್ರಾಮಂ. ಕರ್ತೃ ಸೊಗಸಾಗಿ ತಂದಿದ್ದಾನೆ. ಕ್ಷಪಣಕನು ಆ ಕನ್ಯೆಯು ರಾಕ್ಷಸನ ಕೊಡುಗೆಯೆಂದು ಹೇಳಿದ ಕೂಡಲೇ, ರಾಕ್ಷಸನ ವಿಷಯದಲ್ಲಿ ಅವನಿಗೆ ಅತಿಶಯವಾದ ಸಹಾನುಭೂತಿ ಹುಟ್ಟಿತು. ತನ್ನ ಭಾಗಕ್ಕೆ ಬರುವ ನಂದರಾಜ್ಯದ ಅರ್ಧ ಭಾಗವನ್ನು ಅವನಿಗೇ ಕೊಡಲು ಸಹ ಅವನು ಮುಂದಾದನು. ಅವನ ಕಾಮಾಂಧತೆ, ದುಡುಕುಬುದ್ಧಿ ಯಾವ ತೆರನಾದವು ಎನ್ನುವುದಕ್ಕೆ ಇದು ತಕ್ಕ ಸ್ಥಾನ. ಬುದ್ಧಿಯ ಚಾಂಚಲ್ಯ, ಅತ್ಯಾಶೆಗಳ ಜೊತೆಗೆ ಇವು ಅವನ ಹೆಚ್ಚಿನ ದೌರ್ಬಲ್ಯಗಳಾಗಿವೆ. ಆಕೆಯ ಸಮಾಗಮ ಪಡೆದು ಅವನು ನಂಜೇರಿ ಸತ್ತನು. ವಿಷಕನ್ಯೆ ನಿರಪರಾಧಿ, ನಿಸ್ಸಹಾಯಕ ಅಭಾಗಿನಿ. ಬಾಗಿಲ ಕಾವಲಿನವರು ಅವಳನ್ನು ವಾರಾಂಗನೆಯೆಂದು ತಿಳಿದು ಅವಳು ಹೊರಡುವ ವೇಳೆ ಅವಳನ್ನು ತಡೆಯಲಿಲ್ಲ. ನಡುವೆ ಬಾಗುರಾಯಣನ ಭೇಟಿ ಆಕಸ್ಮಿಕವಾಗಿ ಘಟಿಸಿ, ಅವಳ ಮತ್ತು ಪರ್ವತರಾಜನ ಪಾಡು ಅವನಿಗೆ ತಿಳಿಯಿತು. ಗೂಡಾರದ ಬಳಿಯ ಕಂಚುಕಿಗಳ ಮಾತು ಕೇಳಿಸಿಕೊಂಡಾಗ ಪ್ರಮಾಣೆಸಿಯೂ ತಿಳಿದಂತಾಯಿತು. ಆ ಮಾತಿನಲ್ಲಿ ದೇಸಿಯ ಸೊಗಡು ಕೂಡಿದ್ದರೆ ಸನ್ನಿವೇಶದ ನೈಜತೆ ಹೆಚ್ಚುತ್ತಿತ್ತು ; ಈಗ ಅದು ಆಲಂಕಾರಿಕವೂ ಪ್ರೌಢವೂ ಆಗಿದೆ.

ಕೂಡಲೇ ಮುಂದಿನ ಕಾರ್ಯಕ್ಕೆ ತನ್ನ ವಿಚಾರದಂತೆ ಬಾಗುರಾಯಣನು ಚುರುಕಾದನು. ಸಮೀಪದಲ್ಲಿಯೇ ಕೊಲೆಗಾಗಿ ಸೇನೆ ಸಿದ್ಧವಾಗಿ ನಿಂತಿದೆಯೆಂದು ಹೆದರಿಸಿ ಮಲಯಕೇತುವನ್ನು ಪಾಳೆಯದಿಂದ ಕೆಲವು ಹರಿದಾರಿ ಆಚೆಗೆ ಒಯ್ದನು. ಅಲ್ಲಿ ಆ ವೇಳೆಗಾಗಲೇ ಬೆದರಿದ್ದ ಮಲಯಕೇತುವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಲು ಇನ್ನಷ್ಟು ಆತಂಕಕಾರಿಯಾದ ಮಾತುಗಳಿಂದ ಹೆದರಿಸಿದನು. ಚಾಣಕ್ಯನು ಅವನ ಪ್ರಾಣಕ್ಕೆ ಮುನಿದಿರುವನೆಂದೂ ಉಪಾಯದಿಂದ ಮಿತ್ರರಾಜರ ಸೈನ್ಯವನ್ನು ಅವರವರ ದೇಶಗಳಿಗೆ ಕಳಿಸಿಬಿಟ್ಟನೆಂದೂ ಅವನೇ ವಿಷಕನ್ಯೆಯ ಮೂಲಕ ತಂದೆ ಪರ್ವತರಾಜನನ್ನು ಕೊಲ್ಲಿಸಿದನೆಂದೂ ಮುಂತಾಗಿ ಪರಿಪರಿಯಾಗಿ ಹೇಳಿ ನಂಬಿಸಿಬಿಟ್ಟನು. ತಂದೆಯ ಮೃತಿ ಕಾರಣವಾಗಿ ಮಲಯಕೇತು

ಏನೊಂದನ್ನೂ ಸರಿಯಾಗಿ ವಿಮರ್ಶಿಸಿ ತಿಳಿಯುವಂತಿರಲಿಲ್ಲ. ಇಷ್ಟು ಮಾತ್ರವಲ್ಲ, ರಾಜ್ಯ ನಿರ್ವಹಣೆಯ ನೀತಿಯ ಮಾತುಗಳನ್ನು ಸಹ ಪರಮಾಪ್ತನಾದ ಹಿತೈಷಿಯಂತೆ ವಿವರಿಸಿದಾಗ, ಯುದ್ಧದಲ್ಲಿ ಶಬರವರ್ಮನು ಕಾಲವಾಗಿದ್ದುದರಿಂದ ಮಲಯಕೇತು ಬಾಗುರಾಯಣನೇ ತನ್ನ ಆಪ್ತಮಂತ್ರಿಯಾಗಲು ಯೋಗ್ಯನೆಂದು ಹೇಳಿ ಅವನನ್ನು ಒಪ್ಪಿಸಿದನು. ಬಾಗುರಾಯಣನ ಮೃಷಾವಾರ್ತೆಯ ವಿಸ್ತಾರವನ್ನು ಗಮನಿಸಿದರೆ, ಅವನು ಚಂದ್ರಗುಪ್ತ-ಚಾಣಕ್ಯರ ಕೈಗೊಂಬೆಯಾಗಿರುವನೇನೋ ಎನಿಸುತ್ತದೆ. ಸಿದ್ಧಾರ್ಥಕನು ಅವನಲ್ಲಿ ವಿಶೇಷಾಭ್ಯುದಯದ ಆಸೆಗಳನ್ನು ಬೇರೆ ಹುಟ್ಟಿಸಿರುವುದರಿಂದ ಆ ಸ್ವಾರ್ಥವೂ ಸೇರಿದೆ. ಚಂದ್ರಗುಪ್ತನ ಮೇಲೆ ತೋರಿಸಿದ ಸ್ವಲ್ಪ ಸಹಾನುಭೂತಿ ಈಗ ಅಗಾಧ ಆಸಕ್ತಿಯಾಗಿ ಪರಿಣಮಿಸಿದೆ. ಉದ್ದೇಶ ಸಾಧುವೋ ಅಸಾಧುವೋ, ನಂಬಿಸಿ ತಿನ್ನುವ ಜನದಲ್ಲಿ ಬಾಗುರಾಯಣನ ಪಾತ್ರ ಅಗ್ರಗಣ್ಯವಾಗಿದೆ. ಮಲಯಕೇತು ಈಗ ಚಂದ್ರಗುಪ್ತ-ಚಾಣಕ್ಯರ ಮೇಲೆ ಕತ್ತಿ ಮಸೆಯುವ ಕ್ರೋಧವನ್ನು ತನ್ನಲ್ಲಿ ತುಂಬಿಕೊಂಡನು. ಎಲ್ಲವೂ ಚಾಣಕ್ಯ ನೆನಸಿದಂತೆಯೇ ಆಯಿತು.

೧೧. ದೂತರ ಮೂಲಕ ಪರ್ವತರಾಜನ ಸಾವು, ಅವನ ತಮ್ಮ ವಿರೋಚನ ಮತ್ತು ಮಗ ಮಲಯಕೇತು ಇವರ ಪಲಾಯನ ಈ ವಿದ್ಯಮಾನಗಳು ಚಾಣಕ್ಯನಿಗೆ ವರದಿಯಾದುವು. ರಾಜಕಾರಣದಲ್ಲಿ "ಹೊರಗೊಂದು, ಒಳಗೊಂದು" ಎಂಬುದನ್ನು 'ಚಾಣಕ್ಯತನ'ದಿಂದ ನಡಸಿಕೊಂಡು ಬಂದು, ಸ್ವಕಾರ್ಯಸಾಧನೆಯಲ್ಲಿ ಅಪ್ರತಿಹತವಾದ ಯಶಸ್ಸು ಗಳಿಸುತ್ತ ಬಂದಿದ್ದ ಚಾಣಕ್ಯನಿಗೆ ಸಮಾಧಾನವಾಯಿತು. "ಧರ್ಮಮಾರ್ಗಕ್ಕೆ ವಿರೋಧಿಗಳಾದ ನಾಸ್ತಿಕಜನರ ಸೊಕ್ಕುಗಳು" ಅಡಗಿದುವೆಂದು ಮನಸ್ಸಿನಲ್ಲಿಯೇ ಹರ್ಷಿಸಿದನು. ನಂದರೇನೋ ಸರಿ, ಪರ್ವತರಾಜನು ನಾಸ್ತಿಕ ಹೇಗೆ ? ಅವನು ಮ್ಲೇಚ್ಛ ಎಂಬುದರಿಂದ ಪಾಖಂಡಿಯೆಂದೇ ಅವನನ್ನು ಚಾಣಕ್ಯ ತಿಳಿದಿರಬಹುದು. ಈಗ ಪ್ರಕಟವಾಗಿ ಜನರೆದುರು, ಪರ್ವತರಾಜನ ಮರಣಕ್ಕೆ ತುಂಬ ಶೋಕಿಸುವವನಂತೆ ನಟಿಸಿದನು. ವಿಷಕನ್ಯೆಯ ವಿಚಾರವನ್ನೆತ್ತಿಕೊಂಡು, ರಾಕ್ಷಸನು ಕುತಂತ್ರ ಮಾಡಿ ಅವನ ಮನುಷ್ಯನಾದ ಕ್ಷಪಣಕನ ಮೂಲಕ ಚಂದ್ರಗುಪ್ತನ ಇಲ್ಲವೆ ಪರ್ವತರಾಜನ ಸಂಹಾರಕ್ಕೆಂದು ಆಕೆಯನ್ನು ಪ್ರಯೋಗಿಸಿರುವನೆಂದು ಹಲುಬಿದನು ; ಗಣೆತಿಗಾಗಿ ಬಂದ ಸೇನೆಯನ್ನು ಆಕ್ರಮಣಕ್ಕೆ ಬಂದ ಸೇನೆಯೆಂದು ತಿಳಿದು ಮಲಯಕೇತು ಭೀತನಾಗಿ ಓಡಿಹೋದನೆಂದು ಮರುಗಿದನು. ಇಂತಹ ಮಾತುಗಳನ್ನು ನಂಬದಿರುವವರು ಯಾರು ?

ಪರ್ವತರಾಜನ ಶವಸಂಸ್ಕಾರವಾಯಿತು. ಗಣೆತಿಯ ಸೇನೆಯ ಬಗೆಗೆ ಆಪ್ತ ನಿಪುಣಕನಲ್ಲಿ ಪ್ರಶ್ನಿಸುವಂತೆ ನಟನೆ ಮಾಡಿದ್ದಾಯಿತು. ಇನ್ನು ಚಂದ್ರಗುಪ್ತನ ರಾಜ್ಯಾಭಿಷೇಕಕ್ಕೆ ಏರ್ಪಾಡುಗಳು ನಡೆಯಲೆಂದು ಆಜ್ಞೆ ಮಾಡಿದನು. ರಾಕ್ಷಸನ ಸೂಚನೆಯಂತೆ ರಾಜದ್ವಾರದಲ್ಲಿ ಕಪಟಶಿಲ್ಪ ರಚಿಸಿ ಶಿಲ್ಪಿ ದಾರುವರ್ಮನು ಸುಮ್ಮನಿದ್ದರೆ ಚೆನ್ನಾಗಿತ್ತು ; ಆದರೆ ಆತುರಪಟ್ಟು ಚಾಣಕ್ಯನಿಗೆ ಅದನ್ನು ವರದಿ ಮಾಡಿದನು. ಹೇಳುವುದಕ್ಕೆ ಮೊದಲೇ ಶಿಲ್ಪಿ ಕೆಲಸ ಮಾಡಿದ್ದು ಚಾಣಕ್ಯನಿಗೆ ಅನುಮಾನ ತಂದಿತು ; ಅವನು ರಾಕ್ಷಸನ ಮನುಷ್ಯನಾಗಿರಬೇಕು ಎಂದುಕೊಂಡು, ಅದಕ್ಕೆ ಅನುಗುಣವಾಗಿ ಮುಂದಿನ ತನ್ನ ತಂತ್ರವನ್ನು ರೂಪಿಸಿದನು. ಆ ತಂತ್ರವೆಂದರೆ ಬಾಗುರಾಯಣನ ತಮ್ಮ ವತ್ಸಲಾಯನನ ಮೂಲಕ ವಿರೋಚನ

ನನ್ನು ಬಲೆಗೆ ಬೀಳಿಸಿಕೊಂಡು, ಷರತ್ತಿನಂತೆ ಅರ್ಧರಾಜ್ಯದ ವಾರಸುದಾರತ್ವವನ್ನು ಅವನಿಗೆ ಕೊಡುವುದಾಗಿ ಒಪ್ಪಿಸಿ, ಇತರರಿಗೆ ಚಂದ್ರಗುಪ್ತನೆಂಬ ಭ್ರಮೆ ಬರುವಂತೆ ಅವನನ್ನು ವೇಷಭೂಷಣಗಳಿಂದ ಅಲಂಕರಿಸಿ, ಮೆರವಣಿಗೆ ಹೊರಡಿಸಿ, ರಾಜದ್ವಾರದ ಕಪಟಶಿಲ್ಪದ ಮೃತ್ಯುಕೂಪಕ್ಕೆ ತಳ್ಳುವುದು. ಬಾಗುರಾಯಣನು ಮಲಯಕೇತುವನ್ನು ಯಾವ ಬಣ್ಣದ ಮಾತುಗಳಿಂದ ಹಿಂದೆ ವಂಚಿಸಿದ್ದನೋ ಅಂಥವೇ ಬಣ್ಣದ ಮಾತುಗಳಿಂದ ಈಗ ಅವನ ಚಿಕ್ಕಪ್ಪನನ್ನು ವಂಚಿಸುವಲ್ಲಿ ಸಫಲನಾದನು. ಆ ಮಾತುಗಳೆಲ್ಲ ಚಾಣಕ್ಯನು ಅವನಿಗೆ ಕಲಿಸಿದ ಮಾತುಗಳೇ. ಸುಲಭವಾಗಿ ವಿರೋಚನನು ಬಲೆಗೆ ಬಿದ್ದನು.

ಕಾರ್ಯಾಚರಣೆಯಲ್ಲಿ ಕೊಂಚ ವ್ಯತ್ಯಯಗಳುಂಟಾದರೂ ರಾಕ್ಷಸನ ಮನುಷ್ಯ ಬರ್ಬರಕನೆಂಬ ಮಾವುತನೂ ವಿರೋಚನನೂ ಆಕಸ್ಮಿಕದಲ್ಲಿ ಹತರಾದರು ; ಶಿಲ್ಪಿ ದಾರುವರ್ಮನು ಕಾವಲಿನವರಿಂದ ಕೊಲೆಯಾದನು. ವಿರೋಚನನ ವಧೆಯ ಅಪವಾದ ಸಹ ರಾಕ್ಷಸನಿಗೇ ಹತ್ತುವಂತೆ ಚಾಣಕ್ಯ ಏರ್ಪಾಟು ಮಾಡಿದ್ದನು. ರಾಜದ್ವಾರದ ಕಪಟಶಿಲ್ಪದ ರಚನೆ ಒಂದು ವಧೆಯ ತಂತ್ರದ ಸ್ಥಾನವಾಗಲು ಶಕ್ಯವೆಂಬುದರ ಸೂಚನೆಗಳನ್ನು ಮುದ್ರಾಮಂ. ಕರ್ತೃ ಮಹಾದೇವ-ರವಿನರ್ತಕರ ಕಥನಗಳಿಂದ ಗ್ರಹಿಸಿದಂತಿದೆ. ಚಂದ್ರಗುಪ್ತನನ್ನು ಶಯ್ಯಾಗಾರದಲ್ಲಿ ಛದ್ಮನೆಯಿಂದ ಕೊಲ್ಲಿಸುವ ರಾಕ್ಷಸನ ಏರ್ಪಾಡು ಸಹ ಚಾಣಕ್ಯನ ಮುನ್ನೆಚ್ಚರಿಕೆಯಿಂದ ಭಗ್ನವಾಯಿತು. ಪಿತೂರಿಯಲ್ಲಿ ಯಾರು ಯಾರು ತೊಡಗಿದ್ದರೆಂಬುದನ್ನು ಚಿತ್ರಪಟ, ಸಾಣೆ ಹಿಡಿದ ಶಸ್ತ್ರ, ನಿಲುಗನ್ನಡಿ, ಬೆಲೆಬಾಳುವ ಮೈಯುಡುಪು ಈ ಕೆಲವು ಸೂಚಕಸಾಕ್ಷ್ಯಗಳಿಂದ ಚಾಣಕ್ಯನು ಶೋಧಿಸಿದ್ದು ಆತನ ಕುಶಾಗ್ರಮತಿಗೆ ನಿದರ್ಶನವಾಗಿದೆ. ಈ ಎರಡೂ ವಧಸನ್ನಾಹಗಳೂ ಇವುಗಳ ರಹಸ್ಯಭೇದನವೂ ಚೇತೋಹಾರಿಯಾದ ಪತ್ತೇದಾರಿ ಶೋಧನೆಯಂತೆ ವಿವರಗಳನ್ನು ಮೈಗೂಡಿಸಿಕೊಂಡು ಸಾಗುತ್ತವೆ. ಎಲ್ಲರಿಗೂ ಕೊನೆಯಲ್ಲಿ ಶಿಕ್ಷೆಗಳಾಗುತ್ತವೆ. ಹೀಗೆಯೇ ರಾಕ್ಷಸನಿಂದ ನಿಯುಕ್ತನಾಗಿದ್ದ ರಾಜವೈದ್ಯನನ್ನು ಸಹ ಚಾಣಕ್ಯನು ಅವನ ಸಲ್ಲದ ವಿಶೇಷಾಸಕ್ತಿಯಿಂದ ಶಂಕೆ ಹುಟ್ಟಿ, ಪರೀಕ್ಷಿಸಿ ನೋಡಿ, ತಾನೇ ತನ್ನ ಬಳಿಯ ವಿಷಚುಂಬಿನಿಯೆಂಬ ಬಟ್ಟಲ ಸಹಾಯದಿಂದ ಸಾಯುವಂತೆ ಮಾಡಿದನು. ಈ ಕಪಟಶಿಲ್ಪ ಮುಂತಾದ ವಿವರಗಳಿಗೆಲ್ಲ ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕವೇ ಮೂಲವಾದರೂ ಮುದ್ರಾಮಂ. ಕರ್ತೃ ಕಲ್ಪನೆಯಿಂದ ಅವುಗಳನ್ನು ಸನ್ನಿವೇಶಗಳಾಗಿ ಬೆಳಸಿದ್ದಾನೆ.

ಈಗ ಚಾಣಕ್ಯನಿಗೆ ನೇರವಾದ ಲಕ್ಷ್ಯ ರಾಕ್ಷಸನೇ ಆದನು. ತನ್ನ ಗೂಢಚಾರರ ಮೂಲಕ ರಾಕ್ಷಸನ ಸಂಬಂಧವಾದ ಸಕಲವಿವರಗಳನ್ನೂ ಸಂಗ್ರಹಿಸಲು ಅಪ್ಪಣೆ ಮಾಡಿದನು. ಅವನ ಆಪ್ತರು ಯಾರು, ಹೆಂಡತಿ ಮಕ್ಕಳು ಎಲ್ಲಿದ್ದಾರೆ, ಅವನು ಯಾವ ದೇಶದಲ್ಲಿ ಅಡಗಿದ್ದಾನೆ ಮುಂತಾದ ವಿವರಗಳನ್ನು ಅವನು ಅವರಿಂದ ಪಡೆಯಬೇಕಾಗಿತ್ತು. ಚಾಣಕ್ಯನ ಸಲಹೆಯಂತೆ ಚಂದ್ರಗುಪ್ತನು ಸರ್ವಾರ್ಥಸಿದ್ಧಿರಾಜನಿಗೆ ಕಾಣಿಸಿಕೊಂಡು ವಂದಿಸಿದನು. ವೃದ್ಧರಾಜನು ವಿಶ್ವಾಸದಿಂದಲೇ ಅವನನ್ನು ಕಂಡನು. ವೃದ್ಧರಾಜನ ಸಮಚಿತ್ತತೆ ಉದ್ದಕ್ಕೆ ಒಂದೇ ತೆರನಾಗಿದ್ದು, ಅವನು ಅಕಾರ್ಯವನ್ನು ಮೆಚ್ಚುವವನಲ್ಲ ಎಂಬುದು ವಿದಿತವಾಗುತ್ತದೆ. ಚಂದ್ರಗುಪ್ತನು ವೃದ್ಧರಾಜನನ್ನು ತಪೋವನಕ್ಕೆ ತೆರಳ ಬಾರದೆಂದು ತಿಳಿಸಿ ತನ್ನ ಸಹಜವಿನಯವನ್ನು ಪ್ರಕಟಿಸಿದನು. ಅವನಿಗೆ ನಂದರ ವಿಷಯದಲ್ಲಿ ದ್ವೇಷವಿತ್ತಲ್ಲದೆ

ಅಜ್ಜನ ವಿಷಯದಲ್ಲಿ ದ್ವೇಷಕ್ಕೆ ಕಾರಣವಿರಲಿಲ್ಲ. ಅಲ್ಲದೆ ಅವನು ಸಂಸ್ಕಾರದಿಂದಲೂ ತನ್ನ ಉತ್ತಮಿಕೆಯನ್ನೇ ಆವರೆಗೆ ಪ್ರಕಟಿಸಿದವನು.

ಮಲಯಕೇತುವಿಗೆ ಚಿಕ್ಕಪ್ಪನು ಹತವಾದ ವಾರ್ತೆ ತಲುಪಿತು. ಚಾಣಕ್ಯನ ಕಪಟವಾಕ್ಯಕ್ಕೆ ಅವನು ಬಲಿಯಾದನೆಂದೇ ಅವನು ತಿಳಿದನು ; ಬಾಗುರಾಯಣ ಅವನನ್ನು ಸಮಾಧಾನ ಪಡಿಸಿದನು. ಚಾಣಕ್ಯನು ಭವನಪಾಲಕನನ್ನು ಹುಡುಕಿಸಿ, ಬೆದರಿಸಿ ಪ್ರಶ್ನಿಸಿದಾಗ ರಾಕ್ಷಸನ ಸೂಚನೆಯಂತೆ ತಾನು ಶಯನಗೃಹವನ್ನು ಕಪಟಕ್ಕೆ ಅವಕಾಶವಾಗುವಂತೆ ಕಟ್ಟಿದುದಾಗಿ ಅವನು ತಿಳಿಸಿದನು. ಚಾಣಕ್ಯನು ರಾಜಗೃಹದ ರಹಸ್ಯವನ್ನು ಅವನಿಂದ ತಿಳಿದು, ರಾಕ್ಷಸನ ರಹಸ್ಯನಿರ್ಗಮನದ ಗೂಢವನ್ನೂ ಅವನ ಬಾಯಿಂದಲೇ ಹೊರಡಿಸಿದನು.

ಚಾಣಕ್ಯನ ಮನಸ್ಸಿಗೆ ಏನೋ ಒಂದು ಆಲೋಚನೆ ಬಂತು. ರಾಕ್ಷಸನು 'ಈಗ ಹೊರಗಿದ್ದಾನೆ. ಅವನು ಸರ್ವಾರ್ಥಸಿದ್ಧಿರಾಜನಿಗೆ ಹಠದಿಂದ ಒಬ್ಬ ಸ್ವೀಕೃತಪುತ್ರನನ್ನು ತಂದು ನಂದರಾಜ್ಯದ ಉತ್ತರಾಧಿಕಾರಿಯಾಗುವಂತೆ ಮಾಡಬಹುದು. ಅದನ್ನು ತಪ್ಪಿಸಬೇಕಾದರೆ ವೃದ್ಧರಾಜನನ್ನು ಅರಮನೆಯಿಂದ ಹೊರಡಿಸಿ ಅಲ್ಲಿ ರಹಸ್ಯವಾಗಿ ಅವನನ್ನು ಮುಗಿಸುವುದೇ ಸರಿ' ಎನ್ನುವುದು ಆ ಆಲೋಚನೆ. ವಂದಿಮಾಗಧರ ಮೂಲಕ ನಂದವಿನಾಶವನ್ನು ಎತ್ತಿ ಹೇಳುವಂತೆ ಚಂದ್ರಗುಪ್ತನ ಸ್ತುತಿಯನ್ನು ಮಾಡಿಸಲು, ವೃದ್ಧರಾಜ ದಂಪತಿಗಳು ಚಂದ್ರಗುಪ್ತನ ಬಗೆಗೆ ಜುಗುಪ್ಸೆಗೊಂಡು ಅಂತಃಪುರದ ಸುರಂಗಮಾರ್ಗದಿಂದ, ತಮಗೆ ಅತ್ಯಂತ ಆಪ್ತರಾದ ಇಬ್ಬರೊಂದಿಗೆ ವನವಾಸಕ್ಕೆ ಹೊರಟುಹೋದರು. (ನಾಟಕದ ಉಪೋದ್ಘಾತದಲ್ಲಿ ರಾಕ್ಷಸನೇ ಸುರಂಗಮಾರ್ಗದಿಂದ ಗುಟ್ಟಾಗಿ ಊರ ಹೊರಕ್ಕೆ ಕಳುಹಿಸಿದನೆಂದಿದೆ.) ಇಲ್ಲಿ ಸರ್ವಾರ್ಥಸಿದ್ಧಿಯ ಸ್ವಾಭಿಮಾನ, ಅವನ ಪತ್ನಿ ಸುನಂದೆಯ ಪತಿಭಕ್ತಿ, ಆಪ್ತರಿಬ್ಬರ ಸ್ವಾಮಿಭಕ್ತಿ ಇವು ಸುಪ್ರಕಟವಾಗುವ ಆತ್ಮೀಯವಾದ ಸಂವಾದಗಳಿವೆ. ತನ್ನ ಮನೆಯಲ್ಲೇ ತಾನು ತಬ್ಬಲಿಯಾದ ವೃದ್ಧರಾಜನ ಸ್ಥಿತಿ ಹೃದಯವಿದ್ರಾವಕವಾದುದು. ಚಾಣಕ್ಯನು ತನ್ನ ಕಾರ್ಯಸಿದ್ಧಿಗಾಗಿ ಎಷ್ಟು ದೂರ, ಎಷ್ಟು ಕಠೋರವಾಗಿ ಯೋಚಿಸುವನೆಂಬುದೂ ಜೊತೆಗೆ ನಿರಪರಾಧಿಯಾದ ವೃದ್ಧರಾಜನ ಬದುಕು ಕೂಡ ಆತನ ಕೈಯಾಟದಂತೆಯೇ ಎಂಬುದೂ ಇಲ್ಲಿ ನಮ್ಮ ಗಮನ ಸೆಳೆಯುತ್ತದೆ.

ಚಾಣಕ್ಯನು ಅಂತಃಪುರದ ಕಂಚುಕಿಯಿಂದ ರಾಜದಂಪತಿಗಳ ಕಣ್ಮರೆಯನ್ನು ಕೇಳಿ ತಿಳಿದನು. ಅದು ಸುರಂಗಪ್ರವೇಶದ್ವಾರದಲ್ಲಿ ಅಡಗಿದ್ದ ಚೋರರು ಹೇಳಿದ್ದಕ್ಕೆ ತಾಳೆಯಾಯಿತು. ಆ ಚೋರರನ್ನು ಚಾಣಕ್ಯ ಈಗ ವೃದ್ಧರಾಜನ ಕೊಲೆಗೆ ನೇಮಿಸಿದನು. ರವಿನರ್ತಕನ ಕಥನದಲ್ಲಿ ಸರ್ವಾರ್ಥಸಿದ್ಧಿರಾಜನೇ ಚಂದ್ರಗುಪ್ತನ ಕೊಲೆಗೆ ವಿಷಯುಕ್ತ ಬದರೀಫಲಗಳನ್ನು ಕಳಿಸಿದ್ದನೆಂದೂ ಚಾಣಕ್ಯ ಅವನ್ನು ಹಿಂತಿರುಗಿಸಿದ ಮೇಲೆ ತಾನೇ ತಿಂದು ವೃದ್ಧರಾಜನು ಮೃತನಾದನೆಂದೂ ಹೇಳಿದೆ.

ಇಲ್ಲಿಂದ ಮುಂದೆ, ಮುದ್ರಾಮಂ.ದ ಕರ್ತೃ ಸಾಂಪ್ರದಾಯಿಕವಾದ ವರ್ಣನಕ್ರಮದಲ್ಲಿ ತಪೋವನಪ್ರಾಂತದ ವರ್ಣನೆಯನ್ನು ವಿಸ್ತಾರವಾಗಿ ಮಾಡಿದ್ದಾನೆ. ಇಲ್ಲಿ ಸಂಸ್ಕೃತ ಸಮಾಸಗಳ ವಿಜೃಂಭಣೆಯೂ ಶ್ಲೇಷಮೂಲವಾದ ವಿರೋಧಾಭಾಸವೆಂಬ ಅಲಂಕಾರದ ಚಮತ್ಕಾರಪ್ರದರ್ಶನವೂ ಬೇಕಾದ ಹಾಗಿದ್ದು, ಅವು ಈ ವಿದ್ವತ್ಕವಿಯ ಶಬ್ದಶಕ್ತಿಯನ್ನೂ ಕಲ್ಪನಾಶಕ್ತಿಯನ್ನೂ ಎತ್ತಿ ಹೇಳುತ್ತವೆ. ಈ ತಪೋವನ, ಮುನಿಸಂಘಗಳ ವಾತಾವರಣ

ಕಥೆಯ ವಸ್ತುವಿನ ಕಾಲಕ್ಕೆ ಉಚಿತವಾದುದು ಎನ್ನುವುದರಲ್ಲಿ ಸಂಶಯವಿಲ್ಲ.

ಚಾಣಕ್ಯನಿಂದ ನಿಯಮಿತರಾದ ಚೋರರು ವೃದ್ಧರಾಜನ ಕೊಲೆಗೆ ಹೊಂಚುಹಾಕುತ್ತಲೇ ಇದ್ದರು. ಕಾಲ ಸನ್ನಿಹಿತವಾಯಿತೆಂದು ಹೇಳುವಂತೆ ದೊರೆ ಒಂದು ಅಲೌಕಿಕ ದೃಶ್ಯವನ್ನು ಅಂತರಿಕ್ಷದಲ್ಲಿ ಕಂಡು, ಅದರ ಸಂಕೇತದಿಂದ ತನ್ನ ಆಯುಸ್ಸು ತೀರಿದುದನ್ನು ತಿಳಿದುಕೊಂಡನು. ತಾನೇ ರಾಜಯೋಗಮಾರ್ಗದಿಂದ ಇಚ್ಛಾಮರಣವನ್ನು ಪಡೆದನು. ಕಥೆಗಾರ ಈ ವೃದ್ಧರಾಜನ ಪಾತ್ರವನ್ನು ಉದಾತ್ತಭಾವದ ಪವಿತ್ರಾತ್ಮನನ್ನಾಗಿ ಕಡೆದಿದ್ದಾನೆ. ಚೋರರೇನೋ ಕಳೇಬರದ ಗುರುತಿಗೆ ಜಪಮಾಲೆಯನ್ನು ಒಯ್ದು ಚಾಣಕ್ಯನಿಗೆ ಒಪ್ಪಿಸಿದರು. ಸುನಂದಾದೇವಿ ಸಹಗಮನ ಮಾಡಿದಳು. ವೃದ್ಧದಂಪತಿಗಳ ಸೇವೆಯ ಚೇಟಿ ಮತ್ತು ಬೀಸಣಿಗೆಯವನು ಈ ಎರಡು ಸಾಮಾನ್ಯಪಾತ್ರಗಳು ಕೃತಿಯ ಸಂದರ್ಭದ ಗಾಂಭೀರ್ಯಕ್ಕೆ ಕೆಲಮಟ್ಟಿನ ಲಾಲಿತ್ಯವನ್ನು ತರುವಲ್ಲಿ ಯಶಸ್ವಿಯಾಗಿವೆ. ರಾಣಿಯ ಸಹ ಗಮನದ ವಿವರಗಳು ಕುತೂಹಲಕರವಾಗಿ, ಸಾಂಸ್ಕೃತಿಕ ಮಹತ್ತ್ವವುಳ್ಳದಾಗಿದೆ.

೧೨. ವೃದ್ಧರಾಜನ ಸೇವೆಯ ವ್ಯಜನಧಾರಿ ಕ್ಷೌಮಕನು ಕೊಟ್ಟ ರಾಜದಂಪತಿಗಳ ನಿಧನವಾರ್ತೆ ಹಾಗೂ ತಾನೇ ನಿಯಮಿಸಿದ್ದ ಗೂಢಚಾರ ವಾಸಕನು ಕೊಟ್ಟ ಪರ್ವತರಾಜನ ದಂಡಿನ ಹೊಸವರ್ತಮಾನ ಇವು ರಾಕ್ಷಸನಿಗೆ ತಲುಪಿದ ಕಥಾಂಶಗಳಿಂದ ೧೨ನೆಯ ಆಶ್ವಾಸ ಮೊದಲಾಗಿದೆ. ಇಲ್ಲಿಯ ಪಾತ್ರಗಳ ಭೇಟಿ, ಸಂವಾದದ ರೀತಿ ಪ್ರಾಚೀನ ಸಂಸ್ಕೃತ ನಾಟಕವೊಂದರ ಪ್ರವೇಶಕದ ನೆನಪನ್ನು ತಪ್ಪದೆ ತರುತ್ತದೆ. "ನಾನು ಮನದಲ್ಲಿ ಮಾಡಿದ್ದ ಯತ್ನವು ಇಂದಿಗೆ ನಿಷ್ಫಲವಾಯಿತು. ಇನ್ನು ನಂದವಂಶವಾರ್ತೆಯೆಂದರೇನು?" ಎಂದು ರಾಕ್ಷಸನು ಹಲುಬುವುದು ಬಹುಶಃ ವೃದ್ಧರಾಜನಿಗೆ ಸ್ವೀಕೃತಪುತ್ರನೊಬ್ಬನನ್ನು ತಂದು ನಂದವಂಶವನ್ನು ಪುನರುಜ್ಜೀವಿಸುವುದೆಂಬ ಅವನ ಪ್ರಯತ್ನ ವಿಫಲಗೊಂಡುದರ ಹತಾಶೆ ಕಾರಣವಾಗಿಯೇ ಇರಬಹುದು. ಕ್ಷೌಮಕನು ಹೇಳುವವರೆಗೆ ಅವನಿಗೆ ವೃದ್ಧ ರಾಜದಂಪತಿಗಳು ಅರಮನೆಯಿಂದ ನಿರ್ಗಮಿಸಿದ್ದಾಗಲಿ ತಪೋವನದಲ್ಲಿ ನಿರ್ಯಾಣ ಹೊಂದಿದುದಾಗಲಿ ತಿಳಿದೇ ಇರಲಿಲ್ಲ. ಎಂದರೆ ಘಟನೆಗಳು ಹೇಗೆ ಅವನ ಅರಿವಿಗೆ ಬಾರದಂತೆ ಕೈಮೀರಿ ಸಾಗುತ್ತವೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷ್ಯ ಬೇಕಾಗಿಲ್ಲ.

ವಾಸಕನು ಮತ್ತೊಬ್ಬ ಚಾರನ ಮೂಲಕ ಅಮಾತ್ಯನ ನೆಲೆ ತಿಳಿದು, ಅವನಿಗೆ ಪರ್ವತರಾಜನ ದಂಡಿನ ಸಮಾಚಾರ ನಿವೇದಿಸಲು ಬಂದಿದ್ದಾನೆ. ಕ್ಷಪಣಕನು ವಿಷಕನ್ಯೆಯೊಂದಿಗೆ ಚಂದ್ರಗುಪ್ತನ ಬಳಿಗೆ ಬಂದುದು ಮೊದಲುಗೊಂಡು ಅವಳ ಸಂಗದಿಂದ ಪರ್ವತರಾಜ ಸತ್ತು, ಅವನ ಮಗ ಪಲಾಯನ ಮಾಡಿದ ಸಂಗತಿಯ ವರೆಗೆ ಅವನು ತನಗೆ ತಿಳಿದುದನ್ನು ಹೇಳಿದನು. ಭಾರತಯುದ್ಧದಲ್ಲಿ ಘಟೋತ್ಕಚ ಸತ್ತ ಸಂದರ್ಭದೊಂದಿಗೆ ಪರ್ವತರಾಜನ ಸಾವನ್ನು ರಾಕ್ಷಸ ಹೋಲಿಸಿದ್ದು, ಅತ್ಯಂತ ಉಚಿತವಾದ ಹೋಲಿಕೆ. ಮತ್ತೆ ಅವನ ಹಠ ಬಲಿಯಿತು. ಪರ್ವತರಾಜನ ಮಗನನ್ನು ಆಶ್ರಯಿಸಿಯಾದರೂ ಚಂದ್ರಗುಪ್ತ ಚಾಣಕ್ಯರಿಗೆ ಗರ್ವಭಂಗ ಮಾಡಬೇಕೆಂದು ನಿಶ್ಚಯಿಸಿದನು ; ಲೋಕಾಂತರಸ್ಥ ಪ್ರಭುಗಳಿಗೆ ಇದರಿಂದ ತೃಪ್ತಿಯಾಗುವುದೆಂದು ಬಗೆದನು.

ಇತ್ತ ಅರಮನೆಯಲ್ಲಿ ವೃದ್ಧರಾಜದಂಪತಿಗಳು ಇಲ್ಲದಿರುವ ಸಂಗತಿ ಚಂದ್ರಗುಪ್ತನಿಗೆ ತಿಳಿದಾಗ, ಅವನು ದುಃಖಿತನಾದನು. ಅವನ ದುಃಖ ಸಹಜವಾದ್ದು. ಎಂದರೆ, ಚಾಣಕ್ಯ

ಅವನಿಗೆ ಹೇಳದೆ ಮಾಡುವ ಕುಟಿಲತಂತ್ರಗಳೂ ಇದ್ದವು ಎಂದಾಯಿತು. ಅವನು ಚಾಣಕ್ಯ ಮಾಡಿಸಿದ ಪ್ರಭುಪ್ರಶಂಸೆಯ ಮರ್ಮವನ್ನು ತಿಳಿಯದೆ ಹೋದನು. ವೃದ್ಧರಾಜ ದಂಪತಿಗಳ ಶೋಧನೆಗೆ ಆಜ್ಞೆ ಮಾಡಿದನು. ಅಷ್ಟರಲ್ಲಿ ಚಾಣಕ್ಯನಿಗೆ ಚೋರರ ಕಡೆಯಿಂದಲೂ ಚಂದ್ರಗುಪ್ತನಿಗೆ ಚಾರರ ಮೂಲಕವೂ ಅವರ ನಿಧನವಾರ್ತೆ ಖಚಿತವಾಯಿತು. ಚಾಣಕ್ಯ ಚಂದ್ರಗುಪ್ತನಿಗೆ ಸಮಾಧಾನ ಹೇಳಿ ಅವನಿಂದ ಅವರಿಗೆ ಪಿತೃಕಾರ್ಯ ಮಾಡಿಸಿದನು.

ಹೀಗೆಯೇ ಅಮಾತ್ಯ ರಾಕ್ಷಸನು ಪರ್ವತರಾಜನ ರಾಜಧಾನಿಯ ಉಪವನದಲ್ಲಿ ಬಂದು ಇಳಿದನೆಂಬ ವಿಚಾರ ಬಾಗುರಾಯಣನಿಗೆ ತಿಳಿಯಿತು. ಚಂದ್ರಗುಪ್ತನ ಮೇಲಿನ ಭೀತಿಯಿಂದಲೋ ದ್ವೇಷದಿಂದಲೋ ರಾಜಕಾರ್ಯಸಾಧನೆಗೆ ಮಲಯಕೇತುವನ್ನು ಆಶ್ರಯಿಸಲೆಂದು ಬಂದಿರಬೇಕು ಎಂದು ಸರಿಯಾಗಿಯೇ ಊಹಿಸಿದನು. ಚಾಣಕ್ಯನು ಹಿಂದೆಯೇ ಸಲಹೆ ಮಾಡಿದ್ದಂತೆ ಅವನನ್ನು ಏನಾದರೊಂದು ದೋಷಾರೋಪದ ಮೇಲೆ ಈಗಲೇ ಹೊರಡಿಸುವುದೋ ಇಲ್ಲವೆ ಸ್ವಲ್ಪ ಸಮಯದ ನಂತರ ಹಾಗೆ ಮಾಡುವುದೋ ಎಂಬುದನ್ನು ತನ್ನಲ್ಲಿಯೇ ವಿಮರ್ಶಿಸಿದನು. ಆಗಲೇ ಹೊರಡಿಸಿ ಬಿಟ್ಟರೆ ಅನ್ಯಸಹಾಯದೊಂದಿಗೆ ಆತ ಚಂದ್ರಗುಪ್ತನ ಮೇಲೆ ಸೇಡು ತೀರಿಸಬಹುದು. ಆದ್ದರಿಂದ ಸ್ವಲ್ಪ ಕಾಲದ ಬಳಿಕವೇ ಎಂದು ನಿಶ್ಚಯಿಸಿದನು. ಯಾರೂ ಕೇಳುವರಿಲ್ಲ ಎನ್ನುವಂತೆ ಅಮಾತ್ಯನು ಏಕಾಕಿಯಾಗಿ ಹೀಗೆ ಪರಾಶ್ರಯಕ್ಕೆ ಬಂದು, ಒಂದು ಸಾರ್ವಜನಿಕಸ್ಥಳದಲ್ಲಿ ಇಳಿದುಕೊಂಡುದು ದಿಟವಾಗಿ ಶೋಚನೀಯ. ಕಾರ್ಯದಕ್ಷ, ಸತ್ಯವಂತ, ದೂರದರ್ಶಿ, ಖ್ಯಾತಿವಂತ ಎಂದು ಮಲಯಕೇತುವೇ ಹೊಗಳುವವನ ಸ್ಥಿತಿ ಹೀಗಾಯಿತಲ್ಲ ಎನ್ನಿಸುವುದು.

ಈ ವಿಚಾರದಲ್ಲಿ ಮಲಯಕೇತು ಚಂದ್ರಗುಪ್ತನ ಮೇಲೆ ದ್ವೇಷಸಾಧನೆಗೆ ರಾಕ್ಷಸನನ್ನು ಸರ್ವಾಧಿಕಾರಿಯಾಗಿ ತನ್ನಲ್ಲಿರಿಸಿಕೊಳ್ಳಬೇಕು ಎಂದು ಯೋಚಿಸಿದನು. ಆದರೆ ಚಾಣಕ್ಯನ ಸಾಹಸದ ಎದುರಿನಲ್ಲಿ ಅವನು ನಿತ್ತರಿಸಿಯಾನೇ ಎಂಬ ಶಂಕೆಯೂ ಉಂಟು. ಚಂದ್ರಗುಪ್ತ ಚಾಣಕ್ಯರ ಸ್ವಭಾವಭಿನ್ನತೆಯಿಂದಾಗಿ ಅವರ ನಡುವೆ ವೈಮನಸ್ಯ ಹುಟ್ಟುತ್ತದೆ, ಆಗ ರಾಕ್ಷಸನಿಂದ ಅನುಕೂಲವುಂಟು ಎಂದು ಬಾಗುರಾಯಣ ದೊರೆಗೆ ಸಲಹೆ ಮಾಡಿದನು.

ಬಾಗುರಾಯಣ ಸಪರಿವಾರವಾಗಿ ಉಪವನಕ್ಕೆ ಬಂದು ರಾಕ್ಷಸನನ್ನು ಕಂಡನು. ರಾಕ್ಷಸ ಸಹಜವಾಗಿಯೇ ಅವನಿಂದ ಒಂದು ಮುಖ್ಯಪ್ರಶ್ನೆಗೆ ಉತ್ತರ ಬಯಸಿದನು ; ಮಲಯಕೇತುವಿನ ಆಶ್ರಯಕ್ಕೆ ಬಾಗುರಾಯಣನು ಬಂದುದೇಕೆ ಎಂಬುದೇ ಆ ಪ್ರಶ್ನೆ. ಬಾಗುರಾಯಣ ಆ ಪ್ರಶ್ನೆಯನ್ನು ನಿರೀಕ್ಷಿಸಿದ್ದನೆಂಬಂತೆ ಸುಳ್ಳುಕತೆ ಕಟ್ಟಿ ರಾಕ್ಷಸನನ್ನು ನಂಬಿಸಿದನು. ಸರಳಸ್ವಭಾವದ ಸಾತ್ವಿಕವ್ಯಕ್ತಿ ರಾಕ್ಷಸನು ಜನರನ್ನು ನಂಬಿ ನಂಬಿ ಕೆಟ್ಟವನು. ಇಲ್ಲಿಯೂ ಹೀಗೆಯೇ ಆಯಿತು.

ರಾಕ್ಷಸನು ಮಲಯಕೇತುವನ್ನು ಭೇಟಿಯಾಗಿ ಮೊದಲು ಅರಿಕೆ ಮಾಡಿದ್ದು, ತಾನು ಪಿತೃಕ್ಲೇಶದಿಂದ ನೊಂದ ರಾಜಕುಮಾರನಿಗೆ ಸಾಂತ್ವನ ಹೇಳಲು ಬಂದ ವಿಚಾರವನ್ನು ; ಬಳಿಕ ಅವನ ವಿನಯ ವಿಶ್ವಾಸಗಳನ್ನು ಗಮನಿಸಿದ ಮೇಲೆ, ಚಾಣಕ್ಯನ ಕಪಟದಿಂದ ಪರ್ವತರಾಜ ವಧೆಯಾದುದನ್ನೂ ಷರತ್ತಿನಂತೆ ಚಂದ್ರಗುಪ್ತನಿಂದ ಅರ್ಧರಾಜ್ಯ ಆತನಿಗೆ ಸಲ್ಲದಿರುವುದನ್ನೂ ಮನವರಿಕೆ ಮಾಡಿ ಅದಕ್ಕೆ ಪ್ರತೀಕಾರಕ್ಕೆ ಅವನು ಮನಸ್ಸು ಮಾಡಿದರೆ ತಾನು ಸಹಾಯವಾಗುವ ವಿಚಾರವನ್ನು. "ನಾನು ಭೋಗಾಸಕ್ತನಾಗಿ ರಾಜ್ಯವಂ ಸಾಧಿಸ

ಬೇಕೆಂದು ಬಂದವನಲ್ಲ" ಎಂದು ಅವನು ನಿಜವನ್ನೇ ನುಡಿದನು. ಹೀಗೆ ಸಖ್ಯ ಸಂಧಾನ ಫಲಿಸಿ, ಮಲಯಕೇತು ರಾಕ್ಷಸನಿಗೆ ಪರ್ವತರಾಜ್ಯದ ಸರ್ವಾಧಿಕಾರಿತ್ವವನ್ನು ವಹಿಸಿದನು. ಅವನು ಉಡುಗೊರೆಯಿತ್ತ ಆಭರಣಗಳನ್ನು ಸಂಕಲ್ಪಸಿದ್ಧಿಯವರೆಗೂ ಧರಿಸುವುದಿಲ್ಲ ಎಂದರೂ, ವೃದ್ಧಮಂತ್ರಿ ಉಲೂಕನ ಒತ್ತಾಯದಿಂದ ಧರಿಸಲು ಒಪ್ಪಿದನು. ಇದು ಮಾಡಿದ ಹಗರಣವನ್ನು ನಾವು ಮುಂದೆ ಗಮನಿಸುತ್ತೇವೆ. ರಾಕ್ಷಸ ನಿಷ್ಠೆಯಿಂದ ತನ್ನ ಪದವಿಗೆ ತಕ್ಕಂತೆ ಸಮರ್ಥವಾಗಿ ರಾಜಕಾರ್ಯ ನಿರ್ವಹಿಸಿ ಜನಾನುರಾಗಿಯಾದನು.

೧೩. ರಾಕ್ಷಸನು ಮಲಯಕೇತುವನ್ನು ಆಶ್ರಯಿಸಿ ಸರ್ವಾಧಿಕಾರಿತ್ವವನ್ನು ಪಡೆದನೆಂಬ ಸುದ್ದಿ ಸಮಿದ್ಧಕನೆಂಬ ಗೂಢಚಾರನಿಂದ ಚಾಣಕ್ಯನಿಗೆ ಶ್ರುತವಾಯಿತು. ಇದರಿಂದ ಆತನಿಗೆ ಹೇಗಾದರೂ ರಾಕ್ಷಸನನ್ನು ತಮ್ಮ ಕಡೆಗೆ ಮಾಡಿಕೊಳ್ಳಬೇಕೆಂಬ ಹಠ ಬಂದಿತು. ಕಾರ್ಯಸಾಧನೆಗೆ ಈ ವೇಳೆಗಾಗಲೇ ಅವನ ಪ್ರಚೋದನೆಯಂತೆ ಬಾಗುರಾಯಣ ಮಲಯ ಕೇತುವನ್ನು ಸೇರಿದ್ದನಷ್ಟೆ. ಈಗ ಭದ್ರಭಟಾದಿ ಸೇನಾನಿಗಳೂ ಹಾಗೆಯೇ ಮಾಡುವಂತೆ ಸಿದ್ಧಾರ್ಥಕನ ಮೂಲಕ ಅವರಿಗೆ ರಹಸ್ಯಸಂದೇಶ ಕಳಿಸಿದನು. ಇದು ಬಂದ್ರಳಿಕೆ ತಾನು ಸೇರಿದ ಮರವನ್ನು ಭೇದಿಸುವಂತೆ, ಮಲಯಕೇತುವಿನ ಕಾರ್ಯಾಚರಣೆಯನ್ನು ವಿಫಲ ಗೊಳಿಸಿ ಅವನನ್ನು ನಿಗ್ರಹಿಸುವ ತಂತ್ರವಲ್ಲದೆ ಬೇರೆಯಲ್ಲ. ಭದ್ರಭಟಾದಿಗಳು ಹಾಗೆಯೇ ಮಲಯಕೇತುವನ್ನು ಹೋಗಿ ಆಶ್ರಯಿಸಿದರು. ಸಕಾಲಕ್ಕೆ ಸಲಾಮಿಗೆ ಹೋಗಲಿಲ್ಲವೆಂದು ಚಂದ್ರಗುಪ್ತ ತಮ್ಮನ್ನು ಗಡೀಪಾರು ಮಾಡಿರುವುದಾಗಿ ಅವರು ಕಾರಣ ಹೇಳಿದರು. ಇದು ನಂದರ ವಧೆಯ ಬಳಿಕ ವ್ಯವಸ್ಥಿತವಾಗಿ ನಡೆದ ಸಂಚಿನ ಭಾಗ ; ಇದರ ವ್ಯವಸ್ಥಾಪಕ ಚಾಣಕ್ಯನೇ. ಈ ಸುಳ್ಳಿನ ಸರಪಣಿಯೇ ಆದ ಕಾರಣಗಳನ್ನು ಕತೆಗಾರ ನಾರಾಯಣ ಶರ್ಮ ಚೆನ್ನಾಗಿ ಸಂಯೋಜಿಸಿದ್ದಾನೆ. ಇವನ್ನು ಸಂಶಯಿಸದೆ ಮಲಯಕೇತು ನಂಬುವಂತೆ ಬಾಗು ರಾಯಣ ನೀಡಿದ ವಿವರಣೆಯೂ ದೇವಾಲಯದ ಕಾರ್ಯಕ್ಕೆಂದು ಚಂದ್ರಗುಪ್ತ ತಮ್ಮಿಂದ ಪಡೆದಿದ್ದ ಸಮ್ಮತಿಪತ್ರದ ಒಕ್ಕಣೆಗೆ ನೀಡಿದ ಸಮರ್ಥನೆಯೂ ಚಮತ್ಕಾರಿಕವಾದುದು ಎಂದರೂ, ಚಾರಿತ್ರಿಕವಾಗಿ ಗಂಭೀರವಾದುದು ಎನ್ನುವಂತಿಲ್ಲ, ಭದ್ರಭಟಾದಿಗಳು ಅರಿಕೆ ಮಾಡಿದ ಕಾರಣಗಳನ್ನು.

ರಾಕ್ಷಸನ ಗಮನಕ್ಕೆ ಚಾಣಕ್ಯನ ಈ ಕಪಟನಾಟಕದ ಯಾವುದೇ ದೃಶ್ಯಗಳ ಅರಿವಿರದೆ ಹೋದುದು ವಿಷಾದಕರ. ಆದರೂ ಅವನು ಪೂರ್ವಾಪರವಿಮರ್ಶೆ ಮಾಡಿ, ತಾನು ಉದ್ದೇಶಿಸಿದ ಚಂದ್ರಗುಪ್ತನ ಮೇಲಿನ ಕಾರ್ಯಾಚರಣೆಯು ಫಲಿಸಲು, ಭದ್ರಭಟಾದಿಗಳನ್ನು ಅನ್ಯತ್ರ ಹೋಗಗೊಡಿಸದೆ ಪರ್ವತರಾಜ್ಯದಲ್ಲಿಯೇ ಉಳಿಸಿಕೊಂಡನು. ಅವರ ವಿಷಯ ದಲ್ಲಿ ಅವನಿಗೆ ಸಂದೇಹವಿದ್ದಿತು. ಅವರಿಗೆ ಅವರ ಯೋಗ್ಯತೆಗೆ ತಕ್ಕುದಲ್ಲದ ಕಾರ್ಯಗಳನ್ನು ವಹಿಸಿಕೊಟ್ಟು ತನ್ನ ಮುತ್ಸದ್ದಿತನ ಪ್ರಕಟಿಸಿದನು. ಅವನ ಈ ವರ್ತನೆಗೆ ಮೆಚ್ಚಿದ ಚಾಣಕ್ಯ ಅವನನ್ನು ಹೇಗಾದರೂ ಸ್ವಪಕ್ಷಕ್ಕೆ ಸಂಗ್ರಹಿಸಲು ದೃಢಸಂಕಲ್ಪ ಮಾಡಿದನು. ಸಚಿವಾಯತ್ತ ರಾಜ್ಯನಾದ ಚಂದ್ರಗುಪ್ತನ ಅಭ್ಯುದಯಕ್ಕೆ ಅದು ಅತ್ಯಂತ ಅನಿವಾರ್ಯವೆನ್ನುವುದು ಅವನ ಗ್ರಹಿಕೆಯಾಗಿತ್ತು.

ಇಲ್ಲಿಗೆ ಕಥಾನಕದ ಪೂರ್ವಕಥೆ ಮುಗಿದು, ವಸ್ತುಸಾದೃಶ್ಯ ಮುದ್ರಾರಾ.ನಾಟಕ ದೊಂದಿಗೆ ಕಾಣುತ್ತದೆ. ಅಲ್ಲಿ ನಿಪುಣಕ, ಇಲ್ಲಿ ಮರಾಳಕ ಈ ದೂತರ ಮೂಲಕ

ಚಾಣಕ್ಯನಿಗೆ ರಾಕ್ಷಸನ ಮಿತ್ರರ ವಿಚಾರ ತಿಳಿದು ಬರುತ್ತದೆ ; ಎರಡೂ ಕಡೆ ಶೋಧನೆ ಚಿತ್ರಪಟದರ್ಶನ ವ್ಯಾಜಮೂಲಕವೇ. ಚಂದನದಾಸನ (ನಾಟಕದಲ್ಲಿ ಇವನು ರತ್ನಪಡಿ ವ್ಯಾಪಾರಿ ; ಕಾದಂಬರಿಯಲ್ಲಿ ಬಳೆಗಾರ ಸೆಟ್ಟಿ. ಅಮಾತ್ಯನ ಸ್ನೇಹ ಮೊದಲಾದುವುಗಳ ದೃಷ್ಟಿಯಿಂದ ನಾಟಕದಲ್ಲಿ ಉಕ್ತವಾದ ವೃತ್ತಿಯೇ ಗಂಭೀರವಾದುದು.) ಮನೆಯಲ್ಲಿ ರಾಕ್ಷಸನ ಕುಟುಂಬದ ಜನ ಇರುವ ವಿಚಾರ ಚಾಣಕ್ಯನಿಗೆ ಅರಿಕೆಯಾಗುತ್ತಲೇ ಕಥೆ ಚುರುಕಾಗುತ್ತದೆ. ರಾಕ್ಷಸಸಂಗ್ರಹಕಾರ್ಯ ತ್ವರಿತಗೊಳ್ಳುತ್ತದೆ. ರಾಕ್ಷಸನ ರಾಜನೀತಿ ಕಾರಣವಾಗಿ ಅವನ ಕುಟುಂಬದ ಜನ ಎಂತಹ ಕಷ್ಟಗಳ ಬಲೆಯಲ್ಲಿ ಸಿಕ್ಕಿ ಬೀಳುತ್ತಾರೆ ಎನ್ನುವುದರ ಕಥನ ನಾಟಕ ಮತ್ತು ಗದ್ಯ ಎರಡೂ ಮೂಲಗಳಲ್ಲಿ ಹೃದಯವಿದ್ರಾವಕವಾಗಿ ಕಥನಗೊಂಡಿದೆ.

ರಾಕ್ಷಸನ ಪತ್ನಿಯ ಕೈಯಲ್ಲಿ ತಾನು ಕಂಡ ಮುದ್ರೆಯುಂಗುರವನ್ನು ತರಿಸಿಕೊಂಡರೆ ಮುಂದೆ ಅದು ಕೆಲಸಕ್ಕೆ ಒದಗುವುದೆಂದು ಗೂಢಚಾರ ಮರಾಳನೇ ಚಾಣಕ್ಯನಿಗೆ ಸಲಹೆ ಮಾಡಿದನೆಂದು ಮುದ್ರಾಮಂ.ದಲ್ಲಿ ಹೇಳಿರುವುದು ಸಂವಿಧಾನದೃಷ್ಟಿಯಿಂದ ಶ್ಲಾಘ್ಯವಲ್ಲ. ಅದು ಚಾಣಕ್ಯನಿಗೇ ಹೊಳೆಯಿತೆಂದು ಕಲ್ಪಿಸಿದ್ದರೆ ಉಚಿತವಿತ್ತು. ನಾಟಕದಲ್ಲಿ ಹೀಗಿಲ್ಲ.

ನಾಟಕ ಮತ್ತು ಕಾದಂಬರಿ ಎರಡು ಮೂಲಗಳಲ್ಲಿಯೂ ಚಿತ್ರಪಟಪ್ರದರ್ಶನವನ್ನು ನಿಮಿತ್ತವಾಗಿ ಕುರಿತಿದ್ದರೂ, ಕಡೆದಿರುವ ಸನ್ನಿವೇಶಗಳು ಹೃದಯವಿದ್ರಾಯಕವಾಗಿಯೇ ಇದ್ದರೂ, ನಾರಾಯಣ ಶರ್ಮನು ವಿವರಗಳನ್ನು ಗದ್ಯದಲ್ಲಿ ಹೆಚ್ಚಾಗಿ ತುಂಬಿದ್ದಾನೆ.

ಚಾಣಕ್ಯನ ಗೂಢಚಾರನಾದ ನಿಪುಣಕನೆಂಬುವನು ರಾಕ್ಷಸನ ಮುದ್ರೆಯುಂಗುರವನ್ನು, ಚಂದನದಾಸನ ಮನೆಯಲ್ಲಿ ನಡೆದ ಒಂದು ಘಟನೆ ಕಾರಣವಾಗಿ ರಾಕ್ಷಸನ ಪತ್ನಿಯ ಕೈಯಿಂದ ಜಾರಿ ಹೊಸ್ತಿಲ ಮೇಲೆ ಬಿದ್ದುಹೋದುದನ್ನು ತಾನೇ ಸಂಗ್ರಹಿಸಿ ತಂದು ಚಾಣಕ್ಯನಿಗೆ ಒಪ್ಪಿಸಿದ ಹಾಗೆ ನಾಟಕದಲ್ಲಿದ್ದರೆ, ಮುದ್ರಾಮಂ.ದಲ್ಲಿ ಅದಕ್ಕಾಗಿ ಪ್ರತ್ಯೇಕವಾಗಿ ಸೂಲಗಿತ್ತಿಯ ಪ್ರಕರಣವನ್ನು ವಿಸ್ತಾರವಾಗಿ ಕಲ್ಪಿಸಿ ಅದನ್ನು ಸಂಗ್ರಹಿಸಿದ್ದಾಗಿ ನಿರೂಪಣೆಯಿದೆ. ಈ ಪ್ರಕರಣದಿಂದ ಕಥೆಗೆ ಹೆಚ್ಚು ಸ್ವಾಭಾವಿಕತೆ ಬಂದಿದೆ ; ಜೊತೆಗೆ ಕಥೆಯ ರಂಜನೆ ಬೆಳೆದಿದೆ.

ರಾಯಸದ ಶಕಟದಾಸ ಮತ್ತು ವರ್ತಕ ಚಂದನದಾಸ ಇವರು ರಾಕ್ಷಸನ ಆಪ್ತಮಿತ್ರರಾಗಿದ್ದವರು ; ಇವರು ಕ್ರಮವಾಗಿ ಲೋಕಾಯತ ಮತ್ತು ಬೌದ್ಧ ಮತಸ್ಥರಾಗಿದ್ದರೆಂಬ ಕಾರಣ ಬ್ರಾಹ್ಮಣನಾದ ರಾಕ್ಷಸನು ಅನ್ಯಮತಪಕ್ಷಪಾತಿಯಾಗಿದ್ದನೆಂದು ಕೆಲವರು ಭಾವಿಸುವುದುಂಟು. ಆದರೆ ಇದು ರಾಜಕಾರ್ಯದ ಏರ್ಪಾಡು, ಅಷ್ಟೆ.

ಮುಂದೆ ನಾಟಕದಲ್ಲಿ ವಿಸ್ತೃತಗೊಂಡಿರುವ ಚಂದ್ರಗುಪ್ತ-ಚಾಣಕ್ಯರ ಸಂವಾದವನ್ನು ನಾರಾಯಣ ಶರ್ಮನು ದಾಟಿ ನಡೆದು, ಶಕಟದಾಸನ ಪತ್ರಲೇಖನಭಾಗಕ್ಕೆ ನೇರವಾಗಿ ತಲುಪಿದ್ದಾನೆ. ಈ ಭಾಗ ಗೂಢಲೇಖ್ಯವಾಗಿ ಸ್ವಲ್ಪ ವಿವರವಾಗಿ ಬಂದಿದೆ. ಇಲ್ಲಿ, ಈ ಲೇಖನಕ್ಕೆ ಅನುಕೂಲಿಸುವಂತೆ ಇನ್ನೊಂದು ತಂತ್ರವನ್ನು ಚಾಣಕ್ಯನು ಹೂಡಿ, ಗತಿಸಿದ ಪರ್ವತರಾಜನ ಮೂರು ಆಭರಣಸಂಪುಟಗಳು ವರ್ತಕವೇಷದ ಬ್ರಾಹ್ಮಣರ ಮೂಲಕ ರಾಕ್ಷಸನ ಕೈಸೇರುವಂತೆ ಮಾಡಿದನೆಂಬುದು ಒಂದು ಜಟಿಲವಾದ ಕಾರ್ಯತಂತ್ರವೆನ್ನಬೇಕು.

ಒಂದು ನೆಪ ಹುಡುಕಿ ಶಕಟದಾಸನನ್ನು ಶೂಲಕ್ಕೇರಿಸುವಂತೆಯೂ ಚಂದನದಾಸನನ್ನು ಕರೆತರುವಂತೆಯೂ ಅವನಿಗೆ ಚಾರರಿಗೆ ಅಪ್ಪಣೆ ಮಾಡುತ್ತಾನೆ. ಈ ಆಭರಣಸಂಪುಟಗಳ ವಿಚಾರ ನಾಟಕದಲ್ಲಿ ಕ್ಷಪಣಕಾಪಮಾನದ ಎರಡನೆಯ ಅಂಕದಲ್ಲಿದೆ.

ಚಾಣಕ್ಯ-ಚಂದನದಾಸರ ಸಂವಾದ ಒಂದು ರಸಸ್ಥಾನ. ತ್ವರಿತಗತಿಯಲ್ಲಿ ಸಾಗುವ ಇಲ್ಲಿಯ ಸಂಭಾಷಣೆ ಚಾಣಕ್ಯನ ಯಾವ ಬೆದರಿಕೆಗೂ ಸಗ್ಗದ ಚಂದನದಾಸನ ನಿರ್ವ್ಯಾಜ ಮೈತ್ರಿ ಸ್ವಾರ್ಥತ್ಯಾಗಗಳನ್ನು ಹೆಜ್ಜೆಹೆಜ್ಜೆಗೆ ಎತ್ತಿ ಹಿಡಿಯುತ್ತದೆ. ಈ ಸಂವಾದದಲ್ಲಿ ಮುದ್ರಾಮಂ.ದ ಕರ್ತೃ ನಾಟಕದ ಮಾತುಗಳನ್ನೇ ಹತ್ತಿರದಿಂದ ಅನುವಾದಿಸುತ್ತ, ಸ್ವಪ್ರತಿಭೆಯಿಂದ ಇನ್ನೂ ಕೆಲಮಟ್ಟಿಗೆ ಕಳೆಯೇರಿಸುತ್ತ, ನಡೆದಿರುವುದು ಕಾಣುತ್ತದೆ. ಚಂದನದಾಸನ ಗುಣಶೀಲಗಳು ರಾಕ್ಷಸನ ಗುಣಶೀಲಗಳ ಮೇಲೆ ಪರೋಕ್ಷವಾಗಿ ಬೆಳಕು ಚೆಲ್ಲುತ್ತವೆ.

ಪೂರ್ವಯೋಜನೆಯ ಪ್ರಕಾರ, ಶೂಲಕ್ಕೆ ಏರಲಿದ್ದ ಶಕಟದಾಸನನ್ನು ಸಿದ್ಧಾರ್ಥಕನು ರೋಷಾವೇಶವನ್ನು ನಟಿಸಿ ಬಿಡಿಸಿ, ಪರ್ವತರಾಜ್ಯಕ್ಕೆ ಕರೆದೊಯ್ಯುತ್ತಾನೆ. ಚಾಣಕ್ಯನು ಬಾಗುರಾಯಣ ಭದ್ರಭಟಾದಿಗಳ ಪಲಾಯನದಲ್ಲಿ ತನ್ನ ಕೈವಾಡವೇನೂ ಇಲ್ಲವೆಂದು ಲೋಕಕ್ಕೆ ತಿಳಿಯಪಡಿಸುವ ಹಾಗೆ ಸಿದ್ಧಾರ್ಥಕ ಶಕಟದಾಸರನ್ನು ಹಿಡಿತರುವಂತೆ ಆಜ್ಞಾಪಿಸುತ್ತಾನೆ. ಈ ಸಂದರ್ಭದಲ್ಲಿ ಭಾಗಪುಚ್ಛ (ನಾಟಕದಲ್ಲಿ ಉದ್ದಾಲಕ) ಎಂಬ ಶಿಷ್ಯನಿಗೂ ಚಾಣಕ್ಯನಿಗೂ ನಡೆದ ಒಂದು ಸರಸಸಂವಾದ ಚಾಣಕ್ಯನ ಬುದ್ಧಿಶಕ್ತಿಯ ಜೊತೆಗೇ ಹಾಸ್ಯಪ್ರಿಯತೆಗೆ ಸಹ ಸಾಕ್ಷ್ಯವಾಗಿ ಕಂಡುಬರುತ್ತದೆ ; ಈ ಸಂವಾದ ಹೆಚ್ಚು ರೋಚಕವಾಗಿರುವುದು ಮುದ್ರಾಮಂ.ದಲ್ಲಿಯೇ.

೧೪. ಚಂದ್ರಗುಪ್ತನ ಅಭ್ಯುದಯದ ಶಕ್ತಿಕೇಂದ್ರಗಳಲ್ಲಿ ಚಾಣಕ್ಯನು ಗರ್ಭಗುಡಿಯ ಮೂರ್ತಿಯಾದರೆ, ಅವನ ಸಹಾಧ್ಯಾಯಿ ಇಂದುಶರ್ಮನು ಉತ್ಸವಮೂರ್ತಿ. ಅವನೇ ಜೀವಸಿದ್ಧಿ, ಕ್ಷಪಣಕ. ಲೋಕದ ಕಣ್ಣಿಗೆ ಅವನು ರಾಕ್ಷಸನ ಆಪ್ತಸಲಹೆಗಾರ, ಮಿತ್ರ ; ಆದರೆ ದಿಟವಾಗಿ ಅವನ ಪ್ರಯತ್ನಗಳನ್ನು ವಿಫಲಗೊಳಿಸುವ ಗೂಢಶತ್ರು. ಸಿದ್ಧಾರ್ಥಕಾದ್ಯರೆಲ್ಲ ಅವನ ಶಿಷ್ಯರು, ಆಜ್ಞಾನುವರ್ತಿಗಳಾದ ಬಂಟರು.

ಚಾಣಕ್ಯನು ಉದ್ದೇಶಪೂರ್ವಕವಾಗಿ ವಿಧಿಸಿದಂತೆ ಚಂದ್ರಗುಪ್ತ ತಾನೇ ರಾಜ್ಯಕಾರ್ಯ ನಿರ್ವಾಹ ನಡಸತೊಡಗಿದನು. ಇದಕ್ಕೆ ಏನೋ ಕಾರಣವಿರಬೇಕೆಂದು ಅವನೂ ಯೋಚಿಸಿದನು. ಆ ಕಾರಣವೂ ಸ್ಪಷ್ಟ. ಚಂದ್ರಗುಪ್ತನ ವರ್ಷವರ್ಧಂತಿ ಉತ್ಸವದ ಆಚರಣೆಗೆ ಪಟ್ಟಣ ಸಜ್ಜಾಗುವಂತೆ ಅಪ್ಪಣೆ ಮಾಡಿದ್ದು ಅವನ ಸ್ವಂತದ ನಿರ್ಧಾರ ; ಅದನ್ನು ತಾನು ತಡೆಯುವ ಮೂಲಕ ತಮ್ಮ ನಡುವೆ ಮನಸ್ತಾಪ ಉಂಟೆಂದು ಲೋಕಕ್ಕೆ ತಿಳಿಯಲೆನ್ನುವುದು ಚಾಣಕ್ಯನ ವಿಚಾರ. ಈ ಬಗ್ಗೆ ಶಿಷ್ಯ ಶಾರ್ಙ್ಗರವ ಪ್ರಶ್ನಿಸಲಾಗಿ, ತನ್ನ ದೂರದರ್ಶಿತ್ವದ ಕಾರ್ಯಾಚರಣೆಯನ್ನು ಅವನಿಗೆ ವಿಶದಪಡಿಸಿದನು. ಚಂದ್ರಗುಪ್ತನಲ್ಲಿ ಸಚಿವ ಪದವಿಯನ್ನು ಬೇಡಿ ರಾಕ್ಷಸನು ಬರೆದಂತೆ ಒಂದು ಸುಳ್ಳುಕಾಗದ ಸೃಷ್ಟಿಸಿ, ಸಿದ್ಧಾರ್ಥಕನ ಪ್ರಯತ್ನದಿಂದ ಅದು ಮಲಯಕೇತುವಿನ ಕೈಸೇರುವಂತೆ ಮಾಡಿದರೆ ಅವನಿಗೆ ರಾಕ್ಷಸನಲ್ಲಿ ತಿರಸ್ಕಾರ ಅವಿಶ್ವಾಸಗಳು ಹುಟ್ಟುವುವೆಂದು ಚಾಣಕ್ಯ ಮಾಡಿದ ತಂತ್ರದ ಭೂಮಿಕೆಯೇ ಸ್ವತಂತ್ರ ರಾಜ್ಯಕಾರ್ಯನಿರ್ವಾಹಕ್ಕೆ ಅವನು ಕೊಟ್ಟ ಆ ಅನುಮತಿ.

ಈ ಸಂದರ್ಭದಲ್ಲಿ ನಾಟಕದಲ್ಲಿಲ್ಲದ ಒಂದು ಸಂಗತಿ ನಮ್ಮ ಗಮನ ಸೆಳೆಯುತ್ತದೆ. ಪಾಟಲೀಪುರದ ಅರಸರೂ ಪಾರ್ವತೇಯರೂ ಬೌದ್ಧಮತ ಪಕ್ಷಪಾತಿಗಳೆಂದೂ ಅವರನ್ನು ನಿಗ್ರಹಿಸಿ ನಾಸ್ತಿಕಮತ ವರ್ಧಿಸುವುದನ್ನು ತಡೆಗಟ್ಟುವುದೇ ತನ್ನ ಸಂಕಲ್ಪವೆಂದೂ ಅದನ್ನು ತಾನು ಗುರುವಚನಮಾತ್ರಬದ್ಧನಾಗಿ ಕೈಕೊಂಡು ಲೋಕವ್ಯವಹಾರದಲ್ಲಿ ವರ್ತಿಸುತ್ತಿರುವುದಾಗಿಯೂ ಚಾಣಕ್ಯನು ಶಿಷ್ಯನಿಗೆ ವಿವರಿಸಿದ್ದೇ ಆ ಸಂಗತಿ. ಎಂದರೆ ಚಾಣಕ್ಯನಿಗೆ ಚಂದ್ರಗುಪ್ತನು ದೈವಾಯತ್ತವಾಗಿ ದೊರೆತ ಒಂದು ನಿಮಿತ್ತಸಾಧನವಷ್ಟೆ. ಅವನಿಗೆ ತನ್ನಿಂದ ರಾಜ್ಯಪ್ರಾಪ್ತಿಯಾಗಬೇಕೆನ್ನುವುದು ಗೌಣ, ನಾಸ್ತಿಕಮತನಿರಸನವೇ ತನಗೆ ಮುಖ್ಯ ಎಂದು ಇದರಿಂದ ಅಭಿಪ್ರಾಯವಾಗುವುದು. ಇಂದುಶರ್ಮ ಬೌದ್ಧಸಂನ್ಯಾಸಿಯ ವೇಷದಲ್ಲಿ ರಾಕ್ಷಸನಿಗೆ ಆಪ್ತನಾಗಿದ್ದುಕೊಂಡು ಕಾರ್ಯ ಸಾಧಿಸುತ್ತಿರುವುದು ಅನುಮಾನ ಹುಟ್ಟಿದಿರಲಿ ಎಂದೇ. ಬ್ರಾಹ್ಮಣನಾದ ಅಮಾತ್ಯನನ್ನು ಚಂದ್ರಗುಪ್ತನಿಗೆ ಪ್ರಧಾನನನ್ನಾಗಿ ಮಾಡಿದರೆ ನಾಸ್ತಿಕಪ್ರಾಬಲ್ಯ ತಗ್ಗುವುದೆನ್ನುವುದು ಚಾಣಕ್ಯನ ಎಣಿಕೆ. ಅದಕ್ಕೆ ಹಿಡಿದ ಮಾರ್ಗ ಕುಟಿಲವಾದದ್ದಾದರೂ ಪರಿಣಾಮದಲ್ಲಿ ಶ್ರೇಯಸ್ಕರವೆಂಬುದರಿಂದ ಉಪಾದೇಯವೆಂದೇ ಅವನ ಗ್ರಹಿಕೆ. ಈ ದೃಷ್ಟಿಭೇದದಿಂದ ಮುದ್ರಾಮಂ.ದ ಕಥೆಗೆ ಅಂತಹ ಪ್ರಯೋಜನ ಪ್ರಭಾವಗಳೇನೂ ಒದಗಿಲ್ಲ ; ಪ್ರತಿಯಾಗಿ, ರಾಜಕೀಯ ಸಂಘರ್ಷದ ಮೊನಚು ಮೊಂಡಾಗಿದೆ ಎಂದೇ ಹೇಳಬೇಕು.

ಮುಂದಿನ ಕಥಾಸಂವಿಧಾನದಲ್ಲಿ, ಪಾಟಲೀಪುರದಲ್ಲಿ ಚಂದ್ರಗುಪ್ತಪಟ್ಟಾಭಿಷೇಕ ವ್ಯಾಜದಿಂದ ವಿರೋಚನನನ್ನು ಮೆರವಣಿಗೆಯಲ್ಲಿ ಕೊಲ್ಲಿಸಿದುದು ಮೊದಲುಗೊಂಡು ಚಂದ್ರಗುಪ್ತನ ಸಂಹಾರಕ್ಕೆ ರಾಕ್ಷಸನು ಯೋಜಿಸಿದ್ದ ಎಲ್ಲ ಸಂಚುಗಳನ್ನೂ ಚಾಣಕ್ಯನು ಒಂದೊಂದಾಗಿ ಭಗ್ನಗೊಳಿಸಿದ ಪೂರ್ಣವೃತ್ತಾಂತದ ವರೆಗೆ ದಾತ್ಯೂಹಕನೆಂಬ (ನಾಟಕದಲ್ಲಿ ವಿರಾಧಗುಪ್ತ) ಹಾವಾಡಿಗನ ವೇಷದ ಗೂಢಚಾರನು ರಾಕ್ಷಸನಿಗೆ ಅರಿಕೆಮಾಡಿದ ವಿವರಗಳು ಕಾಣಿಸಿಕೊಂಡಿವೆ. ಇಲ್ಲಿಯೂ ಗೂಢಚಾರನ ಪ್ರವೇಶವೂ ಆತನು ಕೊಡುವ ವಿವರಗಳೂ ನಾಟಕದ ಕಥನಗತಿಗೆ ಹತ್ತಿರವಾಗಿಯೇ ಇವೆ. ರಾಕ್ಷಸನು ತನ್ನ ಪ್ರಯತ್ನಗಳೆಲ್ಲ ವಿಫಲಗೊಳ್ಳಲು ದೈವವಿಮುಖತೆಯೇ ಕಾರಣವೆಂದು ನಾಟಕಕರ್ತನು ತಿಳಿಯುವುದನ್ನು ಮುದ್ರಾಮಂ.ದ ಕರ್ತೃ ಇನ್ನೂ ಸ್ಫುಟಗೊಳಿಸಿ ಕಾದಂಬರಿಯ ಉದ್ದಕ್ಕೆ ಅದನ್ನು ಹಬ್ಬಿಸಿದ್ದಾನೆ.

ತನ್ನ ಪ್ರಯತ್ನಗಳು ವಿಫಲಗೊಳ್ಳಲು ಚಾಣಕ್ಯನ ಬುದ್ಧಿಚಾತುರ್ಯ ಕಾರಣವೆಂಬುದನ್ನು ಬಲ್ಲ ರಾಕ್ಷಸನು, ಶಕಟದಾಸ ಚಂದನದಾಸರಿಗೆ ಒದಗಿದ ವಿಪತ್ತುಗಳು ತಿಳಿದಾಗಲಂತೂ ತುಂಬ ಕುಸಿದು ಹೋಗುತ್ತಾನೆ. ಪುತ್ರನ ಚಾಪಲ್ಯದಿಂದ ತನ್ನ ಕುಟುಂಬದವರು ಚಂದನದಾಸನ ಮನೆಯಲ್ಲಿರುವ ವಿಚಾರ ಚಾಣಕ್ಯನಿಗೆ ತಿಳಿದುಹೋಗಿರಬೇಕು ಎಂದು ಅವನು ತನ್ನ ವಿಮರ್ಶಶಕ್ತಿಯಿಂದ ಸರಿಯಾಗಿಯೇ ಗುರುತಿಸುತ್ತಾನೆ.

ಚಂದ್ರಗುಪ್ತನ ಕಾರ್ಯಸಾಧನೆಗಾಗಿಯೇ ಮಲಯಕೇತುವನ್ನು ಬಂದು ಸೇರಲಿದ್ದ ಸಿದ್ಧಾರ್ಥಕನು ಕಪಟನಾಟಕವಾಡಿ ಶೂಲಕ್ಕೇರಲಿದ್ದ ಶಕಟದಾಸನನ್ನು ಬಿಡಿಸಿ ತಂದಂತೆ ಮಾಡಿ, ತನ್ನ ಸಾಹಸದಿಂದ ರಾಕ್ಷಸನನ್ನು ಮೆಚ್ಚಿಸಿದನು. ರಾಕ್ಷಸನಿಗೆ ಕಪಟಗಳೊಂದೂ ಅರ್ಥವಾಗುವುದಿಲ್ಲವಾದುದರಿಂದ ಅವನು ಸಿದ್ಧಾರ್ಥಕನನ್ನು ಸುಲಭವಾಗಿ ನಂಬಿ

ಬಿಟ್ಟನು. ಬರಲಿರುವ ವಿಪತ್ತನ್ನು ಮುಂಗಾಣದ ತನಗೆ ಮಲಯಕೇತುವಿಂದ ದತ್ತವಾಗಿದ್ದ ಆಭರಣಗಳನ್ನು ಅವನಿಗೆ ಮೆಚ್ಚಾಗಿ ನೀಡಿದನು. ರಾಕ್ಷಸನ ಗಮನ ಸೆಳೆಯಲು ಶಕಟದಾಸನಿಗೆ ತನ್ನಲ್ಲಿದ್ದ, ಚಾಣಕ್ಯನು ಕಾರ್ಯಾರ್ಥವಾಗಿ ಇಟ್ಟುಕೊಳ್ಳಲು ಹೇಳಿದ್ದ ರಾಕ್ಷಸನ ಮುದ್ರೆಯುಂಗುರದಿಂದಲೇ, ಆಭರಣಗಳನ್ನು ಒಂದು ಮಂಜೂಷದಲ್ಲಿರಿಸಿದ ಮೇಲೆ ಮೊಹರುಮಾಡುವ ಹಾಗೆ ಸಿದ್ಧಾರ್ಥಕನು ತಿಳಿಸಿದನು. ಸಹಜವಾಗಿ ಶಕಟದಾಸನೂ ಬಳಿಕ ರಾಕ್ಷಸನೂ ಆ ಮುದ್ರಾಲಾಭದ ವಿಷಯದಲ್ಲಿ ಕುತೂಹಲ ಪ್ರಕಟಿಸಿದಾಗ, ಒಂದು ಕತೆ ಕಟ್ಟಿ ಅವರನ್ನು ಮರುಳುಮಾಡಿದನು. ಆಪ್ತನಾದ ಶಕಟದಾಸನು ಅಮಾತ್ಯಕಾರ್ಯದಲ್ಲಿ ಅದನ್ನು ಬಳಸಲೆಂದು ರಾಕ್ಷಸನೇ ಅವನಲ್ಲಿಟ್ಟುಕೊಳ್ಳುವಂತೆ ಹೇಳಿದನು. ಶಕಟದಾಸನ ಮೂಲಕ ಸಿದ್ಧಾರ್ಥಕನು ಈಗ ರಾಕ್ಷಸನ ಆಶ್ರಯಕ್ಕೆ ಬಂದು, ಬೇರಿಗೆ ಬಿಸಿನೀರು ಹೊಯ್ಯಲು ಹೀಗೆ ಸಿದ್ಧವಾದನು. ಮುಂದೆ ಅವರ ಪರೋಕ್ಷದಲ್ಲಿ, ಹಾವಾಡಿಗನ ಮೂಲಕ ಚಂದ್ರಗುಪ್ತ ಚಾಣಕ್ಯರ ವೈಮನಸ್ಯವಿಚಾರ ಅವನ ತಿಳಿವಿಕೆಗೆ ಬಂದು, ಆ ವೈಮನಸ್ಯ ಹೆಚ್ಚುವಂತೆ ಮಾಡಲು ಸ್ತುತಿಪಾಠಕರಿಗೆ ಸಂದೇಶವನ್ನೂ ಕಳುಹಿಸಿದನು. ನಾಟಕದಲ್ಲಿ ವೈತಾಳಿಕ ಸ್ತನಕಲಶ ; ಗದ್ಯದಲ್ಲಿ ಕಳಶಕ ಮತ್ತು ವಿಜಯರೆಂಬ ಇಬ್ಬರು.

ಈ ಕಥಾಗತಿ ನಾಟಕದ ನಿರೂಪಣೆಗೆ ಅನುಸಾರವಾಗಿಯೇ ಇದೆಯಾದರೂ, ನಾರಾಯಣ ಶರ್ಮನು ಸಾಮಾನ್ಯ ಪಾತ್ರಗಳ ಹೆಸರುಗಳನ್ನು ಎಂದಿನಂತೆ ಇಲ್ಲಿಯೂ ಬೇರ್ಪಡಿಸಿದ್ದಾನೆ. ಕೌಮುದೀಮಹೋತ್ಸವ ಕಾರಣವಾಗಿ ಚಂದ್ರಗುಪ್ತ ಚಾಣಕ್ಯರಲ್ಲಿ ಮನಸ್ತಾಪ ಬೆಳೆಯಿತು ಎಂಬುದು ನಾರಾಯಣ ಶರ್ಮನ ಕಲ್ಪನೆ ; ನಾಟಕದಲ್ಲಿ ಮಲಯಕೇತುವಿಗೆ ತಪ್ಪಿಸಿಕೊಳ್ಳಲು ಅವಕಾಶ ಕೊಟ್ಟನೆಂದು ಚಂದ್ರಗುಪ್ತನು ಚಾಣಕ್ಯನ ಮೇಲೆ ಅಸಮಾಧಾನಪಟ್ಟನೆಂಬಂತೆ ಕಾರಣ ಹೇಳಿದೆ. ನಾಟಕದ ಎರಡನೆಯ ಅಂಕದ ಕೊನೆಗೆ ಬರುವ ವರ್ತಕವೇಷದ ವಿಪ್ರರು ಮಾರಾಟಕ್ಕೆ ತಂದ ಆಭರಣದ ಪೆಟ್ಟಿಗೆಗಳ ವಿಚಾರವನ್ನು ಮುದ್ರಾಮಂ.ದಲ್ಲಿ ೧೫ನೆಯ ಆಶ್ವಾಸದ ಆರಂಭಕ್ಕೆ ತಂದಿರುವುದು ಒಳ್ಳೆಯ ಸಂಯೋಜನೆಯೆನ್ನಬೇಕು.

೧೫. ದೈವವಿಲಾಸದಿಂದ ರಾಕ್ಷಸನ ಯುಕ್ತಾಯುಕ್ತಪರಿಜ್ಞಾನಕ್ಕೆ ಮಂಕುಕವಿದು, ಅವನು ವರ್ತಕವೇಷದ ಬ್ರಾಹ್ಮಣರು ಚಾಣಕ್ಯನಿಂದ ಪ್ರೇರಿತರಾಗಿ ಕ್ರಯಕ್ಕೆಂದು ತಂದ ಆಭರಣಗಳನ್ನು ಕ್ರಯಮಾಡಿ ಬೊಕ್ಕಸದಲ್ಲಿ ಕಟ್ಟಿರಿಸುವಂತೆ ಶಕಟದಾಸನಿಗೆ ಆಜ್ಞಾಪಿಸಿದನು. ಅವು ಪರ್ವತರಾಜನವು ಎಂದು ಅವನು ತಿಳಿಯದೆ ಹೋದುದು ಮುಂದಿನ ಆಪತ್ತಿಗೆ ಆಹ್ವಾನವಿತ್ತಂತಾಯಿತು. ಕರಭಕನೆಂಬ ಚಾರನಿಂದ ವಂದಿಗಳಿಗೆ ಸಂದೇಶವಿತ್ತು ಕಳುಹಿಸಿದ ಪ್ರಕಾರ ಚಂದ್ರಗುಪ್ತ ಚಾಣಕ್ಯರಿಗೆ ವಾಕ್ಕಲಹ ಕೈಗೂಡಿದ್ದರೆ, ಅವರ ಮನಸ್ತಾಪದ ವೇಳೆ ತಾನು ಮಲಯಕೇತುಸಮೇತನಾಗಿ ದಂಡೆತ್ತಿ ಹೋಗಲು ಅನುಕೂಲಸಮಯವೇ ಆಯಿತೆಂದು ವಿಚಾರ ಮಾಡುತ್ತಿದ್ದನು.

ಕೌಮುದೀಮಹೋತ್ಸವದ ಸಿದ್ಧತೆಗಳನ್ನು ಸ್ವತಃ ಪರಿಶೀಲಿಸಲೆಂದು ಚಂದ್ರಗುಪ್ತನು ಸುಗಾಂಗವೆಂಬ ಪ್ರಾಸಾದಮಾರ್ಗದಿಂದ ಹೊರಟು ನೋಡಲಾಗಿ, ಸಿದ್ಧತೆಗಳೇನೂ ಆಗಿಲ್ಲವೆಂದು ತೋರಿತು. ಚಾಣಕ್ಯರ ಅಪ್ಪಣೆಯಂತೆ ಸಿದ್ಧತೆಗಳು ನಿಂತುಹೋಗಿವೆಯೆಂದು ಅವಸರದವನು ವಿಜ್ಞಾಪಿಸಿದನು. ಚಂದ್ರಗುಪ್ತ ದುಡುಕಲಿಲ್ಲ. ಸಂದರ್ಭವೇನಿರಬಹು

ದೆಂದು ನೆಮ್ಮದಿಯಿಂದ ವಿಮರ್ಶಿಸಿ, ಮಲಯಕೇತು ಮತ್ತು ರಾಕ್ಷಸರನ್ನು ಸಾಧಿಸಲು ಆಚಾರ್ಯರಾದ ಚಾಣಕ್ಯರು ಉದ್ದೇಶಪೂರ್ವಕವಾಗಿ ಏನೋ ಒಂದು ಉಪಾಯವನ್ನು ಚಿಂತಿಸಿ ಹಾಗೆ ಉತ್ಸವಕ್ಕೆ ತಡೆಯೊಡ್ಡಿರಬೇಕೆಂದೂ ಲೋಕದ ಕಣ್ಣಿಗೆ ಮನಸ್ತಾಪದಂತೆ ಅದು ಕಾಣಬೇಕೆಂದು ಅವರು ತರ್ಕಿಸಿರಬಹುದೆಂದೂ ನಿರ್ಧರಿಸಿದನು. ಚಂದ್ರಗುಪ್ತನು ಸೂಕ್ಷ್ಮಮತಿಯೂ ಸಾವಧಾನಚಿತ್ತನೂ ಆಗಿ ಇರುವುದನ್ನು ಈ ಪ್ರಸಂಗ ಎತ್ತಿ ಹೇಳು ತ್ತದೆ. ವಿಶಾಖದತ್ತನು ಪ್ರಸ್ತಾವ ಮಾಡದ, ಇಂಗಿತಕ್ಕೆ ಕೂಡ ಅವಕಾಶವಿರದ, ಈ ಚಂದ್ರ ಗುಪ್ತನ ಚಿಂತನಲಹರಿಯನ್ನು ಮುದ್ರಾಮಂ.ದ ಕರ್ತೃ ಸ್ವತಃ ತಂದು ಚಾಣಕ್ಯ-ಚಂದ್ರ ಗುಪ್ತರ ಮನಸ್ಸುಗಳು ಒಂದೇ ಉದ್ದೇಶದ ಸಾಧನೆಯಲ್ಲಿ ಹೇಗೆ ಏಕೀಭವಿಸುತ್ತವೆ ಯೆಂಬುದನ್ನು ಮನವರಿಕೆ ಮಾಡಿದ್ದಾನೆ.

ಕುಮುದಕನೆಂಬ ಚಾರನ ಮೂಲಕ ಚಂದ್ರಗುಪ್ತನು ಚಾಣಕ್ಯನಿಗೆ ಕರೆ ಕಳುಹುತ್ತಾನೆ. ಸುಗಾಂಗಪ್ರಾಸಾದಕ್ಕೆ ಚಾಣಕ್ಯನು ಬಂದ ಮೇಲೆ, ಇಬ್ಬರೂ ಕೌಮುದೀಮಹೋತ್ಸವದ ಆಚರಣೆಗೆ ಒಡ್ಡಿದ ತಡೆ ಕಾರಣವಾಗಿ ವಾಗ್ವಾದಕ್ಕೆ ಇಳಿಯುತ್ತಾರೆ. ಈ ವಾಗ್ವಾದದ ಭಾಗ 'ಮುದ್ರಾರಾಕ್ಷಸ'ದ ನಿರೂಪಣೆಯ ಹಾದಿಯನ್ನು ಹಿಡಿದೇ ಸಾಗಿದರೂ ಅನುವಾದದಂತೆ ತೋರದೆ ಸ್ವತಂತ್ರವಾದ ಧೋರಣೆಯಲ್ಲಿ ಹರಿತವಾಗಿಯೂ ತ್ವರಿತವಾಗಿಯೂ ಸಾಗಿ, ಕನ್ನಡದ ಕಾದಂಬರಿಕಾರನ ನಾಟಕೀಯ ಪ್ರತಿಭೆಯನ್ನು ಸೊಗಸಾಗಿ ಬೆಳಗುತ್ತದೆ. ಈ ಸಂವಾದದ ನಡುವೆ ರಾಕ್ಷಸನಿಂದ ಪ್ರೇರಿತರಾಗಿ ವೈತಾಳಿಕರು ಚಂದ್ರಗುಪ್ತನ ಕೊಂಡಾಟದ ಮಾತುಗಳನ್ನು ಉಗ್ಗಡಿಸಿದುದರ ರಹಸ್ಯವನ್ನು ಚಾಣಕ್ಯನು ಸುಲಭವಾಗಿ ಗ್ರಹಿಸುತ್ತಾನೆ. ಅದಕ್ಕೆ ಮಾಡಬಹುದಾದ ಪ್ರತೀಕಾರವನ್ನೂ ತನ್ನಲ್ಲಿಯೇ ನಿಶ್ಚಯಿಸಿಕೊಳ್ಳುತ್ತಾನೆ.

ಮುಂದೆ ಭದ್ರಭಟಾದಿಗಳು ಪರ್ವತರಾಜ್ಯಕ್ಕೆ ನಿರ್ಗಮಿಸಿದ ಪ್ರಸಕ್ತಿಯನ್ನು ಚಾಣಕ್ಯನು ತಾನೇ ಚಂದ್ರಗುಪ್ತನ ಗಮನಕ್ಕೆ ತಂದನು. ಭದ್ರಭಟಾದಿಗಳ 'ಕೈಕಾಗದ'ವನ್ನು, ಚಾಣಕ್ಯನು ತನ್ನ 'ಸೊಂಟದಲ್ಲಿ ಸಿಕ್ಕಿಸಿದ್ದ'ನ್ನು, ಎತ್ತಿ ಚಂದ್ರಗುಪ್ತನಿಗೆ ಕೊಟ್ಟನೆಂಬ ಮಾತು ದೇಶೀಯ ವಾದ ಸೊಗಡನ್ನುಳ್ಳದ್ದು. ಭದ್ರಭಟಾದಿಗಳು ಪಾಟಲೀಪುರದಿಂದ ಏಕೆ ನಿರ್ಗಮಿಸಿದರೆನ್ನು ವುದು ಚಂದ್ರಗುಪ್ತನಿಗೆ ತಿಳಿದಿದ್ದು ಸಹ, ಪ್ರಕಟವಾಗಿ ಪ್ರಶ್ನಿಸುತ್ತಿರುವುದರ ಮರ್ಮ ಚಾಣಕ್ಯನಿಗೆ ಅರ್ಥವಾಯಿತು. ಅವರು ಶತ್ರುಪಕ್ಷದವರಿಗೆ ಸಂಶಯ ಬಾರದಿರಲು ಪರ ಸ್ಪರವಾಗಿ ವಾಕ್ಕಲಹವನ್ನು ಮುಂದುವರಿಸಿದರು. ಭದ್ರಭಟಾದಿ ಸೇನಾಪತಿಗಳು ತಾವೇ ಮಲಯಕೇತುವನ್ನು ಆಶ್ರಯಿಸಿದಾಗ, ಅವನಲ್ಲಿ ಅರಿಕೆಮಾಡಿಕೊಂಡಿದ್ದ ರಾಜ್ಯನಿರ್ಗ ಮನದ ಕಾರಣಗಳೇ ಬೇರೆ ; ಈಗ ಚಾಣಕ್ಯನು ಹೇಳುತ್ತಿರುವ ಕಾರಣಗಳೇ ಬೇರೆ. ಇವುಗಳು ತಾಳೆಯಾಗುವುದಿಲ್ಲ ಎನ್ನುವುದು ನಿಜವಾದರೂ, ಎರಡೂ ಸಮಯೋಚಿತವಾಗಿ ಕಟ್ಟಿ ಹೇಳಿದ ಸುಳ್ಳುಕತೆಗಳೇ ಆಗಿದ್ದು, ಎರಡೂ ಬೇರೆಬೇರೆ ಸ್ಥಳ ಸಂದರ್ಭಗಳಲ್ಲಿ ಆಡಿದುದಾದುದರಿಂದ ಗೊಂದಲಕ್ಕೇನೂ ಅವಕಾಶವಿಲ್ಲ. ಚಾಣಕ್ಯನು ಅರಿಕೆಮಾಡಿದ ಕಾರಣಗಳ ನಿರೂಪಣೆಯಲ್ಲಿ ನಾಟಕ ಮತ್ತು ಕಾದಂಬರಿಗಳ ನಡುವೆ ಹೋಲಿಕೆಗಳೂ ಇವೆ, ವ್ಯತ್ಯಾಸಗಳೂ ಇವೆ.

ಭದ್ರಭಟಾದಿಗಳು ಪಾಟಲೀಪುರದಿಂದ ನಿರ್ಗಮಿಸಲು ಅವಕಾಶ ಕೊಟ್ಟುದೇಕೆ, ಅವರ ಅಪರಾಧಗಳಿಗೆ ಅವರನ್ನು ಏಕೆ ನಿಗ್ರಹಿಸಲಿಲ್ಲ, ಸಕಲ ಅನರ್ಥಗಳಿಗೆ ಕಾರಣಭೂತನಾದ

ಮಲಯಕೇತುವನ್ನು ಪಾಟಲೀಪುರದಲ್ಲಿದ್ದಾಗಲೇ ಏಕೆ ಹಿಡಿಯಲಿಲ್ಲ, ರಾಕ್ಷಸನನ್ನು ಪಟ್ಟಣದಲ್ಲಿಯೇ ನಿಲ್ಲಿಸಿಕೊಳ್ಳದೆ ಹೊರಹೋಗುವುದಕ್ಕೆ ಅವಕಾಶವನ್ನು ಏಕೆ ಕೊಡಲಾಯಿತು ಹಾಗೂ ಅವನನ್ನು ಬಲಾತ್ಕರಿಸಿ ಹಿಡಿಯುವುದಕ್ಕೆ ಇದ್ದ ಅಡ್ಡಿಯೇನು ಇತ್ಯಾದಿಯಾಗಿ ಅನೇಕ ಪ್ರಶ್ನೆಗಳನ್ನು ಚಂದ್ರಗುಪ್ತನು ಚಾಣಕ್ಯನಿಗೆ ಹಾಕಿದನು. ಆ ಪ್ರಶ್ನೆಗಳೂ ಅವಕ್ಕೆ ಚಾಣಕ್ಯನು ನೀಡಿದ ಉತ್ತರಗಳೂ 'ಮುದ್ರಾರಾಕ್ಷಸ' ನಾಟಕದ ಧಾಟಿಗೆ ಅನುಗುಣವಾಗಿಯೇ ಸಾಗಿರುವಂಥವು. ಹಾಗೆಂದೇ ಸಂವಾದರೂಪದಲ್ಲಿಯೇ ಇವುಗಳ ಗತಿಯಿದೆ. ಈ ಪ್ರಶ್ನೆ ಉತ್ತರಗಳ ಪ್ರಯೋಜನವೇನು ? ಪರ್ವತರಾಜನ ವಧೆ, ಮಲಯಕೇತುವಿನ ಪಲಾಯನ, ಬಾಗುರಾಯಣ ಭದ್ರಭಟಾದಿಗಳಂತಹ ಸೇನಾನಿಗಳು ಪರಾಶ್ರಯವನ್ನು ಹೋಗಿ ಸೇರಿದ್ದು, ರಾಕ್ಷಸನನ್ನು ವಶಪಡಿಸಿಕೊಳ್ಳದೆ ಹೋದುದು ಮುಂತಾದ ಬಹು ಮುಖ್ಯವಾದ ರಾಜಕೀಯಘಟನೆಗಳಿಗೆ ಲೋಕಾಭಿಪ್ರಾಯ ಒಪ್ಪುವಂತಹ, ಚಂದ್ರಗುಪ್ತನಿಗೆ ಪರವಾಗಿರುವಂತಹ, ಸಮರ್ಥನೆಗಳನ್ನು ಒದಗಿಸುವುದು ಚಂದ್ರಗುಪ್ತ-ಚಾಣಕ್ಯರ ಬಾಧ್ಯತೆಯೂ ಆಗಿತ್ತು ಎನ್ನಬೇಕು. ಅಲ್ಲದೆ ಮಲಯಕೇತು ರಾಕ್ಷಸರಿಗೆ ಈ ಘಟನೆಗಳು ಪಿತೂರಿಯ ಭಾಗವೆಂಬ ಸಂಶಯ ಯಾವ ಕಾರಣಕ್ಕೇ ಆಗಲಿ ಬರಬಾರದೆನ್ನುವ ಎಚ್ಚರಿಕೆಯನ್ನೂ ಅವರು ವಹಿಸಬೇಕಾಗಿತ್ತು. ಅದರಿಂದಲೇ ಕೌಮುದೀಮಹೋತ್ಸವದ ಆಚರಣೆಯನ್ನು ನಿರೋಧಿಸುವುದು ನಿಮಿತ್ತವಾಗಿ ಬೆಳೆದ ಚಂದ್ರಗುಪ್ತ-ಚಾಣಕ್ಯರ ಕಪಟಕಲಹವು ಒಂದು ನಿಶ್ಚಿತವಾದ, ಪರಿಣಾಮಕಾರಿಯಾದ ಉದ್ದೇಶದಲ್ಲಿ ಸಾಫಲ್ಯವನ್ನು ಪಡೆಯಿತು ಎನ್ನಬೇಕು ; ಜೊತೆಗೆ ರಾಕ್ಷಸನ ಸಂಗ್ರಹದ ಬೀಸುಬಲೆ ಬಿಗಿಗೊಳ್ಳುವುದು ಸಹ ಮೊದಲಾಯಿತು.

ನಾರಾಯಣ ಶರ್ಮನು ಸ್ವಂತ ಕಲ್ಪನೆ, ಸ್ವೋಪಜ್ಞ ಕಥಾವಿಸ್ತರಣಗಳಲ್ಲಿ ಮೆರೆದ ಕೃತಿರಚನೆಯ ಪ್ರತಿಭೆ ಈಗ ವಿಶಾಖದತ್ತನ ನಾಟಕವನ್ನು ಸಮೀಪದಿಂದ ಅನುಸರಿಸುತ್ತ ಹೋಗಿ, ಅಲ್ಲಿಯ ಮಾತುಗಳನ್ನು ಅನುವಾದಿಸುತ್ತಲೇ ಖಚಿತವೂ ಸ್ವಾರಸ್ಯಕರವೂ ಆದ ರೀತಿಯಲ್ಲಿ ಕಥೆಯನ್ನು ತಕ್ಕ ಆವರಣದೊಂದಿಗೆ ಬೆಳಸಿರುವಲ್ಲಿ ಸಹ ಕೃತಕೃತ್ಯವಾಗಿದೆ ಎನ್ನಬೇಕು. ಹೀಗಿದ್ದೂ, ತನಗೆ ದೊರಕಿದ ಆ ಮೂಲವನ್ನು ಹೆಸರೆತ್ತಿ ಹೇಳಿ, ಏಕೆ ತನ್ನ ಪೂರ್ವಸೂರಿ ಋಣವನ್ನು ತೀರಿಸುವುದಿಲ್ಲ ಎನ್ನುವುದು ತಿಳಿಯದು.

೧೬. ಮಲಯತೇತು-ರಾಕ್ಷಸ ಸಂವಾದಕಥನವೆಂಬ ಮುದ್ರಾಮಂ.ದ ಪ್ರಕರಣ ಮುಖ್ಯ ವಿವರಗಳಲ್ಲಿ, ಕಥನಗತಿಯಲ್ಲಿ ನಾಟಕದ ಹಾದಿಯನ್ನು ಹಿಡಿದೇ, ಅಲ್ಲಿಯ ಮಾತುಗಳನ್ನು ಅನುವಾದಿಸುತ್ತಲೇ, ಸಾಗಿರುವುದು ಕಾಣುತ್ತದೆ. ಸಂವಿಧಾನರಚನೆಯ ದೃಷ್ಟಿಯಿಂದ, ಅದಕ್ಕಿಂತ ರಾಜನೀತಿಯ ಮಾತುಗಳಿಗೆ ತರ್ಕದಿಂದ ಒದಗುವ ಅರ್ಥಾಂತರಗಳ ದೃಷ್ಟಿಯಿಂದ, ಈ ಕಥಾಭಾಗ ತುಂಬ ಹೃದಯಂಗಮವಾದುದು. ನಾಟಕದಲ್ಲಿಲ್ಲದ ಈ ವಾಗ್ಮಿತೆಯ ಸೊಗಸು ಕನ್ನಡ ಕಾದಂಬರಿಕಾರನ ಬಹುದೊಡ್ಡ ಸಾಧನೆಯೆನ್ನಬೇಕು. ಎಲ್ಲೆಲ್ಲಿ ಸೊಗಸನ್ನು ಬೆಳಸಬಹುದೆಂಬುದನ್ನು ಆತನ ಕಣ್ಣು ಚೆನ್ನಾಗಿ ಕಾಣಬಲ್ಲುದಾಗಿದೆ.

ಮಲಯಕೇತುವನ್ನು ಆಶ್ರಯಿಸಿಯಾದರೂ ಚಂದ್ರಗುಪ್ತ ವಧೆ ಮತ್ತು ಚಾಣಕ್ಯ ಗರ್ವಭಂಗ ಇವನ್ನು ಸಾಧಿಸಬೇಕೆಂದು ರಾಕ್ಷಸನು ಅನನ್ಯಗತಿಕನಾಗಿ ಪರ್ವತರಾಜ್ಯವನ್ನು ಬಂದು ಸೇರಿದ್ದನು. ಈಗ ಚಂದ್ರಗುಪ್ತ-ಚಾಣಕ್ಯರಲ್ಲಿ ಉಂಟಾಯಿತೆಂದು ತಾನು ತಿಳಿದ

ವಾಗ್ವಾದದ ಪ್ರಯೋಜನವನ್ನು ಪಡೆದು ಪಾಟಲೀಪುತ್ರದ ಆಕ್ರಮಣವನ್ನು ಅವನು ಆಲೋಚಿಸಿದನು. ವೈತಾಳಿಕರ ಸ್ತುತಿಪದ್ಯಗಳ ಮರ್ಮವನ್ನು ಚಾಣಕ್ಯನು ಭೇದಿಸಿದನೆಂಬುದನ್ನು ಅವನು ಅರಿಯದಾದನು. ಚಂದ್ರಗುಪ್ತ-ಚಾಣಕ್ಯರ ಸೂಚೀಮುಖತೀಕ್ಷ್ಣತೆಯ ಬುದ್ಧಿಯ ಎದುರು ಅವನ ಪ್ರಯತ್ನಗಳೆಲ್ಲ ಭಗ್ನಗೊಳ್ಳುತ್ತ ನಡೆದುವು.

ಇನ್ನೇನು ಆಕ್ರಮಣ ನಡೆಯಬಹುದು ಎನ್ನುವಾಗ, ಚಾಣಕ್ಯ-ಚಂದ್ರಗುಪ್ತರ ಮನುಷ್ಯನಾದ ಬಾಗುರಾಯಣನು ಮಲಯಕೇತುವಿನ ತಿಳಿಮನಸ್ಸನ್ನು ಕೆಡಿಸಿ, ಅವನು ರಾಕ್ಷಸನನ್ನು ಸಂಶಯದೃಷ್ಟಿಯಿಂದ ನೋಡುವಂತೆ ಮಾಡಿದನು. ರಾಕ್ಷಸನಿಗೆ ನಂದವಂಶೋತ್ಪನ್ನನಾದ ಚಂದ್ರಗುಪ್ತನಲ್ಲಿ ಆದರಭಾವವುಂಟೆಂದೂ ಪಾಟಲೀಪುರದಲ್ಲಿದ್ದ ತನ್ನ ಗೃಹಜನವನ್ನು ರಕ್ಷಿಸಿಕೊಳ್ಳುವ ಅನಿವಾರ್ಯ ಅವನಿಗೆ ಉಂಟಾಗಿದೆಯೆಂದೂ ವಂಶಪಾರಂಪರ್ಯದ ಸಚಿವಪದವಿ ಸ್ಥಳಾಭಿಮಾನ ಮೊದಲಾದವುಗಳಿಂದಾಗಿ ಅವನು ಚಂದ್ರಗುಪ್ತನನ್ನೇ ಆಶ್ರಯಿಸುವ ಸಾಧ್ಯತೆಯುಂಟೆಂದೂ ಪರಿಪರಿಯಾಗಿ ಅವನು ಬೋಧಿಸತೊಡಗಿದನು. ನಾಟಕದಲ್ಲಿಯ ಈ ವಿವರಗಳನ್ನು ನಾರಾಯಣ ಶರ್ಮ ಇನ್ನಷ್ಟು ವಿಶದಪಡಿಸಿದ್ದಾನೆ.

ಮುಂದುವರಿದು, ಬಾಗುರಾಯಣನು ಭದ್ರಭಟಾದಿಗಳ ಮಾತುಗಳನ್ನೂ ಅದಕ್ಕೆ ತಕ್ಕಂತೆಯೇ ವ್ಯಾಖ್ಯಾನಿಸಿದನು. ಚಾಣಕ್ಯನ ಕಾರ್ಯತಂತ್ರವನ್ನು ರೂಪಿಸುವಲ್ಲಿ ಅವನು ಕ್ಷಪಣಕ ಸಿದ್ಧಾರ್ಥಕರಿಗಿಂತ ಗಟ್ಟಿಗನೆಂದೇ ಹೇಳಬೇಕು. ಅವನ ಕಾರ್ಯವ್ಯಾಪ್ತಿ ವಿಶಾಲವಾದುದು, ಸಾಮರ್ಥ್ಯ ಅಗಾಧವಾದುದು. ಇಂತಹ ಅನುಕೂಲಗೂಢಚರ್ಯೆಯ ಜನ ರಾಕ್ಷಸನಿಗೆ ಒಬ್ಬರೂ ಸಿಕ್ಕಲಿಲ್ಲ. ಅವನು ಏಕಾಕಿಯಾಗಿಯೇ ಪ್ರತಿಕೂಲಸನ್ನಿವೇಶಗಳಲ್ಲಿ ಹೋರಾಡಬೇಕಾಯಿತು ಎನ್ನುವುದು ದುರದೃಷ್ಟಕರ ಸಂಗತಿಯಾಗಿದೆ.

ಇನ್ನೂ ಒಂದು ವಿಶೇಷವೆಂದರೆ, ಸುಗಾಂಗಪ್ರಾಸಾದದಲ್ಲಿ ನಡೆದ ಚಂದ್ರಗುಪ್ತ-ಚಾಣಕ್ಯರ ಕಪಟಕಲಹದ ವಿದ್ಯಮಾನಗಳನ್ನೆಲ್ಲ, ಕೌಮುದೀಮಹೋತ್ಸವದ ಆಚರಣೆಗೆ ನಿಲುಗಡೆ, ವೈತಾಳಿಕರ ಪ್ರಭುಸ್ತುತಿ, ಚಂದ್ರಗುಪ್ತ ಮಾಡಿದ ರಾಕ್ಷಸನ ಗುಣಪ್ರಶಂಸೆ, ಚಾಣಕ್ಯನ ಅಧಿಕಾರಚ್ಯುತಿ ಮೊದಲಾದವನ್ನೆಲ್ಲ, ಬಾಗುರಾಯಣನು ತನಗೆ ಅನುಕೂಲವಾಗುವಂತೆ ವ್ಯಾಖ್ಯಾನಿಸಿ, ರಾಕ್ಷಸನಿಗೆ ಚಂದ್ರಗುಪ್ತನಲ್ಲಿ ಆದರಭಾವವುಂಟೆಂದು ಅರ್ಥವಾಗುವಂತೆ ಮಾಡಿದ ರಾಜಕೀಯಚಾತುರ್ಯದ ಅನನ್ಯತೆ. ರಾಕ್ಷಸನು ಯಾವ ಮಾತುಗಳನ್ನು ಚಂದ್ರಗುಪ್ತನ ವಿಷಯದಲ್ಲಿ ಆಗ್ರಹಬುದ್ಧಿಯಿಂದ ಆಡಿದನೋ ಅವಕ್ಕೆಲ್ಲ ಅನುಗ್ರಹದ ಅರ್ಥ ಹುಟ್ಟಿಕೊಳ್ಳುವಂತಾಯಿತು. ಶಕಟದಾಸನು ಆಡಿದ ಮಾತುಗಳ ವಿಷಯದಲ್ಲಿಯೂ ಹೀಗೆಯೇ ಆಯಿತು. ಇದರಿಂದ ರಾಕ್ಷಸನಿರಸನಕ್ಕೆ ಭೂಮಿಕೆಯನ್ನು ಬಾಗುರಾಯಣ ಸಜ್ಜುಮಾಡಿದನೆನ್ನಬೇಕು. ರಾಕ್ಷಸನಾದರೋ ಬಾಗುರಾಯಣ ಭದ್ರಭಟಾದಿಗಳೆಲ್ಲ ಚಂದ್ರಗುಪ್ತನಲ್ಲಿ ವಿಮುಖರಾಗಿಯೇ ಮಲಯಕೇತುವನ್ನು ಆಶ್ರಯಿಸಿದ್ದಾರೆ ಎಂಬ ಭ್ರಮೆಯಲ್ಲಿಯೇ ಇನ್ನೂ ಉಳಿದಿದ್ದನು.

ಮಲಯಕೇತು ಮರೆಯಿಂದ ಹೊರಬಿದ್ದು ರಾಕ್ಷಸನಿಗೆ ಕಾಣಿಸಿಕೊಂಡ ಮೇಲೆ, ಪಾಟಲೀಪುತ್ರದ ಆಕ್ರಮಣವನ್ನು ಕುರಿತು ಅವನೊಂದಿಗೆ ಚತುರ ಮುತ್ಸದ್ದಿಯಂತೆ ಚರ್ಚಿಸಿದನಲ್ಲದೆ, ತನ್ನ ಅಂತರಂಗದಲ್ಲಿ ಬಾಗುರಾಯಣನು ಬಿತ್ತಿದ ಸಂಶಯದ ಬೀಜ ಮೊಳೆಯಲು ಸ್ವಲ್ಪವೂ ಅವಕಾಶ ಕೊಡಲಿಲ್ಲ ಎನ್ನುವುದು ಅವನ ಪಾತ್ರದ ದೃಷ್ಟಿಯಿಂದ

ಗಮನಿಸಬಹುದಾಗಿದೆ. ಮಲಯಕೇತುವಿನ ಅನುಮತಿ, ರಾಕ್ಷಸನ ಅಪೇಕ್ಷೆ ಒಗ್ಗೂಡಿ ಪಾರ್ವತೇಯರ ಸೈನ್ಯ ಗೌಡದೇಶದ ಶೋಣಾನದೀ ತೀರದ ಕಡೆಗೆ ಲಗ್ಗೆಯೆತ್ತಿತು.

೧೭. ಪಾಟಲೀಪುರಕ್ಕೆ ಪಾರ್ವತೇಯರ ಮುತ್ತಿಗೆ ನಿಶ್ಚಿತವಾಯಿತು. ವಿಜಯಯಾತ್ರೆಗೆ ಮುಹೂರ್ತವನ್ನು ನಿಷ್ಕರ್ಷಿಸಲೆಂದು ರಾಕ್ಷಸನು ಜ್ಯೋತಿಷಜ್ಞರನ್ನು ಬರಮಾಡಬೇಕೆನ್ನು ವಾಗ ದುರ್ವಿಧಿ ಮತ್ತೆ ಅವನಿಗೆ ಕ್ಷಪಣಕನನ್ನೇ ತಗುಲಿಸಿತು. ಪರ್ವತರಾಜ್ಯದಲ್ಲಿ, ರಾಜಧಾನಿಯಾದ ಶಾಹುರೀನಗರದಲ್ಲಿ, "ಜ್ಯೋತಿಷಜ್ಞರು ಯಾರೂ ಹೊರಗೆ ಸಿದ್ಧವಾಗಿ ಇಲ್ಲ." ಎಂದು ಊಳಿಗದವನು ರಾಕ್ಷಸನಿಗೆ ಅರಿಕೆಮಾಡುವುದು ಒಂದು ವಿಚಿತ್ರ ಎನ್ನಬೇಕು. ಅರಮನೆಗೆ ಗೊತ್ತಾದ ಸೇವೆಯ ಜ್ಯೋತಿಷಜ್ಞರು ಹಲವರಿರಬೇಕಲ್ಲವೇ ? ಸಂವಿಧಾನದ ದೋಷವೆಂದು ಇದನ್ನು ತಿಳಿಯಲು, ಮುತ್ತಿಗೆ ನಿಶ್ಚಿತವಾದ ಮೇಲೆ, ವಿಜಯ ಯಾತ್ರೆ ತೀರ ಸಮೀಪವಾದಾಗ, ಮುಹೂರ್ತನಿಷ್ಕರ್ಷೆ ಎನ್ನುವುದೇ ಸಾಕ್ಷಿ. ಇರಲಿ. ರಾಕ್ಷಸನು ಕ್ಷಪಣಕನನ್ನು ಹಿಂದಿನ ಅನುಭವ ಸ್ಮರಿಸಿ ಸಂಶಯಿಸಿದಾಗ, ಅವನಿಗೆ ಕೋಪ ಬರುತ್ತದೆ. ಮತ್ತಾರನ್ನಾದರೂ ಕೇಳಿಕೊಳ್ಳಬಹುದೆಂದು ಅವನು ಹೇಳಿ ಹೊರಡಲಿದ್ದಾಗ, ಅವನನ್ನು ಸಮಾಧಾನಪಡಿಸಿದ್ದಾಗುತ್ತದೆ. ಈ ಸಂದರ್ಭದಲ್ಲಿ ಪಕ್ಷ ಯಾವುದೇ ಇರಲಿ, ಕ್ಷಪಣಕ ರಾಕ್ಷಸನನ್ನು ಕುರಿತು, "ಸ್ವ ಆಶ್ರಿತರಂ ಬಿಟ್ಟು ಅನ್ಯರನ್ನಪೇಕ್ಷಿಸುತ್ತ ದೈವ ಬಲಹೀನನಾದ ನಿನ್ನ ಮೇಲೆ ದೈವವೇ ಕೋಪವಂ ಮಾಡುತಲಿದೆ" ಎಂಬುದಾಗಿ ಹೇಳಿದ್ದು ನಿಜವೇ ಆಗಿದೆ.

ಈಗ ಬಾಗುರಾಯಣನೂ ಕ್ಷಪಣಕ ಸಿದ್ಧಾರ್ಥಕರೂ ತಮ್ಮ ಕಾರ್ಯಗಳಲ್ಲಿ ಮತ್ತೆ ಚುರುಕಾದರು. ಉಂಡಿಗೆ ವಿತರಿಸುವ ಕೆಲಸವನ್ನು ವಹಿಸಿಕೊಂಡು ಉಕ್ಕಡದಲ್ಲಿರುತ್ತಿದ್ದ ಬಾಗುರಾಯಣನಲ್ಲಿಗೆ ಪರವೂರಿಗೆ ಪ್ರಯಾಣಕ್ಕೆ ಉಂಡಿಗೆ ಬೇಡಲೆಂದು ಕ್ಷಪಣಕನು ಬಂದು ಕಾಣಿಸಿಕೊಂಡನು. ಈ ವೇಳೆಗೆ ಮಲಯಕೇತು ಪಾಟಲೀಪುರದ ಮುತ್ತಿಗೆಯ ವಿಷಯದಲ್ಲಿ ರಾಕ್ಷಸನ ಮನೋಗತವೇನೆಂಬುದನ್ನು ತಿಳಿಯುವ ಉದ್ದೇಶದಿಂದ ಬಾಗು ರಾಯಣನನ್ನು ಮತ್ತೆ ಕಾಣಬೇಕೆಂದಿರುವಾಗ, ಕ್ಷಪಣಕನೊಂದಿಗೆ ಅವನ ರಹಸ್ಯಸಂವಾದ ಸಾಗುತ್ತಿರುವುದು ತಿಳಿಯಿತು. ಅದರ ಮರ್ಮ ತಿಳಿಯಬೇಕೆಂದು ಚಾವಡಿಗೆ ಅಭಿಮುಖ ನಾದಾಗ, ಪಂಜರದ ಗಿಣಿಯ ದನಿ ಬಾಗುರಾಯಣನಿಗೆ ಮಲಯಕೇತುವಿನ ಆಗಮನವನ್ನು ಇಂಗಿತಗೊಳಿಸಿತು. ನಾಟಕದಲ್ಲಿ ಮಲಯಕೇತುವಿಗೆ ಮುಖ ಸ್ವಲ್ಪ ಕಾಣಿಸಿತೆಂದು ಮಾತ್ರ ವಿದೆ. ಆ ಅವಕಾಶವನ್ನು ಬಳಸಿಕೊಂಡು ಬಾಗುರಾಯಣನು ಮಲಯಕೇತುವಿಗೆ ರಾಕ್ಷಸ ನಲ್ಲಿ ಅಸಹನೆ ಹೆಚ್ಚುವಂತೆ ಕ್ಷಪಣಕನೊಂದಿಗೆ ಸಂವಾದದ ಧಾಟಿಯನ್ನೇ ಬದಲಿಸಿದನು; ಕ್ಷಪಣಕನು ಸಹ ಅದಕ್ಕೆ ಅನುಕೂಲಕರವಾಗಿ ಮಾತು ಬೆಳಸುತ್ತ, ವಿಷಕನ್ಯೆಯ ಮೂಲಕ ವಾಗಿ ಪರ್ವತರಾಜನನ್ನು ಕೊಲ್ಲಿಸಿದವನು ರಾಕ್ಷಸನೇ, ಚಾಣಕ್ಯನು ಸರ್ವಥಾ ಅಲ್ಲ ಎಂದೂ ರಾಕ್ಷಸನಿಗೆ ಚಂದ್ರಗುಪ್ತನಲ್ಲಿ ವಿಶ್ವಾಸವಿರುವುದರಿಂದ ಇನ್ನೂ ಘಾತುಕಕೃತ್ಯದಲ್ಲಿ ತೊಡಗಿರುವನೆಂದೂ ಹಾಗೆಂದೇ ತಾನು ಅವನ ಮಿತ್ರತ್ವವನ್ನು ತೊರೆದು ಉಂಡಿಗೆ ಪಡೆದು ದೇಶಾಂತರಕ್ಕೆ ತೆರಳಲಿರುವುದೆಂದೂ ಹೇಳುತ್ತ ಹೋದನು. ಮರೆಯಲ್ಲಿದ್ದ ಮಲಯಕೇತುವಿಗೆ ಸಹಜವಾಗಿಯೇ ಇದು ಕೋಪ ಬರಿಸಿತು. ಕೃತಾರ್ಥನಾದೆನೆಂದು ಕ್ಷಪಣಕ ಅಲ್ಲಿಂದ ನಿರ್ಗಮಿಸಿದನು. ನಿಜವಾಗಿ ಅವನು ಕೃತಾರ್ಥನೇ ಆಗಿದ್ದನು.

ಬಾಗುರಾಯಣ ಕ್ರುದ್ಧನಾದ ಮಲಯಕೇತುವಿನಿಂದ ರಾಕ್ಷಸನಿಗೆ ಕೇಡಾಗುವುದೇ ನಿಶ್ಚಯವೆಂದು ಅರಿತು, ಪರ್ವತರಾಜ್ಯದಿಂದ ಅವನ ನಿರಸನವಷ್ಟೇ ಗುರಿಯೆಂದು ಹೇಳಿದ್ದ ಚಾಣಕ್ಯನ ಮಾತುಗಳನ್ನು ನೆನೆದು, ಈಗ ರಾಕ್ಷಸನ ಪರವಾಗಿ ಅವನ ವರ್ತನೆಗಳನ್ನು ಚತುರತೆಯಿಂದ ಸಮರ್ಥಿಸತೊಡಗಿದನು ; ಪಾಟಲೀಪುತ್ರದ ಮುತ್ತಿಗೆಯ ಬಳಿಕ ಪುರಸ್ಕಾರವೋ ಪರಿತ್ಯಾಗವೋ ನಡೆಯಲಿ ಎಂದನು. ರಾಕ್ಷಸನು ವಿಪಕ್ಷಪ್ರತೀಕಾರವನ್ನಾಚರಿಸಲು ಮೊದಲು ಇದ್ದ ಸಂದರ್ಭಗಳನ್ನೂ ಬಳಿಕ ಅಸಹಾಯಕನಾಗಿ ಮಲಯಕೇತುವನ್ನು ಆಶ್ರಯಿಸಿ ಅವನಿಗೇ ನಂದರಾಜ್ಯವನ್ನು ದೊರಕಿಸಲಿರುವ ಆಮೇಲಿನ ಸಂಕಲ್ಪವನ್ನೂ ಮನಮುಟ್ಟುವಂತೆ ವಿವರಿಸಿದಾಗ ಮಲಯಕೇತು ಅದನ್ನು ನಂಬಿದನು. ಈ ಕಥಾಭಾಗಗಳನ್ನು ಓದುತ್ತಿದ್ದರೆ, ರಾಜಕೀಯದ ಕುಟಿಲಗಳೂ ಕಾರಸ್ಥಾನಗಳೂ ಎಷ್ಟು ಪೂರ್ವಾಪರ ವಿರೋಧಗಳನ್ನು ಸಮನ್ವಯಿಸಿಕೊಂಡು ತಮ್ಮ ಗುರಿಗಳನ್ನು ಮುಟ್ಟುತ್ತವೆ ಎಂಬುದರ ಅರಿವಾಗುತ್ತದೆ.

ಈಗ ಸಿದ್ಧಾರ್ಥಕನ ಸರದಿ. ಅವನ ಕಾರ್ಯಭಾರ. ರಾತ್ರಿಯ ವೇಳೆ ಉಕ್ಕಡದ ಬಳಿಯಲ್ಲಿ ಹೆದರಿದವನಂತೆ ಓಡಾಡುತ್ತ ಕಾವಲುಗಾರನ ಕೈಯಲ್ಲಿ ಉಂಡಿಗೆಯಿಲ್ಲದೆ ಸಿಕ್ಕಿಬಿದ್ದ ಅವನನ್ನು ಬಾಗುರಾಯಣನಲ್ಲಿಗೆ ಕರೆತರಲಾಗುತ್ತದೆ. ಬಾಗುರಾಯಣನು ಅವನನ್ನು ಗುರುತಿಸಿದ ಕೂಡಲೇ, ರಾಕ್ಷಸನ ಉಚ್ಚಾಟನೆಗೆ ಸಮಯ ಸನ್ನಿಹಿತವಾಯಿತೆಂದೇ ತಿಳಿಯುತ್ತಾನೆ. ಅಮಾತ್ಯ ರಾಕ್ಷಸನ ಸೇವಕನೆಂದು ತನ್ನನ್ನು ಕರೆದುಕೊಂಡ ಸಿದ್ಧಾರ್ಥಕನನ್ನು ಪ್ರಶ್ನಿಸುತ್ತಿದ್ದಾಗ, ಅವನ ಬಳಿಯಲ್ಲಿದ್ದ ರಾಕ್ಷಸನ ಮೊಹರಿದ್ದ ಒಂದು ಕಾಗದ ಪತ್ತೆಯಾಯಿತು. ಅದನ್ನಾದರೂ ಆತ ಕಾಣುವಂತೆಯೇ ಇರಿಸಿಕೊಂಡಿದ್ದನು. ಮಲಯಕೇತು ಅದರ ಒಕ್ಕಣೆಯನ್ನು ತಿಳಿಯಲಪೇಕ್ಷಿಸಿದಾಗ, ಬಾಗುರಾಯಣ ಮುದ್ರೆಯೊಡೆಯದೆ ಅದನ್ನು ಬಿಚ್ಚಿ ಓದಿ ಹೇಳಿದನು.

ಸಿದ್ಧಾರ್ಥಕ ತಂದಿದ್ದ ಕಾಗದ ಕುತ್ತಿಗೆಗೊಯ್ಯುತನದ ಒಂದು ಭಯಂಕರ ಕಪಟಲೇಖ; ಚಾಣಕ್ಯ ಸೃಷ್ಟಿಸಿದ ಕಪಟಲೇಖಗಳಲ್ಲಿ ಇದೇ ನಾಯಕಲೇಖ. ಇದರಲ್ಲಿ ಚಂದ್ರಗುಪ್ತ-ಚಾಣಕ್ಯರ ವಾಕ್ಕಲಹದಲ್ಲಿ ಪ್ರಾಸಂಗಿಕವಾಗಿ ಕೇಳಿ ಬಂದ ರಾಕ್ಷಸನ ಗುಣಪ್ರಶಂಸೆ, ರಾಕ್ಷಸನು ವರ್ತಕವೇಷದ ವಿಪ್ರರಿಂದ ವಿಕ್ರಯಮಾಡಿದ ಆಭರಣದ ಪೆಟ್ಟಿಗೆಗಳು, ಶಕಟದಾಸನ ಬಂಧಮುಕ್ತಿಗೆ ಸಹಕರಿಸಿದ್ದಕ್ಕೆ ಪಾರಿತೋಷಿಕವಾಗಿ ರಾಕ್ಷಸನು ಸಿದ್ಧಾರ್ಥಕನಿಗೆ ನೀಡಿದ ಆಭರಣಗಳ ಥೈಲಿ ಇವನ್ನೆಲ್ಲ ಸಾಕ್ಷ್ಯಗಳನ್ನಾಗಿ ಮಾಡಿಕೊಂಡು ರಾಕ್ಷಸನೇ ಸ್ವತಃ ಚಂದ್ರಗುಪ್ತನಲ್ಲಿ ತನ್ನ ವಿಶ್ವಾಸವನ್ನು ಪ್ರಕಟಿಸಿದಂತೆ ಒಕ್ಕಣೆಯಿದ್ದಿತು. ಸಿದ್ಧಾರ್ಥಕನು ಪತ್ರದೊಂದಿಗೆ ಒಯ್ಯುತ್ತಿದ್ದ ಆಭರಣದ ಪೆಟ್ಟಿಗೆಯೂ ಅವನಿಗೆ ಕಶಾಪ್ರಹಾರ ಮಾಡಿದ್ದರಿಂದಾಗಿ ಪತ್ತೆಯಾಯಿತು ; ಅದಕ್ಕೆ ಸಹ ರಾಕ್ಷಸನ ಮೊಹರಿತ್ತು. ಅಲ್ಲದೆ ರಾಕ್ಷಸನು ಬಾಯಿಮಾತಿನಲ್ಲಿ ಹೇಳಿ ಕಳುಹಿಸಿದ್ದೆಂದು ಮಲಯಕೇತು-ರಾಕ್ಷಸರಿಗೆ ಆಪ್ತರಾಗಿದ್ದ, ಐವರು ದೇಶಾಧಿಪತಿಗಳು ಅಂತರಂಗದಲ್ಲಿ ಚಂದ್ರಗುಪ್ತನಿಗೆ ಆಪ್ತರಾಗಿದ್ದರೆಂಬ ಕಲ್ಪಿತವಿಚಾರಪತ್ರದ ಸತ್ಯಾಸತ್ಯತೆಯನ್ನು ಮಲಯಕೇತು ಸ್ವಲ್ಪವೂ ವಿಚಾರಿಸದೆ, ರಾಕ್ಷಸನನ್ನು ದ್ರೋಹಿಯೆಂಬುದಾಗಿಯೇ ತಿಳಿದನು.

ರಾಕ್ಷಸ ಮುದ್ರಿಕಾಗ್ರಹಣದ ಕಥಾಭಾಗದಲ್ಲಿಯೇ ಈ ಸಂಚಿನ ಏರ್ಪಾಡುಗಳು

ಉಲ್ಲೇಖವಾಗಿದ್ದು, ಅವುಗಳ ಬೆಳೆವಣಿಗೆ ಗುಪ್ತಗಾಮಿಯಾಗಿದ್ದು ಈಗ ಫಲ ಕೊಟ್ಟಿವೆ
ಯೆನ್ನಬೇಕು. ಹಿಂದಿನ ಅಧ್ಯಾಯದಲ್ಲಿ ಬಾಗುರಾಯಣ ಸ್ವಗತದಲ್ಲಿ ಹೇಳಿದ "ನಮ್ಮ
ಯಜಮಾನರಾದ ಚಾಣಕ್ಯರ ನೀತಿಪ್ರಯೋಗವು ಅಕಾಲಮೇಘದಂತೆ, ವಿಚಿತ್ರವಾದ
ದೈವವಿಲಾಸದಂತೆ, ಒಂದು ವೇಳೆ ಮಹಾಫಲವಂ ತೋರುತ್ತ ಹಾಗೆ ಕಾಣಿಸಿಕೊಳ್ಳದೆ
ಕೃಶವಾಗುತ, ಪುನಃ ತೋರಿ ಅಡುಗುತ, ಮೂಲವಂ ಕಾಣಿಸಿಕೊಳ್ಳದೆ ಅಶಕ್ಯವಾಗಿ ಇದೆ."
ಎಂಬ ಮಾತು ಯಥಾರ್ಥವೇ ಸರಿ. ಹಾಗೆಯೇ "ಪೂರ್ವೋತ್ತರ ವಿರೋಧವಿಲ್ಲದಂತೆ
ಗ್ರಂಥದಲ್ಲಿ ಸಂವಿಧಾನವಂ ರಚಿಸಿ ಹೇಳುವ ಕವಿ"ಯಾಗಿ (ಪು. ೨೪೨) ನಾರಾಯಣ
ಶರ್ಮನ ಸಂವಿಧಾನಕೌಶಲವೂ ಸ್ತುತ್ಯವೇ ಆಗಿದೆ.

ಈಗ ಮಲಯಕೇತು ರಾಕ್ಷಸನಿಗೆ ಹಂಸಕನೆಂಬ ಕಂಚುಕಿಯ ಮೂಲಕ ಕರೆ ಕಳುಹಿಸಿ
ದನು. ಅಷ್ಟರಲ್ಲಿ ಅತ್ತ ರಾಕ್ಷಸನು ಪಾಟಲೀಪುರಕ್ಕೆ ವಿಜಯಯಾತ್ರೆ ಹೊರಡಿಸಲು
ವಿವರಗಳನ್ನು ದೂತರಿಗೆ ತಿಳಿಸುತ್ತಿದ್ದನು. ಕಂಚುಕಿಯ ಮೂಲಕ ಆ ವಿವರಗಳು ಮಲಯ
ಕೇತುವಿಗೆ ತಿಳಿದು ಬಂದಾಗ, ಅವನು ಆ ವಿವರಗಳನ್ನು ತನಗೆ ಪ್ರತಿಕೂಲವಾದವೆಂದೇ
ಭಾವಿಸಿಕೊಂಡು, ಅವಕ್ಕೆಲ್ಲ ಬೇರೆಯವೇ ಆದ ಅರ್ಥಗಳನ್ನು ಕಲ್ಪಿಸಿಕೊಂಡು, ಇನ್ನಷ್ಟು
ಕ್ರುದ್ಧನಾದನು. ಈಗ ರಾಕ್ಷಸನನ್ನು ಬರಮಾಡಲು ಬಾಗುರಾಯಣನಿಂದ ಆಜ್ಞಪ್ತನಾಗಿ
ದಾತ್ಯೂಹಕನೆಂಬ ಕಂಚುಕಿ ರಾಕ್ಷಸನಲ್ಲಿಗೆ ತೆರಳಿದನು. ಕಂಚುಕಿಯ ಅವಿನಯದ ವರ್ತನೆ
ಯಿಂದಲೇ ರಾಕ್ಷಸನು ತನ್ನ ವಿಷಯಕ್ಕೆ ಮಲಯಕೇತು ತಪ್ಪು ತಿಳಿದಿರಬೇಕು ಎಂದು ಸರಿ
ಯಾಗಿಯೇ ಊಹಿಸಿದನು. ಚಿಕ್ಕ ವಯಸ್ಸಿನ ದೊರೆಮಗ ವಂಚಕರ ಜಾಲದ ಮಾತು ಕೇಳಿ
ಅಪಾರ್ಥಕಲ್ಪನೆಗೆ ಎಡೆ ಮಾಡಿರಬೇಕೆಂಬ ಅವನ ತರ್ಕ ಸರಿಯಾಗಿತ್ತು.

ರಾಕ್ಷಸನು ರಾಜಾಸ್ಥಾನಕ್ಕೆ ಹೋಗುವಾಗ, ಮೊದಲು ತನಗೆ ಮಲಯಕೇತು ನೀಡಿದ್ದ
ಭೂಷಣಗಳನ್ನು ಸಿದ್ಧಾರ್ಥಕನಿಗೆ ಮೆಚ್ಚಾಗಿ ಕೊಟ್ಟಿದ್ದ ಕಾರಣ, ವರ್ತಕರಿಂದ ಕೊಂಡಿದ್ದ
ವನ್ನು ಧರಿಸಿ ಹೋಗುವುದು ಅನಿವಾರ್ಯವಾಯಿತು. ಅವು ಗತಿಸಿದ ಪರ್ವತರಾಜನ
ಆಭೂಷಣಗಳೆಂಬುದೂ ಅವು ಚಾಣಕ್ಯನ ವಂಚನೆಯಿಂದ ತನ್ನ ಕೈಸೇರಿದ್ದವೆಂಬುದೂ
ಅವನಿಗೆ ತಿಳಿದೇ ಇರಲಿಲ್ಲ. ಅಲ್ಲದೆ ರಾಕ್ಷಸನ ಮೇಲೆ ಅಗಾಧವಾಗಿ ಅಪವಾದ ಹೊರಿಸಿದ್ದ
ಸಿದ್ಧಾರ್ಥಕನನ್ನು ಬಾಗುರಾಯಣನು ರಾಜಕುಮಾರನ ಅಪ್ಪಣೆಮೇರೆಗೆ ಬೇಕೆಂದೇ ಹೊರಗೆ
ಕಳಿಸಿದ್ದುದರಿಂದ (ನಾಟಕದಲ್ಲಿ, ಆಸ್ಥಾನದಲ್ಲಿಯೇ ದೂರದಲ್ಲಿ ಒಂದು ಕಡೆ ಅವನಿದ್ದು
ದಾಗಿ ಹೇಳಿದೆ), ರಾಕ್ಷಸನಿಗೆ ಇವೆಲ್ಲ ಚಾಣಕ್ಯನು ತನ್ನ ಶಿಷ್ಯರಿಗೆ ಕೊಟ್ಟ ಶಿಕ್ಷಣದ ಫಲ
ಎನ್ನುವುದನ್ನು ತಿಳಿಯುವುದಕ್ಕೂ ಆಗಲಿಲ್ಲ.

ತಪ್ಪುಗ್ರಹಿಕೆಯ ಮಲಯಕೇತುವಿಗೂ ತಪ್ಪಿತಸ್ಥನಲ್ಲದ ರಾಕ್ಷಸನಿಗೂ ಸಂವಾದ ಬೆಳೆ
ಯಿತು. ಈಗಾಗಲೇ ರಾಕ್ಷಸನ ಯುದ್ಧಸನ್ನಾಹವನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದ
ಮಲಯಕೇತು ರಾಕ್ಷಸನಿಂದಲೇ ಮತ್ತೊಮ್ಮೆ ಅದನ್ನು ಕೇಳಿದ ಮೇಲೆ, ಅವನು ತನ್ನನ್ನು
ಚಂದ್ರಗುಪ್ತನಿಗೆ ಕೈಸೆರೆಮಾಡಲಿರುವವನೆಂದೇ ಬಗೆದನು. ಸಿದ್ಧಾರ್ಥಕನಲ್ಲಿ ದೊರೆತ
ರಾಕ್ಷಸನ ಮೊಹರಿದ್ದ ಪತ್ರದ ವಿಚಾರವನ್ನು ರಾಕ್ಷಸನಲ್ಲಿ ಪ್ರಶ್ನಿಸಲಾಗಿ, ಅವನಿಂದಲೇ
ದೊರೆತ ಆಭರಣದ ಪೆಟ್ಟಿಗೆಯನ್ನೂ ಮುಂದಿರಿಸಿ ಅದನ್ನು ಯಾರದೆಂದು ಕೇಳಲಾಗಿ,
ಚಾಣಕ್ಯನು ತನ್ನನ್ನು ಕಪಟಲೇಖದ ಮೂಲಕ ವಂಚಿಸಿರುವುದು ರಾಕ್ಷಸನ ಮನಸ್ಸಿಗೆ

ತಟ್ಟಿತು. ಅವನು ಕೊಟ್ಟ ಯಾವುದೇ ಸಮರ್ಥನೆಯನ್ನು ಮಲಯಕೇತು ಒಪ್ಪುವ ಸ್ಥಿತಿಯಲ್ಲಿರಲಿಲ್ಲ. ಚಾಣಕ್ಯನ ತಂತ್ರದಿಂದ ರಾಯಸದ ಶಕಟದಾಸನೇ ಪತ್ರದ ಲೇಖಕನೆಂದು ತಿಳಿಯುವಂತೆ ಆಯಿತು. ಶಕಟದಾಸನು ಚಾಣಕ್ಯ ಸಿದ್ಧಾರ್ಥಕರ ವಂಚನೆಗೆ ಸಿಕ್ಕಿ ಕಾಗದ ಬರೆದು ಕೊಟ್ಟಿರಬಹುದು ಎಂಬುದಾಗಿ ಅವನಿಗೆ ಹೊಳೆಯಿತು.

ಇಲ್ಲಿ ವಿಚಾರಾರ್ಹವಾದ ಸಂಗತಿಯೊಂದಿದೆ : ಸಿದ್ಧಾರ್ಥಕನಿಂದ ದೊರೆತ ಕಪಟ ಲೇಖದ ಒಕ್ಕಣೆಯ ಕೈಬರಹ ರಾಯಸದ ಶಕಟದಾಸನದೆಂದೇ ಎಲ್ಲರೂ ತಿಳಿದಿರುವುದು ಸರಿ. ಆದರೆ ಅದನ್ನು ಅವನು ಅದೇ ಒಕ್ಕಣೆಯೊಂದಿಗೆ ಬರೆದನೆಂಬುದಕ್ಕೆ, 'ರಾಕ್ಷಸ ಮುದ್ರಿಕಾಗ್ರಹಣ' ಭಾಗದ ಪೂರ್ವಸಂದರ್ಭ ಸರಿಯಾಗಿ ಹೊಂದಿಕೆಯಾಗುತ್ತಿಲ್ಲ. ಅಲ್ಲಿ ಪ್ರಾಕೃತವಾಕ್ಯ, ಸಂಸ್ಕೃತಶ್ಲೋಕ, ಚಿತ್ರಬಂಧ ಎಂಬಂತಹ ವಿವರಣೆಯಿರುವುದರಿಂದ, ಹಾಗೆಂದೇ ಬರೆಯುವಾಗ ಅದರ ಆಶಯ ಅವನಿಗೆ ತಿಳಿಯದೆ ಸಿದ್ಧಾರ್ಥಕನನ್ನು ಆ ಬಗ್ಗೆ ಪ್ರಶ್ನಿಸಿದನೆಂಬುದರಿಂದ, ಅವನು ಹಾರಿಕೆ ಉತ್ತರವನ್ನು ಕೊಟ್ಟನೆಂಬುದರಿಂದ, ಇಲ್ಲಿ ಪೂರ್ವಾಪರಸಂಘಟನೆಯಲ್ಲಿ ವಿಸಂಗತಿಯಿರುವಂತಿದೆ. ನಾಟಕದಲ್ಲಿ ಮೊದಲನೆಯ ಅಂಕದಲ್ಲಿ, ಈ ಕಪಟಲೇಖದ ಪ್ರಸ್ತಾಪವುಂಟು ; ಅಲ್ಲಿ ಒಕ್ಕಣೆಯ ವಿವರವಿಲ್ಲ. ಯಾರಿಂದ ಯಾರಿಗೆ ಎಂಬ ವಿವರಗಳೇನೂ ಇಲ್ಲದ ಸಾಮಾನ್ಯವಾದ ಸಂದರ್ಭದಲ್ಲಿ, ಸಾಮಾನ್ಯರೀತಿಯಲ್ಲಿರುವ ಆ ಪತ್ರವನ್ನು ಅಲ್ಲಿ ಅವನು ಸಂಶಯವೇನೂ ಇಲ್ಲದೆ ತನ್ನ ಆಪ್ತನಾದ ಸಿದ್ಧಾರ್ಥಕನಿಗೆ ಪ್ರತಿಮಾಡಿ ಕೊಟ್ಟಿದ್ದರೆ ತಪ್ಪೇನೂ ಇಲ್ಲ. ಆದರೆ ನಾರಾಯಣ ಶರ್ಮನು ಈ ವಿಷಯ ಕುರಿತಾಗ ಏನೋ ಅತಿಬುದ್ಧಿವಂತಿಕೆ ತೋರಿಸಲು ಹೋಗಿ ವಿಸಂಗತಿಗೆ ಅವಕಾಶ ಮಾಡಿರುವನೆನ್ನಬೇಕು.

ಸ್ವಲ್ಪ ಹೊತ್ತಿನಲ್ಲಿಯೇ ಸಂವಾದ ಬೆಳೆದಂತೆ, ರಾಕ್ಷಸನಿಗೆ ತಾನು ತೊಟ್ಟಿರುವ ಒಡವೆಗಳು ಚಾಣಕ್ಯನ ತಂತ್ರದ ಭಾಗವಾಗಿ ತನಗೆ ಕ್ರಯವಾಗಿ ಬಂದವು, ಪರ್ವತೇಶ್ವರನವು ಎಂಬುದು ತಿಳಿದು ಹೋಯಿತು. ತನಗೆ ವರ್ತಕರಿಂದ ಕ್ರಯವಾಗಿ ಬಂದವು ಎಂಬ ರಾಕ್ಷಸನ ಮಾತಿನ ತಥ್ಯವನ್ನು ಬಾಗುರಾಯಣನಲ್ಲಿ ವಿಮರ್ಶೆಗಾಗಿ ಮಲಯಕೇತು ಪ್ರಶ್ನಿಸಲಾಗಿ, ಆತ ಉಪಾಯದಿಂದ ಸಮಾಧಾನವನ್ನು ಹೇಳಿದನಾದರೂ, ಮಲಯಕೇತು ಅವುಗಳ ಬೆಲೆಗೆ ತನ್ನನ್ನೇ ಚಂದ್ರಗುಪ್ತನಿಗೆ ಒಪ್ಪಿಸುವುದು ರಾಕ್ಷಸನ ಆಶಯವೆಂದು ಅರ್ಥ ಮಾಡಿದನು. ತನಗೆ ರಾಕ್ಷಸನು ವಿಶ್ವಾಸಘಾತುಕವಾಗಿ ನಡೆದುಕೊಂಡ ಬಗ್ಗೆ ಹಂಗಿಸಿದನು. ವಿಷಕನ್ಯಾಮುಖದಿಂದ ತನ್ನ ತಂದೆಯನ್ನು ಕೊಲ್ಲಿಸಿದವನೂ ಆತನೇ ಎಂದು ಛೇಡಿಸಿದನು. ಇವುಗಳಿಗೆ ಉತ್ತರಿಸಲು ರಾಕ್ಷಸನಲ್ಲಿ ತಕ್ಕ ಸಾಕ್ಷ್ಯಾಧಾರಗಳೇನೂ ಇರಲಿಲ್ಲ ; ಅವನು ದೈವವಿಲಾಸವೆಂದು ಮಾತ್ರ ಮತ್ತೆಮತ್ತೆ ಹೇಳಬೇಕಾಗಿಬಂತು. ತಂದೆಯ ವಧೆಗೆ ರಾಕ್ಷಸನೇ ಕಾರಣನೆಂದು ಕ್ಷಪಣಕ ಹಿಂದೆ ಬಾಗುರಾಯಣನೊಂದಿಗೆ ರಹಸ್ಯಸಂವಾದ ಮಾಡುವಾಗ ನುಡಿದುದನ್ನು ಮರೆಯಿಂದ ಕೇಳಿದ್ದುದನ್ನು ಮಲಯಕೇತು ಮರೆತಿರಲಿಲ್ಲ. ಸಾಕ್ಷಿಗೆ ಅವನನ್ನು ಕರೆದಾಗಲೇ ತನಗೆ ಆಪ್ತನಂತೆ ನಟಿಸಿದ ಆತನೂ ಚಾಣಕ್ಯನ ಮನುಷ್ಯನೆಂದು ರಾಕ್ಷಸನಿಗೆ ಅರ್ಥವಾದುದು. ಶತ್ರುಗಳು ತನ್ನ ಹೃದಯವನ್ನೇ ಆಕ್ರಮಿಸಿರುವರೆಂದೂ ಇನ್ನು ಪುರುಷಪ್ರಯತ್ನವೇನೂ ಸಾಗದೆಂದೂ ಅವನು ಚಿಂತಾಕ್ರಾಂತನಾದನು.

ಮಲಯಕೇತುವಿನ ಅಪ್ಪಣೆಯಂತೆ ಚಿತ್ರವರ್ಮಾದಿಗಳೆಲ್ಲ ಕೊಲೆಯಾದರು.

ಬ್ರಾಹ್ಮಣನೆಂಬ ಕಾರಣದಿಂದ ರಾಕ್ಷಸನನ್ನೂ ದೂತನೆಂಬುದರಿಂದ ಸಿದ್ಧಾರ್ಥಕನನ್ನೂ ಕೊಲ್ಲಿಸದೆ ನಿರಸನ ಮಾಡಲಾಯಿತು. ಯುದ್ಧೋದ್ಯೋಗವನ್ನು ಮುಂದೂಡಲಾಯಿತು. ರಾಕ್ಷಸನೆದುರು ಭೃತ್ಯಭಾವದಿಂದ ಸಿದ್ಧಾರ್ಥಕನು ನಿಂತಾಗ, ಪ್ರಶ್ನೋತ್ತರಗಳು ಪರಸ್ಪರರಿಗೆ ಜರುಗಿ (ನಾಟಕದಲ್ಲಿ ಚತುರೋಕ್ತಿವಿನ್ಯಾಸದ ಈ ಚೆಲುವಾದ ಭಾಗವಿಲ್ಲ.) ರಾಕ್ಷಸನಿಗೆ ತಾನು ನಂಬಿದ ಜನರಿಂದ ಮೋಸಹೋದ ವಿಷಯ ವಿದಿತವಾಯಿತು. ವಿವರಗಳು ಸ್ಪಷ್ಟವಾಗತೊಡಗಿದುವು. ಬಾಗುರಾಯಣಾದಿಗಳು ವೈರಿಪಕ್ಷದವರಾಗಿದ್ದು ಮಲಯಕೇತುವಿಗೆ ಅವರಿಂದ ಹಾನಿಯಾಗುವುದು ನಿಶ್ಚಿತವೆನಿಸಿತು. ತನ್ನ ಕರ್ತವ್ಯವನ್ನು ಗಾಢವಾಗಿ ಚಿಂತಿಸಿ, ಮಿತ್ರ ಚಂದನದಾಸನನ್ನು ಬಂಧಮುಕ್ತಿಗೊಳಿಸುವುದೆಂದು ನಿರ್ಧರಿಸಿದನು.

ಕನ್ನಡ ಗದ್ಯಕೃತಿಯಲ್ಲಿ ನಾಟಕದ ಐದನೆಯ ಅಂಕವನ್ನು ಹತ್ತಿರದಿಂದ ಅನುಸರಿಸಿಯೇ ಕಥೆಯ ಹಂದರವನ್ನು ರಚಿಸಿದರೂ ಅದನ್ನು ಸಮೃದ್ಧವಾದ ಸಣ್ಣಪುಟ್ಟ ವಿವರಗಳಿಂದಲೂ ಸಂಭಾಷಣೆಗಳಿಂದಲೂ ಸಂಪನ್ನಗೊಳಿಸಿದೆ.

ಬಾಗುರಾಯಣನ ದುರ್ಬೋಧನೆ, ಕ್ಷಪಣಕ ಸಿದ್ಧಾರ್ಥಕರು ಚಾಣಕ್ಯನ ಮಾರ್ಗದರ್ಶನದಲ್ಲಿ ನಡೆಸಿದ ಭಯಂಕರ ಗೂಢಚರ್ಯೆ, ಮಲಯಕೇತುವಿನ ದುಡುಕು ಮತ್ತು ತಪ್ಪುತಿಳಿವಳಿಕೆ, ಎಲ್ಲಕ್ಕಿಂತ ಮಿಗಿಲಾಗಿ ದೈವವಿಮುಖತೆ ಎಲ್ಲ ಸೇರಿ ಅಮಾತ್ಯರಾಕ್ಷಸನಿಗೆ ಹೃದಯವಿದ್ರಾವಕವಾದ ದುರ್ದೆಸೆಯನ್ನು ತಂದಿತು. ಚಂದ್ರಗುಪ್ತನ ಪಟ್ಟದ ಹಕ್ಕನ್ನು ಅವನು ಮನ್ನಿಸಿದ್ದರೆ, ಅವನೊಂದಿಗೆ ವಿಹಿತವಾಗಿರಲು ಸ್ವಲ್ಪ ಮನಸ್ಸು ಮಾಡಿದ್ದರೆ, ಅವನಿಗೆ ಈ ಸ್ಥಿತಿ ಬರುತ್ತಿರಲಿಲ್ಲ. ಈಗ ಅನುಭವಿಸುವ ನೋವು ದುರಂತನಾಯಕನ ನೋವಿಗೆ ಸದೃಶವಾದುದೆನ್ನಬೇಕು. ಹಾಗೆ ನೋಡಿದರೆ, ನಾಟಕದಲ್ಲಿ ಅವನು ನಾಯಕನೇ; ಕಾದಂಬರಿಯಲ್ಲಿ ಚಾಣಕ್ಯನೂ ಅವನೊಂದಿಗೆ ವಿಜೃಂಭಿಸಿದ್ದಾನೆ.

ಚಾಣಕ್ಯನು ಸ್ತಿಮಿತಚಿತ್ತ, ಆತ್ಮವಿಶ್ವಾಸವುಳ್ಳವನು, ಕುಟಿಲತಂತ್ರಗಳಲ್ಲಿ ಚತುರ ಮತ್ತು ಕಠೋರ ರಾಜನೀತಿಜ್ಞ. ಇಟ್ಟುಕೊಂಡ ಗುರಿಯನ್ನು ಸಾಧಿಸಲು ಎಲ್ಲ ವ್ಯವಸ್ಥೆಗಳನ್ನೂ ಸಮರ್ಥವಾಗಿ, ಸಮಗ್ರವಾಗಿ ಮೊದಲಲ್ಲಿಯೇ ನಿಶ್ಚಯಿಸಿ ಸಾಗತಕ್ಕವನು. ರಾಕ್ಷಸನೂ ಸ್ತಿಮಿತಚಿತ್ತನೇ, ಆತ್ಮವಿಶ್ವಾಸವುಳ್ಳವನೇ. ಆದರೆ ಕುಟಿಲತಂತ್ರಗಳಲ್ಲಿ ಅಂತಹ ಚತುರನಲ್ಲ, ದಾಕ್ಷಿಣ್ಯಪರನಾದ ಹಾಗೂ ಮೃದುಸ್ವಭಾವದ ರಾಜನೀತಿಜ್ಞ, ಜನರನ್ನು ಸುಲಭವಾಗಿ ನಂಬಿ ಮೋಸಹೋಗುವ ಮುಗ್ಧ, ಋಜುಸ್ವಭಾವಿ. ಶೂರನೆಂಬುದರಲ್ಲಿ ಸಂಶಯವಿಲ್ಲ ; ಆದರೆ ಸರಿಯಾಗಿ ಅವಕಾಶವೇ ಬರಲಿಲ್ಲ. ಅವನು ನಂದರಲ್ಲಿಟ್ಟ ಏಕನಿಷ್ಠೆ ಅತಿಯಾಗಿ ಚಂದ್ರಗುಪ್ತ ಚಾಣಕ್ಯರನ್ನು ಬದ್ಧವೈರಿಗಳಂತೆ ನೋಡುವ ಹಾಗೆ ಮಾಡಿತು. ಚಂದ್ರಗುಪ್ತನ ಸಂಹಾರವನ್ನು ಅವನು ಬಯಸಿದ್ದು ಕಠಿನವೂ ಅನರ್ಥಕಾರಿಯೂ ಆದ ನಿರ್ಣಯವಾಯಿತು. ಕೊನೆಗೆ ಅವನು ತನ್ನ ಪ್ರಯತ್ನಗಳೆಲ್ಲ ಭಗ್ನಗೊಂಡು ದೈವವಿಲಾಸವನ್ನು ನಂಬುವ ಅಸಹಾಯಕಸ್ಥಿತಿಗೆ ತಲುಪುವಂತಾಯಿತು. ಕುಟಿಲ ರಾಜತಂತ್ರಗಳಲ್ಲಿ ಅಪ್ರತಿಹತವಾದ ಸಾಮರ್ಥ್ಯವನ್ನು ಚಾಣಕ್ಯನು ಪ್ರದರ್ಶಿಸಿ, ನಿಷ್ಠಾವಂತನೂ ಸತ್ಯಸಂಧನೂ ದಕ್ಷನೂ ಶೂರನೂ ಆದ ರಾಕ್ಷಸನನ್ನು ಚಂದ್ರಗುಪ್ತನಿಗೆ ಪ್ರಧಾನಿಯನ್ನಾಗಿ ಮಾಡುವುದರಲ್ಲಿ ಸಫಲನಾದನು.

ಹೀಗೆಯೇ ಚಂದ್ರಗುಪ್ತ ಮಲಯಕೇತುಗಳಲ್ಲಿಯೂ ಸ್ವಭಾವವೈರುದ್ಧ್ಯಗಳಿವೆ.

ರಾಜತ್ವದ ಗಾಂಭೀರ್ಯ, ಗುರುಹಿರಿಯರಲ್ಲಿಯ ಭಕ್ತಿಗೌರವ, ಸಚಿವರ ವಿಷಯದಲ್ಲಿ ಅನನ್ಯ ವಿಶ್ವಾಸ ಇವು ಚಂದ್ರಗುಪ್ತನ ವರ್ಚಸ್ಸನ್ನು ಹೆಚ್ಚಿಸಿವೆ. ಮಲಯಕೇತುವಾದರೋ ಪಾತ್ರದಲ್ಲಿ ಅಪನಂಬಿಕೆ, ಅಪಾತ್ರದಲ್ಲಿ ನಂಬಿಕೆಯಿಟ್ಟು ಕೆಟ್ಟವನು ; ದುಡುಕು, ಸಂಶಯಚಿತ್ತ, ರಾಜತ್ವದ ಡೌಲು ತನ್ನಲ್ಲಿ ತುಂಬಿಕೊಂಡವನು. ಮಗುವಿನಂತೆ ಎಳಸು ಎನ್ನುವಂಥವನು. (ನೋಡಿ : ಕೆ. ಟಿ. ತೆಲಾಂಗ್, 'ಮುದ್ರಾರಾಕ್ಷಸ' ಪರಿಷ್ಕರಣ, ಮುಂಬಯಿ, ೧೮೮೪, ಪೀಠಿಕೆ.)

೧೮. ರಾಕ್ಷಸನು ಚಂದನದಾಸನ ಬಂಧಮುಕ್ತಿಗೆ ತೆರಳಿದನು ; ಗಾಂಧಾರಾದಿ ದೇಶಗಳ ದೊರೆಗಳು ಪಲಾಯನ ಮಾಡಿದರು. ಶೇಖರನು ತನ್ನ ಸೇನೆಯೊಂದಿಗೆ ಗತಿಸಿದ ಚಿತ್ರವರ್ಮಾದಿಗಳ ಸೈನ್ಯವನ್ನು ಬೆನ್ನಟ್ಟಿದನು. ಇಂತಹ ಸ್ಥಿತಿಯಲ್ಲಿ ಮಲಯಕೇತುವನ್ನು ಸೆರೆಹಿಡಿಯುವುದು ಸುಲಭವೆನ್ನಿಸಿ, ಬಾಗುರಾಯಣನು ಭದ್ರಭಟಾದಿಗಳಿಗೆ ಪ್ರಕಾರಾಂತರದಿಂದ ಈ ವಿಷಯ ಹೇಳಿಕಳಿಸಿದನು. ಮೃಗಗಳ ಬೇಟೆಗೆ ಅನುಕೂಲಸಮಯವೆಂದು ಅವನು ದೂತನ ಮುಖದಿಂದ ಹೇಳಿಕಳಿಸಿದುದನ್ನು ಅವರು ಮಲಯಕೇತುವಿನ ಕೈಸೆರೆಯೆಂದೇ ಅರ್ಥಮಾಡಿಕೊಂಡರು. (ಈ ಧ್ವನ್ಯರ್ಥಗ್ರಹಣದ ಕಥಾಂಶ ಹೆಚ್ಚು ಸಹಜವೆಂದು ಹೇಳುವಂತಿಲ್ಲ). ಪರ್ವತರಾಜ್ಯದಿಂದ ನಿರ್ಗಮಿಸಿದ ರಾಕ್ಷಸನ ಜಾಡು ಹಿಡಿದು ಈಗ ಸಿದ್ಧಾರ್ಥಕ ತೆರಳಿದನು (ನಾಟಕದಲ್ಲಿ ಒಬ್ಬ ಚಾರ ಹಿಂಬಾಲಿಸಿ ಹೋಗಿ ಸುದ್ದಿಯನ್ನು ಚಾಣಕ್ಯನಿಗೆ ಮುಟ್ಟಿಸಿದನೆಂದಿದೆ).

ಭದ್ರಭಟಾದಿಗಳ ಕಾರ್ಯಾಚರಣೆ ಮೊದಲಾಯಿತು. ಮಲಯಕೇತು ನಿದ್ದೆಯ ಮಬ್ಬಿನಿಂದ ಎಚ್ಚೆತ್ತಾಗ ಆಯುಧಪಾಣಿಗಳು ಗಾಬರಿಗೊಂಡ ಅವನನ್ನು ನೋಡಿ, ಪಾಟಲೀಪುರಾಧಿಪತ್ಯವನ್ನು ವಹಿಸಿಕೊಡಲು ಅಮಾತ್ಯ ರಾಕ್ಷಸನು ಅವನಿಗೆ ಅಂದಳವನ್ನು ಕಳಿಸಿಕೊಟ್ಟಿರುವುದಾಗಿ ವ್ಯಂಗ್ಯವಾಡಿದರು. ಅವನಿಗಾದರೋ, ಬಾಗುರಾಯಣನೂ ತನ್ನನ್ನು ವಂಚಿಸಿದುದು ಈಗ ಸ್ಪಷ್ಟವಾಯಿತು. ಪರಿಸ್ಥಿತಿ ಅವನಿಗೆ ಅರ್ಥವಾಗಿ, ನಿಸ್ಸಹಾಯಕನಾಗಿ ಅವನು ಅವರೊಂದಿಗೆ ಹೊರಡಲು ಸಿದ್ಧವಾದನು. ಚಂದ್ರಗುಪ್ತನಿಂದ ತನಗೆ ಕೇಡಾಗಲಾರದೆಂದು ಅವನು ನಂಬಿದ್ದನು. ಮಲಯಕೇತುವನ್ನು ವಂಚಿಸಿ ಕೈಸರೆ ಹಿಡಿಯುವಾಗ, ಅವನ ವಿಷಯವಾಗಿ ತಮ್ಮಲ್ಲಿಯೇ ಮರುಗಿ ಆತ್ಮನಿಂದೆ ಮಾಡಿಕೊಂಡ ಭದ್ರಭಟಾದಿಗಳ ವರ್ತನೆ, ಘಟನೆಗಳ ನೈಜತೆಯನ್ನು ಹೆಚ್ಚಿಸುವ ಮಾನವೀಯಮುಖವನ್ನು ಪ್ರಕಟಿಸುವಂಥದಾಗಿದೆ.

ಇತ್ತ ರಾಕ್ಷಸನು ಪಾಟಲೀಪುರಕ್ಕೆ ಬಂದವನು, ಪುರದ ಉತ್ತರ ದಿಕ್ಕಿನ ವಸಂತವನದಲ್ಲಿರುತ್ತಿದ್ದನು. ಈ ವಿಷಯ ಸಿದ್ಧಾರ್ಥಕನ ಮೂಲಕ ಚಾಣಕ್ಯನಿಗೆ ತಿಳಿಯಿತು. ಅವನಿಂದ ನಡೆದ ವಿದ್ಯಮಾನವೆಲ್ಲ ಆದ್ಯಂತ ವಿದಿತವಾಯಿತು. ಇಬ್ಬರೂ ಚಂದ್ರಗುಪ್ತನ ಅರಮನೆಗೆ ಬಂದರು. ತಮ್ಮ ನಡುವಣ ಕಪಟ ವಾಕ್ಕಲಹದ ತಂತ್ರ ಹೇಗೆ ಫಲ ನೀಡಿತು ಎಂಬುದನ್ನು ಚಾಣಕ್ಯನು ಚಂದ್ರಗುಪ್ತನಿಗೆ ಮನವರಿಕೆ ಮಾಡಿದಾಗ, ಅವನು ಕೃತಜ್ಞತೆಯ ಭಾವದಿಂದ ತುಂಬಿಹೋದನು. ಪರ್ವತರಾಜನ ಹಿಂದಿನ ಸಹಾಯವನ್ನು ನೆನೆದು ಮಲಯಕೇತುವನ್ನು ಸೆರೆಯಿಂದ ಬಿಡಿಸಿ, ಅಧೀನತೆ ಒಪ್ಪಿ ತನ್ನ ರಾಜ್ಯದಲ್ಲಿ ತಾನು ಇದ್ದುಕೊಳ್ಳುವಂತೆ ಮಾಡಬೇಕೆಂದು ಚಾಣಕ್ಯನು ಚಂದ್ರಗುಪ್ತನಿಗೆ ಸಲಹೆ ಮಾಡಿದನು ; ಸಿದ್ಧಾರ್ಥಕನನ್ನು,

ರಾಕ್ಷಸನನ್ನು ಸ್ವಾಧೀನಪಡಿಸಿಕೊಳ್ಳುವ ಕೊನೆಯ ಕಾರ್ಯಾಚರಣೆಗೆ ಕಳಿಸಿ ಕೊಟ್ಟನು. ಮಲಯಕೇತುವನ್ನು ಗೌರವದಿಂದ ನಡೆಸಿಕೊಳ್ಳುವಂತೆ ಬಾಗುರಾಯಣನಿಗೆ ವಿಧಿಸಿದನು. ರಾಕ್ಷಸಸಂಗ್ರಹದ ಕಾರ್ಯಾಚರಣೆಗೆ ಚಾಣಕ್ಯನ ಜನ ನಿರ್ವಹಿಸಿದ ಚಟುವಟಿಕೆಗಳು, ನಾಟಕದೊಳಗೆ ನಾಟಕ ನಡೆಯುವ ಹಾಗೆ ವಿಸ್ಮಯಾವಹವಾಗಿ ಮುಂದೆ ಘಟನೆಗಳನ್ನು ಉದ್ದೇಶಿತಲಕ್ಷ್ಯದ ಕಡೆಗೆ ಕೊಂಡೊಯ್ಯುವಂತೆ ಸಂಯೋಜಿತವಾಗಿವೆ. ಚಂದ್ರಗುಪ್ತನಿಗೆ ದಕ್ಷನಾದ ಒಬ್ಬ ಅಮಾತ್ಯನನ್ನು ನೇಮಿಸುವುದು ಹಾಗೂ ಮಲಯಕೇತುವಿನಂತಹ ಪ್ರಬಲನಾದ ಸಾಮಂತನನ್ನು ಒದಗಿಸುವುದು ಚಾಣಕ್ಯನ ಮುಖ್ಯವಾದ ಉದ್ದೇಶಗಳಾಗಿದ್ದುವು.

ಸಿದ್ಧಾರ್ಥಕನು ಕಡಿಗರ ವೇಷದ ಆಪ್ತರೊಂದಿಗೆ ಚಂದನದಾಸನನ್ನು ಶೂಲಕ್ಕೇರಿಸಲು ವಧ್ಯಸ್ಥಾನಕ್ಕೆ ಕೊಂಡೊಯ್ಯುವುದು, ಚಂದನದಾಸನ ವಧೆಗಾಗಿ ಮರುಗಿ ಅಗ್ನಿಪ್ರವೇಶಕ್ಕೆ ಸಂಕಲ್ಪಿಸಿದ ವಿಷ್ಣುದಾಸನೆಂಬ ಮಿತ್ರನ (ನಾಟಕದಲ್ಲಿ ಇವನು ದಿಟದ ವ್ಯಕ್ತಿ) ಕಠೋರ ನಿರ್ಧಾರವನ್ನು ಕಂಡು ಸಹಿಸಲಾರದೆ ವಿಷ್ಣುದಾಸನ ಮಿತ್ರನಾದ ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಕಲ್ಪಿತಕಥೆ ಹೇಳಿ ಪಶುಲೋಮಕನೆಂಬುವನು ರಾಕ್ಷಸನ ಗಮನವನ್ನು ತನ್ನತ್ತ ಸೆಳೆದುಕೊಳ್ಳುವುದು, ರಾಕ್ಷಸನಿಗೂ ಪಶುಲೋಮಕನಿಗೂ ಸಂವಾದ ಬೆಳೆದು ಚಂದನದಾಸನನ್ನು ಬಂಧಮುಕ್ತಗೊಳಿಸಲು ಖಡ್ಗಪಾಣಿಯಾಗಿ ನುಗ್ಗಬೇಕೆಂದು ರಾಕ್ಷಸನು ಸಂಕಲ್ಪಿಸಿದುದು, ಅದರಿಂದ ಆಗಬಹುದಾದ ಅನಾಹುತವನ್ನು ತಪ್ಪಿಸಲು ಉಪಾಯವನ್ನು ಯೋಚಿಸಿ ಪಶುಲೋಮಕನು ರಾಕ್ಷಸನಿಗೆ ನಿರಾಯುಧನಾಗಿ ಯತ್ನಿಸುವಂತೆ ಮನವರಿಕೆ ಮಾಡಿದುದು, ಆಗ ಪ್ರಸ್ತಾವವಾದ ಸಿದ್ಧಾರ್ಥಕ ಶಕಟದಾಸನನ್ನು ಬಂಧಮುಕ್ತಗೊಳಿಸಿದ ಪ್ರಕರಣವನ್ನು ನೆನೆದು ಚಾಣಕ್ಯನ ತಂತ್ರೋಪಾಯದ ಪರಿಯನ್ನು ರಾಕ್ಷಸ ತನ್ನಲ್ಲಿಯೇ ತರ್ಕಿಸಿದುದು (ಮಹಾರಾಜನು ಕೊಲೆಗಾರರನ್ನು ಕೊಲ್ಲಿಸಿದನೆಂಬ ಮಾತನ್ನು ರಾಕ್ಷಸನು ನಂಬಿಬಿಟ್ಟನು ಎಂದು ಅಭಿಪ್ರಾಯವಾಗುವಂತೆ ನಾಟಕದಲ್ಲಿದೆ ; ಆದರೆ ಕಾದಂಬರಿಯಲ್ಲಿ ಆ ವಿಷಯವನ್ನು ಸಂಶಯಿಸಿದಂತಿದೆ), ಪಶುಲೋಮಕನು ಚಾಣಕ್ಯನಿಗೆ ಸುದ್ದಿ ತಲುಪಿಸಿದುದು, ವಧ್ಯಸ್ಥಾನಕ್ಕೆ ಚಂದನದಾಸನನ್ನು ಮೆರವಣಿಗೆಯಲ್ಲಿ ಕೊಂಡೊಯ್ದುದು, ಅವನ ಪತ್ನೀಪುತ್ರರ ವಿಲಾಪ ಮತ್ತು ಕಡಿಗರ ಕಠೋರವರ್ತನೆ, ರಾಕ್ಷಸನು ಚಂದನದಾಸನ ಸ್ಥಾನದಲ್ಲಿ ತಾನು ಶೂಲಕ್ಕೇರುವುದಾಗಿ ಸಾರಿದುದು, ಪ್ರಭುಗಳ ಅಪ್ಪಣೆಯಾಗಬೇಕು ಎಂದು ಹೇಳಿ ಕಡಿಗರು ಚಾಣಕ್ಯನಲ್ಲಿಗೆ ಅವನನ್ನು ಕರೆತಂದುದು ಇವೆಲ್ಲ ಪ್ರತ್ಯೇಕ ದೃಶ್ಯಗಳೋ ದೃಶ್ಯಭಾಗಗಳೋ ಎನ್ನುವಂತೆ ಒಂದು ವಿಷಾದಪೂರ್ಣ ಸನ್ನಿವೇಶದಲ್ಲಿ ಜರುಗುತ್ತವೆ.

ಈ ತೆರನ ಸನ್ನಿವೇಶಗಳು ಸಂಸ್ಕೃತನಾಟಕಗಳಲ್ಲಿ ಆಗಾಗ ಕಾಣಿಸಿಕೊಂಡಿವೆ. 'ಮೃಚ್ಛಕಟಿಕ',' ಮಧ್ಯಮವ್ಯಾಯೋಗ' ಮೊದಲಾದವನ್ನು ಉದಾಹರಿಸಬಹುದು.

ರಾಕ್ಷಸನು ಪಟ್ಟಣದೊಳಗೆ ಬರುವ ವೇಳೆ ಇದ್ದ ಸನ್ನಿವೇಶವನ್ನು ಗಮನಿಸಿ, ಹೊರಗಣ ಸೇನೆ ಭದ್ರಭಟಾದಿಗಳದೆಂದೂ ಅವರು ಮಲಯಕೇತುವನ್ನು ಬಂಧಿಸಿ ತರುತ್ತಿರಬೇಕೆಂದೂ ತನ್ನನ್ನು ನಗರದಿಂದ ನಿರಸನಗೊಳಿಸಿ ಇದನ್ನು ಸಾಧಿಸಲಾಗಿದೆಯೆಂದೂ ಬಾಗುರಾಯಣನಿಂದ ಮಲಯಕೇತು ಮೋಸಹೋಗಿರಬೇಕೆಂದೂ ಸರಿಯಾಗಿಯೇ ತರ್ಕಿಸಿ

ದನು.

ಇಲ್ಲಿಂದ ಮುಂದೆ ಮಹಾನುಭಾವರಿಬ್ಬರ ಸ್ನೇಹಸಮ್ಮಿಲನದ ಒಂದು ಸುಮನೋಹರ ದೃಶ್ಯವನ್ನು ನಾವು ಎದುರುಗೊಳ್ಳುತ್ತೇವೆ. ಇಷ್ಟು ಕಾಲದ, ಇಷ್ಟು ಕಾರ್ಯವ್ಯಾಪ್ತಿಯ, ಇಷ್ಟು ಮಹತ್ತರವಾದ ವಿದ್ಯಮಾನಗಳು ಕ್ಷೋಭೆಯನ್ನುಂಟುಮಾಡುತ್ತ ನಡೆಯುತ್ತಿದ್ದರೂ ಚಾಣಕ್ಯನೂ ರಾಕ್ಷಸನೂ ಒಬ್ಬರನ್ನೊಬ್ಬರು ಮುಖಾಮುಖಿಯಾಗಿ ನೋಡಿರಲಿಲ್ಲ ಎನ್ನುವುದು ಕುತೂಹಲದ ಸಂಗತಿ. ಚಾಣಕ್ಯ ರಾಕ್ಷಸನನ್ನು ಕಾಣುತ್ತಲೇ ತಾನೇ ಆಸನದಿಂದೆದ್ದು ಅವನನ್ನು ತುಂಬ ಗೌರವದಿಂದ ನಡಸಿಕೊಂಡನು. ನಿಷ್ಕಪಟವಾಗಿ ಕೊಂಡಾಡಿದನು. ವೇಷಧಾರಿಗಳಾದ ಕಡಿಗರು ಚಾಣಕ್ಯನ ನೀತಿಕೌಶಲದಿಂದಾಗಿ ರಾಕ್ಷಸನನ್ನು ಕರೆತರಲಾಯಿತು ಎಂದಾಗ, ಚಾಣಕ್ಯ ಅದನ್ನೊಪ್ಪದೆ ನಂದಕುಲವಿದ್ವೇಷಿಯಾದ ದೈವವೇ ಕರೆತಂದಿತು ಎಂದು ಹೇಳುವ ಮೂಲಕ ಬಲುಮಟ್ಟಿಗೆ ಯಥಾರ್ಥವನ್ನೇ ಹೇಳಿದನೆನ್ನಬೇಕು. ಮೊದಲು ಒಂದು ಕ್ಷಣ ರಾಕ್ಷಸನಿಗೆ ಹಿಂದಿನ ಎಲ್ಲ ಕ್ಲೇಶಗಳ ಅನುಭವವೂ ಉಮ್ಮಳಿಸಿ ಬಂದಂತಾಗಿ ತನಗರಿವಿಲ್ಲದಂತೆಯೇ ಚಾಣಕ್ಯನನ್ನು ದುರಾತ್ಮನೆಂದುಕೊಂಡರೂ ಮರುಕ್ಷಣದಲ್ಲಿ ಆತನಲ್ಲಿ ಮಹಾತ್ಮನ ಲಕ್ಷಣಗಳನ್ನೇ ಅವನು ಕಂಡನು. ಈತನನ್ನು ಅಪಮಾನಿಸಿಯೇ ನಂದರು ನಷ್ಟರಾದರೆಂದು ಅವನಿಗೆ ತೋರಿತು.

ಈಗ ಚಾಣಕ್ಯನು ವಯಸ್ಸಿನಲ್ಲಿ ಹಿರಿಯನಾದ ರಾಕ್ಷಸನಿಗೆ ಪ್ರಣಾಮಮಾಡಿ, ಅವನಿಗೆ ತನ್ನ ಆಪ್ತರನ್ನೆಲ್ಲ ಪರಿಚಯಿಸಿ, ಆ ವರೆಗೆ ತಾನು ಹೂಡಿದ ತಂತ್ರಗಳಲ್ಲಿ ಅವರು ಹೇಗೆ ಪಾತ್ರಗಳನ್ನು ನಿರ್ವಹಿಸಿದರೆಂಬುದನ್ನು ಸ್ಪಷ್ಟವಾಗಿ ತಿಳಿಸಿದನು. (ಘ. ಪ್ರತಿಯಲ್ಲಿ ಮಾತ್ರ: ಅಲ್ಲದೆ ಪ್ರತ್ಯೇಕವಾಗಿ ಏಕಾಂತದಲ್ಲಿ ಅವನನ್ನು ಕುಳ್ಳಿರಿಸಿಕೊಂಡು ವೇದೋಕ್ತವಾದ ಸನ್ಮಾರ್ಗಸ್ಥಾಪನೆಯೂ ನಂದಾದಿಗಳ ನಾಶದ ಮೂಲಕ ಪಾಷಂಡಮತಸ್ಥರ ನಿರ್ಮೂಲನವೂ ತನ್ನ ಉದ್ದೇಶವೆಂಬುದನ್ನು ವಿವರಿಸಿದನು ; ಅಯೋಗ್ಯರಾದ ನಂದರ ಪಕ್ಷ ಹಿಡಿದು, ಯೋಗ್ಯನಾದ ಚಂದ್ರಗುಪ್ತನಿಗೆ ದ್ರೋಹವೆಣಿಸಿದ ತಪ್ಪನ್ನು ಮನವರಿಕೆ ಮಾಡಿಕೊಟ್ಟನು. ಹೀಗೆ ಮಾಡುವಾಗ "ಧರ್ಮವಿದ್ದ ಕಡೆಗೆ ದೈವಸಹಾಯವುಂಟಾಗಿರುವದರಿಂದ ಯಾವ ವಿಷಯದಲ್ಲಿಯು ಯಾವ ಕಲ್ಪಿಕ್ಕೂ ವ್ಯರ್ಥವಾಗದ ತಮ್ಮ ಪೌರುಷವು ನಡೆಯದೆ, ಎಲ್ಲದರಲ್ಲಿಯೂ ನಿಮಗೆ ಸರಿಯಲ್ಲದ ನನ್ನ ನೀತಿಯು ಗುರುವಚನಾನುಸಾರವಾಗಿ ಧರ್ಮಪ್ರವರ್ತಕವಾದುದರಿಂದ ಸಿದ್ಧಿಸಿತು" ಎಂದು ಹೇಳುವ ಮೂಲಕ ಅನನ್ಯವಾದ ವಿನಯ ವಿಶ್ವಾಸಗಳನ್ನು ರಾಕ್ಷಸನ ವಿಷಯದಲ್ಲಿ ತೋರಿಸಿದನು.

ಚಾಣಕ್ಯನ ನಡೆವಳಿಕೆಯಿಂದ ರಾಕ್ಷಸನ ಮನಸ್ಸಿನ ರಾಗದ್ವೇಷಾದಿ ಭಾವನೆಗಳು ತೊಲಗಿದುವು. ಪ್ರಸನ್ನತೆಯುಂಟಾಯಿತು. ಚಾಣಕ್ಯನು ಮತ್ತೆ ಅವನನ್ನು ಋಷ್ಯಂಶವಿರುವ ಮಹಾನುಭಾವನೆಂದು ಮುಂತಾಗಿ ಪ್ರಶಂಸಿಸಿ, ಚಂದ್ರಗುಪ್ತನಲ್ಲಿಗೆ ಕರೆದೊಯ್ದು, ತನ್ನ ಮಂತ್ರಿಪ್ರಾಧಾನ್ಯಶಸ್ತ್ರವನ್ನು ಅವನಿಗೆ ವಹಿಸಿ ಅವನ ಮಾರ್ಗದರ್ಶನದಲ್ಲಿ ರಾಜ್ಯಭಾರ ನಡಸುವಂತೆ ಚಂದ್ರಗುಪ್ತನಿಗೆ ತಿಳಿಯಹೇಳಿದನು).

ಈಗ ರಾಕ್ಷಸನು ಮನಸ್ಸಿನಲ್ಲಿ, ಚಂದ್ರಗುಪ್ತನ ಗುಣಶೀಲ ಸಾಮರ್ಥ್ಯಗಳನ್ನೂ ಚಾಣಕ್ಯನಿಂದ ಪಡೆದ ಖ್ಯಾತಿಯನ್ನೂ ನೆನೆದನು ; ಅವನ ಪ್ರಭುಲಕ್ಷಣ ಪುರುಷಲಕ್ಷಣಗಳನ್ನು ವಿಮರ್ಶಿಸಿದನು. ಚಂದ್ರಗುಪ್ತನಿಗೆ ಚಾಣಕ್ಯನ ನೆರವು ದೊರೆತುದು ಈಶ್ವರಸಂಘಟನ

ಯೆಂದೂ ವಿವೇಕಶೂನ್ಯನಾದ ಮಲಯಕೇತುವನ್ನು ಪರಿಗ್ರಹಿಸಿ ತಾನು ಲೋಕಾಪವಾದಕ್ಕೆ ಗುರಿಯಾಗಬೇಕಾಗಿ ಬಂದಿತೆಂದೂ ಚಿಂತಿಸಿದನು. ಹೀಗೆ ತನ್ನ ಕಾರ್ಯಾಚರಣೆಯ ಫಲ ಪರಿಣಾಮಗಳನ್ನು ತನ್ನಲ್ಲಿಯೇ ಮಥನಮಾಡುತ್ತ ಸುಮ್ಮನಿರುವುದನ್ನು ಕಂಡು ಚಾಣಕ್ಯನು ಒಂದು ಮಾರ್ಮಿಕವಾದ ಪ್ರಶ್ನೆ ಹಾಕಿದನು. ರಾಕ್ಷಸನು ಹೀಗೆ ಚಂದ್ರಗುಪ್ತನಲ್ಲಿಗೆ ಬಂದುದು ಅವನ ಮೇಲಿನ ಅಭಿಮಾನದಿಂದಲೋ ಚಂದನದಾಸನ ಮೇಲಿನ ಕ್ಷೇಮ ಚಿಂತನೆಯಿಂದಲೋ ಎಂಬುದೇ ಆ ಪ್ರಶ್ನೆ. ಇದಕ್ಕೆ ಜಾಣ್ಮೆಯಿಂದ ಅಮಾತ್ಯನು ಉತ್ತರಿಸಿದರೂ, ಚಂದ್ರಗುಪ್ತನಲ್ಲಿ ಪ್ರಾಧಾನ್ಯಶಸ್ತ್ರ ಪರಿಗ್ರಹಿಸಿದರೆ ಮಾತ್ರ ಮಿತ್ರನ ಕ್ಷೇಮ ಎಂಬುದು ಚಾಣಕ್ಯನ ಷರತ್ತು. ಈ ಷರತ್ತಿಗೆ ಒಲ್ಲದ ಮನಸ್ಸಿನಿಂದಲೇ ಅಮಾತ್ಯನು ಒಪ್ಪಿಗೆ ನೀಡುತ್ತಾನೆ. ಅಲ್ಲಿಗೆ ನಂದರ ಸ್ಮರಣೆಗೆ ಸಮಾಪ್ತಿ ಹೇಳಿದಂತಾಗುತ್ತದೆ. ಹಿಂದಿನ ಉಪಕೃತಿಗಾಗಿ ಮಲಯಕೇತುವಿನ ವಿಷಯದಲ್ಲಿ ಗೌರವದಿಂದ ನಡೆಯುವುದು ಕರ್ತವ್ಯವೆಂದು ರಾಕ್ಷಸನು ಚಂದ್ರಗುಪ್ತನಿಗೆ ತಿಳಿಸಿದಾಗ ಅವರೆಲ್ಲ ಅವನನ್ನು ಗೌರವದಿಂದ ಕರೆತಂದು ಸನ್ಮಾನಿಸುತ್ತಾರೆ. ಮಲಯಕೇತು ತನ್ನನ್ನು ಕೊನೆಗೆ ತುಂಬ ಹೀನಾಯವಾಗಿ ನಡಸಿಕೊಂಡು ರಾಜ್ಯದಿಂದಲೇ ಹೊರಹಾಕಿದರೂ ಅವನ ಬಗೆಗೆ ಸೌಮನಸ...ಷೆ ರಾಕ್ಷಸನು ತೋರಿಸಿದ್ದು ಅವನ ದೊಡ್ಡ ಗುಣ. ನಡೆದುದಕ್ಕೆ ರಾಜಕುಮಾರ ...ವಾಗಿ ಕಾರಣವಲ್ಲ ಎಂಬುದನ್ನೂ ಅವನು ಬಲ್ಲ. ಚಾಣಕ್ಯನ ಸಲಹೆಯಂತೆ ಚಂ...ದಾಸನನ್ನು ಗೌರವದಿಂದ ಕರೆತಂದು, ಅವನ ಮೈತ್ರಿಯನ್ನು ಕೊಂಡಾಡಿ, ಎ...ೂ ಅವನನ್ನು ಸನ್ಮಾನಿಸುತ್ತಾರೆ. ಈ ಸನ್ಮಾನಗಳು ಚಾಣಕ್ಯನ ಗುಣಪಕ್ಷಪಾತದ... ಹಿಡಿದ ಉಜ್ವಲ ಮಣಿದರ್ಪಣಗಳು.

ಮುಂದೆ ಚಂದ್ರಗುಪ್ತನ ಪಟ್ಟಾಭಿಷೇಕದ ಉತ್ಸವ ...ಯುತ್ತದೆ. ಈ ಉತ್ಸವದ ವರ್ಣನೆಯೂ ಆಗಿನ ದಾನ ಸನ್ಮಾನಗಳ ವರ್ಣನೆ... ಈ ಕವಿ ಸ್ವತಃ ನೋಡಿರಬಹುದಾದ ಮುಮ್ಮಡಿಯವರ ಪಟ್ಟಾಭಿಷೇಕ ಇಲ್ಲವೆ ...ರ್ಷವರ್ಧಂತಿ ಉತ್ಸವಗಳ ಪ್ರತಿಕೃತಿಗಳೆಂಬಂತಿವೆ. ಚಾಣಕ್ಯರಿಗೆ ಚಂದ್ರಗುಪ್ತನ ಮಾಡಿದ ಮನ್ನಣೆ ಅಂದಿನ ಶ್ರೀಮಂತ ಗೃಹಸ್ಥರು ಮಠಾಧಿಪತಿಗಳಿಗೆ ಮಾಡು...ದ ಮನ್ನಣೆಯಂತಿದೆ. ರಾಕ್ಷಸನು ಚಂದ್ರಗುಪ್ತನಲ್ಲಿ ಪ್ರಧಾನಿಪದವನ್ನು ಅಂಗೀ...ದ ಮೇಲೆ, ಚಾಣಕ್ಯ ತಪೋವನಕ್ಕೆ ತೆರಳುತ್ತಾನೆ ; ಆ ಮುನ್ನ ಅವನಿಗೆ ರಾಜನೀ...ನ್ನು ಉಪದೇಶಿಸುತ್ತಾನೆ. ಮಲಯಕೇತು ತನ್ನ ರಾಜ್ಯಕ್ಕೆ ನಿರ್ಗಮಿಸುತ್ತಾನೆ. ರಾಕ್ಷ... ಮಾರ್ಗದರ್ಶನದಲ್ಲಿ ಚಂದ್ರಗುಪ್ತನ ರಾಜ್ಯಭಾರ ಮೊದಲಾಗುತ್ತದೆ.

'ಮುದ್ರಾರಾಕ್ಷಸ'ದ ೬-೭ನೆಯ ಅಂಕಗಳ ವಸ್ತು ಈ ಗದ್ಯಕೃತಿಯಲ್ಲಿ ಬೆಳೆದು ವಿಸ್ತಾರಗೊಂಡು, ಕಥೆಗೆ ಇನ್ನಷ್ಟು ಕಳೆ ಮೈಗೂಡಿದೆ. ಮುಖ್ಯಪಾತ್ರಗಳ ಗುಣಶೀಲಗಳ ಮಹಿಮೆ ಹೆಚ್ಚು ಪರಿಸ್ಫುಟಗೊಳ್ಳುವಂತೆ ವಿವರಗಳು ತುಂಬಿಕೊಂಡಿವೆ. ರಾಕ್ಷಸಮುದ್ರಿಕಾಗ್ರಹಣದಿಂದ ಮುಂದಿನ ಕಥಾಭಾಗಕ್ಕೆ ತಾನು ಭಿತ್ತಿಯಾಗಿಟ್ಟುಕೊಂಡ ವಿಶಾಖದತ್ತನ ನಾಟಕದ ಮುಖ್ಯಾಂಶಗಳಲ್ಲಿ ಏನನ್ನೂ ಲೋಪಿಸದೆ, ಪಾತ್ರರಚನೆಯಲ್ಲಿ ಯಾವ ವಿಕೃತಿ ವೈಪರೀತ್ಯಗಳಿಗೂ ಎಡೆಗೊಡದೆ, ಶಬ್ದಾನುವಾದ ಭಾವಾನುವಾದಗಳ ಹಾದಿಯನ್ನೇ ಹಿಡಿದು ಕಥೆಯನ್ನು ಕವಿ ಸುಂದರವಾಗಿ ನಿರ್ವಹಿಸಿದ್ದಾನೆ.

"ನಮಗೆ ತಿಳಿದಿರುವ ಮಟ್ಟಿಗೆ, ಇತರ ಯಾವ ಪೂರ್ವಗ್ರಂಥದಲ್ಲಿಯೂ ಈ ಕಥೆಯನ್ನು ಇಷ್ಟು ವಿಸ್ತಾರವಾಗಿ ಹೇಳಿಲ್ಲದುದರಿಂದ, ಕೆಂಪುನಾರಾಯಣನು ಮುದ್ರಾರಾಕ್ಷಸ ನಾಟಕವನ್ನು ಓದಿ, ಅದರ ಉಪೋದ್ಘಾತದಲ್ಲಿ ಕೊಟ್ಟಿರುವ ಕಥೆಯನ್ನು ಬೆಳೆಯಿಸಿ, ಮೂಲದಲ್ಲಿ ತಕ್ಕಂತೆ ಸ್ವಲ್ಪ ಮಾರ್ಪಾಡುಗಳನ್ನು ಅಲ್ಲಲ್ಲಿ ಮಾಡಿ, ಪ್ರೌಢರೀತಿಯಲ್ಲಿ ತನ್ನ ಗ್ರಂಥವನ್ನು ರಚಿಸಿರುವನೆಂದು ಧಾರಾಳವಾಗಿ ಹೇಳಬಹುದು" (ಬೆಳ್ಳಾವೆ ವೆಂಕಟನಾರಾಯಣಪ್ಪ, ಮುದ್ರಾರಾಕ್ಷಸ-ಮುದ್ರಾಮಂಜೂಷ, ಕಸಾಪ., ೧೭-೩, ೧೯೩೨, ಪು. ೨೦೨). ಇದು ದಿಟವಾದರೂ ಮಹಾದೇವ-ರವಿನರ್ತಕರು ಕೊಡುವ ಕಥೆಗಳ ಉತ್ತರಾಂಶಗಳನ್ನು ಸಹ ಸ್ವೀಕರಿಸಿರುವ ಸಾಧ್ಯತೆ ಸ್ಪಷ್ಟವಾಗಿಯೇ ಇದೆ. ಆದ್ದರಿಂದ ಬೇರೆ ಆಕರಗಳ ಸ್ವೀಕಾರ ವಿಶದಪಡುವ ವರೆಗೆ, "ಈ ಎರಡು ಸಂಸ್ಕೃತ ಕೃತಿಗಳೂ ಕೆಂಪುನಾರಾಯಣನ ಗದ್ಯಕೃತಿಗೆ ಎಷ್ಟರ ಮಟ್ಟಿಗೆ ಕಾವ್ಯಸಮಗ್ರಿಯನ್ನು ಒದಗಿಸಿವೆ ಎಂಬುದನ್ನು ಹೇಳುವುದು ಕಷ್ಟ" ಎಂಬ (ಎಚ್. ಎಂ. ಎಸ್. ರಾವ್, ಮಹಾದೇವ-ರವಿನರ್ತಕ, ಉಪಾಯನ, ಪು. ೦೦) ಸಂಶಯ ಬೇಕಾಗಿಲ್ಲ. ಚಂದ್ರಗುಪ್ತನ ಸಂಹಾರಕ್ಕೆ ರಾಕ್ಷಸನು ಶಿಲ್ಪಿ ದಾರುವರ್ಮ ಮುಂತಾದವರ ಮೂಲಕ ಮಾಡಿದ ಪ್ರಯತ್ನಗಳ ಸೂಚನೆಯನ್ನು ಅವನು ಯಥೋಚಿತವಾಗಿ ವಿಸ್ತರಿಸಿರುವುದನ್ನು ಗಮನಿಸಬಹುದು. ಹೀಗಾಗಿ 'ಮುದ್ರಾರಾಕ್ಷಸ' ನಾಟಕದ ಹಾಗೆಯೇ ಅವನಿಗೆ ಬೇರೆ ಕೆಲವು ವೃತ್ತಾಂತಕಥೆಗಳು ಸಹಾಯವಾಗಿವೆ ಎನ್ನಬಹುದು. ಅಲ್ಲಿ ಗೆರೆಗಳಾಗಿ ಬಂದವನ್ನು ಇಲ್ಲಿ ಕನ್ನಡಕವಿ ಸುಂದರಚಿತ್ರವಾಗಿ ಬಣ್ಣಗೂಡಿಸಿದ್ದಾನೆ ; ಆ ಚಿತ್ರಕ್ಕೆ ಒಪ್ಪುವ ಪಾರ್ಶ್ವಭೂಮಿಕೆಯನ್ನೂ ನಿರ್ಮಿಸಿದ್ದಾನೆ.

ಮುದ್ರಾಮಂ.ದ ಕಥೆಯ ವಸ್ತು ಪಾತ್ರ ಸನ್ನಿವೇಶಗಳಲ್ಲಿ ಆಕರ್ಷಣೆಯುಂಟು, ದೌರ್ಬಲ್ಯಗಳೂ ಉಂಟು. ಕೆಲವಂಶಗಳನ್ನು ಗಮನಿಸಬಹುದು.

ಘಟನೆಗಳು ಒಂದು ಗೊತ್ತಾದ ಕ್ರಮವನ್ನು ಕೃತಕವಾಗಿ ಅನುಸರಿಸುತ್ತ, ಉದ್ದೇಶಿತ ಪರಿಣಾಮಗಳನ್ನು ಪಡೆಯುತ್ತ ಸಾಗುತ್ತವೆ. ಚಾಣಕ್ಯನ ಬುದ್ಧಿಕೌಶಲ ಕಾರ್ಯತಂತ್ರಗಳ ಎದುರಿನಲ್ಲಿ ರಾಕ್ಷಸನು ಏನು ಮಾಡಿದರೂ ಅವೆಲ್ಲ ವಿಫಲವಾಗುತ್ತಲೇ ಹೋಗುವುದು ಸ್ವಾಭಾವಿಕ ಎನ್ನುವಂತಿಲ್ಲ. ಹಾಗೆಯೇ ಚಾಣಕ್ಯನೂ ಅವನ ಅನುಚರರೂ ಹೂಡುವ ತಂತ್ರ ಪ್ರತಿತಂತ್ರಗಳೆಲ್ಲ ಯಶಸ್ವಿಯಾಗುವುದೂ ರಾಕ್ಷಸನೂ ಅವನು ಅನುಚರರೂ ಮಾಡುವುದೆಲ್ಲ ಅಯಶಸ್ವಿ ಹಾಗೂ ಅನರ್ಥಕಾರಿ ಆಗುವುದೂ ಸಹ. ಚಾಣಕ್ಯನೂ ಅವನ ಎಲ್ಲ ಅನುಚರರೂ ಬುದ್ಧಿಶಾಲಿಗಳು, ಅತಿಶಯ ಪ್ರತ್ಯುತ್ಪನ್ನಮತಿಗಳು ಎಂಬಂತೆ, ರಾಕ್ಷಸನ ಕಡೆ ಅವಿವೇಕದ ವರ್ತನೆ, ಪ್ರಮಾದಗಳ ಸರಣಿ ಎಂಬಂತೆ ಚಿತ್ರಣವಿರುವುದು ತಾರ್ಕಿಕವೆನ್ನಿಸುವುದಿಲ್ಲ. ಹಾಗೆಯೇ, ಇಲ್ಲಿ ಘನತರವಾದ ರಾಜಕೀಯ ಮತ್ತು ಸೈನ್ಯಕೀಯ ರಹಸ್ಯಗಳು ಉದ್ದೇಶಿತ ವ್ಯಕ್ತಿಗಳಿಗೆ ತಲಪುವುದೂ ಸಂದೇಶಗಳ ವಿನಿಮಯವಾಗುವುದೂ ರಾಜಕಾರ್ಯಗಳ ಆದೇಶ ಹೊರಡುವುದೂ ದೊಡ್ಡ ಅಧಿಕಾರಿಗಳ ವಲಯದಲ್ಲಿ ಅಲ್ಲ, ಚರರು ಚಾರರು ದೂತರ ಮೂಲಕವಾಗಿ ಎನ್ನುವುದು ಸಂವಿಧಾನದ ದೃಷ್ಟಿಯಿಂದ ಕಥೆಯ ದೌರ್ಬಲ್ಯವೆಂದೇ ಹೇಳಬೇಕು.

ಚಾಣಕ್ಯನು ನಾಸ್ತಿಕರನ್ನು ನಿಗ್ರಹಿಸಿ ವೇದಮಾರ್ಗವನ್ನು ಎತ್ತಿ ಹಿಡಿಯಲೆಂದೇ ಚಂದ್ರಗುಪ್ತನ ಪಕ್ಷ ಹಿಡಿದುದಾಗಿ ಹೇಳಿಕೊಳ್ಳುತ್ತಾನೆ (ಆ. ೧೪). ಆದರೆ ಕೃತಿಯೊಳಗೆ ಎಲ್ಲಿಯೂ

ನಾಸ್ತಿಕಪ್ರಾಬಲ್ಯ ತೋರುವುದಿಲ್ಲ. ಪುರಾಣಗಳ ದೈತ್ಯರೇ ಕಲಿಯುಗದಲ್ಲಿ ನಾಸ್ತಿಕರಾಗಿ ಹುಟ್ಟಿ ಜನರನ್ನು ಮರುಳುಮಾಡುತ್ತಿದ್ದಾರೆಂದು ಚಾಣಕ್ಯನಿಂದ ಹೇಳಿಸಿರುವುದಂತೂ ಹಾಸ್ಯಾಸ್ಪದವಾದ್ದು. ಹಾಗೆ ನೋಡಿದರೆ, ಅಮಾತ್ಯ ರಾಕ್ಷಸ ಬ್ರಾಹ್ಮಣನಾಗಿದ್ದು, ಅವನ ಪ್ರಾಧಾನ್ಯದಲ್ಲಿ ರಾಜ್ಯ ಸುಖವಾಗಿತ್ತು, ಆಸ್ತಿಕತೆಗೆ ಪೋಷಕವಾಗಿತ್ತು ಎಂದೇ ತಿಳಿಯುವ ಹಾಗೆ ಕಥನವಿದೆ. ಇದನ್ನು ಲಕ್ಷಿಸಿದರೆ, "ವಿಶಾಖದತ್ತನ ಕೃತಿಯಲ್ಲಿ ಚಾಣಕ್ಯನ ತಂತ್ರ ಕೌಶಲವೆಲ್ಲ ಅಮಾತ್ಯ ರಾಕ್ಷಸನನ್ನು ಚಂದ್ರಗುಪ್ತನ ಮಂತ್ರಿಯಾಗಿಸುವಲ್ಲಿ ವ್ಯಯವಾಗಿ ದ್ದರೆ, ಕೆಂಪುನಾರಾಯಣನ ಕೃತಿಯಲ್ಲಿ ಅದು ಸನಾತನಧರ್ಮಸ್ಥಾಪನೆಗೆ ಸಾಧನವಾಗಿದೆ. ತನ್ಮೂಲಕ ಅದಕ್ಕೆ ಮಹೋದ್ದೇಶದ ಮಹತಿ ಬಂದಿದೆ. ಇದೊಂದು ಅವನು ಮಾಡಿ ಕೊಂಡಿರುವ ಮಹತ್ತ್ವದ ವ್ಯತ್ಯಾಸ" (ಭೀಮರಾವ ಚಿಟಗುಪ್ಪಿ, ಕೆಂಪುನಾರಾಯಣ, 'ವಾಗ್ದೇವಿಯ ಭಾಂಡಾರ ಒಡೆದ ಕನ್ನಡ ಕವಿಗಳು', ಮುಂಬಯಿ, ೧೯೭೪)—ಎಂಬ ಗ್ರಹಿಕೆ ಹೆಚ್ಚಾಯಿತೆಂದೇ ಹೇಳಬೇಕು.

ರಾಕ್ಷಸನ ಹಿರಿಯ ಗುಣಗಳು ಏನೇ ಇರಲಿ, ಅವನು ಸ್ವಾಮಿಭಕ್ತಿಯ ಹೆಸರಿನಲ್ಲಿ ತಪ್ಪಿತಸ್ಥರಾದ ನಂದರನ್ನು ವಹಿಸಿಕೊಂಡು ವರ್ತಿಸಿದ್ದು ಹಾಗೂ ಮೌರ್ಯವಧೆಯ ಸೂಚನೆ ದೊರೆತು ಸಹ ವೃದ್ಧರಾಜನೊಂದಿಗೆ ತೀರ್ಥಯಾತ್ರೆಗೆ ತೆರಳಿದ್ದು ಅವನ ದೌರ್ಬಲ್ಯಗಳೇ ಆಗಿವೆ. ಯಾವುದೇ ಪ್ರಯತ್ನ, ಕಾರ್ಯತಂತ್ರ ವಿಫಲವಾಗುವ ಮೊದಲೇ ಅವನು ತಕ್ಕಂತೆ ಪೂರ್ವಾಪರವಿಮರ್ಶೆ ಮಾಡದೆ, ವಿಫಲವಾದ ಬಳಿಕ ಅದಕ್ಕೆ ಕಾರಣಗಳನ್ನು ಕುರಿತು ತರ್ಕಿಸುವುದೂ ಅವನ ದೌರ್ಬಲ್ಯವೇ. 'ವಿಪ್ರಾತ್ ಪಶ್ಚಿಮಬುದ್ಧಯಃ' ಎಂಬುದಕ್ಕೆ ಆತನೇ ನಿದರ್ಶನ.

ಕಥೆಯ ಉದ್ದಕ್ಕೆ ದೈವದ ಪ್ರಾಬಲ್ಯವನ್ನೂ ಪುರುಷಪ್ರಯತ್ನದ ದೌರ್ಬಲ್ಯವನ್ನೂ ಸ್ಥಾಪಿಸುವ ಪ್ರಯತ್ನ ನಡೆದಿರುವ ಹಾಗೆ ಭಾಸವಾಗುತ್ತದೆ. ಆದರೆ ಚಾಣಕ್ಯನೂ ಬಾಗುರಾಯಣಾದಿಗಳಾದ ಅವನ ಅನುಚರರೂ ಛದ್ಮನೆಯ ಮಾರ್ಗವನ್ನು ಹಿಡಿದು ಚಂದ್ರಗುಪ್ತನಿಗೆ ರಾಜ್ಯವನ್ನು ದೊರಕಿಸಲು ಯತ್ನಿಸಿದ್ದು ಹಾಗೂ ರಾಕ್ಷಸನು ನಂದರ ಪರವಾಗಿ ಹಠಹಿಡಿದು ನಿರಪರಾಧಿಯಾದ ಚಂದ್ರಗುಪ್ತನ ವಧೆಗೆ ತವಕಿಸಿ ತಂತ್ರಗಳನ್ನು ಹೂಡಿದ್ದು ನೋಡಿದರೆ, ದೈವಬಲದಿಂದಾಗಿಯೇ ಚಂದ್ರಗುಪ್ತ ಜಯಶಾಲಿಯಾದನೆಂದೂ ನಂದರ ಹಾಗೂ ಅಮಾತ್ಯನ ಪ್ರಮಾದಗಳೇ ಅವರಿಗೆ ಅಪಜಯವನ್ನು ತಂದವೆಂದೂ ಅದು ಪೌರುಷದ ವೈಫಲ್ಯವೆಂದೂ ಭಾವಿಸುವುದು ಸಹ ಕಷ್ಟವಾಗುತ್ತದೆ.

ಇದು ಏನೇ ಇದ್ದರೂ, ಧೀರೋದಾತ್ತ ತೇಜಸ್ವಿ ವ್ಯಕ್ತಿಗಳಾದ ಈ ಚಾಣಕ್ಯ ರಾಕ್ಷಸರ ಸಂಘರ್ಷ ಕಲಾತ್ಮಕವಾಗಿ ತುಂಬ ರೋಚಕವಾದುದು. ಇಬ್ಬರೂ ಭೇದೋಪಾಯದ ಹಾದಿಯಲ್ಲಿಯೇ ಸಾಗಿದರೂ ಪ್ರಯೋಕ್ತೃವಿನ ಬುದ್ಧಿ, ಕಾರ್ಯನಿರ್ವಾಹದಲ್ಲಿ ರಹಸ್ಯಪಾಲನೆ ಚಾಣಕ್ಯನಲ್ಲಿಯೇ ಮಿಗಿಲಾದವು. "ಅವನ ಕೆಲಸಗಳೆಲ್ಲವೂ ಬಹುಮಟ್ಟಿಗೆ ಗೂಢಚಾರ ರಿಂದ, ವೇಷಧಾರಿಗಳಿಂದ ನಡೆದವು. ಅವನ ನೀತಿ 'ಅಶ್ರುತಗತಿ'. ಅದು ಅನೇಕವೇಳೆ ಅವನ ಗೂಢಚಾರರಿಗೇ ಆದ್ಯಂತವಾಗಿ ತಿಳಿಯುತ್ತಿರಲಿಲ್ಲ. ಆದರೂ ಎಲ್ಲೆಲ್ಲಿಯೂ ಅದರ ಪ್ರಭಾವ ಕಾಣುತ್ತಿತ್ತು ; ಎಲ್ಲಿ ನೋಡಿದರೂ ಅವನ ಶಿಷ್ಯರು ; ಎಲ್ಲಿ ನೋಡಿದರೂ ಅವನು ಹೂಡಿದ ಆಟಗಳು ; ಎಲ್ಲಿ ನೋಡಿದರೂ ಅವನ ಕಣ್ಣು ಕೈ ಕಾಲುಗಳು. ಅವನ

ಕಡೆಯ ಜನರು ಶತ್ರುಪಕ್ಷದ ಪ್ರತಿಯೊಂದು ವ್ಯಕ್ತಿಯನ್ನೂ ಬೆನ್ನಟ್ಟಿದ್ದರು. ರಾಕ್ಷಸನಿಗೆ ಕ್ಷಪಣಕ, ಶಕಟದಾಸನಿಗೆ ಸಿದ್ಧಾರ್ಥಕ, ಮಲಯಕೇತುವಿಗೆ ಬಾಗುರಾಯಣ ಇತ್ಯಾದಿ. ಆದರೆ ಅವರಿಗೆ ಯಾರಿಗೂ ಸಂದೇಹ ಬರಲಿಲ್ಲ. ಇನ್ನು ತನ್ನ ಮರ್ಮವನ್ನಂತೂ ಅವನು ಯಾರಿಗೂ ಪೂರ್ತಿಯಾಗಿ ತಿಳಿಸಿದವನೇ ಅಲ್ಲ ; ಅವನು ಮಹಾಗುಪ್ತ. ಅವನ ನಟನ ಚಾತುರ್ಯವು ಚಂದ್ರಗುಪ್ತನಿಗೂ ಆಶ್ಚರ್ಯವನ್ನುಂಟುಮಾಡಿತು, ಭಯವನ್ನುಂಟು ಮಾಡಿತು."

ಈ ಮಾತುಗಳು 'ಮುದ್ರಾರಾಕ್ಷಸ'ವನ್ನು ಕುರಿತು ಆಡಿದವಾಗಿದ್ದರೂ (ಎ. ಆರ್. ಕೃಷ್ಣಶಾಸ್ತ್ರೀ, 'ಸಂಸ್ಕೃತ ನಾಟಕ', ೧೯೩೭, ಪು. ೧೫೭), 'ಮುದ್ರಾಮಂಜೂಷ'ಕ್ಕೆ ಸಹ ಪೂರ್ತಿಯಾಗಿ ಅನ್ವಯಿಸುತ್ತವೆನ್ನಬಹುದು. ಮುಂದುವರಿದು, ಈ ಮಾತುಗಳು ಸಹ : "ರಾಕ್ಷಸನಿಗೆ ದೈವಬಲವಿಲ್ಲದೆ, ಅವನು ಮುಟ್ಟಿದ್ದು ಮಣ್ಣಾಗುತ್ತಿತ್ತು ; ಅವನಿಗೆ ಸಿಕ್ಕಿದ್ದ ಸಾಧನಸಾಮಗ್ರಿಗಳೂ ಉತ್ತಮವಾಗಿರಲಿಲ್ಲ ; ಅವನ ಕಡೆಯ ಗೂಢಚಾರರು ಚಾಣಕ್ಯನ ಕಡೆಯವರಷ್ಟು ತೀಕ್ಷ್ಣಬುದ್ಧಿಯುಳ್ಳವರಲ್ಲ ; ಮಲಯಕೇತುವಿಗೂ ಚಂದ್ರಗುಪ್ತನಿಗೂ ಅಜಗಜಾಂತರ ; ಚಂದ್ರಗುಪ್ತನು ಚಾಣಕ್ಯನ ಮರಿ ; ಅವರಿಬ್ಬರೂ ಒಂದೇ ವಿಧವಾಗಿ ಚಿಂತಿಸುವರು ; ಸುಳ್ಳುವ್ಯಾಜ್ಯವಾಡಬೇಕಾಗಿ ಬಂದಾಗ ಚಂದ್ರಗುಪ್ತನು ಚಾಣಕ್ಯನ ಜೊತೆಗೂ ನಾಟಕವಾಡುವನು ; ಮಲಯಕೇತುವಿಗೆ ಅಷ್ಟೊಂದು ಬುದ್ಧಿಯಿಲ್ಲ, ವಿವೇಚನೆಯಿಲ್ಲ, ವ್ಯಕ್ತಿಪರಿಜ್ಞಾನವಿಲ್ಲ. ಶೌರ್ಯ ಸಾಹಸಗಳಲ್ಲಿ ಚಾಣಕ್ಯನು ರಾಕ್ಷಸನ ಮುಂದಲ್ಲ ; ಏಕೆಂದರೆ, ಚಾಣಕ್ಯನು ಬರಿಯ ವೈದಿಕಬ್ರಾಹ್ಮಣ ; ರಾಕ್ಷಸನು ಸೇನಾನಿ. ಆದರೆ ಬುದ್ಧಿಯಲ್ಲಿ ಚಾಣಕ್ಯನೇ ಒಂದು ಕೈ ಮೇಲು ; ಅವನು ರಾಕ್ಷಸನ ಬಲಾಬಲಗಳೆಲ್ಲವನ್ನೂ ಗ್ರಹಿಸಿದ್ದನು ; ರಾಕ್ಷಸನು ಚಾಣಕ್ಯನನ್ನು ಅಷ್ಟುಮಟ್ಟಿಗೆ ಅರಿತಿರಲಿಲ್ಲ ; ಅವನ ಸರಳ ಸ್ವಭಾವವು ಚಂದ್ರಗುಪ್ತ ಚಾಣಕ್ಯರ ಸುಳ್ಳುಜಗಳವನ್ನು ನಿಜವೆಂದು ನಂಬಿಸಿತು. ಅವನು ಚಾಣಕ್ಯನಂತೆ ಸಂದೇಹಪ್ರಕೃತಿಯವನಲ್ಲ ; ಋಜುಸ್ವಭಾವದವನು ; ಸಾತ್ತ್ವಿಕ ಸಂಸಾರಿ; ಈ ಮೃದು ಋಜು ಸ್ವಭಾವವು ಅವನ ಕೆಚ್ಚನ್ನು ಕರಗಿಸುತ್ತದೆ, ಹಟವನ್ನು ತಗ್ಗಿಸುತ್ತದೆ, ಅನೇಕ ಕಡೆ ಕಣ್ಣೀರಿಡಿಸುತ್ತದೆ. ಆದರೆ ಚಾಣಕ್ಯನು ಕಲ್ಲೆದೆಯವನು ; ಒಂದು ಕಡೆಯೂ ಒಂದು ಕ್ಷಣವೂ ಅವನ ಕಣ್ಣು ನೆನೆಯುವುದಿಲ್ಲ.

ರಾಕ್ಷಸನ ಸಾತ್ತ್ವಿಕಗುಣವು ಮನೆಯಲ್ಲಿ ಪ್ರೇಮವಾಗಿಯೂ ಮಿತ್ರನಲ್ಲಿ ಸ್ನೇಹವಾಗಿಯೂ ದೀನರಲ್ಲಿ ದಯೆಯಾಗಿಯೂ ರಾಜನಲ್ಲಿ ಭಕ್ತಿಯಾಗಿಯೂ ಕಂಗೊಳಿಸುತ್ತದೆ. ಅವನ ಈ ಸ್ನೇಹ ದಯಾಪರತೆಗಳನ್ನು ಎರೆಯಾಗಿ ಉಪಯೋಗಿಸಿಕೊಂಡು ಚಾಣಕ್ಯನು ರಾಕ್ಷಸನನ್ನು ಹಿಡಿದು ಹಾಕುತ್ತಾನೆ" (ಅದೇ, ಪು. ೧೫೯).

(೪) ಸ್ಥಳೀಯ ಸಂಸ್ಕೃತಿಯ ಸಮ್ಮಿಶ್ರಣ

'ಮುದ್ರಾಮಂಜೂಷ'ದ ಕಥಾವಸ್ತು ಚಂದ್ರಗುಪ್ತ ಚಾಣಕ್ಯರ ರಾಜಕೀಯಸಾಧನೆಯ ಕಥೆಯನ್ನು ತಿರುಳಾಗಿ ಉಳ್ಳುದು. ಭರತಖಂಡದ ಇತಿಹಾಸದಲ್ಲಿ ಉತ್ತರ ಭಾರತದ ನಡುವೆ ಸಿಂಧೂನದಿಯಿಂದ ಹಿಡಿದು ಬಂಗಾಲ ಉಪಸಾಗರದ ವರೆಗೆ ವಿಶಾಲವಾಗಿ ಹಬ್ಬಿದ್ದ ಮಗಧಸಾಮ್ರಾಜ್ಯಕ್ಕೆ ಈ ಕಥೆಯ ವಿವರಗಳು ಸಂಬಂಧಪಟ್ಟಿವೆ. ಎಂದರೆ

ಇಲ್ಲಿಯ ಕಥೆ ಐತಿಹಾಸಿಕವಾದುದು. ನಂದ ಮತ್ತು ಮೌರ್ಯರ ಕಾಲದಲ್ಲಿ ಈ ಮಗಧ ಸಾಮ್ರಾಜ್ಯದ ರಾಜಧಾನಿಯಾದ ಪಾಟಲೀಪುತ್ರ (ಇಂದಿನ ಬಿಹಾರದ ಪಾಟ್ನ) ಮತ್ತು ಸುತ್ತಣ ಕೆಲವು ಪ್ರದೇಶಗಳಲ್ಲಿ ಇಲ್ಲಿಯ ಕಥೆಯ ಘಟನೆಗಳು ಜರುಗಿದುವು. ರಾಜಕೀಯವಾಗಿ ಪ್ರಬಲವೂ ಸಾಂಸ್ಕೃತಿಕವಾಗಿ ವೈಭವಯುತವೂ ಆದ ಮಗಧದಲ್ಲಿ ನಡೆದ ಈ ಘಟನೆಗಳ ಕಾಲಮಾನವನ್ನು ಕ್ರಿ. ಪೂ. ೪೨೫-೩೨೫ ಎಂಬುದಾಗಿ ತಿಳಿಯಬಹುದು. ಮೌರ್ಯವಂಶದವರ ಆಳಿಕೆ ತೊಡಗುವ ಮೊದಲು ನಂದಿವರ್ಧನನಿಂದ ಆರಂಭಿಸಿ ಮಹಾನಂದಿ, ಮಹಾಪದ್ಮ ಸೇರಿದಂತೆ ನವನಂದರು ನಂದಸಾಮ್ರಾಜ್ಯವನ್ನು ಸ್ಥಾಪಿಸಿ ಪ್ರಬಲರಾಗಿದ್ದರು. ಇವರ ಪ್ರಾಬಲ್ಯಕಾಲದ ಸಂಕ್ಷೋಭವೇ ಕಥೆಗೆ ಹಿನ್ನೆಲೆ. ಎಂದರೆ ಕಥೆಯು ಇಂದಿನ ಉತ್ತರ ಭಾರತದ ಬಿಹಾರ ಪ್ರಾಂತದ ನೆರೆಹೊರೆಯ ಪ್ರದೇಶಗಳಿಗೆ ಸೇರಿದ್ದು; ಹಾಗೂ ಕಾಲಮಾನ ಇಂದಿಗೆ ಸು. ೨೩೦೦ ವರ್ಷಗಳಿಗೆ ಹಿಂದಿನದು.

ಹೀಗೆ ಸ್ಥಳ ಕಾಲಘಟ್ಟಗಳ ಪ್ರಾಚೀನತೆಯನ್ನುಳ್ಳ ಕಥಾಸಂದರ್ಭವನ್ನು ನಿರ್ವಹಿಸಿರುವ ಕವಿ ದಕ್ಷಿಣಭಾರತದ ಹಳೆಯ ಮೈಸೂರುಸಂಸ್ಥಾನಕ್ಕೆ ಸೇರಿದವನು ;: ಇಲ್ಲಿಗೆ ೧೭೫ ವರ್ಷಗಳ ಹಿಂದೆ ಜೀವಿಸಿದ್ದವನು. ತಾನು ಆಯ್ಕೆಮಾಡಿದ ಹಳೆಯ ಕಥೆಗೆ ತಕ್ಕ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶವನ್ನು ಪುನರ್ನಿರ್ಮಿಸಿ ಕೊಡಬೇಕಾದ ಗುರುತರವಾದ ಜವಾಬ್ದಾರಿ ಅವನ ಮೇಲಿದೆ. ಅದು ಸಾಧ್ಯವಾಗದಿದ್ದರೆ, ಅವನು ಕಥೆಗಾರನಾಗಿ ಹಾಸ್ಯಾಸ್ಪದನಾಗುತ್ತಾನೆ ; ಭವ್ಯಪರಂಪರೆಯ ಇತಿಹಾಸಕ್ಕೆ ಅನ್ಯಾಯ ಮಾಡಿದವನಾಗುತ್ತಾನೆ.

ನಾರಾಯಣ ಶರ್ಮನು ತನಗೆ ಕಥಾಮೂಲ 'ಪುರಾಣದಲ್ಲಿ ಹೇಳಿದ ಕಥೆ' ಎಂದಿದ್ದಾನೆ. ಇದು ಉಪಚಾರದ ಮಾತು. ರಾಮಾಯಣ ಭಾರತಗಳಿಂದ ಎತ್ತಿದ ಕಥೆ ಉಪಾಖ್ಯಾನಗಳಿಗೆ ಇರುವ ಪ್ರಾಶಸ್ತ್ಯ ಪ್ರಾಮಾಣ್ಯಗಳು ತನ್ನ ಆಯ್ಕೆಯ ಕಥೆಗೆ ಸಹ ಇರಲೆಂಬ ಆಶಯದಿಂದ ಅವನು ಹಾಗೆ ಹೇಳಿರುವಂತಿದೆ. ಪುರಾಣಗಳಲ್ಲಿ ಚಂದ್ರಗುಪ್ತ ಚಾಣಕ್ಯರ ವೃತ್ತಾಂತವಿರುವುದು ಸ್ವಲ್ಪ ಮಾತ್ರವೇ ಎನ್ನುವುದು ಸ್ವಯಂ ವಿದಿತವಾದ್ದರಿಂದ ಅದೇ ತನ್ನ ಪ್ರತ್ಯಕ್ಷ ಕಥಾಮೂಲವೆಂದು ಅವನು ತನ್ನ ಓದುಗರಿಗೆ ಶ್ರುತಪಡಿಸಲಾರ ; ಇತಿಹಾಸದ ಕತೆ ಪುರಾಣಗಳನ್ನು ಹೊಕ್ಕು ಆರ್ಷವೆಂಬ ಮಾನ್ಯತೆ ಪಡೆದಿರುವುದನ್ನು ಅವನು ತನ್ನ ಓದುಗರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ, ಅಷ್ಟೆ. ದಿಟವಾಗಿ ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕ(ಸು. ೪೫೦)ವನ್ನೂ ಮಹಾದೇವ ರವಿನರ್ತಕ ಢುಂಢಿರಾಜರ ಪೂರ್ವ ಕಥಾನಕಗಳನ್ನೂ (ಕ್ರಿ. ಶ. ೧೭೦೦ ಮತ್ತು ಅನಂತರ ಕಾಲ) ವಿಶೇಷವಾಗಿ ಆಶ್ರಯಿಸಿರುವುದರಿಂದ ಅವನ ಕಥಾನಿರ್ವಹಣೆಗೆ ಅವರೇ ಆಧಾರವ್ಯಕ್ತಿಗಳಾಗಿದ್ದಾರೆ. ಯಾವುದೋ ಒಂದು ಪ್ರಮಾಣದಲ್ಲಿ ಕಥೆಗಾರನ ಸ್ವಂತ ಕಲ್ಪನೆ, ಸ್ಥಳೀಯ ಸಾಂಸ್ಕೃತಿಕಸಂಗತಿಗಳು ಸೇರಿರುವುದು ಸ್ವಾಭಾವಿಕವೇ ಆಗಿದೆ. "ಕೆಂಪುನಾರಾಯಣನು ತನ್ನ ಕೃತಿಯನ್ನು ರಮ್ಯ ಕಥಾನಕ ವೃತ್ತಾಂತವನ್ನಾಗಿ ಬರೆಯಬೇಕೆಂದು ಉದ್ದೇಶಿಸಿದ್ದನೇ ಹೊರತು, ಇತಿಹಾಸದ ಇತಿವೃತ್ತವನ್ನಾಗಿ ಅಲ್ಲ." (ಎಚ್. ಎಂ. ಎಸ್. ರಾವ್, ಪೂರ್ವೋಕ್ತ. ಪು. ೩೮). ಆದರೆ ಆತನಿಗೆ ಐತಿಹಾಸಿಕದೃಷ್ಟಿ ಇರಲಿಲ್ಲ ಎನ್ನುವಂತಿಲ್ಲ. ಇತಿಹಾಸದ ಭಿತ್ತಿ ಹಸಗೆಡದಂತೆ, ಡೊಂಕು ಡೊಗರುಗಳು ಬಾರದಂತೆ ಅವನು ಕಾದಂಬರಿಯಾಗಿ ಕಥೆಯನ್ನು ಕಟ್ಟಿ ಬೆಳಸಿ

ದ್ದಾನೆ ; ಕಾದಂಬರಿಕಾರನಾಗಿ ಯಶಸ್ವಿಯೂ ಆಗಿದ್ದಾನೆ.

ಕಥೆಯ ಬೆಳವಣಿಗೆಯಲ್ಲಿ ಸಾಂಗೋಪಾಂಗವಾಗಿ ಘಟನಾವಳಿಯ ವಿಸ್ತಾರ, ಪಾತ್ರಗಳ ಪರಸ್ಪರವಾದ ಸಾಂಗತ್ಯ ಮತ್ತು ಪ್ರಕರಣೋಚಿತವಾಗಿ ವಿಕಾಸ ಎಂಬವುಗಳ ಜೊತೆಗೇ ಸ್ಥಳೀಯ ಸಂಸ್ಕೃತಿಯ ಅಂಶಗಳನ್ನು ಹಗುರವಾಗಿ ಬೆರಸಿರುವುದರಲ್ಲಿ ನಾರಾಯಣ ಶರ್ಮನ ಕೌಶಲವನ್ನೂ ಅನಿವಾರ್ಯತೆಯನ್ನೂ ಗಮನಿಸಬಹುದು. ಈ ಮಿಶ್ರಣ ಆಭಾಸಕರ ಎನ್ನುವ ಹಾಗೆ ಒಂದೆರಡು ಕಡೆ ಕಂಡಿರಬಹುದಾದರೂ, ಉಳಿದ ಮಟ್ಟಿಗೆ ಯಶಸ್ವಿಯಾದ ಪರಿಣಾಮವನ್ನೇ ತಂದಿದೆ. ಹಳೆಯ ಕಥೆಗೆ ತನ್ನ ಕಾಲದ ದೊರೆ ಪ್ರಜೆ ರಾಜ್ಯಗಳ ರೀತಿ ರಿವಾಜುಗಳನ್ನು ಹೊಂದಿಸಿ, ಕಥೆ ಓದುಗರಿಗೆ ಆತ್ಮೀಯವೆನ್ನಿಸುವಂತೆ ಮಾಡುವುದು ಕವಿಯ ಉದ್ದೇಶವಾಗಿರುವಂತಿದೆ. ಇದು ಪಾತ್ರ ಸನ್ನಿವೇಶ ಕಥೆ ಇವನ್ನು ಸಮೂಲವಾಗಿ ಬದಲಿಸಿದ ರೂಪಾಂತರವೆಂಬ ಪ್ರಕಾರವನ್ನು ತಳೆಯದಿರುವುದರಿಂದ, ಕಥೆಗೆ ಒಟ್ಟಿನಲ್ಲಿ ಆಕರ್ಷಣೆ ಹೆಚ್ಚಿದೆಯೆನ್ನಬೇಕು.

ಕೆಲವು ಉದಾಹರಣೆಗಳನ್ನು ನೋಡಬಹುದು : ತನ್ನ ಮೇಲೆ ದಂಡೆತ್ತಿ ಬರಲಿರುವ ಲಂಪಾಕಾಧಿಪತಿಯ ಪ್ರಯತ್ನವನ್ನು ಭಂಗಮಾಡಲು ತನ್ನ ಸೇನೆ ಶರಾವತಿಯ ತೀರದಲ್ಲಿ ಇಳಿಯಬೇಕೆಂದು ಪರ್ವತರಾಜನು ಮಂತ್ರಿ ಶಬರವರ್ಮನಿಗೆ ಅಪ್ಪಣೆ ಮಾಡಿದನೆಂದಿದೆ (ಆಶಯ ೪). ಲಂಪಾಕ ಮತ್ತು ಪರ್ವತರ ರಾಜ್ಯಗಳು ಉತ್ತರ ಭಾರತದ ಸೀಮೆಗಳು ; ಶರಾವತಿ ಅಘನಾಶಿನಿಗಳು ಇಂದಿನ ಶಿವಮೊಗ್ಗ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹರಿಯುವ ಕರ್ನಾಟಕದ ನದಿಗಳು. ಪುರಾಣಪ್ರಸಿದ್ಧಿಯಿಂದಾಗಿ ಕವಿ ಅವನ್ನು ಎಗ್ಗಿಲ್ಲವೆಂದು ಬಳಸಿ ದಂತಿದೆ.

ಪರ್ವತರಾಜನು ಚಂದ್ರಗುಪ್ತ ಚಾಣಕ್ಯರೊಂದಿಗೆ ಪಾಟಲೀಪುತ್ರದ ಮೇಲೆ ದಂಡೆತ್ತಿ ಬಂದಾಗ ಅಲ್ಲಿಯ ಬ್ರಾಹ್ಮಣರು ಕನ್ನಡ ತೆಲುಗು ತಮಿಳು ಭಾಷೆಗಳಲ್ಲಿ ಸಂಭಾಷಿಸುತ್ತಿದ್ದ ರೆಂದು ಹೇಳಿದೆ (ಆಶಯ ೭). ಪರ್ವತರಾಜನು ಗಯೆಯಿಂದ ಹೊರಟು ಕಾಶಿಯೆಡೆಗೆ ಬರುತ್ತಿದ್ದ ಸಂದರ್ಭವೆಂದಿರುವುದರಿಂದ ದಕ್ಷಿಣದ ಭಾಷೆಗಳ ಪ್ರಸಕ್ತಿ ಅಲ್ಲಿಗೆ ಹೊಂದು ವುದಿಲ್ಲ ; ಅಲ್ಲದೆ ಕಥೆಯ ಕಾಲದಲ್ಲಿ ಈ ಭಾಷೆಗಳ ಸ್ಥಿತಿಗತಿಗಳು ಅನಿರ್ದಿಷ್ಟವೆಂಬು ದನ್ನೂ ನೆನಪಿಡಬೇಕು. ಬ್ರಾಹ್ಮಣಕವಿಯಾಗಿ, ಬ್ರಾಹ್ಮಣರ ದೌರ್ಬಲ್ಯವನ್ನು ಬಲ್ಲವನಾಗಿ, ಈ ಸಂವಾದವನ್ನು ತಂದಿದ್ದರೂ ಇದರಿಂದ ಕಥಾಗತಿಯ ಗಾಂಭೀರ್ಯ ಕುಗ್ಗಿರುವುದಂತೂ ನಿಜ. (ಇದಕ್ಕೆ ಮುಂದೆ ಬಂದಿರುವ ಪೌರಸ್ತ್ರೀಯರ, ವರ್ತಕರ ಸಂಭಾಷಣೆಗಳು ಸಹ ಹೀಗೆಯೇ. ಆದರೆ ಇವು ಹಸ್ತಪ್ರತಿಗಳಲ್ಲಿಲ್ಲದೆ ಪ್ರಚಲಿತಪರಿಷ್ಕರಣದಲ್ಲಿ ಮಾತ್ರವೇ ಕಾಣುವ ಅಧಿಕಪ್ರಸಂಗಿತನದ ಪ್ರಕ್ಷೇಪಗಳು. ಅವುಗಳ ಭಾಷಾಶೈಲಿಗಳು ಸಹ ಕಾದಂಬರಿಯ ಉಳಿದ ಭಾಗಗಳ ಹಳಮೆ ಗಾಂಭೀರ್ಯ ಪ್ರೌಢಿಮೆಗಳನ್ನು ಒಳಕೊಳ್ಳದೆ ನವೀನವೂ ಶಿಥಿಲವೂ ಗ್ರಾಮ್ಯವೂ ಆಗಿ ತೋರುತ್ತವೆ.)

ಚಂದ್ರಗುಪ್ತನ ಮೇಲೆ ಭದ್ರಭಟಾದ್ಯರು ಕೋಪಿಸಿಕೊಂಡು ಹೋಗಲು, ಚಾಣಕ್ಯನು ಅವರ ಕೈಕೆಳಗಿನ ಸರದಾರರಿಗೆ ಕರೆತರುವಂತೆ ಹೇಳಿ ಕಳಿಸುತ್ತಾನೆಂದಿದೆ (ಆ. ೧೩). ಅವರು ಲಕ್ಷ್ಮನೋಜಿ, ವಿಜಯಶಿಂಗು ಮೊದಲಾದ ಹೆಸರಿನವರು. ಈ ಹೆಸರುಗಳಲ್ಲಿ ಒಂದಾ ದರೂ ಮೌರ್ಯರ ಕಾಲದ ಹೆಸರುಗಳಾಗಿ ತೋರುವುದಿಲ್ಲ. ಪ್ರತಿಯಾಗಿ, ಮೈಸೂರಿನ

ಹೈದರ್ ಟಿಪ್ಪುಗಳ ಕಾಲದಲ್ಲಿ ದಕ್ಷಿಣದ ಸಂಸ್ಥಾನಿಕರ ಸೇವೆಯಲ್ಲಿರುತ್ತಿದ್ದ ಹಿಂದೂ ಮುಸಲ್ಮಾನ ಹೆಸರುಗಳಾಗಿ ತೋರುವುದು ಸ್ಪಷ್ಟ.

ಕಥೆಯ ನಡುನಡುವೆ ಬಂದಿರುವ ಸ್ಥಳನಾಮಗಳು ಹಳೆಯ ಮೈಸೂರುಸಂಸ್ಥಾನದ ಹಳ್ಳಿಗಳನ್ನೇ ನೆನಪಿಸುವಂತಿವೆ. ಮುನವಳ್ಳಿ ಕಣಿವೆ ಮತ್ತು ತೋಟ (ಆ. ೬. ೧೧), ಹೊನ್ನಗಟ್ಟ (ಆ. ೫) ಇಂಥವನ್ನು ನೆನೆಯಬಹುದು. ಆದರೆ ಇವು ಹೆಚ್ಚಾಗಿಲ್ಲ. ಮುನವಳ್ಳಿ ಮಳವಳ್ಳಿಯನ್ನೋ ಹೊನ್ನಗಟ್ಟ ಕನಕಗಿರಿ, ಹೊನ್ನವಳ್ಳಿ ಇಲ್ಲವೆ ಹೊನ್ನಾವರವನ್ನೋ ನೆನಪಿಸಬಹುದು ; ಸುಂದರ ಗಡ (ಆ. ೬) ಬಹುಶಃ ಚನ್ನಪಟ್ಟಣದ ಛಾಯೆಯಿರಬಹುದು. ವಾಣೀವಿಲಾಸವೆಂಬ ತೊಟ್ಟಿ (ಆ. ೯) ಮೈಸೂರರಮನೆಯ ಒಂದು ಭಾಗವೇ : ಕುಮಾರ ಭವನವೂ (ಆ. ೯) ಹೀಗೆಯೇ ಇದ್ದೀತು. ಪರ್ವತರಾಜನು ಯುದ್ಧಪ್ರಯಾಣಕ್ಕೆ ಸಜ್ಜು ಮಾಡಿದ ಅಳಗಿರಿಯೆಂಬ ಮದ್ದಾನೆಯ (ಆ. ೪) ಹೆಸರು ದಾಕ್ಷಿಣಾತ್ಯವಾದ್ದು ಎಂಬುದು ನಿಸ್ಸಂಶಯ. ತುಂಡು ಪಾಳೆಯಗಾರರು (ಆ. ೪), ಹುಂಡಿ (ಆ. ೫), ಫೌಜು (ಆ. ೭), ಬಂಗಾರದವಳು (ಆ. ೮), ಬಂಗಾರದವಳ ಮಗ (ಆ. ೮), ಸೈನ್ಯದ ಗಣಿತಿ, ತಿಂಗಳ ಸಂಬಳ (ಆ. ೧೧), ಅಮ್ಮಣ್ಣಿಯವರು (ಆ. ೧೧), ಕಟ್ಟುಕರಣಿಕ, ಆಯಕಟ್ಟು (ಆ. ೧೨), ಹುಂಡಿಯ ಕಾಗದದ ವ್ಯವಸ್ಥೆ (ಆ. ೧೩), ಮುಖಾಶೀ ಗ್ರಾಮ (ಆ. ೧೩), ದಂಡಿನ ಉಕ್ಕಡ (ಆ. ೧೪), ಅವಸರದವನು (ಆ. ೧೫), ಲಕ್ಕೋಟಿನ ಕಾಗದ, ಮೊಹರು (ಆ. ೧೭) ಇತ್ಯಾದಿ ಮಾತುಗಳೂ 'ಜೀಯಾ', 'ಬುದ್ಧಿ', 'ಹೌದು ಬುದ್ಧಿ', 'ಪಾದಕ್ಕೆ ಅಡ್ಡಬಿದ್ದೆ', 'ಸ್ವಾಮಿಯವರ ಅನ್ನಪ್ರಭಾವ', 'ದೇವರೇ' ಇಂತಹ ಆಸ್ಥಾನಮರ್ಯಾದೆಯ ಸಂಬೋಧನೋಕ್ತಿಗಳೂ ಕವಿಯ ಜೀವಿತಕಾಲದ ವಾಗ್ರೂಢಿಗಳು ; ಕವಿ ತಾನು ಹುಟ್ಟಿ ಬೆಳೆದ ಕಾಲ ಮತ್ತು ಆವರಣಗಳ ಶಿಶು ಎನ್ನುವುದನ್ನು ಹೇಳುವಂಥವು. ಯುದ್ಧಸನ್ನಿವೇಶಗಳಲ್ಲಿ ಮೇಲಿಂದ ಮೇಲೆ ಬಂದಿರುವ ಫಿರಂಗಿ, ತುಪಾಕ, ಮದ್ದು ಗುಂಡುಗಳು ಇವುಗಳ ಪ್ರಸ್ತಾಪ (ಆ. ೫, ೬, ೮ ಇ.) ಕಾಲೋಚಿತವಲ್ಲವೆನ್ನಬೇಕು ; ಏಕೆಂದರೆ ಕ್ರಿ. ಪೂ.ದಲ್ಲಿ ಬಳಕೆಯಲ್ಲಿಲ್ಲದ ಯುದ್ಧ ಸಾಮಗ್ರಿಗಳು, ಅವು. ಏನಾದರೊಂದು ಸಂತೋಷಾರ್ಥವಾಗಿ ಫಿರಂಗಿಗಳನ್ನು ಹಾರಿಸುವುದು (ಆ. ೮), ಉತ್ಸವಗಳು ನಡೆದಾಗ ಪ್ರಜೆಗಳಿಗೆ ಸಕ್ಕರೆ ಬೀರಿಸುವುದು (ಆ. ೫), ಮೈಸೂರರಮನೆಯ ಪರಿಚಿತ ವಿದ್ಯಮಾನ. ಹಾಗೆಯೇ ಸಂಬಳದ ವಿತರಣೆ ಸಂಬಂಧವಾಗಿ ಜೀತಗಳನ್ನು ಕಟ್ಟಿ ಇರಿಸುವುದು ಮತ್ತು ಹುಂಡಿಯ ಕಾಗದ ಬರೆಯಿಸುವುದು (ಆ. ೧೩) ಇಂಥವೂ ಹೀಗೆಯೇ ಇರುವಂತೆ ತೋರುತ್ತವೆ. ಹೀಗಿದ್ದು ಸಹ, ಹೈದರ್ ಟಿಪ್ಪುಗಳ ಕಾಲದ ರಾಜಕೀಯ ವಿಪ್ಲವಗಳ, ಸಾಮಾಜಿಕ ಕಟ್ಟುಪಾಡುಗಳ ಪ್ರತಿಫಲನೆಗಳೇನೂ ಎದ್ದು ತೋರುವ ಮಟ್ಟಿಗೆ ಎಲ್ಲಿಯೂ ಕಂಡುಬಂದಿಲ್ಲ.

ಹೀಗಿದ್ದೂ ಯುದ್ಧವರ್ಣನೆಗಳಲ್ಲಿ ಫಿರಂಗಿಯುದ್ಧದ ಸಂರ್ಭಗಳನ್ನು ವೈಖರಿಯಿಂದ ವರ್ಣಿಸುವುದು, ಅಪರಾಧಿಗಳಿಗೆ ಕಶೆಗಳಿಂದ ಪ್ರಹಾರ ಮಾಡುವುದು, ನಂದನಿರ್ಯಾಣದ ಅನಂತರದಲ್ಲಿ ಅಂತಃಪುರದ ಜನರ ವಿಷಯದಲ್ಲಿ ಮ್ಲೇಚ್ಛರ ಉಪದ್ರವವನ್ನು ಶಂಕಿಸಿ ಆತಂಕಪಟ್ಟುದು ಇಂತಹ ಒಂದೆರಡು ಕಡೆಗಳಲ್ಲಿ, ಇಮ್ಮಡಿ ಕೃಷ್ಣರಾಜ ಒಡೆಯರ್ (೧೭೩೪-೬೬) ಮತ್ತು ನಂಜರಾಜ ಒಡೆಯರ್ (೧೭೬೬-೭೦), ಬೆಟ್ಟದ ಚಾಮರಾಜ ಒಡೆಯರ್ (೧೭೭೦-೭೬) ಹಾಗೂ ಖಾಸಾ ಚಾಮರಾಜ ಒಡೆಯರ್ (೧೭೭೬-೯೬) ಈ

ದೊರೆಗಳ ಅವಧಿಯಲ್ಲಿ ಪ್ರಬಲಿಸಿ, ಕಾಲಕ್ರಮದಲ್ಲಿ ಸರ್ವಾಧಿಕಾರಿಗಳಾಗಿ, ಜರುಗಿಸಿದ ಕಠಿನವಾದ ಕ್ರಮಗಳ ಪ್ರತಿಫಲನಗಳನ್ನು ಕೆಲಮಟ್ಟಿಗೆ ಕಾಣಬಹುದಾಗಿದೆ. ಇಮ್ಮಡಿ ಕೃಷ್ಣರಾಜರ ಪತ್ನಿ ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಹೈದರ್-ಟಿಪ್ಪುಗಳ ದೆಸೆಯಿಂದ ಉಂಟಾದ ಉಪಟಳವನ್ನು ಸಹಿಸಿ, ಅದರಿಂದ ಬಿಡುಗಡೆ ಪಡೆಯಲು ಶ್ರಮಿಸಿ, ಅದರಲ್ಲಿ ಯಶಸ್ವಿಯಾದ ಸಂಘರ್ಷದ ಕಥೆಯನ್ನು, ಮ್ಲೇಚ್ಛಪ್ರಾಬಲ್ಯವು ನಿರಸನಗೊಂಡು ಹಿಂದೂ ಸಾಮ್ರಾಜ್ಯ ಮತ್ತೆ ಮೈಸೂರುಸಂಸ್ಥಾನದಲ್ಲಿ ಸುಸ್ಥಿರಗೊಳ್ಳಲು ಆಕೆ ವಹಿಸಿದ ಪಾತ್ರವನ್ನು ಮುದ್ರಾಮುಂಜೂಷದ ಕರ್ತೃ ಖಂಡಿತವಾಗಿಯೇ ಬಲ್ಲವನಾಗಿರಬೇಕು. ಅವನು ಎತ್ತಿಕೊಂಡ ಕಥೆಯ ಸ್ತ್ರೀಪಾತ್ರಗಳಲ್ಲಿ ಆಕೆಯ ಕಾರ್ಯಶಕ್ತಿಯನ್ನು ಆವಾಹಿಸುವುದಕ್ಕೆ ಅವನಿಗೆ ತಕ್ಕ ಅವಕಾಶವಿರಲಿಲ್ಲವೆಂದು ಕಾಣುತ್ತದೆ. ಆದರೂ ದರ್ಪಿಷ್ಠರಾದ ನಂದರ ಅರಸೊತ್ತಿಗೆಯನ್ನು ಕೊನೆಗೊಳಿಸಿ ಚಂದ್ರಗುಪ್ತನನ್ನು ಅರಸನನ್ನಾಗಿ ಮಾಡಿದ ಒಂದು ಪ್ರಮುಖವಾದ ಘಟನೆ ಪರೋಕ್ಷವಾಗಿ ಹೈದರ್-ಟಿಪ್ಪುಗಳ ಸರ್ವಾಧಿಕಾರಿತ್ವ ಕೊನೆಗೊಂಡು ಮುಮ್ಮಡಿ ಕೃಷ್ಣರಾಜರು ದೊರೆಗಳಾಗುವಂತೆ ಒದಗಿಬಂದ ಸಂದರ್ಭವಿಶೇಷವನ್ನು ಕೆಲಮಟ್ಟಿಗೆ ನೆನಪು ಮಾಡುತ್ತದೆ. ಹಾಗೆ ನೋಡಿದರೆ, ಚಂದ್ರಗುಪ್ತನಿಗೆ ಪಟ್ಟವಾದ ಸಂದರ್ಭದ ವರ್ಣರಂಜಿತನಿರೂಪಣೆ ಬಹುಶಃ ಮುದ್ರಾಮಂಜೂಷದ ಕರ್ತೃ ತಾನು ಕೇಳಿ ಬಲ್ಲ ಮುಮ್ಮಡಿಯವರ ಪಟ್ಟಾಭಿಷೇಕಮಹೋತ್ಸವವನ್ನು ಹಾಗೂ ಸ್ವತಃ ನೋಡಿ ಬಲ್ಲ ಆ ಮುಂದಿನ ವರ್ಷವರ್ಧಂತ್ಯುತ್ಸವಗಳನ್ನು ನೆನಪು ಮಾಡಿಕೊಂಡು ಬರೆದ ವಿಸ್ತೃತಕಥನವಿರಲೂಬಹುದು.

(೫) ಭಾಷೆ ಶೈಲಿಗಳು

ನಾರಾಯಣ ಶರ್ಮನ 'ಮುದ್ರಾಮಂಜೂಷವು' ೧೯ನೆಯ ಶತಮಾನದ ಪೂರ್ವಭಾಗದಲ್ಲಿ ಒಡೆಯರ ಆಳ್ವಿಕೆಯ ವಳಿತದೊಳಗಿನ ಮೈಸೂರುಸೀಮೆಯ ಕಡೆ, ಜನಸಾಮಾನ್ಯರ ನಡುವೆ ಬಳಕೆಯಾಗಿದ್ದ ಹೊಸಗನ್ನಡ ಭಾಷೆಯಲ್ಲಿ ರಚಿತವಾಗಿರುವ ಒಂದು ಗದ್ಯಗ್ರಂಥ. ಜನಸಾಮಾನ್ಯರ ಬಳಕೆಯ ಭಾಷೆಯೆಂದರೂ ಆಡುಮಾತು ಎಂದೋ ಗ್ರಾಮ್ಯವೆಂದೋ ಹೇಳುವಂತಿಲ್ಲ ; ಸಂಸ್ಕೃತ ಕನ್ನಡ ಸಾಹಿತ್ಯಗಳ ಭಾಷಾಶೈಲಿಗಳನ್ನು ಅಧ್ಯಯನ ಅಧ್ಯಾಪನಗಳ ಮೂಲಕ ರೂಢಿಸಿಕೊಂಡಿದ್ದ ವಿದ್ಯಾವಂತರ ಪ್ರೌಢಿಮೆಯ ಗ್ರಂಥಸ್ಥಭಾಷೆಯೆಂದೇ ತಿಳಿಯುವುದು ಸೂಕ್ತ. ಗ್ರಂಥವು ಗದ್ಯಗ್ರಂಥವಾಗಿರುವುದರಿಂದಲೂ ಕಥನದ ವಿಷಯ ಐತಿಹಾಸಿಕತೆ ಕಲ್ಪನೆಗಳು ಬೆರೆತ ಒಂದು ಕಥೆಯೇ ಆಗಿರುವುದರಿಂದಲೂ ಪ್ರೌಢಿಮೆಯೊಂದಿಗೆ ಲಾಲಿತ್ಯವೂ ಸೇರಿಕೊಂಡಿದ್ದು, ಭಾಷೆಯ ಹೊಸಗನ್ನಡತನ ಎದ್ದು ತೋರುತ್ತದೆ. ಪದ್ಯನಿಬದ್ಧವೋ ಪದ್ಯಗದ್ಯಸಮ್ಮಿಶ್ರವೋ ಆದ ಕಾವ್ಯಗ್ರಂಥವೇ ಆಗಿದ್ದ ಪಕ್ಷದಲ್ಲಿ ಅಲ್ಲಿ ಇಷ್ಟರಮಟ್ಟಿಗೆ ಹೊಸಗನ್ನಡತನವನ್ನು ಸ್ಫುಟಗೊಳಿಸುವುದು ಸಾಧ್ಯವಿರಲಿಲ್ಲ.

ಈ ಗದ್ಯಗ್ರಂಥದ ಕರ್ತೃ ಜೀವಿಸಿದ್ದ ಕಾಲದ ಕನ್ನಡ ಸಾಹಿತಿಗಳ ರಚನೆಗಳನ್ನು, ವಿಶೇಷವಾಗಿ ಗದ್ಯರಚನೆಗಳನ್ನು ಪರಿಶೀಲಿಸಿದರೆ, ಅವುಗಳಲ್ಲಿ ಕಂಡುಬರುವ ಭಾಷಾಶೈಲಿಗಳ ಸ್ವರೂಪವನ್ನೇ 'ಮುದ್ರಾಮಂಜೂಷ'ದ ಭಾಷಾಶೈಲಿಗಳು ಸಹ ಹೋಲುವುದೂ ಒಳಕೊಂಡಿರುವುದೂ ಕಾಣುತ್ತದೆ. ಕರ್ತೃ ಕನ್ನಡ ಮನೆಮಾತಿನ ಹೊಯ್ಸಳ ಕರ್ಣಾಟಕ

ರೆಂಬ ಬ್ರಾಹ್ಮಣರ ಪಂಗಡಕ್ಕೆ ಸೇರಿದವನಾಗಿರುವುದರಿಂದ ಆ ಪಂಗಡದವರು ತಮ್ಮ ಮನೆಗಳಲ್ಲಿ ಬಳಸುವ ವಿಶಿಷ್ಟವಾದ ಶಬ್ದಗಳೂ ನುಡಿಗಟ್ಟುಗಳೂ ವಾಕ್ಯವಿನ್ಯಾಸಗಳೂ ಇಲ್ಲಿ ಸಹ ಸೇರಿಕೊಂಡಿರುವುದು ಸ್ವಾಭಾವಿಕವೇ ಆಗಿದೆ.

ಕನ್ನಡ ಸಾಹಿತ್ಯದಲ್ಲಿ ಗದ್ಯದ ಬೆಳವಣಿಗೆಯನ್ನು ಗಮನಿಸಿದರೆ, ಚಿಕ್ಕದೇವರಾಜರ (೧೬೭೨-೧೭೦೪) ಕಾಲದಲ್ಲಿ ರಚಿತವಾದ ಚಿಕ್ಕದೇವರಾಜರ ಹಾಗೂ ತಿರುಮಲಾರ್ಯ ಚಿಕ್ಕುಪಾಧ್ಯಾಯರ ಕನ್ನಡ ಗದ್ಯಗ್ರಂಥಗಳು ಭಾಷಾಶೈಲಿಗಳಲ್ಲಿ ಹಳೆಯ ಕಾಲದ ಹಳಗನ್ನಡದ ಧೋರಣೆಯಿಂದಲೇ ಕೂಡಿದವು ಎನ್ನುವುದು ವಿದಿತ. ಅವುಗಳಲ್ಲಿ ವಾಚನದ ದೃಷ್ಟಿಯಿಂದ ವಾಕ್ಯರಚನೆಯಲ್ಲಿ ಸರಸತೆಯ ಗುಣವಿದ್ದರೂ, ವೈಯಾಕರಣವಾಗಿ ಅವು ಹಳಗನ್ನಡದ ಭಾಷಾಮರ್ಯಾದೆ ಪ್ರೌಢಿಮೆಗಳನ್ನೇ ಪ್ರಕಟಿಸುತ್ತವೆ. ಈ ದೃಷ್ಟಿಯಿಂದ ಆ ಕಾಲವನ್ನು ಹಳಗನ್ನಡದ ಪುನರುಜ್ಜೀವನದ ಕಾಲ, ನವ-ಅಭಿಜಾತ ಕನ್ನಡ ಸಾಹಿತ್ಯದ ಕಾಲ ಎಂಬುದಾಗಿಯೇ ಹೇಳುವುದು ಸರಿಯಾಗಿದೆ.

ಈಚೆಗೆ ದೊಡ್ಡ ಕೃಷ್ಣರಾಜರ (೧೭೧೩-೩೧) ಹಾಗೂ ಇಮ್ಮಡಿ ಕೃಷ್ಣರಾಜರ (೧೭೩೪-೬೬) ಆಳ್ವಿಕೆಯ ಅವಧಿಯಲ್ಲಿ ಬದುಕಿ ಕೃತಿರಚನೆ ಮಾಡಿದ ಸಿಂಹಗಿರಿ ಕೃಷ್ಣಮಾಚಾರ್ಯ, ಚೆನ್ನಯ್ಯ, ಲಕ್ಷ್ಮಕವಿ, ಚೆಲುವಾಂಬೆ, ಕಳಲೆ ನಂಜರಾಜ ಈ ಕೆಲವರು ಕವಿಗಳ ಗದ್ಯರಚನೆಗಳಲ್ಲಿ ಭಾಷಾಶೈಲಿಗಳು ಹಳಗನ್ನಡ-ನಡುಗನ್ನಡಗಳ ವಾಗ್ಧೋರಣೆಯನ್ನು ಸಡಿಲಗೊಳಿಸಿ ಹೊಸಗನ್ನಡದತ್ತ ಹೊರಳುತ್ತಿರುವುದುನ್ನು ಕಾಣಬಹುದಾಗಿದೆ ; ಎಂದರೆ ಮಿಶ್ರಭಾಷಾ ಶೈಲಿಯೇ ಇಲ್ಲಿ ಸಹಜಲಕ್ಷಣ. ಹೀಗಿದ್ದು ಸಹ, ಚೆಲುವಾಂಬೆಯ ಹೆಸರಿನಲ್ಲಿರುವ 'ತುಲಾಕಾವೇರೀ ಮಹಾತ್ಮ್ಯ' ಎಂಬ ಗದ್ಯರೂಪದ ವ್ಯಾಖ್ಯಾನಗ್ರಂಥ ಅಮಿಶ್ರಭಾಷಾ ಲಕ್ಷಣದ ನಮ್ಮ ಕಾಲದ ಹೊಸಗನ್ನಡ ಭಾಷೆ ಶೈಲಿಗಳಲ್ಲಿರುವುದುಂಟು ; ಆದರೆ ಈ ಕೃತಿ ಈಚಿನ ಕಾಲದ ಯಾರಾದರೊಬ್ಬ ಕವಿ ತಾನೇ ಬರೆದು ಆಕೆಯ ಹೆಸರಿಗೆ ಅಂಕಿತಗೊಳಿಸಿದ್ದರೆ ಆಶ್ಚರ್ಯವಿಲ್ಲ.

ಇನ್ನೂ ಈಚೆಗೆ ಮುಮ್ಮಡಿ ಕೃಷ್ಣರಾಜರ (೧೭೯೪-೧೮೬೮) ಕಾಲದಲ್ಲಿ, ಗದ್ಯಗ್ರಂಥಗಳು ರಚನೆ ಪ್ರಚಾರಗಳಲ್ಲಿ ಹೆಚ್ಚಿ, ಕನ್ನಡ ಗದ್ಯದ ಇತಿಹಾಸದಲ್ಲಿ ಸ್ವರ್ಣಯುಗವೇ ಪ್ರವರ್ತಿಸಿತು. ಚಿಕ್ಕದೇವರಾಜರ ಅನಂತರದ ದೊರೆಗಳ ಕಾಲದಲ್ಲಿ ಸಾಮಾನ್ಯವಾಗಿ ಕಂಡುಬರುವ ಮಿಶ್ರಭಾಷಾಶೈಲಿಯ ಸಾಲಂಕೃತಗದ್ಯವೂ ಜನಸಾಮಾನ್ಯಪ್ರಚಲಿತ ಸರಳ ಗದ್ಯವೂ ಸಮಾನಾಂತರವಾಹಿನಿಗಳಾಗಿ ಹರಿದಂತೆ ತೋರುವುದು. ಮೊದಲನೆಯದು ಆಸ್ಥಾನಕವಿಗಳ ಕೃತಿಗಳಲ್ಲಿ, ಅದು ಸ್ವತಂತ್ರ ರಚನೆಯಿರಬಹುದು ಇಲ್ಲವೆ ವ್ಯಾಖ್ಯಾನವಿರಬಹುದು, ಸಾಮಾನ್ಯವಾಗಿ ಕಂಡುಬಂದರೆ, ಎರಡನೆಯದು ಗ್ರಾಮೀಣರ ಸಾಹಿತ್ಯ ಆಡುಮಾತುಗಳಲ್ಲಿ ಗುರುತಿಸುವುದಾಗಿರುತ್ತದೆ. ಒಂದರಲ್ಲಿ ಇನ್ನೊಂದರ ಹೊಳಹು ಪ್ರತಿಫಲಿಸಿರುವುದೂ ಸಾಧ್ಯ. ದೇವಚಂದ್ರನ 'ರಾಜಾವಳೀಕಥಾಸಾರ'ದಲ್ಲಿ ಈ ವಾಹಿನಿಗಳು ವಿಲಕ್ಷಣವಾಗಿ ಬೆರೆತಿರುವುದನ್ನು ಕಾಣಬಹುದು.

ಮುಮ್ಮಡಿಯವರ 'ಶಾಕುಂತಲ ನಾಟಕದ ನವೀನಟೀಕೆ' ಮತ್ತು ಅಂತಹ ಟೀಕೆ ವ್ಯಾಖ್ಯಾನ ಗದ್ಯರಚನೆಗಳಲ್ಲಿ, ಅವರ ಕಾಲದ ಹಾಗೂ ಪ್ರತ್ಯಕ್ಷ ಆಶ್ರಯದ ಚಂದ್ರಸಾಗರ ವರ್ಣಿ, ರಾಮಕೃಷ್ಣಶಾಸ್ತ್ರಿ, ದೇವಲಾಪುರದ ನಂಜುಂಡ, ನಾರಾಯಣ ಶರ್ಮ ಈ ಕೆಲವರ

ಟೀಕೆ ವ್ಯಾಖ್ಯಾನ ಹಾಗೂ ಸ್ವತಂತ್ರರೂಪದ ಗದ್ಯರಚನೆಗಳಲ್ಲಿ ಒಂದು ಸಹಜಲಕ್ಷಣವಾಗಿ ಮಿಶ್ರಭಾಷಾಧೋರಣೆಯ-ಸಾಲಂಕೃತಗದ್ಯವೂ ಅಚ್ಚ ದೇಸಿಯೆಂಬ ಗದ್ಯವೂ ಗೋಚರಿಸಿವೆ. ಇಲ್ಲಿಯ ಭಾಷೆ ಆಸ್ಥಾನಕವಿಗಳು ಮುಮ್ಮಡಿಯವರ ಕಾಲದಲ್ಲಿ ಬಳಸಿ ಬಳಕೆಗೆ ಬಂದುದು ಮಾತ್ರವಲ್ಲ ; ಒಟ್ಟಾರೆ ಕಾಲವೂ ಸಮುದಾಯವೂ ಕೂಡಿ ಪಡಿಮೂಡಿಸಿದ ಗ್ರಂಥಸ್ಥಭಾಷೆಯೂ ಆಗಿದೆ. ಆದರೂ ಸಾಹಿತ್ಯಕ್ಷೇತ್ರದಲ್ಲಿ ಸಂಸ್ಕೃತ ವಿದ್ಯಾವಂತರ ಪ್ರಭಾವ ಕಾರಣವಾಗಿ, ದೇಸಿಗಿಂತ ಮಾರ್ಗದ ಪ್ರೌಢಿಮೆಗೆ, ಸಹಜತೆಗಿಂತ ಕೃತಕತೆಗೆ ಮನಸೋತ ಶೈಲಿಲಕ್ಷಣ ವಿರಳವಾಗಿಯಾದರೂ ಎದ್ದು ತೋರುತ್ತದೆ. "ವ್ಯವಸ್ಥೆಗೆ ಮುಂಚಿನ ಸಿದ್ಧತೆಯ ಲಕ್ಷಣಗಳಿವೆ. ಸೌಷ್ಠವವೂ ಪರಿಪುಷ್ಟವೂ ಸಮರ್ಪಕವೂ ಆದ ಹೊಸಗನ್ನಡ ಗದ್ಯದ ಮುನ್ಸೂಚನೆಗಳಿವೆ" ಎಂಬ ಮಾತು (ದೇಜಗೌ, 'ಗದ್ಯಶೈಲಿ,' ಪು. ೨೩೪) ಸೂಕ್ತವಾಗಿದೆ.

'ಮುದ್ರಾಮಂಜೂಷ'ದ ಭಾಷಾಸ್ವರೂಪವನ್ನು ತಿಳಿಯಲು ಒಂದು ಗದ್ಯಖಂಡವನ್ನು ಉದ್ಧರಿಸಿ ಕೊಡಬಹುದು :

"ಅಯ್ಯ ವಿರೋಚನನೇ, ಇದು ಏನು ಯೋಚಿಸಿದೆಯ್ಯ? ಪುಷ್ಪಮಾಲಿಕೆಗಳಂ ನೋಡಿ ಸರ್ಪಗಳೆಂದು ಭಯಪಟ್ಟು ಓಡುವನ ತೆರದಿಂ ಕಾರ್ಯವಂ ಬಿಟ್ಟು ಹೋಗುತ್ತಲಿರುವೆ. ಮಲಯಕೇತುವು ಬಾಲನಾದುದರಿಂದ, ಯುಕ್ತಾಯುಕ್ತವಂ ವಿಚಾರಿಸದೆ ಹೊರಟು ಹೋದನು. ನೀನೂ ಹೀಗೆ ಮಾಡಿದರೆ, ಮುಂದೆ ನಿನ್ನಿಂದ ರಾಜಕಾರ್ಯನಿರ್ವಾಹವು ಹ್ಯಾಗಾಗುವುದು ?

ಚಂದ್ರಗುಪ್ತನಂ ಪಕ್ಷೀಕರಿಸಿ ನಂದರಂ ಸಂಹರಿಸಿದ ಪರ್ವತರಾಯನಂ ಸಂಹರಿಸಿದರೆ ಚಂದ್ರಗುಪ್ತನಿಗೆ ಬಲ ತಪ್ಪುವದು ; ಆ ಬಳಿಕ ಚಂದ್ರಗುಪ್ತನಲ್ಲಿ ದ್ವೇಷವಂ ಸಾಧಿಸಬಹುದೆಂಬ ಬುದ್ಧಿಯಿಂದ ರಾಕ್ಷಸನೇ ವಿಷಕನ್ನೆಯಂ ಕಳುಹಿಸಿ ಪರ್ವತರಾಯನಂ ಸಂಹರಿಸಿದನು ಎಂದು ತಿಳಿಯದೆ, ಚಾಣಕ್ಯನಲ್ಲಿ ದ್ವೇಷವನ್ನೆಣಿಸಿ ನೀನು ಹೊರಟು ಹೋದುದಕ್ಕೆ ಚಾಣಕ್ಯರು ಬಹು ಖಿನ್ನರಾಗಿ ನನ್ನಂ ಕರೆದು, 'ಲೋಕದವರು ಮೂಲಾನುಮೂಲವಂ ತಿಳಿಯದೆ ಮನಕ್ಕೆ ಬಂದಂತೆ ತನ್ನಂ ಆಡಿಕೊಂಡಾರು ; ಈ ಅಪವಾದವು ತಪಸ್ವಿಯಾದ ನನಗೆ ಯಾಕೆ ಬೇಕು ? ನಾನು ಹೇಳಿದ ರೀತಿಗೆ ತಪ್ಪದೆ ಪರ್ವತರಾಯನ ತಮ್ಮನಿಗಾದರೂ ಅರ್ಧರಾಜ್ಯವಂ ಅಭಿಷೇಕವಂ ಮಾಡಿಸುವೆ'ನೆಂದು ಲಗ್ನವಂ ನಿಶ್ಚೈಸಿ, ನನ್ನಂ ಕರೆದು, 'ನೀನು ಹೋಗಿ ವಿರೋಚನನಂ ಕರೆದು ತಾರೆಂ'ದು ಕಳುಹಿಸಿದನು. ನಿನಗೆ ಅಭಿಷೇಕವಂ ಮಾಡಿಸುವದು ನಿಶ್ಚಯವು. ನನ್ನ ಸುಕೃತವೇ ಸಾಕ್ಷಿ, ನಡೆ" ಎಂದು ವತ್ಸಲಾಯನನು ಹೇಳುತ್ತಿರಲು, ಆ ಮಾತಿಗೆ ವಿರೋಚನನು ಒಡಂಬಟ್ಟು ಹೊರಟು ಬಂದು ಚಾಣಕ್ಯನಂ ಕಂಡು ವಂದಿಸಲು . . . (ಪು. ೧೭೭-೭೮)

ಈ ಗದ್ಯಖಂಡವನ್ನು ಭಾಷೆಯ ದೃಷ್ಟಿಯಿಂದ ವಿಶ್ಲೇಷಿಸಿದರೆ, ಈ ಕೆಲವು ಸಂಗತಿಗಳು ಹೊರಪಡುತ್ತವೆ :

೧. ಹಳಗನ್ನಡದಲ್ಲಿ ವ್ಯಂಜನಾಂತಶಬ್ದಗಳಾಗಿಯೇ ಬಳಕೆಯಾಗುವ ಪ್ರಕೃತಿಗಳು ಇಲ್ಲಿ ಹೊಸಗನ್ನಡದ ರೂಢಿಗೆ ಅನುಸಾರವಾಗಿ ಸ್ವರಾಂತಗಳಾಗುವ ವಿಧಿಗೆ ಒಳಪಟ್ಟಿವೆ. ೨. ಯಾವುದೇ ಸ್ವರಾಂತ ನಾಮಪ್ರಕೃತಿಯಿರಲಿ, ಅದು ಪ್ರಥಮಾವಿಭಕ್ತಿಯ ಪ್ರತ್ಯಯವೆಂದು ಹೊಸಗನ್ನಡದಲ್ಲಿ ಸಾಮಾನ್ಯವಾಗಿ ತಿಳಿಯುತ್ತ ಬಂದಿರುವ ಉ ಕಾರದೊಂದಿಗೆ ಕೂಡಿರುವುದು ಕಾಣುತ್ತದೆ. ೩. ಕ್ರಿಯಾಪದಗಳ ರಚನೆ ನಮ್ಮ ಕಾಲದ ಹೊಸಗನ್ನಡದ ರೀತಿಗೆ ತಕ್ಕಂತಿದೆ ; ಸಂಭಾವನಾರ್ಥಕಗಳು ಹೆಚ್ಚು (ಆಡಿಕೊಂಡಾರು, ಶಕ್ಯವಾದೀತು ಇ.). ೪.

ನಾಮಪದಗಳ ರಚನೆಯಲ್ಲಿ ದ್ವಿತೀಯಾ ತೃತೀಯಾ ವಿಭಕ್ತಿಗಳ ಪದಗಳು ಕೆಲವಡೆ ಹಳಗನ್ನಡದ ಧೋರಣೆಗೆ ಅನುಸಾರವಾಗಿಯೂ (ಅಂ, ಇಂ), ಇನ್ನು ಕೆಲವೆಡೆ ಹೊಸಗನ್ನಡದ ಧೋರಣೆಗೆ ಅನುಸಾರವಾಗಿಯೂ (ಅನ್ನು, ಇಂದ) ಇರುತ್ತವೆ ; ಆದರೆ ಹಳಗನ್ನಡದ ಧೋರಣೆಯಲ್ಲಿರುವುದೇ ಸಾಮಾನ್ಯ ; ಇಲ್ಲಿ ಒಂದು ವಿಶೇಷವೆಂದರೆ, ದ್ವಿತೀಯಾ ವಿಭಕ್ತಿಯ ರಚನೆ ಸಂಧಿಗತರೂಪದಲ್ಲಿ ಹೊಸಗನ್ನಡದ ರೀತಿಗೆ ಹೊಂದಿರುತ್ತದೆ. ೫. ಹಳಗನ್ನಡ ರೂಢಿಯ ಪಕಾರಘಟಿತ ಶಬ್ದಗಳು ತೀರ ವಿರಳವಾಗಿ ಹೊರತು ಹಕಾರ ಘಟಿತಗಳಾಗಿಯೇ ಪ್ರಯೋಗವಾಗಿವೆ. ಹಾಗೆಯೇ ಸರೇಫದ್ವಿತ್ವ ಶಬ್ದಗಳು ಸಜಾತೀಯ ದ್ವಿತ್ವಗಳಾಗಿಯೋ ರೇಫರಹಿತಗಳಾಗಿಯೋ ಇವೆ. ೬. ನಾಮಪದಗಳಿಗೆ ಸೇರುವ ಸಮುಚ್ಚಯಗಳು ಹೊಸಗನ್ನಡ ರೂಢಿಗೆ ಅನುಸಾರವಾಗಿವೆ. ೭. ಒಂದೇ ಪೂರ್ಣಕ್ರಿಯಾಪದವಿರುವಂತೆ ಸ್ವತಂತ್ರವಾಕ್ಯಗಳು/ಸಾಮಾನ್ಯವಾಕ್ಯಗಳು, ಎಂದರೆ ರೂಢಿಯಲ್ಲಿ ಹೇಳು ವಂತೆ ಚಿಕ್ಕಚಿಕ್ಕ ವಾಕ್ಯಗಳು ಆಗಾಗ ಬರುತ್ತವೆ ; ಆದರೆ ಸಾಪೇಕ್ಷ ಕ್ರಿಯಾಪದಗಳು ಹಲವು, ಭೂತಕೃದಂತಗಳೋ ಬೇರೆ ರೀತಿಯ ನ್ಯೂನಕ್ರಿಯಾರೂಪಗಳೋ ಯಾವುವಾದರೂ ಇರಬಹುದು, ಬರುವ ಹಾಗೆ ದೀರ್ಘವಾಗಿ ಹೆಣೆದವೂ ಇರಬಹುದು. ಇಂತಹ ದೀರ್ಘವಾದ ವಾಕ್ಯಗಳು ಕ್ರಿಯಾರ್ಥಕಗಳಾದ ಅಲು, ಉತ/ಉತ್ತ ಇಂತಹ ಪ್ರತ್ಯಯಗಳು ಸೇರಿ ಹೆಣೆಯುವ ಸಾಪೇಕ್ಷ ಕ್ರಿಯಾಪದಗಳ ಮೂಲಕ ಸಿದ್ಧವಾಗುತ್ತವೆ. ಎರಡು ಅಥವಾ ಅನೇಕ ಉಪವಾಕ್ಯಗಳು ಸೇರಿ ಆದ ಸಂಯೋಜಿತವಾಕ್ಯಗಳೂ, ಪ್ರಧಾನವಾಕ್ಯವೊಂದಕ್ಕೆ ಒಂದು ಅಥವಾ ಅನೇಕ ಉಪವಾಕ್ಯಗಳು ಅಧೀನವಾಗಿ ಸೇರಿ ಆದ ಮಿಶ್ರವಾಕ್ಯಗಳೂ ಬರುವುದು ಸಹ ಉಂಟು. ೮. ಕೃತಿಯ ಸಾಹಿತ್ಯಿಕಮೌಲ್ಯವನ್ನು ಹೆಚ್ಚಿಸಲು, ಪಂಡಿತಪ್ರಶಂಸೆಯನ್ನು ಗಳಿಸಲು, ಅಪರಿಚಿತ ಹಾಗೂ ಕ್ಲಿಷ್ಟ ಆದ ಸಂಸ್ಕೃತ ಶಬ್ದಗಳನ್ನೂ ಅವುಗಳ ಸಮಾಸಗಳನ್ನೂ ರಚಿಸಿ, ಅಚ್ಚಕನ್ನಡ ಮಾತುಗಳ ನಡುವೆ, ಕೆಲಮಟ್ಟಿಗೆ ಅವಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿಯೇ ಪ್ರಯೋಗಿಸುವುದು ಕಾಣುತ್ತದೆ. ೯. 'ಹ್ಯಾಗಾಗುವುದು', 'ನನಗೆ ಯಾಕೆ ಬೇಕು' ಇಂತಹ ಆಡುಮಾತಿನ ಪ್ರಯೋಗಗಳು ಅಲ್ಲಲ್ಲಿ ಬರುತ್ತವೆ. ೧೦. 'ಚಾಣಕ್ಯನಲ್ಲಿ ದ್ವೇಷವನ್ನೆಣಿಸಿ'/'ಚಾಣಕ್ಯರು ಬಹುಖಿನ್ನರಾಗಿ', 'ನಿಯೋಗಿವರ್ಯನೇ', 'ನೀವು ಬಂದ ಕಾಲ' "ನಾವು ಕುಶಲವಂ ಕೇಳಿದರೆಂದು ಹೇಳತಕ್ಕುದು", 'ನೀವು ಮಿತ್ರರಾಗಿ ಕಾಲ ದೇಶಜ್ಞರಾದುದರಿಂದ ಕಾರ್ಯನಿರ್ವಾಹವಂ ಮಾಡ್ಯಾರೆಂದು ಬರೆದು ಕಳುಹಿಸಿ ಇದೆ' ಹೀಗೆ ಪ್ರಾಮಾದಿಕ ವಚನಪುರುಷವಿಪರ್ಯಯದ ಅಥವಾ ಅಂಥ ವ್ಯಾಕರಣಮಾನ್ಯವಾಗದ ವಾಕ್ಯ ರಚನೆಗಳ ಬಳಕೆಯೂ ಅಲ್ಲಲ್ಲಿ (ನೋಡಿ : ಪು. ೧೪೨-೪ ; ೧೭೯-೩೨, ೧೮೦-೧; ೧೯೭-೧೨ ; ೨೦೫-೧೮ ಇ.)ಉಂಟು.

ಇಲ್ಲಿ ಪಟ್ಟಿಮಾಡಿದ ಭಾಷಿಕವೈಲಕ್ಷಣ್ಯಗಳು ಒಂದೆರಡು ಗದ್ಯಖಂಡವನ್ನು ಲಕ್ಷಿಸಿ ಹೇಳಿದ್ದಾದರೂ, ಪರಿಶೀಲಿಸಿದರೆ ಈ ವೈಲಕ್ಷಣ್ಯಗಳು ಈ ಗದ್ಯಗ್ರಂಥಕ್ಕೆ ಸಮಗ್ರವಾಗಿ ಅನ್ವಯಿಸುವಂಥದು ಎಂದೇ ತಿಳಿಯಬೇಕು. ಇವುಗಳಲ್ಲಿ ಕೆಲವು ಒಮ್ಮೆ ವಿರಳವಾಗಿ, ಇನ್ನೊಮ್ಮೆ ಸಾಂದ್ರವಾಗಿ ಕಾಣುತ್ತ ಶೈಲಿಯ ವೈಚಿತ್ರ್ಯಗಳು ವರ್ಣರಂಜಿತವಾಗಿ ವಾಚಕರಿಗೆ ರಂಜನೆಯನ್ನು ಒದಗಿಸುತ್ತವೆ. ಇದರಿಂದ ಬರಿಯ ಸರಸತೆ ಇಲ್ಲವೆ ಬರಿಯ ಪ್ರೌಢಿಮೆ .ಎನ್ನುವ ಏಕತಾನತೆ ತಪ್ಪಿ, ಒಂದು ಬಗೆಯ ಮಿಶ್ರಮಾಧುರ್ಯಕ್ಕೆ, ಕೃತಕ

ಗಾಂಭೀರ್ಯಕ್ಕೆ ಅವಕಾಶಗಳು ಹೆಚ್ಚಿವೆ.

ಮುದ್ರಾಮಂಜೂಷ ಅಚ್ಚ ಹೊಸಗನ್ನಡದ ಕೃತಿಯೆಂದು ಖಚಿತವಾಗಿ ತಿಳಿಯಲು ತೊಡಕಾಗಿರುವ ಸಂಗತಿಗಳೆಂದರೆ, ಅದರ ಭಾಷೆಯಲ್ಲಿ ಹಳಗನ್ನಡ ಹೊಸಗನ್ನಡ ಭಾಷಾ ಪ್ರಯೋಗಗಳು ಹಾಸುಹೊಕ್ಕಾಗಿ ಹೆಣೆದುಕೊಂಡು ನಿರಂತರವಾಗಿ ಪ್ರಯೋಗವಾಗಿರುವುದು, ಶೈಲಿಯಲ್ಲಿ ಸಂಸ್ಕೃತಶಬ್ದಗಳಿಗೆ ಹಾಗೂ ಅವುಗಳ ಸಮಾಸಗಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆತಿರುವುದು, ಅವಿರಾಮಶೀಲವಾಗಿ ಪ್ರವಾಹಗತಿಯಲ್ಲಿ ವಾಕ್ಯಗಳು ಬಹುದೂರ ಸಾಗುವುದು ಇಂತಹ ಕೆಲವು ಅಂಶಗಳು. ಆದರೆ ಇವು ಕವಿಯ ಜೀವಿತಕಾಲದ ಬೇರೆ ಗದ್ಯಕೃತಿಗಳಲ್ಲಿಯೂ ಉಂಟು. ವಿಭಕ್ತಿಪ್ರಯೋಗದಲ್ಲಿ ಆಂಶಿಕವಾಗಿ ಕಾಣುವ ಹಳಮೆ ಆ ಮೊದಲೇ, ಸಾಕಷ್ಟು ಹಿಂದಿನಿಂದಲೇ ಬೇರೂರಿದ್ದ ಒಂದು ಭಾಷಿಕವಿಕಾಸ ಲಕ್ಷಣವಾಗಿದೆ. ಅದು ಹೊರತು ಉಳಿದ ಮಟ್ಟಿಗೆ ಭಾಷೆ ಶೈಲಿಗಳು ಹೊಸಗನ್ನಡದ ವ್ಯಾಕರಣ ಮರ್ಯಾದೆಗೆ ಅನುಗುಣವಾಗಿವೆ. ಅಂದು ಪ್ರಚಲಿತವಿದ್ದ ವ್ಯಾಖ್ಯಾನಕಾರನ ಇಲ್ಲವೆ ಕಥಾ ಕಾಲಕ್ಷೇಪಕಾರನ ಭಾಷೆ ಶೈಲಿಗಳು ಇಲ್ಲಿ ಸ್ವಲ್ಪ ಪ್ರಭಾವ ಬೀರಿದ್ದರೂ, ಅದು ಹೆಚ್ಚೇನೂ ಅಲ್ಲ. ಸಂಸ್ಕೃತ ನಾಟಕಗಳ ಗಾಢಪ್ರಭಾವದಿಂದ ಮೇಲಿಂದ ಮೇಲೆ ಸಂವಾದಗಳನ್ನು ಹೆಣೆಯುವ ಮೂಲಕ ಕಥಾಗದ್ಯದ ಕಥನಗತಿಗೆ ಹೊಸ ಚೆಲುವು ಮೈಗೂಡಿದೆ. ಆದರೆ ವಾಕ್ಯಗಳನ್ನು ಉದ್ದಕ್ಕೆ ಎಳೆದಿರುವ ಕಾರಣ, ಆಗಾಗ ವಾಕ್ಯವೊಂದರಲ್ಲಿ ಕರ್ತೃಪದ ಪುನರಾವೃತ್ತಿಗೊಂಡು, ವಿಲಕ್ಷಣ ವಾಕ್ಯರಚನೆಯ ಮಾದರಿಗಳನ್ನು ಅಂತಹ ಕಡೆ ಕಾಣುವಂತಾಗಿದೆ. ವಿಭಕ್ತಿಪ್ರತ್ಯಯಲೋಪದಿಂದ ಆಡುಮಾತಿನ ಧಾಟಿ, ಬಹುವಚನಕರ್ತೃವಿಗೆ ಏಕವಚನಕ್ರಿಯೆ ಬಳಸುವ ಲೋಕರೂಢಿ ಇಂಥವೂ ಈ ರೀತಿಯವೇ.

"ಮುದ್ರಾಮಂಜೂಷದ ಭಾಷಾಶೈಲಿ ಏಕರೂಪವಾಗಿಲ್ಲ. ಸಂಧಿಕಾಲದ ವಿಷಮತೆಯನ್ನು ಒಳಕೊಂಡಿದೆ. ಬಾಣ ಕಾದಂಬರಿ, ಸಂಸ್ಕೃತ ಪ್ರೌಢಕಾವ್ಯ ಇವುಗಳ ಪ್ರಭಾವದಿಂದ ಅನೇಕ ಭಾಗಗಳು ಉದ್ದಾನುದ್ದವಾಗಿದ್ದು ಸಂಸ್ಕೃತಮಯವಾಗಿವೆ. ಶೈಲಿ ಒಮ್ಮೆ ಪ್ರೌಢವಾದರೆ, ಒಮ್ಮೆ ಸರಳವಾಗುತ್ತದೆ. ಹಳಗನ್ನಡ-ಹೊಸಗನ್ನಡ ತೀರ ವಿಚಿತ್ರಮಿಶ್ರಣವು ತಲೆದೋರಿದೆ . . . ಈ ಶೈಲಿಯ ವಿಶಿಷ್ಟರೂಪಕ್ಕೆ ಪ್ರೇರಕವಾದ ತತ್ತ್ವ ಯಾವುದೂ ಇಲ್ಲ. ಹಳಗನ್ನಡವನ್ನು ಹೊಸಗನ್ನಡಕ್ಕೆ ಪರಿವರ್ತಿಸುತ್ತಿರುವಾಗ ತೋರುವ ಸಂಧಿಕಾಲದ ಗೊಂದಲವೆಲ್ಲ ಇದರಲ್ಲಿದೆ," ಎಂಬ ವಿಮರ್ಶೆಯ ಮಾತು (ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ೧೯೭೧, ಪು. ೩೫೮), ಇದೇ ಗ್ರಹಿಕೆಯನ್ನು ಬಲುಮಟ್ಟಿಗೆ ಹೊಂದಿರುವ ಇನ್ನೊಂದು ಮಾತು (EIL., p. 2062), ಮೇಲಿನ ವಿವೇಚನೆಯ ಹಾಗೂ ಆ ಕಾಲದ ಒಟ್ಟಾರೆ ಸಾಹಿತ್ಯಕೃತಿಗಳ ಹಿನ್ನೆಲೆಯಲ್ಲಿ ನೋಡಿದಾಗ ಕೊಂಚ ಕಠಿನವಾದುವೆಂದೇ ಹೇಳಬೇಕು.

'ಮುದ್ರಾಮಂಜೂಷ'ದ ಶೈಲಿಯಲ್ಲಿ ಸರಸತೆ ಪ್ರೌಢತೆಗಳಿಗೆ ಕೈಯಿಟ್ಟಲ್ಲಿ ನಿದರ್ಶನಗಳುಂಟು. ಸರಸತೆಗೆ ಭಾಷೆಯ ದೇಸಿಗುಣ ನಾಟಕೀಯತೆ ಸಂಕ್ಷಿಪ್ತತೆಗಳನ್ನು ಕಾರಣಗಳೆಂದು ಹೇಳಬೇಕು. ಒಂದು ಮಾದರಿ :

"ಎಲೈ, ಈ ಕಾಗದವಂ ತ್ವರಿತದಿಂ ಹೋಗಿ ಈ ದಿನವೇ ನಂದಮಂತ್ರಿಯಾದ ಅಮಾತ್ಯ ರಾಕ್ಷಸನ ಕೈಯಲ್ಲಿ ಕೊಟ್ಟು ಇದಕ್ಕೆ ಬದಲು ಬರಸಿಕೊಂಡು ನಾಳೆ ಸಾಯಂಕಾಲಕ್ಕೆ ಬರತಕ್ಕದು" ಎಂದು ನೇಮಿಸಿ,

ಕಾಗದವಂ ಕೊಡಲು. 'ಬುದ್ಧೀ' ಎಂದು ಆ ತುರಗಾರೂಢರಾದ ಚಾರರು ತ್ವರಿತದಿಂ ಪಾಟಲೀಪುರಕ್ಕೆ ಬಂದು, ರಾಕ್ಷಸನಂ ಕಂಡು, ಕಾಶೀರಾಜ ಬರೆದಿದ್ದ ತಮ್ಮ ಬಳಿಯ ಕಾಗದವಂ ಕೊಡಲು, ಅದಂ ಓದಿಕೊಂಡು, ರಾಕ್ಷಸನು ನಂದರ ಸಮೀಪಕ್ಕೆ ಹೋಗಿ ಓದಿ ಕೊಡುತ್ತಿರಲು, ಅದರಲ್ಲಿ ಇದ್ದ ಒಕ್ಕಣೆಯೇನೆಂದರೆ —''

ಈ ದೇಸಿಗುಣ ಆಡುಮಾತಿನ ಶಬ್ದರೂಪಗಳಿಂದ ಕಥಾಗದ್ಯಕ್ಕೆ ಒಪ್ಪುವಂತೆ ಆಗಿಂದಾಗ್ಗೆ ಕಾಣಿಸಿಕೊಂಡು, ಮಿಶ್ರಭಾಷಾಲಕ್ಷಣದಲ್ಲಿ ಆಧುನಿಕತೆಯ ಇನ್ನೊಂದು ತುದಿಯನ್ನು ಅದು ತಾಕುವಂತೆ ತೋರುತ್ತದೆ. ಉದಾ.ಗೆ, ಕೆಲವು ಬಿಡಿಮಾತುಗಳು :

ಬ್ರಾಹ್ಮರು, ದೇವಬ್ರಾಹ್ಮರು, ಹೊರಚ್ಚು ಮಾಡು, ಹ್ಯಾಗೆ, ಹ್ಯಾಗಿರುವುದು, ಇಥೆ, ಹ್ಯಾಗೆಂದೆನಲು, ಇದ್ದಾನು, ಇದ್ದೀತು, ಆದೀತು, ಮಾಡು ಬಗೆ, ಸಲಾಮಿಗೆ ಹೋಗು, ಭಾಮೈದುನ, ಹಾಗೇ, ಸ್ವಲ್ಪವಾಗೇ, ಏನಂತ, ಹಿಂದಳಿಂದ, ಸ್ವಲ್ಪಕಾಲವಾದಾಗ್ಯೂ, ಮೊಕೊಡೆಯನಾಗಿ ಬಿದ್ದು, ನಂಬಿಗೆ, ಪಲಾಯನವನ್ನೈದ್ಯಾನು, ಸ್ತ್ರೀರು, ಭಾರವಾಶಿ, ಇಟ್ಟಿಣಿಕು, ಚಳ್ಳುಗುರು, ಪುಂಡುಪಾಳ್ಯಗಾರರು, ಪೋಲುವೆಚ್ಚು, ಲಕ್ಕೋಟಿನ ಕಾಗದ, ನೆರಕೆಯ ಕಂಡಿ, ಸುಖದ ಸನ್ನಿ, ಹಸುರು ಮರಳಿಕೊಳ್ಳು, ರಾಜಾಜ್ಞೆ ಮೇರೆಗೆ.

ಇಲ್ಲಿಯೇ ಮುಖ್ಯವಾಗಿ ಹೇಳತಕ್ಕ ಮಾತುಂಟು. 'ಮುದ್ರಾಮಂಜೂಷ'ದ ಹಸ್ತಪ್ರತಿಗಳಲ್ಲಿ ಸಾಮಾನ್ಯವಾಗಿ ಎಂಬಂತೆ ಕೆಲವು ಬರೆವಣಿಗೆಯ ವೈಶಿಷ್ಟ್ಯಗಳು ತೋರುತ್ತವೆ. ಅಲ್ಪಪ್ರಾಣ > ಮಹಾಪ್ರಾಣ, ಸ > ಶ, ಸರ್ವನಾಮಶಬ್ದಗಳ ಚತುರ್ಥೀವಿಭಕ್ತಿಯ ರೂಪಗಳಲ್ಲಿ ಉಪಾಂತ್ಯಸ್ವರ ಇಕಾರವಾಗಿರುವುದು (ನನಗೆ > ನನಿಗೆ, ತನಗೆ > ತನಿಗೆ) ಇತ್ಯಾದಿ. ಕವಿಯೇ ಹೀಗೆ ಬರೆದಿದ್ದರೆ ಆಶ್ಚರ್ಯವೇನಿಲ್ಲ. ಕವಿ ಬದುಕಿದ್ದ ಕಾಲದಲ್ಲಿ ಸುಸಂಸ್ಕೃತರು, ವಿದ್ಯಾವಂತರು ಎನ್ನಿಸಿಕೊಂಡವರ ಆಡುಮಾತಿನಲ್ಲಿ ಇಂಥವು ಎಗ್ಗಿಲ್ಲದೆ ಬಳಕೆಯಾಗುತ್ತಿದ್ದುವೆಂದು ತಿಳಿಯಲು ಸಾಧ್ಯವಿದೆ. ಅವಕ್ಕೆ ಶಿಷ್ಟಸಮ್ಮತಿಯಿದೆಯೆಂದೇ ಸಾಹಿತ್ಯವನ್ನು ಅವು ಪ್ರವೇಶಿಸಿವೆ. ಮುದ್ದಣ ಮೊದಲಾದ ಹೊಸಗನ್ನಡ ಅರುಣೋದಯ ಕಾಲದ ಸಾಹಿತಿಗಳಲ್ಲಿಯೇ ನಿದರ್ಶನಗಳುಂಟು ಎನ್ನುವುದು ಅವರ ಕೃತಿಗಳ ಹಸ್ತಪ್ರತಿಗಳ ಪರಿಶೀಲನೆಯಿಂದ ವ್ಯಕ್ತವಾಗಿದೆ.

ಅಲ್ಲದೆ ಈ ಶತಮಾನದ ಆರಂಭದಲ್ಲಿಯೂ ಅದಕ್ಕೆ ೧-೨ ದಶಕಗಳ ಮೊದಲಲ್ಲಿಯೂ ಆ ಅವಧಿಯ ವಿದ್ಯಾವಂತರು ಕನ್ನಡ ಅಕ್ಷರಸಂಸ್ಕರಣವನ್ನು ಕುರಿತು ವಿಚಾರಮಾಡುವಾಗ ಈ ವೈಪರೀತ್ಯಗಳ ಕಡೆಗೆ ಸಾರ್ವಜನಿಕರ ಗಮನ ಸೆಳೆದು ಪರಿಷ್ಕಾರದ ಆವಶ್ಯಕತೆಯನ್ನು ಸಲಹೆ ಮಾಡಿರುವುದೂ ಕಾಣುತ್ತದೆ. ಇಂದು ವಿಲಕ್ಷಣವಾಗಿ ತೋರುವ ಈ ಬರೆವಣಿಗೆಯ ವೈಚಿತ್ಯವನ್ನು 'ಮುದ್ರಾಮುಂಜೂಷ'ದ ಮೊದಮೊದಲ ಮುದ್ರಿತ ಆವೃತ್ತಿಗಳಲ್ಲಿ ಸಹ ಉಳಿಸಿಕೊಂಡು ಬಂದು, ಮತ್ತಿನ ಪರಿಷ್ಕರಣಗಳಲ್ಲಿ ತಿದ್ದಿರುವುದು ಕಾಣುತ್ತದೆ. ಪ್ರಸ್ತುತ ಸವಿಮರ್ಶಪರಿಷ್ಕರಣದಲ್ಲಿ ಸಹ ಒಂದು ಮಿತಿಯಲ್ಲಿ ಹಾಗೆಯೇ ಮಾಡಿದೆ.

ಹಸ್ತಪ್ರತಿಯ ಸ್ವರೂಪವನ್ನು ತಿಳಿಯಲು ಖ ದಿಂದ ಮಾದರಿಗೆ ಸ್ವಲ್ಪಭಾಗವನ್ನು ಇಲ್ಲಿ ಉದ್ಧರಿಸಿದೆ (ಓಲೆ ೯೯-೧೦೦) :

''ಆ ಮಾತಿಗೆ ಐಯ್ಯ ಅಮಾತ್ಯರೆ, ನಿಮಗಿಂತಲು ನಾನು ಬುದ್ಧಿಯಲ್ಲಿ ಅಧಿಕನೆ ? ನೀವು ಹೇಳಿದಂತ್ತೆ ಯಾವಾಗಲು ಕೇಳುತಲಿದ್ದೆ. ಯೀಗಲೂ ಹಾಗೇ ಸರಿ. ನಿಂಮ್ಮ ಅಪ್ಪಣೆಯಾದರೆ ನನಿಗೆ

ತೋರಿದರ್ಥವಂ ವಿಜ್ಞಾಪಿಸೇನು. ಯೇನೆಂದರೆ.

ಈಗ ನಂದನಾಶದಿಂದಲೂ ವೃದ್ಧನಾಗಿ ಪುತ್ರಶೋಕದಿಂ ಪ್ರಾಣಾಭಿಮಾನವಿಲ್ಲದೆ ಜಡನಾದ ಸರ್ವಾರ್ಥಸಿದ್ಧಿಯಲ್ಲಿ ಭರವಸವಿಲ್ಲದೆ ಯಿರವದ್ದರಿಂದಲೂ ಅವಲಂಬನಾಂತರ ದೊರಕದೆಯಿರುವ ಯೀ ವ್ಯಾಳೆಯಲ್ಲಿ ಚಂದ್ರಗುಪ್ತನು ಶತ್ರುರಹಿತನಾಗಿ ತ್ಯಾಗಶೀಲನಾಗಿ ಪ್ರಜಾರಂಜಕನಾಗಿ ಸೇನಾ ಸಮೇತನಾಗಿ ಸರ್ವಾರ್ಥಸಿದ್ಧಿರಾಯನಿಗೆ ಪೌತ್ರನಾದುದರಿಂದ ಯೀ ರಾಜ್ಯಕ್ಕೆ ಬಾಧ್ಯನೆಂದೆನಿಶಿಕೊಂಡು ಬಂದಿರುವದರಿಂದಲೂ ನಮ್ಮ ಸೇನಾಜನಗಳಿಗೆ ಯುದ್ಧದಲ್ಲಿ ಆಗ್ರಹವಿಲ್ಲ. ತಂಮ್ಮ ಕ್ಕಾರ್ಯದಲೇ ನಿರುತರಾಗಿ ಯಿಧಾಠೆ. ಯೀಗ ಅನಾಯಕರಾಜ್ಯವೆಂದು ತುಂಟ್ಟರಾಗಿ ಪ್ರಜೆಗಳಂ ಪೀಡಿಸುವರಂ ನಿಗ್ರಹಿಸುವದಕ್ಕಾದರೂ ನಮಿಗೆ ಸಾವಕಾಶವಾಗದು. ಯಿಂನ್ನು ಶತೃಗಳ ಮೇಲೆ ಯುದ್ಧವಂ ಮಾಡುವದ್ಯಾವದು ? ನನಿಗೆ ಪುರರಕ್ಷಣೆಗೆ ನೇಮಿಶಿಯಿರುವದರಿಂದ ಕೋಟೆಯ ಮೇಲೆ ಲಗ್ಗೆಯಂ ಹತ್ತದಂತ್ತೆ ಯುದ್ಧವಂ ಮಾಡುತ್ತಲಿದ್ದೇನೆ. ಭದ್ರಭಟಾದಿ ಸೇನೆಗಳು ಕಂಣುಮರೆಯಾಗಿ ಇಧೆ."

ಈ ಉದ್ಧೃತಭಾಗವು ಈಚಿನ ಎರಡು ಮುದ್ರಿತಪರಿಷ್ಕರಣಗಳಲ್ಲಿ ಹೇಗೆ ಬಂದಿದೆ ನೋಡೋಣ :

ಒಂದು ಹಳೆಯ ಮುದ್ರಣದಲ್ಲಿ (ಪು. ೨೦೩-೦೪) :

"ಅಯ್ಯಾ, ಅಮಾತ್ಯರೇ, ನಿಮಗಿಂತಲೂ ಬುದ್ಧಿಯಲ್ಲಿ ನಾನು ಅಧಿಕನೇ ? ನೀವು ಹೇಳಿದಂತೆ ಯಾವಾಗಲೂ ಕೇಳುತ್ತಲಿದ್ದೆನು ; ಈಗಲೂ ಹಾಗೇ ಸರಿ ; ಆದಾಗ್ಯೂ ನಿಮ್ಮ ಅಪ್ಪಣೆಯಾದರೆ, ನನಗೆ ತೋರಿದರ್ಥವಂ ವಿಜ್ಞಾಪಿಸೇನು ; ಏನೆಂದರೆ,—ಈಗ ನಂದನಾಶದಿಂದಲೂ, ವೃದ್ಧನಾಗಿ ಪುತ್ರ ಶೋಕದಿಂ ಪ್ರಾಣಾಭಿಮಾನವಿಲ್ಲದೆ ಜಡನಾದ ಸವಾರ್ಥಸಿದ್ಧಿಯಲ್ಲಿ ಭರವಸವಿಲ್ಲದೆ ಇರುವದ ರಿಂದಲೂ, ಅವಲಂಬನಾಂತರ ದೊರಕದೆ ಇರುವ ವೇಳೆಯಲ್ಲಿ ಚಂದ್ರಗುಪ್ತನು ಶತ್ರುರಹಿತನಾಗಿ ತ್ಯಾಗಶೀಲನಾಗಿ ಪ್ರಜಾರಂಜಕನಾಗಿ ಸೇನಾಸಮೇತನಾಗಿ ಸರ್ವಾರ್ಥಸಿದ್ಧಿರಾಯನಿಗೆ ಪೌತ್ರನಾದುದ ರಿಂದ ಈ ರಾಜ್ಯಕ್ಕೆ ಬಾಧ್ಯನೆಂದೆನಿಸಿಕೊಂಡು ಬಂದಿರುವದರಿಂದಲೂ ನಮ್ಮ ಪಡೆಯ ಜನಗಳಿಗೆ ಯುದ್ಧದಲ್ಲಿ ಆಗ್ರಹವಿಲ್ಲ ; ತಮ್ಮ ಕಾರ್ಯದಲ್ಲೇ ನಿರತರಾಗಿದ್ದಾರೆ ; ಈಗ ಅನಾಯಕರಾಜ್ಯವೆಂದು, ತುಂಟನಾಗಿ ಪ್ರಜೆಗಳಂ ಪೀಡಿಸುವರಂ ನಿಗ್ರಹಿಸುವದಕ್ಕಾದರೂ ನಮಗೆ ಸಾವಕಾಶವಾಗದು, ಇನ್ನು ವೈರಿಗಳ ಮೇಲೆ ಯುದ್ಧವಂ ಮಾಡುವದ್ಯಾವದು ? ನನಗೆ ಪುರರಕ್ಷಣೆಯ ನೇಮಿಸಿರುವದರಿಂದ ಕೋಟೆಯ ಮೇಲೆ ಲಗ್ಗೆಯಂ ಹತ್ತದಂತೆ ಆಜಿಯಂ ಮಾಡುತ್ತಲಿದ್ದೇನೆ ; ಭದ್ರಭಟಾದಿಗಳ ದಳಗಳು ಕಣ್ಣುಮರೆಯಾಗಿವೆ"

೧೯೪೫ ರ ಮುದ್ರಣದಲ್ಲಿ (ಪು. ೧೫೯) :

"ಅಯ್ಯಾ ಅಮಾತ್ಯರೇ, ನಿಮಗಿಂತಲೂ ಬುದ್ಧಿಯಲ್ಲಿ ನಾನು ಅಧಿಕನೇ ? ನೀವು ಹೇಳಿದಂತೆ ಯಾವಾಗಲೂ ಕೇಳುತ್ತಿದ್ದೆನು. ಈಗಲೂ ಹಾಗೇ ಸರಿ. ಆದಾಗ್ಗೂ ನಿಮ್ಮ ಅಪ್ಪಣೆಯಾದರೆ ನನಗೆ ತೋರಿದರ್ಥಮಂ ವಿಜ್ಞಾಪಿಸುವೆನು. ಏನೆಂದರೆ, ಈಗ ನಂದನಾಶದಿಂದಲೂ ವೃದ್ಧನಾಗಿ ಪುತ್ರಶೋಕ ದಿಂದ ಪ್ರಾಣಾಭಿಮಾನವಿಲ್ಲದೆ ಜಡನಾದ ಸರ್ವಾರ್ಥಸಿದ್ಧಿಯ ಜೀವಿತದಲ್ಲಿ ಭರವಸವಿಲ್ಲದೆ ಇರು ವುದರಿಂದಲೂ ಅವಲಂಬನಾಂತರ ದೊರಕದೆ ಇರುವ ವೇಳೆಯಲ್ಲಿ ಶತ್ರುರಹಿತನೂ ತ್ಯಾಗಶೀಲನೂ ಪ್ರಜಾರಂಜಕನೂ ಆದ ಚಂದ್ರಗುಪ್ತನು ಸರ್ವಾರ್ಥಸಿದ್ಧಿರಾಜನಿಗೆ ಪೌತ್ರನಾದುದರಿಂದ ಈ ರಾಜ್ಯಕ್ಕೆ ಬಾಧ್ಯನೆಂದೆನಿಸಿಕೊಂಡು ಸೇನಾಸಮೇತನಾಗಿ ಬಂದಿರುವುದರಿಂದಲೂ ನಮ್ಮ ಪಡೆಯ ಜನಗಳಿಗೆ ಯುದ್ಧದಲ್ಲಿ ಆಗ್ರಹವಿಲ್ಲ. ಸ್ವಕಾರ್ಯದಲ್ಲೇ ನಿರತರಾಗಿದ್ದಾರೆ. ಈಗ ಅನಾಯಕರಾಜ್ಯವೆಂದು ತಿಳಿದು ತುಂಟರಾಗಿ ಪ್ರಜೆಗಳಂ ಪೀಡಿಸುವವರಂ ನಿಗ್ರಹಿಸುವುದಕ್ಕಾದರೂ ನಮಗೆ ಸಾವಕಾಶವಿಲ್ಲ. ಇನ್ನು ವೈರಿಗಳ ಮೇಲೆ ಯುದ್ಧಮಂ ಮಾಡುವುದೆಲ್ಲಿ ? ನನಗೆ ಪುರರಕ್ಷಣೆಯಂ ನೇಮಿಸಿರುವದರಿಂದ

ಕೋಟೆಯ ಮೇಲೆ ಲಗ್ಗೆಯಂ ಹತ್ತದಂತೆ ಆಜಿಯಂ ಮಾಡುತ್ತಿದ್ದೇನೆ. ಭದ್ರಭಟಾದಿಗಳ ದಳಗಳು ಕಣ್ಣುಮರೆಯಾಗಿವೆ."

ಮೊದಲ ಹಸ್ತಪ್ರತಿಯ ಉದ್ಧೃತಭಾಗವನ್ನು ಗಮನಿಸೋಣ. ಇಲ್ಲಿ ವ್ಯಾಕರಣದೃಷ್ಟಿಯಿಂದ ವಾಕ್ಯರಚನೆ ಮೊದಲಾದಂಶಗಳಿಗಿಂತ, ಭಾಷಾಶೈಲಿಗಿಂತ, ಲಿಪಿಕಾರವೈಚಿತ್ರ್ಯಗಳು ನಮ್ಮ ಗಮನವನ್ನು ಹೆಚ್ಚಾಗಿ ಸೆಳೆಯುತ್ತವೆ. ಕೆಲವು ವೈಚಿತ್ರ್ಯಗಳನ್ನು ಸ್ಖಾಲಿತ್ಯಗಳೆಂದು ಗಣಿಸಿದರೂ, ಗ್ರಂಥದಲ್ಲಿ ಆದ್ಯಂತವಾಗಿ ಸಾಮಾನ್ಯರೀತಿಯಿಂದ ಕಂಡುಬರುವ ಅಂತಹ ವೈಚಿತ್ರ್ಯಗಳನ್ನೆಲ್ಲ ಸ್ಖಾಲಿತ್ಯಗಳೆಂದು ಭಾವಿಸುವಂತಿಲ್ಲ. ಸ್ಖಾಲಿತ್ಯಗಳು ಯಾದೃಚ್ಛಿಕವಾದವು : ವೈಚಿತ್ರ್ಯಗಳು ಕವಿ ಮತ್ತು ಕವಿಯ ಜೀವಿತಕಾಲಸಂಬಂಧದವಾಗಿ ವಿಶೇಷವಾದವು. ನನಿಗೆ, ಇರುವದ್ದರಿಂದಲೂ, ಯಿರುವ, ಎನಿಶಿಕೊಂಡು, ಇಧೆ, ಯಿಧಾರೆ, ಮಾಡುವದ್ಯಾವದು, ನೇಮಿಶಿ ಯಿರುವದರಿಂದ ಇಂತಹವು ಬಲುಮಟ್ಟಿಗೆ ಆ ತೆರನಾದ ವಿಶೇಷಗಳು ; ಪ್ರಾಯಃ ಕವಿಕೃತವೆಂದೇ ಹೇಳಬಹುದಾದವು. ಇಂದು ಉತ್ತರಕರ್ನಾಟಕದ ಭಾಗದಲ್ಲಿ ಜನರ ಆಡುಮಾತು ಬರಹಗಳಲ್ಲಿ ಶಿಷ್ಟಪ್ರಯೋಗವಾಗಿರುವ ಪ್ರಥಮಪುರುಷ ನಪುಂಸಕಲಿಂಗದ ಏಕವಚನದ ಆಖ್ಯಾತಪ್ರತ್ಯಯ 'ಅದು' (ವೈಯಾಕರಣಮಾನ್ಯವಾದ ರೂಪ ಹಾಗೂ ಪ್ರಾಚೀನಕವಿಪ್ರಯೋಗಸಿದ್ಧವಾದ ರೂಪ 'ಉದು') ಮುದ್ರಾಮಂ. ದ ಹಸ್ತಪ್ರತಿಗಳಲ್ಲೆಲ್ಲ ಸಮಾನವಾಗಿ ಹಾಗೂ ಸಾರ್ವತ್ರಿಕವಾಗಿ ಕಂಡುಬರುವುದನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸಬೇಕು. ಕವಿಯ ಸ್ವಹಸ್ತಾಕ್ಷರಪ್ರತಿ ಲಭ್ಯವಿಲ್ಲದಿದ್ದರೂ, ಕವಿ 'ಉದು'ವನ್ನೇ ಒಪ್ಪಿದ್ದ, 'ಅದು'ವನ್ನಲ್ಲ ಎಂದು ನಿಶ್ಚಿತವಾಗಿ ಸಾಧಿಸಲಾಗದು. ನಿರಂತರ ವರ್ತಮಾನಕಾಲ ಪ್ರತ್ಯಯವಾದ ಉತ್ತ/ಉತ ಎಂಬ ಎರಡು ರೂಪಗಳನ್ನೂ ಹಸ್ತಪ್ರತಿಗಳಲ್ಲಿ ಕಾಣಬಹುದಾಗಿದ್ದು, ಕವಿ ಅವನ್ನು ತಾನೇ ಪರ್ಯಾಯವಾಗಿ ಬಳಸುತ್ತಿದ್ದನೇ, ಪರ್ಯಾಯರೂಪಗಳು ಲಿಪಿಕಾರಜನ್ಯಗಳೇ, ನಿಶ್ಚಯಿಸುವುದು ಕಷ್ಟ.

ಇನ್ನು ತೌಲನಿಕವಾಗಿ ಹೇಳಬಹುದಾದರೆ, ಹಸ್ತಪ್ರತಿಗಳಲ್ಲಿ ಕಂಡುಬರುತ್ತಿರುವ ವಾಕ್ಯರಚನೆಯ ವಿಧಾನ ಆಡುಮಾತಿನ ರೀತಿಗೆ, ನಾಟಕೀಯ ಸಂವಾದಶೈಲಿಯ ಕಾಕುವಿಗೆ ಹೆಚ್ಚು ಸಮೀಪವಾದುದು, ಸಹಜವಾದುದು ಎನ್ನಬೇಕು. ಅವನ್ನು ಮುದ್ರಿತಪರಿಷ್ಕರಣದ ಮೊದಲ ಘಟ್ಟದಲ್ಲಿ ಬಲುಮಟ್ಟಿಗೆ ಉಳಿಸಿಕೊಂಡುದು ಸ್ಪಷ್ಟ ; ಆದರೆ ಅನಂತರದ ಘಟ್ಟಗಳಲ್ಲಿ ವಾಕ್ಯರಚನೆಯ ಸೌಷ್ಠವ, ಶಬ್ದಪ್ರಯೋಗದ ಸಾಧುತ್ವ ಹಾಗೂ ಶೈಲಿಯ ಗಾಂಭೀರ್ಯಗಳ ದೃಷ್ಟಿಯಿಂದ ತಿದ್ದಿ ತೀಡಿರುವುದು ಕಾಣುತ್ತದೆ. ಉದ್ಧೃತಭಾಗವನ್ನೇ ನೋಡಿದರೆ, ಆಗಿರುವ ವ್ಯತ್ಯಾಸಗಳ ಸ್ವರೂಪ ಚೆನ್ನಾಗಿ ಮನವರಿಕೆಯಾಗುತ್ತದೆ. ಇಷ್ಟು ಮಾತ್ರವಲ್ಲ, ಸ್ವೇಚ್ಛೆಯಾಗಿ ಶಬ್ದಪ್ರತಿನಿಧಾನವನ್ನೂ ಮಾಡುವ ಮೂಲಕ ಪದ್ಯದ ಮೂಲ ಸ್ವರೂಪ ಬಣ್ಣಗೆಡುವಂತೆಯೂ ಮಾಡಿದೆ.

ಕವಿಯ ಮೇಲೆ ವಿಶಾಖದತ್ತ, ಬಾಣ ಮುಂತಾದ ಸಂಸ್ಕೃತಕವಿಗಳ ಪ್ರಭಾವವನ್ನು ಗುರುತಿಸಬಹುದಾಗಿರುವಂತೆ, ಪ್ರಾಚೀನ ಕನ್ನಡಕವಿಗಳ ಪ್ರಭಾವವನ್ನು ಖಚಿತವಾಗಿ ಗುರುತಿಸುವುದು ಸಾಧ್ಯವಾಗುತ್ತಿಲ್ಲ. ಏನಲ್ಲವಾದರೂ, ಕುಮಾರವ್ಯಾಸ ಭಾರತ ಮತ್ತು ಜೈಮಿನಿ ಭಾರತಗಳನ್ನು ಕವಿ ನಾರಾಯಣ ಶರ್ಮ ಓದಿರಲೇ ಬೇಕು. ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಶೈಲಿಗಳ ವಾಗ್ಧೋರಣೆ ಕೃತಿಯಲ್ಲಿ ಯಾವುದೋ ಒಂದು ಪ್ರಮಾಣ

ದಲ್ಲಿ ಹರಡಿಕೊಂಡಿರುವುದು ವಿದಿತವೇ ಇದೆ. "ಅಹುದುಹುದೋ, ಲೋಕೈಕವೀರನ ಹುದೋ, ಕಲಿಪಾರ್ಥನಹುದೋ" "ವೀರರಹುದೋ ಶೂರರಹುದೋ" (ಆ. ೮), (ಆ. ೭) ಎಂಬಂತಹ ಮಾತು ವಾಕ್ಯಗಳು ಕನ್ನಡ ಕಾವ್ಯಸ್ಥವಾದ ಶೈಲಿಗೆ ಅನುಗುಣವಾದುವೆನ್ನಬೇಕು.

ಸ್ಫುಟವಾದ ಸಂಗತಿಯೆಂದರೆ, ಗ್ರಂಥಶೈಲಿಯಲ್ಲಿ ಎದ್ದು ಕಾಣುವ ಸಂಸ್ಕೃತಪದ ಪ್ರಯೋಗಪ್ರಚುರತೆ. ಇದಕ್ಕೆ ಬಾಣನ ಗದ್ಯಕಾದಂಬರಿಯ ಪ್ರಭಾವವನ್ನೂ ಸಂಸ್ಕೃತ ಪ್ರೌಢಕಾವ್ಯಗಳ ಪ್ರಭಾವವನ್ನೂ ಕಾರಣಗಳಾಗಿ ತಿಳಿಯಬಹುದು. ಬಿಡಿಶಬ್ದಗಳ ಆಯ್ಕೆ, ಸಮಾಸಶಬ್ದಗಳ ಸಂಘಟನೆ ಹಾಗೂ ಅಂತಹ ಬಿಡಿಶಬ್ದಗಳಿಂದಲೂ ಸಮಾಸಶಬ್ದ ಗಳಿಂದಲೂ ತುಂಬಿ ಹಲವು ಪಂಕ್ತಿಗಳವರೆಗೆ ಕಥಾಗತಿಯನ್ನು ಪ್ರೌಢವೂ ಗಂಭೀರವೂ ಆದ ಶೈಲಿಯಲ್ಲಿ ನಡಸಿಕೊಂಡು ಹೋಗುವುದು ಇವುಗಳಲ್ಲಿ ಕವಿಯ ಪ್ರತಿಭೆ ಪಾಂಡಿತ್ಯ ಗಳ ನೆಲೆಯನ್ನು ಗುರುತಿಸಬಹುದಾಗಿದೆ. ಮೊದಮೊದಲ ಆಶ್ವಾಸಗಳಲ್ಲಿ ಇಂತಹ ಸಾಲಂಕೃತ ಸಮಾಸಶ್ಲಿಷ್ಟ ಗದ್ಯ ಸ್ವಾಭಾವಿಕವೆನ್ನುವಂತೆ ಮೇಲಿಂದ ಮೇಲೆ ಬಂದಿದೆ ಯಾದರೂ ಬರುಬರುತ್ತ ದೇಸಿಯತ್ತ ಹೊರಳಿ ಬಹುದೂರ ಸಾಗಿದ ಮೇಲೆ, ಮತ್ತೆ ಸಂಸ್ಕೃತ ಸಾಲಂಕೃತ ಸಮಾಸಶ್ಲಿಷ್ಟ ಗದ್ಯಶೈಲಿಯ ವೈಖರಿಯೊಂದಿಗೆ ಅಂತ್ಯಮಂಗಳವನ್ನು ಕಂಡಿದೆ.

ಎಲ್ಲೆಲ್ಲಿ ಉದ್ದಾಮವಾದ ವರ್ಣನೆಗೆ ಅವಕಾಶವಿದೆಯೋ, ಅಲ್ಲೆಲ್ಲ, ಎಂದರೆ ಪ್ರಕೃತಿಯ ವಿಲಾಸ, ಋಷ್ಯಾಶ್ರಮಸನ್ನಿವೇಶ, ಯುದ್ಧದ ವಿಜೃಂಭಣೆ, ವಿಸ್ತೃತ ಸೇನಾ ಸಿದ್ಧತೆ, ಸ್ತ್ರೀಸೌಂದರ್ಯವಿಶೇಷ, ಮಹಾಪುರುಷಸ್ವಭಾವ, ನಗರದ ವೈಭವ ಈ ಮುಂತಾದವು ಗಳಲ್ಲಿ (೮೪, ೮೮, ೧೩೩, ೬-೮, ೧೬೩, ೧-೫, ೩.) ಸಂಸ್ಕೃತ ವಾಗ್ವಿಲಾಸವನ್ನು ಕಾಣಬಹುದಾಗಿದೆ. "ವರ್ಣನೆಗಳು ಪ್ರಾಪ್ತವಾದಾಗಲೆಲ್ಲ ಭಾಷೆ ಆಲಂಕಾರಿಕವಾಗುತ್ತದೆ" (ದೇಜಗೌ. 'ಗದ್ಯಶೈಲಿ', ಪು. ೨೩೪) ಎನ್ನುವುದೂ ನಿಜ.

ದೀರ್ಘಸಮಾಸಘಟಿತ ವಾಗ್ಮಿತೆಗೆ ಇಂತಹ ಕೃತಿಭಾಗವನ್ನು ನೋಡಬಹುದು :

"ಆಗ ತರುಣತಮಾಲಕದಳಿಕಾನಿಕರಗಳಿಂ ವಿರಳಜಲಧಿಜಲಕಲ್ಲೋಲಶೀಕರಗಳಿಂ ಶೀತಳಮಾದ ಪಶ್ಚಿಮಾಚಳವನವೀಥಿಯಂ ಚಂದ್ರನಾಶ್ರಯಿಸುತ್ತಿರಲು, ಚಂದ್ರಗುಪ್ತನ ಹೃದಯಾಂಧಕಾರದಂತೆ ಅಂಧಕಾರವು ಮೆಲ್ಲಮೆಲ್ಲಗೆ ತೊಲಗುತ್ತಿರಲು, ಭಾಮಿನೀಪುರುಷಾಲಿಂಗನಬಂಧನದಂತೆ ಪುಷ್ಪ ವೃಂತನಿಕರವು ವೃಕ್ಷಗಳ ದೆಸೆಯಿಂದ ಜಗುಳುತ್ತಿರಲು, ಅನವರತಶರಾಸನಾಕರ್ಷಣಾಶ್ರಮವಿಹ್ವಲ ಮದನನಿಶ್ವಾಸಗಳಂತೆ ಉಷಃಕಾಲದ ತಂಗಾಳಿಗಳೆಲ್ಲಾ ಕಡೆಯಲ್ಲಿ ಬೀಸುತ್ತಿರಲು, ಸ್ವೈರಿಣೀನಯನ ಸರೋಜಗಳಂತೆ ವಿಕಟಸರೋಜನಿಕರಗಳಲ್ಲಿ ರಕ್ತಿಮೆ ಉದಯಿಸುತ್ತಿರಲು . . . "

ಶ್ಲಿಷ್ಟಸಮಾಸರಚನೆಯಲ್ಲಿ ಮಾತ್ರವಲ್ಲದೆ ಬಿಡಿಶಬ್ದಗಳ ಆಯ್ಕೆಯಲ್ಲಿಯೂ ಈ ಮೋಹವಿದ್ದು, ಕೆಲವೊಮ್ಮೆ ನಾಟಕದ ಮೂಲದಲ್ಲಿ ಸರಳವಾಗಿರುವ ಶಬ್ದಕ್ಕೆ ಅಪೂರ್ವ ಶಬ್ದಗಳನ್ನು ಆಯುವ ಆಸಕ್ತಿಯೂ ತೋರಿದೆ. ಆದರೆ ಇಂಥವು ತೀರ ವಿರಳ. ಇದರಿಂದ ಅಭಿಪ್ರಾಯಗಳ ವಿಶದತೆಗೆ ಯಾವುದೇ ರೀತಿಯಿಂದ ಅಡ್ಡಿಯಾಗಿಲ್ಲ, ಸ್ವಾರಸ್ಯವೂ ತಗ್ಗಿಲ್ಲ ಎನ್ನುವುದು ನಿಶ್ಚಯ.

ಸಾಮಾನ್ಯವಾಗಿ ಉಪಮೆ ರೂಪಕ ದೃಷ್ಟಾಂತ ಸಂದೇಹ ಭ್ರಾಂತಿ ಪರಿಸಂಖ್ಯೆ ಉತ್ಪ್ರೇಕ್ಷೆ ಅತಿಶಯೋಕ್ತಿ ಇಂಥವು ಅಲಂಕಾರಗಳಾಗಿ ಬರುತ್ತವೆ ಎನ್ನಬಹುದು. ಜೊತೆಗೆ ಶ್ಲೇಷ

ವಿರೋಧಾಭಾಸಮೂಲವಾದ ಚಮತ್ಕಾರಜನಕ ಅಲಂಕಾರಗಳ ಚಾಪಲ್ಯವೂ ಉಂಟು. ಇವು ಕವಿಯ ಕಾವ್ಯಾಭ್ಯಾಸದ ವೈಶಾಲ್ಯವನ್ನೂ ಅಭಿರುಚಿಯನ್ನೂ ಪ್ರಕಟಿಸುವಂತೆಯೇ ಹೊಸಕಾಲದ ಕಾವ್ಯದಲ್ಲಿ ಹಳಗಾಲದ ಕಾವ್ಯದ ಪ್ರೌಢಿಮೆ ವಾತಾವರಣಗಳನ್ನು ತರುವ ಕೃತಕಪ್ರಯತ್ನವನ್ನೂ ಮನಗಾಣಿಸುತ್ತವೆ. ಕೆಲವು ನಿದರ್ಶನಗಳು :

ಅನುಪ್ರಾಸ :

(೧) ಅದಂ ತಿಳಿದು ಕ್ರುದ್ಧರಾದ ಪಿರಂಗಿದಾರರು ಹತ್ತಿಸಿದ ಗುಂಡುಗಳ ತಂಡಗಳಿಂದ ಆ ವೇತಂಡಗಳ ಗಂಡಮಂಡಲಗಳು ತುಂಡುತುಂಡಾಗುತ್ತಿರಲು ; (೨) ನುಗ್ಗುನುಗ್ಗಾದ ರಥಗಳಿಂದಲೂ ತುಮುರು ತುಮುರಾದ ಪತಾಕೆಗಳಿಂದಲೂ ನುಚ್ಚು ನುಚ್ಚಾದ ಛತ್ರಗಳಿಂದಲೂ ತುಂಡು ತುಂಡಾದ ಆಯುಧಗಳಿಂದಲೂ ಖಂಡತುಂಡಗಳಾದ ಅಶ್ವಸಾರಥಿಗಳಿಂದಲೂ ಭಿನ್ನಾಭಿನ್ನವಾದ ರಥಿಕರ ಶರೀರ ದಿಂದಲೂ . . . .

ಪರಿಸಂಖ್ಯಾಲಂಕಾರ :

(೧) "ವರ್ಣಸಾಂಕರ್ಯಶುದ್ಧಿಗಳು ಕನಕದಲ್ಲಿ, ಮಿತ್ರದ್ವೇಷವೆಂಬುದು ಕುಮುದಪಂಕ್ತಿಗಳಲ್ಲಿ ..." (೨) ಆಗ ಬಡತನವೆಂಬುದು ಸ್ತ್ರೀಜನದ ಮಧ್ಯಪ್ರದೇಶದಲ್ಲಿಯೂ ವಕ್ರಭಾವವು ಕುಡಿಹುಬ್ಬು ಗಳಲ್ಲಿಯೂ ಕಾಠಿಣ್ಯವು ಕುಚಕುಟ್ಮಲಂಗಳಲ್ಲಿಯೂ ಕೊಲೆಗಳೆಂಬುದು ಅಕ್ಷಕ್ರೀಡೆಗಳಲ್ಲಿಯೂ..."

ಶ್ಲಿಷ್ಟೋಪಮೆ :

(೧) "ಪ್ರಬುದ್ಧ ಸರ್ವಲೋಕಯುತವಾದುದರಿಂ ಪ್ರಭಾತಸಮಯದಂತೆ ಕ್ರತುಶತಧೂಮ ಪೂತ ವಾದುದರಿಂ ಸುರಾಧಿಪಮೂರ್ತಿಯಂತೆ . . ." (೨) "ಸೂರ್ಯನಂತೆ ಬುಧಾನುಗತನಾಗಿ ದಶರಥನಂತೆ ಸುಮಿತ್ರೋಪಸೇವಿತನಾಗಿ ಶ್ರೀಶಂಕರನಂತೆ ಮಹಾಸೇನಾನುಗತನಾಗಿ. . ."

ಸಮಗ್ರ ಗದ್ಯಕಾವ್ಯವಾಗಿ ತನ್ನ ವಿಶಾಲವ್ಯಾಪ್ತಿಯಲ್ಲಿ ಚೂರ್ಣ (ವ್ಯಸ್ತಪದ ಅಥವಾ ಅಲ್ಪಸಮಾಸಕ), ಉತ್ಕಾಲಿಕಾಪ್ರಾಯ (ಸಮಾಸನಿಬಿಡ ಹಾಗೂ ಕ್ಲಿಷ್ಟ) ಹಾಗೂ ವೃತ್ತ ಗಂಧಿ (ಗದ್ಯವಾಗಿ ಆರಂಭಗೊಂಡು ವೃತ್ತದ ಧಾಟಿಗೆ ತಿರುಗುವುದು) ಎಂಬಂತಹ ಶೈಲಿ ಪ್ರಭೇದಗಳನ್ನು ಒಳಕೊಂಡಿದೆ. ಸುಲಭವಾಗಿ ಗುರುತಿಸಬಹುದಾದ ಈ ಬಗೆಗಳಿಗೆ ಪ್ರತ್ಯೇಕವಾಗಿ ನಿದರ್ಶನಗಳ ಅಗತ್ಯವಿಲ್ಲ.

ಕವಿ ಕಥೆಗೆ ಕಳೆ ಕಟ್ಟಿಸಲು ರಾಮಾಯಣ ಭಾರತಗಳಿಂದಲೂ ವಿಷ್ಣು ಸ್ಕಾಂದ ಮತ್ಸ್ಯ ಮೊದಲಾದ ಪುರಾಣಗಳಿಂದಲೂ ದೃಷ್ಟಾಂತಗಳನ್ನೂ ಪ್ರಸಂಗಗಳನ್ನೂ ಸಂಕ್ಷೇಪವಾಗಿ ಪ್ರಸ್ತಾವಿಸಿರುವುದು ಕಾಣುತ್ತದೆ. ಹಾಗೆಯೇ ಗಾದೆಗಳು ಲೌಕಿಕನ್ಯಾಯಗಳು ನೀತಿವಾಕ್ಯ ಗಳಿಗೂ ಕೊರತೆಯಿಲ್ಲ. ನಡುನಡುವೆ ಸಣ್ಣಸಣ್ಣ ವಾಕ್ಯವೇಷ್ಟನಗಳು, ಸಂಸ್ಕೃತಭಾಷೆ ಯವು, ಬಂದಿವೆ (ಆದರೆ ಮುದ್ರಿತಪರಿಷ್ಕರಣಗಳಲ್ಲಿ ಕಾಣುವ ಪದ್ಯನಿಬದ್ಧ ಸುಭಾಷಿತ ಗಳು ಕವಿಕರ್ತೃಕವಲ್ಲ, ಸಂಪಾದಕೀಯ ಸೇರ್ಪಡೆಗಳು). ಇವಾದರೂ ತುಂಬ ಪರಿಚಿತ ಗಳಾಗಿ ಸುಸಂಸ್ಕೃತರ ವ್ಯವಹಾರದಲ್ಲಿ ಸ್ವಾಭಾವಿಕವಾಗಿ ಎನ್ನುವಂತೆ ಬಳಕೆಯಾಗುತ್ತಿದ್ದವೇ ಅಲ್ಲದೆ, ಪಾಂಡಿತ್ಯಪ್ರದರ್ಶಕಗಳಲ್ಲ (ವಿವರಗಳಿಗೆ ನೋಡಿ : ಉಡುಪ, ಪೂರ್ವೋಕ್ತ, ಪು. ೧೪೪-೫೧).

'ಮುದ್ರಾಮಂಜೂಷ'ದ ಶೈಲಿಯ ಆಕರ್ಷಣೆಗೆ ಮೂರು ಮುಖ್ಯಕಾರಣಗಳಿವೆ : ೧.

ಸರಸತೆ ಪ್ರೌಢಿಮೆಗಳು ಹಾಳಿತವಾಗಿ ಬೆರೆತ ಸತ್ತ್ವಶಾಲಿಯಾದ ಹೊಸಗನ್ನಡ ಭಾಷೆ ; ೨. ಹೆಜ್ಜೆಹೆಜ್ಜೆಗೆ ಕುತೂಹಲ ಹುಟ್ಟಿಸುವ ಸಂವಾದಗಳ ಸರಣಿ ; ೩. ಕವಿಯ ಬುದ್ಧಿಶಕ್ತಿ ಮೂಲವಾಗಿ ವಿನ್ಯಾಸಗೊಂಡಿರುವ ತರ್ಕಬದ್ಧವಾದ ಕಥನಕೌಶಲ.

ಮೇಧಾವಿ ರಾಜನೀತಿಜ್ಞರೂ ಅವರ ವಿಧೇಯ ಅನುಚರರೂ ಎಡೆಬಿಡದೆ ಹೂಡುವ ತಂತ್ರ ಪ್ರತಿತಂತ್ರಗಳ ಹೂಟವನ್ನು, ಆ ಸಲುವಾಗಿ ಪ್ರಕಟವಾಗುವ ಬುದ್ಧಿವಂತಿಕೆಯ ಮೇಲಾಟವನ್ನು ಈ ಮೂರು ಕಾರಣಗಳೂ ಸೂಕ್ಷ್ಮವಾಗಿಯೂ ತೀಕ್ಷ್ಣವಾಗಿಯೂ ಅನಾವರಣಗೊಳಿಸುತ್ತ ಹೋಗುವುದು ಇಲ್ಲಿಯ ಶೈಲಿಯ ಅಗಾಧಶಕ್ತಿಯಾಗಿದೆ. ಕಥಾವ್ಯಕ್ತಿಗಳ ಜಟಿಲಸ್ವಭಾವ ಕುಟಿಲವರ್ತನೆಗಳಿಗೆ ಅನುಗುಣವಾಗಿ ಶೈಲಿ ಜಟಿಲಬಂಧದಲ್ಲಿ ಹೆಣೆದುಕೊಳ್ಳುತ್ತ, ಕುಟಿಲಗತಿಯಲ್ಲಿ ಬಾಗಿ ಬಳುಕಿ ಸಾಗುತ್ತದೆ.

'ಮುದ್ರಾಮಂಜೂಷ'ದ ಸಂವಾದಗಳಲ್ಲಿ ಪಾತ್ರಗಳು ನಡಸುವ ವಿಚಾರವಿಶ್ಲೇಷಣೆಗಳೇ ಕೃತಿಗೆ ಪ್ರಾಣಸದೃಶವಾದವು. ಈ ವಿಶ್ಲೇಷಣಗಳಲ್ಲಿ ಸಾಮಾನ್ಯವಾಗಿ ಸ್ವಗತವಾದ ಒಂದು ಮುಖವೂ ಪ್ರಕಾಶವಾದ ಇನ್ನೊಂದು ಮುಖವೂ ಇರುತ್ತಿದ್ದು, ಎರಡೂ ಸಯುಕ್ತಿಕಗಳಾಗಿಯೇ ಅರಳುತ್ತಲೋ ಹಿಂಜುತ್ತಲೋ ಸಾಗುವುದರಿಂದ ಅವನ್ನು ಹಾಗೆ ಸಂಯೋಜಿಸಿದ ಕವಿಯ ಪ್ರತಿಭಾಸಂಪನ್ನತೆ ವಿಸ್ಮಯಕಾರಿಯಾಗಿ ಕಾಣುತ್ತದೆ. ಇಲ್ಲಿ ಒಂದು ಇನ್ನೊಂದು ಮುಖಕ್ಕೆ ಪೂರ್ವಪಕ್ಷವೋ ಸಿದ್ಧಾಂತವೋ ಆಗಿ ಕಾಣುತ್ತದೆ ; ಯಾವುದೊಂದನ್ನು ನೋಡಿದರೂ, ಓದಿದರೂ ಅದೇ ಸಾಧುವಾದುದು, ಗ್ರಾಹ್ಯವಾದುದು ಎನ್ನುವಂತಿರುವುದೇ ಆ ವಿಸ್ಮಯಕ್ಕೆ ಕಾರಣವೆನ್ನಬೇಕು. ಈ ವೈಚಿತ್ರ್ಯವು ಬಲುಮಟ್ಟಿಗೆ ಕವಿ ಅಭ್ಯಾಸಮಾಡಿದ್ದ ತರ್ಕಶಾಸ್ತ್ರದ ಪರಿಣತಿಯ ಫಲವೆಂದೇ ತೋರುತ್ತದೆ. ಇಂತಹ ಪರಿಣತಿಯ ಕಾರಣದಿಂದಲೇ ಕಥೆಯ ಗತಿಯಲ್ಲಿ, ಪಾತ್ರಗಳ ಕ್ರಿಯೆಯಲ್ಲಿ ಒಂದು ಬಗೆಯ ಅನುಸ್ಯೂತತೆಯನ್ನು ಎಷ್ಟು ದೂರದ ವರೆಗಾದರೂ ಸರಿಯೆ ಈ ಕತೆಗಾರ ನೆನಪಿಟ್ಟುಕೊಂಡು ನಿರ್ದುಷ್ಟವಾಗಿ ಪಾಲಿಸಬಲ್ಲನೆಂದು ಹೇಳಬಹುದಾಗಿದೆ. ನಮ್ಮ ಕಾಲದ ವಾಕ್ಯರಚನೆಯ ದೃಷ್ಟಿಯಿಂದ ಆಗಾಗ ವಿಲಕ್ಷಣತೆ ಎಂಬುದು ಭಾಷೆಯಲ್ಲಿ ಕಾಣುವುದಲ್ಲದೆ, ವಸ್ತುವಿನಲ್ಲಿ ಅಲ್ಲ ಎಂದು ತಿಳಿದಿರಬೇಕು.

(೬) ಕನ್ನಡ ಗದ್ಯಸಾಹಿತ್ಯದಲ್ಲಿ ಸ್ಥಾನ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ನಂಜುಂಡ ಕವಿ, ಗೋವಿಂದ ವೈದ್ಯ, ತಿರುಮಲಾರ್ಯ, ಲಿಂಗಣ್ಣ ಕವಿ, ದೇವಚಂದ್ರ, ರಾಮಕೃಷ್ಣ ಶಾಸ್ತ್ರಿ, ತಮ್ಮಯ್ಯ ಶಾಸ್ತ್ರಿ, ದೇವಲಾಪುರದ ನಂಜುಂಡ ಈ ಕೆಲವರು ಚಾರಿತ್ರಿಕಕಾವ್ಯಗಳನ್ನು ಬರೆದಿದ್ದಾರೆ. ಇವರಲ್ಲಿ ಕೊನೆಯ ನಾಲ್ವರು ನಾರಾಯಣ ಶರ್ಮನ ಕಾಲದವರು. ಈತನ ಕೃತಿಗೆ ಅನ್ಯರಲ್ಲಿ ಕಾಣದ ಒಂದು ಪ್ರತ್ಯೇಕತೆಯುಂಟು. ಅನ್ಯರ ರಚನೆಗಳು ಕರ್ನಾಟಕದ ಇತಿಹಾಸವನ್ನು ವಸ್ತುವಾಗಿ ಉಳ್ಳವು; ನಾರಾಯಣ ಶರ್ಮನದು ಮೌರ್ಯೇತಿಹಾಸದ ಒಂದು ವಿಶೇಷಸಂದರ್ಭಕ್ಕೆ ಸೇರಿದುದು. ಇದಕ್ಕೆ ಆತನು ಇತರ ಹಲವರ ಹಾಗೆ ತನ್ನ ಆಶ್ರಯದಾತನನ್ನು, ಅವನ ಜೀವನ ಸಾಧನೆಗಳನ್ನು ಮುಖ್ಯವಾಗಿ ಮಾಡಿಕೊಳ್ಳಲಿಲ್ಲ ; ವಿಶಾಲವ್ಯಾಪ್ತಿಯನ್ನುಳ್ಳ, ಭವ್ಯ ಭಾರತದ ಇತಿಹಾಸದ ಸಂಧಿಕಾಲವೊಂದರಲ್ಲಿ ಘಟಿಸಿದ, ಮಹತ್ತರವೂ ಮಾರ್ಮಿಕವೂ

ಆದ ಒಂದು ಚಾರಿತ್ರಿಕಘಟನೆಯ ನಿರೂಪಣೆಯನ್ನು ಮುಖ್ಯವಾಗಿ ಮಾಡಿಕೊಂಡಿದ್ದಾನೆ. ಆ ಘಟನೆ ಮೌರ್ಯೇತಿಹಾಸದ ಚಂದ್ರಗುಪ್ತ-ಚಾಣಕ್ಯ ಕಥೆಯಾಗಿದೆ. ಮುದ್ರಾರಾಕ್ಷಸ ಮತ್ತು ಅದರ ಪೂರ್ವಕಥೆಗಳನ್ನು ಆಕರಗಳಾಗಿಟ್ಟುಕೊಂಡು ಕಥೆಯನ್ನು ನಿರ್ವಹಿಸಿದ್ದರೂ, ಸ್ವಂತ ಕಲ್ಪನೆಯ ಬಲದಿಂದ ಹೊಸಕಾಲದ ಕಾದಂಬರಿಯಂತಹ ಕಥೆಯೊಂದು ಸೊಗಸಾಗಿ ಅರಳಿ ನಿಲ್ಲುವಂತೆ ಮಾಡಿದ್ದಾನೆ. ಕತೆಗಾರ ಸಮಸಾಮಯಿಕನಲ್ಲವಾದ್ದರಿಂದ ಚಾರಿತ್ರಿಕ ಸಂಗತಿಗಳನ್ನು ದಿಟವೇ ಅಲ್ಲವೇ ಎಂದು ತಾಳೆ ನೋಡಲಾಗದು. ಆದರೆ ಚಾರಿತ್ರಿಕ ಸಂಭಾವ್ಯತೆ, ಕಲಾತ್ಮಕ ಕಥನಕೌಶಲ ಇವು ಇಲ್ಲಿ ಮುಖ್ಯ. ಹಳೆಯ ಕಾಲದ ಐತಿಹಾಸಿಕ ಕಥೆಯ ಘಟನೆಗಳ ಯಥಾತಥ ಕಥನವಲ್ಲ ; ಪೂರ್ವಸೂರಿನಿರ್ಮಿತವಾದ ಆಕರಗಳನ್ನು ತಕ್ಕ ಸ್ವಾತಂತ್ರ್ಯ ಸಂಯಮಗಳೊಂದಿಗೆ ಅನುಸರಿಸಿ ಸಿದ್ಧಮಾಡಿದ ಹೊಸಕಾಲದ, ಹೊಸ ದೃಷ್ಟಿಯ ಪುನಃಸೃಷ್ಟಿ.

"ಮುಮ್ಮಡಿ ಕೃಷ್ಣರಾಜವೊಡೆಯರವರು ಸಿಂಹಾಸನಕ್ಕೆ ಬರಲು, ಮೈಸೂರಿಗೆ ಹೇಗೋ, ಕನ್ನಡ ಸಾಹಿತ್ಯಕ್ಕೂ ಹಾಗೆಯೇ, ಆಧುನಿಕಯುಗವು ಆರಂಭವಾಯಿತು" (ಎ. ಆರ್. ಕೃ. 'ಕರ್ಣಾಟಕ ಮುದ್ರಾರಾಕ್ಷಸ ನಾಟಕಂ', ಗ್ರಂಥವಿಮರ್ಶೆ, ಕಸಾಪ. ೧೭-೧, ಪು. ೭೦). ಈ ಕಾಲ ಕನ್ನಡ ಸಾಹಿತ್ಯದ ಪುನರುಜ್ಜೀವನದ ಕಾಲ ; ದಿಟವಾಗಿ ಗದ್ಯಸಾಹಿತ್ಯದ ಸ್ವರ್ಣಯುಗ. ಸಂಸ್ಕೃತ ಪುರಾಣೇತಿಹಾಸಗಳನ್ನೂ ಕಾವ್ಯನಾಟಕಾದಿಗಳನ್ನೂ ಸಂಸ್ಕೃತದ ಪರಿಚಯವಿಲ್ಲದ ಜನಸಾಮಾನ್ಯಕ್ಕೆ ಸುಲಭವಾಗಿ ಹೊಸಗನ್ನಡ ಗದ್ಯರೂಪದಲ್ಲಿ ಪರಿಚಯಿಸುವುದನ್ನು ಉದ್ದೇಶವಾಗಿಟ್ಟುಕೊಂಡು ಪ್ರಭುಗಳೂ ಅವರ ಆಶ್ರಿತರಾದ ಕವಿಗಳೂ ನಿರಂತರವಾಗಿ ಪ್ರಯತ್ನಿಸಿದರು. ಬೃಹತ್ಕಥಾಮೂಲದ ರಮ್ಯ ಕಾಲ್ಪನಿಕಕಥಾನಕಗಳು ಕೇವಲ ಮನೋರಂಜನೆ ಉದ್ದೇಶವಾಗಿ ಸಿದ್ಧವಾದವು. ಧರ್ಮ, ಶಾಸ್ತ್ರ, ಐತಿಹ್ಯ, ಪುಣ್ಯಕಥಾಶ್ರವಣ, ಮನೋರಂಜನೆ ಎಂಬ ಉದ್ದೇಶದ ಕಥೆಗಳನ್ನು ವರ್ಜಿಸಿ, ರಾಜನೀತಿ ಬುದ್ಧಿಕೌಶಲ ಶೌರ್ಯಸಂದರ್ಭಗಳು ಪ್ರಕಟವಾಗುವುದು ಉದ್ದೇಶವಾಗಿ 'ಮುದ್ರಾಮಂಜೂಷ' ರಚನೆಯಾಯಿತು. ಈ ವಿಷಯದಲ್ಲಿ ಇತರ ಕವಿಗಳಿಗಿಂತ ಬೇರೆಯಾಗಿ ಕವಿ ನಾರಾಯಣ ಶರ್ಮನು ಯೋಚಿಸಿದುದು ಸ್ತುತ್ಯವಾದ್ದು.

ಮುಮ್ಮಡಿಯವರ ಗದ್ಯರಚನೆಗಳು ಪುರಾಣೇತಿಹಾಸಗಳ, ಕಾವ್ಯ ನಾಟಕಾದಿಗಳ ಭಾಷಾಂತರಗಳು, ವ್ಯಾಖ್ಯಾನಗಳು ಮತ್ತು ವಿವರಣೆಗಳು. ಯಾದವನ 'ಕಲಾವತೀ ಪುರಾಣ' ವಿಲಕ್ಷಣ ಪದ್ಯಗಂಧಿ ಶೈಲಿಯಲ್ಲಿ ಪ್ರೌಢವಾಗಿ ನಿಬದ್ಧಗೊಂಡ ಕಲ್ಪಿತಕಥೆ. ದೇವಚಂದ್ರನ 'ರಾಜಾವಳೀ ಕಥಾಸಾರ' ಸಂಕ್ಷಿಪ್ತ ರಾಜಚರಿತೆಗಳೂ ಕಥಾಗುಚ್ಛಗಳೂ, ಜನಸಾಮಾನ್ಯರ ಆಚಾರವಿಚಾರಗಳೂ ಪರಂಪರೆಯ ಐತಿಹ್ಯಗಳೂ ತುಂಬಿದ ರಚನೆ. ರಾಮಕೃಷ್ಣಕವಿಯ 'ಭುವನಪ್ರದೀಪಿಕೆ' ಸಮ್ಮಿಶ್ರ ವಸ್ತುವಿವರದ ವಿಶ್ವಕೋಶಸದೃಶ ಗದ್ಯ ಕೃತಿ. ಹೀಗಿರುವಾಗ, 'ಮುದ್ರಾಮಂಜೂಷ'ವಾದರೋ ಗಟ್ಟಿಯಾದ ಚಾರಿತ್ರಿಕವಸ್ತುವನ್ನಾಧರಿಸಿದೆ ; ಘಟನಾವಳಿಯನ್ನು ತರ್ಕಬದ್ಧವಾಗಿ, ಹೊಸಕಾಲದ ಕಾದಂಬರಿಯಲ್ಲಿ ಬೆಳಸುವ ಹಾಗೆ ಏಕಮುಖವಾಗಿ ಬೆಳಸಿದೆ ; ವರ್ಣನೆ ಉಪಕಥೆಗಳು ಧರ್ಮೋಪದೇಶಗಳು ಶಾಸ್ತ್ರವಿಷಯಗಳಿಗೆ ಎಂದು ಎಲ್ಲಿಯೂ ಅಡ್ಡದಾರಿ ಹಿಡಿಯದೆ, ಅತಿಪ್ರೌಢವೂ ಶಿಥಿಲವೂ ಅಲ್ಲದ ಮಧ್ಯಮರೀತಿಯ ಹೊಸಗನ್ನಡ ಗದ್ಯದಲ್ಲಿ ಮುಖ್ಯಕಥೆಯನ್ನು ನಿರ್ವಹಿಸಿದೆ.

ಘಟನೆಗಳು ಒತ್ತೊತ್ತಾಗಿದ್ದು, ಕುತೂಹಲ ಹುಟ್ಟುವಂತೆ ಮುನ್ನಡೆಯನ್ನು ಸಾಧಿಸುತ್ತ, ಮುಂದೇನು ಎಂಬ ಆಕಾಂಕ್ಷೆಗೆ ಅವಕಾಶಮಾಡುತ್ತ, ಕಥಾರಂಜನೆಯನ್ನು ಸಾಧಿಸಿವೆ.

ಕನ್ನಡದ ಚಾರಿತ್ರಿಕ ಕಾವ್ಯಗಳಲ್ಲಿಯೂ ಕಾಲ್ಪನಿಕ ಕಥಾಕಾವ್ಯಗಳಲ್ಲಿಯೂ ವಿಪುಲ ವಿಸ್ತೃತ ವರ್ಣನೆಗಳೂ ಶೃಂಗಾರಸನ್ನಿವೇಶಗಳ ಇಲ್ಲವೆ ಯುದ್ಧಸಂದರ್ಭಗಳ ಪ್ರಚುರತೆಯೂ ಸಾಮಾನ್ಯವಾಗಿದ್ದು, 'ಮುದ್ರಾಮಂಜೂಷ'ದಲ್ಲಿ ಅವು ಆ ಮಟ್ಟಿಗೆ ಕಂಡುಬರುವುದಿಲ್ಲ. ಇದು ಗಮನಾರ್ಹ. ಈ ವಿಷಯದಲ್ಲಿ ಅದರ ಮೂಲಗಳು, ಮುಖ್ಯವಾಗಿ 'ಮುದ್ರಾರಾಕ್ಷಸ' ನಾಟಕವು, ಗಳಿಸಿರುವ ಪ್ರಶಸ್ತಿಯೇ ಅದಕ್ಕೆ ಸಹ ಸಲ್ಲುತ್ತದೆ. ಅಷ್ಟು ಮಾತ್ರವಲ್ಲ, ಸಂಸ್ಕೃತನಾಟಕವೊಂದನ್ನು ಕನ್ನಡದ ಕಥನಗದ್ಯಕ್ಕೆ ಮೊದಲ ಸಲ ಪರಿವರ್ತಿಸಿದ ಕೀರ್ತಿಯೂ—ಒಂದು ಭಾಗದ ಕಥೆಯ ಸಲುವಾಗಿ—ಅವನಿಗೇ ಸಲ್ಲುತ್ತದೆ.

೧೮-೧೯ನೆಯ ಶತಮಾನದ ಸಂಧಿಕಾಲದಲ್ಲಿ ಕರ್ನಾಟಕದ ಒಂದು ಭಾಗದ ವಿಶಿಷ್ಟವಾದ ರಾಜಕೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿದ್ಯಮಾನಗಳ ಪ್ರತ್ಯಕ್ಷವೂ ಪರೋಕ್ಷವೂ ಆದ ಪ್ರತಿಫಲನಗಳಿಂದ ಕೃತಿಗೆ ಬೆಲೆ ಬಂದಿದೆ. ಟಿಪ್ಪು ಹೈದರ್ ಕಾಲದಲ್ಲಿ ರೂಢಿಯಾಗಿದ್ದ ಗೂಢಚರ್ಯೆ, ಷಡ್ಯಂತ್ರ, ಯುದ್ಧಸಿದ್ಧತೆ ಮತ್ತು ಯುದ್ಧಕಾರ್ಯಾಚರಣೆ, ಶಿಕ್ಷೆ, ರಾಜಕೀಯ ಚಲನವಲನಗಳಿಗೆ ಜನಸಾಮಾನ್ಯದ ಕ್ರಿಯೆ ಪ್ರತಿಕ್ರಿಯೆಗಳು, ಪುರಶೃಂಗಾರ, ದೇಶೀಯ ವೈದ್ಯಪದ್ಧತಿ, ಯಜ್ಞಯಾಗಾದಿ ಕಾರ್ಯಗಳು, ಧಾರ್ಮಿಕವಿಧಿಗಳಲ್ಲಿ ಜನರ ನಂಬಿಕೆ, ತೆರಿಗೆ ಸುಂಕಗಳ ಸಲುವಳಿ ಇತ್ಯಾದಿಗಳನ್ನು ಕೃತಿ ಸಮಕಾಲೀನ ಅನುಭವ ಮೂಲವಾಗಿ ಹಿಡಿದಿಟ್ಟಿದೆ.

೧೯ನೆಯ ಶತಮಾನದಲ್ಲಿ ಹಳ್ಳಿಯ ಕಡೆ ವಿದ್ಯಾವಂತರ, ಕರಣಿಕರ ಮಾತು ಬರೆಹಗಳಲ್ಲಿ 'ಮುದ್ರಾಮಂಜೂಷ'ದ ಪ್ರಭಾವವನ್ನು ಕಾಣಬಹುದಾಗಿತ್ತು ; ಚಾತುರ್ಯದ ಮಾತು, ಕುಟಿಲತನದ ನಡೆವಳಿಕೆ ಮುಂತಾದುವು ಪ್ರಕಟವಾದಾಗ 'ಮುದ್ರಾಮಂಜೂಷ'ವನ್ನು ನೆನೆಯುವ ರೂಢಿಯಿತ್ತು. ಇದಕ್ಕೆ ಕೃತಿವಸ್ತು ಮಾತ್ರವೇ ಅಲ್ಲ, ಹೃದಯಂಗಮವಾದ ಭಾಷಾಶೈಲಿಗಳೂ ಕಾರಣವಾಗಿದ್ದುವು.

ಹೊಸಗನ್ನಡ ಗದ್ಯಸಾಹಿತ್ಯದ ಬೆಳವಣಿಗೆಯಲ್ಲಿ 'ಮುದ್ರಾಮಂಜೂಷ'ದ ಗದ್ಯಕ್ಕೆ ಒಂದು ವಿಶೇಷವಾದ ಸ್ಥಾನವಿದೆ. ಆಡುಮಾತಿನ ಶಿಥಿಲತೆಗೆ ಇಳಿಯದೆ, ಜಾನಪದದ ಗ್ರಾಮ್ಯಕ್ಕೆ ಜಾರದೆ, ಪಂಡಿತರ ಸಂಸ್ಕೃತಮಯ, ಸಮಾಸಶ್ಲಿಷ್ಟ, ಕ್ಲಿಷ್ಟಪದಪ್ರಯೋಗ ವಾಕ್ಯರಚನೆಗಳ ಕೃತಕಪ್ರೌಢಿಮೆಗೆ ತೂಗಿ ತೊನೆಯದೆ, ಈ ಎಲ್ಲ ವಾಗ್ರೂಢಿಯನ್ನೂ ಪಾತ್ರ ರಸ ಮತ್ತು ಸನ್ನಿವೇಶ ಭೇದಗಳಿಗೆ ಅನುಸಾರವಾಗಿ ಸಮಧಾತುವಾಗಿ ಹದಗೊಳಿಸಿ ಬೆರಸಿರುವುದು ಇಲ್ಲಿಯ ವೀರ್ಯವತ್ತಾದ ಶೈಲಿಯಲ್ಲಿ ಕಂಡುಬರುತ್ತದೆ. ೧೮-೧೯ ನೆಯ ಶತಮಾನದಲ್ಲಿ ರಚಿತವಾದ ಉರ್ದು-ಫಾರಸಿ ಶಬ್ದಗಳ ವೆಗ್ಗಳಬಳಕೆಯ ಬಖೈರು ಕೈಫಿಯತ್ತುಗಳ ಗದ್ಯಶೈಲಿಯನ್ನು ಕವಿ ದೂರವೇ ಇಟ್ಟಿದ್ದಾನೆ.

ವಸ್ತು ಐತಿಹಾಸಿಕವಾಗಿದ್ದರೂ, ಗದ್ಯರಚನೆಯೊಂದು ಕಾದಂಬರಿಯಾಗಲು ತಕ್ಕ ಲಕ್ಷಣಗಳಿಂದ ಕೂಡಿರಬಹುದು ಎನ್ನುವುದಾದರೆ, ಅದನ್ನು ಐತಿಹಾಸಿಕ ಕಾದಂಬರಿ ಎನ್ನಲಡ್ಡಿಯಿಲ್ಲ. 'ಮುದ್ರಾಮಂಜೂಷ'' ಅಂತಹ ಲಕ್ಷಣಗಳಿಂದ ಕೂಡಿರುವುದರಿಂದ ಅದೊಂದು ಐತಿಹಾಸಿಕ ಕಾದಂಬರಿಯಾಗಿದೆ ; ಅಷ್ಟು ಮಾತ್ರವಲ್ಲ, ಅದು ಕನ್ನಡದ ಮೊತ್ತ

ಮೊದಲ ಕಾದಂಬರಿಯೆಂಬ ಅಗ್ಗಳಿಕೆಗೂ ಪಾತ್ರವಾಗಿದೆ. ಕೆಲವು ಅಭಿಪ್ರಾಯಗಳು :

೧. " 'ಮುದ್ರಾಮಂಜೂಷ'ವು ನಿಜವಾಗಿ ಕನ್ನಡದ ಮೊದಲ ಕಾದಂಬರಿ. ಇಂಗ್ಲಿಷಿನ ಸಂಪರ್ಕವಿನ್ನೂ ಕನ್ನಡಕ್ಕೆ ತಟ್ಟದಿದ್ದಾಗಲೇ ಹುಟ್ಟಿದ ಐತಿಹಾಸಿಕ ಕಾದಂಬರಿ" (ತೀ. ನಂ. ಶ್ರೀಕಂಠಯ್ಯ, 'ರಾಕ್ಷಸನ ಮುದ್ರಿಕೆ', ಪು. iii).೨. "ಹೊಸಗನ್ನಡದ ಪ್ರಥಮ ಸ್ವತಂತ್ರ ಐತಿಹಾಸಿಕ ಕಾದಂಬರಿ" (ಶ್ರೀನಿವಾಸ ಹಾವನೂರ, 'ಹೊಸಗನ್ನಡದ ಅರುಣೋದಯ', ಪು. ೫೩೨). ೩. "ಮುದ್ರಾಮಂಜೂಷ ಕನ್ನಡದ ಮೊದಲನೆಯ ಕಾದಂಬರಿ" (ಸಿ. ಪಿ. ಕೆ., 'ಮುಮ್ಮಡಿ ಕೃಷ್ಣರಾಜ ಒಡೆಯರು', ಪು. ೩೪). ೪. "ಕೆಂಪುನಾರಾಯಣನ ಗ್ರಂಥ ಇಂಗ್ಲಿಷ್ ಭಾಷಾ ಸಾಹಿತ್ಯಗಳ ಪ್ರಭಾವ ನಮ್ಮ ಭಾಷೆಗೆ ತಟ್ಟದಿದ್ದಾಗ ರಚಿತವಾದ ಮೊಟ್ಟ ಮೊದಲನೆಯ ಕಾದಂಬರಿಯೆಂದು ಧೈರ್ಯವಾಗಿ ಹೇಳಬಹುದು" (ಎಚ್. ಎಂ. ಎಸ್. ರಾವ್. 'ಕೆಂಪುನಾರಾಯಣ', ಪು. ೧೬೩)." ೫. "ಕನ್ನಡದಲ್ಲಿ ಸ್ವತಂತ್ರ ಐತಿಹಾಸಿಕ ಕಾದಂಬರಿಗಳಲ್ಲಿ ಮೊದಲನೆಯದೆಂದು 'ಮುದ್ರಾಮಂಜೂಷ'ವನ್ನು ಹೇಳಬಹುದು." (ಗುರುನಾಥ ಜೋಶಿ, ಕನ್ನಡ ಐತಿಹಾಸಿಕ ಕಾದಂಬರಿಗಳು, ಕನ್ನಡ ನುಡಿ, ೨೨-೧, ೨, ೧೯೫೯, ಪು. ೧೫). ೬. "ಹೊಸಗನ್ನಡದ ಕಥೆಯನ್ನೂದಿದ ಮೊದಲ ಕಾದಂಬರಿ ಇದು ಎಂದು ಹೇಳಬಹುದು." (ಹು. ಕಾ. ಜಯದೇವ್, 'ಶಾಸನ ಮತ್ತು ಗದ್ಯ', ಬೆಂಗಳೂರು ವಿ. ವಿ., ಬೆಂಗಳೂರು, ಪು. ೧೭೭). ೭. "This is virtually the first prose work of Modern Kannada literature and may be said to be the first historical romance in Kannada (Prabhushankara, The Cultural Heritage of India, Vol. V, 1991, P. 516)".

ಇವುಗಳ ಜೊತೆಗೆ ಈ ಕೆಲವು ಮಾತುಗಳನ್ನೂ ಗಮನಿಸಬಹುದು : ೧. "ಶ್ರೇಷ್ಠ ಕಾದಂಬರಿಯಲ್ಲಿ ಯಾವ ಯಾವ ಲಕ್ಷಣಗಳಿರಬೇಕೆಂಬ ಆಧುನಿಕ ರಚನಾತಂತ್ರದ ದೃಷ್ಟಿಯಿಂದ ಪರಿಶೀಲಿಸಿದರೆ 'ಮುದ್ರಾಮಂಜೂಷ'ದಲ್ಲಿ ಕೆಲವು ಲೋಪದೋಷಗಳು ಕಂಡುಬರುವುದೇನೋ ನಿಜವೇ. ಆದರೆ ಅದು ಕನ್ನಡ ಕಾದಂಬರಿಪ್ರವರ್ತಕರಲ್ಲೊಬ್ಬನ ಕೃತಿಯೆಂಬುದನ್ನು ನಾವು ಮರೆಯಬಾರದು ; ಇಂದಿನದನ್ನು ಅಂದಿನದಕ್ಕೆ ಅನ್ವಯಿಸುವುದು ಉಚಿತವೂ ಅಲ್ಲ" (ಸಿ. ಕೆ. ವೆಂಕಟರಾಮಯ್ಯ, ಕೆಂಪುನಾರಾಯಣ, ಕನ್ನಡ ನುಡಿ, ಏ. ೧೯೬೩, ಪು. ೮೦). ೨. "ಕೆಂಪುನಾರಾಯಣನದು ಕಾದಂಬರಿಯ ರೂಪವಿನ್ಯಾಸವನ್ನು ಸಂಸ್ಕೃತದ ಕಥಾರೂಪದೊಂದಿಗೆ ಜೋಡಿಸುವ ಪ್ರಯತ್ನವಾಗಿದೆ. ಇತಿಹಾಸವನ್ನು ವಸ್ತುವಾಗಿಟ್ಟುಕೊಂಡು ಬರೆಯುವುದು ಕೂಡ ಆಗಿನ ಕಾಲಕ್ಕೆ ಹೊಸಮಾತಾಗಿತ್ತು . . . ಮೊಟ್ಟ ಮೊದಲಿಗೆ ಅವನು ಆಧುನಿಕಜನತೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಬರೆದಿದ್ದಾನೆ" (ಕೆ. ಡಿ. ಕುರ್ತಕೋಟಿ, 'ಯುಗಧರ್ಮ ಮತ್ತು ಸಾಹಿತ್ಯ ದರ್ಶನ', ಪು. ೧೪)೩. "ಸಂವಿಧಾನ, ಸಂಭಾಷಣೆಯ ರೀತಿ, ಸಮಕಾಲೀನಭಾಷೆಯ ಬಳಕೆ, ಜನಜೀವನದ ಚಿತ್ರಣ ಹೀಗೆ ಹಲವಾರು ದೃಷ್ಟಿಗಳಿಂದ 'ಮುದ್ರಾಮಂಜೂಷ' ಆಧುನಿಕತೆಯ ಮುದ್ರೆಯನ್ನು ಹೊತ್ತುಕೊಂಡಿದೆ." (ಸಿ. ಪಿ. ಕೆ., ಪೂರ್ವೋಕ್ತ).

ಈ ಎಲ್ಲ ಮಾತುಗಳೂ 'ಮುದ್ರಾಮಂಜೂಷ'ವನ್ನು ಹೊಸಕಾಲದ ಕನ್ನಡ ಕಾದಂಬರಿಯೆಂದೂ ಅದರ ರೂಪ ಮತ್ತು ಲಕ್ಷ್ಯ ಎರಡೂ ಹೊಸ ದೃಕ್ಪಥಗಳಲ್ಲಿ ಸಾಗಿವೆಯೆಂದೂ

ಸ್ಪಷ್ಟಪಡಿಸತಕ್ಕುವಾಗಿವೆ:

'ಮುದ್ರಾಮಂಜೂಷ' ಒಂದು ಸೊಗಸಾದ ಗದ್ಯಕಥೆ ; ಒಂದು ಐತಿಹಾಸಿಕ ಕಾದಂಬರಿಯಾಗಿ ಕನ್ನಡದಲ್ಲಿ ಆ ಮೊದಲು ಕಂಡು ಬಂದಿಲ್ಲದ ರೀತಿಯ ಸಾಹಿತ್ಯಕೃತಿ. ಇದು ಕವಿಯ ಕಾಲದಿಂದೀಚೆಗೆ ಹಲವು ದಶಕಗಳವರೆಗೆ ಕನ್ನಡ ಸಾಹಿತ್ಯಲೋಕದಲ್ಲಿ ಯಾವ ಪ್ರಭಾವ ಪರಿಣಾಮಗಳನ್ನು ಉಂಟುಮಾಡಿತು ಎನ್ನುವುದು ಒಂದು ಕುತೂಹಲದ ಸಂಗತಿ. ಅಚ್ಚಿನಲ್ಲಿ ಬರುವ ಮೊದಲು ಅದರ ಪ್ರಚಾರ ಪ್ರಸಿದ್ಧಿಗಳು ಹೇಗೆ ? ಇಷ್ಟು ಕುತೂಹಲಕರ ವಿಸ್ತೃತ ಕಥಾಗ್ರಂಥವನ್ನಾಗಲಿ ಅದರ ಕವಿಯನ್ನಾಗಲಿ ತತ್ಕಾಲವಿವರಗಳನ್ನು ಕೊಡುವ ಸಮಕಾಲೀನಗದ್ಯಕವಿ ದೇವಚಂದ್ರನಂಥವನು ಸಹ ಒಮ್ಮೆಯಾದರೂ ನೆನೆಯುವುದಿಲ್ಲ. ಹೋಗಲಿ. ಕನ್ನಡ ಸಾಹಿತ್ಯದ ಇತಿಹಾಸವನ್ನು ಬರೆಯಲು ಹೊರಟ ಆರಂಭಕಾಲದ, ಹೊಸದೃಷ್ಟಿಯ ಸಾಹಿತ್ಯಚರಿತ್ರಕಾರರು, ಕಿಟ್ಟೆಲ್, ಲೂಯಿ ರೈಸ್ ಇವರು, ಎಷ್ಟೋ ಸಣ್ಣಪುಟ್ಟ ಕವಿಗಳ ಹೆಸರು ಹೇಳುವವರು, ಮುದ್ರಾಮಂಜೂಷಕಾರನನ್ನು ಹೆಸರಿಸುವುದಿಲ್ಲ ಎನ್ನುವುದು ಸೋಜಿಗದ ಸಂಗತಿ. ಜೆ. ಸ್ಟೀವನ್‌ಸನ್ (ಮುದ್ರಾಮಂ.ದ ಪ್ರಚಲಿತ ಪರಿಷ್ಕರಣದ ಸಂಪಾದಕರು) ರಾ. ನರಸಿಂಹಾಚಾರ್ ('ಕರ್ಣಾಟಕ ಕವಿಚರಿತೆ', ಸಂ. ೩) ಇವರು ಈ ಕೃತಿಯನ್ನು 'ಮುದ್ರಾರಾಕ್ಷಸ'ವೆಂಬ ನಾಟಕದ ಭಾಷಾಂತರವೆಂದು ಒಟ್ಟು ಮಾತಾಗಿ ಬರೆದಿರುವುದು ಸಹ ಹೀಗೆಯೇ ಸೋಜಿಗದ ಸಂಗತಿ. ಮುಂದುವರಿದು, ಇಂತಹ ಮಹತ್ತ್ವದ ಕೃತಿಯ ಕರ್ತೃ ಸ್ಟೀವನ್‌ಸನ್ ಎಂದೇ ಈಚೆಗೆ ಒಂದೆಡೆ ಕರೆದಿರುವುದೂ ('ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ', ೧೯೭೯, ಪು. ೪೬೪-೬೫) ಕೃತಿಕರ್ತೃವನ್ನು ಸಂಪಾದಕನೆಂದು ಇನ್ನೊಂದೆಡೆ ಕರೆದಿರುವುದೂ (ಕರ್ಣಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ೧೯೮೫ರ ಪರಿಷ್ಕರಣ) ಮತ್ತೂ ಅಚ್ಚರಿಯ ಸಂಗತಿ.

ಧಾರ್ಮಿಕಹಿನ್ನೆಲೆಯ ಕೃತಿಯಲ್ಲವಾದುದರಿಂದ ರುದ್ರಭಟ್ಟ, ಕುಮಾರವ್ಯಾಸ, ಲಕ್ಷ್ಮೀಶ, ಷಡಕ್ಷರಿ ಈ ಕೆಲವರ ಕೃತಿಗಳು ಗಳಿಸಿದ್ದ ಜನಪ್ರಿಯತೆ 'ಮುದ್ರಾಮಂಜೂಷ'ಕ್ಕೆ ಇದ್ದಿತೆಂದು ಹೇಳುವುದು ಕಷ್ಟ. ಗ್ರಂಥಕರ್ತೃವನ್ನೂ ಗ್ರಂಥವನ್ನೂ ಕುರಿತ ಪ್ರಸ್ತಾವಗಳೇ ದುರ್ಲಭ ; ಗ್ರಂಥದ ಹಸ್ತಪ್ರತಿಗಳಂತೂ ತೀರ ವಿರಳ. ತನ್ನ ಕಾಲಕ್ಕೆ ಇದು ಒಂದು ಪ್ರಗತಿಶೀಲ ಮನೋಧರ್ಮದ ಸಾಹಿತ್ಯಕೃತಿ, ಧರ್ಮವನ್ನು ಹಿಂದೂಡಿ ಇತಿಹಾಸಕ್ಕೆ ಮಾನ್ಯತೆ ನೀಡಿದ ವಿಶಿಷ್ಟಕೃತಿ. ಮುಮ್ಮಡಿಯವರ ಕಾಲದಲ್ಲಿ ವಸ್ತುವೈವಿಧ್ಯದ ಕೃತಿಗಳು ಮಿಗಿಲಾಗಿ ಬಂದುವು ಎನ್ನುವುದನ್ನು ಒಪ್ಪಿದರೂ ಈ ತೆರನ ರಚನೆಗೆ ಒಂದು ಅನನ್ಯತೆಯಿದೆ. ಚಂದ್ರಗುಪ್ತನಿಗೆ ರಾಜ್ಯಪ್ರಾಪ್ತಿಯಾಗುವಂತೆ ಮಾಡುವುದರಲ್ಲಿ ಬೌದ್ಧಮತದ ಪ್ರಾಬಲ್ಯವನ್ನು ತಗ್ಗಿಸಿ ವೈದಿಕಮಾರ್ಗವನ್ನು ಉಚ್ಛ್ರಾಯಕ್ಕೆ ತರುವುದೇ ತನ್ನ ಉದ್ದೇಶವೆಂದು ಚಾಣಕ್ಯ ತನಗೆ ಶಿಷ್ಯನಾದ ಶಾರ್ಙ್ಗರವನಿಗೆ ಹೇಳಿದ ಸಂದರ್ಭವನ್ನು ನೋಡಿದರೆ, ಕೃತಿಯನ್ನು ಧಾರ್ಮಿಕವನ್ನಾಗಿ ಮಾಡುವ ಸಾಂಪ್ರದಾಯಿಕತೆ ಕೂಡ ಸ್ವಲ್ಪ ಕೆಲಸಮಾಡಿರುವುದು ದಿಟ.

ಕೃತಿಗೆ ಜನಪ್ರಿಯತೆ ಬಂದುದು ಅದರ ಮುದ್ರಿತ ಪರಿಷ್ಕರಣಗಳ ಕಾಲದಿಂದಲೇ ಎಂದು ತೋರುತ್ತದೆ. ಅದರ ವಸ್ತುವನ್ನೂ ಭಾಷೆ ಶೈಲಿಗಳನ್ನೂ ಮೆಚ್ಚಿದ್ದ ಜೆ. ಸ್ಟೀವನ್‌ಸನ್ ಹೊಸಕಾಲದ ಅಭಿರುಚಿಯನ್ನು ಗಮನಿಸಿ, ಅದು ಪ್ರೌಢಶಿಕ್ಷಣದ ತರಗತಿಗಳಿಗೆ

ಪಠ್ಯವಾಗುವಂತೆ ಸ್ವತಂತ್ರಿಸಿ ಕೆಲವು ಮಾರ್ಪಾಡುಗಳನ್ನು ಮೂಲಪಾಠದಲ್ಲಿ ಮಾಡಿ ಇಲ್ಲವೆ ಪಂಡಿತರಿಂದ ಮಾಡಿಸಿ, ೧೮೭೩ರಲ್ಲಿ ಅದನ್ನು ಪ್ರಕಟಿಸಿದರು. ಇದರಿಂದ ಪುಸ್ತಕಕ್ಕೆ ಪ್ರಚಾರ ಹೆಚ್ಚಿತು ; ಆದರೆ ಅಷ್ಟರ ಮಟ್ಟಿಗೆ ಮೂಲಕೃತಿಯ ಸ್ವರೂಪ ನಷ್ಟಗೊಂಡಿತು. ಕವಿಯೇ ಜೀವಿಸಿದ್ದ ಪಕ್ಷದಲ್ಲಿ ಅದಕ್ಕೆ ಅವಕಾಶವಿರುತ್ತಿರಲಿಲ್ಲ ; ಕವಿಯ ಕಾಲಾನಂತರ ದಲ್ಲಿಯೇ ಮಾರ್ಪಾಡುಗಳು ನಡೆದುವೆಂದು ಹೇಳಬಹುದು. ಮುಂದುಮುಂದಿನ ಪರಿಷ್ಕರಣಗಳಲ್ಲಿ ಹಂತಹಂತವಾಗಿ ಇನ್ನೂ ಹೆಚ್ಚಿನ ಮಾರ್ಪಾಡುಗಳು ಸೇರುವುದಕ್ಕೆ ಇದರಿಂದ ಒಂದು ರೀತಿಯಲ್ಲಿ ರಹದಾರಿಯೇ ಸಿಕ್ಕಿದಂತಾಯಿತು. ಕೃತಿಯ ಮೂಲಪಾಠ ತೆರೆಮರೆಯಲ್ಲಿಯೇ ಉಳಿದುಕೊಂಡಿತು ; ಕವಿಗೆ, ಕೃತಿಗೆ ಅನ್ಯಾಯವೂ ಆಯಿತು.

ಮಾರ್ಪಾಡುಗಳಿಗೆ ಸ್ಟೀವೆನ್‌ಸನ್ ಅವರ ಸಮರ್ಥನೆ ಏನೇ ಇರಲಿ, ಅವರು ವಹಿಸಿದ ಸ್ವಾತಂತ್ರ್ಯ ಹೆಚ್ಚಾಯಿತೆಂದೇ ಹೇಳಬೇಕು. ಇದು ಏನಿದ್ದರೂ, ಕೃತಿಯ ಆಕರ್ಷಣೆಗೆ ವ್ಯಾವಹಾರಿಕವಾಗಿ ಭಂಗವೇನೂ ಬರಲಿಲ್ಲ. ಅದರ ಮುದ್ರಿತಪರಿಷ್ಕರಣಗಳನ್ನು ಓದಿ, ಮೆಚ್ಚಿಕೊಂಡು, ಪ್ರಭಾವಿತರಾಗಿ, ೨೦ನೆಯ ಶತಮಾನದಲ್ಲಿ ನಮ್ಮ ಕಥೆಗಾರರು ಹೊಸ ರೂಪದಲ್ಲಿ ಅದನ್ನು ಕನ್ನಡಜನರ ವಾಚನಸೌಖ್ಯಕ್ಕೆ ಒದಗಿಸುತ್ತಲೇ ಬಂದರು. ಹೊಸ ಗನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳ ರಚನೆಗೆ 'ಮುದ್ರಾಮಂಜೂಷ' ಹೆದ್ದಾರಿಯೊಂ ದನ್ನು ತೆರೆದಂತೆಯೇ ಹೊಸಗನ್ನಡ ಭಾಷೆ ಶೈಲಿಗಳಿಗೆ ಸಹ ಹೆದ್ದಾರಿಯನ್ನು ತೆರೆಯಿತೆಂದು ಹೇಳಬೇಕು.

(೭) ಪಾಠಸಾಮಗ್ರಿ

'ಮುದ್ರಾಮಂಜೂಷ'ದ ಸಂಪಾದನಕಾರ್ಯಕ್ಕೆ ಮೂರು ಹಸ್ತಪ್ರತಿಗಳನ್ನು ಬಳಸಿದೆ. ಇವುಗಳಲ್ಲಿ ಎರಡು (ಕ, ಗ), ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಲ್ಲಿಯ ಸಂಪಾದನವಿಭಾಗದ ಹಸ್ತಪ್ರತಿಭಂಡಾರದಲ್ಲಿ ನಿಕ್ಷಿಪ್ತವಾಗಿದ್ದವು; ಒಂದು (ಖ ಪ್ರತಿ), ಗ್ರಂಥಕರ್ತೃ ನಾರಾಯಣ ಶರ್ಮನ ವಂಶಸ್ಥರಾಗಿರುವ ಶ್ರೀಮತಿ ಲಲಿತಮ್ಮ ನಾಡಿಗ ಅವರು ವಿಶ್ವಾಸದಿಂದ ಒದಗಿಸಿದ ಪ್ರತಿ.

ಇವುಗಳ ಸಂಕ್ಷಿಪ್ತ ಪರಿಚಯ :

೧. ಕ. ಪ್ರತಿ : ಇದು ಕೆ. ೭೯ನೆಯ ಕ್ರಮಸಂಖ್ಯೆಯ ಓಲೆಪ್ರತಿ. ಪತ್ರಗಳ ಸಂಖ್ಯೆ ೧ ರಿಂದ ೨೦೯. ಅಳತೆ ೫೧.೫ ಸೆಂ. ಮೀ x ೫ ಸೆಂ. ಮೀ. ಪತ್ರದ ಎರಡೂ ಬದಿಗಳಲ್ಲಿಯೂ ಬರಹವಿದೆ. ಪ್ರತಿ ಪತ್ರದಲ್ಲಿಯೂ ಸರಾಸರಿ ಬರಹದ ಪಂಕ್ತಿಗಳು ೮, ಅಕ್ಷರಗಳು ೬೦-೬೫.

ಪ್ರತಿ ತಕ್ಕಮಟ್ಟಿಗೆ ಶುದ್ಧವಾಗಿದೆ. ಅಕ್ಷರಗಳು ಚೆನ್ನಾಗಿವೆ. ಕೈತಪ್ಪು ಕಣ್ತಪ್ಪುಗಳನ್ನು ಸರಿಪಡಿಸಿ ಅಲ್ಲಲ್ಲಿಯೇ ಪತ್ರಗಳ ಮಗ್ಗುಲಲ್ಲಿ ಬರೆದಿದೆ. ನಡುನಡುವೆ ಗ್ರಂಥಲೋಪ ಗಳುಂಟು. ೧೦೪, ೧೫೮, ೧೯೮ ಸಂಖ್ಯೆಯ ಪತ್ರಗಳ ಹಿಂಭಾಗ 'ತ್ಯಕ್ತಪುಟ'ಗಳು ; ೧೫೮ರ ಬಲಭಾಗದ ಕೊನೆ ಮುರಿದಿದೆ. ೧೯೯ರವರೆಗೆ ಕ್ರಮಾಂಕವಿದೆ. ೨೦೦ರಿಂದ ೨೦೯ರವರೆಗೆ ಕ್ರಮಾಂಕವನ್ನು ಕಂಟದಲ್ಲಿ ಕೊರೆಯದೆ, ಸೀಸದ ಕಡ್ಡಿಯಿಂದ ಬರೆದಿದೆ.

ಗ್ರಂಥ ಸಮಗ್ರವಾಗಿದೆ. ೨೦೦ ರಿಂದ ೨೦೯ರ ವರೆಗೆ ಪತ್ರಗಳ ಪಾಠದಲ್ಲಿ ಅಲ್ಲಲ್ಲಿ ವ್ಯತ್ಯಾಸ ತೌಲನಿಕವಾಗಿ ಹೆಚ್ಚಾಗಿರುವುದರಿಂದ, ಅಲ್ಲಿಯ ವರೆಗೆ ಕ್ರಮವಾಗಿ ಸಾಗಿದ

ಬರೆವಣಿಗೆ ಯಾವುದೋ ಕಾರಣಕ್ಕೆ ಅಸಮಗ್ರವಾಗಿ ನಿಂತುಹೋಗಿ, ಮುಂದಿನ ಲುಪ್ತಭಾಗವನ್ನು ಬೇರೆ ಹಸ್ತಪ್ರತಿಯನ್ನು ಆಶ್ರಯಿಸಿ ಬರೆದಿರುವ ಹಾಗೆ ತೋರುತ್ತದೆ.

ಪ್ರತಿಕಾರ ಒಬ್ಬನೇ ಇರುವಂತೆಯೂ ಸಾಂಪ್ರದಾಯಿಕ ದೇವತಾಸ್ತುತಿಯ ಜೊತೆಗೆ 'ಶ್ರೀಗುರುಬಸವಲಿಂಗಾಯ ನಮಃ' ಎಂದಿರುವುದರಿಂದ ಅವನು ವೀರಶೈವನಿರುವಂತೆಯೂ ತೋರುವುದು.

೨. ಖ. ಪ್ರತಿ : ಇದು ಮನೆತನದ ಓಲೆಪ್ರತಿ. ಆದರೆ ಕವಿಯ ಸ್ವಹಸ್ತಾಕ್ಷರ ಪ್ರತಿಯೆನ್ನುವುದಕ್ಕೆ ಆಧಾರವೇನೂ ಇಲ್ಲ. ಪತ್ರಗಳ ಸಂಖ್ಯೆ ೧ ರಿಂದ ೨೦೯. ಅಳತೆ ೫೨.೫ x ೫ ಸೆಂ. ಮೀ. ಪತ್ರದ ಎರಡು ಬದಿಗಳಲ್ಲಿಯೂ ಬರಹವಿದೆ. ಪ್ರತಿ ಪತ್ರದಲ್ಲಿಯೂ ಸರಾಸರಿ ಬರಹದ ಪಂಕ್ತಿಗಳು ೮-೯, ಅಕ್ಷರಗಳು ೮೫-೯೦. ಪತ್ರಗಳ ಕ್ರಮಸಂಖ್ಯೆ ಕನ್ನಡ ಅಂಕಿಗಳಲ್ಲಿದೆ.

ಪ್ರತಿ ಸಮಗ್ರವಾಗಿದೆ ; ಅಕ್ಷರಗಳು ಸ್ಫುಟವಾಗಿ ಮುದ್ದಾಗಿವೆ ; ಸಾಮಾನ್ಯವಾಗಿ ಶುದ್ಧವಾದ ಪ್ರತಿ.

ಪ್ರತಿಯ ಆರಂಭದಲ್ಲಿ ಮತ್ತೆಮತ್ತೆ ಗ್ರಂಥಾರಂಭ ಮಾಡಿರುವ ಭಿನ್ನಪಾಠಗಳ ಅವತರಣಿಕೆಗಳಿವೆ ; ಆನೆಯ ಓಲೆಯಲ್ಲಿಯ ಅವತರಣಿಕೆಯಲ್ಲಿ ಮುದ್ರಿತಪ್ರತಿಯಲ್ಲಿ (೧೯೧೨) ಕಾಣುವ ಅವತರಣಿಕೆಯನ್ನು ಕೆಲಮಟ್ಟಿಗೆ ಹೋಲುವಂತೆ ಬರಹವಿದ್ದು, ಕೆಂಪುನಾರಾಯಣನ ಹೆಸರನ್ನು ಸಹ ಹೇಳಿದೆ. ಇಲ್ಲಿಂದ ಕ್ರಮವಾಗಿ ಗ್ರಂಥವೂ ಆರಂಭವಾಗಿದೆ. ಆದರೆ ಈ ಆರಂಭ ಹಸ್ತಪ್ರತಿಗಳ ಪಾಠಕ್ಕೆ ಅನುಸಾರವಾಗಿ ಆಗಿದೆ. ಈ ವ್ಯತ್ಯಾಸದ ಕಾರಣ ಚಿಂತನೀಯ. ಆರಂಭದ ಕೆಲವು ಪತ್ರಗಳಲ್ಲಿ ಬರೆಹ ಏಕರೀತಿಯಾಗಿರದೆ, ಲಿಪಿಯ ವ್ಯತ್ಯಾಸಗಳೂ ಎದ್ದು ತೋರುತ್ತಿದ್ದು, ಯಾವ ಕಾರಣದಿಂದಲೋ ಏನೋ ಉಂಟಾಗಿರುವ ನ್ಯೂನಾತಿರೇಕಗಳನ್ನು ಸರಿಪಡಿಸುವ ಯತ್ನ ಅನಂತರದಲ್ಲಿ ನಡೆದಿರುವಂತೆ ತೋರುತ್ತದೆ. ಅಲ್ಲದೆ ಪ್ರತಿಕಾರರು ಹಲವರಿದ್ದಂತೆಯೂ ಕಾಣುವುದು. ಆರಂಭದಲ್ಲಿ ಮೂರನೆಯ ಒಂದು ಬಿಡಿಪತ್ರದಲ್ಲಿಯ ಮಸಿಯ ಬರಹ ಆ ಪ್ರತಿಕಾರರ ಹೆಸರು ಹೇಳುತ್ತದೆ ಎಂದು ಭಾವಿಸಿದ್ದರೂ (ಉಡುಪ, ಪೂರ್ವೋಕ್ತ, ಪು. ೩೧) ಈ ವಿಷಯ ಹೀಗೇ ಎನ್ನುವಂತಿಲ್ಲ. ಪ್ರಸ್ತುತ, ನಾನು ಸಿದ್ಧಪಡಿಸಿರುವ ಪರಿಷ್ಕರಣಕ್ಕೆ ಇದೇ ಆಧಾರಪ್ರತಿ (ವಾಚಕರ ಸೌಕರ್ಯಕ್ಕೆ ವಾಕ್ಯಪುಂಜಗಳ ವಿಭಜನೆ, ಪದಚ್ಛೇದಗಳು ಮತ್ತು ವಿರಾಮಚಿಹ್ನೆಗಳನ್ನು ಸ್ವತಂತ್ರಿಸಿ ಮಾಡಿದೆ).

೩. ಗ. ಪ್ರತಿ : ಕೆ. ಬಿ. ೫೨೯ ನೆಯ ಕ್ರಮಸಂಖ್ಯೆಯ ಕಾಗದಪ್ರತಿ. ಹಾಳೆಗಳ ಸಂಖ್ಯೆ ೩೦೫ (ಮೊದಲ ಹಾಳೆ ನಷ್ಟವಾಗಿದೆ). ಹಾಳೆಗಳ ಎರಡು ಬದಿಗಳಲ್ಲಿಯೂ ಬರಹವಿದೆ. ಹಾಳೆಗಳ ಅಳತೆ ೭.೮" x ೧೧.೮". ಪ್ರತಿ ಹಾಳೆಯಲ್ಲಿ ಪುಟವೊಂದಕ್ಕೆ ೧೫ ಸಾಲುಗಳೂ ಸಾಲಿಗೆ ಸುಮಾರು ೩೦ ಅಕ್ಷರಗಳೂ ಇವೆ.

ಅಕ್ಷರಗಳು ಸ್ಫುಟವಾಗಿ ಅಂದವಾಗಿದೆ. ಬಲುಮಟ್ಟಿಗೆ ಶುದ್ಧವಾದ ಪ್ರತಿ. ಇದು ಖ. ಪ್ರತಿಗೆ ಹತ್ತಿರದ ಹೋಲಿಕೆ ಪಡೆದಿದ್ದು, ಖ. ಪ್ರತಿಯಿಂದಲೇ ಇದು ಹುಟ್ಟಿರಲೂ ಬಹುದು. ಇಲ್ಲವೆ ಇವೆರಡಕ್ಕೂ ಒಂದೇ ಮಾತೃಕೆ ಇರಬಹುದು. ಅದು ಕವಿಯ ಸ್ವಹಸ್ತಾಕ್ಷರ ಪ್ರತಿಗೆ ಹತ್ತಿರವಾಗಿರುವುದು ಸಂಭಾವ್ಯ. ಬರಹ ಯಾರದೆನ್ನುವುದು ತಿಳಿಯುವುದಿಲ್ಲ.

ಪ್ರಸ್ತುತ ಪರಿಷ್ಕರಣದ ಸಿದ್ಧತೆಯಲ್ಲಿ ಈ ಮೂರು ಹಸ್ತಪ್ರತಿಗಳನ್ನು ಮುಖ್ಯವಾಗಿ ಬಳಸಿದೆ. ಖ. ಪ್ರತಿಯನ್ನು ಆಧಾರವಾಗಿಟ್ಟುಕೊಂಡು, ಕ ಗ ಪ್ರತಿಗಳಿಂದ ಪಾಠಭೇದ ಗಳನ್ನು ತೋರಿಸಿದೆ.

೪. ಘ. ಪ್ರತಿ : "ಗತಿಸಿದ ರೆವ್|| ಜೆ. ಸ್ಟೀವೆನ್‌ಸನ್‌ರವರಿಂದ ತಿದ್ದಲ್ಪಟ್ಟು ಮುದ್ರಿಸಲ್ಪಟ್ಟಿತು" ಎಂಬ ಮುದ್ರಿತ ಪರಿಷ್ಕರಣದ ಹಳೆಯದೊಂದು (ದೊರೆತ ಪುಸ್ತಕದಲ್ಲಿ ಮೊದಲು ಕೊನೆಗಳು ನಷ್ಟವಾಗಿವೆ ; ಬಹುಶಃ ೧೮೭೩, ೧೮೯೮ ಅಥವಾ ೧೯೦೫ ಇವುಗಳಲ್ಲಿ ಒಂದರ ಮುದ್ರಣ) ಮುದ್ರಣವನ್ನು ಹಾಗೂ ಎಂಟನೆಯ (ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು, ೧೯೪೫) ಮುದ್ರಣವನ್ನು ಗಮನಾರ್ಹವಾದ ಹೆಚ್ಚು ಕಡಮೆಗಳ ಸೂಚನೆಗಳಿಗೆಂದು ಪರಿಶೀಲಿಸಿ, ಪಾಠಭೇದಗಳನ್ನು ಸೂಚಿಸುವ ಸ್ಥಾನದಲ್ಲಿ ಈ ಸಂಕೇತದೊಂದಿಗೆ ದಾಖಲಿಸಿದೆ.

ಇಲ್ಲಿಯೇ ಪ್ರಾಸ್ತಾವಿಕವಾಗಿ, ಹಸ್ತಪ್ರತಿಗಳಲ್ಲಿ ಕಾಣಬರದೆ, ಈ ಮುದ್ರಿತ ಪರಿಷ್ಕರಣದಲ್ಲಿ ಹೊಸದಾಗಿ ಪ್ರಕ್ಷೇಪಗೊಂಡಿರುವ ಭಾಗಗಳನ್ನು ಸ್ಥೂಲವಾಗಿ ಸೂಚಿಸಬಹುದಾಗಿದೆ : ೧. ಸುಭಾಷಿತಗಳ ಹಾಗೂ ಸಾಂದರ್ಭಿಕ ಶ್ಲೋಕಗಳ ಉದ್ಧೃತಿಗಳು ಮತ್ತು ಪೂರ್ವಕಥಾಸಂಬಂಧಿಯಾದ ದೃಷ್ಟಾಂತಕಥೆಗಳು, ವಾಕ್ಯಗಳು. ೨. ನಂದರು ಯುದ್ಧಕ್ಕೆ ತೆರಳಿದಾಗ ಅವರ ಪತ್ನಿಯರು ದುಃಖಿಸಿದ್ದು. ೩. ಶತ್ರುಸೇನೆಯ ಆಗಮನವಾರ್ತೆಗೆ ಪಾಟಲೀಪುರದ ಸ್ತ್ರೀಯರ, ವರ್ತಕರ ಪ್ರತಿಕ್ರಿಯೆಯಾಗಿ ಬರುವ ಮಾತುಕತೆ. ೪. ಚಂದ್ರಗುಪ್ತನನ್ನು ನಂದರಿಗೆ ಒಪ್ಪಿಸುವ ವಿಷಯದಲ್ಲಿ ಪರ್ವತರಾಯನು ಶೇಖರನೊಂದಿಗೆ ವಿಚಾರ ಮಾಡಿದುದು ಹಾಗೂ ಶೇಖರನು ಅದನ್ನು ತನ್ನಲ್ಲಿ ವಿಮರ್ಶಿಸಿದ್ದು. ೫. ನಂದರು ತಮ್ಮ ಅಂತ್ಯಕಾಲದಲ್ಲಿ ತಮ್ಮ ನಡುವೆ ಪರಸ್ಪರವಾಗಿ ತಮ್ಮ ಕೃತ್ಯಗಳನ್ನು ವಿಮರ್ಶಿಸಿಕೊಂಡು ಮಾತಾಡಿದುದು. ೬. ದಾರುವರ್ಮನೆಂಬ ಶಿಲ್ಪಿಯೂ ಇತರರೂ ಪ್ರಕಟಿಸಿದ ಅಮಾತ್ಯನ ಮೇಲಿನ ಪ್ರೀತಿ. ೭. ಚಾಣಕ್ಯನು ತನ್ನ ಪಕ್ಷದಲ್ಲಿ ಶ್ರಮಿಸಿದ ಇಂದುಶರ್ಮಾದಿಗಳನ್ನು ರಾಕ್ಷಸನಿಗೆ ಪರಿಚಯಿಸಿದುದು, ಹಾಗೂ ವೈದಿಕಮಾರ್ಗ ಸಂಸ್ಥಾಪನೆಯೇ ನಂದನಿಗ್ರಹದ ಉದ್ದೇಶವೆಂದು ಅವನಿಗೆ ವಿವರಿಸಿದುದು. ೮. ಗ್ರಂಥಾಂತ್ಯದಲ್ಲಿ, ವಿಷ್ಣುದೇವಾಲಯ ನಿರ್ಮಾಣ ಮತ್ತು ವಿಷ್ಣುಗುಪ್ತರ ವಿಗ್ರಹಪ್ರತಿಷ್ಠೆ ಇವುಗಳ ವಿಚಾರ.

ಹಾಗೆಯೇ ಹಸ್ತಪ್ರತಿಯಲ್ಲಿದ್ದು ಮುದ್ರಿತ ಪ್ರತಿಯಲ್ಲಿ ಲುಪ್ತವಾಗಿರುವ ಭಾಗಗಳು : ೧. ನಗರ, ಸ್ತ್ರೀ, ಆಸ್ಥಾನ, ಸೈನ್ಯ, ಚಂದ್ರೋದಯ ಮೊದಲಾದವುಗಳ ವಿಸ್ತೃತವರ್ಣನೆ. ೨. ಚಂದ್ರಗುಪ್ತನು ಸೆರೆಯಿಂದ ಬಿಡುಗಡೆಯಾದಾಗ ಅವನು ನಂದರಿಗೆ ತೋರಿಸಿದ ಸ್ವಾಮಿಭಕ್ತಿ. ೩. ರಾಕ್ಷಸನ ಕಾರ್ಯದಕ್ಷತೆಯ ಪ್ರಶಂಸೆ. ೪. ಕ್ಷಪಣಕನು ಪರ್ವತೇಶ್ವರನ ಬಳಿಗೆ ಕರೆತಂದ ವಿಷಕನ್ಯೆಯನ್ನು ಕಂಡು ಪರ್ವತೇಶ್ವರನು ಕಾಮಪರವಶನಾದುದು. ೫. ರಾಕ್ಷಸ ಬಾಗುರಾಯಣ ಮಲಯಕೇತು ಮೊದಲಾದವರು ಆಗಾಗ ಆಡುವ ಸ್ವಗತದ ಮಾತುಗಳು. ೬. ಇಂದುಶರ್ಮನ ಆಶ್ರಮದಿಂದ ಬೀಳ್ಕೊಳ್ಳುವಾಗ ಚಾಣಕ್ಯ ಹೇಳಿದ ಮಾತುಗಳು ಇ.

ಮುದ್ರಿತ ಪರಿಷ್ಕರಣದ ಭಾಷೆ ಶೈಲಿಗಳಲ್ಲಿ ಮುದ್ರಣದಿಂದ ಮುದ್ರಣಕ್ಕೆ ಅಂದಂದಿನ ತಿದ್ದುಗಾರರ ಕೈವಾಡಗಳಿಗೆ ಸಿಕ್ಕಿ ಬದಲಾವಣೆಗಳು ಹೆಚ್ಚುತ್ತ ಹೋಗಿವೆ. ಅಲ್ಲಲ್ಲಿ ವ್ಯಕ್ತಿಗಳ ವಿಷಯಗಳ ಮಾರ್ಪಾಡುಗಳಾಗಿವೆ. ಗ್ರಂಥವನ್ನು ಚಂಪೂಗ್ರಂಥವೆಂದು

ಕರೆದಿರುವುದು ಬಹುಶಃ ನಾಲ್ಕನೆಯ ಮುದ್ರಣದಿಂದ (೧೯೧೨) ಈಚೆಗೆ. ಗ್ರಂಥವನ್ನು ವಿದ್ಯಾರ್ಥಿಗಳ ಹಾಗೂ ಸಾಮಾನ್ಯ ಓದುಗರ ಸಲುವಾಗಿ ಎಂಬ ಕಾರಣಕ್ಕಾಗಿಯೋ ಏನೋ ಒಮ್ಮೆ ಸಂಸ್ಕೃತಶಬ್ದಗಳನ್ನೂ ಶಬ್ದಪುಂಜಗಳನ್ನೂ ಆಡುಮಾತಿನ ಕನ್ನಡಕ್ಕೆ ಪರಿವರ್ತಿಸಿದ್ದರೆ, ಇನ್ನೊಮ್ಮೆ ಪಠ್ಯದ ಗಾಂಭೀರ್ಯವನ್ನು ಹೆಚ್ಚಿಸಲೆಂದೋ ಏನೋ ಆಡುಮಾತಿನ ಕನ್ನಡದ ಹಾಗೂ ಸರಳ ಸುಲಭ ಸಂಸ್ಕೃತದ ಮಾತುಗಳನ್ನು ಪ್ರೌಢ ಸಂಸ್ಕೃತಶಬ್ದಗಳಿಗೆ, ಶಬ್ದಪುಂಜಗಳಿಗೆ ಪರಿವರ್ತಿಸಿರುವುದೂ ಕಾಣುತ್ತದೆ.

ಸ್ಟೀವೆನ್‌ಸನ್ ತಮ್ಮ ಉಪೋದ್ಘಾತದಲ್ಲಿ, ಕೃತಿಯ ಆಕ್ಷೇಪಾರ್ಹವಾದ ಭಾಗಗಳನ್ನು ತಮ್ಮ ಪರಿಷ್ಕರಣದಲ್ಲಿ (೧೮೭೩) ಕೈಬಿಟ್ಟಿದೆಯೆಂದೂ ಆಡಂಬರ ಸ್ವಾಚ್ಛಂದ್ಯಗಳನ್ನು ಸೂಕ್ತವಾಗಿ ಸವರಿಹಾಕಿದೆಯೆಂದೂ ವಿಸ್ತೃತ ವಿಲಂಬವಾದ ವಿವರಣೆಗಳನ್ನು ಸಂಕ್ಷೇಪಿಸಿದೆಯೆಂದೂ ಹೇಳಿಕೊಂಡಿದ್ದಾರೆ. ಆದರೆ ಈ ಎಲ್ಲವೂ ಯಾವುದೋ ಒಂದು ಪ್ರಮಾಣದಲ್ಲಿ ಉಳಿದುಕೊಂಡೇ ಇವೆ. ಹೀಗಿರುವಾಗ ಅವರು ಅಂತಹ ಸಂಕಲ್ಪವೇನನ್ನೂ ಮಾಡದೆ ಹಾಗೆಯೇ ಗ್ರಂಥವನ್ನು ಮುದ್ರಿಸಿದ್ದರೆ, ಅಭ್ಯಾಸಿಗಳಿಗೆ ವ್ಯಾಸಂಗಕ್ಕೆ ಅಂತಹ ತೊಡಕೇನೂ ಆಗುತ್ತಿರಲಿಲ್ಲ, ಅಭಿರುಚಿಯನ್ನು ಕೆಡಿಸಿದ ಆಕ್ಷೇಪವೂ ಬರುತ್ತಿರಲಿಲ್ಲ ಎಂದು ಹೇಳಬಹುದಾಗಿದೆ. ಕೃತಿಗೆ ಅನ್ಯಾಯವಾಗುವುದು ಖಂಡಿತ ತಪ್ಪುತ್ತಿತ್ತು, ಕಥೆಯೂ ಕಥೆಯ ಭಾಷಾಶೈಲಿಗಳೂ ತಮ್ಮ ಸ್ವಸ್ವರೂಪದಲ್ಲಿ ಪ್ರಕಟವಾಗುವುದು ಸಾಧ್ಯವಿತ್ತು. ಒಂದು ಶ್ರೇಷ್ಠವಾದ ಪ್ರಾಚೀನ ಸಾಹಿತ್ಯಕೃತಿಯ ಸ್ವರೂಪ ಈಚಿನ ಕಾಲದ ಸಾಮಾನ್ಯನಾದ ಸಂಪಾದಕನಿಂದಲೂ ವಿರೂಪಗೊಳ್ಳಬಹುದು, ಕವಿಗೆ ಸಮೀಪಕಾಲದ ಉತ್ಸಾಹಶಾಲಿಯಾದ ಸಂಪಾದಕನಿಂದಲೂ ವಿರೂಪಗೊಳ್ಳಬಹುದು.

ಈಗ ಸಿದ್ಧಪಡಿಸಿ ಹೊರತಂದಿರುವ ಈ ಪರಿಷ್ಕರಣ (೧೯೯೮) ಕವಿಕೃತಿಯ ನೈಜಬಿಂಬವಾಗಿದೆಯೆಂದು ತಿಳಿಯಬೇಕಾಗಿಲ್ಲ ; ಆದರೆ ಕವಿಕೃತಿಗೆ ಬಲುಮಟ್ಟಿಗೆ ಹತ್ತಿರದಲ್ಲಿದೆಯೆಂದು ಹೇಳಲವಕಾಶವಿರುವ ಪಾಠಸ್ವರೂಪದಿಂದ ಕೂಡಿದೆಯೆನ್ನಬಹುದು. ಹೊಸ ಪ್ರತಿಗಳು ದೊರೆತು ಕೃತಿಯ ಪಾಠ ಉತ್ತಮಗೊಳ್ಳುವ ವರೆಗೆ, ಈ ಪರಿಷ್ಕರಣವನ್ನು ಅಧಿಕೃತಪರಿಷ್ಕರಣವನ್ನಾಗಿ ತಿಳಿಯಲು ಬಹುಶಃ ಅಡ್ಡಿಯಿರಲಾರದು.

ಟಿ. ವಿ. ವೆಂಕಟಾಚಲ ಶಾಸ್ತ್ರೀ

ನಾರಾಯಣಶರ್ಮವಿರಚಿತ

ಮುದ್ರಾಮಂಜೂಷವು

ಮುದ್ರಾಮಂಜೂಷವು

ಶ್ರೀ ಗಣಾಧಿಪತಯೇ ನಮಃ

ಶ್ರೀ ಶಾರದಾ ಗುರುಭ್ಯೋ ನಮಃ ಶ್ರೀ ಗುಂಜಾ ನರಸಿಂಹ ಪ್ರಸೀದ

ಮಹಃ ಪಾಯಾನ್ಮಹೀಶೂರ | ಕೃಷ್ಣರಾಜೇಪ್ಸಿತಾರ್ಥದಂ |
ಮಹಾಬಲಾದ್ರಿನಿಲಯಂ | ಮಹೇಶಾರ್ಧಾಂಗರೂಪಿ ವಃ ||

ಪ್ರಥಮಾಶಯ : ನಂದೋತ್ಪತ್ತಿ ಕಥನವು

ಲೋಕದಲ್ಲಿ ಸಕಲ ಶ್ರೇಯಸ್ಸನ್ನಪೇಕ್ಷಿಸುತ್ತಿರುವ ಭೂಪತಿಗಳಿಂದಲೂ ಪ್ರಜ್ಞಾಶಾಲಿಗಳಾದ ಮಂತ್ರಿಗಳಿಂದಲೂ ಅವಶ್ಯವಾಗಿ ವಿಚಾರಿಸಿ ತಿಳಿದು ಆಚರಿಸುವದಕ್ಕೆ ಯೋಗ್ಯವಾದ ಸಾಮಾದಿ ಚತುರುಪಾಯದಿಂ ಯುಕ್ತವಾಗಿ ಕಾಮಂದಕಾ[1]ದಿ[1]ಪ್ರಣೀತವಾದ ದಂಡನೀತಿಶಾಸ್ತ್ರಪ್ರಯೋಗದಲ್ಲಿ ಪ್ರವೀಣನಾದ ಚಾಣಕ್ಯನೆಂಬ ವಿಪ್ರವರ್ಯನು ತನಗೆ ಅಪಮಾನವಂ ಮಾಡಿದ ನವನಂದರನ್ನು ಛದ್ಮನೆಯಿಂದ ನಿಗ್ರಹಿಸಿ ಚಂದ್ರಗುಪ್ತನಿಗೆ ಆ ನಂದರಾಜ್ಯಾಧಿಪತ್ಯವನ್ನು ಉಂಟುಮಾಡಿದನೆಂದು ಸಂಕ್ಷೇಪವಾಗಿ ಪುರಾಣದಲ್ಲಿ ಹೇಳಿದ ಕಥೆಯನ್ನು ಈಗ ಮುದ್ರಾಮಂಜೂಷವೆಂಬ ಗ್ರಂಥದಿಂದ ಅನುಪೂರ್ವಕವಾಗಿ ಸುಲಭದಿಂ ಕಾವ್ಯಸರಣಿಯುಕ್ತವಾದ ಕನ್ನಡಭಾಷಾರೂಪದಿಂ ವಿವರಿಸಿ ಹೇಳುತ್ತಲಿದೇನೆ. ಅದೆಂತೆಂದರೆ—

ಶ್ರೀಮತ್ಕೈಲಾಸವಾಸಿಯಾಗಿ, ನಿಖಿಲಸುರಾಸುರಮಕುಟಮಣಿಕಿರಣನೀರಾಜಿತಪಾದಾರವಿಂದದಿಂದೊಪ್ಪುವ ಶ್ರೀ ಗಿರಿಜಾಕಾಂತನ ಶಿರೋಭೂಷಣಚಂದ್ರಚಂದ್ರಿಕಾ ನಿಸ್ಸೃತ ಸುಧಾಸಾರಶೀಕರನಿಕರಗಳಂತೆ, ಕ್ಷೀರಾಂಬುಧಿಯ ಯಶೋರಾಶಿಗಳೋ ಎಂಬಂತೆ, ನಾರಾಯಣನಾಭಿಪುಂಡರೀಕ ಮೃಣಾಳವಲಯಸಂತಾನಗಳೋ ಎಂಬಂತೆ ಧವಳಗುಣಾಕರಮಾಗಿ, ನೆನೆದವರಂ ತನ್ನಂತೆ ಮಾಡುವ, ಪರಮಪಾವನಂಗಳಾದ ತರಂಗಮಾಲಾಶ್ಲೇಷದಿಂ ರುಚಿರಧವಳೋಷ್ಣೀಷ[2]ದಂ[2]ದದಿಂ ತೋರುವ ಜಟಾಮಂಡಲದಿಂದುದುಭವಿಸಿ ಹಿಮಾಚಲವನ್ನಲಂಕರಿಸುತ್ತ, ನೀಲಾಂಬರ ಶೋಭಿತನಾದ ಬಲದೇವನ ತನುಚ್ಛವಿಯಂತೆ ಕಾಳಿಂದೀಕಲ್ಲೋಲಂಗಳಿಂ ಕೂಡಿ, ಲೋಕಹಿತಾರ್ಥವಾಗಿ ಪ್ರಯಾಗ ಕಾಶೀಕ್ಷೇತ್ರಂಗಳಂ ಪವಿತ್ರಗಳಂ ಗೈದು, ಗೌಡದೇಶಾಭಿಮುಖವಾಗಿ ಪ್ರವಹಿಸುತಿರುವ ಗಂಗಾನದಿಯೆಂಬ ಅಗಳಿನಿಂದಲೂ ಮಂದರಶಿಖರಗಳಂತೆ ಅತ್ಯುನ್ನತಂಗಳಾದ ಕೊತ್ತಲಗಳಿಂ ಕೂಡಿ ಶೋಭಿಸುತ್ತಿರುವ ಕೋಟೆಯಿಂದಲೂ ಸಮುದ್ರದಂತೆ ಸಕಲರತ್ನಾವಾಸಭೂತವಾದ ಅಂಗಡಿಬೀದಿಗಳಿಂದಲೂ ಪೂರ್ವಾಚಲಶಿಖರಗಳಂತೆ ಅಂತರಿಕ್ಷವಂ ಚುಂಬಿಸುವ ಪ್ರಾಸಾದ ಚಿತ್ರಶಾಲಾ ಪಙ್ಕ್ತಿಗಳಿಂದಲೂ ಕನಕರತ್ನಚಿತ್ರಿತವುಮಾದ ರಾಜಭವನದಿಂದಲೂ ಮಯೂರಪಿಂಛಪಿಶಂಗವರ್ಣಗಳಾದ ಮರಕತಮಣಿರುಚಿರ ಜಗುಲಿಗಳಿಂದಲೂ ಉಪವನಕುಸುಮಧೂಳಿಧೂಸರಿತ ರಾಜಮಾರ್ಗಗಳಿಂ ಹಂಸಕಾರಂಡವಿರುತ ರಮಣೀ

---

೧. ದಿ ಮುನಿಗಳಿಂ (ಕ), ೨. ಚಂ (ಕ)

ಮುದ್ರಾಮಂಜೂಷವು

ಶ್ರೀ ಗಣಾಧಿಪತಯೇ ನಮಃ

ಶ್ರೀ ಶಾರದಾ ಗುರುಭ್ಯೋ ನಮಃ ಶ್ರೀ ಗುಂಜಾ ನರಸಿಂಹ ಪ್ರಸೀದ
ಮಹಃ ಪಾಯಾನ್ಮಹೀಶೂರ | ಕೃಷ್ಣರಾಜೇಪ್ಸಿತಾರ್ಥದಂ |
ಮಹಾಬಲಾದ್ರಿನಿಲಯಂ | ಮಹೇಶಾರ್ಧಾಂಗರೂಪಿ ವಃ ||

ಪ್ರಥಮಾಶಯ : ನಂದೋತ್ಪತ್ತಿ ಕಥನವು

ಲೋಕದಲ್ಲಿ ಸಕಲ ಶ್ರೇಯಸ್ಸನ್ನಪೇಕ್ಷಿಸುತ್ತಿರುವ ಭೂಪತಿಗಳಿಂದಲೂ ಪ್ರಜ್ಞಾಶಾಲಿಗಳಾದ ಮಂತ್ರಿಗಳಿಂದಲೂ ಅವಶ್ಯವಾಗಿ ವಿಚಾರಿಸಿ ತಿಳಿದು ಆಚರಿಸುವುದಕ್ಕೆ ಯೋಗ್ಯವಾದ ಸಾಮಾದಿ ಚತುರುಪಾಯದಿಂ ಯುಕ್ತವಾಗಿ ಕಾಮಂದಕಾ[1]ದಿ[2]ಪ್ರಣೀತವಾದ ದಂಡನೀತಿಶಾಸ್ತ್ರಪ್ರಯೋಗದಲ್ಲಿ ಪ್ರವೀಣನಾದ ಚಾಣಕ್ಯನೆಂಬ ವಿಪ್ರವರ್ಯನು ತನಗೆ ಅಪಮಾನವಂ ಮಾಡಿದ ನವನಂದರನ್ನು ಛದ್ಮನೆಯಿಂದ ನಿಗ್ರಹಿಸಿ ಚಂದ್ರಗುಪ್ತನಿಗೆ ಆ ನಂದರಾಜ್ಯಾಧಿಪತ್ಯವನ್ನು ಉಂಟುಮಾಡಿದನೆಂದು ಸಂಕ್ಷೇಪವಾಗಿ ಪುರಾಣದಲ್ಲಿ ಹೇಳಿದ ಕಥೆಯನ್ನು ಈಗ ಮುದ್ರಾಮಂಜೂಷವೆಂಬ ಗ್ರಂಥದಿಂದ ಅನುಪೂರ್ವಕವಾಗಿ ಸುಲಭದಿಂ ಕಾವ್ಯಸರಣಿಯುಕ್ತವಾದ ಕನ್ನಡಭಾಷಾರೂಪದಿಂ ವಿವರಿಸಿ ಹೇಳುತ್ತಲಿದೇನೆ. ಅದೆಂತೆಂದರೆ—

ಶ್ರೀಮತ್ಕೈಲಾಸವಾಸಿಯಾಗಿ, ನಿಖಿಲಸುರಾಸುರಮಕುಟಮಣಿಕಿರಣನೀರಾಜಿತಪಾದಾರವಿಂದದಿಂದೊಪ್ಪುವ ಶ್ರೀ ಗಿರಿಜಾಕಾಂತನ ಶಿರೋಭೂಷಣಚಂದ್ರಚಂದ್ರಿಕಾ ನಿಸ್ಸೃತ ಸುಧಾಸಾರಶೀಕರನಿಕರಗಳಂತೆ, ಕ್ಷೀರಾಂಬುಧಿಯ ಯಶೋರಾಶಿಗಳೋ ಎಂಬಂತೆ, ನಾರಾಯಣನಾಭಿಪುಂಡರೀಕ ಮೃಣಾಳವಲಯಸಂತಾನಗಳೋ ಎಂಬಂತೆ ಧವಳಗುಣಾಕರಮಾಗಿ, ನೆನೆದವರಂ ತನ್ನಂತೆ ಮಾಡುವ, ಪರಮಪಾವನಂಗಳಾದ ತರಂಗಮಾಲಾಶ್ಲೇಷದಿಂ ರುಚಿರಧವಳೋಷ್ಣೀಷದಂದದಿಂ ತೋರುವ ಜಟಾಮಂಡಲದಿಂದುದುಭವಿಸಿ ಹಿಮಾಚಲವನ್ನಲಂಕರಿಸುತ್ತ, ನೀಲಾಂಬರ ಶೋಭಿತನಾದ ಬಲದೇವನ ತನುಚ್ಛವಿಯಂತೆ ಕಾಳಿಂದೀಕಲ್ಲೋಲಂಗಳಿಂ ಕೂಡಿ, ಲೋಕಹಿತಾರ್ಥವಾಗಿ ಪ್ರಯಾಗ ಕಾಶೀ ಕ್ಷೇತ್ರಂಗಳಂ ಪವಿತ್ರಗಳಂ ಗೈದು, ಗೌಡದೇಶಾಭಿಮುಖವಾಗಿ ಪ್ರವಹಿಸುತಿರುವ ಗಂಗಾ ನದಿಯೆಂಬ ಅಗಳಿನಿಂದಲೂ ಮಂದರಶಿಖರಗಳಂತೆ ಅತ್ಯುನ್ನತಂಗಳಾದ ಕೊತ್ತಲಗಳಿಂ ಕೂಡಿ ಶೋಭಿಸುತ್ತಿರುವ ಕೋಟೆಯಿಂದಲೂ ಸಮುದ್ರದಂತೆ ಸಕಲರತ್ನಾವಾಸಭೂತವಾದ ಅಂಗಡಿಬೀದಿಗಳಿಂದಲೂ ಪೂರ್ವಾಚಲಶಿಖರಗಳಂತೆ ಅಂತರಿಕ್ಷವಂ ಚುಂಬಿಸುವ ಪ್ರಾಸಾದ ಚಿತ್ರಶಾಲಾ ಪಙ್ಕ್ತಿಗಳಿಂದಲೂ ಕನಕರತ್ನಚಿತ್ರಿತವುಮಾದ ರಾಜಭವನದಿಂದಲೂ ಮಯೂರಪಿಂಛಪಿಶಂಗವರ್ಣಗಳಾದ ಮರಕತಮಣಿರುಚಿರ ಜಗುಲಿಗಳಿಂದಲೂ ಉಪವನಕುಸುಮಧೂಳಿಧೂಸರಿತ ರಾಜಮಾರ್ಗಗಳಿಂ ಹಂಸಕಾರಂಡವಿರುತ ರಮಣೀ

---

೧. ದಿ ಮುನಿಗಳಿಂ (ಕ), ೨. ಚಂ (ಕ)

ಯವಾದ ಕಮಲ ಕುವಲಯ ಕಲ್ಹಾರನಿಕರ[1]ನಿಬಿಡಮಾಗಿ ಮಧುರೋದಕಮುಳ್ಳ ಸ್ಫಟಿಕ ಸರೋವರಗಳಿಂ, ಕಾಮಿನೀಜನ ತನುಕಾಂತಿಭೂಷಣ ಮಣಿಪ್ರಭೆಗಳಿಂ ಇಂದ್ರಚಾಪ ತೋರಣಾಲಂಕೃತವಾದಂತೆ ಕಂಗೊಳಿಸುವ ಹರ್ಮ್ಯಸ್ಥಳಗಳಿಂ, ಅನೇಕ ಶುಕಶಾರಿಕಾ ನಿನದಯುತ ಮಧುಕರಝೇಂಕಾರಗೀತಾನುಸಾರಮಾದ ಮಯೂರತಾಂಡವಾವಲೋಕನ ಪ್ರಮುದಿತ ಗೌಡನಿತಂಬಿನೀ ಚರಣಾಲಕ್ತಕರಸರಂಜಿತಮಾಗಿ ಬಹುಕುಸುಮನಿಕರಾಕೀರ್ಣವಾದುದರಿಂ ಚಿತ್ರವರ್ಣಾಸ್ತರಣಂಗಳಂತೆ ರಂಜಿಸುವ ಲತಾಗೃಹಭೂಭಾಗಗಳಿಂ ಶೋಭಿಸುವ ಪ್ರಮದಾವನಗಳಿಂದಲೂ [2]ಬಹುಪನ್ನ[2]ಗಕುಲಭೀಷಣಮಾದ ಮಂದರಗುಹೆಗಳಂತೆ ಶತ್ರುಭಯಂಕರಮಾದ ಆಯುಧಶಾಲೆಗಳಿಂ, ಬಹುಕನಕರತ್ನರಾಶಿಗಳಿಂ ರಂಜಿತಮಾದ ಮೇರುತಟದೇಶದಂತಿಪ್ಪ ಕೋಶಗೃಹಗಳಿಂ, ಸಮಯವಂ ನಿರೀಕ್ಷಿಸುತ ಸಾಧುವಿನೀತರಾದ ಸಾಮಂತನರಪತಿಮಕರಪತ್ರ ನರಪತಿಕಿರೀಟಪ್ರಭಾ [3]ಚಿತ್ರಿತ[3]ಮಾದ ರಾಜಾಸ್ಥಾನ ಮಂಟಪದಿಂ, ಸಕಲ ವೇದವೇದಾಂಗ ತತ್ತ್ವರಹಸ್ಯಾವಲೋಕನ ನಿರ್ಮಲಮತಿಯುತರಾದ ಭೂಸುರಸ್ತೋಮದಿಂ, ನಿರಂತರಕಾರಿತ ಸೇತುಕೂಪಾರಾಮಪ್ರಪಾವಸಥ ಪ್ರತಿಷ್ಠಾ ವಿಖ್ಯಾತರಾದ ಸುಕೃತಿಜನಗಳಿಂ, ಸವಿಲಾಸಾವಲೋಕನ ಮದನಶರಪ್ರಹಾರವಿಹ್ವಲ ವಿಟ ಜನಸಹಸ್ರಪರಿವೃತ ವಾರಾಂಗನಾನಿಕುರಂಬದಿಂ, ವಂದಿಮಾಗಧಗೀಯಮಾನ ಬಹುವಿಧ ಬಿರುದಪ್ರಬಂಧ ಘೋಷಾಕರ್ಣನ ಪ್ರಮುದಿತ ನರಪತಿಸಹಸ್ರಾತಪತ್ರಚ್ಛಾಯೆಗಳಿಂದತಿ ಶೀತಳಮಾದ ಮಹಾರಾಜಗೃಹದ್ವಾರಭೂಭಾಗದಿಂ ಶೋಭಿಸುತ,

ಪ್ರಬುದ್ಧಸರ್ವಲೋಕಯುತವಾದುದರಿಂ ಪ್ರಭಾತಸಮಯದಂತೆ, ಕ್ರತುಶತಧೂಮ ಪೂತವಾದುದರಿಂ ಸುರಾಧಿಪಮೂರ್ತಿಯಂತೆ, ಬಹುಜೀವನಾಧಾರವಾದುದರಿಂ ವರುಣಾಲಯದಂತೆ, ಭೋಗವತಿಯಂತೆ ಪ್ರಮುದಿತ ಭುಜಂಗನಿಕರಯುತಮಾಗಿ, ಮೇರುಶಿಖರ ದೇಶದಂತೆ ಬಹುದೇವತಾಯತನಶೋಭಿತಮಾಗಿ, ಸುಮುದ್ರಮಥನ ಸಮಯದಂತೆ ತೂರ್ಯಮಹಾಘೋಷಪೂರಿತಮಾಗಿ, ರಾಜ್ಯಾಭಿಷೇಕ ಸಮಯದಂತೆ ಕನಕಕಲಶಸಹಸ್ರ ಶೋಭಿತವಾಗಿ, ಹರಿಕಥೆಯಂತೆ ಅನೇಕ ಬಾಲಕ್ರೀಡಾ ರಮಣೀಯವಾಗಿ, ನಂದನವನ ಲಕ್ಷ್ಮಿಯಂತೆ ಅವಿಚ್ಛಿನ್ನ ಸಂತಾನಸಂಪತ್ಸಮೃದ್ಧಮಾಗಿ, ಗಗನಾಭೋಗದಂತೆ ದ್ವಿಜರಾಜ ಸುರಸರಿತ್ಸಜ್ಜನನಿಕರ ಸಮೇತಮಾಗಿ, ಅವಿಚ್ಛಿನ್ನ ಮದೋದಕಧಾರೆಗಳಂ ವರುಷಿಸುವ ಕರಿಘಟೆಗಳೆಂಬ ಮೇಘಮಂಡಲದಿಂ, ಕನಕಪ್ರಭೆಯಂತೆ ಶೋಭಿಸುವ ವಾರವಿಲಾಸಿನೀ ತನುಲತೆಗಳೆಂಬ ಮಿಂಚುಗಳಿಂ, ಬಹುಸಾಹಸಿಗಳಾದ ಅಶ್ವಾರೂಢನರಪತಿ ಸಹಸ್ರಮಣಿ ಶೇಖರ ಪ್ರಭಾನಿಕರಗಳೆಂಬ ಇಂದ್ರಚಾಪಗಳಿಂ, ಸಮಯಾತಿಪಾತ ಶಂಕಾಯುತರಾಗಿ ರಥದಿಂದಿಳಿದು ಬರುವ ರಥಿಕಸಮ್ಮರ್ದ ಸಂಕ್ಷೋಭೆಯಿಂ, ಜಗುಳುತಿರುವ ಮುಕ್ತಾಹಾರ ಮಣಿನಿಕರಗಳೆಂಬ ವರುಷಬಿಂದುಗಳಿಂದ ವರುಷಾಕಾ[4]ಲ[4] ಛಂದದಿಂ ತೋರುವ ಪಾಟಲೀಪುರವೆಂಬ ರಾಜಧಾನಿಯು ಗೌಡದೇಶಗಳಲ್ಲಿ ಕಂಗೊಳಿಸುತ್ತಿರ್ದುದು.

ಈ ರೀತಿಯಲ್ಲಿ ಸಕಲಜನಾನಂದಕರಮಾದ ಕುಸುಮಪುರದಲ್ಲಿ, ಬಹುಕಾಲದಿಂ ಚಂದ್ರ

---

೧. ಆರಂಭದಿಂದ ಈ ವರೆಗೆ ಗ ಪ್ರತಿಯಲ್ಲಿ ಹಾಳೆ ನಷ್ಟವಾಗಿದೆ. ೨. ಷನ್ನ (ಕ). ೩. ಚರಿತ (ಕ). ೪. ಲದ (ಕ)

ವಂಶಪರಂಪರಾಪ್ರಾಪ್ತವಾಗಿ ಬಂದ ರತ್ನಸಿಂಹಾಸನದಲ್ಲಿ ಕುಳಿತು, ಸೂರ್ಯನಂತೆ ಬುಧಾನುಗತನಾಗಿ, ದಶರಥನಂತೆ ಸುಮಿತ್ರೋಪಸೇವಿತನಾಗಿ, ಶ್ರೀ ಶಂಕರನಂತೆ ಮಹಾಸೇನಾನುಗತನಾಗಿ, ಆದಿಶೇಷನಂತೆ ಭೂಭಾರಧಾರಣಕುಶಲನಾಗಿರುವ ಸರ್ವಾರ್ಥಸಿದ್ಧಿಯೆಂಬ ರಾಯನು ಪೃಥ್ವೀಸಾಮ್ರಾಜ್ಯಂಗೆ[1]ವು[2]ತ್ತಿರಲು, ವರ್ಣಸಾಂಕರ್ಯ[3]ಶು[4]ದ್ಧಿಗಳು ಕನಕದಲ್ಲಿ, ಮಿತ್ರದ್ವೇಷವೆಂಬುದು ಕುಮುದಪಂಕ್ತಿಗಳಲ್ಲಿ, ದಂಡಗ್ರಹಣವೆಂಬುದು ವಾರ್ಧಿಕದಲ್ಲಿ, ಚಾಂಚಲ್ಯವೆಂಬುದು ಧ್ವಜದಲ್ಲಿ, ಬಂಧನಗಳೆಂಬುದು ಕುಸುಮಗಳಲ್ಲಿ, ಜ್ಯೇಷ್ಠಾತಿಕ್ರಮವೆಂಬುದು ಚಂದ್ರನಲ್ಲಿ, ನಿಗ್ರಹವೆಂಬುದು ಮನಸ್ಸಿನಲ್ಲಿ, ಮಲಿನಾಂಬರತ್ವವು ವರುಷಾಕಾಲದಲ್ಲಿ, ಕಶಾಘಾತಭೀತಿಯೆಂಬುವದು ಅಶ್ವಗತಿಶಿಕ್ಷಾವಿಶೇಷದಲ್ಲಿಯೆ ಉಂಟಾಗಿಯಿದ್ದವು.

ಈ ರೀತಿಯಲ್ಲಿ ನ್ಯಾಯದಿಂ ಪ್ರಜಾಪರಿಪಾಲನಮಂ ಗೈವ ಆ ಅರಸಿಗೆ ನಿಖಿಳಶಾಸ್ತ್ರ ಕಲಾಕಲಾಪಾವಲೋಕನದಿಂ ನಿರ್ಮಲಬುದ್ಧಿ ಉಳ್ಳವನಾಗಿ ವಕ್ರನಾಸನೆಂಬ ವೃದ್ಧ ಮಂತ್ರಿಯೆ ಮುಖ್ಯರಾದ ಅಷ್ಟಮಂತ್ರಿಗಳಲ್ಲಿ ಜರಾಸಂಧನಂತೆ ಘಟಿತಸಂಧಿವಿಗ್ರಹವುಳ್ಳವನಾಗಿ, ಯುಧಿಷ್ಠಿರಂಗೆ ಧೌಮ್ಯನಂತೆ, ಇಂದ್ರಂಗೆ ಬೃಹಸ್ಪತಿಯಂತೆ, ವೃಷಪರ್ವನಿಗೆ ಶುಕ್ರಾಚಾರ್ಯರಂತೆ, ಮಹಾಬುದ್ಧಿಸಂಪನ್ನನಾದ ರಾಕ್ಷಸನೆಂಬ ಅಮಾತ್ಯನು ಸರ್ವದಾ ಆ ರಾಯಂಗೆ ಶುಭವನ್ನೆ ಉಂಟುಮಾಡು[3]ತಿ[4]ದ್ದನು. ಸೇನಾಧ್ಯಕ್ಷರಾದ ಸಿಂಹಬಲನೆ ಮುಖ್ಯರಾದ ಅಷ್ಟಸೇನಾನಾಯಕರಿಂ ಶೋಭಿತಮಾದ ಬಹುಸೇನೆಗಳಿಂ ಪರಿವೃತನಾಗಿ, ಸ್ವಭುಜಬಲದಿಂ ಸಕಲಶತ್ರುಗಳಂ ಜಯಿಸಿ, ಆತಂಕರಹಿತನಾಗಿ ಸಕಲರಾಜ್ಯಭಾರವಂ ರಾಕ್ಷಸನೆಂಬ ಅಮಾತ್ಯನಲ್ಲಿ ಇರಿಸಿ, ಕೃತಕೃತ್ಯನಾಗಿ, ತಾನು ಭೋಗಾಸಕ್ತನಾಗಿ ತನ್ನ ಅಂತಃಪುರದಲ್ಲಿ ಸ್ವಾಮಿನಿಯಾದ ಪಟ್ಟಮಹಿಷಿಯಾದ ಸುನಂದಾದೇವಿಯೊಡನೆ, ಅತಿ ಪ್ರೇಮಾಸ್ಪದಳಾದ ಶೂದ್ರಪುತ್ರಿಯಾದ ಮುರಾದೇವಿ ಮುಖ್ಯರಾದ ಸ್ತ್ರೀ[ಯ]ರೊಡಗೂಡಿ ವಿವಿಧಕ್ರೀಡಾವಿಲಾಸದಿಂದಿರುತಿರ್ದನು. ಅದೆಂತೆಂದರೆ—

ಒಂದಾನೊಂದು ಸಮಯದಲ್ಲಿ ಪ್ರಿಯದರ್ಶನಮುದಿತ ಕಾಮಿನೀಜನದ ಮುಖಚಂದ್ರನೊಳು ಚಂದ್ರಿಕೆಗಳಂತೆ ಶೋಭಿಸುವ ಮುಗುಳುನಗೆಗಳೆಂಬ ಅಮೃತಧಾರಾಸೇಚನೆಯಿಂದ ಧವಳಿತಶರೀರವುಳ್ಳವನಾಗಿ, ಕನ್ನೈದಿಲೆಗಳಂತೆಸೆವ ಅಂಗನಾನೇತ್ರಕುಸುಮಗಳಿಂದ ಪೂಜಿಸುವ ಮುಖಚಂದ್ರವುಳ್ಳವನಾಗಿ, ಕುಂಕುಮಧೂಳೀನಿಕರದಂತೆ ರಂಜಿಸುವ ಭಾಮಿನೀ ಪದ್ಮರಾಗಾಭರಣ ಕಾಂತಿಯಿಂ ಕುಸುಂಭವಸ್ತ್ರದಂತಿಪ್ಪ ಧವಳಾಂಶುಕ ಶೋಭಿತನಾಗಿ, ಚಂಪಕಮಾಲಿಕಾ ಸದೃಶಮಾದ ಸೀಮಂತಿನೀ ಬಾಹುಪಾಶಗಳಿಂದ ಬಂಧಿ[3]ಸು[4]ವನಾಗಿ, ಮತ್ತೊಂದು ಸಮಯದಲ್ಲಿ ಬಂಧವಿಶೇಷಗಳಿಂ ರಮಣೀಜನ ಚರಣಾಲಕ್ತಕರಸದಿಂ ಕೆಂಪಡರಿದ ಲಲಾಟದೇಶಮುಳ್ಳವನಾಗಿ, ಸಮಯವಿಶೇಷದಲ್ಲಿ ಪ್ರೇಮವಶದಿಂ ಪಿಡಿಯುವ ಅಂಗನಾಜನ ಧಮ್ಮಿಲ್ಲಕುಸುಮಧೂಳಿಗಳಿಂ ಹೊಂಬಣ್ಣವಾದ ವಕ್ಷಸ್ಥಳಮುಳ್ಳವನಾಗಿ, ಸಮಯವಿಶೇಷದಲ್ಲಿ ಕಾಮಿನೀಕುಚಕಲಶಚಂದನರಸದಿಂ ಧವಳಮಾದ ಭುಜದೇಶಮುಳ್ಳವನಾಗಿ, ರತಿರಭಸಜನಿತಶ್ರಮಜಲಬಿಂದುಗಳಿಂ ಕದಡಿ

---

೧. ಯು (ಕ). ೨. ವ್ವ (ಕ). ೩. ತಲಿ (ಕ). ೪. ತ (ಕ)

ರುವ ಕಸ್ತೂರೀತಿಲಕಮುಳ್ಳವನಾಗಿ, ಸಮಯಾಂತರದಲ್ಲಿ ಬಹುಪರಿಮಳವಾಸಿತಮಾದ ಕುಂಕುಮಜಲಗಳಿಂ ಪೂರಿತಮಾದ ಹೇಮಶೃಂಗಗಳಂ ಪಿಡಿದು ಅಭಿಷೇಕದೇವತೆಗಳಂತಿಪ್ಪ ವಧೂಜನಗಳಿಂ ಕೂಡಿ ಜಲಕೇಳಿಯನ್ನಾಡುತ, ಮತ್ತೊಂದು ವೇಳೆಯಲ್ಲಿ ಕನಕರತ್ನರಂಜಿತಮಾದ ಗವಾಕ್ಷಗಳಿಂ ಶೋಭಿಸುತ, ಕಾಲಾಗರುಧೂಮಧೂಪಿತ ಮೇಲುಗಟ್ಟುಗಳಿಂದಲೂ ಚಿತ್ರವರ್ಣಮಾದ [1]ಹಾಸಿಗೆ[1]ಗಳಲ್ಲಿಯಿರಿಸಿದ ಶ್ವೇತಪರ್ಯಂಕಗತ ಹಂಸತೂಲಿಕಾತಲ್ಪದಲ್ಲಿ ಕುಳಿತು ವಿವಿಧಕುಸುಮಮಾಲಿಕಾಸಕ್ತ ಮಧುಕರರವಮನೋಹರಮಾದ ಅಂತಃಪುರಸುಂದರೀಸಂಗೀತವನು ಆಪ್ತಮಿತ್ರ ವಿದ್ವಜ್ಜನರೊಡನೆ ಕೂಡಿ ನೋಡುತ್ತಿದ್ದನು ; ಮಧ್ಯೆ ಸಮಯಾಂತರದಲ್ಲಿ ಪ್ರಜಾರಂಜನಾರ್ಥವಾಗಿ ದರುಶನವಂ ಕೊಡುತ್ತಲಿದ್ದನು. ಮಹೋತ್ಸವಗಳಲ್ಲಿ ಸಿಂಹಾಸನಾರೂಢನಾಗಿ ನರಪತಿಸಹಸ್ರಕಿರೀಟಮಣಿಪ್ರಭಾನೀರಾಜಿತವಾದ ಪಾದಪೀಠವುಳ್ಳವನಾಗಿ ಕಪ್ಪಗಳಂ ಸ್ವೀಕರಿಸುತ್ತಲಿದ್ದನು.

ಅಮಾತ್ಯರಾಕ್ಷಸನಾದರೋ ಅನಾಯಾಸವಾಗಿ ಪ್ರಜ್ಞಾಬಲದಿಂದ ಸಕಲರಾಜ್ಯಭಾರವಂ ನಿರ್ವಹಿಸುತ್ತಲಿದ್ದನು. ಈ ಅಮಾತ್ಯರಾಕ್ಷಸನಿಗೆ ಸಕಲ ಸಾಮಂತನರಪತಿಗಳೂ ಸ್ವಕಿರೀಟಮಣಿರಶ್ಮಿಜಾಲಗಳಿಂ ಚಿತ್ರವಿಚಿತ್ರವರ್ಣಮಾದ ಅಂಜಲಿಬಂಧವುಂಟಾಗುವಂತೆ ನಮಸ್ಕರಿಸುತ್ತಿದ್ದರು. ಈತನು ಸ್ವಗೃಹದಿಂದ ಹೊರಟು ಆಸ್ಥಾನಮಂಟಪಾಭಿಮುಖನಾಗುತ್ತಿರಲು, ತುರಗಖುರರವ ಬಧಿರೀಕೃತ ಪುರಜನದಿಂ ಶೋಭಿಸುತ ನಿಜಸೇನಾಭಾರಘಾತದಿಂ ಚಲಿಸುತ್ತಿರುವ ಭೂತಳಸೀಮಾ ಡೋಳಾಯಮಾನ ಪರ್ವತಗಳುಂಟಾಗುವಂತೆ, ಗಜಘಟಾಗಂಡಮಂಡಲೀನಿಸ್ಸೃತ ಮದಧಾರಾಪಂಕಿಲಮಾದ ರಾಜಮಾರ್ಗವುಂಟಾಗುವಂತೆ, ಸೇನಾಚರಣಕ್ಷೋಭಪ್ರಸೃತ ಧೂಳೀನಿಕುರುಂಬದಿಂ ಧೂಸರವರ್ಣಗಳಾದ ಸಮುದ್ರಗಳುಂಟಾಗುವಂತೆ, ಚಲಿಸುತ್ತಿರುವ ಪದಾತಿಕಲಕಲಶಬ್ದದಿಂ ಶೀರ್ಯಮಾಣ ದಿಗ್ಗಜಕರ್ಣವಿವರಗಳುಂಟಾಗುವಂತೆ, ಘೋಷಿಸುತ್ತಿರುವ ಜಯಶಬ್ದದಿಂ ಸಾಂದ್ರಮಾಗಿ ಇರುವಂತೆ, ಪ್ರಚಲಿತ ಚಾಮರಸಹಸ್ರಗಳಿಂದಲಂಕೃತವಾದಂತೆ, ಪುಂಜೀಭೂತ ನರೇಂದ್ರಛತ್ರಪಂಗ್ತಿಗಳಿಂ ನಿವಾರಿತ[2]ಸೂರ್ಯತಾಪ[2]ವುಂಟಾಗುವಂತೆ, ಕುಸುಮಪುರವು ಅಮರಾಧಿಪರಾಜಧಾನಿಯಂತೆ ಶೋಭಿಸುತ್ತಿದ್ದುದು.

ಹೀಗಿರುತ್ತಿರಲು, ಆ ಸರ್ವಾರ್ಥಸಿದ್ಧಿಯೆಂಬ ಭೂಪತಿಯಾದರೋ ಸುತಮುಖಾವಲೋಕನಸುಖ ಹೊರತು ಸಕಲಸುಖವನ್ನನುಭವಿಸುತ್ತಿದ್ದನು. ಈ ರೀತಿಯಲ್ಲಿ ರಾಜ್ಯಭಾರವನ್ನು ಅಮಾತ್ಯರಾಕ್ಷಸನಲ್ಲಿ ಇರಿಸಿ ಸ್ತ್ರೀಲೋಲುಪನಾಗಿ ಇರುತ್ತಿರಲು, ಒಂದಾನೊಂದು ಸಮಯದಲ್ಲಿ ದ್ವಾರಪಾಲಕನಾದ ಕಂಚುಕಿಯು ಅಂತಃಪುರಸ್ಥನಾದ ರಾಯನಿಗೆ ವಂದಿಸಿ ಬಿನ್ನೈಸಿದನು. ಅದೇನೆಂತೆಂದರೆ—

"ಜೀಯಾ, ಶರತ್ಕಾಲಚಂದ್ರಚಂದ್ರಿಕಾನಿಕರ ಒಂದೆಡೆಯಲ್ಲಿ ಗುಂಪಾಗಿ ತೋರುವಂತೆ, ಕಾರ್ಮುಗಿಲ ಮಿಂಚುಗಳಿಂ ರಚಿಸಿದ ಅವಯವವುಳ್ಳವನಂತೆ, ಸೂರ್ಯಮಂಡಲ ಮಧ್ಯದಿಂದುದ್ಭವಿಸಿದ ಶಿಶುವಿನಂತೆ, ಬಹುವಿಧಸ್ಫಟಿಕಮಣಿನಿರ್ಮಿತಭವನಪಂಗ್ತಿಗಳಂ ತನು ಕಾಂತಿಯಿಂದ ಸುವರ್ಣರಸಲೇಪಿತಂಗಳಾಗಿ ಇವೆಯೋ ಎಂಬಂತೆ ಮಾಡುತ, ಪರಮ

೧. ಹಾಸಿಕೆ (ಖ). ೨. ಸೂರ್ಯಾತಪ (ಕ)

ಪಾವನಧವಳಾಪಾಂಗವೀಕ್ಷಣದಿಂ ಪುರವೀಥಿಗಳನೆಲ್ಲವಂ ಭಾಗೀರಥೀಜಲಕ್ಷಾಳಿತಂಗಳಾದಂತೆ ಮಾಡುತ, ಪಾವನತ್ವವೆ ಮೂರ್ತಿರೂಪಿನಿಂ ಬಂದಂತೆ, ಅಶ್ವಿನೀ ದೇವತೆಗಳಿಂ ಕೂಡಿರುವ ಭಾರ್ಗವ ಚ್ಯವನನಂತೆ, ರಾಮಲಕ್ಷ್ಮಣ ಸಮೇತನಾದ ವಿಶ್ವಾಮಿತ್ರನೋ ಎಂಬಂತೆ, ಒಬ್ಬಾನೊಬ್ಬ ಮುನೀಶ್ವರನು ಶಿಷ್ಯಯುಗ್ಮದಿಂ ಪರಿವೃತನಾಗಿ ರಾಜದ್ವಾರವನ್ನಲಂಕರಿಸುತ್ತ 'ವೀತಹವ್ಯರೆಂಬ ಮುನಿಗಳು ಬಂದು ಇದ್ದಾರೆಂದು ಭೂಪತಿಗೆ ತಿಳಿಸೆಂ'ದು ನೇಮಿಸಲು, [1]ಅದರಿಂ[1] ಮಹಾತ್ಮರ ವಾಕ್ಯವು ಅವಶ್ಯಕರ್ತವ್ಯವೆಂದು ತೋರಿದುದರಿಂ, ತ್ವರಿತದಿಂ ಬಂದು ಚರಣಸನ್ನಿಧಿಯಲ್ಲಿ ಬಿನ್ನೈಸಿದೆನು."

ಹೀಗೆಂಬ ಕಂಚುಕೀವಾಕ್ಯವಂ ಕೇಳಿ, ಮಹಾಪುರುಷ ದರ್ಶನಲಾಭವುಂಟಾದೀತೆಂದು ಭೂಪತಿಯು ತ್ವರಿತದಿಂದೆದ್ದು, ಅಮಾತ್ಯಪುರೋಹಿತರೊಡಗೂಡಿ ಬಂದು ಮುನಿವರ್ಯರಿಗೆ ಅಭಿವಂದಿಸಿ, 'ದಯಮಾಡಬೇಕೆಂ'ದು ಹಸ್ತಲಾಘ[ವ]ವನ್ನಿತ್ತು ಅಂತಃಪುರಸಮೀಪ ಮಣಿಮಂಟಪಕ್ಕೆ ಕರೆತಂದು, ಮಣಿಮಯಪೀಠದಲ್ಲಿ ಕುಳ್ಳಿರಿಸಿ, ಪೂಜಾಭಕ್ತಿಯುಕ್ತನಾದ ಭೂಪತಿಗೆ ಮುನಿಪನಿಂತೆಂದನು :

"ಅಯ್ಯಾ ನೃಪೋತ್ತಮನೆ, ನೀನು ಕ್ಷೇಮವಂತನಾಗಿ ಇರುವೆಯಾ ? ನಿನ್ನ ಪುತ್ರ ಮಿತ್ರ ಕಳತ್ರ ರಾಜ್ಯಪ್ರಜಾಪರಿವಾರಗಳೆಲ್ಲವೂ ಕ್ಷೇಮಿಗಳೇ ?" ಎಂದು ಕೇಳಲು, ಭೂಪತಿಯು ಅಂಜಲಿಬದ್ಧಯುಕ್ತನಾಗಿ ಮುನಿವರ್ಯಗಿಂತೆಂದನು :

"ಮಹಾನುಭಾವರಾದ ಮುನೀಶ್ವರರೆ, ನಿಮಗೆ ಸ್ವಾಗತವೆ ? ನಿಮ್ಮ ಪರಮಾನುಗ್ರಹದಿಂದ ನನಗೆ ಸಕಲವೂ ಕ್ಷೇಮವೇ ಸರಿ. ಆದಿಯಲ್ಲಿ ಕೇಳಿದ ಪುತ್ರಕ್ಷೇಮ ಪ್ರಶ್ನೆಯು ಪುತ್ರರಹಿತನಾದ ನನಗೆ ಪುತ್ರಪ್ರದಾಯಕವೆಂದು ನಿಶ್ಚೈಸಿದೆನು. ಅಮೋಘಗಳಾದ ತಮ್ಮ ಅಮೃತಾಪಾಂಗ ನಿರೀಕ್ಷಣದಿಂ ನನ್ನನ್ನು ಪಿತೃಋಣದಿಂ ವಿಮುಕ್ತನಾಗುವಂತೆ ಅನುಗ್ರಹಿಸಬೇಕೆಂ"ದು ಪ್ರಾರ್ಥಿಸಲು, ಹೀಗೆಂಬ ರಾಯನ ವಾಕ್ಯವಂ ಕೇಳಿ, 'ಈಶ್ವರಾನುಗ್ರಹದಿಂ ಹಾಗೇ ಆದೀತೆಂ'ದು ಮುನಿಪ ನುಡಿಯಲು, ನೃಪನಿಂತೆಂದನು :

"ಸುರನದೀತರಂಗ ಶೀಕರಗಳಿಂ ಶೀತಳವಾದ ಆಲವಾಲಮಂಡಲಗಳಿಂ ಶೋಭಿಸುವ ಮೂಲಪ್ರದೇಶಗಳುಳ್ಳ ಆಶ್ರಮವೃಕ್ಷಂಗಳು ವಿವಿಧ ಕುಸುಮಫಲಗಳಿಂ ನಮ್ರಶಿರಗಳುಳ್ಳವಾಗಿ ಅಭ್ಯಾಗತಾತಿಥಿಪೂಜೆಗಳಿಗೆ ಯೋಗ್ಯಗಳಾಗಿ ಇವೆಯೇ ? ಉಪಶಾಂತಮಹಾಮುನಿ ಸಾನ್ನಿಧ್ಯದಿಂ ವೈರಮಂ ಬಿಟ್ಟು, ಹರಿಣಶಿಶುಗಳು ಸಿಂಹಶಾಬ[2]ಕ ಸುಹೃತ್ಸ[2]ಹಿತಗಳಾಗಿ ಸ್ತನ್ಯಪಾನಾಭಿಳಾಷಿಗಳಾಗಿ ಇವೆಯೇ ? ನಿರಂತರಪ್ರವರ್ತಮಾನ ಕ್ರತುಮಂತ್ರವಷಟ್ಕಾರ ಶ್ರವಣಶಿಕ್ಷಿತಶುಕಶಾರಿಕಾಕುಲಗಳಿಂ, ಪಠಿಸುತ್ತಿರುವ ಸಾಮಗಾನಧ್ವನಿಗಳಿಂ, ಕೂಡಿರುವ ಮುನಿಕುಮಾರಕಾಧ್ಯಯನಗಳು ಹರುಷಕರವಾಗಿವೆಯೇ ?" ಎಂದು ಭೂಪತಿ ನುಡಿಯಲು, ಆ ಮಾತಿಗೆ ಮುನಿಪತಿಯು "ಸಕಲವೂ ಕ್ಷೇಮ"ವೆಂದೆನಲು,

ಆ ಸಮಯದಲ್ಲಿ, ನಾನಾವರ್ಣಂಗಳಿಂ ಭಾಸಮಾನವಾದ ಇಂದ್ರಚಾಪಮಧ್ಯದಲ್ಲಿ ತೋರುವ ಕುಡಿಮಿಂಚಂತೆ, ನಿಜಾಭರಣಮಣಿಪ್ರಭಾಪಟಲಮಧ್ಯದಲ್ಲಿ ಸಂಚರಿಸುತ್ತಿರುವ ಕನಕಪುತ್ತಳಿಯೋ ಎಂಬಂತೆ, ನೂಪುರಧ್ವನಿಯನನುಸರಿಸಿ ಬರುವ ಗೃಹಹಂಸೆಗಳಂ

---

೧. ಆಂ (ಕ), ೨. ಕಸ (ಕ)

ನಿಜಚರಣತಳಪ್ರಭೆ[1]ಯಿಂ[1] ಕುಂಕುರಸಪಂಕಮಗ್ನ ಪಕ್ಷಿಗಳುಳ್ಳವಂತೆ ಮಾಡುತ, ಸುರುಚಿರ ವಜ್ರಶಲಾಕೆಗಳಂತೆ ತೋರುವ ಚರಣನಖಕಾಂತಿಯಿಂ ಶೋಭಿಸುತ, ಅತಿಧವಳ ಚಂದ್ರಿಕಾನಿಕರದಿಂ ಶೋಭಿಸುವ ಶರತ್ಕಾಲದಿವಸಲಕ್ಷ್ಮಿಯಂತೆ ಬಹುಸುವರ್ಣಬಿಂದುಗಳಿಂ ಚಿತ್ರಿತಮಾಗಿ ಅತಿಶುಭ್ರಮಾದ ಕೌಶೇಯವಸ್ತ್ರಾನ್ವಿತಳಾಗಿ, ಅತಿಗುರು ನಿತಂಬಜಘನಭಾಗಗಳಲ್ಲಿ ಮಯೂರ[2]ಪಿಂಛ[2]ಕಲಾಪದಂತೆಸೆವ ಕಾಂಚೀದಾಮಮರಕತ ಮಣಿನಿಕರಕಿರಣಗ[ಳ್ಗೆ], ದೂರ್ವಾಂಕುರಬುದ್ಧಿಯಿಂ ಜಿಹ್ವಾಪಲ್ಲವ[3]ಮಂ[3] ಪ್ರಸರಿಸುತ್ತಿಪ್ಪ ಗೃಹಹರಿಣಶಿಶುಗಳಿಂ ಗತಿನಿರೋಧಕುಪಿತ ಚಾಮರಗ್ರಾಹಿಣೀಕರ[4]ತಳ[4]ಚಾಮರಯುಗ್ಮದಿಂ ವಿಜಿತಳಾಗಿ, ಲೋಕವಿಜಯವಿಖ್ಯಾತನಾದ ಕುಸುಮಶರನಿಂ ಲಿಖಿತವಾದ ವಿಜಯವರ್ಣಾವಳಿ ಪಂಗ್ತಿಯಂತೆ ತೋರುವ ರೋಮರಾಜಿಯಿಂ ಮಧುಕರನಿಕರಯುತವಾದ ಮಾಲತೀಲತೆಯಂತೆ ಕಂಗೊಳಿಸುತ, ವಲಯವಜ್ರಮಣಿಕಿರಣನಿಕರವೆಂಬ ಪಂಜರಮಧ್ಯದಲ್ಲಿ ಶೋಭಿಸುವ ಶುಕಾಲಾಪವನ್ನಾಲಿಸುತ, ಮದನರಾಜ್ಯಾಭಿಷೇಕ ಕನಕಕಲಶಗಳಂತೆ ಒಪ್ಪುವ ಕುಚಭಾಗದಿ ಹೊಳೆಹೊಳೆವ ಮುಕ್ತಾಹಾರಕಾಂತಿಯಿಂ ತಾರಾನಿಕರಗಳಿಂ ಸುತ್ತಿದ ಮೇರುಶಿಖರವನಲಕ್ಷ್ಮಿಯಂತೆ ಒಪ್ಪುತ, ಪೂರ್ಣಚಂದ್ರಚಂದ್ರಿಕಾನಿಕರದಂತಿಪ್ಪ ಮುಗುಳುನಗೆಯಿಂ ಸಖೀಜನನೇತ್ರಕುವಲಯಗಳಂ ಸಂತೋಷಪಡಿಸುತ, ಲಾವಣ್ಯಸಮುದ್ರದಲುದ್ಭವಿಸಿದ ಪವಳದ ಚಿಗುರಂತೆ ರಂಜಿಸುವ ಅಧರಕಾಂತಿಯಿಂ, ಕೆಂಪಡರಿದ ಮುತ್ತಿನ ಚಿಪ್ಪಿನಂತೆ ಶೋಭಿಸುವ ಕಪೋಲಗಳಿಂ, ಸೌಂದರ್ಯಲಕ್ಷ್ಮೀನಿವಾಸಮಾದ ಕಮಲಗಳಂತೆಸೆವ ನೇತ್ರಕಾಂತಿಯಿಂ ಭವನದೇಶವಂ ನೀಲೋತ್ಪಲ ಮಾಲಾಲಂಕೃತಗಳಂತೆ ಮಾಡುತ, ಸಕಲಪುಷ್ಪಮಧುಪಾನವಂ ಗೈವ ಮಧುಕರನೊಡನೆ ವಿರೋಧವಂ ಸೃಜಿಸಿದ ವಿಧಿವಿಲಾಸದೊಡನೆ ಮುನಿದಿಹ ಚಂಪಕಕುಟ್ಮಲವಂ ಒಡಂಬಡಿಸುವ, ರೋಹಿಣೀನಕ್ಷತ್ರದಂತೆಸೆವ ನಾಸಾಮೌಕ್ತಿಕದಿಂ ಶೋಭಿಸುತ, ಕರ್ಣಾವತಂಸ ನೀಲೋತ್ಪಲಕುಸುಮನಿಷ್ಯಂದ ಮಕರಂದಬಿಂದುಗಳ ಹೋಲುವ ಮಣಿಖಚಿತ ತಾಟಂಕಯುಗ್ಮದಿಂ, ಸಕಲಲೋಕ ಸುಖಕರಮಾದ ಬಾಲರವಿಬಿಂಬಶೋಭಿತಮಾದ ದಿವಸಲಕ್ಷ್ಮಿಯಂತೆ ಕುಂಕುಮತಿಲಕಯುಕ್ತಮಾದ ಫಾಲದೇಶದಿಂ, ನಿಜಪ್ರಭಾಪುಂಜದಿಂ ಕೌಶೇಯ ವಿತಾನನಿಕರಮಂ ಕೌಸುಂಭವಸ್ತ್ರವಿತಾನದಂತೆ ರಚಿಸುವ ಪದ್ಮರಾಗಶಿರೋಭೂಷಣದಿಂ ರಂಜಿಸುತ, ಶರತ್ಕಾಲಲಕ್ಷ್ಮಿಯಂತೆ ವಿಕಸಿತಾರವಿಂದಲೋಚನೆಯಾಗಿ, ವರ್ಷಾಕಾಲ [5]ಶ್ರೀ[5]ಯಂತೆ ಘನಕೇಶಪಾಶಶೋಭಿತೆಯಾಗಿ, ಧನಾಧಿಪಲಕ್ಷ್ಮಿಯಂತೆ ಅಳಕೋದ್ಭಾಸಿನಿಯಾಗಿ, ಮೂರ್ತಿಮತಿಯಾದ ವಿಲಾಸವೈಖರಿಯಂತೆ, ಕಂಗೊಳಿಸುತಿಹ ಲಾವಣ್ಯಲಕ್ಷ್ಮಿಯಂತೆ, ರುಚಿರಾವಯವಂ ಪಡೆದಿಹ ಶೃಂಗಾರರತಿಯೋ ಎಂಬಂತೆ, ನಾರೀರತ್ನವಾದ ಸುರತಾಧಿರಾಜ್ಯದೇವತೆಯೆಂಬಂತೆ, ಜಗನ್ಮೋಹಿನಿಯಾದ ಸುನಂದಾದೇವಿಯೆಂಬ ಆ ರಾಯನ ಪಟ್ಟದ ರಾಣಿಯು ಬರುತಿರಲು, ಆ ದೇವಿಯ ಶರೀರಪ್ರತಿಬಿಂಬದಂತಿರುವ ಮುರಾದೇವಿಯೆಂಬ ರಾಯನ ಪ್ರಿಯಪತ್ನಿಯು ಸಂಗಡ ಬರುತಿರಲು, ಪೂಜಾಸ್ಥಾನ ಮಣಿಮಂಟಪವೆಲ್ಲವೂ ಸ್ತ್ರೀಮಯವಾದಂತೆ ತೋರುತ್ತಲಿತ್ತು.

---

೧. ಯಿಂದ (ಕ). ೨. ಪಿಂಛಕ (ಕ). ೩. ದಿಂ (ಕ). ೪. ಗತ (ಕ). ೫. ಸ್ತ್ರೀ (ಕ)

ಆ ಸಮಯದಲ್ಲಿ ಸುನಂದಾದೇವಿಯು ವಿನಯದಿಂ ಮುನಿಪತಿಗೆ ಅಭಿವಂದಿಸಲು, ಹಾಗೆ[ಯೇ] ಮುರಾದೇವಿಯು ಭಕ್ತಿವಿಶ್ವಾಸದಿಂದ ದೂರವಾಗಿ ನಿಂತು ಮುನಿಪಾದಗಳಿಗಭಿವಂದಿಸಿ ನಿಂತಿರಲು, ಆ ರಾಯನು ರತ್ನಕಲಶೋದಕಗಳಿಂದ ಮುನಿವರ್ಯನ ಪಾದ ಪದ್ಮಂಗಳಂ ತೊಳೆದು, ಮಧುಪರ್ಕಾದಿಗಳಿಂ ಪೂಜಿಸಿ, ಆ ಪಾದೋದಕವಂ ತನ್ನ ಶಿರಸ್ಸಿನಲ್ಲಿ ತಳಿದು, ಹಾಗೆ[ಯೇ] ಸುನಂದಾದೇವಿಯ ಶಿರಸ್ಸಿನಲ್ಲಿ ತಳಿಯಲು, ಆ ತೀರ್ಥಬಿಂದುಗಳಲ್ಲಿ ಒಂಭತ್ತು ಬಿಂದುಗಳು ಆ ದೇವಿಯ ಶಿರಸ್ಸಿನಲ್ಲಿ ಕ್ಷಣ ನಿಂತು ಜಾರಿಪೋಗಲು, ಹಾಗೆ[ಯೇ] ಮುರಾದೇವಿಯ ಶಿರಸ್ಸಿನಲ್ಲಿ ತಳಿಯಲು, ಪ್ರಿಯಪತ್ನಿಯಾದ ಮುರಾದೇವಿಯ ಶಿರಸ್ಸಿನಲ್ಲಿ ಒಂದೆ ಬಿಂದು ಜಾರದೆ ನಿಂದಿರಲು, ಅದಂ ನೋಡಿ ರಾಯನು ಮುನಿಪತಿಗಿಂತೆಂದನು :

"ಮಹಾಪುರುಷರಾದ ಮುನಿವರ್ಯರೆ, ನನ್ನ ಪಟ್ಟದ ರಾಣಿಯ ಶಿರಸ್ಸಿನಲ್ಲಿ ತಳಿದ ತೀರ್ಥಬಿಂದುಗಳೊಂಭತ್ತು ಕ್ಷಣಮಾತ್ರ ನಿಂತು, ಆ ಬಳಿಕ ಜಗುಳಿಹೋದವು. ಈ ಮುರಾದೇವಿಯ ಶಿರಸ್ಸಿನಲ್ಲಿ ಒಂದು ಬಿಂದು ಮಾತ್ರ, ಬಹುವಾಗಿ ನಿಮ್ಮ ಪಾದಗಳಿಗಭಿವಂದಿಸಿ ತಲೆಬಾಗಿ ನಿಂತಿರುವ ಈ ಸ್ತ್ರೀಯ ಶಿರಸ್ಸಿನಿಂದ ಚಲಿಸದೆಯಿರುವದಕ್ಕೆ ಕಾರಣ ವೇನೆ"ನ್ನಲು, ಆ ಮಾತಿಗೆ ಮುನಿಪನಿಂತೆಂದನು :

"ಅಯ್ಯ ರಾಯನೆ, ಅದರ ಕಾರಣವಂ ಕೇಳುವದಂತಿರಲಿ. ಸಂತಾನಾಪೇಕ್ಷಿಯಾದ ನಿನಗೆ ಬಿಂದುಸಂಖ್ಯಾಪ್ರಕಾರ ನಿನ್ನ ಪಟ್ಟಮಹಿಷಿಯಲ್ಲಿ ಒಂಭತ್ತು ಕುಮಾರರು ಜನಿಸಿಯಾರು. ಮತ್ತೆ ನಿನ್ನ ಪ್ರಿಯಪತ್ನಿಯಲ್ಲಿ ಒಬ್ಬ ಕುಮಾರ ಜನಿಸಿಯಾನು. ನಭೋಮಂಡಲದಲ್ಲಿ ರಾಜಿಸುವ ಚಂದ್ರಮಂಡಲವೊಂದೇ ; ಜಲತರಂಗಗಳಲ್ಲಿ ಪ್ರತಿಬಿಂಬಿಸಿ, ಬಹುಬಿಂಬಗಳಂತೆ ತೋರಿ, ತರಂಗವು ಸ್ತಿಮಿತವಾಗಲು ಜಲದಲ್ಲಿ ಒಂದೇ ಚಂದ್ರಬಿಂಬ ತೋರುವಂತೆ ಆ ಉದಕಬಿಂದು ಚಲಿಸದೆ ನಿಂತಿತು. ಮುಂದೆ ನಮಗೆ ಆಶ್ರಮವಂ ಕುರಿತು ತೆರಳುವದಕ್ಕೆ ಅನುಮತನಾಗೆ"ನಲಾ ಮಾತಿಗೆ ರಾಯನಿಂತೆಂದನು :

"ಮಹಾನುಭಾವರೆ, ವೇದಸದೃಶವಾದ ತಮ್ಮ ವಾಕ್ಯದಿಂದ ನಾನು ಬಹುಪುತ್ರನಾದೆನೆಂದು ನಿಶ್ಚೈಸಿದೆನು. ನನ್ನ ಗೃಹವಿಂದಿಗೆ ಪಾವನವು. ನಮ್ಮ ಪೂರ್ವಿಕರು ಮಹಾಸುಕೃತಶಾಲಿಗಳಾದುದರಿಂದ ಈ ಕಲಿಯುಗದಲ್ಲಿಯೂ ನಿಮ್ಮ ದಿವ್ಯಮೂರ್ತಿದರುಶನದಿಂದ ನಾನು ಧನ್ಯನಾದೆನು. ನನ್ನ ಕುಲ ಪಾವನವು. ಮತ್ತೆ ಇಲ್ಲಿಗೆ ಬಂದ ಕಾರ್ಯವೇನೆಂ" ದೆನಲು,

"ಅಯ್ಯ ನೃಪೋತ್ತಮನೆ, ಮಹೋದಯಪುಣ್ಯಕಾಲ ಸ್ನಾನಾರ್ಥವಾಗಿ ಪ್ರಯಾಗ ಕ್ಷೇತ್ರಕ್ಕೆ ಬಂದು, ಅದೆ ಮಾರ್ಗದಿಂ ಕಾಶೀಕ್ಷೇತ್ರ ಸೇವೆಯಂ ಮಾಡಿ ಬರುವಲ್ಲಿ, ಈ ಕಲಿಯುಗದಲ್ಲಿ ಧರ್ಮದಿಂ ಪ್ರಜಾಪರಿಪಾಲನಂಗೈವ ನಿನ್ನ ವೈಭವವಂ ನೋಡ ಬಂದೆವು. ನಿನಗೆ ಶುಭವಾಗಲಿ. ಪೋಗಿ ಬರುತಲಿದೇವೆ" ಎಂದು ಪೀಠದಿಂದೆದ್ದು, ಹಸ್ತಲಾಘವದಿಂದ ರಾಜದ್ವಾರಪರ್ಯಂತ ನಡೆದು, ಶಿಷ್ಯಸಹಿತವಾಗಿ ಮುನಿಪನದೃಶ್ಯವಾಗಲು,

ಆ ಭೂಪತಿಯು ಸಂತೋಷಭರಿತನಾಗಿ ತನ್ನ ಆಸ್ಥಾನಮಂಟಪವನ್ನೈದಿದನು. ಆ ಬಳಿಕ ಆತನ ಪ್ರಿಯಪತ್ನಿಯಾದ ಮುರಾದೇವಿಯು ವೀತಹವ್ಯರೆಂಬ ಆ ಮುನಿಯ ಪ್ರಸಾದದಿಂದ ಆ ದಿನ ಮೊದಲುಗೊಂಡು ಗರ್ಭವಂ ಧರಿಸಿ, ಪುತ್ರನಂ ಪ್ರಸವಿಸಲು, ಆ ರಾಯನು ಆ

ಶಿಶುವಿಗೆ ಮೌರ್ಯನೆಂದು ನಾಮಕರಣಂಗೈದಿದನು. ಮತ್ತೆ ಕೆಲವು ಕಾಲದ ಮೇಲೆ ಪಟ್ಟ ಮಹಿಷಿಯಾದ ಸುನಂದಾದೇವಿಯೂ ಕ್ರಮವಾಗಿ ಒಂಭತ್ತು ಪುತ್ರರಂ ಪ್ರಸವಿಸಲು, ಆ ರಾಯನು ಆ ಕುಮಾರರಿಗೆ ನಂದಶಬ್ದ ಪೂರ್ವಕವಾಗಿ ನಾಮಕರಣಂಗಳಂ ಗೈದಿದನ ದೆಂತೆನೆ :

ಪ್ರಥಮಪುತ್ರನಿಗೆ ನಂದನೆಂದೂ ಆ ಬಳಿಕ ಸುನಂದನೆಂದೂ ಉಪನಂದನೆಂದೂ ಪ್ರನಂದನೆಂದೂ ಲೋಕನಂ[೧][ದ][೧]ನೆಂದೂ ಕುರುನಂದನೆಂದೂ ಪ್ರಿಯನಂದನೆಂದೂ ಮಿತ್ರನಂದನೆಂದೂ ವಿನಂದನೆಂದೂ ನಾಮಕರಣವಂ ಮಾಡಿ, ಆ ಬಳಿಕ ಪ್ರತಿದಿನದಲ್ಲಿ ಪ್ರವರ್ಧಮಾನರಾಗುತ್ತಿರುವ ಕುಮಾರಕರಂ ನೋಡಿ, ಆ ರಾಯನು ಶುಕ್ಲಪಕ್ಷವನ್ನಾಶ್ರಯಿಸಿ ಪ್ರವರ್ಧಮಾನನಾಗುತ್ತಿರುವ ಚಂದ್ರದರುಶನದಿಂದುಕ್ಕುತ್ತಿರುವ ಸಮುದ್ರನಂತೆ ಸಂತೋಷಭರಿತನಾಗುತ್ತಿದ್ದನು ಎಂಬಲ್ಲಿಗೆ

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಶ್ರೀ ಮಹೀಶೂರನರಪತಿ ಶ್ರೀ ಕೃಷ್ಣರಾಜೇಂದ್ರ ರಾಶ್ರಿತ ಹೊಯಿಸಣಿಗ ಕುಲಸಂಜಾತ ನಾರಾಯಣ ಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ನಂದೋತ್ಪತ್ತಿಕಥನವೆಂಬ ಪ್ರಥಮಾಶಯಃ ಸಮಾಪ್ತಃ.

ದ್ವಿತೀಯಾಶಯ : ಚಂದ್ರಗುಪ್ತ ಬಂಧವಿಮೋಚನವು

ಈ ರೀತಿಯಲ್ಲಿ ಮತ್ತೆ ಕೆಲವು ಕಾಲದ ಮೇಲೆ, ಪ್ರಿಯಪತ್ನೀಪುತ್ರನಾದ ಮೌರ್ಯನು ಪ್ರವರ್ಧಮಾನವಾದುದಂ ಕಂಡು, ಆ ರಾಯನು ಆತನಿಗೆ ಸಕಲ ವಿದ್ಯಾಭ್ಯಾಸವಂ ಮಾಡಿಸಲು, ಆತನು ಪ್ರಬುದ್ಧನಾಗಿ ವಿನಯಾದಿ ಸಂಪತ್ಸಮೃದ್ಧನಾಗಿ ಇರುವದಂ ಕಂಡು, ಆತನಿಗೆ ಬಹುಪತ್ನಿ[ಯ]ರಂ ವಿವಾಹವಂ ಮಾಡಿಸಿ, ಸಿಂಹಾಸನಾರೋಹಣ [೨]ಹೊರತು ಉಳಿದ ಅಧಿಕಾರವಿಚಾರವಂ ಮಾಡುವಂತೆ[೨] ನೇಮಿಸಲು, ಆ ಮೌರ್ಯನು ಪ್ರಜಾನಿಕರಕ್ಕೆ ಸಮ್ಮತನಾಗಿ ವೃದ್ಧಮಂತ್ರಿಪುತ್ರರಿಗೆ ಬುದ್ಧಿಯಂ ಪೇಳುತ್ತ, ಯಥಾಯೋಗ್ಯವಾದ ಅಧಿಕಾರಗಳಂ ನೇಮಿಸಿ, ಅವರಿಂದ ಆಗುವ ಕಾರ್ಯನಿರ್ವಾಹವಂ ತಿಳಿಯುತ್ತ, ತನಗೆ ಸಮಾನವಯಸ್ಕರಾದ ಸಿಂಹಬಲ ತಮ್ಮನಾದ [?] ಬಾಗುರಾಯಣ ಭದ್ರಭಟ ಡಿಂಗಿರಾತ ಬಲಗುಪ್ತ ವಿಜಯವರ್ಮ ಲೋಹಿತಾಕ್ಷ ಪುರುಷದತ್ತರೆಂದು ಪರಂಪರೆಯಿಂ ಶೂರರಾಗಿ ಬಂದ ಈ ಜನಗಳಿಗೆ ಸೇನಾಧಿಪತ್ಯವಂ ನೇಮಿಸಿ, ಶತ್ರುಗಳ ಪಾಳೆಯದ ಮೇಲೆ ಕಳುಹಿಸುತ್ತ, ಪೂರ್ವಸಂಚಿತಧನವನ್ನಪೇಕ್ಷಿಸದೆ, ಪುಷ್ಟರಾದ ಪ್ರಜೆಗಳಿಂದ ಬಹುಧನಗಳನ್ನಾರ್ಜಿಸಿ, ರಾಜ್ಯತಂತ್ರದ ವೆಚ್ಚಕ್ಕೆ ಒದಗಿಸುತ್ತ, ತಂದೆಗೆ ಆಯಾಸವಿಲ್ಲದಂತೆ ರಾಜ್ಯ ವಿಚಾರವಂ ಮಾಡುತ್ತ, ನಂದರ ಕಂಡರೆ ಸ್ವಾಮಿಭಕ್ತಿಯಿಂದ ನಡೆಯುತ್ತ, ರಾಕ್ಷಸನಿಗೂ ಸಮ್ಮತನಾಗಿ ಇರಲು,

ಕೆಲವು ಕಾಲದ ಮೇಲೆ ಪಟ್ಟಮಹಿಷೀಪುತ್ರರಾದ ನವನಂದರು ಪ್ರವರ್ಧ[ಮಾನ]ರಾದುದಂ ನೋಡಿ, ಆ ರಾಯನು ಅವರಂ ಅಮಾತ್ಯ ರಾಕ್ಷಸನ ವಶವಂ ಮಾಡಲು,

---

೧. ದನ (ಕ, ಖ). ೨. ಖ ಹಸ್ತಪ್ರತಿಯಲ್ಲಿ ಇಷ್ಟುಭಾಗ ಲಿಖಿತವಾಗಿಲ್ಲ.

ಆತನು ಆ ನಂದರಿಗೆ ಸಕಲವಿದ್ಯಾಭ್ಯಾಸವಂ ಮಾಡಿಸಿ, ಪ್ರಭುತ್ವಪದಕ್ಕೆ ಯೋಗ್ಯರಾದುದಂ ನೋಡಿ, ಇಚ್ಛಾನುಸಾರವಾಗಿ ಯಥಾಯೋಗ್ಯ ರಾಜಕುಲಕನ್ಯಾರತ್ನಗಳನ್ನು ಪುತ್ರರಾದ ನಂದರಿಗೆ ವಿವಾಹವಂ ಮಾಡಿಸಲು, ಆ ಬಳಿಕ ಪ್ರಿಯಪುತ್ರನಾದ ಮೌರ್ಯನಿಗೆ ತನ್ನ ಬಹುಪತ್ನಿಯ[ರ]ಲ್ಲಿ ಚಂದ್ರಗುಪ್ತ ಮೊದಲಾದ ನೂರು ಮಂದಿ ಕುಮಾರರು ಜನಿಸುತ್ತಲಿದ್ದರು.

ಹೀಗೆ ಇರುತ್ತಿರಲು, ಬಾಲ್ಯ ಕಳೆದು ಯೌವನವುಂಟಾಗುವ ಸಮಯದಲ್ಲಿ ರಾಕ್ಷಸನು ನಂದರಿಗೆ ಶಸ್ತ್ರವಿದ್ಯಾಭ್ಯಾಸವಂ ಮಾಡಿಸಲು, ಖಡ್ಗ ಬಾಣಮುಖ್ಯವಾದ ಆಯುಧವಿದ್ಯ ದಲ್ಲಿ ನಿಪುಣರಾದ ನಂದರಂ ನೋಡಿ, ಆ ರಾಯನು ಸಕಲಸಮ್ಮತಿಯಿಂದ ಜ್ಯೇಷ್ಠನಾದ ನಂದನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ, ಯೌವರಾಜ್ಯಾಭಿಷೇಕಮಂ ಮಾಡಿಸಿ, ಕಡಮೆ ಕುಮಾರರು ಪ್ರಭುತ್ವಕ್ಕೆ ಯೋಗ್ಯರಾದುದರಿಂದ ಜ್ಯೇಷ್ಠ ಹೇಳಿದಂತೆ ಕನಿಷ್ಠರು ಕೇಳುತ್ತ, ಕನಿಷ್ಠ ವಿಜ್ಞಾಪಿಸಿದಂತೆ ಜ್ಯೇಷ್ಠರು ಒಡಂಬಡುತ್ತ, ಐಕಮತ್ಯ ತಪ್ಪದೆ ಆಧಿಪತ್ಯ ಮಾಡು ವಂತೆ ಕುಮಾರರಾದ ನಂದರಿಗೆ ನೇಮಿಸಿ, [೧]ವೇಳೆ ವೇಳೆಯಲ್ಲಿ ಇವರಿಗೆ[೧] ಬುದ್ಧಿಮತಿಯಂ ಹೇಳುವಂತೆ ರಾಕ್ಷಸನಿಗೆ ನೇಮಿಸಲು, ಅವರು ರಾಕ್ಷಸನಲ್ಲಿ ವಿಶ್ವಾಸವಂ ಮಾಡಿ ಆತನು ಹೇಳಿದಂತೆ ನಡೆಯುತ್ತಲಿದ್ದರು.

ಆ ಬಳಿಕ ಆ ರಾಯನು ತನಗೆ ಯೌವನ ಗಳಿತವಾಗಿ ಬರುವದಂ ನೋಡಿ, ಪರಲೋಕ ಸಾಧನವಾದ ಪುಣ್ಯಕಥಾಶ್ರವಣವಂ ಮಾಡುತ್ತ ಮಹಾದಾನಂಗಳಿಂದ ವಿಪ್ರರಂ ಪೂಜಿಸು ತ್ತಿರಲು, ಆ ಬಳಿಕ ಮೌರ್ಯನು ನಂದರಲ್ಲಿ ಭೃತ್ಯಭಾವದಲ್ಲಿರುತ್ತ, ಪ್ರವರ್ಧಮಾನರಾದ ತನ್ನ ಪುತ್ರರಾದ ಚಂದ್ರಗುಪ್ತಾದಿಗಳಿಗೆ ಸಕಲವಿದ್ಯವಂ ಹೇಳುವಂತೆ ವಿದ್ಯಾಗುರುಗಳಿಗೆ ನೇಮಿಸಲು, ಆ ಗುರುಗಳು ಹೇಳಿದಂತೆ ಚಂದ್ರಗುಪ್ತಾದಿಗಳು ಸಕಲವಿದ್ಯದಲ್ಲಿಯೂ ನಿಪುಣರಾಗಿ ಆಯುಧವಿದ್ಯಾವಿಶಾರದರಾಗಿ ಮಂತ್ರಿಪುತ್ರರಿಗೆ ಬುದ್ಧಿಯಂ ಹೇಳುತ, ಸೇನೆಯಲ್ಲಿ ಮತ್ತರಾದವರಂ ದಂಡಿಸುತ, ಶೂರರಿಗೆ ಶಸ್ತ್ರವಿದ್ಯಾಮರ್ಮವಂ ತೋರಿಸುತ, ಪ್ರಜೆಗಳಿಗೆ ಸಮ್ಮತರಾಗಿ ಪ್ರತಿದಿನವೂ ಹೆಚ್ಚಿ ಬರುವ ಪರಾಕ್ರಮವುಳ್ಳವ[೨]ರಾಗಿ ತಮ್ಮ ತಂದೆಯಿಂದಧಿಕರಾಗಿ ಇರುತ್ತಿರಲು,

ಕೆಲವು ದಿವಸದ ಮೇಲೆ ನಂದರು ಶೌರ್ಯದಲ್ಲಿ ತಮಗಿಂತಧಿಕರಾಗಿ ನೀತಿಯಲ್ಲಿ ವೃದ್ಧ ಮಂತ್ರಿಗಳಿಗೆ ಸಮಾನರಾಗಿ ಪ್ರಜಾನಿಕರಕ್ಕೆ ಸಮ್ಮತರಾದ ಮೌರ್ಯಪುತ್ರರಂ ನೋಡಿ ಮನದಲ್ಲಿ ಮತ್ಸರಗೊಂಡು, ತಮ್ಮೊಳಗೆ ತಾವು ಆಲೋಚಿಸುತ್ತಿದ್ದರದೆಂತೆಂದರೆ :

"ಶೂದ್ರಸ್ತ್ರೀಪುತ್ರನಾದ ಮೌರ್ಯನ ಪುತ್ರರು ತಮಗೆ ಜ್ಞಾತಿಗಳಾಗಿ, ಸಕಲ ವಿದ್ಯ ದಲ್ಲಿಯೂ ನಮಗಿಂತಧಿಕರಾಗಿ, ಹೆಚ್ಚಿ ಬರುವ ಪರಾಕ್ರಮವುಳ್ಳವರಾಗಿ ಇದಾರೆ. ಇವರ ಉಪಾಯ ಕೌಶಲ್ಯವಂ ನೋಡಿದರೆ, ಕೆಲವು ಕಾಲದ ಮೇಲೆ ನಮ್ಮ ರಾಜ್ಯವಂ, ನಮ್ಮ ಪ್ರಭುತ್ವವನ್ನಪೇಕ್ಷಿಸುವಂತೆ ತೋರುತ್ತಲಿದೆ. ಇದಕ್ಕೆ ಈಗಲೇ ಯಾವ ಉಪಾಯದಿಂದ ಲಾದರೂ ಇವರಂ ನಿಗ್ರಹಿಸದೆ ಉಪೇಕ್ಷೆ ಮಾಡಿದರೆ ಇವರ ದೆಸೆಯಿಂದ ನಮಗೆ ಮಹದನರ್ಥವು ಸಂಭವಿಸೀತು" ಎಂದು ನಿಶ್ಚೈಸಿ, ಅಮಾತ್ಯರಾಕ್ಷಸನಂ ಕರೆಕಳುಹಿಸಿ,

೧. ವೇಳೆವೇಳೆಯಲ್ಲಿರುವರಿಗೆ (ಕ). ೨. ರಾಗಿ (ಕ)

ಆತನಿಗೆ ಈ ಅರ್ಥವಂ ತಿಳುಹಿಸಲು, ಆ ರಾಕ್ಷಸನಿಂತೆಂದನು :

"ಅಯ್ಯ ಕುಮಾರಕರುಗಳಿರಾ, ನಿಷ್ಕಾರಣ ಮತ್ಸರದಿಂದ ಈ ಮೌರ್ಯರಂ ಸಂಹರಿಸಿದರೆ, ಲೋಕದಲ್ಲಿ ಅಪಖ್ಯಾತಿವುಂಟಾಗಿ ಪ್ರಜೆಗಳೆಲ್ಲರೂ ನಿಮ್ಮಲ್ಲಿ ವಿಶ್ವಾಸವಂ ಬಿಡುವರು. ಇದೇ ಅನರ್ಥಕ್ಕೆ ಕಾರಣವು. ಇದಲ್ಲದೆ ನಿಮಗೆ ದೈವಸಹಾಯವು ತಪ್ಪೀತು. ಮೌರ್ಯಪುತ್ರರು ನಿಮಗೆ ಮುಂದೆ ಶತ್ರುಗಳಾದಾರೆಂದು ನಿಶ್ಚಯವಿದ್ದರೆ ವ್ಯಾಘ್ರನಿಗ್ರಹಕ್ಕೆ ಚೋರರಂ ನೇಮಿಸುವಂತೆ ಮುಂದೆ ಶತ್ರುಗಳ ದೆಸೆಯಿಂದ ಅಶಕ್ಯವಾಗಿ ಬಂದೊದಗಿದ ಕಾರ್ಯಕ್ಕೆ ಈ ಮೌರ್ಯರಂ ಪ್ರೋತ್ಸಾಹಿಸಿ ಕಳುಹಿಸಿ, ಆ ಶತ್ರುಗಳ ಮುಖದಿಂದಲೇ ಈ ಮೌರ್ಯರಂ ನಿಗ್ರಹವಂ ಮಾಡಿಸಿದರೆ ನಿಮಗೆ ಲೋಕಾಪವಾದ ವುಂಟಾಗದು. ಶತ್ರುನಿಗ್ರಹವೂ ಆಗುವದು" ಎಂದು ಹೇಳುತ್ತಿರುವ ರಾಕ್ಷಸನಂ ಕುರಿತು ವಿನಂದನೆಂಬವನು,

"ಅಯ್ಯಾ ಅಮಾತ್ಯರೇ, ಜ್ಞಾತಿಗಳಿಗೆ ಪರಸ್ಪರ ಮತ್ಸರವೂ ಅದಕ್ಕೆ ಪ್ರತೀಕಾರ[ವಂ] ಮಾಡೋಣವೆಂಬು[ದೂ] ಲೋಕಪ್ರಸಿದ್ಧವು; ನಮ್ಮ ಈ ಚಂದ್ರವಂಶಸ್ಥರಾದ ಪೂರ್ವೀಕರಾದ ಅರಸುಗಳಲ್ಲಿ ವಿಶೇಷವಾಗಿ ನಡೆದಿರುವದು. ಅದಂತಿರಲಿ, ದೇಹದಲ್ಲಿ ಉದ್ಭವಿಸಿದ ಮಹಾರೋಗವು ಅಪಥ್ಯಸೇವಾಸಮಯದಲ್ಲಿ ವೃದ್ಧಿಯಂ ತಾಳಿ ಶರೀರವಂ ಹ್ಯಾಗೆ ನಾಶವಂ ಮಾಡುವದೋ, ಅದೇ ರೀತಿಯಲ್ಲಿ ಒಂದು ಕುಲದಲ್ಲುದ್ಭವಿಸಿದವರಾದರೂ ಮತ್ಸರಿಗಳಾದರೆ ಸಮಯವನ್ನರಿತು ಪ್ರತಿಪಕ್ಷವಂ ನಾಶವಂ ಮಾಡುವರು. ಮತ್ತೂ ಕೊರಳು ಸುತ್ತಿದ ಸರ್ಪವಂ ತನ್ನ ಉದ್ಯಾನಸರ್ಪವೆಂದು ವಿಶ್ವಾಸವಂ ಮಾಡದೆ ಯಾವ ಉಪಾಯದಿಂದಲಾದರೂ ಆ ಸರ್ಪವಂ ನಿಗ್ರಹಿಸಿ ಸುಖಿಯಾದ ಪುರುಷನಿಗೆ ಸರ್ಪಹನನ ದೋಷಾಪವಾದವು ದೇವ ಬ್ರಾಹ್ಮಣ ಪೂಜೆಯಿಂದ ಹ್ಯಾಗೆ ಪರಿಹರಿಸಿಕೊಳ್ಳುವದಕ್ಕೆ ಶಕ್ಯವಾಗುವದೋ, ಅದೇ ರೀತಿಯಲ್ಲಿ ಮೌರ್ಯನಿಗ್ರಹದಿಂದ ಬಂದ ದೋಷಾಪವಾದಗಳೂ ಮಹಾದಾನಾಚರಣೆಯಿಂದಲೂ ಪ್ರಜಾಪರಿಪಾಲನೆಯಿಂದ[ಲೂ] ಪರಿಹರಿಸಿಕೊಳ್ಳುವದಕ್ಕೆ ಶಕ್ಯವಾದೀತು" ಎಂದು ಹೇಳುತ್ತಿರಲು,

ಆ ಬಳಿಕ ಕುರುನಂದನೂ ರಾಕ್ಷಸ ಹೇಳಿದ ಮಾತಿಗೆ ಸಮ್ಮತನಾದುದಂ ತಿಳಿದು, ಅವನಂ ಕುರಿತು ಉಪನಂದನಿಂತೆಂದನು :

"ಎಲೈ ತಮ್ಮನೆ, ಈ ಅಮಾತ್ಯನು ಹೇಳಿದಂತೆ ಮೌರ್ಯರಂ ಪ್ರೋತ್ಸಾಹಿಸಿ ಶತ್ರುಗಳ ಮೇಲೆ ಕಳುಹಿಸಿದರೆ, ಇವರು ಅವರಿಂದ ಸಂಹೃತರಾದರೆ, ನಮಗೆ ಕಾರ್ಯಜಯವು. ಅದಲ್ಲದೆ, ಈ ಮೌರ್ಯರಿಂದ ಆ ಶತ್ರುಗಳೇ ಹತರಾಗಿ, ಮಹಾಶೂರರೆಂದು ಇವರಿಗೆ ಯಶಸ್ಸು ಬಂದರೆ ನಾವು ಮಾಡಿದ ಆಲೋಚನೆಗೆ ಶತ್ರುಗಳ ಉಪಚಯವೇ ಫಲವಾಗುವದು" ಎಂದು ಹೇಳಲು, ಆಗ ಮಿತ್ರನಂದನಿಂತೆಂದನು :

"ಮೌರ್ಯರಂ ಶತ್ರುಗಳ ಮೇಲೆ ಕಳುಹಿಸುವಲ್ಲಿ ಮನಸ್ವಿಗಳಾದವರು ಹೋದಾರು. ಅವರು ಶತ್ರುಗಳಿಂ ಸಂಹೃತರಾದರೆ ಉಳಿದವರು ನಮಗೆ ಮಿತ್ರರಾದಾರೇ ?" ಎನಲು, ನಂದನಿಂತೆಂದನು :

"ಅಯ್ಯ ಅಮಾತ್ಯರೆ, ಈ ಕಲಿಯುಗದಲ್ಲಿ ಶೂದ್ರವೃತ್ತಿಯಿಂದ ಬ್ರಾಹ್ಮಣಜೀವನವು, ರಾಜಬೀಜೋತ್ಪನ್ನರಿಗೆ ರಾಷ್ಟ್ರಾಧಿಪತ್ಯಮುಂಟಾಗುವದೆಂದು ಶಾಸ್ತ್ರಸಿದ್ಧವು. ನಮ್ಮ

ಮೌರ್ಯರು ಸೇನಾಸಮೇತರಾಗಿ ಶೂರರಾಗಿ ಶತ್ರುಗಳ ಮೇಲೆ ನಡೆದರೆ ಎಂಥಾ ಶತ್ರುಗಳಾದರೂ ಇವರಿಂದ ಸಂಹೃತರಾದಾರು. ಆಗ ಮಹಾಶೂರರೆಂದು ಪ್ರಸಿದ್ಧಿಯಂ ಪಡೆದು ಸೇನಾರಂಜಿತರಾಗಿ, ಇವರು ಜ್ಞಾತಿಗಳೂ ಆಗಿ ಇರುವಲ್ಲಿ, ಅವರಿಗೆ ಪ್ರಭುತ್ವವಂ ಕೊಡತಕ್ಕವರು ಮತ್ತೊಬ್ಬರುಂಟೆ ? ಅವರು ನಿಂತಲ್ಲಿಯೇ ಪಟ್ಟಣವಾಗುವುದು ; ಪ್ರಜೆಗಳೂ ಅವರನ್ನೇ ಅನುವರ್ತಿಸುವರು : ನಮ್ಮ ಹಗೆಗಳೆಲ್ಲರೂ ಅವರಿಗೆ ಮಿತ್ರರಾಗುವರು'' ಎಂದು ನಂದನು ಹೇಳುತ್ತಿರಲು, ಆ ಮಾತಿಗೆ ರಾಕ್ಷಸನಿಂತೆಂದನು :

''ಅಯ್ಯ ಕುಮಾರಕರುಗಳಿರಾ, ರಾಜೋತ್ತಮನಾದ ಸರ್ವಾರ್ಥಸಿದ್ಧಿಯ ಆಧಿಪತ್ಯದಲ್ಲಿ ವೃದ್ಧರ ಮುಂದೆ ಬಾಲಕರಿಗೆ ಮೃತಿಯು ಇಂದಿನವರೆಗೂ ಪ್ರಜಾಪರಿವಾರದಲ್ಲಿ ಸಂಭವಿಸಿದುದಿಲ್ಲ ; ಎಂದಿಗೂ ಕ್ಲೇಶವನ್ನರಿಯದ ನಿಮ್ಮ ತಂದೆಗೆ ನೀವು ಸತ್ಪುತ್ರರಾಗಿ ಇದ್ದ ಬಳಿಕ ಆತನಿಗೆ ಪುತ್ರಕ್ಲೇಶ ಬರದಂತೆ ಆತನ ಜೀವಾವಧಿ ಆದರಿಸಿದರೆ, 'ಸರ್ವಾರ್ಥಸಿದ್ಧಿಯು ಸತ್ಸಂತಾನವುಳ್ಳವನು' ಎಂದು ಬಂದ ಯಶಸ್ಸು ನಿಮ್ಮದಲ್ಲವೇ ? ನಿಮ್ಮ ಯಶಸ್ಸನ್ನೇ ಅಪೇಕ್ಷಿಸುತ್ತ ಭೃತ್ಯಭಾವದಲ್ಲಿ ಇರುವ ನನಗೆ ತೋರಿದ ರೀತಿಗೆ ವಿಜ್ಞಾಪಿಸಿದೆನು. ನಿಮ್ಮ ಚಿತ್ತ ಬಂದಂತೆ ಮಾಡಬಹುದು'' ಎನ್ನಲು,

ಆ ಮಾತಿಗೆ ವಿನಂದನು ಪುನಃ ಇಂತೆಂದನು : "ಅಯ್ಯಾ ಅಮಾತ್ಯನೆ, ಮೌರ್ಯನಿಗ್ರಹವು ನಿನಗೆ ಸಮ್ಮತವಿಲ್ಲದಿದ್ದರೆ, ನಿನ್ನ ಮನಸಿನಲ್ಲಿಯೆ ಇಟ್ಟರೆ, ಇದೆ ಮಹೋಪಕಾರವಂ ಮಾಡಿದಂತಾಗುತ್ತಲಿದೆ" ಎಂದು ಹೇಳಿ, ತನ್ನ ಭ್ರಾತುಗಳಂ ಕುರಿತು, "ಅಯ್ಯ ಅಣ್ಣಾಜಿಗಳಿರಾ, ಈ ಯೋಚನೆ ಈ ಅಮಾತ್ಯನಲ್ಲಿ ಮಾಡತಕ್ಕುದಲ್ಲ. ನಮ್ಮ ಯೋಚನೆ ನಮ್ಮಲ್ಲೆ ಇರಬೇಕಲ್ಲದೆ ವೃದ್ಧರಿಗೆ ಹೇಳಿದರೆ ಸಮ್ಮತಿಸರು'' ಎಂದು ಹೇಳಿ, ತಮ್ಮ ತಮ್ಮ ಅರಮನೆಗೆ ಎಲ್ಲರೂ ತೆರಳುತ್ತಿದ್ದರು.

ಆ ಬಳಿಕ ರಾಕ್ಷಸನು ತನ್ನ ಮನಸಿನಲ್ಲಿ ಈ ನಂದರು ನಿರಪರಾಧಿಗಳಾದ ಮೌರ್ಯಪುತ್ರರನ್ನು ಅಕಾರಣವಾಗಿ ಸ್ವಲ್ಪ ದಿವಸದಲ್ಲೆ ಸಂಹರಿಸುವರಾಗಿ ಇದಾರೆ. ಈ ಪುರದಲ್ಲಿ ನಾನು ಇದ್ದರೆ, ನಂದರಿಗೆ ಅನುಕೂಲನಾಗಿ ಇರುವದರಿಂದ ಈ ಅಪವಾದಕ್ಕೆ ನಾನು ಭಾಗಕರ್ತನಾಗುವೆನು. ಆದ್ದರಿಂದ ವ್ಯಾಜಾಂತರವನವಲಂಬಿಸಿ ಆ ಸಮಯದಲ್ಲಿ ಈ ಪುರವಂ ಬಿಟ್ಟು ಎಲ್ಲಿಯಾದರೂ ಇರಬೇಕೆಂದು ನಿಶ್ಚೈಸಿ, ತನ್ನ ಗೃಹಕ್ಕೆ ತೆರಳುತ್ತಿದ್ದನು.

ಆ ಮರುದಿವಸ ನಂದರು ತಮ್ಮೊಳು ತಾವು ಆಲೋಚಿಸಿ, ದಾರುವರ್ಮನೆಂಬ ಶಿಲ್ಪಿಯಂ ಕರೆಕಳುಹಿಸಿ, "ಎಲೈ, ಈ ಪಟ್ಟಣದ ಹೊರಗೆ ಉದ್ಯಾನದಲ್ಲಿ ವಿಸ್ತಾರವಾಗಿ ರಾಜಾರ್ಹವಾದ ಗೃಹವನ್ನೂ ಅದರ ಕೆಳಗೆ ನೆಲಮಾಳಿಗೆಯನ್ನೂ ವಿಸ್ತಾರವಾಗಿ ಮಾಡಿ. ಆ ಗೃಹಪುರೋಭಾಗದಲ್ಲಿ ದಿವ್ಯಸರೋವರವಂ, ಅದರ ಸುತ್ತಲೂ ಪುಷ್ಪಫಲಭರಿತವಾದ ವೃಕ್ಷಂಗಳನ್ನುಂಟುಮಾಡಿ ಕಾದಿರು[ವದೆಂ"ದು] ನೇಮಿಸಿ ಕಳುಹಿಸಲು, ಆ ಶಿಲ್ಪಿಯೂ ಅದೇ ಮೇರೆಗೆ ಪುರದ ಬಹಿರುದ್ಯಾನದಲ್ಲಿ ಗೃಹ ಸರೋವರಂಗಳಂ ರಚಿಸಿ ಕಾದುಕೊಂಡಿರಲು,

ಆಗ ವಿನಂದವ ಸಮೀಪಕ್ಕೆ ರಾಜಪುರಾಣಿಕನು ಬಂದು ಕೈಮುಗಿದಿಂತೆಂದನು : "ಅಯ್ಯಾ ರಾಜಪುತ್ರನೆ, ಯಜಮಾನರಾದ ಮಹಾರಾಜಸನ್ನಿಧಿಯಲ್ಲಿ ಮಹಾಭಾರತಪುರಾಣವು ಇಂದಿಗೆ ಸಮಾಪ್ತವಾಗುತ್ತಲಿದೆ. ಮಂಗಳಾಚರಣಸಮಯದರುಶನಕ್ಕೆ ದಯಮಾಡ

ಬೇಕು" ಎನಲು, ಆಗ ವಿನಂದನು ತನ್ನ ಮನಸ್ಸಿನಲ್ಲಿ "ನಮ್ಮ ತಂದೆಯು ಈ ಪುರದಲ್ಲಿಯೆ ಇದ್ದರೆ ಮೌರ್ಯಪುತ್ರನಿಗ್ರಹವಂ ಮಾಡಕೂಡದು. ಈ ತಂದೆಗೆ ಈ ಪುರದಿಂ ಹೊರಟು ಹೋಗುವಂತೆ ಪ್ರಯಾಣವಂ ಮಾಡಿಸಿ, ಆ ಸಮಯದಲ್ಲಿ ಅವರಂ ನಿಗ್ರಹಿಸಬೇಕೆಂ"ದು ನಿಶ್ಚೈಸಿ, ಪುರಾಣಿಕನಂ ಕರೆದು,

"ಅಯ್ಯ ಪುರಾಣಿಕನೆ, ಮಂಗಳಾಚರಣ ದರುಶನಕ್ಕೆ ಬರುತಲಿದ್ದೇವೆ. ನೀ ಬೇಡಿದುದಂ ಕೊಡುತ್ತಲಿದ್ದೇವೆ. ಅದಂತಿರಲಿ. ನಾಳೆ ಮೊದಲುಗೊಂಡು ಮಾತೃಪಿತೃಗಳ ಸನ್ನಿಧಿಯಲ್ಲಿ ಪ್ರಯಾಗ ಮಾಹಾತ್ಮ್ಯಶ್ರವಣವನ್ನು ಚೆನ್ನಾಗಿ ಮಾಡಿಸುವನಾಗು. ಅರ್ಧೋದಯ ಪುಣ್ಯ ಕಾಲ ಪ್ರಾಪ್ತವಾಗುವದನ್ನು, ಆ ಪ್ರಯಾಗದಲ್ಲಿ ಮಾಘಸ್ನಾನವು ಮಹಾವಿಶೇಷವೆಂ ಬರ್ಥವಂ ನೀನು ತಿಳಿದು ಇರುವೆಯಷ್ಟೆ. ನಮಗೆ ನೀನು ಮುಖ್ಯಾಶ್ರಿತನು. ಹೋಗಿ ಬಾರೆಂ"ದು ಕಳುಹಿಸಿದನು.

ಅದೇ ರೀತಿಯಲ್ಲಿ ಆ ದಿನ ಮಾಡಿದ ಭಾರತಮಂಗಳಾಚರಣೆಯಿಂದ ಬಹುದ್ರವ್ಯ ದಕ್ಷಿಣಗಳಂ ಪಡೆದು ಸಂತುಷ್ಟನಾದ ಆ ಪೌರಾಣಿಕನು, ವೃದ್ಧರಾಯನ ಸಮೀಪದಲ್ಲಿ ಕಾಶೀಕಾಂಡಪುರಾಣ ಶ್ರವಣವನ್ನು ಮಾಡಿಸುತ್ತಾ, ಪ್ರಯಾಗಮಹಾತ್ಮೆಯನ್ನು ವಿಶೇಷ ವಾಗಿ ಹೇಳುತ್ತಿರಲು, ಅದರಲ್ಲಿ ಮಾಘಮಾಸಸ್ನಾನ ಮಹಾವಿಶೇಷವೆಂಬ ಪುರಾಣವಾಕ್ಯ ವಿಶ್ವಾಸದಿಂದ ಆ ರಾಯನಿಗೆ ಪ್ರಯಾಗಕ್ಕೆ ಹೋಗಬೇಕೆಂದು ಮನಸ್ಸಿಗೆ ರುಚಿಸಲು, ಆಗ ನಂದರು ಮೌರ್ಯಪುತ್ರರಲ್ಲಿ ಇರುವ ಮತ್ಸರವಂ ಪ್ರಕಟಮಾಡದೆ, ಅವರು ಮಾಡುತ್ತ ಲಿರುವ ಆಯುಧವಿದ್ಯಾಕೌಶಲವಂ ನೋಡಿ ಸಂತೋಷಪಟ್ಟವರಂತೆ ವಸ್ತ್ರಭೂಷಣ ವಾಹನಗಳಿಂದ ತಮ್ಮಲ್ಲಿ ಅವರಿಗೆ ವಿಶ್ವಾಸ ಅಧಿಕವಾಗುವಂತೆ ಮಾಡುತ್ತಾ, "ಆಯುಧ ವಿದ್ಯಾಕುಶಲಿಗಳಾಗಿ ಶೂರರಾದ ನೂರು ಮಂದಿ ಪುತ್ರರು ನಮಗಿರುವಲ್ಲಿ ಈ ಲೋಕದಲ್ಲಿ ನಮಗೆ ಸರಿಯಾರು" ಎಂದು ಸ್ವಜನಾಭ್ಯುದಯ ಸಂತೋಷವಂ ನಟಿಸುತ್ತಾ, ಸಮಯವಂ ನಿರೀಕ್ಷಿಸುತ್ತಾ ಇರುತ್ತಿರಲು,

ಮತ್ತೊಂದು ದಿವಸ, ವೃದ್ಧರಾಯನು "ತಾನು ಪತ್ನೀಪರಿವಾರಸಮೇತವಾಗಿ ಮಾಘ ಮಾಸ ಸ್ನಾನಾರ್ಥವಾಗಿ ಪ್ರಯಾಗಕ್ಕೆ ಹೋಗಬೇಕಾಗಿ ಇದೆ, ಬೇಕಾದ ವಸ್ತುಗಳಂ ಜೊತೆಗೊಳಿಸುವದೆಂ"ದು ನಂದರಿಗೆ ಹೇಳಿ ಕಳುಹಿಸಲು, ಆ ಮಾತಿಗೆ ನಂದರು ಸಮ್ಮತಿ ಪಟ್ಟು, ಈ ಅರ್ಥವು ಅಮಾತ್ಯರಾಕ್ಷಸನಿಗೆ ತಿಳುಹಿಸಲು, ಆ ಪುರವಂ ಬಿಟ್ಟು ಸ್ಥಳಾಂತರ ವಾಸವನ್ನೇ ಅಪೇಕ್ಷಿಸುತಲಿರುವ ರಾಕ್ಷಸನು ನಂದರಿಗಿಂತೆಂದನು :

"ಅಯ್ಯ ರಾಜಕುಮಾರಕ[ರು]ಗಳಿರಾ, ಮಾಘಸ್ನಾನಾರ್ಥವಾಗಿ ನಿಮ್ಮ ತಂದೆಗಳು ಪ್ರಯಾಗಕ್ಕೆ ಪತ್ನೀಸಮೇತ ಹೋಗಿ ಬರುವದು ಯುಕ್ತವೇ ಸರಿ. ವೃದ್ಧರಾದ ಮಾತಾ ಪಿತೃಗಳೂ ಅಂತಃಪುರಸ್ತ್ರೀಜನರೂ ಹೋಗಿ ಬರುವಲ್ಲಿ ಅಲ್ಲಿ ಆಗತಕ್ಕ ಪ್ರಯೋಜನಗಳಿಗೆ ನೀವೇ ಸಂಗಡ ಇರಬೇಕು. ಅಲ್ಲದಿದ್ದರೆ ನಾನಾದರೂ ಸಂಗಡದಲ್ಲಿರಬೇಕಲ್ಲದೆ ಮತ್ತೊಬ್ಬ ಅಧಿಕಾರಿಯನ್ನು ಸಂಗಡ ಕಳುಹಿಸುವದಕ್ಕೆ ಪ್ರಶಸ್ತವಲ್ಲ. ನಿಮ್ಮ ಅಪ್ಪಣೆ ಆದರೆ ನಾನೇ ಸಂಗಡ ಹೋಗಿ ಬರುವೆನು" ಎಂಬ ರಾಕ್ಷಸನ ವಚನಮಂ ಕೇಳಿ ಆ ಮಾತಿಗೆ ನಂದರು ಒಡಂಬಟ್ಟು, "ಅಯ್ಯ ಅಮಾತ್ಯನೆ, ಬೊಕ್ಕಸದಿಂದ ಬೇಕಾದ ವಸ್ತುಗಳಂ ತರಿಸಿಕೊಂಡು ವೃದ್ಧರ ಸಂಗಡ ನೀನೇ ಹೋಗಿ ಬಾರೆಂ"ದು ರಾಕ್ಷಸನಂ ಕಳುಹಿಸಲು,

ಆಗ ರಾಕ್ಷಸನು ಬೇಕಾದ ವಸ್ತುಗಳಂ ತೆಗೆದುಕೊಂಡು, ಪತ್ನೀಪರಿವಾರ ಸಮೇತನಾಗಿ ಹೊರಟು ಇರುವ ಸರ್ವಾರ್ಥಸಿದ್ಧಿರಾಯನ ಸಂಗಡ ಪ್ರಯಾಗಕ್ಕೆ ತೆರಳುತ್ತಿರಲು,

ಆಗ ನಂದರು ತಮ್ಮ ತಂದೆಯನ್ನು ಸಾ[ಗ][೧] ಕಳುಹಿಸಿ ಬಂದು, ಇನ್ನು ವಿಳಂಬವಂ ಮಾಡಬಾರದೆಂದು ನಿಶ್ಚೈಸಿ, ಆ ಮರುದಿವಸ ತಮಗೆ ಮೃಗಬೇಟೆಗೆ ಪ್ರಯಾಣವೆಂದು ವರ್ತಮಾನವಂ ಪುಟ್ಟಿಸಿ, ಬೇಟೆಗಾರಜನಗಳಂ ಬಲೆಗಳಂ ಮುಂದೆ ಕಳುಹಿಸಿ, 'ಪುರೋದ್ಯಾನದಲ್ಲಿ ಭೋಜನಪಾಕವಾಗಿ ಇರಲಿ' ಎಂದು ಪಾಚಕರಂ ನೇಮಿಸಿ ಕಳುಹಿಸಿ, ಆ ಬಳಿಕ ಮೌರ್ಯನನ್ನೂ ಅವನ ಪುತ್ರರೆಲ್ಲರನ್ನೂ ಕರೆಕಳುಹಿಸಿ, ಉತ್ತಮಾಶ್ವಗಳಂ ಜೊತೆಗೊಳಿಸಿ ನಿಲ್ಲಿಸಿ, ಮೌರ್ಯಗಿಂತೆಂದರು :

"ಅಯ್ಯ ಅಣ್ಣಾಜಿಗಳಿರಾ, ಈ ದಿವಸ ನಾವೆಲ್ಲರೂ ಮೃಗಬೇಟೆಯಂ ಮಾಡಿ ಬಂದು, ಪುರದ ಹೊರಗಿನ ಉದ್ಯಾನದಲ್ಲಿ ಇಳಿದು, ರಾಜಪುತ್ರರೂ ಮಿತ್ರರೂ ಸಮೇತರಾಗಿ ಭೋಜನವಂ ಮಾಡಿ, ವಿನೋದಗೋಷ್ಠಿಯಲ್ಲಿ ಇದ್ದು, ನಾಳೆ ದಿವಸ ಪಟ್ಟಣಕ್ಕೆ ಬರಬೇಕೆಂದು ಯತ್ನವಂ ಮಾಡಿ ಇದೇವೆ. ಮೃಗಬೇಟೆಯಲ್ಲಿ ಬಹು ಕೌತುಕವುಂಟೆಂದು ಕೇಳಿ ಉಂಟು. ಇದಕ್ಕೆ ನೀವೂ ಸಮ್ಮತಿಸಬೇಕೆಂ"ದು, "ವೃದ್ಧರಾಯರು ಇಲ್ಲಿಗೆ ಬಂದ ಬಳಿಕ ಇದಕ್ಕೆ ಸಮ್ಮತಿಸಿಯಾರೋ ಇಲ್ಲವೋ ಈಗಲೆ ಹೊರಡಬೇಕೆಂ"ದು ಹೇಳುತಲಿರುವ ನಂದರ ಹೃದಯಕಪಟವನ್ನರಿಯದೆ ಇರುವ ಮೌರ್ಯನು ಆ ಮಾತಿಗೆ ಒಡಂಬಟ್ಟು, ಪುತ್ರರು[ಸಹಿತ] ವಾಹನಂಗಳನ್ನೇರಿ, ನಂದರ ಸಂಗಡ ಹೋಗಿ, ಎಲ್ಲರೂ ಮೃಗಬೇಟೆಯಂ ಬಹುವಾಗಿ ಮಾಡಿ, ಶ್ರಾಂತರಾಗಿ ಅಲ್ಲಿಂ ಪುರೋದ್ಯಾನಕ್ಕೆ ಬಂದು, ಅತಿ ಶೀ[ತ]ಳವಾಗಿ ರಮಣೀಯವಾದ ವೃಕ್ಷಛಾಯೆಗಳಲ್ಲಿ ವಿಶ್ರಮಿಸಿಕೊಂಡು, ಆ ಬಳಿಕ ಜಲಕ್ರೀಡಾವಿನೋದ ವನ್ನಾಡಿ, ಗಂಧಮಾಲಿಕೆಗಳಿಂದೆಲ್ಲರೂ ಅಲಂಕೃತರಾಗಿ, ಭೋಜನಶಾಲೆಗೆ ಹೋಗಲು,

ಆಗ ನಂದರು ಬಂಧುಮಿತ್ರ ಜನರುಗಳನ್ನು ಮೊದಲೇ ಮೇಲುಭಾಗದಲ್ಲಿ ಮಾಡಿ ಇದ್ದ ಭೋಜನಪಂಕ್ತಿಗಳಲ್ಲಿ ಕುಳ್ಳಿರಿಸಿ, 'ನಮ್ಮ ಬಂಧುಮಿತ್ರರು ಕುಳ್ಳಿರುವದಕ್ಕೆ ಈ ಸ್ಥಾನವೇ ಯೋಗ್ಯವು, ನಮ್ಮ ಮನೆಜನಕ್ಕೆಲ್ಲಾ ಕೆಳಗಿನ ಅಂತರಗೃಹದಲ್ಲಿ ಎಡೆಗಳಂ ಮಾಡಲೆಂ'ದು ಎಡೆಗಳಂ ಮಾಡಿಸಿ, 'ಎಲ್ಲರೂ ಕುಳ್ಳಿರೆಂ'ದು ಪುತ್ರರು ಸಮೇತನಾದ ಮೌರ್ಯನಂ ಕುಳ್ಳಿರಿಸಿ, ತಾವೂ ಕುಳಿತುಕೊಳ್ಳುವಂತೆ ಮೇಲಕ್ಕೆ ಹೋಗುತ್ತಾ ಬರುತ್ತ, ಪದಾರ್ಥಗಳಂ ಬಡಿಸಿಸಿ, 'ಭೋಜನವಾಗಲೆಂ'ದು ಹೇಳಿ, ತಾವು ಮೇಲುಪಂಕ್ತಿ ವಿಚಾರಣೆಯಂ ಮಾಡುವರಂತೆ ನಂದರು ಕೆಳಗೆ ಪಂಕ್ತಿಯಲ್ಲಿ ಕುಳ್ಳಿರದೆ ಹೊರಗೆ ನಿಂತು, ಶೀಘ್ರವಾಗಿ ಮೌರ್ಯರು ಕುಳಿತಿದ್ದ ನೆಲಮಾಳಿಗೆಯ ಬಾಗಿಲಂ ಮುಚ್ಚಿ, ತಮ್ಮ ಕೈಮೊಹರವಂ ಮಾಡಿ, ಜನಾಪವಾದಕ್ಕೆ ಭೀತರಾಗದೆ, ಪರಲೋಕದ ಭೀತಿಯಂ ಗಣನೆಗೆ ತಾರದೆ, ಖಡ್ಗಪಾಣಿಗಳಾದ ದೂತರಂ ಆ ಬಾಗಿಲಲ್ಲಿ ಕಾವಲಿಟ್ಟು, ಆ ದೂತರಂ ಕರೆದು,

"ಎಲೈ ದೂತರುಗಳಿರಾ, ನೀವು ಅನ್ನೋದಕಗಳಂ ತಂದು ಕೊ[ಡು]ವದರಿಂದ ಮೌರ್ಯರು ಕಾರಾಗೃಹದಲ್ಲಿ ಇನ್ನೂ ಜೀವಂತರಾಗಿ ಇದಾರೆ ಎಂಬಂತೆ ಜನಗಳಿಗೆ

---

೧. ಗಿ (ಕ)

ತೋರ್ಪಡಿಸುತ್ತಾ, ಇವರೆಲ್ಲರೂ ಒಳಗೆ ಮೃತವಾದ ವರ್ತಮಾನವಂ ರಹಸ್ಯದಲ್ಲಿ ನಮಗೆ ತಿಳುಹಿಸತಕ್ಕದ್ದು" ಎಂದು ನೇಮಿಸಿ, ಇಂದಿಗೆ ಶತ್ರುನಾಶನವಾಯಿತೆಂದು ನಂದರು ತಮ್ಮೊಳು ಮಾತನಾಡಿಕೊಳ್ಳುತ್ತಾ, ತಮ್ಮ ವಾಹನಂಗಳನ್ನೇರಿ ಪುರಕ್ಕೆ ಬರುತ್ತಿದ್ದರು.

ಆ ಬಳಿಕ ಕಾರಾಗೃಹವಂ ಕಾದಿರುವ ದೂತರು ಮೌರ್ಯಪುತ್ರರಿಗೆ ಅನ್ನೋದಕವಂ ಕೊಟ್ಟೂ ಕೊಡದಂತೆ ಮಾಡುತ್ತಿರಲು, ಮೌರ್ಯಪುತ್ರರು ಹಸಿವು ಬಾಯಾರಿಕೆಗಳಿಂದ ಕೃಶರಾಗಿ ದಿನೇ ದಿನೇ ಹತ್ತು ಎಂಟು ಜನದ ಮೇರೆಗೆ ಮೃತರಾಗಲು, ಮತ್ತೊಂದು ಗವಾಕ್ಷದಿಂದ ದೂತರು ನೋಡಿ 'ಮೌರ್ಯರೆಲ್ಲರೂ ಮೃತರಾದರೆಂ'ದು ತಮ್ಮೊಳಗೆ ತಾವು ಮಾತನಾಡಿಕೊಳುತ್ತಿರಲು, ಒಳಗೆ ಜೀವಂತನಾಗಿ ಇರುವ ಚಂದ್ರಗುಪ್ತನು ಆ ದೂತರು ಆಡಿಕೊಳ್ಳುವ ಮಾತಂ ಕೇಳಿ, "ಎಲೈ ಭಟರುಗಳಿರಾ, ಈ ಸೆರೆ ಸಿಕ್ಕಿದ ಜನದಲ್ಲಿ ತಾನು ಒಬ್ಬ ಹೊರತು ಎಲ್ಲರೂ ಮೃತರಾದರು. ನನಗೂ ನಾಲ್ಕು ಮೂರು ದಿವಸದಲ್ಲಿ ವಿಪರ್ಯಾಸ ಬರುವಂತೆ ತೋರುತಲಿದೆ. ಇನ್ನು ಜೀವಿಸಲಾರೆನು. ನನ್ನ ಒಬ್ಬನನ್ನಾದರೂ ಈ ಶ್ರವಗಂಧಭೂಯಿಷ್ಠವಾದ ಈ ಸ್ಥಳದಿಂ ತೆಗೆದು ಮತ್ತೊಂದು ಕಾರಾಗೃಹದಲ್ಲಿಟ್ಟರೆ ನೆಮ್ಮದಿಯಿಂದ ಪ್ರಾಣಗಳಂ ಬಿಡುವೆನು. ನಿಮಗೆ ಕರುಣವಿದ್ದರೆ ಈ ಅರ್ಥವಂ ನಂದರ ಸನ್ನಿಧಿಯಲ್ಲಿ ಬಿನ್ನೈಸಿರಿ" ಎಂದು ಹೇಳಲು, ಆ ವಾಕ್ಯವಂ ಕೇಳಿ ದೂತರು ಬಂದು ರಹಸ್ಯದಲ್ಲಿ ನಂದರಿಗೆ ಕೈಮುಗಿದಿಂತೆಂದರು :

"ಜೀಯ, ಉದ್ಯಾನದ ಕಾರಾಗೃಹದಲ್ಲಿ ಕೂಡಿ ಇದ್ದ ಮೌರ್ಯನೂ ಆತನ ಪುತ್ರರಲ್ಲಿ ಚಂದ್ರಗುಪ್ತನೆಂಬವ ಒಬ್ಬ ಹೊರತು ಉಳಿದವರೆಲ್ಲರೂ ಮೃತರಾದರು. ಆತನೂ ಮೂರು ನಾಲ್ಕು ದಿವಸದಲ್ಲಿ ಮೃತನಾಗುವನಾಗಿ ಇದಾನೆ. 'ಬಹುಶ್ರವ ಗಂಧಭೂಯಿಷ್ಠವಾದ ಆ ಸ್ಥಳದಿಂ ತನ್ನಂ ತೆಗೆದು ಮತ್ತೊಂದು ಕಾರಾಗೃಹದಲ್ಲಾದರೂ ಇಟ್ಟರೆ ಸ್ವಸ್ಥತೆಯಿಂದ ಪ್ರಾಣವಂ ಬಿಟ್ಟೇನೆಂದು ಬಹುವಾಗಿ ಪಾದಕ್ಕೆ ಅಡ್ಡಬಿದ್ದು ಬಿನ್ನೈಸಿದೆನೆಂದು ಅರಿಕೆಮಾಡಿ' ಎಂದು ಹೇಳಿಕೊಂಡನು. ಇದಕ್ಕೆ ಏನು ಅಪ್ಪಣೆ"[1]ಯೆನಲು, ಆ ಮಾತಂ ಕೇಳಿ, ನಂದರು ಮನಸ್ಸಿನಲ್ಲಿ ಬಹು ಸಂತೋಷಂಬಟ್ಟು, "ಇನ್ನು ಮೇಲೆ ಶವಗಂಧ ಈಚೆಗೆ ಬಂದರೆ ಜನರ ಹಾಹಾಕಾರ ಹೆಚ್ಚುವದು. ಚಂದ್ರಗುಪ್ತನೆಂಬವ ಒಬ್ಬನು ಜೀವಂತನಾಗಿ ಇದಾನಂತೆ.[1] ಅವನ ಸಮೇತನಾಗಿ ಆ ಕಾರಾಗೃಹಕ್ಕೆ ಅಗ್ನಿಪ್ರವೇಶವಂ ಮಾಡಿಸುವದು ಯುಕ್ತವಲ್ಲ" ಎಂದು ನಿಶ್ಚೈಸಿ, ಆ ದೂತರಂ ನೋಡಿ, "ಎಲೈ, ಆ ಚಂದ್ರಗುಪ್ತನೂ ನಾಲ್ಕು ಮೂರು ದಿವಸದಲ್ಲಿ ಮೃತನಾಗುವನೆಂದು ತೋರಿದರೆ, ಅವನಂ ಆ ಕಾರಾಗೃಹದಿಂದೀಚೆಗೆ ತೆಗೆದು ಆ ಗೃಹಕ್ಕೆ ಅಗ್ನಿಪ್ರವೇಶವಂ ಮಾಡಿಸಿ, ಆತನಂ ಮತ್ತೊಂದು ಕಾರಾಗೃಹದಲ್ಲಿ ಇರಿಸಿ, ಅನ್ನೋದಕವಂ ಕೊಡುತ್ತ, ಆತನೂ ಮೃತವಾದರೆ ಆ ವರ್ತಮಾನವಂ ತಿಳುಹಿಸತಕ್ಕುದು" ಎಂದು ನೇಮಿಸಿ ಕಳುಹಿಸಲು, ಆ ದೂತರು ಚಂದ್ರಗುಪ್ತನನ್ನು ಮತ್ತೊಂದು ಕಾರಾಗೃಹದಲ್ಲಿಟ್ಟು, ಅನ್ನೋದಕವಂ ಕೊಟ್ಟು, ಮೊದಲಿನ ಕಾರಾಗೃಹಕ್ಕೆ ಅಗ್ನಿಪ್ರವೇಶವಂ ಮಾಡಿಸಲು, ಆ ಬಳಿಕ ನಂದರು [2]ತಮ್ಮ ಮನಸ್ಸಿನಲ್ಲಿ[2] ತಾವು ಆಲೋಚಿಸುತ್ತಿದ್ದರು :

---

೧. ಯೆನಲು (ಕ), ೨. ತಮ್ಮೊಳು (ಕ)

"ಪುತ್ರಸಮೇತನಾದ ಮೌರ್ಯನು ಮೃತನಾದ ವರ್ತಮಾನ[ವಂ] ನಮ್ಮ ತಂದೆಯು ಮತ್ತೊಬ್ಬರ ಮುಖದಿಂದ ಯಥಾರ್ಥವಾಗಿ ತಿಳಿದರೆ ನಮ್ಮನ್ನು ಮಹಾದ್ರೋಹಿಗಳೆಂದು ಮುಖಾವಲೋಕನಂ ಮಾಡದೆ ಪುತ್ರಶೋಕದಿಂದ ಇದ್ದ ಸ್ಥಳದಲ್ಲಿಯೇ ಮೃತವಾದಾನು. ಅದರಿಂದ ಮೌರ್ಯಪುತ್ರರು ತಮ್ಮಿಂದ ತಾವೆ ವಿಪತ್ತಂ ತಂದುಕೊಂಡರು ಎಂದು ಮೊದಲೇ ಪತ್ರಿಕಾಂತರದಿಂದ ತಿಳುಹಿಸಬೇಕೆಂ"ದು ನಿಶ್ಚೈಸಿ, ಪ್ರಕೃತೋಚಿತವಾಗಿ ತಂದೆಗೆ ಕಾಗದವಂ ಬರೆಸಿ, ಆಪ್ತರಾದ ದೂತರ ಕೈಯಲ್ಲಿ ಕೊಟ್ಟು ಕಳುಹಿಸಲು,

ಅಷ್ಟರಲ್ಲಿಯೇ ಪ್ರಯಾಗದಲ್ಲಿ ವಾಸವಂ ಮಾಡುತ್ತಿರುವ ಸರ್ವಾರ್ಥಸಿದ್ಧಿರಾಯನ ಪ್ರಿಯಪತ್ನಿಯಾದ ಮುರಾದೇವಿ ಮಾಡುತ್ತಿರುವ ಪೂಜಾಭಕ್ತಿಗಳಿಗೆ ಸಂಪ್ರೀತಳಾದ ಭಾಗೀರಥಿದೇವಿಯು, ನಿತ್ಯದಲ್ಲಿಯೂ ಆ ಮುರಾದೇವಿಯ ಸ್ವಪ್ನದಲ್ಲಿ ಸುವಾಸಿನೀರೂಪದಿಂದ ಬಂದು, 'ನನ್ನ ಮನೆಗೆ ಬಾರೆಂ'ದು ಮುರಾದೇವಿಯಂ ಕರೆಯುತ್ತ ಇರಲು, ಆ ಅರ್ಥವಂ ಪತಿಗೆ ತಿಳುಹಿಸಿ, ಮತ್ತೊಂದು ದಿನ ತ್ರಿವೇಣಿಯಲ್ಲಿ ಸ್ನಾನವಂ ಮಾಡಿ, ಭಾಗೀರಥಿಯಂ ಪೂಜಿಸಿ, 'ನನ್ನಂ ಕೃತಾರ್ಥಳಂ ಮಾಡೆಂ'ದು ಪ್ರಾರ್ಥಿಸಲು, ಅವಳ ಮನೋನಿಶ್ಚಯಕ್ಕೆ ಪ್ರಸನ್ನಳಾದ ಗಂಗಾದೇವಿಯು ಎಲ್ಲರೂ ನೋಡುವಂತೆ ತನ್ನ ದಿವ್ಯಹಸ್ತದಿಂದ ಆ ಮುರಾದೇವಿಯ ಹಸ್ತವಂ ಪಿಡಿದು, ಕರೆದುಕೊಂಡು, ಆ ನದಿಯಲ್ಲೇ ಅದೃಶ್ಯವಾಗಲು, ಆ ಆಶ್ಚರ್ಯವಂ ನೋಡಿ ಅಲ್ಲಿದ್ದ ಜನರು ಹೋಗಿ ಈ ಅರ್ಥವಂ ಸರ್ವಾರ್ಥಸಿದ್ಧಿ ರಾಯನಿಗೆ ತಿಳುಹಿಸಲು, ಆ ವಾಕ್ಯವಂ ಕೇಳಿ "ಮುರಾದೇವಿಯು ಭಾಗೀರಥಿಯಲ್ಲಿ ತನುವಂ ಒಪ್ಪಿಸಿ ಧನ್ಯಳಾದಳು, ಅವಳ ಜನ್ಮ ಸಫಲವಾಯಿತೆಂ"ದು ಹೇಳುತ್ತ, ಪತ್ನೀ ವಿಯೋಗಕ್ಕೆ ಮಾತ್ರ ದುಃಖಪಡುತ್ತ, ರಾಕ್ಷಸನಂ ಕುರಿತು,

"ಅಯ್ಯ ಅಮಾತ್ಯನೆ, ಮುರಾದೇವಿಯ ವರ್ತಮಾನವಂ ನಮ್ಮ ಪುತ್ರನಾದ ಮೌರ್ಯನಿಗೆ ನೀನೇ ಬರೆಸಿ ಕಳುಹಿಸುವನಾಗು. ಆತನ ದುಃಖಸಮಾಧಾನವಂ ಮಾಡುವಂತೆ ಚಿರಂಜೀವಿ ನಂದರಿಗೆ ಬರೆಸಿ ಕಳುಹಿಸು. ನಾವೂ ಎಂಟು ದಿವಸದಲ್ಲಿ ಬರುತಲಿದೇವೆ ಯೆಂದು ಬರೆಯತಕ್ಕದ್ದು" ಎನಲು, ಆಗ ರಾಕ್ಷಸನೂ ಅದೇ ರೀತಿ ಪ್ರಯಾಗದಲ್ಲಿ ನಡೆದ ವರ್ತಮಾನವಂ ಬರೆದು ಕಳುಹಿಸಲು, ಶ್ರೀ ಮುರಾದೇವಿಗೆ ಪರಲೋಕಾರ್ಥವಾಗಿ ಬಹು ಬ್ರಾಹ್ಮಣರಿಗೆ ಸಂತರ್ಪಣೆಯಂ ಮಾಡುತ್ತಿರಲು,

ಅಷ್ಟರಲ್ಲಿಯೇ ನಂದರು ಬರೆದು ಕಳುಹಿಸಿದ ಕಾಗದವಂ ತಂದ ದೂತರು ವೃದ್ಧ ರಾಯನ ಮುಂದೆ ಇರಿಸಿ ಕೈಮುಗಿಯಲು, ಸಮೀಪದಲ್ಲಿದ್ದ ರಾಕ್ಷಸನು ಆ ಕಾಗದವಂ ಬಿಚ್ಚಿ ಓದಿಕೊಳ್ಳುತ್ತಿರಲು, ಅದರಲ್ಲಿ ಇದ್ದ ಒಕ್ಕಣೆಯೇನೆಂದರೆ :

"ಶ್ರೀಮತು ಅಪ್ಪಾಜಿಯವರ ಪಾದಪದ್ಮಂಗಳಿಗೆ ಬಾಲಕ ವಿನಂದನು ಮಾಡುವ ಬಿನ್ನಹ. ನೀವು ಇಲ್ಲಿಂದ ಚಿತ್ತೈಸಿದ ಬಳಿಕ ಇಲ್ಲಿ ನಡೆದ ಅನರ್ಥವಂ ಹೇಳುವದಕ್ಕೆ ಶಕ್ಯವಲ್ಲ. ಏನೆಂದಡೆ, ಒಂದು ದಿವಸ ಮೌರ್ಯಪುತ್ರರು ಮೃಗಬೇಟೆಯಂ ಮಾಡಬೇಕೆಂದು ಹೇಳಿ ನಮ್ಮನ್ನು ನಿರ್ಬಂಧಬಡಿಸಲು, ನಾವೆಲ್ಲರೂ ಹೋಗಿ ಮೃಗಬೇಟೆಯಂ ಮಾಡಿ, ಪುರದ ಉದ್ಯಾನದಲ್ಲಿ ನಿಂತು, ಭೋಜನಪಾಕವಂ [೧]ಮಾಡಿಸಿ, ಪುಷ್ಪವಾಟಿಯಂ[೧]

---

೧. ಮಾಡಿಸಿ (ಕ)

ನೋಡುತ್ತಿರುವ ಸಮಯದಲ್ಲಿ, ಕ್ಷುತ್ತಿಗೆ ಸಹಿಸಲಾರದೆ ಮೌರ್ಯಪುತ್ರರು ನಾವು ಪಂಕ್ತಿಗೆ ಬರುವದಕ್ಕೆ ಮುಂಚಿತವಾಗಿಯೆ ಅಲ್ಲಿ ಮಾಡಿದ ಭಕ್ಷ್ಯಗಳಂ ಭಕ್ಷಿಸಿ, ತೀವ್ರವಾದ ಕಾಪಿಶಾಯನವೆಂಬ ಮದ್ಯವಂ ತರಿಸಿ, ಅಮಿತವಾಗಿ ಪಾನವಂ ಮಾಡಿ, ದೇಹಸ್ಮೃತಿ ತಪ್ಪಿ, ಪಾಕಶೇಷವಂ ಎಂಜಲು ಮಾಡಿ, ಪಾಚಕರಂ ಪ್ರಹರಿಸಿ, ಒಬ್ಬರೊಬ್ಬರಂ ಪ್ರಹರಿಸುತ, ಹಣಗಾಡುತ, ಅಲ್ಲಿ ಜೀರ್ಣವಾದ ಸ್ತಂಭಗಳಿಗೆ ಬದಲುಸ್ತಂಭಗಳಂ ನಿಲ್ಲಿಸುವದಕ್ಕೆ ನಿಲ್ಲಿಸಿ ಇದ್ದ ಸನ್ನೆಮರಗಳಿಗೆ ಬಂಧಿಸಿ ಇದ್ದ ಹಗ್ಗಗಳಂ ಹರಿದು, ಆ ಮರಗಳಿಗೆ ಕೈ ನೀಡಲು, ಅವು ಸಡಲಿ ಬೀಳುವಷ್ಟರಲ್ಲಿ, ಪುತ್ರರ ಕೋಲಾಹಲ ಇದೇನೆಂದು ಮೌರ್ಯನು ನೋಡುವದಕ್ಕೆ ಒಳಪೊಗಲು, ಆಗ ಭಾರವಾಸಿಯಾದ ಮೇಲಿನಂತಸ್ತು ಮುರಿದು ಮೇಲೆ ಬಿದ್ದು, ಮೌರ್ಯನೂ ಅವನ ಪುತ್ರರಲ್ಲಿ ಚಂದ್ರಗುಪ್ತನೆಂಬನೊಬ್ಬನುಳಿದು ಎಲ್ಲರೂ ಮೃತವಾದರು. ಅವನಿಗೆ ಬಹುಘಾತ ತಗಲಿರುವದರಿಂದ ಚಂದ್ರಗುಪ್ತನು ಸಹ ಮುಂದೆ ಜೀವಿಸುವದು ಸಂಶಯವೆಂದು ತೋರುತ್ತೆ. ಎಂದಿಗೂ ಅಗಲದೆ ಇರುವ ಮೌರ್ಯ ಪುತ್ರರಂ ವಿಂಗಡಿಸಿ ಸಂಹರಿಸಿ, ನಮ್ಮನ್ನು ಮಾತ್ರ ಉಳಿಸಿರುವ ದೈವಸಂಕಲ್ಪಕ್ಕೆ ಎಷ್ಟೆಂದು ಆಶ್ಚರ್ಯ ಪಡಬೇಕು. ನೀವು ಇಲ್ಲಿ ಇಲ್ಲದುದರಿಂದ ಎಷ್ಟು ಮಂದಿ ಧೈರ್ಯವಂ ಹೇಳುತಿದ್ದರೂ ನಮ್ಮ ಮನಸ್ಸಿನಲ್ಲಿ ಹೊಕ್ಕ ಭಯ ತೊಲಗುವದಿಲ್ಲ. ಅಪ್ಪಣೆ ಆದರೆ ಅಲ್ಲಿಗಾದರೂ ನಾವು ಬರುತಲಿದೇವೆ. ಈ ವರ್ತಮಾನವಂ ಏನೆಂದು ಬರೆಯತಕ್ಕದೆಂದು ಸಂಶಯಾವಿಷ್ಟರಾಗಿ ಇರುತ್ತ, ಸನ್ನಿಧಿಗೆ ಅಪರಾಧಿಗಳಾದೇವೆಂಬ ಶಂಕೆಯಿಂದ ಬರೆದು ಬಿನ್ನೈಸಿದೆವು."

ಹೀಗೆಂದು ಬರೆದಿರುವ ಒಕ್ಕಣೆಯಂ ರಾಕ್ಷಸನು ನೋಡಿಕೊಂಡು, ತನ್ನ ಮನದಲ್ಲಿ ಆಶ್ಚರ್ಯಪಟ್ಟು, ಆಲೋಚಿಸುತ್ತಿದ್ದನು :

"'[೧]ಅಕಟಕಟಾ ![೧] ನಂದರು ಮೌರ್ಯರಲ್ಲಿ ನಿಷ್ಕಾರಣಮತ್ಸರವಂ ಮಾಡಿ ಇದ್ದಂತೆಯೇ, ರಾಯನು ಅಲ್ಲಿ ಇಲ್ಲದ ಸಮಯದಲ್ಲಿ ಅವರೆಲ್ಲರಂ ಕಪಟದಿಂದ ಸಂಹರಿಸಿ, ಲೋಕಾಪವಾದಕ್ಕೆ ಪಾತ್ರರಾದರು. ಇನ್ನು ಇವರಿಗೆ ದೈವಬಲ ಒದಗದು. ಪ್ರಜೆಗಳಿಗೆ ಇವರಲ್ಲಿ ಅನುರಾಗ ತಪ್ಪೀತು. ಮಾಡುವದೇನು ? ಇದರ ಹಾನಿವೃದ್ಧಿ ಏನು ಇದ್ದರೂ ಇವರನ್ನೇ ಹೊಂದುವದು. ಇವರಲ್ಲಿ ಉಂಟಾಗಿ ಇರುವ ಈ ದೋಷದಲ್ಲೇ ದೃಷ್ಟಿಯಿಟ್ಟು ನಾನು ಉಪೇಕ್ಷಿಸಿದರೆ, ಬಹುಕಾಲದಿಂದ ನನ್ನನ್ನು ಸಂರಕ್ಷಿಸಿದ ಈ ವೃದ್ಧರಾಯಂಗೆ ಈ ವ್ಯಸನಕ್ಕಿಂತಲೂ ಅಧಿಕದುಃಖ[೨]ವನ್ನು ನಾನೇ[೨] ಉಂಟುಮಾಡಿದ [illegible]ಗೆ ಆದೀತು. ಈ ರಾಯನು ನನ್ನ ಭರವಸದಿಂದಲೇ ತನ್ನ ಪುತ್ರರು ಅಧಿಕಯಶೋವಂತರಾದಾರೆಂದು ತಿಳಿದಿರುವನು. ಆದರಿಂ ನಾನು ಇದರ ಮೂಲವಂ ಅರಿಯದವನಂತೆ ಈ ರಾಯನಂ ಸಮಾಧಾನಗೊಳಿಸಿ, ಪುರಕ್ಕೆ ಕರೆದುಕೊಂಡು ಹೋಗಬೇಕೆಂ"ದು ನಿಶ್ಚೈಸಿ, ಖಿನ್ನನಾಗಿ, ಕಾಗದವಂ ಓದಿ ಹೇಳುವದಕ್ಕೆ ಗದ್ಗ[ದ]ಕಂಠವುಳ್ಳವನಾಗಿ ಇರುವ ರಾಕ್ಷಸನಂ ಕುರಿತು,

"ಏನ್ಯೆ ಅಮಾತ್ಯನೆ, ಕಾಗದವಂ ನೋಡಿ ಬಹು ಚಿಂತಿಸುತ ಖಿನ್ನ ಹೃದಯನಾಗಿ ಇರುವೆ. ನಮ್ಮ ಪಟ್ಟಣದಲ್ಲಿ ಅನಿಷ್ಟವೇನಾದರೂ ಉಂಟಾಯಿತೇ ? ಅಥವಾ ನಮ್ಮ ಪುತ್ರರು

---

೧. ಹಾ ಕಟಕಟಾ (ಕ), ೨. ವನ್ನು (ಕ)

ಅನ್ಯೋನ್ಯಕಲಹದಿಂದ ವಿಪತ್ತನ್ನೇನಾದರೂ ತಂದುಕೊಂಡರೋ? ಇದ[ರ]ರ್ಥವ ನ್ನರುಹವವನಾಗು" ಎನ್ನಲು, ಆ ಮಾತಿಗೆ, "ಸ್ವಾಮಿ, ದೈವವಿಲಾಸಕ್ಕಿಂತಲೂ ಇದರರ್ಥ ವೆಂದ[೧]ರೇನುಂಟು?[೧] ಪುತ್ರಸಮೇತನಾದ ಮೌರ್ಯನಿಗೆ ವಿಪತ್ತು ಸಂಭವಿಸಿತಂತೆ" ಎಂದು ಹೇಳಿ, ಆ ಕಾಗದದ ಒಕ್ಕಣೆಯಂ ಓದಿ ತಿಳುಹಿಸಲು, ಅದಂ ಕೇಳಿ ಆ ರಾಯನು ಮೂರ್ಛಾ ಗತನಾಗಿ ಬೀಳಲು,

ಸುನಂದಾದೇವಿ ಬಂದು ಶೈತ್ಯೋಪಚಾರದಿಂದ ಎಚ್ಚರವಂ ಮಾಡಲು, "ಮೌರ್ಯನೇ, ಪುತ್ರಸಮೇತನಾದ ನಿನಗೆ ಇಂಥ ವಿಪತ್ತು ಸಂಭವಿಸಬಹುದೇ, ನಿನಗೆ ತಾಯಾದ ಮುರಾದೇವಿಯು ಪುತ್ರಶೋಕವಂ ನೋಡದೆ ತ್ರಿವೇಣಿಯಲ್ಲಿ ತನುವನ್ನೊಪ್ಪಿಸಿ ಮುಕ್ತಳಾ ದಳು. ನಾನು ಪುಣ್ಯಹೀನನಾದುದರಿಂದ ಈ ಅಮಿತಶೋಕವನ್ನನುಭವಿಸುತ ಇನ್ನೂ ಈ ಜೀವವಂ ಹೊರೆಯಬೇಕಾಯಿತು" ಎಂದು ಬಹುವಾಗಿ ಹಂಬಲಿಸುತ, ರಾಕ್ಷಸನಂ ಕುರಿತು "ಎಲೈ ಅಮಾತ್ಯನೆ, ನಂದರು ಕಳುಹಿಸಿದ ಕಾಗದದಲ್ಲಿ ಇರುವಂತೆ [೨]ಕಾರ್ಯ ನಡೆದು[೨] ಪುತ್ರಜನ ಸಮೇತನಾದ ಮೌರ್ಯನಿಗೆ ಈ ದುರ್ದೆಶೆ ಸಂಭವಿಸಿದ್ದೀತೇ ? ಜ್ಞಾತಿಮತ್ಸರ ದಿಂದಲೋ, ದೈವಸಂಕಲ್ಪವೇ ಹೀಗೆ ಪರಿಣಮಿಸಿತೋ ? ತಿಳಿದು ಹೇಳು" ಎಂದೆನಲು,

ಆ ಮಾತಿಗೆ, "ಜೀಯಾ ತಮಗೆ ಇಂಥ ಪುತ್ರಶೋಕ ಸಂಭವಿಸಬಾರದು. ನಾನು ಏನೆಂದು ಹೇಳಲಿ ? ನಿಮ್ಮ ಸನ್ನಿಧಿಯಲ್ಲಿ ಇದ್ದ ನನಗೆ ನೀವು ಹೇಳಿದಂತೆ ಹೀಗೆಂದು ನಿಶ್ಚಯ ತೋರದೆ, ನಾನಾ ವಿಧ ವಿಕಲ್ಪವು ತೋರುತ್ತಲಿದೆ. ಪ್ರಾಣಿಗಳಲ್ಲಿ ದೈವಸಂಕಲ್ಪವು ಯಾವ ಸಮಯದಲ್ಲಿ ಹ್ಯಾಗೆ ಪರಿಣಮಿಸುವದೋ ಮನುಷ್ಯಮಾತ್ರದವರು ತಿಳಿಯ ಕೂಡದು. 'ಕಸ್ಯ ಸೌಖ್ಯಂ ನಿರಂತರಂ' ಎಂಬ ಪ್ರಕಾರದಿಂದ ಈ ಸಂಸಾರದಲ್ಲಿ ಪ್ರಾಣಿ ಮಾತ್ರಕ್ಕೆ ನಿರಂತರ ಸುಖವಂ ಹೇಳಕೂಡದು" ಎಂದು ರಾಯನಂ ಸಮಾಧಾನವಂ ಮಾಡಿಸಲು,

ಆ ಬಳಿಕ, ಆ ರಾಯನು ತ್ರಿವೇಣಿಯಲ್ಲಿ ಸ್ನಾನವಂ ಮಾಡಿ, ಪುತ್ರಸಮೇತನಾದ ಮೌರ್ಯನಿಗೆ ತಿಲೋದಕವಂ ಕೊಟ್ಟು, ಖಿನ್ನನಾಗಿ, ರಾಕ್ಷಸ ಸಮೇತನಾಗಿ ತನ್ನ ಪುರಕ್ಕೆ ಬರುತ್ತಿದ್ದನು. ಆ ರಾಯನು ಪುರಕ್ಕೆ ಬಂದ ಬಳಿಕ ಮೌರ್ಯನು ನಷ್ಟವಾದ ವರ್ತಮಾನವು ದೇಶಾಂತರದಲ್ಲಿ ಪ್ರಸಿದ್ಧ[೩]ವಾಗಲು, ಕೆಲವು ಕಾಲದ ಮೇಲೆ ದೇಶಾಂತರದಲ್ಲಿ ವಿಶೇಷ ವರ್ತಮಾನವಂ ತಿಳಿದು ಬಂದು ಹೇಳುವಂತೆ ರಾಜ್ಯಾಧಿಪತಿ[೩] ವೃದ್ಧನಾದ ಸರ್ವಾರ್ಥ ಸಿದ್ಧಿಯು [ಮಾಡಲು],

ನಂದರು ಮೌರ್ಯರಿಗೆ ಮಾಡಿದ ದ್ರೋಹವಂ ಪರೋಕ್ಷವಾಗಿ ವಿಚಾರಿಸಿ ತಿಳಿದು, ಸಮೀಪಕ್ಕೆ ಬಂದು ಇದ್ದ ರಾಕ್ಷಸನಂ ಕುರಿತು, "ಅಯ್ಯಾ ಅಮಾತ್ಯನೇ, ನಂದರು ಕಪಟೋಪಾಯದಿಂದಲೇ ಮೌರ್ಯರಂ ಸಂಹರಿಸಿದರಂತೆ. ಇದು ಜನವಿದಿತವಾಗಿ ಇಹುದು. ದೈವಯೋಗದಿಂದ ನಷ್ಟರಾದರೆಂದು ನಮಗೆ ಬರೆದು ಕಳುಹಿಸಿದರು. ಅಕಾರಣಜ್ಞಾತಿ ದ್ರೋಹಿಗಳಾದ ಇವರ ಮುಖಾವಲೋಕನವಂ ಮಾಡಬಹುದೇ ? ಪುತ್ರರಾದವರಾದರೂ ಇಂಥ ಅಕಾರ್ಯವಂ ಮಾಡಿದುದರಿಂದ ದಂಡನೆಗೆ ಯೋಗ್ಯರಹ[ರ]ಷ್ಟೆ. ಇದೆಲ್ಲವಂ ಬಿಟ್ಟು

೧. ರೇನು (ಕ). ೨. ಹೀಗೆ ನಡಿದು ಇದ್ದೀತೇ ? (ಕ) ೩. ವಾಗಲು (ಕ)

ವಾನಪ್ರಸ್ಥನಾಗಿ ತಪೋವನವನ್ನಾದರೂ ಆಶ್ರಯಿಸುವನಲ್ಲದೆ ಸಹಯೋಗ ಕ್ಷೇಮದಲ್ಲಿ ಇರಲಾರೆನು" ಎಂದು ಹೇಳುತ್ತಿರುವ ಆ ರಾಯನಂ ಕುರಿತು.

"ಜೀಯ, ತಾವು ಹೇಳಿದ ಮಾತು ಸತ್ಯವೇ ಸರಿ. [೧]ಆಪತ್ಸಮಯದಲ್ಲಿ ಆದರೂ ವಿಮರ್ಶೆಯಿಂದ ಕಾರ್ಯವಂ ಮಾಡಬೇಕು. ಏನೆಂದರೆ, ತಾವು ತಪೋವನಕ್ಕೆ ಹೋಗುತ್ತಿದ್ದರೆ, ತಮ್ಮನ್ನಗಲಿ ನಾನು ಒಂದು ಕ್ಷಣಮಾತ್ರವಾದರೂ ಇಲ್ಲಿ ಇರತಕ್ಕವನಲ್ಲ. ನಂದರಲ್ಲಿ ಪ್ರಜೆಗಳಿಗೆ ಅನುರಾಗ ತಪ್ಪಿ ಇರುವ ಈ ಸಮಯದಲ್ಲಿ ರಂಧ್ರಾನ್ವೇಷಿಗಳಾದ ಶತ್ರುಗಳು ಮೌರ್ಯರಲ್ಲಿ ಅನುರಕ್ತರಾಗಿ ಇದ್ದ ಇಲ್ಲಿಯ ಅಧಿಕಾರಿಗಳಿಗೂ ನಂದರಿಗೂ ಭೇದವಂ ಕಲ್ಪಿಸಿದರೆ ಪ್ರಮಾದ ಬರುವದು. ಅದಂ ತಿಳಿದು ನಂದರು ಜಾಗರೂಕರಾದರೆ ಬಾಧಕವಿಲ್ಲ. ಅದು ಅಲ್ಲದೆ ಮತ್ತರಾಗಿ ಶತ್ರುಗಳ ಭೇದೋಪಾಯಕ್ಕೆ ವಿಹ್ವಲರಾದರೆ, ಇವರಿಗೆ ಹಾನಿವುಂಟಾಗುವದು. ಆಗ ಅವರಿಗೆ ಬಂದ ಅಪಯಶಸ್ಸು ತಮ್ಮ ಪಾದಕ್ಕೆ ಬಂದುದಲ್ಲವೇ ? ಅದರಿಂದ ತಪೋವನಕ್ಕೆ ಹೋಗಕೂಡದು ; ಮತ್ತು ರಾಜ್ಯಸ್ವಾತಂತ್ರ್ಯವು ಈಗ ನಂದರಿಗೆ ಉಂಟಾಗಿ ಇರುವದರಿಂದ ಈಗ ದಂಡನೆಗೆ ಶಕ್ಯರಲ್ಲ. ವಿಶೇಷ ಪ್ರಯತ್ನವಂ ಮಾಡಿದರೂ ಪರ್ಯವಸಾನದಲ್ಲಿ ಕಾರ್ಯ ನಿಷ್ಫಲವಾಗುವದು. ಪ್ರಬುದ್ಧರಾದ ಪುತ್ರರಂ ಧಿಕ್ಕರಿಸಿ, ಎದುರು ಮಾಡಿಕೊಂಡು, ನಿಮ್ಮಲ್ಲಿ ಇರುವ ಭಯ ವಿಶ್ವಾಸವಂ ತಪ್ಪಿಸಿಕೊಳ್ಳಬಾರದು. ಮೌರ್ಯರು ಮುಂದೆ ತಮಗೆ ಶತ್ರುಗಳಾದಾರು ಎಂಬ ಶಂಕೆಯಿಂದ ಈ ಅಕಾರ್ಯವನ್ನಾಚರಿಸಿ ಲೋಕಾಪವಾದಕ್ಕೆ ಪಾತ್ರರಾದರೂ, ಮೀರಿ ಬಂದ ಕಾರ್ಯಕ್ಕೆ ವ್ಯಸನಪಟ್ಟು, ಫಲವೇನು ?

ಈಗ ನಾವು ಯಾವದಂ ತಿಳಿಯದವರಂತೆ, ವ್ಯಸನವಂ ಸ್ಮರಿಸದೆ, ತಂದೆ ಮಕ್ಕಳಿಗೆ ಮನಸ್ತಾಪವೆಂದು ಜನಗಳಿಗೆ ತೋರ್ಪಡಿಸದೆ, ನಂದರಲ್ಲಿ ನೀವು ಅನುರಕ್ತರಾಗಿಯೆ ಇರಬೇಕಲ್ಲದೆ ಕಾರ್ಯಾಂತರವನ್ನೆಣಿಸಿದರೆ ಹಗೆಗಳಿಗೆ ಹಾಸ್ಯಾಸ್ಪದವಾಗುವದು. ಮತ್ತು ಮೌರ್ಯನಿಗೆ ಪುತ್ರನಾದ ಚಂದ್ರಗುಪ್ತನೆಂಬವನು ಕಾರಾಗೃಹದಲ್ಲಿ ಜೀವಂತನಾಗಿ ಇಹನು. ಆತನಿಗೆ ವಿಶೇಷ ನಿರ್ಬಂಧವಿಲ್ಲ. ಅವನಂ ಈಗಲೆ ಬಿಟ್ಟರೆ, ಅವನಿಗೆ ಜೀವನೋಪಾಯವಂ ಕಲ್ಪಿಸುವದಕ್ಕೆ ಸ್ವಲ್ಪ ಅಧಿಕಾರವಂ ನೇಮಿಸಿದರೆ, ತಮ್ಮ ಪೌತ್ರನಾದುದರಿಂದ ತುಚ್ಛ ಜೀವನಕ್ಕೆ ಒಡಂಬಡನು. ವಿಶೇಷಾಧಿಕಾರವಂ ಕೊಡುವಲ್ಲಿ ನಂದರು ಸಮ್ಮತಿಸರು ಅಥವಾ ಅಧಿಕಾರವಂ ಕೊಟ್ಟರೂ ಮೊದಲು ಮೌರ್ಯನಲ್ಲಿ ಅನುರಕ್ತರಾಗಿ ಇದ್ದ ಅಧಿಕಾರಿಗಳು ನಂದರಿಗೂ ಮೌರ್ಯಪುತ್ರನಾದ ಚಂದ್ರಗುಪ್ತನಿಗೂ ಮನಸ್ತಾಪವಂ ಕಲ್ಪಿಸಿದರೆ ಶತ್ರುಗಳಿಗೆ ಅದು ಒಂದು ಅವಕಾಶ ಆಗುವದು. ಆತನಂ ಕಾರಾಗೃಹದಿಂದ ಮುಕ್ತನಂ ಮಾಡಿ ಹೊರಡಿಸಿ 'ಎಲ್ಲಿಯಾದರೂ ಜೀವಿಸಿಕೊಂಡಿರಲಿ' ಎಂದರೆ, ತಮಗೆ ಪೌತ್ರನಾದವನು ದೇಶಾಂತರದಲ್ಲಿ ತಿರಿದು ಉಂಬನು ಎಂಬ ಅಪಯಶಸ್ಸು ಸಂಭವಿಸುವದು. ಅಥವಾ ಶತ್ರುರಾಯರು ಅವನಂ ಪಕ್ಷೀಕರಿಸಿದರೆ ಪ್ರಮಾದವುಂಟಾಗುವದು. ಅದರಿಂದ ಅವನಂ ಇದ್ದಲ್ಲಿಯೇ ಸಂರಕ್ಷಿಸುತ್ತ, ನಿಮಿತ್ತಾಂತರದಿಂದ ಅವನಂ ಬಿಡಿಸಿ ಪ್ರಕೃತೋಚಿತವನ್ನಾಚರಿಸಬೇಕಲ್ಲದೆ ಈಗಲೇ ಬಿಡಕೂಡದು. ಈ ಮೌರ್ಯರ ಅನಿಷ್ಟವಂ ದೇವ ಬ್ರಾಹ್ಮ[ಣ]ರ

---

೧. ಆಪತ್ಸಮಯದಲ್ಲಿ (ಕ)

ಸಂತರ್ಪಣೆಯಿಂದಲಾದರೂ ನಂದರಿಗೆ ಶ್ರೇಯಸ್ಸು ಉಂಟಾಗುವಂತೆ ಮಾಡಿಸಬೇಕು. ನಂದರಲ್ಲಿ ಇದೊಂದು ದೋಷ ಹೊರತು ಶೌರ್ಯೌದಾರ್ಯಾದಿ ಗುಣಗಳಿಗೆ ಕಡಮೆಯಿಲ್ಲ" ಎಂದು ಹೇಳುತ್ತಿರುವ ರಾಕ್ಷಸನ ವಾಕ್ಯದಿಂದ ನಂದರಲ್ಲಿ ಕ್ರೋಧವಂ ಬಿಟ್ಟು, "ನೀನು ಹೇಳಿದಂತೆಯೆ ಆಗಲೆಂ"ದು ಆ ರಾಯನು ಅಂತಃಪುರಕ್ಕೆ ತೆರಳುತ್ತಿರಲು,

ಆ ಬಳಿಕ ರಾಕ್ಷಸನು, ಆ ಪುರದಲ್ಲಿ ಗ್ರಾಮಶಾಂತಿಯಂ ಮಾಡಿಸಿ, ದೇವಾಲಯಗಳಲ್ಲಿ ವಿಶೇಷವಾಗಿ ಅಭಿಷೇಕ ಉತ್ಸವಗಳು ನಡೆಯಲೆಂದು ನೇಮಿಸಲು, ಅನೇಕ ಲಕ್ಷ ಬ್ರಾಹ್ಮಣ ಸಂತರ್ಪಣೆಯಂ ಮಾಡಿಸಿ, ಮೌರ್ಯರಲ್ಲಿ ಅನುರಕ್ತರಾಗಿ ಇದ್ದ ಅಧಿಕಾರಿಗಳಿಗೆ ನಿಮಿತ್ತಾಂತರದಿಂದ ಬಹುಮಾನವಂ ಮಾಡಿ, ನಂದರಲ್ಲಿ ಆ ಜನಗಳಿಗೆ ಅನುರಾಗವುಂಟಾಗುವಂತೆ ಮಾಡುತಲಿರುವ ರಾಕ್ಷಸನ ಕೌಶಲ್ಯದಿಂದ ತಮ್ಮ ತಂದೆಯು ತಮ್ಮನ್ನು ಧಿಕ್ಕರಿಸದೆ ಏನೂ ಅರಿಯದವನಂತೆ ಇರುತಲಿರುವ ತಮ್ಮ ತಂದೆಯ ಭಾವವಂ ನೋಡಿ, ನಂದರು 'ರಾಕ್ಷಸನು ತಮಗೆ ಪರಮಾಪ್ತನು' ಎಂದು ತಿಳಿದು ಪದೇ ಪದೇ ಶ್ಲಾಘಿಸುತ್ತ, ರಾಜಕಾರ್ಯ ಏನು ಇದ್ದರೂ ರಾಕ್ಷಸನ ಮುಖಾಂತರದಿಂದಲೇ ಮಾಡಿಸುತ್ತ, ಮೊದಲಿಗಿಂತಲೂ ಲಕ್ಷಾಧಿಕದೇಶವನ್ನುಂಬಳಿಯಾಗಿ ಕೊಟ್ಟು ಬಹುಸನ್ಮಾನವಂ ಮಾಡುತ್ತಲಿರಲು, ಆಗ ರಾಕ್ಷಸನು ಅವರು ಮಾಡಿದ ಬಹುಮತಿಗಳಿಂದ ಸಂತುಷ್ಟನಾಗಿ, ನಿದ್ರಾಹಾರವಂ ನೋಡದೆ ಮಾಡುತಲಿರುವ ರಾಜ್ಯತಂತ್ರ ವಿಚಾರವಂ ಕೇಳಿ ಪರರಾಯರ ಹೃದಯಗಳು ತಲ್ಲಣಿಸುತ್ತಿದ್ದವು.

ಹೀಗೆ ಇರುತ್ತಿರಲು, ಮತ್ತೆ ಕೆಲವು ಕಾಲದ ಮೇಲೆ, ದೇಶಾಂತರದ ವಿಶೇಷ ವರ್ತಮಾನವಂ ತಿಳಿದು ಬಂದು ಹೇಳುವಂತೆ ಪರ್ವತರಾಜ್ಯಾಧಿಪತಿಯಾದ ಪರ್ವತೇಶ್ವರನೆಂಬ ಅರಸಿನಿಂದ ಆಜ್ಞಪ್ತರಾದ ಗೂಢಚಾರರು ಪಾಟಲೀಪುರಕ್ಕೆ ಬಂದು, ಅಲ್ಲಿ ನಡೆದ ಮೌರ್ಯರ ಸಂಹಾರವನ್ನೂ ಅದರ ಕಾರಣವೆಲ್ಲವಂ ತಿಳಿದು ತ್ವರಿತದಿಂದ ಹೋಗಿ, ಕೈಮುಗಿದು, ಪರ್ವತರಾಯನಿಗೆ ಇದೆಲ್ಲವಂ ಹೇಳಲು, ಆ ರಾಯನು ಅದೆಲ್ಲವಂ ಕೇಳಿ ತಲೆ ತೂಗಿ, ತನ್ನ ಬಳಿಯಲಿದ್ದ ಶಬರವರ್ಮನೆಂಬ ಮಂತ್ರಿಗಿಂತೆಂದನು :

"ಅಯ್ಯ ಮಂತ್ರಿಶ್ರೇಷ್ಠನೆ, ಪಾಟಲೀಪುರದಲ್ಲಿ ನಡೆದ ವರ್ತಮಾನವಂ ತಿಳಿದೆಯಾ ? ನಂದರು ಬುದ್ಧಿಹೀನರಾಗಿ ತಮಗೆ ಛಾಯಾನುವರ್ತಿಗಳಾಗಿ, ಭೃತ್ಯರಾಗಿ, ಸ್ವಜನವಾಗಿ, ಬಹುಕಾರ್ಯಗಳಿಗೆ ಉಪಯೋಗಿಸುವ ಮೌರ್ಯರನ್ನು ಅಕಾರಣದ್ವೇಷವಂ ಮಾಡಿ ಕಪಟದಿಂದ ಅವರೆಲ್ಲರಂ ಸಂಹರಿಸಿದರಂತೆ. ಭೃತ್ಯಪದಕ್ಕೆ ಯೋಗ್ಯರಾಗಿ ಸ್ವರಾಷ್ಟ್ರ ವಂಶಾಭಿಮಾನಿಗಳಾದ ಭ್ರಾತೃಪುತ್ರರಂ ಶತ್ರುತ್ವಬುದ್ಧಿಗಳಿಂದ ಸಂಹರಿಸಿ, ತಾವು ಯಶೋವಂತರಾದೆವೆಂಬುವದಂ ನೋಡಿದರೆ, ರಣಾಂಕಣಕ್ಕೆ ಹೋಗುವ ಪುರುಷನು ತನ್ನ ಕೈಖಡ್ಗವನ್ನು ತಾನೆ ಮುರಿದು ಬಿಸುಟಂತಾಯಿತು. ನಂದರು ಶೂರಸ್ವಜನವುಳ್ಳವರೆಂಬ ಭೀತಿಯು ಶತ್ರುರಾಯರಿಗೆ ತಪ್ಪಿ ಹೋಯಿತು. ಜೀವನಾರ್ಥವಾಗಿ ಸಂಬಳಕ್ಕೆ ಇರುವ ಜನರು ಆಪ್ತರಾದರೂ ಸ್ವಜನಕ್ಕೆ ಸಮಾನರೆಂತಹರು ? ಸ್ವಜನದಲ್ಲಿ ಅಧಿಕನೆಂಬ ಯಶಸ್ಸಿಗಿಂತಲೂ ಇಹದಲ್ಲಿ ಪುರುಷಾರ್ಥವೆಂದರೇನು ? ಅಮಾತ್ಯ ರಾಕ್ಷಸನು ಅವರಿಗೆ ಮಂತ್ರಿಯಾಗಿ ಇದ್ದವನಾದರೂ ಈ ತುಚ್ಛಕರ್ಮಕ್ಕೆ ಒಳಗಾಗಲಾರನು. ಆ ರಾಕ್ಷಸನೂ ವೃದ್ಧರಾಯನೂ ಸಹ ಪುರದಲ್ಲಿ ಇಲ್ಲದಿದ್ದ ಸಮಯದಲ್ಲಿ ತಮ್ಮನ್ನೇ ನಂಬಿದ ಮೌರ್ಯರಂ

ಕಪಟದಿಂದ ಸಂಹರಿಸಿ, ಲೋಕಾಪವಾದಕ್ಕೆ ಪಾತ್ರರಾದರು. ಇದರಿಂ ಲೋಕದಲ್ಲಿ ಕಪಟಾಚರಣೆಯೆ ಪುರುಷಾರ್ಥದಾಯಕವೆಂದೂ ಅದರ ಆಚರಣೆಯಲ್ಲಿ ತಾವು ನಿಪುಣರೆಂದೂ ತಿಳಿದು ಇದ್ದಾರು. ಇಂಥಾವರಿಗೆ ಶತ್ರುಗಳ ಕಪಟೋಪಾಯದಿಂದಲೇ ಹಾನಿವುಂಟಾದರೂ ಆಗಬಹುದು. ದೈವವಶದಿಂದ ಮೌರ್ಯರಲ್ಲಿ ಚಂದ್ರಗುಪ್ತನೆಂಬವ ಒಬ್ಬ ಮಾತ್ರ ಕಾರಾಗೃಹದಲ್ಲಿ ಜೀವಂತನಾಗಿ ಇದಾನಂತೆ. ಆತನೇ ಸಮಯಾಂತರದಲ್ಲಿ ಇವರಿಗೆ ಶತ್ರುವಾದಾಗ್ಯೂ ಆದಾನು. ಇದರಿಂದ ಪ್ರಜೆಗಳಿಗೆ ಇವರಲ್ಲಿ ವಿಶ್ವಾಸ ತಪ್ಪಿ ಇದ್ದೀತು" ಎಂದು ಹೇಳುತ್ತಿರುವ ಆ ರಾಯನಂ ಕುರಿತು ಶಬರವರ್ಮನಿಂತೆಂದನು :

"ಜೀಯಾ, ಅಪ್ಪಣೆ ಪಾಲಿಸಿದರ್ಥವೆಲ್ಲವು ಸತ್ಯವೇ ಸರಿ. ಕಾರ್ಯದಕ್ಷನಾದ ಮೌರ್ಯನಲ್ಲಿ ಪ್ರಜೆಗಳಿಗೆ ಅನುರಾಗವೂ ಶತ್ರುಗಳಿಗೆ ಭೀತಿಯೂ ಸಹ ಉಂಟಾಗಿ ಇತ್ತು. ಈ ನಂದರಲ್ಲಿ ಆ ಅರ್ಥ ತೋರುವದು ಇಲ್ಲ. ಮೌರ್ಯವಧೆಯು ರಾಕ್ಷಸನಿಗೆ ಸಮ್ಮತವಾಗದಿದ್ದರೆ ಮುಖ್ಯಾಮಾತ್ಯನಾದ ರಾಕ್ಷಸನಿಗೂ ನಂದರಿಗೂ ಅಂತರಂಗಶುದ್ಧಿ ದೃಢವಾಗಿ ಇದ್ದಂತೆ ತೋರುವದು ಇಲ್ಲ. ಆತ ತಟಸ್ಥಭಾವದಲ್ಲೇ ಇದ್ದಾನು. ಮೌರ್ಯನಿಂ ಪ್ರಸಿದ್ಧಿಗೆ ಬಂದ ಬಾಗುರಾಯಣಾದಿ ಸೇನಾಧಿಪತಿಗಳಿಗೆ ನಂದರಲ್ಲಿ ವಿಶ್ವಾಸವುಂಟಾಗಿ ಇರಲಾರದು. ಜೀವನಾರ್ಥವಾಗಿ ಸ್ವಾಮಿಭೃತ್ಯರಂತೆ ಇದ್ದರೂ, ಚಂದ್ರಗುಪ್ತನೆಂಬವನಿಗೆ ದೈವಯೋಗದಿಂ ಬಂಧನನಿವೃತ್ತಿಯಾದರೆ, ಸಮಯಾಂತರದಲ್ಲಿ ಆ ಬಾಗುರಾಯಣಾದಿಗಳು ಆತನಿಗೆ ಸಹಾಯರಾದರೂ ಆಗಬಹುದು. ಇದೆಲ್ಲವೂ ಪರರಾಯರಿಗೆ ಅವಕಾಶ ಸಮಯವು. ಆ ಪಾಟಲೀಪುರದ ವಿಚಾರವು ಹ್ಯಾಗಿದ್ದರೂ ಇರಲೆಂದು ನಾವು ಉದಾಸೀನರಾಗಿ ಇರುವದು ರಾಜಧರ್ಮವಲ್ಲ. ಈಗ ನಂದರು ಬಹುದೇಶಾಧಿಪತಿಗಳ ಕೈಕಪ್ಪವಂ ಗ್ರಹಿಸುತ್ತ, ಶರಣಾಗತರಲ್ಲಿ ಆಡಿದ ಅಭಯವಚನವಂ ಮೀರುತ್ತ, ಪರದೇಶಗಳಂ ಒತ್ತಿಕೊಳ್ಳುತ್ತ, ಬಹುವಾಗಿ ಹೆಚ್ಚಿ ಬರುವರಾಗಿ ಇದ್ದಾರೆ. ನೆರೆಮನೆಯಲ್ಲಿ ಎದ್ದಿರುವ ಕಿಚ್ಚನ್ನು ಅಲ್ಲಿಯೇ ಶಾಂತವಂ ಮಾಡದಿದ್ದರೆ ಸ್ವಗೃಹವಂ ಹ್ಯಾಗ ದಹಿಸುವದೋ ಹಾಗೆ ಸಾವಂತರು ಪ್ರಬಲರಾದರೆ, ಪರದೇಶಗಳಂ ಒತ್ತಿಕೊಳ್ಳದೆ ಇರುವರೇ ? ಅರಸುಗಳಲ್ಲಿ ಯಾವ ವೇಳೆಯಲ್ಲಿ ಯಾರು ಶತ್ರುಗಳಾಗುವರೋ, ಮೇಘೋದಯದಂತೆ ರಾಜಕಾರ್ಯ ಹೇಗೆ ಒದಗುವದೋ, ತಿಳಿಯಲಶಕ್ಯವಾದುದರಿಂದ ಆ ಪಾಟಲೀಪುರದ ವರ್ತಮಾನವು ಪುನಃ ಚೆನ್ನಾಗಿ ನಮಗೆ ತಿಳಿಯುವಂತೆ, ಆ ಪುರದ ಅಮಾತ್ಯರ ಬುದ್ಧಿಕೌಶಲ್ಯ ವಸ್ತು ಪರಿಜ್ಞಾನವು ತಮ್ಮ ಚಿತ್ತಕ್ಕೆ ವೇದ್ಯವಾಗುವದಕ್ಕೆ ಒಂದಾನೊಂದು ಕಪಟಶಿಲ್ಪವಂ ರಚಿಸಿ, ಪಾಟಲೀಪುರಕ್ಕೆ ಕಳುಹಿಸಿ, ಅದೆಲ್ಲವಂ ತಿಳಿಯಬೇಕೆಂ"ಬ ಶಬರವರ್ಮನೆಂಬ ಮಂತ್ರಿಯ ವಾಕ್ಯವಂ ಕೇಳಿ, ಆ ಪರ್ವತೇಶ್ವರನು 'ಹಾಗೆ ಮಾಡಿಸಬಹುದೆಂ'ದು ಹೇಳಿ, ಅಂತಃಪುರಕ್ಕೆ ಹೋಗುತ್ತಿರಲು,

ಆ ಬಳಿಕ ಶಬರವರ್ಮನು ಚತುರರಾದ ಶಿಲ್ಪಿಗಳಂ ಕರೆ ಕಳುಹಿಸಿ, ಪಂಜರವಂ ರಚಿಸಿ, ಅದರಲ್ಲಿ ಸಿಂಹವನ್ನುಂಟುಮಾಡಿ, ಆ ಪಂಜರಕ್ಕೆ ರಕ್ಷಕರಂ ನೇಮಿಸಿ, ಅವರಿಗೆ ಅದರ ಉಪಾಯವಂ ಹೇಳಿ, "ಎಲ್ಲೆ, ಈ ಪಂಜರವಂ ಪಾಟಲೀಪುರದ ಆಸ್ಥಾನದ ಬಳಿಯಲ್ಲಿ ಇಳುಹಿ, ಹೀಗೆಂದು ಇದರ ರೀತಿಯಂ ಹೇಳಿಕೊಂಡು ಬೀದಿಗಳಲ್ಲಿ ಸಾರುತ್ತ ತಿರುಗುತ್ತಲಿದ್ದರೆ, ಇದರ ಪರೀಕ್ಷೆಯಂ ಯಾರು ಮಾಡುವರೋ ಅದಂ ತಿಳಿದು, ಅಲ್ಲಿಯ ವಿಶೇಷ

ವರ್ತಮಾನವಂ ತಿಳಿದು ಬಂದು ಹೇಳುವರಾಗಿ" ಎಂದು ಪಂಜರರಕ್ಷಕರಿಗೆ ಹೇಳಿ ಕಳುಹಿಸಲು, ಅವರು ಪರ್ವತರಾಜ್ಯವಂ ಬಿಟ್ಟು, ಪಂಜರಸಮೇತರಾಗಿ ಪಾಟಲೀಪುರಕ್ಕೆ ಬರುತಲಿದ್ದರು.

ಹೀಗಿರುತ್ತಿರಲು, ಮತ್ತೊಂದು ದಿವಸದಲ್ಲಿ, ಆಸ್ಥಾನ ಮಂಟಪದಲ್ಲಿ ಕುಳಿತಿದ್ದ ಪರ್ವತರಾಯನಿಗೆ ಗೂಢಚಾರರು ಕೈಮುಗಿದು ಬಿನ್ನೈಸುತ್ತಿದ್ದರು :

"ಜೀಯ, ನಾವು ಲಂಪಾಕ ದೇಶಪ್ರಾಂತ್ಯಗಳಿಗೆ ಹೋಗಿದ್ದ ಚಾರರು. ಅಲ್ಲಿ ಕಂಡು ಕೇಳಿದ ವರ್ತಮಾನವನ್ನರುಹುವೆವು, ಅವಧರಿಸಬೇಕು : ಮೊದಲು ನಮ್ಮ ಪಾರ್ವತೇಯರ ಅಟ್ಟುಳಿಗಳಿಗೆ ಸಹಿಸಲಾರದೆ ರಾಜ್ಯಭ್ರಷ್ಟನಾಗಿ ಓಡಿಹೋಗಿ ಇದ್ದ ಗಿರಿವರ್ಮನೆಂಬ ಅರಸನ್ನು ಅಲ್ಲಿಯ ಪೂರ್ವಿಕರಾಗಿ ಆಪ್ತರಾದ ಅಧಿಕಾರಿಗಳು ಕರೆಕಳುಹಿಸಿ, ಆತನ ಪಿತ್ರಾರ್ಜಿತವಾದ ಭಂಡಾರದ ರಹಸ್ಯವಂ ತಿಳುಹಿಸಲು, ಅದರಿಂ ಮಹಾಧನಿಕನಾಗಿ ನಗ್ನ ದೇಶಾಧಿಪತಿಯೊಡನೆ ಮಿತ್ರತ್ವವಂ ಬಳಸಿ, ಉಳಿದ ಸಾಮಂತರಾಯರ ಸಮ್ಮತಿಯಿಂದ ಸ್ವರಾಷ್ಟ್ರಾಧಿಪತ್ಯವಂ ಮಾಡುತ್ತಲಿದ್ದಾನೆ. ಅವನ ಗುಣವೇನೆಂದರೆ :

ಆತನು ಪರಸ್ತ್ರೀಮುಖಾವಲೋಕನವಂ ಚತುರ್ಥೀ ಚಂದ್ರದರುಶನದಂತೆ ಭಾವಿಸುವನು. ನಿರಂತರದಲ್ಲಿಯೂ ವಿದ್ವದ್ಬೃಂದವಂ ಸೇವಿಸುವನು. ಪುತ್ರಸಂರಕ್ಷಣೆಗಿಂತಲೂ ಪ್ರಜಾಸಂರಕ್ಷಣೆಯಲ್ಲಿ ಅಧಿಕತತ್ಪರನು. ಆತನ ದೇಶದಲ್ಲಿ ನಾಸ್ತಿಕವಾದವೆಂಬುವದು ಶಶಶೃಂಗಸದೃಶವು. ಅಪೂಜ್ಯರಿಗೆ ಎಂದಿಗೂ ಪೂಜ್ಯತೆ ಉಂಟಾಗಲಾರದು. ಶೂರರಿಗೆ ಅಲ್ಲ[ದೆ] ಇತರರಿಗೆ ಸಮ್ಮಾನ ದೊರಕದು. ಚೋರರಿಗೆ ನಿತ್ಯದಲ್ಲೂ ದಂಡನೆಯಹುದು. ವಂಚಕಗಣಕರ್ಗೆ ಹಸ್ತಚ್ಛೇದವಾಗುವುದು. ಪ್ರಜೆಗಳು ನ್ಯಾಯನೀತಿಯಂ ಮೀರುವರಲ್ಲ. ಇಂಥಾ ರಾಯನು ಹೆಚ್ಚಿ ಬರುವ ಶೌರ್ಯದಿಂದ ನಮ್ಮ ಪಾರ್ವತೇಯರೊಡನೆ ಯುದ್ಧವನ್ನಪೇಕ್ಷಿಸಿ ಬರುವನಾಗಿ ತೋರುತ್ತಲಿದೆ.

ಅದಕ್ಕೆ ಸೂಚನೆಯೇನೆಂದರೆ : ಅಲ್ಲಿಯ ಕಾಮಾಟದವರು ನಮ್ಮ ದೇಶಾಭಿಮುಖವಾದ ಮಾರ್ಗಗಳ ಹಳ್ಳತಿಟ್ಟುಗಳಂ ಸಮ ಮಾಡುತ್ತಲಿರುವರು. 'ಇದು ಏನೆಂ'ದರೆ, 'ಅರಸು ಮೃಗಬೇಟೆಯನ್ನಾಡಲು ಬರುವನೆಂ'ಬರು. ಮಾರ್ಗಮಧ್ಯದ ನದಿಗಳಂ ದಾಟುವುದಕ್ಕೆ ಅಪರಿಮಿತವಾಗಿ ಆಗುತ್ತಲಿರುವ ನಾವೆಗಳಂ ನೋಡಿ, 'ಏನು ನಿಮಿತ್ತ'ವೆಂದರೆ, 'ಅರಸುಗಳು ಸ್ತ್ರೀಜನ ಸಮೇತರಾಗಿ ಉಡುಪೋತ್ಸವವಂ ಮಾಡಲು ಬರುವರೆಂ'ಬರು. ಲಗ್ಗೆಯಂ ಹತ್ತುವ ನೂಲೇಣಿಗಳ ತಂಡವಂ ನೋಡಿ, 'ಆವ ಕಾರ್ಯಕ್ಕೆ'ಂದು ಕೇಳಿದರೆ, ಧಿಕ್ಕರಿಸುವರಲ್ಲದೆ ಪ್ರತ್ಯುತ್ತರವಂ ಹೇಳರು. ಆತನ ಸೀಮಾಂತ ದುರ್ಗಗಳಲ್ಲಿ ಯುದ್ಧ ಸಾಮಗ್ರಿಗಳು ಸಿದ್ಧವಾಗುವವು. ಜನಗಳು ಪ್ರಯಾಣಸನ್ನದ್ಧರಾಗಿ ಇಹರು" ಎಂದು ಹೇಳುತ್ತಿರುವ ಚಾರರ ವಾಕ್ಯವಂ ಕೇಳಿ, ಆ ರಾಯನು ಶಬರವರ್ಮನ ಮುಖವಂ ನೋಡಿ, "ಏನೈ ಅಮಾತ್ಯನೇ, ಪೂರ್ವವೈರವಂ ಸ್ಮರಿಸುತ್ತಲಿದ್ದ ಲಂಪಾ[ಕಾ]ಧಿಪತಿಗೆ ಒದಗಿ ಇರುವ ದೈವಬಲವಂ ನೋಡಿದೆಯಾ ? ಆತನ ಗುಣವಂ ಕೇಳಿದರೆ, ಪರರಾಯರಿಗೆ ಜೈಸಲು ಅಶಕ್ಯವೆಂದು ತೋರುತ್ತಲಿದೆ. ಇದಕ್ಕೆ ಏನು ಉತ್ತರವಂ ಹೇಳುವೆ" ಎನಲು,

"ಜೀಯಾ, ಶತ್ರು ಬಲಹೀನನೆಂದು ಉಪೇಕ್ಷೆಯಂ ಮಾಡಿದುದಕ್ಕೆ ಇಂಥಾ ವರ್ತಮಾನವಂ ಕೇಳಬೇಕಾಯಿತು. ಎಷ್ಟು ಸಂಪನ್ನನಾದರೂ ಆತನಿಗೆ ನೀತಿಜ್ಞರಾದ ಸಚಿವ

ರಿಲ್ಲದ ಬಳಿಕ ಎಷ್ಟೆಂದು ನಿರ್ವಹಿಸಿಯಾನು ? ಪರರಾಯರೊಡನೆ ಯುದ್ಧವಂ ಬಯಸು ತ್ತಿರುವ ನಮ್ಮ ಸೇನೆಗಳು ಹೊರಟರೆ, ಅವನ ರಾಜ್ಯಸಾಮಗ್ರಿಗಳು ಎಲ್ಲವೂ ಒಂದು ದಿವಸ ತರಹರಿಸಲಾರದು. ಇದಕ್ಕೆ ನನಗೆ ಅಪ್ಪಣೆ ಆದರೆ, ಅವನ ಕೋಟೆ ಕೊತ್ತಳಗಳ ನ್ನಿಡಿದು, ನೆಲಸಮವಂ ಮಾಡಿ, ಆ ಲಂಪಾಕಪತಿಯಂ ಕೈಸೆರೆಯಾಗಿ ಹಿಡಿದು ತರುವೆನು. ಅದಲ್ಲದಿದ್ದರೆ, ಸೇನಾಸಂಪನ್ನನಾದ ಶೇಖರನಿಗಾದರೂ ಅಪ್ಪಣೆಯಾಗಬೇಕು" ಎಂದು ವಿಜ್ಞಾಪಿಸಲು ;

"ಒಳ್ಳೆಯದು, ಆ ಲಂಪಾಕಪತಿಯ ಆಗಮನವಂ ಯುದ್ಧಾಭಿನಿವೇಶವಂ ಇನ್ನೊಂದು ವೇಳೆ ತಿಳಿದು ಬಂದು ಚಾರರು ವಿಜ್ಞಾಪಿಸಿದ ಬಳಿಕ ಪ್ರಕೃತೋಚಿತವಂ ಹೇಳುವೆವು" ಎಂದು ಆ ರಾಯನು ಮಜ್ಜನಗೃಹಾಭಿಮುಖನಾಗುತ್ತಿರಲು, ಆಗ ಶಬರವರ್ಮನೂ ಪುನಃ ಲಂಪಾ ಕಪತಿಯ ಯುದ್ಧಾಭಿನಿವೇಶವಂ ತಿಳಿದು ಬಂದು ಹೇಳುವಂತೆ ಚಾರರಂ ನೇಮಿಸಿ ಕಳುಹಿಸಿ, ತನ್ನ ಗೃಹಕ್ಕೆ ಹೋಗಲು,

ಮತ್ತೆ ಕೆಲವುಂ ದಿವಸದ ಮೇಲೆ, ಪರ್ವತರಾಜ್ಯದಿಂದ ಸಿಂಹಪಂಜರ ಸಮೇತರಾಗಿ ಬಂದ ಭಟರು ಪಾಟಲೀಪುರಕ್ಕೆ ಬಂದು, ಆಸ್ಥಾನದ ಬಳಿಯಲ್ಲಿ ಆ ಪಂಜರವನ್ನಿಳುಹಿಸಿ, ವಾದ್ಯಸಮೇತವಾಗಿ ಹೀಗೆಂದು ಸಾರುತ್ತಲಿದ್ದರು. ಏನೆಂದರೆ :

"ಈ ಪುರದಲ್ಲಿ ಯಾರಾದರೂ ಪ್ರೌಢರಿದ್ದರೆ ಈ ಅಮಾನುಷಕೃತವಾದ ಪಂಜರವಂ ಭೇದಿಸದೆ ಇದರಲ್ಲಿ ಇರುವ ಸಿಂಹವಂ ಜೀವಸಹಿತ ಹೊರಗೆ ತೆಗೆಯುವರಾಗಲಿ. ಅಂಥಾ ವರು ಇಲ್ಲದಿದ್ದರೆ, ಈಗ ನೋಡಿದ ದೇಶಗಳ ಜನದಂತೆ ನಮಗೆ ಸನ್ಮಾನಂ ಮಾಡಿ, ಮುಂದಕ್ಕೆ ಅಪ್ಪಣೆ ಕೊಡುವದು" ಎಂದು ಭುಜಗಳನ್ನೆತ್ತಿಕೊಂಡು ಸಾರುತ್ತಲಿರುವ ವಾಕ್ಯವಂ ಕೇಳಿ, ಆ ಪುರದ ಜನವು ನೆರೆದು ನೋಡಿ, ಅದರ ವಿವರವಂ ತಿಳಿಯಲಾರದೆ ಹೋಗುತ್ತಿರಲು, ಅದಂ ನೋಡಿದ ರಾಜಭಟರು ಆಸ್ಥಾನದಲ್ಲಿ ಕುಳಿತಿದ್ದ ನಂದರಿ ಗಿಂತೆಂದರು :

"ಜೀಯ, ಅಖಂಡವಾದ ಪಂಜರದಲ್ಲಿ ಸಿಂಹವಂ ಕೂಡಿಕೊಂಡು, ದೇಶಾಂತರದಿಂದ ಬಂದು, ಹೊರಗಣ ರಾಜದ್ವಾರದ ಸಮೀಪದಲ್ಲಿಳುಹಿ, 'ಈ ಪುರದಲ್ಲಿ ಪ್ರೌಢರಿದ್ದರೆ ಪಂಜರವಂ ಖಂಡಿಸದೆ ಸಿಂಹವಂ ಹೊರಕ್ಕೆ ತೆಗೆ[ಯ]ತಕ್ಕದೆಂ'ದು ಭಟರು ಸಾರಿದ್ದ ರಿಂದ, ಈ ಪುರದಲ್ಲಿ ಇರುವ ಜನರೆಲ್ಲರೂ ಕೇಳಿ ಬಂದು, ಪಂಜರವಂ ನೋಡಿ, ಅದರ ವಿವರವು ಯಾರಿಗೂ ತಿಳಿಯದೆ ಇದ್ದದ್ದರಿಂದ, ನೋಡಿ ಸುಮ್ಮನೆ ಹೋದರಲ್ಲದೆ, ಪರೀಕ್ಷಕರು ಯಾರೂ ಕಾಣಿಸುವದಿಲ್ಲಾ ಬುದ್ಧಿ" ಎಂದು ಕೈಮುಗಿದು ಹೇಳುತ್ತಿರಲು,

ಅದಂ ಕೇಳಿ ನಂದರು, 'ತಮ್ಮ ಮಂತ್ರಿಗಳೆಲ್ಲರೂ ಹೋಗಿ ನೋಡಿ ಬರಲಿ' ಎಂದು ನೇಮಿಸಲು, ಅದೇ ರೀತಿಗೆ ರಾಕ್ಷಸನೊಬ್ಬ ಹೊರತು ಉಳಿದ ಮಂತ್ರಿಗಳೆಲ್ಲರೂ ನೋಡಿ, ಅದರ ವಿವರವು ತಿಳಿಯದೆ, ಬಂದು ನಂದರ ಬಳಿಯಲ್ಲಿ ಸುಮ್ಮನೆ ನಿಲ್ಲಲು, ಆಗ ರಾಕ್ಷಸನು ನಂದರಂ ಕುರಿತಿಂತೆಂದನು :

"ರಾಜಕುಮಾರರುಗಳಿರ, ಸಿಂಹಸಮೇತವಾದ ಈ ಪಂಜರವು ಅಮಾನಷಕೃತವಾಗದು. ಮತ್ತೇನೆಂದರೆ, ಇದು ನಮ್ಮೆಲ್ಲರ ಬುದ್ಧಿಪರೀಕ್ಷಾರ್ಥವಾಗಿ ಕಪಟಿಗಳಾದ ಪರರಾಯರಿಂದ ನಿರ್ಮಿಸಿ ಕಳುಹಿಸಿ ಇರುವ ಕಪಟಶಿಲ್ಪವೆಂದು ತೋರುತ್ತಲಿದೆ. ಆಗಲಿ. ಈ ಪುರದ ಜನರು

ಇನ್ನೂ ಬಹಳವಾಗಿ ಇದ್ದಾರು. ಯಾರಲ್ಲಿ ಬುದ್ಧಿಕೌಶಲ್ಯ ಹ್ಯಾಗೆ ಇರುವದೋ. ನಮ್ಮ ಭಟರುಗಳು ಹೋಗಿ, ರಾಜಬೀದಿಗಳಲ್ಲಿ ಸಾರುತ ಬರಲಿ. ಆದರ ಪರೀಕ್ಷಕರು ಉಂಟಾದಾರು. ಎಲ್ಲರೂ ನೋಡಿದ ಬಳಿಕ, ನಾವೇ ತರಿಸಿ ಆ ಪಂಜರವಂ ನೋಡೋಣ'' ಎಂದು ನಂದರಿಗೆ ಹೇಳಿ,

ದೂತರ ಮುಖವಂ ನೋಡಿ, ''ಎಲ್ಕೆ, ಇದರ ಪರೀಕ್ಷಕರು ಈ ಪುರದಲ್ಲಿ ಉಂಟಾದರೆ ರಾಜಸನ್ನಿಧಿಯಲ್ಲಿ ಬಹುಮಾನಕ್ಕೆ ಪಾತ್ರರಾದಾರೆಂದು ಹೇಳಿ ಸಾರುತ, ಜನಗಳೆಲ್ಲರಂ ಕರೆತಂದು ತೋರಿಸಿರ್ಕೆ'' ಎಂದು ರಾಕ್ಷಸನು ಭಟರಿಗೆ ನೇಮಿಸಲು,

ಆದೇ ರೀತಿಗೆ ದೂತರು ರಾಜಬೀದಿಯೆಲ್ಲ ಡಂಗುರವಂ ಹಾಕಿ, ಸಾರುತ್ತ ಬರುವ ದೂತರಂ ಚಂದ್ರಗುಪ್ತನು ಸೆರೆಮನೆ ಬಾಗಿಲಲ್ಲಿ ನೋಡಿ, ''ಎಲ್ಕೆ ಭಟರುಗಳಿರಾ, ಈ ಪುರದಲ್ಲಿ ಆ ಪಂಜರಪರೀಕ್ಷಕರು ಇಷ್ಟು ಮಾತ್ರ ಯಾರೂ ದೊರಕಲಿಲ್ಲವೇ ?'' ಎಂದು ಕೇಳಲು, ಆ ಚಂದ್ರಗುಪ್ತನ ವಾಕ್ಯವಂ ಕೇಳಿದ ಭಟರು ಅವನಂ ನೋಡಿ, ಪ್ರತ್ಯುತ್ತರವ ನ್ನೊರೆಯದೆ ಮುಂದೆ ನಡೆದು, ಜನರಂ ಕರೆತಂದು ಪಂಜರವಂ ತೋರಿಸಲು, ಪುರದ ಆಬಾಲವೃದ್ಧರು ಎಲ್ಲರೂ ನೋಡಿ, ಅದರ ವಿವರವು ಯಾರಿಗೂ ಆಗದೆ ಹಿಂದಕ್ಕೆ ಹೋಗುತ್ತಿರಲು, ಆ ಭಟರು ಪುನಃ ನಂದರಂ ಕುರಿತು :

''ಬುದ್ಧೀ, ಈ ಪುರದ ಆಬಾಲವೃದ್ಧರೆಲ್ಲರೂ ಬಂದು ಪಂಜರವಂ ನೋಡಿ, 'ಇದು ಅಮಾನುಷಕೃತವೇ ಅಹುದೆಂ'ದು ಹೇಳುತ್ತ ಸುಮ್ಮನೆ ಹೋದರಲ್ಲದೆ, ಯಾರಿಗೂ ವಿವರ ವಾಗ[ಲಿ]ಲ್ಲ'' ಎಂದು ಬಿನ್ನೈಸಲು, ಆ ಮಾತಿಗೆ ನಂದರು ವಿಸ್ಮಯಪಟ್ಟು ಆ ಪಂಜರವಂ ಸಮೀಪಕ್ಕೆ ತರಿಸಿ ನೋಡಲು. ಅದು ಅಖಂಡವಾದ ಎರಕದ ಪಂಜರವಾಗಿಯೂ ಅದರಲ್ಲಿ ಇರುವ ಸಿಂಹವು ಮಾಂಸವಂ ಕಚ್ಚುತ್ತ ತಿರುಗುವದಂ ಕಂಡು ಅವರಿಗೂ ಅದರ ವಿವರವಾಗದೆ ಇರಲು, ಪುನಃ ತಮ್ಮ ದೂತರ ಮುಖವಂ ನೋಡಿ, ''ಎಲ್ಕೆ ಈ ಪುರದಲ್ಲಿ ಒಬ್ಬನಾದರೂ ಪರೀಕ್ಷಕನು ದೊರಕದೆ ಹೋದನೇ ? ಇನ್ನೂ ವಿಚಾರಿಸಿರಿ ; ದೊರಕಿದರೆ ವಿಶೇಷ ಬಹುಮಾನಕ್ಕೆ ಪಾತ್ರನಾದಾನು'' ಎಂದು ಹೇಳುತ್ತಲಿರಲು,

ಅದರಲ್ಲಿ ಒಬ್ಬ ದೂತನು ನಂದರಿಗೆ ಕೈಮುಗಿದು, ''ಬುದ್ಧೀ, ಅಪ್ಪಣೆ ಮೇರೆಗೆ ಬೀದಿ ಬೀದಿಗಳಲ್ಲಿ ನಾವು ಸಾರಿಕೊಂಡು ಬರುವ ಅವಸರದಲ್ಲಿ, ಕಾರಾಗೃಹದ ಬಳಿಯಲ್ಲಿ ಸೆರೆಯವನು ಯಾರೋ ಒಬ್ಬನು ನಾವು ಸಾರುವದಂ ಕೇಳಿ, ನಮ್ಮಂ ನೋಡಿ, 'ಎಲ್ಕೆ, ಭಟರುಗಳಿರಾ, ಈ ಪುರದಲ್ಲಿ ಆ ಪಂಜರಪರೀಕ್ಷಕ ಇಷ್ಟು ಮಾತ್ರ ದೊರಕದೆ ಹೋದನೇ' ಎಂದು ಅವನೊಬ್ಬನು ನಮ್ಮಂ ಕೇಳಿದನಲ್ಲದೆ, ಮತ್ತೆ ಯಾರೂ ಹೀಗೆ ಹಾಗೆ ಎನಲಿಲ್ಲ'' ಎಂದು ಬಿನ್ನೈಸಲು, ಆ ಮಾತಿಗೆ ನಂದರು ''ಎಲ್ಕೆ ಭಟರುಗಳಿರಾ, ಅವನಿಂದ ಇದು ಪರೀಕ್ಷಿತವಾದರೆ ಕಾರಾಗೃಹದಿಂದ ಆತನು ಮುಕ್ತನಾಗಿ ಬಹುಮಾನಕ್ಕೆ ಪಾತ್ರನಾದಾನು. ಕರೆತಂದು ತೋರಿಸಿ'' ಎಂದು ನೇಮಿಸಲು, 'ಬುದ್ಧೀ' ಎಂದು ಆ ದೂತರು ಬಂದು ಸೆರೆಮನೆಯಲ್ಲಿ ಇರುವ ಚಂದ್ರಗುಪ್ತನಂ ಕಂಡು, ''ನಿಮಗೆ ಅಪ್ಪಣೆ ಆಗಿ ಇದೆ. ಈ ಪಂಜರಪರೀಕ್ಷೆಯು ನಿಮ್ಮಿಂದ ನಿರ್ವಹಿ[ಸಿ]ದರೆ ರಾಜಸನ್ಮಾನಕ್ಕೆ ಪಾತ್ರರಾಗಿ ಬಂಧನ ದಿಂದ ಮುಕ್ತರಾಗುವಿರಿ. ನೋಡಬಹುದು'' ಎಂದು ಕರೆಯಲು, 'ಒಳ್ಳೆಯದು' ಎಂದು ಚಂದ್ರಗುಪ್ತನು ಅಲ್ಲಿಂದ ಎದ್ದು ಬರುತ್ತಿರಲು,

ಆಗ ರಾಕ್ಷಸನು ದೂರದಿಂದಲೇ ಆ ಪಂಜರವಂ ನೋಡಿ, ತನ್ನ ಮನಸ್ಸಿನಲ್ಲಿ "ಈ ಪಂಜರವು ಕುಹಕಿಗಳಾದ ಪರರಾಯರಿಂದ ನಮ್ಮ ಬುದ್ಧಿಪರೀಕ್ಷಾರ್ಥವಾಗಿ ಕಳುಹಿಸಿ ಇರಬೇಕು. ಪರೀಕ್ಷೆಯಂ ಮಾಡದಿದ್ದರೆ ನಮಗೆ ಅಪಮಾನವು. ಎಲ್ಲರಂತೆ ನಾವು ಹೋಗಿ ನೋಡಿ, ನಮ್ಮ ಬುದ್ಧಿಕೌಶಲ್ಯದಿಂದ ಪರೀಕ್ಷಿಸಿ, ಅದು ಸರಿಬಂದರೆ ಉತ್ತಮವು ; ಅಲ್ಲದೆ ನನ್ನ ಪರೀಕ್ಷಾನಂತರದಲ್ಲಿ ಮತ್ತೊಬ್ಬ ಪರೀಕ್ಷಿಸಿ ಅಹುದೆನಿಸಿಕೊಂಡರೆ, ಜನದಲ್ಲಿ ನನಗೆ ಅಪಮಾನವು. ಈಗ ದೂತ ಹೇಳಿದ ವಾಕ್ಯದಿಂದ ಯಾರೋ ಒಬ್ಬ ಪರೀಕ್ಷಕ ಬರುವನಾಗಿ ತೋರುತ್ತಲಿದೆ. ಅವನು ಪರೀಕ್ಷೆಯಂ ಮಾಡಿದರೆ ಮಾಡಿಕೊಳ್ಳಲಿ. ಅವನೂ ಹಿಂದಾದರೆ ಎಲ್ಲರಿಗೂ ಅಶಕ್ಯವಾದುದಂ ನಾವು ಪರೀಕ್ಷಿಸಿ, ಸರಿಬಾರದಿದ್ದರೆ, ಎಲ್ಲರಂತೆ ನನಗೂ ಅಪಮಾನವಿಲ್ಲ" ಎಂದು ರಾಕ್ಷಸನು ತಟಸ್ಥನಾಗಿ ಇರಲು,

ಅಷ್ಟರಲ್ಲಿ ನಂದರು ಮತ್ತೊಂದು ಸ್ಥಾನಕ್ಕೆ ಹೋಗುತ್ತಲಿರಲು, ಆಗ ಚಂದ್ರಗುಪ್ತನು ಬಂದು ಆ ಪಂಜರವಂ ನೋಡುತ್ತಲಿರಲು, ಆಗ ಅದರ ರಕ್ಷಕರು ಮೊದಲಿನಂತೆ ಕೂಗಿ ಸಾರುತ್ತಿರಲು, ಆಗ ಚಂದ್ರಗುಪ್ತನು ತನ್ನ ಮನಸ್ಸಿನಲ್ಲಿ, "ಈ ಪಂಜರವು ಅಖಂಡವಾಗಿ ಎರಕವಾಗಿ ಇದೆ. ಇದರಲ್ಲಿ ಇರುವ ಸಿಂಹವು ಪೋಷಕನು ಕೊಟ್ಟ ಮಾಂಸಕ್ಕೆ ಎರಗುತ್ತ, ಅವನು ಪಂಜರವಂ ಬಳಸಿ ಬಂದರೆ ಅವ[ನು] ಬಂದ ಕಡೆಯಲ್ಲಿ ಮಾಂಸಾಪೇಕ್ಷೆಯಿಂದ ಒಳಗೆ ಬಳಸಿ ಬರುತ್ತಲಿದೆ. ಪಂಜರವೂ ಅಖಂಡವಾಗಿ ಒಳಗಿನ ಸಿಂಹವೂ ಮಾಂಸಾಭಿ ಲಾಷಿಯಾಗಿ ಇರುವದರಿಂದ ಇದು ಅಮಾನುಷಕೃತವೆಂದು ಹೇಳುವುದಕ್ಕೆ ಆಸ್ಪದ ವಾಯಿತು" ಎಂದು ತಿಳಿಯುತ್ತ, ಅದರ ರಕ್ಷಕರು ಮಾಂಸವಂ ಕೊಡುವದಂ, ಆ ಸಿಂಹವು ಗ್ರಹಿಸುವದಂ ಸಹ ನೋಡಿ, ಅದರ ಭಾವವಂ ತನ್ನ ಮನಸ್ಸಿಗೆ ತಂದುಕೊಂಡು, ಸಮೀಪದಲ್ಲಿದ್ದ ರಾಜಭಟರಿಗೆ ಹೇಳಿ, ಮಾಂಸಖಂಡವಂ ತರಿಸಿ, ಅವರಂತೆ ಚಂದ್ರ ಗುಪ್ತನೂ ಅದಂ ಸಿಂಹಕ್ಕೆ ನೀಡಿ ಕೊಡಲು, ಆಗ ಆ ಸಿಂಹವು ಆ ಮಾಂಸಾಭಿಮುಖವಾಗದೆ ಸುಮ್ಮನಿರಲು,

ಆ ಪಂಜರರಕ್ಷ[ಕ]ರಂ ನೋಡಿ, "ಏನ್ಯೆ, ನಾನು ಕೊಟ್ಟ ಮಾಂಸವಂ ಯಾಕೆ ಸಿಂಹವು ಗ್ರಹಿಸಲಿಲ್ಲವೆಂ"ದು ಚಂದ್ರಗುಪ್ತ ಕೇಳಲು, ಆ ಮಾತಿಗೆ ಆ ಪಂಜರರಕ್ಷಕರು ಮನದಲ್ಲಿ ಆತಂಕಪಡುತ್ತ, "ಅಯ್ಯ ನೋಟಕನೇ, ಸಿಂಹವು ಅಮಾನುಷಕೃತವಾದುದರಿಂದ ಅದರ ಉಪಾಸಕರ ಕೈ ಆಹಾರವಂ ಗ್ರಹಿಸುವದಲ್ಲದೆ ಅನ್ಯರಂ ಭಾವಿಸುವದುಂಟೇ ?" ಎಂದು ಅಪಲಾಪವಾಕ್ಯವಂ ಹೇಳಲು, ಅದಂ ಅಪಲಾಪವಾಕ್ಯವೆಂದು ತಿಳಿಯುತ್ತ ಪುನಃ ಯೋಚಿ ಸುತ್ತಿದ್ದನು.

"ಈ ಪಂಜರವು ಅಖಂಡವಾದುದರಿಂದ ಜೀವಸಿಂಹಪ್ರವೇಶಕ್ಕೆ ನಿಮಿತ್ತವಿಲ್ಲ. ಈ ಪಂಜರರಕ್ಷಕನು ಪಂಜರವಂ ಬಳಸಿ ಬರುತ್ತಲಿದ್ದರೆ, ಈ ಸಿಂಹವೂ ಮಾಂಸವಂ ಕೊಡುವನಲ್ಲಿ ಮಾಂಸಾಭಿಲಾಷೆಯಿಂದಲೋ ಎಂಬಂತೆ, ಅವ[ನು] ಬಂದ ಕಡೆಗೆ ತಾನು ತಿರುಗುತ್ತಲಿದೆ ; ಅವನು ದೂರಸ್ಥನಾದರೆ, ತಿರುಗುವ ಆಯಾಸದಿಂದಲೋ ಎಂಬ ಹಾಗೆ ಕಂಠವನ್ನಲುಗಿಸುತ್ತ ಶ್ವಾಸವಂ [ಬಿಡುವಂ]ತೆ ಜನಗಳಿಗೆ ತೋರುತ್ತಲಿದೆ. ಪಂಜರ ರಕ್ಷಕನು ನೀಡಿಕೊಟ್ಟ ಮಾಂಸದಲ್ಲಿ ಆಸಕ್ತಿಯಿಂದಲೋ ಎಂಬಂತೆ ಪುಚ್ಛಾಗ್ರವಂ ಶಿರಸ್ಸಿನಲ್ಲಿ ಕುಣಿಯಿಸುತ್ತ, ಮಾಂಸವಂ ಕಚ್ಚುವದರಿಂದ ಜೀವಸಿಂಹವೇ ಸರಿಯೆಂದು

ತೋರುತ್ತಲಿದೆ. ಹೀಗಿದ್ದರೂ ಇದು ಜೀವಸಿಂಹವಾಗದು. ಏನೆಂದರೆ, ಅರಗು ಮೇಣ ಮುಖ್ಯವಾದ ಸರಿಗಳಿಂ ಲಿಪ್ತವಾದ ವಸ್ತ್ರಕ್ಕೆ ಸಿಂಹದ ರೋಮಗಳಂ ಹತ್ತಿಸಿ, ಅದಂ ಚರ್ಮದಂತೆ ಮಾಡಿ, ಹೊರಗಿದ್ದ ಪುರುಷನ ಕೌಶಲ್ಯದಿಂದ ಮಾಂಸವಂ ಕೊಡುವ ರಂಧ್ರಮುಖದಿಂದ ಅದರ ಅಸ್ಥಿಸ್ಥಾನಕ್ಕೆ ಕಬ್ಬಿಣದ ಶಲಾಕೆಗಳಂ ಜೋಡಿಸಿ, ಪುಚ್ಛ ಕಂಠಗಳಿಗೆ ರೋಮಸಹಿತವಾದ ಉಕ್ಕಿನ ತಂತಿಗಳಂ ಜೋಡಿಸಿ, ಅಲ್ಲಿಗಲ್ಲಿ ಬಣ್ಣಂಗಳಂ ಎರೆದು ಇದ್ದೀತು. ಅದರಿಂದ ಕೃತ್ರಿಮಸಿಂಹವೇ ಆಹುದಾದೀತು.

ಮತ್ತೆ ಒಂದು ಪರೀಕ್ಷೆಯಂ ಮಾಡುವೆನೆಂದು ಆನೆಲಾಯಕ್ಕೆ ಹೇಳಿ ಕಳುಹಿಸಿ, ಮರಿಯಾನೆಗೆ ಕಣ್ಣುಗಳಂ ಕಟ್ಟಿಸಿ, ಪಂಜರವಂ ಬಳಸಿ ಬರುವಂತೆ ಮಾಡಲು, ಆ ಸಿಂಹವು ಅದಂ ನೋಡಿ ಆರ್ಭಟಿಸದೆ ಇರಲು, ಕಪಟಸಿಂಹವು ಸಿದ್ಧವೆಂದು ತಿಳಿದು, ಆ ಸಿಂಹವು ಚಲಿಸುವದಕ್ಕೆ, ಮಾಂಸವಂ ಚುಚ್ಚಿಕೊಡುವದಕ್ಕೆ ಸಾಧನವಾದ ಶಲಾಕವಂ ಪಿಡಿದಿರುವ ಪಂಜರರಕ್ಷಕನಂ ನೋಡಿ, ಈತನ ಕೈಶಲಾಕವು ಸೂಜಿಕಲ್ಲಿನ ಸತ್ವದಿಂ ಮಾಡಿ ಇರಬೇಕು. ಇದರ ತುದಿಮಾಂಸಕ್ಕೆ ಸಿಂಹವೆರಗಿ ಕಚ್ಚುವದರಿಂದಲೂ ಶಲಾಕಹಸ್ತನಾಗಿ ಇರುವ ಈ ಪುರುಷ ತಿರುಗಿದ ಮುಖದಲ್ಲಿ ಒಳಗೆ ಸಿಂಹವು ತಾನೂ ತಿರುಗುತ್ತಿರುವದರಿಂದ ಲೋಹವ ನ್ನಾಕರ್ಷಿಸುವ ಧರ್ಮವು ಸೂಜಿಕಲ್ಲಿನ ಸ್ವಭಾವವು" ಎಂದು ನಿಶ್ಚೈಸಿ, ಆ ಪಂಜರ ರಕ್ಷಕನಂ ನೋಡಿ, "ಎಲೈ ನಿನ್ನ ಕೈಶಲಾಕವಂ ಬಿಟ್ಟು ಪಂಜರವಂ ಬಳಸಿಬಾರೆ"ನಲು, ಅದರ ರಕ್ಷಕನು ಈ ವಾಕ್ಯವಂ ಕೇಳಿ, ತನ್ನ ಮನಸ್ಸಿನಲ್ಲಿ "ಯಾರಿಗೂ ತಿಳಿಯದಿರುವ ಈ ಶಲಾಕವಂ ಈ ನೋಟಕನು ಆಕ್ಷೇಪಿಸುತ್ತಲಿದ್ದಾನೆ. ಕಪಟಶಿಲ್ಪೋಪಾಯ ಪರೀಕ್ಷೆಯಲ್ಲಿ ಈತನು ಶಲಾಕಪರೀಕ್ಷಕನಂತೆ ತೋರುತ್ತಲಿದೆ. ನಮ್ಮ ಕಪಟವು ಈತನಿಂದ ಪ್ರಕಟಕ್ಕೆ ಬರುವಂತೆ ತೋರುತ್ತಲಿದೆ. ಈತನ ಆಕ್ಷೇಪಕ್ಕೆ ಹೀಗೆ ಹೇಳಬೇಕೆಂ"ದು ನಿಶ್ಚೈಸಿ, ಚಂದ್ರ ಗುಪ್ತನಂ ಕುರಿತು,

"ಅಯ್ಯ ನೋಟಕರೇ, ಜನ್ಮಾರಭ್ಯ ಶಲಾಕಾಗ್ರದ ಮಾಂಸದಿಂದಲೇ ಜೀವಿಸುವ ಈ ಸಿಂಹವು ಶಲಾಕವಂ ಬಿಟ್ಟರೆ ಮಾಂಸಾಹಾರರಹಿತವಾಗಿ ರಿಕ್ತಹಸ್ತನಾದ ನನ್ನಂ ನೋಡಿ ಸುಮ್ಮನಿರುವದು. ನನ್ನಲ್ಲಿ ಮುಂದೆ ಪೋಷಕವಿಶ್ವಾಸವಂ ಬಿಡುವದು. ಆದರಿಂದ ಶಲಾಕವಂ ಬಿಡಕೂಡದು" ಎಂದು ಹೇಳುವ ಪಂಜರರಕ್ಷಕನಂ ನೋಡಿ, "ಎಲೈ ಪ್ರಿಯ ನೆದುರಿಗೆ ವಿಲಾಸವಂ ತೋರುವ ಜಾರಸ್ತ್ರೀಯಂತೆ ಆಯಸ್ಕಾಂತದೆದುರಿಗೆ ಕೃಷ್ಣಲೋಹ ಶಲಾಕಾಯುಕ್ತವಾದ ಈ ಕಪಟಸಿಂಹವು ಹಲವು ಪರಿ ಚಲಿಸುವದು ಆಶ್ಚರ್ಯವೇನು ? ಇದರಂತೆ ಅರಗು ಮೇಣಗಳು ಅಗ್ನಿಸೆಕೆಗೆ ಕರಗುವದೆಂಬರ್ಥವು ಲೋಕಪ್ರಸಿದ್ಧವಲ್ಲವೇ? ಇನ್ನು ಈ ಕಪಟವಾಕ್ಯವ ಹೇಳುವದಂ ಸಾಕುಮಾಡೆಂ"ದು ಚಂದ್ರಗುಪ್ತನು ಹೇಳು ತ್ತಿರಲು, ಅದಂ ಕೇಳಿ ಆ ಪಂಜರರಕ್ಷಕರು ಲಜ್ಜೆಯಿಂ ತಲೆವಾಗಿ, ಕೈಮುಗಿದು, 'ತಾವು ಜಿತರಾದೆವೆಂ'ದು ಹೇಳುತ್ತ, ಶಲಾಕವಂ ಚಂದ್ರಗುಪ್ತನ ಮುಂದೆ ಒಪ್ಪಿಸಲು,

ಆಗ ಚಂದ್ರಗುಪ್ತನು ಹೀಗೆಂದು ಆಲೋಚಿಸುತ್ತಿದ್ದನು : "ಕಪಟಶಿಲ್ಪವಾದ ಈ ಪಂಜರವಂ ದೇಶಾಂತರದಿಂದ ಪ್ರಯತ್ನಪೂರ್ವಕವಾಗಿ ತಂದು, ಈ ಆಸ್ಥಾನದ ಬಳಿ ಯಲ್ಲಿ ಇಳುಹಿ, ಸಾರುವದಕ್ಕೆ ನಿಮಿತ್ತವೇನೆಂದರೆ, ನಂದರು ಕಪಟೋಪಾಯದಿಂದ ಮೌರ್ಯರಂ ಸಂಹರಿಸಿದರೆಂಬ ವಾರ್ತೆಯು ದೇಶಾಂತರದಲ್ಲಿ ಪ್ರಸಿದ್ಧವಾದುದರಿಂದ,

ಅದಂ ಕೇಳಿ ಪರರಾಯರು ಯಾರೋ, ಕಪಟಿಗಳಾದ ನಂದರ ವಿಡಂಬನಾರ್ಥವಾಗಿ ಅಶಕ್ಯವಾದ ಕಪಟಶಿಲ್ಪವಂ ರಚಿಸಿ, ಇಲ್ಲಿಯ ಜನರ ಬುದ್ಧಿಪರೀಕ್ಷಾರ್ಥವಾಗಿ ಕಳುಹಿಸಿದವರಾಗಿ ಇರಬೇಕು. ಇದರಿಂದ ನಂದರಂ ಹೇಳನವಂ ಮಾಡುವ ಪರರಾಯರು ಉಂಟೆಂದು ಹೇಳಬೇಕು. ಆ ಕಪಟವು ಇಲ್ಲಿ ಪ್ರಕಟವಾದುದರಿಂದ ಕಪಟಿಗಳಾದ ಪರರಾಯರಂ ದಂಡಿಸುವದಕ್ಕೆ ಶಕ್ತನಾದ ಅಮಾತ್ಯ ರಾಕ್ಷಸನು ಅವರ ಮುಖಭಂಗವಂ ಮಾಡುವದಕ್ಕೆ ಅವರ ಕಡೆ ಪಂಜರರಕ್ಷಕರು 'ಈ ಸಿಂಹವು ಅಮಾನುಷಕೃತ'ವೆಂದು ಆಸ್ಥಾನದಲ್ಲಿ ಆ[ಡಿ]ದ ಅನ್ಯತವಾಕ್ಯವನ್ನು ಆಕ್ಷೇಪಿಸುತ್ತ, ಇವರಿಗೆ ಯಥೋಕ್ತ ದಂಡನೆಯಂ ಮಾಡಿಯಾನು. ಹೀಗೆ ನಡೆದರೆ ನನ್ನ ನಿಮಿತ್ತದಿಂದ ಇವರಿಗೆ ದಂಡನೆ ಆದಂತೆ ಆಗುವದು ಮತ್ತು ಈ ಪಂಜರನಿಮಿತ್ತದಿಂದ ನನಗೆ ಬಂಧನವಿಮೋಚನವಾಗುವಂತೆ ತೋರುತ್ತಲಿದೆ. ಅದರಿಂದ ಈ ದೂತರ ದೇಶವಂ ತಿಳಿದು ಈಗಲೇ ಇಲ್ಲಿಂದ ಚದುರಿ ಹೋಗುವಂತೆ ಮಾಡಬೇಕು" ಎಂದು ನಿಶ್ಚೈಸಿ,

ಚಂದ್ರಗುಪ್ತನು ಆ ಪಂಜರರಕ್ಷ[ಕ]ರ ಉದ್ಘೋಷಣದಾಕಾರವಂ ನೋಡಿ, 'ಇವರು ಪಾರ್ವತೇಯರು' ಎಂದು ನಿಶ್ಚೈಸಿ, "ಎಲೈ, ನಿಮ್ಮ ದೇಶ ಯಾವುದೆಂ"ದು ಕೇಳಲು, "ಸ್ವಾಮಿ, ಗಟ್ಟಬೆಟ್ಟವಂ ಸೇರಿ ಪರರಿಂ ಜೀವಿಸುತ್ತ ಕಾಡ ಜೋಗಿಗಳಾಗಿ ತಿರುಗುತ್ತಿರುವವರಿಗೆ ಈ ದೇಶವೆಂದು ಪರಿಮಿತವುಂಟೇ ?" ಎಂದೆನಲು, ಅದಂ ಕೇಳಿ "ಪರ್ವತರಾಜ್ಯಾಧಿಪತಿಯಾದ ಅರಸಿನ ಭೃತ್ಯರೆಂದು ಗೂಢಾರ್ಥದಿಂದ ಈ ದೂತರು ಸೂಚಿಸಿದಂತಾಯಿತು" ಎಂದು ನಿಶ್ಚೈಸಿ, ಆ ದೂತರ ಮುಖವಂ ಚೆನ್ನಾಗಿ ನೋಡಿ, ಚಂದ್ರಗುಪ್ತನು ಈಗಲೇ ಹೊರಟುಹೋಗುವಂತೆ ಕಣ್ಣುಸನ್ನೆಯಿಂದ ಸೂಚನೆಯಂ ಮಾಡಲು, ಅದಂ ತಿಳಿದು, ಆ ಪಂಜರರಕ್ಷಕರು "ತಾವು ಇಲ್ಲಿ ಇದ್ದರೆ ತಮಗೆ ಏನೋ ಅನಿಷ್ಟ ತಗುಲುವದಾಗಿ ಇದೆ, 'ಇಲ್ಲಿಂದ ಹೊರಟು ಹೋಗೀ' ಎಂದು ಚಂದ್ರಗುಪ್ತನು ಕಣ್ಣುಸನ್ನೆಯಿಂದ ಸೂಚಿಸಿದನು" ಎಂದು ತಿಳಿದು, ಅವರು ಜನದ ಸಂದಣೆಯಲ್ಲಿ ತಮ್ಮ ಸಾಮಗ್ರಿಗಳಂ ಬಿಟ್ಟು ಭೈರಾಗಿ ವೇಷದಿಂದ ಹೊರಟು ಹೋಗುತ್ತಿರಲು,

ಆಗ ಚಂದ್ರಗುಪ್ತನು ರಾಜಭಟರಂ ನೋಡಿ, "ಎಲೈ, ಈ ಸಿಂಹವು ಪರೀಕ್ಷಿತವಾಯಿತು. ಕೃತ್ರಿಮವಾದುದರಿಂದ ಜಡಸಿಂಹವೆಂದು ಪ್ರಭುಗಳಿಗೆ ಬಿನ್ನೈಸತಕ್ಕುದು" ಎಂದು ಹೇಳಲು, ಅದಂ ಕೇಳಿ ದೂತರು ಹೋಗಿ, ನಂದರಿಗೆ ಕೈಮುಗಿದು "ಬುದ್ಧೀ, ಚಂದ್ರಗುಪ್ತನೆಂಬವನು ಮಾಡಿದ ಪರೀಕ್ಷೆಯಿಂದ ಆ ಸಿಂಹವು ಜಡಸಿಂಹವಾಯಿತಂತೆ. ಅದರ ರಕ್ಷಕರು 'ಜಿತರಾದೆವೆಂ'ದು ಹೇಳುತ್ತಾರೆ, ಬುದ್ಧೀ" ಎನಲು,

ಅದಂ ಕೇಳಿ ನಂದರು ಮನಸ್ಸಿನಲ್ಲಿ ಪಂಜರಪರೀಕ್ಷೆಗೆ ಸಂತೋಷಪಡುತ್ತ, ಶಿಥಿಲನಾಗಿ, ಶತ್ರುಶೇಷನಾಗಿ, ಜ್ಞಾತಿಯಾದ ಚಂದ್ರಗುಪ್ತನಿಂದಲೇ ಆದ ಪರೀಕ್ಷೆಗೆ ಮನಸ್ಸಿನಲ್ಲಿ ವ್ಯಸನಗೊಂಡು, ಅದಂ ನೋಡುವ ಕುತೂಹಲದಿಂ ಬಂದು ದೂರದಿಂದಲೇ ಪಂಜರವಂ ನೋಡಿ, "ಎಲೈ ಚಂದ್ರಗುಪ್ತನೆ, ಈ ಪಂಜರಸಿಂಹವು ಹ್ಯಾಗೆ ಜಡವಾದುದು ? ಈ ಕಪಟ ಹ್ಯಾಗೆಂ"ದೆನಲು, 'ಬುದ್ಧೀ' ಎಂದು ಕೈಮುಗಿದು, 'ಪರಾಂಬರಿಸಬೇಕೆಂ'ದು ಹೇಳಿ, ಅಗ್ನಿಯಂ ತರಿಸಿ, ಅದರ ಸೆಕೆಯಲ್ಲಿ ಪಂಜರವನ್ನಿರಿಸಲು, ಅದು ಅರಗು ಮೇಣದ ಸರಿಯಿಂ ಮಾಡಿದ್ದರಿಂದ ಕರಗಿ ಅದರ ದ್ರವವು ಹೊರಕ್ಕೆ ಪ್ರವಹಿಸುತ್ತ, ಕಬ್ಬಿಣದ ಶಲಾಕ

ಉಳಿದಿರಲು, ಅದಂ ನೋಡಿ ನಂದರು ಸಂತೋಷಪಟ್ಟವರಂತೆ, "ಈತನಿಂದ ಇದರ ಪರೀಕ್ಷೆ ಆದದ್ದು ವಿಶೇಷವೆಂ"ದು ಹೇಳಲು, ಆ ಮಾತಂ ಕೇಳಿದ ವಕ್ರನಾಸನೆಂಬ ವೃದ್ಧಮಂತ್ರಿ ಇಂತೆಂದನು :

"ಜೀಯ, ಪರರಾಯರ ದೇಶದಿಂದ ಈ ಪುರದ ಜನದ ಬುದ್ಧಿಪರೀಕ್ಷಾರ್ಥವಾಗಿ ಕಳುಹಿಸಿ ಇದ್ದ ಪಂಜರಪರೀಕ್ಷೆಯು ಕೂಡ, ನಿಮ್ಮ ಘನತೆತನದ ಪುತ್ರನಿಗೆ ಅಲ್ಲದೆ ಮತ್ತೆ ಯಾರಿಗೂ ಗೋಚರವಾಗಲಿಲ್ಲ. ಈತನಂ ರಕ್ಷಿಸಿದರೆ, ಸಭೆಯಲ್ಲಿ ಆಡಿದ ಸತ್ಯವಚನವು ತಪ್ಪಲಾರದು. ಅನಾಥನಾಗಿ, ಕೃಶನಾಗಿ ತಮ್ಮನ್ನೇ ನಂಬಿ ಇರುವ ಈ ಚಂದ್ರಗುಪ್ತನಿಗೆ ಸ್ವಲ್ಪ ಜೀವನವಂ ನೇಮಿಸಿ, ಇದ್ದುಕೊಂಡು ಇರುವಂತೆ ಅಪ್ಪಣೆಯಾದರೆ, ತಮ್ಮ ಕೆಲಸಕ್ಕೆ ಬಂದಾನು" ಎಂದು ಬಿನ್ನೈಸಲು,

ಅದಂ ಕೇಳಿದ ನಂದರು, ತಮ್ಮ ಮನಸ್ಸಿನಲ್ಲಿ "ಶತ್ರುಶೇಷನಾದ ಈ ಚಂದ್ರಗುಪ್ತನು ಜೀವಂತನಾಗಿ ಪುನಃ ನಮ್ಮ ಎದುರಿಗೆ ಬಂದನು. ಇವನಂ ಪುನಃ ಬಂಧನಕ್ಕೆ ತಗುಲಿಸಿದರೆ, ಸಭೆಯಲ್ಲಿ ನಾವು ಆಡಿದ ವಚನವು ಅನ್ಯತವಾಗಿ, ಜನರು ಹೇಳಿಕೊಂಡಾರು ; ಸ್ವಲ್ಪಾಧಿ ಕಾರವಂ ಕೊಟ್ಟು ಜೀವನಕ್ಕೆ ಕಲ್ಪಿಸಿದರೆ, ಮುಂದೆ ಇವನಿಂದ ಹ್ಯಾಗೆ ಬರುವದೋ ?" ಎಂದು ಕರ್ತವ್ಯ ತಿಳಿಯದೆ ಸುಮ್ಮನೆಯಿರುವ ನಂದರಂ ನೋಡಿ,

ಸುಮತಿಯೆಂಬ ಮಂತ್ರಿಯು ತನ್ನ ಮನಸ್ಸಿನಲ್ಲಿ, "ಈ ವೃದ್ಧಮಂತ್ರಿ ಹೇಳಿಕೊಂಡ ಬಿನ್ನಪವು ನಂದರಿಗೆ ಅರ್ಧಾಂಗೀಕಾರವಾಗಿ ತೋರಿ ಇರಬೇಕು. ಈಗಲೇ ಇನ್ನೊಂದು ಪ್ರಕಾರ ಹೇಳಿ ಈತನಿಗೆ ಜೀವನವಂ ಕಲ್ಪಿಸದೆಯಿದ್ದರೆ, ಮತ್ತೇನಾದರೂ ಯೋಚಿಸಿ ಕೊಂಡು ಪುನಃ ಈತನಂ ಬಂಧನಕ್ಕೆ ತಗುಲಿಸಿಯಾರು" ಎಂದು ತಿಳಿದು ನಂದರಿಗೆ ಕೈಮುಗಿದಿಂತೆಂದನು :

"ಜೀಯಾ, ಈ ಚಂದ್ರಗುಪ್ತನು ಸ್ವಾಮಿಯವರ ಪ್ರಸಾದದಿಂದಲೇ ಜೀವಿಸಬೇಕಾಗಿ ಇರುವದರಿಂದ, ಈತನಿಗೆ ಮತ್ತೆ ಯಾವ ಅಧಿಕಾರವಂ ನೇಮಿಸದೆ, ಬ್ರಾಹ್ಮ[ಣ]ರು ಭುಂಜಿಸುತ್ತಲಿರುವ ಅನ್ನಸತ್ರಾಧಿಕಾರವಂ ನೋಡುತ್ತ ಇರುವಂತೆ ನೇಮಿಸಿದರೆ, ಅಷ್ಟು ಮಾತ್ರ ಆ ಅಧಿಕಾರವಂ ನೋಡುತ್ತ, ಜೀವಿಸಿಕೊಂಡು ಇದ್ದಾನು. ಅದರ ಗುಣ ದೋಷಗಳು ಚಿತ್ತಕ್ಕೆ ವೇದ್ಯವಾಗಿ ಇದೆ" ಎಂದು ಬಿನ್ನೈಸಲು, ಅದಂ ಕೇಳಿ ನಂದರು ರಾಕ್ಷಸನ ಮುಖವಂ ನೋಡಲು, ಆತನು ರಹಸ್ಯವಾಗಿಂತೆಂದನು :

"ಅಯ್ಯ ಪ್ರಭುಗಳಿರಾ, 'ಚಂದ್ರಗುಪ್ತನು ತಾನು ಪ್ರಭುವಾದ ವೃದ್ಧರಾಯರಿಗೆ ಪೌತ್ರ ನಾಗಿ ಇರುವದರಿಂದ ಈ ಸ್ವಲ್ಪಾಧಿಕಾರವು ತನಗೆ ಯೋಗ್ಯವಲ್ಲವೆಂದು ಕೆಲವು ದಿವಸದ ಮೇಲೆ ಆ ಅಧಿಕಾರವಂ ವಿಚಾರಿಸದೆ ಉಪೇಕ್ಷೆಯಂ ಮಾಡಿಯಾನು ; ಆಗ ಬ್ರಾಹ್ಮಣಾ ರಾಧನೆಯಲ್ಲಿ ನ್ಯೂನತೆ ಉಂಟಾಗಿ ಅವರ ಶಾಪದಿಂದಲೇ ನಷ್ಟನಾದಾನು' ಎಂಬಂತೆ ಸುಮತಿಯ ಮನೋಗತವು. ಇದೇ ಅದರ ಗುಣದೋಷವು" ಎಂದು ತಿಳುಹಿಸಲು,

ಆ ಮಾತಿಗೆ ನಂದರು ಸಮ್ಮತಿಪಟ್ಟು 'ಹಾಗೆ ಮಾಡಬಹುದೆಂ'ದು ಹೇಳಲು, ಆ ಮಾತಿಗೆ ಸುಮತಿಯೆಂಬ ಮಂತ್ರಿಯು ಚಂದ್ರಗುಪ್ತನಂ ಸಮೀಪಕ್ಕೆ ಕರೆದು, "ಓಯಿ ಚಂದ್ರಗುಪ್ತನೇ, ನೀನು ಮಾಡಿದ ಸಿಂಹಪಂಜರಪರೀಕ್ಷೆಗೆ ಪ್ರಭುಗಳು ಸುಪ್ರೀತರಾಗಿ, ನಿನಗೆ ನೇಮಿಸಿ ಇರುವ ಅಧಿಕಾರವೇನೆಂದರೆ, ನೀನು ಪ್ರಭುಗಳಿಗೆ ಸ್ವಜನವಾದುದರಿಂದ

ತಾವೇ ಜಾಗ್ರತೆಯಾಗಿ ವಿಚಾರಿಸುವ ಬ್ರಾಹ್ಮಣಭೋಜನದ ಸತ್ರದ ವಿಚಾರವಂ ನೀನೆ ವಿಚಾರಿಸಿ ಕೊಂಡು ಇರುವಂತೆ ನೇಮಿಸಿ ಇದ್ದಾರೆ. ಮತ್ತೆ ನಿನ್ನ ಮನೋಗತವೇನಂ"ದು ಕೇಳಲು, ಆ ಮಾತಿಗೆ ಚಂದ್ರಗುಪ್ತನು ದಂಡಪ್ರಣಾಮವಂ ಗೈದು ನಿಂತು, "ಮಹಾಸ್ವಾಮಿಯವರ ಅಪ್ಪಣೆ ಮೇರೆಗೆ ಮತ್ತೊಂದನ್ನಪೇಕ್ಷಿಸದೆ ಅನ್ನಸತ್ರಾಧಿಕಾರವಂ ವಿಚಾರಿಸುತ್ತ, ಅನುಗ್ರಹಕ್ಕೆ ಪಾತ್ರನಾಗಿ ಇಹೆನು" ಎಂದು ಬಿನ್ನೈಸಲು.

ಆಗ ಸುಮತಿಯು ಕಾರಾಗೃಹದ ದೂತರಂ ನೋಡಿ. "ಎಲೈ, ಈ ಚಂದ್ರಗುಪ್ತನಂ ಕಾವಲಿಂದ ಬಿಡು[ವ] ಹಾಗೆ ಅಪ್ಪಣೆಯಾಗಿ ಇದೆ : ಇನ್ನು ತಡೆಯದಿರಿ" ಎಂದು ಹೇಳಿ, ಚಂದ್ರಗುಪ್ತನಂ ಕಳುಹಿಸಲು, ಆಗ ರಾಕ್ಷಸನು ಪಂಜರಸಿಂಹವು ಅಮಾನುಷಕೃತವೆಂದು ಹೇಳಿ ಸಾರಿದ ಪಂಜರರಕ್ಷಕರ ವಾಕ್ಯವಂ ನೆನೆದು, ಕಪಟಶಿಲ್ಪಮುಖದಿಂದ ನಮ್ಮನ್ನು ಹೇಳನವಂ ಮಾಡಲೆಣಿಸಿದ ಪರರಾಯರಿಂ ಪ್ರೇಷಿತರಾದ ಪಂಜರರಕ್ಷಕರಿಗೆ ದಂಡನೆಯಂ ಗೈಯದೆ ಬಿಟ್ಟರೆ ಆ ದುಷ್ಟ ಅರಸುಗಳಿಗೆ ಮುಖಭಂಗವಾಗದೆಂದು ತಿಳಿದು, ತನ್ನ ದೂತರ ಮುಖವಂ ನೋಡಿ, "ಎಲೈ, ಆ ಪಂಜರರಕ್ಷಕರಂ ಕರೆದು ತನ್ನಿ" ಎನಲು, 'ಬುದ್ಧೀ' ಎಂದು ಹೋಗಿ, ಪುರದ ಒಳ ಹೊರಗೆ ಎಲ್ಲಾ ಅವರಂ ಹುಡುಕಿ ಕಾಣದೆ, ಬಂದು, "ಬುದ್ಧೀ, ಆ ಪಂಜರರಕ್ಷಕರಂ ಎಲ್ಲಿಯೂ ಕಾಣೆವು. ತಮ್ಮ ತಮ್ಮ ಸಾಮಗ್ರಿಗಳಂ ಬಿಟ್ಟು ಎಲ್ಲಿಯೋ ಪಲಾಯನವಂ ಗೈದಿದರು [ಎಂದು ಹೇಳಲಾಗಿ],

"ಎಲೈ, ಪುನಃ ಹುಡುಕಿ, ಸಿಕ್ಕಿದರೆ ಅವರಂ ಕಾವಲಲ್ಲಿ ಇಟ್ಟು ಬಂದು ತಿಳುಹಿಸಿ" ಎಂದು ಹೇಳಿ, ರಾಕ್ಷಸನು ತನ್ನ ಗೃಹಕ್ಕೆ ಹೋಗುತ್ತಿರಲು, ಆಗ ಚಂದ್ರಗುಪ್ತನು ಗಂಗಾನದಿಯಲ್ಲಿ ಸ್ನಾನವಂ ಮಾಡಿ ಪಿತೃಸೋದರವರ್ಗಕ್ಕೆ ತಿಲಾಂಜಲಿಯಂ ಕೊಟ್ಟು, ಆ ಬಳಿಕ ಅನ್ನಸತ್ರದ ಅಧಿಕಾರವಂ ವಿಚಾರಿಸಿಕೊಂಡಿದ್ದನು, ಎಂಬಲ್ಲಿಗೆ

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಶ್ರೀ ಮಹೀಶೂರನರಪತಿ ಶ್ರೀ ಕೃಷ್ಣರಾಜೇಂದ್ರಾಶ್ರಿತ ಹೊಯಿಸಣಿಗೆ ಕುಲಸಂಭೂತ ನಾರಾಯಣ ಶರ್ಮ ವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ಚಂದ್ರಗುಪ್ತ ಬಂಧವಿಮೋಚನವೆಂಬ ದ್ವಿತೀಯಾಶಯಃ ಸಮಾಪ್ತಃ

ತೃತೀಯಾಶಯ : ಚಂದ್ರಗುಪ್ತ ಚಾಣಕ್ಯರಿಗೆ ಪರ್ವತರಾಜ್ಯಪ್ರವೇಶವು

ಈ ರೀತಿಯಲ್ಲಿ ನಂದರ ಆಜ್ಞಾನುಸಾರವಾಗಿ ಚಂದ್ರಗುಪ್ತನು ಅನ್ನಸತ್ರಾಧಿಕಾರವಂ ಮಾಡುತ್ತಾ, ಭಕ್ತಿಯಿಂದ ಬ್ರಾಹ್ಮಣರಂ ಆರಾಧಿಸುತ್ತಿರಲು, ಮತ್ತೆ ಕೆಲವು ದಿನದ ಮೇಲೆ, ಒಂದಾನೊಂದು ಸಮಯದಲ್ಲಿ ದಂಡ ಕೃಷ್ಣಾಜಿನಗಳಂ ಧರಿಸಿ, ಪ್ರಜ್ವಲಿಸುವ ಅಗ್ನಿಯೋ ಎಂಬಂತೆ ಮಹಾತೇಜಸ್ವಿಯಾಗಿ, ಆ ಅನ್ನಸತ್ರಮಾರ್ಗದಿಂದ ನೈಮಿಷಾರಣ್ಯ ಮಾರ್ಗದಲ್ಲಿ ಹೋಗುತ್ತಿರುವ ಚಾಣಕ್ಯನೆಂಬ ಬ್ರಾಹ್ಮಣೋತ್ತಮನ ಪಾದಕ್ಕೆ ಮಾರ್ಗದಲ್ಲಿರುವ ಗರುಕೆಹಂಬು ಸುತ್ತಿಕೊಳ್ಳಲು, ಮುಂದೆ ನಡೆಯುವ ವೇಗದಿಂದ ಮುಗ್ಗರಿಸಿ ಭೂಮಿಯಂ ಹಿಡಿಯಲು, ಆತನು ಮಹಾಕ್ರುದ್ಧನಾಗಿ ಜಡವಾದ ಗರುಕೆಹಂಬು ಮಾರ್ಗನಿರೋಧವಂ ಮಾಡಿದುದರಿಂದ, 'ಇದಂ ಮೂಲೋತ್ಪಾಟನವಂ ಮಾಡಬೇಕೆಂ'ದು ಕಾರ್ಯಾಂತರವಂ ಬಿಟ್ಟು, ತನ್ನ ದಂಡದಿಂದ ಆ ಗರುಕೆಬಳ್ಳಿಯನ್ನು ಸಮೂಲವಾಗಿ ಅಗೆದು ಛೇದಿಸಿ, ತನ್ನ

ಮಾರ್ಗವಿಡಿದು ಹೋಗುವ ಆ ಬ್ರಾಹ್ಮಣನಂ ಚಂದ್ರಗುಪ್ತನು ದೂರದಿಂದಲೇ ಕಂಡು, "ಈತನು ಯಾರೋ ಮಹಾತೇಜಸ್ವಿಯಾದವನು, ಕೋಪಿಷ್ಠನು ; ಇಂಥಾ ಕೋಪವಿದ್ದವರಲ್ಲೇ ಆಶ್ರಿತಾಭಿಮಾನವು ದೃಢವಾಗಿ ಇರುವದು" ಎಂದು ನಿಶ್ಚೈಸಿ, 'ತನ್ನ ಪುಣ್ಯದಿಂದಲೇ ಈತನು ಅನುಕೂಲನಾದರೆ ಕೇಳುವದೇನು ?' ಎಂದು, ಈತನಂ ಸತ್ಕರಿಸಬೇಕೆಂದು ನಿಶ್ಚೈಸಿ, ಆ ಬ್ರಾಹ್ಮಣನ ಸಮೀಪಕ್ಕೆ ಚಂದ್ರಗುಪ್ತನು ಬಂದು, ಸಾಷ್ಟಾಂಗವಾಗಿ ನಮಸ್ಕರಿಸಿ, "ಸ್ವಾಮೀ, ಮಧ್ಯಾಹ್ನ ಮೀರುತ್ತಲಿದೆ. ಈ ನನ್ನ ಗೃಹದಲ್ಲಿ ಮಧುಪರ್ಕಾದಿಗಳಂ ಸ್ವೀಕರಿಸಿ, ವಿಶ್ರಮಿಸಿಕೊಂಡು ಮುಂದೆ ತೆರಳಬಹುದೆಂ"ಬ ಚಂದ್ರಗುಪ್ತನ ಪ್ರಾರ್ಥನವಂ ಕೇಳಿ, 'ಹಾಗಾಗಲೆಂ'ದು ಆತನಿಳಿದಿದ್ದ ಗೃಹಕ್ಕೆ ಬಂದು, ಅರ್ಘ್ಯಪಾದ್ಯಾದಿ ಪೂಜೆಯಂ ಸ್ವೀಕರಿಸಿ, ಭಕ್ತಿಯಿಂದ ಅರ್ಪಿಸಿದ ಫಲಗಳಂ ಸ್ವೀಕರಿಸಿ, ವಿಶ್ರಮಿಸಿಕೊಂಡು, ಮುಂದೆ ತೆರಳುವದಕ್ಕೆ ಯತ್ನವಂ ಮಾಡುವ ಚಾಣಕ್ಯನಂ ಕುರಿತು, ಚಂದ್ರಗುಪ್ತನಿಂತೆಂದನು :

"ಸ್ವಾಮೀ, ಮಾರ್ಗಶ್ರಮದಿಂದ ಬಂದ ವಿಪ್ರರು ನನ್ನ ಮೇಲೆ ಕೃಪೆಮಾಡಿ ಈ ಗೃಹದಲ್ಲಿ ನಾಲ್ಕು ಮೂರು ದಿನ ವಿಶ್ರಮಿಸಿಕೊಂಡು ನಾನು ಮಾಡುವ ಸ್ವಲ್ಪ ಸೇವೆಯಂ ಒಡಂಬಟ್ಟು ಮುಂದೆ ತೆರಳುತ್ತಲಿದ್ದಾರೆ. ಸ್ವಾಮಿಯವರ ದರ್ಶನದಿಂದ ನನ್ನ ಪಿತೃಗಳೆಲ್ಲರೂ ಧನ್ಯರು. ನಾನೂ ಧನ್ಯನಾದೆನು. ನನ್ನ ಗೃಹ ಪಾವನವಾಯಿತು. ನನ್ನಲ್ಲಿ ಕೃಪೆಮಾಡಿ ಒಂದೆರಡು ದಿನವಿಲ್ಲಿದ್ದು ಮುಂದೆ ತೆರಳಬೇಕೆಂ"ಬ ಚಂದ್ರಗುಪ್ತನ ಭಕ್ತಿವಿಶ್ವಾಸವಂ ನೋಡಿ, "ಹಾಗೇ ಆಗಲೆಂ"ದು ಮೂರು ನಾಲ್ಕು ದಿವಸ ಅಲ್ಲಿ ಇದ್ದು, ಆತನು ಮಾಡುವ ಉಪಚಾರಗಳಂ ಸ್ವೀಕರಿಸಿ, ಸುಪ್ರೀತನಾಗಿ ಚಂದ್ರಗುಪ್ತನಂ ಕುರಿತು,

"ಅಯ್ಯ ಗೃಹಸ್ಥನೇ, ನೀನು ಯಾರ ಪುತ್ರನು ? ನಿನ್ನ ಹೆಸರೇನು ? ನಿನಗೆ ಇಲ್ಲಿ ಜೀವನವೇನು ?" ಎಂದೆನಲು, "ಸ್ವಾಮಿ, ನಾನು ಈ ದೇಶಾಧಿಪತಿಯಾದ ಸರ್ವಾರ್ಥಸಿದ್ಧಿರಾಯನ ಪ್ರಿಯಪತ್ನೀಪುತ್ರನಾದ ಮೌರ್ಯನ ಪುತ್ರನು. ನನ್ನಂ ಚಂದ್ರಗುಪ್ತನೆಂದು ಹೇಳುವರು. ನನಗೆ ಬಂದು ಇರುವ ದುರ್ದಶೆಯು ಎಷ್ಟೆಂದು ಹೇಳಲಿ ? ಬಹುಮಂದಿ ಒಡಹುಟ್ಟಿದವರು ಉಳ್ಳವಗೆ ಬಹುಕ್ಲೇಶವುಂಟೆಂಬ ಲೌಕಿಕವ್ಯವಹಾರ ನನ್ನಲ್ಲಿಯೇ ಅನುಭವಕ್ಕೆ ಬಂತು. ನೂರು ಮಂದಿ ಭ್ರಾತೃಗಳ ಸಂಗಡ ಹುಟ್ಟಿದವನಾದರೂ ನನ್ನ ಪಿತೃ ಸೋದರರುಗಳಲ್ಲಿ ನಾನೊಬ್ಬ ಉಳಿದು ಈ ಕ್ಲೇಶಕ್ಕೆ ಪಾತ್ರನಾದೆನು.

ಅದೇನೆಂದರೆ, ನನ್ನ ಪಿತಾಮಹನಾದ ವೃದ್ಧರಾಯನ ಪಟ್ಟಮಹಿಷಿಯಲ್ಲಿ ಜನಿಸಿದ ಕುಮಾರರುಗಳೇ ನವನಂದರು. ಆತನ ಪ್ರಿಯಪತ್ನಿಯಾದ ಮುರಾದೇವಿಯಲ್ಲಿ ನಮ್ಮ ತಂದೆ ಮೌರ್ಯನೊಬ್ಬನು ಜನಿಸಿದನು. ಆತನಿಗೆ ನೂರು ಮಂದಿ ಕುಮಾರರು, ಅಸಹಾಯ ಶೂರರು, ಜನಿಸಿ ಪ್ರಸಿದ್ಧರಾಗಿ ಇರುವದಂ ನೋಡಿ, ನಂದರು ತಮಗೆ ಜ್ಞಾತಿಗಳಾಗಿ ಶೂರರಾದುದರಿಂದ 'ಮುಂದೆ ಈ ಮೌರ್ಯರು ಶತ್ರುಗಳಾದಾರು' ಎಂಬ ಶಂಕೆಯಿಂದಲೋ, ಹ್ಯಾಗೋ, ಕಪಟವಂ ಮಾಡಿ ನೆಲಮಾಳಿಗೆಯೊಳಗೆ ನಮ್ಮೆಲ್ಲರಂ ಕೂಡಿ, ಅನ್ನೋದಕವ ಕೊಡದೆ ನಿಷ್ಕಾರಣವಾಗಿ ಸಂಹರಿಸಿದರು. ನಾನು ಮಾತ್ರ ಈ ಕ್ಲೇಶಕ್ಕೆ ಪಾತ್ರನಾಗಿ ಸೆರೆಮನೆಯಲ್ಲಿ ಜೀವಂತನಾಗಿ ಇರಲು, ನಿಮಿತ್ತಾಂತರದಿಂದ ನನ್ನ ಹೊರಗೆ ತೆಗೆದು, ಅನ್ನಸತ್ರಾಧಿಕಾರವಂ ನೋಡುತ್ತ ಬಿದ್ದಿರಲಿ" ಎಂದು ನೇಮಿಸಿದ್ದರಿಂದ, ಅನಾಥನಾಗಿ ಈ ದುರ್ದಶೆಗೆ ತಗುಲಿ, ಈ ಹೀನವೃತ್ತಿಯಿಂ ಜೀವಿಸುತ್ತ, 'ಯಾವ ವೇಳೆಯಲ್ಲಿ

ಈ ಶತ್ರುಗಳಿಂದ ತನಗೆ ಏನು ವಿಪತ್ತು ಸಂಭವಿಸೀತೋ' ಎಂದು ಶಂಕೆಬಡುತ. ನವಾರ್ಬುದ ಸಂಖ್ಯಾಧನವನ್ನಾರ್ಜಿಸಿ ಬಹುದೇಶಾಧಿಪತಿಗಳ ಕೈಕಪ್ಪವಂ ಸ್ವೀಕರಿಸುವ ಮಹಾರಾಯನಿಗೆ ನಾನು ಪೌತ್ರನಾಗಿಯೂ ನಮ್ಮ ತಂದೆಯಾದ ಮೌರ್ಯನಿಂ ಪ್ರತಿಷ್ಠಿತವಾದ ವಿರೂಪಾಕ್ಷೇಶನಿಗೆ ನಿತ್ಯದಲ್ಲೂ ಆಗುವ ಆರಾಧನೆಗೆ ವಿಘ್ನ ತಟ್ಟಿ ನಿಂತುಹೋದರೆ. ಅಷ್ಟು ಮಾತ್ರ ನಿರ್ವಹಿಸಲಾರದೆ ಧನಹೀನನಾಗಿ, ಈ ಶತ್ರುಮಧ್ಯದಲ್ಲಿ ಜೀವಿಸುವದಕ್ಕಿಂತಲೂ ಮಹಾಪುಣ್ಯಕರವಾದ ಅರಣ್ಯದ ಕಂದಮೂಲಗಳಿಂ ಜೀವಿಸುತ್ತ, ನಿಮ್ಮಂಥಾ ಮಹಾನುಭಾವರುಗಳ ಪಾದಸೇವೆಯಂ ಮಾಡುತ್ತ, ಪರಲೋಕಗತಿಯನ್ನಾದರೂ ಸಂಪಾದಿಸಿಕೊಂಡೇನು. ಇನ್ನು ಏನು ಪ್ರಯೋಜನಕ್ಕೆ ಇಲ್ಲಿ ಇರಬೇಕು ? ಅಪ್ಪಣೆಯಾದರೆ. ಸಂಗಡ[ದ]ಲ್ಲೇ ಬರುವೆನು" ಎಂದು ಕಂಬನಿಗಳಂ ತುಂಬಿ ದುಃಖಪಡುತ್ತಿರುವ ಚಂದ್ರಗುಪ್ತನ ವ್ಯಸನವಂ. ಆತನ ಸೌಜನ್ಯವಂ, ಪ್ರಭುತ್ವಲಕ್ಷಣಯುಕ್ತವಾದ ಆತನ ಶರೀರವಂ ನೋಡಿ. 'ಈತನಂ ಪಕ್ಷೀಕರಿಸಿದರೆ ಮುಂದೆ ಪ್ರಭುಪದಕ್ಕೆ ಯೋಗ್ಯನಾದಾನೆಂ'ದು ತಿಳಿದು. ಮನಮರುಗಿ. ಚಾಣಿಕ್ಯನಿಂತೆಂದನು :

"ಎಲೈ ಚಂದ್ರಗುಪ್ತನೆ. ನೀನು ಕ್ಷತ್ರಿಯಬೀಜೋತ್ಪನ್ನನಾಗಿ, ಯೌವನಶಾಲಿಯಾಗಿ. ಪ್ರಭುತ್ವಕ್ಕೆ ಯೋಗ್ಯವಾದ ಲಕ್ಷಣವುಂಟಾಗಿ ಇರುವ ನಿನಗೆ ವನವಾಸವೂ ಕಂದಮೂಲಾಹಾರವೂ ಯೋಗ್ಯವಲ್ಲ. ಅದು ಬ್ರಾಹ್ಮಣಜೀವನವು. ಕ್ಷತ್ರಿಯನು ಧನಹೀನನಾಗಿ ವಿಪತ್ತಿಗೆ ತಗುಲಿದರೆ. ಧೈರ್ಯವನ್ನವಲಂಬಿಸಿ, ತನ್ನ ಅಭ್ಯುದಯಕಾಲವಂ ನಿರೀಕ್ಷಿಸುತ್ತ, ಸಮಯವರಿತು. ತನ್ನ ಪೌರುಷ ಬುದ್ಧಿಬಲದಿಂದ ಶತ್ರುಗಳಂ ನಿಗ್ರಹಿಸಿ, ಸುಖಿಯಾಗಬೇಕಲ್ಲದೆ ಹೀಗೆ ಧೈರ್ಯಹೀನನಾಗಿ ದೀನಜನದಂತೆ ಹೇಳುವರೇ ?" ಎನಲು, ಆ ಮಾತಿಗೆ ಚಂದ್ರಗುಪ್ತನು. "ಸ್ವಾಮಿ ಮಹಾನುಭಾವರೆ, ತಂಡುಲಮಾತ್ರ ಉಳಿದಿದ್ದ ಅಗ್ನಿಕಣವು ವಾಯುಸಹಾಯದಿಂದ ವನವೆಲ್ಲವಂ ದಹಿಸುವಂತೆ ನಿಮ್ಮ ಕೃಪಾಕಟಾಕ್ಷದಿಂದ ನನ್ನ ಶತ್ರುಗಳೆಲ್ಲರೂ ನಷ್ಟವಾಗಿ, ನನ್ನ ಅದೃಷ್ಟವು ಪ್ರಕಾಶಿಸಬೇಕಲ್ಲದೆ, ನನ್ನ ಪೌರುಷಬಲದಿಂದ ಶತ್ರುನಿಗ್ರಹವಾಗುವದೆಂಬುದು ಮನುಷ್ಯಯತ್ನದಿಂದ ತೋರುವದಿಲ್ಲ. ನಿಮ್ಮಂ ಶರಣು ಹೊಕ್ಕೆನು. ಕ್ರೂರಕರ್ಮಿಗಳಾದ ಈ ಶತ್ರುಗಳಂ ನಿಮ್ಮ ತೇಜೋಬಲದಿಂದ ನಿಗ್ರಹಿಸಿ, ನನ್ನನ್ನುದ್ಧರಿಸಬೇಕೆಂ"ದು ಪಾದಗಳಂ ಹಿಡಿದಿರುವ ಚಂದ್ರಗುಪ್ತನಂ ನೋಡಿ,

"ಎಲೈ ಚಂದ್ರಗುಪ್ತನೆ. ನಿನ್ನ ಶತ್ರುಗಳಂ ನಿಗ್ರಹಿಸಿ ನಿನಗೆ ರಾಜ್ಯಾಧಿಪತ್ಯವನ್ನುಂಟು ಮಾಡುವದಕ್ಕೆ ನಾನು ಸಮರ್ಥನಹುದಾದರೂ, ನಿನಗೆ ಮಾತ್ರವೇ ದ್ರೋಹಿಗಳಾಗಿ, ಪ್ರಜಾರಕ್ಷಣೆಯಂ ಮಾಡುತ್ತಲಿರುವ ಈ ನಂದರಂ ಅಕಾರಣವಾಗಿ ನಾನು ನಿಗ್ರಹಿಸಿದರೆ, ಪ್ರತ್ಯವಾಯ ಅಪಕೀರ್ತಿಗಳು ಉಂಟಾಗುವದು. ನಮಗೆ ಮಾಡಿದ ಅಪರಾಧವಂ ತಿಳಿದು ಅವರಂ ನಿಗ್ರಹಿಸಿದರೆ, ಬಾಧಕವಿಲ್ಲ. ನೀನು ಸಜ್ಜನನಾಗಿ ತೋರುತ್ತಲಿರುವೆ. ಅದರಿಂ ದುಷ್ಟರಾದ ಈ ನಂದರಿಗೆ ನನ್ನಲ್ಲಿ ಕೋಪ ಹುಟ್ಟುವಂತೆ ಧರ್ಮವಿರುದ್ಧ[ವ]ಲ್ಲದ ಒಂದು ದುಶ್ಚೇಷ್ಟೆಯನ್ನಾಚರಿಸುತ್ತಲಿದ್ದೇನೆ. ಅದಕ್ಕೆ ಕ್ಷಮಿಸದೆ, ನಿರಾಕರಿಸಿ, ನನಗೆ ಕೋಪವುಂಟಾಗುವಂತೆ ನಂದರು ಮಾಡಿಕೊಂಡರೆ, ಆಗ ನಿನ್ನ ಕಾರ್ಯಕ್ಕೆ ಅಭಯವಂ ಕೊಡುವೆನು" ಎಂದು ಚಂದ್ರಗುಪ್ತನಿಗೆ ಹೇಳಿ, ಚಾಣಿಕ್ಯನು ಮಾಧ್ಯಾಹ್ನಿಕಕ್ಕೆ ಗಂಗಾನದಿಗೆ ಹೋಗುತ್ತಿರಲು.

ಆಗ ನವನಂದರು ದೈವಯೋಗದಿಂದ. ನೂತನವಾಗಿ ರಚಿಸಿದ್ದ ಉದ್ಯಾನದ ರಮಣೀ

ಯುತ್ಸವಂ ನೋಡಿ, ತಮ್ಮ ಗೃಹವಂ ಕುರಿತು ಬರುವ ಮಾರ್ಗದಲ್ಲಿ, ಧರ್ಮಸತ್ರದಲ್ಲಿ ಭೋಜನಾರ್ಥವಾಗಿ ಗುಂಪುಕೂಡಿ ಇದ್ದ ಬ್ರಾಹ್ಮ[ಣ]ರ ವೇದಘೋಷವಂ ಕೇಳಿ, ನಂದರು ತಮ್ಮೊಳಗೆ ತಾವು "ಅಯ್ಯ ಅಣ್ಣಾಜಿಗಳಿರ, ಈ ಧರ್ಮಸತ್ರದಲ್ಲಿ, ಬ್ರಾಹ್ಮ[ಣ]ರ ಪಂಕ್ತಿಯಲ್ಲಿ, ಆಗುವ ಬ್ರಾಹ್ಮ[ಣ]ರ ಭೋಜನಸಂತೋಷ ವಿನೋದವಾರ್ತೆಗಳು ಕೇಳುವದಕ್ಕೆ ಬಹು ಹರುಷಕರವಾಗಿ ಇರುವದುಂಟು. ಆ ವಿನೋದವಂ ನೋಡಿ ವಿಶ್ರಮಿಸಿಕೊಂಡು ಬರೋಣ"ವೆಂದು ನಂದರು ಸತ್ರಕಭಿಮುಖವಾಗಲು,

ಪ್ರಭುಗಳು ಸತ್ರಾಭಿಮುಖವಾದುದಂ ಕಂಡು, ಚಂದ್ರಗುಪ್ತನೆದುರಿಗೆ ಬಂದು, ಕೈ ಮುಗಿದು, ಬಿಜಮಾಡಬೇಕೆಂದು ಪ್ರಾರ್ಥಿಸಲು, ಹಾಗೇ ನಂದರು ವಾಹನಗಳನ್ನಿಳಿದು ಸತ್ರಕ್ಕೆ ಬಂದು, ಬ್ರಾಹ್ಮ[ಣ]ರ ಪಂಕ್ತಿಯಂ ನೋಡುವದಕ್ಕೆ ಯತ್ನವಂ ಮಾಡುತ್ತಿರಲು, ಆಗ ನಂದರು ಸತ್ರಕ್ಕೆ ಬಂದುದಂ ಕಂಡು, ಇದೇ ಸಮಯವೆಂದು ಚಾಣಕ್ಯನು ಹರುಕು ಧೋತ್ರವನ್ನುಟ್ಟು, ಪಂಜೆಬ್ರಾಹ್ಮಣನಂತೆ ಸತ್ರಕ್ಕೆ ಬಂದು, ಅಲ್ಲಿ ಸುವರ್ಣನಿರ್ಮಿತವಾದ ಪೀಠವಂ ತೆಗೆದುಕೊಂಡು, ಅಗ್ರಸ್ಥಾನದಲ್ಲಿ ಹಾಕಿಕೊಂಡು, ಅದರ ಮೇಲೆ ಕುಳಿತು, ಕಾಲ ಮೇಲೆ ಕಾಲು ಹಾಕಿಕೊಂಡು, ಒಬ್ಬರಂ ಲಕ್ಷೀಕರಿಸದವನಂತೆ ಚಾಣಕ್ಯನು ಕುಳಿತಿರಲು, ಪಂಕ್ತಿಯಂ ನೋಡುತ್ತ ಬರುವ ನಂದರು ಆ ಬ್ರಾಹ್ಮಣನಂ ನೋಡಿ, ಮತ್ತರಾಗಿ, ದೈವಸಂಕಲ್ಪದಿಂದ ವಿಮರ್ಶೆಯಂ ಮಾಡದೆ, ಅಗ್ನಿಶಿಖೆಯಲ್ಲಿ ಆಹಾರಬುದ್ಧಿಯಿಂದೆರಗುವ ಪತಂಗಗಳಂತೆ ಕ್ರುದ್ಧರಾಗಿ, ತಮ್ಮ ತಮ್ಮ ಮುಖಗಳಂ ನೋಡಿಕೊಳ್ಳುತ್ತ, ತಮ್ಮ ದೂತರ ಮುಖವಂ ನೋಡಿ, "ಇವನು ಯಾರೋ ಬ್ರಾಹ್ಮಣಾಧಮನು, ತುಚ್ಛನು, ಅಗ್ರಸ್ಥಾನದ ಪೀಠದಲ್ಲಿ ಕಾಲ ಮೇಲೆ ಕಾಲು ಹಾಕಿಕೊಂಡು ಎಲ್ಲರಿಗಿಂತ ತಾನೇ ಅಧಿಕನಂತೆ ಕುಳಿತಿದ್ದಾನೆ. ಯಾಕೆ ಸುಮ್ಮನಿದ್ದೀರಿ ?" ಎನಲು,

ಅದಂ ಕೇಳಿ, ರಾಜಭಟರು "ಏಳು ಏಳು" ಎಂದು ಚಾಣಕ್ಯನಂ ಬೆದರಿಸಲು, ಅವರ ಮಾತಂ ಲಕ್ಷೀಕರಿಸದೆ ಮೊದಲಿನಂತೆ ಚಾಣಕ್ಯನು ಕುಳಿತಿರಲು, ಕ್ರುದ್ಧರಾದ ದೂತರು ಚಾಣಕ್ಯನಂ ಕೈಹಿಡಿದು ಈಚೆಗೆ ಎಳೆಯಲು, ಅವರು ಎಳೆದ ರಭಸಕ್ಕೆ ಆತನ ಶಿಖೆ ಬಿಚ್ಚಿಹೋಗಲು, ಆಗ ಚಾಣಕ್ಯನು 'ಚಂದ್ರಗುಪ್ತನ ಅದೃಷ್ಟ ಒದಗಿತೆಂ'ದು ತಿಳಿದು, ಮಹಾಕೋಪದಿಂದೆದ್ದು, ಕಣ್ಣುಗಳಂ ಕೆಂಪು ಮಾಡುತ್ತ, ಹುಬ್ಬುಗಳಂ ಗಂಟಿಕ್ಕಿ, ಪೀಠವನ್ನೊದೆದು, ಕ್ರುದ್ಧನಾದ ಮೃತ್ಯುವಿನಂತೆ ಅವುಡುಗಳಂ ಕಚ್ಚುತ್ತ, ದಂತಗಳಂ ಮಸೆಯುತ್ತ, ಪಾದಗಳಂ ನಡುಗಿಸುತ್ತ, ಮೊರೆದು ಮುಸುಗುಟ್ಟುತ್ತ, ಒಂದಿಷ್ಟು ಹೊತ್ತಿನ ಮೇಲೆ ಕೆರಳಿದ ಕೋಪವಂ ಮನದಲ್ಲಿ ಅಡಗಿಸಿ, ನಂದರಂ ಬಿರಬಿರನೆ ನೋಡುತ್ತಿಂ[ತೆಂ]ದನು:

"ಎಲೈ ನಂದಾಧಮರುಗಳಿರಾ, ಅನ್ನಾರ್ಥಿಯಾಗಿ ಬಂದ ಅತಿಥಿಯಂ ನಿರಾಕರಿಸಿದ ಗೃಹಸ್ಥನ ಆಯುಷ್ಯವಂ ಮೃತ್ಯು ಅಪಹರಿಸುವದೆಂದು ಹೇಳುವ ಶಾಸ್ತ್ರಾರ್ಥವು ಈಗ ನಿಮ್ಮಲ್ಲೇ ಫಲಿಸಿದಂತೆ ತೋರುತ್ತಲಿದೆ. ನಿರಪರಾಧಿಯಾಗಿ ಭೋಜನಪಂಕ್ತಿಯಲ್ಲಿ ಕುಳಿತಿದ್ದ ನನ್ನಂ ಬ್ರಾಹ್ಮಣಾಧಮನೆಂದು, ತುಚ್ಛನೆಂದು, ಪರುಷವಾಕ್ಯದಿಂದ ಎಲ್ಲರೂ ನೋಡುವಂತೆ ಅಪಮಾನಪೂರ್ವಕವಾಗಿ ಹ್ಯಾಗೆ ಎಳೆಸಿದವರಾದಿರೋ, ಮುಂದೆ ನಿಮ್ಮ ಪ್ರಾಣಾಪಹಾರವಂ ಮಾಡಿ, ಕಾಲುಗಳಿಗೆ ಹಗ್ಗವಂ ಬೀರಿ, ಹದ್ದು ನಾಯಿ ನರಿ ಪಿಶಾಚಗಳಿಗೆ ಗ್ರಾಸಾರ್ಥವಾಗಿ ಮಾರ್ಗವಂ ಬಿಟ್ಟು ಬೇಲಿ ಒಳಕ್ಕೆ ಎಳಸಿ ಹಾಕುವದನ್ನು ಈ

ಸಭಾಜನರು ಹಾಗೇ ನೋಡಿಯಾರು. ಭೃಗುವಂಶಜನಾದ ಒರ್ವ ಋಷಿಯು ತನಗೆ ಅಪರಾಧಿಗಳಾದ ಹೇಹಯರೆಂಬ ದುಷ್ಟ ಕ್ಷತ್ರಿಯರಂ ತನ್ನ ದೃಷ್ಟಿಯಿಂದಲೇ ನಾಶವಂ ಮಾಡಿದಂತೆ, ನನ್ನ ತಪೋಲೇಶವ್ಯಯದಿಂದ ಈಗಲೇ ನಿಮ್ಮಂ ನಾಶವಂ ಮಾಡಿದರೆ, ನನ್ನ ಪೌರುಷಕ್ಕೆ ಪ್ರಯೋಜನವಿಲ್ಲದೆ ಹೋಗುವದು. ಭೃಗುನಂದನನಾದ ಶುಕ್ರಾಚಾರ್ಯ ಪ್ರಣೀತವಾದ ದಂಡನೀತಿಶಾಸ್ತ್ರಾಧ್ಯಯನದಿಂದ ಅವರಿಗೆ ನಾನು ಧರ್ಮಪುತ್ರನಾದುದು ಸತ್ಯವಾದರೆ, ಭೃಗುಕುಲೋತ್ಪನ್ನನಾದ ಪರಶುರಾಮನು ದುಷ್ಟಕ್ಷತ್ರಿಯರಂ ಬಹುವಾಗಿ ಸಂಹರಿಸಿ ವಿಶ್ರಮಿಸಿಕೊಂಡಂತೆ ದುಷ್ಟಕ್ಷತ್ರಿಯರಾದ ನಿಮ್ಮಂ ಸಂಹರಿಸದೆ ಕಾಲಸರ್ಪ ದಂತೆ ಬಿಚ್ಚಿ ಇರುವ ಈ ನನ್ನ ಶಿಖೆಯಂ ಬಂಧಿಸಿದವನಾದರೆ, ಸ್ವಧರ್ಮವಂ ಬಿಟ್ಟು ಡಾಂಭಿಕನಾಗಿ ಅನ್ಯಧರ್ಮವನ್ನಾಚರಿಸುವ ಮನುಷ್ಯಾಧಮನ ದುರ್ಗತಿಗೆ ನಾನು ಹೋದೇನು. ಮತ್ತು ಬ್ರಾಹ್ಮ[ಣ]ರು ಮಾಡುವ ವೇದಾಧ್ಯಯನವಂ ಮನಮುಟ್ಟಿ ಕೇಳು ತ್ತಿರುವ ಶೂದ್ರನಿಗೆ ಆಗುವ ಪರಲೋಕದಂಡನೆಯೆ ನನಗಾಗಲಿ. ಇನ್ನು ಬಾಯಿಂದ ಬ್ರಹ್ಮವಂ ಪರರಿಗೆ ಉಪದೇಶಿಸುತ್ತ, ಭಾಮೆಯರ ಸೌಖ್ಯವಂ ಮನಮುಟ್ಟಿ ಭುಂಜಿಸುತ್ತ, ಭೇದವೆಲ್ಲಿಹುದೆಂದು ಬುದ್ಧಿಬಲಂ [ತೋ]ರುತ್ತ, ಭೋಗಲಂಪಟನಾಗಿ ಭುವನವಂ ವಂಚಿಸುವ ಬಣಗು ತತ್ವಜ್ಞಾನಿ[ಯಂತೆ] ಭವದಿ ಮುಳುಗುವೆ ನಾನು."

ಹೀಗೆಂದು ಕ್ರೂರಪ್ರತಿಜ್ಞೆಯಂ ಮಾಡಿ, ಎಲ್ಲರೂ ನೋಡುವಂತೆ ಚಾಣಕ್ಯನು ಅಲ್ಲಿಂದ ಎದ್ದು ಹೋಗುತ್ತಿರಲು, ಆಗ ಮಹೋತ್ಪಾತಗಳಾದ ಭೂಕಂಪನವೂ ಧೂಮಕೇತುಗಳೂ ಉದ್ಭವಿಸುತ್ತಿರಲು, ಅದಂ ನೋಡಿ ಅಲ್ಲಿದ್ದ ಸಭಾಜನರು ಮಹಾಭೀತರಾಗುತ್ತಿರಲು, ಶತ್ರುಗಳ ಮೇಲೆ ಮೀಸೆಯಂ ತಿರುಚುವ ವೀರನಂದದಿ ಚಾಣಕ್ಯನು ಬಿಚ್ಚಿ ಇರುವ ತನ್ನ ಶಿಖೆಯಂ ತನ್ನ ಕೈಯಿಂದ ನೇವರಿಸುತ್ತ ತೆರಳುತ್ತಿರಲು,

ಆಗ ನಂದರಿಗೆ ದೈವಬಲ ತಪ್ಪಿ ಇದ್ದುದರಿಂದ, ಆತನಂ ಸಮಾಧಾನಬಡಿಸಿ ನಿಲ್ಲಿಸುವು ದಕ್ಕೆ ಬುದ್ಧಿಗೆ ತೋರದ ಕೋಪ ಸಂತಾಪವುಂಟಾಗುತ್ತಿರಲು, ಇದೆಲ್ಲವಂ ನೋಡಿ ಸಮೀಪದಲ್ಲಿ ಇರುವ ವಕ್ರನಾಸನೆಂಬ ವೃದ್ಧಮಂತ್ರಿಗೆ ಪುತ್ರನಾದ ಪುಷ್ಪದಂತನೆಂಬ ಮಂತ್ರಿಯು ತನ್ನ ಮನಸ್ಸಿನಲ್ಲಿ, "ಈಗ [೧]ಕ್ರೂರ ಪ್ರತಿಜ್ಞೆಯಂ ಮಾಡಿಹೋದ ಬ್ರಾಹ್ಮಣನ ಪರುಷವಾಕ್ಯಪ್ರಯೋಗದಿಂದ ಈ ನವನಂದರ ಚಿತ್ತವೃತ್ತಿಯು ಮೂರು ತೆರನಾಗಿ ಇಹುದು. ಏನೆಂದರೆ,

ಬ್ರಾಹ್ಮಣರಲ್ಲಿ ಗೌರವಯಿದ್ದವರಿಗೆ ಭೀತಿ ತೋರುವದು. ಬ್ರಾಹ್ಮಣಾಪಮಾನದಲ್ಲಿ ಪ್ರತ್ಯವಾಯ ತೋರಿದವರಿಗೆ ಪಶ್ಚಾತ್ತಾಪ ಉದಯಿಸಿ ಇರುವದು. ಬ್ರಾಹ್ಮ[ಣ]ರೂ ಭಿಕ್ಷುಕರೂ ಇವರಿಂದಾಗುವದೇನೆಂದು ಲಘುತ್ವ ತೋರಿದವರಿಗೆ ಕೋಪವುಂಟಾಗಿರು ವದು. [ಆದರೆ] ಮೊದಲು ಶತ್ರುಗಳಿಂದ ಪ್ರಯೋಗಿಸುವ ಭೇದೋಪಾಯಕ್ಕೆ ಆಸ್ಪದ ವಾಗದಂತೆ, ಸಮಯಬಂಧವಂ ಮಾಡಿಕೊಂಡು, ಐಕಮತ್ಯದಿಂದ ಮೊದಲು ಒಬ್ಬ ಹೇಳಿದ ಮಾತಿಗೆ ಎಲ್ಲರೂ ಒಡಂಬಡುವರಾದುದರಿಂದ, ಇವರಲ್ಲಿ ಕ್ಷಮಿಸದೆ ಕೋಪ ದಿಂದ ಆ ಬ್ರಾಹ್ಮಣನನ್ನು ಎಳೆದು ಹಾಕುವಂತೆ ಒಬ್ಬ ಹೇಳಿದ ಮಾತಿಗೆ ಎಲ್ಲರೂ ಒಡಂ

---

೧. ಕೃತ (ಕ)

ಬಟ್ಟಂತಾಯಿತು. ಇದರಿಂದ ವಿಪತ್ತು ಸಂಭವಿಸಿದರೆ, ಇವರೆಲ್ಲರಿಗೂ ಸಂಭವಿಸೀತು. ಕಾರ್ಯಾಕಾರ್ಯ ವಿಮರ್ಶೆಯಿಲ್ಲದೆಯಿದ್ದ, ಕಾಲದೇಶವಂ ತಿಳಿಯದೆ ಮಾಡಿಕೊಂಡು ಇರುವ, ಈ ಸಮಯಬಂಧವು ಸಮಯಾಂತರದಲ್ಲಿ ವಿಪತ್ತಂ ತಂದುಬಿಡುವದು. ಈಗ ಹೋದ ಬ್ರಾಹ್ಮಣನ ಪ್ರತಿಜ್ಞೆಯೇ ಸತ್ಯವಾದರೆ, ಮುಂದೆ ಸ್ವರ್ಗಸ್ಥನಾಗುತ್ತಿರುವ, ವೃದ್ಧನಾದ, ಸರ್ವಾರ್ಥಸಿದ್ಧಿರಾಯನಿಗೆ ನಂದರ ಕೃತಿಲೋದಕವು ಲಭಿಸುವಂತೆ ತೋರುವದಿಲ್ಲ. ಆ ಬ್ರಾಹ್ಮಣನು ಅನ್ಯಾದೃಶ ತೇಜಸ್ವಿಯಾದುದರಿಂದ ಆತನು ನಂದರಂ ನೋಡಿ ಮನ ಬಂದಂತೆ ಪರುಷವಾಕ್ಯಪ್ರಯೋಗವಂ ಮಾಡುತ್ತಲಿದ್ದರೆ, ಇಲ್ಲಿಯ ಜನರೆಲ್ಲರೂ ಪಶು ಪ್ರಾಯಗಳಾಗಿ ಪ್ರತ್ಯುತ್ತರವಂ ಹೇಳದೆ ಸ್ತಬ್ಧಭಾವದಲ್ಲಿಯೇ ಇದ್ದುದರಿಂದ, ಯೋಚಿಸಿ ನೋಡಿದರೆ, ಆತನು ತನ್ನ ಪ್ರತಿಜ್ಞೆಯಂ ನಿರ್ವಹಿಸಿಕೊಂಡಾನೆಂದು ತೋರುತ್ತಲಿದೆ. ಹಾಗೇ ಉತ್ಪಾತಂಗಳೂ ಸೂಚಿಸಿ ಇದೆ. ಹೀಗಾದರೂ ಇವರ ಸಮೀಪವರ್ತಿಗಳಾದ ಕ್ಷುದ್ರಜನರು ಈ ನಂದರಿಗೆ ಉಂಟಾಗಿ ಇರುವ ಕೋಪವಂ ಕೆರಳಿಸಿ, ಪುನಃ ಆ ಬ್ರಾಹ್ಮಣನಂ ಕೆಣಕುವಂತೆ ಮಾಡಿದರೆ, ಮುಂದೆ ಬರುವ ಆಪತ್ತಂ ಈಗಲೇ ತಂದುಕೊಂಡಾರು. ತಾನು ಮಂತ್ರಿಪುತ್ರನಾಗಿ ಸಮೀಪದಲ್ಲಿ ಇದ್ದ ಬಳಿಕ ಇವರಂ ಒಡಂಬಡಿಸಿ, ಆಸ್ಥಾನಕ್ಕೆ ಕರೆದು ಕೊಂಡು ಹೋಗುವದು ಮಂತ್ರಿಧರ್ಮವೆಂದು ನಿಶ್ಚೈಸಿ,

ಆಗ ನಂದರಂ ಕುರಿತು, ಪುಷ್ಪದಂತನಿಂತೆಂದನು : "ಜೀಯ, ಶಿಷ್ಟಗ್ರಾಹ್ಯವಲ್ಲದೆ ಇರುವ ಈ ಸತ್ರದ ಸಂಘಾನ್ನಕ್ಕೆ ಬಂದು, ಸ್ವರ್ಣಮಯವಾದ ಪೀಠದಲ್ಲಿ ಅಗ್ರಸ್ಥಾನದಲ್ಲಿ ತಾನೇ ಕುಳಿತು, ಸಮಯೋಚಿತವಲ್ಲದೆ ಮನಸ್ಸಿಗೆ ಬಂದಂತೆ ಕೂಗಿ ಹೋದ್ದರಿಂದ, ಆ ಬ್ರಾಹ್ಮಣನು ಹುಚ್ಚನೆಂದು ತೋರುತ್ತಲಿದೆ. ಬಾಲಕರ [೧]ವಾಕ್ಯವೂ ಹುಚ್ಚರ ವಾಕ್ಯವೂ[೧] ವಿನೋದಕ್ಕೆ ಯೋಗ್ಯವಲ್ಲದೆ ವಿಷಾದಕ್ಕೆ ಯೋಗ್ಯವಲ್ಲ. ನಿಮ್ಮ ಕೋಪಕ್ಕೆ ಪಾತ್ರವಾಗಿ ನಿರ್ವಹಿಸಿಕೊಂಡವರಂ ಈ ಲೋಕದಲ್ಲಿ ಎಲ್ಲಿಯೂ ಕಾಣೆನು. ಈ ಪಂಜೆಬ್ರಾಹ್ಮಣನು ಎಷ್ಟು ಮಾತ್ರದವನು ? ಈತನಂ ನಿಗ್ರಹಿಸಿದರೆ, ಬರುವ ಬಹುಮಾನವಾವದು ? ಉಪೇಕ್ಷಿ ಸಿದರೆ ಅಪಮಾನವೇನು ? ಇದು ಧರ್ಮಸತ್ರವಾದುದರಿಂದ ಹೀಗೆ ಬಹುಮಂದಿ ಬರು ವರು. ಇಲ್ಲಿಯ ಅಧಿಕಾರಿಗೆ ಇಂಥಾ ಮೂರ್ಖರಂ ಒಡಂಬಡಿಸುತ್ತ, ನಿದ್ರಾಹಾರಕ್ಕೆ ಸಮಯ ದೊರಕುವದಿಲ್ಲ. ಇದಂತಿರಲಿ, ಬಹುದಿವಸಾರಭ್ಯ ಸ್ವಾಮಿಯವರ ಕಟಾಕ್ಷಪಾತ್ರ ರಾಗಿ ಕಾದುಕೊಂಡಿರುವ ದೇಶಾಧಿಪತಿಗಳಿಗೆ, 'ಇಂದು ಸನ್ಮಾನಪೂರ್ವಕವಾಗಿ ಅಪ್ಪಣೆ ಕೊಡುತ್ತಲಿದ್ದೇವೆ. ಅವರ ದೇಶಗಳಿಗೆ ಹೋಗಿ ಬರಲಿ, ಸಿದ್ಧವಾಗಿರಲೆಂ'ದು ನಿನ್ನೆ ಆದ ಅಪ್ಪಣೆ ಮೇರೆಗೆ, ಆ ದೇಶಾಧಿಪತಿಗಳು ತಾವು ಒಪ್ಪಿಸುವ ಕಪ್ಪಗಳಂ ಪಿಡಿದು, ಸ್ವಕಿರೀಟ ಮಣಿ ಪ್ರಭಾನಿಕರಗಳಿಂದ ಆಸ್ಥಾನವಂ ನೀರಾಜನಗೈಯುತ್ತ, ಪಾದದರ್ಶನ ಎಷ್ಟು ಹೊತ್ತಿಗೆ ಲಭ್ಯವಾದೀತೆಂದು ಕಾದುಕೊಂಡಿದ್ದಾರೆ. ಹಾಗೇ ಅಮಾತ್ಯರೂ ತಮ್ಮೆದುರು ನೋಡುತ್ತಲಿದ್ದಾರೆ. ಪಾದ ಬೆಳೆ[ಯ]ಬಹುದೆಂ"ದು ಪುಷ್ಪದಂತನು ಹೇಳುತ್ತಿರಲು, ಆ ವಾಕ್ಯವಂ ಕೇಳಿ, ಒಡಂಬಟ್ಟು, ನಂದರು ಎಂದಿನಂತೆ ತಮ್ಮ ವಾಹನಂಗಳನೇರಿ ಆಸ್ಥಾನಕ್ಕೆ ತೆರಳುತ್ತಿರಲು, ಆಗ ಕ್ರುದ್ಧನಾಗಿ ಶಪಥವಂ ಮಾಡಿ ಚಾಣಕ್ಯನು ಹೊರಟುಹೋದ ಬಳಿಕ,

೧. ವಾಕ್ಯವಂ (ಕ)

ಆಗ ಆದ ಉತ್ಪಾತಂಗಳಂ ನೋಡಿ ಅಲ್ಲಿಯ ಸಭಾಜನರು ಪರಸ್ಪರ ಮಾತನಾಡಿಕೊಳ್ಳುತ್ತಲಿದ್ದರು. ಏನೆಂದರೆ :

"ಇದೇನೋ ವಿಪರೀತಗಳು ಕಾಣಿಸುತ್ತಲಿದೆ. ಹೀಗೆ ಬ್ರಾಹ್ಮಣಾಪಮಾನವು ಎಂದಿಗೂ ಈ ಮೇರೆ ನಡೆದುದು ಇಲ್ಲ. ಆ ಬ್ರಾಹ್ಮಣನಂ ನಿಲ್ಲಿಸಿ ಸಮಾಧಾನಗೊಳಿಸೋಣವೆಂದರೆ, ಕ್ರುದ್ಧನಾಗಿ ತೀಕ್ಷ್ಣಪ್ರತಿಜ್ಞೆಯಂ ಮಾಡಿ ಪೋದನಾದುದರಿಂದ ಸಾಂತ್ವವಚನಕ್ಕೆ ವಶನಾಗನು. ಇದಂ ಅರಸುಗಳಿಗೆ ತಿಳಿಸೋಣವೆಂದರೆ, ಕಲಿಯುಗಕ್ರೌರ್ಯದಿಂದಲೂ ದೈವಯೋಗದಿಂದಲೂ ಈ ಬ್ರಾಹ್ಮ[ಣ]ರೆಲ್ಲರೂ ಇಂಥ ಮೂರ್ಖರೆಂದು ಧಿಕ್ಕರಿಸಿಯಾರು. ಮತ್ತೆ ಯಾರಾದರೂ ಸಾಂತ್ವವಚನದಿಂದ ಹೇಳಹೋದರೆ, ಶೀತಳವಾದ ಉದಕ ಸೇಚನೆಯಿಂದ ಮತ್ತೆ ಪ್ರಜ್ವಲಿಸುವ ಬಡಬಾಗ್ನಿಯಂತೆ, ಹೇಳಹೋದವರಲ್ಲಿ ಕೋಪ ಹೆಚ್ಚೀತು. ಮಹಾಕುಲೀನರಾದುದರಿಂದ ಸರಳಹೃದಯವೆಂದು ಹೇಳಹೋದರೆ, ಶ್ಲಾಘ್ಯವಾದ ಶ್ರೀಗಂಧಕಾಷ್ಠದಲ್ಲಿ ಉದ್ಭವಿಸಿದ ಅಗ್ನಿಜ್ವಾಲೆಯಂತೆ, ಬಡವರ ಕುಲವಂ ದಹಿಸಿ ಯಾರು.

ಆಕಾರದಲ್ಲಿ ಸೌಮ್ಯರಂತೆ ತೋರುವ ಈ ಅರಸುಗಳಲ್ಲಿ ಇಂಥಾ ದೋಷವುಂಟೇ ಎಂದರೆ, ಅಕಾಲಫಲಪುಷ್ಪವು ನೋಡುವರಿಗೆ ರಮಣೀಯವಾಗಿ ಕಂಡರೂ, ಪ್ರಜಾಪೀಡಾ ಸೂಚಕಗಳಾದುದರಿಂದ ಶಿಷ್ಟಗ್ರಾಹ್ಯಗಳಲ್ಲದೆ ಇರುವವು. ಪಟ್ಟಾಭಿಷೇಕ ಕಲಶಜಲಗಳಿಂದ ಇವರ ಅಸ್ವಾತಂತ್ರ್ಯ ತೊಳೆದು ಹೋದಂತೆ, ದೇಶಕಾಲ ಮರ್ಯಾದೆಗಳನ್ನುಪದೇಶಿಸುವ ಆಪ್ತವೃದ್ಧವಚನಗೌರವವೂ ಹಾಗೇ ತೊಳೆದು ಹೋಯಿತು. ಶ್ವೇತಚ್ಛತ್ರಚ್ಛಾಯೆಯಿಂದ ಬಿಸಿಲು ಮರೆಯಾದಂತೆ, ದೂರಾಲೋಚನೆಯೂ ಆಪದಾಗಮಸ್ಮರಣೆಯೂ ಲೋಕಾಪವಾದಭಯವೂ ಹಾಗೇ ಮರೆ ಆಯಿತು. ಮರ್ಯಾದೆಯಂ ಮೀರಿ ನಡೆವ ಚಿತ್ತವೃತ್ತಿಯುಳ್ಳವರಾದುದರಿಂದ, ಹಿತವ ಹೇಳುವವರೂ ಸ್ವಲ್ಪವಾಗೇ ಇದ್ದಾರು; ಅಥವಾ ಹೇಳಬೇಕಾದರೂ, ಕೂಗಿದರೆ ಹಾಗೇ ಹೊಳಲುಕೊಡುವ ಧ್ವನಿಯಂತೆ, 'ಹೀಗೆ ಅಹುದೇನ್ಯೆ' ಎಂದು ಅರಸು ಕೇಳಿದರೆ, 'ಅದು ಅಹುದು ಬುದ್ಧೀ' ಎಂದು ನುಡಿವರು. ಹಿತೈಷಿಗಳಾದ ಜನರು ಇದ್ದ ಅರ್ಥವಂ ಖಂಡಿತವಾಗಿ ತಿಳುಹಿದರೆ, ಕಿವಿಗೆ ಹಾಕವೊಲ್ಲರು; ಅಥವಾ ಕೇಳಿದರೂ ಗಜ ಕಣ್ಣುಮುಚ್ಚಿದಂತೆ ಸುಮ್ಮನಾಗುವರು. ಪ್ರಭುಗಳಿಗೆ ವಿಷಯದಲ್ಲಿ ಅತ್ಯಾಸಕ್ತಿಯೆಂಬುವದು ದಾರಿತಪ್ಪಿ ಹೋಗುವಗೆ ದಿಗ್ಭ್ರಮೆಯು ಸ[ದಾ] ಉಂಟಾದಂತೆ ಕೆಡಿಸುವ[ದು].

ಶ್ರೀಮಂತರಾಗಿ, ಯೌವನಶಾಲಿಗಳಾಗಿ, ರೂಪವಂತರಾಗಿ, ವಿನಯರಹಿತರಾಗಿ ಇರೋಣವೆಂಬುವದೊಂದು ಮಾತ್ರವೇ ಅನರ್ಥಕಾರಣವು. ಇದೆಲ್ಲವೂ ಇದ್ದಲ್ಲಿ ಕೇಳುವುದೇನು? ಮತ್ತು ಯೌವನಮದವೆಂಬ ಅಂಧಕಾರವು ಸೂರ್ಯಾದಿಗಳಿಂ ತೊಲಗಲಾರವು; ಐಶ್ವರ್ಯಮದವೆಂಬ ನೇತ್ರರೋಗವು ಅಂಜನಸಾಧ್ಯವಾಗದು ; ಭೂಪತಿಯಾದ ಈ ದೊರೆಗಳಿಗೆ ಸ್ವಲ್ಪಮನುಷ್ಯರಿಂದಾಗುವದೇನೆಂದರೆ, ಅಗ್ನಿಕಣವು ಸ್ವಲ್ಪವಾಗಿ ಇದ್ದರೂ ತೃಣವನ್ನವಲಂಬಿಸಿ ಮಹಾವನವಂ ದಹಿಸುವದು. ಪೂರ್ವಯುಗದಲ್ಲಿ ಉನ್ಮತ್ತನಂತೆ ಬರುತ್ತಿರುವ ದೂರ್ವಾಸಮುನಿಯ ಕೋಪದಿಂದ ಸಮಯವಿಶೇಷದಲ್ಲಿ ಇಂದ್ರನೈಶ್ವರ್ಯವು ಅಸುರರ ಪಾಲಾಗಲಿಲ್ಲವೇ ? ಬ್ರಾಹ್ಮಣನು ಭಿಕ್ಷುಕನಂತೆ ತೋರುತ್ತಿದ್ದರೆ, ಆತನ ತೇಜಸ್ಸು ಉಲ್ಲಂಘಿಸುವದಕ್ಕೆ ಶಕ್ಯವಾದೀತೇ ? ಬ್ರಾಹ್ಮಣಾಪಮಾನವು ಐಶ್ವರ್ಯಹಾನಿಕರವು. ಐಶ್ವರ್ಯ

ವೆಂಬುವದು ಲಕ್ಷ್ಮೀಸ್ವರೂಪವಾದುದರಿಂದ, ಲಕ್ಷ್ಮೀಗುಣವು ಆಶ್ರಯದೋಷದಿಂದ ಚಂಚಲತ್ವವಂ ಪಡೆವದು. ಹ್ಯಾಗೆಂದರೆ :

ಅಶುಚಿದೇಶವನ್ನು ಆಚಾರವಂತರು ತ್ಯಜಿಸುವಂತೆ, ಘೂಕಪ್ರವಿಷ್ಟವಾದ ಗೃಹವಂ ಶ್ರೇಯೋವಂತರು ಬಿಡುವಂತೆ, ನ್ಯಾಯ ನೀತಿ ತಪ್ಪಿ ನಡೆವ ಪುರುಷನೆಂಥಾ ಗುಣವಂತನಾದರೂ ಲಕ್ಷ್ಮಿಯು ಆತನಂ ಬಿಟ್ಟು ಹೋಗುವಳು. ಆ ವೇಳೆಯಲ್ಲಿ ಖದ್ಯೋತಪ್ರಕಾಶದಂತೆ, ಕಾರ್ಮುಗಿಲು ಮಿಂಚುವಂತೆ, ತೋರಿ ಮರೆಯಾಗುವಳು. ಸ್ವಲ್ಪ ಶಕ್ತಿವಂತನಂ ಮಹತ್ತಾಗಿ ಮಾಡುವಳು ; ಗುಣವಂತನಂ ಅಶುಚಿಯಾಗಿ ಕಾಣುವಳು ; ತ್ಯಾಗಿಯಂ ಅಮಂಗಳದಂತೆ ಎನಿಸುವಳು : ಸಜ್ಜನವಂ ಅಪಶಕುನವಂ ಕಂಡಂತೆ ಹಿಂತಿರುಗುವಳು; ಶೂರನಂ ಸರ್ಪವಂ ಕಂಡಂತೆ ದಾಟುವಳು : ಮನಸ್ವಿಯಂ ಮುಳ್ಳಿನಂತೆ ಪರಿಹರಿಸುವಳು; ವಿನೀತನಂ ಹುಚ್ಚನಂತೆ ತಿಳಿವಳು. ಜಲರಾಶಿಸಂಜಾತಳಾದರೂ ತೃಷ್ಣೆಯನ್ನುಂಟುಮಾಡುವಳು ; ಅಮೃತಸೋದರಿಯಾದರೂ ತೀಕ್ಷ್ಣಳು ; ಪುರುಷೋತ್ತಮಪ್ರಿಯಳಾದರೂ ಖಲಜನೇಷ್ಟಳು ; ಈ ಲಕ್ಷ್ಮಿಯು ಯಾರಲ್ಲಿ ನೆಲಸಿ ಹ್ಯಾಗೆ ಹ್ಯಾಗೆ ಬೆಳಗುವಳೋ, ಹೆಚ್ಚಿ ಬೆಳಗುವ ದೀಪವು ಧೂಮವನ್ನುಗುಳುವಂತೆ, ಆ ಪುರುಷನಿಂದ ಮಲಿನಕರ್ಮವನ್ನೇ ಮಾಡಿಸುವಳು.

ಇಂಥಾ ಐಶ್ವರ್ಯಸ್ವರೂಪಳಾದ ಲಕ್ಷ್ಮಿಗೆ ಆಶ್ರಯರಾದ ಈ ಅರಸುಗಳು ನ್ಯಾಯ ನೀತಿ ತಪ್ಪಿ ನಡೆಯಬಾರದೆಂಬ ಪರಿಜ್ಞಾನಶೂನ್ಯರಾಗಿ, ಸಾಧುಗಳಂ ತಿರಸ್ಕರಿಸುತ್ತ, ಆಶಾಪಿಶಾಚಗ್ರಸ್ತರಾಗಿ, ಪ್ರಜಾಯೋಗಕ್ಷೇಮವನ್ನರಿಯದೆ, ಪ್ರಜಾನಿಕರದಿಂದ ಬಂದ ವಸ್ತುಗಳಂ ಪ್ರಜಾರಕ್ಷಣೆಗೆಂದು ತಿಳಿಯದೆ ಆತ್ಮಭೋಗಕ್ಕೆ ಯೋಗ್ಯಗಳೆಂದು ತಿಳಿಯುತ್ತ, ಭೂಮಿಯಲ್ಲಿ ಧಾನ್ಯ ಬೆಳೆಯುವಂತೆ ಧನವು ಬೆಳೆವದೆಂದು ತಿಳಿದು ಪ್ರಜೆಗಳಿಂದ ಬಂದುದು ಸಾಲದೆ 'ಇನ್ನೂ ಹೇರಳವಾಗಿ ತರಿಸಿರೆಂ'ದು ನೇಮಿಸುತ್ತ, ಪಾನದಿಂ ತೀಕ್ಷ್ಣಧಾರೆವುಳ್ಳ ಖಡ್ಗದಂತೆ ಪಾನಮತ್ತರಾಗಿ, ಪರಪ್ರೇರಿತರಾಗಿ, ಸಾಧುಗಳಂ ನಿಗ್ರಹಿಸುವರು. ದಂಡಾಘಾತದಿಂ ಫಲಗಳನ್ನುದುರಿಸುವಂತೆ ದಂಡಗಳಂ ಕಟ್ಟಿ[ಸಿ], ಕುಲೀನರಂ ಶಿಥಿಲಂಗೈಸುವರು.

ಬಲೆಗಳೊಳು ತಗುಲಿಸಿ ಕೊಲ್ಲುವ ಬೇಟೆಗಾರನನ್ನರಿಯದೆ ತೃಣವಂ ಭಕ್ಷಿಸುವ ಮೂಢ ಮೃಗದಂತೆ ವಿಷಯಾಸಕ್ತರಾಗಿ, ಮುಂದೆ ಬರುವ ಆಪತ್ತನ್ನರಿಯದೆ ಸಮೀಪವರ್ತಿಗಳಾಗಿ ಸ್ವಕಾರ್ಯತತ್ಪರರಾದ ವಂಚಕರಿಂದ ವಂಚಿತರಾಗಿ, ತಾವು ಮಾಡುವ ಅನಾಚಾರವಂ ಬಹುಯುಕ್ತವೆಂದು, ಜೂಜುಗಳಂ ವಿನೋದಕೇಳಿಯೆಂದು, ಪರಸ್ತ್ರೀಸಂಗವಂ ರಸಿಕತ್ವವೆಂದು, ಗೀತ ವೇಶ್ಯಾಸಕ್ತಿಯಂ ಪ್ರೌಢಿಮೆಯೆಂದು, ಪತ್ನೀಪರಿತ್ಯಾಗವಂ ಜಿತೇಂದ್ರಿಯತ್ವವೆಂದು, ಮತ್ತತೆಯಂ ವಿಲಾಸಶೌರ್ಯವೆಂದು, ವೃದ್ಧವಚನತಿರಸ್ಕಾರವಂ ನೋಡಿ ಪ್ರಭುಗಳೇ ಸ್ವಯಂ ಬುದ್ಧಿವಂತರೆಂದು, ಪ್ರಭು ಮಾಡತಕ್ಕ ಕಾರ್ಯವಂ ಭೃತ್ಯರು ಮಾಡಿಕೊಳ್ಳುತ್ತಿದ್ದರೆ "ದರ್ವಿಯಿರುವಲ್ಲಿ ಹಸ್ತಕ್ಕೆ ಸೆಕೆ ಉಂಟೇ ಬುದ್ಧೀ" ಎನ್ನುತ್ತ [ಇರುವ] ಅಪರಾಧಿಗಳಂ ದಂಡಿಸದೆ ಇರುವದಂ ನೋಡಿ 'ಪ್ರಭುಗಳು ಮಹಾಕರುಣಾಳುಗಳು' ಎಂದು, ದೇವತಾಹೇಳನವಂ ನೋಡಿ 'ರಾಜಾ ಪ್ರತ್ಯಕ್ಷದೇವತಾ' ಎಂದು, ಹೀಗೆ ಮಾಡುವ ಪ್ರಭುಗಳ ಅಕಾರ್ಯವಂ ವಿಹಿತವೆಂದು ಶ್ಲಾಘಿಸುತ್ತ, ಮನಸ್ಸಿನಲ್ಲಿ ಪರಿಹಾಸಗೊಂಡು ನಗುತ್ತಲಿರುವ ವಂಚಕರಿಂದ, 'ನೀನು ಈಶ್ವರನೆಂ'ದು ಸ್ತುತಿಸಿದರೆ, ತನ್ನ ಹಣೆಯಲ್ಲಿ

ಅವ್ಯಕ್ತವಾಗಿ ಬೇರೆ ನೇತ್ರ ಉಂಟೆಂದು ತಿಳಿಯುತ್ತ, ಭುಜದೊಳಗೆ ಬೇರೆ ಭುಜಯುಗ್ಮ ಇದ್ದೀತು. ಆದರಿಂದ ತಾನೇ ಈಶ್ವರನೆಂದು ಭಾವಿಸುತ್ತ, ತಾನು ನಡೆದುದೇ ಪರಮ ಧರ್ಮವೆಂದು, ತನಗೆ ತೋರಿದುದೇ ಶಿಷ್ಟಾಚಾರವೆಂದು, ತಾನು ಹೇಳಿದುದೇ ವೇದಸದೃಶ ವೆಂದು, ತನಗಿಂತಲೂ ಬುದ್ಧಿವಂತರೇ ಇಲ್ಲವೆಂದು, ತಾನು ನೋಡಿದರೆ ಈತನು ಧನ್ಯ ನಾಗುವನು, ಸ್ಪರ್ಶಿಸಿದರೆ ಈತನ ತನು ಪಾವನವಾಗುವದು, ಮಾತನಾಡಿದರೆ ಈತನು ಕೃತ ಕೃತ್ಯನಾದಾನು ಎಂದು ತಿಳಿಯುತ್ತ, ಮಿಥ್ಯಾಮಾಹಾತ್ಮ್ಯಯಿಂದ ದೇವತೆಗಳಿಗೆ ಅಭಿವಂದಿ ಸದೆ, ಹಿರಿಯರಿಗೆ ನಮಸ್ಕರಿಸದೆ, ಶ್ರೋತ್ರಿಯರಿಗೆ ಕೈಮುಗಿಯದೆ, ವಂಚಕರ ವಾಕ್ಯವಂ ವೇದಸದೃಶವಾಗಿ ಭಾವಿಸುತ್ತ, ಅವರು ಹೇಳಿದವರಿಗೆ ಕೊಡುತ್ತ, ಆಭಿಚಾರವಂ ಪ್ರಮಾಣ ವೆಂದು ತಿಳಿಯುತ್ತ, ಲೋಕಾಪವಾದವಂ ಗಣನೆಗೆ ತರದೆ ಇರುವ ಈ ನಂದರಲ್ಲಿ ದೈವ ಸಂಕಲ್ಪವೆಂತಿರುವದೋ ? ಆ ಬ್ರಾಹ್ಮಣನು ಏನು ನಿಮಿತ್ತ ಬಂದನೋ ? ಮುಂದೆ ಏನಾಗುವದೋ ?"ಎಂದು ಹೇಳಿಕೊಳ್ಳುತ್ತ, ಅಲ್ಲಿಯ ಸಭಾಜನವೆಲ್ಲರೂ ಹೊರಟು ಹೋಗುತ್ತಿರಲು,

ಆಗ ದೇಶಾಂತರದ ವರ್ತಮಾನವಂ ತಿಳಿದು ಹೇಳುವದಕ್ಕೆ ಆ ಸತ್ರಕ್ಕೆ ಬಂದು ಇದ್ದ ಪರ್ವತರಾಜ್ಯದ ಗೂಢಚಾರರು ಅಲ್ಲಿ ನಡೆದ ಬ್ರಾಹ್ಮಣಾಪಮಾನವಂ, ಕ್ರುದ್ಧನಾಗಿ ಆತ ನಂದರಲ್ಲಿ ಮಾಡಿದ ಪ್ರತಿಜ್ಞೆಯಂ, ಆಗಲೇ ಆದ ಉತ್ಪಾತಗಳಂ ನೋಡಿ, ಈ ಅರ್ಥವಂ ತಮ್ಮ ರಾಜಸನ್ನಿಧಿಯಲ್ಲಿ ವಿಜ್ಞಾಪಿಸತಕ್ಕುದೆಂದು ನಿಶ್ಚೈಸಿ, ಆ ಚಾರರು ಪರ್ವತರಾಜ್ಯಕ್ಕೆ ಹೋಗುತ್ತಿರಲು, ಅಷ್ಟರಲ್ಲಿಯೇ ಮೊದಲು ನೇಮಿಸಿ ಇದ್ದ ಪಂಜರರಕ್ಷಕರಾದ ದೂತರು ಹೋಗಿ ಪರ್ವತರಾಜ್ಯಾಧಿಪತಿಯಾದ ಪರ್ವತೇಶ್ವರನಿಗೆ ಕೈಮುಗಿದು ಬಿನ್ನೈಸುತ್ತಿದ್ದರು :

"ಜೀಯಾ, ನಾವು ಸಿಂಹಪಂಜರವಂ ತೆಗೆದುಕೊಂಡು ಪಾಟಲೀಪುರಕ್ಕೆ ಹೋಗಿದ್ದ ಚಾರರು. ಅಪ್ಪಣೆ ಮೇರೆಗೆ ಹೋಗಿ, ಪಾಟಲೀಪುರದ ಆಸ್ಥಾನದ ಬಳಿಯಲ್ಲಿ ಪಂಜರ ವನ್ನಿಳುಹಿ, ಅದರ ವಿವರವಂ ಹೇಳಿಕೊಂಡು, ನಾವು ಬೀದಿಗಳಲ್ಲಿ ಸಾರುತ್ತಲಿರಲು, ಆಗ ಅಲ್ಲಿ ಜನರುಗಳೆಲ್ಲರೂ ಮಂತ್ರಿಗಳೂ ಸಹ ಬಂದು ನೋಡಿ, ವಿವರವಾಗದೆ ಸುಮ್ಮನೆ ಹೋಗಲು, ಮತ್ತೊಂದು ದಿನದಲ್ಲಿ ಕಾರಾಗೃಹದಲ್ಲಿ ಇದ್ದ ಚಂದ್ರಗುಪ್ತನೆಂಬವನು ಬಂದು ನೋಡಿ, ಅದರ ಮರ್ಮವಂ ನೋಡಿ ತಿಳಿದು, ಕ್ರಮವಾಗಿ ಪರೀಕ್ಷೆಯಂ ಮಾಡಿದುದರಿಂದ ಕಪಟಸಿಂಹವೆಂದು ನಿಶ್ಚಯವಾಗಲು, ಆಗ ಕರುಣಾಳುವಾದ ಚಂದ್ರ ಗುಪ್ತನು ತನ್ನ ಕಣ್ಣುಸನ್ನೆಯಿಂದ ಅಲ್ಲಿಂದ ನಮ್ಮಂ ಹೊರಟು ಹೋಗುವಂತೆ ಸೂಚಿ ಸಲು, ಆ ಅರ್ಥವಂ ತಿಳಿದು ಬೈರಾಗಿ ವೇಷವಂ ಧರಿಸಿ ತಪ್ಪಿಸಿಕೊಂಡು ಸನ್ನಿಧಿಗೆ ಬರುತ್ತಲಿರುವಲ್ಲಿ, 'ಪಂಜರಪರೀಕ್ಷೆಯಿಂದ ಚಂದ್ರಗುಪ್ತನಿಗೆ ಬಂಧವಿಮೋಚನವಾಗಿ ಅನ್ನಸತ್ರಾಧಿಕಾರದಲ್ಲಿ ನಂದರಿಂದ ಆಜ್ಞಪ್ತನಾದನಂತೆ' ಎಂದು ಮಾರ್ಗಸ್ಥ ಜನರುಗಳ ಮುಖದಿಂದ ಕೇಳಿದ ವರ್ತಮಾನವು" ಎಂದು ಬಿನ್ನೈಸಲು,

ಅದಂ ಕೇಳಿ, ಪರ್ವತರಾಯನು ಶಬರವರ್ಮನಂ ನೋಡಿ, "ಏನೈ, ನೀನು ಪಾಟಲೀ ಪುರಕ್ಕೆ ಕಳುಹಿಸಿದ ಕಪಟಶಿಲ್ಪವು ಅಲ್ಲಿಯ ಮಂತ್ರಿಗಳಿಂದ ಆಗದೆ, ಚಂದ್ರಗುಪ್ತನೆಂಬು ವನಿಂದ ಪರೀಕ್ಷಿತವಾಯಿತಂತೆ ; ಆದರಿಂದ ಅವನ ಬಂಧನಿವೃತ್ತಿಯಾಗಿ ಅನ್ನಸತ್ರಾಧಿ ಕಾರವಂ ನೋಡುತ್ತಲಿರುವಂತೆ ಆತನಿಗೆ ನಂದರು ನೇಮಿಸಿದರಂತೆ ; ಆತನು ತನ್ನ ಕಣ್ಣು

ಸನ್ನೆಯಿಂದ ಪಂಜರರಕ್ಷಕರಾದ ನಮ್ಮ ದೂತರಂ ಅಲ್ಲಿಂದ ಹೋಗುವಂತೆ ಸೂಚಿಸುವದಕ್ಕೆ ನಿಮಿತ್ತವೇನು ? ಆತನೇ ನಾವು ಮೊದಲು ಕೇಳಿ ಇದ್ದ ಮೌರ್ಯ ಪುತ್ರನಾದಾನು" ಎನಲು, ಆ ಮಾತಿಗೆ,

"ಜೀಯಾ ಆ ಚಂದ್ರಗುಪ್ತನಿಗೆ ಬಂಧವಿಮೋಚನವು ಈ ಸನ್ನಿಧಾನದಿಂದಲೇ ಆದಂತಾಯಿತು. ಧನಹೀನನಾಗಿ, ಕೃಶನಾಗಿ, ವಿಪತ್ತಿಗೆ ತಗುಲಿ ಇದ್ದ ಆ ಚಂದ್ರಗುಪ್ತನಿಗೆ ಆತನ ಶತ್ರುಗಳಂ ನಿಗ್ರಹಿಸುವದಕ್ಕೆ ಶಕ್ತರಾದ ಪ್ರಭುಗಳ ಆಶ್ರಯವುಂಟಾದರೆ, ಆತನ ಅದೃಷ್ಟ ಒದಗುವದೆಂದು ಹೇಳಬೇಕು. ಮೌರ್ಯಪುತ್ರರು ಬುದ್ಧಿವಂತರೆಂದು ಮೊದಲು ಕೇಳಿದ್ದ ಮಾತಿಗೆ, ಅವರಲ್ಲಿ ಈ ಚಂದ್ರಗುಪ್ತನು ತಾನು ಮಾಡಿದ ಪಂಜರಪರೀಕ್ಷಾನಂತರದಲ್ಲಿ, ಕಣ್ಣುಸನ್ನೆಯಿಂದ ನಮ್ಮ ದೂತರಂ ಅಲ್ಲಿಂದ ಹೊರಟು ಹೋಗುವಂತೆ ಮಾಡುವದಕ್ಕೆ ನಿಮಿತ್ತವೇನು ಎಂದರೆ, ಈ ಪಂಜರರಕ್ಷಕರು ಆ ಸಿಂಹವು ಅಮಾನುಷಕೃತವೆಂದು ಆಸ್ಥಾನದ ಬಳಿಯಲ್ಲಿ ಹೇಳಿದ ಮಾತಿಗೆ ಅದು ಪರೀಕ್ಷೆಯಿಂದ ಕಪಟಶಿಲ್ಪವಾಗಲು, 'ಇನ್ನು ಈ ಪಂಜರರಕ್ಷಕರು ಇಲ್ಲಿ ಇದ್ದರೆ ರಾಜದಂಡಕ್ಕೆ ಯೋಗ್ಯರಾದಾರು. ಹಾಗೆ ನಡೆದರೆ ತನ್ನ ನಿಮಿತ್ತದಿಂದ ದಂಡನೆ ನಡೆದಂತಾಗುವದು. ಹಾಗೆ ಆಗಬಾರದೆಂ'ಬ ಕರುಣದಿಂದಲೋ ಅಥವಾ ಪಂಜರಮೂಲಕದಿಂದ ತನಗೆ ಬಂಧನನಿವೃತ್ತಿ ಆಗುವದೆಂಬ ಕೃತಜ್ಞತೆಯಿಂದಲೋ ಕಣ್ಣಸನ್ನೆಯಂ ಮಾಡಿ, ಈ ದೂತರಂ ಅಲ್ಲಿ ನಿಲ್ಲದಂತೆ ಮಾಡಿ ಇದ್ದಾನು. ಅದರಿಂದ ಆತನು ಚತುರನು ಎನ್ನಬೇಕು. ಆತನಂ ಪಕ್ಷೀಕರಿಸಿದರೆ, ಪ್ರಭುಗಳಿಗೆ ಕೀರ್ತಿಲಾಭ ಉಂಟಾದೀತು. ದೈವಬಲವು ಯಾವ ಪುರುಷನಲ್ಲಿ ಹ್ಯಾಗಿರುವುದೋ" ಎಂದು ವಿಜ್ಞಾಪಿಸಿ,

ಪಂಜರರಕ್ಷಕರಂ ನೋಡಿ, "ಎಲೈ, ಆ ಚಂದ್ರಗುಪ್ತನು 'ನೀವು ಯಾರೆಂ'ದು ನಿಮ್ಮಂ ಕೇಳಿದನೋ ಇಲ್ಲವೋ" ಎಂದು ಶಬರವರ್ಮನು ಕೇಳಲು, "ಸ್ವಾಮಿ, 'ನಿಮ್ಮ ದೇಶ ವ್ಯಾವದು' ಎಂದು ನಮ್ಮಂ ಕೇಳಿದ ಮಾತಿಗೆ, ನಾವು 'ಗಟ್ಟಬೆಟ್ಟಗಳಲ್ಲಿ ವಾಸವಂ ಮಾಡುವ ಭೃತ್ಯ'ರೆಂದು ಹೇಳಿದುದುಂಟು" ಎಂದು ದೂತರು ವಿಜ್ಞಾಪಿಸಲು,

ಅದಂ ಕೇಳಿ, ಆ ರಾಯನಂ ಕುರಿತು, "ಜೀಯ, ಈ ದೂತರ ವಚನದಿಂದ 'ಪಂಜರ ಸಿಂಹವು ಪರ್ವತದೇಶಾಧಿಪತಿಗಳಿಂದ ನಂದರ ಹೇಳನಾರ್ಥವಾಗಿ ಕಳುಹಿಸಿ ಇದೆ' ಎಂಬುದಾಗಿ ಚಂದ್ರಗುಪ್ತನು ಗೊತ್ತಾಗಿ ತಿಳಿದು ಇದ್ದಾನು. ಆತನಿಗೆ ಅಲ್ಲಿಯೂ ಇರುವದಕ್ಕೆ ಅಶಕ್ಯವಾದ ಸಮಯದಲ್ಲಿಯಾದರೂ, ರಾಜಕಾರ್ಯಾರ್ಥದಲ್ಲಿಯಾದರೂ, ಈ ಪ್ರಾಂತಗಳಿಗೆ ಬಂದರೂ ಬರಬಹುದು" ಎಂದು ಶಬರವರ್ಮನೆಂಬ ಮಂತ್ರಿಯು ಪರ್ವತೇಶ್ವರನಿಗೆ ವಿಜ್ಞಾಪಿಸುತ್ತಿರಲು, ಆ ರಾಯನು ಆ ಮಾತಿಗೆ "ಹಾಗೇ ಆದೀತೆಂ"ದು ಸ್ಥಾನಾಂತರವನ್ನೈದುತ್ತಿದ್ದನು.

ಹೀಗಿರುತ್ತಿರಲು, ನಂದರು ಮಾಡಿದ ಅಪಮಾನಕ್ಕೆ ಕ್ರುದ್ಧನಾಗಿ ಶಪಥವಂ ಮಾಡಿ ಹೋಗುತ್ತಲಿರುವ ಚಾಣಕ್ಯನು, ತನ್ನ ಮನಸ್ಸಿನಲ್ಲಿ "[೧]ಈ[೧] ನಂದರಂ ನನ್ನ ಬುದ್ಧಿಪೌರುಷದಿಂದ ಸಂಹರಿಸಿದರೆ, ಈಗ ಶುದ್ಧಕ್ಷತ್ರಿಯಸಂತತಿ ಸಾಗದೆ ನಿಲ್ಲುವದು. ಉಪೇಕ್ಷಿಸಿದರೆ,

---

೧. ಈಗ (ಕ)

ನನ್ನ ಪ್ರತಿಜ್ಞೆಗೆ ಭಂಗಬರುವುದು. ಶುದ್ಧಕ್ಷತ್ರಿಯನಾಗಿ ದುರಾತ್ಮನಾದ ವೇನರಾಯನಂತೆ ಸಾಧುಗಳಂ ಪೀಡಿಸುವರು. ಈ ನಂದರಿಂದ ಲೋಕಕ್ಕೆ ಕ್ಷೇಮವಾಗದು. ಶೂದ್ರಸ್ತ್ರೀ ಪುತ್ರನಾದ ವಿದುರನು ಧೃತರಾಷ್ಟ್ರನ ರಾಜ್ಯಭಾರವಂ ನಿರ್ವಹಿಸುತ್ತ ಖ್ಯಾತಿವಂತನಾದಂತೆ, ಈ ಚಂದ್ರಗುಪ್ತನು ತನ್ನ ಬುದ್ಧಿಬಲದಿಂದ ಶತ್ರುಗಳಾದ ನಂದರು ಸಂಹೃತರಾಗಲು ಅದೇ ನಂದರಾಜ್ಯವಂ ಪರಿಪಾಲಿಸುತ್ತ ನ್ಯಾಯದಿಂ ಪ್ರಜಾಪರಿಪಾಲನವಂ ಮಾಡುತ್ತ ಯಶೋ ವಂತನಾಗಿ ಇದ್ದರೆ, ಇದಕ್ಕಿಂತಲೂ ಲೋಕಕ್ಷೇಮವೆಂಬುವದು ಹ್ಯಾಗಿರುವದು ? ಲೋಕ ದಲ್ಲಿ ಭೂತದಯವೆಂಬುವದು ಮುಖ್ಯಧರ್ಮವು. ಅದಕ್ಕಿಂತಲೂ ಭಯಪಟ್ಟು ಶರಣಾ ಗತರಾದವರಂ ರಕ್ಷಿಸುವದು ಎಂಬುವದು ಪರಮಧರ್ಮವು. ಈ ಅರ್ಥದಲ್ಲಿ ಪೂರ್ವ ಶಿಷ್ಟಾಚಾರ [೧]ಬಹು[೧]ವಾಗಿ ಕೇಳಿಹೆವು. ಗೋವುಗಳಂ ಪ್ರಜೆಗಳಂ ನಿಗ್ರಹಿಸುವ ವ್ಯಾಘ್ರಗಳಂ ನಿಗ್ರಹಿಸಿದಂತೆ, ನಂದನಿಗ್ರಹದಿಂದ ಪ್ರತ್ಯವಾಯ ಬರಲಾರದು" ಎಂದು ಯೋಚಿಸುತ್ತ ಹೋಗುತ್ತಲಿರುವ ಚಾಣಕ್ಯನ ಸಮೀಪಕ್ಕೆ ಚಂದ್ರಗುಪ್ತನು ಬಂದು, ಅಭಿವಂದಿಸಿ, ಫಲೋಪಹಾರಗಳಂ ಸಮರ್ಪಿಸಿ,

"ಸ್ವಾಮೀ, ನನಗೆ ಇಲ್ಲಿ ಏನು ಕಾರ್ಯವು ? ಸಂಗಡಲೇ ಸೇವೆಯಂ ಮಾಡುತ್ತ ಬರುತ್ತಲಿದ್ದೇನೆ. ಅರಣ್ಯವೆಲ್ಲವಂ ದಹಿಸುವ ಕಾಡುಗಿಚ್ಚಿನ ಸೆಕೆಯಿಂದ ಬಾಡುತ್ತಲಿರುವ ಚಂಪಕವೃಕ್ಷವನ್ನು ಲೋಕಸಂತಾಪಶಾಮಕವಾದ ಉದಕಧಾರೆಗಳಿಂದ ಆ ಅಗ್ನಿಯಂ ಕೆಡಿಸಿ ಸುಖಪಡಿಸುವ ಮೇಘದಂತೆ. ಸ್ವಜನನಾಶಕರಾದ ಈ ಶತ್ರುಗಳ ತಿರಸ್ಕಾರ ದುಃಖಗಳಿಂದ ಸಂತಪ್ತನಾದ ನನ್ನನ್ನು ನಿಮ್ಮ ಕೃಪಾಪಾಂಗಾಮೃತಧಾರಾಸೇಚನೆಯಿಂದ ಸುಖಿಸುವಂತೆ ಮಾಡಬೇಕೆಂ"ದು ಪಾದಗಳಂ ಪಿಡಿದು ನಮಸ್ಕರಿಸುವ ಚಂದ್ರಗುಪ್ತನಂ ನೋಡಿ, ದಯಾರ್ದ್ರಹೃದಯನಾದ ಚಾಣಕ್ಯನಿಂತೆಂದನು :

"ಅಯ್ಯ ಚಂದ್ರಗುಪ್ತನೆ,ಇನ್ನು ಮೇಲೆ ಶತ್ರುಗಳ ಭಯವಂ ಬಿಡುವನಾಗು. ಸ್ವಲ್ಪ ಕಾಲದಲ್ಲಿಯೇ ಈ ನಂದರಂ ನಿಗ್ರಹಿಸಿ ಸಕಲಸಾಮಂತರಾಜ ಮಣಿಮಕುಟಪ್ರಭಾ ನೀರಾಜಿತವಾಗುತ್ತ ಸಾರ್ವಭೌಮಪದಕ್ಕೆ ಯೋಗ್ಯವಾದ ಮಹಾಸಿಂಹಾಸನದಲ್ಲಿ ನಿನ್ನಂ ಕುಳ್ಳಿರಿಸಿ, ಪಟ್ಟಾಭಿಷೇಕವಂ ಮಾಡಿಸಿ, ಆ ವೈಭವವಂ ನೋಡಿ, ಆ ಬಳಿಕ ಕೃತಕೃತ್ಯನಾಗಿ ತಪೋವನಕ್ಕೆ ಹೋಗುತ್ತಲಿದ್ದೇನೆ ; ನಂಬುವನಾಗು. ಇದಕ್ಕೆ ನನ್ನ ಸುಕೃತವೇ ಸಾಕ್ಷಿ" ಎಂದು ಅಭಯವಂ ಕೊಟ್ಟು, ಆಗ ಚಾಣಕ್ಯನು ಜನರಹಿತವಾದ ವೃಕ್ಷಚ್ಛಾಯೆಯಲ್ಲಿ ವಿಶ್ರಮಿಸಿಕೊಳ್ಳುತ್ತ, ರಾಜಕಾರ್ಯವನ್ನಾಲೋಚಿಸುವನಾಗಿ, ಪಾದಸೇವೆಯಂ ಮಾಡುತ್ತ ಲಿರುವ ಚಂದ್ರಗುಪ್ತನನ್ನು ಕುರಿತು,

"ಅಯ್ಯ ಕುಮಾರಕನೆ. ಈ ಭೂಮಿಯಲ್ಲಿ ಇರುವ ಮಂಡಲಾಧಿಪತಿಗಳಲ್ಲಿ ನಂದರಿಗೆ ಶತ್ರುಗಳು ಯಾರು, ಮಿತ್ರರುಗಳು ಯಾರು?" ಎಂದು ಕೇಳಲು, "ಸ್ವಾಮೀ, ಅರಸುಗಳ ಹೃದಯದಲ್ಲಿ ನಂದರ ಮೇಲೆ ಮತ್ಸರವುಳ್ಳವರಾದರೂ ರಾಕ್ಷಸನು ಮಾಡುವ ಉಪಾಯ ಚತುಷ್ಟಯಗಳಿಂದ ಪುಷ್ಪಿತವಾದ ವನವನ್ನಾಶ್ರಯಿಸಿ ಜೀವಿಸುತ್ತಲಿರುವ ಭ್ರಮರನಿಕರ ಗಳಂತೆ ಕೆಲವರು ನಂದರಲ್ಲಿ ಅನುರಕ್ತರಾಗಿ ದಾಸಭಾವದಿಂದಿರುವರು ; ಮತ್ತೆ ಕಲವರು

---

೧. ಬಹಳ (ಕ)

ರಾಕ್ಷಸನ ಭೀತಿಯಿಂದ, ಅಂಕುಶಪ್ರಹಾರಕ್ಕೆ ಭೀತಿಪಡುತ್ತ ಮಾವುತರ ವಶವರ್ತಿಗಳಾದ ಮದಗಜಗಳಂತೆ ನಂದರಿಗೆ ನಿಯಮ್ಯರಾಗಿ ಇರುವರು ; ರಾಕ್ಷಸನು ಆ ಮಂಡಳಾಧಿಪರಂ ಯಾವ ಮರ್ಯಾದೆಯಲ್ಲಿ ಇಟ್ಟಿಹನೆಂದರೆ, ಇದರಲ್ಲಿ ಮಲೆತವರಂ ದಂಡಿಸುತ್ತ, ಅನುರಕ್ತರನ್ನಾದರಿಸುತ್ತ, ಅವರವರ್ಗೆ ಉಚಿತವಾದಷ್ಟು ದೇಶವಂ ಕೊಟ್ಟು, ಹೆಚ್ಚಿದುದಕ್ಕೆ ಕಪ್ಪಗಳಂ ನೇಮಿಸಿ, ಕಾಲಕಾಲಕ್ಕೆ ತಪ್ಪದೆ ಧನಗಳನ್ನಾರ್ಜಿಸುತ್ತ, ರಾಜಕೋಶದಲ್ಲಿ ರಾಶಿಗೊಳಿಸುವನಲ್ಲದೆ ಕ್ಷಣಮಾತ್ರ ಉಪೇಕ್ಷೆಯಂ ಮಾಡನು. ಹೀಗಿರುವಲ್ಲಿ ಉಳಿದ ಅಧಿಕಾರಿಗಳಿಗೆ ಸಂಬಳ ಹೊರತು ಲೇಶಮಾತ್ರಕ್ಕೆ ಅವಕಾಶವಿಲ್ಲದುದರಿಂದ, ಅನ್ಯರ ಶ್ರೇಯಸ್ಸಂ ನೋಡಿ ಸಹಿಸುವನಂತೆ ಕಾಣಿಸುವದಿಲ್ಲ" ಎಂದು ಚಂದ್ರಗುಪ್ತನು ಹೇಳುತ್ತಿರಲು, ಆ ಮಾತಿಗೆ,

"ಅಯ್ಯ ಕುಮಾರಕನೆ, ರಾಕ್ಷಸನಲ್ಲಿ ಈ ಅರ್ಥವು ದೋಷವೆಂದೆಣಿಸಕೊಡದು. ಅದೇನೆಂದರೆ, ಜನಗಳಲ್ಲಿ ಉಚಿತವಂ ಮೀರಿ ಧನಗಳು ಕೂಡಿ ಬಂದರೆ, ಆ ಧನಸಂಪನ್ನರಾದ ಜನಗಳಿಗೆ ನಿಗ್ರಹಾನುಗ್ರಹ ಆಜ್ಞಾಶಕ್ತಿಗಳುಂಟಾಗಿ, ಸ್ವಾಮಿಯಂ ಲಕ್ಷೀಕರಿಸದೆ, ಸಮಯಾಂತರದಲ್ಲಿ ಸ್ವಾಮಿಪದವನ್ನಪೇಕ್ಷಿಸುವರು. ಆದರಿಂದ ಸ್ವಾಮಿಭೃತ್ಯನ್ಯಾಯ ತಪ್ಪಿ ರಾಜ್ಯತಂತ್ರ ಕೆಡುವದೆಂಬ ಶಂಕೆಯಿಂದ ರಾಕ್ಷಸನು ಜನಗಳಿಗೆ ಉಚಿತವಾದ ಧನಪ್ರಾಪ್ತಿಯನ್ನುಂಟುಮಾಡುವನು. ಇದು ಸ್ವಾಮಿಭಕ್ತನಾದ ಮಂತ್ರಿಯ ಗುಣವಲ್ಲದೆ ರಾಕ್ಷಸನಲ್ಲಿ ಇದಂ ದೋಷವೆಂದೆಣಿಸಕೂಡದು. ಇದರಿಂ ಜನರು ತನ್ನ ಕೈಮೀರಿ ಪೋಗದಂತೆ ರಾಜ್ಯತಂತ್ರವಂ ಮಾಡುವದರಿಂದ ರಾಕ್ಷಸನು ಮಂತ್ರಿಪದಕ್ಕೆ ಯೋಗ್ಯನಹುದು. ಮತ್ತೆ ನಂದರಿಗೆ ಆಪ್ತಮಿತ್ರರು ಯಾರು, ಉದಾಸೀನಪಕ್ಷದ ಅರಸುಗಳು ಯಾರೆಂ"ದು ಚಾಣಕ್ಯನು ಕೇಳುತ್ತಿರಲು,

"ಸ್ವಾಮಿ, ನಂದರಿಗೆ ಕಾಶೀರಾಜನು, ಮತ್ಸ್ಯದೇಶಾಧಿಪತಿ ಇವರಿಬ್ಬರೂ ಬಹು ಆಪ್ತಮಿತ್ರರು. ಮತ್ತೆ ಕಾಶ್ಮೀರಪತಿ, ಮಲಯಪತಿ, ಸಿಂಧುಪತಿ, ಕುಲೂತಪತಿ, ಪಾರಸೀಕಪತಿ, ಕಾಂಭೋಜ ಚೀನ ಹೂಣ ದೇಶಾಧಿಪತಿಗಳಿಗೆ ನಿಯಾಮಕನಾಗಿ[ರುವ] ಪರ್ವತರಾಜ್ಯಾಧಿಪತಿಯಾದ ಪರ್ವತೇಶ್ವರನು ನಂದರಿಗೆ ಉದಾಸೀನಪಕ್ಷದವನು. ಆ ಪರ್ವತೇಶ್ವರನಿಗೆ ಸಮಯಾಂತರದಲ್ಲಿ ಶತ್ರುಗಳೊಡನೆ ಬಂದ ಮಹತ್ಕಲಹವು ಈ ಅಮಾತ್ಯ ರಾಕ್ಷಸನಿಂದ ಶಮನವಾದುದರಿಂದ ಈ ರಾಕ್ಷಸನು ತನಗೆ ಮಿತ್ರನೆಂದು ಪರ್ವತೇಶ್ವರನು ಭಾವಿಸುವನಂತೆ. ಆತನು ನಂದರಿಗೆ ಉದಾಸೀನಪಕ್ಷದವನಾದರೂ, ಏನು ಕಾರಣದಿಂದಲೋ ನಂದರ ಹೇಳನಾರ್ಥವಾಗಿ ಕಪಟಶಿಲ್ಪವಂ ರಚಿಸಿ, ಪಾಟಲೀಪುರಕ್ಕೆ ಕಳುಹಿಸಿ ಇದ್ದನು. ಆ ಶಿಲ್ಪಪರೀಕ್ಷೆಯಿಂದ ನನಗೆ ಉಂಟಾಗಿ ಇದ್ದ ಬಂಧನವು ವಿಮುಕ್ತವಾಯಿತು" ಎಂದು ಚಂದ್ರಗುಪ್ತ ಹೇಳಲು,

"ಅಯ್ಯ ಕುಮಾರಕನೆ, ಲೋಕದಲ್ಲಿ ಸ್ವಜನರು ಮಾಡಿದ ಹೇಳನವು ವಿನೋದದಲ್ಲಿ ಪರ್ಯವಸಾನವಾದೀತು ; ಅನ್ಯರು ಮಾಡಿದರೆ ವೈರವುಂಟಾಗುವದು. ಈ ಅರ್ಥವಂ ತಿಳಿದು, ನಂದರಿಗೆ ವೈರಿಗಳಾದ ಜನರು ಪರ್ವತೇಶ್ವರನಲ್ಲಿ ಆಶ್ರಯವಂ ಸಂಪಾದಿಸಿದಲ್ಲಿ ಅಥವಾ ಪರ್ವತೇಶ್ವರನ ಶತ್ರುಗಳು ನಂದರಲ್ಲಿ ಆಶ್ರಯವಂ ಸಂಪಾದಿಸಿದಾಗ್ಯೂ, ಅರಸುಗಳಿರ್ವರಿಗೆ ಉದಾಸೀನಭಾವ ಹೋಗಿ, ಅನ್ಯೋನ್ಯವೈರ ಹೆಚ್ಚಿ ಬರುವದು. ಇದಂತಿರಲಿ.

ಈ ಪುರದಲ್ಲಿ ನಿಮ್ಮ ತಂದೆಯಾದ ಮೌರ್ಯನಲ್ಲಿ ಅನುರಕ್ತರಾಗಿ ಇದ್ದ ಅಧಿಕಾರಿಗಳು ಉಂಟೋ ಇಲ್ಲವೋ ?" ಎಂದು ಚಾಣಕ್ಯ ಕೇಳಲು.

"ಸ್ವಾಮಿ ನಮ್ಮ ತಂದೆ ಮೌರ್ಯನು ಮಾಡಿದ ಆದರದಿಂದ ಬಾಗುರಾಯಣ ಮುಖ್ಯರಾದ ಸೇನಾಪತಿಗಳೆಲ್ಲರೂ ಪ್ರಸಿದ್ಧಿಯಂ ಪಡೆದರು. ಈಗ ಆ ಕೃತಜ್ಞತೆಯು ಅವರ ಮನಸ್ಸಿನಲ್ಲಿ ಉಂಟೋ ಇಲ್ಲವೋ. ಬುದ್ಧಿ ಶೌರ್ಯಗಳಲ್ಲಿ ನಮ್ಮ ತಂದೆ ರಾಕ್ಷಸನಿಗೆ ಸಮನಾದರೂ, ಆತನು ಮಾಡುವ ರಾಜ್ಯವಿಚಾರವಂ ನೋಡಿ ರಾಕ್ಷಸನು ತಟಸ್ಥನಾಗಿಯೇ ಇರುತ್ತಲಿದ್ದನು" ಎಂದು ಚಂದ್ರಗುಪ್ತನು ಹೇಳಲು,

"ಅಯ್ಯ ಕುಮಾರಕನೆ, ರಾಕ್ಷಸನಲ್ಲಿ ಶೌರ್ಯವೆಂಬುವದು ಉಂಟೇ ?" ಎನಲು, "ಸ್ವಾಮಿ, ಈ ಸೇನಾಪತಿಗಳೆಲ್ಲರಿಗಿಂತಲೂ ಅಧಿಕಶೌರ್ಯವಂತನಾದ ರಾಕ್ಷಸನು ಯುದ್ಧೋನ್ಮುಖನಾದರೆ, ಪ್ರತಿಪ[೧]ಕ್ಷದ ಲಕ್ಷ[೧]ವನ್ನಾದರೂ ಸಹಸ್ರಾಕ್ಷನು ಪರ್ವತಗಳ ಪಕ್ಷಗಳಂ ಕ್ಷೋದಗೈವಂತೆ ವಿಕ್ಷೋಭಪಡಿಸತಕ್ಕವನೆಂದು ಕಂಡು ಕೇಳಿ ಉಂಟು. ಅದರಿಂದ ಈ ರಾಜ್ಯಭಾರನಿರ್ವಾಹವು ರಾಕ್ಷಸನಲ್ಲಿಯೇ ಉಂಟಾಗಿ ಇರುವದು" ಎಂದು ಚಂದ್ರಗುಪ್ತನು ಹೇಳುತ್ತಿರಲು,

ಅದಂ ಕೇಳಿ ಚಾಣಕ್ಯನು, ರಾಕ್ಷಸನ ಗುಣವಂ ಮನದಲ್ಲಿಯೇ ಶ್ಲಾಘಿಸುತ್ತ, ಮುಂದೆ ರಾಜಕಾರ್ಯ ಒದಗಿ ಯುದ್ಧೋಪಕ್ರಮವುಂಟಾದರೆ ನಂದರಂ ಹೊರಚ್ಚು ಮಾಡಿ ಸಂಹರಿಸಿ, ರಾಕ್ಷಸನಂ ಸಂಗ್ರಹಿಸಬೇಕೆಂದು ನಿಶ್ಚೈಸಿ, "ಎಲೈ ಚಂದ್ರಗುಪ್ತನೆ, ಒಂದು ರಾಜಕಾರ್ಯ ರಹಸ್ಯವುಂಟು. ಅದಕ್ಕೆ ನಿಮ್ಮ ಮೌರ್ಯನಲ್ಲಿ ಅನುರಕ್ತರಾಗಿ ಇದ್ದ ಇಲ್ಲಿಯ ಬಾಗುರಾಯಣಾದಿ ಸೇನಾಪತಿಗಳ ಸ್ವಹಸ್ತಾಕ್ಷರ ಸಮ್ಮತಿಯುಕ್ತವಾದ ಒಂದು ಕಾಗದವಾಗಬೇಕಾಗುತ್ತಲಿದೆ. ನಾನು ಒಂದು ಕಾಗದವಂ ಬರೆದು ಕೊಡುವೆನು. ಇದಂ ಆ ಸೇನಾಪತಿಗಳಿಗೆ ತೋರಿಸಿ ಒಡಂಬಡಿಸಿದಲ್ಲದೆ ನಿನ್ನ ಹಸ್ತಾಕ್ಷರದ ಕಾಗದಕ್ಕೆ ತಮ್ಮ ಸಮ್ಮತಿ ಬರೆದು ಕೊಡಲಾರರು" ಎಂದು ಚಾಣಕ್ಯನು ಹೇಳಿ, ತನ್ನ ಅಕ್ಷರದಿಂದ ಪ್ರಕೃತೋಚಿತವಾಗಿ ಒಂದು ಕಾಗದವಂ ಬರೆದು, ಚಂದ್ರಗುಪ್ತನ ಕೈಯಲ್ಲಿ ಕೊಟ್ಟು, ಇದಂ ನೀನು ಓದಿಕೊಂಡು ಇದರರ್ಥವಂ ನೀನು ತಿಳಿದುಕೊಂಡು, ಈ ಕಾಗದವಂ ಆ ಸೇನಾಪತಿಗಳಿಗೆ ತೋರಿಸಿದರೆ, ಸಮ್ಮತಿ ಪಡುವರು. ಆಗ ನಿನ್ನ ಅಕ್ಷರದಿಂದ ಇದಕ್ಕೆ ಬದಲುಕಾಗದವಂ ಬರೆದು, ನಿನ್ನ ಹೆಸರಿನ ಸಮ್ಮತಿ ಹಾಕಿ, [೨]ಅವರು ಸಮ್ಮತಿ ಬರೆಯುವದಕ್ಕೆ ಮುಂಭಾಗದಲ್ಲಿಯೇ ಸ್ಥಳವಂ ಬಿಟ್ಟು, ಅದಂ ಅವರಿಗೆ ತೋರಿಸಿ, ಪ್ರಕೃತೋಚಿತವಾಗಿ ಬಾಯಿಮಾತಂ ಹೇಳಿದರೆ, ಅವರು ನೋಡಿಕೊಂಡು ತಮ್ಮ ಸಮ್ಮತಿಗಳಂ ಬರೆದು ಕೊಟ್ಟಾರು ; ಅದಂ ತೆಗೆದುಕೊಂಡು ನೈಮಿಷಾರಣ್ಯದಲ್ಲಿ ಗಂಗಾತೀರದಲ್ಲಿ ಸೋಮೇಶ್ವರಾಲಯ ಸಮೀಪದಲ್ಲಿ ನಮಗೆ ಮಿತ್ರನಾದ ಇಂದುಶರ್ಮನಾಲಯವಿರುವದು. ನಾನು ಹೋಗಿ ಅಲ್ಲಿ ಇರುವೆನು. ನೀನು ಅಲ್ಲಿಗೆ ಬರುವನಾಗು" ಎಂದು ಚಾಣಕ್ಯನು ಚಂದ್ರಗುಪ್ತನಿಗೆ ಹೇಳಿ, ನೈಮಿಷಾರಣ್ಯಮಾರ್ಗಗೊಂಡು ತೆರಳುತ್ತಿರಲು,

ಆಗ ಚಂದ್ರಗುಪ್ತನು ರಹಸ್ಯವಾಗಿ ಹೋಗಿ, ಬಾಗುರಾಯಣಾದಿ ಸೇನಾಪತಿಗಳಂ

---

೧. ಕ್ಷ (ಕ), ೨. ಅವರು ತ[illegible]ಸಲು (ಕ)

ಕಾಣಿಸಿಕೊಳ್ಳಲು, ಅವರು ಈ ಚಂದ್ರಗುಪ್ತನಿಗೆ ಬಂದು ಇರುವ ದುರ್ದಶೆಯಂ ನೋಡಿ, ಮನಮರುಗಿ ಸಾಂತ್ವವಚನವಂ ಹೇಳುತ್ತ, "ಅಯ್ಯ ಚಂದ್ರಗುಪ್ತನೆ, ಇನ್ನು ಕ್ಲೇಶವಂ ಬಿಡು. ನೀನು ನಮ್ಮಲ್ಲಿ ಬಂದ ಪ್ರಯೋಜನವೇನು ?" ಎಂದೆನಲು.

"ಅಯ್ಯ ಸೇನಾಪತಿಗಳಿರ, ನಿಮ್ಮಂ ಕಂಡುದುರಿಂದ ನನ್ನ ಕ್ಲೇಶವು ತೊಲಗಿ, ನಮ್ಮ ಹಿರಿಯರಂ ನೋಡಿದಂತಾಯಿತು. ಮತ್ತೊಂದು ಹೇಳತಕ್ಕ ಅರ್ಥವುಂಟು. ಏನೆಂದರೆ, ಮೊದಲು ನಮ್ಮ ತಂದೆಯಾದ ಮೌರ್ಯನು ಕಾಶೀ ಗಂಗಾತೀರದಲ್ಲಿ ಶಿವಾಲಯವಂ ರಚಿಸಿ, ಈಶ್ವರಪ್ರತಿಷ್ಠೆಯಂ ಮಾಡಿಸಿ, ಆ ಬಳಿಕ ಅಲ್ಲಿ ಆಗುವ ನಿತ್ಯಕಟ್ಲೆ ಆರಾಧನೆ ಕೈಸಾಲೆ ಗೋಪುರವಂ ಮಾಡಿಸುವದಕ್ಕೆ ಆರ್ಜಿಸಿ ಇದ್ದ ದ್ರವ್ಯವನ್ನು ಕಾಶೀಪಟ್ಟಣದಲ್ಲಿ ಇರುವ ಕೇಶವದಾಸನೆಂಬ ವರ್ತಕನ ವಶವಂ ಮಾಡಿ, ಆ ಕಾರ್ಯವಂ ಆ ವರ್ತಕನ ಮುಖಾಂತರದಲ್ಲೇ ಮಾಡಿಸಬೇಕೆಂದು ನಿಶ್ಚಯವಂ ಮಾಡಿ ಇದ್ದು, ಅಷ್ಟರಲ್ಲಿಯೇ ನಂದರು ಮಾಡಿ ಇದ್ದ ಬಂಧನಕ್ಕೆ ತಗುಲಿದ ಬಳಿಕ, ಅವಸಾನಕಾಲದಲ್ಲಿ, ತಾನು ದೇವಾಲಯ ನಿಮಿತ್ತವಾಗಿ ಕಾಶೀ ಕೇಶವದಾಸನ ವಶಕ್ಕೆ ಕೊಟ್ಟಿದ್ದ ದ್ರವ್ಯವು ಕೂಡ ಸಾರ್ಥಕವಾಗದೆ ಅವನಲ್ಲಿಯೇ ನಿಂತಿತು ಎಂದು ಹಂಬಲಿಸುತ್ತ, 'ಶಿವಶಿವಾ' ಎನ್ನುತ್ತ ಮೃತನಾದನು. ಈ ಅರ್ಥವು ನನಗೆ ಶ್ರುತವಾಗಿ ಇದ್ದದ್ದರಿಂದ, ನಾನು ಜೀವಂತನಾಗಿ ಬಂಧನದಿಂದ ವಿಮುಕ್ತನಾದ ಬಳಿಕ, ಮತ್ತೆ ಕೆಲವು ದಿವಸದ ಮೇಲೆ, ಆ ಕೇಶವದಾಸನಿಗೆ ಈ ಅರ್ಥವಂ ನಾನು ಬರೆದು, ಆ ದೇವಸ್ಥಾನದ ಗೋಪುರ ಕೈಸಾಲೆಗಳಂ ಮಾಡಿಸಿ, ನಿತ್ಯಕಟ್ಲೆ ಆರಾಧನೆಗಳಂ ಮಾಡಿಸಿಕೊಂಡು ಬರುವಂತೆ ನಾನು ಕೇಶವದಾಸನಿಗೆ ಬರೆದು ಕಳುಹಿಸಿ ಇದ್ದ ಕಾಗದಕ್ಕೆ, ಆತನು ಬದಲುಕಾಗದವಂ ನನಗೆ ಕಳುಹಿಸಿ ಇದ್ದಾನೆ. ನೀವು ನಮಗೆ ಹಿರಿಯವರ ಸಮಾನರಾದುದರಿಂದ ನನ್ನಲ್ಲಿ ವಾತ್ಸಲ್ಯವಿಟ್ಟು, ಆ ಧರ್ಮವು ಶಾಶ್ವತವಾಗಿ ನಡೆಯುವಂತೆ ನೀವು ಸಮ್ಮತಿಸಬೇಕು" ಎಂದು ತನ್ನ ಕೈಯಲ್ಲಿ ಇದ್ದ ಆ ಕಾಗದವಂ ಬಾಗುರಾಯಣಾದಿಗಳಿಗೆ ತೋರಿಸಲು, ಅದರಲ್ಲಿ ಇದ್ದ ಒಕ್ಕಣೆಯೇನೆಂದರೆ:

"ಶ್ರೀಮತು ರಾಜಶ್ರೀ ಚಂದ್ರಗುಪ್ತರಾಯರಿಗೆ, ಸೇವಕನಾದ ಕಾಶೀ ಕೇಶವದಾಸನು ಮಾಡುವ ವಿಜ್ಞಾಪನೆ. ಏನೆಂದರೆ : ನೀವು ನನಗೆ ಬರೆದು ಕಳುಹಿಸಿಕೊಟ್ಟ ಕಾಗದ[ದ] ಅಭಿಪ್ರಾಯವಂ ನೋಡಿಕೊಂಡೆನು. ನಿಮ್ಮ ತಂದೆಯಾದ ಮೌರ್ಯರು ಕಾಶಿಯಲ್ಲಿ ತಾವು ಮಾಡಿಸಿ ಇದ್ದ ಶಿವಾಲಯದ ನಿತ್ಯಾರಾಧನೆ ಕೈಸಾಲೆ ಗೋಪುರವಂ ಮಾಡು[ವ] ಬಗ್ಗೆ, 'ನಿನ್ನಲ್ಲಿ ಇರಲಿ' ಎಂದು ಅದಕ್ಕೆ ತಕ್ಕಷ್ಟು ದ್ರವ್ಯವಂ ನನ್ನ ವಶಕ್ಕೆ ಕೊಟ್ಟಿದ್ದ ಬಗ್ಗೆ, ಇಲ್ಲಿ ಶಿವಾಲಯದ ಕಾರ್ಯವಂ ನನ್ನೆ ಮಾಡಿಸುವಂತೆ ನನಗೆ ನೀವು ಬರಸಿ ಕಳುಹಿಸಿದ್ದು ಸರಿಯಷ್ಟೆ. ಮೌರ್ಯರಿಗೆ ನೀವು ಸತ್ಪುತ್ರರಾದವರಾದರೂ, ಇನ್ನೂ ಬಾಲಕರಾಗಿ ಇರುವದರಿಂದ, ನಾನು ಮಾಡಿಸುವ ದೇವಾಲಯದ ಕಾರ್ಯಕ್ಕೆ, ಇನ್ನೂ ನಿಮಗೆ ಆಪ್ತರಾಗಿ ದೊಡ್ಡಮನುಷ್ಯರಾಗಿ ಇರುವವರು ತಿಳಿದು ಸಮ್ಮತಿಸಿದರೆ, ಮುಂದೆ ನನಗೆ ಆಕ್ಷೇಪಣೆಯಿಲ್ಲದಂತಾಗುವುದು. ಅದರಿಂದ ಪುನಃ ನಿಮ್ಮೆಲ್ಲರ ಸಮ್ಮತಿಯುಕ್ತವಾದ ಕಾಗದವಂ ಬರೆಸಿ ಕಳುಹಿಸಿ ಕೊಟ್ಟರೆ, ನಿಮ್ಮ ದೇವಾಲಯದ ಕಾರ್ಯವು ಶಾಶ್ವತವಾಗಿ ನಡೆಯುವಂತೆ ಮಾಡುವೆನು. ಇದರಿಂದ ನನಗೂ ಕಿಂಚಿತ್ಸುಕೃತ ಲಭ್ಯವಾದೀತು" ಎಂದು ಬರೆದು ಇರುವ ಕಾಗದದ ಒಕ್ಕಣೆಯಂ ನೋಡಿಕೊಂಡು, ಆ ಬಾಗುರಾಯಣಾದಿ ಸೇನಾಪತಿಗಳು ಚಂದ್ರಗುಪ್ತನಂ ಕುರಿತು,

"ಅಯ್ಯ ಕುಮಾರಕನೆ, ನಿನಗೆ ಒದಗಿರುವ ಈ ವಿಷಮಸಮಯದಲ್ಲಿಯು ಕೂಡ, ಪಿತೃವಾಕ್ಯವಂ ಪರಿಪಾಲನೆಗೈಯಲೆಣಿಸಿರುವ ನೀನು ಮುಂದೆ ಶ್ರೇಯೋವಂತನಾಗಿ ಇರುವೆ. ನೀನು ಮಾಡಿಸುವ ಧರ್ಮಕ್ಕೆ ನಾವು ಸಮ್ಮತಿಸದೆ ಇರುವದುಂಟೇ ? ಆ ವರ್ತಕನಿಗೆ ನಿನ್ನ ಹೆಸರಿನಿಂದ ಪುನಃ ಕಾಗದವಂ ಬರೆಯುವನಾಗು. ಅದಕ್ಕೆ [೧]ನಮ್ಮ[೧] ಸಮ್ಮತಿಯಂ ಬರೆದು ಕೊಡುವೆವು." ಎಂದೆನಲು,

ಆಗಲೇ ಚಂದ್ರಗುಪ್ತನು, ಪ್ರಕೃತೋಚಿತವಾಗಿ ಆ ಕೇಶವದಾಸನಿಗೆ ತನ್ನಕ್ಷರದಿಂದ ಅಖಂಡವಾದ ಕಾಗದವಂ ಬರೆದು, ತನ್ನ ಸಮ್ಮತಿಯಂ ಹಾಕಿ, ಬಾಗುರಾಯಣಾದಿ ಸೇನಾಪತಿಗಳ ಕೈಯಲ್ಲಿ ಕೊಡಲು, ಅವರು ಆ ಕಾಗದವಂ ನೋಡಿಕೊಂಡು, ಅವರು ಎಂಟು ಜನವೂ ತಮ್ಮ ಅಕ್ಷರದಿಂದ ಸಮ್ಮತಿಗಳಂ ಬರೆದು, ವಸ್ತ್ರತಾಂಬೂಲಸಮೇತ ವಾಗಿ ಆ ಕಾಗದವಂ ಚಂದ್ರಗುಪ್ತನ ವಶಕ್ಕೆ ಕೊಡಲು, ಅದಂ ತೆಗೆದುಕೊಂಡು, ಚಂದ್ರ ಗುಪ್ತನು ಅಲ್ಲಿಂದ ಹೊರಟು, ಮೊದಲು ತಾನಿದ್ದೆಡೆಗೆ ಬಂದು, ತನ್ನ ಮಾತೃಪತ್ನಿ[ಯ]ರಿಗೆ ಕೆಲವು ಕಾಲ ಪ್ರಚ್ಛನ್ನರಾಗಿ ಇರುವ ಉಪಾಯವಂ ಹೇಳಿ, ಮಾತೃ[ವಿ]ಗಭಿವಂದಿಸಿ, ಅಲ್ಲಿಂದ ಹೊರಟು, ನೈಮಿಷಾರಣ್ಯಕ್ಕೆ ಬಂದು, ಗಂಗಾನದೀತೀರದಲ್ಲಿ ಇಂದುಶರ್ಮ[೧]ನ ಗೃಹದಲ್ಲಿ[೨] ಅತಿಥಿಸತ್ಕಾರವಂ ಸ್ವೀಕರಿಸುತ್ತಲಿರುವ ಚಾಣಕ್ಯನಂ ಕಂಡು, ನಮಸ್ಕರಿಸಿ, ತಾನು ತಂದ ಕಾಗದವಂ ಚಾಣಕ್ಯನ ಕೈಗೆ ಕೊಡಲು, ಅದರಲ್ಲಿ ಇದ್ದ ಒಕ್ಕಣೆಯೇನೆಂದರೆ:

"ಶ್ರೀಮತು ಚಂದ್ರಗುಪ್ತರಾಯನು ನಮಗೆ ಪರಮಪ್ರಿಯರಾದ ಕೇಶವದಾಸರಿಗೆ ಬರೆದು ಕಳುಹಿಸಿದ ವಿನಯಾರ್ಥವೇನೆಂದರೆ :

ನೀವು ನನಗೆ ಬರೆದು ಕಳುಹಿಸಿದ ಕಾಗದವನ್ನು ನಮಗೆ ಹಿರಿಮನುಷ್ಯರಾದ ಸೇನಾಪತಿ ಗಳಿಗೆ ತೋರಿಸಲು, ಅವರು ಸಮ್ಮತಿಸಿ, ಈ ಕಾಗದಕ್ಕೆ ತಮ್ಮ ತಮ್ಮ ಹಸ್ತಾಕ್ಷರದಿಂದ ಸಮ್ಮತಿಗಳಂ ಬರೆದು ಇದ್ದಾರೆ. ಇನ್ನು ಮೇಲೆ ಶಂಕೆಯಂ ಬಿಟ್ಟು, ನಮ್ಮ ದೇವಾಲಯದ ಕಾರ್ಯವಂ ಶಾಶ್ವತವಾಗಿ ನಡೆದುಬರುವಂತೆ ಮಾಡಬೇಕು. ಈ ಭಾರವು ನಿಮ್ಮನ್ನೇ ಕೂಡಿ ಇದೆ. ಇದು ಚಂದ್ರಗುಪ್ತನಿಗೆ ಅಭಿಮತಕಾರ್ಯವು"

ಎಂದು ಬರೆದಿರುವದಂ ನೋಡಿ, ಆ ಪಂಕ್ತಿ ಕೆಳಗೆ ಚಂದ್ರಗುಪ್ತನಿಗೆ ಅಭಿಮತಕಾರ್ಯವು ನಮಗಭಿಮತ ಕಾರ್ಯವೆಂದು ಬಾಗುರಾಯಣನ ಹಸ್ತಾಕ್ಷರದಿಂದ ಬರೆದಿರಲು, ಅದರ ಕೆಳಗೆ ಚಂದ್ರಗುಪ್ತನಿಗೆ ಅಭಿಮತಕಾರ್ಯವೇ ಭದ್ರಭಟನಿಗೆ ಅಭಿಮತವೆಂದು, ಹೀಗೇ ಕ್ರಮವಾಗಿ ಎಂಟು ಮಂದಿ ಸೇನಾಪತಿಗಳ ಹಸ್ತಾಕ್ಷರದಿಂದ ಸಮ್ಮತಿಗಳಂ ಬರೆದುಕೊಟ್ಟಿರುವ ಕಾಗದವಂ ನೋಡಿ, ಚಾಣಕ್ಯನು ತನಗೆ ಉಪಯುಕ್ತವಾದ ಪಂಕ್ತಿಯ ಅಕ್ಷರದ ಮಟ್ಟಿಗೆ ನಿಲ್ಲಿಸಿಕೊಂಡು, ಶೇಷವಂ ಕತ್ತರಿಸಿ ಪರಿಹರಿಸಿ, ಉಳಿದ ಪತ್ರಿಕೆಯಂ ಓದಲು, ಅದರ ಮೊದಲ ಪಂಕ್ತಿಯಲ್ಲಿ ಚಂದ್ರಗುಪ್ತನಿಗೆ ಅಭಿಮತಕಾರ್ಯವು ಬಾಗುರಾಯಣಗೆ ಅಭಿಮತ ವೆಂದು, ಈ ರೀತಿಯಲ್ಲಿ ಕ್ರಮವಾಗಿ ಎಂಟು ಮಂದಿ ಸೇನಾಪತಿಗಳ ಹಸ್ತಾಕ್ಷರದ ಸಮ್ಮತಿಯುಕ್ತವಾದ ಕಾಗದವನ್ನಿಟ್ಟುಕೊಂಡು, ಇದು ಒಂದು ಮುಂದಣ ರಾಜಕಾರ್ಯಕ್ಕೆ ಉಪಯುಕ್ತವಾದೀತೆಂದು ನಿಶ್ಚೈಸಿ, ಆ ಬಳಿಕ ತನಗೆ ಸಹಾಧ್ಯಾಯಿಯಾದ ಇಂದುಶರ್ಮ

---

೧. ನಂದರ (ಕ), ೨. ನಗ್ರಹಾರದಲ್ಲಿ (ಕ)

ನೆಂಬ ಬ್ರಾಹ್ಮಣನಂ ಕುರಿತು, ಚಾಣಕ್ಯನಿಂತೆಂದನು :

"ಅಯ್ಯ ಪ್ರಿಯಸಖನಾದ ಇಂದುಶರ್ಮನೆ, ಈ ಆಶ್ರಮದಲ್ಲಿ ನೀನು ಮಾಡಿಸಿದ ಆತಿಥ್ಯದಿಂದ ನನಗೆ ಸಂತೋಷವಾಯಿತು. ಮತ್ತೆ ಒಂದು ರಾಜಕಾರ್ಯವುಂಟು. ನೀನು ನನಗೆ ಸಹಾಧ್ಯಾಯಿ ಆಗಿ ಇದ್ದುದು ಸತ್ಯವಾದರೆ, ಶರಣಾಗತನಾಗಿ ಬಂದು ಇರುವ ಈ ಚಂದ್ರಗುಪ್ತನ ಕಾರ್ಯಕ್ಕೆ ಸಹಾಯಾರ್ಥವಾಗಿ ನೀನು ಬೌದ್ಧಸಂನ್ಯಾಸಿವೇಷವಂ ಧರಿಸಿ, ಜೀವಸಿದ್ಧಿಯೆಂಬ ನಾಮವನ್ನಳವಟ್ಟು, ನಿನಗೆ ಆಪ್ತರಾದ ಶಿಷ್ಯರಿಗೆ ಸಮಯೋಚಿತವಾದ ವೇಷ ನಾಮಾಂಕಿತವಂ ಮಾಡಿ ಕೊಟ್ಟು, ಪಾಟಲೀಪುರದಲ್ಲಿ ಅಮಾತ್ಯರಾಕ್ಷಸ ಮೊದಲಾದ ಅಧಿಕಾರಿಗಳಲ್ಲಿ ಜ್ಯೋತಿಷ ಮೊದಲಾದ ವಿದ್ಯಾಕೌಶಲಗಳಿಂದ ಅಧಿಕಾರಿಗಳಿಗೆ ಆಪ್ತರಂತೆ ಇದ್ದುಕೊಂಡು, ರಾಜಕಾರ್ಯವಂ ತಿಳಿಯುತ್ತ, ಅಲ್ಲಿಯ ವಿಶೇಷವರ್ತಮಾನಗಳನ್ನು ವೇಷಧಾರಿಗಳಾದ ನಿನ್ನ ಶಿಷ್ಯರ ಮುಖದಿಂದ ನಮಗೆ ತಿಳಿಯಪಡಿಸುತ್ತ, ನೀನು ಓದಿದ ದಂಡನೀತಿಶಾಸ್ತ್ರಪ್ರಯೋಗಕ್ಕೆ ಫಲವಂ ಕಾಣುತ್ತ, ಅಲ್ಲಿ ಇದ್ದುಕೊಂಡಿದ್ದರೆ, ನಮಗೆ ಪರಮಮಿತ್ರನು ನೀನು"

ಎಂದು ಹೇಳಿ, ನಂದನಿಗ್ರಹ ಮೊದಲುಗೊಂಡು ರಾಕ್ಷಸನಂ ಸಂಗ್ರಹಿಸುವವರೆಗೂ ಮಾಡತಕ್ಕ ಉಪಾಯರಹಸ್ಯಗಳನ್ನೆಲ್ಲವಂ ಇಂದುಶರ್ಮನಿಗೆ ತಿಳುಹಿಸಿ, "ಈ ಅರ್ಥವಂ ವೇಳೆವೇಳೆಗೆ ನಿನ್ನ ಶಿಷ್ಯರಿಗೆ ತಿಳಿಯಪಡಿಸುತ್ತ, ರಾಜಕಾರ್ಯವಂ ನೋಡುತ್ತಿರುವನಾಗು. ನಂದನಿಗ್ರಹಾರ್ಥವಾಗಿ ಬಹುಸೇನಾಪರಿವೃತನಾದ ಪರ್ವತೇಶ್ವರನ ಸಮೀಪಕ್ಕೆ ಈ ಚಂದ್ರಗುಪ್ತಸಮೇತನಾಗಿ ನಾನು ಹೋಗಿಬರುವೆನು. ನಿನಗೆ ತಿಳಿದು ಇರಲಿ" ಎಂದು ಹೇಳುತ್ತಿರುವ ಚಾಣಕ್ಯನಂ ಕುರಿತು, ಇಂದುಶರ್ಮನು ಇಂತೆಂದನು :

"ಅಯ್ಯ ಬುದ್ಧಿಸಂಪನ್ನರಾದ ಚಾಣಕ್ಯರೆ, ನಿಮ್ಮ ದರ್ಶನದಿಂದ ನೀತಿಶಾಸ್ತ್ರಪ್ರವರ್ತಕರಾದ ಶುಕ್ರಾಚಾರ್ಯದರ್ಶನ ಪ್ರತ್ಯಕ್ಷವಾದಂತಾಯಿತು. ನಾನು ನಿಮಗೆ ಸಹಾಧ್ಯಾಯಿ ಎಂಬುವದು ಉಪಚಾರೋಕ್ತಿಯು. ನನ್ನಂ ಪ್ರಿಯಶಿಷ್ಯನೆಂದು ಭಾವಿಸಬೇಕು. ನಿಮ್ಮ ಆಜ್ಞಾನುಸಾರ ನಡೆದುಕೊಂಡರೆ, ಅದೇ ನಾನು ಮಾಡುವ ಗುರುಸೇವೆ ಆಗುವದು. ಇದು ಸತ್ಯ"ವೆಂದು ಹೇಳುವ ಇಂದುಶರ್ಮನಂ 'ಈಗಲೇ ಪಾಟಲೀಪುರಕ್ಕೆ ಹೋಗೆಂ'ದು ನೇಮಿಸಿ, ಆತನ ಶಿಷ್ಯರಿಬ್ಬರಂ ತನ್ನ ಸಂಗಡ ಕರೆದುಕೊಂಡು, ಚಂದ್ರಗುಪ್ತಸಮೇತನಾಗಿ ಚಾಣಕ್ಯನು ಪರ್ವತರಾಜ್ಯವಂ ಕುರಿತು ತೆರಳುತ್ತಿದ್ದನು ಎಂಬಲ್ಲಿಗೆ,

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಮಹೀಶೂರನರಪತಿ ಶ್ರೀ ಕೃಷ್ಣರಾಜೇಂದ್ರ ರಾಶ್ರಿತ ಹೊಯಿಸಣಿಗ ಕುಲಸಂಜಾತ ನಾರಾಯಣಶರ್ಮ ವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ಚಂದ್ರಗುಪ್ತ ಚಾಣಕ್ಯರಿಗೆ ಪರ್ವತರಾಜ್ಯಪ್ರವೇಶವೆಂಬ ತೃತೀಯಾಶಯಃ ಸಮಾಪ್ತಃ.

ಚತುರ್ಥಾಶಯ : ಪರ್ವತರಾಜಸೇನಾಗಮನ ಕಥನವು

ಈ ರೀತಿಯಲ್ಲಿ ಇಂದುಶರ್ಮನಂ ಪಾಟಲೀಪುರಕ್ಕೆ ಕಳುಹಿಸಿ, ಚಾಣಕ್ಯನು ಪರ್ವತರಾಜ್ಯಾಭಿಮುಖವಾಗಿ ತೆರಳುತ್ತಿರಲು, ಆ ಬಳಿಕ ಇಂದುಶರ್ಮನೆಂಬ ಬ್ರಾಹ್ಮಣನು ತಾನು ಕ್ಷಪಣಕವೇಷವಂ ಧರಿಸಿ, ಶಿಷ್ಯರಿಗೆ ಮಾಸೋಪವಾಸಿಯು, ಸಿದ್ಧಾರ್ಥಕನು, ವೇಗ

ಶರ್ಮನು, ಸಮಿದ್ಧಾರ್ಥಕನು, ಪಶುಲೋಮನು ಹೀಗೆಂದು ನಾಮಾಂಕಿತಗಳಂ ಮಾಡಿಸಿ, ವೈದ್ಯ ಮಂತ್ರಜ್ಞ ಮೊದಲಾದವರ ವೇಷಗಳನ್ನಳವಡಿಸಿ, ಪಾಟಲೀಪುರಕ್ಕೆ ಹೋಗಿ, ಅಮಾತ್ಯ ರಾಕ್ಷಸಾದಿ ಅಧಿಕಾರಿಗಳಲ್ಲಿ, ವೈದ್ಯ ಜ್ಯೋತಿಷ ಮೊದಲಾದ ವಿದ್ಯಾಕೌಶಲವಂ ತೋರುತ್ತ, ಅಮಾತ್ಯ ರಾಕ್ಷಸನಿಗೆ ಆಪ್ತನಂತೆ ಆತನಂ ಆಶ್ರಯಿಸಿ, ಬಾಗುರಾಯಣಾದಿಗಳಲ್ಲಿ ಸಿದ್ಧಾರ್ಥಕ ಮುಖ್ಯರಾದ ಶಿಷ್ಯರಂ ನಿಲ್ಲಿಸಿ, ಆ ಪುರದ ವೃತ್ತಾಂತಗಳಂ ತಿಳಿಯುತ್ತ, ಚಾಣಕ್ಯನ ಆಗಮನವಂ ನಿರೀಕ್ಷಿಸುತ್ತ, ಅಲ್ಲಿಯೇ ಇರುತ್ತಿರಲು.

ಮೊದಲು ನಂದರ ಅನ್ನಸತ್ರದಲ್ಲಿ ನಡೆದ ಬ್ರಾಹ್ಮಣ ಅಪಮಾನವಂ ಕಂಡು, ಗೂಢಚಾರರು ಪರ್ವತರಾಜ್ಯಕ್ಕೆ ಹೋಗಿ, ಪರ್ವತೇಶ್ವರನಂ ಕಂಡು ಕೈಮುಗಿದು, ಇಂತೆಂದರು :

"ಬುದ್ಧೀ, ನಾವು ದೇಶಾಂತರದ ವಿಶೇಷ ವರ್ತಮಾನವಂ ತಿಳಿದು ಬಂದು ಹೇಳುವಂತೆ ಆಜ್ಞಪ್ತರಾಗಿ ಹೋಗಿದ್ದ ಚಾರರು. ಮಾರ್ಗವಶದಿಂ ಪಾಟಲೀಪುರದಲ್ಲಿ, ಬ್ರಾಹ್ಮಣ ಸಂಘದಲ್ಲಿ ವಿಶೇಷವರ್ತಮಾನ ತಿಳಿಯುವದುಂಟಾದುದರಿಂದ, ಅನ್ನಸತ್ರದಲ್ಲಿ ಗುಂಪು ಕೂಡಿ ಇರುವ ಬ್ರಾಹ್ಮಣಸಂಘದಲ್ಲಿ, ನಾವು ಪ್ರಚ್ಛನ್ನರಾಗಿ ನಾಲ್ಕಾರು ದಿವಸ ಅಲ್ಲಿ ಹೇಳುವ ಸಮಾಚಾರವಂ ತಿಳಿಯುತ್ತ ಇರುವಲ್ಲಿ, ಮತ್ತೊಂದು ದಿವಸ ನಂದರು ಉದ್ಯಾನವಂ ನೋಡಿ, ಸತ್ರದ ಮುಖವಾಗಿ ಬಂದು, ಸತ್ರವಂ ಪ್ರವೇಶಿಸಲು.

ಅಲ್ಲಿ ಏನು ಕಾರಣದಿಂದಲೋ ಮಹಾತೇಜಸ್ವಿಯಾದ ಒಬ್ಬ ಬ್ರಾಹ್ಮಣನು ಅಗ್ರಸ್ಥಾನದಲ್ಲಿ ಇರುವ ಸ್ವರ್ಣಪೀಠದಲ್ಲಿ ಕುಳಿತು ಕಾಲ ಮೇಲೆ ಕಾಲು ಹಾಕಿಕೊಂಡು ಕುಳಿತಿರಲು, ಆಗ ನಂದರು ಅವನಂ ನೋಡಿ, ಕೋಪಾವಿಷ್ಟರಾಗಿ, ನಿಷ್ಠುರವಚನವಂ ಹೇಳಿ, ಎಬ್ಬಿಸಿ ಬಿಡುವಂತೆ ದೂತರಿಗೆ ನೇಮಿಸಲು, ಅವರು ಈ ಬ್ರಾಹ್ಮಣನಂ ಎಳೆದು ಹಾಕಲು, ಎಳೆದ ರಭಸಕ್ಕೆ ಆತನ ಶಿಖೆ ಸಡಿಲಿ ಹೋಗಲು, ಆತನು ಕ್ರುದ್ಧನಾಗಿ ನಂದರಂ ಸಂಹರಿಸದೆ ತಾನು ಶುಕ್ರಾಚಾರ್ಯ ಶಿಷ್ಯನಾಗಿಯೂ ತನ್ನ ಶಿಖೆಯಂ ಬಂಧಿಸಿದರೆ ಪಾಪಿಷ್ಠರ ದುರ್ಗತಿಗೆ ಹೋಗುವೆನೆಂದು ಪ್ರತಿಜ್ಞಾಪುಂಜವಂ ಮಾಡಿ, ಅಲ್ಲಿಂದ ಎದ್ದು ಹೋಗಲು, ಆಗಲೇ ಮಹೋತ್ಪಾತಗಳಾಗುವದಂ ಕಂಡು, ಅಲ್ಲಿಯ ಜನರು ಮಹಾ ಆತಂಕಪಡುತ್ತ, ಹಿಂದೆ ನಂದರಂ ನಿಂದಿಸುತ್ತ ಹೋಗುತ್ತಿರಲು, ಈ ವರ್ತಮಾನವು ಪುರದಲ್ಲಿ ಪ್ರಸಿದ್ಧವಾಗಿ, ಜನರು ಶಂಕಿತರಾಗಿ ಇದ್ದರು. ಸಭೆಯಲ್ಲಿ ಆ ಬ್ರಾಹ್ಮಣನು ಪ್ರಭುಗಳಂ ಲಕ್ಷೀಕರಿಸದೆ ಮನಕ್ಕೆ ಬಂದಂತೆ ಪರುಷವಾಕ್ಯವಂ ಹೇಳುತ್ತಿದ್ದರೆ, ಅಲ್ಲಿಯ ಜನರು ಯಾಕೆ ಏನು ಎನ್ನದೆ ಮೂರ್ತೀಭಾವದಲ್ಲಿ ಇದ್ದುದರಿಂದ, ಆತನ ತೇಜಸ್ಸಿನಿಂದಲೇ ಆ ಸಭಾಸ್ತಂಭನೆಯಾದಂತೆ ತೋರುತ್ತಲಿತ್ತು. ಇದು ನಾವು ಕಂಡ ವರ್ತಮಾನವು. ಇದಂ ತಿಳಿದು ನಾವು ಬರುವಲ್ಲಿ, ಆ ಸತ್ರಾಧಿಕಾರಿಯಾದ ಆ ಚಂದ್ರಗುಪ್ತನು ಎಲ್ಲಿಯೋ ಹೋದನೆಂದು ದೂತರು ಬಹುವಾಗಿ ಹುಡುಕುತ್ತಲಿದ್ದರು" ಎಂದು ಪರ್ವತೇಶ್ವರನಿಗೆ ವಿಜ್ಞಾಪಿಸಲು.

ಅದಂ ಕೇಳಿ, ಆ ರಾಯನು ಮಂತ್ರಿಯ ಮುಖವಂ ನೋಡಿ, "ಏನೈ ಶಬರವರ್ಮನೆ, ಈಚೆಗೆ ಪಾಟಲೀಪುರದಲ್ಲಿ ನಡೆದ ವರ್ತಮಾನವಂ ಕೇಳಿದೆಯಾ ? ನಂದರು ಭೋಜನಕ್ಕೆ ಬಂದು ಇದ್ದ ತೇಜಸ್ವಿಯಾದ ಬ್ರಾಹ್ಮಣನಂ ಅಪಮಾನವಂ ಮಾಡಿದರಂತೆ. ಆತನು 'ಶುಕ್ರಾಚಾರ್ಯರ ಶಿಷ್ಯನಾದುದು ಸತ್ಯವಾದರೆ, ನಂದರ ಮೂಲೋತ್ಪಾಟನವಂ ಮಾಡದೆ

ಬಿಡೆನೆಂ'ದು ಬಹುಪ್ರತಿಜ್ಞೆಯಂ ಮಾಡಿ ಹೋಗಲು, ಆಗಲೇ ಮಹೋತ್ಪಾತಗಳು ಕಾಣಿಸಿಕೊಂಡವಂತೆ. ಅದರಿಂ ಆತನು ಸಾಧಾರಣನಂತೆ ತೋರುವದಿಲ್ಲ. ಆತನು ಮಹಾತ್ಮರಾದ ಶುಕ್ರಾಚಾರ್ಯರ ಶಿಷ್ಯನೇ ಆದರೆ, ಆತನ ದೆಶೆಯಿಂದ ನಂದರಿಗೆ ವಿಪತ್ತು ಸಂಭವಿಸೀತು. ಮತ್ತು ನಂದರಲ್ಲಿ ಮತ್ಸರವುಳ್ಳವನಾಗಿ ಸತ್ರಾಧಿಕಾರವಂ ಮಾಡುತ್ತಿದ್ದ ಚಂದ್ರಗುಪ್ತನು ಸಹ ಅಲ್ಲಿಂದ ಹೊರಟುಹೋದನಂತೆ" ಎನಲು,

ಆ ಮಾತಿಗೆ, "ಜೀಯ, ಚಾರರು ಹೇಳಿದ ಮಾತಿನಲ್ಲಿ ಸೂಕ್ಷ್ಮವಂ ವಿಚಾರಿಸಿದರೆ, ಇದರಲ್ಲಿ ದೈವಯತ್ನ ಮಾತ್ರವೆ ಎಂದು ತೋರುವದಿಲ್ಲ. ಸ್ವಲ್ಪ ಪುರುಷಪ್ರಯತ್ನವು ಸಹ ಉಂಟೆಂದು ತೋರುವದು.

ಏನೆಂದರೆ, ಪೂರ್ವಸಂಕೇತವಿಲ್ಲದೆ ಬ್ರಾಹ್ಮಣನಾದವನು ರಾಜಾರ್ಹಪೀಠವಂ ತೆಗೆದುಕೊಂಡು, ಅಗ್ರಸ್ಥಾನದಲ್ಲಿ ಪ್ರಭುಗಳಂ ಲಕ್ಷೀಕರಿಸದೆ ಕಾಲ ಮೇಲೆ ಕಾಲು ಹಾಕಿಕೊಂಡು ಕುಳಿತಿರುವದಕ್ಕೆ ನಿಮಿತ್ತವೇನು ? ಆತನು ಹುಚ್ಚನಾದರೆ ನಂದರಿಗೆ ಕ್ಷೇಮವು. ಅಲ್ಲದೆ ಆತನು ನಿಜಮನುಷ್ಯನಾಗಿ, ತೇಜಸ್ವಿಯೂ ಆಗಿಯಿದ್ದರೆ, ಆತನ ದೆಶೆಯಿಂದ ನಂದರಿಗೆ ಆಪತ್ತು ಬರುವದು ತಪ್ಪದು. ಆ ಬ್ರಾಹ್ಮಣ ಎದ್ದು ಹೋದ ಬಳಿಕ, ಆಗಲೇ ಉತ್ಪಾತಗಳು ಉಂಟಾದವೆಂಬುವದರಿಂದ ಆತನು ತೇಜಸ್ವಿಯೇ ಅಹುದೆನ್ನಬೇಕು. ಆತನು ಉನ್ಮತ್ತನಲ್ಲದೆ ನಂದರಿಗೆ ಕೋಪವುಂಟಾಗುವಂತೆ ಮಾಡಿದ್ದರಿಂದ, ಆತನಿಗೆ ನಂದರಲ್ಲಿ ಪೂರ್ವವೈರವುಂಟೆಂದು ಹೇಳಬೇಕು. ಪೂರ್ವವೈರವಿದ್ದರೆ ಆತನು ತೇಜಸ್ವಿಯಾಗನು. ವೈರವಿಲ್ಲದಿದ್ದರೆ ಕ್ರಿಯಾಕಾರ್ಯಾರಂಭವು ನಿಷ್ಫಲವು.

ಚಂದ್ರಗುಪ್ತನು ಹೊರಟುಹೋದನು ಎಂಬುವದರಿಂದ ಆ ಬ್ರಾಹ್ಮಣನಿಗೆ ನಂದರಲ್ಲಿ ವೈರವಿಲ್ಲದಿದ್ದರೂ, ನಂದರಿಗೆ ವೈರಿಯಾದ ಚಂದ್ರಗುಪ್ತನು ತೇಜಸ್ವಿಯಾದ ಆ ಬ್ರಾಹ್ಮಣನಿಗೆ ಶರಣಾಗತನಾದುದರಿಂದ ಆತನಲ್ಲಿ ದಯವುಳ್ಳವನಾದುದರಿಂದಲೂ ಕಾರ್ಯದಕ್ಷನಾದುದರಿಂದಲೂ ಚಂದ್ರಗುಪ್ತನ ನಿಮಿತ್ತವಾಗಿ ಧರ್ಮವಿರುದ್ಧವಿಲ್ಲದಂತೆ ನಂದರಿಗೆ ಕೋಪವಂ ಕೆ[ರ]ಳಿಸಿ, ಲೋಕ ಮೆಚ್ಚುವಂತೆ ವೈರವಂ ಬಳಸಿ ಇದ್ದಾನು.

ಅದರಿಂದ ಅವರಿರ್ವರೂ ಕೃತಸಂಕೇತರಾಗಿ, 'ಅಪಮಾನವಂ ಮಾಡಿದ ನಂದರಂ ನಿಗ್ರಹಿಸಿದರೆ ಜನಾಪವಾದ ಬರಲರಿಯದು' ಎಂದು ನಿಶ್ಚೈಸಿ, ಈ ಕಾರ್ಯವಂ ಮಾಡಿ, ವೈರವಂ ಸಾಧಿಸುವದಕ್ಕೆ ಅವರಿರ್ವರು ಆ ದೇಶವಂ ಬಿಟ್ಟು ಎಲ್ಲಿಯೋ ಹೋಗಿ ಇರಬೇಕು. ಮತ್ತು ಆ ಬ್ರಾಹ್ಮಣನು ತೇಜಸ್ವಿಯಾದರೆ, ಲೌಕಿಕಪ್ರಯತ್ನವೇಕೆಂದರೆ, ತಪಸ್ಸನ್ನಾರ್ಜಿಸುವ ಮಹಾತ್ಮರಿಗೆ, ಲೋಭಿಗೆ ಧನದಲ್ಲಿ ಇದ್ದಂತೆ ತಪೋಲೇಶವ್ಯಯದಲ್ಲಿ ಲೋಭವುಂಟಾದುದರಿಂದ, ಪೌರುಷವುಳ್ಳ ಪುರುಷನು ಪರಲೋಕಸಾಧನವಾದ ತಪೋವ್ಯಯವಂ ಮಾಡಲಾರನು. ಇದರಿಂದ ಮುಂದೆ ನಂದರಿಗೆ ಮಹದನರ್ಥ ಸಂಭವಿಸೀತು"

ಎಂದು ಹೇಳುತ್ತಿರುವ ಶಬರವರ್ಮನ ಮಾತಿಗೆ, ಆ ರಾಯನು 'ಹಾಗೇ ಆದೀತೆಂ'ದು ಹೇಳಿ, ಅಂತಃಪುರಕ್ಕೆ ಹೋಗುತ್ತಿರಲು, ಆ ಮಾರನೆ ದಿವಸದಲ್ಲಿಯೇ ಲಂಪಾಕದೇಶಕ್ಕೆ ಹೋಗಿದ್ದ ಚಾರರು ತ್ವರಿತದಿಂ ಬಂದು, ಆಸ್ಥಾನಗತನಾದ ಪರ್ವತರಾಯನಿಗೆ ಕೈಮುಗಿದಿಂತೆಂದರು :

"ಜೀಯಾ, ನಾವು ಆಜ್ಞಪ್ತರಾಗಿ ಲಂಪಾಕದೇಶಕ್ಕೆ ಹೋಗಿದ್ದ ಚಾರರು, ಮೊದಲು

ಸನ್ನಿಧಿಯಲ್ಲಿ ವಿಜ್ಞಾಪಿಸಿದಂತೆ ಲಂಪಾಕಪತಿಯಾದ ಗಿರಿವರ್ಮನು ತನ್ನ ಸಾಮಂತಸೇನಾ ಪರಿವೃತನಾಗಿ ಪಾರ್ವತೇಯರ ಮೇಲೆ ಯುದ್ಧಕ್ಕೆ ಬರುವದು ನಿಶ್ಚಯವು. ಇಂದಿಗೆ ಹದಿನೈದು ದಿವಸದಲ್ಲಿ ದಂಡಯಾತ್ರಾಸೂಚಕವಾದ ಆತನ ಸೇನಾಧ್ವಜವು ನಮ್ಮ ದೇಶಾಭಿಮುಖವಾಗಿ, ಆತನ ಪುರದ ನೈರುತ್ಯದಿಗ್ಭಾಗದಲ್ಲಿ ಪ್ರತಿಷ್ಠಿತ ಬಹುಸೇನೆಯಿಂದ ರಕ್ಷಿತವಾಗಿ ಇದೆ. ತುಂಡು ಪಾಳೆಯಗಾರರು ನಮ್ಮ ದೇಶದ ಎಲ್ಲೆಗಟ್ಟಿನ ಗ್ರಾಮಗಳಂ ಮುಂಚಿತವಾಗಿಯೇ ಸೂರೆಗೊಳ್ಳುವದಕ್ಕೆ ಯತ್ನವಂ ಮಾಡಿ ಇದ್ದಾರೆ. ಈ ಅರ್ಥವೆಲ್ಲವೂ ಆ ದೇಶದಲ್ಲಿ ಪ್ರಸಿದ್ಧವಾಗಿ ಇಹುದು. ಕಂಡಷ್ಟು ಬಿನ್ನೈಸಿದೆವು" ಎಂದು ಬಿನ್ನೈಸಲು, ಅದಂ ಕೇಳಿ ಮಂತ್ರಿಯಂ ನೋಡಿ,

"ಅಯ್ಯ ಶಬರವರ್ಮನೇ, ವ್ಯಾಘ್ರಶಿಶುವಂ ಮಾರ್ಜಾಲವೆಂದು ಉಪೇಕ್ಷಿಸಿದರೆ ಕಾಲಾಂತರದಲ್ಲಿ ಹೆಬ್ಬುಲಿಯಾಗುವಂತೆ, ಲಂಪಾಕಪತಿಯಂ ಹೀನಬಲನೆಂದು ಉಪೇಕ್ಷಿಸಿದುದಕ್ಕೆ ಈಗ ಬಹುಪ್ರಯತ್ನವಂ ಮಾಡಬೇಕಾಯಿತು. ಈಗಲೂ ಉದಾಸೀನವಾಗಿ ಇದ್ದರೆ, ಮುಂದೆ ಪ್ರಮಾದವುಂಟಾದೀತು. ಅದರಿಂದ ಕಿರಾತಾಧಿಪತಿಯಾದ ಮಾತಂಗನ ಸೇನೆಯು ಮೊದಲು ಸನ್ನದ್ಧವಾಗಿ ಮುಂದೆ ನಡೆಯಲಿ ; ಮತ್ತು ಕಾಂಭೋಜ ಹೂಣ ಚೀಣ ಶಕ ಸೇನೆಗಳು ಅದರ ಹಿಂಭಾಗದಲ್ಲಿ ನಿಲ್ಲಲಿ. ಕುಲೂತ ಪಾರಸಿಕ ಮಲಯ ಸಿಂಧು ಕಾಶ್ಮೀರ ಪತಿಗಳ ಸೇನೆಗಳು ಶೇಖರನಂ ಓಲೈಸುತ್ತ ನಡೆಯಲಿ. ಪಾರ್ವತೇಯ ಸೇನೆಯು ಪಟ್ಟಣವಂ ಸಂರಕ್ಷಿಸುತ್ತಲಿರಲಿ"

ಎಂದು ಶಬರವರ್ಮನಿಗೆ ಆಜ್ಞಾಪಿಸಲು, 'ಮಹಾಪ್ರಸಾದ'ವೆಂದು ರಾಜಾಜ್ಞೆಯಂ ಸಾಮಂತದೇಶಾಧಿಪತಿಗಳಿಗೆ ತಿಳಿಸುವಂತೆ ರಾಜಭಟರಿಗೆ ಶಬರವರ್ಮನು ಹೇಳಿ ಕಳುಹಿಸಲು, ಅದೇ ರೀತಿಗೆ ಆ ದೇಶಾಧಿಪತಿಗಳ ಸೇನೆಗಳು ಬಂದು, ಪರ್ವತರಾಯನ ಶಾಹುರೀ ನಗರದ ಬಹಿರ್ಭಾಗದಲ್ಲಿ ಇಳಿಯುತ್ತಲಿದ್ದವು.

ಹೀಗಿರುತ್ತಲಿರಲು, ಪರ್ವತರಾಜ್ಯವಂ ಕುರಿತು ಪೋಗುತ್ತಲಿರುವ ಚಾಣಕ್ಯನು ಕೆಲವು ದಿನದ ಮೇಲೆ ಪರ್ವತರಾಜ್ಯವಂ ನೋಡುತ್ತ ಚಂದ್ರಗುಪ್ತನಿಗಿಂತೆಂದನು :

"ಎಲೈ ಕುಮಾರನೆ, ಇದಕೋ, ರಮಣೀಯವಾದ ಬಹುನದೀವನಸಮೇತಗಳಾಗಿ, ಸಕಲಸಸ್ಯಗಳಿಂ ಸಮೃದ್ಧವಾಗಿ, ವಿವಿಧವಸ್ತುಸಂಭಾರಸಂಯುತವಾಗಿ, ಪುಷ್ಟರಾದ ಪ್ರಜಾಪಶುಸಂತತಿಶೋಭಿತವಾಗಿ, ನೋಡುವರ್ಗೆ ಸಂತೋಷಕರವಾಗಿ, ಈ ಪರ್ವತರಾಜ್ಯವು ಈ ದೇಶಾಧಿಪತಿಗೆ ಬಹು ಶುಭವನ್ನುಂಟುಮಾಡುತ್ತಲಿದೆ. ಈ ಪರ್ವತೇಶ್ವರನು ಬಹುಮ್ಲೇಚ್ಛ ದೇಶಾಧಿಪತಿಗಳಿಂದ ಕಪ್ಪಗಳಂ ಸ್ವೀಕರಿಸುತ್ತ, ಅಸಂಖ್ಯಾತ ಸೇನಾಪರಿವೃತನಾಗಿ ಶೂರನೆಂದು ಕೇಳಿ, ಈತನಿಂದ ನಿನ್ನ ಕಾರ್ಯ ಸಾಧ್ಯವಾದೀತೆಂದು ಇಲ್ಲಿಗೆ ಬಂದೆನು" ಎಂದು ಹೇಳುತ್ತ, ಮುಂದೆ ತೆರಳುತ್ತ, ದೂರದಿಂದಲೇ ಆ ಶಾಹುರೀನಗರವಂ ನೋಡಿ,

"ಎಲೈ ಕುಮಾರಕನೆ, ಅದಕೋ ಪರ್ವತರಾಯನ ಪಟ್ಟಣ ಕಾಣುತ್ತಲಿದೆ. ಅನೇಕ ಯೋಜನಾಯತವುಳ್ಳುದಾಗಿ ದುರವಗಾಹವಾದ ಅಗಳುಗಳಿಂದಲೂ ಅತ್ಯುನ್ನತಂಗಳಾದ ಕೋಟೆ ಕೊತ್ತಳ ಗೋಪುರ ಹರ್ಮ್ಯ ಪ್ರಾಸಾದ ರಾಜಭವನ ವಿತಾನ ಧ್ವಜ ಪತಾಕಾಪಂಕ್ತಿಗಳಿಂದ ಶೋಭಿತವಾಗಿ, ನೋಡುವ ರಿಪುಜನಕ್ಕೆ ಸಂಯಮನಿಯಂತೆ ಮಹಾ ಭಯಂಕರವಾಗಿ, ಲೋಕದವರ್ಗೆ ಸಂತೋಷದಾಯಕವಾಗಿ, ಚತುರ್ದಂತಗಳಿಂದೊಪ್ಪುವ ಗಜ

ಗಂಡಸ್ಥಳನಿಸ್ಸೃತ ಮದೋದಕಧಾರಾಲಹರಿಗಳಿಂ ನದೀಮಾತೃಕದೇಶವಿದೆಂಬಂತೆ ಶೋಭಿಸುತ್ತ, ವಿವಿಧೋದ್ಯಾನಪಂಕ್ತಿ ಕುಸುಮನಿಕರ ಮಧುಮತ್ತ ಭ್ರಮರಬೃಂದ ಝೇಂಕಾರ ಮುಖರಿತಮಾಗಿ, ಮಹಾಘೋಷದಿಂ ಹೆಚ್ಚಿ ಬರುವ ಸಮುದ್ರತರಂಗಮಾಲಾಚ್ಛಂದದಿಂ ಸಲಾಮಿಗೆ ಹೋಗುತ್ತಲಿರುವ ಬಹು ತುರಗಾವಳೀ ಖುರಪುಟ ಧ್ವನಿಗಳಿಂ ದಿಕ್ತಟಿಗಳಂ ಶಬ್ದಮಯವಾದಂತೆ ಮಾಡುತ್ತಲಿರುವ ಈ ರಾಜಧಾನಿಯು ದೇವಾಸುರರಿಂದಲಾದರೂ ಜೈಸುವದಕ್ಕೆ ಶಕ್ಯವಲ್ಲವೆಂದು ತೋರುತ್ತಲಿದೆ. ಈ ರಾಯನ ಐಶ್ವರ್ಯಕ್ಕೆ ಪಾರವಂ ಕಾಣೆನೆಂ"ದು ಹೇಳುತ್ತಲಿರುವ ಚಾಣಕ್ಯನಂ ಕುರಿತು,

"ಸ್ವಾಮಿ, ಹೇಳಿದುದು ಸತ್ಯವೇ ಅಹುದು. ತಾವು ನಿಶ್ಚೈಸಿದರ್ಥವು ಅನ್ಯಥಾ ಆಗುವದುಂಟೇ ? ನನ್ನ ವಿಜ್ಞಾಪನೆಯನ್ನವಧರಿಸಬೇಕು. ಈ ಪುರದ ಈಶಾನ್ಯದಿಕ್ಕಿನಲ್ಲಿ ದಂಡಯಾತ್ರಾಕಾರಣವಾಗಿ, ಶತ್ರುನಾಶನಸೂಚಕವಾಗಿ ಉದ್ಭವಿಸಿದ ಧೂಮಕೇತುವಿನಂತೆ ಧೂಮರೇಖಾಲಕ್ಷಣಲಕ್ಷಿತವಾಗಿ ಗಗನಲಕ್ಷ್ಮಿಯೊಡನೆ ಸರಸವಾಡುವ ವಿಜಯಲಕ್ಷ್ಮಿಗಾವಾಸವಾದ ಸೇನಾಧ್ವಜವು ಬಹುಸೇನಾನಿಕರದಿಂ ಕೂಡಿ ಪ್ರತಿಷ್ಠಿತವಾಗಿ ಇರುವದರಿಂದಲೂ ಶೂರಪರಿವಾರ ಮುಂಭಾಗದಲ್ಲಿ, ಸೇವಕಪರಿವಾರ ಹಿಂಭಾಗದಲ್ಲಿಳಿದಿರುವದರಿಂದ ಈ ದೇಶಾಧಿಪತಿಗೆ ಈಶಾನ್ಯ ದಿಕ್ಕಿನ ಶತ್ರುರಾಯರ ಮೇಲೆ ದಂಡಯಾತ್ರೆ ಉಂಟಾಗುವದೆಂದು ತೋರುತ್ತಲಿದೆ. ಇದೇ ಸಮಯದಲ್ಲಿ ಈ ರಾಯನಿಗೆ ನಮ್ಮ ಅಭಿಮತಕಾರ್ಯವನ್ನರುಹಿದರೆ, ಈ ರಾಯನು ತನಗೆ ಆವಶ್ಯಕವಾದ ರಾಜಕಾರ್ಯವಂ ತ್ಯಜಿಸಿ, ನಮ್ಮ ಕಾರ್ಯಕ್ಕೆ ಒಡಂಬಡುವನೋ ಹ್ಯಾಗೋ" ಎಂದು ಚಂದ್ರಗುಪ್ತನು ಹೇಳುತ್ತಲಿರಲು,

ಆ ಮಾತಿಗೆ "ಅಯ್ಯ ಕುಮಾರಕನೆ, ನೀನು ಹೇಳಿದುದು ವಿಹಿತವೇ ಅಹುದು. ನಮಗೆ ದೈವಬಲ ಒದಗಿದರೆ, ನಾವು ಮಾಡುವ ಉಪಾಯಗಳಿಂದ ಈ ರಾಯನಿಗೆ ಈಗಿನ ಶತ್ರುಗಳ ಆತಂಕ ತಪ್ಪಿ, ಈಗಿನ ಪ್ರಯಾಣವೇ ನಮ್ಮ ಕಾರ್ಯಕ್ಕೆ ಉಪಯುಕ್ತವಾಗಿ ಪಾಟಲೀಪುರಾಭಿಮುಖವಾಗುವುದು" ಎಂದು ಹೇಳುತ್ತ, ಆ ಪುರಪ್ರವೇಶವಂ ಮಾಡಿ, ಆ ಮಾರನೆ ದಿವಸದಲ್ಲಿ ಆ ರಾಯನ ಸಮಯವಂ ವಿಚಾರಿಸಿ, ಸುಮುಹೂರ್ತವೆಂದು ತಿಳಿದು, ಚಂದ್ರಗುಪ್ತಸಮೇತನಾಗಿ ಚಾಣಕ್ಯನು ರಾಜದ್ವಾರದಲ್ಲಿ ಬಂದು ನಿಂತು, ಅಲ್ಲಿಯ ದ್ವಾರಪಾಲಕರಂ ನೋಡಿ,

"ಎಲೈ ಪ್ರತಿಹಾರಿಗಳಿರ, 'ರಾಜಪುತ್ರನೊಡಗೂಡಿ ಚಾಣಕ್ಯರೆಂಬ ಬ್ರಾಹ್ಮಣರು ಪ್ರಭುದರ್ಶನಾಪೇಕ್ಷೆಯಿಂದ ರಾಜದ್ವಾರದ ಬಳಿಯಲ್ಲಿ ಬಂದು ನಿಂತು ಇದ್ದಾರೆ' ಎಂದು ಭೂಪತಿಗಳಿಗೆ ತಿಳುಹಿಸಿರಿ" ಎಂದು ಹೇಳಲು, 'ಒಳ್ಳೆಯದೆಂ'ದು ಆ ದ್ವಾರಪಾಲಕರು ಹೋಗಿ, ಆಸ್ಥಾನದಲ್ಲಿ ಕುಳಿತಿದ್ದ ಪರ್ವತರಾಯನಿಗೆ ವಂದಿಸಿ ಬಿನ್ನೈಸುತ್ತಿದ್ದರು :

"ಬುದ್ಧೀ ಪರಾಕು. ಉದಯಿಸಿ ಬರುತ್ತಲಿರುವ ಬಾಲಚಂದ್ರನೊಡಗೂಡಿದ ಅಂಗಾರಕನಂತೆ ಮಹಾತೇಜೋವಂತರಾಗಿ ರಾಜಪುತ್ರನೊಡಗೂಡಿ ಚಾಣಕ್ಯನೆಂಬ ಬ್ರಾಹ್ಮಣೋತ್ತಮರು ರಾಜದ್ವಾರವನ್ನಲಂಕರಿಸುತ್ತ, ಸನ್ನಿಧಿಯಂ ಕಾಣಬೇಕೆಂಬ ಕುತೂಹಲದಿಂದ 'ಪ್ರಭುಗಳಿಗೆ ವಿಜ್ಞಾಪಿಸಿರಿ' ಎಂದು ಹೇಳಿದ್ದರಿಂದ ಚರಣಸನ್ನಿಧಿಯಲ್ಲಿ ಬಿನ್ನೈಸಿದೆವು" ಎಂಬ ದ್ವಾರಪಾಲಕರ ವಾಕ್ಯವಂ ಕೇಳಿ, "ಮೊದಲು ಶಬರವರ್ಮ ಹೇಳಿದಂತೆ ರಾಜಪುತ್ರನಾದ ಚಂದ್ರಗುಪ್ತನೊಡಗೂಡಿ ಚಾಣಕ್ಯನೆಂಬ ಬ್ರಾಹ್ಮಣನು ನಂದನಿಗ್ರಹಾರ್ಥವಾಗಿ

ಬಂದಿರಬೇಕು" ಎಂದು ತಿಳಿದು, ಮಂತ್ರಿಗಳ ಮುಖವಂ ನೋಡಿ, "ಯಾರೋ ಪೂಜ್ಯರು ಬಂದಿರಬೇಕು. ಯಥೋಚಿತಮರ್ಯಾದೆಯಿಂ ಕರೆತರುವರಾಗಿ" ಎಂದು ಆ ರಾಯನಾಜ್ಞಾಪಿಸಲು, 'ಮಹಾಪ್ರಸಾದ'ವೆಂದು ಶಬರವರ್ಮನೆಂಬ ಮಂತ್ರಿಯು ಬಂದು ಸಮ್ಮಾನದಿಂದ ಹಸ್ತಲಾಘವವನ್ನಿತ್ತು, ಚಂದ್ರಗುಪ್ತ ಚಾಣಕ್ಯರಂ ಸಭಾಮಂಟಪಕ್ಕೆ ಕರೆತರಲು,

ಆಗ ಪರ್ವತರಾಯ[ನು] ಪೀಠದಿಂದೆದ್ದುಬಂದು, ಸುವರ್ಣಪೀಠದಲ್ಲಿ ಚಾಣಕ್ಯ ಚಂದ್ರಗುಪ್ತರಂ ಕುಳ್ಳಿರಿಸಿ, "ಭೂಸುರೋತ್ತಮರಾದ ಚಾಣಕ್ಯರಿಗೆ ರಾಜಕುಮಾರರಿಗೆ ಸಹ ಸ್ವಾಗತವೇ ? ಚಂದ್ರಸೂರ್ಯರೇಕತ್ರ ಕೂಡಿದರೆ ಆ ದಿನವು ದರ್ಶವೆಂದೆನಿಸಿ ತಮಸ್ಸಿನಿಂದ ಯುಕ್ತವಾಗುವದೆಂಬುವದು ಲೋಕಪ್ರಸಿದ್ಧವು. ಪರಸ್ಪರಾನುಕೂಲವಾಗಿ, ಏಕಕಾಲದಲ್ಲಿ ಕೂಡಿ, ತಮೋನಿಕರವಂ ಪರಿಹರಿಸಿ ಬೆಳಗುತ್ತಲಿರುವ ಅಪೂರ್ವ ಚಂದ್ರಸೂರ್ಯರ ದರ್ಶನದಂತೆ ಕ್ಷಾತ್ರತೇಜಸ್ಸಿನಿಂದಲಂಕೃತವಾದ ಬ್ರಹ್ಮತೇಜೋನಿಧಿಗಳಾದ ನಿಮ್ಮ ದರುಶನದಿಂದ ನಮ್ಮೆಲ್ಲರ ಮನೋಂಧಕಾರವೆಲ್ಲವೂ ತೊಲಗಿದವು" ಎಂದು ಆ ರಾಯ ಹೇಳಲು, "ರಾಜಾಧಿರಾಜರಾದ ಪರ್ವತೇಶ್ವರರೆ, ನಾವು ಕ್ಷೇಮದಿಂ ಬಂದೆವು. ಪ್ರಜಾಪರಿವಾರ ಸಮೇತರಾದ ನಿಮಗೆ ಕುಶಲವೇ ? ನ್ಯಾಯದಿಂ ಪ್ರಜಾಪರಿಪಾಲನಂ ಗೈಯುತ್ತ ಯಶೋವಂತರಾದ ನಿಮ್ಮ ವೈಭವವಂ ನೋಡ ಬಂದೆವು" ಎನಲು,

"ಅಯ್ಯ ಭೂಸುರೋತ್ತಮರೆ, ನಿಮ್ಮಂಥಾ ಮಹಾಪುರುಷರಾಶೀರ್ವಾದಬಲದಿಂದ ನಾವೆಲ್ಲರೂ ಕ್ಷೇಮಿಗಳು. ಬಂದ ವಿಶೇಷ ಪ್ರಯೋಜನವೇನೆಂ"ದು ರಾಯ ಕೇಳಲು, ಆ ಮಾತಿಗೆ "ಏಕಾಂತಯೋಗ್ಯವಾದ ಕಾರ್ಯಗೌರವವುಂಟು" ಎಂದು ಚಾಣಕ್ಯ ಹೇಳಲು, ಆ ಮಾತಿಗೆ ಆ ರಾಯನು ನಾಲ್ಕು ದಿಕ್ಕಂ ನೋಡಲು, ಆತನ ಇಂಗಿತಜ್ಞರಾದ ಜನರೆಲ್ಲರೂ ಕೆಲಸಾಗಿ ಸಾರುತ್ತಿರಲು, ಚಾಣಕ್ಯನಿಂತೆಂದನು :

"ಅಯ್ಯ ಭೂಪತಿಯೇ, ನಿನ್ನ ಪ್ರತಾಪವೆಂಬ ಸೂರ್ಯಾತಪದ ಸೆಕೆಗೆ ಸೈರಿಸಲಾರದೆ, ಶತ್ರುರಾಜ್ಯಲಕ್ಷ್ಮಿಯರು ನಿನ್ನ ಛತ್ರದ ನೆರಳನ್ನಾಶ್ರಯಿಸಿರುವದಂ ನೋಡಿ, ನಂದರಾಜ್ಯಲಕ್ಷ್ಮಿಯು ನಿನ್ನ ಛತ್ರಚ್ಛಾಯಾಗಮನವನ್ನೆದುರುನೋಡುತಲಿದ್ದಾಳೆ. ಅಕಾರಣಜ್ಞಾತಿಮತ್ಸರದಿಂದ ಪಿತೃ ಸೋದರರೆಲ್ಲರೂ ಸಂಹೃತರಾಗಲು, ಶತ್ರುಗಳಾದ ಆ ನವನಂದರು ಮಾಡುವ ಅಪಮಾನದಿಂದ ಖಿನ್ನನಾದ ಚಂದ್ರಗುಪ್ತನೆಂಬ ಈ ಅರಸಿನ ಅಭ್ಯುದಯವೆಂಬ ಬಾಲಚಂದ್ರಮಂಡಲಕ್ಕೆ ನಿನ್ನ ಪರಾಕ್ರಮವೆಂಬ ಸೂರ್ಯಪ್ರತಿಬಿಂಬವೆಂಬ ಅನುಪ್ರವೇಶವಾದಲ್ಲದೆ ವೃದ್ಧಿ ಉಂಟಾಗದೆಂದು ತಿಳಿದು, ನಿಮ್ಮ ಬಳಿಗೆ ಬಂದೆವು. ದುರಾತ್ಮಕರಾದ ನಂದರು ನಿಷ್ಕಾರಣವಾಗಿ ತಮಗೆ ಜ್ಞಾತಿಗಳಾದ ಮೌರ್ಯಕುಮಾರರಿಗೆ ಮಾಡಿದ ಹಿಂಸೆಯಂ ನೋಡಿ, ನಂದರಿಗೆ ಸಮ್ಮತನಾದ ರಾಕ್ಷಸನೆಂಬ ಅಮಾತ್ಯನೊಬ್ಬ ಹೊರತು, ಮಿಕ್ಕ ಸಾಮಾಜಿಕರೆಲ್ಲರ ಮನಃಕುವಲಯಗಳು ನಂದರಲ್ಲಿ ನಂಬಿಗೆಯಂ ಬಿಟ್ಟು, ಚಂದ್ರಗುಪ್ತನೆಂಬ ಚಂದ್ರೋದಯವನ್ನೇ ಅಪೇಕ್ಷಿಸುತಲಿರುವವು. ಅದರಿಂದ ಚಂದ್ರಗುಪ್ತನ ಅಭಿಮತಾನುಸಾರವಾಗಿ ಸಮಯೋಚಿತವಾಗಿ ಆ ಸಾಮಾಜಿಕರೆಲ್ಲರ ಅಕ್ಷರದ ಸಮ್ಮತಿಯುಕ್ತವಾದ ಕಾಗದವಿದು" ಎಂದು ಹೇಳಿ, ಆ ರಾಯನ ಕೈಯಲ್ಲಿ ಕೊಡಲು, ಅದಂ ನೋಡಿ ಆ ರಾಯನು ತನ್ನ ಮನಸ್ಸಿನಲ್ಲಿ ಆಲೋಚಿಸುತ್ತಲಿದ್ದನು :

"ಮೊದಲು ಪಾಟಲೀಪುರದಲ್ಲಿ ನಂದರ ದೆಸೆಯಲ್ಲಿಯಿದ್ದ ಮೌರ್ಯರೆಲ್ಲರೂ ಹತರಾಗಿ

ಚಂದ್ರಗುಪ್ತನೆಂಬ ಒಬ್ಬ ಮಾತ್ರ ಜೀವಿಸಿಕೊಂಡು ಇದ್ದಾನೆ ಎಂಬುವದರಿಂದ ನಿಷ್ಕಾರಣವಾದ ಮೌರ್ಯವಧೆಯಂ ನೋಡಿ, ಅಲ್ಲಿಯ ಸಾಮಾಜಿಕರ ಮನಸ್ಸಿಗೆ ಅಸಮಾಧಾನವಾಗಿದ್ದೀತು. ಅವರು ಸಮಯಾಂತರದಲ್ಲಿ ಚಂದ್ರಗುಪ್ತನಿಗೆ ಸಹಾಯರಾದರೂ ಆಗಬಹುದು ಎಂದು ನಾನು ಆಲೋಚಿಸಿದಂತೆ ಆಯಿತು. ಈ ಚಂದ್ರಗುಪ್ತನ ರೂಪು ಲಾವಣ್ಯ ಲಕ್ಷಣ ಗಾಂಭೀರ್ಯಗಳಂ ನೋಡಿದರೆ, ಪ್ರಭುಪದಕ್ಕೆ ಯೋಗ್ಯನೆಂದು ತೋರುತ್ತಲಿದೆ. ಈತನಿಂದಲೇ ಸಿಂಹಪಂಜರಪರೀಕ್ಷೆಯು ಆಗಿ ಇದ್ದೀತು. ಕೃಶನಾಗಿಯೂ ಗಾಂಭೀರ್ಯಶಾಲಿ ಆಗಿರುವ ಈತನಿಗೆ ಪ್ರಭುಪದವುಂಟಾದರೆ ಇನ್ನೂ ಅಧಿಕವಾಗಿ ಪ್ರಕಾಶಿಸಿಯಾನು. "ಜ್ಞಾತಿಶ್ಚೇದನಲೇನ ಕಿಂ" ಎಂಬ ನೀತಿವಾಕ್ಯವು ಮೌರ್ಯ ನಂದರಲ್ಲಿ ನಿದರ್ಶನಕ್ಕೆ ಬಂದಂತಾಯಿತು.

ಐಶ್ವರ್ಯಮತ್ತರಾದ ಅರಸುಗಳು ಜ್ಞಾತಿಗಳಲ್ಲಿ ವೈರವಂ ಮಾಡುವದೆಂಬುವದು ಅನಾದಿಸಿದ್ಧವು. ಅಕಾರ್ಯವನ್ನಾದರೂ ತಮ್ಮ ಕ್ಷೇಮಾರ್ಥವಾಗಿ ಮಾಡುವರು. ಇಂದಿನವರೆಗೆ ನಂದರ ಐಶ್ವರ್ಯದಲ್ಲಿ ಛಿದ್ರವುಂಟಾಗಲಿಲ್ಲ. ನಂದರಲ್ಲಿ ಅನಾದರಬುದ್ಧಿಯಿಂದ ಅಲ್ಲಿಯ ಬಾಗುರಾಯಣಾದಿ ಸೇನಾಪತಿಗಳು ಈ ಚಂದ್ರಗುಪ್ತನಿಗೆ ಈತನ ಅಭಿಮತವೇ ತಮ್ಮ ಅಭಿಮತವೆಂದು ಹಸ್ತಾಕ್ಷರ ಸಮ್ಮತಿಯಂ ಬರೆದು ಕೊಟ್ಟಿರುವರಾದ್ದರಿಂದ, ಚಂದ್ರಗುಪ್ತನಿಗೆ ನಂದನಿಗ್ರಹವು ಆವಶ್ಯಕವಾದಂತೆ ಬಾಗುರಾಯಣಾದಿಗಳಿಗೂ ಆವಶ್ಯಕವಾದಂತಾಯಿತು. ಚಂದ್ರಗುಪ್ತನು ನಮ್ಮ ಸಹಾಯದಿಂದ ನಂದರಂ ನಿಗ್ರಹಿಸಬೇಕೆಂದು ಬಂದವನಾಗಿ ಚಾಣಕ್ಯವಾಕ್ಯದಿಂದ ನಿಶ್ಚಯವಾಯಿತು. ಈ ಚಂದ್ರಗುಪ್ತನಿಗೆ ಬಾಗುರಾಯಣಾದಿಗಳ ಸಹಾಯವಿದ್ದ ಬಳಿಕ, ಈತನ ಸಹಾಯಾರ್ಥವಾಗಿ ಹೋಗುವ ನಮಗೆ, ನಂದನಿಗ್ರಹವು ಸುಲಭವಾಗಿ ಆಗುವಂತೆ ತೋರುತ್ತಲಿದೆ. ಇದಲ್ಲದೆ ಪೂರ್ವಮತ್ಸರವಂ ನೆನೆದು ಲಂಪಾಕಪತಿಯು ನಮ್ಮ ಮೇಲೆ ದಂಡೆತ್ತಿಬರುವನಾಗಿ ಇದ್ದಾನೆ.

ಈ ಅರ್ಥಗಳೆಲ್ಲವಂ ನಮ್ಮ ಮಂತ್ರಿಗಳೊಡನೆ ಆಲೋಚಿಸಿ, ಅದರ ಗುಣದೋಷಗಳಂ ತಿಳಿದು, ಕರ್ತವ್ಯವಂ ಮನಕ್ಕೆ ತಂದುಕೊಂಡು, ಆ ಬಳಿಕ ಚಾಣಕ್ಯರಿಗೆ ಉತ್ತರವಂ ಹೇಳಬೇಕೆಂ"ದು ನಿಶ್ಚೈಸಿ, ಆ ರಾಯನು ಚಾಣಕ್ಯರ ಮುಖವಂ ನೋಡಲು, ಆಗ ಮಧ್ಯಾಹ್ನಸೂಚಕವಾದ ಶಂಖ ಭೇರೀ ವಾದ್ಯಧ್ವನಿಗಳು [೧]ಬೊಬ್ಬಿಡಲು[೧], 'ಈ ಕಾರ್ಯಕ್ಕೆ ಈ ವಾದ್ಯಧ್ವನಿಗಳು ಶುಭಸೂಚಕಗಳೆಂ'ದು ನಿಶ್ಚೈಸಿ.

"ಬ್ರಾಹ್ಮಣೋತ್ತಮರಾದ ಚಾಣಕ್ಯರೆ, ನಿಮಗೆ ಮಾಧ್ಯಾಹ್ನಿಕಸಮಯ ಸನ್ನಿಹಿತವಾಯಿತು. ಆಲೋಚನಾಶೇಷವು ಮತ್ತೆ ಆದೀತು. ದೂರದಿಂ ನಮ್ಮಲ್ಲಿ ಕೃಪೆಮಾಡಿ ಬಂದಿರಿ. ವಿಶ್ರಮಿಸಿಕೊಳ್ಳಬಹುದು" ಎಂದು ಹೇಳಿ, ಪೀಠದಿಂದೆದ್ದು, ಮಂತ್ರಿಮುಖವಂ ನೋಡಿ, ಆಸ್ಥಾನದಿಂ ತೆರಳುತ್ತಿರಲು,

ಆಗ ಮೃದಂಗ ಭೇರೀ ನಿಸ್ಸಾಣ ಕಾಹಳ ಶಂಖಗಳು ದಿಕ್ತಟಗಳು ತುಂಬುವಂತೆ ಧ್ವನಿಗೈಯುತ್ತಿರಲು, ಸಾಮಂತನರಪತಿ ಸಮ್ಮರ್ದಕ್ಷೋಭೆಯಿಂದವರ ಕಿರೀಟಾಂಗದ ಹಾರಮಣಿಗಳು ಖದ್ಯೋತಸಹಸ್ರಪ್ರಭೆಯಂತೆ ಜಗುಳುತ್ತಿರಲು, ದೂರಾವನತರಾಜ

---

೧. ಭೋರಿಡಲು (ಕ)

ಮಂಡಲ ಶೇಖರಮಾಲತೀಕುಸುಮಮಕರಂದ ಮತ್ತಮಧುಕರರವಮನೋಹರಗಳಾದ ಪಾರವಿಲಾಸಿನೀ ಸಂಗೀತಧ್ವನಿಗಳು ಕಿವಿಗಿಂಪಾಗಿರಲು, ವಂದಿಮಾಗಧ ಜಯಬಿರುದ ಪ್ರಬಂಧಧ್ವನಿಗಳು ರಾಜಭವನವಂ ಪೂರೈಸುತ್ತಿರಲು, ಮಹಾವೈಭವದಿಂದ ಹೊರಟು, ಆ ರಾಯನು ತನಗೆ ಕುಮಾರಕನಾದ ಮಲಯಕೇತುವಿನ ಕೈಯಲ್ಲಿ ಚಾಣಕ್ಯ ಕೊಟ್ಟ ಕಾಗದವಂ ಕೊಟ್ಟು, ಮಜ್ಜನಗೃಹಾಭಿಮುಖನಾಗುತ್ತಿರಲು,

ಆಗ ರಾಜೇಂಗಿತಜ್ಞನಾದ ಶಬರವರ್ಮನೆಂಬ ಮಂತ್ರಿಯು ಹಂಸಕಾರಂಡವಿರುತ ಮನೋಹರಮಾಗಿ ಕಮಲ ಕಲ್ಹಾರಗಳಿಂ ಶೋಭಿಸುತ್ತ, ಪುರಲಕ್ಷ್ಮೀವಿಲಾಸದರ್ಪಣವೋ ಎಂಬಂತೆ ನಿರ್ಮಲ ಮಧುರೋದಕಪೂರಿತಮಾದ ಸರೋವರಗಳಿಂ ಶೋಭಿಸುತ್ತ, ತಾರಾನಿಕರದಿಂದೊಪ್ಪುವ ಗಗನಾಭೋಗದಂತೆ ಪುಷ್ಪಗುಚ್ಛ ಫಲಭಾರಗಳಿಂ ಬಗ್ಗಿ ಪಲ್ಲವಾಂಜಲಿಗಳಿಂ ವನಲಕ್ಷ್ಮಿಗೆ ಪುಷ್ಪೋತ್ಕರವನ್ನರ್ಪಿಸುವಂತೆ ಕಂಗೊಳಿಸುತ್ತ, ವಿವಿಧ ಕುಸುಮಮಕರಂದಮತ್ತಮಧುಕರಝೇಂಕಾರಯುತಶುಕಶಾರಿಕಾನಿನಾದದಿಂ ನಂದನವನ ಸಂಪತ್ತನ್ನನುಕರಿಸುವ ಪ್ರಮದವನದೊಳು ವಿವಿಧಮಣಿಪುತ್ರಿಕಾಶೋಭಿತಮಾಗಿ ಸಕಲ ವಸ್ತುಸೇವಕಜನಸಮೃದ್ಧಮಾದ ದಿವ್ಯಮಂದಿರವಂ ಬಿಡಾರವಂ ಮಾಡಿ ಸಮ್ಮಾನದಿಂದ ಚಾಣಕ್ಯ ಚಂದ್ರಗುಪ್ತರನ್ನಿಳುಹಿಸಿ, ಕಾದುಕೊಂಡಿರಲು,

ಅಲ್ಲಿಯ ಸರೋವರದಲ್ಲಿ ಸ್ನಾನಾದಿಗಳುಂ ಮಾಡಿ, ಶಿಷ್ಯರಿಂ ಸಂಗ್ರಹೀತವಾದ ಫಲ ಪುಷ್ಪಗಳಿಂ ದೇವತಾರಾಧನವಂ ಮಾಡಿ, ಉಚಿತಾಹಾರವಂ ನೆರವೇರಿಸಿ, ಅವರಿರ್ವರೂ ವಿಶ್ರಮಿಸಿಕೊಳ್ಳುತ್ತಿರಲು, ಆಗ ಆ ರಾಯನ ಅಪ್ಪಣೆಯಿಂದ ಕಳುಹಿಸಿದ ದಿವ್ಯಮಾಲ್ಯಾಂಬರಾಭರಣಾನುಲೇಪನಗಳಿಂ ಚಂದ್ರಗುಪ್ತನನ್ನಲಂಕರಿಸಿ, ಗಾಯಕ ವೈಣಿಕ ವೈತಾಳಿಕ ಪರಿಹಾಸಕ ಜನರಂ ನಾತಿದೂರಸ್ಥರಾಗಿ ಕಾದುಕೊಂಡು ಇರುವಂತೆ ನೇಮಿಸಿ, ಚಂದ್ರಗುಪ್ತ ಕೊಟ್ಟ ವೀಳೆಯವಂ ಕೈಕೊಂಡು, ಅವರ ಅಪ್ಪಣೆಯಂ ಕೊಂಡು ಪೋಗಿ, ಶಬರವರ್ಮನು ತಾನು ಮಾಡಿದ ಸತ್ಕಾರವಂ ಪರ್ವತರಾಯನಿಗೆ ತಿಳುಹಿಸುತ್ತಿದ್ದನು.

ಆ ಮಾರನೆ ದಿವಸ, ಆ ರಾಯನು ತನಗೆ ಮಂತ್ರಿಗಳಾದ ಉಲೂಕ ಶಬರವರ್ಮರಂ ಏಕಾಂತದಲ್ಲಿ ಕುಳ್ಳಿರಿಸಿಕೊಂಡು ಇಂತೆಂದನು :

"ಅಯ್ಯ ಮಂತ್ರಿಗಳಿರಾ, ಈಗ ಚಂದ್ರಗುಪ್ತನು ನಂದರಲ್ಲಿ ದ್ವೇಷವಂ ಸಾಧಿಸಲೋಸುಗ ನಮ್ಮ ಸಹಾಯವನ್ನಪೇಕ್ಷಿಸಿ ಬಂದು ಇದ್ದಾನೆಯೋ ? ಅಥವಾ ಶತ್ರುರಹಿತವಾದ ತನ್ನ ಪಿತ್ರಾರ್ಜಿತವಾದ ರಾಜ್ಯಲಾಭಾರ್ಥವಾಗಿ ಬಂದು ಇದ್ದಾನೆಯೋ ? ಚಾಣಕ್ಯರು ಹೇಳಿದ ಭಾವವಂ ನೋಡಿದರೆ, ಎರಡು ವಿಧವಾಗಿಯೂ ತೋರುತ್ತಲಿದೆ. ಪ್ರಕೃತದಲ್ಲಿ ಲಂಪಾಕಾಧಿಪತಿ ದಂಡೆತ್ತಿ ಬರುವನೆಂಬ ವರ್ತಮಾನವು ತಿಳಿದಿದೆಯಷ್ಟೆ. ಇದರ ಗುಣ ದೋಷಗಳಂ ತಿಳಿದು ಅವಶ್ಯಕರ್ತವ್ಯವಂ ಹೇಳುವರಾಗಿ" ಎಂದು ಆ ರಾಯ ಕೇಳಲು, ಆ ಮಾತಿಗೆ ಮೊದಲು ನಂದರ ಮಂತ್ರಿಯಾದ ರಾಕ್ಷಸನಲ್ಲಿ ವಿಶ್ವಾಸವಂ ಬಳಸಿ ಇದ್ದ ಉಲೂಕನೆಂಬ ವೃದ್ಧಮಂತ್ರಿ ಇಂತೆಂದನು :

"ಜೀಯ, ಪಾಟಲೀಪುರದ ಅರಸುಗಳಿಗೂ ನಮಗೂ ದ್ವೇಷವೆಂಬುವದು ಎಂದಿಗೂ ಇಲ್ಲ. ಈ ಚಂದ್ರಗುಪ್ತನ ದೆಸೆಯಿಂದ ಅವರೊಡನೆ ದ್ವೇಷವಂ ಸಂಪಾದಿಸಬೇಕಾಗುತ್ತಲಿದೆ. ಅವರು ಸಕಲದರಲ್ಲಿಯೂ ಸಂಪನ್ನರೆಂಬ ಅರ್ಥವು ಚಿತ್ತಕ್ಕೆ ವೇದ್ಯವಾಗಿಯೇ ಇದೆ.

ಸ್ವಯಂ ಶೂರರೂ ಶೂರಪರಿವಾರವುಳ್ಳವರೂ ಬಹುದೇಶಸಾಮಂತರಾಯರ ಕೈಕಪ್ಪಗಳಂ ಸ್ವೀಕರಿಸುವರೂ ಪ್ರಜಾರಂಜಕರೂ ವಿತರಣಶಾಲಿಗಳೂ ಆದುದರಿಂದ ಯುದ್ಧೋಪಾಯದಿಂ ಸಾಧ್ಯರಾಗರು. ದಕ್ಷನಾಗಿ, ಸ್ವಾಮಿಭಕ್ತನಾಗಿ ಇರುವ ರಾಕ್ಷಸನು ಮಂತ್ರಿಯಾಗಿ ಸಕಲಭಾರವಂ ವಹಿಸಿ ಇರುವದರಿಂದ ಅವರಲ್ಲಿ ಭೇದೋಪಾಯ ಘಟಿಸದು. ಸಾಮದಾನಗಳಿಗೆ ನಿಮಿತ್ತವಿಲ್ಲ. ರಾಕ್ಷಸನು ನಿಮ್ಮಲ್ಲಿ ಕೃತೋಪಕಾರನಾದುದರಿಂದ, ಆ ಉಪಕಾರಸ್ಮರಣೆ ನಿಮಗಿರಬೇಕು. ಮತ್ತು ಮಹಾಸಾಹಸವಂ ಮಾಡಿ, ದ್ರವ್ಯ ಜನವ್ಯಯವಂ ಮಾಡಿ, ಜಯವಂ ಸಂಪಾದಿಸಿದಾಗ್ಯೂ ಚಂದ್ರಗುಪ್ತನು ಶೂದ್ರಸ್ತ್ರೀಪೌತ್ರನಾದುದರಿಂದ ಪ್ರಜಾಸಮ್ಮತವಾದ ಪ್ರಭುಪದಕ್ಕೆ ಯೋಗ್ಯನಲ್ಲ. ಯುದ್ಧಪರ್ಯವಸಾನದಲ್ಲಿ ಜಯಲಾಭವೆಂತಿರುವದೋ ?

ಅದರಿಂ ಮೂಷಕಸಂಗ್ರಹಕ್ಕೆ ಪರ್ವತಭೇದನವಂ ಮಾಡದೆ ಇರುವಂತೆ, ಮಿತ್ರತ್ವವನ್ನಂಗೀಕರಿಸಿ ಇರುವ ಅಮಾತ್ಯ ರಾಕ್ಷಸನ ಮುಖದಿಂದಲೇ ಚಂದ್ರಗುಪ್ತನಿಗೂ ನಂದರಿಗೂ ಇರುವ ವೈರಪರಿಹಾರವಂ ಮಾಡಿಸಿ, ಚಂದ್ರಗುಪ್ತನಲ್ಲಿ ನಮಗೆ ಪೂರ್ಣಾಭಿಮಾನವುಂಟೆಂಬರ್ಥವಂ ಪ್ರಕಟವಂ ಮಾಡಿ, ಈತನಿಗೆ ಅವರ ದೆಸೆಯಿಂದ ಯೋಗ್ಯ[ತಾ]ನುಸಾರವಾಗಿ ಜೀವನವಂ ಕಲ್ಪಿಸಿದರೆ, ಎಲ್ಲವೂ ಕ್ಷೇಮವೇ ಸರಿ. ಮುಂದೆ ಈ ಅರ್ಥವಂ ಮಾಡಿಸಬಹುದು. ಈಗ ಪೂರ್ವಮಾತ್ಸರ್ಯವಂ ನೆನೆದು ನಮ್ಮ ಮೇಲೆ ದಂಡೆತ್ತಿ ಬರುವ ಲಂಪಾಕಪತಿಯ ಗರ್ವಭಂಗವಂ ಮಾಡುವದಕ್ಕೆ ಮುಂಚಿತವಾಗಿ, ಈ ಪಾಟಲೀಪುರದ ಕಾರ್ಯಭಾಗವಾದ ಶಬ್ದವನ್ನೇ ಆಡಕೂಡದು" ಎಂದು ಉಲೂಕನೆಂಬ ಮಂತ್ರಿಯು ಹೇಳುತ್ತಿರಲು, ಅದಂ ಕೇಳಿ ಶಬರವರ್ಮನೆಂಬ ಮಂತ್ರಿಯು ಆ ರಾಯಗಿಂತೆಂದನು :

"ಜೀಯ, ರಾಜಬೀಜೋತ್ಪನ್ನರಾದ ಅರಸುಗಳಿಗೆ ಈ ಕಲಿಯುಗದಲ್ಲಿ ಬಹುದೇಶಾಧಿಪತ್ಯ ಉಂಟಾಗಿ ಇರುವದು. ಶುದ್ಧಕ್ಷತ್ರಿಯಸಂತತಿಯು ಶಿಶಿರಾಂತದ ವೃಕ್ಷಪರ್ಣದಂತೆ ವಿರಳವಾಗಿ ಇರುವದು. ಮುಂದೆ ಅದೂ ತೋರುವದು ಇಲ್ಲ. ದಕ್ಷನಾಗಿ ಶೂರನಾಗಿ ನ್ಯಾಯದಿಂ ಪ್ರಜಾಪರಿಪಾಲನಂಗೈವ ಅರಸು, ಕುಲದಲ್ಲಿ ಜಘನ್ಯನಾದವನಾದರೂ ಅವನು ಹೊರತು ಅವಲಂಬನವಿಲ್ಲದಿರಲು, ಪ್ರಜೆಗಳೆಲ್ಲರೂ ಅವನನ್ನೇ ಅನುವರ್ತಿಸುವರು. ಮತ್ತರಾಗಿ ಪರದೇಶಗಳಂ ಒತ್ತಿಕೊಳ್ಳುತ್ತ, ಬಹುದೇಶಾಧಿಪತಿಗಳಿಂದ ಪಗುದಿಯಂ ತೆಗೆದುಕೊಳ್ಳುತ್ತ, ಸಾರ್ವಭೌಮರೆಂದು ತಾವು ಹೊಗಳಿಸಿಕೊಳ್ಳುತ್ತ, ಶರಣಾಗತರಾದವರಿಗೆ ಕೊಟ್ಟ ಅಭಯವಂ ಮೀರುತ್ತ, ಚಂದ್ರಮಂಡಲವಂ [1]ಗ್ರಹಿಸ[1]ಲೆಣಿಸಿದ ರಾಹುವಿನಂತೆ ನಮ್ಮ ಕೆಲವು ಸಾಮಂತರಾಯರಿಂದ ಅನಾದಿಯಾಗಿ ನಮಗೆ ಬರುವ ಕಪ್ಪಗಳಂ ತಾವೆ ತೆಗೆದುಕೊಳ್ಳುತ್ತ, ನಂದರು ಹೆಚ್ಚಿ ಬರುತ್ತಲಿದ್ದಾರೆ. ಕೆಣಕಿದರೆ ಸ್ವಲ್ಪಕಾರ್ಯಕ್ಕೆ ಅನರ್ಥವುಂಟಾದೀತೆಂದು ಉಪೇಕ್ಷೆಯಿಂದ ಇರುವದಾಗಿ ಇದೆ. ಇದು ಒಂದು ನಮಗೆ ಅವಕಾಶವು. ನಂದರಲ್ಲಿ ಈ ಛಿದ್ರವುಂಟಾದ ಸಮಯದಲ್ಲಿಯೂ ನಾವು ಉಪೇಕ್ಷಿಸಿದರೆ, ನಮಗೆ ಕಾರ್ಯಾಂತರ ಒದಗಿದ ಸಮಯದಲ್ಲಿ ನಮ್ಮಿಂ ಕಲಹಕ್ಕೆ ಕರೆದಾರು. ಮೊದಲೇ ರಾಕ್ಷಸನ ಭೇದಕೌಶಲ್ಯವು ನಮ್ಮ ಜನದಲ್ಲಿ ಪ್ರವೇಶಿಸಿದಂತೆ ತೋರುತ್ತಲಿದೆ : ಆತನು

---

೧. ಗ್ರಾಸಿಸ (ಕ)

[೧]ಈ[೧] ದೇಶಕ್ಕೆ ಮುಳ್ಳಿನಂತಿರುವ ದಶಾರ್ಣಾಧಿಪತಿ ಶೂರಸೇನಪತಿಗಳಿಂದ ಮೊದಲು ಬಂದು ಇದ್ದ ಕಲಹಶಮನವಂ ಮಾಡಿ, ತಮ್ಮ ಸನ್ನಿಧಿಗೆ ಮಿತ್ರನೆಂಬ ಖ್ಯಾತಿಗೆ ಪಾತ್ರನಾಗಿ ಇದ್ದವನಾದರೂ ಆತನು ಭೃತ್ಯಪದಕ್ಕೆ ಯೋಗ್ಯನಾದುದರಿಂದ ಸ್ವಾಮಿಯಾದ ನಂದರ ಮೂಲಕವಾಗಿ ಉಂಟಾಗುವ ಮಹಾಲಾಭವಂ ಇವನಂ ನೋಡಿ ಬಿಡಕೂಡದು. ಹಗೆಯಾದ ಭೃತ್ಯನ ನಿಮಿತ್ತ, ಸ್ವಾಮಿಯಾದವನಲ್ಲಿ ಇರುವ ಸಖ್ಯವಂ ಬಿಡಕೂಡದು. ಮತ್ತು ಮೌರ್ಯರಲ್ಲಿ ಅನುರಕ್ತರಾಗಿ ಇದ್ದ ಸೇನಾಪತಿಗಳು ಆತನ ಪುತ್ರನಾದ ಈ ಚಂದ್ರಗುಪ್ತನಲ್ಲಿ ಅಭಿಮಾನವಂ ಮಾಡಿ ಇದ್ದಾರು. ಆದರಿಂದ ನಂದರು ನಮ್ಮ ಭೇದೋಪಾಯಗಳಿಗೂ ಸಾಧ್ಯರಾದಾರು. ಅದಂತಿರಲಿ.

ಈ ಪ್ರಕೃತದಲ್ಲಿ ಒದಗಿರುವ ಲಂಪಾಕಪತಿಯ ಯುದ್ಧೋತ್ಸಾಹಭಂಗವಂ ಮಾಡಿ, ಆ ಬಳಿಕ ನಂದರ ಮೇಲೆ ನಮ್ಮ ಶೌರ್ಯಪ್ರಕಟವಂ ಮಾಡಿದರೆ, ಶ್ರಮವಿಲ್ಲದೆ ಗೌಡ ದೇಶಗಳೂ ಸಾಧ್ಯವಾದಾವು. ಈಗ ಚಂದ್ರಗುಪ್ತನ ಕಾರ್ಯವಂ ನಾವು ನಿರ್ವಹಿಸಿದರೆ, ಈ ಉಪಕಾರಕ್ಕೆ ಆತನ ದೆಸೆಯಿಂದ ಪ್ರತ್ಯುಪಕಾರ ಆಗುವದಕ್ಕೆ ಸಂಶಯವಿಲ್ಲ. ಆದರಿಂ ನಂದ ಸಾಮಂತರೆಲ್ಲರೂ ನಮಗೆ ತಗ್ಗಿ ನಡೆದುಕೊಂಡಾರು. ಇದರಿಂ ಶ್ರೇಯಸ್ಸು ಬಹುವಾಗಿ ಉಂಟಾದೀತು" ಎಂದು ಹೇಳಿದ ವಾಕ್ಯದಿಂದ ಪರ್ವತರಾಯನಿಗೆ ನಂದರ ಮೇಲೆ ಕೋಪವುದಯಿಸಿ,

"ಅಯ್ಯ ಶಬರವರ್ಮನೇ, ನೀನು ಹೇಳಿದುದು ಯಥಾರ್ಥವು. ಮುಂದೆ ಇದು ಕರ್ತವ್ಯವೆಂದು ತೋರುತ್ತಲಿದೆ. ಸದ್ಯಃ ದಂಡೆತ್ತಿ ಬರುತ್ತಿರುವ ಲಂಪಾಕಪತಿಯ ಕಾರ್ಯೋದ್ಯೋಗಭಂಗಕ್ಕೆ ಯತ್ನವಂ ಮಾಡಿ, ಶರಾವತೀ ನದೀತೀರದಲ್ಲಿ ನಮ್ಮ ಸೇನೆಗಳು ಹೋಗಿ ಇಳಿಯುವಂತೆ ನಾಳೆ ಬುಧವಾರದಲ್ಲಿ ನೇಮಿಸುವನಾಗು" ಎಂದು ಶಬರವರ್ಮಂಗೆ ಹೇಳಿ ಆ ರಾಯನು ಅಂತಃಪುರಕ್ಕೆ ತೆರಳುತ್ತಲಿದ್ದನು.

ಮತ್ತೆ ಆ ಮರುದಿವಸ, ಆ ರಾಯನು ಚಾಣಕ್ಯನಿಗೆ ನಂದರ ಮೇಲೆ ಕೋಪ[೨]ವೂ[೨] ಚಂದ್ರಗುಪ್ತನಲ್ಲಿ ಅನುಗ್ರಹ[ವೂ] ಉಂಟಾಗುವದಕ್ಕೆ ಕಾರಣವಂ ಆತನ ಮುಖವಚನದಿಂದಲೇ ಕೇಳಬೇಕೆಂದು "ಚಾಣಕ್ಯರ ಬಳಿಗೆ ಹೋಗಿ 'ತಮ್ಮ ಸಮಯವೇನೆಂದು ತಿಳಿದು ಬರಹೇಳಿದರೆಂ'ದು, 'ತಮ್ಮ[ಂ] ನೋಡಬೇಕೆಂಬ ಕುತೂಹಲದಲ್ಲಿ ಅರಸುಗಳು ಇದ್ದಾರೆಂ'ದು ಹೇಳಿ, ಬಂದರೆ ಕರೆದುಕೊಂಡು ಬರುವನಾಗು" ಎನ್ನಲು, ಆ ಮಾತಿಗೆ 'ಬುದ್ಧೀ' ಎಂದು ದೂತರು ಹೋಗಿ ರಾಯ ಹೇಳಿದ ವಾಕ್ಯವಂ ಹೇಳಲು, ಅದಂ ಕೇಳಿ "ನಾವೇ ಬರುತ್ತಲಿದ್ದೇವೆ" ಎಂದು ಹೇಳಿ, ಚಾಣಕ್ಯನು ರಾಜಸಭೆಗೆ ಬಂದು, ಆ ರಾಯನಂ ಕಂಡು, 'ಶ್ರೇಯೋಸ್ತು' ಎಂದು, ಉಚಿತಪ್ರಕಾರ ಇರ್ವರೂ ಕುಳಿತಿರಲು,

ಆಗ ರಾಯನು ಚಾಣಕ್ಯರಂ ನೋಡಿ, "ಭೂಸುರೋತ್ತಮರೆ, ಚಂದ್ರಗುಪ್ತನು ನಿಮ್ಮನ್ನಾಶ್ರಯಿಸಿ ಎಷ್ಟು ದಿನವಾಯಿತು ?" ಎನ್ನಲು, "ಅಯ್ಯ ರಾಯನೆ, ಈತನನ್ನು ನಾವು ಪಕ್ಷೀಕರಿಸಿದ್ದು ಸ್ವಲ್ಪ ಕಾಲವಾದಾಗ್ಯೂ, ನಂದರು ನಮಗೆ ಮಾಡಿದ ಅಪಮಾನಕ್ಕೆ ಅವರಲ್ಲಿ ದ್ವೇಷವು ಆಜನ್ಮಸಿದ್ಧವಾದ ಗಜಸಿಂಹವೈರದಂತೆ ಪ್ರತಿಕ್ಷಣವೂ ಹೆಚ್ಚಿ ಬರುವದು.

---

೧. ಯಾವ (ಕ), ೨. ವೂ ವರವು (ಕ, ಖ, ಗ)

ನಿನ್ನನ್ನು ನಾವು ಆಶ್ರಯಿಸಿ ಕಾರ್ಯಾರ್ಥವಾಗಿ ಬಂದಂತೆ, ಈ ಚಂದ್ರಗುಪ್ತನು ನನ್ನನ್ನಾಶ್ರಯಿಸಿ ತನ್ನ ಕಾರ್ಯಕ್ಕೆ ಸಾಧನವಾದಾನೆಂದು ಅನುವರ್ತಿಸಿದನು. ನಂದರಲ್ಲಿ ಕೋಪ ನಮಗೆ ಯಾಕೆ ಉಂಟಾಯಿತೆಂದರೆ, ಅದಂ ಹೇಳುವೆನು, ಕೇಳು :

"ಲೋಕದಲ್ಲಿ ಕೋಪವೆಂಬುವದೊಂದು ಲೌಕಿಕವ್ಯವಹಾರಕ್ಕೆ ಸಾಧನವೇ ಹೊರತು ನಿರರ್ಥಕವಲ್ಲ. ಕೋಪವಿಲ್ಲದ ಪುರುಷನು ಹೆಣ್ಣುಕುರಿಯಂತೆ ಲೌಕಿಕಜನಕ್ಕೆ ಸುಲಭನಾದಾನು. ಪ್ರಜೆಗಳು ರಾಜಾಜ್ಞೆಯಂ ಮೀರಿದರೆ, ರಾಜಕೋಪಕ್ಕೆ ಪಾತ್ರರಾಗಿ ದಂಡನೆಗೆ ಯೋಗ್ಯರಾದೇವೆಂಬ ಭೀತಿಯಿಂದ ತಗ್ಗಿ ನಡೆದಾರು. ಹಾಗೇ ಪತ್ನೀಪುತ್ರರು ಸಹ ನಡೆ[ದು]ಕೊಂಡಾರು. ತಪೋಧನರಿಗೆ ಕೋಪವು ವಿಘ್ನಕಾರಿ ಅಲ್ಲವೇ ಎಂದರೆ, ಕೇಳು : ಕೋಪ ಎರಡು ತೆರನಾಗಿಹುದು. ಅದರಲ್ಲಿ ವಿಮರ್ಶಪೂರ್ವಕವಾಗಿ ಮಾಡಿದ ಕೋಪವು ಯಶಸ್ಕರವು ; ಕೋಪಪೂರ್ವಕವಾಗಿ ಮಾಡಿದ ವಿಮರ್ಶೆಯು ಹಾನಿಕರವು. ಕೋಪಪೂರ್ವಕ ವಿಮರ್ಶೆಯುಳ್ಳವನು ಪ್ರಭುಪದಕ್ಕೆ ಯೋಗ್ಯನಲ್ಲ. ಅವನಿಗೆ ಹಾನಿ ಉಂಟಾಗುವುದು ಯಥಾರ್ಥವು. ಈ ಅರ್ಥದಲ್ಲಿ ರಾಮ ರಾವಣರೇ ನಿದರ್ಶನವು. ಬ್ರಾಹ್ಮಣನು ಕೋಪಪ್ರಯೋಜನವಂ ತಪೋವ್ಯಯದಿಂ ಮಾಡಿಕೊಂಡರೆ, ಆ ಕೋಪವು ಪರಲೋಕ ವಿಘ್ನವಾಗುವದು. ಪೌರುಷದಿಂದಂ ಮಾಡಿಕೊಂಡರೆ ಆ ಕೋಪವು ಸದ್ಗತಿಗೆ ವಿಘ್ನವಲ್ಲ. ಪ್ರಕೃತವೇನೆಂದರೆ : ನಂದರ ಮೇಲೆ ನಾನು ಮಾಡಿದ ಕೋಪವು ವಿಮರ್ಶಪೂರ್ವಕವಾದುದರಿಂದ, ತಪೋವ್ಯಯವಾಗದೆ ಪೌರುಷಕ್ಕೆ ಪ್ರಯೋಜನವಾದೀತು. ನಂದರು ನಿರಪರಾಧಿಯಾಗಿ, ಅಭ್ಯಾಗತನಾಗಿ, ಯೋಗ್ಯನಾದ ಸ್ಥಾನದಲ್ಲಿ ಕುಳಿತಿರುವ ನನ್ನ ಮೇಲೆ ವಿಮರ್ಶೆಯಿಲ್ಲದೆ ಕೋಪವಂ ಮಾಡಿ, ಅಪಮಾನವಂ ಮಾಡಿದ್ದರಿಂದ, ಅದರ ಫಲವನ್ನನುಭವಿಸಿಯಾರು. ಅದರಿಂದ ಚಂದ್ರಗುಪ್ತನಿಗಿಂತಲೂ ನನಗೆ ನಂದನಿಗ್ರಹ ಅವಶ್ಯಕರ್ತವ್ಯವು. ಅವರು ಸಕಲದರಲ್ಲಿಯೂ ಸಂಪನ್ನರಾದವರಾದರೂ ನನಗೆ ಅವರ ನಿಗ್ರಹವು ಈಷತ್ಕರವಾದರೂ ತಪೋಲೋಪಶಂಕೆಯಿಂದ, ಬುದ್ಧಿಪೌರುಷಬಲದಿಂದ ಸಾಧಿಸಬೇಕಾಗಿ ಪರರಾಯರ ಸೇನೆಯನ್ನಪೇಕ್ಷಿಸಬೇಕಾಯಿತು. ನೀನು ಶೂರನಾಗಿ ಮ[ನ]ಸ್ವಿಯಾದುದರಿಂದ ನನ್ನ ತಪೋಗ್ಲಾನಿಯಾಗದಂತೆ, ನಿನಗೆ ಶತ್ರುಸಂಹಾರಕನು ಭೀತರಕ್ಷಕನೆಂಬ ಯಶಸ್ಸು ಬರುವಂತೆ ನಂದರಾಜ್ಯಕ್ಕೆ ಚಂದ್ರಗುಪ್ತನಂ ಅಧಿಪತಿಯಂ ಮಾಡುವಂತೆ ಮಾಡಿಸಿ, ನನ್ನ ಪ್ರತಿಜ್ಞೆಗೆ ಸಾಫಲ್ಯವನ್ನುಂಟುಮಾಡಿಯಾನೆಂದು ನಿನ್ನಂ ಕುರಿತು ಬಂದೆವು. ನಾನು ಯೋಚಿಸಿದ ಕಾರ್ಯಕ್ಕೆ ಪರರಾಯಸೇನೆಯು ಗೌಡದೇಶದಲ್ಲಿ ಹೋಗಿ ನಿಂತಲ್ಲದೆ ಮುಂದಣ ಯತ್ನವಾಗಲಾರದು. ನಿನಗೆ ಯುದ್ಧಕುತೂಹಲವಿದ್ದರೆ, ನಿನ್ನ ಶೌರ್ಯವು ಪರರಾಯರ ಗುಂಡಿಗೆಗಳಂ ತಲ್ಲಣಗೊಳಿಸಬೇಕಾದರೆ, ಸೇನಾಸಮೇತನಾಗಿ ನೀನೇ ತೆರಳಬಹುದು. ಜನರಂ ಯುದ್ಧಮುಖದಿಂದ ಯಾಕೆ ಶ್ರಮಪಡಿಸಬೇಕೆಂಬುವದುಂಟಾದರೆ, ನಿಮಿತ್ತಮಾತ್ರಕ್ಕೆ ನಿನ್ನ ಸೇನೆಗಳಂ ಕಳುಹಿಸಿ ಕೊಟ್ಟರೆ, ಆಹಾರಂ ತೋರಿಸಿ ಮಡುವುಗಳ ದೆಸೆಯಿಂದ ಮಹಾಮತ್ಸ್ಯಂಗಳಂ ಹೊರಕ್ಕೆ ತೆಗೆಯುವಂತೆ, ಪರರಾಯಸೇನೆಯಂ ದೂರದಲ್ಲೇ ತೋರಿಸಿ, ಉಪಾಯಾಂತರದಲ್ಲಿ ನಂದರಂ ನಿಗ್ರಹಿಸುವೆನು. ಆ ಬಳಿಕ ಎಲ್ಲವೂ ನೀನು ಹೇಳಿದಂತಾಗುವದು. ಈಗ ವರುಷಾಕಾಲ ಕಳೆದು ಶರತ್ಕಾಲ ನಡೆಯುವದರಿಂದ ಇದು ಅರಸುಗಳಿಗೆ ದಂಡಯಾತ್ರಾಸಮಯವು" ಎಂದು ಹೇಳುತ್ತಿರುವ ಚಾಣಕ್ಯನ

ವಾಕ್ಯವಂ ಕೇಳಿ ಪರ್ವತೇಶ್ವರನಿಂತೆಂದನು :

"ಅಯ್ಯ ಬ್ರಾಹ್ಮಣೋತ್ತಮರೆ, ನೀವು ಹೇಳಿದ್ದೆಲ್ಲವೂ ವಿಹಿತವು. ದಕ್ಷರಾದವರು ಶರಣಾಗತರಂ ರಕ್ಷಿಸುವದೆಂಬುದೂ ದುಷ್ಟರಂ ನಿಗ್ರಹಿಸುವ[ದೆಂ]ಬುದೂ ಶಿಷ್ಟಾಚಾರ ಪದ್ಧತಿಯು. ಈಗಲೇ ನಿಮಗಭಿಮತವಾದ ಕಾರ್ಯವಂ ಮಾಡಿಕೊಡುವದಕ್ಕೆ ಇದು ಸಮಯವಲ್ಲ. ಅದು ಯಾಕೆಂದರೆ, ಪೂರ್ವದಲ್ಲಿ ನಮ್ಮ ಹಿರಿಯವರು ತಾವು ಮಾಡುವ ದಿಗ್ವಿಜಯದಲ್ಲಿ ಎದುರಾದ ಶತ್ರುಗಳಂ ನಿಗ್ರಹಿಸಿ ಶರಣಾಗತರಂ ರಕ್ಷಿಸುತ್ತ ಬರುತ್ತಿರುವಲ್ಲಿ, ಲಂಪಾಕದೇಶಾಧಿಪತಿಯು ಯುದ್ಧಕುತೂಹಲದಿಂದ ನಮ್ಮವರಿಗೆ ಎದುರಾಗಿ ಯುದ್ಧವಂ ಮಾಡಿ, ನಮ್ಮವರ ಖಡ್ಗಪ್ರಹಾರದಿಂದ ಪಂಚತ್ವವನ್ನೈದಲು, ಅವನ ಸೇನೆಯೂ ಅವನಂತೆ ಆಗಲು, ಅದಂ ನೋಡಿ ಆತನ ಪುತ್ರನು ಭೀತಿಯಿಂದ ವಿದೇಶಗತನಾಗಿ ಹೋಗಿದ್ದು, ಬಹುದಿವಸದ ಮೇಲೆ ನಗ್ನದೇಶಾಧಿಪತಿಯೊಡನೆ ಸಖ್ಯವಂ ಬಳಸಿ, ಅವನ ಸಹಾಯದಿಂದ ತನ್ನ ರಾಜ್ಯವಂ ಸಾಧಿಸಿಕೊಂಡು ಧನಿಕನಾಗಿ, ನಮ್ಮಲ್ಲಿ ಪೂರ್ವವೈರವಂ ನೆನೆದು, ಈಗ ನಮ್ಮ ಮೇಲೆ ದಂಡೆತ್ತಿ ಬರುವದರಿಂದ, ಅವನ ನಿಗ್ರಹವು ಈಗ ನಮಗೆ ಆವಶ್ಯಕವಾಗಿ ಇರುವದರಿಂದ, ಇದನ್ನುಪೇಕ್ಷಿಸಿ ಅನ್ಯಕಾರ್ಯಾಂತರೋದ್ಯೋಗವಂ ಮಾಡಿದರೆ, ಸ್ಥಾನಭ್ರಷ್ಟನಾದ ತ್ರಿಶಂಕು ರಾಯನಂತೆ ಪಾರ್ಷ್ಣಿಗ್ರಾಹಿಯಾದ ಶತ್ರುವಿನಿಂದ ಸ್ಥಾನಚ್ಯುತಿ ಉಂಟಾದೀತು. ಅದರಿಂದ ಸದ್ಯಃ ಒದಗಿರುವ ಈ ಕಾರ್ಯವಂ ವಿಗ್ರಹದಿಂ ನಿರ್ವಹಿಸಿಕೊಂಡ ಬಳಿಕ ನಿಮ್ಮ ಕಾರ್ಯಕ್ಕೆ ಅನುಕೂಲನಾಗುವೆನು. ಅಷ್ಟು ಪರಿಯಂತರಕ್ಕೂ ಕಾರ್ಯಗೌರವದಲ್ಲಿ ದೃಷ್ಟಿಯಿಟ್ಟು ನಮ್ಮಲ್ಲಿ ಕೃಪೆ ಮಾಡಿ ನೀವು ಇಲ್ಲೇ ವಾಸವಂ ಮಾಡುತ್ತಲಿರಬೇಕು" ಎಂದು ಹೇಳುತ್ತಲಿರುವ ಆ ರಾಯನ ವಾಕ್ಯವಂ ಕೇಳಿ, ನಸುನಗುತ್ತ ಚಾಣಕ್ಯನಿಂತೆಂದನು:

"ಅಯ್ಯ ರಾಜಾಧಿರಾಯನೆ, ನೀ ಹೇಳಿದುದು ಯುಕ್ತವಾದರೂ, ಯಾವ ಮಹಾಕಾರ್ಯ ಗೌರವಕ್ಕೆ ಯುದ್ಧೋದ್ಯೋಗವಂ ಮಾಡುವೆ ? ಇದು ನಿನಗೆ ವಿಷಯವಲ್ಲ" ಎಂದು ಚಾಣಕ್ಯನು ಹೇಳುತ್ತಿರಲು,

"ಅಯ್ಯ ಶ್ರೋತ್ರಿಯೋತ್ತಮರೆ, ಲೋಕದಲ್ಲಿ ಅರಸುಗಳಿಗೆ ಪರಸ್ಪರವೈರವುಂಟಾದರೆ ಮಾತ್ಸ್ಯನ್ಯಾಯದಂತೆ ಪ್ರಬಲನಾದವನು ದುರ್ಬಲನಂ ನಿಗ್ರಹಿಸುವನು. ಸಮಬಲನಾದರೆ ಜಯಾಪಜಯ ಹ್ಯಾಗಿರುವದೋ ? ಹೀಗಿರುವಲ್ಲಿ ಮೊದಲು ನಮ್ಮ ಬಾಧೆಗೆ ಸಹಿಸಲಾರದೆ ಓಡಿಹೋಗಿ ಇದ್ದ ಲಂಪಕಾಧಿಪತಿಯು ಈಗ ನಮ್ಮ ಮೇಲೆ ದಂಡೆತ್ತಿ ಬರುವನೆಂದರೆ, ಸ್ವಬಲ ಪರಬಲ ವಿಚಾರರಹಿತರಾಗಿ ಕಾರ್ಯೋಪಕ್ರಮವಂ ಮಾಡುವ ರಾಕ್ಷಸರಂತೆ ಕರ್ತವ್ಯ ತಿಳಿಯದೆ ಉನ್ಮತ್ತನಾಗಿ ಬರತಕ್ಕವನಲ್ಲ. ಪೂರ್ವಮತ್ಸರವಂ ನೆನೆದು ತಕ್ಕಷ್ಟು ಸನ್ನಾಹ ಸಮೇತನಾಗಿ ನಮ್ಮಂ ಜಯಿಸಲೆಣಿಸಿ ಬರುವನು. ಹಾಗೇ ಆತನಿಗೆ ಕೆಲವು ದೇಶಾಧಿಪತಿಗಳ ಸಹಾಯ ಒದಗಿರುವದು. ಆದರಿಂದ ಯುದ್ಧಯತ್ನವಂ ಮಾಡದೆ ಉಪೇಕ್ಷಿಸುವದಕ್ಕೆ ತಪೋಧನರಂತೆ ನಾವು ವಿರಕ್ತರಲ್ಲ" ಎಂದು ಆ ರಾಯ ಹೇಳುತ್ತಿರಲು, ಆ ಮಾತಿಗೆ ಚಾಣಕ್ಯನು.

"ಅಯ್ಯ ಪೃಥ್ವೀಪತಿಯೆ, ಲೋಕದಲ್ಲಿ ಶತ್ರುಗಳಂ ಜಯಿಸುವದಕ್ಕೆ ಸಾಧನಗಳಾದ ಉಪಾಯಚತುಷ್ಟಯವಿರುವದು ಸತ್ಯವು. ಅದರಲ್ಲಿ ಮುಖ್ಯವಾದ ಉಪಾಯತ್ರಯಗಳಂ ಬಿಟ್ಟು, ಹಿಂಸಾಪ್ರಧಾನವಾದ ದಂಡೋಪಾಯದಿಂದಲೇ ಶತ್ರುವಂ ಜಯಿಸಿದ ಅರಸಿಗೆ

ಜಯಶೀಲನೆಂಬ ಯಶಸ್ಸು ಬರುವದಲ್ಲದೆ, ಉಪಾಯತ್ರಯಗಳಿಂದ ಶತ್ರುಗಳ ಆತಂಕರಹಿತನಾಗಿ ಸುಖಿಸುವ ಅರಸಿಗೆ ದಯಾಶೀಲನೆಂಬ ಖ್ಯಾತಿ ಉಂಟಾಗುವದಿಲ್ಲವೇ ?'' ಎಂದು ಕೇಳಲು,

"ಅಯ್ಯ ಭೂಸುರೋತ್ತಮರೇ, ನೀವು ಹೇಳಿದ ಉಪಾಯತ್ರಯವು ಚಿರಕಾಲಾನುಷ್ಠಾನ ಸಿದ್ಧಿದಾಯಕವಾದುದರಿಂದ ಅದು ಈಗ ಉಪಯೋಗಕ್ಕೆ ಬರುವದಲ್ಲವಾದರೂ, ಷಡ್ಗುಣಗಳಲ್ಲಿ ಸಂಧಿಯಂ ನಡೆಯಿಸುವದಕ್ಕೆ ಮೊದಲು ನಮ್ಮಿಂದ ಜಿತನಾಗಿ ಹೋಗಿ ಇದ್ದ ಶತ್ರುವಿನೊಡನೆ ಸಂಧಿಯಂ ಪ್ರಾರ್ಥಿಸುವಣವೆಂಬವದು, ಶರಣಾಗತನಾಗುವದೆಂಬವದು ಈ ಎರಡರಲ್ಲಿ ಶಬ್ದಭೇದವೆ ಹೊರತು ಅರ್ಥಭೇದವಿಲ್ಲ. ಇದನ್ನಾಚರಿಸುವದಕ್ಕಿಂತಲೂ ಮಾನಶಾಲಿಗಳಾದ ಅರಸುಗಳಿಗೆ ಮಹಾ ಅಪಮಾನವೆಂಬವದು ಹ್ಯಾಗಿರುವದು ?'' ಎಂದು ಆ ರಾಯ ಹೇಳುತ್ತಿರಲು, ಆ ಮಾತಿಗೆ ಚಾಣಕ್ಯನು,

"ಅಯ್ಯ ಪ್ರಭುವರನೇ, 'ಶತ್ರುಗಳ ಜಯಕ್ಕೆ ಉಪಾಯತ್ರಯಗಳು ಮುಖ್ಯವು ; ದಂಡೋಪಾಯವೆಂಬವದು ಮಧ್ಯಮವು' ಎಂದು ಹೇಳಿದ ಮಾತಿಗೆ ನೀನು ಅನ್ಯಥಾ ತಿಳಿಯುವನಾದೆ. ಇಂಥಾ ಹೀನಸಂಧಿಯಂ ನಿನ್ನ ವಶವರ್ತಿಗಳಾದವರಾದರೂ ಮಾಡತಕ್ಕುದಲ್ಲ. ಈ ಅರ್ಥಕ್ಕೆ ನಾವು ಹೇಳ ಬಂದವರಲ್ಲ ; ತಪ್ಪಾಯೋನ್ಯಾಯವಂ ಹೇಳ ಬಂದೆವು'' ಎಂದು ಚಾಣಕ್ಯ ಹೇಳಲು, "ಅಯ್ಯ ನೀತಿಜ್ಞರಾದ ಚಾಣಕ್ಯರೇ, ನೀವು ಹೇಳಿದರ್ಥವು ಅನ್ಯತ್ರವೂ ನಡೆಯಬಹುದಷ್ಟೆ'' ಎಂದು ಆ ರಾಯ ಕೇಳಲು,

"ಅಯ್ಯ ದೂರದರ್ಶಿಯಾದ ರಾಯನೇ, ನೀನು ಹೇಳಿದರ್ಥವು ಜ್ಞಾತವಾಯಿತು. ತದರ್ಥವಾಗಿ ನಿನ್ನನ್ನೇ ಪ್ರಾರ್ಥಿಸ ಬಂದೆವು. ನಂದನಿಗ್ರಹ ಹೊರತು ಲಬ್ಧವಾಗುವ ಪ್ರಭುತ್ವಕ್ಕೆ ಚಂದ್ರಗುಪ್ತನು ಒಡಂಬಡುವನಲ್ಲವಾದುದರಿಂದಲೂ, 'ನಂದರಂ ಸಂಹರಿಸದೆ ಶಿಖಾಬಂಧನವಂ ಮಾಡುವದಿಲ್ಲವೆಂ'ಬ ನನ್ನ ಪ್ರತಿಜ್ಞೆಯು ನಿಷ್ಫಲವಾಗುವದರಿಂದಲೂ, ನಂದರಲ್ಲಿ ದಂಡೋಪಾಯವೇ ಮುಖ್ಯಕರ್ತವ್ಯವು'' ಎಂದು ಚಾಣಕ್ಯನು ರಾಯಂಗೆ ಹೇಳುತ್ತಿರಲು,

ಆಗ ಚಂದ್ರಗುಪ್ತನು ಆ ಪರ್ವತೇಶ್ವರನಂ ಕುರಿತು, "ದೇವರೇ, ಕುಲಘ್ನರಾದ ನಂದರ ನಿಗ್ರಹ ಹೊರತು ಲಬ್ಧವಾಗುವ ಪ್ರಭುತ್ವಕ್ಕಿಂತಲೂ ಆರಣ್ಯವಾಸವೇ ಸುಖದಾಯಕವೆಂದು ಮೊದಲೇ ನಮ್ಮ ಆಚಾರ್ಯರಿಗೆ ವಿಜ್ಞಾಪಿಸಿಕೊಂಡ ಮಾತಿಗೆ 'ಶತ್ರುಸಂಹಾರಪೂರ್ವಕವಾದ ರಾಜ್ಯಾಧಿಪತ್ಯವಂ ನಿನಗೆ ಉಂಟುಮಾಡುವೆವೆಂ'ದು ಅಭಯವಂ ಪಾಲಿಸಿ ಇದ್ದಾರೆ'' ಎಂದು ಹೇಳಲು, ಆ ಮಾತಿಗೆ ಆ ರಾಯನು ನಸುನಗುತ್ತ,

"ಅಯ್ಯ ಚಂದ್ರಗು[೧]ಪ್ತರಾಯ[೧]ನೆ, ಶತ್ರುರಹಿತವಾದ ರಾಜ್ಯಲಾಭಕ್ಕೆ ಕಾರ್ಯದಕ್ಷರಾದ ಮಾನಧನರನ್ನಪೇಕ್ಷಿಸದೆ ತಪೋಧನರ ಆಶ್ರಯವಂ ಸಂಪಾದಿಸಿದರೆಂಬರ್ಥವು ಅನ್ಯರಿಗೆ ತೋರತಕ್ಕುದಲ್ಲ'' ಎಂದು ಆ ರಾಯ ಹೇಳುತ್ತಿರಲು, ಆ ಮಾತಿಗೆ "ದೇವರು, ಅಷ್ಟು ಮಾತ್ರವೇ ಅಲ್ಲ, ನಿಧಿಯಂ ತೋರಿಸುವ ಅಂಜನದ ಮೂಲವಂ ಕೆದಕುವನ ಹಸ್ತಕ್ಕೆ ಅಲ್ಲಿಯೇ ನಿಧಿ ದೊರಕಿದಂತೆ, ನಮ್ಮ ಆಚಾರ್ಯರ ಪ್ರಸಾದಬಲದಿಂದ ರಾಜಾಧಿರಾಜರಾದ

---

೧. ಪ್ತ (ಕ)

ನಿಮ್ಮ ಅವಲಂಬನವು ಸಹ ಲಬ್ಧವಾದುದರಿಂದ ಇನ್ನು ನನಗೆ ಶತ್ರುಕ್ಲೇಶವೆಂದರೇನು?" ಎಂದು ಚಂದ್ರಗುಪ್ತನು ಹೇಳಲು, ಆತನ ವಾಗ್ಮಾಧುರ್ಯಕ್ಕೆ ಸಂತೋಷಪಡುತ್ತ, ಆ ರಾಯನು ಚಾಣಕ್ಯನಂ ಕುರಿತು,

"ಅಯ್ಯ ವಿಹಿತಜ್ಞರಾದ ಚಾಣಕ್ಯರೆ, ಈಗ ಮತ್ಸರಿಯಾಗಿ ಬರುವ ಲಂಪಾಕಾಧಿಪತಿಯಂ ಜಯಿಸುವ ಕಾರ್ಯದಲ್ಲಿ ನಿಮ್ಮ ಮನೋಗತಾರ್ಥ ಹ್ಯಾಗಿರುವದು ?" ಎಂದು ರಾಯ ಕೇಳಲು, "ಅಯ್ಯ ಭೂಪತಿಯೇ, ನಮ್ಮ ಮನೋಗತವು ಕಾರ್ಯಾಂತದಲ್ಲಿ ತಿಳಿ[ದು] ಬಂದೀತು. ಇದಕ್ಕೆ ನಿನಗೆ ಆಪ್ತನಾಗಿ ಬುದ್ಧಿಶಾಲಿಯಾದ ನಿಯೋಗಿಯಂ ನಾವು ಹೇಳಿದಂತೆ ನಡೆದುಕೊಳ್ಳುವಂತೆ ನೇಮಿಸಿ ನಾನಿದ್ದೆಡೆಗೆ ಕಳುಹಿಸಿ ಕೊಡಬೇಕು" ಎಂದು ಹೇಳಿ, ಎಲ್ಲರೂ ಎದ್ದು ಯಥಾಸ್ಥಾನವನ್ನೆಯ್ದುತ್ತಿರಲು,

ಆಗ ರಾಯನು ಕಮಲಾಪೀಡನೆಂಬ ನಿಯೋಗಿಯಂ ಕರೆದು, ಚಾಣಕ್ಯರು ಹೇಳಿದಂತೆ ನಡೆದುಕೊಳ್ಳುವದೆಂದು ನೇಮಿಸಿ ಕಳುಹಿಸಲು, ಆತನು ಬಂದು ಚಾಣಕ್ಯನಂ ಕಂಡು, ಅಭಿನಮಿಸಿ, "ಅಪ್ಪಣೆ ಮೇರೆಗೆ ಬಂದು ಇದ್ದೇನೆ" ಎಂದು ವಿಜ್ಞಾಪಿಸಲು, ಆಗ ಚಾಣಕ್ಯನು ಪ್ರಕೃತೋಚಿತವಾಗಿ ಎರಡು ಕಾಗದವಂ ಬರೆಸಿ, ನಿಯೋಗಿ[ಯ] ಕೈಯಲ್ಲಿ ಕೊಟ್ಟು, ರಾಜಮೊಹರವಂ ಮಾಡಿ ತರಿಸಿ, ನಿಯೋಗಿಗೆ ಆತ ಮಾಡತಕ್ಕ ಕಾರ್ಯಕೌಶಲವಂ ವಿವರವಾಗಿ ಹೇಳಿ, ಆ ಕಾಗದಗಳು ಎರಡಂ ಆತನ ವಶಕ್ಕೆ ಕೊಟ್ಟು, ಕಾಮರೂಪ ದೇಶಾಧಿಪತಿಯ ಪ್ರಾಗ್ಜ್ಯೋತಿಷಪುರಕ್ಕೆ ಹೋಗಿ ಈ ಕಾರ್ಯಘಟನೆಯಂ ಮಾಡಿಕೊಂಡು ಬರುವಂತೆ ನೇಮಿಸಿ ಕಳುಹಿಸಲು,

ಆ ಚಾಣಕ್ಯರು ಹೇಳಿದ ರೀತಿಗೆ ಕೆಲವು ದಿವಸದ ಮೇಲೆ ಆ ನಿಯೋಗಿಯು ಕಾಮರೂಪ ದೇಶಗಳಿಗೆ ಹೋಗಿ ತನಗೆ ಆಪ್ತನಾದ ದೂತನ ಕೈಯಲ್ಲಿ ತನ್ನ ಹೆಸರಿಗೆ ಬರೆದು ಇರುವ ತಮ್ಮ ರಾಯನ ನಿರೂಪವಂ ಕೊಟ್ಟು, 'ಈ ರೀತಿಯಲ್ಲಿ ಮಾಡೆಂ'ದು ಹೇಳಿ, ತಾನು ಪ್ರಾಗ್ಜ್ಯೋತಿಷನಗರದ ಪ್ರಾಕಾರ[ದ] ಬಹಿರುದ್ಯಾನದಲ್ಲಿ ಇಳಿದುಕೊಂಡು ಇರಲು,

ಆ ದೂತನು ಆ ನಿಯೋಗಿ ಹೇಳಿದ ಮೇರೆಗೆ ಅಲ್ಲಲ್ಲಿ ಹುಡುಕುತ್ತ, ಅಲ್ಲಲ್ಲಿ ಜನಗಳಂ ಕೇಳುತ್ತ, ಹೋಗಿ, ಆ ಪುರದ ಬೇಹುಗಾರರು ಬಂದು ಇಳಿಯುವ ಛಾವಡಿಯ ಬಳಿಯಲ್ಲಿ ನಿಂತು, ಎಲ್ಲರನ್ನೂ ಕೇಳಿದಂತೆ, "ಪರ್ವತರಾಜ್ಯನಿಯೋಗಿ ಬಂದು ಇಳಿದು ಇರುವ ಸ್ಥಾನವ್ಯಾವದು, ರಾಜಕಾರ್ಯಗೌರವವುಂಟು, ತಿಳಿದು ಹೇಳಿದರೆ ನಿಮಗೆ ಪುಣ್ಯವುಂಟು" ಎಂದು ಅಲ್ಲಿಯ ಬೇಹುಗಾರರನ್ನೇ ಕೇಳಲು,

ಅವರು ಇವನಂ ನೋಡಿ, ಪರರಾಯದೇಶದಿಂ ಏನೋ ರಾಜಕಾರ್ಯನಿಮಿತ್ತವಾಗಿ ಬಂದು ಇರುವನಾದುದರಿಂದ ಈ ಅರ್ಥವಂ ರಾಜಸನ್ನಿಧಿಯಲ್ಲಿ ತಿಳುಹಿಸಬೇಕೆಂದು ನಿಶ್ಚೈಸಿ, ಏನು ಛದ್ಮನೆಯಿರುವದೋ ಎಂದು ಶೋಧಿಸಿ, ಅವನ ಬಳಿಯಲ್ಲಿ ಇದ್ದ ನಿರೂಪವಂ ತೆಗೆದುಕೊಂಡು, ಅವನ ಸಮೇತವಾಗಿ ಕರೆದುಕೊಂಡು ಹೋಗಿ ರಾಜಸನ್ನಿಧಿಯಲ್ಲಿ ಆ ನಿರೂಪವನ್ನಿರಿಸಿ, "ಬುದ್ಧೀ, ಪರ್ವತರಾಜ್ಯದಿಂದ ಏನು ನಿಮಿತ್ತವೋ ನಿಯೋಗಿ ಬಂದು ಈ ಪುರದಲ್ಲಿ ಇಳಿದು ಇದ್ದಾನಂತೆ. ಆತನಂ ಹುಡುಕುತ್ತ ಬರುತ್ತ ಸಿಕ್ಕಿದ ಈ ದೂತನ ಬಳಿಯಲ್ಲಿ ಇದ್ದ ಕಾಗದವಿದು" ಎಂದು ರಾಯಂಗೆ ಬಿನ್ನೈಸಲು,

ಆ ರಾಯನು ರಾಜಮೊಹರ ಸಮೇತವಾದ ಆ ಕಾಗದದ ಮೇಲೆ ಬರೆದಿರುವ ಅಕ್ಷರ

ಳಂ ನೋಡಿಕೊಂಡು, ಆ ಕಾಗದವಂ ತನ್ನ ಬಳಿಯಲ್ಲಿ ಇಟ್ಟುಕೊಂಡು, ಏನು ವಿಶೇಷ ರುವದೋ ತಿಳಿಯಬೇಕೆಂದು ನಿಶ್ಚೈಸಿ, ಆ ಕಾಗದ ತಂದ ದೂತನಂ ಕಾವಲಲ್ಲಿ ಇಟ್ಟು, ರ್ವತರಾಜ್ಯದ ನಿಯೋಗಿಯು ಬಂದು ರಾಜಸಭಾಪ್ರವೇಶವಂ ಮಾಡಿ ಹೋದ ಬಳಿಕ ಃ ದೂತನಂ ಬಿಟ್ಟು ಬಿಡುವಂತೆ ತನ್ನ ದೂತರಿಗೆ ನೇಮಿಸಿ, ಆ ನಿಯೋಗಿಯು ಎಲ್ಲಿ ಂದು ಇಳಿದಿದ್ದರೂ ಹುಡುಕಿ ಕರೆತರುವರಾಗಿ" ಎಂದು ಬೇಹುಗಾರರಿಗೆ ನೇಮಿಸಿ ಳುಹಿಸಲು, ಅವರು ಆ ಪುರದ ಒಳಹೊರಗೆ ಎಲ್ಲವಂ ಹುಡುಕಿ, ಉದ್ಯಾನದಲ್ಲಿ ಇಳಿದಿದ್ದ ಯೋಗಿಯಂ ಕಂಡು, "ಮಹಾರಾಜಸನ್ನಿಧಿಯಲ್ಲಿ ಅಪ್ಪಣೆಯಾಗಿ ಇದೆ, ನೀವು ಆಸ್ಥಾನಕ್ಕೆ ರಬೇಕೆಂ"ದು ಹೇಳಲು, ಆತನು ಉಚಿತಪ್ರಕಾರದಿಂದ ಹೊರಟು ಆಸ್ಥಾನಕ್ಕೆ ಬರು ತ್ತಿರಲು, ಆತನ ಪರಿವಾರವು ಆ ಉದ್ಯಾನದಿಂ ಆಸ್ಥಾನಪರ್ಯಂತರವೂ ಏಕವಾಗಿ ನಿಂತಿರಲು, ಅದಂ ನೋಡಿದ ಅಲ್ಲಿ[ಯ] ಜನರು ಪರ್ವತೇಶ್ವರನ ಐಶ್ವರ್ಯಕ್ಕೆ ಪಾರವಿಲ್ಲವೆಂದು ಶ್ಲಾಘಿಸುತ್ತಿರಲು,

ಹಾಗೇ ಆ ನಿಯೋಗಿಯು ರಾಜಸನ್ನಿಧಿಗೆ ಹೋಗಿ, ಕೈಮುಗಿದು, ತಾನು ತಂದ ವಸ್ತುವಾಹನಗಳನ್ನೊಪ್ಪಿಸಿ, ಉಚಿತ ಪ್ರಕಾರದಿಂ ಕುಳಿತು, "ರಾಜೋತ್ತಮರೇ, ರಾಜಾಧಿ ರಾಜರಾದ ಪರ್ವತೇಶ್ವರರು ನಿಮ್ಮಂ ಕುಶಲವಂ ಕೇಳಿದರು" ಎಂದೆನಲು,

"ಅಯ್ಯ ನಿಯೋಗಿಯೇ, ನಾವೆಲ್ಲರೂ ಕ್ಷೇಮದಲ್ಲಿ ಇರುವೆವು. ನಿಮ್ಮ ಅಧಸುಗಳಿಗೆ ಕುಶಲವೇ ? ಏನು ಕಾರ್ಯಕ್ಕೆ ನಿಮ್ಮಂ ಕಳುಹಿಸಿದರು" ಎಂದೆನಲು, "ದೇವರೇ, ಮಹಾ ಕುಲೀನರಾದ ನಿಮ್ಮಲ್ಲಿ ಬಂಧುತ್ವವಂ ಬಯಸಿ ಕಳುಹಿಸಿದರು. ಸಮಾನಕುಲೀನರಾದ ನಿಮ್ಮಿರ್ವರಿಗೆ ಬಾಂಧವ್ಯವುಂಟಾದರೆ ಸಾಂಖ್ಯ ಯೋಗಗಳ ಫಲಿತಾರ್ಥವು ಒಂದೇ ಆಗು ವಂತೆ, ಕ್ಷೀರಾಂಬುಧಿಯು ಇಕ್ಷುಸಾಗರದೊಡನೆ ಸಂಬಂಧಿಸುವಂತೆ, ಜನಕ ದಶರಥ ರಾಯರುಗಳಿಗೆ ಬಾಂಧವ್ಯ ಬೆರೆದಂತೆ, ನಿಮ್ಮ ಅವರ ಬಾಂಧವ್ಯವು ಲೋಕಕ್ಷೇಮಕರ ವಾಗಿರುವದು. ಹಾಗೇ ನಿಮ್ಮಿರ್ವರ ತನೂಜಯುಗ್ಮವು ಲೋಕಾನಂದಕರವಾದ ಚಂದ್ರ ಚಂದ್ರಿಕೆಗಳಂತೆ ಲೋಕದವರ ಮನಶ್ಚಕೋರಂಗಳಿಗೆ ಆನಂದಕರವಾಗಿರುವದು" ಎಂದು ಹೇಳಿ, ಆ ನಿಯೋಗಿಯು ಆ ರಾಯಂಗೆ ಬರೆದು ಕೊಟ್ಟಿದ್ದ ತನ್ನ ಬಳಿಯ ನಿರೂಪವಂ ರಾಯಂಗೆ ಒಪ್ಪಿಸಲು, ಅದಂ ನೋಡಿಕೊಳ್ಳುವಲ್ಲಿ ಅದರಲ್ಲಿ ಇದ್ದ ಒಕ್ಕಣೆಯೇನೆಂದರೆ:

"ಸ್ವಸ್ತಿ ಶ್ರೀ. ನಮಗೆ ಪರಮಪ್ರಿಯರಾದ ಕಾಮರೂಪದೇಶಾಧಿಪತಿ ಸೂರ್ಯವರ್ಮರಿಗೆ ಪರ್ವತೇಶ್ವರನು ಮಾಡುವ ವಿಜ್ಞಾಪನೆ. ಏನೆಂದರೆ : ನಾವು ನಿಮ್ಮಲ್ಲಿ ಬಾಂಧವ್ಯವಂ ಬಯಸಿ, ನಿಮ್ಮ ಶ್ರೀಮಂತಪುತ್ರಿಯಿಂದ ನಮ್ಮ ಕುಮಾರ ಮಲಯಕೇತುವಿಗೆ ಗಾರ್ಹ ಸ್ಥ್ಯಾಶ್ರಮವುಂಟಾಗಬೇಕೆಂಬ ಅಭಿಲಾಷೆಯಿಂದ ನಿಯೋಗಿಯಂ ನಿಮ್ಮ ಬಳಿಗೆ ಕಳುಹಿಸಿ ಇದೆ. ಇದಕ್ಕೆ ನೀವು ಸಮ್ಮತಿಸಿ, ನಿಯೋಗಿಯ ಸಂಗಡ ಕನ್ಯಾರತ್ನದ ಜಾತಪತ್ರಿಕಾ ಯುಕ್ತವಾಗಿ ನಿಮ್ಮ ಪುರೋಹಿತನಂ ಕಳುಹಿಸಿದರೆ, ಉಭಯ ಬಂಧುವರ್ಗಸಮ್ಮತವಾಗಿ ಶುಭಪ್ರಸ್ತವು ನೆರವೇರುವದು. ನಮ್ಮ ಅಭ್ಯುದಯ ನಿಮ್ಮದಾಗುವದು. ನಿಮ್ಮ ಯೋಗ ಕ್ಷೇಮವೇ ನಮ್ಮದಾಗುವದು."

ಎಂದು ಬರೆದಿರುವದಂ ನೋಡಿಕೊಂಡು, ಹರ್ಷಯುಕ್ತನಾಗಿ, ಶ್ಲಾಘ್ಯಸಂಬಂಧ

ವೆಂದು ತಿಳಿದುಕೊಂಡು, ತನ್ನ ಬಳಿಯಲ್ಲಿ ಸಿಕ್ಕಿರುವ ಕಾಗದವೂ [೧]ಏತದರ್ಥ[೧]ವಾಗಿಯೇ ಇದ್ದೀತೆಂದು ತಿಳಿದು, 'ಪುರದೊಳಗೆ ನಿಯೋಗಿಗೆ ಬಿಡಾರಮಂ ಬಿಡಿಸೆಂ'ದು ಮಂತ್ರಿಗೆ ನೇಮಿಸಿ,

"ಎಲೈ ನಿಯೋಗಿವರ್ಯನೇ, ಎಷ್ಟು ದಿವಸದಿಂ ಆಯಾಸಪಡುತ್ತ ಹೊರಗಿದ್ದಿರೋ !" ಎಂದು ಉಪಚಾರೋಕ್ತಿಯಂ ಹೇಳಿ, ಬಂದ ನಿಯೋಗಿಗೆ ವಸ್ತ್ರಭೂಷಣ ತಾಂಬೂಲವಂ ಕೊಟ್ಟು, "ಅಯ್ಯಾ ನಿಯೋಗಿವರ್ಯನೇ, ನೀವು ಬಂದ ಕಾಲ ವಿಳಂಬವಾದುದರಿಂದಲೇ ಏನೋ ನಿಮಗೆ ನಿಮ್ಮ ರಾಯರು ಬರೆಸಿ ಕಳುಹಿಸಿದ ನಿರೂಪವು ನಮ್ಮ ವಶಕ್ಕೆ ಬಂದಿರುವದು" ಎಂದು ಹೇಳಿ ಆ ನಿರೂಪವಂ ಆ ನಿಯೋಗಿಗೆ ಕೊಡಲು, ಆ ನಿರೂಪವಂ ಶಿರಸಾವಹಿಸಿ ಬಿಚ್ಚಿ ನೋಡಿಕೊಂಡು, ಸರ್ವಸ್ವವಂ ಕಳಕೊಂಡವನಂತೆ ಆ ನಿಯೋಗಿಯು ತಲೆಬಾಗಿ ಯೋಚಿಸುತ್ತ ಕುಳಿತಿರಲು, ಆ ರಾಯನು, "ಅಯ್ಯ ನಿಯೋಗಿಯೇ, ಕಾಗದವಂ ನೋಡಿಕೊಂಡು ಉತ್ಸಾಹರಹಿತನಾಗಿ ಯೋಚಿಸುತ್ತಿರುವೆ" ಎನಲು, "ಬುದ್ಧೀ, ಮತ್ತೇನೂ ಇಲ್ಲ" ಎಂದು ವಿವರವಂ ಹೇಳದೆ ಲಜ್ಜಿತನಾಗಿ ಸುಮ್ಮನಿರಲು, ತನ್ನ ಮಂತ್ರಿಯಂ ಕುರಿತು, "ಅಯ್ಯ ಸಚಿವನೇ, ಈ ಕಾಗದದ ಅಭಿಪ್ರಾಯವಂ ಹೇಳುವದಕ್ಕೆ ನಿಯೋಗಿಯು ಲಜ್ಜೆಪಡುತ್ತಲಿದ್ದಾನೆ. ನೀನು ನೋಡಿ ನಮಗೆ ತಿಳುಹಿಸೆ"ನಲು, ಆಗ ಆ ಮಂತ್ರಿಯು ಆ ಕಾಗದವಂ ತೆಗೆದು ನೋಡಿಕೊಂಡು, ರಹಸ್ಯದಲ್ಲಿ ಅದರ ಒಕ್ಕಣೆಯಂ ತಮ್ಮ ರಾಯನಿಗೆ ಓದಿ ಹೇಳುತ್ತಿದ್ದನು. ಏನೆಂದರೆ :

"ಶ್ರೀಮತು ಪರ್ವತೇಶ್ವರರು ಕಾಮರೂಪದೇಶಕ್ಕೆ ಹೋಗಿರುವ ನಮ್ಮ ನಿಯೋಗಿ ಕಮಲಾಪೀಡನಿಗೆ ಬರೆಸಿ ಕಳುಹಿಸಿದ ನಿರೂಪವೇನೆಂದರೆ, ನೀನು ಕನ್ಯಾರ್ಥವಾಗಿ ಪ್ರಾಗ್ಜ್ಯೋತಿಷಾಧಿಪತಿಗಳ ಸಮೀಪಕ್ಕೆ ಹೋಗಿರುವದು ಸರಿಯಷ್ಟೆ. ನಿನಗೆ ಅಲ್ಲಿ ಅರಸುಗಳ ದರುಶನವಾಯಿತೋ ಇಲ್ಲವೋ ತಿಳಿಯಲಿಲ್ಲ. ಮತ್ತೊಂದರ್ಥವುಂಟು :

ಈಚೆಗೆ ಲಂಪಾಕದೇಶಾಧಿಪತಿಯ ಸಭೆಯಲ್ಲಿ, ರಾಜ ಮಂತ್ರಿಗಳ ಸಂವಾದದಲ್ಲಿ, ದೇಶಾಧಿಪತಿಗಳ ವಂಶಪ್ರಶಂಸೆ ಉಂಟಾಗುತ್ತಿರಲು, ಆ ಲಂಪಾಕಪತಿಯು ಕಾಮರೂಪಾಧಿಪತಿಯ ವಂಶದಲ್ಲಿ ಸಾಂಕರ್ಯದೋಷವುಂಟಾಗಿರುವದರಿಂದ ಆ ದೇಶಾಧಿಪತಿಗಳು ನ್ಯೂನವಾದ ಶೌರ್ಯವುಳ್ಳವರು ಎಂದು ಹೇಳಿದ ಲಂಪಾಕಪತಿಯ ವಾಕ್ಯವಂ ಕೇಳಿ, ಅಲ್ಲಿಯ ರಾಜಾಸ್ಥಾನದಲ್ಲಿ ಪ್ರಮುಖರಾಗಿ ನಮಗೆ ಆಪ್ತರಾಗಿರುವ ಜನರು ಈ ಅರ್ಥವಂ ಬರೆಸಿ ಕಳುಹಿಸುವಲ್ಲಿ, 'ನೀವು ಕಾಮರೂಪಾಧಿಪತಿಗಳೊಡನೆ ಸಂಬಂಧವಂ ಬಳಸುವಲ್ಲಿ ಚೆನ್ನಾಗಿ ವಿಚಾರಿಸಿಕೊಂಡು, ಸಂಬಂಧವಂ ಮಾಡಬಹುದು' ಎಂದು ಬರೆದಿರುವ ಅರ್ಥವಂ ನೋಡಿಕೊಂಡು, ಆಲೋಚಿಸಿಕೊಂಡು, ಭೂಮಿದೇವಿಗೆ ಪೌತ್ರನಾದ ಭಗದತ್ತ ಮಹಾರಾಯನ ಮಹಾಕುಲದಲ್ಲಿ ಜನಿಸಿದ ಕಾಮರೂಪಾಧಿಪತಿಗಳ ವಂಶದಲ್ಲಿ ಇಂಥಾ ಅಕಾರ್ಯ ನಡೆಯಲಾರದು, ಏನೋ ಮದಮಾತ್ಸರ್ಯದಿಂದ ಲಂಪಾಕಪತಿಯು ತುಚ್ಛ ವಾಕ್ಯವಂ ಆಡಿಯಿದ್ದಾನು" ಎಂದು ನಾವು ನಿಶ್ಚಯಿಸಿ ಇರುವವರಾದರೂ, ಬಹುಕಾಲ ಸಂಬಂಧವಂ ಮಾಡಬೇಕಾಗಿ ಇರುವದರಿಂದ, ಪರೋಕ್ಷವಾಗಿ ನೀನು ಕಾಮರೂಪಾಧಿ

---

೧. ಯಥಾರ್ಥ (ಕ)

ಪತಿಗಳ ಕುಲಶೀಲವಂ ಚೆನ್ನಾಗಿ ವಿಚಾರಿಸಿಕೊಂಡು, ನಿನ್ನ ಮನಃಪ್ರಶಸ್ತವಾದರೆ, ಶುಭ ಪ್ರಸ್ತ ಬೆಳೆಯುವದಕ್ಕೆ ನಿಶ್ಚಯ ಮಾಡಿಕೊಂಡು ಬರುವದು."

ಹೀಗೆಂಬ ಕಾಗದದ ಒಕ್ಕಣೆಯಂ ಕೇಳಿ, ಆ ಕಾಮರೂಪಾಧಿಪತಿಯು ಕಲ್ಲಿಟ್ಟು ಕೆಣಕಿದ ವ್ಯಾಘ್ರದಂತೆ ಕೋಪ ಕೆರಳಿ, ಗುಡಿಗುಡಿಸುತ್ತ, "ಎಲೈ ಮಂತ್ರಿಯೆ, ಕ್ಷತ್ರಿಯಾಧಮನಾದ ಲಂಪಾಕಪತಿಯು ನಮ್ಮ ವಂಶಸ್ಥರ ಮೇಲಾಡಿದ ದುಷ್ಟವಾಕ್ಯಕ್ಕೆ ಅವನ ಶಿರವಂ ನಾನು ಇಳುಹದೆ ಈ ಕಿರೀಟವಂ ಧರಿಸಿದವನಾದರೆ, ಲೋಕನಾಯಕನಾಗಿ ಇದ್ದ ನರಕಾಸುರನ ವಂಶದಲ್ಲಿ ಜನಿಸಿದವನೇ ಅಲ್ಲ. ಈ ಮಾತಿಗೆ ಪ್ರತ್ಯುತ್ತರವಂ ಹೇಳಿದವರು ನನಗೆ ಹಗೆಗಳೇ ಸರಿ. ಈಗಲೇ ಸೇನಾಸಮೇತರಾಗಿ ಲಂಪಾಕದೇಶಕ್ಕೆ ಹೋಗುವಂತೆ ನಮ್ಮ ಸೇನಾಪತಿಗೂ ಸಾಮಂತರಾಯರಿಗೂ ನೇಮಿಸುವನಾಗು. ನಮಗೆ ಪ್ರಯಾಣವೆಂದು ಡಂಗುರವಂ ಹಾಕಿ ಸಾರಲಿ. ನಾಳೆ ತರಂಗಿಣೀನದೀತೀರದಲ್ಲಿ ಹೋಗಿ ಇಳಿಯುವೆವು" ಎಂದು ಮಂತ್ರಿಗೆ ನೇಮಿಸಿ, ಬಂದಿದ್ದ ನಿಯೋಗಿಯಂ ಕುರಿತು,

"ಅಯ್ಯ, ನೀನು ಬಂದ ಮಾತಿಗೆ ಹಾಗೇ ನಾವು ಪರ್ವತರಾಯರೊಡನೆ ಬಾಂಧವ್ಯವಂ ಬಯಸಿದವರಾದರೂ, ನೀಚನಾದ ಲಂಪಾಕಪತಿಯಂ ನಿಗ್ರಹಿಸಿದಲ್ಲದೆ ಮುಂದಣ ಶುಭ ಕಾರ್ಯ ಈಗ ಪ್ರಕೃತವಲ್ಲ. ಈ ಅರ್ಥವಂ ನಿಮ್ಮ ಅರಸುಗಳಿಗೆ ವಿಜ್ಞಾಪಿಸುವನಾಗು" ಎಂದು ಹೇಳಿ, "ಈತನು ತಂದುಕೊಟ್ಟ ಪರ್ವತೇಶ್ವರರ ಲೇಖನಕ್ಕೆ ಬದಲುಲೇಖನವಂ ಪ್ರಕೃತೋಚಿತವಾಗಿ ಬರೆಸಿ ಕೊಡುವನಾಗು" ಎಂದು ಮಂತ್ರಿಗೆ ನೇಮಿಸಿ, ಆ ರಾಯನು ಅಂತಃಪುರಕ್ಕೆ ಹೋಗುತ್ತಿರಲು,

ಹಾಗೇ, ಆ ಮಂತ್ರಿ ಬರೆಸಿಕೊಟ್ಟ ಲೇಖನವಂ ತೆಗೆದುಕೊಂಡು, ಆ ನಿಯೋಗಿಯು ಮೊದಲು ತಾನಿದ್ದೆಡೆಗೆ ಬರುತ್ತಿರಲು, ಆ ಮಂತ್ರಿಯು ರಾಜಾಜ್ಞೆ ಮೇರೆಗೆ ಸೇನಾಪತಿಗಳಿಗೆ, ಸಾಮಂತರಾಯರಿಗೆ ನೇಮಿಸುತ್ತಲಿರಲು, ಪ್ರಯಾಣಪಟಹಧ್ವನಿಗಳಾಗುತ್ತ, ಪ್ರಯಾಣಕಲಕಲಧ್ವನಿಗಳುಂಟಾಗುತ್ತಲಿರಲು, ಹಾಗೇ ಆ ನಿಯೋಗಿಯು ಅಲ್ಲಿಯೇ ಮೂರು ನಾಲ್ಕು ದಿವಸವಿರುತ್ತ, ಆ ರಾಯನು ಸನ್ನದ್ಧನಾಗಿ ತೆರಳಿದುದಂ ನೋಡಿ, ಆತನ ಸಾಮಂತರಾಯರು ಹೊರಟುಹೋದುದಂ ನೋಡಿ, ಪರ್ವತೇಶ್ವರನ ರಾಜಕಾರ್ಯವು ಅನ್ಯರ ಮುಖದಿಂದಲೇ ಆಯಿತೆಂದು ತಿಳಿದು, ಅಲ್ಲಿಂದ ಹೊರಟು, ಪರ್ವತರಾಜ್ಯಕ್ಕೆ ಬಂದು, ಹಾಗೇ ಸಭಾಸ್ಥಾನದಲ್ಲಿ ಕುಳಿತಿದ್ದ ಪರ್ವತರಾಯನಿಗಭಿವಂದಿಸಿ, "ಜೀಯಾ, ನಾನು ಹೋಗಿದ್ದ ಕಾರ್ಯವು ಜಯವಾಯಿತು" ಎಂದು ಹೇಳಿ, ಕಾಮರೂಪಾಧಿಪತಿಯ ಬಳಿಯಲ್ಲಿ ನಡೆದ ವೃತ್ತಾಂತವೆಲ್ಲವಂ ರಹಸ್ಯದಲ್ಲಿ ವಿವರವಾಗಿ ತಿಳುಹಿಸಿ, ತಾನು ತಂದಿದ್ದ ಲೇಖನವನ್ನೊಪ್ಪಿಸಲು, ಅದಂ ನೋಡಿಕೊಂಡು, ರಾಯನು ವಿಸ್ಮಿತನಾಗಿ ತಲೆ ತೂಗುತ್ತ, ಮಂತ್ರಿಯಂ ಕುರಿತು,

"ಅಯ್ಯ ಶಬರವರ್ಮನೇ, ಬುದ್ಧಿಸಂಪನ್ನನಾದ ಚಾಣಕ್ಯನು ಆಡಿದಂತೆ ಕಾರ್ಯನಿರ್ವಾಹವಂ ಮಾಡಿದುದರಿಂದ, 'ಅಸ್ಮಾಭಿರ್ಯದನುಷ್ಠೇಯಂ ಗಂಧರ್ವೈಸ್ತದನುಷ್ಠಿತಂ' ಎಂಬ ವಚನದಂತೆ, ನಮ್ಮಿಂದ ಮಾಡತಕ್ಕ ಮಹಾಕಾರ್ಯವು ಕಾಮರೂಪಾಧಿಪತಿಯಿಂದ ಪರ್ಯವಸಾನವಾಯಿತು. ಚಂದ್ರಗುಪ್ತನಿಗೆ ಉಪಕಾರವಂ ಮಾಡಬೇಕೆಂಬುವದು ಹೋಗಿ, ಆತನಿಗೆ ಪ್ರತ್ಯುಪಕಾರವಂ ಮಾಡಬೇಕಾಗಿ ಬಂತು. ಈಗಲಾದರೂ ಉಲೂಕ

ನೆಂಬ ಮಂತ್ರಿಗೆ ಈ ಅರ್ಥವು ಅಭಿಮತವಾದೀತೋ ಇಲ್ಲವೋ ಎಂದು ಆ ರಾಯ ಕೇಳಲು,

"ಜೀಯ, ಯಾತ್ರಾಸಮಯದಲ್ಲಿ ಆತನ ಶಬ್ದಶ್ರವಣವನ್ನೇ ಮಾಡಕೂಡದು" ಎಂದು ಹೇಳಲು, ಆ ಮಾತಿಗೆ ಅರಸು ವಸ್ತ್ರದಿಂ ವದನವಂ ಮರೆಮಾಡಿ ಹಾಸ್ಯ ತೋರದಂತೆ ಮಾಡಲು, "ಶಬರವರ್ಮನು ಬಾಲಕನಾದುದರಿಂದ ಹಾಸ್ಯಗರ್ಭಿತವಾದ ವಾಕ್ಯವಂ ಹೇಳಿ ಸ್ವಾಮಿಯವರ ಚಿತ್ತರಂಜನೆಯಂ ಮಾಡುತ್ತಿರುವದಂ ಬಿಟ್ಟು, ನನ್ನ ವಿಜ್ಞಾಪನೆಯನ್ನವ ಧರಿಸಬೇಕು, ಜೀಯ" ಎಂದು ಉಲೂಕನೆಂಬ ವೃದ್ಧಮಂತ್ರಿ ವಿಜ್ಞಾಪಿಸಲು, "ಅದೇನು ಅರುಹಿರಿ" ಎನ್ನಲು, "ಅಯ್ಯ ಆಯುಷ್ಮಂತನೇ, ಲೋಕದಲ್ಲಿ ಕಾರ್ಯಯತ್ನವಂ ಮಾಡುವನಿಗೆ ಇಷ್ಟಪ್ರಾಪ್ತಿ ಅನಿಷ್ಟನಿವೃತ್ತಿಗಳಾಗುವದೆಂಬುದು ಪರಮದುರ್ಲಭವು. ಈಗ ನಮಗೆ ಬಂದು ಒದಗಿದ್ದ ಅನಿಷ್ಟನಿವೃತ್ತಿಯಂ ಮಾಡಿದ ಚಂದ್ರಗುಪ್ತ ಚಾಣಕ್ಯರಿಗೆ ಇಷ್ಟಪ್ರಾಪ್ತಿ ಉಂಟಾಗುವಂತೆ ಮಾಡುವದಕ್ಕೆ ಅವರ ಸಂಗಡ ಸೇನೆಯಂ ಕಳುಹಿಸಿಕೊಟ್ಟು, ಜಯವಂ ಸಂಪಾದಿಸುವದು ಯುಕ್ತವು" ಎಂದು ಹೇಳುತ್ತಿರಲು,

ಆ ಮಾತಿಗೆ ಶಬರವರ್ಮನು, "ಸೇನೆಯಂ ಮಾತ್ರ ಕಳುಹಿಸಿದರೆ ಅವರಿಗೆ ಇಷ್ಟಪ್ರಾಪ್ತಿ ಆದರೂ ಆಗಬಹುದು. ಇಲ್ಲದಿದ್ದರೆ ಪುನಃಪ್ರಯತ್ನದಿಂದ ಅರಸುಗಳೇ ಪ್ರಯಾಣವಂ ಮಾಡಿ, ಅವರ ಕಾರ್ಯವಂ ನಿರ್ವಹಿಸಿಕೊಟ್ಟು, ನಮ್ಮ ಕಾರ್ಯವಂ ಅವರಿಂದ ಮಾಡಿಕೊಳ್ಳ ಬೇಕಾಗುತ್ತಲಿದೆ" ಎಂದು ಹೇಳುತ್ತಿರಲು,

ಆ ಮಾತಿಗೆ ಉಲೂಕನು, "ಜೀಯ, ಕಾರ್ಯಾರ್ಥಿಗಳಾದವರು ತಮ್ಮ ಕಾರ್ಯಕ್ಕೋಸುಗ ಪರರಿಗೆ ವಿಶೇಷಲಾಭವನ್ನುಂಟುಮಾಡುವೆವೆಂದು ಹೇಳಿ, ಕಾರ್ಯವಾದ ಬಳಿಕ ಅಜಯುದ್ಧದಂತೆ ಆಚರಿಸುವದುಂಟು" ಎಂದು ಹೇಳುತ್ತಿರಲು, "ಅಯ್ಯ ಮಂತ್ರಿಗಳಿರ, ಬ್ರಾಹ್ಮಣನಾದವನು ಅನೃತವಾಡುವದುಂಟೇ ?" ಎಂದು ಅರಸು ಕೇಳಲು, ಆ ಮಾತಿಗೆ ಉಲೂಕನು, "ಜೀಯ, ಈ ಕಲಿಯುಗದಲ್ಲಿ ಲೌಕಿಕವ್ಯವಹಾರದಲ್ಲಿ ಪ್ರವೃತ್ತಿಸಿದವರಿಗೆ ಯಾರಿಗಾದರೂ ಸತ್ಯವಚನದಿಂದಲೇ ಕಾರ್ಯ ನಿರ್ವಹಿಸಲಾಗದು. ಮತ್ತು ಒಂದು ಈ ಅರ್ಥದಲ್ಲಿ ಸೂಕ್ಷ್ಮವುಂಟು. ಮೊದಲು ಚಂದ್ರಗುಪ್ತನ ಸನ್ನಿಧಿಯಲ್ಲಿ ಹೇಳಿಕೊಂಡ ಮಾತಿನಲ್ಲಿ, 'ಶತ್ರುರಹಿತವಾದ ರಾಜ್ಯಾಧಿಪತ್ಯವಂ ತನಗೆ ಉಂಟುಮಾಡುವೆವೆಂದು ತಮ್ಮ ಆಚಾರ್ಯರು ಅಭಯವಂ ಕೊಟ್ಟು ಇದ್ದಾರೆ' ಎಂದು ಹೇಳಿದ ಮಾತಿಗೆ, ಯಾವ ಸಾಹಸವನ್ನಾದರೂ ಮಾಡಿ, ಯಾವ ಅನೃತವನ್ನಾದರೂ ಆಡಿ, ಚಂದ್ರಗುಪ್ತನಿಗೆ ಅಭಯವಂ ಕೊಟ್ಟ ಮೇರೆಗೆ, ಚಂದ್ರಗುಪ್ತನಿಗೆ ನಂದರಾಜ್ಯಾಧಿಪತ್ಯವನ್ನುಂಟುಮಾಡುವದೇ ಚಾಣಕ್ಯರಿಗೆ ಪರಮತಾತ್ಪರ್ಯವಾದುದರಿಂದ, ಅನ್ಯರಿಗೆ ಆ ರಾಜ್ಯದಲ್ಲಿ ಲೇಶಮಾತ್ರವಾದರೂ ದೊರಕಲಾರದು. ಮುಂದೆ ಈ ಅರ್ಥವು ತಮಗೆ ವೇದ್ಯವಾಗಿ ಪಶ್ಚಾತ್ತಾಪವುಂಟಾದೀತೆಂದು ಖಂಡಿತವಾಗಿ ವಿಜ್ಞಾಪಿಸಿದೆನು" ಎಂದು ಹೇಳಲು,

ಆ ಮಾತಿಗೆ ಶಬರವರ್ಮನು, "ಅಯ್ಯ ವೃದ್ಧಮಂತ್ರಿಯೇ, ನೀನು ಹೇಳಿದರ್ಥವೇ ಮುಂದೆ ನಿದರ್ಶ[ನ]ಕ್ಕೆ ಬರುವದಾದರೆ, ಆಗ ನಾವು ಭೂಮಿಯಲ್ಲಿ ಇದ್ದು ಫಲವೇನು?" ಎಂದು ಹೇಳಿ, "ಜೀಯ, ಚಾಣಕ್ಯರ ವಚನವನೃತವಾದರೆ ಅವರು ಮಾಡಿ ಇರುವ ಪ್ರತಿಜ್ಞೆಯು ಸಹ ಅನೃತವಾಗಬೇಕು. ಹಾಗಾದರೆ, ಈ ಮಹಾಕಾರ್ಯೋದ್ಯೋಗ ನಿಷ್ಫ

ಯೋಜನವಾಗುವದರಿಂದ, ಪ್ರಯೋಜನವಿಲ್ಲದೆ ಕಾರ್ಯೋದ್ಯೋಗವಂ ಮಾಡುವ ಪುರುಷನು ಹುಚ್ಚನೆಂಬುವದರಿಂದ ಚಾಣಕ್ಯರು ಸಹ ಅಂಥಾವರೆ ಆಗಿ ತೋರಿದರೆ, ತಾವು ತೂಷ್ಣೀಂಭಾವದಲ್ಲಿ ಇರತಕ್ಕುದು. ಅವರು ಹೇಳಿದಂತೆ ಕಾರ್ಯವು ನಿದರ್ಶ[ನ]ಕ್ಕೆ ಬಂದು ಇರುವದು ಸತ್ಯವಾದರೆ, ಅವರ ಕಾರ್ಯಕ್ಕೆ ಆಗ ತಕ್ಕಷ್ಟು ಯತ್ನವಂ ಮಾಡಿಕೊಂಡು ತಾವೇ ತೆರಳುವುದು ಉತ್ತಮವು. ಹೀಗೆ ಅವರ ಕಾರ್ಯನಿರ್ವಾಹವಂ ಮಾಡಿಕೊಟ್ಟು, ಬಳಿಕ ಅವರಿಂದ ನಮಗಾಗುವ ಕಾರ್ಯದಲ್ಲಿ ಅವರ ಮನೋಗತವಂ ತಿಳಿಯುವದಕ್ಕೆ ಕುಮಾರಕ ನಾದ ಮಲಯಕೇತುವಂ ಚಂದ್ರಗುಪ್ತನ ಬಳಿಗೆ ಕಳುಹಿಸಿಕೊಟ್ಟರೆ, ಆ ಅರ್ಥವು ಚಿತ್ತಕ್ಕೆ ವೇದ್ಯವಾಗುವದು. ಆ ಬಳಿಕ ಕರ್ತವ್ಯವಂ ಆಜ್ಞಾಪಿಸಬಹುದು'' ಎಂದು ಹೇಳಲು,

ಆಗ ರಾಯನು ಚಾಣಕ್ಯನಂ ಕರೆಕಳುಹಿಸಿ, ಉಚಿತ ಪ್ರಕಾರ ಕುಳ್ಳಿರಿಸಿಕೊಂಡು, ಇಂತೆಂದನು : "ಅಯ್ಯ ಕಾರ್ಯದಕ್ಷರಾದ ಚಾಣಕ್ಯರೆ, ನೀವು ಮಾಡಿದ ಉಪಾಯದಿಂದ ನಮಗೆ ಬಂದು ಒದಗಿದ್ದ ರಾಜಕಾರ್ಯವು ಕಾಮರೂಪಾಧಿಪತಿಯಿಂದ ಪರ್ಯವಸಾನ ವಾಯಿತು. ನೀವು ಸಂಕಲ್ಪಿಸಿದ ಕಾರ್ಯಕ್ಕೆ ಅನ್ಯಥಾ ಬರುವದುಂಟೇ ? ನಿಮ್ಮಂಥಾವರು ಕಾರ್ಯೋದ್ಯುಕ್ತರಾದರೆ, ನಮ್ಮ ಸಹಾಯವೆಂಬುದು ನಿಮಿತ್ತಮಾತ್ರವು. ನಿಮ್ಮ ಕಾರ್ಯ ಅನುಕೂಲವಾಗುವಂತೆ ಸನ್ನಾಹವಂ ಮಾಡುವೆನು. ಈ ಒಸಗೆಯಂ ನಿಮಗೆ ಹೇಳ ಬೇಕೆಂದು ಕರೆಕಳುಹಿಸಿದೆನು. ನಿಮಗೆ ಸಂಧ್ಯಾಕಾಲ ಸನ್ನಿಹಿತವಾಯಿತು. ಬಿಡಾರಕ್ಕೆ ತೆರಳ ಬಹುದು" ಎಂದು ಹೇಳಿ, ತಾಂಬೂಲ ಮಾಲಿಕೆಗಳಿಂದುಪಚರಿಸಿ, ಚಾಣಕ್ಯನಂ ಬಿಡಾರಕ್ಕೆ ಕಳುಹಿಸಿ, ನಿಯೋಗಿಗೆ ಬಹುಮಾನವಂ ಮಾಡಿ, ಎಲ್ಲರೂ ಯಥಾಸ್ಥಾನವನ್ನೈದುತ್ತಿರಲು,

ಆಗ ಕಮಲಿನೀಹೃದಯಾನುರಾಗದಿಂ ಕೆಂಪಡರಿದನಂತೆ ಕಮಲಬಾಂಧವನು ಸಿಂದೂರ ವರ್ಣಮಾಗಿ ಪ್ರಾಚೀನಿತಂಬಿನಿಯನೊಡಗೂಡಲೆಣಿಸಿದನಂತೆ ಪಶ್ಚಿಮಾಚಲ ಶಿಖರದಿಂ ಮರೆಯಾಗುತ್ತಿರಲು, ರವಿವಿರಹಖಿನ್ನ ರಾಜೀವಪಙ್ಕ್ತಿಯು ಹರಿತವರ್ಣಮಾದುದಂ ನೋಡಿ ಪರಿಹಾಸಗೊಳ್ಳುವಂತೆ ಕುವಲಯನಿಕರಂಗಳು ವಿಕಸಿತಮಾಗುತ್ತಿರಲು, ಕುಸುಮ ಶರದಂದಹ್ಯಮಾನ ಚಕ್ರವಾಕಹೃದಯೇಂಧನಧೂಮರಾಜಿಯೆಂಬಂತೆ ತಿಮಿರನಿಕರಂಗಳು ಜಗವಂ ಮುಚ್ಚುತ್ತಿರಲು, ಶಶಿಕರಸಿಂಹನಖರ ವಿಶೀರ್ಯಮಾಣ ತಿಮಿರಗಜ ಕುಂಭಸ್ಥ ಲೋತ್ಕ್ಷಿಪ್ತ ಮುಕ್ತಾಫಲನಿಕರವೆಂಬಂತೆ ತಾರಾನಿವಹವು ಗಗನವನ್ನಲಂಕರಿಸುತ್ತಿರಲು, ಪ್ರಿಯದರ್ಶನಮುದಿತ ದಿಶಾವನಿತಾ ಮುಗುಳುನಗೆಯ ಛಂದದಿಂ ಕಂಗೊಳಿಪ ಬೆಳದಿಂಗಳಿಂ ಗಗನಾಭೋಗವು ಮಂದಾಕಿನೀಫೇನಪುಂಜದಿಂ ಶೋಭಿತವಾದಂತಿರಲು, ಪಾತಾಳತಳದಿಂ ಭೂಭಾಗವಂ ನೋಡಬರುವ ಮಹಾಶೇಷನ ಮಧ್ಯಶಿರೋರತ್ನದಂತೆ ಚಂದ್ರನುದುಭವಿಸಲು, ಪ್ರಣಯಕುಪಿತ ರೋಹಿಣೀಚರಣಾಲಕ್ತಕರಸಲಾಂಛನನಾದಂತೆ ಚಂದ್ರನು ರಂಜಿಸುತ್ತಿರಲು, ಶಶಿಕರಸುಧಾರಸ[೧]ದಿಂ ಭಾವಿಸಿದಂತೆ ಗಂಗಾಜಲಗಳಿಂ ತಳಿತವಾದಂತೆ ಜಗವೆಲ್ಲವೂ ಬೆಳಗುತ್ತ ಕಂಗೊಳಿಸುತ್ತ ಶ್ವೇತದ್ವೀಪವಾಸಸುಖವನ್ನನು ಭವಿಸುತ್ತಿರಲು, ಕಮಲವನಲಕ್ಷ್ಮೀನಿಕರದಂತೆ ಅಭಿಸಾರಿಕೆಯರು ನೀಲಾಂಶುಕ ಪರಿವೃತ ರಾಗಿ ಅಲ್ಲಲ್ಲಿ ಪಲಾಯನಂ ಗೆಯ್ಯುತ್ತಿರಲು, ಮದನರಾಜ್ಯಾಭಿಷೇಕಸಮಯದಲ್ಲೆತ್ತಿದ

---

೧. ಭಾವಿತದಿಂ (ಕ)

ಮುತ್ತಿನ ಸತ್ತಿಗೆಯಂತೆ ಕುಮುದಬಾಂಧವನು ಕಂಗೊಳಿಸುತ್ತಿರಲು, ಆ ಸಮಯದಲ್ಲಿ ಪರ್ವತರಾಯನು ಯುವರಾಜನಾಗಿ ತನಗೆ ಪುತ್ರನಾದ ಮಲಯಕೇತುವಂ ಕುರಿತಿಂ ತೆಂದನು :

"ಎಲೈ ಕುಮಾರಕನೇ, ಆಯುಷ್ಮಂತನಾದ ಚಂದ್ರಗುಪ್ತನು ನಮ್ಮ ಸಹಾಯದಿಂದ ನಂದರಾಜ್ಯವಂ ಸಾಧಿಸಲೋಸುಗ, ಬುದ್ಧಿಶಾಲಿಯಾದ ಚಾಣಕ್ಯಸಮೇತನಾಗಿ ಬಂದು ಇದ್ದಾನೆ. ನಂದರು ಬಹುಪ್ರಬಲರಾದುದರಿಂದ ಅವರ ಗರ್ವಭಂಗವಂ ಮಾಡುವದಕ್ಕೆ ನಾವೇ ತೆರಳಬೇಕಾಗುತ್ತಲಿದೆ. ಚಂದ್ರಗುಪ್ತನಿಗೆ ಅಭಿಮತವಾದ ಕಾರ್ಯವಂ ನಾವು ನಿರ್ವ ಹಿಸಿಕೊಟ್ಟರೆ, ನಮಗೆ ಪ್ರತ್ಯುಪಕಾರವಂ ಮಾಡಿ ಕೊಡುವಲ್ಲಿ ಅವರ ಮನೋಗತ ವೇನಿರುವುದು ನೀನೆ ಹೋಗಿ ತಿಳಿದು ಬಾರೆಂ"ದು ಮಲಯಕೇತುವಿಗೆ ನೇಮಿಸಲು, ಆತನು 'ಮಹಾಪ್ರಸಾದ'ವೆಂದು ಹೊರಟು, ತಾರಾಗಣಗಳಿಂ ಶೋಭಿಸುವ ಚಂದ್ರನ ಛಂದದಿ[ಂ] ದೀಪಿಕಾಸಹಸ್ರಯುತ ಪರಿವಾರದಿಂ ಸಹಿತವಾಗಿ ಮಲಯಕೇತು ಬರುತ್ತಿರಲು, ಅದಂ ಕೇಳಿ ಚಂದ್ರಗುಪ್ತನು ಎದುರಾಗಿ ಬಂದು, ಆತನಂ ಸಮ್ಮಾನದಿಂ ಕರೆದುಕೊಂಡು ಹೋಗಿ, ಕುಳ್ಳಿರಿಸಿ, ಒಬ್ಬರೊಬ್ಬರು ಕುಶಲಗಳಂ ಕೇಳುತ್ತಿರಲು, ಚಾಣಕ್ಯನು ಮಲಯಕೇತುವಂ ಕುರಿತು ಇಂತೆಂದನು :

"ಅಯ್ಯ ಆಯುಷ್ಮಂತನಾದ ರಾಜಪುತ್ರನೇ, ಪ್ರಬುದ್ಧನಾಗಿ ಶೂರನಾದ ಜಯಂತ ನೆಂಬ ಪುತ್ರನಂ ನೋಡಿ ದೇವೇಂದ್ರನು ಸಂತೋಷಪಡುವಂತೆ, ರಾಜ್ಯಭಾರನಿರ್ವಾಹಕ್ಕೆ ಯೋಗ್ಯನಾದ ನಿನ್ನ ಶೌರ್ಯವಂ ನೋಡಿ ನಿಮ್ಮ ತಂದೆಯು ಸಂತೋಷಭರಿತನಾಗುವದಕ್ಕೆ ಇದೇ ಸಮಯವು. ಸೂರ್ಯನು ತನ್ನ ಕಿರಣಗಳಿಂದ ಅಂಧಕಾರವಂ ಪರಿಹರಿಸಿ, ಅದೇ ಕಿರಣಗಳಂ ಚಂದ್ರಾಗ್ನಿಗಳಲ್ಲಿ ನಿಲ್ಲಿಸಿ, ಅವರ ಮುಖದಿಂದ ನಿಶಾಂಧಕಾರವಂ ಹ್ಯಾಗೆ ಪರಿಹಾರ ಮಾಡಿಸುವನೋ, ಅದೇ ರೀತಿಯಲ್ಲಿ ಅನ್ಯೋನ್ಯಮಿತ್ರರಾಗಿ ಶೂರರಾದ ನಿಮ್ಮಿಬ್ಬರ ಶೌರ್ಯದಿಂದ ಶತ್ರುಗಳು ಸಂಹೃತರಾದುದಂ ನೋಡಿ ನಿಮ್ಮ ತಂದೆಗೆ ಸಂತೋಷವುಂಟಾದರೆ, ಆಗ ರಾಜ್ಯಭಾರಚಿಂತೆಯಂ ಬಿಟ್ಟು ವಿಶ್ರಮಿಸಿಕೊಂಡಾನು. ಶತ್ರುಗಳಿಂದ ಖಿನ್ನನಾದ ಚಂದ್ರಗುಪ್ತನು ನಿನ್ನಲ್ಲಿ ಸ್ನೇಹವಂ ಬಳಸಿ, ತನ್ನ ಪಿತ್ರಾರ್ಜಿತ ವಾದ ರಾಜ್ಯದಲ್ಲಿ ನಿನಗೆ ಅರ್ಧರಾಜ್ಯವಂ ಕೊಟ್ಟು, ಕ್ಷೀರದಲ್ಲಿ ಉದಕ ಬೆರೆದಂತೆ, ಗಂಗಾ ತರಂಗದಲ್ಲಿ ಯಮುನಾತರಂಗ ಸಂಗತವಾದಂತೆ, ನಿಮ್ಮನ್ನು ಹೊಂದಿ ಯಶೋವಂತ ನಾದೇನೆಂದು ಬಯಸುತ್ತಲಿದ್ದಾನೆ.

ಈ ಉಭಯರಾಜ್ಯಗಳಿಗೂ ಅರಸುಗಳಾಗಿ, ಅಶ್ವಿನೀದೇವತೆಗಳಂತೆ ಅನ್ಯೋನ್ಯಮಿತ್ರ ರಾಗಿ, ಇರುವ ನಿಮ್ಮಂ ನೋಡಿ ಮಿಕ್ಕ ಅರಸುಗಳೆಲ್ಲರೂ ನಿಮ್ಮಡಿಗಳಿಗೆ ಶಿರಗಳಂ ಬಾಗುವರು. ಈ ಅರ್ಧರಾಜ್ಯವಂ ಕೊಡುವದಕ್ಕೆ ಚಂದ್ರಗುಪ್ತನ ಅಕ್ಷರದಿಂ ಬರೆದಿರುವ ಕಾಗದವಿದು. ಇದಂ ನಿಮ್ಮ ತಂದೆಗೆ ತೋರಿಸಬಹುದು. ಈ ಆಲೋಚನೆಯು ಶತ್ರುಗಳಿಗೆ ತಿಳಿಯುವದಕ್ಕೆ ಮುಂಚಿತವಾಗಿಯೇ, ನಿಮ್ಮ ಸೇನಾಧೂಳೀನಿಕರವು ನಂದನಿತಂಬಿನೀ ಕುಚ ಕುಟ್ಮಲಕುಂಕುಮಪತ್ರರೇಖೆಯನ್ನಡರಿ ರಕ್ತಿಮೆಯಂ ಕೆಡಿಸಿದರೆ, ನಮ್ಮ ಕಾರ್ಯ ಕೈವಶ ವಾಗುವದೆಂದು ತಿಳಿಯಬೇಕು. ಈ ಅರ್ಥವೆಲ್ಲವಂ ನಿಮ್ಮ ತಂದೆಗೆ ತಿಳುಹಿಸುವನಾಗು" ಎಂದು ಹೇಳಿ, ಅರ್ಧರಾಜ್ಯವಂ ಕೊಡುವದಕ್ಕೆ ಬರೆದಿದ್ದ ಕಾಗದವಂ ಮಲಯಕೇತುವಿನ

ಕೈಯಲ್ಲಿ ಕೊಟ್ಟು, ಗಂಧಮಾಲ್ಯಾದಿಗಳಿಂದುಪಚರಿಸಿ ಸಮ್ಮಾನದಿಂ ಕಳುಹಿಸಲು.

ಆಗ ಮಲಯಕೇತುವು ಬಂದು ತಮ್ಮ ತಂದೆಗಭಿವಂದಿಸಿ, ಚಂದ್ರಗುಪ್ತ ಬರೆದುಕೊಟ್ಟ ಅರ್ಧರಾಜ್ಯದ ಕಾಗದವಂ ತೋರಿಸಲು, ಅದಂ ನೋಡಿಕೊಂಡು, ಗುಣವಂತನಾದ ಚಂದ್ರಗುಪ್ತನ ಕಾರ್ಯಕ್ಕೆ ನಾವೇ ತೆರಳುವದು ಯುಕ್ತವೆಂದು ನಿಶ್ಚೈಸಿ, ಪರ್ವತರಾಯನು ಸರ್ವಾಧಿಪತ್ಯವಂ ಮಾಡುತ್ತಲಿರುವ ವಿರೋಚನನೆಂಬ ತಮ್ಮನಂ ಕುರಿತಿಂತೆಂದನು :

"ಅಯ್ಯ ದೇವಸೇನಾಪತಿಯಂತೆ ಪರಾಕ್ರಮಶಾಲಿಯಾದ ವಿರೋಚನನೆ, ನಮಗೆ ಗೌಡ ದೇಶಗಳಲ್ಲಿ ರಾಜಕಾರ್ಯ ಒದಗಿರುವದರಿಂದ ನಾವೇ ದಂಡಯಾತ್ರೆಗೆ ತೆರಳಬೇಕಾಗುತ್ತಲಿದೆ. ಕಿರಾತಾಧಿಪತಿಯಾದ ಮಾತಂಗನು ತನ್ನ ಸೇನಾಸಮೇತನಾಗಿ ಪಾಟಲೀಪುರವನ್ನಡ್ಡಗಟ್ಟುವದಕ್ಕೆ ಮುಂಭಾಗದಲ್ಲಿ ತೆರಳಲಿ. ಕುದ್ದಾ[ಲ]ಕನೆಂಬವನು ತನ್ನ ಆರು ಲಕ್ಷ ಕಾಮಾಟದವರಂ ತೆಗೆದುಕೊಂಡು ಸೇನಾಮಾರ್ಗದ ಹಳ್ಳ ತಿಟ್ಟುಗಳಂ ಸಮಮಾಡುತ್ತ, ಜಲವಿಲ್ಲದ ಕಡೆಯಲ್ಲಿ ಜಲವನ್ನುಂಟುಮಾಡುತ್ತ, ಅಲ್ಲಲ್ಲಿ ಜನಕ್ಕೆ ಶ್ರಮ ತೋರದಂತೆ ಅರವಟಿಗೆಗಳಂ ರಚಿಸುತ್ತ, ಸೇನೆಗೆ ಬೇಕಾದಷ್ಟು ತೃಣಕಾಷ್ಠಗಳನ್ನೊದಗಿಸುತ್ತ ಮುಂದೆ ನಡೆಯಲಿ. ದಾಶನೆಂಬುವನು ಮಾರ್ಗಮಧ್ಯದ ನದಿಗಳಲ್ಲಿ ಸೇನೆಗೆ ಆಯಾಸವಿಲ್ಲದಂತೆ ದಾಂಟುವದಕ್ಕೆ ಮೂವತ್ತುಸಾವಿರ ನಾವೆಗಳಂ ಜೊತೆಗೊಳಿಸಿ ಕಾದಿರಲಿ. ಸೇನಾಪತಿಯಾದ ಶೇಖರನು ಅಹೋರಾತ್ರಿಗಳಲ್ಲಿ ಶತ್ರುಗಳ ಗಮ[ನಾ]ಗಮನಗಳಂ ತಿಳಿದು ದಂಡಿಸುತ್ತ, ಸೇನೆಗೆ ಒದಗುವ ಧನಧಾನ್ಯಗಳಂ ರಕ್ಷಿಸುತ್ತ, ಶತ್ರುಗಳ ಗೂಢಚಾರರಂ ಬಂಧಿಸುತ್ತ, ದೀನಾನಾಥರಿಗೆ ಅನ್ನೋದಕವಂ ಒದಗಿಸುತ್ತ, ಉಚಿತಸ್ಥಳದಲ್ಲಿ ರಾಜಯೋಗ್ಯವಾದ ಗುಡಾರಗಳಂ ರಚಿಸುತ್ತ, ಸೇನಾಜನರಂ ಪ್ರೋತ್ಸಾಹಗೊಳಿಸುತ್ತ ತೆರಳಲಿ. ನಮ್ಮ ಸಾಮಂತನರಪತಿಯಾದ ಮಗಧನು ವ್ಯೂಹವಂ ರಚಿಸಿಕೊಂಡು ನಮ್ಮ ಪುರೋಭಾಗದಲ್ಲಿ ನಡೆಯಲಿ.

ಗಾಂಧಾರ ಶಕ ಚೀನ ಹೂಣಪತಿಗಳು ರಾಜಪುತ್ರನಾದ ಚಂದ್ರಗುಪ್ತನ ಅಂಗರಕ್ಷಕರಾಗಿ ಬರಲಿ. ಕುಲೂತಪತಿ ಚಿತ್ರವರ್ಮನೂ ಮಲಯಪತಿ ಸಿಂಹನಾದನೂ ಕುಮಾರಕನಾದ ಮಲಯಕೇತುವಿನ ಪಾರ್ಶ್ವದಲ್ಲಿ ಬರುತ್ತಲಿರಲಿ. ಕಾಶ್ಮೀರಪತಿ ಪುಷ್ಕರಾಕ್ಷನು ಕುಮಾರಕನ ಮುಂಭಾಗದಲ್ಲಿ, ಸಿಂಧುಪತಿ ಸಿಂಧುಷೇಣನು ಹಿಂಭಾಗದಲ್ಲಿ ಬರುತ್ತಲಿರಲಿ. ಪಾರಶೀಕಪತಿ ಮೇಘನಾದಾದಿಗಳು ಶತ್ರುಗಳ ಗಡಿದುರ್ಗಂಗಳಂ ಸಾಧಿಸುತ್ತ, ಸೇನಾಸಂಭಾರವಂ ಒದಗಿಸುತ್ತ, ನಡೆಯುತ್ತಲಿರಲಿ.

ಪಾರ್ವತೇಯ ಸೇನೆಯಲ್ಲಿ ಅರ್ಧವಂ ನಿಲ್ಲಿಸಿಕೊಂಡು ಈ ಪುರದೇಶವಂ ರಕ್ಷಿಸುತ್ತ, ನಮ್ಮ ಸೋದರಮಾವನಾದ ಅಂಗಾರವರ್ಮನು ಮಂತ್ರಿಯಾದ ಉಲೂಕಸಮೇತನಾಗಿ ಅಂತಃಪುರಾದಿ ಯೋಗಕ್ಷೇಮಗಳಂ ಬರೆಸಿ ಕಳುಹಿಸುತ್ತ, ಇಲ್ಲಿಯೇ ಇರಲಿ. ನೀನು ನನ್ನ ಸಂಗಡಲೇ ಇರುವನಾಗು. ಈಗ ಈಶಾನ್ಯ ದಿಕ್ಕಿನಲ್ಲಿ ಪ್ರತಿಷ್ಠಿತವಾಗಿ ಇರುವ ನಮ್ಮ ಸೇನಾಧ್ವಜವು ಅಘನಾಶಿನೀ ತೀರದಲ್ಲಿ ಹೋಗಿ ನಿಲ್ಲಲಿ" ಎಂದು ಪರ್ವತರಾಯನು ವಿರೋಚನನಿಗೆ ಆಜ್ಞಾಪಿಸಲು, ರಾಜಾಜ್ಞೆಯಂ ಕೈಕೊಂಡು ಅದೇ ರೀತಿಗೆ ಶೇಖರಮುಖ್ಯರಾದ ಸಾಮಂತರಾಯರಿಗೆ ವಿರೋಚನನು ನಿಯೋಗಿಸಲು, ಅದೇ ರೀತಿಗೆ ಅವರೆಲ್ಲರೂ ತಮ್ಮತಮ್ಮ ಸೇನೆಗಳು ಸನ್ನದ್ಧವಾಗುವಂತೆ ನಿಯೋಗಿಸುತ್ತಿರಲು, ಆಗ ಪ್ರಯಾಣ

ಸೂಚಕವಾದ ಭೇರೀಧ್ವನಿಯು ಭೂಮಂಡಲವಂ ತುಂಬುತ್ತಿರಲು, ಆ ಶಬ್ದವಂ ಕೇಳಿ ಚಾಣಕ್ಯನು ಚಂದ್ರಗುಪ್ತನಿಗಿಂತೆಂದನು :

"ಅಯ್ಯ ಕುಮಾರಕನೇ, ನಾವು ಮಲಯಕೇತುವಿನ ಕೈಯಲ್ಲಿ ಬರೆದು ಕೊಟ್ಟ ಅರ್ಧ ರಾಜ್ಯದ ಕಾಗದವಂ ನೋಡಿಕೊಂಡು, ಇದು ತನ್ನ ಮನಃಪರೀಕ್ಷಾರ್ಥವಾಗಿ ಎಂದು ತಿಳಿದು ಹಿಂದಕ್ಕೆ ಕಳುಹಿಸದೆ, ಬಹುಲಾಭವಂ ಪಡೆದವನಂತೆ ಉತ್ಸಾಹವಂತನಾಗಿ, ಸೇನಾ ಪ್ರಯಾಣಸೂಚಕವಾದ ಭೇರೀಧ್ವನಿಗಳಂ ಮಾಡಿಸುವನಾದುದರಿಂದ, ಈಗ ನಾವು ಮಾಡಿದ ಉಪಕಾರವು ಕೃತಘ್ನರೋಗಿಗೆ ಮಾಡಿದ ಚಿಕಿತ್ಸಾಸದೃಶವಾಯಿತು. ನಮ್ಮ ಕಾರ್ಯಲಾಭಾನಂತರದಲ್ಲಿ ಅರ್ಧರಾಜ್ಯವಂ ಕೊಡಬೇಕೆಂಬ ಶಬ್ದವುಂಟಾಗುವದಲ್ಲವೇ ? ಆಗಿನ ಪ್ರಕೃತೋಚಿತವಾಗಿ ನಡೆಯಬಹುದು" ಎಂದು ಹೇಳಿ ನಿದ್ರಾಸಕ್ತನಾಗಲು, ಆಗ ಚಂದ್ರಗುಪ್ತನು ಸೇವಕರಿಂ ರಚಿಸಿದ ಮೃದುತಲ್ಪದಲ್ಲಿ ನಿದ್ರಾಸುಖದಿಂದ ಆ ರಾತ್ರಿಯಂ ಕಳೆಯುತ್ತಿರಲು.

ಆಗ ತರುಣತಮಾಲಕದಳಿಕಾನಿಕರಗಳಿಂ ವಿರಳಜಲಧಿಜಲಕಲ್ಲೋಲಶೀಕರಗಳಿಂ ಶೀತಳವಾದ ಪಶ್ಚಿಮಾಚಲವನವೀಥಿಯಂ ಚಂದ್ರನಾಶ್ರಯಿಸುತ್ತಿರಲು, ಚಂದ್ರಗುಪ್ತನ ಹೃದಯದುಃಖಾಂಧಕಾರದಂತೆ ಅಂಧಕಾರವು ಮೆಲ್ಲಮೆಲ್ಲನೆ ತೊಲಗುತ್ತಿರಲು, ಭಾಮಿನೀ ಪುರುಷಾಲಿಂಗನಬಂಧದಂತೆ ಪುಷ್ಪವೃಂತನಿಕರವು ವೃಕ್ಷಗಳ ದೆಸೆಯಿಂದ ಜಗುಳುತ್ತಿರಲು, ಅನವರತಶರಾಸನಾಕರ್ಷಣಶ್ರಮವಿಹ್ವಲಮದನನಿಶ್ವಾಸಗಳಂತೆ ಉಷಃಕಾಲ[ದ] ತಂಗಾಳಿಗಳೆಲ್ಲಾ ಕಡೆಯಲ್ಲಿ ಬೀಸುತ್ತಿರಲು, ಸ್ವೈರಿಣೀನಯನಸರೋಜಗಳಂತೆ ವಿಕಚಸರೋಜನಿಕರಗಳಲ್ಲಿ ರಕ್ತಿಮೆ ಉದಯಿಸುತ್ತಿರಲು, ಪ್ರಾಚೀವನಿತೆಯಂ ಕೂಡಿ ಕುಂಕುಮಜಲಕೇಳಿಯನ್ನಾಡಿ ಬಂದವನಂತೆ ರಾಜೀವಬಾಂಧವನರುಣಚ್ಛವಿಯಿಂ ರಂಜಿಸುತ್ತಿರಲು,

ಆಗ ಚಂದ್ರಗುಪ್ತನೆದ್ದು, ವಿಪ್ರಯುಗ್ಮ ಧೇನುದರ್ಶನವಂ ಮಾಡಿ, ಸ್ನಾನಾದಿಗಳಂ ನೆರವೇರಿಸಿ ಅಲಂಕೃತನಾಗಲು, ಅಷ್ಟರಲ್ಲಿಯೇ ಪರ್ವತರಾಯನೆದ್ದು ಸ್ನಾನವಂ ಮಾಡಿ ಅಲಂಕೃತನಾಗಿ ಶುಭಲಗ್ನದಲ್ಲಿ ವಿಪ್ರರ್ಗೆ ಬಹುಧನರತ್ನಗಳಿಂ ಯಾತ್ರಾದಾನವಂ ಮಾಡಿ, ತನ್ನ ಅಂತಃಪುರಸ್ತ್ರೀಜನವನ್ನೊಡಂಬಡಿಸಿ, ತನ್ನ ಇಷ್ಟದೇವತೆಗೆ ನಮಸ್ಕರಿಸಿ, ಹೊರಟು, ದೇಶಾಧಿಪತಿಗಳಿಂ ಪರಿವೃತನಾಗಿ ಆಸ್ಥಾನದ ಬಳಿಗೆ ಬರುತ್ತಿರಲು, ಆಗ ಗಾಂಧಾರ ಶಕ ಚೀನ ಹೂಣ ದೇಶಾಧಿಪತಿಗಳು ಚಂದ್ರಗುಪ್ತನಿಗೆ ಸಲಾಮುಗಳಂ ಮಾಡಿ ವಿಶ್ವಾಸದಿಂದ ಓಲೈಸುತ್ತಿರಲು, ವಂದಿಮಾಗಧರು ಜಯ ಜಯವೆಂದು ಹೊಗಳುತ್ತಿರಲು, ಆಗ ರಾಜಭಟರು ಬಂದು ಅಲಂಕೃತನಾಗಿ ಇರುವ ಚಂದ್ರಗುಪ್ತನಿಗೆ ಅಭಿವಂದಿಸಿ ಬಿನ್ನೈಸುತ್ತಿದ್ದರು:

"ಬುದ್ಧೀ ರಾಜೋತ್ತಮರಾದ ಚಂದ್ರಗುಪ್ತರಾಯರೆ, ಮಹಾರಾಜಾಜ್ಞೆಯಿಂದ ಗೌಡ ದೇಶಗಳಿಗೆ ಪ್ರಯಾಣವಾಗಿ ಹೊರಟು ಸಿದ್ಧವಾಗಿ ಇದೆ. ರಾಜಾಜ್ಞೆ ಮೇರೆಗೆ ತಾವು ಕುಳ್ಳಿರುವದಕ್ಕೆ ಅಳಗಿರಿಯೆಂಬ ಮದ್ದಾನೆಯು ಶೃಂಗರಿಸಿ ಬಂದು ನಿಂತು ಇದೆ. ಚಾಣಕ್ಯರು ಕುಳ್ಳಿರುವದಕ್ಕೆ ಶ್ಲಾಘ್ಯವಾದ ಅಂದಳವು ಇಳುಹಿಸಿ ಇದೆ. ಮಹಾರಾಯರು ತಮ್ಮ ಕುಮಾರರು ಸಮೇತರಾಗಿ ನಿಮ್ಮನ್ನೆದುರುನೋಡುತ್ತಲಿದ್ದಾರೆ. ಹಾಗೇ ಅರಸುಗಳೆಲ್ಲರೂ ಕಾದುಕೊಂಡು ಇದ್ದಾರೆ. ತಡವೇಕೆ ? ದಿಗ್ವಿಜಯವಂ ಮಾಡಬಹುದೆಂ"ದು ಬಿನ್ನೈಸಲು,

ಆಗ ಚಂದ್ರಗುಪ್ತನು ಇಷ್ಟದೇವತಾಭಿವಂದನವಂ ಮಾಡಿ, ಚಾಣಕ್ಯರಿಗಭಿವಂದಿಸಿ,

ಅವರ ಆಶೀರ್ವಾದವಂ ಕೈಕೊಂಡು, ಮುಕ್ತಾಫಲಚಿತ್ರಿತಮಾದ ಆಂದೋಳಿಕದಲ್ಲಿ ಅವರಂ ಕುಳ್ಳಿರಿಸಿಕೊಂಡು, ಪ್ರದಕ್ಷಿಣೆಯಾಗಿ ಬಂದು, ಗಜಾರೋಹಣವಂ ಮಾಡಲು, ಹಾಗೇ ಪರ್ವತೇಶ್ವರನು ಗಜಾರೂಢನಾಗಲು, ಹಾಗೇ ಮಲಯಕೇತುವು ಗಜಸ್ಕಂಧವನ್ನೇರಲು, ಸೇನಾಸಮೇತರಾಗಿ ಪಾರ್ಶ್ವಗಳಲ್ಲಿ ತೆರಳುತ್ತಿರುವ ಮಲಯಕೇತು ಚಂದ್ರಗುಪ್ತರಿಂದ ಪಾರ್ಶ್ವಸ್ಥಿತ ಚಂದ್ರ ಸೂರ್ಯರಿಂ ಪ್ರಕಾಶಿಸುವ ಮೇರುಪರ್ವತದಂತೆ ಪರ್ವತೇಶ್ವರನು ಒಪ್ಪುತ್ತಿರಲು, ಹಾಗೇ ವಿರೋಚನನು ಪಾರ್ವತೇಯ ಸೇನಾಪರಿವೃತನಾಗಿ ಗಜಾರೂಢನಾಗಿ ಪರ್ವತೇಶ್ವರನಂ ಹೊಂದಿ ಬರುತ್ತಿರಲು, ಆಗ ಆನಕ ಭೇರಿ ನಿಸ್ಸಾಣ ಕಹಳಾದಿ ವಾದ್ಯಗಳು ಪ್ರಪಂಚವಂ ಶಬ್ದಮಯವಾದಂತೆ ಮಾಡುತ್ತಿರಲು, ಆ ರಾಯನು ತನ್ನ ಸಾಮಂತನರಪತಿಗಳಿಂ ಕೂಡಿ ತೆರಳುತ್ತಿರಲು,

ಸಸಂಭ್ರಮದಿಂದ ನಡೆವ ಗಜಾವಳಿಗಳಿಂ, ಕೆದರಿದ ಛತ್ರಪಂಕ್ತಿಗಳಿಂ, ಹೊಳೆಹೊಳೆವ ತುರಗನಿಕರಗಳಿಂ, ಚಲಿಸುವ ಚಾಮರಕದಂಬದಿಂ, ಪ್ರೋನ್ನತ ಧ್ವಜಪತಾಕೆಗಳಿಂ, ಭೂಮಂಡಲವೆಲ್ಲವೂ ತುರಗಮಯವಾದಂತೆ, ದಿಕ್ತಟಂಗಳು ಕುಂಜರಮಯವಾದಂತೆ, ಅಂತರಿಕ್ಷವು ಛತ್ರಮಯವಾದಂತೆ, ನಭೋಮಂಡಲವು ಧ್ವಜಪತಾಕಾಮಯವಾದಂತೆ, ಪ್ರಜಾನಿಕರವು ಭೂಪಾಲಮಯವಾದಂತೆ, ಸೂರ್ಯಾತಪವೆಲ್ಲವೂ ಆಭರಣಪ್ರಭಾಮಯವಾದಂತೆ, ಮಾರುತಗಳು ಮದೋದಕಗಂಧಮಯವಾದಂತೆ, ಲೋಕವೆಲ್ಲವೂ ಜಯಶಬ್ದಮಯವಾದಂತೆ ತೋರುತ್ತಿರಲು ; ಪ್ರಳಯಕಾಲವಲಾಹಕನಿನಾದದಂತೆ, ಮಂದರಕ್ಷೋಭೆಯಿಂ ಚಲಿಸುವ ಸಮುದ್ರಘೋಷದಂತೆ, ಪ್ರಯಾಣಭೇರೀ ನಿನಾದದಿಂ ಕುಲಾಚಲಗುಹಾಂತರಾಳಗಳಲ್ಲಿ ಪ್ರತಿಧ್ವನಿ ಉಂಟಾಗುತ್ತಿರಲು ; ಆಗ ಬಲಸಮ್ಮರ್ದದಿಂದುಂಟಾದ ಧೂಳೀನಿಕರಂಗಳು ಕೆಲವೆಡೆಯೊಳು ಹರಿಣರೋಮಗಳಂತೆ, ಪುಷ್ಪಮಾಲೆಗಳಲ್ಲಿ ಪುಷ್ಪಧೂಳಿಗಳಂತೆ, ವಕ್ಷಸ್ಥಳಗಳಲ್ಲಿ ಅಂಗರಾಗದಂತೆ, ಕಂಠದೇಶದಲ್ಲಿ ಪಟವಾಸದಂತೆ, ಶ್ಮಶ್ರುರೋಮಗಳಲ್ಲಿ ಪಲಿತಂಗಳಂತೆ, ಅಪರಿಮಿತ ಮೇಘಮಾಲೆಯಂತೆ ಗಗನಾಭೋಗವಂ ವ್ಯಾಪಿಸುತ್ತ, ವಿಜಯಧ್ವಜದಂತೆ ಪುರೋಭಾಗವನ್ನಡರುತ್ತ, ಅಕಾಲಹಿಮದಂತೆ ದಿಕ್ತಟಗಳಂ ಮುಚ್ಚುತ್ತ, ಪ್ರಳಯಾಗ್ನಿಧೂಮರಾಜಿಯಂತೆ ಪ್ರಪಂಚವಂ ಮೀರುತ್ತ, ವಿಂಧ್ಯಾಚಲದಂತೆ ಸೂರ್ಯಲೋಕವಂ ಮುಚ್ಚುತ್ತ, ಮಹಾನಿಶಿಯಂತೆ ನೇತ್ರಪಥವಂ ಮುಸುಕುತ್ತ, ದಿಕ್ತಟಗಳಂ ತೋರದಂತೆ ಮಾಡುತ್ತಿರಲು[೧];

ಮತ್ತಮದಕರಿಗಂಡನಿಸ್ಸೃತ ಮದೋದಕಧಾರಾವರ್ಷಗಳಿಂ, ಶೃಂಖಲಕ್ಷೋಭೆಯಿಂ, ಕೀರ್ಯಮಾಣ ತುರಗಮುಖಫೇನಪಟಲದಿಂ ರೇಣುಪಟಲವು ಶಾಂತವಾಗಲು ; ದಿಕ್ಕುಗಳೆಲ್ಲವೂ ಪ್ರಸನ್ನವಾಗಲು ; ಭೂಮಿಯು ಪ್ರಳಯಸಾಗರಜಲದಿಂ ನೂತನವಾಗಿ ಉದ್ಭವಿಸಿದಂತೆ ತೋರುತ್ತಿರಲು ; ಮತ್ತೇಭನಿ[ಕ]ರವೆಂಬ ಮಹಾಮೀನಂಗಳಿಂ, ತುರಗರಾಜಿಯೆಂಬ ತರಂಗದಿಂ, ಛತ್ರಚಾಮರಗಳೆಂಬ ನೊರೆಗಳಿಂ, ಪದಾತಿವರ್ಗವೆಂಬ ಜಲಚರಗಳಿಂ, ಶತಘ್ನಿಗಳೆಂಬ ಮೊಸಳೆಗಳಿಂ, ತೋಮರಪರಿಘಚಾಪಗಳೆಂಬ ಮಹಾಸರ್ಪಂಗಳಿಂ, ಶತಾಂಗಧ್ವಜಪತಾಕೆಗಳೆಂಬ ಹಡಗುಗಳಿಂ, ಪ್ರಾಸಕುಂತಬಾಣನಿಕರವೆಂಬ

---

೧. ಲು ಮುಹೂರ್ತಮಾತ್ರದಲ್ಲಿ ಮಹಾನಿಶಿಯಂತೆ (ಕ)

ಶರವ[ಣ]ದಿಂ, ವಾದ್ಯರಭಸವೆಂಬ ಮಹಾಘೋಷಗಳಿಂ ದೃಷ್ಟಿಪಥವಂ ಮೀರಿದ ಮಹಾ ಸಮುದ್ರದಂತೆ ಸೇನಾಭಾರವು ತೋರುತ್ತಿರಲು ;

ಆಗ ಪರ್ವತರಾಯಸೇನೆಯು ಅಘನಾಶಿನೀ ಎಂಬ ನದೀತಿರದಲ್ಲಿ ನಿಶಾಸಮಯದಂತೆ ತೋರುವ ಮಹಾವನಪಂಕ್ತಿಯಲ್ಲಿಳಿದು, ಉನ್ನತಂಗಳಾದ ಗುಡಾರಗಳಲ್ಲಿ ತೃಣರಚಿತ ಗೃಹಪಂಕ್ತಿಗಳಲ್ಲಿ ಸೇನಾಜನವು ಇಳಿಯುತ್ತಿರಲು, ಹಿಮಾಚಲಶಿಖರದಂತೆ ಉನ್ನತಗಳಾಗಿ ಕನಕಕಲಶಸಹಸ್ರೋಪಶೋಭಿತಪಟಗೃಹಪಂಕ್ತಿಗಳಲ್ಲಿ ಅರಸುಗಳೆಲ್ಲರೂ ಇಳಿದು ವಿಶ್ರಮಿಸಿಕೊಳ್ಳುತ್ತಿರಲು, ಶತ್ರುಭಯಂಕರನಾದ ಪರ್ವತೇಶ್ವರನಿಗೆ ಪಾರ್ಶ್ವಪುರೋ ಭಾಗದ ದೇಶಾಧಿಪತಿಗಳು ಭಯವಿಶ್ವಾಸದಿಂದ ಅವನತಶಿರೋಭೂಷಣವುಳ್ಳವರಾಗಿ ಧನಕನಕ ರತ್ನಗಳೆಂಬ ಕಪ್ಪವನ್ನೊಪ್ಪಿಸುತ್ತಿದ್ದರು ಎಂಬಲ್ಲಿಗೆ.

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರಗಂಡ ಮಹೀಶೂರನರಪತಿ ಶ್ರೀಕೃಷ್ಣರಾಜೇಂದ್ರರಾಶ್ರಿತ ಹೊಯಿಸಣಿ[ಗ]ಕುಲಸಂಜಾತ ನಾರಾಯಣಶರ್ಮ ವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥ ದಲ್ಲಿ ಪರ್ವತರಾಜಸೇನಾಗಮನ ಕಥನವೆಂಬ ಚತುರ್ಥಾಶಯಃ ಸಮಾಪ್ತಃ.

ಪಂಚಮಾಶಯ : ರಾಕ್ಷಸಭೇದೋಪಾಯಭಂಗ ಕಥನವು

ಈ ರೀತಿಯಲ್ಲಿ ಸೇನಾಸಮೇತನಾಗಿ ಪರ್ವತರಾಯನು ರಮಣೀಯವಾದ ಅಘ ನಾಶಿನೀತೀರದಲ್ಲಿ ಇಳಿದಿರಲು,

ಆಗ ಅಲ್ಲಿಯ ಬೇಹುಗಾರರು ಶತ್ರುಗಳ ಗೂಢಚಾರರನ್ನವರ ವೇಷಭಾಷಾವಿನಿ ಮಯವಂ ತಿಳಿದು, ಹಿಡಿದು ಬಂಧಿಸಿ, ಚಂದ್ರಗುಪ್ತನಿಗೆ ತಂದು ಒಪ್ಪಿಸುತ್ತಿರಲು, ಅವರಂ ನೋಡಿ, "ಎಲೈ ಗೂಢಚಾರುರುಗಳಿರ, ಪ್ರಾಣಸಹಿತರಾಗಿ ನೀವು ನಿಮ್ಮ ದೇಶಕ್ಕೆ ಹೋಗ ಬೇಕಾದರೆ, ನಿಮ್ಮ ನಿಶ್ಚಯವಂ ಹೇಳಿ" ಎನಲು, ಆ ಮಾತಿಗೆ "ಬುದ್ಧೀ, ಅಭಯವಾದರೆ ಹೇಳುವೆವು. ನಾವು ಪಾಟಲೀಪುರದ ಅಮಾತ್ಯ ರಾಕ್ಷಸರಿಂದ ದೇಶಾಂತರದ ವರ್ತ ಮಾನವಂ ತಿಳಿದು ಬಂದು ಹೇಳುವಂತೆ ಮೊದಲೇ ನೇಮಿಸಿದ್ದ ಚಾರರು ; ಈ ಪರ್ವತ ರಾಜ್ಯ ಮುಖ್ಯವಾದ ಉತ್ತರದೇಶಗಳಲ್ಲಿ ನಡೆವ ವರ್ತಮಾನವಂ ತಿಳಿದು, ವೇಳೆವೇಳೆಗೆ ಹೋಗಿ ಅಮಾತ್ಯ ರಾಕ್ಷಸರಿಗೆ ತಿಳುಹಿಸುವದೇ ನಮ್ಮ ಊಳಿಗವು ; ಇದರಲ್ಲಿ ಲೇಶ ವಂಚನೆಯಿಲ್ಲ" ಎಂದು ಹೇಳಲು, ಅದಂ ಕೇಳಿ ಚಂದ್ರಗುಪ್ತನು ತನ್ನ ಬಳಿಯ ದೂತರ ಮುಖವಂ ನೋಡಿ, "ಎಲೈ, ಈ ಚಾರರಿಗೆ ನಮ್ಮ ಸೇನೆಗಳೆಲ್ಲವಂ ತೋರಿಸಿ, ಕಶೆಗಳಿಂದ ಹತ್ತು ಪ್ರಹಾರವಂ ಹಾಕಿ, ದಂಡಿನಿಂದ ಹೊರಡಿಸಿ ಬಿಡಿ" ಎಂದು ನೇಮಿಸಲು, 'ಬುದ್ಧೀ' ಎಂದು ಆ ದೂತರು ಆ ಚಾರರಂ ಕರೆತರುತ್ತ, ಏಳುದಿನ ಅಹೋರಾತ್ರಿ ತಿರುಗಿಸಿ, ಪ್ರಹರಿಸಿ ಹೊರಡಿಸಲು, ಆ ಚಾರರು ಮೊದಲು ವನದಲ್ಲಿ ಕಟ್ಟಿ ಇದ್ದ ತುರಗಗಳನ್ನೇರಿ, ಅತಿತ್ವರ್ಯದಿಂ ಪಾಟಲೀಪುರವಂ ಕುರಿತು ಬರುತ್ತಿರಲು,

ಪರ್ವತರಾಯಸೇನಾಜನರು ಗೌಡದೇಶವಂ ವ್ಯಾಪಿಸುತ್ತಿರಲು, ಆಗ ಪಾಟಲೀಪುರ ದಲ್ಲಿ ಮಹೋತ್ಪಾತಗಳಾಗುವುದಂ ಕಂಡು, "ಇದೇನು ವಿಪರೀತವೋ" ಎಂದು ರಾಕ್ಷಸನು ಯೋಚಿಸುತ್ತಿರುವ ಸಮಯದಲ್ಲಿ ಗೂಢಚಾರನೊಬ್ಬ ಬಂದು, "ಬುದ್ಧೀ ಅಮಾತ್ಯರೇ,

ನಮ್ಮ ದೇಶದ ಕಡೆ ಗಡಿಗಳ ಸೀಮೆ[ಯ] ಪ್ರಜೆಗಳು ಪರದೇಶದ ಮ್ಲೇಚ್ಛೋಪದ್ರವದಿಂದ ವಲಸೆ ಹೋದರಂತೆ" ಎಂದು ವಿಜ್ಞಾಪಿಸಲು, ಅದಂ ಕೇಳಿ, "ಮೊದಲು ನಾವು ಕೆಲವು ತುಂಟಪಾಳ್ಯಗಾರರಿಗೆ ಒಂದೆರಡು ಗ್ರಾಮವನ್ನಾದರೂ ಕೊಡದೆ ನಿರಾಕರಿಸಿ ಓಡಿಸಿದುದ ರಿಂದ ಈ ಅಕಾರ್ಯವನ್ನಾಚರಿಸಿ ಇರಬೇಕು ; ಹೊಟ್ಟೆಗೆ ಇಲ್ಲದಿರುವರು ಮತ್ತೇನು ಮಾಡಿಯಾರು ? ಅವರಿಗೆ ಜೀವನಕ್ಕೆ ಒಂದೆರಡು ಗ್ರಾಮವಂ ನಡಸಿ ಕೊಡುವಂತೆ ನಾವು ಹೇಳಿದೆವೆಂದು ಕಟ್ಟುಕರಣಿಕರಿಗೆ ಹೇಳುವನಾಗು" ಎಂದು ದೂತನಿಗೆ ನೇಮಿಸಲು ;

ಆ ಮರುದಿವಸ ಮತ್ತೊಬ್ಬ ಚಾರನು ಬಂದು, "ಬುದ್ಧಿ ಅಮಾತ್ಯರೇ, ನಮ್ಮ ಸೀಮೆ ತಲಗಟ್ಟಿನಲ್ಲಿ ಶತ್ರುಗಳಿಗೆ ದುರ್ಗಮವಾದ ದುರ್ಗಗಳೈದು ಪಾರಶೀಕರ ವಶವಾಯಿತಂತೆ. ಆ ವರ್ತಮಾನವಂ ತಂದ ಭಟನಿವನು" ಎಂದು ಹೇಳಲು, ಅದಂ ಕೇಳಿ "ಇದೇನ್ಯೆ, ಒಮ್ಮೆಂದೊಮ್ಮೆ ಹೀಗೆ ಉಂಟಾಗುವದುಂಟೇ ? ಯಾರೋ ಮಲಿನರತ್ನಗಳಿಗೂ ವಸ್ತ್ರ ಗಳಿಗೂ ಬಣ್ಣವಂ ಹಾಕುವ ಬಣ್ಣಗಾರರು ಕಟ್ಟಿಸಿದ ಮೃಷಾವರ್ತಮಾನವಿದ್ದೀತು. ಒಳ್ಳೆ ಯದು, ವಿಚಾರಿಸುವೆವು, ಹೋಗೆಂ"ದು ಹೇಳಲು ;

ಮತ್ತೆ ಸಾಯಂಕಾಲದಲ್ಲಿ ಒಬ್ಬ ದೂತ ಬಂದು, "ಸ್ವಾಮಿ ಅಮಾತ್ಯರೇ, ಕಾಶ ಪ್ರಸ್ಥದಲ್ಲಿ ಇದ್ದ ನಮ್ಮ ತುರಗಸೇನೆಗೂ ಶಕಸೇನೆಗೂ ಮಹದ್ಯುದ್ಧವಾಗಿ ನಮ್ಮ ತುರಗ ಗಳು ಬಹುಛೇದವಾಗಿ, ನಿರ್ವಹಿಸಲಾರದೆ, ರಾಮಸಿಂಗನೆಂಬ ನಮ್ಮ ಕಡೆ ಸರದಾರನು ಗತಪ್ರಾಣವಾಗಲು, ಅವನ ಮಕ್ಕಳಂ ಕೈಸೆರೆ ಹಿಡಿದರಂತೆ. ಆ ಗಡಿಯು ಅವರ ವಶವಾಯಿ ತಂತೆ. ಅಲ್ಲಿದ್ದ ಅಂಚೆಹರಿಕಾರ ಬರೆದು ಕಳುಹಿಸಿದ ಪತ್ರಿಕೆಯಿದು" ಎಂದು ಕಾಗದವಂ ಕೊಡಲು, ಅದಂ ನೋಡಿ, ರಾಕ್ಷಸನು ಮನದೊಳು ಆತಂಕಪಡುತ್ತ, "ಶಕಸೇನೆ ಎಲ್ಲಿ ಯದು? ಪಾರಶೀಕರೆಂಬ ಬಹುದೂರದೇಶಾಧಿಪತಿಗಳ ಸೇನೆ ಇಲ್ಲಿ ಬರುವದಕ್ಕೆ ಕಾರಣ ವೇನು ? ಏನು ವಿಪರೀತ ಕಾಲವೋ, ಶಿವಶಿವಾ" ಎಂದು, ನಿದ್ರೆ ತಟ್ಟದೆ ರಾಕ್ಷಸನೆದ್ದು, ಪ್ರಾತಃಕಾಲದಲ್ಲಿ ಹೊರಗೆ ಬರುತ್ತಿರಲು ;

ಆಗ ಒಬ್ಬ ದೂತನು ಬಂದು, "ಬುದ್ಧೀ, ಕ್ರೌಂಚಪ್ರಸ್ಥವೆಂಬ ನಮ್ಮ ದೊಡ್ಡಗಡಿಯಂ ಕಾದುಕೊಂಡಿದ್ದ ಪದಾತಿಲಕ್ಷವು ಸಿಂಧುದೇಶಪತಿಯ ತುರಗಸೇನೆಯಂ ಕಂಡು, ನಾಲ್ಕು ಮಾಸ ಸಂಬಳ ಸಲ್ಲದೆ ನಿಂತು ಇದ್ದದ್ದರಿಂದ ಯುದ್ಧವಂ ಮಾಡದೆ, ಬಹುವಸ್ತು ಸಮೃದ್ಧವಾದ ಆ ಗಡಿಯಂ ಬಿಟ್ಟು, ಆಯುಧವಂ ಕೊಟ್ಟು, ಓಡಿ ಹೋದರಂತೆ. ನೆರೆಗಡಿಯ ದುರ್ಗಪಾಲಕನು ಇದಂ ತಿಳಿದು ಉಷ್ಟ್ರಾರೂಢರಾದ ಚಾರರ ಕೈಯ[ಲ್ಲಿ] ಕಳುಹಿಸಿದ ಲೇಖನವಿದು" ಎಂದು ಮುಂದಿರಿಸಲು ;

ಅದಂ ನೋಡಿ ರಾಕ್ಷಸನು ವಿಸ್ಮಿತನಾಗಿ, ತನ್ನ ಸಮೀಪಕ್ಕೆ ಬಂದಿದ್ದ ಸುಮತಿಯೆಂಬ ಮಂತ್ರಿಯಂ ಕುರಿತು, "ಅಯ್ಯ ಮಿತ್ರನೇ, ಈ ವರ್ತಮಾನವಂ ಕೇಳಿದೆಯಾ ? ನಮ್ಮ ದೇಶಕ್ಕೆ ಈಗ ಏನೋ ಸ್ವಲ್ಪ ಆತಂಕ ಸಂಭವಿಸುವಂತೆ ತೋರುತ್ತಲಿದೆ. ಶಕ ಪಾರಶೀಕ ಸಿಂಧುಪತಿಗಳ ಸೇನೆಗಳು ನಮ್ಮ ಗಡಿದುರ್ಗಗಳಂ ಹಿಡಿದು ತಮ್ಮ ವಶವಂ ಮಾಡಿಕೊಂಡ ರಂತೆ" ಎನಲು, "ಏನು ನಿಮಿತ್ತವೋ ಬಹುದೂರದೇಶಾಧಿಪತಿಗಳೆಲ್ಲರೂ ಕೃತಸಂಕೇತ ರಾಗಿ ಮಹಾಬಲಿಷ್ಠರಾದ ನಮ್ಮ ಮೇಲೆ ದಂಡೆತ್ತಿ ಬರುವದಕ್ಕೆ, ಇವರು ಬೇರೆ ಸ್ವತಂತ್ರಿಗಳಲ್ಲ, ಪರ್ವತದೇಶಾಧಿಪತಿಯ ವಶವರ್ತಿಗಳಾಗಿ ಇರತಕ್ಕವರು ; ಆ ಪರ್ವತೇ

ಶ್ವರನಿಗೆ ಅಭಿಮತವಿಲ್ಲದೆ ಬಂದು ಈ ದುರಾಗತವಂ ಮಾಡಿ ಇದ್ದರೆ, ಈ ದೇಶಾಧಿಪತಿಗಳಂ ಹಿಡಿತಂದು ಸೀಳಿ ತೋರಣಸ್ತಂಭಕ್ಕೆ ಕಟ್ಟಿಸುವೆನು. ಆತನ ಸಮ್ಮತಿಯಿಂದಲೇ ಈ ಅಕಾರ್ಯವಂ ಮಾಡಿ ಇದ್ದರೆ, ಮೊದಲು ನಮ್ಮಿಂದ ಉಪಕಾರವಂ ಮಾಡಿಸಿಕೊಂಡು ಇರುವ ಪರ್ವತರಾಯನು ಕೃತಘ್ನನಾಗಿ, ನಮ್ಮಲ್ಲಿ ಇರುವ ಸಖ್ಯವಂ ಮರೆದು, ಸ್ವಬಲ ಪರಬಲ ವಿಚಾರರಹಿತನಾಗಿ ಹೀಗೆ ಮಾಡಿ ಇದ್ದರೆ, ಈಗ ಆತನಿಗೆ ಉನ್ಮಾದದೆಸೆ ಉಂಟಾಗಿ ಇರಬೇಕು ಅಥವಾ ದೈವಬಲ ನಷ್ಟವಾಗಿ ಇರಬೇಕಲ್ಲದೆ ಇಲ್ಲಿ ಶತ್ರುವಿನ ಆಗಮನಕ್ಕೆ ಕಾರಣಗಳಾದ ಪ್ರಮಾದಗಳೇನೂ ಉಂಟಾದುದಿಲ್ಲ.

ಆ ಪ್ರಮಾದಗಳೇನೆಂದರೆ, ಪ್ರಜಾಯೋಗಕ್ಷೇಮವಂ ವಿಚಾರಿಸದೆ ಪ್ರಮತ್ತನಾದ ಅರಸಿನ ದೇಶದಲ್ಲಿ ತುಂಟಜನಗಳಿಂದ ರಾಜ್ಯತಂತ್ರವು ಕೆಟ್ಟು ನಾಣ್ಯಗಳಲ್ಲಿ ಎಡವಟ್ಟು ಬಂದರೆ, ಅಳತೆಗಳಲ್ಲಿ ಮಿತಿಯಿಲ್ಲದಿದ್ದರೆ, ಧಾರಣೆಗಳಲ್ಲಿ ಹೆಚ್ಚುಕಡಮೆಯಾದರೆ, ಅನ್ಯಾಯದಲ್ಲಿ ಪಕ್ಷಪಾತವುಂಟಾದರೆ, ಸ್ವಾಮಿಭೃತ್ಯರಿಗೆ ಮನಸ್ತಾಪ ಬಂದರೆ, ಮಂತ್ರಿಗಳು ಸ್ವಾಮಿಭಕ್ತಿಯಂ ಬಿಟ್ಟರೆ, ಅಪೂಜ್ಯರು ಪೂಜ್ಯತೆಗೆ ಬಂದರೆ, ರಾಜ್ಯಾಧಿಪತ್ಯವು ಸ್ತ್ರೀಗಳಿಗೆ ಉಂಟಾದರೆ, ಮಂತ್ರಬೀಜವು ದುಷ್ಟಸ್ತ್ರೀಗಳಿಗೆ ತಿಳಿದರೆ, ರಾಜ್ಯಕ್ಕೆ ಬಹುನಾಯಕರುಂಟಾದರೆ, ಸಚಿವರಿಲ್ಲದ ಬಾಲಕಗೆ ಪ್ರಭುಪದ ದೊರೆತರೆ, ಕೋಶಗಳಲ್ಲಿ ಆಕಾಶವೇ ಉಳಿದರೆ, ನಾಸ್ತಿಕವಾದವು ಹೆಚ್ಚಿ ಬಂದರೆ, ಪ್ರಭುವು ವಿಮರ್ಶೆಯಿಲ್ಲದೆ ಆಜ್ಞಾಪಿಸುತ್ತಿದ್ದರೆ, ಅದಂ ಪ್ರಜೆಗಳು ನಡೆಯಿಸದೆ ಉಪೇಕ್ಷೆಯಂ ಮಾಡಿದರೆ, ವೇತನಗಳು ಭೃತ್ಯರಿಗೆ ಸಲ್ಲದಿದ್ದರೆ, ಪ್ರಜೆಗಳು ವಿಹಿತವಂ ಮೀರಿದರೆ, ಅಧಿಕಾರಿಗಳು ಲಂಚಕ್ಕೆ ಒಳಗಾದರೆ, ಈ ದೋಷಗಳಂ ತಿಳಿದ ಪರರಾಯರು ಸ್ವದೇಶವನ್ನಾಕ್ರಮಿಸುವರೆಂಬ ಬುದ್ಧಿಯಿಂದ ಬಹುಕಾಲದಿಂ ಈ ಪ್ರಭುಪರಂಪರೆಯಲ್ಲಿ ಅಭಿಮಾನಿಗಳಾಗಿ, ಪೂರ್ವಿಕರಾಗಿ, ಕಾರ್ಯದಕ್ಷರಾಗಿ, ಈ ದೇಶ ಮರ್ಯಾದೆಯಂ ತಮ್ಮ ದೇಹಕ್ಕಿಂತತಿಶಯವಾಗಿ ನೋಡುತ್ತ, ಇಲ್ಲಿಯ ಅಧಿಕಾರವಂ ಮಾಡುವರ್ಗೆ ಅಪಮಾನಂಗೊಳಿಸಿ, ಅವರ ಅಧಿಕಾರಗಳಂ ನಾನು ಬದಲುಮಾಡಿದವನಲ್ಲ. ದೇಶಾಂತರದ ಜನಗಳಿಗೆ ಹೆಚ್ಚು ಸ್ವಾತಂತ್ರ್ಯವಂ ಕೊಟ್ಟವನಲ್ಲ. ಪಿಶುನವಾಕ್ಯವಂ ಕಿವಿಗೆ ತಂದವನಲ್ಲ. ಚೋರರಂ ನಿಗ್ರಹಿಸದೆ ಉಪೇಕ್ಷಿಸಿದವನಲ್ಲ. ಗೂಢದಸ್ಯುಗಳಾದ ಗಣಕರ ಲೆಕ್ಕನೈಪುಣ್ಯಕ್ಕೆ ಆಸ್ಪದವಂ ಕೊಟ್ಟವನಲ್ಲ. ಪರಭೃತ್ಯರಾದ ಗೂಢಮಂತ್ರಿಗಳು ಈ ಪ್ರಭು ಪರಂಪರೆಯಲ್ಲಿ ಉಂಟಾದುದಿಲ್ಲ. ಭೃತ್ಯರ್ಗೆ ಸಂಬಳ ಹೊರತು ಹೆಚ್ಚುಲಾಭಕ್ಕೆ ಮಾರ್ಗವಿಲ್ಲ. ನಮ್ಮ ಪ್ರಭುಗಳಿಗಿಂತಧಿಕರು ಈ ಲೋಕದಲ್ಲೇ ಕಾಣೆಸಲಿಲ್ಲ. ನಾನು ಬ್ರಾಹ್ಮಣನಾಗಿ ಮಂತ್ರಿಯಾದುದರಿಂದ ವರ್ಣಾಶ್ರಮಧರ್ಮವ್ಯತ್ಯಾಸವಿನ್ನೂ ಸಂಭವಿಸಲಿಲ್ಲ. ಇಲ್ಲಿಯ ಮರ್ಮಜ್ಞರಂ ಕೆಣಕಿ ಭಯ ವಿಶ್ವಾಸವಂ ತಪ್ಪಿಸಿಕೊಂಡವನಲ್ಲ. ಯಾವ ಕಾರಣದಿಂ ಶತ್ರುಗಳು ನಮ್ಮ ಮೇಲೆ ದಂಡೆತ್ತಿ ಬಂದಿರುವರು ? ಅದರ ಸೂಕ್ಷ್ಮವು ನಿನಗೆ ತಿಳಿದರೆ ಹೇಳುವನಾಗು" ಎಂದು ರಾಕ್ಷಸನು ಸುಮತಿಯೆಂಬ ಮಂತ್ರಿಯಂ ಕೇಳಲು, ಆ ಮಾತಿಗೆ,

"ಸ್ವಾಮಿ ಅಮಾತ್ಯರೆ, ತಾವು ಹೇಳಿದುದೆಲ್ಲವೂ ಯುಕ್ತವೇ ಅಹುದು. ನಮ್ಮ ಅರಸುಗಳು ಸಕಲದರಲ್ಲಿಯೂ ಸಂಪನ್ನರಾದುದರಿಂದ, ಶತ್ರುಗಳು ಇಟ್ಟಣಿಕಿ ನೋಡುವದಕ್ಕೆ ಅವಕಾಶವಾಗದಿದ್ದರೂ 'ಅನುಚಿತ ಕರ್ಮಾರಂಭಃ ಸ್ವಜನವಿರೋಧೋ ಬಲೀಯಸೀ

ಸ್ಪರ್ಧಾ' ಎಂಬ ರೀತಿಯಲ್ಲಿ ಸ್ವಜನವು ಶತ್ರುಗಳನ್ನಾಶ್ರಯಿಸಿ ಇದ್ದರೆ, ಈ ಅಸಂಗತ ಸಂಭವಿಸಿದರೂ ಸಂಭವಿಸಬಹುದು. ಹ್ಯಾಗೆಂದರೆ, ಮೌರ್ಯಪುತ್ರನಾದ ಚಂದ್ರಗುಪ್ತನು ಮೊದಲು ಕಾರಾಗೃಹದಿಂದ ಮುಕ್ತನಾಗಿ, ಸತ್ರಾಧಿಕಾರವಂ ನೋಡುತ್ತ, ನಂದರಲ್ಲಿ ಮತ್ಸರವುಳ್ಳವನಾಗಿ, ಸತ್ರದಿಂ ಹೊರಟು ಹೋದ ಬಳಿಕ, ಈ ಶತ್ರುಗಳ ವರ್ತಮಾನ ಉಂಟಾದುದರಿಂದ ಆತನು ಪರರಾಯರನ್ನಾಶ್ರಯಿಸಿ ಇರಬೇಕು. ಇದೇ ಸ್ವಜನವಿರೋಧ ವೆಂಬ ದೋಷವು. ಇದು ಹೊರತು ಆತನು ಹೊರಟು ಹೋಗುವದಕ್ಕೆ ಮುಂಚಿತ ವಾಗಿಯೇ ಒಬ್ಬ ಬ್ರಾಹ್ಮಣೋತ್ತಮನು ಸತ್ರದಲ್ಲಿ ಇದ್ದ ನಂದರಿಂದ ನಿರಾಕೃತನಾಗಿ, ಕ್ರುದ್ಧನಾಗಿ, ಶಿಖೆಯಂ ಬಿಚ್ಚಿಕೊಂಡು ತೀಕ್ಷ್ಣಪ್ರತಿಜ್ಞೆಯಂ ಮಾಡಿ ಹೋಗುವ ಸಮಯ ದಲ್ಲಿಯೇ ಮಹೋತ್ಪಾತಗಳಾದವಂತೆ. ಅದರಿಂದ ಆತನು ಮಹಾತೇಜಸ್ವಿಯೆನ್ನಬೇಕು. ಬ್ರಾಹ್ಮ್ಯತೇಜಸ್ಸು ಕ್ಷಾತ್ರತೇಜಸ್ಸಂ ತಿರಸ್ಕರಿಸುವದೆಂಬರ್ಥವು ಪುರಾಣಪ್ರಸಿದ್ಧವು. ಅದರಿಂ 'ಬಲೀಯಸಿ ಸ್ಪರ್ಧಾ'ಎಂಬ ದೋಷವುಂಟಾದಂತಾಯಿತು. ಮತ್ತು ಪ್ರಜಾಸಮ್ಮತರಾದ ಮೌರ್ಯರಿಗೆ ಅಕಾರಣವಧೆ ಆದುದರಿಂದ, ಇದೇ 'ಅನುಚಿತ ಕರ್ಮಾ[ರಂಭ]'ವೆಂಬ ದೋಷವುಂಟಾದಂತಾಯಿತು. ಹೀಗೆ ಪ್ರಬಲವಾದ ದೋಷತ್ರಯದಿಂದ ದುರ್ಬಲವಾದ ಗುಣಗಳೆಲ್ಲವೂ ತಿರೋಧಾನವಾಗುವವು. ಇದರಿಂ ಶತ್ರುಗಳಾಗಮನ ಉಂಟಾಯಿತೆಂದು ಹೇಳಬೇಕು" ಎಂದು ಸುಮತಿ ಹೇಳುತ್ತಿರಲು, ಆ ಮಾತಿಗೆ ರಾಕ್ಷಸನು,

"ಅಯ್ಯ ಸುಮತಿಯೇ, 'ವಿಧಿವಿಹಿತಂ ಬುದ್ಧಿರನುಸರತಿ' ಎಂಬ ರೀತಿಗೆ ಪ್ರಾಣಿಗಳ ಸಂಪದಾಪತ್ತುಗಳಿಗೆ ದೈವಬಲವೇ ಕಾರಣವು. ಅದಂ ಮೀರುವರು ಯಾರು ?" ಎಂದು ಹೇಳಿ, ಸುಮತಿಯಂ ಕಳುಹಿಸಿ, ರಾಕ್ಷಸನು ಸ್ನಾನಗೃಹಕ್ಕಭಿಮುಖನಾಗಲು,

ಆ ದಿನ ಸಾಯಂಕಾಲದಲ್ಲಿ ಮತ್ತೊಬ್ಬ ಚಾರನು ಬಂದು, "ಸ್ವಾಮಿ ಅಮಾತ್ಯರೇ, ನಮ್ಮ ಹೊನ್ನಗಟ್ಟದಲ್ಲಿಯಿಂದ ಮದಗಜಸಮೂಹವಂ ನೆನ್ನೆ ಬುಧವಾರ ರಾತ್ರಿಯಲ್ಲಿ ಕುಲೂತಪತಿ ಭಟರು ನಿದ್ರೆಗೈವ ಮಾವುತರಂ ಛೇದಿಸಿ ಹಿಡಿದುಕೊಂಡು ಹೋದ ವರ್ತ ಮಾನವಂ ತಂದ, ಘಾಯವಡೆದ, ಮಾವುತನಿವನೆಂ"ದು ತೋರಿಸಲು, ಅದಂ ನೋಡಿ, "ಒಳ್ಳೆಯದು, ಆ ಶತ್ರುಗಳಂ ನಿಗ್ರಹಿಸಿ ಎಂದಿನಂತೆ ಗಜಸಮೂಹವಂ ತರಿಸುವೆವು ; ಹೋಗೆಂ"ದು ಅವರಂ ಕಳುಹಿಸಿ, ಪುನಃ ರಾಕ್ಷಸನು ಯೋಚಿಸುತ್ತಿದ್ದನು :

"ಮೊದಲು ಮೌರ್ಯನಿಂದ ಪ್ರಸಿದ್ಧಿಯಂ ಪಡೆದು ಈಗ ಪ್ರಮುಖರಾದವರು ಮೊದಲಿ ಗಿಂತ ಅಧಿಕರಾದೇವೆಂಬ ಚಾಪಲ್ಯದಿಂದ ಮೌರ್ಯಪುತ್ರನಾದ ಚಂದ್ರಗುಪ್ತನಲ್ಲಿ ಅನುರಕ್ತ ರಾಗಿ, ಅವನಂ ಪ್ರೋತ್ಸಾಹಪಡಿಸಿ, ತಾವು ಮಾಡುವ ಸಹಾಯವಂ ತಿಳುಹಿಸಿ, ಪರರಾಯ ರಲ್ಲಿ ಕಳುಹಿ ಇದ್ದರೆ, ಆ ಭರವಸದಿಂದ ತನಗೆ ಜಯವಾದೀತೆಂದು ತಿಳಿದು ಪರ್ವತ ರಾಯನಂ ಒಡಂಬಡಿಸಿದ ಕಾರಣದಿಂದ ಆತನು ಈ ಅಕಾರ್ಯಕ್ಕೆ ಒಡಂಬಟ್ಟು ಇದ್ದಾನು. ಅರಸುಗಳಿಗೆ ಮಹಾಲಾಭಭ್ರಾಂತಿ ಉಂಟಾದರೆ ಸಖ್ಯವನ್ನಾಗಲಿ ಸತ್ಯವನ್ನಾಗಲಿ ದಾಕ್ಷಿಣ್ಯ ವನ್ನಾಗಲಿ ತ್ಯಜಿಸುವರೆಂಬುದು ಈ ಕಲಿಯುಗ ಧರ್ಮವು, ಗೊತ್ತಾದ ವರ್ತಮಾನವಂ ತಿಳಿಯುವದಕ್ಕೆ ಮುಂಚಿತವಾಗಿ ಹೀಗೆಂದು ಯಾವದಂ ನಿಶ್ಚೈಸಕೂಡದು. ಇದರ ಪ್ರತೀ ಕಾರಯತ್ನವಂ ಸಹ ಮಾಡಕೂಡದು" ಎಂದು ರಾಕ್ಷಸನು ಯೋಚಿಸುತ್ತಿರಲು,

ಅಷ್ಟರಲ್ಲಿಯೇ ಮತ್ತೊಬ್ಬ ಚಾರನು ಬಂದು, "ಸ್ವಾಮಿ ಅಮಾತ್ಯರೆ, ನಮ್ಮ ಸರಯೂ

ತೀರದ ಸುರಭಿವಾಟಿಯಲ್ಲಿದ್ದ ಗೋಲಕ್ಷಗಳಂ ಗಾಂಧಾರಪತಿಯ ಸೇನೆ ಬಂದು ಹಿಡಿದು, ಗೋಪರಂ ಪ್ರಹರಿಸಿ, ಸುಂದರವತಿಯರಾದ ಅವರ ಸ್ತ್ರೀ[ಯ]ರುಗಳಂ ಸಹಿತ ಕೊಂಡು ಹೋದ ವರ್ತಮಾನವಂ ನನಗೆ ಭಾವನಾದ ಈ ಚಾರನು ತಿಳಿದು ಬಂದನು" ಎಂದು ಹೇಳಲು, ಅದಂ ಕೇಳಿ, "ನಮಗೆ ತಿಳಿದು ಇದೆ, ಹೋಗಿರಿ" ಎಂದು ಅವರಂ ಕಳುಹಿಸಿ, "ರಾಜಕಾರ್ಯ ಪ್ರಬಲವಾಗಿ ಇದೆ, ಇದರ ಮೂಲಾನುಮೂಲವಂ ತಿಳಿಯದೆ ಅರಸುಗಳಿಗೆ ತಿಳುಹಿಸಕೂಡದು" ಎಂದು ನಿಶ್ಚೈಸುತ್ತಿರಲು,

ಆ ಮರುದಿವಸ ಮತ್ತೊಬ್ಬ ಚಾರನು ಬಂದು, "ಸ್ವಾಮಿ, ನಮ್ಮ ಚಂಪಕಾವತಿಯು ಯುದ್ಧಕ್ಕೆ ಸಾಧ್ಯವಾಗದಿರಲು, ಮಗಧಪತಿಯ ಸೇನೆಯು ಯುದ್ಧವಂ ಮಾಡುವರಂತೆ ತೋರುತ್ತ, ಸುರಂಗವಂ ಹಾಕಿ, ಪ್ರಾಕಾರವಂ ಕೆಡಹಿ, ಒಳಹೊಕ್ಕು ಸೂರೆಯಂ ಮಾಡುತ್ತ, ಅಲ್ಲಿದ್ದ ಜಿನಶಾಂತನ ಪುತ್ರಿಯಂ ಬಿಡಲಾರದೆ ಮಗಧಪತಿ ತಾನೇ ಪರಿಗ್ರಹಿಸಿದನಂತೆ" ಎಂದು ಹೇಳಲು, ಆ ಮಾತಿಗೆ "ಮೊದಲು ನಮ್ಮಿಂದ ಪರಾಜಿತನಾಗಿ ಔತ್ತರೇಯರಂ ಸೇರಿ ಇದ್ದ ಮಗಧಪತಿಯು ಅಲ್ಲಿಯ ಮರ್ಮಜ್ಞನಾದುದರಿಂದ, ಈ ಕಾರ್ಯವಂ ಮಾಡಿ ಇದ್ದಾನು ; ಅವನ ದೇಶವು ನಮ್ಮ ವಶವಾಗಿ ಇರುವದಾದರೂ, ಮಗಧಪತಿಯೆಂಬ ಆಖ್ಯೆ ತಪ್ಪದು. ಅವನ ಜ್ಞಾತಿಯಾದ ರುದ್ರವರ್ಮಣನಂ ಕಳುಹಿಸಿ, ಅವನಂ ಹಿಡಿತರಿಸುವೆನೆಂ"ದು ಹೇಳಲು,

ಆಗಲೇ ಮತ್ತೊಬ್ಬ ದೂತನು ಬಂದು, "ಸ್ವಾಮಿ, ನಮ್ಮ ಶೃಂಗಾರಪಾಳ್ಯವಂ ರಾಜ ಬೀಜೋತ್ಪನ್ನನಾದ ಸೌರಂಭನಿಗೆ ಕೊಟ್ಟು, ಕಾರ್ಯವನ್ನು ನೋಡುವಂತೆ ನೇಮಿಸಿ ಇದ್ದುದಕ್ಕೆ, ಆತನು ಹೂಣರಂ ಕರೆಸಿ, ಆ ಗಡಿದುರ್ಗಗಳಂ ಅವರ ವಶವಂ ಮಾಡಿ, ಅವರ ಮುಖದಿಂದಲೇ ಅಲ್ಲಿಯ ಅಧಿಕಾರವಂ ಕೈಕೊಂಡನಂತೆ. ಸ್ವಜನನೆಂದು ಸಂರಕ್ಷಿಸಿದ್ದಕ್ಕೆ ಸ್ವಾಮಿದ್ರೋಹವಂ ಮಾಡಿದನು" ಎನಲು, ಆ ಮಾತಿಗೆ, "ಆ ಸೌರಂಭನು ಚಂದ್ರಗುಪ್ತನ ಭಾ[ವ]ಮೈದುನನಾದುದರಿಂದ ಆತನ ಅಭ್ಯುದಯವಂ ಕೇಳಿ, ಹೀಗೆ ಮಾಡಿ ಇದ್ದಾನು. ಆ ಚಂದ್ರಗುಪ್ತನ ಮಾತೃ ಪತ್ನೀರು ಅವನ ವಶದಲ್ಲಿಯೇ ಇದ್ದಾರು. ಒಳ್ಳೆಯದು. ಎಲ್ಲಿ ಹೋದಾನು" ಎಂದು ಹೇಳುತ್ತಿರುವ ಸಮಯದಲ್ಲಿ,

ತುರಗಾರೂಢರಾಗಿ, ಒಣಗಿದ ಕಂಠದೇಶವುಳ್ಳವರಾಗಿ, ಅತಿವೇಗದಿಂ ಆಯುಧರಹಿತರಾಗಿ ಬರುವ ಚಾರರಂ ಕಂಡು, ಪುರದ್ವಾರದವರು ತಡೆಯಲು, ಕೈಸನ್ನೆಗಳಿಂ ಸೂಚಿಸುತ್ತ ಓಡಿ ಬಂದು, ರಾಕ್ಷಸನ ಎದುರಿನಲ್ಲಿ ಕುದುರೆಯನ್ನಿಳಿದು, ನೆಲದಲ್ಲಿ ಜಲವೆಂದು ಬರೆದು ಮೂರ್ಛಿತರಾಗಲು, ಅದಂ ನೋಡಿ ಅಲ್ಲಿಯ ದೂತರು ಮೇಲೆ ನೀರುಗಳಂ ತಳಿದು, ಪಾನವಂ ಮಾಡಿಸಿ, ಮತ್ತೆ ಕೆಲವು ಹೊತ್ತಿನ ಮೇಲೆ ಚೇತರಿಸಿದ ಬಳಿಕ,

"ಬುದ್ಧೀ ಅಮಾತ್ಯರೆ, ನಾವು ಪರ್ವತದೇಶಾದಿ ದೇಶಗಳಿಗೆ ಹೋಗಿದ್ದ ಚಾರರು. ರಹಸ್ಯವಾದರೆ ವಿಜ್ಞಾಪಿಸತಕ್ಕ ರಾಜಕಾರ್ಯವುಂಟು" ಎನಲು, ಹಾಗೇ ರಹಸ್ಯದಲ್ಲಿ ಕರೆದು, "ಎಲೈ ಚಾರರುಗಳಿರಾ, ನಿಮಗೆ ಇಷ್ಟು ಆಯಾಸವೇನು ? ತ್ವರಿತದಿಂ ಎಲ್ಲಿಂದ ಬಂದಿರಿ?" ಎನಲು, "ಸ್ವಾಮಿ, ನಾವು ಶತ್ರುಗಳ ದಂಡಿನಿಂದ ಹೊರಟು ಹನ್ನೆರಡು ದಿವಸವಾಯಿತು. ಎಂಟು ಹೊತ್ತು ಆಹಾರವು, ಹದಿನೈದು ಹೊತ್ತು ಜಲಪಾನ ದೊರಕಿ ಇದೆ. ನಿದ್ರೆಗೆ ಅವಕಾಶವಿಲ್ಲ. ದಿನ ಒಂದಕ್ಕೆ ಎಂಟು ಗಾವುದ ಅಹೋರಾತ್ರಿ ಪ್ರಯಾಣವು. ಸ್ವಾಮಿ

ಯವರ ಅನ್ನಪ್ರಭಾವದಿಂದ ಸನ್ನಿಧಿಗೆ ಬಂದೆವಲ್ಲದೆ ಮನುಷ್ಯಯತ್ನವಂ ಕಾಣೆವು."

"ಎಲೈ ಚಾರರುಗಳಿರಾ, ಶತ್ರುಗಳೆಂದರೇನು ? ಈ ಆತಂಕವೇನೆಂ"ದೆನಲು, "ಬುದ್ಧೀ, ಸತ್ಯವಾಗಿ ಹೇಳುತ್ತಲಿದ್ದೇವೆ. ಪರ್ವತದೇಶಾಧಿಪತಿಯು ತನಗೆ ವಶವರ್ತಿಗಳಾದ ಬಹು ಮಂದಿ ಸಾಮಂತರಾಯರಿಂ ಕೂಡಿ, ಅಪರಿಮಿತ ಸೇನಾಸಮೇತನಾಗಿ, ನಂದರ ಮೇಲೆ ಕಾರ್ಯಭಾಗಕ್ಕೆ ಸನ್ನದ್ಧನಾಗಿ, ಅಘನಾಶಿನೀ ತೀರದಲ್ಲಿ ಬಂದು ಇಳಿದು ಇದ್ದಾನೆ. ಅವರ ಕಡೆ ತುಂಟಪಾಳ್ಯಗಾರರು ನಮ್ಮ ದೇಶದ ಗಡಿದುರ್ಗಗಳಂ ಹಿಡಿಯುತ್ತ, ಸಂಧ್ಯಾತಮೋ ನಿಕರದಂತೆ ಆಕ್ರಮಿಸಿಕೊಂಡು ಬರುತ್ತಲಿದ್ದಾರೆ. ನಾವು ಕಣ್ಣಾರಾ ಕಂಡದ್ದು" ಎನಲು,

"ಎಲೈ ಚಾರರುಗಳಿರಾ, 'ಪರ್ವತಾಧಿಪತಿಗೂ ಲಂಪಾಕಪತಿಗೂ ಮನಸ್ತಾಪ ಹೆಚ್ಚಿ ಅವರಿರ್ವರೂ ಯುದ್ಧಸನ್ನದ್ಧರಾಗಿ ಇದ್ದಾರೆ' ಎಂದು ನಾವು ಕರ್ಣಾಕರ್ಣಿಕೆಯಾಗಿ ಕೇಳಿದ್ದುಂಟು. ಅದು ಮೃಷಾವರ್ತಮಾನವಾಗಿ ಇದ್ದೀತು" ಎನಲು,

"ಸ್ವಾಮಿ, ಆ ಅರ್ಥವು ಅನೃತವಲ್ಲ. ಲಂಪಾಕಪತಿಯ ಮೇಲೆ ಕಾರ್ಯಭಾಗಕ್ಕೆ ಪರ್ವತೇಶ್ವರನ ಸೇನಾಪ್ರಯಾಣವಾಗಿ ಇದ್ದದ್ದು ನಿಶ್ಚಯವೇ ಸರಿ. ಇಷ್ಟರಲ್ಲಿಯೇ ನಂದರಿಗೆ ಜ್ಞಾತಿಯಾಗಿ, ಮೌರ್ಯನಿಗೆ ಪುತ್ರನಾದ ಚಂದ್ರಗುಪ್ತನು, ಶಿಖೆಯಂ ಬಿಚ್ಚಿಕೊಂಡು ಇರುವ ಒಬ್ಬ ಬ್ರಾಹ್ಮಣಸಮೇತನಾಗಿ, ಪರ್ವತರಾಜ್ಯದ ಶಾಹುರೀ ನಗರಕ್ಕೆ ಬಂದು, ಆ ಪರ್ವತೇಶ್ವರನಂ ಕಂಡು, ಸಮ್ಮಾನಿತನಾಗಿ, ಬಿಡಾರವಂ ಹೊಂದಿ ಇರಲು, ಮತ್ತೊಂದು ದಿವಸ ಪರ್ವತರಾಯನ ನಿಯೋಗಿಯು ಚಂದ್ರಗುಪ್ತನ ಸಮೀಪಕ್ಕೆ ಬಂದಿದ್ದು, ಹಾಗೇ ಕಾಮರೂಪದೇಶಕ್ಕೆ ಹೋಗಿ, ಮತ್ತೆ ಕೆಲವು ದಿವಸದ ಮೇಲೆ ಪುನಃ ಪರ್ವತರಾಜ್ಯದ ಆಸ್ಥಾನಕ್ಕೆ ಬಂದು ತಲುಪಿದನು.

ಆಗಲೇ ಆ ರಾಯನು ಚಂದ್ರಗುಪ್ತನ ಸಂಗಡ ಬಂದು ಇದ್ದ ಚಾಣಿಕ್ಯನೆಂಬ ಆ ಬ್ರಾಹ್ಮಣನಂ ಕರೆಕಳುಹಿಸಿ, ಸಮ್ಮಾನವಂ ಮಾಡಿಸಿ, ಆತನಂ ಬಿಡಾರಕ್ಕೆ ಕಳುಹಿಸಲು, ಇಲ್ಲಿ ನಿಯೋಗಿಯು ಕಾಮರೂಪದೇಶಕ್ಕೆ ಹೋದ ಬಳಿಕ, 'ಕಾಮರೂಪದೇಶಾಧಿಪತಿಗೆ ಲಂಪಾಕಪತಿಯಲ್ಲಿ ಮಹಾಕ್ರೋಧವುಂಟಾಗಿ, ಅವನ ಮೇಲೆ ಕಾರ್ಯಭಾಗಕ್ಕೆ ಸೇನಾಸಮೇತನಾಗಿ ಕಾಮರೂಪಾಧಿಪತಿಯು ಲಂಪಾಕದೇಶಕ್ಕೆ ಹೋದನಂತೆ' ಎಂದು ಪ್ರಸಿದ್ಧವಾಗಿ, ಅಲ್ಲಿ ಪುರದ ಜನರೆಲ್ಲರೂ ಹೇಳಿಕೊಳ್ಳುತ್ತಿದ್ದರು.

ಆ ರಾತ್ರಿಯಲ್ಲೇ ಆ ರಾಯನ ಪುತ್ರನಾದ ಮಲಯಕೇತುವೆಂಬ ಕುಮಾರಕನು ಚಂದ್ರಗುಪ್ತ ಇಳಿದಿದ್ದ ಬಿಡಾರಕ್ಕೆ ಬಂದಿದ್ದು, ಪುನಃ ತಮ್ಮ ತಂದೆ ಬಳಿಗೆ ಹೋಗಲು, ಆ ಮಾರನೇ ದಿವಸವೇ ಲಂಪಾಕಪತಿಯ ದೇಶಕ್ಕೆ ಪ್ರಯಾಣವಾಗಿ ಇದ್ದ ಸೇನೆಯು ಸಹ ಕೂಡಿ, ಮತ್ತೆ ಬಹುಸೇನಾಸಮೇತನಾಗಿ ಹೊರಟು, ಆ ರಾಯನು ಹೊರಡಲು, ಆತನ ಸಾಮಂತನರಪತಿಗಳು ಗಜಾರೂಢನಾದ ಚಂದ್ರಗುಪ್ತನಂ ಓಲೈಸುತ್ತಾ ಬರುತ್ತಿರಲು, ಮಲಯಕೇತುವೆಂಬ ಕುಮಾರಕನು ವಿರೋಚನನೆಂಬ ತಮ್ಮನ ಸಮೇತವಾಗಿ ಆಂದೋಳಿಕಾರೂಢನಾದ ಚಾಣಿಕ್ಯನು ಸಹ ಎಲ್ಲರೂ ಬಂದು, ಅಘನಾಶಿನೀ ತೀರದಲ್ಲಿ ಬಂದು ಇಳಿದಿರಲು, ನಾವು ವೇಷಾಂತರವಂ ಧರಿಸಿ ಆ ಸೇನೆಗಳಂ ನೋಡುತ್ತ ಬರುವಲ್ಲಿ, ಅಲ್ಲಿಯ ಬೇಹುಗಾರರು ನಮ್ಮ ಕಪಟವಂ ತಿಳಿದು, ಹಿಡಿದು, ಚಂದ್ರಗುಪ್ತನ ಸಮೀಪಕ್ಕೆ ಕರೆದುಕೊಂಡು ಹೋಗಲು, ಆತನು ದಯಾಳುವಾದುದರಿಂದ 'ಕಶೆಯಿಂದ ಪ್ರಹರಿಸಿ,

ಸೇನೆಗಳೆಲ್ಲವಂ ತೋರಿಸಿ, ಹೊರಡಿಸಿ ಬಿಡಿ' ಎಂದು ನೇಮಿಸಲು, ಆ ದೂತರು ಅಹೋರಾತ್ರಿ ಏಳುದಿನ ದಂಡಿನಲ್ಲಿ ಸುತ್ತಿಸಿ ಪ್ರಹರಿಸಿ ಬಿಡಲು, ಪ್ರಾಣಸಮೇತರಾಗಿ ತ್ವರಿತದಿಂ ಬಂದು ವಿಜ್ಞಾಪಿಸಿದೆವು. ಶತ್ರುಗಳ ಸೇನೆ ಅಪರಿಮಿತವಾಗಿ ಇರುವದರಿಂದ ನಮ್ಮ ದೇಶಕ್ಕೆ ಮಹಾ ಆತಂಕ ಸಂಭವಿಸಿದಂತೆ ತೋರುತ್ತೆ. ನಾವು ನೋಡಿದ ಮಟ್ಟಿಗೆ ಆ ಸೇನೆಗಳಂ ವಿವರಿಸುತ್ತ ಇದ್ದೇವೆ.

ಪರ್ವತೇಶ್ವರನಿಗೆ ವಶವರ್ತಿಗಳಾದ ಅರಸುಗಳ ಸೇನೆಗಳಲ್ಲಿ ಕುಲೂತಪತಿ ಚಿತ್ರವರ್ಮನ ಸೇನೆಯು ಮೂರು ಲಕ್ಷವು. ಮಲಯಪತಿ ಸಿಂಹನಾದನ ಅನೀಕವು ಎರಡು ಲಕ್ಷ. ಕಾಶ್ಮೀರಪತಿ ಪುಷ್ಕರಾಕ್ಷನ ಚತುರಂಗವು ನಾಲ್ಕು ಲಕ್ಷ. ಸಿಂಧುಪತಿ ಸಿಂಧುಷೇಣನ ಬಲ ಮೂರು ಲಕ್ಷ. ಪಾರಶೀಕಪತಿ ಮೇಘನಾದನ ಅನೀಕವು ನಾಲ್ಕು ಲಕ್ಷ. ಮಗಧಪತಿ ವಾಹಿನಿಯು ಐವತ್ತುಸಾವಿರ. ಗಾಂಧಾರಪತಿಚಮುವು ನಾಲ್ಕು ಲಕ್ಷ. ಶಕಸೇನೆಯು ಎರಡು ಲಕ್ಷ. ಚೀಣರದು ಒಂದು ಲಕ್ಷ. ಹೂಣರದು ಒಂದು ಲಕ್ಷ. ಕಿರಾತರದು ಮೂರು ಲಕ್ಷ. ಪಾರ್ವತೇಯನ ಸೇನೆ ಶೇಖರನದು ಸಹ ಒಂಬತ್ತು ಲಕ್ಷ. ಈ ಸೇನಾಸಮೇತನಾಗಿ ಪ್ರಳಯಕಾಲದ ಭೂತಗಳ ಹಿಂಡು ಬಿಡಿಸಿಕೊಂಡು ಪ್ರಪಂಚವಂ ಕ್ಷೋಭೆಪಡಿಸುವಂತೆ ಪರ್ವತರಾಯನು ಪಾಟಲೀಪುರಾಭಿಮುಖನಾಗಿ ಬರುತ್ತಲಿದ್ದಾನೆ. ಚಿತ್ತಕ್ಕೆ ತಿಳಿದು ಇರಬೇಕು"

ಎಂದು ಚಾರರು ವಿಜ್ಞಾಪಿಸಲು, ಅದಂ ಕೇಳಿ, ರಾಕ್ಷಸನು ತನ್ನ ಮನಸ್ಸಿನಲ್ಲಿ, "ಅಕಟಕಟಾ, ಮೌರ್ಯರಂ ನಿಗ್ರಹಿಸಿ ತಾವು ಸುಖಿಯಾಗಬೇಕೆಂದು ನಿಶ್ಚೈಸಿ ಇದ್ದ ನಂದರಿಗೆ, ಚಂದ್ರಗುಪ್ತನೆಂಬವ ಒಬ್ಬ ದೈವಯೋಗದಿಂದುಳಿದು, ಶತ್ರುಶೇಷನಾಗಿ, ಅಗ್ನಿಗೆ ವಾಯು ಸಹಾಯವಾದಂತೆ, ಆತನಿಗೆ ದಕ್ಷನಾದ ಬ್ರಾಹ್ಮಣನು ಸಹಾಯವಾಗಲು, ಪರ್ವತರಾಯನಂ ಒಡಂಬಡಿಸಿ, ನಂದರ ಮೇಲೆ ದಂಡೆತ್ತಿ ಬರುವನೆಂಬುದು ದೈವಸಂಕಲ್ಪವೇ ಹೊರತು ಮನುಷ್ಯಪ್ರಯತ್ನವಲ್ಲವೆಂದು ತೋರುತ್ತೆ. ಹೀಗಾದರೂ ಈ ಚಾರರು ಹೇಳಿದ ಮಾತುಗಳಿಗೆ ಸಮನ್ವಯಿಸಿ ನೋಡಿದರೆ, ಚಾಣಕ್ಯನು ತನ್ನ ಕಾರ್ಯಕ್ಕೋಸುಗ ಪರ್ವತೇಶ್ವರನ ಮೇಲೆ ದಂಡೆತ್ತಿ ಬರುತ್ತಿರುವ ಲಂಪಾಕಪತಿಗೂ ತಟಸ್ಥನಾಗಿ ಇದ್ದ ಕಾಮರೂಪಾಧಿಪತಿಗೂ ಇಲ್ಲದ ವೈರವಂ ತಂದು ಗಂಟಿಕ್ಕಿ, ಪರ್ವತೇಶ್ವರನ ಮೇಲೆ ಬಂದ ರಾಜಕಾರ್ಯವಂ ಅನ್ಯತ್ರ ಪರ್ಯವಸಾನಗೊಳಿಸಿ, ಇನ್ನೂ ಏನೋ ಬಹು ಆಶೆಯನ್ನುಂಟುಮಾಡಿ ಕರೆತಂದು ಇದ್ದಾನು. ಇದೆಲ್ಲವೂ ಆತನ ಸಾಹಸವಾಗಿ ಇದ್ದೀತು. ಹೀಗಾದರೆ, ನಮ್ಮ ಸುಮತಿ ಹೇಳಿದಂತೆ ನಂದರಿಗೆ ಬಲವದ್ವಿರೋಧವು ಸಹ ಉಂಟಾದಂತಾಯಿತು. ಇದಕ್ಕಿಂತ ಅಧಿಕವಾದ ಪ್ರಯತ್ನವಂ ನಾವು ಮಾಡಿದ ಬಳಿಕ ನಂದರ ಅದೃಷ್ಟವೆಂತಿರುವದೋ" ಎಂದು ಮುಹೂರ್ತಮಾತ್ರ ಚಿಂತಿಸಿ, "ಎಲೈ ಚಾರರುಗಳಿರಾ, ಈ ಅರ್ಥವೆಲ್ಲವಂ ಪ್ರಭುಗಳಾದ ನಂದರ ಸನ್ನಿಧಿಯಲ್ಲಿ ನೀವೇ ವಿಜ್ಞಾಪಿಸಿರಿ" ಎಂದು ಹೇಳಿ ಕಳುಹಿಸಿ,

ಆ ಬಳಿಕ ರಾಯಸದವರಂ ಕರೆಕಳುಹಿಸಿ, ದಕ್ಷಿಣದೇಶದಲ್ಲಿ ಇರುವ ತಮ್ಮ ಸೇನೆಗಳಂ ತ್ವರಿತದಿಂ ಬರುವಂತೆ ಬರೆಸಿ ಕಳುಹಿಸಿ, ಆ ಬಳಿಕ ರಾಯಸದವರಂ ಕುರಿತು, "ದಶಾರ್ಣದೇಶಾಧಿಪತಿಗೂ ಶೂರಸೇನಾಧಿಪತಿಗೂ ನಮ್ಮ ಹೆಸರಿನಿಂದ ಬರೆ[ಯ]ತಕ್ಕುದು" :

"ಮೊದಲು ನಿಮಗೂ ಪರ್ವತದೇಶಾಧಿಪತಿಗೂ ಪರಸ್ಪರಕಲಹ ಪ್ರಸಕ್ತವಾಗಲು, ನೀವು

ನಮ್ಮಂ ಸಹಾಯಕ್ಕೆ ಬರಬೇಕೆಂದು ಪ್ರಾರ್ಥಿಸಿ ಕಳುಹಿ[ಸಿ]ದ ಸಮಯದಲ್ಲಿ, ನಾವು ನೋಡಿ, ನಿಮಗೆ ತಿಳುಹಿಸತಕ್ಕ ಅರ್ಥವಂ ತಿಳುಹಿಸಿ, ಆ ಪರ್ವತರಾಯನಿಗೆ ಹ್ಯಾಗೆ ಹೇಳಬೇಕೋ ಆ ಮೇರೆ ಹೇಳಿ ಕಳುಹಿಸಿ, ಆಗ ಆಗುವ ಮಹಾಕಲಹವಂ ಶಮನವಂ ಮಾಡಿಸಿ, ಆ ಪರ್ವತಾಧಿಪತಿಗೆ ಒದಗಿದ್ದ ವಿಪತ್ತಂ ತಪ್ಪಿಸಿದ ಪ್ರತ್ಯುಪಕಾರಕ್ಕೆ ನಮ್ಮ ಮೇಲೆ ದಂಡೆತ್ತಿ ಬರುತ್ತಲಿದ್ದಾನೆ. ಕೃತಘ್ನನಾದ ಆ ಪರ್ವತಾಧಿಪತಿಯಂ ಹಿಂತಿರುಗ ಲೀಸದೆ, ಸೇನಾಸಮೇತವಾಗಿ ಧ್ವಂಸಮಂ ಮಾಡುತ್ತಲಿದ್ದೇವೆ. ಈ ವೇಳೆಯಲ್ಲಿ ನೀವು ನಮಗೆ ಪರಮಪ್ರಿಯರಾದುದು ಸತ್ಯವಾದರೆ, ಇದೇ ಸಮಯದಲ್ಲಿ ನೀವು ಸೇನಾ ಸಮೇತರಾಗಿ ಪರ್ವತದೇಶಕ್ಕೆ ಹೋಗಿ ಅಲ್ಲಿಯ ಗಡಿದುರ್ಗಗಳಂ ಹಿಡಿಯುತ್ತ, ಅಲ್ಲಿದ್ದ ಸೇನೆ ಇಲ್ಲಿಗೆ ಬರದಂತೆ ಯುದ್ಧವಂ ಮಾಡುತ್ತ, ಆ ಶಾಹುರೀನಗರವಂ ನೀವು ಸಾಧಿಸಿಕೊಂಡರೆ, ಆ ದೇಶಕೋಶವೆಲ್ಲವೂ ನಿಮಗೆ ಕೊಟ್ಟು ಇರುವದು" ಎಂದು ಹೇಳಿ ಕಾಗ[ದ]ಗಳಂ ಬರೆಸಿ, ದಿವ್ಯಾಶ್ವಸಮೇತವಾಗಿ ಕಾಗದಗಳಂ ಚಾರರ ವಶಕ್ಕೆ ಕೊಟ್ಟು, ವರುಷದ ಸಂಬಳವಂ ಉಚಿತವಾಗಿ ಕೊಟ್ಟು, "ಸೇನೆಗಳು ಪರ್ವತದೇಶಕ್ಕೆ ಸನ್ನದ್ಧವಾಗಿ ಹೊರಟುದಂ ನೋಡಿ, ತ್ವರಿತದಿಂ ಬಂದು ತಿಳುಹಿಸಿರಿ" ಎಂದು ಚಾರರಿಗೆ ನೇಮಿಸಿ ಕಳುಹಿಸಿ,

ರಾಕ್ಷಸನು ಆಗ ನಂದರ ಸಮೀಪಕ್ಕೆ ಹೋಗಿ, [ಮುಂಚೆ] [೧]ತಾನು[೧] ನೇಮಿಸಿದಂತೆ ಪರ್ವತದೇಶಾಧಿಪತಿಯ ಆಗಮನವಂ ವಿಜ್ಞಾಪಿಸುತ್ತಲಿರುವ ಚಾರರಂ ಕುರಿತು, "ಎಲೈ, ಇನ್ನೊಮ್ಮೆ ವಿವರವಾಗಿ ಪ್ರಭುಗಳಿಗೆ ವಿಜ್ಞಾಪಿಸಿರಿ" ಎಂದು ಹೇಳಿ, ನಂದರಿಗೆ ವೇದ್ಯವಾದ ಬಳಿಕ, ನಂದರಂ ಕುರಿತು, ರಾಕ್ಷಸನಿಂತೆಂದನು :

"ಅಯ್ಯ ಅರಸುಗಳಿರಾ, ನಮ್ಮ ಅನ್ನಸತ್ರವಂ ಬಿಟ್ಟು ಹೋದ ಮೌರ್ಯಪುತ್ರನಾದ ಚಂದ್ರಗುಪ್ತನೆಂಬವನು ಪರ್ವತರಾಜ್ಯಾಧಿಪತಿಯಂ ಕಂಡು, ಒಡಂಬಡಿಸಿ, ನಮ್ಮ ಮೇಲೆ ದಂಡು ತೆಗೆದುಕೊಂಡು ಬರುತ್ತಲಿದ್ದಾನಂತೆ. ಆತನ ಬಳಿಯಲ್ಲಿ ಬಹುದೇಶಾಧಿಪತಿಗಳು ಸೇನಾಸಮೇತರಾಗಿ ಆತ ಹೇಳಿದಂತೆ ನಡೆದುಕೊಂಬವರಂತೆ. ಚಂದ್ರಗುಪ್ತನು ಕಾರಾಗೃಹ ದಿಂದ ಮುಕ್ತನಾದ ಸಮಯದಲ್ಲಿ ಅವನಂ ಬಿಡಬಾರದೆಂದು ಅನ್ನಸತ್ರಾಧಿಕಾರವಂ ನೇಮಿಸಿ ಇದ್ದರೂ, ಅವನು ಅಷ್ಟು ಮಾತ್ರ ಇರತಕ್ಕವನಾಗಲಿಲ್ಲ. ಅವನಿಗೆ ತಕ್ಕ ಹಾಗೆ ಬ್ರಾಹ್ಮಣನ ಸಹಾಯವು ದೊರಕಿತು. ಮಿಂಚಿ ಹೋದ ಮಾತಿಗೆ ಈಗ ಆಡಿ ಫಲವೇನು? ಈಗ ಬರುವ ಶತ್ರುಗಳಿಗೆ ಎದುರಾಗಿ ನಮ್ಮ ಸೇನೆಗಳಂ ಕಳುಹಿಸಿ ನಿಗ್ರಹಿಸಬೇಕಲ್ಲದೆ ಉಪೇಕ್ಷೆಯಂ ಮಾಡಕೂಡದು. ಈಗ ನಮ್ಮ ಕಡೆ ಕೆಲವು ಗಡಿದುರ್ಗಗಳು ಶತ್ರುಗಳ ವಶವಾಯಿತಂತೆ. ನಮ್ಮ ದೇಶದ ಪ್ರಜೆಗಳು ಮಹಾಭೀತಿ ಪಡುತ್ತಾರೆ. ಚಂದ್ರಗುಪ್ತನು ಸಕಲಾಶೆಯಂ ಬಿಟ್ಟು ಹೋದವನಾದುದರಿಂದ 'ತನಗೆ ಆದಷ್ಟು ಆಗಲಿ, ತಮ್ಮ ಪುರ ದೇಶಗಳು ಅನ್ಯಾಕ್ರಾಂತವಾದರೆ ಸಾಕು, ತನಗೆ ವೈರಿಗಳಾದ ಜ್ಞಾತಿಗಳು ತನ್ನಂತೆ ಆಗಬೇಕೆಂ' ಬುವದು ಆತನ ಮನೋಗತವಾಗಿ ಇದ್ದೀತು. ಪರ್ವತೇಶ್ವರನಂ ಒಡಂಬಡಿಸುವಲ್ಲಿ ಎಷ್ಟು ಧನ ರಾಜ್ಯಗಳಂ ಕೊಡುವೆನೆಂದು ಹೇಳಿ ಕರೆದುಕೊಂಡು ಬಂದನೋ ತಿಳಿಯಕೂಡದು.

---

೧. ಆತನು (ಕ)

ಇದರಿಂದಲೂ, ಅಶಕ್ತರಾದವರು ಮೊದಲು ಸಂಧಿಗೆ ಮಾತನಾಡಬೇಕಲ್ಲದೆ ನಮ್ಮಂಥವರು ಸಂಧಿಗೆ ಮಾತನಾಡಕೂಡದು. ಧನಹೀನನಾದ ವಿಪ್ರನ ವಾಕ್ಕೌಶಲ್ಯಕ್ಕೆ ಮೋಹಿತನಾಗಿ ಪರ್ವತೇಶ್ವರ[ನು] ಬಂದಿರಬೇಕು. ಭೇದವಂ ಕಲ್ಪಿಸಿ ಕಾದ ಕಬ್ಬಿಣವಂ ಕಬ್ಬಿಣದಿಂ ಪ್ರಹರಿಸಿ ಕಾರ್ಯಕ್ಕೆ ಉಪಯೋಗಿಸಿಕೊಂಬಂತೆ, ಶತ್ರುಗಳ ಮೇಲೆ ಮತ್ತೊ[ಬ್ಬ] ಶತ್ರುವಂ ನಿಲ್ಲಿಸಿ, ಪರಸ್ಪರವಿರೋಧವಂ ಗಂಟಿಕ್ಕಿ, ಪೂರ್ವಶತ್ರುಗಳಂ ನಿಗ್ರಹಮಾಡಿಸಿ ಅನಾಯಾಸ ಲಬ್ಧವಾದ ಜಯದಿಂದ ನಾವು ಸುಖಿಗಳಾದೇವೆಂದರೆ, ಶತ್ರುಗಳು ಮಾರ್ಗಮಧ್ಯದಲ್ಲಿ ಬಂದು ದಿನೇ ದಿನೇ ಸನ್ನಿಹಿತವಾಗುವದರಿಂದ ಆ ಭೇದೋಪಾಯಕ್ಕೆ ಅವಕಾಶ ಸಾಲದಿದ್ದರೂ ನಮ್ಮ ಸೇನೆಗಳಂ ಜೊತೆಗೂಳಿಸಿ, ಪ್ರೋತ್ಸಾಹಪಡಿಸಿ, ಶತ್ರು ಸಮೀಪವರ್ತಿಯಾಗದಂತೆ ಎದುರಾಗಿ ಕಳುಹಿ[ಸಿ], ಅವಕಾಶವಂ ಮಾಡಿಕೊಂಡು ಪರ್ವತರಾಯನ ಸಂಗಡ ಬಂದಿರುವ ಅರಸುಗಳಿಗೆ ಸಾಮದಾನ ಪೂರ್ವಕವಾಗಿ ಭೇದೋಪಾಯವಂ ಕಲ್ಪಿಸಿ, ಆ ಬಳಿಕ ದಂಡೋಪಾಯದಿಂದ ಪ್ರಬಲಶತ್ರುವಂ ನಿಗ್ರಹಿಸಬೇಕಾಯಿತು. ಅದರ ಸಂಗಡಲೇ ಚಂದ್ರಗುಪ್ತನು ಸಹ ನಷ್ಟವಾದಾನು" ಎಂದು ರಾಕ್ಷಸನು ನಂದರಿಗೆ ಹೇಳುತ್ತಿರಲು, ಆ ಮಾತಿಗೆ ನಂದರು ಒಡಂಬಟ್ಟು,

"ಅಯ್ಯಾ ಅಮಾತ್ಯರೇ, ನಮ್ಮ ಮನೋಗತವಿದ್ದಂತೆ ನೀವು ಹೇಳಿದಿರಿ. ಈ ಅರ್ಥವು ಪ್ರಶಸ್ತವಾಗಿ ಇದೆ. ಇಂಥ ಕಾರ್ಯವನ್ನಾಚರಿಸುವಲ್ಲಿ ದೇಶಕಾಲಜ್ಞರಾದ ನೀವಲ್ಲದೆ ಮತ್ತಾರು ಸಮರ್ಥರಾದಾರು? ನೀವು ನಮಗೆ ಮಂತ್ರಾಲೋಚನೆಗೆ ಯೋಗ್ಯರಾದ ಮಂತ್ರಿಮಾತ್ರವೆಂದೆನಕೂಡದು. ಅಶಕ್ಯವಾಗಿ ಬಂದು ಒದಗಿದ ಶತ್ರುಗಳಲ್ಲಿ ನೀವು ಯುದ್ಧೋದ್ಯುಕ್ತರಾಗಿ ವಿಜೃಂಭಿಸಿದರೆ, ತೃಣರಾಶಿಗೆ ಅಗ್ನಿ ಹೊಕ್ಕಂತೆ ಶತ್ರುಗಳ ಲಕ್ಷೋಪಲಕ್ಷವಾದರೂ ಲಕ್ಷೀಕರಿಸದೆ ನಿಗ್ರಹಿಸತಕ್ಕವರೆಂಬ ಭರವಸೆ ನಮಗುಂಟು. ಹೀಗೆ ಶತ್ರುಗಳಲ್ಲಿ ಭೇದವಂ ಕಲ್ಪಿಸಿ, ಶತ್ರುವಿಗೆ ಸಹಾಯವಾಗಿ ಬಂದ ಅರಸುಗಳು ಪರ್ವತರಾಯನಲ್ಲಿ ಉಪೇಕ್ಷೆಯಿಂದಲಾದರೂ ಕಲಹದಿಂದಲಾದರೂ ತೊಲಗಿ ಹೋದರೆ, ಉಳಿದ ಒಬ್ಬ ಪರ್ವತೇಶ್ವರನ ಸೇನಾಸಂಹಾರವಂ ಲೀಲಾಮಾತ್ರದಿಂದ ನಾವೇ ಮಾಡುತ್ತಲಿದ್ದೇವೆ. ಆಗ ನೀವೇ ನೋಡಿ ಸಂತೋಷಪಟ್ಟೀರಿ" ಎಂದು ಹೇಳಿ, ರಾಕ್ಷಸನಿಗೆ ಅನರ್ಘ್ಯಭೂಷಣ ವಸ್ತ್ರಗಳಿಂದಲಂಕರಿಸಿ, ವೀಳೆಯಂ ಕೊಟ್ಟು, ನಂದರು ಗೃಹಾಂತರಕ್ಕೆ ಹೋಗುತ್ತಿರಲು,

ಆಗ ರಾಕ್ಷಸನು ಏಕಾಂತಗೃಹದಲ್ಲಿ ಕುಳಿತು, 'ಈ ಪುರ ದೇಶಗಳಿ[೧]ಗೆ, ಅರಸುಗಳಿಗೆ[೧] ಗ್ರಹಬಲವೆಂತಿರುವದೋ, ಬುದ್ಧಿವಂತರಾದ ಜ್ಯೋತಿಷರಂ ಕೇಳಿ ನಿಶ್ಚೈಸಬೇಕೆಂ'ದು ಹೇಳಿಕೊಳ್ಳುತ್ತ, 'ಅದು ಆ ಬಳಿಕ ಆದೀತು, ರಾಯಸದವರು ಬರಲೆಂ'ದು ಕರೆಕಳುಹಿಸಿ, ಕುಳ್ಳಿರಿಸಿಕೊಂಡು,

"ಅಯ್ಯಾ ರಾಜಶಾಸನಲೇಖಕರುಗಳಿರಾ, ಬರೆದು ಕಳುಹಿಸತಕ್ಕ ರಾಜಕಾರ್ಯವುಂಟು. ಬರೆಯುವರಾಗಿ[ರಿ]"ಎನಲು, ಅವರು 'ಒಳ್ಳೆಯದೆಂ'ದು ಕಾಗದ ಕಡ್ಡಿಗಳಂ ಪಿಡಿದು, 'ಅಪ್ಪಣೆಯಾಗಬೇಕೆ'ನಲು,

ಅದೇ ಸಮಯದಲ್ಲಿ ವಾದ ವಶ್ಯ ಜ್ಯೋತಿಷ ಮಂತ್ರ ನೀತಿಯಲ್ಲಿ ಕುಶಲನಾಗಿ,

---

೧. ಗೆ (ಕ)

ಕ್ಷಪಣಕವೇಷವಂ ಧರಿಸಿ, ಜೀವಸಿದ್ಧಿಯೆಂಬ ಹೆಸರಂ ಪಡೆದು, ಮೊದಲೇ ರಾಕ್ಷಸನಲ್ಲಿ ಆಶ್ರಯಿಸಿ ಇದ್ದವನಾದ ಕಾರಣ, ಚಾಣಕ್ಯನಿಗೆ ಸಖನಾದ ಇಂದುಶರ್ಮನು ಬಂದು ನಿಂತು, "ತಾನು ಬಂದು ಇದ್ದೇನೆ. ರಾಕ್ಷಸನಿಗೆ ತಿಳುಹಿಸಿ[ರಿ]" ಎಂಬ ಅರ್ಥವನ್ನು ತಾನು ಹಿಡಿದು ಇರುವ ನವಿಲುಗರಿ ದೊಂದೆಯಿಂದ ದೂತರಿಗೆ ಸನ್ನೆಯಂ ಮಾಡಲು, 'ಒಳ್ಳೆಯ ದೆಂ'ದು ಆ ದೂತರು ಹೋಗಿ, ಕ್ಷಪಣಕನು ಬಂದಿರುವದಂ ರಾಕ್ಷಸನಿಗೆ ಹೇಳಿ, ಆತನ ಅಪ್ಪಣೆಯಿಂದ ಕ್ಷಪಣಕನಂ ಒಳಕ್ಕೆ ಬಿಡಲು,

ಆಗ ಕ್ಷಪಣಕನು 'ಧರ್ಮಿಷ್ಠರಿಗೆ ಶ್ರೇಯೋಸ್ತು' ಎಂದು ಹರಸಿ ಕುಳ್ಳಿರಲು, ಆತನಂ ನೋಡಿ ರಾಕ್ಷಸನು, "ಅಯ್ಯಾ ಕ್ಷಪಣಕರೇ, ನೆನೆಸಿದಂತೆ ಒಳ್ಳೆಯ ಸಮಯದಲ್ಲಿ ಬಂದಿರಿ" ಎನಲು, "ಅಯ್ಯಾ ಪ್ರಭುವಾದ ಅಮಾತ್ಯರೇ, ಸಂಗರಹಿತರಾ[ಗಿ] ವನವಾಸಕ್ಕೆ ಯೋಗ್ಯ ರಾದ ನಾವು ನಿಮ್ಮ ಆದರಣೆಯಿಂದ ನಿಮ್ಮಲ್ಲಿ ಮೌನವಂ ತ್ಯಜಿಸಿ ನಿಮ್ಮನ್ನಗಲಲಾರದೆ ಶ್ರೇಯಸ್ಸನ್ನಪೇಕ್ಷಿಸುತ್ತಲಿದ್ದೇವೆ. ನಾಲ್ಕಾರು ದಿವಸದಿಂದಲೂ ತಮ್ಮ ದರ್ಶನ ದುರ್ಲಭ ವಾದ ಬಳಿಕ, ಏನು ಪ್ರಯೋಜನಕ್ಕೆ ನಾವಿಲ್ಲಿರಬೇಕು" ಎನಲು, "ಅಯ್ಯಾ ಕ್ಷಪಣಕರೇ, ರಾಜಕಾರ್ಯಗೌರವದಿಂದ ನಿಮ್ಮಂ ಕರೆಸುವದಕ್ಕೆ ಕೂಡಲಿಲ್ಲ. ಈಗ ನೀವೇ ಬಂದುದು ಚೆನ್ನಾಯಿತು. ಒಂದು ಪ್ರಶ್ನೆಯಂ ಹೇಳಬೇಕೆ"ನಲು, ಆತನ ಭಾವವಂ ತಿಳಿದು, ಸಮಯಜ್ಞ ನಾದುದರಿಂದ ಗ್ರಹಬಲವಂ ನೋಡುವಂತೆ ನಟಿಸುತ್ತ, "ಅಯ್ಯಾ ಅಮಾತ್ಯರೆ, ನೀವು ಕೇಳಿದ ಪ್ರಶ್ನೆಯು ರಾಜ್ಯಾತಂಕವಂ ಶತ್ರುಗಳ ಆಗಮನವಂ ಸೂಚಿಸುತ್ತಲಿದೆ. ಈ ಲಗ್ನಕ್ಕೆ ಶತ್ರುಸ್ಥಾನದ ಗ್ರಹವಂ ಶತ್ರುಗ್ರಹ ನೋಡುವದರಿಂದ ನಿಮ್ಮ ಮೇಲೆ ದಂಡೆತ್ತಿ ಬರುವ ಶತ್ರುವು ಜೀವಂತನಾಗಿ ಹಿಂತಿರುಗಿ ಹೋಗಲಾರನು. ಇದಕ್ಕೆ ನನ್ನ ವ್ರತವೇ ಸಾಕ್ಷಿ. ಇದರಿಂದ ನಿಮಗೆ ಕಾರ್ಯಪರ್ಯವಸಾನದಲ್ಲಿ ಜಯಲಾಭವೆಂದು ಹೇಳಬೇಕು. ಮತ್ತು ಬುಧಾದಿ ಪಂ[೧]ಚ[೧]ಗ್ರಹಗಳು ಲಗ್ನಕ್ಕೆ ಭೇದಫಲಪ್ರದಾಯಕವಾದುದರಿಂದ ಶತ್ರುವಿಗೆ ಸಹಾಯರಾಗಿ ಬಂದವರು ಭೇದಕ್ಕೆ ಒಳಗಾದಾರು. ಆಗ ದಂಡೋಪಾಯಾಚರಣೆಯಿಂದ ಶತ್ರು ಸಂಹೃತನಾದಾನು" ಎಂದು ಹೇಳಿ,

ಆ ಚಾಣಕ್ಯನ ಸಂಕೇತವಾಕ್ಯವಂ ನೆನೆದು, ಇದೇ ಸಮಯವೆಂದು ತಿಳಿದು, "ಅಯ್ಯಾ ಅಮಾತ್ಯರೇ, ನಾನು ಹೇಳಿದುದು ನಿಮ್ಮ ಮನಸ್ಸಿಗೆ ಬಂದರೆ, ಶತ್ರುಗಳ ಅನಿಷ್ಟನಿವೃತ್ತಿಗೆ ನದೀತೀರದಲ್ಲಿ ಜಪಶೀಲರಾದ ಬ್ರಾಹ್ಮಣರ ಮುಖದಿಂದ, ಇದೇ ಶುಭಲಗ್ನದಲ್ಲಿ ಶತ್ರು ಪಲಾಯನ ಜಪಾರಂಭವಾಗುವಂತೆ [ಮಾಡಿಸಿದರೆ] ಅನಿಷ್ಟನಿವೃತ್ತಿಯಾಗುವದು" ಎಂದು ಹೇಳಲು, "ಅಯ್ಯಾ ಕ್ಷಪಣಕರೇ, ನೀವು ಹೇಳಿದರ್ಥವು ನಮ್ಮ ಮನಸ್ಸಿಗೆ ಬಂತು. ಜ್ಯೋತಿಷದಲ್ಲಿ ನೀವು ಮಹಾಸಮರ್ಥರು. ವಿರಕ್ತಿಯಿಂದ ನಮ್ಮಂ ಬಿಡದೆ ನಮ್ಮಲ್ಲಿಯೇ ಇರಬೇಕು. ನಿಮಗೆ ಆಗತಕ್ಕ ಪ್ರಯೋಜನವಿದ್ದರೆ ಹೇಳಿ[ರಿ]" ಎನಲು, "ಅಯ್ಯಾ, ಅಮಾತ್ಯರೇ, ಲೌಕಿಕ ಪ್ರಯೋಜನದಿಂದ ವಿರಕ್ತರಿಗೆ ಏನು ಫಲ ? ಪುರದ ಹೊರಗೆ ಪರ್ಣಶಾಲೆಯಂ ರಚಿಸಿ ಇರಹೇಳಿದರೆ ಶ್ರೇಯಸ್ಸಂ ಚಿಂತಿಸುತ್ತಲಿರುವೆವು" ಎಂದು ಹೇಳಿ, 'ಮಾಯಾಧಾರವೇ' ಎಂದು ಕಣ್ಣುಗಳಂ ಮುಚ್ಚಿ ಧ್ಯಾನವಂ ಮಾಡುವವನಂತೆ ಸ್ತಬ್ಧನಾಗಿ

---

೧. ಚ ಗೃಹ (ಕ)

ಕ್ಷಪಣಕನು ಕುಳಿತಿರಲು.

ಆಗ ರಾಕ್ಷಸನು ಸೇನಾಪತಿಯಾದ ಬಾಗುರಾಯಣನಂ ಕರೆಕಳುಹಿಸಿ, "ಅಯ್ಯಾ ಬಾಗುರಾಯಣನೇ, ಈಗ ಪರ್ವತೇಶ್ವರನು ಚಂದ್ರಗುಪ್ತನಂ ಪಕ್ಷೀಕರಿಸಿ ನಂದರ ಮೇಲೆ ದಂಡೆತ್ತಿ ಬರುವನಾಗಿ ಇದ್ದಾನೆ. ಇಲ್ಲಿ ಕೆಲವು ದುರ್ನಿಮಿತ್ತ[ಗಳು] ಕಾಣಿಸಿಕೊಂಡಿರುವದರಿಂದ ಅನಿಷ್ಟಶಾಂತ್ಯರ್ಥವಾಗಿ ಬ್ರಾಹ್ಮ[ಣ]ರ ಮುಖದಿಂದ ಶಾಂತಿಗಳಂ ಮಾಡಿಸುವನಾಗು ಮತ್ತು ವಿಶೇಷವಾಗಿ ನದೀತೀರದಲ್ಲಿ ಜಪಶೀಲರಾದ ಬ್ರಾಹ್ಮ[ಣ]ರ ಮುಖದಿಂದ ಶತ್ರುಗಳು ಪಲಾಯನಂಗೈವಂತೆ ಜಪಹೋಮವಂ ಮಾಡುವದಕ್ಕೆ ಬೇಕಾದುದಂ ಒದಗಿಸಿಕೊಂಡು, ಶಾಲೆಯಂ ರಚಿಸಿ, ಜಪವಂ ಮಾಡಿಸುವನಾಗು. ಇದೇ ಲಗ್ನದಲ್ಲಿ ಆರ್ತ್ವಿಜ್ಯವಂ ನೇಮಿಸುವನಾಗು. ರಾಜಕಾರ್ಯ ಹೆಚ್ಚಿ ಬಂದರೆ, ಈ ಪುರರಕ್ಷಣೆಯಂ ನೀನೇ ಮಾಡಬೇಕಾಗುತ್ತಲಿದೆ" ಎಂದು ಹೇಳಿ, ಆತನಂ ಕಳುಹಿಸಲು, 'ಒಳ್ಳೆಯದೆಂ'ದು ಬಾಗುರಾಯಣನು ಬಂದು ಜಪಶೀಲರಾದ ಬ್ರಾಹ್ಮಣರಂ ವಿಚಾರಿಸುತ್ತಿರಲು..

ಆ ಸಮಯದಲ್ಲಿ ಕ್ಷಪಣಕನಿಗೆ ಶಿಷ್ಯನಾದ ಸಿದ್ಧಾರ್ಥಕನೆಂಬವನು ಬಾಗುರಾಯಣನಲ್ಲಿ ವೈದ್ಯವೇಷವಂ ಧರಿಸಿ, ಆತನಿಗೆ ಪ್ರೀತಿಪಾತ್ರನಾಗಿ ಇರುವದರಿಂದ, "ಮುಂದೆ ಆಗುವ ಕಾರ್ಯಕ್ಕೆ ಅನುಕೂಲವಾಗಿ, ಉತ್ತರದಿಕ್ಕಿನ ರಾಜಕಾರ್ಯಪ್ರಯಾಣದಲ್ಲಿ, ಪ್ರಥಮದಲ್ಲಿ ಅರಸುಗಳು ಇಳಿಯುವ ಸ್ಥಾನಕ್ಕೆ ನಾತಿ ದೂರವಾದ ಸರಯೂನದೀತೀರದಲ್ಲಿ ಜಪಶಾಲೆಯಂ ರಚಿಸುವಂತೆ ಮಾಡಬೇಕು" ಎಂದು ನಿಶ್ಚೈಸಿ, ಬಾಗುರಾಯಣನಂ ಕುರಿತು,

"ಅಯ್ಯಾ ಸೇನಾಪತಿಗಳೇ, ಶತ್ರುಪಲಾಯನಜಪವಂ ಮಾಡಿಸುವದಕ್ಕೆ ಗಂಗಾಸರಯೂಸಂಗಮಕ್ಕೆ ಪೂರ್ವಭಾಗವು ಜಪಶೀಲರಿಗೆ ಕ್ಷಿಪ್ರಫಲದಾಯಕವೆಂದು ಬಹುವಾಗಿ ಕೇಳಿ ಉಂಟು. ಅಲ್ಲಿ ಜಪಶಾಲೆಗೆ ಯೋಗ್ಯವಾಗಿ ತೋರುತ್ತೆ" ಎಂದು ಹೇಳುವ ಸಮಯದಲ್ಲಿ, ಈ ಸಿದ್ಧಾರ್ಥಕನಿಗೆ ಮಿತ್ರನಾದ ಮಾಸೋಪವಾಸಿ ಎಂಬವನು ಮುನಿವೇಷವಂ ಧರಿಸಿ, ಮಾರ್ಗವಶಾತು ಹೋಗುವನಂತೆ ಬೀದಿಯಲ್ಲಿ ಹೋಗುತ್ತಿರಲು, ಸಿದ್ಧಾರ್ಥಕನು ಅವನಂ ಕಂಡು, "ಇದೇನು ಆಶ್ಚರ್ಯ ; ಇವರು ಇಲ್ಲಿ ಬರುವದಕ್ಕೆ ನಿಮಿತ್ತವೇನು ?" ಎಂದು ಹೇಳುತ್ತ, ದೂರದಿಂದಲೇ ಎದ್ದು ವಿನಯದಿ[ಂ] ಕೈಮುಗಿಯುತ್ತಿರಲು, ಅದಂ ನೋಡಿ ಬಾಗುರಾಯಣನು, "ಇದೇನೈ ಸಿದ್ಧಾರ್ಥಕನೇ, ಇವರಾರೆ"ನಲು, "ಅಯ್ಯಾ ಸೇನಾಪತಿಗಳಿರಾ, ಇವರೇ ಮಾಸೋಪವಾಸಿಗಳೆಂಬ ಮಹಾಮುನಿಗಳು. ಏನು ನಿಮಿತ್ತ ಬಂದರೋ? ಅವರ ಕುಶಲವಂ ಕೇಳುವದಂತಿರಲಿ. ಮೊದಲು ಯಾವ ರೀತಿಯಿಂದಲಾದರೂ ಈ ಜಪದ ಆರ್ತ್ವಿಜ್ಯಕ್ಕೆ ಇವರಂ ಸಮ್ಮತಿಪಡಿಸಿದರೆ, ಕಾರ್ಯಸಿದ್ಧಿ ಕೈವಶವಾಗುವದರಲ್ಲಿ ಸಂಶಯವಿಲ್ಲ" ಎಂದೆನಲು, ಆ ಮಾತಿಗೆ ಬಾಗರಾಯಣನು ಅವರಂ ಸನ್ಮಾನದಿಂದ ಕರೆತಂದು, ನಾನಾವಿಧದಿಂದ ಒಡಂಬಡಿಸಿ, ಆರ್ತ್ವಿಜ್ಯಕ್ಕೆ ಸಮ್ಮತಿಪಡಿಸಲು,

ಸಿದ್ಧಾರ್ಥಕ[ನು] ಹೇಳಿದ ಸ್ಥಳದಲ್ಲಿ ಜಪಶಾಲೆಯಂ ರಚಿಸುವಂತೆ ಜನಗಳಿಗೆ ನೇಮಿಸಿ, ಅದಕ್ಕೆ ಬೇಕಾದಷ್ಟು ಪದಾರ್ಥವಂ ಬ್ರಾಹ್ಮಣರಂ ನೇಮಿಸಿ, ಜಪವಂ ಮಾಡುವಂತೆ ಕಳುಹಿಸಲು, ಅಲ್ಲಿ ಆರ್ತ್ವಿಜ್ಯವಂ ಪಡೆದಿರುವ ಮಾಸೋಪವಾಸಿಯು ಶಿಷ್ಯಚತುಷ್ಟಯ ಸಮೇತನಾಗಿ ಚಾಣಕ್ಯನ ಆಗಮನವಂ ನಿರೀಕ್ಷಿಸುತ್ತ, ಜಪಹೋಮವಂ ಮಾಡುವನಂತೆ ಆ ಶಾಲೆಯಲ್ಲೇ ಇರುತ್ತಿದ್ದನು.

ಇತ್ತ ರಾಕ್ಷಸನಂ ಕುರಿತು ರಾಯಸದವರು, "ಸ್ವಾಮೀ, ಬರೆಯುವದಕ್ಕೆ ಏನು ಅಪ್ಪಣೆ?" ಎಂದು ಕೇಳಲು, ಆಗ ಸಮೀಪದಲ್ಲಿ ಧ್ಯಾನಾರೂಢನಾಗಿ ಇರುವ ಕ್ಷಪಣಕನಂ ನೋಡಿ, ಅವನಂ "ಆಚೆಗೆ ಹೋಗು" ಎಂಬುವದಕ್ಕೆ ದಾಕ್ಷಿಣ್ಯಪಟ್ಟು, "ಈತನು ವಿರಕ್ತನು. ನಮ್ಮ ಆದರಣೆಯಿಂದ ನಮ್ಮಲ್ಲೇ ಹೊರತು ಅನ್ಯರಲ್ಲಿ ಈತನಿಗೆ ಮೌನವು. ಈ ಲೌಕಿಕ ವ್ಯವಹಾರದಲ್ಲಿ ಈತನಿಗೆ ಪ್ರಯೋಜನವಿಲ್ಲ. ಇದ್ದರೆ ಬಾಧಕವಿಲ್ಲ" ಎಂದು ತಿಳಿದು, ಕಾಗದವಂ ಬರೆಯುವದಕ್ಕೆ ರಾಯಸದವರಿಗೆ ಒಕ್ಕಣೆಯಂ ಹೇಳುತ್ತಿದ್ದನು :

"ಕೇಳಿರೈ ರಾಯಸದವರುಗಳಿರಾ, ನಮ್ಮ ಕಡೆಯಿಂದ ನಿಯೋಗಿತನದ ಸಂಬಳವಂ ತೆಗೆದುಕೊಳ್ಳುತ್ತ ಪರರಾಯರ ಬಳಿಯಲ್ಲಿ ಪ್ರೀತಿಪಾತ್ರರಾದ ವರ್ತಕರಾಗಿ ವ್ಯಾಪಾರ ಮುಖದಿಂ ಜೀವಿಸುತ್ತಲಿರುವವರು ಯಾರೆಂದರೆ, ಕುಲೂತಪತಿಯಲ್ಲಿ ಧನಗುಪ್ತನು, ಮಲಯಪತಿ ಸಿಂಹನಾದನಲ್ಲಿ ಕೃಷ್ಣದಾಸನು, ಕಾಶ್ಮೀರಪತಿಯಲ್ಲಿ ಶಾರಿಕಶೆಟ್ಟಿಯು, ಸಿಂಧುಪತಿಯ ಬಳಿಯಲ್ಲಿ ಹೀರದಾಸನು, ಪಾರಶೀಕಪತಿಯಲ್ಲಿ ಮುಕುಂದದಾಸನು, ಗಾಂಧಾರಪತಿಯಲ್ಲಿ ವಜ್ರಲಾಲನು, ಕಾಂಭೋಜನಲ್ಲಿ ಬಾಲದಾಸನು ಈ ಗೂಢಮಂತ್ರಿಗಳೆಲ್ಲರಿಗೂ ನಮ್ಮ ಹೆಸರಿನಿಂದ ಕಾಗದಗಳಂ ಬರೆಯತಕ್ಕದ್ದು." ಏನೆಂದರೆ :

"ನೀವು ನಂದರಲ್ಲಿ ಸ್ವಾಮಿಭಕ್ತಿ ಉಳ್ಳವರಾದುದರಿಂದ ನೀವು ಮಾಡತಕ್ಕ ಸ್ವಾಮಿಕಾರ್ಯವೇನೆಂದರೆ, ನಿಮಗೆ ಆಶ್ರಯಭೂತರಾದ ಅರಸುಗಳು ನಂದವೈರಿಯಾದ ಚಂದ್ರಗುಪ್ತನಂ ವಹಿಸಿ ಇರುವ ಪರ್ವತರಾಯನಿಗೇ [ನಿ]ಯಮ್ಯರಾಗಿ ನಂದರ ಮೇಲೆ ದಂಡೆತ್ತಿ ಬರುವ ಅರ್ಥವು ನಿಮಗೆ ತಿಳಿದೇ ಇದೆಯಷ್ಟೆ. ಈ ವೇಳೆಯಲ್ಲಿ ಎಷ್ಟು ಧನವ್ಯಯವಾದರೂ ಆಗಲಿ, ನಿಮ್ಮ ಅರಸುಗಳಿಗೆ ಹ್ಯಾಗೆ ಹೇಳಬೇಕೋ ಆ ಮೇರೆ ಹೇಳಿ ಒಡಂಬಡಿಸಿ, ಏನಾದರೂ ಒಂದು ನಿಮಿತ್ತದಿಂದ ಚಂದ್ರಗುಪ್ತನಂ ಸಂಹರಿಸಿದರೆ ಉತ್ತಮೋತ್ತಮವು. ಅದು ಅಶಕ್ಯವಾದರೆ, ನಿಮಿತ್ತಾಂತರದಿಂದ ಪರ್ವತರಾಯನಂ ಬಿಟ್ಟು, ನಂದರಿಗೆ ಸಹಾಯವಾಗುವದು. ಒಂದು ಪಕ್ಷ ಅದೂ ಕೂಡದಿದ್ದರೆ, ವ್ಯಾಜಾಂತರದಿಂದ ಕಲಹವಂ ಮಾಡಿಕೊಂಡು ತಮ್ಮ ತಮ್ಮ ದೇಶಗಳಿಗೆ ಹೋಗುವದು. ಒಂದು ಪಕ್ಷ ಅದೂ ಸರಿಬಾರದಿದ್ದರೆ, ನಂದಸೇನೆಗೂ ಪರ್ವತರಾಯಸೇನೆಗೂ ಕೈಕೂಡಿ ಯುದ್ಧವಾಗುವ ಸಮಯದಲ್ಲಿ ನಂದಸೇನೆ[ಯ] ಮೇಲೆ ಕೈಮಾಡದೆ ತಟಸ್ಥರಾಗಿ ಇರುವದೆಂಬುದು ಇದು ಒಂದು ರೀತಿ. ಇದರಲ್ಲಿ ಯಾವರ್ಥಕ್ಕಾದರೂ ಒಡಂಬಡಿಸಿ, ಆ ಅರಸುಗಳಿಗೆ ನಂದರಲ್ಲಿ ವಿಶ್ವಾಸವುಂಟಾಗುವಂತೆ ಮಾಡಿದರೆ, ಆ ಅರಸುಗಳಿಗೆ ನೀವು ಹೇಳಿದರ್ಥವೆಲ್ಲವೂ ನಮಗೆ ಸಮ್ಮತವು. ಇದರಿಂದ ಬಲವದ್ವಿರೋಧ ಘಟಿಸೀತೆಂಬ ಶಂಕೆ ತೋರಿದರೆ, ನಾವು ಹೇಳಿದ ರೀತಿಗೆ ಅವರೆಲ್ಲರೂ ನಮಗೆ ಅನುಕೂಲರಾದರೆ, ಅವರ ಸಹಾಯ ಪರ್ವತರಾಯನಿಗೆ ತಪ್ಪುವದರಿಂದ ಆತನು ನಮ್ಮಿಂದ ಹತನಾಗುವದಕ್ಕೆ ಸಂಶಯವಿಲ್ಲ. ಹೀಗೆ ನಮ್ಮ ಕಾರ್ಯಜಯವಾದ ಬಳಿಕ ಆ ಅರಸುಗಳು ನಮಗೆ ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರವಾಗಿ ಪರ್ವತರಾಯನ ದೇಶ ಕೋಶಗಳಂ ಸಮವಾಗಿ ಹಂಚಿಕೊಡುತ್ತಲಿದ್ದೇವೆ."

ಹೀಗೆಂದು ಕಾಗದಗಳಂ ಬೇರೆ ಬೇರೆ ವರ್ತಕರಿಗೆ ಬರೆಸಿ, ಮೊಹರಗಳಂ ಮಾಡಿ, ಮೇಲೆ ಅವರವರ ಹೆಸರಂ ಬರೆದು, ನಾಲ್ವ[ರು] ಚಾರರಂ ಕರೆದು, ಆ ಕಾಗದಗಳಂ ಅವರ ಕೈಯಲ್ಲಿ ಕೊಟ್ಟು, "ಎಲೈ ಚಾರರುಗಳಿರಾ, ನೀವು ವೇಗಶಾಲಿಗಳಾದ ಅಶ್ವಗಳನ್ನೇರಿ

ವೇಷಾಂತರದಿಂದ ಪರ್ವತರಾಯಸೇನೆಗೆ ಹೋಗಿ ಈ ಕಾಗದಗಳಂ ಮೇಲೆ ಬರೆದಿರುವ ಮೇರೆಗೆ ಆ ದೇಶಾಧಿಪತಿಗಳ ಕಡೆ ವರ್ತಕರಿಗೆ ಕೊಟ್ಟು, ಇದಕ್ಕೆ ಬದಲು ಬರೆಸಿಕೊಂಡು ತ್ವರಿತದಿಂ ಬರತಕ್ಕದ್ದು" ಎಂದು ನೇಮಿಸಿ ಕಳುಹಿಸಲು, ಆದೇ ರೀತಿಗೆ ಆ ಚಾರರು ತೆರಳುತ್ತಿದ್ದರು.

ಇತ್ತ ರಾಕ್ಷಸನ ಬಳಿಯಲ್ಲಿ ಕುಳಿತಿದ್ದ ಕ್ಷಪಣಕನು ಇದೆಲ್ಲವಂ ತಿಳಿದು, ಧ್ಯಾನದಿಂ ಎಚ್ಚರವಾದವನಂತೆ ಕಣ್ಣುಗಳಂ ಬಿಟ್ಟು, 'ಬುದ್ಧೇಶನೇ' ಎನಲು, ಅದಂ ನೋಡಿ, "ಕ್ಷಪಣಕರೇ, ನಿಮಗೆ ಭಿಕ್ಷಾಸಮಯ ಮೀರಿಬರುತ್ತಲಿದೆ, ಹೋಗಿ ಬನ್ನಿ" ಎಂದು ರಾಕ್ಷಸನು ಹೇಳಲು, "ನಮ್ಮ ಪ್ರಭುವಿಗೆ ಜಯವಾಗಲೆಂ"ದು ಕ್ಷಪಣಕನು ಹೋಗುತ್ತಾ, ತನ್ನ ಮನಸ್ಸಿನಲ್ಲಿ,

"ಈಗ ರಾಕ್ಷಸನು ಪರ್ವತರಾಯನಿಗೂ ಆತನ ವಶವರ್ತಿಗಳಾದ ಅರಸುಗಳಿಗೂ ಭೇದವಂ ಕಲ್ಪಿಸಿ, ಪರ್ವತರಾಯನಂ ಉಪೇಕ್ಷಿಸುವಂತೆ ಮಾಡುಲೋಸುಗ ಆ ಅರಸುಗಳ ಬಳಿಯಲ್ಲಿ ಇರುವ ವರ್ತಕರಿಗೆ ಕಾಗದಗಳಂ ಬರೆದು ಕಳುಹಿಸಿ ಇದ್ದಾನೆ. ಈ ಕಾಗದಗಳ ಮೇರೆಗೆ ಅಲ್ಲಿ ಕಾರ್ಯ ನಡೆದು ರಾಕ್ಷಸನ ಭೇದೋಪಾಯ ಸಿದ್ಧಿಸಿದರೆ, ಚಂದ್ರಗುಪ್ತನಂ ವಹಿಸಿ ಇರುವ ಚಾಣಕ್ಯರ ಸಂಕಲ್ಪ ನಿಷ್ಫಲವಾದೀತು. ರಾಕ್ಷಸನ ಕಾಗದಗಳು ಆ ವರ್ತಕರಿಗೆ ತಲಪುವದಕ್ಕೆ ಮುಂಚಿತವಾಗಿಯೇ ಚಾಣಕ್ಯರಿಗೆ ಈ ವರ್ತಮಾನವಂ ತಿಳುಹಿಸದಿದ್ದರೆ, ನಾನು ಇಲ್ಲಿದ್ದು ಫಲವೇನು ? ಅವರಿಗೆ ಮಿತ್ರನೆಂತಹೆನು ?" ಎಂದು ನಿಶ್ಚೈಸಿ,

ರಾಕ್ಷಸನ ಬಳಿಯಲ್ಲಿ ನಡೆದ ವರ್ತಮಾನವೆಲ್ಲವಂ ವಿವರವಾಗಿ ಬರೆದು ತನ್ನ ಶಿಷ್ಯನಾದ ವೇಗಶರ್ಮನ ಕೈಯಲ್ಲಿ ಕೊಟ್ಟು, "ಎಲೈ ಪ್ರಿಯಶಿಷ್ಯನೇ, ರಾಕ್ಷಸನ ಭೇದೋಪಾಯದಿಂದ ಚಾಣಕ್ಯರ ಸಂಕಲ್ಪವು ಅನ್ಯಥಾ ಆಗುವಂತೆ ತೋರುತ್ತೆ. ಆದ್ದರಿಂದ ಈ ಮಂಟಪದ ಸಮೀಪದಲ್ಲಿ ಯಾರದೋ ದಿವ್ಯಾಶ್ವ ಜೀನುಮಾಡಿ ಕಟ್ಟಿ ಇದೆ. ಇಕೋ, ಈ ಕಾಡಿಗೆಯಂ ಅದರ ಹಣೆಗೆ ಇಟ್ಟು, ನೀನೂ ಹಾಗೇ ಇಟ್ಟುಕೊಂಡು, ಅದರ ಮೇಲೆ ಕುಳಿತರೆ ಪ್ರಾಣಿಮಾತ್ರಕ್ಕೆ ಗೋಚರವಾಗುವದು ಇಲ್ಲ. ಈ ಚೂರ್ಣವಂ ಜಲದಲ್ಲಿ ಕದಡಿ ಕುಡಿದರೆ, ಒಂದು ಮಾಸ ಪರ್ಯಂತವೂ ಹಸಿವು ಬಾಯಾರಿಕೆ ನಿದ್ರೆ ದಣಿ[ವು] ಸಹ ಆಗುವದಿಲ್ಲ. ಈ ಅಶ್ವಕ್ಕೂ ಇದೇ ರೀತಿಯಂ ಮಾಡಿ, ರಾಜಮಾರ್ಗವಂ ಬಿಟ್ಟು ಸಮೀಪವಾದ ಅರಣ್ಯ ಮಾರ್ಗಗೊಂಡು ಹೋಗಿ, ಪರ್ವತರಾಯಸೇನೆಯಲ್ಲಿ ಇರುವ ಚಾಣಕ್ಯರಿಗೆ ಈ ಕಾಗದವಂ ಕೊಡುವಲ್ಲಿ ಕಾಡಿಗೆಯಂ ತೊಳೆದುಕೊಂಡು ಕೊಡುವವನಾಗು. ಅವರು ಆಜ್ಞಾಪಿಸಿದಂತೆ ನಡೆಯುವವನಾಗು. ನೀನು ಬಂದ ಬಳಿಕ ಯೋಗ್ಯನಾದ ನಿನಗೆ ವಾದವಿದ್ಯವನ್ನುಪದೇಶಿಸುವೆ"ನೆಂದು ಹೇಳಿ, ಕಾಡಿಗೆಯಂ ಚೂರ್ಣವಂ ಕೊಟ್ಟು ಕಳುಹಿಸಲು, ಹಾಗೇ ಆ ವೇಗಶರ್ಮನು ಆ ತುರಗವನ್ನೇರಿ ಜನಗಳಿಗೆ ಗೋಚರವಿಲ್ಲದೆ ಹೊರಟುಹೋಗುತ್ತಿದ್ದನು.

ಹೀಗೆ ಇರುವಲ್ಲಿ, ರಾಕ್ಷಸನು ಸ್ನಾನಾದಿಗಳಂ ಮಾಡಿ, ರಾಜಾಸ್ಥಾನಕ್ಕೆ ಬರುತ್ತ, ತನ್ನ ಮನಸ್ಸಿನಲ್ಲಿ, "ಮೊದಲು ಈ ನಂದರು ನಿಷ್ಕಾರಣವಾಗಿ ಮಾಡಿದ ಮೌರ್ಯಪುತ್ರರ ವಧೆಯಿಂದ ನಮ್ಮ ಸೇನಾಧಿಪತಿಗಳು ಮುಖ್ಯರಾದ ಜನಗಳಿಗೆ ಇವರಲ್ಲಿ ವಿಶ್ವಾಸ ತಪ್ಪಿ ತಮ್ಮ ಕಾರ್ಯಾರ್ಥವಾಗಿ ಸ್ವಾಮಿ ಭೃತ್ಯರಂತೆ ಇರುವರು. ಈಗ ಚಂದ್ರಗುಪ್ತನು ನಂದರ ಮೇಲೆ ದಂಡೆತ್ತಿ ಬರುವದಂ ತಿಳಿದು ಅವನಲ್ಲಿ ಅನುರಾಗವಂ ಮಾಡಿ ಇದ್ದಾರು. ಆತನು

ಶೂದ್ರಸ್ತ್ರೀಪೌತ್ರನಾಗಿ ರಾಜ್ಯಾರ್ಹನಲ್ಲವೆಂಬ ಪರಿಜ್ಞಾನವಂ ಬಿಟ್ಟಿದ್ದಾರು. ಈ ಅರ್ಥವಂ ಪರಿಶೋಧಿಸಿ ಅಧಿಕಾರವಂ ಬದಲು ಮಾಡುವದಕ್ಕೆ ಈಗ ಕಾರ್ಯ ಒದಗಿರುವ ಸಮಯದಲ್ಲಿ ಅದರ ಚರ್ಚೆಗೆ ಹೋಗಬಾರದು. ಈಗ ಈ ಸೇನಾಪತಿಗಳಂ ವಸ್ತ್ರಭೂಷಣಾದಿಗಳಿಂದ ಉಪಚರಿಸಿ, ಪ್ರೋತ್ಸಾಹಪಡಿಸಿ, ಚಂದ್ರಗುಪ್ತ[ನ]ಲ್ಲಿ ಇವರಿಗೆ ಉಪೇಕ್ಷೆ ಬರುವಂತೆ ಮಾಡಿ ಯುದ್ಧಕ್ಕೆ ಕಳುಹಿಸಬೇಕು" ಎಂದು ನಿಶ್ಚೈಸಿ, ನಂದರು ಕುಳಿತಿದ್ದ ಸಭಾಸ್ಥಾನಕ್ಕೆ ಹೋಗಿ, ಆ ಸೇನಾನಾಯಕರೆಲ್ಲರಂ ಕರೆಕಳುಹಿಸಿ, ಅವರಂ ಕುರಿತು ರಾಕ್ಷಸನಿಂತೆಂದನು:

"ಅಯ್ಯ ಸ್ವಾಮಿಕಾರ್ಯದುರಂಧರರಾದ ಬಾಗುರಾಯಣಾದಿ ಸೇನಾಪತಿಗಳಿರ, ನಂದರಿಗೆ ವೈರಿಯಾದ ಚಂದ್ರಗುಪ್ತನು ಪರ್ವತೇಶ್ವರನಂ ಕರೆದುಕೊಂಡು ಬಂದು, ಯುದ್ಧಮುಖದಿಂದ, ನಂದರಾಜ್ಯಾಧಿಪತ್ಯಕ್ಕೆ ತಾನು ಅರ್ಹನಲ್ಲದವನಾದರೂ, ಈ ರಾಜ್ಯವಂ ಶತ್ರುಗಳ ಪಾಲು ಮಾಡಬೇಕೆಂಬ ಬುದ್ಧಿಯಿಂದ ಬರುತ್ತಲಿದ್ದಾನಂತೆ. ನೀವು ನಿಮ್ಮ ವಂಶಪರಂಪರೆಯಾಗಿ ಬಹುಕಾಲದಿಂದ ಈ ಸಂಸ್ಥಾನಕ್ಕೆ ಆಪ್ತರು. ನಂದರ ಅಭ್ಯುದಯವೇ ನಿಮ್ಮ ಶ್ರೇಯಸ್ಸು. ಮಹಾಶೂರರಾದ ನಿಮ್ಮೆದುರಿಗೆ ನಿಲ್ಲುವದಕ್ಕೆ ಪರ್ವತೇಶ್ವರನು ಯಾವ ಪದಾರ್ಥ ? ಬಹುಯುದ್ಧಗಳಿಂದ ಸ್ವಾಮಿಕಾರ್ಯಗಳಂ ಮಾಡಿ ಖ್ಯಾತಿವಂತರಾದ ನಿಮಗೆ ಈಗ ಒದಗಿದ ಕಾರ್ಯ ಸ್ವಲ್ಪಯತ್ನಸಾಧ್ಯ. ಹಾಗಾದರೂ ಶತ್ರುಗಳಂ ನಿಗ್ರಹಿಸುವ ಯತ್ನವು, ಅಹೋರಾತ್ರಿಗಳಲ್ಲಿ ಜಾಗ್ರತೆಯಿಂದ ಸಮಯವಂ ನಿರೀಕ್ಷಿಸುತ್ತ, ಕಾರ್ಯವಂ ನಿರ್ವಹಿಸುತ್ತ, ಇನ್ನೂ ಯಶೋವಂತರಾಗುವುದು ಪರಮಧರ್ಮ.

ನಿಮ್ಮ ಹತ್ತು ಮಂದಿಯಲ್ಲಿ ನಿಮ್ಮಂತೆ ನಾನೂ ಒಬ್ಬನು. ನಾವು ಮಾಡತಕ್ಕ ಕಾರ್ಯವೇನೆಂದರೆ, "ಅಯ್ಯ ಬಾಗುರಾಯಣನೇ, ಎರಡುಲಕ್ಷ ಸೇನೆಯಂ ಕೂಡಿಕೊಂಡು, ಕೋಟೆ ಕೊತ್ತಳಗಳಂ ಉಕ್ಕಡ ಮುಂತಾದ ಸ್ಥಳಗಳಲ್ಲಿ ಫಿರಂಗಿ ಶೂಲ ಪ್ರಾಸ ಪಟ್ಟಿಸ ಕುಂತ ಶತಘ್ನಿ ಖಡ್ಗ ತುಪಾಕ ಬಾಣ ಮದ್ದು ಗುಂಡು ಮುಂತಾದ ಯುದ್ಧಸಾಮಗ್ರಿಯಂ ಅಪರಿಮಿತವಾಗಿ ಒದಗಿಸಿಕೊಂಡು, ಹೆಚ್ಚು ಸಂಬಳಗಳಿಂದ ಜನಕ್ಕೆ ಉತ್ಸಾಹ ಹೆಚ್ಚಿ ಬರುವಂತೆ ಮಾಡುತ್ತ, ಹಳಬರಾಗಿದ್ದ ಜನವಂ ಮೇಲೆ ನೋಡುತ್ತ ಇರುವಂತೆ ನೇಮಿಸಿ, ಕಾವಲಿಗಿದ್ದ ಜನಕ್ಕೆ ಇದ್ದ ಕಡೆಯಲ್ಲಿ ಅನ್ನೋದಕಗಳಂ ಒದಗಿಸಿಕೊಡುತ್ತ, ಅದೇ ಕಾರ್ಯದ ಮೇಲೆ ತಿರುಗುತ್ತ, ಪುರವಂ ರಕ್ಷಿಸುವನಾಗು.

ಅಯ್ಯ ಡಿಂಗಿರಾತ ಭದ್ರಭಟರುಗಳಿರ, ನಿಮ್ಮ ಬಳಿ ಎರಡುಲಕ್ಷ ತುರಗಗಳಂ ಎರಡುಸಹಸ್ರ ಮದಗಜಗಳಂ ಮೂರುಲಕ್ಷ ಪದಾತಿಗಳಂ ಸಹ [ತೆಗೆದುಕೊಂಡು] ನೀವು ಶತ್ರುಗಳು ಬರುವ ಮಾರ್ಗಕ್ಕೆದುರಾಗಿ ಹೋಗಿ, ಅವಕಾಶವಾದರೆ ಯುದ್ಧವಂ ಮಾಡುತ್ತ, ಶತ್ರುಗಳಿಗೆ ನೀರು ದೊರೆಯದಂತೆ ಮಾರ್ಗದಲ್ಲಿದ್ದ ಉದಕಗಳಂ ಕೆಡಿಸುತ್ತ, ಅಶಕ್ಯವಾದ ಮಡುಹುಗಳಲ್ಲಿ ವಿಷವಂ ಕದಡಿ, ತೃಣಕಾಷ್ಠಗಳಿಗೆ ಅಗ್ನಿಪ್ರವೇಶವಂ ಮಾಡಿಸಿ, ನೆರಳು ದೊರೆಯದಂತೆ ಮಾಡಿ, ಆ ದೇಶದ ಪ್ರಜೆಗಳಿಗೆ ಕಂದಾಯವಂ ಬಿಡಿಸಿ, ದಂಡಿನ ಮಾರ್ಗವಂ ತಪ್ಪಿಸಿ, ಹೊರಬ್ಬಾದ ಕೋಟೆ ದುರ್ಗಗಳಿಗೆ ಕಳುಹಿಸುತ್ತ, ಶತ್ರುಗಳ ಸೈನ್ಯಕ್ಕೆ ಬರುವ ಧನಧಾನ್ಯಗಳಂ ಸೂರೆಮಾಡುತ್ತ, ರಾತ್ರೀಕಾಲದಲ್ಲಿ ಸಮಯ ದೊರಕಿದರೆ ಹೊಕ್ಕು, ಪರರಾಯಸೇನೆಯಂ ಭೇದಿಸುತ್ತ, ಶತ್ರುಗಳ ವೈದ್ಯ ಪಾಚಕ ಪರಿಚಾರಕ ರಜಕ ಮಾಲ್ಯಕಾರಮುಖದಿಂದ ಔಷಧ ಅನ್ನ ಗಂಧ ತಾಂಬೂಲ ಜಲ ವಸ್ತ್ರ ಮಾಲ್ಯಗಳಲ್ಲಿ

ಶೀಘ್ರವಿಷಚೂರ್ಣಪ್ರಯೋಗವಂ ಮಾಡಿಸುತ್ತ, ಮದ್ಯ ಭಂಗಿ ಹೊಗೆಸೊಪ್ಪು ಕ್ಷಾರಾಮ್ಲ ತಿಲ ಗುಡ ಘೃತಗಳಲ್ಲಿ ಪಕ್ಷಮಾಸ ವಿಷಚೂರ್ಣವಂ ಬೆರಸಿ, ಶತ್ರುಸೈನ್ಯದಲ್ಲಿ ರಾತ್ರಿಯ ವೇಳೆ ಅಂಗಡಿಗಳಂ ಹಾಕಿ, ಅಗ್ಗವಾಗಿ ಮಾರುತ್ತ, ಅರುಣೋದಯ ಸಮಯದಲ್ಲಿ ಕಾಣಿಸಿಕೊಳ್ಳದಂತೆ ಕಪಟವರ್ತಕರಿಗೆ ನೇಮಿಸುತ್ತ, ನಿಶೆಯಲ್ಲಿ ಆನೆ ಕುದುರೆಲದ್ದಿಗಳಲ್ಲಿ ವಿಷಚೂರ್ಣವಂ ಹಾಕಿ, ಅದ^೧^ರಿ ಧೂಮಮುಖದಿಂದ ಅವುಗಳಂ ಕೊಲ್ಲುತ್ತ, ಗಾಳಿ ಮುಖದಲ್ಲಿ ಅಗ್ನಿಗೆ ವಿಷಚೂರ್ಣವಂ ಎರಚಿ, ಆ ಧೂಮಸ್ಪರ್ಶದಿಂದ ಶತ್ರುಜನಗಳಿಗೆ ಕ್ಷುದ್ರರೋಗವುಂಟಾಗುವಂತೆ ಮಾಡುತ್ತ, ಮಾರ್ಗದಲ್ಲಿ ಇರಕಟವಾದ ಕಣಿವೆಯಲ್ಲಿ ನೆಲ ಸುರಂಗವಂ ಮಾಡಿ, ಮದ್ದುಗಳಂ ಹೂಳಿಸಿ, ಬರುವ ಶತ್ರುಸೇನೆಗೆದುರಾಗಿ ಯುದ್ಧವಂ ಮಾಡುವವರಂತೆ ನಿಂತು, ಶತ್ರುಗಳು ಗುಂಪುಕೂಡಿದುದಂ ಕಂಡು ನೀವು ಹಿಮ್ಮೆಟ್ಟುತ್ತ, ಸುರಂಗಕ್ಕೆ ಅಗ್ನಿಯಂ ಮುಟ್ಟಿಸಿ, ಅದರ ಘಾತದಿಂದ ಶತ್ರುಗಳಂ ಸಂಹರಿಸುತ್ತ, ಮಾರ್ಗದಲ್ಲಿ ಇರುವರಾಗಿ" ಎಂದು ನೇಮಿಸಿ,

"ಅಯ್ಯ ಶೂರರಾದ ವಿಜಯವರ್ಮ ಬಲಗುಪ್ತರುಗಳಿರ, ಚಂದ್ರಗುಪ್ತನೆಂಬವನು ಶೂದ್ರಸ್ತ್ರೀಪೌತ್ರನಾದುದರಿಂದ ರಾಜ್ಯಕ್ಕೆ ಬಾಧ್ಯನಾಗದಿದ್ದರೂ ಪರ್ವತರಾಯನಂ ಕರೆದುಕೊಂಡು, ಅನಾಥಳಾದ ಸುಂದರಿಯಂ ವಿಟಜನ ಆಕ್ರಮಿಸಲೆಣಿಸುವಂತೆ, ಶೂರರಿಲ್ಲದ ಧನಿಕಸಂಘವಂ ಚೋರರು ಹೊಗುವಂತೆ, ಕೃಪಣನಾದ ಚಾಣಕ್ಯನೆಂಬ ವೈದಿಕನೊಡನೆ ಆಲೋಚಿಸುತ್ತ, ಬಹುಕಾಲ ಚಂದ್ರವಂಶಸ್ಥ ಮಹಾರಾಯರು ಮೊದಲುಗೊಂಡು ಇಂದಿನವರೆಗೂ ನಡೆದುಬಂದ ಮಹಾಸಿಂಹಾಸನಸ್ಥರಾಯರಿಂ ಪಾಲಿತವಾದ ಈ ರಾಜ್ಯವನ್ನು ನಿಕೃಷ್ಟರಾಗಿ ದೇವಬ್ರಾಹ್ಮಣಕಂಟಕರಾದ ಕಿರಾತ ಮ್ಲೇಚ್ಛ ಪಾರ್ವತೇಯರ ಪಾಲು ಮಾಡಿ, ಈ ರಾಜ್ಯಾಭಿಮಾನಿಗಳಾದ ಶೂರರ ಸೊಕ್ಕನ್ನಡಗಿಸುವೆನೆಂದು ಬರುತ್ತಲಿದ್ದಾನೆ. ಈ ಪುರದೇಶಗಳಲ್ಲಿ ಪತಿವ್ರತೆಯರಾಗಿ ಪರಪುರುಷರ, ಮುಖವಂ ನೋಡದಿರುವ ರಾಣಿವಾಸಿಗಳಾದ ಶೂರಪತ್ನಿಯರು ಹೇರಳವಾಗಿ ಇರುವರು. ಪರಸ್ತ್ರೀಯರಂ ಹಿಡಿವುದೆಂಬುದು ಈಗ ಬರುವ ಶತ್ರುಗಳ ಜಾತಿಸ್ವಭಾವವು. ಈ ದೇಶದಲ್ಲಿ ಅವರ ಸೇನಾಸಂಚಾರ ಮಾತ್ರದಿಂದ ಮಹಾಪ್ರಮಾದವುಂಟಾಗುವದರಲ್ಲಿ ಸಂಶಯವಿಲ್ಲ. ಇಲ್ಲಿ ಬಹುಮಂದಿ ಶೂರಸಂಘಗಳಿರುವಲ್ಲಿ ಹೀಗೆ ಸಂಭವಿಸುವದುಂಟೇ ಎಂದರೆ, ಆದರೂ ಹೇಳುವೆನು ಕೇಳಿ :

ಶೂರರು ಮೂರು ತೆರನಾಗಿ ಇಹರು. ಅದೆಂತೆಂದರೆ : ಪುರುಷನು ತನ್ನ ಬುದ್ಧಿಕೌಶಲ್ಯದಿಂದ ಉಂಟಾದ ಸಾಮದಾನಭೇದಗಳಿಂದ ದೂರದಲ್ಲಿಯೇ ಶತ್ರುಗಳಂ ತನ್ನ ಸ್ವಾಮಿಯ ಪಾದಾಕ್ರಾಂತರಾಗುವಂತೆ ಮಾಡುತ್ತ, ನದಿಗಳು ಸಮುದ್ರವಂ ಸೇರುವಂತೆ ಶತ್ರುಗಳ ಲಕ್ಷ್ಮಿಯರುಗಳನ್ನು ತನ್ನ ಸ್ವಾಮಿಯ ಸಾಮ್ರಾಜ್ಯಲಕ್ಷ್ಮಿಗೆ ಪರಿಚಾರಿಣಿಯರನ್ನಾಗಿ ಮಾಡುತ್ತಲಿರುವ ಮಂತ್ರಿ ಒಬ್ಬ ಶೂರನು. ಆತನಿಗೆ ಬುದ್ಧಿಯೇ ಶತ್ರುನಿಗ್ರಹ ಶಸ್ತ್ರವು. ಪ್ರಧಾನ ಶಸ್ತ್ರವೆಂಬುದು ಅಧಿಕಾರಲಾಂಛನವು.

ಮತ್ತು ಬಹುಸೇನೆಯಂ ಕಟ್ಟಿ, ಅವರು ಮಾಡುವ ಕಾರ್ಯವಂ ಧೈರ್ಯಸ್ಥೈರ್ಯವನ್ನರಿತು,

---

೧. ರ ಧೂಳೀ(ಕ)

ಕಾರ್ಯಾನುಗುಣ ಸಂಬಳ ಸಮ್ಮಾನಗಳಂ ಮಾಡುತ್ತ, ಕಾರ್ಯದಕ್ಷರ ಮುಂದೆ ಹೇಡಿಗಳಂ ಸಮ್ಮಾನಿಸದೆ, ನಿರಪರಾಧಿಗಳಂ ದಂಡಿಸದೆ, ಹೇಡಿಗಳ ಮುಂದೆ ಶೂರರಿಗೆ ಅಪಮಾನವಂ ಮಾಡದೆ, ತನ್ನಲ್ಲಿ ಭಯ ವಿಶ್ವಾಸವನ್ನುಂಟುಮಾಡಿಕೊಳ್ಳುತ್ತ, ಉತ್ಸಾಹ ತಗ್ಗದಂತೆ ನಂಬಿಕೆಗಳಂ ದೃಢಗೊಳಿಸುತ್ತ, ಸೇನೆಯಂ ಪೋಷಿಸುತ್ತ, ಯುದ್ಧಕಾಲದಲ್ಲಿ ತಾನು ಮುಂದಾಗಿ ನಿಂತು ಜನಗಳಂ ಪ್ರೋತ್ಸಾಹಗೊಳಿಸಿ, ಸೇನಾಮುಖದಿಂ ಶತ್ರುಗಳಂ ನಿಗ್ರಹಿಸಿ, ತಾನು ಜೀವಂತನಾಗಿ ಸ್ವಾಮಿಗೆ ಯಶಸ್ಸಂ ತನಗೆ ಖ್ಯಾತಿಯಂ ಸಂಪಾದಿಸುವನೊಬ್ಬ ಶೂರನು. ಆತನೇ ಸೇನಾಧಿಪತ್ಯಕ್ಕೆ ಯೋಗ್ಯನು.

ಮತ್ತು ತನಗೆ ಸ್ವಾಮಿ ಕೊಟ್ಟ ಸಂಬಳ ಸಮ್ಮಾನಸ್ಮರಣೆಯಿಂದ ಎದುರಾಗಿ ಬಂದ ಶತ್ರುಗಳ ಮೇಲೆ ಕಾಣಿಸಿಕೊಂಡು, ದೈವಬಲವಿದ್ದರೆ ಶತ್ರುವಂ ನಿಗ್ರಹಿಸಿ, ಅದಲ್ಲದಿದ್ದರೆ ಶತ್ರುವಿನಿಂದ ತಾನೇ ಸಂಹೃತನಾಗುವನೊಬ್ಬ ಶೂರನು. ಇವನೇ ಒಂಟಿಶೂರನೆಂಬುವನು. ಈ ಒಂಟಿಶೂರನಿಗೆ ಸೇನಾಧಿಪತ್ಯವಂ ಕೊಟ್ಟರೆ ಕೋಪ ಬಂದ ಸಮಯದಲ್ಲಿ ಹಾನಿ ವೃದ್ಧಿಗಳಂ ತಿಳಿಯದೆ, ಮೊದಲೇ ತಾನು ಕಿರುಬನಂತೆ ಶತ್ರುಗಳ ಮೇಲೆ ಬಿದ್ದು, ಅವ[ರಿಂ]ದ ತಾನು ಸಂಹೃತನಾಗಿ, ತನ್ನ ಸೇನಾಸಂಹಾರವಂ ಮಾಡಿಸಿ, ಸ್ವಾಮಿಕಾರ್ಯವಂ ಕೆಡಿಸುವನಾದುದರಿಂದ, ಈ ಕಲಿಯುಗದಲ್ಲಿ ಒಂಟಿಶೂರನಿಗೆ ಸೇನಾಧಿಪತ್ಯ ನಿರ್ವಾಹವು ಅಪ್ರಸಿದ್ಧವೆಂದು ಹೇಳಬೇಕು.

'ಸಂಘೇ ಶಕ್ತಿಃ ಕಲೌ ಯುಗೇ' ಎಂಬ ರೀತಿಯಲ್ಲಿ ಈ ಕಲಿಯುಗದಲ್ಲಿ ಶೂರಸಂಘದಿಂದ ಜಯವು, ಜಪಶೀಲರಾದ ಬ್ರಾಹ್ಮಣಸಂಘದಿಂದ ಶಾಪಾನುಗ್ರಹವುಂಟಾಗುವದೆಂದು ಹೇಳಬೇಕು.

ಪ್ರಕೃತವೇನೆಂದರೆ, ಈ ಮೂರು ತೆರದ ಶೌರ್ಯವು ನಿಮ್ಮ ಒಬ್ಬರೊಬ್ಬರಲ್ಲೇ ಇರುವದರಿಂದ ಶತ್ರುಗಳ ದೆಸೆಯಿಂದ ಅಭಿಭವ ಸಂಭವಿಸಲಾರದಿದ್ದರೂ, ನೀವು ನಮ್ಮ ಸಾಮಂತರಾದ ಪಶ್ಚಿಮದೇಶಾಧಿಪತಿಗಳ ಸೇನೆಗಳನ್ನು ನಿಮ್ಮಿಬ್ಬರ ಎಂಟುಲಕ್ಷ ಸೇನೆಯೊಡಗೂಡಿಕೊಂಡು, ಮುಂದೆ ಹೋಗುವ ಡಿಂಗಿರಾತ ಭದ್ರಭಟರಿಗೆ ಸಹಾಯವಂ ಮಾಡುತ್ತ, ಶತ್ರುಸೈನ್ಯವು ಸರಯೂನದಿಯ ಪೂರ್ವದಿಕ್ಕಿಗೆ ಬರದಂತೆ ಸಮಯೋಚಿತವಾಗಿ ಕಾದುಕೊಂಡು ಇರತಕ್ಕದ್ದೆಂ'ದು ಬಲಗುಪ್ತ ವಿಜಯವರ್ಮರಿಗೆ ನೇಮಿಸಿದ ಬಳಿಕ,

"ಕೇಳಿರೈ ಬುದ್ಧಿಸಂಪನ್ನರಾದ ಪುರುಷದತ್ತ ಲೋಹಿತಾಕ್ಷ ರಾಜಸೇನರುಗಳಿರಾ, ಈಗ ಪರ್ವತದೇಶಾಧಿಪತಿಯು ಸ್ವಬಲ ಪರಬಲ ವಿಚಾರಶೂನ್ಯನಾಗಿ ಮದಗಜದೊಡನೆ ಸೆಣಸಬೇಕೆಂಬ ಕತ್ತೆಕಿರುಬನಂತೆ ನಮ್ಮೊಡನೆ ಕಲಹವಂ ಮಾಡಿ ಜೀವಿಸೇನೆಂದು ಬರುತ್ತಲಿದ್ದಾನೆ. ಅವನು ಎಂಥವನೆಂದರೆ, ಹಳ್ಳ ತಿಟ್ಟು ಗಿಡ ಕೊರಕಲಿಂ ಕೂಡಿದ ಪರ್ವತಪ್ರಾಂತದಲ್ಲಿರುತ್ತ, ವೆಚ್ಚಕ್ಕೆ ಇಲ್ಲದಿದ್ದರೆ ಕಿರಾತದಸ್ಯುಗಳಂ ಕಟ್ಟಿಕೊಂಡು, ಗಿಡದ ಮರೆಯಿಂದ ಬಂದು ಪರದೇಶದ ಗ್ರಾಮ ಹುಂಡಿಗಳಿದ್ದರೆ ಕೊಳ್ಳೆಯಂ ಮಾಡಿ ಓಡಿಹೋಗಿ ಗಿಡವಂ ಸೇರುತ್ತ, ಅಟ್ಟಿಹೋದರೆ ಅಲ್ಲಿಂದ ಮತ್ತೂ ಹಿಂದಕ್ಕೆ ಓಡುತ್ತ, ಹೀಗೆ ಚೋರವೃತ್ತಿಯಲ್ಲಿ ಜೀವಿಸಿಕೊಂಡು ಇರುವ ವ್ಯಾಧರಂ ಗುಂಪುಮಾಡಿಕೊಂಡು, ತನ್ನ ಕೀಕಟದೇಶವಂ ಬಿಟ್ಟು ವಿಸ್ತಾರವಾಗಿ ಅರಣ್ಯವಲ್ಲದೆ ಸಮವಾಗಿ ಇರುವ ಈ ನಮ್ಮ ರಾಜ್ಯಕ್ಕೆ ಬಂದರೆ, ಜಲದಿಂದ ಹೊರಗೆ ಬಂದ ಜಲಜಂತುವಿನಂತೆ ನಮ್ಮ ಬಾಧೆಯಂ ಸಹಿಸಿ ನಿರ್ವಹಿಸುವುದುಂಟೇ ?

ಹುತ್ತಗಳಿಂದ ಎದ್ದು ಬರುವ ಚೇಳಿನ ಹಿಂಡುಗಳಂ ಕೈಕಾಲು ಸೋಕದಂತೆ ಹುಲ್ಲಿನ ಬೆಂಕಿಯಲ್ಲಿ ಸುಡುವಂತೆ ನಿಮ್ಮ ಎಂಟುಲಕ್ಷ ಸೇನೆಗಳಂ ನಾಲ್ಕು ತಂಡಗಳಂ ಮಾಡಿಕೊಂಡು, ವ್ಯೂಹವಂ ರಚಿಸಿಕೊಂಡು, ಶತ್ರುಸೇನೆಯು ಗಂಗಾನದಿಯಂ ದಾಂಟಿ ಗಿರಿವ್ರಜ ಮುಖವಾಗಿ ಶೋಣಭದ್ರಾನದಿಯಂ ದಾಂಟಿ ಬರದಂತೆ ಯುದ್ಧವಂ ಮಾಡುತ್ತ, ವ್ಯೂಹ ಭೇದಿಸದಿದ್ದರೆ ವ್ಯೂಹರಚನೆಯಲ್ಲಿ ಅಸಮರ್ಥರಾದ ಶತ್ರುಗಳು ಮುಂದುವರಿದು ಬರಲಾರರು. ಶತ್ರು ದುರ್ಬಲನೆಂದು ಇಷ್ಟು ಯತ್ನವೇಕೆಂದರೆ, ಮೊಲನ ಬೇಟೆಯಂ ಮಾಡುವನು ಹುಲಿಯ ಸಂಹಾರಸಾಮಗ್ರಿಯಂ ಸಂಪಾದಿಸಿ ತಿರುಗುತ್ತಲಿದ್ದರೆ ನಿಷ್ಫಲವಾಗದಂತೆ, ಶತ್ರುವು ಅಲ್ಪಸತ್ವನೆಂದು ಮಹತ್ಪ್ರಯತ್ನವಂ ಮಾಡದೇ ಇರಕೂಡದು.

ಅಯ್ಯ ರಾಜಸೇನನೇ, ಶತ್ರುಗಳ ಸೈನ್ಯದ ಜನಕ್ಕೆ ಬಂಧುಮಿತ್ರರಾಗಿ ನಮ್ಮ ಸೇನೆಯಲ್ಲಿ ಸಂಬಳಕ್ಕೆ ಇರುವ ಜನಗಳಂ ವಿಚಾರಿಸಿ, ನಮ್ಮ ಸೇನೆಯಲ್ಲಿ ಅಧಿಕಾರವಿದ್ದರೆ ಬದಲು ಮಾಡಿ, ದೇಶಾಂತರಕ್ಕೆ ಹೋಗಲೀಸದೆ, ಅರ್ಥವಣೆಯಲ್ಲಿ ಅಧಿಕಾರವಂ ನೇಮಿಸಿ, ಪುನಃ ಸೇನೆಯಲ್ಲಿ ಅಧಿಕಾರವಂ ನೇಮಿಸಕೂಡದು. ಈ ಜನಕ್ಕೆ ರಾಷ್ಟ್ರಾಧಿಕಾರವಂ ನೇಮಿಸಬಹುದೇ ಎಂದರೆ, ರಾಷ್ಟ್ರಾಧಿಕಾರ ಗುಣವಿದ್ದರೆ ನೇಮಿಸಬಹುದು. ಅಧಿಕಾರವಿಲ್ಲದ ಪರದೇಶದ ಬಿಡುಜನಗಳಿಗೆ ಇಮ್ಮಡಿಯಾಗಿದ್ದ ಸ್ವದೇಶದ ಜನದಲ್ಲಿ ಕೂಡಿಸಿ ಸೇನೆಯ ಹಿಂಭಾಗದಲ್ಲಿ ಇಡಬೇಕು. ರಾಷ್ಟ್ರಾಧಿಕಾರಿಯ ಗುಣವು ಯಾವದೆಂದರೆ, ಪ್ರಜಾರಂಜಕತ್ವ[೧]ವು, ಆರ್ಜಕತ್ವವು[೧], ಸ್ವಾಮಿಭಕ್ತಿ ಎಂಬ ಗುಣಗಳು ರಾಷ್ಟ್ರಾಧಿಕಾರಿಗೆ ಮುಖ್ಯಗುಣಗಳು ; ಪಾಪಭೀರುತ್ವ[೨]ವು, ಶಾಸ್ತ್ರಜ್ಞತ್ವವು[೨], ವ್ಯವಹರ್ತೃತ್ವವೆಂಬುವು ನ್ಯಾಯಾಧಿಕಾರಿಗುಣಗಳು ; ದಕ್ಷತ್ವವು, ಸ್ವಾಮಿಭಕ್ತಿಯು, ವಿಮರ್ಶೆಗಳೆಂಬುವು ಮಂತ್ರಿನಿಷ್ಠಗುಣಗಳು ; ಕಾರ್ಯಜ್ಞತ್ವವು, ಔದಾರ್ಯ, ಶೌರ್ಯ, ವಿಮರ್ಶೆ, ಆಸ್ತಿಕತ್ವ, ಅಪವಾದಭಯವೆಂಬುವು ಪ್ರಭುನಿಷ್ಠಗುಣಗಳು. ಇದರಲ್ಲಿ ವ್ಯತ್ಯಾಸವುಂಟಾದರೆ ದುರ್ಭಿಕ್ಷ ಭಯಗಳು ಸಂಭವಿಸುವವು.

ಅಯ್ಯ ಪುರುಷದತ್ತನೇ, ಸಮರ್ಥರಾದ ಗೂಢಚರರಂ ಶತ್ರುಸೇನೆಗೆ ಕಳುಹಿಸಿ, ಗುಂಪುಕೂಡಿ ಇದ್ದ ಬ್ರಾಹ್ಮಣಪಂಕ್ತಿಗಳಲ್ಲಿ, ಸೂಳೆಯರ ಮನೆಗಳಲ್ಲಿ, ಅಡಿಗೆಪರಿಚಾರಕರ ಗುಂಪಿನಲ್ಲಿ, ಜ್ಯೋತಿಷರಲ್ಲಿ ಇರುತ್ತ, ಶತ್ರುಗಳ ಉತ್ಸಾಹ ಉಪೇಕ್ಷೆ ಕೋಪ ಯುದ್ಧಾಭಿನಿವೇಶ ಸ್ವಜನಪ್ರೀತಿ ಮತ್ತತೆ ಜಾಗರೂಕತ್ವ ಮೊದಲಾದುದಂ ತಿಳಿಯುತ್ತ, ಅದಕ್ಕೆ ಪ್ರತೀಕಾರವಾದ ಯತ್ನವಂ ಮಾಡುತ್ತ, ಯುದ್ಧಭೂಮಿಯ ಹಳ್ಳ ತಿಟ್ಟುಗಳನ್ನರಿತು ಸಮಯಾನುಗುಣ್ಯವ್ಯೂಹವಂ ರಚಿಸುತ್ತ, ಶತ್ರುಸೇನೆ ಸ್ವಲ್ಪವಾಗಿ ಇದ್ದರೆ ಹೆಚ್ಚಾಗಿ ಕಾಣಿಸುತ್ತ, ಹೆಚ್ಚಾಗಿ ಇದ್ದರೆ ಸ್ವಲ್ಪವಾಗಿ ತೋರಿ ಅಧಿಕವಂ ನಿಗ್ರಹಿಸುತ್ತ, ಅಧಿಕವಾಗಿ ತೋರಿದರೆ ಅತ್ಯಧಿಕ ಹಿಂದೆ ಇದ್ದೀತೆಂದು ತೋರ್ಪಡಿಸುತ್ತ ವ್ಯೂಹವಂ ರಚಿಸುವ ಕೌಶಲ್ಯವಂ ತಿಳಿದಿದ್ದರೆ ಸ್ವಸೇನೆ ಸ್ವಲ್ಪವಾಗಿ ಇದ್ದರೂ ಅಧಿಕ ಸೇನಾಶತ್ರುಗಳಂ ನಿಗ್ರಹಿಸಬಹುದು. ಹೀಗೆ ಒದಗಿದ ರಾಜಕಾರ್ಯವಂ ನಿರ್ವಹಿಸಿ ಸೇನಾಪತಿಯು ಯಶೋವಂತನಾದರೆ ಪುತ್ರರು ಸಂಪಾದಿಸಿ ತಂದ ವಸ್ತುಗಳಿಂದ ಹೆತ್ತ ತಾಯಿ ಪುತ್ರರಂ ಪೋಷಿಸುವಂತೆ, ಉದಕವು ಶಂಖಮುಖದಿಂದ ಪಾವನತೀರ್ಥವಾಗುವಂತೆ, ಗೋಪೋಷಣೆಗೆ ಕೊಟ್ಟ

---

೧. ವು (ಕ) ೨. ವು (ಕ)

ತೃಣಜಲಗಳು ದೇವತಾಯೋಗ್ಯವಾದ ಕ್ಷೀರವಾಗುವಂತೆ, ಪ್ರಜೆಗಳಿಂದ ತಂದು ರಾಜಕೋಶದಲ್ಲಿ ಕೂಡಿಹಾಕಿದ್ದ ವಸ್ತುಗಳು ಪುನಃ ಪ್ರಜಾರಕ್ಷಣೆಗೇ ಹೊರತು ರಾಜಭೋಗಕ್ಕೆ ಯೋಗ್ಯಗಳಾಗಲಾರವು. ಪ್ರಜಾದ್ರವ್ಯದಲ್ಲಿ ಪ್ರಭುವಿಗೆ ಸ್ವತ್ವವಿಲ್ಲವಾದರೆ, ಪ್ರಭುವಿಗೆ ವೃತ್ತಿ ಯಾವದೆಂದರೆ, ಭುಜಾರ್ಜಿತವಾದ ಶತ್ರುಗಳ ದ್ರವ್ಯದಿಂದ ಜೀವನವೆಂದು ಮಹಾ ಋಷಿಗಳ ಮತವಾದುದರಿಂದ ಶ್ರೋತ್ರಿಯನು ಧಾರ್ಮ್ಯಾಗ್ನಿಯಂ ಅದರ ಭಸ್ಮದಿಂದಲೇ ಆಚ್ಛಾದನಗೈದು ರಕ್ಷಿಸುತ್ತ ಸುಕೃತಕ್ಕೆ ಪಾತ್ರನಾಗುವಂತೆ, ಪ್ರಜಾದ್ರವ್ಯದಿಂದ ಪ್ರಜಾ ರಕ್ಷಣೆಯಂ ಮಾಡುವ ಅರಸು ಶ್ರೇಯೋವಂತನಾಗುವನು. ಪ್ರಜೆಗಳು ಯಾರೆಂದರೆ, ಪ್ರಭು ಒಬ್ಬ ಹೊರತು ಮಿಕ್ಕವರೆಲ್ಲರೂ ಪ್ರಜೆಗಳು. ಅದರ ರಕ್ಷಣೆ ಯಾತರಿಂದಾಗುವ ದೆಂದರೆ, ವೃತ್ತಿಯಂ ಕಲ್ಪಿಸುವದರಿಂದ. ವೃತ್ತಿ ಯಾವದು ಎಂದರೆ, ಕಾರ್ಯನಿರ್ವಾಹ ಯೋಗ್ಯತೆಯಂ ತಿಳಿದು ಜೀವನವನ್ನುಂಟುಮಾಡುವದೆಂಬುದೇ ವೃತ್ತಿ. ಆ ಜೀವನ ಯಾವ ಮೂಲಕದಿಂದಲೆಂದರೆ, ಪ್ರಭು ಮಾಡುವ ತ್ಯಾಗ ದಾನಗಳಿಂದ. ಅದರಿಂ ಫಲವೇನೆಂದರೆ, ಇಹದಲ್ಲಿ ಲೌಕಿಕಕಾರ್ಯವನ್ನರಿತು ಕೊಡುವಣವೆಂಬುವದೇ ತ್ಯಾಗವು. ಇದೇ ಕೀರ್ತಿದಾಯಕವು. ದೇಶಕಾಲ ಪಾತ್ರವರಿತು ಕೊಡುವಣವೆಂಬುವದೇ ದಾನವು. ಇದು ಪ[ರ]ಲೋಕ ಸಾಧನವು. ದೀನಾನಾಥವಿಪನ್ನರಕ್ಷಣೆಯೆಂಬುವದು ಸಹ ಇವು ಎರಡರಲ್ಲಿಯೇ ಅಂತ ರ್ಭೂತಗಳು. ಇದರಲ್ಲಿ ವ್ಯತ್ಯಾಸವುಂಟಾದರೆ, ಕಟುಕನಿಗೆ ಕೊಟ್ಟ ಗೋವಿನಂತೆ, ಕುಲಹೀನನಿಗೆ ಕೊಟ್ಟ ಪುತ್ರಿಯಂತೆ, ಇಹದಲ್ಲಿ ನಿಂದ್ಯವೂ ಪರದಲ್ಲಿ ಹಾನಿಯೂ ಘಟಿಸುವದು. ಇದಂ ಶಾಸ್ತ್ರ ಸಜ್ಜನಮುಖದಿಂ ತಿಳಿದು ಪ್ರ[ಮ]ತ್ತನಾಗದೆ ಪ್ರಜಾರಕ್ಷಣೆಯಂ ಮಾಡುವ ಅರಸಿಗೂ ಕಾರ್ಯಾನುಗುಣ ಸಂಬಳಗಳಿಂದ ತುಷ್ಟರಾದ ಭೃತ್ಯರಿಗೆ ಸಹ ಇಹಲೋಕದಲ್ಲಿ ಯಶಸ್ಸೂ ಪರಲೋಕದಲ್ಲಿ ಶ್ರೇಯಸ್ಸೂ ಉಂಟಾಗುವ"ದೆಂದು

ಅಮಾತ್ಯ ರಾಕ್ಷಸನು ಬಾಗುರಾಯಣಾದಿ ಸೇನಾಪತಿಗಳಿಗೆ ನಿರೂಪಿಸಿ, ಬೊಕ್ಕಸದಿಂದ ಅನರ್ಘ್ಯಗಳಾದ ಮುಕ್ತಾಹಾರಂಗಳಂ ತುರಾಯಿಗಳಂ ವಜ್ರದ ಕಡಗಗಳಂ ರತ್ನದ ಬಾಹುಪುರಿ ಉಂಗುರಗಳಂ ತರಿಸಿ, ಅವರಿಗೆ ತಾನೇ ಅಲಂಕರಿಸಿ, ದಿವ್ಯದುಕೂಲಗಂಧಮಾಲ್ಯಗಳಿಂದುಪಚರಿಸಿ, ಕರ್ಪೂರವೀಳಯವಂ ಕೊಡಿಸಿ ಸಮ್ಮಾನಗೈಯುತ್ತಿರಲು, ಆ ಸೇನಾಪತಿಗಳಲಂಕರಿಸಿದ ನೂತನಾಭರಣಪ್ರಭಾನಿಕರದಿಂದ ಆಸ್ಥಾನವೆಲ್ಲವೂ ಇಂದ್ರಚಾಪ ತೋರಣಗಳಿಂ ಶೋಭಿಸುವಂತೆ ತೋರುತ್ತಿರಲು,

ಆಗ ನಂದರು ದಂಡೆತ್ತಿ ಹೋಗುವ ಸೇನಾಪತಿಗಳಂ ಕುರಿತು, "ಅಯ್ಯಾ ಶೂರರಾದ ಸೇನಾಪತಿಗಳಿರಾ, ಅಮಾತ್ಯರು ನೇಮಿಸಿದಂತೆ ಜಾಗ್ರತೆಯಿಂದ ರಾಜಕಾರ್ಯವಂ ನಿರ್ವಹಿಸ ತಕ್ಕದ್ದು" ಎಂದು ನೇಮಿಸಲು, ಆ ಮಾತಿಗೆ 'ಮಹಾಪ್ರಸಾದ'ವೆಂದು ನಂದರಿಗೆ ನಮಸ್ಕರಿಸಿ, ಸೇನಾಪತಿಗಳೆಲ್ಲರೂ ಅಪ್ಪಣೆಯಂ ತೆಗೆದುಕೊಂಡು ಹೋಗುತ್ತಿರಲು, ಆಗ ಸೇನಾಸಂಚಲನೆಯಿಂದ ಉಂಟಾದ ಧೂಳೀನಿಕರದಿಂದ ಪುರದ ಹೊರಗಣ ದಶದಿಕ್ಕುಗಳು ಅಂಧಕಾರ ಕವಿದಂತೆ ಸೂರ್ಯಾತಪವಂ ಮುಚ್ಚುತ್ತಲಿರಲು, ಆಗ ಬಾಗುರಾಯಣನು ಬಹುಸೇನೆಯಂ ಕೂಡಿಸಿಕೊಂಡು, ಯುದ್ಧಸಾಮಗ್ರ್ಯವಂ ಒದಗಿಸಿ, ಕೋಟೆ ಕೊತ್ತಲ ಮುಖ್ಯವಾದ ಸ್ಥಳಗಳಲ್ಲಿ ಸೇನೆಯಂ ನಿಲ್ಲಿಸಿ, ಪುರವಂ ರಕ್ಷಿಸುತ್ತಿದ್ದನು.

ಆಗ ನಂದರು ದೂತರ ಮುಖವಂ ನೋಡಿ, " 'ಎಲೈ, ಇಷ್ಟು ದಿವಸದವರೆಗೂ

ನಮ್ಮಿಂದ ಬಹುಮಾನಿತರಾಗಿ ಈಗ ವ್ಯಾಜಾಂತರದಿಂದ ಹೇಡಿಗಳಾಗಿ ನಿಂತವರನ್ನು ಯಥೋಕ್ತವಾಗಿ ಶಿಕ್ಷಿಸುತ್ತಲಿದೆ' ಎಂದು ಪುರದ ಬೀದಿಗಳಲ್ಲಿ ಡಂಗುರವಂ ಹಾಕಿ ಸಾರಿಸತಕ್ಕುದು ; ಗಂಗಾ ಸರಯೂ ಸಂಗಮದ ಉತ್ತರಭಾಗದಲ್ಲಿ ತಿಟ್ಟಾಗಿ ಇದ್ದ ಸ್ಥಳವಂ ನೋಡಿ, ರಾಜಭವನದಂತೆ ರಾಜಯೋಗ್ಯವಾದ ಗುಡಾರವಂ ಹಾಕಿ, ಅದರ ಸುತ್ತಲೂ ತೀಕ್ಷ್ಣವಾದ ಶೂಲಗಳಂ ನೆಡಿಸಿ, ಅದರ ಸುತ್ತಲೂ ಭಲ್ಲೆಯದವರಂ ನಿಲ್ಲಿಸಿ, ಅದರ ಹೊರಗೆ ಖಡ್ಗಪಾಣಿಗಳಾದ ತುರಗಾರೂಢರಂ ನಿಲ್ಲಿಸಿ, ಅದರ ಹೊರವಲಯದಲ್ಲಿ ಫಿರಂಗಿಗಳಂ ಜೋಡಿಸಿ, ಜಾ^ಮಿ^ಗೆಯವರಂ ನಿಲ್ಲಿಸಿ, ಅದರ ಸುತ್ತಲೂ ಮಹಾಗಂಭೀರವಾದ ಅಗಳು ತೋಡಿಸಿ, ನದೀಜಲವಂ ಬರುವಂತೆ ಮಾಡಿ ಸಿದ್ಧವಾಗಿ ಇರತಕ್ಕುದು ; ಬುಧವಾರದ ದಿವಸ ನಾವೇ ಜಯಾರ್ಥವಾಗಿ ತೆರಳುತ್ತಲಿದ್ದೇವೆ."[೨] "ರಾಜಪುತ್ರರುಗಳಿರ, ನೀವೆಲ್ಲರೂ ನಿಮ್ಮ ವಾಹನಂಗಳನ್ನೇರಿಕೊಂಡು ಸಂಗಡ ಬರತಕ್ಕುದು" ಎಂದು ರಾಜಪುತ್ರನಿಕರಕ್ಕೆ ನೇಮಿಸಿ, ಅಮಾತ್ಯ ರಾಕ್ಷಸನಂ ನೋಡಿ, "ಅಯ್ಯ ಅಮಾತ್ಯರೇ, ಬೇಸಿಗೆಯಲ್ಲಿ ವಿಜೃಂಭಿಸುವ ಅಗ್ನಿಗೆ ಚಂಡಮಾರುತ ಸಹಾಯವಾದಂತೆ ಯುದ್ಧಕುತೂಹಲವುಳ್ಳ ನಮಗೆ ನಿಮ್ಮ ಬುದ್ಧಿಸಹಾಯವಿರುವಲ್ಲಿ ಶತ್ರುವರ್ಗವು ತೃಣಪ್ರಾಯವು. ಮಹೋರಗಗಳಂತಿಪ್ಪ ಈ ಖಡ್ಗಮುಖದಿಂದ ಶತ್ರುಗಳಂ ಸಂಹರಿಸಿ, ಮುಂದಲೆಯಂ ಹಿಡಿದು ದುಷ್ಟಸ್ತ್ರೀಯನೆಳೆದುತರುವಂತೆ ಶತ್ರುಲಕ್ಷ್ಮಿಯರಂ ಕರೆತರುತ್ತಲಿದ್ದೇವೆ" ಎಂದು ಹೇಳಿ, ಅನರ್ಘ್ಯ ವಸ್ತ್ರಭೂಷಣ ಗಂಧಮಾಲ್ಯ ಕರ್ಪೂರವೀಳಯವನ್ನಿತ್ತು, ರಾಕ್ಷಸನನ್ನುಪಚರಿಸಿ ಕಳುಹಿಸಿ, ನಂದರು ತಮ್ಮ ಆಯುಧಶಾಲೆಗೆ ಬಂದು, ತಮಗೆ ಅಭಿಮತವಾದ ಆಯುಧಗಳಂ ತೆಗೆಸಿ, ಪೂಜಿಸಿ, ತಮ್ಮ ಅಂತಃಪುರಕ್ಕೆ ಬರುತ್ತಿದ್ದರು.

ಹೀಗಿರುತ್ತಿರಲು, ಅತ್ತಲಾ ಕ್ಷಪಣಕನ ಶಿಷ್ಯನಾದ ವೇಗಶರ್ಮನು ತನ್ನ ಗುರು ಕೊಟ್ಟ ಕಾಗದವಂ ತೆಗೆದುಕೊಂಡು, ಅರಣ್ಯಮಾರ್ಗವಾಗಿ ತ್ವರಿತದಿಂ ಹೋಗಿ, ತುರಗವನ್ನಿಳಿದು, ಪರ್ವತರಾಯಸೇನೆಯಲ್ಲಿ ಇರುವ ಚಾಣಕ್ಯನಂ ಕಂಡು, ತನ್ನ ಕಾಡಿಗೆಯನ್ನಳಿಸಿಕೊಂಡು, ಅಭಿವಂದಿಸಿ, ಆ ಕಾಗದವಂ ಕೊಡಲು, ಅದಂ ನೋಡಿಕೊಂಡು [ಆತಂ] ಚಂದ್ರಗುಪ್ತನಿಗಿಂತೆಂದನು :

"ಅಯ್ಯ ಕುಮಾರಕನೇ, ಈಗ ರಾಕ್ಷಸನು ಪರ್ವತರಾಯನಿಗೂ ಈತನ ಸಂಗಡ ಬಂದಿರುವ ಅರಸುಗಳಿಗೂ ಅಂತಃಕಲಹವನ್ನುಂಟುಮಾಡಿ ಅನಾಯಾಸದಿಂದ ತನಗೆ ಜಯವಂ ಸಂಪಾದಿಸುವದಕ್ಕೆ, ನಂದರಿಗೆ ಭೃತ್ಯರಾಗಿ ಈ ಅರಸುಗಳ ಬಳಿಯಲ್ಲಿ ಪ್ರೀತಿಪಾತ್ರರಾಗಿ ವರ್ತಕಧರ್ಮದಿಂದಿರುವ ಧನಗುಪ್ತಾದಿ ಎಂಟು ಮಂದಿ ಗೂಢಮಂತ್ರಿಗಳಿಗೆ ಕಾಗದವಂ ಬರೆದು ಚಾರರ ಮುಖದಿಂದ ಕಳುಹಿಸಿ ಇದ್ದಾನಂತೆ. ಈ ಅರ್ಥವಂ ತಿಳಿದು ಇರಬೇಕೆಂದು ನಮ್ಮ ಮಿತ್ರನಾದ ಇಂದುಶರ್ಮನು ಆ ವರ್ತಕರ ಹೆಸರುಗಳನ್ನು ಸಹ ಬರೆಸಿ ಕಳುಹಿಸಿ ಇದ್ದಾನೆ. ಈ ಕಪಟವೇ ನಂದರ ನಾಶಕ್ಕೆ ಕಾರಣವಾದೀತು. ಅವನು ಎಲ್ಲಿಗೆ ಹೋದಾನು. ಈಗಲೇ ಈ ಅರ್ಥವಂ ಪರ್ವತರಾಯನಿಗೆ ತಿಳುಹಿಸಿ, ಅದಕ್ಕೆ ಪ್ರತೀಕಾರವನ್ನಾಚರಿಸಿ ಜಯವಂ ಸಂಪಾದಿಸಬೇಕು. ಈಗ ಪರ್ವತರಾಯಸೇನೆಗಿಂತಲೂ ನಂದಸೇನೆ ಅಧಿಕವಾಗಿ

---

೧. ಲಿ (ಕ) ೨. [ಎಂದು ಅವರಂ ಕಳುಹಿ] ?

ಬಹುಶೂರ ಪರಿವೃತವಾಗಿ ಇರುವದರಿಂದ ಆ ಸೇನಾಸಂಹಾರವಂ ಮಾಡಿ ಆ ಬಳಿಕ ನಂದರಂ ನಿಗ್ರಹವಂ ಮಾಡುವದಕ್ಕೆ ಯತ್ನವಂ ಮಾಡಿದರೆ, ಯುದ್ಧಮುಖದಲ್ಲಿ ಉಭಯಸೇನೆಗಳೂ ಹತವಾಗಿ ನಂದರ ಸಂಹಾರವಶಕ್ಯವಾಗುವದು. ಅದರಿಂದ ಸೇನಾ ಸಮೇತರಾದ ನಂದರಂ ಸಂಹರಿಸಕೂಡದು. ನಾಗಸರದ ಧ್ವನಿಗೆ ಭ್ರಮಿಸಿ ಹುತ್ತವಂ ಬಿಟ್ಟು ಹೊರಗೆ ಬಂದ ಸರ್ಪಗಳಂ ಗಾರುಡಿಗ ಹಿಡಿಯುವಂತೆ, ಛದ್ಮನೆಯಿಂದ ನಂದರಂ ಸೇನೆಯಿಂದ ಹೊರಚ್ಚು ಮಾಡಿ, ಆ ಸಮಯದಲ್ಲಿಯೇ ಸಂಹರಿಸಬೇಕಾಯಿತು'' ಎಂದು ಹೇಳಿ, ವೇಗಶರ್ಮನಂ ನೋಡಿ, ''ಎಲ್ಕೆ, ನಾವು ಅರಸಿನ ಬಳಿಗೆ ಹೋಗಿ ಬರುವೆವು'' ಎಂದು ಹೇಳಿ,

ಚಾಣಕ್ಯನು ಪರ್ವತರಾಯನ ಬಳಿಗೆ ಹೋಗಿ ಉಚಿತಪ್ರಕಾರದಲ್ಲಿ ಕುಳಿತು, ''ಅಯ್ಯ ರಾಯನೇ, ಈ ಕಾಲದಲ್ಲಿ ಧನಮೂಲಕದಿಂದ ಮಿತ್ರರು ಶತ್ರುಗಳಾದಾರು. ಶತ್ರುಗಳು ಮಿತ್ರರಾದಾರು. ಅದೇನೆಂದರೆ, ಈಗ ಪಾಟಲೀಪುರದಲ್ಲಿ ಅಮಾತ್ಯ ರಾಕ್ಷಸನು ನೀನು ಚಂದ್ರಗುಪ್ತನಿಗೆ ಕೊಟ್ಟ ಅಭಯವಂ ತಿಳಿದು ನಿನಗೆ ಚಂದ್ರಗುಪ್ತನಲ್ಲಿ ಉಪೇಕ್ಷೆ ಉಂಟುಮಾಡುವದಕ್ಕೆ ಅಶಕ್ಯವಾದುದರಿಂದ ನಿಮಗೂ ನಿಮ್ಮ ವಶವರ್ತಿಗಳಾಗಿ ಇರುವ ಅರಸುಗಳಿಗೂ ಕಲಹವಂ ಗಂಟಿಕ್ಕಿ ತನಗೆ ಅಶಕ್ಯವಾಗಿ ಬಂದಿರುವ ರಾಜಕಾರ್ಯವಂ ಅನಾಯಾಸವಾಗಿ ಪರಿಹರಿಸಿಕೊಳ್ಳಬೇಕೆಂದು ಯತ್ನವಂ ಮಾಡಿ, ಇಲ್ಲಿಯ ಅರಸುಗಳ ಬಳಿಯಲ್ಲಿ ಇರುವ ವರ್ತಕರಿಗೆ ಕಾಗದಗಳಂ ಬರೆದು ಚಾರರಂ ಕಳುಹಿಸಿ ಇರುವ ವರ್ತಮಾನ ನಮಗೆ ತಿಳಿದು ಇರುವದರಿಂದ, ಅದಂ ಪರಿಶೋಧಿಸಬೇಕೆಂದು ಹೇಳುತ್ತಿರುವ ಸಮಯದಲ್ಲಿ,

ಹೊರಗೆ 'ಕೋ' ಎಂದು ಕೂಗುತ್ತಾ, 'ಕಟ್ಟು ಸಡಿಲಿಸಿ ನೀರ ಕೊಟ್ಟರೆ ಉಂಟಾದರ್ಥವಂ ಹೇಳುವೆನೆಂ'ದು ಕೂಗುವ ಧ್ವನಿಯಂ ಕೇಳಿ, ಆ ರಾಯನು ದೂತರ ಮುಖವಂ ನೋಡಲು, ಅವರು ಹೋಗಿ ವಿಚಾರಿಸಿ, ಆ ಜೋಗಿವೇಷಧಾರಿಯಾದ ಆ ಚಾರನು ಊದುವ [೧]ಸಿಂಗನಾತ[ದ]ಲ್ಲಿ[೧] ಇದ್ದ ಕಾಗದವಂ ತಂದು, ಆ ರಾಯನ ಮುಂದಿಟ್ಟು, ''ಬುದ್ಧೀ, ಈಗ ಕೂಗಿದವನು ಪಾಟಲೀಪುರದ ಗೂಢಚಾರನಂತೆ. ಈ ದಂಡಿನಲ್ಲಿ ಸ್ವದೇಶ ಪರದೇಶ ಜನವಂ ವಿಂಗಡಿಸಿ ನೋಡುವ ಶೇಖರನವರು ತಿಳಿದು, ಅವನಂ ಬಂಧಿಸಿ ತಂದು ಇದ್ದಾರೆ. ಅವನಲ್ಲಿ ಇದ್ದ ಕಾಗದಗಳು ಇವು'' ಎನಲು, ಆ ಕಾಗದಗಳಂ ಓದಿಸುವಲ್ಲಿ, ಕುಲೂತಪತಿ ಚಿತ್ರವರ್ಮನ ಬಳಿ[ಯ] ಧನಗುಪ್ತನಿಗೂ ಕಾಶ್ಮೀರಪತಿಯಲ್ಲಿ ಇರುವ ಶಾರಿಕಶೆಟ್ಟಿಗೂ ರಾಕ್ಷಸನು ಬರೆದು ಕಳುಹಿಸಿದ ಕಾಗದಗಳಾಗಲು, ಅದರ ವಿವರಗಳಂ ಆ ರಾಯನು ತಿಳಿದು, ಚಾಣಕ್ಯರಿಗಿಂತೆಂದನು :

''ಬುದ್ಧಿಸಂಪನ್ನರಾದ ಚಾಣಕ್ಯರೇ, ಈಗ ರಾಕ್ಷಸನ ವಿಷಯವಾಗಿ ಹೇಳಿದರ್ಥವು ನಿದರ್ಶನಕ್ಕೆ ಬಂತು. ಹೀಗೆ ಇನ್ನೂ ಯಾರಿಗೆ ಬರೆದು ಕಳುಹಿಸಿ ಇರುವನೋ ತಿಳಿಯಲಶಕ್ಯವಾಗಿ ಇದೆ'' ಎಂದು ಹೇಳಿ, ಆ ಕಾಗದಗಳಂ ಚಾಣಕ್ಯನಿಗೆ ತೋರಿಸಲು, ಅದಂ ನೋಡಿ ಚಾಣಕ್ಯನು ತನಗೆ ಕ್ಷಪಣಕನು ಬರೆದು ಕಳುಹಿಸಿದ ಕಾಗದವಂ ರಾಯನಿಗೆ ತೋರಿಸಲು,

---

೧. ಶಿಂಗನಾಥದಲ್ಲಿ (ಕ, ಗ)

ಅದರಲ್ಲಿ ಎಂಟು ಮಂದಿ ವರ್ತಕರು ನಂದರ ಕಡೆಯವರು ಎಂದು ನಿಶ್ಚಯವಾಗಲು, ಆಗ ರಾಯನು ಚಾಣಕ್ಯನಂ ನೋಡಿ, "ಈ ಜನಗಳಿಗೆ ಏನು ದಂಡನೆ ಮಾಡಬೇಕು" ಎಂದೆನಲು,

"ಅಯ್ಯ ರಾಯನೇ, ಶತ್ರುನಿಗ್ರಹಾರ್ಥವಾಗಿ ನಿನಗೆ [ನಿ]ಯಮ್ಯರಾಗಿ ಬಂದು ಇರುವ ಅರಸುಗಳಲ್ಲಿ ಪ್ರೀತಿಪಾತ್ರರಾಗಿ ಇರುವ ಈ ವರ್ತಕರಂ ದಂಡಿಸಿದರೆ, ಆ ಅರಸುಗಳಿಗೆ ಮುಖಭಂಗವಾದೀತು. ಇದು ಸಮಯವಲ್ಲವಾದುದರಿಂದ ಈ ವರ್ತಕರಿಗೆ ಕಾವಲಿಟ್ಟು, ಅವರವರ ದೇಶಕ್ಕೆ ಕಳುಹಿಸುವಂತೆ ಆಯಾಯಾ ಅರಸುಗಳಿಗೆ ನೇಮಿಸುವದೇ ಕರ್ತವ್ಯ" ವೆಂದು ಹೇಳುತ್ತಿರಲು, ಆಗ ಅರಸು ಚಿತ್ರವರ್ಮಮುಖ್ಯರಾದ ದೇಶಾಧಿಪತಿಗಳಂ ಕರೆ ಕಳುಹಿಸಿ,

"ಅಯ್ಯ ಅರಸುಗಳಿರಾ, ನಿಮ್ಮ ಬಳಿಯಲ್ಲಿ ಇರುವ ಈ ಬಗೆ ವರ್ತಕರು ನಂದರ ಭೃತ್ಯರೆಂದು ನಿದರ್ಶನಕ್ಕೆ ಬಂದುದರಿಂದ, ಈಗ ಇವರಂ ದಂಡಿಸದೆ ಕಾವಲಿಟ್ಟು ದೇಶ ಗಳಿಗೆ ಕಳುಹಿಸಿರಿ. ಅವರ ದೋಷವಂ ತಿಳಿಯಬೇಕಾದರೆ ಹಿಂದಳಿಂದಾದೀತು" ಎನಲು, ಆ ಮಾತಿಗೆ 'ಏನು ನಡೆದು ಇರುವದೋ' ಎಂದು ಶಂಕಿತರಾಗಿ, 'ಅಪ್ಪಣೆ ಮೇರೆಗೆ ಆಗಲಿ' ಎಂದು ಕೈಮುಗಿದು ಬಂದು, ತಮ್ಮ ಕಡೆ ವರ್ತಕರು ಎಂಟು ಜನವಂ ಕಾವಲಿಟ್ಟು ಹೊರಡಿಸುತ್ತಿರಲು,

ಅಷ್ಟರಲ್ಲಿಯೇ ಜೋಗಿವೇಷವಂ ಧರಿಸಿ ಪಾಟಲೀಪುರದಿಂದ ಬಂದ ಚಾರನಂ ನಾಸಿಕಾ ಚ್ಛೇದವಂ ಮಾಡಿಸಿ ದಂಡಿನಲ್ಲಿ ಡಂಗುರವಂ ಹಾಕಿ ಸಾರುತ್ತ ಬರುತ್ತಿರಲು, ಇದೆಲ್ಲವಂ ನೋಡಿ ಪಾಟಲೀಪುರದಿಂ ಬಂದಿದ್ದವರಲ್ಲಿ ಉಳಿದ [ಮೂ]ರು ಮಂದಿ ಚಾರರು ಭಯ[1]ಗ್ರಸ್ತ[1]ರಾಗಿ, ತಮ್ಮ ಬಳಿಯಲ್ಲಿದ್ದ ಕಾಗದಗಳಂ ಹರಿದು ಭಕ್ಷಿಸಿ, ತಪ್ಪಿಸಿಕೊಂಡು ಪಿಂತಿರುಗಿ ಓಡಲು, ಆಗ ಚಾಣಕ್ಯನು ಪರ್ವತರಾಯನಿಗಿಂತೆಂದನು :

"ಅಯ್ಯ ರಾಯನೇ, ನಂದಮಂತ್ರಿಯಾದ ರಾಕ್ಷಸನು ನಿಮಗೂ ನಿಮ್ಮ ಕಡೆ ಅರಸು ಗಳಿಗೂ ಮಿತ್ರಭೇದವಂ ಕಲ್ಪಿಸಿ ತಾನು ಸುಖಿಯಾದೇನೆಂದು ರಹಸ್ಯವಾಗಿ ಮಾಡಿದ ಯತ್ನವು ಇಲ್ಲಿ ನಡೆಯದೆ ಪ್ರಕಟವಾದುದರಿಂದ, ಪ್ರವಾಹಕ್ಕೆ ಸೈಕತಸೇತುವೆಯಂ ಕಟ್ಟಿದ ವನಂತೆ, ಭಗ್ನಮನೋರಥನಾದನು. ಇದು ಒಂದು ನಿನಗೆ ಜಯವೆಂದು ಹೇಳಬೇಕು. ಇನ್ನು ನೀನು ಸುಮ್ಮನಿರಬಾರದು. ಎಲ್ಲರಿಗೂ ತಿಳಿಯುವಂತೆ ಪ್ರಕಟವಾಗಿ ಕಾರ್ಯ ಪ್ರಯತ್ನವಂ ಮಾಡಿ ಜಯವಂ ಸಂಪಾದಿಸುವನಾಗು. ಹ್ಯಾಗೆಂದರೆ,

ನಂದರಿಗೆ ಮಿತ್ರರಾದ ಕಾಶೀರಾಯನಿಗೂ ಮೈಥಿಲನಿಗೂ ಮತ್ಸ್ಯದೇಶಾಧಿಪತಿಗೂ ಸಹ ಅವರು ಸೇನಾಸಮೇತರಾಗಿ ನಮಗೆ ಸಹಾಯವಾಗಿ ಬರುವಂತೆ ನಿರೂಪಗಳಂ ಬರೆಸಿ, ನಿಯೋಗಿಗಳ ಕೈಯಲ್ಲಿ [2]ಕೊಟ್ಟು ಕಳುಹಿಸುವನಾಗು, ಅದರಿಂದಾಗುವ ಕಾರ್ಯಲಾಭವಂ ನೀನೇ ನೋಡುತ್ತಲಿರುವೆ" ಎಂದು ಹೇಳಿ,

ಆ ರಾಯನ ಸಮ್ಮತಿಯಿಂದ ಕಾಶೀರಾಯ ಮುಖ್ಯರಾದ ಮೂರುಮಂದಿ ಅರಸುಗಳಿಗೆ ಸಹಾಯಕ್ಕೆ ಬರುವಂತೆ ಲೇಖನವಂ ಬರೆಸಿ, ಮೊಹರವಂ ಮಾಡಿ, ನಿಯೋಗಿಗಳ ಕೈಯಲ್ಲಿ

---

೧. ಸ್ಥ (ರ) ೨. ಕೊಟ್ಟು (ರ)

ಕೊಟ್ಟು, ಇಬ್ಬರಿಗೆ ಹೇಳತಕ್ಕ ಮಾತುಗಳಂ ಹೇಳಿಕಳುಹಿಸಿ, ಕಾಶೀಪಟ್ಟಣಕ್ಕೆ ಹೋಗುವ ಕಮಲಾಪೀಡನೆಂಬ ನಿಯೋಗಿಯಂ ಕರೆದು, ರಹಸ್ಯದಲ್ಲಿ ಆತ ಮಾಡತಕ್ಕ ಕಾರ್ಯಗಳೆಲ್ಲವಂ ವಿವರವಾಗಿ ಹೇಳಿ, ಅವನಂ ಕಳುಹಿಸಿ, ಚಾಣಕ್ಯನು ತಾನಿದ್ದೆಡೆಗೆ ಬರುತ್ತಿರಲು,

ಅತ್ತಲಾ ಪಾಟಲೀಪುರದಲ್ಲಿ ಇರುವ ಕ್ಷಪಣಕನು ತನ್ನ ಮನಸ್ಸಿನಲ್ಲಿ, "ರಾಕ್ಷಸನು ಪರ್ವತರಾಯನಿಗೂ ಅವರ ಬಳಿ ಅರಸುಗಳಿಗೂ ಅಂತಃಕಲಹವುಂಟಾಗುವಂತೆ ವರ್ತಕರಿಗೆ ಬರೆದಿದ್ದ ಕಾಗದಗಳು ಅವರಿಗೆ ತಲಪುವದಕ್ಕೆ ಮುಂಚಿತವಾಗಿಯೇ, ತನ್ನ ಶಿಷ್ಯನಾದ ವೇಗಶರ್ಮನ ಮುಖದಿಂದ ಈ ರಾಕ್ಷಸ ಮಾಡಿ ಇರುವ ಭೇದವು ಚಾಣಕ್ಯರಿಗೆ ತಿಳಿಯುವದರಿಂದ ರಾಕ್ಷಸನ ಯತ್ನವು ಭಗ್ನವಾಗುವದು ಸಿದ್ಧ ; ಈ ವರ್ತಮಾನವು ರಾಕ್ಷಸನಿಗೆ ತಿಳಿದರೆ ಭಗ್ನಮನೋರಥನಾಗಿ ಮತ್ತೆ ಯಾರಲ್ಲಿಯೂ ಸಂಶಯವಿಲ್ಲದೆ ನೂತನಪರಿಚಿತನಾದ ನನ್ನಲ್ಲಿ ಸಂದೇಹಪಟ್ಟು, ನನ್ನ ಸ್ವಭಾವವಂ ಪ್ರತ್ಯಕ್ಷ ಪರೋಕ್ಷದಲ್ಲಿ ಪರೀಕ್ಷಿಸಿ, ನನ್ನಲ್ಲಿರುವ ಕಪಟವು ಆತನಿಗೆ ನಿದರ್ಶನಕ್ಕೆ ಬಂದರೆ, ಪುಲಸ್ತ್ಯಪುತ್ರನ ಕಾರ್ಯಕ್ಕೋಸುಗ ಋಷಿವೇಷಮಂ ಧರಿಸಿ ಆಂಜನೇಯನಂ ವಂಚಿಸಲೆಣಿಸಿದ ಕಾಲನೇಮಿ[ಯ] ದುರ್ದಶೆ ನನಗೂ ಸಂಭವಿಸುವದರಿಂದ, ನಾನು ಕೆಲವು ದಿವಸ ಜಾಗರೂಕನಾಗಿ ಇರಬೇಕೆಂ"ದು ನಿಶ್ಚೈಸಿ,

ತನ್ನ ಶಿಷ್ಯರಂ ಕುರಿತು, "ಎಲೈ ಶಿಷ್ಯರುಗಳಿರಾ, ಈ ಪ್ರಕೃತದಲ್ಲಿ ನಮ್ಮ ಕಪಟಗಳು ರಾಕ್ಷಸನಿಗೆ ತಿಳಿಯುವಂತೆ ತೋರುತ್ತೆ. ಕೆಲವು ದಿವಸ ನಾವು ಜಾಗರೂಕರಾಗಿ ಇರಬೇಕು. ನೀವು ನಮ್ಮಲ್ಲಿ ವಿಶೇಷವಾಗಿ ಬಾರದೆ ನಿಮ್ಮ ಕೆಲಸಗಳಲ್ಲಿ ಜಾಗ್ರತೆಯಾಗಿ ಇರುವದು" ಎಂದು ನೇಮಿಸಿ ಕಳುಹಿಸಿ, ತಾನು ಪುರದ ಹೊರಗಣ ಜಗತೀಕಟ್ಟೆಯನ್ನಾಶ್ರಯಿಸಿ ಇರಲು,

ಆಗ ಚಾಣಕ್ಯನು ತಾನಿದ್ದೆಡೆಗೆ ಹೋಗಿ, ವೇಗಶರ್ಮನಂ ಕುರಿತು "ಏನೈ, ಪಾಟಲೀಪುರದಲ್ಲಿ ನಮ್ಮ ಕಡೆಯವರು ಯಾವ ಅಧಿಕಾರಿಗಳಲ್ಲಿ ಯಾರು ಇರುವರು ? ಏನು ಮಾಡುವರು ?" ಎಂದು ಕೇಳಲು, "ಸ್ವಾಮಿ ಉಪಾಧ್ಯಾಯರೇ, ಕ್ಷಪಣಕವೇಷವಂ ಧರಿಸಿದ ನಮ್ಮ ಉಪಾಧ್ಯಾಯರು ಅಮಾತ್ಯ ರಾಕ್ಷಸ[ನ]ಲ್ಲಿ ಜ್ಯೋತಿಷ ಮೊದಲಾದ ವಿದ್ಯಾಕೌಶಲಗಳಂ ತೋರುತ್ತ, ರಾಜಕಾರ್ಯವಂ ತಿಳಿಯುತ್ತ, ಆಪ್ತರಂತೆ ಇದ್ದಾರೆ. ಸಿದ್ಧಾರ್ಥಕನು ಬಾಗುರಾಯಣ ಶಕಟದಾಸರಲ್ಲಿ ಆಪ್ತವೈದ್ಯನಂತೆ ಇದ್ದಾನೆ. ಮಾಸೋಪವಾಸಿಯು ಮುನಿವೇಷವಂ ಧರಿಸಿ ಅರಸುಗಳು ಇಳಿಯು[ವ] ಸ್ಥಾನಕ್ಕೆ ನಾತಿದೂರದಲ್ಲಿ ಸರಯೂ ಸಂಗಮದ ಪೂರ್ವದಿಕ್ಕಿನಲ್ಲಿ ಮಾಡಿಸಿ ಇರುವ ಶತ್ರುಪಲಾಯನ ಜಪಶಾಲೆಯಲ್ಲಿ ಆರ್ತ್ವಿಜ್ಯವಂ ಕೈಕೊಂಡು, ಶಿಷ್ಯಚತುಷ್ಟಯಸಮೇತನಾಗಿ ಜಪಹೋಮಗಳಂ ಮಾಡುವನಂತೆ ತಮ್ಮ ಆಗಮನವನ್ನಪೇಕ್ಷಿಸುತ್ತ, ಅಲ್ಲಿಯೇ ಇದ್ದಾನೆ. ಸಮಿದ್ಧಾರ್ಥಕನು ಸಾಮುದ್ರಿಕಾಲಕ್ಷಣಗಳಂ ಹೇಳುತ್ತ ಭದ್ರಭಟಾದಿಗಳಲ್ಲಿ ತಿರುಗುತ್ತಲಿದ್ದಾನೆ. ಪಶುಲೋಮಕನು ಮಂತ್ರಜ್ಞನಾಗಿ ಡಿಂಗಿರಾತನ ಹೆಂಡತಿಯ ಪಿಶಾಚವಂ ಬಿಡಿಸುವನಂತೆ ಇದ್ದಾನೆ. ಇವರೆಲ್ಲರೂ ತಾವು ತಿಳಿದ ವರ್ತಮಾನವಂ ನಮ್ಮ ಉಪಾಧ್ಯಾಯರಿಗೆ ತಿಳುಹಿಸುತ್ತ ಎಲ್ಲ ಕಡೆಯಲ್ಲೂ ತಿರುಗುತ್ತಲಿದ್ದಾರೆ. ನಾನು ನಮ್ಮ ಉಪಾಧ್ಯರು ಹೇಳಿದಂತೆ ಕೇಳುತ್ತಲಿದ್ದೇನೆ" ಎಂದು ಹೇಳಲು,

ಆಗ ಚಾಣಕ್ಯನು "ಆಶ್ರಮದಲ್ಲಿ ಮೊದಲು ನಾನು ಇಂದುಶರ್ಮನಿಗೆ ಮೊಕ್ತಾ ಹೇಳಿ

ಕಳುಹಿಸಿದಂತೆ ಇಂದುಶರ್ಮನು ನಂದಸಂಹಾರಸಾಧನಗಳಂ ಸಿದ್ಧಮಾಡಿಕೊಂಡು ಇದ್ದಾನೆ. ಮುಂದಣ ಕಾರ್ಯಯತ್ನವಂ ಮಾಡುವದಕ್ಕೆ ವೇಗಶರ್ಮನ ಮುಖದಿಂದ ಮಾಸೋಪವಾಸಿಗೆ ಹೇಳಿಕಳುಹಿಸಬೇಕು" ಎಂದು ನಿಶ್ಚೈಸಿ.

"ಎಲೈ ವೇಗಶರ್ಮನೇ, ನೀನು ಹೇಳಿದುದೆಲ್ಲವೂ ಮನಸ್ಸಿಗೆ ಬಂತು. ಈಗ ಜಪಶಾಲೆಯಲ್ಲಿ ಬುದ್ಧಿವಂತನಾಗಿ ಇರುವ ಮಾಸೋಪವಾಸಿಗೆ ನಾವು ಹೇಳಿದೆವೆಂದು ರಹಸ್ಯದಲ್ಲಿ ಹೇಳತಕ್ಕ ಮಾತುಗಳೇನೆಂದರೆ, ನಂದರು ಪುರದಿಂದ ಹೊರಟು ದಂಡಿನ ಪಾಳಯದ ಗುಡಾರಕ್ಕೆ ಬರುವ ಸಮಯದಲ್ಲಿ ಶಿಷ್ಯಸಮೇತನಾಗಿ ಹೋಗಿ, ಅವರಂ ಕಾಣಿಸಿಕೊಂಡು, ಫಲಮಂತ್ರಾಕ್ಷತೆಯಂ ಕೊಟ್ಟು, ಪ್ರಕೃತೋಚಿತಮಾಧುರ್ಯವಾಕ್ಯವಂ ಹೇಳಿ, ಯಾವದಾದರೂ ಒಂದು ಅಮಾನುಷವ್ಯಾಪಾರವಂ ಹೇಳಿ, ಅವರಂ ಭ್ರಮೆಗೊಳಿಸಿ, ಆ ಮೂರನೆಯ ದಿವಸ ಮಾಡುವ ಹೋಮದ ಪೂರ್ಣಾಹುತಿಯ ದರ್ಶ[ನ]ಕ್ಕೆ ನಂದರು ನಾಲ್ಕನೆಯ ಜಾವದಲ್ಲಿ ಜಪಶಾಲೆಗೆ ಬರುವಂತೆ ನಿಷ್ಕರುಷೆಯಂ ಮಾಡಿ, ಜಪಶಾಲೆ ಸುತ್ತಲೂ ಶೂದ್ರಾದಿ ದರ್ಶನವಾಗದಂತೆ ಹೇಳಿ ಮಾಡಿಸಿ, ಈ ಅರ್ಥವಂ ತಿಳಿದು ಪುನಃ ನಾವಿದ್ದೆಡೆಗೆ ಬಂದು ತಿಳುಹಿಸುವನಾಗು. 'ಇಂದುಶರ್ಮನಲ್ಲಿ ರಾಕ್ಷಸನಿಗೆ ಕಾಪಟ್ಯ ತೋರದಂತೆ ಜಾಗರೂಕನಾಗಿ ಇರುವಂತೆ ನಡೆದುಕೊಳ್ಳುವದೆಂ'ದು ನಾವು ಹೇಳಿದವೆಂದು ನಮಗೆ ಮಿತ್ರನಾದ ಇಂದುಶರ್ಮನಿಗೆ ಹೇಳುವನಾಗು" ಎಂದು ಹೇಳಿ, ವೇಗಶರ್ಮನಂ ಕಳುಹಿಸಿ, ತಾನು ಆಹ್ನಿಕಕ್ಕೆ ಹೋಗುತ್ತಿರಲು.

ಅತ್ತಲಾ ಚಾಣಕ್ಯರು ಹೇಳಿ ಕಳುಹಿಸಿದ ಮೇರೆಗೆ, ಕಮಲಾಪೀಡನೆಂಬ ಪರ್ವತೇಶ್ವರನ ನಿಯೋಗಿಯು ಕಾಶೀಪಟ್ಟಣವಂ ತಲಪಿ, ತನ್ನ ಕಡೆ ಚಾರರಿಬ್ಬರಂ ಕಾಶೀಪಟ್ಟಣದಿಂದ ಪಾಟಲೀಪುರಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ನಿಂತು ಕಾಶೀಪಟ್ಟಣದ ಆಸ್ಥಾನದಿಂದ ಪಾಟಲೀಪುರಕ್ಕೆ ಹೋಗಿ ಬರುವ ದೂತರ ಗಮನಾಗಮನವಂ ತಿಳಿದು ತನಗೆ ಬಂದು ಹೇಳುವಂತೆ ನೇಮಿಸಿ ಕಳುಹಿಸಿ, ರಥದಿಂದಿಳಿದು, ಉಚಿತಪ್ರಕಾರದಿಂದ ಕಾಶೀರಾಯನಂ ಕಂಡು, ತಾನು ಪರ್ವತೇಶ್ವರರ ನಿಯೋಗಿಯೆಂದು ಹೇಳಿ, ಕೈಕಾಣಿಕೆಗಳಂ ಒಪ್ಪಿಸಿ, ಉಚಿತ ಪ್ರಕಾರ ಮಾತನಾಡಿ, ತನ್ನ ಬಳಿಯ ಲೇಖನವನ್ನೊಪ್ಪಿಸಲು, ಅದಂ ಕಾಶೀರಾಯನು ತಾನೇ ಬಿಚ್ಚಿ ಓದಿಕೊಳ್ಳುತ್ತಿರಲು.

"ಶ್ರೀಮತು ನಮ್ಮ ಪರಮಪ್ರಿಯರಾದ ಕಾಶೀರಾಜ ಮಹಾರಾಯರಿಗೆ ಪರ್ವತೇಶ್ವರರು ಮಾಡು[ವ] ವಿಜ್ಞಾಪನೆ : ಈಗ ಶತ್ರುಗಳಿಗೆ ಭೀತನಾಗಿ ನಮ್ಮ ಶರಣುಹೊಕ್ಕ ಚಂದ್ರಗುಪ್ತನಿಗೆ ಅಭಯವಂ ಕೊಟ್ಟು, ಆತನ ಪಿತ್ರಾರ್ಜಿತವಾದ ರಾಜ್ಯವನ್ನು ನಂದರ ಕಡೆಯಿಂದ ತೆಗೆದು ಆ ರಾಜ್ಯಾಧಿಪತ್ಯವನ್ನುಂಟುಮಾಡುವದಕ್ಕೆ ದಂಡೆತ್ತಿ ಹೊರಟು ಬಂದಿರುವದರಿಂದ, ಈ ವೇಳೆಯಲ್ಲಿ ನೀವು ಸೇನಾಸಮೇತರಾಗಿ ಬಂದು ನಮಗೆ ಸಹಾಯವಂ ಮಾಡಿದರೆ, ನೀವು ಮಾಡಿದ ಉಪಕಾರವು ಬಹುಕಾಲ ಸ್ಮರಣೆಗೆ ಬರುವದರಿಂದ ಕಡಮೆ ಯಾವದಿದ್ದರೂ ನೀವು ಹೇಳಿದಂತೆ ಆಗುವದು" ಎಂದು ಬರೆದಿರುವದಂ ನೋಡಿಕೊಂಡು ಕಾಶೀರಾಯನು ತನ್ನ ಮನಸ್ಸಿನಲ್ಲಿ, "ಈ ನಿಯೋಗಿ ಬಂದು ಇರುವ ವರ್ತಮಾನವಂ ನಮ್ಮ ಪ್ರಭುಗಳಾದ ನಂದರು ಮುಂಚಿತವಾಗಿಯೇ ತಿಳಿದರೆ, ನಮ್ಮಲ್ಲಿ ವಿಶ್ವಾಸವಂ ಬಿಡುವರು ; ಕೋಪಕ್ಕೂ ಪಾತ್ರನಾದೇನು. ಅದರಿಂದ ಈಗಲೇ ಜಾಗ್ರತೆ

ಯಾಗಿ ಈ ಅರ್ಥವು ನಂದರಿಗೆ ತಿಳಿಯುವಂತೆ ಮಾಡಬೇಕೆಂ"ದು ನಿಶ್ಚೈಸಿ, ಬಂದಿದ್ದ ನಿಯೋಗಿಯಂ ಕುರಿತು,

"ಅಯ್ಯಾ ನಿಯೋಗಿಯೇ, ಇದಕ್ಕೆ ಉತ್ತರವಂ ನಾಳೆ ಹೇಳುವೆವು. ಬಿಡಾರದಲ್ಲಿ ಹೋಗಿ ಇರುವವನಾಗು" ಎಂದು ಹೇಳಿ ವೀಳಯವಂ ಕೊಡಿಸಲು, ಆ ನಿಯೋಗಿಯು ಕೈಮುಗಿದು ಬಂದು, ಆ ರಾಜಾಸ್ಥಾನದ ಬಾಗಿಲಲ್ಲಿ ಚಾರರಂ ಇರಿಸಿ, "ಇಲ್ಲಿ ನಾವು ಬಿಡಾರಕ್ಕೆ ಹೋದ ಬಳಿಕ ನಡೆದ ವರ್ತಮಾನವಂ ತಿಳಿದು ಬರುವದು" ಎಂದು ನೇಮಿಸಿ, ಬಿಡಾರಕ್ಕೆ ಬರುತ್ತಿರಲು,

ಆಗ ಕಾಶೀರಾಯನು ವಂದರಿಗೆ ತನ್ನ ಹೆಸರಿನಿಂದ ಕಾಗದವಂ ಬರೆಸಿ, ಅದರಲ್ಲಿ ನಿಯೋಗಿ ತಂದುಕೊಟ್ಟ ಕಾಗದವಂ ಸಹ ಜೋಡಿಸಿ, ಮೊಹರವಂ ಮಾಡಿ, ವೇಗಶಾಲಿಗಳಾದ ತುರಗಾರೂಢರಿಬ್ಬರಂ ಕರೆದು, "ಎಲೈ, ಈ ಕಾಗದವಂ ತ್ವರಿತದಿಂ ಹೋಗಿ ಈ ದಿನವೇ ನಂದಮಂತ್ರಿಯಾದ ಅಮಾತ್ಯ ರಾಕ್ಷಸನ ಕೈಯಲ್ಲಿ ಕೊಟ್ಟು, ಇದಕ್ಕೆ ಬದಲು ಬರೆಸಿಕೊಂಡು ನಾಳೆ ಸಾಯಂಕಾಲಕ್ಕೆ ಬರತಕ್ಕುದು" ಎಂದು ನೇಮಿಸಿ, ಕಾಗದವಂ ಕೊಡಲು, 'ಬುದ್ಧೀ' ಎಂದು, ಆ ತುರಗಾರೂಢರಾದ ಚಾರರು ತ್ವರಿತದಿಂದ ಪಾಟಲೀಪುರಕ್ಕೆ ಬಂದು, ರಾಕ್ಷಸನಂ ಕಂಡು, ಕಾಶೀರಾಜ ಬರೆದಿದ್ದ ತಮ್ಮ ಬಳಿಯ ಕಾಗದವಂ ಕೊಡಲು, ಅದಂ ಓದಿಕೊಂಡು ರಾಕ್ಷಸನು ನಂದರ ಸಮೀಪಕ್ಕೆ ಹೋಗಿ ಓದಿಕೊಡುತ್ತಿರಲು, ಅದರಲ್ಲಿ ಇದ್ದ ಒಕ್ಕಣೆಯೇನೆಂದರೆ :

"ಶ್ರೀಮತು ರಾಜಾಧಿರಾಜರಾದ ನಂದಸಾರ್ವಭೌಮರಿಗೆ ಸೇವಕನಾಗಿ ಪ್ರೀತಿಪಾತ್ರನಾದ ಕಾಶೀರಾಜನು ಮಾಡುವ ವಿಜ್ಞಾಪನೆ : ಏನೆಂದರೆ, ಈಗ ನಾನು ತಮ್ಮನನುವರ್ತಿಸುತ್ತ ಪ್ರೀತಿಪಾತ್ರನಾಗಿರುವದಂ ತಿಳಿಯದೆ, ಮುಗ್ಧತನದಿಂದ ಪರ್ವತರಾಯನು ನನ್ನಂ ತನಗೆ ಸಹಾಯವಾಗಿ ಬರಬೇಕೆಂದು ಕಾಗದವಂ ಬರೆದು ನಿಯೋಗಿಯ ಕೈಯಲ್ಲಿ ಕಳುಹಿಸಿ ಇದ್ದಾನೆ. ಆತನು ನನಗೆ ಕಳುಹಿಸಿದ ಕಾಗದವಂ ಸಹಾ ಸನ್ನಿಧಿಗೆ ಕಳುಹಿಸಿ ಇದ್ದೇನೆ. ಚಿತ್ತಕ್ಕೆ ತಿಳಿದು ಇರಬೇಕು. ಈಗ ಬಂದು ಇರುವ ನಿಯೋಗಿಯಂ ಕಾವಲಿಟ್ಟು, ಸನ್ನಿಧಿಗೆ ಕಳುಹಿಸತಕ್ಕುದೋ, ಹೋಗೆಂದು ಹೊರಡಿಸಿ ಬಿಡತಕ್ಕುದೋ, ಆ ಬಗ್ಗೆ ಅಪ್ಪಣೆ ಆಗಬೇಕು" ಎಂದು ಬರೆದಿದ್ದ ಕಾಗದಗಳಂ [1]ಓದಿಕೊಟ್ಟ[1] ರಾಕ್ಷಸನು ನಂದರಿಗಿಂತೆಂದನು :

"ಅಯ್ಯ ಅರಸುಗಳಿರಾ, ಮೊದಲು ನಾನು ಪರ್ವತರಾಯನಿಗೂ ಆತನ ಬಳಿಯ ಅರಸುಗಳಿಗೂ ಕಲಹವುಂಟಾಗುವಂತೆ ಮಾಡಿ ಇರುವ ಭೇದೋಪಾಯವನ್ನರಿಯದೆ, ನಮ್ಮ ಕಡೆ ಅರಸುಗಳಂ ಪರ್ವತರಾಯನು ತನಗೆ ಸಹಾಯವಾಗಿ ಬರಬೇಕೆಂದು ಕಾಶೀರಾಯನ ಬಳಿಗೆ ನಿಯೋಗಿಯಂ ಕಳುಹಿಸಿ ಇದ್ದಾನೆ. ಇದು ಏನು ನಿಮಿತ್ತವೋ, ವಿಮರ್ಶೆಯಂ ಮಾಡಬೇಕೆಂ"ದು ಹೇಳುತ್ತಿರುವ ಸಮಯದಲ್ಲಿ,

ಇದೇ ಮೇರೆಗೆ ಮತ್ಸ್ಯದೇಶಾಧಿಪತಿಯ ದೂತರು ತಂದ ಕಾಗದವಂ ರಾಕ್ಷಸನಿಗೆ ಕೊಡಲು, ಅದರ ವಿವರವಂ ನಂದರಿಗೆ ತಿಳುಹಿಸಿ, "ಹೀಗೇ ನಮ್ಮ ಕಡೆ ಅರಸುಗಳಿಗೆ ಎಷ್ಟು ಮಂದಿಗೆ ಬರೆದು ಕಳುಹಿಸಿ ಇದ್ದಾನೆಯೋ ? ನಮಗೆ ಪ್ರಿಯರಾದ ಅರಸುಗಳು

---

೧. ಓದಿಸಿಕೊಟ್ಟು (ಕ)

ಮತ್ತೆ ಒಬ್ಬರಿಗೆ ಸಹಾಯವಾಗುವದುಂಟೇ ? ಪರ್ವತರಾಯನು ದೂರಾಲೋಚನೆ ಉಳ್ಳವನಲ್ಲ" ಎಂದು ಹೇಳಿ, ಮತ್ತೊಂದರ್ಥವಂ ಯೋಚಿಸಿ, 'ಈಗ ನಾವು ಪರ್ವತ ರಾಯನಲ್ಲಿ ಮಾಡಿರುವ ಭೇದೋಪಾಯ ಸಿದ್ಧಿಸದಿದ್ದರೆ ಇನ್ನೂ ಒಂದು ಶತ್ರುಜಯ ಪ್ರಯತ್ನ ಇರಬೇಕಾದುದರಿಂದ, ಪರ್ವತರಾಯನು ಸಹಾಯಕ್ಕೆ ಅಪೇಕ್ಷಿಸಿ ಇರುವ ನಮ್ಮ ಮಿತ್ರರಾದ ಅರಸುಗಳ ಮುಖದಿಂದಲೇ ಆತನಂ ನಷ್ಟಗೊಳಿಸಬೇಕು. ಇದರಲ್ಲಿ ಮತ್ಸ್ಯ ದೇಶ ಪತಿಯು ನಮಗೆ ಮಿತ್ರನಾದವನಾದರೂ ಕಾರ್ಯದಕ್ಷನಾಗಿ ತೋರುವದಿಲ್ಲ. ಕಾಶೀ ರಾಯನು ಇಲ್ಲಿಗೆ ಸಮೀಪದೇಶದಲ್ಲಿ ಇರುವವನು ; ಪರಮಮಿತ್ರನು, ಕಾರ್ಯದಕ್ಷನು. ಅದರಿಂ ಕಾಶೀರಾಯನ ಮುಖದಿಂದಲೇ ಕಾರ್ಯವಾಗುವಂತೆ ಮಾಡಬೇಕೆಂ'ದು ನಿಶ್ಚೈಸಿ, ನಂದರಿಗೆ ಈ ಯೋಚನೆಯಂ ತಿಳುಹಿಸಿ, ಅವರ ಸಮ್ಮತಿಯಿಂದ ಪ್ರಕೃತೋಚಿತವಾಗಿ ಕಾಶೀರಾಯನಿಗೆ ನಿರೂಪವಂ ಬರೆಸಿ, ಮೊಹರವಂ ಮಾಡಿಸಿ, ಆಗ ಬಂದಿದ್ದ ಕಾಶೀ ರಾಯನ ಚಾರರ ಕೈಯಲ್ಲಿ ಕೊಟ್ಟು,

"ಎಲೈ, ಈ ದಿವಸವೇ ಕಾಶೀರಾಯನಿಗೆ ಈ ನಿರೂಪವಂ ಕೊಡಿ" ಎಂದು ಹೇಳಿ ಕಳುಹಿಸಲು, "ಬುದ್ಧೀ" ಎಂದು ಆ ದೂತರು ಕಾಶೀಪಟ್ಟಣಕ್ಕೆ ಬರುತ್ತಿರಲು,

ಕಾಶೀರಾಯನ ಆಸ್ಥಾನದ ಬಳಿಯಲ್ಲಿ ಇಟ್ಟಿದ್ದ ನಿಯೋಗಿಯ ಚಾರರು ಬಂದು, "ಸ್ವಾಮಿ ನಿಯೋಗಿಗಳೇ, ನೀವು ಬಿಡಾರಕ್ಕೆ ಬಂದ ಬಳಿಕ ತುರಗಾರೂಢರಾದ ಇಬ್ಬರು ಚಾರರು ಆಸ್ಥಾನದಿಂದ ಬಹುತ್ವರ್ಯವಾಗಿ ಈ ಪುರದ ಪೂರ್ವದ್ವಾರಮಾರ್ಗವಾಗಿ ಹೋದರು" ಎಂದು ಹೇಳಲು, ಅದು ಕೇಳಿ ಕಾಶೀರಾಯ ಹೇಳಿದಂತೆ ಪ್ರಾತಃಕಾಲಕ್ಕೆ ಆಸ್ಥಾನಕ್ಕೆ ನಿಯೋಗಿಯು ಹೋಗಿ, "ತಾನು ಬಂದು ಇದ್ದೇನೆ" ಎಂದು ಹೇಳಿ ಕಳುಹಿಸಲು, "ಈಗ ಸಮಯ ದೊರಕದು, ನಾಳೆ ಬರಬಹುದೆಂ"ದು ಆ ರಾಯ ಹೇಳಿ ಕಳುಹಿಸಲು, ಹಾಗೇ ನಿಯೋಗಿಯು ಬಿಡಾರಕ್ಕೆ ಬಂದಿರಲು, ಅಂದಿನ ಸಾಯಂಕಾಲಕ್ಕೆ ಪಾಟಲೀಪುರಕ್ಕೆ ಹೋಗಿ ಇದ್ದ ತುರಗಾರೂಢರಾದ ಚಾರರು ಅತಿತ್ವರ್ಯದಿಂ ಬಂದು, ತುರಗಗಳನ್ನಿಳಿದು, ರಾಕ್ಷಸ ಕೊಟ್ಟ ಕಾಗದವಂ ಕಾಶೀರಾಯನಿಗೆ ಕೊಡಲು, ಅದಂ ಓದಿಕೊಳ್ಳುತ್ತಿರಲು, ಅದರಲ್ಲಿ,

"ಶ್ರೀಮತು ನಮಗೆ ಪರಮಪ್ರಿಯರಾದ ಕಾಶೀರಾಯರಿಗೆ ನಂದರು ಮಾಡು[ವ] ವಿಜ್ಞಾಪನೆ : ಏನೆಂದರೆ, ನೀವು ಕಳುಹಿಸಿಕೊಟ್ಟ ಎರಡು ಕಾಗದವೂ ಬಂದು ತಲುಪಿತು. ಅದರ ಅಭಿಪ್ರಾಯವು ತಿಳಿಯಲಾಯಿತು. ನಮಗೂ ತಮಗೂ ಇರುವ ಮಿತ್ರತ್ವವನ್ನರಿಯದೆ, ಪರ್ವತರಾಯನು ಮೂಢತನದಿಂದ ನಿಮಗೆ ಬರೆಸಿ ಕಳುಹಿಸಿ ಇರುವದು ನಮ್ಮ ಕಾರ್ಯಕ್ಕೆ ಅನುಕೂಲವೆ ಆಯಿತು. ಅದಂತಿರಲಿ. ನಮಗೆ ಉಂಟಾಗುವ ಅಭ್ಯುದಯವೇ ನಿಮ್ಮದೆಂದು ತಿಳಿದು, ಇದೇ ಸಮಯದಲ್ಲಿ ನಿಮಗೆ ಪರ್ವತರಾಯ ಬರೆದು ಕಳುಹಿಸಿದ ಮೇರೆಗೆ ಒಪ್ಪಿಕೊಂಡು, ಸೇನಾಸಮೇತರಾಗಿ ಆತನಿಗೆ ಸಹಾಯವಂ ಮಾಡುವರಂತೆ ಹೋಗಿ, ಮಾರ್ಗಮಧ್ಯದಲ್ಲಿ ಇಳಿದಿದ್ದರೆ, ತನ್ನ ಮಾತಂ ಮೀರಲಾರದೆ ಸಹಾಯಕ್ಕೆ ಬಂದರೆಂದು ಪ್ರೇಮದಿಂದ ಆ ಪರ್ವತರಾಯನು ನಿಮ್ಮನ್ನೆದುರುಗೊಂಡು ಕರೆದುಕೊಂಡು ಹೋಗುವದಕ್ಕೆ ಚಂದ್ರಗುಪ್ತನನ್ನೇ ಕಳುಹಿಸಿಯಾನು. ಹಾಗೆ ಆದರೆ, ಆ ಸಮಯದಲ್ಲಿ ಚಂದ್ರಗುಪ್ತನಂ ಸಂಹರಿಸತಕ್ಕುದು. ಅದಲ್ಲದೆ ಆತನಿಗೆ ಪುತ್ರನಾದ ಮಲಯ

ಕೇತುವಂ ಕಳುಹಿಸಿಕೊಟ್ಟರೆ, ಸರ್ವಪ್ರಯತ್ನದಿಂ ಆತನಂ ಸೆರೆಪಿಡಿದು ನಾವಿದ್ದೆಡೆಗೆ ಕರೆತರತಕ್ಕುದು. ಇದಲ್ಲದೆ ಮತ್ತೆ ಯಾರಾದರಂ ಕಳುಹಿಸಿ ಕೊಟ್ಟರೆ, ಒಡಂಬಟ್ಟು, ಪರ್ವತರಾಯಸೇನೆಯಲ್ಲಿ ಇಳಿದು, ಸಮಯವನ್ನರಿತು, ಚಂದ್ರಗುಪ್ತನಂ ಸಂಹರಿಸಿದರೆ ಈಗಿನ ರಾಜಕಾರ್ಯವು ನಿಮ್ಮಿಂದ ನಿರ್ವಹಿಸಿದಂತಾಗುವದು. ನೀವು ಮಿತ್ರರಾಗಿ ಕಾಲ ದೇಶಜ್ಞರಾದುದರಿಂದ, ಕಾರ್ಯನಿರ್ವಾಹವಂ ಮಾಡ್ಯಾರೆಂದು ಬರೆದು ಕಳುಹಿಸಿ ಇದೆ. ಮುಂದೆ ನಿಮ್ಮ ಮನಬಂದಂತೆ ನಾವು ನಡೆದುಕೊಳ್ಳತಕ್ಕವರು."

ಎಂದು ಬರೆದು ಇರುವದಂ ನೋಡಿಕೊಂಡು, "ಈಗಿನ ರಾಜಕಾರ್ಯವಂ ನಂದರು ನನ್ನ ಮುಖದಿಂದಲೇ ಮಾಡಿಕೊಳ್ಳಬೇಕು [ಎಂದು] ಬರೆದು ಕಳುಹಿಸಿ ಇದ್ದಾರೆ. ಇದು ರಾಕ್ಷಸನ ಆಲೋಚನೆಯು" ಎಂದು ನಿಶ್ಚೈಸಿ, ಕಾಶೀರಾಯನು ತನ್ನ ಮಂತ್ರಿ ಸಂಗಡ ಈ ಅರ್ಥವನ್ನಾ ಲೋಚಿಸಿ, ಕರ್ತವ್ಯವೆಂದು ತಿಳಿದು, ಆಗಲೇ "ಪರ್ವತರಾಯನ ನಿಯೋಗಿಯಂ ಕರೆದು ತನ್ನಿ" ಎಂದು ದೂತರಂ ಕಳುಹಿಸಲು,

ಅಷ್ಟರಲ್ಲಿಯೇ ಕಾಶೀಮಾರ್ಗದಲ್ಲಿ ಇದ್ದ ಚಾರರು ಬಂದು, ಆ ನಿಯೋಗಿಯಂ ಕುರಿತು, "ಸ್ವಾಮಿ ನಿಯೋಗಿಗಳೇ, ನಿನ್ನೆ ದಿವಸ ಈ ಕಾಶೀಪಟ್ಟಣದಿಂದ ಪಾಟಲೀಪುರ ಮುಖವಾಗಿ ಹೋಗಿದ್ದ ತುರಗಾರೂಢರಿಬ್ಬರು ಈಗಲೇ ಬಹುತ್ವರಿತದಿಂ ಇಲ್ಲಿಯ ಆಸ್ಥಾನದ ಬಳಿಗೆ ಬಂದರು" ಎಂದು ಹೇಳುತ್ತಿರುವ ಸಮಯದಲ್ಲಿ, ಕಾಶೀರಾಯನ ದೂತರು ಬಂದು, "ಅರಸುಗಳ ಅಪ್ಪಣೆಯಾಗಿ ಇದೆ ; ಬರಬೇಕೆಂ"ದು ಕರೆಯಲು, ಹಾಗೇ ನಿಯೋಗಿ ಹೋಗಿ, ಕಾಶೀರಾಯನಂ ಉಚಿತಪ್ರಕಾರವಾಗಿ ಕಂಡು ಕುಳ್ಳಿರಲು,

ಆ ರಾಯನು "ಅಯ್ಯ ನಿಯೋಗಿಯೇ, ಗುಣಸಂಪನ್ನರಾದ ಪರ್ವತರಾಯರು ನಮ್ಮ ಸಹಾಯವನ್ನಪೇಕ್ಷಿಸಿದ ಬಳಿಕ ನಾವು ಮೀರಕೂಡದು. ಸೇನಾಸಮೇತರಾಗಿ ನಾವೇ ನಾಳೆ ಹೊರಡುತ್ತಲಿದ್ದೇವೆ. ಈ ಅರ್ಥವಂ ಬರೆದು ಕಳುಹಿಸುವನಾಗು" ಎನಲು,

"ರಾಜಾಧಿರಾಜರಾದ ಕಾಶೀರಾಯರೇ, ಲೋಕಪೂಜ್ಯರಾದ ದಿವೋದಾಸ ಮಹಾ ರಾಯರ ವಂಶಸ್ಥರಾಗಿ ಗುಣವಂತರಾಗಿ ಶೂರರಾದ ನೀವು ನಮ್ಮ ಪರ್ವತರಾಯರ ಸಹಾಯಕ್ಕೆ ಬರುವಲ್ಲಿ ಉಚಿತಪ್ರಕಾರ ನಿಮ್ಮನ್ನೆದುರುಗೊಂಡು ಕರೆದುಕೊಂಡು ಹೋಗು ವದಕ್ಕೆ ನಮ್ಮ ಅರಸುಗಳೇ ಬರಬೇಕು ಅಥವಾ ಚಂದ್ರಗುಪ್ತನನ್ನಾಗಲಿ ಪುತ್ರನಾದ ಮಲಯಕೇತುವನ್ನಾಗಲಿ ಕಳುಹಿಸಬೇಕಾಗುತ್ತಲಿದೆ. ತಾವು ಸಮ್ಮತಿಸಿ ಇರುವ ಅರ್ಥವಂ ಬರೆದು ಕಳುಹಿಸುತ್ತಲಿದ್ದೇನೆ. ಅದಕ್ಕೆ ಬದಲು ಬಂದ ಬಳಿಕ ವಿಜ್ಞಾಪಿಸುತ್ತಲಿದ್ದೇನೆ. ಆಗ ಪ್ರಯಾಣವಾಗಬಹುದು" ಎಂದು ಹೇಳಲು,

ಆ ಮಾತಿಗೆ ಆ ರಾಯನು ಸಮ್ಮತಿಪಟ್ಟು ನಿಯೋಗಿಯಂ ಬಿಡಾರಕ್ಕೆ ಕಳುಹಿಸಲು, ಆಗ ನಿಯೋಗಿಯು ಇಲ್ಲಿ ನಡೆದ ವರ್ತಮಾನಗಳೆಲ್ಲವಂ ವಿವರವಾಗಿ ಬರೆದು, ಮೊಹರವಂ ಮಾಡಿ, ಚಾರನ ಕೈಯಲ್ಲಿ ಕೊಟ್ಟು, "ಇದಂ ತ್ವರಿತದಿಂದ ಹೋಗಿ ಚಾಣಕ್ಯರಿಗೆ ಕೊಡು" ಎಂದು ನೇಮಿಸಿ ಕಳುಹಿಸಲು, ಆ ಚಾರನು ಹಾಗೇ ತೆರಳುತ್ತಿದ್ದನು.

ಮರುದಿವಸ ಆ ರಾಯನು ಆ ನಿಯೋಗಿಯಂ ಕರೆಕಳುಹಿಸಿ, "ಏನೈ, ನೀನು ನಿಮ್ಮ ಅರಸುಗಳಿಗೆ ಬರೆದಿದ್ದುದಕ್ಕೆ ಬದಲು ಬಂತೇನೈ ?" ಎನಲು, "ಬುದ್ಧೀ, ನಾಳೆ ನಾಡಿದರಲ್ಲಿ ಬದಲು ಬಂದೀತು, ವಿಜ್ಞಾಪಿಸುವೆನು" ಎನಲು, ಹಾಗೇ ಮತ್ತೊಂದು ದಿವಸ ಕೇಳಿದರೆ,

"ರಾಜ್ಯಕಾರ್ಯ ಬಲವಾಗಿ ಮಾರ್ಗನಿರೋಧವಾದುದರಿಂದ ಬದಲು ಬರುವದಕ್ಕೆ ಸಾವಕಾಶವಾಯಿತು" ಎಂದು ಹೇಳುತ್ತ, ಕಾಲಹರಣವಂ ಮಾಡುತ್ತ, ಕಾಶೀರಾಯನಂ ಹೊರಡಲೀಸದೆ, ಮಣಿಕರ್ಣಿಕಾಸ್ನಾನತತ್ಪರನಾಗಿ, ಚಾಣಕ್ಯರು ಹೇಳಿಕಳುಹಿಸಿದಂತೆ ಶುಭಸಮಾಚಾರ ಬರುವದಂ ನಿರೀಕ್ಷಿಸುತ್ತ, ಆ ನಿಯೋಗಿಯು ಕಾಶೀಪಟ್ಟಣದಲ್ಲಿಯೇ ಇರುತ್ತಿರಲು.

ಆ ನಿಯೋಗಿ ಕೊಟ್ಟ ಕಾಗದವಂ ಚಾರನು ತಂದು ಚಾಣಕ್ಯನಿಗೆ ಕೊಡಲು, ಅದಂ ಓದಿಕೊಂಡು, ಅದರರ್ಥವಂ ಚಾಣಕ್ಯನು ಪರಿಭಾವಿಸುತ್ತಲಿದ್ದನು. ಏನೆಂದರೆ, "ನಾನು ನಿಯೋಗಿಯ ಕೈಯಲ್ಲಿ ಕೊಟ್ಟ ಕಾಗದವಂ ಕಾಶೀರಾಯನು ಓದಿಕೊಂಡು, 'ಇದಕ್ಕೆ ಉತ್ತರವಂ ನಾಳೆ ಹೇಳುವೆನೆಂ'ದು ಹೇಳಿ ನಿಯೋಗಿಯಂ ಬಿಡಾರಕ್ಕೆ ಕಳುಹಿಸಿ, ಸಂಗಡಲೇ ತುರಗಾರೂಢರಂ ಪಾಟಲೀಪುರಕ್ಕೆ ಕಳುಹಿಸಿದುದರಿಂದ, ನಂದರ ಪ್ರಸಾದವನ್ನಪೇಕ್ಷಿಸುತ್ತ, ಅವರಿಗೆ ಮಿತ್ರನಾದ ಕಾಶೀರಾಯನು ನಾವು ಕಳುಹಿಸಿದ ಕಾಗದವಂ ಭೀತನಾಗಿ ನಂದರ ಬಳಿಗೆ ಕಳುಹಿಸಿ ಇದ್ದಾನು. ಕಾಶೀರಾಯ ಹೇಳಿದ ಮೇರೆಗೆ ನಮ್ಮ ನಿಯೋಗಿಯು ಎರಡು ಮೂರು ವೇಳೆ ಹೋಗಿ 'ಕಾಣಿಸಿಕೊಳ್ಳಬೇಕು' ಎಂದು ಹೇಳಿ ಕಳುಹಿಸಿದ್ದಕ್ಕೆ, ಸಮಯವಂ ಕೊಡದೆ, ಮತ್ತ 'ನಾಳೆ ಬರಬಹುದೆಂ'ದು ವಿಳಂಬವಂ ಮಾಡಿ ಹೇಳಿ ಕಳುಹಿಸಿದ್ದರಿಂದ, ನಾನು ನಂದರಿಗೆ ಬರೆದ ಕಾಗದಕ್ಕೆ ಬದಲು ಬರುವದಂ ನೋಡುತ್ತ, ಸಮಯವಂ ಕೊಡದೆ ಇದ್ದಾನು. ಅದರಿಂದ ಈ ನಿಯೋಗಿ ಬಂದಿದ್ದ ವರ್ತಮಾನವನ್ನು ನಂದರಿಗೆ ಬರೆದು ಕಳುಹಿಸಿ ಇರುವುದು ಸಿದ್ಧವೇ ಸರಿ. ಆ ಬಳಿಕ ಅದೇ ತುರಗಾರೂಢರು ಪಾಟಲೀಪುರದಿಂದ ಬಂದು ಕಾಗದವಂ ಕೊಡಲು, ಅದ[ಂ] ನೋಡಿಕೊಂಡು ಆಲೋಚಿಸಿ, ಮಹಾನಿಶೆಯ ಅಂತದಲ್ಲಿ ತಾನಾಗಿ ಬಿಡಾರದಿಂದ ನಮ್ಮ ನಿಯೋಗಿಯಂ ಕರೆಸಿ, 'ನಾಳೆಯೇ ಪರ್ವತರಾಯನಿಗೆ ಸಹಾಯವಾಗಿ ಸೇನಾಸಮೇತನಾಗಿ ಬರುತ್ತಲಿದ್ದೇನೆ ; ನೀನು ಬೇಗ ಹೊರಡುವನಾಗು' ಎಂದು ನಮ್ಮ ನಿಯೋಗಿಯ[ಂ] ತ್ವರಿತಬಡಿಸಿದ್ದರಿಂದ, ನಂದಮಂತ್ರಿಯಾದ ರಾಕ್ಷಸ[ನ] ಪತ್ರಿಕಾಭಿಪ್ರಾಯವಂ ತಿಳಿದು, ಪರ್ವತರಾಯನಿಗೆ ಸಹಾಯವಾಗಿ ಹೋಗುವೆನೆಂದು ಕಪಟವಂ ಮನಸ್ಸಿನಲ್ಲಿ ಇಟ್ಟು ಸೇನಾಸಮೇತನಾಗಿ ಬಂದು ಚಂದ್ರಗುಪ್ತನಿಗಾಗಲಿ ಪರ್ವತರಾಯನಿಗಾಗಲಿ ಮೋಸವನ್ನೆಣಿಸಿ ಘಾತಿಸಬೇಕೆಂದು ಯತ್ನವಂ ಮಾಡಿ ಇದ್ದಾನೆ" ಅದರಿಂದ ರಾಕ್ಷಸನಿಗೂ ಕಾಶೀರಾಯನಿಗೂ ಸಂಕೇತ ನಡೆದಿದ್ದೀತು. ನಿಯೋಗಿಯು ನಾವು ಹೇಳಿದಂತೆ ಅವನಂ ಇಲ್ಲಿಗೆ ಬರಲೀಸದೆ ಕಾಲಹರಣವಂ ಮಾಡುತ್ತ ಅಲ್ಲೇ ಇದ್ದಾನೆ. ರಾಕ್ಷಸನು ವಿಮರ್ಶೆಯಂ ಮಾಡಿದಂತೆ ಇದೇ ರೀತಿಗೆ ಮತ್ತೆ ಮೂರು ಮಂದಿ ನಂದರ ಮಿತ್ರರಾದ ಅರಸುಗಳಿಗೂ ಇದೇ ಮೇರೆಗೆ ನಿಯೋಗಿಗಳಂ ಕಳುಹಿಸಿ ಇದ್ದೇನೆ. ನಾನು ಮಾಡಿದ ಛದ್ಮನೆಯಂ ತಿಳಿಯದೆ, ರಾಕ್ಷಸನು 'ಕಾಶೀರಾಯನ ಮುಖದಿಂದ ಛದ್ಮನೆಯಂ ಮಾಡಿಸಿ, ಪರ್ವತರಾಯನಂ ನಿಗ್ರಹಿಸುವೆನೆಂ'ದು ತಿಳಿದು ಇದ್ದಾನು. ಈ ಅರ್ಥವಂ ನಂದರು ತಿಳಿದೇ ಇದ್ದಾರು. ಹೀಗೆ ನಂದರು ತಿಳಿದಿರಬೇಕೆಂಬುವದೇ ನನ್ನ ಮನೋಗತಾಭಿಪ್ರಾಯವು. ನಂದರಿಗೂ ಅವರ ಸೇನೆಯು ವಿಯೋಗವಾಗುವದಕ್ಕೆ ಇದೇ ಕಾರಣವಾದೀತು. ಅದರಿಂದ ಇದು ಒಂದು ನಂದನಿಗ್ರಹಕ್ಕೆ ಪ್ರಥಮಸಾಧನವು. ಮಾಸೋಪವಾಸಿಯ ವಾಕ್ಯವು ದ್ವಿತೀಯಸಾಧನವಾಗಬೇಕು. ಶೇಖರಸೇನೆಯೇ ನಂದರ ನಿಗ್ರಹಕ್ಕೆ ತೃತೀಯಸಾಧನವಾದೀತು. ಈ ಮೂರು ಸಾಧನ ಉಂಟಾಗು

ವಲ್ಲಿ ನಂದರು ಯಾವ ಪಾತಾಳವಂ ಹೊಕ್ಕಾರು" ಎಂದು ಚಾಣಕ್ಯನು ನಿಶ್ಚೈಸಿ, ಸಾಯಾಹ್ನ ನಿಯಮಕ್ಕೆ ತೆರಳುತ್ತಿದ್ದನು ಎಂಬಲ್ಲಿಗೆ,

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಮಹೀಶೂರನರಪತಿ ಶ್ರೀಕೃಷ್ಣರಾಜೇಂದ್ರರಾಶ್ರಿತ ಹೊಯಿಸಣಿಗೆ ಕುಲಸಂಜಾತ ನಾರಾಯಣಶರ್ಮ ವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥ ದಲ್ಲಿ ರಾಕ್ಷಸಭೇದೋಪಾಯಭಂಗ ಕಥನವೆಂಬ ಪಂಚಮಾಶಯಃ ಸಮಾಪ್ತಃ.

ಷಷ್ಠಾಶಯ : ನಂದರ ಪ್ರಯಾಣಕಥನವು

ಅನಂತರದಲ್ಲಿ ಚಾಣಕ್ಯನಿಂದ ನಿಯುಕ್ತನಾದ ವೇಗಶರ್ಮನು ಮೊದಲಿನಂತೆ ತುರಗ ವನ್ನೇರಿ ಹೊರಟು, ನಂದರ ಶತ್ರುಪಲಾಯನ ಜಪಶಾಲೆಯಲ್ಲಿ ಇರುವ ಮಾಸೋಪ ವಾಸಿಯಂ ಕಂಡು, ಅವರಿಗೆ ಚಾಣಕ್ಯನು ಹೇಳಿದ ವಾಕ್ಯವೆಲ್ಲವಂ ಹೇಳಲು, ಆ ಮಾತಿಗೆ ಮಾಸೋಪವಾಸಿಯು ಚಾಣಕ್ಯನಿರುವ ದಿಕ್ಕಿಗೆ ಕೈಮುಗಿದು, "ಅಯ್ಯ ವೇಗಶರ್ಮನೆ, ಮಹಾತ್ಮರಾದ ಚಾಣಕ್ಯರು ನನ್ನಂ ತಮ್ಮ ಶಿಷ್ಯನಂತೆ ಭಾವಿಸಿ ಹೇಳಿ ಕಳುಹಿಸಿದ ಕಾರ್ಯವಂ ಇಷ್ಟು ಮಾತ್ರ ನಿರ್ವಹಿಸದಿದ್ದರೆ, ಪುನಃ ಅವರ ದರ್ಶನಕ್ಕೆ ಪಾತ್ರನೆಂತಹೆನು. ನೀನು ವೇಳೆ ವೇಳೆಗೆ ಬರುತ್ತಿರುವನಾಗು" ಎಂದು ಹೇಳಿ ವೇಗಶರ್ಮನಂ ಕಳುಹಿಸಲು, ಅಲ್ಲಿಂದ ಕ್ಷಪಣಕನ ಬಳಿಗೆ ಹೋಗಿ ಚಾಣಕ್ಯನು ಹೇಳಿ ಕಳುಹಿಸಿದರ್ಥವನೆಲ್ಲವಂ ಆತನಿಗೆ ತಿಳುಹಿಸಿ, ಆತ ಹೇಳಿದಂತೆ ವೇಗಶರ್ಮನು ವಿಂಗಡವಾಗಿ ಇರಲು,

ಮೊದಲು ರಾಕ್ಷಸನು ಕೊಟ್ಟ ಭೇದೋಪಾಯ ಪತ್ರಿಕಾಮೂಲದಿಂದ ನಾಸಿಕಾಚ್ಛೇದನ ಪೂರ್ವಕವಾಗಿ ಸಾರಿಸಿಕೊಂಡು ಬಂದ ಜೋಗಿಯನ್ನು ಕಪಟವರ್ತಕರೆಂಟುಜನವಂ ಕಾವಲಿಟ್ಟು, ಆ ದಂಡಿನಿಂದ ಹೊರಡಿಸುವದಂ ನೋಡಿ, ತಮ್ಮ ಕೈಯಲಿದ್ದ ಪತ್ರಿಕೆಗಳಂ ಪರಿಹರಿಸಿ ತಪ್ಪಿಸಿಕೊಂಡು ಓಡಿ ಬಂದ ಕಡಮೆ ಚಾರರು ಪಾಟಲೀಪುರವಂ ಸೇರಿ, ರಾಕ್ಷಸನಂ ಕಂಡು ಕೈಮುಗಿದು, "ಸ್ವಾಮೀ, ತಮ್ಮ ಅಪ್ಪಣೆ ಪ್ರಕಾರ ಇಲ್ಲಿಂದ ಶತ್ರುಸೇನೆಗೆ ಹೋಗಿ ಇದ್ದ ನಾಲ್ಕು ಜನದಲ್ಲಿ ಜೋಗಿವೇಷವಂ ಧರಿಸಿದ್ದ ಕಾರ್ಮಣನೆಂಬ ಚಾರನು ಅಲ್ಲಿಯ ಬೇಹುಗಾರರಿಗೆ ಸಿಕ್ಕಿ, ಅವನಲ್ಲಿದ್ದ ಕಾಗದಗಳೆರಡು ಪ್ರಕಟ[ವಾ]ಗಲು, ಮೂಗು ಕೊಯಿಸಿಕ್ಕೊಂಡು ಸಾರಿಸಿಕ್ಕೊಂಡು ಬರುವುದನ್ನು, ಅಷ್ಟರಲ್ಲಿಯೇ ಎಂಟುಮಂದಿ ವರ್ತಕರಂ ದಂಡಿನಿಂದ ಹೊರಡಿಸುವದಂ ಸಹ ನೋಡಿ, ನಾವು ಮಹಾಭೀತರಾಗಿ, ನಮ್ಮ ಬಳಿ ಕಾಗದವಂ ಹರಿದು ಪ್ರಾಣಸಮೇತರಾಗಿ ತಪ್ಪಿಸಿಕೊಂಡು ಬಂದೆವು. ಆ ಜೋಗಿಯ ಬಳಿಯ ಕಾಗದಗಳಿಂದ ಆ ವರ್ತಕರು ಪ್ರಕಟಕ್ಕೆ ಬಂದಂತೆ ತೋರುತ್ತೆ. ಇಲ್ಲಿಂದ ಹೋಗಿರುವ ನಮ್ಮ ಡಿಂಗಿರಾತಸೇನೆಗೂ ಶತ್ರುಸೇನೆಗೂ ಮಧ್ಯೆ ಆರುಯೋಜನ ಅವ ಕಾಶವಿದ್ದೀತು. ಶತ್ರುಗಳು ಸಮೀಪವಾಗಿ ತೆರಳಿಬಂದರು. ನಾಳೆ ನಾಡಿದ್ದರಲ್ಲಿ ಉಭಯ ಸೇನೆಗೂ ಕೈಕೂಡುವಂತೆ ತೋರುತ್ತೆ" ಎಂದು ಚಾರರು ಹೇಳಿದ ಮಾತುಗಳಂ ಕೇಳಿ,

ರಾಕ್ಷಸನು "ತಾನು ಶತ್ರುಗಳಲ್ಲಿ ಮಾಡಿದ ಭೇದೋಪಾಯಭಂಗ ಹೀಗೆ ಎಂದಿಗೂ ಆದುದಿಲ್ಲಾ" ಎಂದು ತಲೆ ತೂಗಿ, "ಈಗ ಶತ್ರುಸೇನೆಯಲ್ಲಿ ಸಿಕ್ಕಿದ ಒಬ್ಬ ಚಾರನ ಕೈಯಲ್ಲಿ ಇದ್ದ ಎರಡು ಕಾಗದಗಳಿಂದ ಇಬ್ಬರು ವರ್ತಕರು ಪ್ರಕಟಕ್ಕೆ ಬರಬೇಕಲ್ಲದೆ ಎಂಟು ಜನ

ವರ್ತಕರಂ ದಂಡಿಸದೆ ದಂಡಿನಿಂದ ಹೊರಡಿಸಿದ್ದಕ್ಕೆ ನಿಮಿತ್ತ ತಿಳಿಯಲಿಲ್ಲಾ. ಶತ್ರುಗಳಿಗೆ ನಮ್ಮ ಆಲೋಚನಾರಹಸ್ಯವು ತಿಳಿಯುವದಕ್ಕೆ ರಾಜಸನ್ನಿಧಿ[ಯ] ರಾಯಸದವರು ಕುಲ ಪರಂಪರಾ ಆಪ್ತರಾಗಿ ಇರುವದರಿಂದ, ಅವರಲ್ಲಿ ಈ ದೋಷವಂ ಹೇಳಕೂಡದು. ರಾಜಕಾರ್ಯರಹಸ್ಯಾಲೋಚನೆಯಲ್ಲಿ ಅನ್ಯವಾದ ಪಂಜರಸ್ಥಶುಕ ಸಹ ಅಲ್ಲಿ ಇರಕೂಡದು ಎಂಬ ನೀತಿಪ್ರವರ್ತಕರ ವಚನವಿರುವದರಿಂದ ಆ ವೇಳೆಯಲ್ಲಿ ತಪಸ್ವಿಯಾದ ಕ್ಷಪಣಕನು ಧ್ಯಾನಾಸಕ್ತನಾಗಿ ಇದ್ದವನಾದರೂ ಅವನಲ್ಲಿ ಕಪಟವುಂಟಾಗಿ ಇದ್ದರೆ, ಅದೇ ನಾನು ಮಾಡಿದ ಕಾರ್ಯಭಂಗಕ್ಕೆ ಕಾರಣವಾಗುವದು. ಮೀರಿಹೋದ ಕೆಲಸಕ್ಕೆ ವಿಮರ್ಶೆಯಿಂದ ಪ್ರಯೋಜನವಿಲ್ಲವೆಂದು ಉಪೇಕ್ಷೆಯಂ ಮಾಡದೆ ಈ ಕ್ಷಪಣಕನಂ ಪರೀಕ್ಷಿಸಬೇಕೆಂದು ನಿಶ್ಚೈಸಿ,

ಹೇಳಿದ ಕಾರ್ಯವಂ ಮಾಡುವಲ್ಲಿ ನಿಪುಣನಾದ ಒಬ್ಬ ಬ್ರಾಹ್ಮಣನಂ ಕರೆದು, ರಹಸ್ಯ ದಲ್ಲಿ, "ನೀನು ಕ್ಷಪಣಕನ ಪ್ರತ್ಯಕ್ಷ ಪರೋಕ್ಷಗಳಲ್ಲಿ ಅವನ ಶೀಲ ಸ್ವಭಾವವಂ ಚೆನ್ನಾಗಿ ತಿಳಿದು ಬಂದು ಹೇಳುವನಾಗು" ಎಂದು ಹೇಳಿ ಕಳುಹಿಸಿ, ಚಾರರಂ ನೋಡಿ, ತನ್ನ ಮನಸ್ಸಿನಲ್ಲಿ "ಚಂದ್ರಗುಪ್ತನಂ ಪಕ್ಷೀಕರಿಸಿ ಇರುವ ಚಾಣಕ್ಯನು ಬಹುಸಾಹಸವಂತನೆಂದು ತೋರುತ್ತೆ ; ಮುಂದೆ ನಂದರದೃಷ್ಟ ಹ್ಯಾಗಿರುವದೋ" ಎಂದು ವ್ಯಸನಪಡುತ್ತ, "ಎಲೈ ಚಾರರುಗಳಿರಾ, ಶತ್ರುಸೇನಾ ಮುಂಭಾಗದಲ್ಲಿ ಬರುವ ಸೇನಾಧಿಪತಿ ಯಾರು, ಹಿಂಭಾಗ ದಲ್ಲಿ ಯಾರು, ಅದರ ರೀತಿ ಎಂತಿರುವದು, ಹೇಳಿ" ಎನಲು,

"ಸ್ವಾಮಿ, ನಾವು ಕಂಡರ್ಥವಂ ಹೇಳುವೆವು. ಶತ್ರುಸೇನಾಗ್ರಭಾಗದಲ್ಲಿ ಭಿಲ್ಲ ಮಾತಂಗನೆಂಬ ಕಿರಾತಾಧಿಪತಿಯ ಸೇನೆಯು ಅನೇಕ [೧]ವ್ಯೂಹವಂ[೧] ರಚಿಸಿಕೊಂಡು ಕಾರ್ಮುಗಿಲ ತಂಡಗಳಂತೆ, ಕಲಿಪುರುಷನ ಬಂಧುಜನದ ಹಿಂಡೋ ಎಂಬಂತೆ, ವಾಯು ವೇಗದಿಂ ಕಂಪಿಸುವ ತಮಾಲವೃಕ್ಷವೀಥಿಯೋ ಎಂಬಂತೆ, ಚಲಿಸುತಿಹ ವೈವಸ್ವತನ ಚಮುವೋ ಎಂಬಂತೆ, ಭೂತಳವಂ ಭೇದಿಸಿಬಂದ ದಾನವಕುಲವೋ ಎಂಬಂತೆ, ಅರ್ಜುನಶರಾಘಾತದಿಂ ಮುರಿದು ಓಡಿ ನಷ್ಟರಾಗಿ ಪಿಶಾಚರೂಪವಂ ತಾಳಿದ ನಿವಾತ ಕವಚರೋ ಎಂಬಂತೆ, ನೀಲವರ್ಣವಾದ ಧ್ವಜದ ಭಯಂಕರವಾದ ಕಿರಾತಸೇನೆ ಬರುತ್ತಿಹುದು.

ಅದರ ಹಿಂಭಾಗದಲ್ಲಿ [೨]ರತ್ನ[೨]ವಸ್ತ್ರದಿಂ ರಂಜಿಸುತ್ತ, ಸಂಧ್ಯಾರಾಗಯುಕ್ತವಾದ ಪಶ್ಚಿಮ ದಿಕ್ತಟವಂ ನೋಡಿದಂತೆ ಹಂಸಚರಣಲಕ್ಷಣಲಕ್ಷಿತವಾದ ಧ್ವಜಪತಾಕೆಗಳಿಂದತಿರೌದ್ರ ಮಾಗಿ ಹೂಣಸೇನೆಯು ಬರುತ್ತಿಹುದು.

ಅದರ ಹಿಂಭಾಗದಲ್ಲಿ ಕದಳಿಕಾವನನಿಕರದಂತೆ ಹಸಿರುವರ್ಣಾವರ್ಣಿತವಸನಯುತ ವಾಗಿ, ಮಯೂರಪಿಂಛಲಕ್ಷಣಲಕ್ಷಿತವಾದ ಧ್ವಜದಿಂ ಕೂಡಿ, ಭಯಾನಕವಾದ ಚೀನರ ಸೇನೆಯು ಬರುತ್ತಿಹುದು.

ಅದರ ಹಿಂದೆ ಮಲಿನವಸ್ತ್ರಗಳಂ ಧರಿಸಿ, ಗಾರ್ದಭಸಮೂಹವಂ ನೋಡಿದಂತೆ, ಶಶಲಾಂಛನಲಾಂಛಿತವಾದ ಧ್ವಜದಿಂದತಿಭೀಮದರ್ಶನವಾಗಿ ಪಾರಸೀಕ ಸೇನೆಯು

---

೧. ವ್ಯವಹಾರವಂ (ಕ) ೨. ರಕ್ತ (ಘ)

ಬರುತ್ತಿರುವದು.

ಅದರ ಹಿಂದೆ ಪಕ್ವಮಾಂಸರಾಶಿಯಂ ನೋಡಿದಂತೆ ಕಾಷಾಯವಸ್ತ್ರಾಲಂಕೃತಮಾಗಿ, ತ್ರಿಪುಂಡ್ರಲಾಂಛನ ಲಾಂಛಿತವಾದ ಧ್ವಜದಿಂ ಕೂಡಿ, ಮೃತ್ಯುಬಳಗವೋ ಎಂಬಂತೆ ಶಕಸೇನೆ ಬರುತ್ತಿಹುದು.

ಅದರ ಪಾರ್ಶ್ವದಲ್ಲಿ ಕುಯಿಲಿಗೆ ಬಂದ ಕೇದಾರಭೂಮಿಯಂ ನೋಡಿದಂತೆ ಹಳದೀ ವರ್ಣವರ್ಣಿತವಸನನಿಕರದಿಂ ಶೋಭಿಸುತ್ತ, ಕಾಲಿಕಾಪುತ್ರರ ತಂಡದಂತೆ ಹರಿಣ ಲಾಂಛನಲಾಂಛಿತವಾದ ಧ್ವಜದಿಂ ಕೂಡಿ, ಅತಿಭೀಷಣವಾದ ಸಿಂಧುಪತಿಯ ಸೇನೆಯು ಬರುತ್ತಿಹುದು.

ಅದರ ವಾಮಭಾಗದಲ್ಲಿ ಸುವರ್ಣಸೈಕತಭೂಮಿಯಂ ನೋಡಿದಂತೆ, ಕಪಿಲವರ್ಣ ವರ್ಣಿತವಸನನಿಕರದಿಂ ಹೊಳೆಹೊಳೆಯುತ್ತ, ಅಶನಿಘಾತದಿಂ ಕೂಡಿದ ಕಾರ್ಮುಗಿಲ ಮಿಂಚುಗಳ ತಂಡಗಳು ಭೂಮಿಯನ್ನಡರುವಂತೆ, ತಾಳಧ್ವಜದಿಂದತಿಘೋರಮಾದ ಮಲಯಪತಿ ಸಿಂಹನಾದನ ಸೇನೆಯು ಬರುತ್ತಿಹುದು.

ಅದರ ಹಿಂಭಾಗದಲ್ಲಿ ಭೂಭಾಗವೆಲ್ಲವೂ ಚಿತ್ರಾಸ್ತರಣಮಯವಾದಂತೆ ಚಿತ್ರವಸ್ತ್ರ ಶೋಭಿತಮಾಗಿ, ಚಿತ್ರಮೃಗಲಾಂಛನಲಾಂಛಿತಕೇತನದಿಂ ಕೂಡಿ, ಪ್ರಳಯಭೈರವನ ಅನು ಚರ ನಿಕರದಂತೆ ಚಿತ್ರವರ್ಮನ ಸೇನೆಯು ಬರುತ್ತಿಹುದು.

ಅದರ ಹಿಂಭಾಗದಲ್ಲಿ ಶರತ್ಕಾಲಮೇಘನಿಕರದಂತೆ ಶುಭ್ರವಸ್ತ್ರವಂ ಧರಿಸಿ, ಆದಿ ವರಾಹನ ಘೂತ್ಕಾರಜಲಬಿಂದುನಿಕರದಂತೆ ಶುಭ್ರವಸ್ತ್ರಾನ್ವಿತವಾಗಿ, ಭೂತಗಳ ಹಿಂಡು ಬಿಡಿಸಿಕೊಂಡಂತೆ ಧೂಮರೇಖಾಲಾಂಛನಲಾಂಛಿತವಾಗಿ, ಮೇಘಪಂಕ್ತಿಯಂ ಭ್ರಮಣ ಗೊಳಿಪ ಪತಾಕಾಯುಕ್ತವಾಗಿ ಅತಿಭಯಂಕರಮಾದ ಪಾರ್ವತೇಯಸೇನೆ ಬರುತ್ತಿಹುದು.

ಅದರ ಹಿಂಭಾಗದಲ್ಲಿ ಶಿಶಿರಾಂತದ ವನನಿಕರದಂತೆ ಬಭ್ರುವರ್ಣಮಾಗಿ, ಪ್ರಾಣಿಗಳಂ ಭಕ್ಷಿಸಲು ಬರುವ ವ್ಯಾಘ್ರತಂಡಗಳಂತೆ ವ್ಯಾಘ್ರಲಾಂಛನಲಾಂಛಿತವಾದ ಧ್ವಜಪಟದಿಂ ಕೂಡಿ, ಸಾಗರತರಂಗಮಾಲೆಯೊಳು ಪ್ರತಿಬಿಂಬಿಸಿದ ಸೂರ್ಯಪ್ರಭಾಛಂದದಿಂ ಹೊಳೆ ಹೊಳೆವ ಖಡ್ಗ ಕುಂತಗಳಿಂದತಿಭೀಷಣವಾದ ಸಿಂಧುಪತಿಯ ಸೇನೆ ಬರುತ್ತಿಹುದು.

ಈ ಸೇನೆಯೆಲ್ಲವಂ ನೋಡುವ ಅನಿಮಿಷರ್ಗೆ ವೀರಲಕ್ಷ್ಮಿಗೆ ಮಾಡುವ ಚಿತ್ರನೀರಾಜ ನೋಪಚಾರದಂತೆ ತೋರುತ್ತಿಪ್ಪುದು'' ಎಂದು ಚಾರರು ಬಿನ್ನೈಸಲು,

ಅದಂ ಕೇಳಿ, ''ಶತ್ರು ಸಮೀಪವರ್ತಿಯಾದನು. ಈ ಪುರರಕ್ಷಣೆಗೆ ಇನ್ನು ಸನ್ನಾಹವಂ ಮಾಡಬೇಕು, ಕಾಲವಿಳಂಬವಂ ಮಾಡಬಾರದೆಂ''ದು ಯೋಚಿಸುತ್ತ, ರಾಕ್ಷಸನು ನಂದರ ಬಳಿಗೆ ಬರುತ್ತಿರಲು,

ಆಗ ವೃದ್ಧನಾದ ಸರ್ವಾರ್ಥಸಿದ್ಧಿರಾಯನು ಅಮಾತ್ಯ ರಾಕ್ಷಸನಂ ಕಂಡು, ಆತನ ಹಸ್ತಲಾಘವದಿಂದ ತನ್ನ ಪುತ್ರರಾದ ನಂದರ ಬಳಿಗೆ ಬಂದು, ಉಚಿತಪ್ರಕಾರದಿಂದ ಎಲ್ಲರೂ ಕುಳ್ಳಿರಲು, ನಂದರಿಗಿಂತೆಂದನು :

''ಅಯ್ಯ ಪುತ್ರರುಗಳಿರಾ, ಪರ್ವತರಾಯನೆಂಬುವನು ಬಹುದೇಶಾಧಿಪತಿಗಳಂ ಕೂಡಿ ಕೊಂಡು ನಮ್ಮ ಮೇಲೆ ದಂಡೆತ್ತಿ ಬರುವನಂತೆ. ನೀವು ಶೂರರಹುದು. ಶತ್ರುಸಂಘವು ಪ್ರಬಲವಾದರೆ ಸಮಯೋಚಿತವಾಗಿ ಸಂಧಿಯಂ ಮಾಡಿಕೊಂಡು, ಕೆಲವು ಕಾಲದ ಮೇಲೆ

ಆತನ ಬಳಿಯ ಅರಸುಗಳಿಗೆ ಭೇದವಂ ಕಲ್ಪಿಸಿ, ಹೊರಚ್ಚು ಮಾಡಿ, ಆ ಪರ್ವತರಾಯನ ಮೇಲೆ ದಂಡೆತ್ತಿ ಹೋದರೆ ನಿಗ್ರಹಕ್ಕೆ ಸಾಧ್ಯನಾದಾನು. ಇದು ನಮಗೆ ಅಪಮಾನವಲ್ಲ. ಇದು ಒಂದು ರಾಜಧರ್ಮವು. ನಾನು ವೃದ್ಧನಾದೆನು. ಈ ಅರ್ಥವು ನಮ್ಮ ಅಮಾತ್ಯ ರಾಕ್ಷಸನಿಗೆ ಸಮ್ಮತವಾದರೆ, ಹಾಗೆ ಮಾಡಿರಿ" ಎಂದು ಹೇಳುತ್ತಿರಲು, ಆ ಮಾತಿಗೆ ರಾಕ್ಷಸನು,

"ಜೀಯ, ಅಪ್ಪಣೆ ಕೊಡಿಸಿರ್ಥವು ಯುಕ್ತವೇ ಅಹುದು. ನನಗೆ ತೋರಿದರ್ಥವಂ ವಿಜ್ಞಾಪಿಸುವೆನು, ಅವಧರಿಸಬೇಕು" ಎಂದು ಕೈಗಳಂ ಮುಗಿದು, ಬಹುಸಾವಂತರಿಂದ ಪೂಜಿತಮಾದ ಪಾದಪದ್ಮಗಳಿಂದೊಪ್ಪುವ ನಿಮ್ಮ ದೇಶವನ್ನು ಶತ್ರುವಾಗಿ ಬಂದ ಪರ್ವತರಾಯನು ಬಂದು ಮೆಟ್ಟಿದ ಮಾತ್ರಕ್ಕೆ ಸಂಧಿಗೆ ಮಾತನಾಡಿದರೆ, ನಮ್ಮಂ ಅಶಕ್ತರೆಂದು ತಿಳಿದು ರಾಜ್ಯಕೋಶಂಗಳಂ ಬಯಸ್ಯಾನು. ಸ್ವಲ್ಪದಲ್ಲಿ ಪರ್ಯವಸಾನವಾಗ ಲಾರದು. ಬಹುಶೂರಸಂಘ ಸಮೇತವಾದ ನಮ್ಮ ಸೇನೆಯಂ ಶತ್ರುಗಳ ಮೇಲೆ ಯುದ್ಧವಂ ಮಾಡುವಂತೆ ನೇಮಿಸಿದರೆ ಪಲಾಯನವನ್ನೇ ಮಾಡ್ಯಾನು ಅಥವಾ ಸಮ ಯುದ್ಧವಾಗಿ ಹಾನಿಯೂ ಸಮವಾದರೆ ನಷ್ಟವಸ್ತುಗಳಿಗೆ ಪೂರಣವಂ ಮಾಡಿಕೊಳ್ಳುವದಕ್ಕೆ ಸ್ವದೇಶವಾದುದರಿಂ ಕೂಡಲೇ ಯುದ್ಧವಂ ಮಾಡುವದಕ್ಕೆ ಅನುಕೂಲವಾಗುವದು. ಶತ್ರುಗಳಿಗೆ ಇದು ಪರದೇಶವು ; ನಷ್ಟವಸ್ತುಗಳಂ ಜೊತೆಗೊಳಿಸುವದಕ್ಕೆ ಕೂಡಲೇ ಅನುಕೂಲ ವಾಗಲಾರದು. ಅಷ್ಟರಲ್ಲಿಯೇ ನಮ್ಮ ಬಾಧೆ ಉಂಟಾದರೆ, ನಿಂತು ನಿರ್ವಹಿಸಲಾರದೆ ಶತ್ರು ಪಲಾಯನವನ್ನೈದ್ಯಾನು. ಅದಲ್ಲದಿದ್ದರೆ ತಾನೆ ಮೊದಲು ನಮ್ಮೊಳಗೆ ಸಂಧಿಗೆ ಬಂದಾನು. ಆಗಲೂ ನಮ್ಮ ಕಾರ್ಯವೇ ಜಯವು ; ಮತ್ತು ದೈವಯೋಗದಿಂದ ನಮ್ಮ ಸೇನೆಯು ಯುದ್ಧದಲ್ಲಿ ಹಿಮ್ಮೆಟ್ಟಿದರೆ, ಆಗ ನಾವು [೧]ಸಂಧಿಗೆ[೧] ಮಾತನಾಡುವದು ವಿಹಿತವು. ಅದರಿಂದ ಶತ್ರುಗಳ ಮೇಲೆ ನಮ್ಮ ಪರಾಕ್ರಮವಂ ತೋರಿಸಿದ ಬಳಿಕ ಸಮಯವಿದ್ದಂತೆ ಮಾಡಬಹುದು" ಎಂದು ರಾಕ್ಷಸನು ವೃದ್ಧನಾದ ಅರಸಿಗೆ ಹೇಳುತ್ತಿರಲು, ಆಗ ನಂದರು ತಂದೆಗಿಂತೆಂದರು :

"ಅಪ್ಪಾಜಿಯವರೆ, ಮೊದಲು ಕೆಲವು ದೇಶಾಧಿಪತಿಗಳು ಪರಸ್ಪರ ಕೃತಸಂಕೇತರಾಗಿ, ಇದೇ ನಮ್ಮ ಬಂಗಾಳಪತಿಯು, ಓಢ್ರದೇಶಾಧಿಪನು, ಮೈಥಿಲ ಮಗಧಾಧಿಪತಿ ವಿಂಧ್ಯಸ್ಥ ಕಿರಾತಾಧಿಪ ಕಳಿಂಗ ಮುಖ್ಯರಾದವರು ನಮ್ಮ ಮೇಲೆ ದಂಡೆತ್ತಿ ಬಂದು ಕಾಣಿಸಿಕೊಳ್ಳಲು, ಆಗ ತಾವು ಮಾಡಿದ ಸಮ್ಮಾನಗಳಿಂದ ನಮ್ಮ ಸೇನಾನಾಯಕರು ಸೇನಾಸಮೇತರಾಗಿ ಈ ಅರಸುಗಳ ಮೇಲೆ ಕವಿದು, ಯುದ್ಧವಂ ಮಾಡುತ್ತ, ತಾವು ತೆರಳುವಷ್ಟರಲ್ಲೇ ಅವರೆಲ್ಲರಂ ಹಿಡಿದು ತಂದು, ತಮ್ಮ ಸನ್ನಿಧಿಗೆ ಒಪ್ಪಿಸಲಿಲ್ಲವೇ ? ಇದು ನಾವು ಕಂಡರ್ಥವೇ ಅಹುದಷ್ಟೆ. ಇವರೆಲ್ಲರಿಗಿಂತಲೂ ಈ ಪರ್ವತರಾಯನು ಅಧಿಕನೇ ? ಯಾಕೆ ಚಿತ್ತಕ್ಕೆ ವಿಕಲ್ಪವು ? ಈಗ ಯುದ್ಧವಂ ಮಾಡಿ, ಶತ್ರುಸೇನೆಯಂ ಸಂಹರಿಸಿ, ಪುತ್ರಸಮೇತನಾದ ಪರ್ವತರಾಯನಂ ಬಂಧಿಸಿ ತರುವದಂ ನೋಡಿ ತಾವೇ ಸಂತೋಷಪಡುವಿರಿ" ಎಂದು ತಮ್ಮ ತಂದೆಗೆ ಹೇಳಿ, ಆಗ ರಾಕ್ಷಸನಂ ನೋಡಿ,

---

೧. ಸನ್ನಿಧಿಗೆ (ಕ)

"ಅಮಾತ್ಯರೆ, ನಮ್ಮ ವಿಜಯಯಾತ್ರೆಗೆ ಪ್ರಶಸ್ತವಾದ ಮುಹೂರ್ತವಂ ಜ್ಯೋತಿಷಜ್ಞ ರಿಂದ [೧]ನಿಶ್ಚಯವಂ ಮಾಡಿಸಿ, ನೀವು ಸಿದ್ಧವಾಗಿ" ಎಂದು ಹೇಳಿ ಆತನಂ ಕಳುಹಿಸಿ, ನಂದರು ಅಂತಃಪುರವನ್ನೈದುತ್ತಿರಲು,

ಇತ್ತ ಕ್ಷಪಣಕನ ಪರೀಕ್ಷೆಗೆ ರಾಕ್ಷಸನಿಂದ ನಿಯುಕ್ತನಾಗಿ ಹೋಗಿ ಇದ್ದ ಚಾರನು ಪುರದ ಹೊರಗಣ ಜಗತೀಕಟ್ಟೆಯಲ್ಲಿ ಸ್ಥಾಣುವಿನಂತೆ ಚಲಿಸದೆ ಕುಳಿತಿರುವ ಕ್ಷಪಣಕನಂ ದೂರ ದಿಂದಲೇ ನೋಡಿ, ಅವನು ಎಲ್ಲಿ ತಿರುಗುವನು, ಏನು ಮಾಡುವನು, ಇವನಲ್ಲಿ ಯಾರು ಬಂದು ಹೋಗುವರು ಎಂದು ಪ್ರಚ್ಛನ್ನನಾಗಿ ನೋಡುತ್ತಿರಲು, ಒಂದೆರಡು ದಿವಸ ಪರ್ಯಂತವು ಅನ್ನೋದಕವನ್ನಪೇಕ್ಷಿಸದೆ ಸ್ಥಾಣುವಂತೆ ಕುಳಿತಿರುವದಂ ನೋಡಿ, "ಈತನು ಎಲ್ಲರಂತೆ ಸಾಧಾರಣನಲ್ಲ, ಆರೂಢಯೋಗಿಯಾಗಿ ಇರಬೇಕು ; ಆದರೂ ಪ್ರತ್ಯಕ್ಷವಾಗಿ, ಶಿಷ್ಯಭಾವದಿಂದಿರುತ್ತ ಈತನ ಶೀಲ ಸ್ವಭಾವವಂ ತಿಳಿಯಬೇಕು" ಎಂದು ನಿಶ್ಚಯಿಸಿ, ಬೌದ್ಧಮತಸ್ಥನಂತೆ ಹೋಗಿ, ಆ ಕ್ಷಪಣಕನಿಗೆ ಪ್ರದಕ್ಷಿಣೆ ನಮಸ್ಕಾರವಂ ಮಾಡಿ, ಕೈಗಳಂ ಜೋಡಿಸಿ ನಿಂತಿರುವವನಂ ನೋಡಿ, ತನ್ನ ಪಿಂಛದಿಂದ "ಕುಳ್ಳಿರು, ಏನು ಬಂದೆ ?" ಎಂದು ಸನ್ನೆಯಂ ಮಾಡಲು,

"ಗುರುವೇ, ಸಂಸಾರಸಾಗರಬಡಬಾಗ್ನಿಯಿಂ ತಪ್ತನಾಗಿ, ಪಾದಕಮಲವಂ ಸೇರಿ ಆ ಸಂತಾಪದಿಂ ಮುಕ್ತನಾದೇನೆಂಬ ಲವಲವಿಕೆಯಿಂದ ಬಂದೆನು. ಮೌನವಂ ನನ್ನಲ್ಲಿ ತ್ಯಜಿಸಿ, ಪರತತ್ವವನ್ನುಪದೇಶಿಸಿ, ಕೃತಾರ್ಥನಂ ಮಾಡಬೇಕೆಂ"ದು ಪಾದಗಳಂ ಪಿಡಿದಿರು ವವನ ಮುಖವಂ ಚೆನ್ನಾಗಿ ನೋಡಿ, ಹಣೆಯಲ್ಲಿ ಇರುವ ತಿಲಕದ ಕಲೆಯಂ ಕಂಡು, "ಇವನು ಬೌದ್ಧನಾದರೆ, ಬೌದ್ಧರು ಶೂನ್ಯಲಲಾಟರು ; ಈತನಿಗೆ ತಿಲಕದ ಕಲೆಯಿರು ವದರಿಂದ ವೇಷಧಾರಿಯಾಗಿ, ರಾಕ್ಷಸನಿಂ ಪ್ರೇಷಿತನಾಗಿ, ನಮ್ಮ ಪರೀಕ್ಷಾರ್ಥವಾಗಿ ಬಂದಿರಬೇಕು. ಇದೇ ನಿಶ್ಚಯವಾದರೆ, ಇವನಿಗೆ ತಕ್ಕ ಹಾಗೆ ಮಾಡಿ ಕಳುಹಿಸಬೇಕು" ಎಂದು ನಿಶ್ಚೈಸಿ, ಮೌನವಂ ಬಿಟ್ಟು,

"ಎಲೈ ತತ್ವಾಧಿಕಾರಿಯೆ, ನಿನ್ನಂ ನೋಡಿದರೆ ಗುರುಭಕ್ತನಂತೆ ತೋರುತ್ತಲಿದೆ. ನಿನಗೆ ದಿಗಂಬರ ಸಿದ್ಧಾಂತವನ್ನುಪದೇಶಿಸುವದಕ್ಕೆ ಯೋಗ್ಯನಾದುದರಿಂದ ನಿನಗೆ ಆದಿಸಂಸ್ಕಾರ ದಲ್ಲಿ ಯಾವ ಸಂಪ್ರದಾಯದಿಂದ ವ್ಯಾಹೃತಿಯನ್ನುಪದೇಶಿಸಿ ಇದ್ದಾರೆ, ಹೇಳೆಂ"ದೆನಲು, ಅದಕ್ಕೆ ತಬ್ಬಿಬ್ಬಾಗಿ, ಯೋಚಿಸಿ[೧] ಏನೋ ಒಂದು ವಿಧವಾಗಿ ಹೇಳಲು, ಅದಕ್ಕೆ ಒಪ್ಪಿ ಕೊಂಡವನಂತೆ ನಟಿಸಿ, ಇದು ಕೃತ್ರಿಮ ಇರುವದು ನಿಶ್ಚಯವೆಂದು ತಿಳಿದು, ತನ್ನ ಪಿಂಛಸಮ್ಮಾರ್ಜನೆಯಿಂದ ಅವನ ಶರೀರವನ್ನಭಿಮಂತ್ರಿಸಿದಂತೆ ಮಾಡಿ, ಅವನಿಗೆ ಮುಂಡನವಂ ಮಾಡಿಸಿ, ಅವನ ವಸ್ತ್ರಗಳೆಲ್ಲವಂ ಮಾರ್ಗಸ್ಥರಿಗೆ ಕೊಡಿಸಿ, ಮತ್ತೊಂದು ನವಿಲುಗರಿದೊಂದೆಯಂ ಅವನ ಕೈಯಲ್ಲಿ ಕೊಟ್ಟು, ಅನ್ನಪಾನಕ್ಕೆ ಒಂದು ಕಪ್ಪರೆಯಂ ಕೊಟ್ಟು, ಮನಃಪರಿಪಾ[ಕ]ಕ್ಕೆ ಬರುವವರೆಗೂ ಅಯಾಚಿತವೃತ್ತಿಯಿಂ ಜೀವಿಸುತ್ತ, ಚೈತ್ಯ ವಂದನಾದಿಗಳಂ ಮಾಡುತ್ತ ಗುರುಭಕ್ತಿನಿರತನಾಗಿ ಇದ್ದರೆ, ಮನಃಪರಿಪಾಕವಂ ತಿಳಿದು, ನಿನಗೆ ಪರತತ್ವವನ್ನುಪದೇಶಿಸುವೆವು. ನಮ್ಮ ಪೀಠಕ್ಕೆ ಮುಂದೆ ನೀನೆ ಕರ್ತನಾಗುವೆ"

---

೧. ನಿಶ್ಚಯವಂ ಮಾಡಿಸಿ ಯೋಚಿಸಿ (ಕ)

ಎಂದು ಹೇಳಿ, "ಹನ್ನೆರಡು ನಮಸ್ಕಾರವಂ ಮಾಡಿ, ಚೈತ್ಯವಂದನೆಯಂ ಅಷ್ಟೋತ್ತರಶತ ವಾರವಂ ಮಾಡಿ, ಭಿಕ್ಷಾಟನವಂ ಮಾಡಿ, ಪ್ರಾಣಧಾರಣೆಯಂ ಮಾಡಿಕೊಂಡು, ಸಾಯಾಹ್ನಕ್ಕೆ ಇದೇ ಮೇರೆಗೆ ವಂದನೆಯನ್ನಾಚರಿಸುತ್ತಲಿರುವದು" ಎಂದು ನೇಮಿಸಿ, ಮೌನವಂ ಧರಿಸಲು,

ಇದೆಲ್ಲವಂ ಆಲೋಚಿಸಿ, ತನಗೆ ಬಂದ ದುರ್ದಸೆಯಂ ನೆನೆನೆನೆದು ಖಿನ್ನನಾಗಿ, ಪ್ರಕೃತದಲ್ಲಿ ಮಾಡದಿದ್ದರೆ ತೀರದೆಂದು ತಿಳಿದು, ಕ್ಷಪಣಕನಿಗೆ ಹನ್ನೆರಡು ನಮಸ್ಕಾರವಂ ಮಾಡಿ, ಜಗತೀಕಟ್ಟೆಗೆ ನೂರೆಂಟು ಪ್ರದಕ್ಷಿಣ ನಮಸ್ಕಾರವಂ ಮಾಡಿ, ಬಳಲಿ ಬೆಂಡಾಗಿ ಬಾಯಾರಿ, ಕೈಕಾಲು ಸೋತು, ಕಪ್ಪರೆ ಪಿಂಛಗಳಂ ಪಿಡಿದು ಗುರುಗಭಿವಂದಿಸಿ, ಭಿಕ್ಷಕ್ಕೆ ಅಪ್ಪಣೆಯಂ ತೆಗೆದುಕೊಂಡು, ನಗ್ನನಾದುದರಿಂದ ಊರ ಕಡೆಗೆ ಬರುವದಕ್ಕೆ ಲಜ್ಜಿತನಾಗಿ, ಮಾರ್ಗವಂ ಬಿಟ್ಟು, ಅರಣ್ಯಕ್ಕೆ ಪಲಾಯನವಂ ಗೈದು, ಅಲ್ಲಿ ಕಪ್ಪರೆ ಪಿಂಛಗಳಂ ಬಿಸುಟು, ಅಲ್ಲಿ ಪ್ರಚ್ಛನ್ನನಾಗಿ, ನಿಶೆಯಂ ನಿರೀಕ್ಷಿಸುತ್ತ ಅಲ್ಲಿ ಇದ್ದು, ವಲ್ಕಲಕೌಪೀನವಂ ಧರಿಸಿ ತನ್ನ ಗೃಹವಂ ಸೇರಿ, ರಾಕ್ಷಸನಿಗೆ ನಡೆದರ್ಥವಂ ಹೇಳುವದಕ್ಕೆ ಲಜ್ಜಿತನಾಗಿ, ವಸ್ತ್ರಭೂಷಿತ ನಾಗಿ, ಪ್ರಕೃತವಂ ಯೋಚಿಸುತ್ತ ಹೋಗಿ, ರಾಕ್ಷಸನಂ ಕಂಡು ಕೈಮುಗಿದು,

"ಬುದ್ಧೀ, ಅಪ್ಪಣೆ ಮೇರೆ, ಪ್ರತ್ಯಕ್ಷ ಪರೋಕ್ಷದಲ್ಲಿ ಎಷ್ಟೋ ವಿಧವಾದ ಪರೀಕ್ಷೆಯಿಂದ ಕ್ಷಪಣಕನಲ್ಲಿ ಲೇಶವಾದರೂ ಕಪಟ ಕಾಣಿಸಲಿಲ್ಲ ; ಸರ್ವಸಂಗವಂ ತ್ಯಜಿಸಿದ ಮಹಾ ಯೋಗಿಯೇ ಸರಿ"ಯೆಂದು ವಿಜ್ಞಾಪಿಸಲು, ಅದಂ ಕೇಳಿ, "ಈ ಕ್ಷಪಣಕನಲ್ಲಿಯೂ ಕಪಟವಿಲ್ಲದ ಬಳಿಕ ಪರ್ವತರಾಯನು ನಮ್ಮ ಕಾಗದಮುಖದಿಂದ ಇಬ್ಬರು ವರ್ತಕರು ನಮಗೆ ಅನುಕೂಲವಾದವರು ಎಂದು ನಿಶ್ಚೈಸಿ, ಉಳಿದ ಅರಸುಗಳ ಬಳಿಯಲ್ಲಿರುವ ಪ್ರಮುಖ ವರ್ತಕರು ಇಂಥಾವರೇ ಆಗಿ ಇದ್ದಾರು ಎಂಬ ಊಹೆಯಿಂದ ಅವರು ಆರು ಮಂದಿಯನ್ನು ಸಹ ಹೊರಡಿಸಿ ಇದ್ದಾನು" ಎಂದು ನಿಶ್ಚೈಸಿ, ಕ್ಷಪಣಕನಲ್ಲಿ ಸಂಶಯವಂ ಬಿಟ್ಟು, ಕಾರ್ಯಾಂತರವಂ ನೋಡುತ್ತಿರಲು,

ಅತ್ತಲಾ ಪರ್ವತರಾಯನು ತಮ್ಮ ಸೇನೆಗೆ ನಂದಸೇನೆ ಸಮೀಪವಾದುದಂ ತಿಳಿದು, ಮಾರ್ಗಾಂತರದಿಂದ ಸೇನೆಯಂ ಕಳುಹಿಸಿ, ಪಾಟಲೀಪುರವಂ ಮುತ್ತುವಂತೆ ಮಾಡ ಬೇಕೆಂದು ಶಬರವರ್ಮನೊಡನೆ ಆಲೋಚಿಸಲು,

"ಜೀಯ, ತಾವು ಹೇಳಿದರ್ಥವು ಪ್ರಶಸ್ತವಾಗಿ ತೋರುತ್ತಲಿದೆ. ನಂದರು ರಾಕ್ಷಸ ಸಮೇತರಾಗಿ ಬುಧವಾರ ಪುರದಿಂ ಹೊರಟು ಸೈನ್ಯಕ್ಕೆ ಬರುವ ವರ್ತಮಾನ ತಿಳಿದುದ ರಿಂದ, ಆ ದಿವಸ ರಾತ್ರಿ ಪಾಟಲೀಪುರವಂ ಲಗ್ಗೆ ಮಾಡುವದಕ್ಕೆ ನಮ್ಮ ಸೇನೆಯನ್ನೆರಡು ಭಾಗವಂ ಮಾಡಿ, ಒಂದು ಭಾಗವಂ ಸಂಗಡಲಿರುವಂತೆ ನೇಮಿಸಿ, ಉಳಿದ ಭಾಗವಂ ಎರಡು ತಂಡವಂ ಮಾಡಿ, ಸರಯೂ ನದಿಯನ್ನನುಸರಿಸಿ ಹೋಗಿ ಪಾಟಲೀಪುರದ ಉತ್ತರ ಪಶ್ಚಿಮ ದಿಕ್ಕುಗಳಲ್ಲಿ ಲಗ್ಗೆಯಂ ಮಾಡುವಂತೆ ಮಗಧದೇಶದ ಗಿರಿವ್ರಜದ ಮಾರ್ಗವಾಗಿ ಹೊರಟು, ಗಂಡಕೀ ಶೋಣಭದ್ರೆಯೆಂಬ ನದಿಗಳಂ ದಾಂಟಿ, ಪಾಟಲೀಪುರದ ಪೂರ್ವ ದಿಕ್ಕಿನಲ್ಲೂ ಪಶ್ಚಿಮದಿಕ್ಕಿನಲ್ಲಿ ಸಹ ಲಗ್ಗೆಯಂ ಹತ್ತುವಂತೆ ಸೇನಾಪತಿಗಳಿಗೆ ಅಪ್ಪಣೆ ಯಾದರೆ, ಅವರು ಮಾಡಿರುವ ಪ್ರಯತ್ನಕ್ಕೆ ವ್ಯತ್ಯಾಸವುಂಟಾಗಿ ನಮ್ಮ ಕಾರ್ಯಕ್ಕೆ ಅನುಕೂಲ ವುಂಟಾಗಬಹುದು" ಎಂದು ವಿಜ್ಞಾಪಿಸಲು,

ಆ ಮಾತಿಗೆ ಪರ್ವತೇಶ್ವರನು ಸಮ್ಮತನಾಗಿ ಶೇಖರ ಮುಖ್ಯರಾದ ಅರಸುಗಳಂ ಕರೆ ಕಳುಹಿಸಿ ಇಂತೆಂದನು :"ಅಯ್ಯ ಶೂರರಾದ ಅರಸುಗಳಿರಾ, ಶತ್ರುಸೇನೆ ಸಮೀಪಕ್ಕೆ ಒದಗಿ ಬಂದು ಇರುವದರಿಂದ ಇದೇ ಸಮಯದಲ್ಲಿ ಪಾಟಲೀಪುರವಂ ಮುತ್ತಿ ಲಗ್ಗೆಯಂ ಮಾಡ ಬೇಕು. ಬುಧವಾರದ್ದಿವಸ ನಂದರು ರಾಕ್ಷಸಸಮೇತರಾಗಿ ದಂಡಿನ ಪಾಳೆಯಕ್ಕೆ ಬರುತ್ತಾರೆ. ಆ ದಿನ ರಾತ್ರೆಯಲ್ಲಿ ಪಾಟಲೀಪುರಕ್ಕೆ ಕಿರಾತಸೇನೆಯೂ ಹೂಣಸೇನೆಯೂ ಸರಯೂ ನದಿಯನ್ನನುಸರಿಸಿ ಹೋಗಿ, ಗಂಗಾನದಿಯಂ ದಾಂಟಿ, ಪುರವಂ ಹಿಡಿದು, ಉತ್ತರ ಪಶ್ಚಿಮ ದಿಕ್ಕುಗಳಲ್ಲಿ ಲಗ್ಗೆಯಂ ಹತ್ತಲಿ. ಶಕಸೇನೆ ಚೀನಪತಿಗಳು ಸೇನಾಸಮೇತರಾಗಿ ಗಿರಿವ್ರಜದ ಮಾರ್ಗವಾಗಿ ಗಂಡಕೀ ಶೋಣಭದ್ರೆಗಳಂ ದಾಂಟಿ, ಪಾಟಲೀಪುರದ ಪೂರ್ವ ದಕ್ಷಿಣ ಭಾಗಗಳಲ್ಲಿ ಲಗ್ಗೆಯಂ ಮಾಡುವರಾಗಲಿ. ಉಳಿದ ಅರಸುಗಳ ಸೇನೆಯೆಲ್ಲವೂ ನಂದರ ಮೂಲಸೇನೆಗೆದುರಾಗಿ ಯುದ್ಧವಂ ಮಾಡಲಿ" ಎಂದು ಪರ್ವ[ತ]ರಾಯನು ನಿರೂಪಿಸುತ್ತಿರಲು, ಆ ಅರಸುಗಳೆಲ್ಲರೂ 'ಅಪ್ಪಣೆ ಮೇರೆಗಾಗಲೆಂ'ದು ತಮ್ಮ ತಮ್ಮ ಸೇನಾಸಮೇತರಾಗಿ ಹೊರಡುತ್ತಿದ್ದರು.

ಅತ್ತಲಾ ನಂದರು ಅಂತಃಪುರದಲ್ಲಿ ತಮ್ಮ ಪತ್ನಿಯರೊಡಗೂಡಿ ವಿವಿಧ ವಿಲಾಸದಿಂದಿದ್ದು, ಆ ಬಳಿಕ 'ನಾಳೆ ಪ್ರಾತಃಕಾಲದಲ್ಲಿ ನಮಗೆ ವಿಜಯಪ್ರಯಾಣವೆಂ'ದು ಪತ್ನಿಯರಿಗೆ ಹೇಳಲು, ಆ ಮಾತಂ ಕೇಳಿ ಆ ಸ್ತ್ರೀಯರು, ಮುಂದೆ ಉಂಟಾಗುವ ಶೋಕಬಾಷ್ಪಸಮುದ್ರವನ್ನೆದುರುಗೊಂಡು ಕರೆತರಲೆಣಿಸಿ ಹೊರಡುವ ನದಿಗಳೋ ಎಂಬಂತೆ ಧಾರಾಳವಾಗಿ ಹೊರಹೊಮ್ಮುವ ಕಂಬನಿಗಳಂ ಬಿಡುತ್ತ, "ಎಲೈ ಪ್ರಾಣಕಾಂತನೆ, ನೀನು ತೆರಳಿದ ಬಳಿಕ ನಿಮಿಷವೂ ಅಗಲದೆ ಕೂಡಿದ್ದ ನಿನ್ನಂ ಬಿಟ್ಟು ನಮ್ಮ ಪ್ರಾಣಗಳೆಂತು ನಿಲ್ಲುವವು ?" ಎಂದು ಒಬ್ಬ ಸ್ತ್ರೀಯು, "ಎಲೈ ಜೀವಿತೇಶನೆ, ನಿನ್ನ ಮುಖಚಂದ್ರದರ್ಶನದಿಂ ಸುಖಿಸುವ ನಮ್ಮ ಮನಃಕುವಲಯಗಳಂ ಬಾಡುವಂತೆ ಮಾಡಿ ನೀನೆಲ್ಲಿಗೆ ತೆರಳುವೆ ?" ಎಂದು ಮತ್ತೊರ್ವಳು, "ಎಲೈ ಪ್ರಿಯನೆ, ಸುಧಾಸಾರದಂತತಿಮಧುರವಾದ ತ್ವದೀಯಾಧರಪಾನದಿಂದಲೇ ಜೀವಿಸುವ ನಮ್ಮನ್ನಗಲಿಸಿ ಹೊರಡುವದುಚಿತವೆ ?" ಎಂದು ಒಬ್ಬ ಕನ್ನೆಯು, "ಎಲೈ ಸರಸನೆ, ನಾನು ನೂತನಾಭರಣವನ್ನಲಂಕರಿಸಿ ಕುಸುಮವಂ ಮುಡಿಯುವದರಲ್ಲಿಯೆ ಬರುವದಾದರೆ ಹೋಗಿ ಬರಬಹುದೆಂ"ದು ಒಬ್ಬ ಬಾಲೆಯು,

"ಎಲೈ ಅರಸೆ, ನಾನು ಧಮ್ಮಿಲ್ಲವಂ ರಚಿಸಿ ನೂತನಪುಷ್ಪದಿಂದಲಂಕೃತವಾಗುವದರಲ್ಲಿಯೆ ಬಾರದಿದ್ದರೆ ನಿನ್ನಂ ನಂಬುವಳಲ್ಲ"ವೆಂದು ಒಬ್ಬ ಪಸುಳೆಯು, "ಎಲೈ ಕಾಂತನೆ, ನಾಳೆ ನನಗೆ ಋತುಸ್ನಾನವೆಂದು ತಿಳಿ[೧][ದೂ][೧] ಪ್ರಸ್ಥಾನವಂ ಮಾಡುವದು ಶಾಸ್ತ್ರವಿರುದ್ಧವಾದುದರಿಂದ ಪುನಃ ನಾಳೆಯೆ ಬರುವುದಾದರೆ ನಿನ್ನ [೨]ಮನಸು[೨]ಬಂದಂತಾಗಲಿ" ಎಂದು ದುಃಖಬಡುತ್ತ ದೂತಿಯ ಮುಖದಿಂದ ಹೇಳಿ ಕಳುಹಿಸುತ್ತಿರುವಳೊಬ್ಬ ಭಾಮಿನಿಯು, "ಎಲೈ ರಮಣನೆ, ಮೊದಲಿನಂತೆ ಇಲ್ಲದ ಪ್ರಯಾಣವಂ ಹೇಳಿ ಆ ಪ್ರೀತಿಪಾತ್ರಳ ಗೃಹವಂ ಸೇರಲೆಣಿಸಿ ಈ ಕಪಟವಂ ಮಾಡುವದು ಸಾಕು. ಇದೇನು ಚಂದ"ವೆಂದು ಒಬ್ಬ ಸುಂದರಿಯು, "ಎಲೈ ಇನಿಯನೆ, ನನ್ನ ಮ[ನಃ]ಪರೀಕ್ಷೆಯಂ ಮಾಡಲೆಣಿಸಿ

೧. ದು (ಖ) ೨. ಮನ (ಕ)

ಪ್ರಯಾಣವೆಂದು ವಂಚನೆಯೋ, ಅಲ್ಲದಿದ್ದರೆ ಆ ಸುಂದರಿಯ ಬಿನ್ನಣಕ್ಕೆ ಬೆರಗಾದೆಯೋ?" ಎಂದು ಒಬ್ಬ ರಮಣಿಯು, "ಎಲೈ ವಲ್ಲಭನೆ, ಬಹುಕಾಲದಿಂ ಶತ್ರುಗಳೆಂಬವರು ಈ ಪುರಸಮೀಪಕ್ಕೆ ಬಂದುದಿಲ್ಲವಂತೆ ; ಈಗಿನ ರಾಜಕಾರ್ಯವು ಬಹುಶ್ರಮಸಾಧ್ಯವೆಂದು ತೋರುತ್ತಲಿದೆ. ಶತ್ರುಗಳ ಮೇಲೆ ಶೌರ್ಯವಂ ತೋರಿಸಿ ಹಿಮ್ಮೆಟ್ಟದೆ ಖ್ಯಾತಿಯಂ ಸಂಪಾದಿಸುವದು ಕ್ಷಾತ್ರಧರ್ಮವು. ಅದೃಷ್ಟವಿದ್ದರೆ ಪುನರ್ದರ್ಶನವು. ಅಲ್ಲದಿದ್ದರೆ ನೀನು ಇದ್ದಲ್ಲಿಗೆ ನಾವು ಬರುತಕ್ಕವರು" ಎಂದು ಹೇಳುತ್ತಿರುವ ಪತ್ನಿಯರಂ ಒಡಂಬಡಿಸುತ್ತ ಆ ರಾತ್ರಿಯಂ ಕಳೆಯುತ್ತಿರಲು,[೧]

ರಾಕ್ಷಸನು ಕ್ಷಪಣಕನಂ ಕಂಡು, "ಅಯ್ಯ, ನಾಳೆ ತುಲಾಲಗ್ನದಲ್ಲಿ ನಂದರಿಗೆ ವಿಜಯ ಪ್ರಯಾಣ ನಿಶ್ಚಯವಾಗಿ ಇದೆ. ಲಗ್ನಬಲವೆಂತಿರುವದು ?" ಎಂದು ಕೇಳಲು, "ಅಯ್ಯ ಅಮಾತ್ಯರೆ, ಇದಕ್ಕಿಂ[೨]ತಲೂ ವೃಶ್ಚಿಕಲಗ್ನ ಉತ್ತಮವು. ಲಗ್ನಾಧಿಪತಿಗೆ ಯಶ.[೩] ಶತ್ರುಸ್ಥಾನವಂ ಶತ್ರುಗ್ರಹ ನೋಡುವದರಿಂದಲೂ ಶತ್ರುಕ್ಷಯವಾಗುತ್ತಲಿದೆ" ಎನಲು, ಸಮೀಪದಲ್ಲಿದ್ದ ಸಿದ್ಧಾರ್ಥಕನು, "ಪಂಚಮೀ ತತ್ಪುರುಷವಾಗಬಹುದು" ಎಂದು ಮೆಲ್ಲಗೆ ಹೇಳುತ್ತಿರಲು, ಆಗ ರಾಕ್ಷಸನು ರಾಜಪುರೋಹಿತನ ಮುಖವಂ ನೋಡಿ, "ಇವರು ಹೇಳಿದ ಲಗ್ನವು ನಿಮಗೆ ಅನುಮತವಾದರೆ ಅರಸುಗಳಿಗೆ ವಿಜಯಯಾತ್ರಾದಾನವಂ ಮಾಡಿಸಿರಿ" ಎಂದು ಹೇಳಿ, ಶಯನಗೃಹದಲ್ಲಿ ನಿದ್ರಾಸಕ್ತನಾಗಿ ಆ ರಾತ್ರೆಯಂ ಕಳೆಯುತ್ತಿರಲು,

ಪರ್ವತರಾಯಸೇನೆಗೂ ನಂದಸೇನೆಗೂ ಮಾರ್ಗಮಧ್ಯದಲ್ಲಿ ಕೈಕೂಡಿ, ಮಹದ್ಯುದ್ಧ ನಡೆದು ಬರುತ್ತ, ಗಿರಿವ್ರಜದ ಬಳಿಯ ಸುಂದರಗಡವೆಂಬ ದುರ್ಗವಂ ಶತ್ರುಸೇನೆ ಆಕ್ರಮಿಸಲು ಬರುತ್ತಿರಲು, ಆ ಅರುಣೋದಯ ಸಮಯದಲ್ಲಿ ಆ ದುರ್ಗದ ಮೇಲಣ ಪಿರಂಗೀಶಬ್ದಗಳು ಭೂಮಿ ಇಬ್ಬಾಗಿಸುವಂತೆ ಬಹುವಾಗಿ ಕೇಳಿಸುತ್ತಿರಲು, ಅದಂ ಕೇಳಿ ರಾಕ್ಷಸನು ನಿದ್ರೆ[ಯಿಂ] ಎಚ್ಚರವಾಗಿ ಎದ್ದು, "ನಮ್ಮ ಸುಂದರಗಡವೆಂಬ ದುರ್ಗದಲ್ಲಿ ಪಿರಂಗೀಶಬ್ದವು ಬಹುವಾಗಿ ಕೇಳಿಸುತ್ತಲಿದೆ. ಆ ಶತ್ರುಸೇನೆಯು ದುರ್ಗವನ್ನಾಕ್ರಮಿಸ ಬಂದಂತೆ ತೋರುತ್ತಲಿದೆ" ಎಂದು ಹೇಳುತ್ತ, ತ್ವರಿತದಿಂದೆದ್ದು ಸ್ನಾನಾದಿಗಳಂ ಮಾಡಿ, ಭೂಸುರರ್ಗೆ ನಿತ್ಯದಾನಂಗೊಟ್ಟು, ನಂದರ ಸಮೀಪಕ್ಕೆ ಬರುತ್ತಿರಲು, ಆಗ ಉಷ್ಟ್ರಾರೂಢರಾಗಿ ವೇಗದಿಂ ಬಂದು ದೂತರು ಕಾಗದವಂ ರಾಕ್ಷಸನಿಗೆ ಕೊಡಲು, ಅದಂ ಓದಿ ತಿಳಿದು, ಹೋಗಿ ನಂದರಿಗೆ ಹೇಳುತ್ತಿದ್ದನು :

"ಅಯ್ಯ ಅರಸುಗಳಿರಾ, ನಿನ್ನೆ ಪ್ರಾತಃಕಾಲದಲ್ಲಿ ಶತ್ರುಗಳ ಶಕಸೇನೆಗೂ ನಮ್ಮ ಡಿಂಗಿರಾತಸೇನೆಗೂ ಕೈಗೂಡಿ ಯುದ್ಧವಾಗಿ ಶಕಸೇನೆಯಲ್ಲಿ ಇಪ್ಪತ್ತುಸಾವಿರ ಹತವಾಗಿ ಹತ್ತುಸಹಸ್ರ ಜನ ಘಾಯವಡೆದು ನಮ್ಮ ಪಿರಂಗಿಗಳೆರುವತ್ತು ಅವರಿಗೆ ಸಿಕ್ಕಲು, ಅಷ್ಟರಲ್ಲಿಯೇ ನಮ್ಮ ಭದ್ರಭಟಸೇನೆ ಹೋಗಿ ಡಿಂಗಿರಾತನಿಗೆ ಸಹಾಯವಾಗಲು, ಬಾಣಸಮೇತರಾದ ಎಂಟು ಸಾವಿರ ಬಾಣಗಾರರಂ [ಹಿಡಿದು] ಅದೆ ಬಾಣಂಗಳಂ ಅವರ ದಂಡಿನ ಮೇಲೆ ಬಿಡಲು, ಅದರಿಂ ಅವರ ಸೇನೆ ಛಿದ್ರವಾಗಲು, ಅವರಿಗೆ ಸಿಕ್ಕಿದ ಪಿರಂಗಿಗಳಂ ನಮ್ಮವರು ಹಿಂದಕ್ಕೆ ತರುವದಂ ನೋಡಿ, ಚೀಣರ ಸೇನೆ ಅಡ್ಡಬಂದು ನಮ್ಮ

೧. ಘ ಪ್ರತಿಯಲ್ಲಿ ೩೨ ಪಂಕ್ತಿಗಳು ಹೆಚ್ಚಾಗಿವೆ. ೨. ತಲೂ (ಕ) ೩. ಟ್ಟಿ (ಕ)

ಸೇನೆಯಂ ಪ್ರಹರಿಸಿ ಪುನಃ ಪಿರಂಗಿಗಳನ್ನಾಕ್ರಮಿಸಲು, ಮತ್ತೆ ಹಿಂದಣಿಂದ ನಮ್ಮ ಡಿಂಗಿರಾತಸೇನೆ ಹೋಗಿ ಆ ಚೀಣರಂ ಪ್ರಹರಿಸುತ್ತ, ಪಿರಂಗಿಗುಂಡುಗಳಿಂದ ಉಭಯ ಸೇನೆಗೂ ಯುದ್ಧವಾಗುತ್ತ, ಸುಂದರಗಡದಭಿಮುಖವಾಗಿ ಶತ್ರುಸೇನೆ ಬರುತ್ತಲಿದೆ ಯಂತೆ. 'ಇದುವರೆಗೆ ಸಮಯುದ್ಧ ಇದೆ. ದುರ್ಗವಂ ಶತ್ರುಗಳು ಆಕ್ರಮಿಸುವರಾಗಿ ಇದಾರೆ' ಎಂದು ಡಿಂಗಿರಾತ ಬರೆದು ಕಳುಹಿಸಿ ಇದಾನೆ. ಹಾಗೇ ದುರ್ಗದ ಪಿರಂಗಿ ಶಬ್ದಗಳು ಕೇಳಿಸುವದರಿಂದ ಶತ್ರುಗಳು ದುರ್ಗದ ಸಮೀಪಕ್ಕೆ ಬಂದಂತೆ ತೋರುತ್ತಲಿದೆ. ಅಲ್ಲಿಯ ದುರ್ಗಪಾಲಕನಾದ ಶಿವವರ್ಮನು ಸಾಹಸಿಯಾದುದರಿಂದ ಶತ್ರುಗಳು ದುರ್ಗವ ನ್ನಾಕ್ರಮಿಸಲಶಕ್ಯವಾಗಿ ಇದ್ದೀತು" ಎಂದು ಹೇಳುತ್ತಿರುವ ಸಮಯದಲ್ಲಿ,

ಮತ್ತೊಬ್ಬ ದೂತನು ತುರಗಾರೂಢನಾಗಿ ಅತಿವೇಗದಿಂ ಬಂದು ರಾಕ್ಷಸನಿಗೆ ಕಾಗದವಂ ಕೊಡಲು, ಅದಂ ಓದಿಕೊಂಡು ನಂದರಿಗಿಂತೆಂದನು :

"ಅಯ್ಯ ಅರಸುಗಳಿರಾ, ದುರ್ಗವ ಹಿಡಿಯಬೇಕೆಂದು ಬರುವ ಶಕಸೇನೆಗೂ ನಮ್ಮ ಭದ್ರಭಟಸೇನೆಗೂ ಮಹದ್ಯುದ್ಧವಾಗಲು, ಡಿಂಗಿರಾತಸೇನೆಯು ಶಕಸೇನೆಯ ಮೇಲೆ ಕಾಣಿಸಿಕೊಂಡು, ಯುದ್ಧವಂ ಮಾಡಿ ನಿಂತು, ಶತ್ರುಸೇನೆಯು ಗುಂಪುಕೂಡಲು, ಅದಂ ನೋಡಿ ನಮ್ಮವರು ಓಡುವರಂತೆ ಹಿಮ್ಮೆಟ್ಟಿ ಕೆಲನಾಗಿ ನೆಲಸುರಂಗಕ್ಕೆ ಅಗ್ನಿಯಂ ಮುಟ್ಟಿಸಲು, ಆಗ ಮುನವಳ್ಳಿಕಣಿವೆಯ ಹಳ್ಳದಲ್ಲಿ ಗುಂಪುಕೂಡಿ ನಿಂತಿದ್ದ ಶಕಸೇನೆಯಲ್ಲಿ ಆ ಭೂಮಿ ಹಾರಿ, ಅದರ ಘಾತದಿಂದ ಎಂಟುಸಹಸ್ರ ಶಕಸೇನಾಜನರು ಹತರಾಗಿ ಉಳಿದವರು ಹಿಂದಕ್ಕೆ ಓಡಲು, ಅವರಂ ನಮ್ಮವರು ಅಟ್ಟಿಕೊಂಡು ಹೋಗಲು, ಓಡಿದ ಶ್ರಮದಿಂದ ಆ ಶಕಸೇನಾಜನವು ದಾರಿಯಲ್ಲಿ ವಿಷಸಂಪರ್ಕವಾದ ಮಡುಹುಗಳ ಜಲವಂ ಕುಡಿದು ಮೂರ್ಛಿತರಾಗಲು, ನಮ್ಮವರು ಹೋಗಿ ಅವರಂ ಸಂಹರಿಸಲು, ಅಷ್ಟರಲ್ಲಿಯೇ ಚೀಣರ ಸೇನೆ ಎದುರಾಗಿ ನಮ್ಮ ಸೇನೆಯಂ ಬಿಟ್ಟು ದುರ್ಗವಂ ಹಿಡಿಯಲೋಸುಗ ದುರ್ಗಸಮೀಪದ ಉಕ್ಕಡದವರಂ ಪ್ರಹರಿಸಿ, ಅಲ್ಲಿಯೇ ಇಳಿದು ಇದೆ. ಸಾಯಂಕಾಲದಲ್ಲಿ ಅವರ ಆಹಾರವೇಳೆಯಂ ನೋಡಿಕೊಂಡು ಬಳಸಿ ಬಂದು ಅವರ ಮೇಲೆ ಕವಿದು ಯುದ್ಧವಂ ಮಾಡುತ್ತಲಿದೇನೆ" ಎಂದು ಬರೆದಿರುವ ಭದ್ರಭಟನ ಕಾಗದಾಭಿಪ್ರಾಯವಂ ತಿಳುಹಿಸಿ, "ಇನ್ನು ಜಾಗ್ರತೆಯಾಗಿ ನಾವು ಮೂಲಬಲಸಮೇತವಾಗಿ ದಂಡಿನ ಪಾಳಯಕ್ಕೆ ತೆರಳಬೇಕೆಂ"ದು ರಾಕ್ಷಸನು ಹೇಳುತ್ತಿರಲು,

ಅದಂ ಕೇಳಿ ನಂದರು ಸ್ನಾನಾದಿಗಳಂ ಮಾಡಿ, ಬಹುಧನಕನಕರತ್ನಗಳಿಂದ ದ್ವಿಜವರ್ಗಕ್ಕೆ ವಿಜಯಯಾತ್ರಾದಾನವಂ ಮಾಡಿ, ಬಂಧುಮಿತ್ರರಾದ ರಾಜಕುಮಾರವರ್ಗಸಮೇತರಾಗಿ ಭೋಜನವಂ ಮಾಡಿದ ಬಳಿಕ, ದಿವ್ಯಮಾಲ್ಯಾಂಬರ ಅನುಲೇಪಾಭರಣಗಳಂ ಧರಿಸಿ, ವಿಪ್ರರ ಮಂಗಳಾಶೀರ್ವಾದಗಳಂ ಪರಿಗ್ರಹಿಸಿ ಬಂದು, ಮಾತೃಪಿತೃಗಳಿಗಭಿವಂದಿಸಲು, ಅವರು ಆಶೀರ್ವಾದಗಳಂ ಮಾಡಲು, ಆಗ ಜನನಿಯಾದ ಸುನಂದಾದೇವಿಯು ನಂದರಿ ಗಿಂತೆಂದಳು :

"ಅಯ್ಯ ಆಯುಷ್ಮಂತರಾದ ಕುಮಾರರುಗಳಿರಾ, ಈಗ ಬಂದಿರುವ ಅಸಂಗತವು ಪ್ರಬಲವಾಗಿ ತೋರುತ್ತಲಿದೆ. ನೀವೆಲ್ಲರೂ ಪುರವಂ ಬಿಟ್ಟು ತೆರಳದೆ ನಾಲ್ವರು ಪುರ ರಕ್ಷಣೆಗೆ ಇರುತ್ತ, ಮಿಕ್ಕವರು ದಂಡಿನ ಪಾಳೆಯದಲ್ಲಿ ಇಳಿದುಕೊಂಡು ಸೇನೆಗಳಂ

ಯುದ್ಧಕ್ಕೆ ಕಳುಹಿಸಿ, ಸಮಯಾನುಗುಣವಾಗಿ ನಡೆಯುವದು ಉತ್ತಮವಾಗಿ ತೋರುತ್ತಲಿದೆ. ನೀವು ಆಚರಿಸುವ ಧರ್ಮವೇ ನಿಮ್ಮಂ ಕಡೆಹಾಯಿಸಲಿ" ಎಂದು ಕಂಬನಿಗಳಂ ತುಂಬುತ್ತ, ಪುತ್ರರಂ ತಲೆದಡಹುತ್ತಲಿರುವ ತಾಯಾದ ಸುನಂದಾದೇವಿಯಂ ಕುರಿತು ನಂದರು, "ತಾಯಿಗಳಿರಾ, ತಾವು ಅಷ್ಟು ಪರ್ಯಂತರವು ಯೋಚಿಸುವದಕ್ಕೆ ನಿಮಿತ್ತ ಕಾಣಿಸುವುದಿಲ್ಲ. [೧]ಈಗ ಬಂದಿರುವ ಶತ್ರುಗಳು ಮಹಾಪ್ರಯತ್ನಕ್ಕೆ ವಿಷಯವಲ್ಲ. ನಮ್ಮ ಸೇನಾನಾಯಕರಿಂದಲೇ ಆ ಪರ್ವತರಾಯನೆಂಬುವನು ನಿಗ್ರಹಿತನಾದಾನು. ಯುದ್ಧವು ನಮ್ಮ ಪರ್ಯಂತವು ಬರತಕ್ಕದ್ದಾಗಿ ತೋರುವುದಿಲ್ಲ.[೧] ಶೂರಪರಿವಾರ ಸಮೇತನಾಗಿ ಆಪ್ತನಾದ ಬಾಗುರಾಯಣನು ಪುರರಕ್ಷಕನಾಗಿ ಜಾಗರೂಕನಾಗಿ ಇದ್ದಾನೆ. ನಾವು ಸಮೀಪದಲ್ಲಿಯೇ ಇರುತ್ತ, ಬರುತ್ತ ಹೋಗುತ್ತಲಿದ್ದೇವೆ" ಎಂದು ತಾಯಿಗೆ ಸಮಾಧಾನವಂ ಹೇಳುತ್ತಿರಲು,

ಆಗ ಅಸ್ತಾಚಲವಂ ಹೊಂದುವ ಚಂದ್ರದರ್ಶನದಿಂದ ನಿಮೀಲಿತಗಳಾಗುವ ರಕ್ತೋತ್ಪಲಗಳಂತೆ ಪತಿಪ್ರಯಾಣದುಃಖದಿಂ ಕೆಂಪಡರಿದ ನೇತ್ರಗಳ ದೆಸೆಯಿಂದ ಬಾಷ್ಪಗಳಂ ಧಾರಾಳವಾಗಿ ಬಿಡುತ್ತಲಿರುವ ಪತ್ನೀಸಮೂಹವನ್ನೊಡಂಬಡಿಸಿ, ಅಂತಃಪುರದಿಂದ ನಂದರು ಹೊರಡುತ್ತಿರಲು,

ಆಗ ಅಶ್ವಾರೂಢರಾದ ರಾಜಕುಮಾರವರ್ಗಗಳ ಭೂಷಣಮಣಿಪ್ರಭಾನಿಕರಗಳಿಂದ ರಾಜದ್ವಾರಪುರೋಭಾಗವು ಮಯೂರಪಿಂಛದಿಂದಲಂಕರಿಸಿದಂತೆ ತೋರುತ್ತಲಿರಲು, ಕರಿಣೀಸಮೇತಗಳಾದ ದಿಗ್ಗಜಾವಳಿಗಳಂತೆ ಗಜಶ್ರೇಷ್ಠಗಳು ಶೃಂಗರಿಸಿ ಬಂದು ನಿಂತಿರಲು, ಭಲ್ಲಧಾರಿಗಳ ತಂಡಗಳು ಮುಂದೆ ನಡೆಯುತ್ತಿರಲು, ಸಾಮಂತನರಪತಿಛತ್ರಪಂಕ್ತಿಗಳಿಂದ ರಾಜಮಾರ್ಗವು ಸೂರ್ಯಾತಪರಹಿತವಾಗಿರಲು, ಪ್ರಳಯಕಾಲಮೇಘಗಳಂ ಶಿಕ್ಷಿಸುವಂತೆ ಪ್ರಯಾಣಪಟಹಧ್ವನಿಯು ಶತ್ರುರಾಯರೆದೆಬಿರಿಯುವಂತೆ, ಹರವೃಷಭರವದೊಡನೆ ಕಲಹಿಸುವಂತೆ, ಕುಲಾಚಲಸಿಂಹಗರ್ಭಗಳಂ ಕರಗಿಸುವಂತೆ, ಭೈರವನ ಡಮರುಗಧ್ವನಿಯನ್ನನುಕರಿಸುವಂತೆ ವಿಜೃಂಭಿಸುತ್ತಿರಲು,

ಆ ಸಮಯದಲ್ಲಿ ನಂದರು ಅಮಾತ್ಯಸಮೇತರಾಗಿ ಗಜಾರೋಹಣವಂ ಮಾಡುತ್ತಿರಲು, ವಂದಿಮಾಗಧ ಬಿರುದಶಬ್ದಗಳು ಪುರವನೆಲ್ಲವಂ ಮುಚ್ಚುತ್ತಿರಲು, ಸೌಧವಾತಾಯನಸ್ಥಾನ[ಸ್ಥ] ಸ್ತ್ರೀಜನನಯನಾಪಾಂಗತರಂಗಗಳಿಂ ಶ್ವೇತಾತಪತ್ರನಿಕರಗಳು ನೀಲೋತ್ಪಲಮಯವಾದಂತೆ ಕಾಣಿಸುತ್ತಿರಲು, ವಾಯುಚಲಿತಲತಾವಿಪ್ರಕೀರ್ಣ ಕುಸುಮನಿಕರಗಳಿಂ ಶೋಭಿಸುವ ವಸಂತವನವೀಥಿಯಂತೆ ಪೌರಕುಮಾರಿಕಾನಿಕರಗಳಿಂ ವಿಕೀರ್ಣಮಾದ ಲಾಜಕುಸುಮವರ್ಷಗಳಿಂದ [ನಭೋಮಾರ್ಗದಂತೆ] ರಾಜಮಾರ್ಗವು ರಂಜಿಸುತ್ತಿರಲು,

ಆಗ ರಾಜಮಾರ್ಗ[ದ] ಬಳಿವಿಡಿದು ಬರುತ್ತ ನಂದರು ಪುರದ್ವಾರದೇಶವಂ ದಾಂಟಿ ಬರುತ್ತಿರಲು, ನಂದರಿಗೆ ಅಶುಭಸೂಚಕವಾಗಿ ವಾಮನೇತ್ರವು ಅದುರುತ್ತಿರಲು, [೨]ಹಂಗೆಹದ್ದುಗಳು ನಂದರು ಕುಳಿತುಕೊಳ್ಳುವ ರಥದ ಧ್ವಜಪತಾಕಾಗ್ರವನ್ನಡರುತ್ತಿರಲು, ಅದಂ

೧. ಖಿದಲ್ಲಿ ಇಲ್ಲ. ೨. ಆಗ (ಕ)

ನೋಡಿ ಜನರು "ಇದೇನೋ ದುರ್ನಿಮಿತ್ತಗಳಾಗುತ್ತಲಿದೆ" ಎಂದು ಚಿಂತಿಸುತ್ತ ಅರಸುಗಳಿಗೆ ತಿಳುಹಿಸಲಂಜಿ ಸುಮ್ಮನಿರಲು,

ಆ ಸಮಯದಲ್ಲಿ ಪುನಃ ಭದ್ರಭಟನೆಂಬ ಸೇನಾಪತಿಯ ತುರಗಾರೂಢರಾದ ಚಾರರಿಬ್ಬರು ತ್ವರಿತದಿಂ ಬಂದು 'ಒಸಗೆ ಒಸಗೆ' ಎಂದು ಕೂಗುತ್ತ ನಂದರಿಗೆ ಕೈಮುಗಿದು ಬಿನ್ನೈಸುತ್ತಲಿದ್ದರು :

"ಬುದ್ಧೀ, ಈ ದಿವಸ ಸೂರ್ಯೋದಯಸಮಯದಲ್ಲಿ ಶತ್ರುಗಳ ಚೀಣಸೇನೆಯು ನಮ್ಮ ಸುಂದರಗಡವನ್ನಾಕ್ರಮಿಸಬೇಕೆಂದು ನಾಲ್ಕು ದಿಕ್ಕಿನಲ್ಲಿಯೂ ಚೋರಮಾರ್ಗವಂ ಹುಡುಕುತ್ತ, ಅಲ್ಲಿಯ ಗುಹೆಗಳಲ್ಲಿ ಅಡಗುತ್ತ, ಉಡುಗಳಿಗೆ ಹಗ್ಗವಂ ಕಟ್ಟಿ ಮೇಲಕ್ಕೇರುತ್ತ, ನೂಲೇಣಿಗಳಂ ಜೋಡಿಸಿ ಮೇಲಣ ಮಾರ್ಗವಂ ಹಿಡಿಯುತ್ತ, ದುರ್ಗವಂ ಮುತ್ತುತ್ತಾ ಬರುತ್ತಿರಲು,

ಆಗ ದುರ್ಗರಕ್ಷಕನಾದ ನಮ್ಮ ಶಿವವರ್ಮನು ಮೇಲಿರುವ ತನ್ನ ಸೇನೆಯಂ ಜೊತೆಗೊಳಿಸಿಕೊಂಡು, ಮೇಲೆ ಹೆಚ್ಚು ಸೈನ್ಯವಿಲ್ಲದಂತೆ ತೋರ್ಪಡಿಸಿ, ಶತ್ರುಗಳು ಸಮೀಪಕ್ಕೆ ಬರುವದನ್ನೇ ನೋಡುತ್ತ, ಒಂದೇ ವೇಳೆ ಲಕ್ಷೋಪಲಕ್ಷ ಗುಂಡುಗಳನ್ನುರುಳಿಸಿ, ಕಾದ ಎಣ್ಣೆಗಳಂ ಕರಗಿದ ಸೀಸವರುಷವನ್ನೆರಚುತ್ತ, ಶತಘ್ನಿಗಳನ್ನುರುಳಿಸಿ ಅನೇಕ ಪಿರಂಗಿಗಳಿಗೆ ರಂಜಕವಂ ತೋರಿಸಲು, ಆ ಘಾತದಿಂದ ಮೇಲೆ ಬರುವ ಶತ್ರುಗಳ ತಂಡಗಳು ಖಂಡತುಂಡಗಳಾಗಿ, ಅವರ ಶರೀರರಕ್ತಗಳಿಂದ ದುರ್ಗವು ರಕ್ತಚಂದನಲೇಪಿತವಾದಂತೆ, ಕಾವಿಕಲ್ಲಿನ ಬೆಟ್ಟವೋ ಎಂಬಂತೆ ತೋರುತ್ತಲಿದೆ.

ಈ ರೀತಿಯಲ್ಲಿ ದುರ್ಗವನ್ನಡರಿದ ಶತ್ರುಸೇನೆಯು ನಿಶ್ಶೇಷಹತವಾಗಲು, ಪುನಃ ಶತ್ರುಸೇನೆಯು ಕೋಪದಿಂ ಬಂದು ದುರ್ಗವನ್ನಡರುತ್ತಿರಲು, ಮೊದಲಿನಂತೆ ಶಿಲಾವರುಷಗಳಿಂದ ಅವರಂ ಘಾತಿಸುತ್ತಿರಲು, ಅಷ್ಟರಲ್ಲಿಯೇ ನಮ್ಮ ಭದ್ರಭಟಸೇನೆಯು ಕೆಳಗಿದ್ದ ಚೀಣರ ಮೇಲೆ ಹೊಕ್ಕು ಯುದ್ಧವಂ ಮಾಡಲು, ಶತ್ರುಗಳಿಗೆ ಇತ್ತಂಡದ ಘಾತವಾದುದರಿಂದ ದುರ್ಗವಂ ಬಿಟ್ಟು ಈಚೆಗೆ ಮೂರು ಹರಿದಾರಿ ಬಂದು ಇಳಿದಿದೆ. ಬುದ್ಧೀ, ಇಂದಿನ ಯುದ್ಧದಿಂ ಪಾದಕ್ಕೆ ಜಯವುಂಟಾಯಿತು" ಎಂದು ಚಾರರು ಹೇಳುತ್ತಿರಲು, ಆ ಮಾತಿಗೆ ನಂದರು ಸಂತೋಷಪಡುತ್ತ, ಆ ದೂತರಿಗೆ ಉಡುಗೊರೆಗಳಂ ಕೊಡಿಸಿ, ಭದ್ರಭಟ ಶಿವವರ್ಮರಿಗೆ ವಸ್ತ್ರಭೂಷಣಗಳಂ ಕಳುಹಿಸಿ, ಮುಂದೆ ತೆರಳುತ್ತಿರಲು,

ಆಗ ಅಮಾತ್ಯ ರಾಕ್ಷಸನು ನಂದರಿಗಿಂತೆಂದನು : "ರಾಜಪುತ್ರರುಗಳಿರಾ, ಶಿವವರ್ಮನೆಂಬ[ವನು] ದುರ್ಗರಕ್ಷಕನಾದುದರಿಂದ ಇಂದು ಜಯವಾಯಿತೆಂಬ ಶಬ್ದವೇ ನಮಗೆ ಶುಭನಿಮಿತ್ತವು. ಮತ್ತೆ ಬಾಗುರಾಯಣನು ಪುರರಕ್ಷಕನಾಗಿ ಯುದ್ಧಸನ್ನಾಹವಂ ಮಾಡಿ ಇರುವದನ್ನು ನಾನೆ ಹೋಗಿ ನೋಡಿ ಬರುವೆನು. ನಾಳೆ ತಾವೆಲ್ಲರೂ ದಂಡಿನ ಪಾಳೆಯದ ಗುಡಾರಕ್ಕೆ ದಯಮಾಡಬಹುದು ; ಶೀಘ್ರದಲ್ಲಿ ಬರುತ್ತಲಿದ್ದೇನೆ" ಎಂದು ನಂದರಿಗೆ ಹೇಳಿ, ಮತ್ತೆ ಕೆಲವು ದೂರ ಸಂಗಡಲೇ ಹೋಗಿ, ಆಗ ರಾಕ್ಷಸನು ತುರಗವನ್ನೇರಿ, ಪರಿವಾರ ಸಮೇತನಾಗಿ, ಬಾಗುರಾಯಣನು ರಚಿಸಿ ಇರುವ ಸಮರಸನ್ನಾಹವಂ ನೋಡಲೋಸುಗ ಪುರದ ಹೊರವಳಯದಲ್ಲಿ ಬರುತ್ತಿದ್ದನು.

ಹೀಗೆ ರಾಕ್ಷಸನು ತೆರಳುತ್ತಿರಲು, ಆಗ ನಂದರಂ ಬಳಸಿ ಇರುವ ವಂದಿಮಾಗಧ ಶಬ್ದಗಳಿಂ, ಬಹುವಿಧ ವಾದ್ಯರಭಸದಿಂ, ಮದಗಜಘಂಟಾರವದಿಂ, ತುರಗ ಹೇಷಾ ನಿನಾದದಿಂ, ಪ್ರಬಲವೀರಸಿಂಹನಾದಗಳಿಂ ಜಗವೆಲ್ಲ ಭರಿತವಾದಂತಾಗಲು, ಆಗ ಸೇನಾ ಪಾದಘಾತದಿಂದೆದ್ದ ಧೂಳೀನಿಕುರುಂಬವು ಉತ್ಪಾತಸೂಚಕವಾಗಿ ಉದ್ಭವಿಸಿ ಸೂರ್ಯ ಕಿರಣವಂ ಮುಚ್ಚುವ ಚಿಟ್ಟೆಗಳ ಹಿಂಡಿನಂತೆ, ವೀರಲಕ್ಷ್ಮೀವಿನೋದಕೇಳೀಪಟವಾಸವೋ ಎಂಬಂತೆ, ನಂದಸೇನಾಭಾರಖಿನ್ನಳಾಗಿ ಬ್ರಹ್ಮಗೆ ಮೊರೆಯಿಡುವರೆ ರೇಣುರೂಪಿನಿಂ ದೆದ್ದು ಸ್ವರ್ಗವನ್ನೈದುವ ಭೂಮಿಯೋ ಎಂಬಂತೆ, ನಭೋಮಂಡಲವೆಲ್ಲವೂ ಕಾಣಿಸದೆ ನಿಶಾಸಮಯದಂತೆ ಇರುತ್ತಿರಲು, ಆಗ ಬಹುದೂರಧಾವನದಿಂದುದ್ಭವಿಸಿದ ತುರಗಶ್ರಮ ಜಲಶೀಕರನಿಕರಗಳಿಂದಲೂ ಮದಗಜಧಾರಾವರ್ಷವಂ ವರುಷಿಸುವ ಗಜನಿಕರಪೂತ್ಕಾರ ಜಲಬಿಂದುಗಳಿಂದಲೂ ಸೇನಾಧೂಳಿಗಳಡಗಿ ಭೂಭಾಗವು ಪಂಕಪ್ರಾಯವಾಗಿ ದಿಕ್ಕುಗಳು ಪ್ರಸನ್ನವಾಗಲು, ನಂದರು ಸೇನಾಪರಿವೃತರಾಗಿ ಗಂಗಾ ಸರಯೂ ಸಮೀಪಕ್ಕೆ ಬರುತ್ತಿದ್ದರು.

ದಕ್ಷಿಣದಿಕ್ಕಿನಲ್ಲಿ ದೂರದಲ್ಲಿ ಉನ್ನತವಾಗಿ ವಿಸ್ತಾರವಾ[ಗಿ] ವಿರಚಿಸಿ ಇರುವ ಜಪ ಶಾಲೆಯಂ ನೋಡಿ 'ಇದೇನೆಂ'ದು ಕೇಳುತ್ತ ಬರುತ್ತಿರಲು, ಅವರ ಬಳಿಯ ದೂತರು ಕೈಮುಗಿದಿಂತೆಂದರು :

"ಜೀಯಾ, ಅಮಾತ್ಯ ರಾಕ್ಷಸರ ಅಪ್ಪಣೆಯಿಂದ ಮಾಡಿ ಇರುವ ಶತ್ರುಪಲಾಯನದ ಜಪಶಾಲೆಯು. ಅಲ್ಲಿ ಜಪವಂ ಮಾಡುವ ವಿಪ್ರರು ಫಲಮಂತ್ರಾಕ್ಷತ ಸಮೇತರಾಗಿ ಸನ್ನಿಧಿಯಂ ಕಾಣಬೇಕೆಂದು ಬಂದು ನಿಂತಿದ್ದಾರೆ" ಎನಲು, ನಂದರು ಆ ಭೂಸುರ ಸ್ತೋಮವಂ ನೋಡಿ, ಅವರಂ ಕರೆದು, "ಅಯ್ಯಾ ಮಂತ್ರಕೋವಿದರಾದ ವಿಪ್ರೋತ್ತಮರೇ, ಸಾಂಗೋಪಾಂಗವಾಗಿ ಜಪಹೋಮಗಳಂ ಮಾಡಿರಿ. ಈಗ ಬಂದಿರುವ ಶತ್ರುಸಂಘವು ಪಲಾಯನಂಗೈದಿದರೆ, ನಿಮಗೆ ಶಾಶ್ವತಸ್ಥಿತಿಯನ್ನುಂಟುಮಾಡುತ್ತಲಿದೆ" ಎಂದು ಹೇಳುತ್ತಿರಲು,

ಅಷ್ಟರಲ್ಲಿಯೇ, ನೆಲದಲ್ಲಿ ಜೋಲುವ ಜಟಾಭಾರದಿಂದ ನ್ಯಗ್ರೋಧವೃಕ್ಷವಂ ನೋಡಿದಂತೆ ತೋರುತ್ತ, ಕೋಮಲದರ್ಭೆಗಳಿಂ ರಚಿಸಿದ ಪವಿತ್ರಪಂಚಕದಿಂ ಯುಕ್ತವಾದ ಅಂಗುಳೀನಖಾಗ್ರಗಳಿಂ ಸುತ್ತುತ್ತಿರುವ ಹವಳದ ಜಪಮಾಲೆಯಿಂದಲೂ ಭ್ರೂಮಧ್ಯ ದಲ್ಲಿ ರಾಜಿಸುವ ಕುಂಕುಮರೇಖೆಯಿಂದಲೂ ಆಚಾರಶೀಲರಂ ಭ್ರಮೆಗೊಳಿಸುವ ವಾಮಾ ಚಾರವೇ ಮೂರ್ತೀಕರಿಸಿ ಬಂದಂತೆ, ತ್ರಿಪುಂಡ್ರಭಸ್ಮಾಂಕಿತ ಫಾಲದೇಶದಿಂ, ಕಕ್ಷಗತ ಯೋಗದಂಡಗಳಿಂ, ಚರಣಾಸಕ್ತ ಪಾದುಕಾಗ್ರವಂ ಸೋಕುವ ಕೃಷ್ಣಾಜಿನೋತ್ತರೀಯದಿಂ ಮಾನುಷಯೋಗಿವೇಷವಂ ಧರಿಸಿ ಮಂತ್ರವಂ ಜಪಿಸುವ ಮಾರೀಚನೋ ಎಂಬಂತೆ, ಮುನಿವೇಷವಂ ಧರಿಸಿ ಬಂದ ದಂಭ[ನೋ] ಎಂಬಂತೆ, ಜನಗಳಿಗೆ ಮಹಾಯೋಗೀಶ್ವರನ ಎಂಬಂತೆ ತೋರುತ್ತ, ಶಿಷ್ಯಕರಕಲಶ ಗೋಮಯೋದಕಗಳಿಂ ಶುದ್ಧಮಾಗುವ ಮಾರ್ಗ ದಲ್ಲಿ ಬರುತ್ತಿರುವ ಮಾಸೋಪವಾಸಿಯಂ ನೋಡುತ್ತ ಬಂದು, ನಂದರು ತಮ್ಮ ಗುಡಾ ರದ ಬಳಿಯಲ್ಲಿ ತಮ್ಮ ಗಜಗಳಿಂದಿಳಿದು, ಸಮೀಪದಲ್ಲಿ ಬರುವ ಆ ಯೋಗೀಶ್ವರನಂ ನೋಡಿ, ಇವರ್ಯಾರೆಂದೆನಲು, ಆತನ ಶಿಷ್ಯರು ನಂದರಿಗಿಂತೆಂದರು :

"ಅಯ್ಯ ಭೂಪತಿಗಳಿರ, ಪ್ರಯಾಗಕ್ಕೆ ದತ್ತಾತ್ರೇಯ ಮುನಿಗಳು ಬರುವವಂ ತಿಳಿದು ಗಂಗೋತ್ತರಿಯದಿಂದ ಹೊರಟು ಬಂದು, ಮನುಷ್ಯರಿಗೆ ಅಲಭ್ಯವಾದ ಆ ದತ್ತಾತ್ರೇಯ ಮಹಾಮುನಿಗಳ ದುರುಶನವಂ ಮಾಡಿ, ಅವರ ಅನುಗ್ರಹವಂ ಪಡೆದು, ಈ ಮಾರ್ಗವಾಗಿ ತಮ್ಮ ಆಶ್ರಮಕ್ಕೆ ಹೋಗುತ್ತಿರುವಲ್ಲಿ, ಧರ್ಮನಿರತರಾದ ನಂದರಿಗೆ 'ಶತ್ರುಗಳಾಗಿ ಪರ್ವತದೇಶೀಯರಾದ ಮ್ಲೇಚ್ಛ ಕಿರಾತರಾತಂಕ ಸಂಭವಿಸಿ ಇದೆ' ಎಂಬ ಇಲ್ಲಿಯ ಭೂಸುರಸ್ತೋಮದ ಭಯನಿವೃತ್ತಿಗೋಸುಗ ಅವರಿಂ ಪ್ರಾರ್ಥಿತರಾಗಿ, ತಾವು ಮಾಡುವ ಮಂತ್ರಜಪಾನುಷ್ಠಾನವು ಪ್ರಜಾಪಾಲಕರಾದ ನಿಮ್ಮ ಅಭ್ಯುದಯಾರ್ಥವಾಗುವದರಿಂದ ಅದು ಪರಾರ್ಥವಾಗಲಾರದೆಂದು ಆರ್ತ್ವಿಜ್ಯನಂ ಕೈಕೊಂಡು. ಅನುಷ್ಠಾನವಂ ಮಾಡುತ್ತ ಲಿರುವ ಇವರನ್ನು ಮಾಸೋಪವಾಸಿ ಮಹಾಮುನಿಗಳೆಂದು ಸಜ್ಜನರು ಹೇಳುವರು" ಎನಲು, ಅದಂ ಕೇಳಿ ವಿನಂದನಿಂತೆಂದನು :

"ಪೂರ್ವದಲ್ಲಿ ಪುತ್ರಾಪೇಕ್ಷಿಗಳಾದ ನಮ್ಮ ತಂದೆಗಳು ಮಹಾಮುನಿಯ ವಾಕ್ಯಗಳಿಂದ ಪುತ್ರವಂತರಾದರಂತೆ. ಮುನಿಗಳ ವಚನಗಳು ಅನ್ಯಥಾ ಆಗಲಾರದು. ಇವರು ನಮ್ಮಲ್ಲಿ ಅನುಗ್ರಹಿಸಿ ಆರ್ತ್ವಿಜ್ಯವಂ ಪರಿಗ್ರಹಿಸಿದ ಬಳಿಕ, ನಮ್ಮ ಶತ್ರುಗಳು ನಷ್ಟಪ್ರಾಯರೇ ಸರಿ. ಹಾಗಾದರೂ, ಎಂದಿಗೆ ಪಲಾಯನಂಗೈದಾರು, ತಿಳಿದು ಹೇಳಬೇಕು. ಮುನಿಗಳಿಗೆ ಮೌನ ವ್ರತವೇನೋ ?" ಎನಲು, ಆ ಮಾತಿಗೆ ಮಾಸೋಪವಾಸಿಯು "ಅಯ್ಯ ಅರಸುಗಳಿರ, ಸಾಧಾರಣಜನದ ವಾಕ್ಕಲಹಶಾಂತ್ಯರ್ಥವಾಗಿ ಮೌನವು ; ಮಹಾತ್ಮರಲ್ಲಿಯೂ ಮರ್ಯಾದಾ ಪಾಲಕರಲ್ಲಿ[ಯೂ] ಮೌನವುಂಟೆ ? ಶತ್ರುನಿಗ್ರಹಾರ್ಥವಾಗಿ ಮಾಡುವ ಶೂಲಿನೀಜಪ ಹೋಮಗಳು ಶುಕ್ರವಾರ ಪ್ರದೋಷಸಮಯಕ್ಕೆ ಸಮಾಪ್ತವಾಗುವದರಿಂದ ಹೋಮ ಪೂರ್ಣಾಹುತಿಯ ಸಮಯದಲ್ಲಿ ಶತ್ರುನಿಗ್ರಹಸೂಚಕವಾದ ನಿದರ್ಶನವುಂಟಾಗುವದು" ಎನಲು, ಆ ಮಾತಿಗೆ ನಂದರು,

"ಅಯ್ಯ ಜಪಕೋವಿದರಾದ ತಪೋಧನರೆ, ಆಗ ಆಗುವ ನಿದರ್ಶನ ಹ್ಯಾಗಿರುವದು, ಹೇಳಬೇಕೆ" ನಲು, "ಭೂಪತಿಗಳಿರ, ಹೋಮಾಂತದಲ್ಲಿ ಪ್ರಧಾನಹೋಮದ್ರವ್ಯಯುಕ್ತ ವಾದ ಸ್ರುಕ್ ಸ್ರುವಗಳಂ ಪಿಡಿದು, ದೇವಿಯಂ ಧ್ಯಾನವಂ ಮಾಡುತ್ತ, ಪೂರ್ಣಾಹುತಿಯಂ ಕೊಡುವ ಸಮಯದಲ್ಲಿ ದಿವ್ಯಗಂಧಯುಕ್ತವಾದ ತಂಗಾಳಿ ಉಂಟಾಗಿ, ಜನರೆಲ್ಲರೂ ನೋಡುವಂತೆ ಮಹಾಪ್ರಭಾಮಂಡಲ ಉದಯಿಸಿ, ಅಗ್ನಿಕುಂಡದಿಂದ ದೇವತಾಹಸ್ತವಾವಿ ರ್ಭವಿಸಿ, ಆ ಪೂರ್ಣಾಹುತಿಯಂ ತಾನೆ ಸ್ವೀಕರಿಸುವದು. ಆ ದರ್ಶನವಿಶೇಷವು ಸುಕೃತಿಗಳಿ ಗಲ್ಲದೆ ಅನ್ಯರಿಗೆ ಘಟಿಸಲಾರದು" ಎನಲು,

"ಅಯ್ಯ ಮುನಿವರ್ಯರೇ, ಆ ದೇವತಾಹಸ್ತದರ್ಶನಕ್ಕೆ ನಾವು ಬರಬಹುದೋ ?" ಎನಲು, "ಅಯ್ಯ ಭೂಪತಿಗಳಿರಾ, ಕುತೂಹಲವಿದ್ದರೆ ಪುಣ್ಯತಮವಾದ ದೇವತಾದರ್ಶನಕ್ಕೆ ಮಿತ ಬಂಧುಜನ ಪರಿವೃತರಾಗಿ ತಾವೆಲ್ಲರೂ ಬಂದು, ದರ್ಶನವಂ ಮಾಡಿ, ಪ್ರಸಾದವಂ ಸ್ವೀಕರಿಸಿ ಎಂದಿನಂತೆ ತೆರಳಬಹುದು. ಹಾಗೇ ದೇವತಾಹಸ್ತವದೃಶ್ಯವಾಗಲು, ಆಗ ಅಶಕ್ಯವಾದ ಕುಕ್ಷಿಶೂಲೋಪದ್ರವದಿಂದ ಒಂದು ಯಾಮದೊಳಗೆ ಶತ್ರುಗಳು ಹತರಾಗು ವದು ಸಿದ್ಧ. ಹಾಗೆ ದಿನ ನಾಲ್ಕರಲ್ಲಿ ದೇವತಾಹುತಿರೂಪವಾಗಿ ಉದ್ದೇಶವಂ ಮಾಡಿ ಇರುವ ಶತ್ರುಸೇನೆಯು ಹಾಗೇ ಹತವಾಗುವದು. ಇದು ಸತ್ಯವೆಂದು ಭಾವಿಸಬೇಕು. ನಿಮ್ಮ

ಮನೋಭೀಷ್ಟಲಾಭವುಂಟಾದ ಬಳಿಕ ಬ್ರಾಹ್ಮಣ್ಯದಲ್ಲಿ ನಿಮಗೆ ಗೌರವವು ಚಲಿಸದೆ ಇದ್ದರೆ, ಅದೇ ನೀವು ನಮಗೆ ಕೊಡುವ ಜಪದಕ್ಷಿಣೆಯು" ಎನಲು,

ಆ ಮಾತಿಗೆ ನಂದರು ಮಹಾಸಂತೋಷಪಟ್ಟು, ತಮ್ಮೊಳಗೆ ತಾವೇ 'ಆ ದಿವಸ ದೇವತಾಹಸ್ತದರ್ಶನಕ್ಕೆ ನಾವು ಹೋಗಿ ಬರಬೇಕೆಂ'ದು ಹೇಳಿಕೊಳ್ಳುತ್ತ, 'ಈ ಮುನಿಗಳು ಮಹಾವಿರಕ್ತರೆಂ'ದು ಸ್ತುತಿಸುತ್ತ, ಅವರ ಶಿಷ್ಯರಂ ನೋಡಿ "ಅಯ್ಯ ಮುನಿಶಿಷ್ಯರೆ, ಪೂರ್ಣಾಹುತಿಯ ಸಮಯವಂ ತಿಳಿದು ನಮಗೆ ಜ್ಞಾಪಕವಂ ಮಾಡಿದರೆ, ನಾವೆಲ್ಲರೂ ಬರುತ್ತಲಿದ್ದೇವೆ" ಎನಲು, ಆ ಶಿಷ್ಯರು "ಹಾಗೇ ಆಗಲಿ ; ಜಪಶಾಲೆಯ ಸುತ್ತಲೂ ಶೂದ್ರಾದಿಗಳ ದರ್ಶನವಾಗದಂತೆ ಆಜ್ಞಾಪಿಸಬೇಕು" ಎನಲು,

ಆ ಮಾತಿಗೆ ನಂದರು, "ಹಾಗೇ ಆದೀತೆಂ"ದು ದೂತರ ಮುಖವಂ ನೋಡಿ, "ಎಲೈ, ಜಪಶಾಲೆಯ ಸುತ್ತಲೂ ಹರಿದಾರಿಗಳಲ್ಲಿ ಶೂದ್ರಾದಿಗಳು ಕಾಣಿಸದಂತೆ ಮಾಡಿ ಬ್ರಾಹ್ಮಣ ಹರಿಕಾರರಂ ಕಾವಲಿರುವಂತೆ ಮಾಡಿಸತಕ್ಕದ್ದೆಂ"ದು ಹೇಳಿ, ಆ ಮುನಿಗೆ ಅಭಿವಂದಿಸಿ ಕಳುಹಿಸಿ, ಸುವರ್ಣ ಕಲಶಸಹಸ್ರಗಳಿಂ ಶೋಭಿಸುವ, ಹಿಮಾಚಲದಂತೆ ಅತ್ಯುನ್ನತವಾಗಿ ಮುಕ್ತಾಮಯ ಮೇಲುಕಟ್ಟುಗಳಿಂದ ದೇವೇಂದ್ರಭವನದಂತೆ ಹೊಳೆಯುತ್ತಿರುವ, ತಮ್ಮ ಗುಡಾರವಂ ಪ್ರವೇಶಿಸಿ, ಪುಷ್ಪಮಾಲಾಧೂಳಿಗಳಿಂ ರಾಜಕುಮಾರಯುತರಾಗಿ ರಾಜ ಭೋಗಗಳಂ ಪರಿಗ್ರಹಿಸುತ್ತಲಿದ್ದರು. ಹಾಗೇ ನಂದರ ಸಂಗಡ ಬಂದ ಸೇನಾಜನರು ತಮ್ಮ ತಮ್ಮ ಗುಡಾರದಲ್ಲಿ ವಿಶ್ರಮಿಸಿಕೊಂಡು, ತಮ್ಮ ತಮ್ಮ ಅಧಿಕಾರಗಳಂ ನೋಡುತ್ತ ಲಿದ್ದರು ಎಂಬಲ್ಲಿಗೆ,

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಮಹೀಶೂರನರಪತಿ ಶ್ರೀ ಕೃಷ್ಣರಾಜೇಂದ್ರರಾಶ್ರಿತ ಹೊಯಿಸಣಿಗ ಕುಲಸಂಜಾತ ನಾರಾಯಣಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ನಂದರ ಪ್ರಯಾಣಕಥನವೆಂಬ ಷಷ್ಠಾಶಯಸ್ಸಮಾಪ್ತಃ.

ಸಪ್ತಮಾಶಯ : ನಂದಯುದ್ಧಕಥನವು

ಹೀಗಿರುತ್ತಿರಲು, ಪಾಟಲೀಪುರವಾಸಿಗಳಾದ ಜನರು ಶತ್ರುಗಳ ಸೇನೆ ಬರುವ ಮೂಲಾನುಮೂಲ ನಿಶ್ಚಯವಾಗಿ ತಿಳಿಯದೆ, ತಮ್ಮ ತಮ್ಮ ಮನಬಂದಂತೆ ಮಾತಾಡಿಕೊಳ್ಳುತ್ತಿದ್ದರು : ಏನೆಂದರೆ,

ವೈದಿಕರ ಸಂಘದಲ್ಲಿ ಏನೆಂದು ಹೇಳಿದರೆಂದರೆ : "ಪರ್ವತರಾಯನೆಂಬುವನು ಗಯಾಶ್ರಾದ್ಧವಂ ¹ಮಾಡಿ¹ ಕಾಶೀಯಾತ್ರಾರ್ಥವಾಗಿ ಈ ಮಾರ್ಗವಾಗಿ ಬರುತ್ತಲಿದ್ದಾನಂತೆ. ಆತನು ವಿತರಣಶಾಲಿಯಂತೆ. ನಾವೆಲ್ಲರೂ ಸಂಗಡ ಹೋದರೆ ಮೃಷ್ಟಾನ್ನಭೋಜನವೂ ಬಹು ದಕ್ಷಿಣೆಗಳೂ ದೊರಕುವವು. ಏನ್ಯೆ ಮಲ್ಲಿಭಟ್ಟ²ರೆ², ಎಲ್ಲೈ ಬಂದಿಭಟ್ಟರೆ, ನಾವು ಹೊರಡೋಣವೇ ?" ಎಂದು, "ಓಯಿ ಕಿಚ್ಚಂಭಟ್ಟುಲು, ಪಾಪಾಶಾಸ್ತ್ರುಲು, ಮನ ಚಿಟ್ಟಿಗಾನಿಕಿ ವಿವಾಹಶ್ರಾದ್ಧಂ ಕಾವಲಸಿ ಉನ್ನದಿ, ಇದೇ ಸಮಯಮು, ನಡವಂಡೋಯಿ"

೧. ಮಾಡಲೋಸ್ಕರ (ಕ) ೨. ರೆ ಎಲ್ಲಿಗೆ ಬಂದಿರಿ ? (ಕ)

[ಎಂದು], "ವಹೇ ಕುಪ್ಪಾಶಾಸ್ತ್ರಿಗಳೆ, ಯವನೋ ಒರು ರಾಜಾ ವರಾನಾಂ. ಬಹುವಾಯ್ ಕುಡುಕುರಾನಾಂ ; ಅಣ್ಣಾ ವಾಧ್ಯಾರೆಯುಂ ಅಳಚಿಕೊಂಡು ನೀಂಗಳಂ ವಂದೀರಾನಾಲ್, ಉಂಗುಳುಕ್ಕುಂ ಕುಡಿಪ್ಪಿಚ್ ಕುಡುಕ್ಕಿರೇನ್ ; ವರದಾನಾಲ್ ವರಲಾಂ" ಎನ್ನುತ್ತ ವೈದಿಕರು ಹೇಳುತ್ತಲಿದ್ದರು.

"ನಂದರ ಮೇಲೆ ಕೋಪವಂ ಮಾಡಿದ ಬ್ರಾಹ್ಮಣಸಮೇತನಾಗಿ ಚಂದ್ರಗುಪ್ತನು ಯಾವ ಅರಸನ್ನೋ ಸಹಾಯವಂ ಮಾಡಿಕೊಂಡು ದಂಡೆತ್ತಿ ಬರುತ್ತಲಿದ್ದಾನಂತೆ" ಎಂದು ಕ್ಷತ್ರಿಯರ ಗೃಹಗಳಲ್ಲಿ ಹೇಳುತ್ತಿದ್ದರು. "ಭದ್ರಭಟ ಡಿಂಗಿರಾತರು ಶತ್ರುಗಳ ಮೇಲೆ ಯುದ್ಧವಂ ಮಾಡಿ, ಅವರ ಹೆಂಡಿರಂ ಹಿಡಿದು ಸುಂದರದುರ್ಗಕ್ಕೆ ಸಾಗಿಸಿದರಂತೆ" ಎಂದು ವೀರಪತ್ನಿಯರು ಹೇಳಿಕೊಳ್ಳುತ್ತಿದ್ದರಂತೆ. "ಈ ಪುರದಿಂದ ನಂದರು ಹೊರಟುಹೋದ ಬಳಿಕ ಶತ್ರುಗಳು ಅಮಾತ್ಯ ರಾಕ್ಷಸನಂ ಹಿಡಿದುಕೊಂಡದ್ದರಿಂದ, ನಂದರು ಮತ್ತೊಬ್ಬ ಪುರುಷನಿಗೆ ರಾಕ್ಷಸನ ವೇಷವಂ ಹಾಕಿ, ತಮ್ಮ ಸಮೀಪದಲ್ಲಿ ಇಟ್ಟುಕೊಂಡು ಇದ್ದಾರಂತೆ" ಎಂದು ಮುಗ್ಧಜನರು ಹೇಳಿಕೊಳ್ಳುತ್ತಲಿದ್ದರು.

ಈ ರೀತಿಯಲ್ಲಿ ನಾನಾವಿಧ ವಾರ್ತೆಗಳು ಹುಟ್ಟಿ, ಜನರುಗಳು ಭೀತರಾಗುತ್ತಿದ್ದರು. ಆಗ ಕ್ಷಪಣಕನು ನಂದರು ಜಪಶಾಲೆಗೆ ಬರುವಂತೆ ಮಾಸೋಪವಾಸಿ ಹೇಳಿ ನಿಗದಿ ಮಾಡಿದ ಅರ್ಥವನ್ನು ವೇಗಶರ್ಮನ ಮುಖದಿಂ ತಿಳಿದು, ಅದೇ ಅರ್ಥವಂ ಚಾಣಕ್ಯರಿಗೆ ಹೇಳುವಂತೆ ಮೊದಲಿನಂತೆ ವೇಗಶರ್ಮನಂ ಚಾಣಕ್ಯರ ಬಳಿಗೆ ಕಳುಹಿಸಿದನು. ಈ ವರ್ತಮಾನವಂ ತಿಳಿದ ಸಿದ್ಧಾರ್ಥಕನು ನಂದರಿಗೂ ಪರ್ವತರಾಯನಿಗೂ ನಾಳೆ ಯುದ್ಧ ವಾದೀತೆಂದು ತಿಳಿದು, 'ಬಾಗುರಾಯಣಾದಿಗಳಿಗೆ ನಂದರಲ್ಲಿ ಉಪೇಕ್ಷೆ ಉಂಟಾಗುವಂತೆ ಮಾಡುವೆನೆಂ'ದು ನಿಶ್ಚೈಸಿ, ರಾಕ್ಷಸನ ಮನೆಯ ರಾಯಸದವನಾದ ಕಾಯಸ್ಥರ ಜಾತಿ ಸ್ಥನಾದ ಶಕಟದಾಸನ ಬಳಿಗೆ ಬಂದು, ಅಲ್ಲಿ ಕೆಲವುಹೊತ್ತು ಕಳಿದು, ಹಾಗೇ ರಾಕ್ಷಸನ ಮೈಗಾವಲಿನ ಜನಕ್ಕೆ ಗೊತ್ತುಗಾರನಾದ ವಿನತನಂ ಕಂಡು, ರಾಜಕಾರ್ಯರಹಸ್ಯವಂ ಹೇಳಿ, ಅವನು ಹೇಳಿದ ರಾಜಕಾರ್ಯವರ್ತಮಾನವಂ ತಿಳಿದು, ಆ ಬಳಿಕ ಬಾಗುರಾಯಣನ ಸಮೀಪಕ್ಕೆ ಬಂದು ಕುಳಿತು, ಮತ್ತೆ ರಹಸ್ಯದಲ್ಲಿ ಇಂತೆಂದನು :

"ಅಯ್ಯ ಬಾಗುರಾಯಣನೆ, ಕೇಳಿದ ವರ್ತಮಾನವಂ ನಿನ್ನಲ್ಲಿ ಅಧಿಕಸ್ನೇಹದಿಂದ ರಹಸ್ಯವಾಗಿ ತಿಳುಹಿಸುವೆನು : ಏನೆಂದರೆ, ಚಂದ್ರಗುಪ್ತನಿಗೆ ನಿನ್ನಲ್ಲಿ ಪ್ರೀತಿ ಉಂಟಾಗಿ ಇರುವಂತೆ, ಅವನಲ್ಲಿ ನಿನಗೆ ವಿಶ್ವಾಸವುಂಟಾದರೆ ಹೇಳಬಹುದು. ನಿಮ್ಮಲ್ಲಿರುವ ಭರವಸ ದಿಂದ ಚಂದ್ರಗುಪ್ತನು ಪರ್ವತರಾಯನಲ್ಲಿ ಹೋಗಿ, ಏನೋ ಒಂದು ಲೇಖನವಂ ತೋರಿಸಿ, ಅದರ ನಂಬಿಗೆಯಿಂದಲೂ ಚಾಣಕ್ಯನ ವಾಕ್ಚಾತುರ್ಯದಿಂದಲೂ ಪರ್ವತರಾಯ ನನ್ನು ಕರೆದುಕೊಂಡು ಬಂದು ಇದ್ದಾನೆ. ನಂದರಿಗೆ ರಾಕ್ಷಸನು ಆಪ್ತನಾಗಿ ಇರುವಂತೆ, ಮುಂದೆ ನನಗೆ ಬಾಗುರಾಯಣನೆ ಆಪ್ತನೆಂದು ಪರೋಕ್ಷದಲ್ಲಿ ಹೇಳಿಕೊಳ್ಳುತ್ತಲಿದಾನೆ. ಸರ್ವಪ್ರಕಾರದಿಂದಲೂ ಈ ರಾಜ್ಯಾಧಿಪತ್ಯವಂ ಚಂದ್ರಗುಪ್ತನಿಗೆ ಚಾಣಕ್ಯನು ಉಂಟು ಮಾಡುವದೇ ಸಿದ್ಧ.

ನಂದಸೇನೆಗಿಂತಲೂ ಶತ್ರುಸೇನೆ ಅಧಿಕವೆಂದು ತಿಳಿ. ಚಾಣಕ್ಯರ ಕಪಟೋಪಾಯಕ್ಕೆ ನಂದರು, ರಾಕ್ಷಸನು ಸಹ, ನಿರ್ವಹಿಸಲಾರರು. ರಾಕ್ಷಸನ ಭೇದೋಪಾಯ ಭಗ್ನವಾಯಿತು.

ನಾಳೆ ಯುದ್ಧವಾಗುತ್ತಲಿದೆ. ಜಯಾಪಜಯ ಹ್ಯಾಗಿರುವುದೋ ಎಂದರೆ, ಶತ್ರುಗಳ ಯತ್ನವಂ ನೋಡಿದರೆ, ನಾಳೆ ನಂದರಿಗೆ ಅಪಜಯವೆಂದು ತಿಳಿಯುತ್ತಲಿದೆ ; ಅಥವಾ ಸಮಯುದ್ಧವಾದರೂ, ಅಲ್ಲಿಂದ ಮುಂದೆ ನಂದರಿಗೆ ಅಪಜಯವೇ ಸಿದ್ಧ. ಅದು ಹ್ಯಾಗೆಂದರೆ, ಜ್ವರ ಬಂದವನಿಗೆ ದೋಷಸಾಂಕರ್ಯವೂ ಸನ್ನಿಪಾತವೂ ಅಪಥ್ಯಸೇವನೆಯೂ ಸಹ ಉಂಟಾದರೆ ಮಹಾ ಔಷಧಿಗಳಿಂದಲಾದರೂ ಆ ವ್ಯಾಧಿ ಹ್ಯಾಗೆ ಅಸಾಧ್ಯವಾಗುವದೋ, ಅದೇ ರೀತಿಗೆ ನಂದರಿಗೆ ಒದಗಿ ಇರುವ ಚಾಣಕ್ಯನ ಕಪಟೋಪಾಯವು, ಚಂದ್ರಗುಪ್ತನ ಸದ್ಗುಣವು, ಪರ್ವತರಾಯನ ಶೌರ್ಯವು, ಅವನಿಗೆ ಅರಸುಗಳ ಸಹಾಯವು ಎಂಬ ಇದೆಲ್ಲವೂ ನಂದನಾಶಸೂಚಕಗಳು. ಚಾಣಕ್ಯನು ಚಂದ್ರಗುಪ್ತನಿಗೆ ರಾಜ್ಯಾಧಿಪತ್ಯವನ್ನುಂಟುಮಾಡಿ, ಆತನಿಗೆ ಇಷ್ಟವಾದವನಿಗೆ ಅಮಾತ್ಯಪದವಂ ಕೊಟ್ಟು, ತಾನು ತಪೋವನಕ್ಕೆ ತೆರಳುವನು. ಆದರಿಂದ ಈ ವೇಳೆಯಲ್ಲಿ ಚಂದ್ರಗುಪ್ತನಿಗೆ ನಿನ್ನಲ್ಲಿ ಇರುವ ವಿಶ್ವಾಸವಂ ದೃಢವಂ ಮಾಡಿಕೋ. ನಾನು ಹೇಳಿದ ವಾಕ್ಯವೇ ಚಂದ್ರಗುಪ್ತ ಹೇಳಿದ್ದೆಂದು ತಿಳಿದು, ನಿನಗೆ ಶಕ್ತ್ಯನುಸಾರ ಸಹಾಯವಂ ಮಾಡಿ, ಇನ್ನೂ ಯಶೋವಂತನಾಗು.

ಚಾಣಕ್ಯನ ಉಪಾಯ ಕೌಶಲ್ಯಗಳಂ ನೋಡಿದರೆ, ಕ್ಷೀರ ಜಲಗಳಿಗೆ ವೈರವನ್ನು, ಗಜ ಸಿಂಹಗಳಿಗೆ ಸ್ನೇಹವನ್ನಾದರೂ ಉಂಟುಮಾಡುವನೆಂದು ತೋರುವಲ್ಲಿ ಪರ್ವತರಾಯನಂ ಕರೆದುತರುವದು ಆಶ್ಚರ್ಯವೇನು ? ಈ ನಂದಸೇನೆಯ ಜನದ ಭುಜಯುಗ್ಮದಲ್ಲಿ ಒಂದು ಭುಜವು ಚಾಣಕ್ಯನದು ಎಂದು ತಿಳಿಯುವನಾಗು. ನಾನು ನಿನಗೆ ಆಪ್ತನಾದುದರಿಂದ ಈ ವೇಳೆಯಲ್ಲಿ ಸುಮ್ಮನಿರಬಾರದೆಂದು ತಿಳುಹಿಸಿದೆನು. ಈ ಮಾತಿಗೆ ಈ ರಾತ್ರಿಯಲ್ಲಿಯೇ ಯುದ್ಧ ಸಮೀಪದಲ್ಲಿಯೇ ಆಗುವದು. ಅದೇ ನಿನಗೆ ನಾನು ಹೇಳಿದ ಮಾತು ನಿದರ್ಶನಕ್ಕೆ ಬಂದೀತು. ನಿನ್ನ ಮನೋಗತವೇನು ?" ಎನಲು,

ಆ ಮಾತಿಗೆ ಬಾಗುರಾಯಣನು, ಈ ಸಿದ್ಧಾರ್ಥಕನು ವೈದ್ಯನಂತೆ ತೋರುತ್ತಿರುವನಾದರೂ ಚಂದ್ರಗುಪ್ತನಿಗೆ ಆಪ್ತನಾಗಿ ಇರಬೇಕು. ಇದು ತಿಳಿದು, "ಎಲೈ ಸಿದ್ಧಾರ್ಥಕನೆ, ಚಂದ್ರಗುಪ್ತನಿಗೆ ರಾಕ್ಷಸನ ಹಾಗೆ ನಾವೆಲ್ಲರೂ ದ್ರೋಹಿಗಳಲ್ಲ. ಆತನಿಗೆ ನಾವು ಪ್ರಕಟವಾಗಿ ಸಹಾಯವಂ ಮಾಡಿದರೆ, ಲೋಕಾಪವಾದಕ್ಕೆ ಪಾತ್ರರಾಗುವದರಿಂದ ಇನ್ನು ನಾವು ಮಾಡುವ ಗೂಢಸಹಾಯವು ಆತನಿಗೆ ಮುಂದೆ ತಿಳಿಯಬಂದೀತು. ಪ್ರಕೃತೋಚಿತ ಸಹಾಯವಂ ಮಾಡುತ್ತಲಿದ್ದೇವೆ. ಚಂದ್ರಗುಪ್ತನು ಈ ಪುರವಂ ಬಿಟ್ಟು ಹೋಗುವಲ್ಲಿ 'ತಾನು ವಿರಕ್ತನಾಗಿ ಈಶ್ವರಾರಾಧನೆಯಂ ಮಾಡುತ್ತ ಸದ್ಗತಿಯಂ ಸಂಪಾದಿಸಿಕೊಂಡೇನೆಂ'ದು ಬರೆದುಕೊಟ್ಟ ಕಾಗದವಂ ನೋಡಿ, ಆತನ ತಂದೆ ನಮಗೆ ಮಾಡಿದ ಉಪಕಾರ ಸ್ಮರಣೆಯಿಂದಲೂ ಆತನಿಗೆ ಉಂಟಾಗಿದ್ದ ದುರ್ದಶಾಲೋಕನದಿಂದಲೂ ಆತನ ಅಭಿಮತವಾಗಿ ನಮ್ಮ ಅಕ್ಷರದಿಂದ ಸಮ್ಮತಿಯಂ ಬರೆದು ಕೊಟ್ಟೆವು. ಆ ಕಾಗದವು ಆತನ ಕಾರ್ಯಕ್ಕೆ ಉಪಯುಕ್ತವಾಗಿ ಇದ್ದರೂ ಇದ್ದೀತು. ಹೋಗಿ ಬಾರೆಂ"ದು ಸಿದ್ಧಾರ್ಥಕನಂ ಕಳುಹಿಸಿ, ಆಪ್ತನಾದ ತನ್ನ ದೂತನಂ ಕರೆದು,

"ಎಲೈ ದೂತನೇ, 'ಇಲ್ಲಿಂದ ಮುಂದೆ ಮಾಡತಕ್ಕ ಯುದ್ಧವಂ ನಮ್ಮ ಸಾಮಂತ ಅರಸುಗಳೆ ಮುಂದೆ ನಿಂತು ಮಾಡುವಂತೆ ಅವರಿಗೆ ನೇಮಿಸಿ, ನೀವೆಲ್ಲರೂ ಅಜಾಯುದ್ಧದಂತೆ ಯುದ್ಧವಂ ತೋರಿಸುತ್ತ, ಕಾಲಹರಣವಂ ಮಾಡುತ್ತ, ಶತ್ರುಗಳಂ ತಡೆಯದ

ಬಿಡತಕ್ಕದ್ದು. ಇದರ ವಿವರವಂ ಮುಂದೆ ಹೇಳಿ ಕಳುಹಿಸುವೆನು' ಎಂದು ರಹಸ್ಯದಲ್ಲಿ ನಮಗೆ ಮಿತ್ರರಾದ ಭದ್ರಭಟಾದಿ ಸೇನಾಪತಿಗಳಿಗೆ ನಾವು ಹೇಳಿದೆವೆಂದು ಕಿವಿಯಲ್ಲಿ ಹೇಳಿ ಬಾರೆಂ"ದು ದೂತನಂ ಕಳುಹಿಸಲು.

ಅವನು ಹಾಗೇ ಬಹುತ್ವರಿತದಿಂ ಹೋಗಿ, ಬಾಗುರಾಯಣ ಹೇಳಿದ ರೀತಿಗೆ ರಹಸ್ಯವಾಗಿ ಭದ್ರಭಟಾದಿಗಳಿಗೆ ಹೇಳಿ ಬರುತ್ತಿರಲು, ಬಾಗುರಾಯಣನ ವಾಕ್ಯವಂ ಆಪ್ತವಾಕ್ಯವೆಂದು ತಿಳಿದು, ಆ ಭದ್ರಭಟಾದಿಗಳು ಅದೇ ರೀತಿಯಲ್ಲಿ ಆಚರಿಸುತ್ತಲಿದ್ದರು. ಹೀಗೆ ಶತ್ರುಪಕ್ಷದವರಾದ ಭದ್ರಭಟಾದಿಗಳು ಯುದ್ಧವಂ ಮಾಡದೆ ತಟಸ್ಥರಾಗಿ ಇರುವದಂ ತಿಳಿದು, ಚಾರರು ಹೋಗಿ ಪರ್ವತರಾಯನಿಗಿಂತೆಂದರು :

"[೧]ಜೀಯಾ[೧], ಶತ್ರುಸೇನಾಪತಿಗಳಾದ ಭದ್ರಭಟಾದಿಗಳು ತಾವು ಯುದ್ಧವಂ ಮಾಡುವದಂ ನಿಲಿಸಿ, ತಟಸ್ಥರಾಗಿ ಇದ್ದಾರೆ. ಅವರ ಸಾವಂತರಾಯರ ಸೇನೆ ಮಾತ್ರ ಯುದ್ಧವಂ ಮಾಡುವಂತೆ ಕಾಣಿಸಿ, [೨]ಅದೇ ರೀತಿ ವರ್ತಮಾನಮಂ[೨] ಕೇಳುವುದರಿಂದ ಮಾರ್ಗ ನಿರೋಧವಿಲ್ಲದೆ ಗಂಗಾಸಂಗಮಕ್ಕೆ ನಮ್ಮ ಸೇನೆ ಹೋಗಿ ನಿಲ್ಲಬಹುದೆಂದು ತೋರುತ್ತೆ" ಎನಲು, ಅದಂ ಕೇಳಿದ ಪರ್ವತರಾಯನು ಹೂಣ ಚೀಣ ಕಿರಾತಾಧಿಪತಿಗಳಂ ನೋಡಿ, "ಅಯ್ಯಾ ಅರಸುಗಳಿರಾ, ನೀವೆಲ್ಲರೂ ಸೇನಾಸಮೇತರಾಗಿ ನಾವೆಗಳಂ ಹತ್ತಿ, ಸರಯೂ ಸಂಗಮದಿಂದ ಹೋಗಿ, ಈ ರಾತ್ರೆಯಲ್ಲಿಯೆ ಪಾಟಲೀಪುರಕ್ಕೆ ಮುತ್ತಿಗೆಯಂ ಹಾಕುವ"ದೆಂದು ನೇಮಿಸಲು, ಅದೇ ರೀತಿಗೆ ಅವರೆಲ್ಲರೂ ಸರಯೂನದೀಮಾರ್ಗವಾಗಿ ಬರುತ್ತಿರಲು,

ಅಷ್ಟರಲ್ಲಿ, ರಾಕ್ಷಸನು ಪುರದ ಹೊರವಳಯದಲ್ಲಿ ಬಾಗುರಾಯಣ ಮಾಡಿ ಇರುವ ಯುದ್ಧಸನ್ನಾಹವಂ ನೋಡಿ, ಈಗ ಒದಗಿ ಇರುವ ಶತ್ರುಗಳ ಸನ್ನಾಹಕ್ಕೆ ಇಷ್ಟು ಸಾಲದೆಂದು ತಿಳಿದು, ಸೇನಾಸಮೇತನಾದ ಭೋಜಪತಿಯನ್ನು ಪೂರ್ವದಿಕ್ಕಿನಲ್ಲಿ ಕಾದು ಇರುವಂತೆ ನೇಮಿಸಿ, ಹಾಗೇ ಅವಂತಿ ದೇಶಾಧಿಪತಿಯನ್ನು ಪುರದ ಉತ್ತರದಿಕ್ಕಿನಲ್ಲಿ ಕಾವಲಲ್ಲಿ ನಿಲ್ಲಿಸಿ, ಕಳಿಂಗಪತಿಯನ್ನು ದಕ್ಷಿಣದಿಕ್ಕಿನಲ್ಲಿ ರಕ್ಷಣೆಗೆ ನೇಮಿಸಿ, ಹಾಗೇ ಸೌರಾಷ್ಟ್ರಾಧಿಪತಿಯನ್ನು ಪಶ್ಚಿಮದಿಕ್ಕಿನಲ್ಲಿ ನಿಂತು ಯುದ್ಧವಂ ಮಾಡುವಂತೆ ನೇಮಿಸಿ, ರಾಜದ್ವಾರ ಪುರೋಭಾಗದಲ್ಲಿ ಇಪ್ಪತ್ತು ಸಹಸ್ರ ಅಶ್ವಾರೂಢರು ಕಾದು ಇರುವಂತೆ ನೇಮಿಸಿ, ಬಾಗುರಾಯಣನ ಸೇನೆಯ ಸಂಗಡ ಮಹಾರಾಷ್ಟ್ರಸೇನೆಯು ಕೋಟೆಯ ಮೇಲೆ ಕಾದುಕೊಂಡು ಯುದ್ಧವಂ ಮಾಡುವಂತೆ ನೇಮಿಸಿ, ಅವರಂ ಪ್ರೋತ್ಸಾಹಪಡಿಸಿ, ಈಗಿನ ಯುದ್ಧದಲ್ಲಿ ಜಯಲಾಭವಾದರೆ ನಿಮಗೆ ಮತ್ತೂ ಒಂದು ದೇಶವಂ ಉಚಿತವಾಗಿ ಕೊಡಲಾದೀತೆಂದು ಸಂತೋಷಪಡಿಸಿ, ತನ್ನ ಬಳಿಗೆ ಬಂದ ಬಾಗುರಾಯಣನಿಗೆ ಈ ಅರ್ಥವನೆಲ್ಲವಂ ಹೇಳಿ, "ಇವರೆಲ್ಲರಂ ಕೂಡಿಸಿಕೊಂಡು ಪುರವಂ ಜಾಗರೂಕನಾಗಿ ರಕ್ಷಿಸವನಾಗು ; ಈ ದಿನವೇ ಶತ್ರುಗಳು ಪುರಕ್ಕೆ ಮುತ್ತುವರಂತೆ ; ಕೃತಸಂಕೇತರಾಗಿ ಇರುವ ವರ್ತಮಾನವು ಗೂಢಚಾರರ ಮುಖವಚನದಿಂ ತಿಳಿದಿರುವದರಿಂದ ಜಾಗ್ರತನಾಗಿ ಇರುವವನಾಗು" ಎಂದು ಬಾಗುರಾಯಣನಿಗೆ ನೇಮಿಸಿ.

೧, ೨. ಘ. ಪ್ರತಿ

ಅಲ್ಲಿಂದ ರಾಕ್ಷಸನು ನಂದರ ಸಮೀಪಕ್ಕೆ ಬಂದು ತಾನು ಮಾಡಿಸಿ ಇರುವ ಪುರ ಪ್ರಾಕಾರದ ಅಂತರ್ಬಹಿರ್ಭಾಗ ಸಮರಸನ್ನಾಹವಂ ತಿಳುಹಿಸಲು, ಅದಂ ಕೇಳಿ ನಂದರು ಸಂತೋಷಪಟ್ಟು, "ಅಯ್ಯ ಅಮಾತ್ಯರೆ, ನಮಗೆ ಮಿತ್ರನಾದ ಕಾಶೀರಾಯನಿಗೆ ಮೊದಲು ಕಾರ್ಯಾರ್ಥವಾಗಿ ಲೇಖನವಂ ಬರೆದು ಕಳುಹಿಸಿ ಇದ್ದೀರಷ್ಟೆ. ನೀವು ಬರೆದಿದ್ದ ಮೇರೆಗೆ ಆ ಕಾರ್ಯವಂ ಕಾಶೀರಾಯ ನಿರ್ವಹಿಸ್ಯಾನೋ ನಿರ್ವಹಿಸಲಾರನೋ" ಎನಲು,

"ಅಯ್ಯ ರಾಜಪುತ್ರರುಗಳಿರಾ, ಕಾಶೀರಾಯನು ನಮಗೆ ಮಿತ್ರನಾದುದರಿಂದಲೇ ತನಗೆ ಪರ್ವತರಾಯನು ಸಹಾಯಕ್ಕೆ ಬರಬೇಕೆಂದು ಬರೆದ ಕಾಗದವಂ ಸಹ ನಮ್ಮ ಬಳಿಗೆ ಕಳುಹಿಸಿದನು. ನಮ್ಮನ್ನೇ ಅನುವರ್ತಿಸಿಕೊಂಡು ಇರುವವನಾದುದರಿಂದ ನಾನು ಬರೆದಿರುವ ಮೇರೆಗೆ ಕಾರ್ಯನಿರ್ವಾಹವಂ ಮಾಡತಕ್ಕವನು. ನಾಳೆ ನಾಡಿದ್ದರಲ್ಲಿ ಸೇನಾಸಮೇತನಾಗಿ ಪರ್ವತರಾಯನಿಗೆ ಸಹಾಯವಂ ಮಾಡುವನಂತೆ ಹೊರಟಾನು. ದೈವಸಹಾಯವಿದ್ದರೆ ಕಾರ್ಯವಂ ನಿರ್ವಹಿಸಿ ಯಶೋವಂತನಾದರೂ ಆಗಬಹುದು. ಇದು ಘಟಿಸಿದರೆ, ರಾಜಕಾರ್ಯವು ಸುಲಭವಾಗಿ ತೀರುವದು. ಶತ್ರುವಂ ಜಯಿಸುವಲ್ಲಿ ಹೀಗೆ ಬಹುಯತ್ನವಂ ಮಾಡಿ[ದರೆ], ದೈವಯೋಗದಿಂದ ಯಾವ ಸಾಧನದಿಂದಲಾದರೂ ಜಯವುಂಟಾದೀತು" ಎಂದು ಹೇಳುವಷ್ಟರಲ್ಲಿಯೇ ಸೂರ್ಯನು ಅಸ್ತಾಚಲವನ್ನೈದುತ್ತಿರಲು,

ಆಗ ಭೂಮಿಯಲ್ಲಿ ನಕ್ಷತ್ರಗಳು [೧]ಉದಯಿಸಿ[೧]ದಂತೆ ಬೆಳಗುವ ಸಾಲುದೀವಿಗೆಗಳಿಂದ ಅಂಧಕಾರಗಳು ತೆರಳುತ್ತಿರಲು, ಸಾಮಂತರಾಯ ಮಂಡಲವು ಸ್ವಕಿರೀಟ ಮಣಿಪ್ರಭೆಗಳಿಂ ನೀರಾಜನಂಗೈಯುತ್ತ ನಂದರ ಪಾದಗಳಿಗಭಿವಂದಿಸುತ್ತಿರಲು, 'ಜಯಾ, ವೀರಭಟರ ತಂಡಗಳು ಸಲಾಮು ಮಾಡುತ್ತಲಿದೆ'ಯೆಂದು ಆ ಸೇನಾಪತಿಗಳ ನಾಮವಂ ಹೇಳಿ ವಂದಿಗಳು ಘೋಷಿಸುತ್ತಿರಲು, ರುಚಿರತರ ವಾರವಿಲಾಸಿನೀ ಮಂಜುಮಂಜೀರ ಕಿಂಕಿಣೀರವಮಿಳಿತ ತಂತ್ರೀನಿನದಾನುಗತ ಸಂಗೀತಧ್ವನಿಗಳು ಕಿವಿಗಿಂಪಾಗಿ ಕೇಳುತ್ತಿರಲು,

ಆ ಸಮಯದಲ್ಲಿ ರಕ್ತಸಿಕ್ತವಾದ ವಸ್ತ್ರವಂ ಧರಿಸಿ ರೌದ್ರವಾಗಿ ತೋರುವ ದೂತರಿಬ್ಬರು ಬಂದು, 'ಹೋ' ಎಂದು ಕೂಗಿ, "ಸ್ವಾಮಿ, ಸಾವಕಾಶವಂ ಮಾಡಿದರೆ ರಾಜಕಾರ್ಯ ಕೆಡುವದೆಂ"ಬ ಧ್ವನಿಯಿಂ ಕೇಳಿ, ನಂದರು ದೂತರ ಮುಖವಂ ನೋಡಲು, ಅವರು ಬಂದು ಅದೇನೆಂದು ಕೇಳಲು, "ಸ್ವಾಮಿ, ಸುಂದರಗಡ ಮೊದಲುಗೊಂಡು ಸೂರ್ಯೋದಯಾರಭ್ಯ ಈ ವರೆಗೂ ಡಿಂಗಿರಾತ ಭದ್ರಭಟ ನಮ್ಮ ಸಾಮಂತರಾಯಸೇನೆಗೂ ಶತ್ರುಗಳ ಶಕ ಚೀನರ ಸೇನೆಗಳಿಗೂ ಎಂಟುವೇಳೆ ಕೈಕೂಡಿ ಯುದ್ಧವಾಗಿ ಗಂಡಕೀಸಂಗಮ ಪರ್ಯಂತವೂ ರಕ್ತವು ಹಳ್ಳವಾಗಿ ಹರಿದವು. ಇನ್ನೂ ಪರ್ಯವಸಾನವಿಲ್ಲ. ಅವರ ಓರಂಗಿಗಳು ನಮ್ಮವರಿಗೆ ಇನ್ನೂರೈವತ್ತು ಸಿಕ್ಕಿದವು. ನಮ್ಮ ಕಡೆ ತುರಗಗಳು ಇಪ್ಪತ್ತು ಸಹಸ್ರವಂ ಶತ್ರುಗಳು ಓಡಿದರು.

ಅಷ್ಟರಲ್ಲಿ ಶಕನಾಯಕನಿಗೂ ನಮ್ಮ ಓಥ್ರಾಧಿಪತಿ ವೀರವರ್ಮನಿಗೂ ದ್ವಂದ್ವಯುದ್ಧವಾಗಲು, ಗಜಾರೂಢನಾದ ವೀರವರ್ಮನ ಬಾಣಪರಂಪರೆಯಿಂದ ಶಕನಾಯಕನ ಸುತ್ತಿ ಬರುವ ತುರಗಾರೂಢರೆಲ್ಲರೂ ಹತರಾಗಲು ಕ್ರುದ್ಧನಾದ ಶಕನಾಯಕನು ತಾನು ಕುಳಿತಿದ್ದ

---

೧. ಉದ್ಭವಿಸಿ (ಕ)

ತುರಗವಂ [1]ಹಾರಿಸಿ[1] ತನ್ನ ಕೈಭಲ್ಲದಿಂದ ವೀರವರ್ಮನಂ ಪ್ರಹರಿಸಲು, ಆತನು ಗತ ಪ್ರಾಣನಾದನು.

ಹಾಗೇ ನಮ್ಮ ಮೈಥಿಲನಿಗೂ ಚೀಣ ದೇಶಾಧಿಪತಿಯ ತಮ್ಮನಾದ ಜೀಮೂತನಿಗೂ ದ್ವಂದ್ವಯುದ್ಧ ನಡೆದು, ಮೈಥಿಲನು ಜೀಮೂತ ಹಾಕಿದ ಭಲ್ಲೆಗಳಂ ಖಡ್ಗದಿಂ ಭಿನ್ನಾ ಭಿನ್ನವಾಗಿ ಛೇದಿಸಿ, ಮೇಲೆ ಕವಿದು, ಜೀಮೂತನ ಶಿರಸ್ಸಂ ನೆಲಕ್ಕೆ ಇಳುಹಿದನು. ಇಂದು ವಿಶೇಷವಾಗಿ ಮಗಧಪತಿಗೆ ಜ್ಞಾತಿಯಾದ ರುದ್ರವರ್ಮನು ಕಟಾಕ್ಷಕ್ಕೆ ಪಾತ್ರನಾಗಬೇಕೆಂದು ಶತ್ರುಗಳ ಬಹುತುರಗಾರೂಢರಂ ಸಂಹರಿಸುತ್ತ, ನಿಂತ ಕಡೆಯಲ್ಲಿ ನಿಲ್ಲದೆ, ನಿಲುಗಡೆ ಯಿಲ್ಲದೆ ಯುದ್ಧವಂ ಮಾಡಿದನಲ್ಲದೆ ವಿಶ್ರಮಿಸಿಕೊಂಡವನಲ್ಲ.

ಈ ಅಪರಾಹ್ನದಲ್ಲಿ ನಮ್ಮ ಸಾಮಂತರಾಜಸೇನೆಯು ಶತ್ರುಗಳ ಮೇಲೆ ಯುದ್ಧವಂ ಮಾಡಿ ಶೋಣಾಸಂಗಮಕ್ಕೆ ಶತ್ರುಗಳಂ ಬರಲೀಸದೆ ಗಂಡಕೀಪ್ರಾಂತದಲ್ಲಿಯೇ ಕಾದು ಕೊಂಡು ಇದ್ದಾರೆ. ಭದ್ರಭಟಾದಿಗಳ ಸೇನೆಯು ಹಿಂದೆ ದೂರದಲ್ಲಿಯೇ ಇದೆ. ಶತ್ರುಗಳು ಶೋಣಾನದೀತೀರಕ್ಕೆ ಬರುವರಾಗಿ ಇದ್ದಾರೆ. ಇಲ್ಲಿಂದ ಹೆಚ್ಚು ಸೇನೆ ಹೋಗದಿದ್ದರೆ, ಶೋಣಾನದಿಯಂ ದಾಟಿ ಬಂದಾರು" ಎನಲು, ಅದಂ ಕೇಳಿ ನಂದರು ರಾಕ್ಷಸನಂ ನೋಡಿ,

"ಅಯ್ಯ ಅಮಾತ್ಯರೆ, ಈ ದಿವಸ ನಮ್ಮ ಬಳಿಯ ಅರಸುಗಳೇ ವಿಶೇಷವಾಗಿ ಯುದ್ಧವಂ ಮಾಡಿದರಂತೆ. ಸೇನಾಪತಿಗಳಾದ ಭದ್ರಭಟಾದಿಗಳು ಮನಮುಟ್ಟಿ ಯುದ್ಧವಂ ಮಾಡಿ ದಂತೆ ತೋರುವದಿಲ್ಲ. ಶತ್ರುಗಳು ಇವರಂ ಒಡಂಬಡಿಸಿದಂತೆ ತೋರುತ್ತೆ" ಎನಲು,

"ಅಯ್ಯ ಅರುಸುಗಳಿರ, ಬಲಗುಪ್ತಾದಿ ನಮ್ಮ ಸೇನಾಪತಿಗಳು ನಿನ್ನೆ ಯುದ್ಧದಲ್ಲಿ ಭದ್ರಭಟ ಡಿಂಗಿರಾತರಿಗೆ ಹಿಂಬಲವಾಗಿ ಯುದ್ಧವಂ ಮಾಡಿದರು. ಮುಂದಣ ಕಾರ್ಯವಂ ಯೋಚಿಸಿ, ನಮ್ಮ ಅರಸುಗಳ ಸೇನೆಯಂ ಶತ್ರುಗಳ ಮೇಲೆ ಕಳುಹಿಸಿ, ವಿಂಗಡವಾಗಿ ಇದ್ದಾರು. ಇವರು ಬಹುದಿನ ಆರಭ್ಯ ಆಪ್ತರು. ಸೇನೆಯಂ ಪ್ರೋತ್ಸಾಹಗೊಳಿಸುವದಕ್ಕೆ ಶತ್ರುಗಳು ತುಚ್ಛರೆಂದು ಹೇಳುವ ಮಾತಲ್ಲದೆ ವಸ್ತುತಃ ಈಗಿನ ರಾಜಕಾರ್ಯವು ಬಹು ಪ್ರಯತ್ನಸಾಧ್ಯವು. ರಾಜಕಾರ್ಯವು ಒಮ್ಮಿಂದೊಮ್ಮೆ ಪರ್ಯವಸಾನವಾಗತಕ್ಕದ್ದಲ್ಲ" ಎಂದು ರಾಕ್ಷಸನು ಹೇಳುತ್ತಿರುವ ಸಮಯದಲ್ಲಿ, ತುರಗಾರೂಢರಿಬ್ಬರು ಚಾರರು ಬಂದು ನಂದರಿಗೆ ಕೈಮುಗಿದು,

"ಬುದ್ಧೀ, ಖಡ್ಗಪಾಣಿಗಳಾದ ಪದಾತಿವರ್ಗದಿಂ ಯುಕ್ತವಾದ ಶತ್ರುಗಳ ನಾವೆಗಳು ಐದು ಸಹಸ್ರವು ಶೋಣಭದ್ರಾನದಿವೊಳಗೆ ಬಂದು, ನಮ್ಮ ಓಡೆಗಳಂ ಹಿಡಿದು, ನಾವಿಕರಂ ಪ್ರಹರಿಸಿ, ನದೀ ದಾಟಿ ಬಂದು, ಧ್ವಜವಂ ನೆಟ್ಟು, ವ್ಯೂಹವಂ ರಚಿಸಿಕೊಂಡು ಇದ್ದಾರೆ. ಅವರ ನಾವೆಗಳ ರಕ್ಷಣೆಗೆ ಕಾಂಭೋಜಪತಿಯ ಸೇನೆ ಬರುವದಾಗಿ ಇದೆ. ಅದರ ಹಿಂದೆ ಪಾರಶೀಕರ ಸೇನೆ ಒದಗಿ ಇರುವಂತೆ ತೋರುತ್ತಲಿದೆ. ಅದರಿಂದ ಗಂಡಕೀ ಪ್ರಾಂತ್ಯದಲ್ಲಿ ಇರುವ ನಮ್ಮ ಸೇನೆಗಳು ರಾಜಮಾರ್ಗವಂ ಬಿಟ್ಟು, ಮಾರ್ಗಾಂತರದಿಂದ ಬಂದು ನಿಂತಲ್ಲದೆ ಪಟ್ಟಣಕ್ಕೆ ಆತಂಕ ತಪ್ಪದು" ಎನಲು, ಅದಂ ಕೇಳಿ ನಂದರು ರಾಕ್ಷಸನಂ ನೋಡಿ,

---

೧. ಹರಿಸಿ (ಕ)

"ಅಯ್ಯ ಅಮಾತ್ಯರೆ, ನಮ್ಮ ಸೇನಾಪತಿಗಳು ಶತ್ರುಗಳಂ ತಡೆಯದೆ ಶೋಣಭದ್ರಾ ನದಿಯಂ ದಾಟುವದಂ ನೋಡಿ ಸುಮ್ಮನೆ ಇದ್ದಂತೆ ತೋರುತ್ತಲಿದೆ. ಮೊದಲು ನೀವು ಹೇಳಿದ ಮೇರೆಗೆ ನಡೆಯಲಿಲ್ಲ. ನಮ್ಮ ಮೂಲಬಲಕ್ಕೂ ಶತ್ರುಸೇನೆಗೂ ಸಮೀಪವಾಯಿತು. ಇದೇನೋ ಒಂದು ಪ್ರಕಾರ ಛದ್ಮನೆಯೆಂದು ತೋರುತ್ತಲಿದೆ. ಈಗ ಕೋಪಕ್ಕೆ ಸಮಯವಲ್ಲ. ಆದರೂ ಹೋಗಿ ಇರುವ ನಮ್ಮ ಸೇನೆಗಳು ಗಂಡಕೀಪ್ರಾಂತ್ಯವಂ ಬಿಟ್ಟು ಮಾರ್ಗಾಂತರದಿಂದ ಶೋಣಭದ್ರಾ ನದಿಯಂ ದಾಂಟಿ ಬಂದು, ಶತ್ರುಗಳಂ ಮುಂದೆ ದಾಂಟಲೀಸದಂತೆ ನಿಲ್ಲು[ವ] ಮೇರೆಗೆ ಹೇಳಿ ಕಳುಹಿಸಿರಿ. ಆದಂ ಮೀರಿ ಬಂದರೆ ನಮ್ಮ ಪಟ್ಟಣಕ್ಕೆ ವೇಧೆ ತಟ್ಟುವದು.

ನಾಳೆ ಶತ್ರುಗಳ ಮೇಲೆ ಯುದ್ಧವಾಗಲಿ. ಶತ್ರುಗಳ ಕಡೆ ಚಿತ್ರವರ್ಮನ ಸೇನೆಗೆ ನಮ್ಮ ಡಿಂಗಿರಾತನೆದುರಾಗಲಿ. ಮಲಯಪತಿಯ ಸೇನೆಗೆ ನಮ್ಮ ಭದ್ರಭಟ ಕಾಣಿಸಿಕೊಳ್ಳಲಿ. ಪುಷ್ಕರಾಕ್ಷನ ಸೇನೆಯೊಡನೆ ನಮ್ಮ ಬಲಗುಪ್ತ ಯುದ್ಧವಂ ಮಾಡಲಿ. ಸಿಂಧುಷೇಣನ ಸೇನೆಗೆ ನಮ್ಮ ರಾಜಸೇನನು ಹೋಗಲಿ. ಮೇಘನಾದನ ಸಂಗಡ ನಮ್ಮ ಪುರುಷದತ್ತನು ನಿಲ್ಲಲಿ. ಶೇಖರನ ಮೇಲೆ ನಮ್ಮ ಲೋಹಿತಾಕ್ಷ ಬಳಸಿಕೊಳ್ಳಲಿ. ಮಗಧ ಗಾಂಧಾರ ಶಕ ಚೀನ ಹೂಣಾಧಿಪರ ಮೇಲೆ ನಮಗೆ ಸಾಮಂತರಾದ ಬಂಗಾಳಪತಿಯೂ ಮೈಥಿಲ ಓಢ್ರ ಘೂರ್ಜರಕ ಪಾಂಚಾಲ ವಿದರ್ಭರೂ ವ್ಯೂಹವಂ ರಚಿಸಿಕೊಂಡು ಕವಿಯಲಿ. ಅವರ ಕಿರಾತಸೇನೆಯ ಮೇಲೆ ನಮ್ಮ ವಿಂಧ್ಯವನವಾಸಿಯಾದ ಭದ್ರಕನು ಭಿಲ್ಲಸೇನಾಪರಿವೃತನಾಗಿ ಕೈಮಾಡಲಿ. ಪಾರ್ವತೇಯ ಸೇನೆ[ಯ] ಮೇಲೆ ನಮ್ಮ ಮೂಲಬಲ ಸಮೇತರಾಗಿ ನಾವೇ ಯುದ್ಧಕ್ಕೆ ನಡೆಯುತ್ತಲಿದ್ದೇವೆ" ಎಂದು ನಂದರು ಆಜ್ಞಾಪಿಸುತ್ತಿರಲು,

ಆ ಸಮಯದಲ್ಲಿ ಹೋ ಹೋ ಎಂದು ಕೂಗುತ್ತ ತುರಗವನ್ನೇರಿ ಅತಿತ್ವರ್ಯದಿಂ ಬಂದ ದೂತರಿಬ್ಬರು, "ಅರಸುಗಳು ಎಲ್ಲಿ ನೆಲಸಿ ಇದ್ದಾರೆ ? ಪಟ್ಟಣಕ್ಕೆ ಬಾಧೆ ಬಂದಂತೆ ತೋರುತ್ತಲಿದೆ. ಬೇಗ ತಿಳುಹಿಸಿರಿ" ಎಂದು ದ್ವಾರಪಾಲಕರಿಗೆ ಹೇಳಲು, ಅದೇ ರೀತಿಗೆ ಅವರು ಹೋಗಿ ನಂದರಿಗೆ ವಿಜ್ಞಾಪಿಸಲು, ಅವರಂ ಕರೆಕಳುಹಿಸಿ, "ಅದೇನೈ, ಪಟ್ಟಣದ ವರ್ತಮಾನವೇನೆಂ"ದೆನಲು,

"ಬುದ್ಧೀ, ಸರಯೂನದೀಮಾರ್ಗವಾಗಿ ಹತ್ತುಸಾವಿರ ಶತ್ರುಗಳ ನಾವೆಗಳು ಸೇನಾಸಮೇತವಾಗಿ ಗಂಗಾಸಂಗಮಕ್ಕೆ ಬಂದು, ಗಂಗಾನದಿಯಂ ದಾಂಟಿ, ಪಟ್ಟಣವಂ ಮುತ್ತುವರಂತೆ ಉಭಯ ತೀರದಲ್ಲೂ ಏಕವಾಗಿ ಶತ್ರುಗಳ ನಾವೆಗಳೇ ಕಾಣುವದಲ್ಲದೆ ನದೀ ತರಂಗಗಳು ಕಾಣಿಸುವದಿಲ್ಲ. ಹೀಗೇ ಇನ್ನೂ ಎಷ್ಟು ಬರುವದೋ ಹೇಳಲಳವಲ್ಲ. ಪ್ರತ್ಯಕ್ಷವಾಗಿ ಕಂಡದನ್ನೇ ಬಿನ್ನೈಸಿದೆವು. ಇನ್ನೂ ಹೆಚ್ಚಿ ಬಂದರ ಶತ್ರುಗಳು ನಮ್ಮ ಸ[ರ]ಪಣಿ ಸೇತುವೆಯಂ ಹಿಡಿವರು" ಎಂದು ದೂತರು ಹೇಳಲು, ಆಗ ರಾಕ್ಷಸನು ನಂದರಂ ಕುರಿತು,

"ಅಯ್ಯ ಅರಸುಗಳಿರಾ, ಶತ್ರುಗಳು ಯುದ್ಧವಂ ಮಾಡುವರಂತೆ ಸೇನಾಭಾರವಂ ಮುಂದುಗಡೆಯಲ್ಲಿ ತೋರಿ, ಹಿಂಭಾಗದಿಂದ ಪುರದ ಪ್ರಾಕಾರವನ್ನಾಕ್ರಮಿಸಬೇಕೆಂದು ಬಂದಿದ್ದಾರು. ಚಿಂತೆಯೇನು ? ನೀವು ಎಂದಿನಂತೆ ಮೂಲಬಲಸಮೇತರಾಗಿ ನಾನು ಮಾಡುವ ಯುದ್ಧಸಾಹಸವಂ ನೋಡುವರಾಗಿ. ನಾನು ಸ್ವಾಮಿಭಕ್ತನಾದುದು ಸತ್ಯವಾದರೆ

ಶತ್ರುಗಳಂ ನಿಗ್ರಹಿಸಿ, ಜಯವನ್ನುಂಟುಮಾಡಿ, ನಿಮ್ಮ ಸೇವಕನಹುದೆಂದು ಜನರು ಹೇಳಿಕೊಂಬಂತೆ ಮಾಡುವೆನೆಂ"ದು ಹೇಳಿ, ಕವಚವಂ ಧರಿಸಿ, ತುರಗವನ್ನೇರಿ, ಕಾಷ್ಠ ಪ್ರಹಾರದಿಂ ಕೆಣಕಿದ ಕಾಡಾನೆ ಬಿಡಿಸಿಕೊಂಬಂತೆ, ಭಾಲ್ಯವಂ ಪಿಡಿದು, ತನ್ನ ಮೈಗಾವಲಿನ ಲಕ್ಷ ತುರಗಾರೂಢರು ಸಮೇತನಾಗಿ, ಶಕ್ತ್ಯಾಯುಧವಂ ಪಿಡಿದು ದೇವಸೇನಾಪರಿವೃತನಾಗಿ ಅಸುರರ ಮೇಲೆ ಯುದ್ಧಕ್ಕೆ ಹೋಗುವ ಕುಮಾರಸ್ವಾಮಿಯಂತೆ ರಾಕ್ಷಸನು ತೆರಳುತ್ತಿರಲು.

ಆಗ ರಣಭೇರೀಧ್ವನಿಯು ಪ್ರಳಯಕಾಲದ ಸಿಡಿಲಿನ ಧ್ವನಿಯಂತೆ ಶತ್ರುಗಳ ಹೃದಯವಂ ತಲ್ಲಣಪಡಿಸುತ್ತಿರಲು, ಶತ್ರುಗಳ ಶಕಸೇನೆಯು, ಹೂಣಸೇನೆ ಕಿರಾತಸೇನೆ ಸಹ, ಗಂಗಾನದಿಯಂ ದಾಂಟಿ ಪಾಟಲೀಪುರದ ಪಶ್ಚಿಮದಿಕ್ಕಿನಲ್ಲಿಯೂ ದಕ್ಷಿಣೋತ್ತರ ದಿಕ್ಕಿನಲ್ಲಿಯೂ ವರುಷಾಕಾಲಮೇಘತರಂಗಪಂಕ್ತಿಗಳಂತೆ ವ್ಯಾಪಿಸಿ ಪುರಧ ಸಮೀಪದಲ್ಲಿ ಬರುತ್ತಿರಲು, ಇದಂ ತಿಳಿದು ಪುರವಂ ರಕ್ಷಿಸುವ ಸೇನೆಯು ಯುದ್ಧಸನ್ನದ್ಧವಾಗಿರಲು, ಕೋಟೆ ಕೊತ್ತಳಗಳ ಮೇಲೆ ಬೆಳಗುತ್ತಿರುವ ಜಗಜ್ಯೋತಿಗಳ ಪಂಕ್ತಿಗಳಿಂದ ಆ ಪುರವು ಸಹಸ್ರಚಂದ್ರ[1]ರುದಯಿಸಿ[1]ದಂತೆ, ತೇಜೋಲೋಕದಂತೆ ಕಾಣೆ[ಸು]ತ್ತ, ಪುರವಂ ಮುತ್ತುವ ಶತ್ರುತಂಡಗಳು ಪತಂಗಸಂಘಗಳಂತೆ ಕಾಣಿಸುತ್ತಿರಲು.

ಆಗ ರಾಕ್ಷಸನು ಪ್ರಾಣಿಗಳ ಸಂಹರಿಸುವ ಮೃತ್ಯುವಿನಂತೆ ಶತ್ರುಸಂಘದ ಮೇಲೆ ನಡೆದು ಯುದ್ಧವಂ ಮಾಡುತ್ತ ಮೇಲೆ ಕವಿದು ಬರುವ ಶತ್ರುಸೇನೆಯಂ ಸಂಹರಿಸುತ್ತಿರಲು, ಆತನ ರಭಸಕ್ಕೆ ಶತ್ರುಸೇನೆ ಇಬ್ಭಾಗವಾಗಿ ಹಿಮ್ಮೆಟ್ಟುತ್ತಿರಲು, ಉತ್ತರದಿಗ್ಭಾಗ ರಕ್ಷಕನಾದ ಅವಂತಿ ದೇಶಾಧಿಪತಿಯಂ ಶತ್ರುಗಳ ಮೇಲೆ ಹೋಗುವಲ್ಲಿ ಪ್ರಾಕಾರದ ಮೇಲಣ ಘಾತವಂ ತಪ್ಪಿಸಿಕೊಂಡು ಹೋಗುವಂತೆ ನೇಮಿಸಿ, ತನ್ನ ಬಳಿ[ಯ] ಲಕ್ಷ ತುರಗಗಳಂ ಮೂರು ತಂಡಗಳಂ ಮಾಡಿ, ಮೂರು ದಿಕ್ಕಿನಲ್ಲಿ ಯುದ್ಧವಂ ಮಾಡುವಂತೆ ನೇಮಿಸಿ ಕಳುಹಿಸಿ, ಉತ್ತರದ್ವಾರದಿಂದ ಪ್ರಾಕಾರವನ್ನೇರಿ ಸುತ್ತುತ್ತ ಬರುತ್ತಿರುವ ಶತ್ರುಗಳ ಮೇಲೆ ಪಿರಂಗಿಗುಂಡುಗಳ ತಂಡಗಳಂ ಕರೆಯುತ್ತ, ಲಕ್ಷೋಪಲಕ್ಷ ಬಾಣದ ಕೊಳವಿಗಳಂ ಕ್ಷಣಮಾತ್ರದಿಂ ಬಿಡುತ್ತ, ಕೋಟೆಯ ಸಮೀಪವಂ ಶತ್ರುಗಳು ಸೇರದಂತೆ ಮೇಲೆ ಯುದ್ಧವಂ ರಚಿಸುತ್ತ, ನಿಂತಲ್ಲಿ ನಿಲ್ಲದೆ [ಪ್ರತ್ಯಂಚ] ದ್ವಾರದಿಂ ಹೊರಗೆ ಹೊರಟು, ಸೌರಾಷ್ಟ್ರಪತಿಗೆ ನೇಮಿಸಿ, ಕವಿದುಬರುವ ಶತ್ರುಸೇನೆಯಂ ಹೊಕ್ಕು, ಒಂದೊಂದು ಖಡ್ಗ ಪ್ರಹಾರಕ್ಕೆ ನಾಲ್ಕಾರು ಶತ್ರುಗಳ ಶಿರವನ್ನಿಳುಹುತ್ತ, ತುರಗಗಳಂ ಛೇದಿಸುತ್ತ, ವೇತಂಡಗಳ ಸೊಂಡಿಲುಗಳನ್ನಿಳುಹುತ್ತ, ಶತ್ರುಗಳು ಪ್ರಾಕಾರವಂ ಹಿಡಿಯದಂತೆ ಮೇಲಿನವರಿಗೆ ನೇಮಿಸಿ, ಮೇಘಮಧ್ಯದಲ್ಲಿ ಹೊಳೆಹೊಳೆವ ಸೂರ್ಯನಂತೆ ರಾಕ್ಷಸನು ದಕ್ಷಿಣದಿಕ್ಕಿನ ಶತ್ರುಗಳ ಮೇಲೆ ನಡೆಯುತ್ತಿರಲು.

ಪಶ್ಚಿಮ ದಿಕ್ಕಿನ ಗುಂಡುಗಳ ತಂಡಗಳ ಸಂಗಡಲೇ ಶತ್ರುಗಳ ಶಿರಗಳು ಚಂಡುಗಳಂತೆ ಉರುಳುತ್ತಿರಲು, ಆಗ ದಕ್ಷಿಣ ದಿಕ್ಕಿನ ಶತ್ರುಗಳ ಮೇಲೆ ಕವಿದು ಶೂಲಗಳಿಂ ಪ್ರಹರಿಸುತ್ತ, ಭಲ್ಲೆಗಳಿಂದಿರಿದು ಕೆಡಹುತ್ತ, ಆ ದಿಕ್ಕಿನ ಕಳಿಂಗರಾಯನಿಗೆ ನೇಮಿಸಿ, ತನ್ನ ಕೈಭಲ್ಲದಿಂದಲೇ ಶತ್ರುಸೇನಾಪತಿಗಳಂ ಕೆಡಹುತ್ತ, ಓಡುವರನಟ್ಟುತ, ಅಟ್ಟಿ ಬರುವರಂ ನಿಗ್ರಹಿ

---

೧. ರುದ್ಭವಿಸಿ (ಕ)

ಸುತ, ದಕ್ಷಿಣದ್ವಾರದಿಂ ಪುರದ ಪ್ರಾಕಾರದ ಮೇಲೆ ನಿಂತು ರಾಜದ್ವಾರದ ಬಳಿಯ ಸೇನೆಗೆ ಎಚ್ಚರವಂ ಹೇಳುತ, ಪೌರಜನಕ್ಕೆ ಅಭಯವಂ ಕೊಡುತ, ಶತ್ರುಗಳ ಆಯುಧವಂ ತಂದವನಿಗೆ ನಾಲ್ಕಾರು ಮೊಹರುಗಳಂ, ಶಿರಸ್ಸು ತಂದವನಿಗೆ ನೂರಾರುಗಳಂ, ಗಜಾರೂಢರಂ ಸಂಹರಿಸಿದವರ್ಗೆ ಸಹಸ್ರಸಂಖ್ಯೆಯಂ, ಸೇನಾಧಿಪರ ಶಿರಸ್ಸು ತಂದವರ್ಗೆ ಲಕ್ಷೋಪಲಕ್ಷಗಳಂ ಕೊಡುತ, ಪ್ರಾಕಾರದ ಮೇಲೆ ಬರುತ್ತಿರಲು, ನಿರರ್ಥಕವಾಗಿ ಅನೃತವಂ ಹೇಳುವನ ಪಾತಕದಂತೆ, ಸ್ಥಾನವಂ ಮರಳಿ ಮರಳಿ ಕವಿಯುತ್ತಿರುವ ಜೇನುಹುಳುಗಳ ಹಿಂಡುಗಳಂತೆ, ಶತ್ರುಸೇನೆಯು ಪುನಃ ಪ್ರಾಕಾರದ ಮೂಲವಂ ಹಿಡಿದು ಏಣಿಗಳನ್ನೇರಿಸಿ ಲಗ್ಗೆಯಂ ಹತ್ತುವದಕ್ಕೆ ಯತ್ನವಂ ಮಾಡಲು,

ಆಗ ಒಂದೇ ವೇಳೆ ಮೇಲಿನಿಂದೆರಚುವ ಕಾದ ಸೀಸವರುಷಂಗಳಿಂದಲೂ ಪಿರಂಗಿ ಗುಂಡುಗಳ ತಂಡಗಳಿಂದಲೂ ಶತಘ್ನೀಘಾತಂಗಳಿಂದಲೂ ಬಾಣವೃಷ್ಟಿಗಳಿಂದಲೂ ಶೂಲ ಪ್ರಾಸಾದಿ ಘಾತದಿಂದಲೂ ಅಶನಿಘಾತದಿಂದುರುಳುವ ವೃಕ್ಷಪಂಕ್ತಿಗಳಂತೆ ಶತ್ರುಸೇನೆಯು ಛಿನ್ನಾಭಿನ್ನಗಳಾಗಿ ಗಾಯವಡೆದು ರಕ್ತದ ಹಳ್ಳಗಳಂ ದಾಟಿ ಹಿಮ್ಮೆಟ್ಟಿ ನಿಂತಿರಲು,

ಆಗ ರಾಕ್ಷಸನು ಕ್ರುದ್ಧನಾಗಿ ದುಷ್ಟಕ್ಷತ್ರಿಯರ ಮೇಲೆ ನಡೆಯುವ ಭಾರ್ಗವರಾಮನಂತೆ ರಥವನ್ನೇರಿ, ಆಪ್ತಸೇನಾಸಮೇತನಾಗಿ, ಮೇಘಪಂಕ್ತಿಯಂ ಕಲಕುವ ಜಂಝಾಮಾರುತನಂತೆ ಅತಿರಭಸದಿಂ ರಥವನ್ನೋಡಿಸುತ, ಒಂದೊಂದು ಬಾಣಪ್ರಹಾರಕ್ಕೆ ನಾಲ್ಕಾರು ಶತ್ರುಗಳ ಶಿರಗಳನ್ನಿಳುಹುತ, ಹೊಡೆ ಹೊಡೆ ಎನ್ನುತ, ಬೊಬ್ಬಿರಿದು ಮೇಲ್ಕವಿಯುತ, ಶತ್ರುಗಳ ವ್ಯೂಹವಂ ಭೇದಿಸುತ, ಕುಲಾಲಚಕ್ರದಂತೆ ನಿಂತಲ್ಲಿ ನಿಲ್ಲದೆ ಶತ್ರುಗಳ ಸೇನೆಯಂ ಸುತ್ತುತ, ಶುಷ್ಕಪರ್ಣಂಗಳನೀಡಾಡುವ ಸುಂಟರ ಗಾಳಿಯಂತೆ ಧನುರ್ಮುಕ್ತವಾದ ವಿಶಿಖಪರಂಪರೆಯಿಂದ ಶತ್ರುಗಳ ಶಿರಗಳು ನೆಲಕ್ಕುರುಳುತ್ತಿರಲು, ಈಗ ಕಂಡ ಶತ್ರುಗಳ ತಂಡಗಳು ನಿಮಿಷದಲ್ಲಿ ಬಯಲಾಗುತ್ತಿದ್ದುವು ; ಇಲ್ಲಿ ಕಂಡ ರಾಕ್ಷಸನ ರಥವು ಕ್ಷಣಮಾತ್ರದಲ್ಲಿ ಹರಿದಾರಿಯಲ್ಲಿ ಕಾಣಿಸುತ, ಮತ್ತೆ ನೋಡಿದರೆ ಇದ್ದ ಬಳಿಯಲ್ಲೇ ಇರುವಂತೆ ಕಾಣಿಸುತ, ಜಲತರಂಗಗಳಲ್ಲಿ ಪ್ರತಿಫಲಿಸಿದ ಸೂರ್ಯಬಿಂಬದಂತೆ ಶತ್ರುತಂಡಗಳಲ್ಲಿ ಎಲ್ಲಿ ನೋಡಿದರೂ ಧನುರ್ಧಾರಿಯಾದ ರಾಕ್ಷಸನು ಕಾಣಿಸುತ್ತಲಿರಲು,

"ಅಹುದಹುದೋ, ಲೋಕೈಕವೀರನಹುದೋ, ಕಲಿಪಾರ್ಥನಹುದೋ ; ಜಗದೊಳು ನಿನ್ನಂ ಪೋಲುವ ವೀರರುಂಟೇ" ಎನುತ ಚಕ್ರರಕ್ಷಕರಾದ ವೀರಭಟರು ಪೊಗಳುತ್ತಿರಲು, ಶತ್ರುಗಳ ಚತುರಂಗಬಲವು ಭೂಮಿಯಲ್ಲಿ ಉರುಳಿ ವಸಂತಕಾಲದ ಗಿರಿನದಿಗಳಲ್ಲಿ ಕಾಣಿಸುತ್ತಲಿರುವ ಶಿಲಾಸಮೂಹಗಳಂತೆ ರಕ್ತವಂ ಸ್ರವಿಸುತ್ತ, ಪ್ರಾಕಾರ[ದ] ಸುತ್ತಲೂ ಅತಿರೌದ್ರವಾಗಿ ತೋರುತ್ತಿರಲು, ರಾಕ್ಷಸನ ಬಾಣಹತಿಗೆ ತರಹರಿಸಲಾರದೆ ಉಳಿದ ಶತ್ರುಸೈನ್ಯವು ಪಲಾಯನಂಗೈಯಲು, ರಾಕ್ಷಸನು ಶತ್ರುಗಳಂ ಓಡಿಸಿ ರಥದಿಂದಿಳಿದು ತುರಗವನ್ನೇರಿ ಪುರವಂ ಪೊಕ್ಕು ಯುದ್ಧದಲ್ಲಿ ಹತವಾದ ತನ್ನ ಸೇನೆಯಂ ನೋಡುತ್ತ ಬರುತಿರಲು,

ಅಷ್ಟರಲ್ಲಿಯೇ ಪಲಾಯನಂಗೈದ ಶತ್ರುಗಳು ಗುಂಪುಕೂಡಿ ಕೃತಸಂಕೇತರಾಗಿ, ಮದ್ದಾನೆಯ ಹಿಂಡುಗಳಿಗೆ ಕಣ್ಣುಗಳಂ ಕಟ್ಟಿ, ಹಿಂಭಾಗದಲ್ಲಿ ನಿಂತು, ಒಂದೇ ವೇಳೆ ಆ ಗಜಗಳಂ ಓಡಿಸುತ್ತ ತಂದು, ಆ ಪುರದ ಅಗಳಿನಲ್ಲಿ ಆನೆಗಳಂ ಕೆಡವಿ, ಅದರಿಂದಲೇ

ಅಗಾಧವಾದ ಅಗಳಂ ಹೂಳಿ, ರೋಷಾವೇಶದಿಂದ ಅದನ್ನೇ ತುಳಿಯುತ್ತ ಬಂದು, ಪ್ರಾಕಾರವಂ ಹಿಡಿದು ಏಣಿಗಳನ್ನೇರಿಸಿ, ಲಗ್ಗೆಯಂ ಹತ್ತಿ, ಧ್ವಜವಂ ನೆಟ್ಟು, ತಮ್ಮ ಜಯಭೇರೀಧ್ವನಿಯಂ ಮಾಡುತ್ತಿರಲು,

ಅದಂ ಕೇಳಿ ರಾಕ್ಷಸನು ಆಜ್ಯಾಹುತಿಯಿಂ ಪ್ರಜ್ವಲಿಸುತ ಅಗ್ನಿಯಂತೆ ಕೋಪಾವಿಷ್ಟನಾಗಿ ರಾಜದ್ವಾರದಲ್ಲಿ ಇರುವ ಸೇನೆಯಂ ತನ್ನ ಸಂಗಡ ಬರುವಂತೆ ನೇಮಿಸಿ, ತನ್ನ ಮೈ ಗಾವಲಿನ ತುರಗಾರೂಢರಿಂ ಸಮೇತನಾಗಿ ಅತಿತ್ವರ್‍ಯದಿಂ ತನ್ನ ತುರಗವಂ ಓಡಿಸುತ್ತ, ಪ್ರಾಕಾರದ ಮೇಲೆ ಹತ್ತಿ ಬಂದಿರುವ ಶತ್ರುಗಳ ಮೇಲೆ ಹೊಕ್ಕು, ತನ್ನ ಕೈಖಡ್ಗದಿಂದ ಅವರ ಶಿರಗಳನ್ನರಿದು, ಅವರ ಧ್ವಜವಂ ತರಿದು, ಜಯಭೇರಿಗಳಂ ಹರಿದು, ಅವರು ಬಂದ ಮಾರ್ಗವಿಡಿದು ಪ್ರಾಕಾರದಿಂ ತುರಗವಂ ಹಾರಿಸಿ, ಕೆಳಗೆ ಕಿಖಿಯುತ್ತಲಿರುವ ಶತ್ರುಗಳ ಮೇಲೆ ಹೊಕ್ಕು, ಮೊದಲಿನಂತೆ ಒಂದೊಂದು ಖಡ್ಗಪ್ರಹಾರಕ್ಕೆ ನಾಲ್ಕಾರು ಶತ್ರುಗಳ ಶಿರಗಳನ್ನಿಳುಹುತ್ತ, ಸೈನ್ಯವನ್ನಟ್ಟುತ್ತಿರಲು,

ಅಷ್ಟರಲ್ಲಿಯೇ ಪೂರ್ವದಿಕ್ಕಿನ ಭೋಜಪತಿಯ ಸೇನೆಯು ಬಂದೊದಗಲು, ರಾಜ ದ್ವಾರದ ಬಳಿಯ ಸೇನೆಯು ತನಗೆ ಬೆಂಬಲವಾಗಿ ಬರುತ್ತಿರಲು, ಇವೆಲ್ಲವಂ ನೋಡಿ ಶತ್ರುಗಳು ನಿರ್ವಹಿಸಲಾರದೆ, "ಈತನು ಅಮಾತ್ಯ ರಾಕ್ಷಸನಲ್ಲ, ಪ್ರತ್ಯಕ್ಷವಾಗಿ ಸಂಹರಿಸ ಬಂದ ರಾಕ್ಷಸನೇ ಅಹುದೆಂ"ದು ಪಲಾಯನವಂ ಗೈಯಲು, ರಾಕ್ಷಸನ ಸೇನೆಯು ಅವರಂ ಅಟ್ಟಿ ಓಡಿಸುತ್ತಿರಲು,

ಆಗ ಜಯಭೇರೀನಿನಾದವು ಶತ್ರುಗಳಿಗೆ ಭಯಂಕರವಾಗಿ, ಪುರಜನಕ್ಕೆ ಹರುಷಕರ ವಾಗಿ, ಭೂಮ್ಯಂತರಿಕ್ಷವಂ ತುಂಬುತ್ತಿರಲು, ರಾಕ್ಷಸನು ಶತ್ರುಗಳು ಬಹುದೂರ ಓಡಿ ಹೋದರೆಂಬ ವರ್ತಮಾನವಂ ತಿಳಿದು, ರಾಜದ್ವಾರಸೇನೆಗೆ ಎಂದಿನಂತೆ ಪುರವಂ ಕಾದು ಕೊಂಡು ಇರತಕ್ಕುದೆಂದು ನೇಮಿಸಿ, ಅರುಣೋದಯಸಮಯವಾಗಲು, ತನ್ನ ದೇಹ ಶ್ರಮವಂ ನೋಡದೆ, ನಿವಾತಕವಚರೆಂಬ ಅಸುರಸಮೂಹವಂ ಸಂಹರಿಸಿ ತಂದೆಯಾದ ಸುರಪತಿಯಂ ಕಾಣಬೇಕೆಂಬ ಇಚ್ಛೆಯಿಂದ ಬರುತ್ತಿರುವ ಪಾರ್ಥನಂತೆ ರಾಕ್ಷಸನು ನಂದರ ಬಳಿಗೆ ಬರುತ್ತಿದ್ದನು.

ಗಜಾರೂಢರಾಗಿ ರಾಕ್ಷಸ ಮಾಡಿದ ಯುದ್ಧವಂ ನೋಡುತ್ತಿದ್ದ ನಂದರು, ತಮಗೆ ಜಯವನ್ನುಂಟುಮಾಡಿಕೊಂಡು ಬರುತ್ತಿರುವ ರಾಕ್ಷಸನಂ ದೂರದಲ್ಲಿ ನೋಡಿ, ತಾವು ಗಜದಿಂದಿಳಿದು ಸಮೀಪಕ್ಕೆ ಬಂದು, ಕೈಮುಗಿಯುತ್ತಿರುವ ರಾಕ್ಷಸನನ್ನಾಲಿಂಗಿಸಿಕೊಂಡು,

"ಅಯ್ಯ ಅಮಾತ್ಯನೆ, ಇಂದು ಬಹುಕಾರ್‍ಯವಂ ನಿರ್ವಾಹಮಾಡಿದೆ. ನಮ್ಮ ಪುಣ್ಯ ದಿಂದಲೇ ನಮಗೆ ಅಮಾತ್ಯಶ್ರೇಷ್ಠನಾದೆ. ನೀನೊಬ್ಬ ಇರುವಲ್ಲಿ ನಮಗೆ ಶತ್ರುಗಳಿಂದ ರೇನು ? ಈ ಪರ್ವತರಾಯನೆಷ್ಟು ಮಾತ್ರದವನು ? ಮುಂದೆ ನೀನು ಹೇಳಿದಂತೆ ನಾವೆಲ್ಲರೂ ಕೇಳತಕ್ಕವರು" ಎಂದು ಹೇಳುತ, ರಕ್ತಸಿಕ್ತವಾದ ಆತನ ಕವಚವಂ ತಾವೆ ಬಿಚ್ಚುತ, ಆತನ ದೇಹದಲ್ಲಿದ್ದ ಶಸ್ತ್ರಘಾಯಗಳಿಗೆ ಔಷಧಗಳಂ ಲೇಪಿಸುತ, "ನೀನು ವಿಶ್ರಮಿಸಿಕೊಳ್ಳುತ್ತಲಿರುವನಾಗು. ಶತ್ರುಗಳು ಎದುರಾದರೆ ನಾವೇ ಯುದ್ಧವಂ ಮಾಡಿ ಬರುವೆವೆಂ"ದು ರಾಕ್ಷಸನಿಗೆ ನಂದರು ಹೇಳುತ್ತಿರಲು, ಆ ಮಾತಿಗೆ ರಾಕ್ಷಸನು,

"ಅಯ್ಯ ಅರಸುಗಳಿರ, ಈ ರಾತ್ರೆಯುದ್ಧದಲ್ಲಿ ನಿರ್ವಹಿಸಲಾರದೆ ಪಲಾಯನಂ

ಗೈಯುತ್ತಿರುವ ಶತ್ರುಗಳಂತೆ ಉಳಿದ ಶತ್ರುಸೇನೆಯ ಮೇಲೆ ನಾನೇ ಹೋಗಿ ಕಾಣಿಸಿಕೊಂಡು ಯುದ್ಧವಂ ಮಾಡಿ, ಅವರನ್ನು ಈಗ ಇಳಿದಿರುವ ಪಾಳಯದಿಂದ ಪಲಾಯನವಂ ಗೈಯುವಂತೆ ಮಾಡದೆ ಉಪೇಕ್ಷಿಸಿದರೆ ಮುಂದಣ ಕಾರ್ಯ ಹ್ಯಾಗೆ ಇರುವದೋ ? ಅದರಿಂದ ಈಗಿನ ದೇಹಶ್ರಮವಂ ನೋಡದೆ ಸೇನಾಸಮೇತನಾಗಿ ಶತ್ರುಗಳ ಮೇಲೆ ನಾನೇ ನಡೆವೆನು. ನೀವು ಹಿಂಬಲವಾಗಿ ಬರಬಹುದು'' ಎನಲು, ಆ ಮಾತಿಗೆ ನಂದರು,

''ಅಯ್ಯ ಅಮಾತ್ಯನೇ, ನೀನಲ್ಲದೆ ಯುದ್ಧವೆಂದರೇನು ? ಬಹುಶತ್ರುಗಳಂ ಈಗ ನಿಗ್ರಹಿಸಿ ಬಂದುದರಿಂದ ಪುನಃ ನಿಮ್ಮನ್ನೇ ಆಯಾಸಪಡಿಸಬಾರದೆಂದು ಹೇಳಿದೆವು. ಶತ್ರುಗಳು ಯುದ್ಧಸನ್ನದ್ಧರಾಗಿ ಬರುವದೇ ಉಂಟಾದರೆ, ಸಕಲವಂ ನೀವೇ ನಿರ್ವಹಿಸಬೇಕು. ನಮ್ಮ ಸೇನಾಪತಿಗಳ ಭರವಸ ನಿಮ್ಮಲ್ಲಿ ಇದ್ದಂತೆ[1] ಅವರಲ್ಲಿ ನಮಗಿಲ್ಲ. ಅದರಿಂದ ಯಾವ ರೀತಿಯಲ್ಲಿ ಯುದ್ಧಕ್ಕೆ ಸೇನೆಯಂ ನಿಲ್ಲಿಸಬೇಕೋ ಅದೆಲ್ಲವೂ ನಿನ್ನ ವಶವೇ ಸರಿ. ಗಜಾಧ್ಯಕ್ಷರಂ ಸನ್ಮಾನಗೊಳಿಸಿ ಶತ್ರುಗಳ ಮೇಲೆ ನಡೆಯುವನಾಗು. ಅಶ್ವಲಕ್ಷಾಧಿಪತಿಗಳಂ ಪ್ರೋತ್ಸಾಹಪಡಿಸುತ್ತ ಶತ್ರುಗಳಂ ನಿಗ್ರಹಿಸುವನಾಗು. ಪದಾತಿವರ್ಗವಂ ರಕ್ಷಿಸುತ್ತ ಶತ್ರುಗಳ ಮೇಲೆ ಕಾಣಿಸುವನಾಗು. ಯುದ್ಧದಲ್ಲಿ ಹಿಮ್ಮೆಟ್ಟಿದವರಂ ನಿಗ್ರಹಿಸುವನಾಗು. ಭದ್ರಭಟನಿಗೆ ಸಹಾಯವಂ ಮಾಡುವನಾಗು. ಡಿಂಗಿರಾತನಿಗೆ ಧೈರ್ಯವಂ ಹೇಳುವನಾಗು. ನಮ್ಮ ಸಾಮಂತ ಅರಸುಗಳಂ ಪ್ರೇರಿಸುವನಾಗು. ಬಲಗುಪ್ತ ವಿಜಯವರ್ಮಾದಿಗಳ ಮನೋಭಾವವಂ ತಿಳಿದು ಯುದ್ಧಕ್ಕೆ ನೇಮಿಸುವನಾಗು'' ಎಂದು ನಂದರು ರಾಕ್ಷಸನಿಗೆ ಹೇಳುತ್ತಿರಲು, ಆ ಮಾತಿಗೆ ರಾಕ್ಷಸನು ಸಮ್ಮತನಾಗಿ, ತನ್ನ ಸೇನೆಯ ನಾಯಕರಿಗೆ ವ್ಯೂಹವಂ ರಚಿಸಿಕೊಂಡು ಮುಂದೆ ತೆರಳುವಂತೆ ನೇಮಿಸಿ, ತನ್ನ ಪಾರ್ಶ್ವದಲ್ಲಿದ್ದ ದೂತರ ಮುಖವಂ ನೋಡಿ,

''ಎಲೈ, ಈ ದಿವಸ ರಾತ್ರಿಯುದ್ಧದಲ್ಲಿ ನಿಂತು ಯುದ್ಧವಂ ಮಾಡದೆ ಶಕಸೇನೆಯಂ ಕಂಡು ಪಲಾಯನವಂ ಗೈದ ನಮ್ಮ ಮಾರ್ವಾಡ ದೇಶಾಧಿಪತಿಯ ಸೇನೆಯಂ ಕರೆತಂದು, ನಮ್ಮ ವಿಂಧ್ಯವನಸ್ಥರಾದ ಭಿಲ್ಲಸೇನೆಯು ತಮ್ಮ ಬಾಯ ತಂಬುಲವಂ ಮಾರ್ವಾಡ ಸೇನೆಯ ಮುಖದ ಮೇಲೆ ಉಗುಳುವಂತೆ ನೇಮಿಸುವದು ; ಮತ್ತು ಶತ್ರುಗಳ ಮೇಲೆ ಯುದ್ಧಕ್ಕೆ ಹೋದ ಕೊಂಕಣಪತಿಯ ಸೇನಾಜನವು ಶತ್ರುಗಳ ಮೇಲೆ ಯುದ್ಧವಂ ಮಾಡದೆ ತಮ್ಮ ಬಂಧುಜನಗಳ ಯೋಗಕ್ಷೇಮವಂ ವಿಚಾರಿಸುತ್ತ ಅವರಿಗೆ ಮಿತ್ರರಂತೆ ಇದ್ದುದರಿಂದ, ಅವರಂ ಪಿರಂಗೀಬಾಯಿಗೆ ಕಟ್ಟಿ ಸಂಹರಿಸುವಂತೆ ಹೇಳುವದು. ಆ ಕೊಂಕಣದೇಶವಂ ನಮ್ಮ ಭೋಜಪತಿಯ ವಶವಂ ಮಾಡಲಿ. ಆಂಧ್ರದೇಶವಂ ನಮ್ಮ ಕಳಿಂಗರಾಯನಿಗೆ ಕೊಡಲಿ'' ಎಂದು ದೂತರಿಗೆ ನೇಮಿಸುತ್ತಿರಲು, ಆಗ ಕಮಲಬಾಂಧವನುದಯಗಿರಿಶಿಖರದೇಶವನ್ನಲಂಕರಿಸುತ್ತಿರಲು,

ಆಗ ನಂದರೆದ್ದು ಸ್ನಾನ ಸಂಧ್ಯಾದಿ ನಿತ್ಯಕೃತ್ಯವಂ ಮಾಡಿ, ದಿವ್ಯಭೂಷಣಾಭೂಷಿತರಾಗಿ, ಶೃಂಗರಿಸಿ ಕಾದಿರುವ ತಮ್ಮ ಗಜಶ್ರೇಷ್ಠಗಳಂ ಆರೋಹಣವಂ ಮಾಡುತ್ತಿರಲು, ಹಾಗೇ ರಾಕ್ಷಸನು ಸನ್ನದ್ಧವಾದ ಗಜದ ಮೇಲೆ ಕುಳಿತು ಮುಂದೆ ನಡೆಯುತ್ತಿರಲು, ಆಗ

---

೧. ತೆ ನಮಗೆ (ಕ, ಖ, ಗ)

ವೀರಭಟರ ಸಿಂಹನಾದಗಳೂ ಭುಜಾಸ್ಫಾಲನಶಬ್ದಗಳೂ ವೀರರ ವೀರವಾದಧ್ವನಿಗಳೂ ರಥಚಕ್ರಕ್ರೀಂಕಾರನಿನಾದಗಳೂ ತುರಗರಾಜಿಯ ಖುರಪುಟಧ್ವನಿಗಳೂ ಗಜಶ್ರೇಷ್ಠಗಳ ಬೃಂಹಿತಶಬ್ದಗಳೂ ಭೂಮ್ಯಂತರಿಕ್ಷದಲ್ಲಿ ಶಬ್ದಮಯವಾದಂತೆ ತೋರುತ್ತಿರಲು, ಹೀಗೆ ಚತುರಂಗಬಲ ಸಮೇತರಾಗಿ ತೆರಳುತ್ತ, ಸೇನಾಪತಿಗಳ ಸಲಾಮುಗಳಂ ನೋಡುತ್ತ, ಅವರಂ ಪ್ರೋತ್ಸಾಹಿಸುತ್ತ ತೆರಳುತ್ತಿರಲು,

ಆ ಸಮಯದಲ್ಲಿ ಶತ್ರುಸೇನೆ ಎದುರಾಗಿ ಸನ್ನದ್ಧರಾಗಿ ಕಾಣಿಸಲು, ರೋಷಾವೇಶದಿಂ ಚಿಮ್ಮಿಸುವ ಆಯುಧಪ್ರಭೆಗಳು ಸಮುದ್ರತರಂಗಗಳಲ್ಲಿ ತೋರುವ ಸೂರ್ಯಪ್ರಭೆಯಂತೆ ದೃಷ್ಟಿಮಾರ್ಗವಂ ನಿರೋಧಿಸುತ್ತಿರಲು, ಆ ವೇಳೆಯಲ್ಲಿ ಅಹಂ ಪೂರ್ವಮಹಂ ಪೂರ್ವ ವೆಂದು ನಡೆಯುತ್ತಿರಲು, ಧನುರ್ಧಾರಿಗಳ ಕೋದಂಡದಿಂ ಹೊರಡುವ ಬಾಣಪಂಕ್ತಿಗಳು ಮೇಘಗಳ ದೆಸೆಯಿಂದ ಹೊರಡುವ ಉದಕವೃಷ್ಟಿಯಂತೆ ಭೂಮ್ಯಾಕಾಶದಲ್ಲಿ ವ್ಯಾಪಿಸಿ ಉಭಯಸೇನೆಯಂ ಮುಚ್ಚಿ ಎಲ್ಲಿ ನೋಡಿದರೂ ಶರವ[ಣ]ದಂತೆ ಕಾಣಿಸುತ್ತಿರಲು, ಹೀಗೆ ಬರುವ ಬಾಣಪರಂಪರೆಯನ್ನು ತಮ್ಮ ಖೇಡ್ಯಗಳಿಂದ ತಡೆಯುತ್ತ, ತಮ್ಮ ಕೈಖಡ್ಗ ಗಳಿಂದ ಧನುರ್ಧಾರಿಗಳಾದ ಶೂರರಂ ಛೇದಿಸುತ್ತ, ಹಾರುತ್ತ ಹಾರುತ್ತ ಬರುವ ವೀರರನ್ನು ತಮ್ಮ ಕೈಭಲ್ಲೆಗಳಿಂದ ತಿವಿದು ಸಂಹರಿಸುತ್ತ, ಒಳಹೊಕ್ಕು ಇರಿಯುವ ಭಲ್ಲೆ[ಯ]ದವರನ್ನು ರೋಷಾವೇಶದಿಂದ ಮೈಮರೆತಿರುವ ತುರಗಾರೂಢರು ಎದುರಾಗಿ ಗುಂಪಾಗಿ ಬಂದು ತಮ್ಮ ಕೈಪಟ್ಟಸಗಳಿಂದ ಸಂಹರಿಸುತ್ತಿರಲು,

ಅದಂ ನೋಡಿ ಗಜಾರೂಢರಾದ ಶೂರರು ಗುಂಪಾಗಿ ಕಾಣಿಸಿಕೊಂಡು ತಮ್ಮ ಬಾಣ ಪರಂಪರೆಯಿಂದ ಆ ಶತ್ರುತುರಗಾರೂಢರಂ ಸಂಹರಿಸುತ್ತಿರಲು, ಅದಂ ತಿಳಿದು ಕ್ರುದ್ಧ ರಾದ ಫಿರಂಗಿದಾರರು ಹತ್ತಿಸಿದ ಗುಂಡುಗಳ ತಂಡಗಳಿಂದ ಆ ವೇತಂಡಗಳ ಗಂಡ ಮಂಡಲಗಳು ತುಂಡುತುಂಡಾಗುತ್ತಿರಲು, ಅದೆಲ್ಲವಂ ನೋಡಿ ರಥಸ್ಥರಾದ ವೀರರು ತಮ್ಮ ಸಾರಥಿಯಂ ಪ್ರೇರಿಸಿ, ರಥಾಶ್ವಗಳಂ ಚಬುಕುಮಾಡಿ ತೀವ್ರವೇಗದಿಂದ ಹೊರ ಡುವ ತಮ್ಮ ತೀಕ್ಷ್ಣವಾದ ಬಾಣಪರಂಪರೆಯಿಂದ ಆ ಫಿರಂಗಿದಾರರಂ ಸಂಹರಿಸಿ, ಆಗ ಶತ್ರುಗಳ ರಥಗಳೆದುರಾಗಲು, ತಮ್ಮ ಕರಲಾಘವವಂ ತೋರಿಸಿ, ತಮ್ಮ ಮೇಲೆ ಬರುವ ಬಾಣಪಂಕ್ತಿಗಳಂ ಕತ್ತರಿಸಿ, ಶತ್ರುರಥಿಕರ ಧನುಸ್ಸುಗಳಂ ಛೇದಿಸಿ, ಧ್ವಜಗಳಂ ಕತ್ತರಿಸಿ, ಸಾರಥಿಗಳ ಶಿರವನರಿದು, ತುರಗಗಳಂ ಘಾತಿಸಿ, ಓಡುವ ರಥಿಕರಂ ಸಂಹರಿಸಲು, ನುಗ್ಗು ನುಗ್ಗಾದ ರಥಗಳಿಂದಲೂ ತುಮುರು ತುಮುರಾದ ಪತಾಕೆಗಳಿಂದಲೂ ನುಚ್ಚು ನುಚ್ಚಾದ ಛತ್ರಗಳಿಂದಲೂ ತುಂಡುತುಂಡಾದ ಆಯುಧಗಳಿಂದಲೂ ಖಂಡತುಂಡಗಳಾದ ಅಶ್ವ ಸಾರಥಿಗಳಿಂದಲೂ ಛಿನ್ನಾಭಿನ್ನವಾದ ರಥಿಕರ ಶರೀರದಿಂದಲೂ ಸಾಂದ್ರವಾದ ಆ ರಣ ಭೂಮಿಯು ಚಿತ್ರಾಸ್ತರಣದಂತೆ ತೋರುತ್ತಿರಲು,

ತಮ್ಮ ಬಲಗಳು ನಷ್ಟವಾಗುವದಂ ನೋಡಿ ರೋಷಾವೇಶದಿಂ ಮೈಮರೆತು ಇರುವ ಉಭಯಸೇನೆಯ ಸೇನಾಪತಿಗ[ಳ] ಹೂಂಕಾರದಿಂದ ಪೂರ್ವ ಪಶ್ಚಿಮ ಸಮುದ್ರಗಳು ಮೇರೆದಪ್ಪಿ ಒಂದಾಗುವಂತೆ, ಉಭಯದಿಕ್ಕಿನ ಜಂಝಾಮಾರುತವೇಗದಿಂದ ಉಂಟಾ ಗುವ ಮೇಘಪಂಕ್ತಿಗಳಂತೆ, ಮಂದರಕ್ಷೋಭೆಯಿಂ ಘೋಷಿಸುವ ಮಹಾಂಬುಧಿಯಂತೆ, ವಾಙ್ಮನಗಳಿಗೆ ಗೋಚರವಾಗದೆ ಮಾಡುವ ದೇವಾಸುರಯುದ್ಧದಂತೆ, ಉಭಯಸೇನೆ

ಗಳಿಗೂ ಪ್ರಾಸ ಪಟ್ಟಿಸ ಶೂಲ ಖಡ್ಗ ತೋಮರ ಬಾಣ ಚಕ್ರ ಗದಾ ಪರಿಘಗಳಿಂದ ರಥಸ್ಥರು ರಥಿಕರನ್ನೂ ಗಜಾರೂಢರು ವಾರಣಾಧಿಪರನ್ನೂ ತುರಗಾರೂಢರು ಅಶ್ವ[೧]ಸಾದಿ[೧]ಗಳನ್ನೂ ಪದಾತಿವರ್ಗವು ಕಾಲಾಳನ್ನೂ ಪ್ರಹರಿಸುತ್ತ ಯುದ್ಧವಂ ಮಾಡುತ್ತಿರಲು,

ರಣಭೂಮಿಯಲ್ಲಿ ಭೇರೀಶಬ್ದವನ್ನಡಗಿಸಿ ಶಸ್ತ್ರಪ್ರಹಾರಶಬ್ದಗಳೇ ಬಹುವಾಗಿ ಕೇಳಿಸುತ್ತಿರಲು, ಆ ಶಸ್ತ್ರಪ್ರಹಾರದಿಂ ಘಾಯವಡೆದ ವೇತಂಡಗಳ ಸೊಂಡಿಲುಗಳಿಂದಲೂ ಭಗ್ನರಾದ ಸಾರಥಿಶರೀರ ಬೃಂದಗಳಿಂದಲೂ ಭೇದಿತವಾದ ಪದಾತಿವರ್ಗಾವಯವಗಳಿಂದಲೂ ಸಂಹೃತರಾದ ರಥಿಕರ ಕಂಠದೇಶಂಗಳಿಂದಲೂ ಭಿನ್ನರಾದ ಗಜಾರೂಢರ ಮಸ್ತಕದೆಶೆಯಿಂದಲೂ ಗತಪ್ರಾಣರಾದ ತುರಗಸಾದಿ ಮುಖಕುಹರಗಳಿಂದಲೂ ಹೊರಟು ಒಟ್ಟಾಗಿ ಬರುವ ರಕ್ತಧಾರಾನದಿಗಳ ಪ್ರವಾಹಗಳು ಮೇಲೆಮೇಲೆ ಹೆಚ್ಚಿ ಬರುತ್ತಿರಲು, ಭಯಭ್ರಾಂತರಾಗಿ ಓಡಿಹೋಗುವ ಜನರು ಆ ನದಿಗಳಂ ದಾಂಟಲಾರದೆ ಮುಳುಗಿ ತೇಲಿ ಕಬಂಧಗಳನ್ನವಲಂಬಿಸಿ ದಾಂಟುತ್ತಿರಲು, ರಣಭೂಮಿಯು ಸಂಧ್ಯಾರಾಗ ಮುಸುಕಿದಂತೆ, ವೀರಲಕ್ಷ್ಮಿಯರ ವಿಲಾಸವಸಂತೋತ್ಸವದ ಓಕುಳಿಗಳ ಮಡುಹುಗಳೋ ಎಂಬಂತೆ ಅತಿಭಯಂಕರಮಾಗಿ ತೋರುತ್ತಿರಲು, ಉಭಯಸೇನೆಗಳಲ್ಲಿ ಅರ್ಧ ಹತವಾಗಲು, ಉಳಿದ ಸೇನಾಜನವು ಶ್ರಾಂತರಾಗಿ ವಿಶ್ರಮಿಸಿಕೊಂಡು ಪುನಃ ಯುದ್ಧಸನ್ನದ್ಧರಾಗಲು, ಅಷ್ಟರಲ್ಲಿಯೇ ಆದಿತ್ಯನಸ್ತಾಚಲಶಿಖರವನ್ನೈದಲು, ಆಗ ಉಭಯಸೇನೆಯ ಅರಸುಗಳು ತಮ್ಮ ಸೇನಾಪತಿಗಳಂ ಕರೆದು

"ಅಯ್ಯ ಶೂರರಾದ ಸೇನಾಪತಿಗಳಿರಾ, ಈ ದಿನದ ಯುದ್ಧವಂ ನಿಲ್ಲಿಸಿರಿ. ಸೇನೆಗಳು ಮಿಶ್ರಮಿಸಿಕೊಳ್ಳಲಿ. ನಾಳೆ ಆದೀತೆಂ"ದು ನೇಮಿಸಲು, ರಾಜಾಜ್ಞೆ ಮೇರೆಗೆ ಸೇನಾಪತಿಗಳು ಯುದ್ಧವಂ ನಿಲ್ಲಿಸಿ, ಸೇನೆಯಂ ಕರೆತಂದು, ದಂಡಿನ ಪಾಳಯದಲ್ಲಿ ಇಳುಹಿಸಿ, ಕವಚಗಳಂ ಸಡಿಲಿಸಿ, ವಾಹನಗಳಂ ಸಂತವಿಟ್ಟು, ಎಂದಿನಂತೆ ತಮ್ಮ ತಮ್ಮ ಬಿಡಾರಕ್ಕೆ ಹೋಗುತ್ತಿರಲು,

ಅರಸುಗಳಾದ ನಂದರು ಸ್ನಾನಾದಿಗಳಂ ಮಾಡಿ, ಆಪ್ತಮಿತ್ರರಾದ ರಾಜಪುತ್ರರೊಡನೆ ಯುದ್ಧವಾರ್ತೆಯನ್ನಾಡುತ್ತ ವಿಶ್ರಮಿಸಿಕೊಳ್ಳುತ್ತಿರಲು, ಹಾಗೇ ರಾಕ್ಷಸನು ಕವಚವಂ ಸಡಿಲಿಸಿ, ಸ್ನಾನ ಸಂಧ್ಯಾದಿಗಳಂ ಮಾಡಿ, ಮುಂದಣ ಕಾರ್ಯವಂ ನೆನೆಯುತ್ತಲಿರುವ ಸಮಯದಲ್ಲಿ, ಚಾರರಿಬ್ಬರು ಬಂದು ಕೈಮುಗಿದು,

"ಸ್ವಾಮಿ ಅಮಾತ್ಯರೇ, ತಮ್ಮ ಅಪ್ಪಣೆ ಮೇರೆಗೆ ದಕ್ಷಿಣದಿಕ್ಕಿನಲ್ಲಿ ಇಳಿದಿದ್ದ ಸೇನೆಗಳು ನಾಲ್ಕುಯೋಜನದಲ್ಲಿ ಬಂದು ಇಳಿದವು. ಇನ್ನು ಎರಡು ಮೂರು ದಿವಸದಲ್ಲಿ ಬಂದು ಒದಗುತ್ತಲಿದೆ" ಎಂದು ವಿಜ್ಞಾಪಿಸಲು, ಆ ಮಾತಿಗೆ ಸಂತೋಷಪಡುತ್ತ,

"ಎಲೈ, ಆ ಸೇನೆಗಳಂ ತ್ವರಿತದಿಂದ ಕರೆತಂದು ಪುರದ ಸಮೀಪದಲ್ಲಿ ಇಳುಹಿಸಿರಿ" ಎಂದು ಹೇಳಿ ಕಳುಹಿಸಿ, ನಂದರ ಸಮೀಪಕ್ಕೆ ಬರುತ್ತಿರಲು, ಅಷ್ಟರಲ್ಲಿಯೇ ದಶಾರ್ಣ ಶೂರಸೇನ ದೇಶಗಳಿಗೆ ಹೋಗಿದ್ದ ತುರಗಾರೂಢರಿಬ್ಬರು ಬಂದು ರಾಕ್ಷಸನಂ ಕಂಡು ಕೈಮುಗಿದು, ಕಾಗದಗಳಂ ಕೊಟ್ಟು,

---

೧. ಸಾರಥಿ (ಕ)

"ಬುದ್ಧೀ, ದಶಾರ್ಣಾಧಿಪತಿ ಶೂರಸೇನಾಧಿಪತಿಗಳು ತಮ್ಮ ಅಪ್ಪಣೆ ಮೇರೆಗೆ ಸೇನಾ ಸಮೇತರಾಗಿ ಹೊರಟು ಪರ್ವತರಾಜ್ಯಕ್ಕೆ ತೆರಳುತ್ತ, ಎರಡು ಪ್ರಯಾಣದ ಮೇಲೆ ಬರೆದುಕೊಟ್ಟ ಕಾಗದವಿದು. ಅವರ ಉತ್ಸಾಹವಂ ನೋಡಿದರೆ, ಇಷ್ಟು ದಿವಸಕ್ಕೆ ಪರ್ವತ ರಾಜ್ಯವಂ ಸೂರೆಗೈದು ಆ ಪುರವಂ ಮುತ್ತಿರಬೇಕು" ಎಂದು ವಿಜ್ಞಾಪಿಸಲು, ಆ ಲೇಖನಗಳಂ ನೋಡಿಕೊಂಡು, ಸಂತೋಷದಿಂ ನಂದರ ಸಮೀಪಕ್ಕೆ ಹೋಗಿ, ಏಕಾಂತ ದಲ್ಲಿ,

"ಅಯ್ಯ ಅರಸುಗಳಿರ, ಇಂದಿನ ಯುದ್ಧದಲ್ಲಿ ಉಭಯಸೇನೆಯಲ್ಲಿಯೂ ಅರ್ಧ ಹತವಾಗಿ ಸಮಯುದ್ಧವಾಯಿತು. ಎಷ್ಟು ಸಾಹಸವಂ ಮಾಡಿದರೂ ಶತ್ರುಗಳು ಇಳಿದಿದ್ದ ಪಾಳಯದಿಂದ ಹಿಂದಕ್ಕೆ ಹೋಗಲಿಲ್ಲ. ಪುನಃ ಯುದ್ಧಕ್ಕೆ ಯತ್ನೀಕರಿಸುವಂತೆ ತೋರುತ್ತ ಲಿದೆ. ಹಾಗೆ ನಡೆದರೆ ಜಯಾಪಜಯವೆಂತಿರುವದೋ ?

ಆದ್ದರಿಂದ ಒಮ್ಮಿಂದೊಮ್ಮೆ ಪುನಃ ಯುದ್ಧಕ್ಕೆ ಯತ್ನವಂ ಮಾಡದೆ, ಶತ್ರುಗಳಂ ಯುದ್ಧಕ್ಕೆ ಯತ್ನವಂ ಮಾಡದಂತೆ ಕಪಟಸಂಧಿಯಂ ಕಲ್ಪಿಸಿ, ಕಾಲಹರಣವಂ ಮಾಡುತ್ತ, ಈಗ ನಷ್ಟವಾದ ನಮ್ಮ ಸೇನೆಗೆ ಪೂರ್ತಿ ಆಗುವಂತೆ ದಕ್ಷಿಣದಿಕ್ಕಿನಿಂದ ನಮ್ಮ ಸೇನೆ ಬಂದು ಒದಗಿದ ಬಳಿಕ ನಾವು ಪುನರ್ಯುದ್ಧಾರಂಭವಂ ಮಾಡಿದರೆ, ಮೊದಲೇ ನಮ್ಮಿಂದ ಪ್ರೇಷಿತರಾದ ದಶಾರ್ಣಪತಿ ಶೂರಸೇನಪತಿಗಳು ಸೇನಾಸಮೇತರಾಗಿ ಇದೇ ಸಮಯದಲ್ಲಿ ಪರ್ವತರಾಜ್ಯವಂ ಕೊಳ್ಳೆಮಾಡುತ್ತ, ಅಲ್ಲಿಯ ಸೇನೆಗಳು ಪರ್ವತರಾಯ ನಿಗೆ ಮೇಲುಬಲವಾಗದಂತೆ ಯುದ್ಧಾರಂಭವಂ ಮಾಡಿ ಇರುವದರಿಂದಲೂ ನಷ್ಟವಾದು ದಕ್ಕೆ ಬದಲಾಗಿ ಸೇನೆಯಂ ಜೊತೆಗೊಳಿಸುವದಕ್ಕೆ ಪರ್ವತರಾಯನಿಗೆ ಅನುಕೂಲವಾಗದ್ದ ರಿಂದಲೂ ಅಧಿಕಸೇನಾಸಮೇತರಾದ ನಮ್ಮಿಂದ ಶತ್ರುಗಳೆಲ್ಲರೂ ಹತವಾಗುವದರಲ್ಲಿ ಸಂಶಯವಿಲ್ಲ. ಇದರಿಂದ ಶತ್ರುಗಳೊಡನೆ ಸಂಧಿಯೆಂದು ಮಾತನಾಡುತ್ತ, ಅವರು ಹೇಳಿದ ಮಾತಿಗೆ ಒಪ್ಪೀ ಒಪ್ಪದಂತೆ ಇರುತ್ತ, ಕಾಲಹರಣವಂ ಮಾಡುತ್ತಲಿದ್ದರೆ, ಇಷ್ಟರಲ್ಲಿಯೇ ಕಾಶೀರಾಯನ ಮುಖದಿಂ ಯತ್ನವಂ ಒದಗಿಸಿಕೊಂಡಾದರೂ ಕಾರ್ಯವಂ ಗೆಲ್ಲಬೇಕಲ್ಲದೆ ದುಡುಕಬಾರದು" ಎಂದು ಹೇಳಿ, ನಂದರಂ ಸಮ್ಮತಿಗೊಳಿಸಿ,

ಆಗ ವಿಷ್ಣುದಾಸನೆಂಬ ನಿಯೋಗಿಯಂ ಕರೆದು, ಅವನ ಕಿವಿಯಲ್ಲಿ ರಾಜಕಾರ್ಯವಾಕ್ಯವಂ ಹೇಳಿ, 'ಈಗಲೇ ಪರ್ವತರಾಯನ ಸಮೀಪಕ್ಕೆ ಹೋಗುವಂತೆ ಯತ್ನವಂ ಮಾಡೆಂ'ದು ಹೇಳಿಕಳುಹಿಸಿ, ಆ ಬಳಿಕ ರಾಕ್ಷಸನು ಆ ರಾತ್ರೆಯಲ್ಲಿ ನೀಲವಸ್ತ್ರಾವಕುಂಠಿತನಾಗಿ ಸ್ವಸೇನೆ ಯಲ್ಲಿ ಶತ್ರುಸೇನಾವಾರ್ತೆ ಯಾರಲ್ಲಿ[೧] ಎಂತಿರುವದೋ ತಿಳಿಯಬೇಕೆಂದು ಗೂಢವಾಗಿ ಸಂಚರಿಸುತ್ತ, ಅಲ್ಲಿ ಜಾಗ್ರತೆಯಾಗಿ ಇದ್ದ ಕಾವಲುಗಾರರಂ ಸ್ವಸಂಕೇತವಾಕ್ಯವಂ ಕೇಳುತ್ತ, ಉತ್ತರವಿಲ್ಲದಿದ್ದರೆ ಅವರಂ ನಿಗ್ರಹಿಸುತ್ತ, ಸಂಚರಿಸುತ್ತಲಿರಲು,

ಆ ವೇಳೆಯಲ್ಲಿ ಕ್ಷಪಣಕನ ಶಿಷ್ಯನಾದ ವೇಗಶರ್ಮನು ಬಂದು, ಚಾಣಕ್ಯರಂ ಕಂಡು ಅಭಿವಂದಿಸಿ, ನಂದರು ನಾಳೆ ಸಾಯಾಹ್ನದಲ್ಲಿ ಜಪಶಾಲೆಗೆ ಬರುವಂತೆ ನಿಗದಿಮಾಡಿ ಇರುವ ಮಾಸೋಪವಾಸಿಯ ವಾಕ್ಯವಂ ತಿಳುಹಿಸಲು, ಆಗ ಚಾಣಕ್ಯನು ನಾಳೆ ಶುಕ್ರವಾರ

---

೧. ರ್ತೆಯಲ್ಲಿ (ಕ)

ಸಾಯಾಹ್ನದಲ್ಲಿ ನಂದರು ಜಪಶಾಲೆಗೆ ಬರುವದು ಸಿದ್ಧವೆಂದು ತಿಳಿದು, ಆಗ ಶೇಖರ ನೆಂಬ ಸೇನಾಪತಿಯಂ ಕರೆಕಳುಹಿಸಿ,

"ಅಯ್ಯ ಸೇನಾಪತಿಯೇ, ಈಗ ಉಭಯಸೇನೆಯಲ್ಲಿಯೂ ಯುದ್ಧದಿಂ ಅರ್ಧ ಹತವಾಯಿತು. ಇನ್ನೂ ನಂದರಲ್ಲಿ ಒಬ್ಬನಾದರೂ ಸಂಹೃತನಾಗಲಿಲ್ಲ. ಪುನರ್ಯುದ್ಧ ವಾದರೆ ಜಯಲಾಭವೆಂತಿರುವದೋ ? ಅದರಿಂದ ನೀನು ನಿನ್ನ ಬಳಿಯ ಸೇನೆಯಲ್ಲಿ ಮನಸ್ವಿಗಳಾದ ಶೂರರಾದ ಮೂವತ್ತು ಸಹಸ್ರ ತುರಗಾರೂಢರಿಗೆ ಕಾಶೀರಾಯ ಸೇನಾ ಜನಗಳ ವೇಷವಂ ಹಾಕಿಸಿ, ಯುದ್ಧಸನ್ನದ್ಧರಾಗಿ ಪಾಟಲೀಪುರದಿಂದ ಹೋಗುವ ಕಾಶೀ ಮಾರ್ಗದಲ್ಲಿ ಈ ರಾತ್ರಿಯೇ ಹೋಗಿ ಇಳಿದುಕೊಂಡು, ನಾಳೆ ನಮ್ಮ ಅಪ್ಪಣೆ ಆದ ಮೇರೆಗೆ ನಡಕೊಳ್ಳತಕ್ಕುದೆಂದು ನೇಮಿಸಲು, ಅದರಲ್ಲಿ ಆರುಜನ ಬುದ್ಧಿವಂತರಾದ ತುರಗಾರೂಢರಂ ನಮ್ಮ ಬಳಿಯಲ್ಲಿ ಇರುವಂತೆ ನೇಮಿಸಿ, ಒಂಟಿಶೂರನಿಗೆ ನೂರು ಮೊಹರವಂ, ಅದರ ಗೊತ್ತುಗಾರನಿಗೆ ಐನೂರಂ, ಅವರ ಅಧಿಪತಿಗೆ ಸಾವಿರವಂ ಕೊಟ್ಟು, ಚಂದ್ರಗುಪ್ತನು ತನ್ನ ಕಾರ್ಯಕ್ಕೋಸುಗ ನಿಮಗೆ ಉಚಿತವಾಗಿ ಕೊಟ್ಟನೆಂದು ಹೇಳಿ ಪ್ರೋತ್ಸಾಹಪಡಿಸಿ ಈಗಲೇ ಕಳುಹಿಸುವನಾಗು. ಇಂದುಮೊದಲು ನಿನಗೆ ವಿಶೇಷ ಅಭ್ಯುದಯವುಂಟಾಗುವದು" ಎಂದು ಹೇಳಲು,

ಆ ಮಾತಿಗೆ ಶೇಖರನು ಸಮ್ಮತನಾಗಿ, "ಏನೋ ಮಹತ್ಕಾರ್ಯವಂ ಚಾಣಕ್ಯರು ಎಣಿಸಿ ಇದ್ದಾರೆ ; ಇದರ ಫಲವಂ ಪರ್ಯವಸಾನದಲ್ಲಿಯೇ ತಿಳಿಯಬೇಕು" ಎಂದು ಯೋಚಿಸುತ್ತ ಹೋಗಿ, ಅದೇ ಮೇರೆಗೆ ತನ್ನ ಸೇನೆಯಲ್ಲಿ ಇರುವ ಮೂವತ್ತು ಸಹಸ್ರ ಶೂರರಾದ ತುರಗಾರೂಢರಂ ತೆಗೆದು, ಕಾಶೀರಾಯನ ಸೇನಾಜನದಂತೆ ಅವರಿಗೆ ವಿಭೂತಿ ರುದ್ರಾಕ್ಷಿ ಗಳನ್ನಲಂಕರಿಸಿ, ಅದೇ ರೀತಿಯಲ್ಲಿ ಪಾಗುಗಳನ್ನಳವಡಿಸಿ, ಅದೇ ಮೇರೆಗೆ ವಸ್ತ್ರಾದಿಗಳಿಂದ ಲಂಕೃತರಂ ಮಾಡಿಸಿ, ರುದ್ರಪರಿವಾರಛಂದದಿಂದೊಪ್ಪುವ ಆ ಜನಗಳಿಗೆ ಧನಗಳಂ ಕೊಟ್ಟು, ಈಗಲೇ ಪಾಟಲೀಪುರದಿಂ ಕಾಶಿಗೆ ಹೋಗುವ ಮಾರ್ಗದಲ್ಲಿ ನಾತಿದೂರಸ್ಥರಾಗಿ ಇಳಿದು ಕೊಂಡು, ನಾಳೆ ತನ್ನ ಅಪ್ಪಣೆ ಬಂದ ಮೇರೆಗೆ ನಡೆದುಕೊಳ್ಳಿರಿ" ಎಂದು ನೇಮಿಸಿ ಕಳುಹಿಸಲು, ಅವರು ಶೇಖರನ ಆಜ್ಞೆ ಮೇರೆಗೆ ಪಾಟಲೀಪುರದಿಂದ ಕಾಶಿಗೆ ಹೋಗುವ ಮಾರ್ಗದಲ್ಲಿ ಹೋಗಿ ಇರುತ್ತಿರಲು,

ಅಷ್ಟರಲ್ಲಿ ತುರಗವನ್ನೇರಿ ಪರ್ವತರಾಜ್ಯದಿಂದ ಅತಿತ್ವರ್ಯವಾಗಿ ಬಂದ ದೂತರಿಬ್ಬರೂ ಬಂದು, ತಮ್ಮ ಬಳಿಯ ಕಾಗದವಂ ಪರ್ವತರಾಯನಿಗೆ ಕೊಟ್ಟು, ಕೈಮುಗಿದು,

"ಬುದ್ಧಿ, ಪರರಾಯರಿಂದ ನಮ್ಮ ಪರ್ವತರಾಜ್ಯವೆಲ್ಲವೂ ಸೂರೆಹೋಗಿ ಯುದ್ಧ ನಡೆಯುತ್ತ, ಇನ್ನು ಮೇಲೆ ನಮ್ಮ ಪಟ್ಟಣಕ್ಕೆ ವೇಧೆ ತಟ್ಟುವಂತೆ ತೋರುತ್ತೆ" ಎಂದು ಬಿನ್ನೈಸಲು, ಅದಂ ಕೇಳಿ ಆ ಕಾಗದವಂ ಓದಿಕೊಳ್ಳುತ್ತಿರಲು, ಅದರಲ್ಲಿ "ದಶಾರ್ಣ ಶೂರಸೇನಪತಿಗಳಿಂದ ಪರ್ವತರಾಜ್ಯವು ಕೊಳ್ಳೆಯಾಗಿ, ಸೇನೆಗಳ ಸಂಗಡ ಯುದ್ಧ ವಾಗುತ್ತ, ಪುರವು ಅನ್ಯಾಕ್ರಾಂತವಾಗುವಂತೆ ತೋರುತ್ತಲಿದೆ ; ಗಡಿ ದುರ್ಗಗಳು ಪರರ ವಶವಾದವು ; ಜಾಗ್ರತೆಯಾಗಿ ನಂದರೊಡನೆ ಸಂಧಿಗಾದರೂ ಮಾತನಾಡಿಕೊಂಡು ನೀವು ಬಂದು ತಲಪದಿದ್ದರೆ ಮುಂದೆ ನನ್ನಿಂದ ಈ ಪುರವು ರಕ್ಷಿಸಲಶಕ್ಯವು" ಎಂದು ಪುರ ರಕ್ಷಕನಾದ ಅಂಗಾರವರ್ಮ ಬರೆದು ಕಳುಹಿಸಿದ ಕಾಗದದ ಅಭಿಪ್ರಾಯವಂ ತಿಳಿದು

ಯೋಚಿಸುತ್ತಿರುವ ಸಮಯದಲ್ಲಿ, ಚಾರರಿಬ್ಬರು ಬಂದು ಆ ಪರ್ವತರಾಯನಿಗೆ ಕೈ ಮುಗಿದು,

"ಬು[1]ದ್ಧೀ[1], ದಕ್ಷಿಣದಿಕ್ಕಿನಿಂದ ನಂದಸೇನೆಗೆ ಮೇಲುಬಲವಾಗಿ ಬಂದ ಸೇನೆಗಳು ಮೂರುಯೋಜನ ವಿಸ್ತಾರ ಭೂಮಿಯಲ್ಲಿ ನಿಬಿಡವಾಗಿ ಇಳಿದು ಇದೆ. ನಾಳೆ ನಾಡಿದ್ದರಲ್ಲಿ ನಂದಸೇನೆಯೊಡಗೂಡುವುದು" ಎಂದು ವಿಜ್ಞಾಪಿಸಲು, ಅದಂ ಕೇಳಿ ಪರ್ವತರಾಯನು ಪಂಕದಲ್ಲಿ ಬಿದ್ದ ಮಹಾಗಜದಂತೆ ಬುದ್ಧಿಗೆ ಏನೂ ತೋರದೆ, ನಿದ್ರಾರಹಿತನಾಗಿ ಆತಂಕ ಪಡುತ್ತಿರಲು[2], ಅಷ್ಟರಲ್ಲಿಯೇ ಸೂರ್ಯನುದಯಾಚಲಸ್ಥನಾಗಲು,

ರಾಕ್ಷಸನಿಂದ ನೇಮಿಸಿದ ವಿಷ್ಣುದಾಸನೆಂಬ ನಿಯೋಗಿಯು ಪರಿವಾರಸಮೇತನಾಗಿ ಹೊರಟು, ಪರ್ವತರಾಯನ ದಂಡಿನ ಪಾಳಯಕ್ಕೆ ಬಂದು, "ನಂದರ ಕಡೆಯಿಂದ ನಿಯೋಗಿಯು ತಮ್ಮಂ ಕಾಣಬೇಕೆಂದು ಬಂದು ಇದ್ದಾನೆ" ಎಂದು ಪರ್ವತರಾಯನಿಗೆ ಹೇಳಿ ಕಳುಹಿಸಿ, ಆತನ ಅಪ್ಪಣೆಯಿಂದ ಹೋಗಿ, ಆ ರಾಯನಂ ಉಚಿತಪ್ರಕಾರದಿಂ ಕಂಡು, ಆತನಂ ಕಂಡಿಂತೆಂದನು :

"ಸ್ವಾಮಿ ಭೂಪತಿಗಳಾದ ಪರ್ವತೇಶ್ವರರೆ, ಸಾರ್ವಭೌಮರಾದ ನಂದರು ನಿಮ್ಮಂ ಕುಶಲವಂ ಕೇಳಿದರು. ಜ್ಞಾತಿಮತ್ಸರದಿಂದ ಶೂದ್ರಸ್ತ್ರೀಪೌತ್ರನಾದ ಚಂದ್ರಗುಪ್ತನು ನಿಮ್ಮ ನ್ನೊಡಂಬಡಿಸಿ ಇಲ್ಲಿಗೆ ಕರೆತಂದುದು ಹ್ಯಾಗಾಯಿತೆಂದರೆ, ನರಿಯು 'ತಾನಿದ್ದೆಡೆಯಲ್ಲಿ ಬಹಳ ಸಲ್ಲಕೀವನವಿರುವದು ; ಸ್ವೇಚ್ಛೆಯಿಂ ಭಕ್ಷಿಸಬನ್ನಿ' ಎಂದು ಮದಗಜಗಳಂ ಕರೆ ತಂದು, ಮಹಾಪಂಕದೇಶದಲ್ಲಿ ತಗುಲಿಸಿದಂತಾಯಿತು. ಎಂದಿಗಾದರೂ ನಮಗೂ ಪಾರ್ವತೇಯರಿಗೂ ಇಲ್ಲದ ದ್ವೇಷವು ಈ ಚಂದ್ರಗುಪ್ತನ ದೆಸೆಯಿಂದ ಉಂಟಾಯಿತು. ಸ್ವಲ್ಪಮನುಷ್ಯನ [ನಿ]ಮಿತ್ತ ಮಹಾಕಾರ್ಯಾರಂಭವಂ ಮಾಡಿದುದರಿಂದ ಬಹುನಷ್ಟವಾ ದುದಂ ತಿಳಿದು, ಮುಂದೆ ಕರ್ತವ್ಯವಂ ಯೋಚಿಸಿ, 'ಆ ಚಂದ್ರಗುಪ್ತನಂ ನಮ್ಮ ವಶಕ್ಕೆ ಒಪ್ಪಿಸಿ ಕೊಟ್ಟರೆ ಅವನು ನಿಮಗೆ ಹೇಳಿದರ್ಥಕ್ಕೆ ನಾವೇ ಇದೇವೆ ; ವೃಥಾಯಾಸದಿಂ ಫಲವೇನೆಂ'ದು ನಂದರು ನಿಮಗೀ ಅರ್ಥವಂ ತಿಳುಹಿಸಿ, ನಿಮ್ಮ ವಚನವಂ ಕೇಳಿ ಬಾರೆಂದು ಆಜ್ಞಾಪಿಸಿದುದರಿಂದ ತಮ್ಮ ಸನ್ನಿಧಿಯಂ ಕಂಡೆನು."

ಹೀಗೆಂಬ ನಿಯೋಗಿಯ ವಾಕ್ಯವಂ ಕೇಳಿ, ಪರ್ವತರಾಯನು ತನ್ನ ಮನಸ್ಸಿಗೆ ತಗುಲಿ ಇರುವ ಆತಂಕವಂ ಆಚ್ಛಾದನಂಗೈಯುತ್ತ, ಅವನಂ ಕುರಿತು,

"ಅಯ್ಯ ನಿಯೋಗಿಯೆ, ಚಂದ್ರಗುಪ್ತನ ನಿಮಿತ್ತವಂ ಮಾಡಿ, ನಂದರಲ್ಲಿ ಇದ್ದ ವಸ್ತುಗಳಂ ನಾವು ಅಪಹರಿಸ ಬಂದವರಲ್ಲ ; ಶತ್ರುಗಳ ದೆಸೆಯಿಂದ ಭೀತರಾಗಿ ಬಂದು ಮರೆಹೊಕ್ಕಿರುವ ಚಂದ್ರಗುಪ್ತನಿಗೆ ಅಭಯವಂ ಕೊಟ್ಟ ಮೇರೆಗೆ ಯುದ್ಧಮುಖದಿಂದ ಈತನ ಪಿತಾಮಹಾರ್ಜಿತವಾದ ರಾಜ್ಯವಂ ಕೊಡಿಸಬೇಕೆಂದು ಬಂದು ಇದ್ದೇವೆ. ಪುನಃ ನಿಮಗೆ ಯುದ್ಧಾಪೇಕ್ಷೆಯಿಲ್ಲದಿದ್ದರೆ, ನಿಮ್ಮ ರಾಜ್ಯಕೋಶಗಳಲ್ಲಿ ಅರ್ಧವಂ ಚಂದ್ರಗುಪ್ತ

---

೧. ದ್ಧೀ ಒಕ್ಕಣೆಯೇನೆಂದರೆ, ಸ್ವಾಮಿಯವರ ಪಾದಪದ್ಮಂಗಳಿಗೆ ಪುರರಕ್ಷಕನಾದ ಅಂಗಾರ ವರ್ಮನು ವಿಜ್ಞಾಪಿಸಿದ ಅರ್ಥವೇನೆಂದರೆ, ತಾವು ಪಾಟಲೀಪುರಕ್ಕೆ ರಾಜಕಾರ್ಯಾರ್ಥವಾಗಿ ತೆರಳಿದ ಬಳಿಕ (ಕ). ೨. ಘ ಪ್ರತಿಯಲ್ಲಿ ೨೩ ಸಾಲುಗಳು ಅಧಿಕವಾಗಿವೆ.

ನಿಗೆ ಕೊಡುವದು ಸತ್ಯವಾದರೆ, ಯುದ್ಧಾರಂಭವಂ ನಿಲ್ಲಿಸುವೆವು. ಈ ಅರ್ಥವಂ ನಿಮ್ಮ ಅರಸುಗಳಿಗೆ ತಿಳುಹಿಸಿ, ಅಮಾತ್ಯ ರಾಕ್ಷಸರು ಸಮೇತರಾದ ನಂದರಿಗೆ ನಾವು ಕುಶಲವಂ ಕೇಳಿದರೆಂದು ಹೇಳತಕ್ಕುದು" ಎಂದು ಹೇಳಿ ವೀಳಯವಂ ಕೊಡಿಸಿ, ಆ ನಿಯೋಗಿಯಂ ಕಳುಹಿಸಿ, ಶಬರವರ್ಮನಂ ಕುರಿತು,

"ಅಯ್ಯಾ ಮಂತ್ರಿಯೆ, ನಂದರು ನಯಭಯಪೂರ್ವಕವಾಗಿ ನಿಯೋಗಿಯ ಮುಖದಿಂದ ನಮಗೆ ಹೇಳಿ ಕಳುಹಿಸಿದ ಅರ್ಥವಂ ತಿಳಿದಿರುವೆಯಷ್ಟೆ. ಈಗಿನ ಪ್ರಕೃತಾನುಸಾರವಾಗಿ ರಾಕ್ಷಸನು ಮಾಡಿ ಇರುವ ಯತ್ನವಂ ನೋಡಿದರೆ, ನಾವೇ [೧]ಸಂಧಿ[೧]ಗೆ ಹೇಳಿ ಕಳುಹಿಸಬೇಕಾಗಿ ಇದೆ. ಏನೆಂದರೆ, ದಶಾರ್ಣಪತಿ ಶೂರಸೇನಪತಿಗಳ ಮುಖದಿಂದ ನಮ್ಮ ಪರ್ವತರಾಜ್ಯವಂ ಸೂರೆಗೈಸಿ, ಅಲ್ಲಿಯ ಸೇನೆಯು ಇಲ್ಲಿಗೆ ಬರಲೀಸದಂತೆ ಯುದ್ಧವಂ ಮಾಡುವಂತೆ ನೇಮಿಸಿ, ನಮ್ಮ ಪಟ್ಟಣವು ಅನ್ಯಾಕ್ರಾಂತವಾಗುವಂತೆ ಮಾಡಿ, ಇದು ಹೊರತು ಈಗ ನಷ್ಟವಾದ ಸೇನೆಗೆ ಇಮ್ಮಡಿಯಾಗಿ ದಕ್ಷಿಣದೇಶದಿಂ ಕರೆಕಳುಹಿಸಿದ ಸೇನೆಯು ಸಮೀಪದಲ್ಲಿ ಬಂದು ಇಳಿದು ಇದೆ.

ಈ ಎರಡು ವರ್ತಮಾನವು ರಾಕ್ಷಸನಿಗೆ ತಿಳಿದರೆ, ನಾವು ಸಂಧಿಗೆ ಪ್ರಾರ್ಥಿಸಿದರೂ ಸಮ್ಮತಪಡುವನಲ್ಲ. ಯುದ್ಧವನ್ನೇ ಮಾಡುವಣವೆಂದರೆ, ಮೂರು ತೆರದಿಂದೊದಗಿರುವ ಕಾರ್ಯನಿರ್ವಾಹಕ್ಕೆ ನಮ್ಮ ಸೇನೆ ಒದಗಲಾರದು. ಅದರಿಂ ಪೂರ್ವದಲ್ಲಿ ಜನಮೇಜಯನು ಸರ್ಪಯಾಗವನ್ನುಪಕ್ರಮಿಸಲು, ಶರಣಾಗತನಾದ ತಕ್ಷಕನಂ ಪರಿತ್ಯಜಿಸಿ ಸುರಪತಿಯು ಕ್ಷೇಮವಂತನಾದಂತೆ ಇದೆ. ಸಮಯದಲ್ಲಿ ನಂದರ ನಿಯೋಗಿ ಹೇಳಿದ ಮಾತಿಗೆ ನಾವು ಒಪ್ಪಿಕೊಂಡು ಕ್ಷೇಮಿಗಳಾಗಬೇಕು. ಇದು ಹೊರತು ಯತ್ನ ತೋರುವದಿಲ್ಲ. ನಮ್ಮ ವೃದ್ಧ ಮಂತ್ರಿಯಾದ ಉಲೂಕನು ಮೊದಲು ನಮಗೆ ಹೇಳಿದ ಮಾತು ನಿದರ್ಶನಕ್ಕೆ ಬರುವಂತೆ ತೋರುತ್ತಲಿದೆ" ಎಂದು ಪರ್ವತರಾಯನು ಹೇಳುತ್ತಿರಲು,

ಅದಂ ಕೇಳಿ ಶಬರವರ್ಮನು ತನ್ನ ಮನಸ್ಸಿನಲ್ಲಿ, "ಈಗ ರಾಕ್ಷಸನು ಮಾಡಿ ಇರುವ ಪ್ರಯತ್ನಕ್ಕೆ ಭೀತನಾಗಿ, ಲೋಕಾಪವಾದವಂ ಗಣನೆಗೆ ತರದೆ, ತನ್ನ ಕ್ಷೇಮಕ್ಕೋಸುಗ ಈ ನಮ್ಮ ರಾಯನು ಶರಣಾಗತನಾದ ಚಂದ್ರಗುಪ್ತನಂ ಶತ್ರುಗಳ ವಶವಂ ಮಾಡಬೇಕೆಂದು ಎಣಿಸಿದ ಬಳಿಕ, ಚಂದ್ರಗುಪ್ತನಂ ವಹಿಸಿ ಇರುವ ಚಾಣಕ್ಯರಿಗೆ ಕೋಪವುಂಟಾಗಿ ಅನರ್ಥ ನಡೆದು ಪಾರ್ವತೇಯರ ಐಶ್ವರ್ಯಕ್ಕೆ ಹಾನಿ ಉಂಟಾಗುವದು. ಇದೊಂದು ದುಃಖವಂ ನೋಡದಂತೆ ಯುದ್ಧಮುಖದಿಂದ ನಾನು ಸದ್ಗತಿಯಂ ಸಂಪಾದಿಸಿಕೊಳ್ಳಬೇಕು" ಎಂದು ನಿಶ್ಚೈಸಿ, ಆ ರಾಯನಂ ಕುರಿತು,

"ಜೀಯ, ಅಪ್ಪಣೆ ಆದ ಅರ್ಥವು ಪ್ರಕೃತೋಚಿತವಾಗಿ ಇದ್ದರೂ, ಈ ಅರ್ಥವಂ ಚಾಣಕ್ಯರಿಗೆ ತಿಳುಹಿಸಿದಲ್ಲಿ, ತಮ್ಮ ಚಿತ್ತಕ್ಕೆ ಸರಿಬರುವಂತೆ ಉತ್ತರವಂ ಹೇಳಿದರೆ, ಆ ಅರ್ಥವಂ ನಡೆಸಬಹುದು. ಅಲ್ಲದಿದ್ದರೆ, ತಮ್ಮ ಮನಬಂದಂತೆ ಮಾಡಬಹುದು" ಎನಲು, ಅದಂ ಕೇಳಿ ರಾಯನು ಚಾಣಕ್ಯನಂ ಕರೆತರುವಂತೆ ದೂತರಿಗೆ ನೇಮಿಸಿ ಕಳುಹಿಸಿ, ಸ್ನಾನಾರ್ಥವಾಗಿ ತೆರಳುತ್ತಿರಲು, ಶಬರವರ್ಮನು ಆಸ್ಥಾನದಿಂದ ಹೊರಟು ತಾನಿದ್ದೆಡೆಗೆ

---

೧. ಸನ್ನಿಧಿ (ಕ)

ಬರುತ್ತಿರುವ ಸಮಯದಲ್ಲಿ ದೂತಸಮೇತರಾಗಿ ಚಾಣಿಕ್ಯರು ಆಸ್ಥಾನಕ್ಕೆ ಬರುವದಂ ದೂರದಲ್ಲೇ ಕಂಡು ಶಬರವರ್ಮನು ತನ್ನ ಮನಸ್ಸಿನಲ್ಲಿ, "ಇವರು ನನಗೆ ಸಮೀಪಸ್ಥರಾಗಿ 'ಅರಸು ನಮ್ಮಂ ಕರೆಕಳುಹಿಸಿದ ನಿಮಿತ್ತವೇನು?' ಎಂದು ಕೇಳಿದರೆ, ಆಸ್ಥಾನದಲ್ಲಿ ನಡೆದರ್ಥವಂ ಅನ್ಯರಿಗೆ ಹೇಳುವದು ಮಂತ್ರಿಧರ್ಮವಲ್ಲ, ಮಹಾತ್ಮರಲ್ಲಿ ಅನ್ಯಥಾ ಆಡಕೂಡದದರಿಂದ ಕಣ್ಣುಮರೆಯಾಗುವದುತ್ತಮವೆಂ"ದು ನಿಶ್ಚೈಸಿ, ಪಾರ್ಶ್ವದಲ್ಲಿರುವ ಗುಡಾರದ ಮರೆಗೆ ಹೋಗುತ್ತಿರಲು,

ಚಾಣಿಕ್ಯನು ಶಬರವರ್ಮನು ಎದುರಿಗೆ ಬಾರದೆ ಮರೆಯಾದುದಂ ದೂರದಲ್ಲೇ ಕಂಡು, "ಇದು ಏನು ನಿಮಿತ್ತವೋ ಶಬರವರ್ಮನು ಮಾರ್ಗದಲ್ಲಿ ಬರುತ್ತ, ನನ್ನಂ ಕಂಡು ಲಜ್ಜಿತ ನಾಗಿ, ಕಣ್ಣುಮರೆಯಾದನು ; ಇದರಿಂದ ಆಸ್ಥಾನದಲ್ಲಿ ನಮಗೆ ಅನಭಿಮತವಾದ ವಾಕ್ಯವಂ ಅರಸು ಹೇಳಿರಬೇಕು ; ಶತ್ರುಗಳಭಿಮತ ನಮಗೆ ಅನಭಿಮತವು ; ಪ್ರಕೃತದಲ್ಲಿ ಶತ್ರುಗಳಿಗೆ ತಮ್ಮ ವೈರಿ ನಾಶನವಾಗುವದೆ ಆವಶ್ಯಕವಾದುದರಿಂದ, ಶತ್ರುಪಕ್ಷನಾದ ಅಮಾತ್ಯ ರಾಕ್ಷಸನ ನಯಭಯಪೂರ್ವಕವಾದ ಕಪಟಸಂಧಿಗೆ ವಿಹ್ವಲನಾಗಿ ಪರ್ವತ ರಾಯನು ನಮಗೆ ಅನಿಷ್ಟವಾಕ್ಯವಂ ಹೇಳಿದ್ದಾನು ; ನಂದನಿಯೋಗಿಯು ಬಂದು ಇದ್ದಂತೆ ತೋರುತ್ತಲಿದೆ. ಆ ಅರ್ಥವು ಈ ಶಬರವರ್ಮನಿಗೆ ಸಮ್ಮತವಿಲ್ಲದ್ದರಿಂದ ಅಲ್ಲಿ ಈತನ ಯತ್ನ ಸಾಗದೆ ಖಿನ್ನನಾಗಿ ಬರುತ್ತ, ನಮ್ಮಂ ಕಾಣುವದಕ್ಕೆ ಲಜ್ಜಿತನಾಗಿ, ಕಣ್ಣುಮರೆ ಯಾದವನಂತೆ ತೋರುತ್ತಲಿದೆ. ಈತನಂ ಕಂಡು, ರಾಯನ ಮನೋಗತವಂ ತಿಳಿದು, ಆಸ್ಥಾನಕ್ಕೆ ಹೋಗಬೇಕು" ಎಂದು ನಿಶ್ಚೈಸಿ, ಸಂಗಡ ಬರುತ್ತಿರುವ ದೂತನಂ ನೋಡಿ, "ಎಲೈ, ಈ ಗುಡಾರದ ಮರೆಯಲ್ಲಿ ಶಬರವರ್ಮನಿರುವನು. ನಾವು ಬರಹೇಳಿದರೆಂದು ಕರೆತರುವನಾಗು" ಎಂದು ಹೇಳಿ ಕಳುಹಿಸಿ, ಹಾಗೆ ಬಂದು ಅಭಿವಂದಿಸಿ ಖಿನ್ನನಾಗಿ ನಿಂತಿರುವ ಶಬರವರ್ಮನಂ ನೋಡಿ,

"ಎಲೈ ಮಂತ್ರಿಶ್ರೇಷ್ಠನೆ, ಏನೋ ಆಸ್ಥಾನದಲ್ಲಿ ಪರ್ವತರಾಯನು ನಮಗೆ ಅನಭಿಮತ ವಾದ ಅನಿಷ್ಟವಾಕ್ಯವಂ ಹೇಳಿದುದಂ ಕೇಳಿ, ಆ ರಹಸ್ಯವಂ ಅನ್ಯತ್ರ ಹೇಳುವದು ಮಂತ್ರಿಧರ್ಮವಲ್ಲವಾದುದರಿಂದ ಲಜ್ಜಿತನಾಗಿ ಮರೆಯಾದವನಂತೆ ತೋರುತ್ತಲಿದೆ. ಶತ್ರುಗಳ ನಯಭಯಕಪಟಗಳಿಗೆ ಮರುಳಾಗಿ, ಅವರ ಅಭಿಮತವಂ ನಡಸಿಕೊಡುವದಕ್ಕೆ ಈ ರಾಯನು ಸಮ್ಮತನಾಗಿ ಇದ್ದಾನೋ ? ಅರಸುಗಳು ತಮ್ಮ ಕ್ಷೇಮಕ್ಕೋಸುಗ ಸಮಯೋಚಿತವಾಗಿ ನಡೆಯುವದುಂಟು" ಎನಲು, ಆ ಮಾತಿಗೆ,

"ಸ್ವಾಮಿ ಆಚಾರ್ಯರೆ, ತಾವು ಪರೋಕ್ಷದಲ್ಲಿ ನಿಶ್ಚೈಸಿದರ್ಥಕ್ಕೆ ಅನ್ಯರು ಪ್ರತ್ಯಕ್ಷವಾಗಿ ನಿಶ್ಚೈಸಿದ್ದು ಸಮವಾಗಲಾರದು. ಇನ್ನು ನಾನು ವಿಜ್ಞಾಪಿಸುವದೇನು ಇದೆ ? ಭಯಗ್ರಸ್ತನಾದ ವನಿಗೆ ಕಾರ್ಯಾಕಾರ್ಯವಿವೇಕ ಇಲ್ಲದುದರಿಂದ, ಅಕಾರ್ಯಕ್ಕೆ ಸಮ್ಮತನಾಗದೆ ದಕ್ಷನಾಗಿ ಸೇನಾಪತಿಯಾದ ಶೇಖರನ ಕೈಯಲ್ಲಿ ಚಂದ್ರಗುಪ್ತನಂ ಕೊಟ್ಟು ಪ್ರಕೃತವಿದ್ದಂತೆ ಆಚರಿಸ ಬಹುದು" ಎಂದು ಹೇಳಿ ಶಬರವರ್ಮನು ಮುಂದೆ ತೆರಳುತ್ತಿರಲು,

ಚಾಣಿಕ್ಯನು ತನ್ನ ಮನಸ್ಸಿನಲ್ಲಿ "ಈಗ ಶಬರವರ್ಮನು ಹೇಳಿದ ಮಾತಿನಲ್ಲಿ, ಪರ್ವತ ರಾಯನು ಚಂದ್ರಗುಪ್ತನಂ ಶತ್ರುವಶವಂ ಮಾಡುವದು ನಿಶ್ಚಯವಾಯಿತು ; ಶಬರ ವರ್ಮನ ವಾಕ್ಯಾನುಸಾರ ಚಂದ್ರಗುಪ್ತನಂ ಶೇಖರನ ವಶವಂ ಮಾಡಿದಾಗ್ಯೂ ನಮ್ಮ

ಕಾರ್ಯ ಪೂರೈಸಲಾರದು.

ಅದೇನೆಂದರೆ, ಪರ್ವತರಾಯನು ಚಂದ್ರಗುಪ್ತನಂ ಶತ್ರುಗಳ ವಶವಂ ಮಾಡಲು ದ್ಯುಕ್ತನಾದರೆ, ಶೇಖರನು ಆ ರಾಯನ ಯತ್ನವಂ ಸಾಗಲೀಸನು. ಇದರಿಂದ ಪರಸ್ಪರ ಮನಸ್ತಾಪವುಂಟಾಗಿ ಪಾಳಯದಲ್ಲಿ ತುಳಿದಾಟ ಹೆಚ್ಚಿ ಪಾರ್ವತೇಯರು ನಷ್ಟರಾದಾಗ್ಯೂ 'ಶರಣಾಗತರಂ ಶತ್ರುವಶವಂ ಮಾಡಿದರೆಂ'ಬ ಲೋಕಾಪವಾದವು ಪಾರ್ವತೇಯರ ಕುಲಕ್ಕೆ ಸಂಭವಿಸಬಾರದೆಂದು ನಿಶ್ಚೈಸಿ, ಈ ಅರ್ಥವಂ ಶಬರವರ್ಮ ಹೇಳಿದ್ದಾನು. ಈ ಅರ್ಥವು ನಮಗೆ ಆವಶ್ಯಕವಲ್ಲ. ಪರ್ವತರಾಯನ ಮನೋಗತವಂ ಆತನ ಮುಖವಚನ ದಿಂದಲೂ ತಿಳಿದು ಆ ಬಳಿಕ ನಾವು ಮಾಡುವ ಯತ್ನವಂ ಜಾಗ್ರತೆಯಿಂದ ನಡಸಬೇಕು" ಎಂದು ನಿಶ್ಚೈಸಿ, ಚಾಣಕ್ಯನು ಆಸ್ಥಾನಕ್ಕೆ ಹೋಗುತ್ತಿರಲು, ಅಷ್ಟರಲ್ಲಿಯೇ ಆ ಪರ್ವತ ರಾಯನು ಸ್ನಾನಾದಿಗಳಂ ಮಾಡಿ ಆಸ್ಥಾನಕ್ಕೆ ಬಂದು, ಎಲ್ಲರೂ ಕುಳ್ಳಿರಲು, ಆ ರಾಯನು ಚಾಣಕ್ಯರಂ ನೋಡಿ,

"ಅಯ್ಯ ವಿಪ್ರೋತ್ತಮರೇ, ಈಗ ನಂದರ ಕಡೆ ನಿಯೋಗಿಯು ಬಂದು ಹೇಳಿದ ವಾಕ್ಯವೇನೆಂದರೆ, 'ಪಾರ್ವತೇಯರಿಗೂ ಪಾಟಲೀಪುರದರಸುಗಳಿಗೂ ಎಂದಿಗೂ ಇಲ್ಲದ ವೈರವು ಚಂದ್ರಗುಪ್ತನ ದೆಸೆಯಿಂದ ಸಂಭವಿಸಿತು. ಈ ವ್ಯಥಾಯಾಸದಿಂ ಫಲವೇನು ? ನಮ್ಮ ಜ್ಞಾತಿಯಂ ನಮ್ಮ ವಶವಂ ಮಾಡಿದರೆ, ಆತನು ನಿಮಗೆ ಹೇಳಿದ ಮಾತಿಗೆ ನಾವೇ ಇದ್ದೇವೆ' ಎಂದು ಸಂಧಿಗೆ ಮಾತನಾಡಿ ಹೋದನು. ಇದಕ್ಕೆ ನಾನು ಪ್ರಕೃತೋಚಿತವಂ ಹೇಳಿ ಕಳುಹಿಸಿದೆನು. ಅದಂತಿರಲಿ.

ಮೊನ್ನೆ ರಾತ್ರಿಯುದ್ಧದಲ್ಲಿ ನಮಗೆ ಅಪಜಯವುಂಟಾಗಿ, ಅವರಿಗೆ ಜಯವಾಯಿತು. ನಿನ್ನೆ ಸಮಯುದ್ಧವಾಯಿತು. ಪುನರ್ಯುದ್ಧಾರಂಭವಾದರೆ ಜಯಾಪಜಯವೆಂತಿರು ವದೋ ? ಈಗ ಸಂಧಿಯೆಂಬ ಅರ್ಥವು ಮೊದಲು ಅವರಿಂದಲೇ ಉಂಟಾದುದರಿಂದ, ಈ ಅರ್ಥಕ್ಕೆ ನಾವು ಒಪ್ಪಿದರೆ, ಅವರ ಕಡೆಯಿಂದ ಕೆಲವು ದೇಶಕೋಶಗಳು ನಮ್ಮ ವಶ ವಾದಾವು. ಅದಕ್ಕೆ ಚಂದ್ರಗುಪ್ತನನ್ನೇ ಅಧಿಪತಿಯಂ ಮಾಡಿ, ಇವರುಗಳಿಗೆ ಇರುವ ವೈರವಂ ಶಾಂತಗೊಳಿಸಿ, ಆ ಯಶಸ್ಸಿಗೆ ನಾವು ಪಾತ್ರರಾಗಿ, ನಮ್ಮ ದೇಶಕ್ಕೆ ಹೋಗೋಣವೋ, ಮತ್ತೇನಾದರೂ ಆಲೋಚನೆ ಉಂಟೋ ?" ಎನಲು, ಆ ಮಾತಿಗೆ ಚಾಣಕ್ಯನು ಮುಗುಳುನಗೆಯಿಂ ನಗುತ್ತ, "ಶಾಬಾಸು ಕಪಟರಾಕ್ಷಸನೆ" ಎಂದು ಈರ್ಷ್ಯೆ ಯಿಂದ ಶ್ಲಾಘಿಸುತ್ತ, ಪರ್ವತರಾಯನಿಗಿಂತೆಂದನು :

"ಅಯ್ಯ ಅರಸೇ, ಲೋಕದಲ್ಲಿ ಅಬಲಿಷ್ಠರು ಬಲಿಷ್ಠರಂ ಪ್ರಾರ್ಥಿಸುವರೆಂಬುದು ಪ್ರಸಿದ್ಧವು. ಮಾರ್ಗಮಧ್ಯದ ದುರ್ಗಯುದ್ಧದಲ್ಲಿ ಅವರಿಗೆ ಪ್ರಥಮಜಯವು ; ಮೊನ್ನೆ ರಾತ್ರಿಯುದ್ಧದಲ್ಲಿ ಸಹ ಅವರಿಗೆ ಜಯವುಂಟಾದುದರಿಂದ ಅವರಂ ಬಲಿಷ್ಠರೆಂದೆನ್ನ ಬೇಕು. ಹೀಗೆ ಬಲಿಷ್ಠನಾದವನು ಮೊದಲು ತಾನೇ ಅಬಲಿಷ್ಠರಾದ ನಮ್ಮೊಡನೆ ಸಂಧಿಗೆ ಹೇಳಿ ಕಳುಹಿಸಿದ್ದರಿಂದ, ಇದು ಕಪಟವೋ ಸಹಜವೋ ನೀನೇ ತಿಳಿಯುವನಾಗು. ಹೀಗೆ ಸಂಧಿಯೆಂದು ಮಾತನಾಡುತ್ತ, ಯುದ್ಧಯತ್ನವಂ ಮಾಡಲೀಸದೆ, ನಷ್ಟವಾದ ತಮ್ಮ ಸೇನೆಗೆ ಪೂರ್ತಿಯಂ ಮಾಡುವದಕ್ಕೆ ಕಾಲಹರಣವಂ ಮಾಡಿ, ಆ ಬಳಿಕ ಯುದ್ಧವಂ ಮಾಡಿ ಜಯಿಸಬೇಕೆಂಬ ರಾಕ್ಷಸನ ಕಪಟಸಂಧಿಯಿದು. ಇದಂತಿರಲಿ. ಪೂರ್ಣಚಂದ್ರಛಂದದಿ

ಪ್ರಸನ್ನವಾಗಿ ಇದ್ದ ನಿನ್ನ ಮುಖವು ರಾಹುಗ್ರಸ್ತವಾದಂತೆ ನೇತ್ರದಲ್ಲಿ ಕೆಂಪಡರಿ ಮ್ಲಾನವಾಗಿ ಇರುವದಂ ನೋಡಿದರೆ, ಮಹಾ ಆತಂಕದಿಂ ನಿದ್ರಾರಹಿತನಾಗಿ ಇದ್ದಂತೆ ತೋರುತ್ತಲಿದೆ. ನಿಮಿತ್ತವೇನೆ"ನಲು,

"ಅಯ್ಯ ವಿಪ್ರೋತ್ತಮರೇ, ಈಗ ರಾಕ್ಷಸನು ಮಾಡಿರುವ ಯತ್ನದಿಂದ ನಮಗೆ ಪೂರ್ವಶತ್ರುಗಳಾದ 'ದಶಾರ್ಣ ಶೂರಸೇನಪತಿಗಳಿಂದ ನಮ್ಮ ರಾಜ್ಯವು ಸೂರೆ ಆಗಿ ಪುರವು ಅನ್ಯಾಕ್ರಾಂತವಾಗುವದಾಗಿ, ಅಲ್ಲಿಯ ಸೇನೆಯು ಇಲ್ಲಿಗೆ ಬಾರದಂತೆ ಯುದ್ಧ ನಡೆಯುತ್ತಲಿದೆ' ಎಂದು ನಮ್ಮ ಪುರರಕ್ಷಕನು ಬರೆಸಿ ಕಳುಹಿಸಿ ಇರುವದರಿಂದಲೂ ಇದಲ್ಲದೆ ನಂದಸೇನೆಗೆ ಮೇಲುಬಲವಾಗಿ ದಕ್ಷಿಣದೇಶದಿಂ ಅಪರಿಮಿತಸೇನೆ ಬಂದು ಇಳಿದಿರುವ ವರ್ತಮಾನ ತಿಳಿದುದರಿಂದಲೂ ಇಲ್ಲಿಯ ನಮ್ಮ ಸೇನೆಯಂ ನಮ್ಮ ದೇಶಕ್ಕೆ ಕಳುಹಿಸುವುದು ಅತ್ಯಾವಶ್ಯಕವು. ಈಗ ನಂದರಿಗೆ ಬರುವ ಸೇನೆಯಂ ಬರಲೀಸದಂತೆ ಮಾಡುವದು ಅತ್ಯಂತ ಆವಶ್ಯಕವು. ಇಲ್ಲಿ ಶತ್ರುಸೇನೆಯೊಡನೆ ಯುದ್ಧವಂ ಮಾಡುವದು ಆವಶ್ಯಕವು. ಹೀಗೆ ಮೂರು ತೆರೆದಿಂದೊದಗಿ ಇರುವ ಕಾರ್ಯಾವಶ್ಯಗಳಿಗೆ ನಮ್ಮ ಬಳಿಯ ಸೇನೆಯು ಒಂದೇ ವೇಳೆ ಒದಗಲಾರದದರಿಂದ ನಮಗೆ ಕ್ಷೇಮವೆಂತಾಗುವದೆಂಬ ಆತಂಕದಿಂದ ನಿದ್ರಾರಹಿತನಾಗಿ ಇದ್ದೆನು" ಎಂದೆನಲು,

"ಅಯ್ಯ ಅರಸೇ, ಗುಮ್ಮನೆಂದು ಬಾಲಕನಂ ಬೆದರಿಸುವಂತೆ ರಾಕ್ಷಸನು ತೋರಿಸಿ ಇರುವ ಬಿಭೀಷಿಕೆಗೆ ನೀನು ಪರ್ವತರಾಯನೆಂದೆನಿಸಿಕೊಂಡು ಹೀಗೆ ಧೈರ್ಯಹೀನನಾದರೆ, ಮಂಜು ಮುಸುಕಿದರೆ ಪರ್ವತ ಕರಗಬೇಕಾಯಿತು. ಶತ್ರುಜಯಕ್ಕೆ ನಾನು ಇಷ್ಟು ಸೇನೆಯನ್ನಪೇಕ್ಷಿಸಿದೆನೇ ? ನೀನು ಯುದ್ಧಕುತೂಹಲನಾಗಿ ಇಷ್ಟು ಸೇನೆಯಂ ನಷ್ಟಗೊಳಿಸಿದೆಯಲ್ಲದೆ, ಇದರಿಂ ನನಗೆ ಪ್ರಯೋಜನ ಏನೂ ಕಾಣಿಸಲಿಲ್ಲ. ಸೇನಾಜಂಗುಳಿಯು ಮೇಘೋದಯದಂತೆ ಜಯಾಪೇಕ್ಷೆಯಿಂದ ಗುಂಪು ಕೂಡುವದು ; ಸ್ವಲ್ಪ ಹಾನಿ ಉಂಟಾದರೆ ಜಂಝಾಮಾರುತನುದಯಿಸಲು ಮೇಘವು ದಿಕ್ತಟಗಳನ್ನೈದುವಂತೆ ಪಲಾಯನಂಗೈವದು. ಪ್ರಕೃತದಲ್ಲಿ ನಿನ್ನ ಪುರದೇಶಗಳಿಗೆ ಆತಂಕ ಬಿಡುವಂತೆ ನಿನ್ನ ಪುರರಕ್ಷಕನಿಗೆ ಬರಸಿ ಕಳುಹಿಸುವದೇನೆಂದರೆ :

"ಅದಾಗಿ, 'ನಮ್ಮ ರಾಜ್ಯ ಪಟ್ಟಣಗಳಿಗೆ ಶತ್ರುಗಳ ದೆಸೆಯಿಂದ ಆತಂಕ ಸಂಭವಿಸಿ ಇದೆ' ಎಂದು ಬರಸಿ ಕಳುಹಿಸಿದರ್ಥವು ತಿಳಿಯಲಾಯಿತು. ಇಲ್ಲಿ ನಿನ್ನೆ ಯುದ್ಧಮುಖದಿಂದ ನಂದರು ಸಂಹೃತರಾಗಿ, ಪಾಟಲೀಪುರವು ನಮ್ಮ ಕೈವಶವಾಗಿ, ಅಮಾತ್ಯ ರಾಕ್ಷಸನು ಪಲಾಯನಂಗೈದನು. ಬಹುವಾಗಿ ಹುಡುಕಿದಾಗ್ಯೂ ಆತ ಇನ್ನೂ ದೊರಕಲಿಲ್ಲ. ನಮ್ಮ ಪ್ರಾಂತ್ಯದಲ್ಲಿ ಎಲ್ಲಿಯಾದರೂ ಬಂದು ಪ್ರಚ್ಛನ್ನನಾಗಿ ಇರುವ ವರ್ತಮಾನವಂ ತಿಳಿದು ಹೇಳಿದವರಿಗೆ ಲಕ್ಷೋಪಲಕ್ಷ ಧನಗಳಂ ಗ್ರಾಮಗಳಂ ಕೊಟ್ಟು, ಆ ರಾಕ್ಷಸನಂ ಸೆರೆಯಲ್ಲಿ ಇರಿಸುವದು. ನಮ್ಮ ದೇಶ ಪುರಗಳಲ್ಲಿ ಜಯಭೇರಿಯಂ ಹಾಕಿಸಿ, ಉತ್ಸವಗಳಂ ಮಾಡಿಸಿ, ಸಕ್ಕರೆಗಳಂ ಬೀರಿಸಿ, ದೇವತಾರಾಧನೆಗಳಂ ಮಾಡಿಸುವದು' ಎಂದು ಬರೆಸಿ, ಮೊಹರಗಳಂ ಮಾಡಿ ಕಳುಹಿಸಿ, ಅಯ್ಯ ರಾಯನೆ, ಈಗ ಬರೆದಿರುವ ರೀತಿಗೆ ನಿನ್ನ ಪುರದೇಶಗಳಲ್ಲಿ ಉತ್ಸವಾರಂಭವಾದರೆ, ಆನಕಧ್ವನಿಗೆ ಭೀತಿಪಟ್ಟು ಓಡುತ್ತಿರುವ ಕ್ಷುದ್ರಮೃಗಗಳಂತೆ ಅಲ್ಲಿಯ ಶತ್ರುಗಳು ಪಲಾಯನಂಗೈವುದೇ ಸಿದ್ಧವು" ಎಂದೆನಲು,

ಆ ಮಾತಿಗೆ, "ವಿಪ್ರೋತ್ತಮರೇ, ಈಗ ಬರೆಸಿ ಕಳುಹಿಸಿದ ರೀತಿಗೆ ಅಲ್ಲಿ ಉತ್ಸವ ನಡೆದು, ಅಲ್ಲಿ ಶತ್ರುಗಳು ಪಲಾಯಿತರು ಆದರೂ ಆಗಬಹುದು ; ಈಗ ಸನ್ನಿಹಿತವಾಗಿ ಇರುವ ದಕ್ಷಿಣದೇಶದ ನಂದಸೇನಾತಂಕಕ್ಕೆ ಪರಿಹಾರವೇನು ?" ಎನಲು,

"ಅಯ್ಯ ಅರಸೇ, ಪಂಚಾಕ್ಷರಿಯ ಜಪದಿಂ ಪಲಾಯನಂಗೈವ ಪಾಪನಿಕರಗಳಂತೆ ಇಂದು ನಾಳೆಯಲ್ಲಿಯೇ ಆ ದಕ್ಷಿಣದೇಶದ ಸೇನೆ ಸಹ ಪಲಾಯನಂಗೈದ ವರ್ತಮಾನವು ತಿಳಿಯುತ್ತಲಿದೆ' ಎನಲು, ಆ ಮಾತಿಗೆ,

"ಅಯ್ಯ ವಿಪ್ರೋತ್ತಮರೇ, ನೀವು ಹೇಳಿದ ಮಾತು ಆಶ್ಚರ್ಯವಾಗಿ ತೋರುತ್ತಲಿದೆ. ಆ ದಕ್ಷಿಣಸೇನೆಯು ನೀವು ಹೇಳಿದಂತೆ ಪಲಾಯನವಂ ಗೈಯದೆ, ನಂದರ ಮೂಲಬಲಕ್ಕೆ ಬಂದು ಸೇರಿದರೆ, ನಮ್ಮ ಕ್ಷೇಮಕ್ಕೋಸುಗ ಆಗಲಾದರೂ ಸಂಧಿಗೆ ಸಮ್ಮತಿಸಿ, ನಂದರ ಅಭಿಮತವಂ ನಡಸಿ ಕೊಡಬೇಕಾಗುತ್ತದೆಯಷ್ಟೆ" ಎಂದು ಅರಸು ಕೇಳಲು,

"ಅಯ್ಯ ರಾಯನೇ, ವ್ಯಕ್ತವಾಗಿ ಹೇಳುವದಕ್ಕೆ ಲಜ್ಜಿತನಾಗಿ ಗೂಢಾರ್ಥದಿಂ ಹೇಳುವೆ. ಚಂದ್ರಗುಪ್ತನಂ ತಮ್ಮ ವಶಕ್ಕೆ ಒಪ್ಪಿಸಿ ಕೊಡುವದಕ್ಕಿಂತಲೂ ನಂದರಿಗೆ ಬೇರೆ ಅಭಿಮತವೆಂದರೇನು ?" ಎಂದು ಚಾಣಕ್ಯ ಹೇಳಲು, "ಆ ಅರ್ಥವು ನಿಮಗೆ ತಿಳಿದಿದ್ದ ಬಳಿಕ ನಾನು ವ್ಯಕ್ತವಾಗಿ ಹೇಳಿದ್ದರಿಂ ಫಲವೇನು?" ಎಂದು ಪರ್ವತರಾಯ ಹೇಳಲು, ಆ ಮಾತಿಗೆ ಚಾಣಕ್ಯನು ಕೈಹೊಯಿದು ನಗುತ್ತ, "ಏನ್ನೆ ಅರಸೇ, ಮಹಾ ಅಕಾರ್ಯವಂ ಯೋಚಿಸೀರುವೆ. ಈ ಅರ್ಥವು ಈ ಕಲ್ಪದಲ್ಲಿ ನಡೆಯಲಾರದು. ನಮ್ಮ ಪೌರುಷವು ನಷ್ಟವಾಗಿ, ನಮ್ಮ ತಪಃಶಸ್ತ್ರದ ಮೊನೆಯು ಮಸಣಿಸಿದರೆ ಆಗಲ್ಲವೆ ಇಂಥಾ ಅಕಾರ್ಯಪ್ರಯತ್ನ ಯೋಚನೆಯು" [೧]ಎಂದು ಹೇಳುತ್ತಿರುವ ಸಮಯದಲ್ಲಿ, ಚಾರರಿಬ್ಬರು ಬಂದು ಅರಸಿಗೆ ಕೈಮುಗಿದು,

"ಬುದ್ಧೀ, ಕಾಮರೂಪಾಧಿಪತಿ ಲಂಪಾಕಪತಿಯ ಸೇನೆಗಳಿಗೆ ಮಹದ್ಯುದ್ಧ ನಡೆದು, ಶ್ಯೇನಪಕ್ಷಿರಭಸಕ್ಕೆ ಅದೃಶ್ಯವಾಗುವ ಶುಕಶಾಬಕಗಳಂತೆ ಕಾಮರೂಪಾಧಿಪತಿಯ ಸೇನಾರಭಸಕ್ಕೆ ತರಹರಿಸಲಾರದೆ ಲಂಪಾಕಪತಿಯ ಸೇನಾಪತಿಗಳು ಪಲಾಯನಂಗೈಯಲು, ಆ ಲಂಪಾಕಪತಿಯು ಖಿನ್ನನಾಗಿ ಕಾಮರೂಪಾಧಿಪತಿಯೊಡನೆ ಸಂಧಿಯಂ ಪ್ರಾರ್ಥಿಸುತ್ತಲಿದ್ದಾನೆ. ದಿವ್ಯಚಿತ್ತಕ್ಕೆ ವೇದ್ಯವಾಗಿ ಇರಬೇಕೆಂ"ದು ಚಾರರು ವಿಜ್ಞಾಪಿಸಲು,

ಅದಂ ಕೇಳಿ ಪರ್ವತರಾಜನು ಸಂತೋಷಬಡುತ್ತ, ಅಲ್ಲಿಯ ಅರಿಷ್ಟನಿವೃತ್ತಿಯು ಚಾಣಕ್ಯರ ದೆಸೆಯಿಂದಲುಂಟಾಯಿತೆಂದು ಭಾವಿಸುತ್ತ, ಆತನ ಮುಖವಂ ನೋಡಲು,

"ಅಯ್ಯ ಜಯಾಭಿಮುಖನಾದ ರಾಯನೇ, ಯಾವ ಮಹಾಸಂತೋಷವಾರ್ತೆಯು ? ಈ ದಿವಸ ಉಂಟಾಗುವ ಸಂತೋಷಲಾಭಕ್ಕೆ, ಶೇಖರನೆಂಬ ಸೇನಾಧಿಪತಿಗೆ ನಿನ್ನ ಸರ್ವ ಸೇನಾಧಿಪತ್ಯವಂ ಕೊಟ್ಟು, ನಾನಿದ್ದೆಡೆಗೆ ಕಳುಹಿಸುವನಾಗು" ಎಂದು ರಾಯನಿಗೆ ಹೇಳಿ, ಚಾಣಕ್ಯನು ಆಸ್ಥಾನದಿಂದ ಹೊರಟು ಬರುತ್ತ, ತನ್ನ ಮನಸ್ಸಿನಲ್ಲಿ "ರಾಕ್ಷಸನ ಕಪಟಕ್ಕೆ ವಿಹ್ವಲನಾಗಿ ಪರ್ವತರಾಯನು ಚಂದ್ರಗುಪ್ತನಂ ಶತ್ರುಗಳಾದ ನಂದರ ವಶವಂ ಮಾಡಬೇಕೆಂಬ ಅರ್ಥವು ಅವನ ಮುಖವಚನದಿಂದಲೂ ತಿಳಿಯಲಾಯಿತು. ಅರಸುಗಳ ಚಿತ್ತವು

೧. ಘ. ಪ್ರತಿಯಲ್ಲಿ ಎಂಟು ಸಾಲುಗಳು ಹೆಚ್ಚಾಗಿವೆ.

ಯಾವ ವೇಳೆಯಲ್ಲಿ ಹ್ಯಾಗಿರುವದೋ ?'' ಎಂದು ಆಲೋಚಿಸುತ್ತ, ತಾನಿದ್ದೆಡೆಗೆ ಹೋಗುತ್ತಿದ್ದನು ಎಂಬಲ್ಲಿಗೆ,

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಮಹೀಶೂರನರಪತಿ ಶ್ರೀ ಕೃಷ್ಣರಾಜೇಂದ್ರರಾಶ್ರಿತ ಹೊಯಿಸಣೆಗ ಕುಲಸಂಜಾತ ನಾರಾಯಣಶರ್ಮ ವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ [೧]ನಂದ[೧]ಯುದ್ಧಕಥನವೆಂಬ ಸಪ್ತಮಾಶಯಃ ಸಮಾಪ್ತಃ.

ಅಷ್ಟಮಾಶಯ : ನಂದಪಂಚತ್ವಕಥನವು

ಈ ರೀತಿಯಲ್ಲಿ ಚಾಣಕ್ಯನು ಶೇಖರನಿಗೆ ಸರ್ವಸೇನಾಧಿಪತ್ಯವಂ ಕೊಡುವಂತೆ ಪರ್ವತರಾಯನಿಗೆ ಹೇಳಿ ಬಂದು, ಸ್ನಾನಾದಿಗಳಂ ನೆರವೇರಿಸಿ, ಶೇಖರನ ಆಗಮನವಂ ನಿರೀಕ್ಷಿಸುತ್ತಿರಲು, ಆಗ ಪರ್ವತರಾಯನು[೨] ತನ್ನ ಬಳಿಯ ಅರಸುಗಳಂ ಕರೆಕಳುಹಿಸಿ, ಶೇಖರನಂ ಸಹ ಕರೆಕಳುಹಿಸಿ,

"ಅಯ್ಯ ಅರಸುಗಳಿರ, ರಾಜಕಾರ್ಯಗೌರವಕ್ಕೋಸುಗ ಸರ್ವಸೇನಾಧಿಪತ್ಯವಂ ಶೇಖರನಿಗೆ ನೇಮಿಸುತ್ತಲಿದ್ದೇವೆ. ನೀವೆಲ್ಲರೂ ಆತ ಹೇಳಿದಂತೆ ನಡೆದುಕೊಳ್ಳುವರಾಗಿ'' ಎಂದು ನೇಮಿಸಿ, ವಸ್ತ್ರಭೂಷಣವೀಳಯಗಳಂ ಶೇಖರನಿಗೆ ಕೊಡಿಸಿ, "ಅಯ್ಯ ಶೇಖರನೆ, ಚಾಣಕ್ಯರಿದ್ದೆಡೆಗೆ ಹೋಗಿ, ಅವರು ಹೇಳಿದಂತೆ ನಡೆದುಕೊಳ್ಳುವನಾಗು'' ಎಂದು ನೇಮಿಸಿ ಕಳುಹಿಸಲು, ಸಕಲಸೇನಾಧಿಪತ್ಯವಂ ಪಡೆದ ಶೇಖರನು ಜಯವೆಂದು ಅರಸುಗಳು ಮಾಡುವ ಸಲಾಮುಗಳಂ ಕೈಕೊಂಡು, ಚಾಣಕ್ಯರಿದ್ದೆಡೆಗೆ ಹೋಗಿ, ಅವರಿಗೆ ಕೈಮುಗಿದು ಕುಳ್ಳಿರಲು,

ಚಾಣಕ್ಯನು ಶೇಖರನಂ ಕುರಿತು, "ಅಯ್ಯ ಸೇನಾಪತಿಯೆ, ರೂಪದಲ್ಲಿ ಸ್ಫುರತ್ತಾದ ಮಲಯಕೇತುವಿನಂತೆ ಇರುವ ಬುದ್ಧಿವಂತನಾದ ಒಬ್ಬ ಪುರುಷನಿಗೆ ರಾಜಾರ್ಹವಾದ ವಸ್ತ್ರಭೂಷಣಗಳಿಂದಲಂಕರಿಸಿ, ಗಜಾರೂಢನಂ ಮಾಡಿ, ಪರಿವಾರಸಮೇತವಾಗಿ ರಾತ್ರೆ ಕಾಶೀಮಾರ್ಗದಲ್ಲಿ ಇಳಿದಿರುವ ನಿನ್ನ ಸೇನೆಗೆ ಕಳುಹಿಸಿ ಬಂದು ಹೇಳುವನಾಗು'' ಎಂದು ನೇಮಿಸಲು, ಅದೇ ರೀತಿಗೆ ಶೇಖರನು ಒಬ್ಬ ಪುರುಷನಿಗೆ ಅಲಂಕರಿಸಿ ಗಜದ ಮೇಲೆ ಕುಳ್ಳಿರಿಸಿ, ಪರಿವಾರಸಮೇತವಾಗಿ ಕಾಶೀಮಾರ್ಗಕ್ಕೆ ಕಳುಹಿಸಿ ಬಂದು, "ತಮ್ಮ ಅಪ್ಪಣೆ ಮೇರೆಗೆ ಸಿದ್ಧವಂ ಮಾಡಿ ಕಳುಹಿಸಿ ಬಂದೆನು'' ಎಂದು ಚಾಣಕ್ಯರಿಗೆ ತಿಳುಹಿಸಲು,

ತನ್ನ ಬಳಿಯಲ್ಲಿ ಇದ್ದ ಆರುಮಂದಿ ತುರಗಾರೂಢರಲ್ಲಿ ಇಬ್ಬರಂ ಕರೆದು, "ಎಲೈ, ಈ ದಿವಸ ನಂದರು ಜಪಶಾಲೆಗೆ ಬಂದ ಬಳಿಕ, ನೀವು ಅವರ ಬಳಿಗೆ ಹೋಗಿ, ಈ ವಾಕ್ಯವಂ ಹೇಳಿ'' ಎಂದು ಅವರ ಕಿವಿಯಲ್ಲಿ ಹೇಳುವರ್ಥವಂ ಹೇಳಿ, "ಹೋಗಿ, ಕಾದು ಇರಿ'' ಎಂದು ಹೇಳಿ ಕಳುಹಿಸಿ, ಮತ್ತಿಬ್ಬರಂ ಕರೆದು, "ನೀವು ಕಾಶೀಮಾರ್ಗಮಧ್ಯದಲ್ಲಿ ನಿಂತು, ಕಾಶೀಮಾರ್ಗದಿಂ ಜಪಶಾಲೆಗೆ ಸೇನೆ ಬರುವದಂ ಕಂಡು, ಜಪಶಾಲೆಯಲ್ಲಿ ಇರುವ ನಂದರಿಗೆ ಈ ವಾಕ್ಯವಂ ಹೇಳಿ'' ಎಂದು ರಹಸ್ಯದಲ್ಲಿ ಹೇಳಿ ಕಳುಹಿಸಿ, ಮತ್ತಿಬ್ಬರಂ

---

೧. ನಂದರ (ಕ) ೨. ಘ ಪ್ರತಿಯಲ್ಲಿ ಸು. ೩೫ ಸಾಲುಗಳು ಹೆಚ್ಚಾಗಿವೆ.

ಕರೆದು, "ನೀವು ಕಾಶೀಮಾರ್ಗದ ಸೇನೆಯಲ್ಲಿ ನಿಂತು ನಂದರು ಜಪಶಾಲೆಗೆ ಬಂದರೆಂಬ ಶೇಖರನ ಸಂಕೇತ ತಿಳಿದ ಬಳಿಕ ಹೀಗೆ ಮಾಡಿ" ಎಂದು ಅದರ ರಹಸ್ಯವಂ ಹೇಳಿ, ಅವರಂ ಕಳುಹಿಸಿ,

ಆ ಬಳಿಕ ಶೇಖರನಂ ಕುರಿತು, "ಅಯ್ಯ, ಸೇನಾಪತಿಯೇ, ನಂದರು ಜಪಶಾಲೆಗೆ ಹೊರಟ ವರ್ತಮಾನವು ಕಾಶೀಮಾರ್ಗದ ನಮ್ಮ ಸೇನೆಗೆ ತಿಳಿಯುವಂತೆ ಪತಾಕಹಸ್ತರಾದ ತುರಗಾರೂಢರಂ ನಿಲ್ಲಿಸುವನಾಗು. ನಂದರೊಡನೆ ಯುದ್ಧಾರಂಭದಲ್ಲಿಯೇ, ಜಯಾನಂತರ ಆಗುವ ಭೇರೀಧ್ವನಿಯಂ ಮಾಡಿಸುವನಾಗು. ಜಪಶಾಲೆಯಲ್ಲಿ ಅಗ್ನಿಪ್ರಕಾಶವು ಹೆಚ್ಚಾದುದಂ ಕಂಡು, ಉಳಿದ ನಮ್ಮ ಸೇನೆಯೆಲ್ಲವೂ ನಂದಸೇನೆ ಮೇಲೆ ಕಾಣಿಸಿಕೊಂಡು, ಅಟ್ಟಿಕೊಂಡು ಹೋಗುವಂತೆ ನೇಮಿಸುವನಾಗು. ಸೇನಾಪತಿಗಳು ಸನ್ನದ್ಧರಾಗಿ ಕಾದಿರಿಲಿ. ಅಲ್ಲಿ ಅಲ್ಲಿ ಗೂಢಚಾರರಂ ನೇಮಿಸಿ, ಆಗಿನಾಗಿನ ವರ್ತಮಾನವಂ ತಿಳುಹಿಸುವಂತೆ ನೇಮಿಸುವನಾಗು" ಎಂದು ಶೇಖರನಿಗೆ ಹೇಳಿ ಕಳುಹಿಸಿ, ತಾನು "ಈ ವೇಳೆಯಲ್ಲಿ ನಂದರಿಗೂ ರಾಕ್ಷಸನಿಗೂ ವಿಯೋಗವುಂಟಾಗಲಿ" ಎಂದು ಚಾಣಕ್ಯನು ತನ್ನ ಇಷ್ಟದೇವತಾ ಪ್ರಾರ್ಥನೆಯಂ ಮಾಡುತ್ತ, ಸಮಯವಂ ನಿರೀಕ್ಷಿಸುತ್ತಿದ್ದನು.

ಶೇಖರನು ಚಾಣಕ್ಯರು ನಿರೂಪಿಸಿದ ಮೇರೆಗೆ ಅಲ್ಲಿ ಅಲ್ಲಿ ಜನರಂ ನೇಮಿಸಿ, ಅವರು ಹೇಳಿದ ಸಂಕೇತದ ಮೇರೆಗೆ ಹೇಳಿ ಕಳುಹಿಸಲು,

ಅತ್ತಲಾ ನಂದರು ತಮ್ಮ ಗುಡಾರದಲ್ಲಿ ಸ್ನಾನಾದಿಗಳನ್ನಾಚರಿಸಿ, ಪರ್ವತರಾಯನ ಬಳಿಗೆ ಕಳುಹಿಸಿ ಇದ್ದ ನಿಯೋಗಿಯ ವಾಕ್ಯವಂ ಕೇಳಿ, ರಾಕ್ಷಸನಂ ಸ್ನಾನಕ್ಕೆ ಕಳುಹಿಸಿ, ರಾಜಪುತ್ರರೊಡಗೂಡಿ ದಿವ್ಯಮೃಷ್ಟಾನ್ನವಂ ಭುಂಜಿಸಿ, ಗಂಧಮಾಲ್ಯಾದಿಗಳಿಂದಲಂಕೃತರಾಗಿ, ಯುದ್ಧಪ್ರಸಕ್ತ ಪ್ರಕೃತದಲ್ಲಿ ಇಲ್ಲವೆಂದು ನಿರಾತಂಕರಾಗಿ ಸುಖಶಯನದಲ್ಲಿ ಪವಡಿಸಿ ನಿದ್ರೆಗೆಯ್ಯುತ್ತಿರಲು,

ರಾಕ್ಷಸನು ತಾನು ಕಳುಹಿಸಿ ಇದ್ದ ನಿಯೋಗಿಯ ಸಂಗಡ ಪರ್ವತರಾಯನು ಹೇಳಿದ ವಾಕ್ಯವಂ ಕೇಳಿ, ಕೆಲವು ಕಾಲಹರಣಕ್ಕೆ ಅವಕಾಶವುಂಟಾಯಿತೆಂದು ಸಂತೋಷಪಡುತ್ತ, ಪರ್ಯಂಕದಲ್ಲಿ ಕುಳಿತು, ತನ್ನ ಬಳಿಯ ದೂತನಂ ನೋಡಿ, "ಎಲೈ, ಅರಸುಗಳ ಸಮಯವಂ ತಿಳಿದು ಹೇಳುವನಾಗು" ಎನಲು, ಹಾಗೇ ಆ ದೂತನು ಹೋಗಿ ತಿಳಿದು ಬಂದು, "ಬುದ್ಧೀ, ಅರಸುಗಳು ಸುಖಶಯನದಲ್ಲಿ ನಿದ್ರಾಸುಖವನ್ನನುಭವಿಸುತ್ತಲಿದ್ದಾರೆ" ಎನಲು, ಅದಂ ಕೇಳಿ ರಾಕ್ಷಸನಿಗೆ, ಪ್ರಕೃತದಲ್ಲಿ ಶತ್ರುಗಳ ಆತಂಕವಿಲ್ಲದ್ದರಿಂದಲೂ ನಂದರಿಗೆ ದೈವಬಲ ತಪ್ಪಿದ್ದರಿಂದಲೂ ಮುನ್ನಿನ ಎರಡು ರಾತ್ರಿಗಳಲ್ಲಿಯೂ ರಾಜಕಾರ್ಯದಿಂದ ನಿದ್ರೆಯಿಲ್ಲದ್ದರಿಂದಲೂ ಮಹಾನಿದ್ರಾಭಾರವು ನೇತ್ರದಲ್ಲಿ ಉದ್ಭವಿಸಿ ರಾಕ್ಷಸನು ನಿದ್ರೆಗೈಯುತ್ತಿರಲು, ನಂದರು ನಿದ್ರೆಯಿಂದೆಚ್ಚರಗೊಂಡು ರಾಜಕಾರ್ಯಗೌರವವಿಲ್ಲದೆ ಪಗಡೆಯನ್ನಾಡುವದಕ್ಕೆ ಯತ್ನವಂ ಮಾಡಲು,

ಆಗ ಜಪಶಾಲೆಯಲ್ಲಿ ಇರುವ ಮಾಸೋಪವಾಸಿಯ ಶಿಷ್ಯರಿಬ್ಬರು ಕೂರ್ಚಸಮೇತವಾದ ಉದಕಪಾತ್ರೆಗಳಂ ಪಿಡಿದು, ಕುಶಾಸ್ತರಣ ಪವಿತ್ರಗಳಿಂದಲಂಕೃತರಾಗಿ, ದೂರ್ವಾಸ್ತಂಬದಲ್ಲಿ ಉದ್ಭವಿಸಿ ಚಲಿಸುತ್ತಿರುವ ವಲ್ಮೀಕಗಳೋ ಎಂಬಂತೆ ಭೂಮಿಯಲ್ಲಿ ಕುಶಶಕಲಗಳನ್ನೆರಚಿ, ಕೂರ್ಚೆಯಿಂ ಪ್ರೋಕ್ಷಿಸಿ, ಪಾದಗಳನ್ನಿಡುತ್ತ, ವೈಖಾನಸವೇಷದಿಂ ವಾತಾ

ಶನರಂ ವಂಚನೆಗೊಳಿಸುವ ವಾತಾಪಿ ಇಲ್ವಲರುಗಳೋ ಎಂಬಂತೆ ಕಪಟವಂ ಧರಿಸಿ, ನಂದರಂ ಕರೆಯ ಬರುವ ಕಾಲಮೃತ್ಯುಕಿಂಕರರೋ ಎಂಬಂತೆ ಬಂದು, ನಂದರ ಗುಡಾರದ ಬಳಿಯಲ್ಲಿ ನಿಂತು, ಆ ದ್ವಾರಪಾಲಕರಂ ಕುರಿತು, "ಓಯಿ ದೂತರುಗಳಿರ, 'ಜಪಶಾಲೆಯಿಂದ ಬ್ರಾಹ್ಮಣರು ಬಂದು ಅರಸುಗಳ ಸನ್ನಿಧಿಯಂ ಕಾಣಬೇಕೆಂದು ನಿಂತು ಇದ್ದಾರೆ' ಎಂದು ವಿಜ್ಞಾಪನಂ ಗೈಯಿರಿ" ಎಂದು ಹೇಳಲು,

ಅವರು ಹೋಗಿ ಈ ಅರ್ಥವಂ ನಂದರಿಗೆ ವಿಜ್ಞಾಪಿಸಿ, ಅವರ ಅಪ್ಪಣೆಯಿಂದ [1]ಒಳಯಿಂಕೆ[1] ಬಿಡಲು, ಅವರು "ಭೂಪತಿಗಳಿಗೆ ಮಂಗಳವಾಗಲಿ" ಎಂದು ಹೇಳಿ, ನಂದರಂ ಕುರಿತು, "ಸ್ವಾಮಿ ಭೂಪತಿಗಳಿರಾ, ಜಪಶಾಲೆಯಲ್ಲಿ ಅನುಷ್ಠಾನವಂ ಮಾಡುವ ಮಾಸೋಪವಾಸಿ ಮುನಿಗಳ ಶಿಷ್ಯರು ನಾವು : ಇಂದು ಶುಕ್ರವಾರವಾದುದರಿಂದ ಹೋಮ ಸಮಾಪ್ತವಾಗುತ್ತಲಿದೆ. ಪೂರ್ಣಾಹುತಿಯ ಸಮಯದಲ್ಲಿ ಉಂಟಾಗುವ ದೇವತಾವಿಶೇಷ ದರ್ಶನಕ್ಕೆ ತಾವೆಲ್ಲರೂ ಬರಬೇಕೆಂದು ಹೇಳಿದ್ದ ಮಾತಿಗೆ ಇದೇ ಸಮಯವು. ದೇವತಾ ದರುಶನನಿಮಿತ್ತ ಶುಭಸೂಚಕಗಳು ಉಂಟಾಗುತ್ತಲಿವೆ. ನಮ್ಮ ಗುರುಗಳು ಸ್ರುಕ್ ಸ್ರುವ ಗಳಂ ಪಿಡಿದು ಧ್ಯಾನಾಸಕ್ತರಾಗಿ ಇದ್ದಾರೆ. ಜಾಗ್ರತೆಯಿಂದ ಬಿಜಮಾಡಬಹುದು" ಎನಲು,

ಆ ವಾಕ್ಯವಂ ಕೇಳಿ, ನಂದರು ದೈವಬಲಹೀನರಾದುದರಿಂದ, ತಮ್ಮೊಳಗೆ ತಾವು 'ಹೋಮದರ್ಶನಕ್ಕೆ ಹೋಗಬೇಕೆಂ'ದು ಹೇಳಿಕೊಳ್ಳುತ್ತ, ದೂತನ ಮುಖವಂ ನೋಡಿ, "ಎಲೈ, ಅಮಾತ್ಯ ರಾಕ್ಷಸರು ಏನು ಮಾಡುತ್ತಾರೆ, ತಿಳಿದು ಬಾರೆಂ"ದು ಹೇಳಲು, ಆ ದೂತ[ನು] ಹೋಗಿ ತಿಳಿದು ಬಂದು, "ಜೀಯ, ಅಮಾತ್ಯರಿಗೆ ಬಹು ನಿದ್ರಾಭಾರವೆಂ"ದು ಹೇಳಲು, ಆ ಮಾತಿಗೆ, "ಎರಡು ರಾತ್ರೆಗಳಲ್ಲಿ ನಿದ್ರೆಯಿಲ್ಲದೆ ಆಯಾಸದಿಂ ನಿದ್ರೆಗೈವ ನಮ್ಮ ಅಮಾತ್ಯ ರಾಕ್ಷಸರಂ ಯಾವ ಕಾರ್ಯಗೌರವಕ್ಕೆ ಎಚ್ಚರಗೊಳಿಸಬೇಕು ? ನಾವೇ ಜಪ ಶಾಲೆಗೆ ಹೋಗುವಣ"ವೆಂದು ಹೇಳಿಕೊಳ್ಳುತ್ತ ನಂದರೆಲ್ಲರೂ ಭೂಷಣಭೂಷಿತರಾಗಿ ತಮ್ಮ ತುರಗಗಳನ್ನೇರುತ್ತಿರಲು,

ಅಷ್ಟರಲ್ಲಿಯೇ ಮೈಗಾವಲಿನ ಶೂರಪರಿವಾರ ಬಂದು ನಿಲ್ಲಲು, ಮಾಸೋಪವಾಸಿಯ ಶಿಷ್ಯರು ಶೂದ್ರಸ್ಪರುಶಕ್ಕೆ ಭೀತರಾದವರಾದಂತೆ ದೂರದಲ್ಲಿ ನಿಂತು ಕೂರ್ಚೋದಕ ಗಳಿಂದ ಒಬ್ಬರಿಗೊಬ್ಬರು ಪ್ರೋಕ್ಷಣೆಗೈಯುತ್ತ, ಸ್ಪರ್ಶಿಸಿದರೆ ಹಿಮ್ಮೆಟ್ಟುವ ಕುಳೀರಕ ನಂತೆ ಹಿಂದಕ್ಕೆ ಸಾರುತ್ತಿರುವ ಮಾಸೋಪವಾಸಿಯ ಶಿಷ್ಯರಂ ನೋಡಿ, ಮೊದಲು ಇವರು ಹೇಳಿಕೊಂಡ ವಾಕ್ಯವಂ ನೆನೆದು, ಸಂಗಡ ಬೆಂಬಲವಾಗಿ ಬರುವ ಭಾಗ್ಯಲಕ್ಷ್ಮಿಯಂ ನಿರಾಕರಿಸುವ ಭಾಗ್ಯಹೀನನಂತೆ, ಮುಟ್ಟು ಮೈಲಿಗೆ ಜಪಶಾಲೆಗೆ ಸಂಭವಿಸೀತೆಂಬ ಶಂಕೆ ಯಿಂದ ಆ ಮೈಗಾವಲಿನ ಬಲವಂ "ಇಲ್ಲಿಯೇ ಇರುವರಾಗಿ" ಎಂದು ನೇಮಿಸಿ, ಮಿತ ರಾದ ರಾಜಪುತ್ರಪರಿವೃತರಾಗಿ ನಂದರು ನಕ್ಷತ್ರಸಮೂಹದಿಂದೊಪ್ಪುವ ಚಂದ್ರನುದ ಯಿಸಿ ಬಂದಂತೆ ಇತ್ತಂಡದ ಮುತ್ತಿ[ನ] ಸತ್ತಿಗೆಯ ನೆರಳಿನಿಂದ ಶತ್ರುಪಲಾಯನ ಜಪ ಶಾಲೆಯ ಸಮೀಪಕ್ಕೆ ಬಂದು, ಅಲ್ಲಿ ತುರಗಗಳನ್ನಿಳಿದು ನಂದರು ಜಪಶಾಲೆಗೆ ಪ್ರವೇಶಿ ಸಲು,

---

೧. ಒಳಕ್ಕೆ (ಕ)

ಅಷ್ಟರಲ್ಲಿಯೇ ಪಶ್ಚಿಮ ದಿಕ್ಕಿನ ಕಾಶೀಮಾರ್ಗದಲ್ಲಿ ಭೂಮ್ಯಂತರಿಕ್ಷ ಒಡೆಯುವಂತೆ ಪಿರಂಗೀ ಶಬ್ದಗಳು ಕೇಳಿಸಲು, ಅದಂ ಕೇಳಿ ನಂದರು "ಕಾಶೀಮಾರ್ಗದಲ್ಲಿ ಪಿರಂಗೀ ಶಬ್ದಗಳು ಕೇಳಿಸುತ್ತಲಿದೆ. ಕಾಶೀರಾಯನಿಗೂ ಪರ್ವತರಾಯನ ಕಡೆಯವರಿಗೂ ಸಮ್ಮುಖವುಂಟಾಗಿರಬೇಕು" ಎಂದು ಹೇಳಿಕೊಳ್ಳುತ್ತ, ಹೋಮಕುಂಡವಂ ಬಳಸಿ ಬರುತ್ತಿರಲು,

ಅಷ್ಟರಲ್ಲಿಯೇ ತುರುಗಾರೂಢರಾಗಿ ಕಾಶೀರಾಜನ ದೂತವೇಷವಂ ಧರಿಸಿದ ಚಾರರಿಬ್ಬರು ತುರಗಗಳಂ ಓಡಿಸುತ್ತ, "ಒಸಗೆ, ಒಸಗೆ" ಎಂದು ಕೂಗುತ್ತಾ, "ನಂದ ಭೂಪತಿಗಳು ಎಲ್ಲಿ ನೆಲಸಿ ಇದ್ದಾರೆ?" ಎಂದು ಕೇಳುತ್ತ ಬರುವ ದೂತರಂ ಕಂಡು, ನಂದಸೇನೆಯ ಉಕ್ಕಡದವರು ಆಯುಧರಹಿತರಾಗಿ ಕಾರ್ಯಗೌರವದಿಂ ಬರುವರಂ ತಡೆದರೆ ತಾವು ಅರಸುಗಳ ಕೋಪಕ್ಕೆ ಪಾತ್ರರಾದೇವೆಂಬ ಭೀತಿಯಿಂದ ಅವರಂ ತಡೆಯದೇ ಬಿಡಲು, ಹಾಗೇ ಆ ತುರಗಾರೂಢರು ಜಪಶಾಲೆಯ ಸಮೀಪಕ್ಕೆ ಬಂದು ನಿಂತು, "ಒಸಗೆ ಒಸಗೆ, ಪರಾಕು" ಎಂದು ಘಟ್ಟಿಯಾಗಿ ಕೂಗಲು,

ಆ ಶಬ್ದವಂ ಕೇಳಿದ ನಂದರು ಜಪಶಾಲೆಯಿಂದ ಹೊರಗೆ ಬಂದು, ಕೂಗಿದ ದೂತರ ಮುಖವಂ ನೋಡಿ, "ಅದೇನ್ಯೆ, ನೀವ್ಯಾರೆಂ"ದೆನಲು, "ಬುದ್ಧೀ, ನಾವು ಕಾಶೀರಾಯರ ಸಮುಖದ ದೂತರು ; ಈ ದಿವಸ ನಮ್ಮ ಕಾಶೀರಾಯರು ಪರ್ವತರಾಯರಿಗೆ ಮಾತು ಕೊಟ್ಟ ಪ್ರಕಾರಕ್ಕೆ ಸೇನಾಸಮೇತರಾಗಿ ಹೊರಟು ಪರ್ವತರಾಯಸೇನೆಗೆ ಬರುತ್ತಿರಲು, ಬರುವದಂ ತಿಳಿದು ಅವರನ್ನೆದುರುಗೊಂಡು ಕರೆತರುವದಕ್ಕೆ ಪರ್ವತರಾಯನು ತನ್ನ ಪುತ್ರನಾದ ಮಲಯಕೇತುವಂ ಪರಿವಾರಸಮೇತವಾಗಿ ಕಳುಹಿಸಲು, ಮಲಯಕೇತುವು ಬಂದು ನಮ್ಮ ಕಾಶೀರಾಯರಂ ಉಚಿತ ಪ್ರಕಾರದಿಂ ಕಂಡು ಪರಸ್ಪರ ಸಮ್ಮಾನವಾಗಲು, ಈರ್ವರೂ ಒಂದೇ ಗಜವನ್ನೇರಿ ಹೌದದಲ್ಲಿ ಕುಳಿತು ಪರಸ್ಪರ ಕುಶಲಗಳಂ ಕೇಳುತ್ತ ತೆರಳುತ್ತಿರುವಲ್ಲಿ,

ಕಾಶೀರಾಯನ ಮಾವುತನು ಗಜವಂ ಪಾಟಲೀಪುರಮಾರ್ಗವಾಗಿ ತಿರುಗಿಸಲು, ಅದಂ ನೋಡಿ ಮಲಯಕೇತವು ಭೀತನಾಗಿ "ಇದೇನು, ಗಜವು ನಮ್ಮ ಸೇನಾಮಾರ್ಗವಂ ಬಿಟ್ಟು ಮಾರ್ಗಾಂತರವಂ ಹಿಡಿಯುವದಕ್ಕೆ ನಿಮಿತ್ತವೇನು ?" ಎಂದು ಕೇಳಲು,

"ಈ ಮಾರ್ಗವು ಸೇನೆಗೆ [ಸು]ಪಥವಲ್ಲದುದರಿಂದ, ಪಾಟಲೀಪುರದ ಪ್ರಾಕಾರಸಮೀಪದಲ್ಲಿ ಹೋಗುವ ಮಾರ್ಗವು ಸೇನೆಗೆ ಸುಪಥವಾದುದರಿಂದ ಅನಾಯಾಸದಿಂ ಹೋಗಬಹುದು" ಎಂದು ಹೇಳಿ ಕಾಶೀರಾಯರು ಹುಸಿನಗೆಯಂ ನಗಲು, ಅದಂ ನೋಡಿ ಮಲಯಕೇತುವು, "ತನ್ನಂ ಈ ಕಾಶೀರಾಯನು ಮೋಸದಿಂ ಸೆರೆಹಿಡಿದುಕೊಂಡು ಹೋಗುತ್ತಾನೆ" ಎಂದು ನಿಶ್ಚೈಸಿ, ಒಮ್ಮಿಂದೊಮ್ಮೆ ಗಜದಿಂ ಧುಮುಕಿ ತನ್ನ ಪರಿವಾರಮಧ್ಯದಲ್ಲಿ ನಿಲ್ಲಲು,

ಅದಂ ಕಂಡು ಕಾಶೀರಾಯರು "ಮಲಯಕೇತುವಂ ಹಿಡಿಯಿರೆಂ"ದು ತಮ್ಮ ಸೇನೆಗೆ ನೇಮಿಸಲು, ಸೇನೆಯು ಮಲಯಕೇತುವಿನ ಪರಿವಾರವಂ ಮುತ್ತಿ, ಎದುರಾದವರಂ ಪ್ರಹರಿಸಿ, ಮಲಯಕೇತುವಂ ಕೈಸೆರೆ ಹಿಡಿಯಲು, ಉಳಿದ ಪರಿವಾರವು ಪಲಾಯನಂಗೈಯಲು, ಅದಂ ನೋಡಿ ಕಾಶೀರಾಯರು ನಮ್ಮಂ ಕರೆದು, "ಎಲೈ ದೂತರುಗಳಿರಾ, ಈ ವರ್ತಮಾನವಂ ಪರ್ವತರಾಯನು ತಿಳಿದು ತನ್ನ ಪುತ್ರನಂ ಬಿಡಿಸಿಕೊಂಡು ಹೋಗುವ ಬಗ್ಗೆ ಸೇನಾಸಮೇತನಾಗಿ ತ್ವರಿತದಿಂ ಬರುವನು. ನಮ್ಮ ಮೇಲೆ ಪರ್ವತರಾಯಸೇನೆಯು

ಬಂದು ಕವಿಯದಂತೆ ಆತನ ಸೇನೆಗೆ ಅಡ್ಡಲಾಗಿ ಸೇನೆ ಬಂದು ನಿಲ್ಲುವಂತೆ ನಂದಭೂಪತಿಗಳಿಗೆ ತ್ವರಿತದಿಂ ಹೋಗಿ ವಿಜ್ಞಾಪಿಸಿರೆಂ"ದು ಕಾಶೀರಾಯರು ನಮ್ಮಂ ಸ್ವಾಮಿಯವರ ಸನ್ನಿಧಾನಕ್ಕೆ ಅಟ್ಟಿದರು" ಎಂದು ಗಾಬರಿಯಿಂದ ಕಪಟದೂತರು ಹೇಳುತ್ತಿರಲು.

ಅದಂ ಕೇಳಿ ನಂದರು, "ಕಾಶೀರಾಯನು ನಮಗೆ ಪರಮಮಿತ್ರನಾದುದರಿಂದ ಈ ಸಮಯದಲ್ಲಿ ಮಲಯಕೇತುವಂ ಪಿಡಿದು, ರಾಜಕಾರ್ಯವಂ ನಿರ್ವಹಿಸಿದನು. ನಮಗೆ ಚಂದ್ರಗುಪ್ತನೇ ಸಿಕ್ಕಿದಂತಾಯಿತು" ಎಂದು ಸಂತೋಷಪಡುತ್ತ, ತಮ್ಮ ದೂತರ ಮುಖವಂ ನೋಡಿ, "ಎಲೈ, ನಮ್ಮ ಭದ್ರಭಟಾದಿ ಸೇನಾಪತಿಗಳಿಗೂ ನಮ್ಮ ಬಳಿಯ ಅರಸುಗಳೆಲ್ಲರಿಗೂ ಸೇನಾಸಮೇತರಾಗಿ ಈ ಕ್ಷಣವೇ ಹೋಗಿ ಪಾಟಲೀಪುರಕ್ಕೆ ಬರುವ ಕಾಶೀರಾಯನ ಸೇನೆ ಮೇಲೆ ಪರ್ವತರಾಯನ ಸೇನೆ ಬಂದು ಕವಿಯದಂತೆ ಮಾರ್ಗಕ್ಕೆ ಅಡ್ಡಲಾಗಿ ನಿಲ್ಲುವಂತೆ ನೇಮಿಸಿ, ಸೇನೆಯಂ ಹೊರಡಿಸಿ, ಆ ವರ್ತಮಾನವಂ ತ್ವರಿತದಿಂ ಬಂದು ತಿಳುಹಿಸುವರಾಗಿ" ಎಂದು ನೇಮಿಸಲು, ಆ ದೂತರು ತುರಗಗಳನ್ನೇರಿ ಅತಿತ್ವರ್‍ಯದಿಂ ಹೋಗುತ್ತಿರಲು.

ನಂದರು ಆ ಕಪಟದೂತರಂ ನೋಡಿ, "ಕಾಶೀಮಾರ್ಗದಲ್ಲಿ ಆದ ಪಿರಂಗೀ ಶಬ್ದಗಳೇನೈ?" ಎನಲು, "ಬುದ್ಧೀ, ನಾವು ಹೊರಟ ಬಳಿಕ ಮಲಯಕೇತು ಸಿಕ್ಕಿದ ಸಂತೋಷಕ್ಕೆ ಪಿರಂಗಿ ಆಗಿ ಇದೆ" ಎನಲು, ನಂದರ ಕಡೆ ತುರಗಾರೂಢರು ಅತಿತ್ವರೆಯಿಂ ಬಂದು ಭದ್ರಭಟಮುಖ್ಯರಾದ ಸಕಲಸೇನೆಯಂ ಕಾಶೀಮಾರ್ಗಕ್ಕೆ ಪರ್ವತರಾಯಸೇನೆ ಹೋಗಲೀಸದೆ ಅಡ್ಡಲಾಗಿ ನಿಲ್ಲುವದಕ್ಕೆ ಹೊರಡಿಸಲು, ನಂದರ ಅಪ್ಪಣೆ ಮೇರೆಗೆ ಭದ್ರಭಟಾದಿಗಳು ತಮ್ಮ ತಮ್ಮ ಸೇನಾಸಮೇತರಾಗಿ ಎಲ್ಲರೂ ಪಾಟಲೀಪುರದ ದಕ್ಷಿಣ ದಿಕ್ಕಿಗೆ ಹೋಗುತ್ತಿರಲು.

ಅಷ್ಟರಲ್ಲಿ ಕಪಟ ಮಲಯಕೇತುವಂ ದೋಲಿಯಲ್ಲಿ ಕುಳ್ಳಿರಿಸಿ, ಮುಸುಗಿಕ್ಕಿ, ಸುತ್ತಲೂ ಬಹುಸೇನೆ ಕಾವಲಿಂದ ಬರುತ್ತಿರುವದಂ ಕಂಡು, ಮಾರ್ಗಮಧ್ಯದಲ್ಲಿ ನಿಲ್ಲಿಸಿದ್ದ ಚಾಣಕ್ಯ ದೂತರಿಬ್ಬರು ತುರಗವಂ ಓಡಿಸುತ್ತ, ಉಕ್ಕಡದವರಿಗೆ "ಮಲಯಕೇತುವಂ ಕಾಶೀರಾಯರು ಛದ್ಮನೆಯಿಂದ ಕೈಸೆರೆಯಾಗಿ ಹಿಡಿದು ತರುತ್ತಲಿದ್ದಾರೆ, ನಂದ ಭೂಪತಿಗಳೆಲ್ಲಿದ್ದಾರೆ ಹೇಳಬೇಕೆಂ"ದು ತ್ವರಿತದಿಂ ಬರುತ್ತಾ, ನಂದರ ಗುಡಾರದ ಬಳಿಯಲ್ಲಿ ನಿಂತು, ಅಲ್ಲಿ ಕಾವಲಿನ ಸೇನೆಯವರಿಗೆ ಸಮಾಚಾರವಂ ಹೇಳುತ್ತ, ಜಪಶಾಲೆಯ ಸಮೀಪಕ್ಕೆ ಬಂದು ನಿಂತು, "ಜಯವಾಯಿತು, ಒಸಗೆ" ಎಂದು ಕೂಗಲು.

ಆ ಧ್ವನಿಯಂ ಕೇಳಿ, ನಂದರು ಕೂಗುವ ದೂತರ ಮುಖವಂ ನೋಡಿ, "ಅದೇನೈ" ಎನಲು, "ಜೀಯಾ, ಮಲಯಕೇತುವಂ ಹಿಡಿದು ಬಂಧಿಸಿ, ದೋಲಿಯಲ್ಲಿ ಕುಳ್ಳಿರಿಸಿ, ಅತಿಜಾಗ್ರತೆಯಿಂದ 'ಶತ್ರುಗಳು ಬಂದು ಮೇಲೆ ಕವಿದಾರು' ಎಂದು ಕಾಶೀರಾಯರು ಸೇನಾಸಮೇತರಾಗಿ ಕರೆತರುತ್ತಲಿದ್ದಾರೆ; ಸ್ವಾಮಿಯವರ ಕಾರ್ಯ ಜಯವಾಯಿತು" ಎನಲು, ಆ ಮಾತಿಗೆ ನಂದರು ಸಂತೋಷಪಡುತ್ತ, "ಆ ದೂತರಿಗೆ ಉಡುಗೊರೆಯಂ ಕೊಡಿ" ಎಂದು ನೇಮಿಸಿ, ಜಪಶಾಲೆಗೆ ಹೋಗಲು.

ಅಷ್ಟರಲ್ಲಿಯೇ ಮುಸುಕುಹಾಕಿದ ದೋಲಿ ಸುತ್ತಲೂ ಬಹುಮಂದಿ ತುರಗಾರೂಢರು ಖಡ್ಗಸಮೇತರಾಗಿ ಕಾವಲಿಂದ ತರುತ್ತ, ನಂದರ ಗುಡಾರದ ಬಳಿಯಲ್ಲಿ ನಿಂತು,

"ಮಲಯಕೇತುವು ನಮ್ಮ ಕಾಶೀರಾಯರಿಗೆ ಕೈಸೆರೆಯಾಗಿ ಸಿಕ್ಕಿದನು. ನಂದಭೂಪತಿಗಳಿಗೊಪ್ಪಿಸಬೇಕು. ತಿಳುಹಿಸಿರಿ" ಎನಲು, ಆ ಗುಡಾರವಂ ಕಾದಿದ್ದ ಸೇನಾಪತಿಯು ಶತ್ರುವಾಗಿ ಕೈಸೆರೆಯಂ ಸಿಕ್ಕಿದ ಮಲಯಕೇತುವಂ ನೋಡುವ ಕುತೂಹಲದಿಂದ, "ಯಾರು ಮಲಯಕೇತು, ಎಲ್ಲಿ ಇದ್ದಾನೆ ? ನಾವು ನೋಡಬಹುದೋ ?" ಎಂದು ದೋಲಿಯ ಸಮೀಪಕ್ಕೆ ಹೋಗಿ ನಿಲ್ಲಲು, ಸೇನಾಪತಿಯು ಮಲಯಕೇತುವಂ ನೋಡುವದಕ್ಕೆ ಹೋಗುವದಂ ಕಂಡು "ನಾವೂ ನೋಡೋಣವೇ, ಹ್ಯಾಗೆ ಇದಾನೆ" ಎಂದು ಮಾತಾಡಿಕೊಳ್ಳುತ್ತ, ಗುಡಾರದ ಕಾವಲಿನ ಸೇನಾಜನವೆಲ್ಲರೂ ಆಯುಧಗಳಂ ಗುಡಾರದ ಸುತ್ತಲೂ ನಿಲ್ಲಿಸಿ, ದೋಲಿ ಬಳಿಗೆ ಬರುತ್ತಿರಲು,

ಆ ದೋಲಿಯವರು ಗುಡಾರದ ಕಾವಲಿನ ಸೇನಾಪತಿಯಂ ಕಂಡು, ಹಿಂದೆ ನಿರಾಯುಧರಾಗಿ ಗುಂಪುಗುಂಪಾಗಿ ಕಾವಲಿನ ಸೇನಾಜನರು ಬರುವದಂ ನೋಡಿ, "ಜನವೆಲ್ಲಾ ಒಟ್ಟಿಗೆ ಬಂದು ಸೇರಲಿ" ಎಂದು, "ಮಲಯಕೇತುವಂ ನೋಡಬೇಕೇ ಆದರೆ ತೋರಿಸುತ್ತೇವೆ" ಎಂದು ಜಾಲವಂ ಮಾಡಿ, ಸ್ವಲ್ಪ ಸ್ವಲ್ಪ ದೋಲಿಮುಸುಕಂ ಓಸರಿಸುತ್ತ, ಒಳಗೆ ಭೂಷಣ ಭೂಷಿತನಾಗಿರುವ ಪುರುಷನಂ ತೋರಿಸುತ್ತ, "ಈತನೇ ಮಲಯಕೇತು, ನೋಡಬಹುದು" ಎನ್ನುತ್ತ, ಆತನಂ ತೋರಿಸುತ್ತ, ದೋಲಿಯಂ ಮೆಲ್ಲಮೆಲ್ಲನೆ ಮುಂದಕ್ಕೆ ಸಾಗಿಸುತ್ತಿರಲು, ನಂದರ ಸೇನೆ ಸಹಿತವಾಗಿ ಸೇನಾಪತಿಯು ಗುಡಾರದ ಮೇಲಿನ ಚಿಂತೆಯಂ ಬಿಟ್ಟು, ಆ ಕಪಟ ಮಲಯಕೇತುವಂ ನೋಡುತ್ತ ವಿಸ್ಮಿತರಾಗಿ, ಮನಕ್ಕೆ ಬಂದಂತೆ ಮಾತನಾಡಿಕೊಳ್ಳುತ್ತಿರಲು, ಇದೆಲ್ಲವಂ ನೋಡಿ ದೋಲಿಯ ಹಿಂಭಾಗದಲ್ಲಿ ಬರುತ್ತಿದ್ದ ಸೇನೆಯು ಗುಡಾರಕ್ಕೆ ನುಗ್ಗಿ, ಅಲ್ಲಿ ನಿಲ್ಲಿಸಿ ಇದ್ದ ಆಯುಧಗಳಲ್ಲಿ ಬೇಕಾದುದಂ ತೆಗೆದುಕೊಂಡು, ಉಳಿದುದಂ ಅಲ್ಲಿ ಮಾಡಿದ್ದ ಅಗಳಿನಲ್ಲಿ ಬಿಸುಟು, ಗುಡಾರವಂ ಕೊಳ್ಳೆಮಾಡುತ್ತಿರಲು,

ಅಷ್ಟರಲ್ಲಿಯೇ ದೋಲಿ ಮುಂದಕ್ಕೆ ನಡೆಯಲು, ನೋಡುವದಕ್ಕೆ ಹೋಗಿದ್ದ ಸೇನಾಪತಿಯು ತನ್ನ ಸೇನಾಸಮೇತನಾಗಿ ನಿರಾಯುಧರಾಗಿ ಹಿಂತಿರುಗಿ ಗುಡಾರದ ಬಳಿಗೆ ಬರುವದಂ ಕಂಡು, ಅಲ್ಲಿಯ ಪಿರಂಗಿದಾರರಂ ಕಾವಲಿನವರಂ ಸಹ ಸಂಹರಿಸಿ ಗುಡಾರವಂ ಸೂರೆಮಾಡುತ್ತಿರುವ ಸೇನೆಯು ನಿರಾಯುಧರಾಗಿ [೧]ಬರುವ ಸೇನೆಗೆ ಎದುರಾಗಿ ಬಂದು[೧], ಸೇನಾಪತಿ ಸಮೇತವಾಗಿ [೨]ಎಲ್ಲರಂ[೨] ಛೇದಿಸಿ, ಸಂಹರಿಸಿ, ಜಪಶಾಲೆಗೆ ಬರುತ್ತಿರಲು,

ಅಷ್ಟರಲ್ಲಿಯೇ ಮುಸುಕಿಕ್ಕಿದ ದೋಲಿಯಂ ತಂದು ಜಪಶಾಲೆಯ ಮುಂದೆ ಇಳುಹಿಸಿ, "ಮಲಯಕೇತುವು ಸಿಕ್ಕಿದನು ; ಬುದ್ಧೀ, ಕರೆತಂದು ಇದ್ದೇವೆ" ಎಂದು ಕೂಗಲು, ಆ ವಾಕ್ಯವಂ ಕೇಳಿ ನಂದರು ತ್ವರಿತದಿಂ ಬಂದು, ದೋಲಿಯ ಮುಂದೆ ನಿಂತು, ಒಳಗಿದ್ದ ಪುರುಷನಂ ಮಲಯಕೇತುವೆಂದು ತಿಳಿದು, ಅವನಂ ಕುರಿತು, "ಎಲೈ ಮಲಯಕೇತುವೇ, ಬುದ್ಧಿಹೀನನಾಗಿ ಇಂಥಾ ಅಕಾರ್ಯವಂ ಮಾಡಿ ಯಾಕೆ [೩]ಕೈಸೆರೆಗೆ[೩] ತಗುಲಿದೆ ?" ಎನಲು, ಆ ಮಾತಿಗೆ ಆ ಕಪಟ ಮಲಯಕೇತುವು ನಂದರಂ ಕುರಿತು,

---

೧. ಬಂದು (ಕ) ೨. ಅವರಂ (ಕ) ೩. ಸೆರೆಗೆ (ಕ)

"ಅಯ್ಯ ಅರಸುಗಳಿರಾ, ಭಾಗ್ಯಹೀನನಾದ ಚಂದ್ರಗುಪ್ತನಂ ನಮ್ಮ ತಂದೆ ವಹಿಸಿದ್ದ ರಿಂದ ನನಗೆ ಈ ದುರ್ದೆಸೆ ಸಂಭವಿಸಿತು. ನಿಮ್ಮ ವಶವಾದ ಬಳಿಕ ನನ್ನ ಯತ್ನ ಏನು ಇದೆ ?" ಎನಲು, "ಎಲೈ ಮಲಯಕೇತುವೇ, ಅರಸುಗಳಿಗೆ ಪರಸ್ಪರ ವಿರೋಧವುಂಟಾದರೆ, ಹಾನಿವೃದ್ಧಿ ಸಂಭವಿಸುವದು ವಿಹಿತವೇ ಸರಿ. ಅದಕ್ಕೆ ದುಃಖಪಟ್ಟು ಫಲವೇನು ? ಈಗಲೂ ನಮಗೆ ಜ್ಞಾತಿಯಾದ ಚಂದ್ರಗುಪ್ತನಂ ನಮ್ಮ ವಶಕ್ಕೆ ಒಪ್ಪಿಸುವಂತೆ ನಿಮ್ಮ ತಂದೆಗೆ ಹೇಳಿ ಕಳುಹಿಸಿ ಒಪ್ಪಿಸುವನಾಗು. ನಿನ್ನಂ ಬಿಟ್ಟು ಕೊಡುವೆವು. ನಿನ್ನ ರಾಜ್ಯ ಎಂದಿನಂತೆ ನಿನಗೆ ಇರುವದು" ಎನಲು, "ಅಯ್ಯ ನಂದ ಭೂಪತಿಗಳಿರ, ಹಿಡಿದ ಕಾರ್ಯವಂ ನಿರ್ವಹಿಸುವ ನಮ್ಮ ತಂದೆಯು ಶರಣಾಗತನಾದ ಚಂದ್ರಗುಪ್ತನಂ ಬಿಡುವವನಲ್ಲ. ನನ್ನ ಮೇಲಿನ ಆಶೆಯನ್ನಾದರೂ ತ್ಯಜಿಸತಕ್ಕವನು" ಎನಲು, "ಎಲೈ ಮರುಳೆ, ಪುತ್ರಕ್ಷೇಮಕ್ಕಿಂತಲೂ ತುಚ್ಛನಾದ ಚಂದ್ರಗುಪ್ತನೆಂದರೇನು, ಹಿಡಿದ ಕಾರ್ಯವೆಂದರೇನು ? ಈಚೆಗೆ ಬಂದು ಮಾತನಾಡುವನಾಗು" ಎನಲು, "ಅಯ್ಯ ನಂದ ಭೂಪತಿಗಳಿರಾ, ಯಾವ ಕಾರ್ಯವಂ ನಿರ್ವಹಿಸಿದ್ದಕ್ಕೆ [1]ಲಜ್ಜಾ[1]ರಹಿತನಾಗಿ ಹೊರಗೆ ಬಂದು ಏನೆಂತ ಜನಗಳಿಗೆ ಮುಖವಂ ತೋರಿಸಲಿ ?" ಎಂದು ಹೇಳುವಷ್ಟರಲ್ಲಿಯೇ, ತಮ್ಮ ಸೇನೆಗಳು ಬಂದು ಒದಗಿದುದಂ ತಿಳಿದು, ಆ ಕಪಟ ಮಲಯಕೇತುವು ಖಡ್ಗವಂ ಪಿಡಿದು ದೋಲಿಮುಸುಕಂ ತೆಗೆದು ಕೊಂಡು ಹೊರಗೆ ಬಂದು ನಿಂತು, ಸುತ್ತಣ ಜನವಂ ನೋಡಿ ನಗುತ್ತ ನಿಂತಿರಲು,

ಅಷ್ಟರಲ್ಲಿಯೇ, ಸೇನೆಯು ನಂದರಂ ಸುತ್ತಿಕೊಂಡು ಪರಿವೇಷ ಕಟ್ಟಿದಂತೆ ನಿಲ್ಲಲು, ಇದೆಲ್ಲವಂ ನೋಡಿ ನಂದರು ಮಹಾಭಯಗ್ರಸ್ತರಾಗಿ ತಮ್ಮೊಳಗೆ ತಾವು "ಅಯ್ಯ ತಮ್ಮಂದಿರಾ, ಸೆರೆಸಿಕ್ಕಿದವನ ಕೈಗೆ ಖಡ್ಗ ಹೇಗೆ ಬಂತು ? ಇವನು ಒಬ್ಬರಂ ಲಕ್ಷೀಕರಿಸದೆ, ಮುಖವಿವರ್ಣವಿಲ್ಲದೆ, ಸುತ್ತಣ ಜನವಂ ನೋಡುತ್ತ ನಗುತ್ತಲಿದ್ದಾನೆ. ಇದೇನಾಶ್ಚ ರ್ಯವೋ ?" ಎಂದು ಜೇಷ್ಠನಂದನು ಹೇಳಲು,

"ಅಯ್ಯ ಅಣ್ಣಾಜಿಗಳೆ, ಈ ಸುತ್ತಣ ಜನವು ತಾವು ಧರಿಸಿದ್ದ ರುದ್ರಾಕ್ಷಿಗಳನ್ನೀಡಾಡುತ್ತ, ಹಸ್ತಗಳಿಂದ ಭಸ್ಮಗಳನ್ನಳಿಸಿಕೊಳ್ಳುತ್ತ, ಪಾಗುಗಳಂ ಓಸರಿಸುತ್ತ, ಕೋಶಗಳಿಂದ ಖಡ್ಗ ಗಳಂ ಹಿರಿಯುತ್ತ ಸನ್ನದ್ಧರಾಗುವದರಿಂದ ಇವರು ಕಾಶೀರಾಜಸೇನಾಜನರಲ್ಲ, ಕಪಟದಿಂ ಬಂದಿರುವ ಶತ್ರುಸೇನಾಜನರೇ ಇವರಹುದು. ಹೋ ಹೋ ಕಾರ್ಯಘಾತವಾಯಿತು. ವೃದ್ಧರ ವಚನಗಳಂ ಅತಿಕ್ರಮಿಸಿ ನಾವು ನಡೆದುದಕ್ಕೆ ತದನುಸಾರ ಫಲ ಸಂಭವಿಸಿತು. ನಮ್ಮ ಸಂಗಡ ಇಲ್ಲಿಗೆ ಬಂದ ಸ್ವಲ್ಪ ಪರಿವಾರದಿಂದ ನಿರ್ವಾಹ ತೋರುವದು ಇಲ್ಲ. ತನ್ನ ಬುದ್ಧಿಯಿಂದಲೇ ದುರ್ಯೋಧನನು ಮಹಾಸಂಪದವಂ ನಷ್ಟಗೊಳಿಸಿ, ಸೋದರರು ಸಹ ತಾನೂ ನಷ್ಟವಾದಂತೆ ಅದೇ ದುರ್ದೆಸೆ ನಮಗೂ ಸಂಭವಿಸಿತು. ನಮ್ಮ ಸಮಯಬಂಧ ದೋಷವೇ ನಮ್ಮನ್ನಿಲ್ಲಿಗೆ ತಂದು ತಗುಲಿಸಿತು. ನಮ್ಮ ಬುದ್ಧಿಯಿಂದಲೇ ಮೈಗಾವಲಿನ ಸೇನೆಯು ಗುಡಾರ[ದ] ಬಳಿಯಲ್ಲೇ ನಿಂತಿತು. ನಮ್ಮ ವಚನದಿಂದಲೇ ಮಹಾಶೂರರಾದ ಭದ್ರಭಟಾದಿಗಳ ಸೇನೆಗಳು ನಮ್ಮನ್ನಗಲಿ ಹೋದವು.

ಅಸಹಾಯಶೂರನಾದ ತಂದೆ ಆದ ಅರ್ಜುನನಂ ಸಂಶಪ್ತಕರ ನಿಮಿತ್ತದಿಂ ದೂರವಾಗಿ

---

೧. ಆಜ್ಞಾ (ಕ)

ತೆಗೆದು, ಪದ್ಮವ್ಯೂಹದಲ್ಲಿ ಅಭಿಮನ್ಯುವಂ ತಗುಲಿಸಿ, ದೈವವು ಸಂಹರಿಸಿದಂತೆ ಶತ್ರುಲಕ್ಷವನ್ನಾದರೂ ಲಕ್ಷೀಕರಿಸದೆ ಯುದ್ಧವಂ ಮಾಡುವ ಅಮಾತ್ಯ ರಾಕ್ಷಸನೊಡನೆ ನಮಗೆ ವಿಯೋಗವನ್ನುಂಟುಮಾಡಿ ದೈವವು ನಿಗ್ರಹಿಸಬೇಕೆಂದು ಎಣಿಸಿತು[೧]. ಶತ್ರುವರ್ಗವು ಅಧಿಕವಾಯಿತು. ಯಾರ ಯತ್ನವಿಲ್ಲ. ನಾವು ಕ್ಷತ್ರಿಯರಾದುದಕ್ಕೆ ನಮ್ಮ ಧರ್ಮವಂ ಬಿಡದೆ ಧೈರ್ಯವನ್ನವಲಂಬಿಸಿ 'ಹರ ಮಹಾದೇವ' ಎನ್ನುತ್ತ ಶತ್ರುಗಳ ಮೇಲೆ ಹೊಕ್ಕು, ಬಾಹುಬಲದಿಂದ ಕ್ಷಾತ್ರಧರ್ಮವಂ ತೋರಿಸಿ, ಹಿಮ್ಮೆಟ್ಟದೆ ಯುದ್ಧವಂ ಮಾಡಿ ಜಯಿಸಿದರೆ ಉತ್ತಮವು; ಇಲ್ಲದಿದ್ದರೆ ಸದ್ಗತಿ ಉಂಟಾಗುವದಕ್ಕೆ ಸಂಶಯವಿಲ್ಲ" ಎಂದು ಹೇಳುತ್ತ,

ನಂದರು ಕಾಸೆಯಂ ಬಿಗಿದು ಕಟ್ಟಿ ಸಮೀಪಸ್ಥರಾದ ತಮ್ಮ ದೂತರ ಕೈಗಳಲ್ಲಿರು[ವ] ತಮ್ಮ ಖಡ್ಗ ಖೇಟ್ಯಗಳಂ ತೆಗೆದುಕೊಂಡು ನಿಂತು ತುರಗಾರೂಢರಾಗಬೇಕೆಂಬ ಸಮಯದಲ್ಲಿ, ಅಲ್ಲಿದ್ದ ಶತ್ರುಗಳು ನಂದರ ತುರಗಗಳಂ ಕಾಲುಗಳಂ ಖಡ್ಗದಿಂ ಛೇದಿಸಿ, ಜಪಶಾಲೆಗೆ ಹೊಕ್ಕು, ಅಲ್ಲಿದ್ದ ಬ್ರಾಹ್ಮಣರೆಲ್ಲರಂ ಓಡಿಸಿ, ಜಪಶಾಲೆಯ ಹೋಮಕುಂಡದಗ್ನಿಯಲ್ಲೇ ಜಪಶಾಲೆಯಂ ಹತ್ತಿಸಿ ಬೆಳಕು ಮಾಡುತ್ತಿರಲು, ಆಗ ಮಾಸೋಪವಾಸಿಯು ಜಡೆಗಳಂ ಜೋಲಿಸುತ್ತ, ಕೃಷ್ಣಾಜಿನವನ್ನೀಡಾಡುತ್ತ, ಭೀತಿಪಟ್ಟವನಂತೆ ಬಂದು ನಿಂತು ನಂದರಂ ಕುರಿತು,

"ಎಲೈ ಅರಸುಗಳಿರ, ನಿಮಗೆ ದೇವತಾದರುಶನವಂ ಮಾಡಿಸಬೇಕೆಂದು ಉದ್ಯುಕ್ತರಾಗಿ ಇದ್ದ ನಮ್ಮ ಜಡೆಗಳಂ ಈ ತುರಗಾರೂಢರು ಕೀಳುವದಕ್ಕೆ ಯತ್ನವಂ ಮಾಡುತ್ತಾರೆ. ಈಗ ಉಪೇಕ್ಷಿಸುವದು ನಿಮಗೆ ಯುಕ್ತವೇ ?" ಎಂದು ಹೇಳನವಂ ಮಾಡುತ್ತ, "ಆದರೂ ನೀವು ಹಿಡಿದ ಖಡ್ಗವಂ ಬಿಸುಟರೆ ನಿಮಗೆ ಖಡ್ಗಸ್ತಂಭನಮಂತ್ರವನ್ನುಪದೇಶಿಸುವೆನೆಂ"ದು ವಿದೂಷಕನಂತೆ ಹಾಸ್ಯವಂ ಮಾಡುತ್ತ, "ನಾನು ಹೇಳಿದ ರೀತಿಗೆ ಇಂದು ನಿಮ್ಮ ಶತ್ರುಗಳು ನಾಶವಾಗದಿದ್ದರೂ ನಮ್ಮ ಶತ್ರುಗಳು ನಾಶವಾಗುವದು ಸಿದ್ಧವೇ ಸರಿ. 'ಅತ್ಯುತ್ಕಟೈಃ ಪುಣ್ಯಪಾಪೈಃ ಇಹೈವ ಫಲಮಶ್ನುತೇ' ಎಂಬ ಶಾಸ್ತ್ರಾರ್ಥವು ಸತ್ಯವಾದುದರಿಂದ ನಿಷ್ಕಾರಣವಾಗಿ ಸಂಪಾದಿಸಿಕೊಂಡ ಮೌರ್ಯಹಿಂಸಾದೋಷವೇ ನಿಮಗೆ ಈ ಶತ್ರುರೂಪಾಗಿ ಅದರ ಫಲವಂ ಅನುಭವಪಡಿಸುವದಕ್ಕೆ ಸಿದ್ಧವಾಗಿ ಇರುವಲ್ಲಿ, ನೀವಲ್ಲದೆ ಮತ್ತಾ್ಯರನುಭವಿಸುವರು ?" ಎಂದು [೨]ಮರ್ಮಸ್ಪೃಕ್ಕಾದ ವಾಕ್ಯವಂ ಹೇಳುತ್ತ, ಚಾಣಕ್ಯನಿದ್ದೆಡೆಗೆ ಬರುತ್ತಿದ್ದನು.

ಆಗ ಜಪಶಾಲೆ ಬೇಯುವ ಬೆಳಕಂ ನೋಡಿ, ಶೇಖರ ಹೇಳಿದ ಸಂಕೇತಪ್ರಕಾರಕ್ಕೆ ಪರ್ವತರಾಯಸೇನೆಯೆಲ್ಲವೂ ನಂದರಂ ಬಿಡಿಸಿಕೊಳ್ಳುವದಕ್ಕೆ ನಂದರ ಸೇನೆ ಪುನಃ ಬರದಂತೆ ನಾಲ್ಕು ದಿಕ್ಕಿನಲ್ಲಿಯೂ ಯುದ್ಧಸನ್ನದ್ಧವಾಗಿ ನಿಲ್ಲುತ್ತಿರಲು,

ನಂದರು ತಮ್ಮ ತುರಗಗಳು ಹತವಾದುದಂ ನೋಡಿ, ಅದರ ಆಸೆಯಂ ಬಿಟ್ಟು, ತಮ್ಮ ಕೈಖಡ್ಗಗಳಂ ಝಳಪಿಸುತ್ತ, ಎದುರಿಗೆ ಖಡ್ಗವ ಪಿಡಿದು ನಿಂದಿರುವನಂ ನೋಡಿ, "ಕಪಟದಿಂ ಮಲಯಕೇತು ವೇಷವಂ ಧರಿಸಿದುದಕ್ಕೆ ಫಲಮಿದು ಕೋ" ಎಂದು ಘರ್ಜಿಸಿ,

---

೧. ಘ ಪ್ರತಿಯಲ್ಲಿ ಮುಂದೆ ಕೆಲವು ಸಾಲುಗಳು ಹೆಚ್ಚಾಗಿವೆ ; ಬದಲಾವಣೆಗಳೂ ಇವೆ. ೨. ಮರ್ಮಯೆಲ್ಲವೂ (ಕ)

ಖಡ್ಗದಿಂ ಅವನ ಶಿರವನ್ನಿಳುಹಿ, ಶತ್ರುಗಳು ಎಸೆದ ಭಲ್ಲೆಗಳಂ ಖಡ್ಗದಿಂದ ಕತ್ತರಿಸುತ್ತ, ಹಾರಿ ಕುಪ್ಪಳಿಸಿ, ಅವರ ಶಿರಸ್ಸುಗಳಂ ಖಡ್ಗದಿಂದ ಭೂಮಿಗಿಳು[ಹು]ತ್ತ, ಅವರ ಖಡ್ಗ ಪ್ರಹಾರಕ್ಕೆ ತಮ್ಮ ಗುರಾಣಿಗಳನ್ನೊಡ್ಡಿ ತಪ್ಪಿಸಿಕೊಳ್ಳುತ್ತ, ಶರೀರಲಾಘವದಿಂದ ನಿಂತ ಕಡೆಯಲ್ಲಿ ನಿಲ್ಲದೆ ಮಂಡಲಾಕಾರವಾಗಿ ಕುಪ್ಪಳಿಸುತ್ತ, ಖಡ್ಗಗಳಿಂ ಶತ್ರುಗಳ ತುರಗಗಳಂ ಛೇದಿಸುತ್ತ ಹೆಚ್ಚಿ ಬರುವ ನಂದರ ರೋಷಬಲಗಳಂ ಕಂಡು ಶತ್ರುಸೇನೆಯು ಮರಳಿ ಮರಳಿ ಕವಿಯುತ್ತಿರಲು,

ಆಗ ನಂದರು ಶತ್ರುಗಳಿಗೆ ಮೈಕೊಡದೆ ಒಂದೊಂದು ಖಡ್ಗಪ್ರಹಾರಕ್ಕೆ ನಾಲ್ಕಾರು ಶತ್ರುಗಳ ಶಿರಸ್ಸಂ ಛೇದಿಸುತ್ತ ತಿರುಗುವದಂ ಕಂಡು, ತೀಕ್ಷ್ಣವಾದ ಬಾಣಗಳಿಂದ ನಂದರಂ ಪ್ರಹರಿಸುತ್ತಲು, ಆ ಬಾಣಪರಂಪರೆಯಂ ಖೇಢ್ಯಗಳಿಂದ ತಡೆದು, ಹಾರಿ ಬಂ[ದ] ಧನುರ್ಧಾರಿಗಳಂ ಛೇದಿಸುತ್ತ ಅವರ ಶಿರಸ್ಸುಗಳಿಂ ರಣಭೂಮಿಯಂ ಮುಚ್ಚು ತ್ತಿರಲು, ಆಗ ಸಾಹಸಿಗಳಾದ ಶತ್ರುಗಳು ನಂದರ ಸಂಗಡ ಬಂದ ರಾಜಕುಮಾರ ಪರಿವಾರವಂ ಸಂಹರಿಸುತ್ತಿರಲು, ಅದಂ ಕಂಡು ರೋಷಾವೇಶದಿಂದ ನಂದರು ತಮ್ಮ ಕರಲಾಘವದಿಂದ ಶತ್ರುಗಳ ಸಹಸ್ರೋಪಸಹಸ್ರಗಳಂ ಸಂಹರಿಸುತ್ತಿರಲು, ಅವರ ವೇಗಕ್ಕೆ ನಿರ್ವಹಿಸಲಾರದೆ ಶತ್ರುಗಳು ದೂರದಲ್ಲಿಯೇ ಮಂಡಲಾಕಾರವಾಗಿ ನಿಂತು ವಿಶ್ರಮಿಸಿ ಕೊಳ್ಳುತ್ತಿರಲು,

ಆ ವರ್ತಮಾನವಂ ಕೇಳಿ ಚಾಣಕ್ಯನು ಕ್ರುದ್ಧನಾಗಿ ಅತಿವೇಗದಿಂ ತನ್ನ ಉತ್ತರೀಯವಂ ನಡುವಿಗೆ ಸುತ್ತಿ, ತನ್ನ ದಂಡವಂ ಪಿಡಿದು, "ಇನ್ನೂ ನಂದಾಧಮರು ಹತರಾಗದಿದ್ದ ಬಳಿಕ ಎಲ್ಲರೂ ಹೇಡಿಗಳು; ನಾನೇ ಹೋಗಿ ಸಂಹರಿಸುವೆನು" ಎಂದು ಓಡಿಬರುತ್ತಿರಲು, ಅದಂ ನೋಡಿ ಚಂದ್ರಗುಪ್ತನು ಕವಚವಂ ಧರಿಸಿ, ಖಡ್ಗ ನಿಷಂಗ ಚಾಪ ಭಲ್ಲ ಸಮೇತನಾಗಿ ತುರಗವನ್ನೇರಿ ಹೊರಡುವದಂ ನೋಡಿ, ಶೇಖರಮುಖ್ಯರಾದ ಸೇನಾನಾಯಕರೆಲ್ಲರೂ ಚಂದ್ರಗುಪ್ತನ ಸಂಗಡಲೇ ಸನ್ನದ್ಧರಾಗಿ ಬರುತ್ತಿರಲು,

ಅತ್ತಲಾ ರಾಕ್ಷಸನ ದೂತರು ಜಪಶಾಲೆ ಬೇಯುವದನ್ನೂ ನಂದರ ಗುಡಾರ ಸೂರೆ ಹೋದುದನ್ನೂ ಭದ್ರಭಟಾದಿಗಳ ಸೇನೆಗಳು ದೂರವಾದುದನ್ನೂ ಮೈಗಾವಲಿನ ಸೇನೆ ನಷ್ಟವಾದುದನ್ನೂ ನಂದರು ಜಪಶಾಲೆಗೆ ಹೋದುದನ್ನೂ ಕಂಡು, "ಇದೇನೋ ಅನರ್ಥ ಸಂಭವಿಸಿತೆಂ"ದು ಭಯಭ್ರಾಂತರಾಗಿ, "ಏನು ಅಪರಾಧ ಬಂದರೂ ಬರಲಿ" ಎಂದು ರಾಕ್ಷಸನಂ ತಟ್ಟಿ ಎಚ್ಚರವಂ ಮಾಡಿ, ಕುಳಿತ ಬಳಿಕ, ಕೈಮುಗಿದಿಂತೆಂದರು :

"ಬುದ್ಧೀ, ತಮಗೆ ಆಕಸ್ಮಿಕನಿದ್ರೆ ಸಂಭವಿಸಿತು. ನಂದರು ಜಪಶಾಲೆಗೆ ಹೋದ ಬಳಿಕ ಜಪಶಾಲೆಯು ಹತ್ತಿ ಬೇಯುತ್ತಲಿದೆ. ನಂದರ ಮೈಗಾವಲಿನ ಸೇನೆಯು ಸೆರೆಸಿಕ್ಕಿದ ಮಲಯಕೇತುವಂ ಬಳಸಿ ಬರುವ ಕಾಶೀರಾಯನ ಸೇನೆಯಿಂದ ಸಂಹೃತವಾಗಿ, ನಂದರ ಗುಡಾರವು ಸೂರೆಹೋಯಿತು. ಭದ್ರಭಟಾದಿಗಳ ಸೇನೆಯೆಲ್ಲವೂ ನಂದರ ಅಪ್ಪಣೆ ಯಿಂದಲೇ ಕಾಶೀರಾಯರಿಗೆ ಕೈಸೆರೆಯಾಗಿ ಸಿಕ್ಕಿದ ಮಲಯಕೇತುವಂ ಬಿಡಿಸುವದಕ್ಕೆ ಬರುತ್ತಿರುವ ಪರ್ವತರಾಯಸೇನೆ ಸಂಗಡ ಯುದ್ಧಕ್ಕೆ ತೆರಳಿ ಹೋಯಿತು. 'ಇದೇನು ವಿಪರೀತವೋ' ಎಂದು ಭೀತಿಯಿಂ ಬಂದು ವಿಜ್ಞಾಪಿಸಿದೆವು" ಎನಲು,

ಅದಂ ಕೇಳಿ ರಾಕ್ಷಸನು ವಿಸ್ಮಯಗೊಂಡು, ತ್ವರಿತದಿಂದೆದ್ದು, "ತನಗೆ ನಿದ್ರೆ ತಟ್ಟಿದ

ಸಮಯದಲ್ಲಿ ಶತ್ರುಗಳು ಮೈಗಾವಲಿನ ಸೇನೆಗೂ ನಂದರಿಗೂ ವಿಯೋಗವನ್ನುಂಟು ಮಾಡಿ, ನಂದರು ಜಪಶಾಲೆಗೆ ಹೋಗುವಂತೆ ಕಪಟವನ್ನಾಚರಿಸಿ, ಗುಡಾರದ ಬಳಿಯ ಮೈಗಾವಲಿನ ಸೇನೆಯಂ ಸಂಹರಿಸಿ, ಗುಡಾರವಂ ಸೂರೆಗೊಂಡಿರಬೇಕು. ಇದಲ್ಲದೆ ಕಾಶೀರಾಜನ ವ್ಯಾಜವಂ ತೋರಿಸಿ, ಭದ್ರಭಟಾದಿಗಳ ಸೇನೆಯು ನಂದರಂ ಬಿಟ್ಟು ಹೋಗುವಂತೆ ಮಾಡಿರಬೇಕು. ಹೋ ಹೋ ಈಗ ತಿಳಿಯ ಬಂತು. ನಾನು ಕಾಶೀರಾಯನ ಮುಖದಿಂದ ಮಾಡಿದ ಕಪಟವಂ ಶತ್ರುಗಳು ತಿಳಿದು, ಅದಕ್ಕೆ ಪ್ರತಿಕಪಟವನ್ನಾಚರಿಸಿ, ನಂದರಿಗೆ ವಿಪತ್ತನ್ನುಂಟುಮಾಡಿದಂತೆ ತೋರುತ್ತೆ. ಶತ್ರುನಾಶಕ್ಕೆ ನಾನು ಮಾಡಿದ ಕಪಟವೆಲ್ಲವೂ ಶತ್ರುಗಳಿಗೆ ಅನುಕೂಲವಾಗಿ ನಂದರ ವಿಪತ್ತಿಗೆ ಕಾರಣವಾಯಿತು. ನಂದರೇನಾದರೋ ? ಭಾಗ್ಯಹೀನನಾದ ತನಗೆ ಈ ಅನಿಷ್ಟನಿದ್ರೆ ಯಾಕೆ ಸಂಭವಿಸಿತೋ?" ಎನ್ನುತ್ತ, ಕವಚವಂ ತೊಟ್ಟು, ತುರಗವನ್ನೇರಿ, ಆಯುಧಸಮೇತನಾಗಿ ನೇಜ್ಯವಂ ಪಿಡಿದು ರಾಕ್ಷಸನು ವೇಗದಿಂ ತೆರಳುತ್ತಿರಲು,

ಅಷ್ಟರಲ್ಲಿಯೇ ಶತ್ರುಗಳ ಜಯಭೇರಿ ಶಬ್ದವೂ ಅವರ ಕೊಲಾಹಲವೂ ದಿಕ್ತಟಗಳಂ ಮುಚ್ಚುವಂತೆ ಕೇಳಿಸುತ್ತಿರಲು, "ಅಕಟಕಟ ಶತ್ರುಗಳ ಜಯಭೇರಿ ಶಬ್ದವು ಕೇಳಿಸುತ್ತಲಿದೆ. ನಂದರು ನಷ್ಟರಾದರೋ ಏನೋ ?" ಎನ್ನುತ್ತ, ಸೂರೆಹೋದ ಗುಡಾರವಂ ಉರುಳಿರುವ ಪೆಣಗಳಂ ನೋಡುತ್ತ, ಜಪಶಾಲೆ ಬೇಯುವ ಧೂಮರಾಜಿಯಿಂದ ಭೂಮ್ಯಂತರಿಕ್ಷ ದಿಕ್ತಟಗಳು ಮುಸುಕಿ, ಶತ್ರುಸಂಘವು ಕಾಣಿಸದೆ, ತುರಗವಂ ಚಬುಕುಮಾಡುತ್ತ ಬರುತ್ತಿರಲು, ನಂದರ ತುರಗಗಳಿಗೆ ಅಲಂಕರಿಸಿದ್ದ ಅನರ್ಘ್ಯಾಭರಣಗಳನ್ನು ತಮ್ಮ ತುರಗಗಳಿಗೆ ಅಲಂಕರಿಸಿಕೊಂಡು, ನಂದರಿಗೆ ಹಿಡಿಯುತ್ತಿದ್ದ ಮುತ್ತಿನ ಶ್ವೇತಛತ್ರಗಳಂ ನನಗೆ ತನಗೆ ಎಂದು ಹರಿದು ಹಂಚಿಕೊಳ್ಳುತ್ತ, ತುರಗಗಳಂ ಓಡಿಸುತ್ತ ಬರುತ್ತಿರುವ ಶತ್ರು ಸೇನಾಜನವಂ ನೋಡಿ,

"ಹಾ ಹಾ ನಂದರು ಸಂಹೃತರಾದುದು ಸಿದ್ಧವೇ ಸರಿ. ಅವರು ಜೀವಂತರಾಗಿ ಇದ್ದರೆ ಅವರ ತುರಗಾಭರಣಗಳೂ ಅವರಿಗೆ ಹಿಡಿಯುವ ಛತ್ರಗಳು ಸಹ ಶತ್ರುಗಳ ಪಾಲಾಗುವದುಂಟೇ ? ಹಾ ದೈವವೇ, ಏನು ವಿಪತ್ತಂ ತಂದುಬಿಟ್ಟೆ ; ಹಾ ನಂದಭೂಪತಿಗಳಿರ, ಎಂದಿಗೂ ನಿಮ್ಮನ್ನಗಲದೆ ಸಮ್ಮಾನಿತನಾಗಿ ಇದ್ದು, ನಿಮ್ಮ ಆಪತ್ಸಮಯಕ್ಕೆ ಒದಗದೆ ಇದ್ದ ನನ್ನ ಜನ್ಮವಂ ಸುಡಬೇಡವೇ ? ಇನ್ನು ಯಾರನ್ನರಸುಗಳಿರಾ ಎಂದು ಕರೆದೇನು ? ನಿಮ್ಮಂ ಬಿಟ್ಟು ನಾನಿದ್ದು ಫಲವೇನು ? ನಿಮ್ಮಂ ಕಪಟದಿಂದ ಸಂಹರಿಸಿದ ಶತ್ರುಗಳ ಮೇಲೆ ಬಿದ್ದು ಅವರಂ ಸಂಹರಿಸಿ ಅವರಿಂದ ನಾನು ಸಂಹೃತನಾಗಿ ನೀವು ಹೋದ ಗತಿಗೆ ನಾನೂ ಬರುವೆನು" ಎಂದು ಹೇಳುತ್ತ, ರೋಷದಿಂ ಖಡ್ಗವಂ ಹಾರಿಸುತ್ತ ಹೋಗುತ್ತಿರುವ ರಾಕ್ಷಸನ ತುರಗಕ್ಕೆ ಅಡ್ಡಲಾಗಿ ತನ್ನ ತುರಗವಂ ನಿಲ್ಲಿಸಿ, ಆತನ ಮೈಗಾವಲಿನ ಜನಕ್ಕೆ ಗೊತ್ತುಗಾರನಾದ ವಿನತನೆಂಬವನು ರಾಕ್ಷಸನಿಗಿಂತೆಂದನು :

"ಸ್ವಾಮಿ ಅಮಾತ್ಯರೇ, ಒಂದು ವಿಜ್ಞಾಪನೆ ಉಂಟು. ಅವಧರಿಸಬೇಕು. ಲೋಕದಲ್ಲಿ ಸ್ವಾಮಿಭಕ್ತರಾದವರು ಸ್ವಾಮಿ ಮೆಚ್ಚುವಂತೆ ಸ್ವಾಮಿಕಾರ್ಯನಿರ್ವಾಹವಂ ಮಾಡಿ ಯಶಸ್ಸಂಪಾದಿಸುವದು ವಿಹಿತವು. ಈಗ ಪ್ರಭುವಾದ ನಂದರು ಅನ್ಯಥಾ ಆದ ಬಳಿಕ ನೀವು ಮಾಡುವ ನಿರ್ವಾಹವಂ ನೋಡಿ ಸಂತೋಷಪಡುವರ್‍ಯಾರು ? ಆದರೂ ಪ್ರಯೋಜನ

ವೇನು ? ಸ್ವಾಮಿಯಾದ ನಂದರ ನಿಮಿತ್ತದಿಂದ ಪರರಾಯರು ನಿಮಗೆ ಶತ್ರುಗಳಾಗಿ ಇದ್ದರು. ಈಗ ನಿಮಗೆ ಇವರಿಗೆ ಶತ್ರುತ್ವವೆಂದರೇನು ? ಯುದ್ಧದಲ್ಲಿ ಹತವಾಗುವದು ಕ್ಷತ್ರಿಯಧರ್ಮವಲ್ಲದೆ ಬ್ರಾಹ್ಮಣೋತ್ತಮರಾದ ನಿಮಗೆ ಧರ್ಮವಲ್ಲ. ದ್ವಾಪರದಲ್ಲಿ ಶಸ್ತ್ರಾಚಾರ್ಯರೆಂದು ಪ್ರಸಿದ್ಧರಾದ ದ್ರೋಣರು ಶಸ್ತ್ರವಿದ್ಯದಿಂದಲೇ ಜೀವಿಸಿ, ಅವಸಾನದಲ್ಲಿ 'ಬ್ರಾಹ್ಮಣರಿಗೆ ಶಸ್ತ್ರಮುಖದಿಂ ಸದ್ಗತಿಯಿಲ್ಲ'ವೆಂದು ತಿಳಿದು ಶಸ್ತ್ರಸಂನ್ಯಾಸವಂ ಮಾಡಿ ಬ್ರಾಹ್ಮಣರಿಗೆ ವಿಹಿತವಾದ ಧ್ಯಾನದಿಂದಲೇ ಸದ್ಗತಿಯಂ ಸಂಪಾದಿಸಿದರು.

ಆದುದರಿಂದ ಈ ಸೇವಕವೃತ್ತಿಯು ಹೀನಜೀವನವು. ವೃಥಾಯಾಸದಿಂ ಫಲವೇನು ? ನೀವಾದರೂ ಜೀವಂತರಾಗಿ ಇದ್ದರೆ, ವೃದ್ಧರಾಯರೂ ರಾಣಿವಾಸದವರಾದ ಪತಿವ್ರತೆಯರಾದ ನಂದರ ಮಾತೃಪತ್ನಿಯರುಗಳ ಮಾನಸಂರಕ್ಷಣೆಯೂ ಶತ್ರುಗಳಾದ ಈ ಮ್ಲೇಚ್ಛರಿಂದ ಸ್ಖಲಿತವಾಗದೆ ನಿಮ್ಮಿಂದ ರಕ್ಷಿತವಾದೀತು. ಇನ್ನು ನೀವು ಮಾಡುವ ಸ್ವಾಮಿಕಾರ್ಯವೇನಿದ್ದರೂ ಆ ವಿಷಯದಲ್ಲಿ ಉಪಯೋಗಿಸಲಿ" ಎಂದು ಪ್ರಕೃತೋಚಿತವಾಗಿ ಕ್ಷತ್ರಿಯಬೀಜೋತ್ಪನ್ನನಾದ ವಿನತನೆಂಬವನು ಹೇಳುತ್ತಿರಲು,

ಅದಂ ಕೇಳಿ, "ಈ ವಿನತನು ನಮಗೆ ಮೈಗಾವಲಿನವರಾದರೂ ಕ್ಷತ್ರಿಯಬೀಜೋತ್ಪನ್ನನಾದುದರಿಂದ, ಪ್ರಕೃತದಲ್ಲಿ ಇವ[ನು] ಹೇಳಿದಂತೆ ನಡೆಯುವದು ಯುಕ್ತವಲ್ಲದಿದ್ದರೂ, ಭಾವಿಸಿ ನೋಡಿದರೆ ಯುಕ್ತವಾಗಿ ಇದೆ" ಎಂದು ತಿಳಿದು ರಾಕ್ಷಸನು, ಇನ್ನೇನೂ ಕರ್ತವ್ಯ ತೋರದೆ ಸ್ತಬ್ಧನಾಗಿ, ಕ್ಲೇಶಬಡುತ್ತ ಇದ್ದ ಬಳಿಯಲ್ಲೇ ಇರುತ್ತಿರಲು,

ಅತ್ತಲಾ ನಂದರಂ ಬಳಸಿ ದೂರದಲ್ಲಿ ನಿಂತಿದ್ದ ಶತ್ರುಸಮೂಹವು ಶೇಖರಾದಿ ಸೇನಾಪತಿಗಳು ಸನ್ನದ್ಧರಾಗಿ ಆ ರಣಾಂಕಣಕ್ಕೆ ಬರುವದಂ ತಿಳಿದು, "ಇನ್ನು ಮೇಲೆ ಏನಾದರೂ ಮಾಡಿ ಸಾಹಸವಂ ಮಾಡಿ ನಂದರಂ ನಿಗ್ರಹಿಸದಿದ್ದರೆ ತಮ್ಮಂ ಹೇಡಿಗಳೆಂದು ಜರೆದಾರು" ಎಂದು ಒಂದೇ ವೇಳೆ ಪ್ರಾಸತೋಮರಗದಾಕುಂತಂಗಳನ್ನು ನಂದರ ಮೇಲೆಸೆಯುತ್ತ ಕವಿಯುತ್ತಿರಲು, ಕೆರಳಿದ ಸಿಂಹಗಳಂತೆ ಹಾರಿ ಕುಪ್ಪಳಿಸುತ್ತ, ವೃಕ್ಷಾಗ್ರಗಳ ದೆಸೆಯಿಂದ ಫಲಗಳನ್ನುದುರಿಸುವಂತೆ ಒಂದೊಂದು ಖಡ್ಗಪ್ರಹಾರಕ್ಕೆ ನಾಲ್ಕಾರು ಶತ್ರು ಶಿರಸ್ಸುಗಳನ್ನು ಚಂಡಾಡಿದಂತೆ ನೆಲಕ್ಕೆ ಕೆಡಹುತ್ತಿರಲು,

ಆಗ ಶೇಖರಾದಿ ಸೇನಾನಾಯಕರು ಅದಂ ನೋಡಿ, "ತಮ್ಮ ಸೇನೆಯಲ್ಲಿ ಮೂರು ಪಾಲು ಸೇನೆ ಹತವಾಯಿತು; ಇನ್ನೂ ನಂದರ ಪರಾಕ್ರಮವು ಹೆಚ್ಚಿ ಬರುತ್ತಲಿದೆ" ಎಂದು ಮೆಚ್ಚಿ, "ವೀರನಹುದೋ ರಣಶೂರನಹುದೋ" ಎಂದು ನಂದರಂ ಶ್ಲಾಘಿಸುತ್ತಿರಲು, ಶತ್ರುಗಳಂ ಸ್ತೋತ್ರವಂ ಮಾಡುವದಂ ಕೇಳಿ ಚಾಣಕ್ಯನು, ಹವ್ಯವಾಹನನಿಗೆ ಆಜ್ಯಾಹುತಿಯಂ ಕೊಟ್ಟಂತೆ ಬಹುಕೋಪದಿ[ಂ] ಜ್ವಲಿಸುತ್ತ, ದಂಡವನ್ನೆತ್ತಿಕೊಂಡು "ನಂದರಂ ನಿಮಿಷದಲ್ಲಿ ನಿಗ್ರಹಿಸುವೆನೆಂ"ದು ಘರ್ಜಿಸಿ, ಅವರ ಮೇಲೆ ಬೀಳುವದಕ್ಕೆ ಯತ್ನವಂ ಮಾಡಲು, ಅದಂ ಕಂಡು ಶೇಖರಾದಿ ಸೇನಾನಾಯಕರು ಭೀತರಾಗಿ, ಚಂದ್ರಗುಪ್ತ ಚಾಣಕ್ಯರಂ ಕುರಿತು,

"ಸ್ವಾಮಿ, ದರ್ವಿಯಂ ಸಂಪಾದಿಸಿ ಇರಲು ಹಸ್ತವಂ ಸುಡಿಸಲೇತಕ್ಕೆ ? ನಾವೆಲ್ಲರೂ ನಿಮ್ಮ ಸೇವಕರಾಗಿ ಇರುವಲ್ಲಿ ತಮಗೆ ಆಯಾಸವೇನು ನಿಮಿತ್ತ ? ನಾವು ಮಾಡುವ ಯದ್ಧವಂ ದೂರದಿಂದಲೇ ನೋಡಬಹುದೆಂ"ದು ಹೇಳಿ, ಅವರಂ ತಡೆದು ನಿಲ್ಲಿಸಿ,

ಶೇಖರಾದಿ ಸೇನಾನಾಯಕರು ಖಡ್ಗ ಖೇಡ್ಯಾಯುಧಗಳಂ ಪಿಡಿದು ನಂದರ ಮೇಲೆ ಕವಿಯುತ್ತಿರಲು, ಶಬರವರ್ಮನಿಗೂ ಜ್ಯೇಷ್ಠನಂದನಿಗೂ ಮಹಾಯುದ್ಧವಾಗಲು, ಶಬರ ವರ್ಮನ ಖಡ್ಗಪ್ರಹಾರವಂ ಖೇಡ್ಯದಿಂದ ತಪ್ಪಿಸಿಕೊಂಡು, ಲಾಘವದಿಂದ ಹಾರಿ, ಪರುಷವಾದ ತನ್ನ-ಖಡ್ಗಪ್ರಹಾರದಿಂದ ಆ ಶಬರವರ್ಮನ ಶಿರಸ್ಸಂ ಛೇದಿಸಲು, ಅದಂ ನೋಡಿ ಚಂದ್ರಗುಪ್ತನು ಕ್ರುದ್ಧನಾಗಿ ತನ್ನ ಕೈಕೋದಂಡವಂ ಆಕರ್ಣಾಂತವಾಗಿ ಸೆಳೆದು, ಅರ್ಧಚಂದ್ರಬಾಣದಿಂದ ಜ್ಯೇಷ್ಠನಂದನ ಖಡ್ಗಸಮೇತವಾದ ಹಸ್ತವಂ ಛೇದಿಸಿ, ತಾನು ಕುಳಿತಿದ್ದ ತುರಗವಂ ಹಾರಿಸಿ, ಭಾರವಾಸಿಯಾದ ಭಲ್ಲವಂ ಆ ನಂದನ ವಕ್ಷಸ್ಥಳಕ್ಕೆ ಗುರಿಮಾಡಿ ತೂಗಿ ಇಡಲು, ಆ ಭಲ್ಲವು ವಕ್ಷಸ್ಥಳವಂ ಭೇದಿಸಿಕೊಂಡು ಹುತ್ತವಂ ಹೊಗುವ ಸರ್ಪದಂತೆ ಭೂಮಿಯಲ್ಲಿ ನೆಟ್ಟುಕೊಳ್ಳುತ್ತಿರಲು, ವಜ್ರಪ್ರಹಾರದಿಂದ ಭೂಮಿಗೆ ಉರುಳುವ ಗಿರಿಶಿಖರದಂತೆ ಜ್ಯೇಷ್ಠನಂದನು ಭೂಮಿಯಲ್ಲಿ ಬಿದ್ದು ಗತಪ್ರಾಣ ನಾದನು.

ಸೋದರಮಾವನಾದ ಶಬರವರ್ಮನು ಹತನಾದುದಂ ಕಂಡು ಶೇಖರನು ಕ್ರುದ್ಧನಾಗಿ, ನಂದರ ಮೇಲೆ ಬಿದ್ದು ಯುದ್ಧವಂ ಮಾಡುತ್ತ, ಉಪನಂದನ ಮೇಲೆ ಬಿದ್ದು, ಅವನ ಖಡ್ಗಪ್ರಹಾರವಂ ಖೇಡ್ಯದಿಂದ ಹೊರತಟ್ಟಿ, ತನ್ನ ಕೈಖಡ್ಗದಿಂದ ಉಪನಂದನ ಶಿರಸ್ಸಂ ಛೇದಿಸಲು, ಅದಂ ನೋಡಿ ಚಿತ್ರವರ್ಮನು ಕನಿಷ್ಠನಂದನನ್ನು ಪ್ರಹರಿಸಿದನು. ತನ್ನ ಖಡ್ಗದಿಂ ಶಿರಸ್ಸು 'ಶಿವಶಿವಾ' ಎಂದು ನೆಲಕ್ಕೆ ಬೀಳಲು, ವಿನಂದನು ಕಾಂಭೋಜಪತಿಯ ಮೇಲೆ ಯುದ್ಧವಂ ಮಾಡಿ, ಅವನ ಪರಿವಾರವ[ಂ] ಛೇದಿಸಿ ಖಡ್ಗದಿಂ ಅವನ ಶಿರವ ನ್ನಿಳುಹಲು, ಅದಂ ಕಂಡು ತೀವ್ರದಿಂ ಚಿತ್ರವರ್ಮನು ತನ್ನ ಕೈಯಲಿದ್ದ ಗದೆಯಂ ಬೀಸಿ ವಿನಂದನ ವಕ್ಷಸ್ಥಳಕ್ಕೆ ಎಸೆಯಲು, ಆ ಪ್ರಹಾರದಿಂದ ಎದೆ ಒಡೆದು ರಕ್ತವಂ ಕಾರುತ್ತ ವಿನಂದನು ನೆಲಕ್ಕೆ ಬಿದ್ದು ಅಸುವಂ ಬಿಟ್ಟನು. ಲೋಕನಂದನ ಸಂಗಡ ಯುದ್ಧವಂ ಮಾಡುತ್ತಿರುವ ಮಗಧಾಧಿಪತಿಯ ಬಾಹುಯುಗ್ಮವಂ ಖಡ್ಗದಿಂ ಛೇದಿಸಲು, ಅದಂ ಕಂಡು ಸಿಂಧುಷೇಣನು ರೋಷಾವೇಶದಿಂ ಅವನ ಸಮ್ಮುಖಕ್ಕೆ ತುರಗವಂ ಹಾರಿಸಿ, ತನ್ನ ಕೈಯಲ್ಲಿದ್ದ ಪ್ರಾಸದಿಂದ ಲೋಕನಂದನಂ ಇರಿದು ಕೆಡಹಲು, ಪುಷ್ಕರಾಕ್ಷನು ಅನು ನಂದನಂ ಅಡ್ಡಹಾಕಿ ನಿಲ್ಲಿಸಿ ತನ್ನ ಕೈಚಕ್ರಾಯುಧದಿಂದ ಅವನ ತಲೆಯಂ ನೆಲಕ್ಕೆ ಉರುಳಿ ಸಲು, ಪಾರಸೀಕಪತಿ ಮೇಘನಾದನು ಕುರುನಂದನ ಸಮ್ಮುಖಕ್ಕೆ ಹೋಗಿ, ಮುಸಲ ಪ್ರಹಾರದಿಂದ ಅವನ ತೊಡೆಗಳೆರಡು ಮುರಿದು ಭೂಮಿಯಲ್ಲಿ ಹೊರಳುತ್ತಿರಲು,

ಇದೆಲ್ಲವಂ ನೋಡಿ ಚಾಣಕ್ಯನು ಶೇಖರನಂ ಕುರಿತು, "ಅಯ್ಯ ಸೇನಾಪತಿಯೇ, ಇವರೊಡನೆ ಎಷ್ಟುಹೊತ್ತು ವಿನೋದಯುದ್ಧವು ? ಉಳಿದು ಇರುವ ಮೂರು ಮಂದಿ ನಂದರಂ ಪಾಶಗಳಂ ಬೀಸಿ ಹಿಡಿದು ಬಂಧಿಸಿ, ಕಾಲುಗಳಿಗೆ ನೇಣುಗಳಂ ಬೀರಿ ಎಳಸಿ ಸಂಹರಿಸುವನಾಗು" ಎನಲು, ಅದೇ ರೀತಿಯಲ್ಲಿ ಶೇಖರನು ನೀಟಗಳಾದ ಉರುಳುಗಳಂ ಬೀಸಿ ನೆಲಕ್ಕೆ ಕೆಡವಿ, ನಂದ[ರು] ಮೂವರಂ ಹಿಡಿದು ಬಂಧಿಸಿ, ಬಹುವಾಗಿ ಪ್ರಹರಿಸು ತ್ತಿರಲು, ಅವರು ಚಂದ್ರಗುಪ್ತ ಚಾಣಕ್ಯರಂ ಕುರಿತು,

"ಎಲೈ ಕುಲಘಾತಕನಾದ ಚಂದ್ರಗುಪ್ತನೇ, ಎಲೈ ಕಿರಾತಸದೃಶನಾದ ಬ್ರಾಹ್ಮಣಾ ಧಮನೇ, ಶತ್ರುವಾದವನಾದರೂ ಆಯುಧರಹಿತನಾಗಿ ಕೈಗೆ ಸಿಕ್ಕಿದ ಬಳಿಕ ಹೀಗೆ ಬಾಧಿಸು

ವದು ಧರ್ಮವೇ ?" ಎನಲು, ಆ ಮಾತಿಗೆ ಚಂದ್ರಗುಪ್ತನು, "ಎಲೈ ನಂದಾಧಮರುಗಳಿರಾ, ನೀವು ಕ್ರೂರಕರ್ಮಿಗಳಾಗಿ ಅಕಾರಣಮತ್ಸರದಿಂದ ನನ್ನ ಪಿತೃಸೋದರವರ್ಗವಂ ನೆಲ ಮಾಳಿಗೆಯಲ್ಲಿ ಕಪಟವಂ ಮಾಡಿ ಅನ್ನೋದಕವಂ ಕೊಡದೆ ಸಂಹರಿಸಿದ ಮಹಾಧರ್ಮಾ ಚರಣೆಗೆ ಇಹದಲ್ಲಿಯೇ ಪ್ರಾಪ್ತವಾದ ಫಲವಂ ನೀವೇ ಅನುಭವಿಸಬೇಕು" ಎನಲು,

ಚಾಣಕ್ಯನು "ಎಲೈ ಕ್ಷತ್ರಿಯಕೀಟಗಳಿರಾ, ಅತಿಥಿಯಾಗಿ ಪಂಕ್ತಿಯಲ್ಲಿ ಕುಳಿತಿದ್ದ ಈ ನಮ್ಮಂ ಅಪರಾಧವಂ ಕಾಣದೆ ಬ್ರಾಹ್ಮಣಾಧಮನೆಂದು ಮೊದಲು ಅಪಮಾನವಂ ಮಾಡಿ ದ್ದಕ್ಕೆ ನಿಮಗೆ ಈ ದುರ್ದೆಸೆ ಉಂಟಾಯಿತು. ಅದಂ ಈಗಲೇ ಮರೆತು, ಪುನಃ ಅದೇ ಪರುಷವಾಕ್ಯವನ್ನಾಡಿದುದಕ್ಕೆ ಈ ಫಲವಂ ಮುಂದೆ ನಿಮ್ಮವರನುಭವಿಸುವರು" ಎಂದು ಹೇಳಿ, 'ಇನ್ನು ಈ ದುರಾತ್ಮಕರ ಮುಖವಂ ನೋಡಬಾರದೆಂ'ದು ಹಿಂತಿರುಗಿ, ಶೇಖರನಂ ನೋಡಿ,

"ಅಯ್ಯ ಸೇನಾಪತಿಯೇ, ಈಗಲೇ ಈ ನಂದರ ಒಂಬತ್ತು ಶಿರಸ್ಸುಗಳಂ ತಂದು ತೋರಿಸುವನಾಗು" ಎಂದು ನೇಮಿಸಿ, ಚಂದ್ರಗುಪ್ತನ ಸಮೇತನಾಗಿ ಚಾಣಕ್ಯನು ತಾನಿ ದ್ದೆಡೆಗೆ ಬರುತ್ತಿರಲು, ಗಜಾರೂಢನಾಗಿ ಪುತ್ರಸಮೇತನಾಗಿ ಇದೆಲ್ಲವಂ ನೋಡುತ್ತಿದ್ದ ಪರ್ವತರಾಯನ ಮನಸ್ಸಿನಲ್ಲಿ ಚಾಣಕ್ಯನ ಸಾಹಸಕ್ಕೆ ಭಯವೂ ನಂದರು ಆಕಸ್ಮಿಕವಾಗಿ ಶತ್ರುಕಪಟಪಾಶಕ್ಕೆ ತಗುಲಿದ್ದರಿಂದ ಆಶ್ಚರ್ಯವೂ ಶತ್ರುಗಳಾದ ನಂದರ ಸಂಹಾರಕ್ಕೆ ಸಂತೋಷವೂ ಉಂಟಾಗಿ ತಾನಿದ್ದೆಡೆಗೆ ತೆರಳುತ್ತಿರಲು, ಚಾಣಕ್ಯನು ನೇಮಿಸಿದ ಮೇರೆಗೆ ಶೇಖರನು ತನ್ನ ಭಟರಿಗೆ ಆಜ್ಞಾಪಿಸಲು, ಕುಂಡಲ ತುರಾಯಿಗಳಿಂ ಶೋಭಿತಗಳಾದ ನಂದರ ಶಿರಸ್ಸುಗಳಂ ತೆಗೆದುಕೊಂಡು ಭಟರು ಬರುತ್ತಿರಲು, ಆಗ ವೀರಭಟರ ಸಿಂಹ ನಾದಗಳೂ ಜಯಭೇರೀಶಬ್ದಗಳೂ ಸಮುದ್ರಘೋಷದಂತೆ ಭೂಮಂಡಲವಂ ಮುಚ್ಚು ತ್ತಿರಲು, ಅದಂ ಕೇಳಿ ನಂದಸೇನೆಗಳು ಶತ್ರುಗಳ ಕಪಟದಿಂದ ನಂದರು ನಷ್ಟವಾದರೆಂದು ತಿಳಿದು, 'ಇನ್ನು ಯಾರಿಗೋಸುಗ ಯುದ್ಧವಂ ಮಾಡಬೇಕೆಂ'ದು ಹೇಳಿಕೊಳ್ಳುತ್ತ ಸ್ವೇಚ್ಛಾ ನುಸಾರವಾಗಿ ಪಲಾಯನಂಗೈಯುತ್ತಿರಲು,

ಸ್ತಬ್ಧನಾಗಿ ನಿಂತಿದ್ದ ರಾಕ್ಷಸನು ನಂದರು ಸಂಹೃತರಾದುದಂ, ಶತ್ರುಸೇನೆ ತಮ್ಮ ಪಾಳಯಕ್ಕೆ ಹೋಗುವ ಉತ್ಸಾಹವಂ ನೋಡಿ, ಮೌರ್ಯವಧದೋಷದಿಂದ ಕ್ಷಣಿಕಚಿತ್ತ ನಾದ ಪುರುಷನೈಶ್ವರ್ಯದಂತೆ ನಂದರ ಭಾಗ್ಯವೆಲ್ಲವೂ ಬಯಲಾಯಿತೆಂದು ದುಃಖಪಡುತ್ತ, ತನ್ನ ತುರಗವಂ ಚಬುಕುಮಾಡಿ ಪಟ್ಟಣದ ಬಾಗಿಲಿಗೆ ಬಂದು ನಿಂತು, "ಶತ್ರುಗಳು ಬರುತ್ತಲಿದ್ದಾರೆ, ಪುರದ ಬಾಗಿಲುಗಳಂ ಹಾಕಿ ಜಾಗ್ರತೆಯಾಗಿ ಕಾದಿರಿ" ಎಂದು ದ್ವಾರ ರಕ್ಷಕರಾದ ಸೇನಾಜನಕ್ಕೆ ನೇಮಿಸಿ,

ತನ್ನ ಮನೆಗೆ ಬಂದು ಮಂಚದ ಮೇಲೆ [೧]ಮೊಕೊಡೆ[೧]ಯನಾಗಿ ಬಿದ್ದು, "ಹಾ ಭೂಪತಿ ಗಳಾದ ನಂದರುಗಳಿರಾ, ನೀವು ಮಾಡಿದ ಆದರಣೆಗಳಂ ಎಷ್ಟು ದಿನಗಳಿಗೆ ಮರೆಯಲಿ ? ಈಗ ನನ್ನ ಸಾಹಸ ಬಲ ಬುದ್ಧಿ ಪೌರುಷಗಳು ಲುಬ್ಧ ಗಳಿಸಿದ ಧನಗಳಂತೆ ನಿಷ್ಫಲವಾದವು. ನಿಮ್ಮ ತಂದೆ ತಾಯಿಗಳಿಗೆ ಏನು ಹೇಳಲಿ ? ನೀವು ಕುಳಿತ ಸಿಂಹಾಸನವೂ ನಿಮ್ಮ ರಾಜ್ಯವೂ

---

೧. ಮೊಕಡೆ (ಕ)

ವಸ್ತುಗಳೆಲ್ಲವೂ ಶತ್ರುಗಳ ಅಧೀನವಾದುದಂ ಕಂಡು, ತುಚ್ಛಗಳಾದ ಪ್ರಾಣಗಳಂ ವಹಿಸಿಕೊಂಡು, ಸಿಂಹಕ್ಕೆ ಸಿಕ್ಕಿದ ಹುಲ್ಲೆಯಂತೆ ಶತ್ರುಗಳ ಅಧೀನದಲ್ಲಿ ನಾನಿದ್ದು ಪ್ರಯೋಜನವೇನು ? ಈಗ ಸೇನಾಪತಿಗಳೆಲ್ಲರೂ ಚಂದ್ರಗುಪ್ತನನ್ನನುಸರಿಸುವರು. ಅರಸುಗಳಾದ ನಿಮಗೆ ಆಪ್ತನಾದ ನಾನು ಸಿಕ್ಕಿದರೆ ಸ್ವಜನಸಮೇತವಾಗಿ ದ್ವೇಷಿಗಳ ಪಕ್ಷದವನೆಂದು ನನ್ನಂ ನಿಗ್ರಹಿಸಿಯಾರು" ಎಂದು ಹಂಬಲಿಸುತ್ತಿರಲು,

ಹೊರಗೆ ಯುದ್ಧದಲ್ಲಿ ಸಂಹೃತರಾದ ನಂದರ ಶಿರೋಭೂಷಣಸಮೇತವಾದ ಶಿರಸ್ಸುಗಳಂ ತೆಗೆದುಕೊಂಡು ಶೇಖರಸೇನೆಯ ಭಟರು ಚಾಣಕ್ಯನ ಮುಂದೆ ತಂದಿಟ್ಟು, "ಈ ಒಂಬತ್ತು ನಂದರ ಶಿರಸ್ಸುಗಳು" ಎಂದು ಹೇಳಲು, ಕಸ್ತೂರೀತಿಲಕಗಳಿಂದಲೂ ಕಂಠದಲ್ಲಿ ಲೇಪಿಸಿದ ಅನುಲೇಪನಗಳಿಂದಲೂ ರತ್ನಖಚಿತ ತುರಾಯಿ ಕುಂಡಲಗಳಿಂದ[ಲೂ] ಶೋಭಿಸುತ್ತ, ಅವುಡುಗಳಂ ಕಚ್ಚಿ, ಅರೆಗಣ್ಣು ಮುಚ್ಚಿ, ನಿದ್ರೆಯಂ ಮಾಡುವಂತೆ ಇರುವ ಶಿರಸ್ಸುಗಳಂ ನೋಡಿ, "ಇವರು ಮಾಡಿದ ದುರ್ವಿನಯವೇ ಇವರಿಗೆ ಈ ದುರ್ದಸೆಯನ್ನು ತಂದು ಕೊಟ್ಟಿತು. ಆದರೂ ಯುದ್ಧದಲ್ಲಿ ಹಿಮ್ಮೆಟ್ಟದೆ ಹತರಾಗಿ ಇರುವದ್ದರಿಂದ ಇವರಿಗೆ ಸದ್ಗತಿ ಉಂಟು" ಎಂದು ಚಾಣಕ್ಯನು ಹೇಳುತ್ತ,

ಚಂದ್ರಗುಪ್ತನಂ ನೋಡುತ್ತ, 'ಎಲೈ ಕುಮಾರಕನೇ, ಈ ನಂದರ ಶಿರೋಭೂಷಣ ರತ್ನಪ್ರಭಾವಲೋಕನದಿಂದ ನಿನ್ನ ಪಿತೃ ಸೋದರ ವಧೆಯಿಂದುಂಟಾದ ನಿನ್ನ ದುಃಖಾಂಧಕಾರವು ನಿಶ್ಶೇಷವಾಗಿ ತೊಲಗಲಿ ; ಇನ್ನು ದುಃಖವಂ ಬಿಡು ; ವೈರವೆಂಬುದು ಶತ್ರುಗಳ ಮರಣಾವಧಿಕವು. ಗಂಗಾನದಿಯ ಸ್ನಾನಕ್ಕೆ ನಡೆ ; ಯುದ್ಧದಲ್ಲಿ ಹತರಾದ ⌜ನಿಮ್ಮ ಈ⌝[೧] ಜ್ಞಾತಿಗಳಿಗೆ ಸದ್ಗತಿ ಉಂಟಾಗುವಂತೆ ಸ್ನಾನ ತರ್ಪಣಗಳನ್ನಾಚರಿಸು ; ಇಂದು ನನ್ನ ಪ್ರತಿಜ್ಞೆ ಸಫಲವಾಯಿತು" ಎಂದು ಚಂದ್ರಗುಪ್ತನಂ ಸ್ನಾನಕ್ಕೆ ಕಳುಹಿಸಿ, ಶೇಖರನಂ ಕುರಿತು,

"ಅಯ್ಯ ಸೇನಾಪತಿಯೇ, ಈ ನಂದರ ಕಬಂಧಗಳನ್ನು ರಾಜಬೀಜೋತ್ಪನ್ನರಾದ ಅರಸುಗಳ ಕೈಯಿಂದ ಗಂಗಾಜಲದಿಂ ತೊಳೆಯಿಸಿ, ಜಪಶಾಲೆ[ಯ] ಅಗ್ನಿಯಲ್ಲಿ ಹಾಕಿಸುವನಾಗು. ಇವರ ಪತ್ನಿಯರು ಅಪೇಕ್ಷಿಸಿದರೆ, ಈ ಶಿರಸ್ಸುಗಳಂ ತೈಲಕಟಾಹದಲ್ಲಿ ಹಾಕಿಸಿ ಕಳುಹಿಸುವನಾಗು. ನಿಮ್ಮೆಲ್ಲರ ಸೇನೆಯಲ್ಲಿ ಶತ್ರುಜಯಾಂಗವಾದ ಉತ್ಸವಗಳು ನಡೆಯಲಿ" ಎಂದು ಹೇಳುತ್ತಿರಲು, ಆಗ ಅದೇ ರೀತಿಗೆ ಶೇಖರನು ನಂದರ ದೇಹವಂ ಒಪ್ಪವಂ ಮಾಡಿಸಿ, ಆ ಶಿರಸ್ಸುಗಳಂ ತೈಲಕಟಾಹದಲ್ಲಿ ಇರಿಸಿ, ತನ್ನ ಸೇನೆಗಳಲ್ಲಿ 'ಶತ್ರುನಾಶ ಸಂತೋಷದಿಂದ ಉತ್ಸವಗಳಾಗಲೆಂ'ದು ನೇಮಿಸಲು, ಆಗ ಉತ್ಸಾಹಿಗಳಾದ ವೀರಭಟರ ಸಿಂಹನಾದಗಳೂ ಜಯಭೇರೀಧ್ವನಿಗಳೂ ಫಿರಂಗಿಶಬ್ದಗಳೂ ಭೂಮ್ಯಂತರಿಕ್ಷಗಳಂ ಮುಚ್ಚುತ್ತಿರಲು, ಪರ್ವತರಾಯಸೇನಾಜನರು ಒಬ್ಬರೊಬ್ಬರನ್ನಾಲಿಂಗಿಸುತ್ತ, ಬಾಹುಗಳಂ ತಟ್ಟುತ್ತ, ನೀನು ಶೂರನೆಂದು ಸ್ತುತಿಸುತ್ತ, ನಾಟ್ಯಗಳನ್ನವಲೋಕಿಸುತ್ತ, ಸಕ್ಕರೆಗಳಂ ಬೀರಿಸುತ್ತ, ಗಂಧಮಾಲಿಕೆಗಳಿಂದಲಂಕರಿಸುತ್ತ, ವಿವಿಧ ಪಾನಂಗಳಂ ಸೇವಿಸುತ್ತ, ಸಂತೋಷದಲ್ಲಿ ಇರುತ್ತಿರಲು,

ಚಾಣಕ್ಯನು ಗಂಗಾಜಲದಲ್ಲಿ ಸ್ನಾನವಂ ಮಾಡಿ, ಬಿಚ್ಚಿ ಇದ್ದ ಶಿಖಾಬಂಧನವಂ ಮಾಡಿ,

---

೧. ನಿಮ್ಮಯ (ಕ)

ಚಂದ್ರಗುಪ್ತಸಮೇತನಾಗಿ ತಾನಿದ್ದೆಡೆಗೆ ಬರುತ್ತಿದ್ದನು.

ಹೀಗಿರುತ್ತಿರಲು, ಶತ್ರುಗಳ ಕಪಟದಿಂದ ನಂದರೆಲ್ಲರೂ ಸಂಹೃತರಾದರೆಂಬ ವಾರ್ತೆಯು ಜನಜನಿತವಾಗಿ ವೃದ್ಧನಾದ ಸರ್ವಾರ್ಥಸಿದ್ಧಿರಾಯನಿಗೆ ತಿಳಿಯುತ್ತಿರಲು, ಆತನು ತಾನು ಕುಳಿತಿದ್ದ ಪೀಠದಿಂದ ನೆಲಕ್ಕೆ ಬಿದ್ದು ಮೂರ್ಛಾಗತನಾಗಲು, ಅದೆಲ್ಲವಂ ನೋಡಿ, ಅಂತಃಪುರದ ಸ್ತ್ರೀರೋದನಧ್ವನಿಯು ಪುರ ಸೂರೆ ಹೋದಂತೆ ಕೇಳಿಸುತ್ತಿರಲು, ಕೋಟೆಯ ಮೇಲೆ ಬರುತ್ತಿರುವ ಬಾಗುರಾಯಣನು ಆ ಶಬ್ದವಂ ಕೇಳಿ ಇದೇನೆಂದೆನಲು, 'ನಂದರು ಸಂಹೃತರಾದರೆಂಬ ವರ್ತಮಾನವಂ ಕೇಳಿ ಅಂತಃಪುರದ ಸ್ತ್ರೀಜನರ ಆಕ್ರಂದ ಧ್ವನಿಯು ಇದೆ'ನಲು,

ಆ ಮಾತಿಗೆ ವಿಸ್ಮಿತನಾಗಿ, "ಜಾತಿಕ್ಷತ್ರಿಯಸಂತತಿ ಇನ್ನಿರಬಾರದೆಂದು ದೈವ ಮುನಿದುದಕ್ಕೆ ಮನುಷ್ಯಯತ್ನವೇನು ಇದೆ ? ಈ ವೇಳೆಯಲ್ಲಿ ವೃದ್ಧರಾಯನಿಗೆ ಸಮಾಧಾನವಂ ಹೇಳುವರು ಪ್ರಮುಖರೊಬ್ಬರೂ ಇಲ್ಲ. ಪುತ್ರಕ್ಲೇಶದಿಂ ಪ್ರಾಣಗಳಂ ತ್ಯಜಿಸದಂತೆ ನಾನು ಹೋಗಿ ಸಮಾಧಾನಗೊಳಿಸಿ ಬರುವೆನೆಂ"ದು ಅಲ್ಲಿಂದ ಹೊರಟು, ರಾಜಭವನಕ್ಕೆ ಬಾಗುರಾಯಣನು ಬಂದು, ಅಲ್ಲಿ ಗವಾಕ್ಷಗಳಿಂ ಈಡಾಡಿ ಎರಚಿರುವ ನಂದಪತ್ನಿಯರುಗಳ ಆಭರಣರಾಶಿಗಳಂ ದಾಟುತ್ತ, ಕಿತ್ತು ಬಿಸುಟ ಪುಷ್ಪಮಾಲೆಗಳಂ ಬಳಸಿ ಬರುತ್ತ, ಕಾಡಿಗೆಗಳಿಂದ ಕಪ್ಪಾಗಿ ಬರುವ ಬಾಷ್ಪೋದಕಗಳ ಕೋಡಿಗಳನ್ನತಿಕ್ರಮಿಸಿ ಬರುತ್ತ, ಪೀಠದಿಂ ಬಿದ್ದು ಮೂರ್ಛಿತನಾಗಿ ಇರುವ ವೃದ್ಧರಾಯನನ್ನು ಶೀತಜಲದಿಂದಲೂ ಬೀಸಣಿಗೆಯ ಘಾಳಿಗಳಿಂದಲೂ ಎಚ್ಚರವಂ ಮಾಡಿ, ತನಗೆ ಬುದ್ಧಿ ಬಲ್ಲ ಮೇರೆಗೆ ಪ್ರಕೃತೋಚಿತವಾಗಿ ದುಃಖಶಾಮಕವಾದ ವಾಕ್ಯವಂ ಹೇಳಿ, 'ಪುರದ್ವಾರದ ಬಳಿಗೆ ಶತ್ರುಗಳು ಬಂದಾರೆಂ'ದು ಅಲ್ಲಿಂದ ಹೊರಟು, ಎಂದಿನಂತೆ ಬರುತ್ತಿರಲು,

ಆ ಸಮಯದಲ್ಲಿ ಪತಿವಿಯೋಗದಿಂ ಪ್ರಳಾಪಿಸುತ್ತಿರುವ ನಂದಪತ್ನಿಯರು ಬಾಗುರಾಯಣನು ವೃದ್ಧರಾಯನ ಬಳಿಗೆ ಬಂದು ಹೋಗುವದಂ ತಿಳಿದು, ಲಜ್ಜಾಭಿಮಾನಗಳಂ ತೊರೆದು, ಅಂತಃಪುರದ ಬಾಗಿಲಿನಲ್ಲಿ ಬಂದು ನಿಂತು, ಬಾಗುರಾಯಣನಂ ಕುರಿತು ಅದರಲ್ಲಿ ನಂದಪತ್ನಿ ಇಂತೆಂದಳು :

"ಅಯ್ಯ ಬಾಗುರಾಯಣನೆ, ಈಗ ಈಶಸಂಕಲ್ಪದಿಂ ನಡೆದಿರುವ ಈ ನಂದಪ್ರಳಯವಂ ತಿಳಿದಿರುವೆಯಷ್ಟೆ. ನಾವು ಪತಿವಿಯುಕ್ತರಾಗಿ ಏನು ಪ್ರಯೋಜನಕ್ಕೆ ಈ ಭೂಮಿಯಲ್ಲಿ ಇರಬೇಕು ? ಶೈತ್ಯಾ[1]ಧಿಕ್ಯ[1]ದಿಂ ಹೆಚ್ಚಿ ಪ್ರಜ್ವಲಿಸುವ ಬಡಬಾಗ್ನಿಯಂತೆ, ಅನುನಯ ಸಹಸ್ರಗಳಿಂ ಮತ್ತೂ ಪ್ರಜ್ವಲಿಸುವ ದುಃಖಾಗ್ನಿಯು ಇಂಧನಾಗ್ನಿಯಿಂದಲ್ಲದೆ ಮತ್ತೊಂದರಿಂ ಶಮನವಾಗಲಾರದು. ನಮ್ಮ ವೃದ್ಧರಾಯರು ಪುತ್ರಶೋಕಗ್ರಹಗ್ರಸ್ತರಾಗಿ, ಪ್ರಜ್ಞಾಶೂನ್ಯರಾಗಿ, ಜಗದ್ವ್ಯವಹಾರವಂ ತ್ಯಜಿಸಿ ಇರುವದರಿಂದ, ನಮ್ಮ ಸಂಕಲ್ಪಕ್ಕೆ ಅಂತರಾಯ ಬಾರದಂತೆ, ನಮಗೆ ಸದ್ಗತಿರೂಪವಾದ ಪತಿಸನ್ನಿಧಿ ದೊರಕುವಂತೆ, ನೀನೇ ನಿಂತು ಮಾಡಿಸಬೇಕು. ನಮಗೆ ಪರಲೋಕಸಾಧನಾರ್ಥವಾಗಿ ಇದೆಕೋ, ಈ ಕೋಟಿದ್ರವ್ಯದಲ್ಲಿ ಪಾದಾಂಶವು ವಿಪ್ರವರ್ಗಕ್ಕೆ, ಪಾದಾಂಶವು ಪೂರ್ತಕರ್ಮಕ್ಕೆ, ಮತ್ತೆ ಪಾದಾಂಶವು ದೀನಾ

---

೧. ದಿ ಕೃತ್ಯ (ಕ)

ನಾಥ ವಿಪನ್ನ ಪೋಷಣೆಗೆ, ಮತ್ತೊಂದು ಪಾದಾಂಶವು ರಾಜಬೊಕ್ಕಸಕ್ಕೆ ಸಲಲಿ. ಈ ರೀತಿಯಲ್ಲಿ ಮಾಡಿ ಶ್ರೇಯೋವಂತನಾಗಿ ಇರುವದೆಂದು ನಾವು [1]ಹೇಳಿದ[1]ರೆಂದು ಚಂದ್ರ ಗುಪ್ತನಿಗೆ ಹೇಳುವನಾಗು. ಎಲ್ಲವಂ ಬೇಗ ಸಜ್ಜುಮಾಡಿಸು" ಎಂದು ಹೇಳಲು,

ಆದರಲ್ಲಿ ಒರ್ವಳು, "ತಾಯೇ ಅಕ್ಕಾಜಿಗಳಿರಾ, ಶಕ್ಯವಾಗುವದಾದರೆ, ಪತಿಯಂ ತಂದು ತೋರೆಂದು ನೇಮಿಸಬಹುದು. ನೆನೆದ ಬಳಿಯ[ಲ್ಲಿ] ನೆಲಸುವ ಅಗ್ನಿಯಂ ಯಾಚಿಸುವ ದುಂಟೇ ? ಪತಿ ಪರಲೋಕಗತನಾದ ಬಳಿಕ ಈ ಗೃಹವು ಇನ್ನಾರಿಗಾಗಬೇಕು ? ಸಮೃದ್ಧ ವಾದ ಈ ಗೃಹವಂ ಹವ್ಯದಂತೆ ಹವ್ಯವಾಹಂಗೆ ಸಮರ್ಪಿಸಿ, ಈ ದೇಹವಂ ಆತನಿಗೆ ಸಮ ರ್ಪಿಸಬಹುದು" ಎನಲು,

ಬಾಗುರಾಯಣನು ಇದೆಲ್ಲವಂ ಕೇಳಿ, "ಪತಿವಿಯೋಗದುಃಖದಿಂ ವಿವೇಕಶೂನ್ಯರಾದ ರಾಜಪತ್ನಿಯರು, ಅನ್ಯರ ಯೋಗಕ್ಷೇಮವಂ ಸ್ಮರಿಸದೆ, ಬಾಲಬುದ್ಧಿಯಿಂದ ಏನು ಅಕಾರ್ಯವಂ ಮಾಡುವದಕ್ಕೂ ಹಿಂದಾಗುವರಲ್ಲ. ಇದರಿಂ ಈ ಪಟ್ಟಣಕ್ಕೂ ಮಹಾಪ್ರಳಯ ಸಂಭವಿಸೀತು. ಇದರಲ್ಲಿ ಜ್ಯೇಷ್ಠ ರಾಜಪತ್ನಿಯೇ ವಿವೇಕಶಾಲಿನಿ ಎಂದು ತೋರುತ್ತಲಿದೆ. ಆಕೆ ಹೇಳಿದ ರೀತಿಗೆ ನಡಸಬೇಕಾಯಿತು" ಎಂದು ನಿಶ್ಚೈಸಿ, ಕನಿಷ್ಠಳು ಹೇಳಿದ ಮಾತಿಗೆ ಇಂತೆಂದನು :

"ಮಾತುಶ್ರೀಯವರುಗಳಿರಾ, ತಾವು ಹೇಳಿದರ್ಥವು ಶಿಷ್ಟಾನುಮತವಲ್ಲದೆ ಧರ್ಮ ವಿರುದ್ಧವಾದುದರಿಂದ ಸದ್ಗತಿಪ್ರದವಾಗದು. ಮಹಾಮಾತುಶ್ರೀಯವರು ಅಪ್ಪಣೆ ಪಾಲಿ ಸಿದ ಮೇರೆಗೆ ಎಲ್ಲರೂ ಸಮ್ಮತವಾದರೆ, ಸದ್ಗತಿಗೆ ಸಂಶಯವಿಲ್ಲ. ಅಪ್ಪಣೆಯಾದರೆ, ರಣಾಂಕಣವಂ ಶೋಧಿಸಿ ಬಂದು ವಿಜ್ಞಾಪಿಸುವೆನು" ಎಂದು ಹೇಳಿ ಕೈಮುಗಿದು ಬಾಗು ರಾಯಣನು ಬರುತ್ತಿರಲು,

ಆ ಸಮಯದಲ್ಲಿ ರಾಕ್ಷಸನು ತನ್ನ ಮನಸ್ಸಿನಲ್ಲಿ, " 'ಈಗ ನಂದರಂ ನಿಗ್ರಹಿಸಿ ಜಯಿಸಿ ದೆವೆಂಬ ಗರ್ವದಿಂದ ಶತ್ರುಗಳು ಪಟ್ಟಣವನ್ನಾಕ್ರಮಿಸಬೇಕೆಂದು ಯಾವಾಗ ಬರು ವರೋ? ಹಾಗಾದರೆ, ರಾಜಸ್ತ್ರೀಯರು ಮುಖ್ಯರಾದವರಿಗೆ ಮ್ಲೇಚ್ಛರಿಂದ ಉಪದ್ರವ ತಟ್ಟೀತು. ರಾಜ್ಯವು ಅನಾಯಕವಾಯಿತೆಂದು ಪುರದಲ್ಲಿಯೂ ಹೊರಗೆ[ಯೂ] ಇರುವ ನಮ್ಮ ಸೇನೆಯು ಶತ್ರುಗಳ ಮೇಲೆ ಪುನಃ ಯುದ್ಧವಂ ಮಾಡಲಾರದು. ಸ್ವಕಾರ್ಯಾಸಕ್ತರಾಗಿ ಇರುವದರಿಂದ ನಾನು ಹೋಗಿ ನಿಂತರೂ ಕಣ್ಣುಮರೆಯಾಗುವರು. ಪಟ್ಟಣ ಕೊಳ್ಳೆ ಯಾದರೆ ಇನ್ನೂ ಒಂದು ಮಹದಾಪತ್ತು ಬಂದೀತು. 'ಮಾನಿತನಾಗಿ ವೃದ್ಧನಾದ ಸರ್ವಾರ್ಥಸಿದ್ಧಿರಾಯನು ಪುತ್ರರಂ ಹೋಗಲಾಡಿಸಿಕೊಂಡು ತನ್ನ ಅಂತಃಪುರಸ್ತ್ರೀಜನ ವನ್ನು ಶತ್ರುಗಳಾದ ಮ್ಲೇಚ್ಛರು ನೋಡುವದನ್ನು ತನ್ನ ಕಣ್ಣಾರ ನೋಡಿದನು' ಎಂಬ ಲೋಕಾಪವಾದಕ್ಕೆ ಪಾತ್ರನಾಗದಂತೆ ಇಷ್ಟರಲ್ಲಿಯಾದರೂ ನಿಲ್ಲಿಸಿಕೊಳ್ಳಲಿ" ಎಂದು ನಿಶ್ಚೈಸಿ, ತನ್ನ ದೂತನಂ ಕರೆದು,

"ಎಲೈ, ಬಾಗುರಾಯಣನೆಲ್ಲಿ ಇದ್ದರೂ ಈ ಕ್ಷಣವೇ ಬಂದು ಮಾತನಾಡಿಕೊಂಡು ಆ ಬಳಿಕ ಯಾವ ಕೆಲಸವಿದ್ದರೂ ಮಾಡಲಿ" ಎಂದು ಹೇಳಲು, "ಬುದ್ಧೀ" ಎಂದು ಆ

೧. ಹೇಳುವ (ಕ)

ದೂತನು ಬಂದು ಹುಡುಕಿ, ರಾಜಭವನದಿಂ ಬರುತ್ತಿರುವ ಬಾಗುರಾಯಣನಂ ಕಂಡು, "ಅಮಾತ್ಯರು ನಿಮ್ಮಂ ಶೀಘ್ರವಾಗಿ ಕರೆತರ ಹೇಳಿದರು" ಎನಲು, ಆತನು ರಾಕ್ಷಸನ ಬಳಿಗೆ ಬಂದು ಕಂಡು, ನಂದರ ನೆನೆನೆನೆದು ಅವರಿರ್ವರೂ ದುಃಖಪಟ್ಟು,

ಆಗ ರಾಕ್ಷಸನು "ಅಯ್ಯ ಬಾಗುರಾಯಣನೇ, ಇಂದು ನಮ್ಮ ಬುದ್ಧಿಬಲ ಪೌರುಷ ಗಳೆಲ್ಲವೂ ವ್ಯರ್ಥಗಳಾದವು. ಇನ್ನು ಯಾವಾಗಲೋ ಶತ್ರುಗಳು ಈ ಪುರವನ್ನಾಕ್ರಮಿ ಸುವರಾಗಿ ಇದ್ದಾರೆ. ನಿನ್ನ ಮನೋಗತವೇನು ?" ಎನಲು, ಆ ಮಾತಿಗೆ,

"ಅಯ್ಯ ಅಮಾತ್ಯರೇ, ನಿಮಗಿಂತಲೂ ನಾನು ಬುದ್ಧಿಯಲ್ಲಿ ಅಧಿಕನೇ ? ನೀವು ಹೇಳಿ ದಂತೆ ಯಾವಾಗಲೂ ಕೇಳುತ್ತಲಿದ್ದೆನು. ಈಗಲೂ ಹಾಗೇ ಸರಿ. ನಿಮ್ಮ ಅಪ್ಪಣೆಯಾದರೆ, ನನಗೆ ತೋರಿದರ್ಥವಂ ವಿಜ್ಞಾಪಿಸಿಯೇನು. ಏನೆಂದರೆ,

ಈಗ ನಂದನಾಶದಿಂದಲೂ ವೃದ್ಧನಾಗಿ ಪುತ್ರಶೋಕದಿಂ ಪ್ರಾಣಾಭಿಮಾನವಿಲ್ಲದೆ ಜಡನಾದ ಸರ್ವಾರ್ಥಸಿದ್ಧಿಯಲ್ಲಿ ಭರವಸವಿಲ್ಲದೆ ಇರುವದ್ದರಿಂದಲೂ, ಅವಲಂಬ ನಾಂತರ ದೊರಕದೆ ಇರುವ ಈ ವೇಳೆಯಲ್ಲಿ, ಚಂದ್ರಗುಪ್ತನು ಶತ್ರುರಹಿತನಾಗಿ, ತ್ಯಾಗಶೀಲನಾಗಿ, ಪ್ರಜಾರಂಜಕನಾಗಿ, ಸೇನಾಸಮೇತನಾಗಿ, ಸರ್ವಾಥಸಿದ್ಧಿರಾಯನಿಗೆ ಪೌತ್ರನಾದುದರಿಂದ ಈ ರಾಜ್ಯಕ್ಕೆ ಬಾಧ್ಯನೆಂದೆನಿಸಿಕೊಂಡು ಬಂದಿರುವದರಿಂದಲೂ ನಮ್ಮ ಸೇನಾಜನಗಳಿಗೆ ಯುದ್ಧದಲ್ಲಿ ಆಗ್ರಹವಿಲ್ಲ ; ತಮ್ಮ ಕಾರ್ಯದಲ್ಲೇ ನಿರತರಾಗಿ ಇದ್ದಾರೆ. ಈಗ ಅನಾಯಕರಾಜ್ಯವೆಂದು ತುಂಟರಾಗಿ ಪ್ರಜೆಗಳಂ ಪೀಡಿಸುವರಂ ನಿಗ್ರಹಿಸು ವರಂ ನಿಗ್ರಹಿಸುವದಕ್ಕಾದರೂ ನಮಗೆ ಸಾವಕಾಶವಾಗದು. ಇನ್ನು ಶತ್ರುಗಳ ಮೇಲೆ ಯುದ್ಧವಂ ಮಾಡುವದ್ಯಾವದು ?

ನನಗೆ ಪುರರಕ್ಷಣೆಗೆ ನೇಮಿಸಿ ಇರುವದರಿಂದ ಕೋಟೆಯ ಮೇಲೆ ಲಗ್ಗೆಯ ಹತ್ತದಂತೆ ಯುದ್ಧವಂ ಮಾಡುತ್ತಲಿದ್ದೇನೆ. ಭದ್ರಭಟಾದಿ ಸೇನೆಗಳು ಕಣ್ಮರೆಯಾಗಿ ಇದೆ. ಶತ್ರುಗಳು ಕೋಟೆಗೆ ಮುತ್ತಿಗೆಯಂ ಹಾಕಿ ನನ್ನ ಯತ್ನವಂ ಮೀರಿ ಒಳಕ್ಕೆ ಬಂದು ಅಂತಃಪುರವಂ ಹೊಕ್ಕು ಪುತ್ರರಂತೆ ಸಂರಕ್ಷಿತರಾದ ನಮ್ಮ ಕಣ್ಣು ಮುಂದೆ ಅಂತಃಪುರದ ಸ್ತ್ರೀಜನವಂ ನೋಡಿದರೆ, ನಾವು ಇಷ್ಟು ದಿನವೂ ಬದುಕಿದುದು ವ್ಯರ್ಥವಾಗುವದು. ಇದರ ಮೇಲೆ ತಾವು ಹೇಳಿದಂತೆ ಕೇಳುವೆನು" ಎಂದು ಬಾಗುರಾಯಣನು ರಾಕ್ಷಸನಿಗೆ ಹೇಳಲು,

ಅದಂ ಕೇಳಿ "ಈ ಬಾಗುರಾಯಣನಿಗೆ ಯುದ್ಧದಲ್ಲಿ ಮನಸ್ಸು ಇಲ್ಲ. ನಾನು ಯತ್ನವಂ ಮಾಡಿದರೂ ಸಾಗುವದು ಇಲ್ಲ. ರಾಜಪತ್ನಿಯರ ಮಾನಸಂರಕ್ಷಣಾರ್ಥವಾಗಿ ಈ ಪಟ್ಟಣದ ಬೀಗದ ಕೈ ಒಪ್ಪಿಸಿ, ಚಂದ್ರಗುಪ್ತನಂ ಪ್ರಭುವೆಂದು ಕರೆತರಲಿ. ಚಿಂತೆಯೇನು? ನಾನು ಕಾಣಿಸಿಕೊಳ್ಳದೆ ಕಾರ್ಯಪ್ರಯತ್ನವಂ ಮಾಡಿ, ಪರಲೋಕದಲ್ಲಿ ಇರುವ ನಂದರಿಗೆ ಸಂತೋಷವನ್ನಾದರೂ ಮಾಡುವೆ"ನೆಂದು ರಾಕ್ಷಸನು ತನ್ನ ಮನದಲ್ಲಿ ನಿಶ್ಚೈಸಿ,

"ಅಯ್ಯ ಬಾಗುರಾಯಣನೇ, ನೀನು ಹೇಳಿದುದೆಲ್ಲವೂ ವಿಹಿತವೇ ಸರಿ. ದೈವಯತ್ನ ದಿಂದ ಆಗುವ ಕಾರ್ಯ ಆಯಿತು. ಇನ್ನು ಸಾಹಸವಂ ಮಾಡಿದರೆ, ನೋಡಿ ಸಂತೋಷಪಡು ವರ್ಯಾರು ? ಹಾಗಾದರೂ ಕೂಡಿ ಬರಲಾರದು. ಜೀವಂತರಾಗಿರುವ ಜನರ ರಕ್ಷಣಾರ್ಥ ವಾಗಿ ಚಂದ್ರಗುಪ್ತ[ನು] ಸುಖವಾಗಿ ಪುರಕ್ಕೆ ಬರಲು, ಸಕಲಾಶೆಯಂ ಬಿಟ್ಟು ವಿರಕ್ತನಾದ ವೃದ್ಧರಾಯನು ಈ ಮಾತಿಗೆ ಏನು ಹೇಳ್ಯಾನು ? ನಾವು ನಮ್ಮ ಮನ ಬಂದರೆ ಚಂದ್ರಗುಪ್ತ

ಹೇಳಿದಂತೆ ಇರಬಹುದು. ಶತ್ರುಗಳು ಪುರವನ್ನಾಕ್ರಮಿಸುವದಕ್ಕೆ ಮುಂಚೆ ಪುರದ ಬೀಗದ ಕೈಗಳಂ ಚಂದ್ರಗುಪ್ತನಿಗೆ ಒಪ್ಪಿಸುವನಾಗು" ಎಂದು ಹೇಳಿ, ಬಾಗುರಾಯಣನಂ ಕಳುಹಿಸಿ, ಆಗಲೇ ವೃದ್ಧರಾಯನನ್ನು ದುಃಖ ಸಮಾಧಾನಪಡಿಸುವದಕ್ಕೆ ರಾಕ್ಷಸನು ಹೊರಟು,

ರಾಜಭವನಕ್ಕೆ ಬಂದು, ಅಲ್ಲಿ ಬಹು ಹೊತ್ತು ರೋದನೆಯಿಂದ ಗಂಟಲು ಒಣಗಿ, ಕುಗ್ಗಿದ ಧ್ವನಿಯಿಂದ 'ಹಾ ನಾಥ'ನೆಂದು, 'ಹಾ ಕುಮಾರರುಗಳಿರಾ' ಎಂದು ಹಂಬಲಿಸುತ್ತಿರುವ ಸ್ತ್ರೀಜನದ ರೋದನೆಯನ್ನು ಬೇಡವೆಂದು ಒಡಂಬಡಿಸುತ್ತಿರುವ ಪರಿಚಾರಿಣಿಯರುಗಳ ಧ್ವನಿಯಂ ಕೇಳಿ, ರಾಕ್ಷಸನು ಮನದಲ್ಲಿ ಮಹಾದುಃಖಪಡುತ್ತ ಬಂದು, ವೃದ್ಧನಾದ ಅರಸಂ ಕಂಡು, ನೆಲಕ್ಕೆ ಬಿದ್ದು ಹೊರಳಿ ಅಳುತ್ತ ಮೈಮರೆತ ವೃದ್ಧನಂ ತಕ್ಕವಿಸಿ,

"ಅಯ್ಯ ರಾಯನೇ, ನಿನಗೆ ಈ ದೆಸೆ ಬರಬಹುದೇ ? ನೀನು ಸಜ್ಜನರಂ ನಿಂದಿಸಿದವನಲ್ಲ, ದೇವ ಬ್ರಾಹ್ಮರಿಗೆ ಅಪಮಾನವಂ ಮಾಡಿದವನಲ್ಲ, ಅಪರಾಧಿಗಳಿಗೆ ಅವಿಹಿತ ದಂಡನೆಗೈದವನಲ್ಲ, ನ್ಯಾಯದಲ್ಲಿ ಪಕ್ಷಪಾತವಂ ಪಟ್ಟವನಲ್ಲ, ಅಪೂಜ್ಯರಂ ಪೂಜಿಸಿದವನಲ್ಲ. ಇಂಥಾ ನಿನಗೆ ಈ ದುರವಸ್ಥೆ ಬಂದಿರುವದು ಜನ್ಮಾಂತರೀಯವಲ್ಲದೆ ಇಹಜನ್ಮದಲ್ಲಿ ಮಾಡಿದುದಲ್ಲ. ಆದರೆ ನಂದರಲ್ಲಿ ಈ ದೋಷಗಳುಂಟೇ ಎಂದರೆ, ನಾನು ಸೇವಕನಾಗಿ ಇದ್ದು ಲೋಕಾಂತರಸ್ಥರಾದ ನಂದರಲ್ಲಿ ದುರ್ಗುಣಕಥನವಂ ಮಾಡುವದು ಯುಕ್ತವಲ್ಲದಿದ್ದರೂ, ಅನಧಿಕಾರಿಗಳಾದ ಶೂದ್ರರು ವೇದವನ್ನೋದುವ ಬ್ರಾಹ್ಮರಂ ನಿಂದಿಸುತ್ತ, ಬ್ರಾಹ್ಮರ ಸ್ತ್ರೀಯರುಗಳಂ ಅನುರಾಗದಿಂ ನೋಡುವದಂ ಕೇಳಿಯೂ ಅವರಂ ದಂಡಿಸದೆ ದಾಕ್ಷಿಣ್ಯಕ್ಕೆ ಒಳಗಾದುದರಿಂದ ಈ ಮಹಾದ್ರೋಹವೇ ರಾಜ್ಞಾರಿಷ್ಟವಾಗಿ, "ರಾಜ್ಞೋ ರಾಷ್ಟ್ರಕೃತಂ ಪಾಪಂ" ಎಂಬ ಶಾಸ್ತ್ರಾರ್ಥವು ಸತ್ಯವಾದುದರಿಂದ, ಆ ಪಾಪವೇ ನಂದರಿಗೆ ಇಹದಲ್ಲಿಯೇ ಇಂಥಾ ಅಪಮೃತ್ಯುವನ್ನುಂಟುಮಾಡಿತು; ಇದಕ್ಕೆ ಮೌರ್ಯಪುತ್ರನು ನಿಮಿತ್ತವಾದನು.

ಮೀರಿದ ಕೆಲಸಕ್ಕೆ ದುಃಖಪಟ್ಟು ಫಲವೇನು ? [1]ನಿನ್ನ[1] ಈ ಚಂದ್ರವಂಶಸ್ಥನಾದ ಧೃತರಾಷ್ಟ್ರನಿಗೆ ಪುತ್ರಕ್ಲೇಶವುಂಟಾದಂತೆ ನಿನಗೂ ಸಂಭವಿಸಿತು. ಆದರೂ ಯುದ್ಧದಲ್ಲಿ ಹತವಾಗುವದು ಕ್ಷತ್ರಿಯಧರ್ಮವು. ಈಗಲೂ ನಿನ್ನ ಕುಮಾರರು ಶತ್ರುಗಳ ಕಪಟಕ್ಕೆ ತಗುಲಿದವರಾದಾಗ್ಯೂ ಹಿಮ್ಮೆಟ್ಟದೆ ಶತ್ರುಗಳ ಮೇಲೆ ಬಿದ್ದು, ಸಹಸ್ರೋಪಸಹಸ್ರ ಶತ್ರುಗಳಂ ಸಂಹರಿಸಿ, ವೀರಸ್ವರ್ಗವನ್ನೈದಿದರೇ ಹೊರತು, ಹಿಮ್ಮೆಟ್ಟಿ ಕುಲಕ್ಕೆ ಅಪಯಶಸ್ಸನ್ನುಂಟುಮಾಡಿದವರಲ್ಲ. ಈ ಕಲಿಯುಗದಲ್ಲಿ ಇಲ್ಲಿಂದ ಮುಂದೆ ಜಾತಿಕ್ಷತ್ರಿಯರು ಇರಬೇಡವೆಂಬ ಈಶಸಂಕಲ್ಪವಂ ಮೀರುವದಕ್ಕೆ ಯಾರು ಸಮರ್ಥರು ? 'ಈ ಸಂಸಾರವು ತುಚ್ಛವು ಎಂದು ವ್ಯಸನಾಭ್ಯುದಯಗಳಲ್ಲಿ ಚಿತ್ತಕ್ಷೋಭೆಯಿಲ್ಲದೆ ಇರುವ ಜನರು ಪರಮಪದವನ್ನೈದುವರು' ಎಂಬ ಶಾಸ್ತ್ರಾರ್ಥವನ್ನು ನೀವೇ ಹೇಳುತ್ತಲಿರುವಿರಷ್ಟೆ. ಹೇಳಿದಂತೆ ನಡೆವವನು ಧನ್ಯನು. ಅದಕ್ಕೆ ನೀವೇ ಅಧಿಕಾರಿಗಳು. ನಿರರ್ಥಕವಾದ ದುಃಖವಂ ಬಿಟ್ಟು, ಈಶ್ವರಗತನಾಗಬೇಕು. ನಾನು ಇಲ್ಲ ಇದ್ದರೆ ನಂದರಿಗೆ ಆಪ್ತನೆಂದು ಪ್ರಭುವಾಗಿ ಬರುವ

---

೧. ಇನ್ನು (ಠ)

ಚಂದ್ರಗುಪ್ತನು ನನ್ನ ನಿಗ್ರಹಿಸಿಯಾನು. ಇಲ್ಲಿಂದ ಹೊರಟು ಹೋಗುತ್ತಲಿದ್ದೇನೆ.

ಪೌತ್ರನಾದುದರಿಂದ ಚಂದ್ರಗುಪ್ತನಿಗೆ ನಂದರಲ್ಲಿ ಇದ್ದಂತೆ ನಿಮ್ಮಲ್ಲಿ ದ್ವೇಷವಿಲ್ಲ. ಮೊದಲೇ ನಿಮಗೆ ತಿಳುಹಿಸಿ ಇದ್ದರೆ ಇಷ್ಟನರ್ಥಕ್ಕೆ ನಿಮಿತ್ತವಿಲ್ಲ. ನಂದರು ತಾವೇ ಮಾಡಿ ಈ ದುರ್ದೆಸೆಯಂ ತಂದುಕೊಂಡರು. ಇನ್ನು ಚಂದ್ರಗುಪ್ತನು ಬಂದು ನಿಮ್ಮಂ ಕಂಡಲ್ಲಿ, ಆತನ ಮನಸ್ಸಿಗೆ ಕ್ಷೋಭೆ ಬರದಂತೆ ಸಮಯೋಚಿತವಾಗಿ ಹಿಂದೆ ಮುಂದೆ ಏಕ ಪ್ರಕಾರವಾಗಿ ಮಾತನಾಡುತ್ತ, ಅವ[ನು] ಕೊಟ್ಟದ್ದರಿಂದಲೇ ಸಂತುಷ್ಟರಾಗುತ್ತ, ಆತ ನನ್ನೇ ಔರಸಪುತ್ರನೆಂದು ಭಾವಿಸುತ್ತ, ಕಾಲಹರಣವಂ ಮಾಡುತ್ತ ಇದ್ದರೆ, ಕೆಲವು ದಿವಸದ ಮೇಲೆ ಆಗತಕ್ಕ ಕ್ಷೇಮಲಾಭವನ್ನು ಈಗ ಬಾಯಿಮಾತಿನಿಂದ ಹೇಳಿ ಫಲವೇನು ?" ಎಂದು ವೃದ್ಧರಾಯನಂ ಸಮಾಧಾನಗೊಳಿಸಿ, ತನ್ನ ಮನೆಗೆ ಬರುತ್ತಿದ್ದನು.

ಅಷ್ಟರಲ್ಲಿಯೇ ಸೂರ್ಯನುದಯಿಸಲು, ಚಾಣಕ್ಯನೆದ್ದು, ಶೇಖರನಂ ಕರೆಕಳುಹಿಸಿ, "ಅಯ್ಯ ಸೇನಾಪತಿಯೇ, ನೀನು ಸಕಲಸೇನಾಪರಿವೃತನಾಗಿ ಪ್ರಾಕಾರವಂ ಕೆಡಹುವ ಫಿರಂಗಿ [೧]ಗಳನ್ನು[೧] ಪುರದ ನಾಲ್ಕು ದಿಕ್ಕಿನಲ್ಲಿಯೂ ನಿಲ್ಲಿಸಿ, ಲಗ್ಗೆಯಂ ಹತ್ತುವ ಜನಗಳಂ ಪುನಃ ಸಜ್ಜುಮಾಡಿ, ಪುರಕ್ಕೆ ಮುತ್ತಿಗೆಯಂ ಹಾಕಿ, ಕೋಟೆಯ ಮೇಲೆ ಗುಂಡುಗಳಂ ಹಾರಿಸುತ್ತಾ, ಪುರರಕ್ಷಕರಿಗೆ ಹೇಳಿ ಕಳುಹಿಸಿವದು. ಏನೆಂದರೆ, 'ಶತ್ರುಗಳಾದ ನಂದರಂ ಸಂಹರಿಸಿ, ಚಂದ್ರಗುಪ್ತ ಮಹಾರಾಯರು ಪ್ರಾಭವಕ್ಕೆ ಬಂದಿರುವಲ್ಲಿ ಉಪೇಕ್ಷೆಯಿಂದ ತುಂಟ ತನವಂ ಮಾಡಿಕೊಂಡು, ವ್ಯರ್ಥವಾಗಿ ಪುತ್ರಬಂಧುಸಮೇತವಾಗಿ ರಾಜಾಜ್ಞೆಗೆ ಒಳಗಾಗದೆ, ಪ್ರಭುಮನೋನುಗುಣವಾಗಿ ನಡೆದುಕೊಳ್ಳುತ್ತ ಮೊದಲಿಗಿಂತಲೂ ಅಧಿಕವಾಗಿ ಇರ ಬೇಕೆಂಬ ಅಪೇಕ್ಷೆಯಿದ್ದರೆ, ಬೀಗಮುದ್ರೆಯಂ ತಂದು ಒಪ್ಪಿಸತಕ್ಕದ್ದು' ಎಂದು ಹೇಳಿ ಕಳುಹಿಸುವನಾಗು. ರಾಕ್ಷಸನ ದುರ್ಬೋಧನೆಯಿಂದ ಕಾಲಹರಣವಂ ಮಾಡಿದರೆ, ಉಪಾಯಾಂತರ ದಿಂದ ಪುರವಂ ಸಾಧಿಸಬಹುದು" ಎಂದು ಶೇಖರನಿಗೆ ಹೇಳಿ, ಅವನಂ ಕಳುಹಿಸಲು,

ಚಾಣಕ್ಯ ಹೇಳಿದ ರೀತಿಗೆ ಶೇಖರನು ಆ ಪಾಟಲೀಪುರಕ್ಕೆ ಮುತ್ತಿಗೆಯಂ ಹಾಕಲು, ಪುರದ ಜನರೆಲ್ಲರೂ ಭಯಭ್ರಾಂತರಾಗುತ್ತಿರಲು, ಆಗ ಬಾಗುರಾಯಣನು ತನ್ನ ಬಳಿಯ ದೂತರಂ ಕರೆದು, "ಪರ್ವತರಾಜಸೇನಾಪತಿಯಾದ ಶೇಖರನಂ ಕಂಡು ಹೀಗೆ ಹೇಳಿ ಬನ್ನಿ" ಎಂದು ಕಳುಹಿಸಲು, ಆ ದೂತರು ಬಂದು ಶೇಖರನಂ ಕಂಡು, "ಅಯ್ಯ ಸೇನಾಪತಿಗಳೇ, ಪುರರಕ್ಷಕರಾದ ಬಾಗುರಾಯಣರು ನಿಮ್ಮ ಕಂಡು, 'ನಂದರಿಗನಂತರದಲ್ಲಿ ಈ ಪುರದಲ್ಲಿ ನಿಮಗೆ ಶತ್ರುಗಳು ಯಾರೂ ಇಲ್ಲ. ಬೀಗಮುದ್ರೆ ಸಮೇತರಾಗಿ ಚಂದ್ರಗುಪ್ತ ಮಹಾ ರಾಯರಂ ಕಾಣುವದಕ್ಕೆ ಈಗಲೇ ನಾವೆಲ್ಲರೂ ಬರುತ್ತಲಿದ್ದೇವೆ. ಯುದ್ಧದಿಂ ಪ್ರಕೃತ ವೇನೂ ಇಲ್ಲ'ವೆಂದು ಹೇಳಿಬರುವುದು ಎಂದು ಕಳುಹಿದರು" ಎಂದು ದೂತರು ಹೇಳಲು,

ಆ ಮಾತಿಗೆ ಶೇಖರನು, "ಎಲೈ ದೂತರುಗಳಿರಾ, ಪುರರಕ್ಷಕನ ಮನೋಗತವಂ ತಿಳಿಯಲೋಸುಗ ಪ್ರಭುಗಳ ಅಪ್ಪಣೆಯಿಂದ ಮುತ್ತಿಗೆಯಂ ಹಾಕಿದೆವು. 'ಈಗ ಮದ್ರೆ ಗಳಂ ಒಪ್ಪಿಸಿದರೆ, ಯುದ್ಧಯತ್ನವಂ ನಿಲ್ಲಿಸುವೆವು ; ಬೇಗ ಬರುವದಂ'ದು ಪುರರಕ್ಷಕ

---

೧. ಯಂ (ಕ)

ನಿಗೆ ಹೇಳಿ" ಎನಲು, ಹಾಗೇ ಆಗಲೆಂದು ಹೇಳಿ ದೂತರು ಬಂದು ಶೇಖರ ಹೇಳಿದ ವಾಕ್ಯವಂ ಬಾಗುರಾಯಣನಿಗೆ ತಿಳುಹಿಸಲು, ಆಗ ಕೋಶಾಧಿಕಾರಿಯಾದ ರುಕ್ಮ ಮುಖ್ಯರಾದ ಅಧಿಕಾರಿಗಳೆಲ್ಲರಂ ಕರೆಸಿ ಸಕಲವಸ್ತುಗಳಂ ಸಜ್ಜುಮಾಡಿಕೊಂಡು ಬಾಗುರಾಯಣನು ಹೊರಡುವದಕ್ಕೆ ಯತ್ನವಂ ಮಾಡುತ್ತಿರುವ ಸಮಯದಲ್ಲಿ,

ಸಿದ್ಧಾರ್ಥಕ[೧]ನು ಬಂದು[೧] ಬಾಗುರಾಯಣನಂ ಕಂಡು, "ಏನ್ಯೆ ಕುಶಲವೇ" ಎನಲು, "ಅಯ್ಯ ಬುದ್ಧಿವಂತನಾದ ಸಿದ್ಧಾರ್ಥಕನೇ, ನೀನು ಹೇಳಿದರ್ಥವೆಲ್ಲವೂ ಸಿದ್ಧವಾಗಿ ಅನುಭವಕ್ಕೆ ಬಂದುದರಿಂದ, ನಿನಗೆ ಸಿದ್ಧಾರ್ಥಕನೆಂಬ ಹೆಸರು ಸಲ್ಲುವುದು ; ಚಂದ್ರಗುಪ್ತನಂ ಕಾಣುವದಕ್ಕೆ ಹೊರಡುತ್ತಲಿದೇವೆ" ಎನಲು, "ಅಯ್ಯ ಬಾಗುರಾಯಣನೆ, ನೀನು ಹೋಗಿ ಕಾಣಿಸಿಕೊಳ್ಳದಿದ್ದರೆ, ನಿನ್ನಲ್ಲಿ ಚಂದ್ರಗುಪ್ತನಿಗೆ ಇರುವ ವಿಶ್ವಾಸ ತಪ್ಪಲಾರದು. 'ತನ್ನ ಕಾರ್ಯಕ್ಕೋಸುಗಲೇ ಹಿಂದಳಿಂದ ಬಂದಾನು' ಎಂದು ತಿಳಿಯುವನು. ಈಗಿನ ಪ್ರಕೃತದಲ್ಲಿ ನಿನಗೆ ತಮ್ಮನಾದ ವತ್ಸಲಾಯನನ ಕೈಯಲ್ಲಿ ಬೀಗಮುದ್ರೆಯಂ ಕಳುಹುವನಾಗು. ಇದೇ ರೀತಿಗೆ ನಿನಗೆ ಮಿತ್ರರಾದ ಭದ್ರಭಟಾದಿ ಸೇನಾಪತಿಗಳಿಗೂ ಹೇಳಿ ಕಳುಹಿಸುವನಾಗು" ಎನಲು,

ಆ ಮಾತಿಗೆ, "ಏನೋ ಮುಂದಣ ಕಾರ್ಯದೃಷ್ಟಿಯಿಂದ ಸಿದ್ಧಾರ್ಥಕನು ಹೀಗೆ ಹೇಳುತ್ತಾನೆ" ಎಂದು ತಿಳಿದು, 'ಹಾಗೇ ಆಗಲೆಂ'ದು ತನ್ನ ತಮ್ಮನಾದ ವತ್ಸಲಾಯನನಂ ಕರೆದು, ಎಲ್ಲವಂ ಅವನ ವಶಕ್ಕೆ ಕೊಟ್ಟು, "ನೀನು ಹೋಗಿ ಚಂದ್ರಗುಪ್ತರಂ ಕಂಡು ಬೀಗಮುದ್ರೆಗಳಂ ಒಪ್ಪಿಸಿ, ಅವರ ಅಪ್ಪಣೆ ಆದ ರೀತಿಗೆ ನಡೆದುಕೊಳ್ಳುವದೆಂ"ದು ನೇಮಿಸಿ, ರುಕ್ಮ ಮುಖ್ಯರಾದ ಅಧಿಕಾರಿಗಳಂ ಸಹ "ಹೋಗಿ ಬನ್ನಿ"ರೆಂದು ಕಳುಹಲು,

ಸಮಸ್ತವೈಭವದಿಂದ ಬಂದು, ದೂರದಲ್ಲಿಯೇ ವತ್ಸಲಾಯನನು ಚಂದ್ರಗುಪ್ತನಂ ಕಂಡು, ಅಭಿವಂದಿಸಿ, ಕೈಕಾಣಿಕೆಗಳಂ ಒಪ್ಪಿಸಿ, ಬೀಗಮುದ್ರೆಗಳಂ ಮುಂದಿರಿಸಿ, ಕೈಕಟ್ಟಿ ನಿಂತಿರಲು, ಸಂಗಡ ಬಂದ ಜನರೆಲ್ಲರೂ ಕೈಮುಗಿದು ದೂರದಲ್ಲಿ ವಿನೀತರಾಗಿ ನಿಂದಿರಲು, ಅವರೆಲ್ಲರಂ ನೋಡಿ ಉಚಿತಪ್ರಕಾರದಿಂ ಕುಶಲವಂ ಕೇಳಿ, 'ಕುಳ್ಳಿರಿ' ಎಂದು ಹೇಳಲು, ಅವರೆಲ್ಲರೂ ಉಚಿತಪ್ರಕಾರ ಇರುತ್ತಿರಲು, ಆಗ ವತ್ಸಲಾಯನನು ಚಂದ್ರಗುಪ್ತನಂ ಕುರಿತು,

"ಜೀಯ, 'ಅಸಿತಪಕ್ಷಾಂತದಲ್ಲಿ ಅಸ್ತಾಚಲವಂ [೨]ಪೊಂದಿದ[೨] ಸೂರ್ಯನಂ ಹಿಂದುಮಾಡಿ ಉದಯಿಸುವ ಬಾಲಚಂದ್ರನ ದರ್ಶನವನ್ನಪೇಕ್ಷಿಸುವ ಕುಮುದನಿಕರಗಳಂತೆ ಪ್ರತಿದಿನ ಪ್ರವರ್ಧಮಾನಸಂಪದ್ವಿಶೇಷದಿಂದ ಕೂಡಿ ಗಜಾರೂಢರಾಗಿ ರಾಜಬೀದಿಯಲ್ಲಿ ಬರುವ ನಿಮ್ಮಂ ನೋಡಿ ನಮ್ಮ ನೇತ್ರಗಳು ಎಂದಿಗೆ ಸಫಲವಾದಾವೋ' ಎಂದು ಸಕಲಜನರು ತವಕಬಡುತ್ತಾರೆ. ಹಾಗೇ ನಂದರಾಜಲಕ್ಷ್ಮಿಯು ವರಣಮಾಲೆಯಂ ಪಿಡಿದು ನಿಮ್ಮಂ ಎದುರು ನೋಡುವಳು. ಪಟ್ಟಣಕ್ಕೆ ಬಿಜಮಾಡಬೇಕೆಂ"ದು ವಿಜ್ಞಾಪಿಸುವ ಸಮಯದಲ್ಲಿ, ಭದ್ರಭಟಾದಿ ಸೇನಾಪತಿಗಳ ಅಣ್ಣತಮ್ಮಂದಿರು ಬಂದು, ದೂರದಲ್ಲಿಯೇ ಕೈಮುಗಿದು, ಕೈಕಾಣಿಕೆಗಳಂ ನೀಡಿ, ಅಪ್ಪಣೆಮೇರೆಗೆ ಉಚಿತಪ್ರಕಾರದಿಂ ಕುಳ್ಳಿರಲು, ಅವರಂ ನೋಡಿ,

---

೧. ನು (ಕ) ೨. ಹೊಂದಿದ (ಕ)

"ಏನಿರ್ಕೈ, ಭದ್ರಭಟಾದಿ ಸೇನಾಪತಿಗಳು ಎಲ್ಲಿ ಇದ್ದಾರೆ ?" ಎನಲು.

"ಜೀಯ, 'ಚದುರಿ ಇರುವ ಸೇನೆಗಳಂ ಕೂಡಿಸಿಕೊಂಡು ದರ್ಶನಕ್ಕೆ ಬರುತ್ತಲಿದ್ದೇವೆ; ನೀವು ಹೋಗಿ ಪ್ರಭುಗಳಂ ಕಂಡು ಆಜ್ಞಾನುಸಾರ ನಡೆದುಕೊಳ್ಳುವದೆಂ'ದು ನಮ್ಮಂ ಕಳುಹಿಸಿದರು" ಎಂದು ಬಿನ್ನೈಸಲು. "ಹಾಗೇ ಆಗಲೆಂ"ದು ಹೇಳಿ, ಅವರೆಲ್ಲರಿಗೂ ವೀಳಯವಂ ಕೊಡಿಸಿ, "ಮೊದಲಿನ ಮೇರೆಗೆ ನಿಮ್ಮ ನಿಮ್ಮ ಅಧಿಕಾರದಲ್ಲಿ ಜಾಗ್ರತೆಯಾಗಿ ಇರುವದೆಂ"ದು ನೇಮಿಸಿ, ಕೋಶಾಧಿಕಾರಿಯಂ ನೋಡಿ.

"ಅಯ್ಯ ರುಕ್ಮನೇ, ನಮ್ಮ ಪಿತಾಮಹರು ಈಗಿನ ಕಾರ್ಯಕ್ಕೆ ಯಾವ ವಸ್ತುಗಳಲ್ಲಿ ಎಷ್ಟು ಕೇಳಿದರೂ ಆಗಲೇ ಒದಗಿಸಿ ಕೊಡುವನಾಗು. ನಂದರ ಪತ್ನಿಯರು ತಮ್ಮಲ್ಲಿ ಇರುವ ವಸ್ತುಗಳಂ ಮನಬಂದಂತೆ ಮಾಡಿಕೊಳ್ಳಲಿ" ಎಂದು ಹೇಳಿ ಅವರೆಲ್ಲರಂ ಕಳುಹಿಸಲು.

ಆಗ ಸಾಮಂತನರಪತಿಗಳೆಲ್ಲರೂ ಬಂದು ಚಂದ್ರಗುಪ್ತನಂ ಕಂಡು ಕೈಮುಗಿಯುತ್ತಿರಲು, ಪೀಠದಿಂದೆದ್ದು, ನಾಲ್ಕಾರುಹೆಜ್ಜೆ ನಡೆದುಬಂದು, ಆಲಿಂಗನವಂ ಕೊಟ್ಟು, ಕುಶಲವಂ ಕೇಳಿ, ಉಚಿತಾಸನದಲ್ಲಿ ಕುಳ್ಳಿರಿಸಿ, "ತಮ್ಮ ದರ್ಶನವಿಂದಿಗೆ ಲಭಿಸಿತೆಂ"ದು ಚಂದ್ರಗುಪ್ತನು ಅರಸುಗಳಿಗೆ ಉಪಚಾರೋಕ್ತಿಗಳಂ ಹೇಳುತ್ತಿರಲು, ಆಗ ನರಪತಿಗಳು ಚಂದ್ರಗುಪ್ತನಂ ಕುರಿತು.

"ಬಹುನಕ್ಷತ್ರದಿಂ ಶೋಭಿತಮಾದ ನಭೋಮಂಡಲವು ಉದಯಿಸಿ ಬರುವ ಚಂದ್ರನಿಂ ವಿಶೇಷವಾಗಿ ಶೋಭಿಸುವಂತೆ ರಾಜಚಂದ್ರರಾದ ಚಂದ್ರಗುಪ್ತರಾಯರೇ, ನಿಮ್ಮ ಅಭ್ಯುದಯದಿಂ ರಾಜ್ಯವೆಲ್ಲವೂ ಅಲಂಕೃತವಾಗಿ ಭಯರಹಿತವಾಯಿತು" ಎಂದು ನುಡಿಯುತ್ತಿರಲು, ಅವರೆಲ್ಲರಂ ಗಂಧಮಾಲ್ಯಕರ್ಪೂರವೀಳಯಗಳಿಂದುಪಚರಿಸಿ, ಸನ್ಮಾನಗಳಿಂ ಕಳುಹುತ್ತಿರಲು.

ಅತ್ತಲಾ ಬಾಗುರಾಯಣನು ರಣಾಂಕಣವಂ ಶೋಧನೆಗೊಳಿಸಿ ನಂದರ ಕಬಂಧಗಳು ಜಪಶಾಲೆ[ಯ] ಅಗ್ನಿಯಿಂದ ಭಸ್ಮಾವಶೇಷಮಾದುದಂ, ಅವರುಗಳ ಶಿರಸ್ಸುಗಳು ಶೇಖರನ ಅಪ್ಪಣೆಯಿಂದ ತೈಲಕಟಾಹದಲ್ಲಿ ಇರುವದಂ ತಿಳಿದು, ಸಿದ್ಧಾರ್ಥಕನಂ ಕರೆದು,

"ಅಯ್ಯ, ನಂದಪತ್ನಿಯರು ಸಹಗಮನಕ್ಕೆ ಸಿದ್ಧವಾಗಿ ಇದ್ದಾರೆ. 'ತಮ್ಮ ಬಳಿಯ ವಸ್ತುಗಳಲ್ಲಿ ಪಾದಾಂಶವು ರಾಜಕೋಶಕ್ಕೆ, ಉಳಿದುದೆಲ್ಲವೂ ತಮ್ಮ ಪರಲೋಕಾರ್ಥ ಉಪಯೋಗಿಸಲಿ' ಎಂದು ನಿಶ್ಚೈಸಿ, ಈ ಅರ್ಥವಂ ನಡಸಿ, 'ಚಂದ್ರಗುಪ್ತನು ಶ್ರೇಯೋವಂತನಾಗಿ ಇರಲಿ' ಎಂದು ಹೇಳುತ್ತ, ತ್ವರಿತಪಡುತ್ತಲಿದ್ದಾರೆ. ಇದಕ್ಕೆ ಏನು ಅಪ್ಪಣೆ ?" ಎಂದು ಚಂದ್ರಗುಪ್ತನಿಗೆ ತಿಳುಹಿಸಿ, ಒಡಂಬಡಿಸಿ, ಅಪ್ಪಣೆಯಂ ತೆಗೆದುಕೊಂಡು, ನಂದರ ಶಿರಸ್ಸುಗಳಂ ಪುರದ ಹೊರಗಣ ಗಂಗಾತೀರದ ಉದ್ಯಾನದಲ್ಲಿ ಇರಿಸಿ ಬಂದು, ವರ್ತಮಾನವಂ ತಿಳುಹಿಸುವನಾಗು" ಎಂದು ಹೇಳಲು, ಆ ಮಾತಿಗೆ ಸಿದ್ಧಾರ್ಥಕನು "ಹಾಗೇ ಆಗಲೆಂ"ದು ಹೇಳಿ ಹೋಗಿ, ಚಂದ್ರುಗುಪ್ತನಂ ಕಂಡು ಕೈಮುಗಿದು, ಬಾಗುರಾಯಣ ಹೇಳಿದರ್ಥವಂ ತಿಳುಹಿಸಲು, ಆ ಮಾತಿಗೆ ಚಂದ್ರಗುಪ್ತನು ಸಿದ್ಧಾರ್ಥಕನಂ ಕುರಿತು,

"ನಂದರು ನಮ್ಮವರಿಗೆ ಮಾಡಿದ ದ್ರೋಹಕ್ಕೆ ದೈವವು ಸಹಿಸಲಾರದೆ ಅವರಿಗೆ ಈ ದುರ್ದೆಶೆಯನ್ನುಂಟುಮಾಡಿತು. ಮಿಂಚಿಹೋದ ಮಾತಿಗೆ ಮಾಡುವದೇನು ? ನಂದಪತ್ನಿಯರು ನಮಗೆ ಮಾತೃಗಳಲ್ಲದೆ ಬೇರೆಯಲ್ಲ. ಸೌಮಾಂಗಲ್ಯವೊಂದು ಹೊರತು ಎಲ್ಲದ

ರಲ್ಲಿಯೂ ಮಾತೃಸಮಾನವಾಗಿ ನಡಸಿಕೊಂಡು ಬರುವೆನು. ನನ್ನಂ ಔರಸಪುತ್ರನೆಂದು ಭಾವಿಸುತ, ಸಲಹುತ ಇರಲಿ. ವೃದ್ಧರಿಗೆ ಧೈರ್ಯವಂ ಹೇಳುತ, ನನ್ನಂ ನೋಡಿ ಎಲ್ಲಾ ದುಃಖವಂ ಮರೆತು, ಪೂಜ್ಯರಾಗಿ ಇರಲಿ. ಈ ವೇಳೆಯಲ್ಲಿ ನಾನು ಅಲ್ಲಿ ಇರುವದು ಯುಕ್ತವಾದರೂ ನನ್ನಂ ಕಂಡರೆ ದುರ್ಯೋಧನಾದಿಗಳಂ ಸಂಹರಿಸಿದ ಭೀಮಸೇನನಂ ಕಂಡು ಗಾಂಧಾರಿಗೆ ದುಃಖ ಇಮ್ಮಡಿಸಿದಂತಾಗುವದು. ಅದರಿಂದಿದು ಸಮಯವಲ್ಲ.

ನಾನು ಹೇಳಿದರ್ಥವಂ ವೃದ್ಧರಾಯರಿಗೂ ತಾಯಿಗಳಿಗೂ ಅಡ್ಡಬಿದ್ದು ಬಿನ್ನೈಸಿದೆನೆಂದು ಹೇಳುವಂತೆ ಬಾಗುರಾಯಣನಿಗೆ ತಿಳುಹಿಸಿದ ಬಳಿಕಲಾದರೂ ನಂದಪತ್ನಿಯರು ವೃದ್ಧರ ಸಾಂತ್ವವಚನವಂ, ನನ್ನ ವಿಜ್ಞಾಪನೆಯಂ ಮನಕ್ಕೆ ತಾರದೆ ಅನುಗಮನಕ್ಕೆ ನಿಶ್ಚೈಸಿದರೆ, ಯಾರ ಯತ್ನ ಏನು ಇದೆ ? ಅವರ ಚಿತ್ತವಿದ್ದಂತೆ ಆಗಲಿ. ಅಲ್ಲಿ ಆಗತಕ್ಕದ್ದಕ್ಕೆ ರುಕ್ಮನಿಗೆ ಮೊದಲೇ ನೇಮಿಸಿ ಇದೆ. ಎಲ್ಲವಂ ಬಾಗುರಾಯಣನೇ ನಿಂತು ಮಾಡಿಸಲಿ" ಎಂದು ಹೇಳಲು,

ಸಿದ್ಧಾರ್ಥಕನು 'ಹಾಗೇ ಆಗಲೆಂ'ದು, ನಂದರ ಶಿರಸ್ಸುಗಳಂ ತೆಗೆಸಿಕೊಂಡು ಹೋಗಿ, ಉದ್ಯಾನದಲ್ಲಿ ಇಳುಹಿಸಿ, ಹೋಗಿ, ಬಾಗುರಾಯಣನಿಗೆ ಎಲ್ಲವಂ ತಿಳುಹಿಸಲು, ಬಾಗುರಾಯಣನು ಚಂದ್ರಗುಪ್ತನು ಹೇಳಿದುದೆಲ್ಲವಂ ನಂದಪತ್ನಿಯರಿಗೆ ತಿಳುಹಿಸಲು, ಅದಂ ಕೇಳಿ,

"ಅಯ್ಯ ಬಾಗುರಾಯಣನೇ, ಚಂದ್ರಗುಪ್ತನು ಹೇಳಿದ ಸಾಂತ್ವವಚನವಂ ಕೇಳಿದೆವು. ಆತನು ಗುಣ[1]ಶಾಲಿ[1]ಯು. ಹೇಳಿದಂತೆ ನಡಸತಕ್ಕವನು. ಆದರೂ ಅದರಿಂ ನಮಗೆ ಸದ್ಗತಿ ಲಭಿಸಲಾರದು. ನಮ್ಮ ವಂಶದಲ್ಲಿ ಚಂದ್ರಗುಪ್ತನಾದರೂ ಶ್ರೇಯೋವಂತನಾಗಿ ಇರಲಿ. ಮುಂದಣಕಾರ್ಯಕ್ಕೆ ನಾವು ಹೇಳಿದಂತೆ ಎಲ್ಲವಂ ಸಿದ್ಧಮಾಡಿಸುವನಾಗು. ಇದೆಕೋ, ನಾವು ಹೊರಡುವೆವು" ಎನಲು, ಅದಂ ಕೇಳಿ ಬಾಗುರಾಯಣನು ಕೈಮುಗಿದು ಹೋದುದಂ ನೋಡಿ, ಸುನಂದಾದೇವಿಯು ತನ್ನ ಸೊಸೆಯರಂ ಕೈಪಿಡಿದು ನಾನಾಪ್ರಕಾರವಾಗಿ ಒಡಂಬಡಿಸುತ್ತಿರಲು, ಅದಕ್ಕೆ ಸಮ್ಮತಿಸದೆ ಹೊರಡುವದಕ್ಕೆ ತವಕಪಡುವದಂ ನೋಡಿ, ವೃದ್ಧರಾಯನು ಸುನಂದಾದೇವಿಯಂ ಕುರಿತು,

"ಎಲೈ ದೇವಿಯೇ, ನಿನ್ನ ಸಾಂತ್ವವಚನಗಳಿಗೆ ಈ ಬಾಲೆಯರು ಒಡಂಬಡುವಂತೆ ತೋರುವದು ಇಲ್ಲ. ಅವರು ಸದ್ಗತಿಯಂ ಸಂಪಾದಿಸಿಕೊಳ್ಳುವದಕ್ಕೆ ನೀನು ಸಮ್ಮತಳಾಗು. ಮೊದಲು ಹೇಳಿದ ಮಹಾಋಷಿವಾಕ್ಯಕ್ಕೆ ಅನ್ಯಥಾ ಬರಲಿಲ್ಲ. ಏನೆಂದರೆ, ಪುತ್ರಾಭಿಲಾಷಿಯಾಗಿ ಇರುತ್ತಿದ್ದ ನಾನು ನಿನ್ನ ಶಿರಸ್ಸಿನಲ್ಲಿ ತಳಿದ ಪಾದೋದಕಬಿಂದುಗಳು ಜಗುಳಿ ಹೋದುದಂ, ಪ್ರಿಯಪತ್ನಿಯ ಶಿರಸ್ಸಿನಲ್ಲಿ ತಳಿದ ಬಿಂದು ಚಲಿಸದೆ ಇರುವದಂ ಕಂಡು, ಅದರ ಕಾರಣವಂ ಮಹಾಋಷಿಗಳಂ ಕೇಳಿದುದಕ್ಕೆ, ಅವರು 'ತರಂಗಗಳು ಸ್ತಿಮಿತವಾಗಲು ಚಂದ್ರಬಿಂಬ ಒಂದೇ ನಿಲ್ಲುವದೆಂ'ದು ಭಾವಗರ್ಭಿತವಾಗಿ ಹೇಳಿದ ಮಾತಿಗೆ ಈಗ ನಿದರ್ಶನವುಂಟಾಯಿತು. ನಾವು ಪಡೆದುದಕ್ಕೆ ದುಃಖಿಪಟ್ಟು ಫಲವೇನು ? ಹಿಂದೆ ಹೋದುದೆಲ್ಲವಂ ಸ್ವಪ್ನದರ್ಶನವೆಂದು ತಿಳಿಯುವಳಾಗು. ಮುಂದೆ ನಾವು ಸದ್ಗತಿಯಂ ಬಯಸ

---

೧. ಶೀಲಿ (ಕ)

ಬೇಕಲ್ಲದೆ ನಾನಾವಿಧ ಹಂಬಲಿಸಿದ್ದರಿಂದ ಪ್ರಯೋಜನವೇನು ?" ಎಂದು ಹೇಳುತ್ತಿರಲು,

ಅಷ್ಟರಲ್ಲಿಯೇ, ಅಂತಃಪುರದ ದಾಸೀಜನದ ಕಲಕಲಧ್ವನಿಯು ಪುರವೆಲ್ಲವಂ ಮುಚ್ಚಿ, ಜನಸಂಘವು [೧]ನೆ[೧]ರೆಯುತ್ತಿರಲು, ನಂದಪತ್ನಿಯರುಗಳೆಲ್ಲರೂ ತಮ್ಮ ಬಳಿಯ ವಸ್ತುಗಳಂ ಸುವಾಸಿನಿಯರಿಗೆ ಕೊಡುತ್ತ, ಸರಭಸದಿಂ ಹೊರಟು, ವಾತಾಹತಿಯಿಂ ಭಗ್ನವಾದ ಕದಳಿಕಾನಿಕರದಂತೆ ವೃದ್ಧರಾಜದಂಪತಿಗಳಿಗೆ ದಂಡವತ್ಪ್ರಣಾಮಂಗೈದು, ರಾಜದ್ವಾರದಿಂ ಹೊರಡುತ್ತಿರಲು, ಪೌರಜನಗಳಿಂದೀಡಾಡುವ ಕುಂಕುಮ ಪಟವಾಸ ಪುಷ್ಪಧೂಳಿಗಳಿಂ ಸೂರ್ಯಾತಪ ಕಾಣಿಸದಂತೆ, ಕಾಳಾಗರುಧೂಮರಾಜಿಯಿಂದಂಧಕಾರ ಕವಿದಂತೆ, ಬಾಷ್ಪೋದಕಧಾರೆಗಳಿಂ ಪುರವೀಧಿಗಳೆಲ್ಲವೂ ಪಂಕಪ್ರಾಯವಾಗುತ್ತಿರಲು, ಈಡಾಡುವ ಭೂಷಣಪ್ರಭಾಜಾಲವೆಂಬ ಇಂದ್ರಚಾಪಗಳಿಂದಲೂ ಬಾಷ್ಪಧಾರೆಗಳೆಂಬ ವರುಷಬಿಂದುಗಳಿಂದಲೂ ಆಕ್ರಂದನವೆಂಬ ಅಶನಿರವದಿಂದಲೂ ತನುಕಾಂತಿಗಳೆಂಬ ಕುಡಿಮಿಂಚುಗಳಿಂದಲೂ ಪತಿವಿಯೋಗದುಃಖವೆಂಬ ಅಂಧಕಾರದಿಂದಲೂ ದೀನವಚನದಿಂ ಬಾಯಿಬಿಡುವ ದಾಸೀನಿಕರವೆಂಬ ಚಾತಕರಾಜಿಯಿಂದಲೂ ಶ್ವೇತಪರಿಧಾನದಿಂ ಬರುವ ಚೇಟೀನಿಕರವೆಂಬ ಬಲಾಕಗಳಿಂದಲೂ ಮೇಲೆಮೇಲೆ ಕವಿದುಬರುವ ಪೌರಜನಸಂಘವೆಂಬ ಮೇಘತಂಡಗಳಿಂದಲೂ ಆ ದಿನವು ವರುಷಾಕಾಲದ ದುರ್ದಿನದಂತೆ ಕಾಣಿಸುತ್ತಿರಲು,

ಈ ತೆರದಿಂದೆಲ್ಲರೂ ಗಂಗಾತೀರದ ಉದ್ಯಾನಕ್ಕೆ ಹೋಗಿ, ಅಶನಿಘಾತದಿಂದುದುರಿದ ಫಲಗುಚ್ಛದಂತೆ, ವನಕರಿಯಿಂದೀಡಾಡಿದ ವಾರಿಜನಿಕರದಂತೆ, ಕುಂಡಲಮಂಡಿತಗಳಾಗಿ, ಪಣೆಯ ಕಸ್ತೂರೀತಿಲಕಗಳಿಂ, ಪೂಸಿದ ಕಂಠಾನುಲೇಪನಗಳಿಂ, ಬಿಚ್ಚಿದ ಕುರುಳು ಕೂದಲುಗಳಿಂ, ಅರೆಗಣ್ಣುಗಳಂ ಮುಚ್ಚಿ ಸುಖಪಾರವಶ್ಯವಾದಂತೆ ಕಂಗೊಳಿಸುವ ಪತಿಗಳ ಶಿರಸ್ಸಂ ನೋಡಿ, ಕೆಲಬರು ಗಿರಿಶಿಖರದಿಂ ನೆಲಕ್ಕೆ ಬೀಳುವರಂತೆ ಭೂಮಿಯಲ್ಲಿ ಬಿದ್ದು ಮೂರ್ಛಾಂಧಕಾರಾವೃತರಾಗಲು, ಕೆಲಬರು ಧೈರ್ಯದಿಂ ಪತಿಯ ಶಿರವಂ ತಮ್ಮ ವಕ್ಷಸ್ಥಳದಲ್ಲಿಟ್ಟು ಬಾರಿಬಾರಿಗೂ ಚುಂಬಿಸುತ್ತ, ಕಪೋಲಗಳಂ ನೇವರಿಸುತ್ತ, "ಸ್ವಾಮಿ, ನಾಥನೇ" ಎಂದು ಬಾಷ್ಪಧಾರೆಗಳಿಂ ತೊಳೆಯುತ್ತ, ದುಃಖಗ್ರಹಗ್ರಸ್ತರಾಗಿ, ಮರುಳುಗಳಂತೆ ಲಜ್ಜೆಯಂ ಬಿಟ್ಟು "ಹಾ ರಮಣನೇ, ಯಾಕೆ ಮಾತನಾಡೆ ? ಏನು ಮುನಿಸು ನಿನಗೆ, ಏನು ನನ್ನಲ್ಲಿ ಅಪರಾಧವು ?" ಎಂದು ಒರ್ವಳು ;

ಪತಿಯ ಅಂಗದಲ್ಲಿ ಐಕ್ಯವಂ ಪಡೆವಳಂತೆ ಕಂಠದೇಶವನ್ನಾಲಿಂಗಿಸುತ್ತ, ಕೈಮುಗಿದು, "ದಮ್ಮಯ್ಯ, ಒಂದು ಮಾತನಾಡೈ" ಎಂದು ಪ್ರಾರ್ಥಿಸುತ್ತ, "ನೀವು ಪತಿಯಂ ಬದುಕಿಸಿಕೊಳ್ಳಿರೇ, ಜೀವವಂ ತಂದುಕೊಡಿರೆಂ"ದು ಜನರ ಪಾದವಂ ಪಿಡಿಯುತ್ತ, "ಹಾ ಪತಿ ನಷ್ಟನಾದುದು ದಿಟವೇ, ಏನು ವಿಚಿತ್ರವೆಂ"ದು ಧ್ಯಾನಿಸುತ್ತ, "ಹಾ ನಾಥನೇ, ಏನು ನಿನಗೆ ಸಂಭವಿಸಿತು ? ಪುಷ್ಪಶಯನವಂ ಹಳಿಯುವನಿಗೆ ಕಂಟಕಪಾಷಾಣಗಳಿಂ ಪರುಷಮಾದ ಈ ಭೂಶಯನ ಬೇಕಾಯಿತೇ ?" ಎಂದು ಪ್ರಿಯನ ಮುಖದ ಧೂಳಿಗಳಂ ಸೆರಗಿನಿಂದ ಒರೆಸುತ್ತ, "ಹಾ ತಾಯಿ ಕಮಲಾಂಬಿಕೆಯೇ, ಹಾ ತಂದೆ ವಿದರ್ಭರಾಯನೇ, ತಪವಂ ಮಾಡಿ ನನ್ನಂ ಪಡೆದುದು ಈ ಕ್ಲೇಶಕ್ಕೋಸುಗವಾಯಿತೇ ?" ಎಂದು ಒಬ್ಬ ಬಾಲೆಯು,

---

೧. ಮೆ (ಕ, ಖ, ಗ)

"ಹಾ ನಾಥನೇ, ಎಷ್ಟು ಒರಲಿಕೊಂಡರೂ ಯಾಕೆ ಕಣ್ಣು ತೆರೆದು ನೋಡೆ ? ನಿನ್ನ ಹೃದಯ ಯಾತಕಿಷ್ಟು ಕಠಿನವಾಯಿತು ? ಹಾ ಕ್ಷತ್ರಧರ್ಮವೇ, ಪತಿಯಂ ಹೊಂದಿದೆಯಾ? ವೀರಲಕ್ಷ್ಮಿಯೇ, ಇನ್ನು ಯಾರಂ ಹೊಂದುವೆ ? ಶಸ್ತ್ರವಿದ್ಯವೇ, ನಮ್ಮಂತಾದೆಯಾ ? ವನ ದೇವತೆಗಳಿರಾ, ಪತಿದಾನವಂ ಮಾಡಿ. ಅಂಬ ಭಾಗೀರಥಿಯೇ, ಸಂತಾಪವಂ ಶಮನ ಗೊಳಿಸು" ಎಂದು ಒರ್ವಳು ;

"ಹಾ ರಮಣನೇ, ನಾನು ಹೇಳಿದುದಂ ತಂದುಕೊಟ್ಟೆಯಾ ? ಬೇಗ ಬರುವೆನೆಂದು ವಂಚಿಸಿ ಹೋದೆಯಾ ? ಸಖೀಜನರುಗಳಿರಾ, 'ಲೋಕದಲ್ಲಿ ನಿನಗೆ ಸರಿ ಯಾರೆಂ'ದು ಹೇಳುತ್ತಿದ್ದರಲ್ಲೇ ? ಪತಿಯ ಚಿತ್ತಾನುಸಾರ ನಡೆದುದಕ್ಕೆ ಈ ತೆರನಾಯಿತೇ ? ಹೋಗುವ ಅವಸರದಲ್ಲಿ ಏನು ನಿನಗೆ ಹೇಳಿ ಹೋದನೇ ? ಈ ಸೊಬಗು ಚಲುವಿಕೆ ಸಿಂಗರಿಸಿದುದಂ ಯಾರು ನೋಡುವರೆಂ"ದು ಸಖೀಜನವಂ ತಕ್ಕೈಸಿ ಹಂಬಲಿಸುವಳೊರ್ವಳು ;

"ಹಾ ನನ್ನ ಒಡತಿ ಮಾಲಿನಿಯೇ, ಪ್ರಿಯನ ನಖದಿಂ ಬರೆದ ಮಕರಪತ್ರಗಳು ಈಗ ಬರೆದಂತೆ ನಿನ್ನ ಕಪೋಲದಲ್ಲಿ ಕಾಣಿಸುವದಲ್ಲೇ. ಪ್ರಿಯ ಬರುವನೆಂಬ ಸಡಗರದಿಂದಲಂ ಕರಿಸಿದದೆಲ್ಲವೂ ಇದ್ದಂತೆ ಇರುವದಲ್ಲೇ. ಎಷ್ಟೆಂದು ನೋಡಿ ಸೈರಿಸಲೇ" ಎಂದು ಒರ್ವ ದೂತಿಯು ;

"ನಿನ್ನ ಪ್ರಿಯನು ಬಂಗಾರದವಳ ಬನ್ನಣೆಗೆ ಬೆರಗಾಗಿ ಭಾವಮೈದುನನಂ ಭಾಗ್ಯದಿಂ ತನ್ನಂತೆ ಮಾಡುತ್ತಿದ್ದರೂ, ನೀನು ಬದಲುತ್ತರವಂ ಹೇಳಿದವಳಲ್ಲ. ನನ್ನ ಕಂದ, ನೀನು ಎಷ್ಟು ಗುಣವಂತೆಯೇ" ಎಂದು ಒರ್ವ ಸೈಳೇಂದ್ರಿಯು ;

"ಅಕ್ಕಯ್ಯ, ನಾವು ಇಲ್ಲಿ ಬಂದ ಬಳಿಕ ನಿಮ್ಮ ರತ್ನದ ಕನ್ನಡಿಯಂ ಯಾರು ಒಯ್ವರೋ? ಗಿಣಿವಿಂಡುಗಳಂ ಯಾರು ಪೋಷಿಸುವರೋ ?" ಎಂದು ಒರ್ವ [1]ಮುಗ್ಧ ಚೇಟಿ[1]ಯು.

ಈ ರೀತಿಯಲ್ಲಿ ಪುರುಷನನ್ನಗಲಿದ ಚಕ್ರವಾಕಿಗಳಂತೆ ನಾನಾವಿಧದಿಂ ಪ್ರಳಾಪಿಸು ತ್ತಿರುವ ನಂದಪತ್ನಿಯರುಗಳಂ ನೋಡಿ, ಸಹಿಸಲಾರದೆ ಜನರೆಲ್ಲರೂ ಬಾಷ್ಪೋದಕ ವೃಷ್ಟಿಯಿಂದಭಿಷಿಕ್ತರಾಗುತ್ತಿರಲು,

ಆಗ ನಂದಪತ್ನಿಯು ಪ್ರಳಾಪಪಡುವ ಓರಗಿತ್ತಿಯರಂ ನೋಡಿ, "ಎಲೈ ಬಾಲಕಿ ಯರುಗಳಿರ, ಜೀವಿತಾಶೆಯಂ ತ್ಯಜಿಸಿ ಇಲ್ಲಿ ಬಂದ ಬಳಿಕ, ವೃಥಾ ಹಂಬಲಿಸಿದುದರಿಂ ಫಲವೇನು ? ಲೋಕಾಂತರಗತರಾದ ಪತಿಗಳು ನಿಮ್ಮಂ ಕಾಣದೆ ಎಷ್ಟು ಕ್ಲೇಶಪಡು ವರೋ ? ಸುಕೃತವಿಮಾನಗಳು ಸನ್ನಿಹಿತವಾಗುವವು. ಬೇಗ ಏಳಿ. ನಮ್ಮ ಸಕಲಸಂತಾಪ ಗಳಂ ಭಾಗೀರಥಿಯೇ ಶಮನಗೊಳಿಸುವಳು" ಎಂದು ಹೇಳಿ, ಎಲ್ಲರೂ ಗಂಗಾನದಿಯಲ್ಲಿ ಸ್ನಾನವಂ ಮಾಡಿ, ಪತಿಗಳ ಶಿರಸ್ಸುಗಳಂ ಗಂಗಾತೀರ್ಥದಲ್ಲಿ ಕ್ಷಾಳನೆಗೈದು ಮೇಲೆ ಬರುತ್ತಿರಲು, ಆಗ ನಂದರಿಗೆ ಪ್ರಿಯಪತ್ನಿಯರಾದ ಬಂಗಾರದ ಸ್ತ್ರೀಯರೆಲ್ಲರೂ ಬಂದು ನಂದಪತ್ನಿಯರಿಗಭಿವಂದಿಸಿ,

"ಅಕ್ಕಯ್ಯಗಳಿರ, ನಮಗೆ ಸ್ನಾನವಾಯಿತು. ನಾವು ನಿಮ್ಮ ಸಂಗಡಲೇ ಬರುವೆವು. ನೀವು

---

೧. ಮಂದಚೇಷ್ಟಿ (ಕ)

ಸಮ್ಮತಿಸಬೇಕು'' ಎಂದು ಪ್ರಾರ್ಥಿಸಲು, ಅದಂ ಕೇಳಿ ನಂದಪತ್ನಿಯು,

''ಎಲೈ ಮರುಳುಗಳಿರ, ಸಹಗಮನವೆಂಬುದು ಧರ್ಮಪತ್ನಿಯರಿಗೆ ಯೋಗ್ಯವು. ಅನ್ಯರಿಗೆ ದುರ್ಮರಣದೋಷ ಘಟಿಸುವದಲ್ಲದೆ ಸದ್ಗತಿದಾಯಕವಲ್ಲವದರಿಂ ನಿಮ್ಮೆಲ್ಲರಂ ತಾಯಿಗಳಂ ಕಂಡಂತೆ ಗುಣವಂತನಾದ ಚಂದ್ರಗುಪ್ತನು ಸಲಹುತ್ತಲಿರುವನು. ವಿಹಿತದಿಂದಿರುತ್ತ ಸದ್ಗತಿಯಂ ಕಾಣುವರಾಗಿ'' ಎಂದು ನೇಮಿಸಿ,

ನಂದಪತ್ನಿಯರು ಭೂಸುರಸ್ತೋಮಕ್ಕೆ ಮಹಾದಾನಪ್ರತಿನಿಧಿಯಾದ ದ್ರವ್ಯಗಳಂ ಕೃಷ್ಣಾರ್ಪಣವೆಂದು ಕೊಟ್ಟು, ಸಾಲಂಕಾರ ಗೋಲಕ್ಷಗಳಂ ದಾನವಂ ಮಾಡಿ, ವಿಪ್ರದಂಪತಿಗಳಿಗಲಂಕರಿಸಿ ಬಾಗಿನಗಳಂ ಕೊಟ್ಟು, ವೃದ್ಧರಾಯರ ಅನುಮತಿಯಿಂದ ಪುರೋಹಿತರು ಮಾಡುವ ತತ್ಕಾಲೋಚಿತಕರ್ಮವಾದುದಂ ನೋಡಿ, ವಿಪ್ರರನುಮತಿಯಂ ಕೈಕೊಂಡು, ಗಂಗಾದೇವಿಯಂ ಪೂಜಿಸಿ, ಪ್ರಾರ್ಥಿಸಿ, ದೇವತೆಗಳಿಗಭಿವಂದಿಸಿ, ಪತಿಗಳ ಶಿರಸ್ಸುಗಳಂ ತೆಗೆದುಕೊಂಡು, ಅಗಿಲು ಚಂದನ ಗಂಧದ್ರವ್ಯಗಳಿಂ ರಚಿಸಿ ಇರುವ ಚಿತೆಗಳನ್ನಾರೋಹಣವಂ ಮಾಡಿ, ಪತಿಶಿರಸ್ಸುಗಳನ್ನಾಲಿಂಗಿಸಿ, 'ಶಿವಶಿವ ಮುಕುಂದ'ನೆಂದು ಅಚಲಚಿತ್ತದಿಂ ಹರಿಹರಸ್ಮರಣೆಯಂ ಮಾಡುತ್ತಿರಲು, ಆಗ ಹವ್ಯವಾಹನನು ಪ್ರಜ್ವಲಿಸುತ್ತ ಆವರಿಸಿ ಬರುತ್ತಿರಲು, ಅಗ್ನಿಗೆ ಆಹುತಿಯಂ ಕೊಡುವಂತೆ, ದಾವಾಗ್ನಿಗೆ ಬಾಡುವ ಪುಷ್ಪಿತಲತೆಗಳಂತೆ, ತರಣಿಕಿರಣದಲ್ಲಸ್ತಮಿಸುವ ತಾರಕಿಗಳಂತೆ, ನಂದಪತ್ನಿಯರುಗಳೆಲ್ಲರೂ ಆಶುಶುಕ್ಷಣಿಗೆ ತನುವನ್ನೊಪ್ಪಿಸಿ, ಜಯ ಜಯವೆಂದು ಜನರು ಕೊಂಡಾಡುತ್ತಿರಲು, ಸಹಗಮನದಿಂದುಂಟಾದ ಸದ್ಗತಿಗೆ ಸಂದರು.

ಅನೇಕ ಲಕ್ಷ ಭೂರಿದಕ್ಷಿಣೆಗಳಂ ಕೊಟ್ಟು, ಬಾಗುರಾಯಣಮುಖ್ಯರಾದವರೆಲ್ಲರೂ ಗಂಗಾನದಿಯಲ್ಲಿ ಸ್ನಾನವಂ ಮಾಡಿ, ಪುರಕ್ಕೆ ಬರುತ್ತಲಿದ್ದರು. ಅಂದು ಮೊದಲುಗೊಂಡು ವೃದ್ಧರಾಯನ ಅಪ್ಪಣೆಯಿಂದ ಬಾಗುರಾಯಣನು ನಂದರಿಗೆ ಸದ್ಗತಿ ಉಂಟಾಗುವದಕ್ಕೆ ಲಕ್ಷಬ್ರಾಹ್ಮಣಭೋಜನಗಳಂ, ವಿಪ್ರರಿಗೆ ದರಿದ್ರಹತವಾಗುವಂತೆ ಬಹುದ್ರವ್ಯವ್ಯಯವಂ, ಪೂರ್ತಕರ್ಮಗಳಂ ಬಹುಪ್ರಕಾರವಾಗಿ ಮಾಡುತಿದ್ದನು ಎಂಬಲ್ಲಿಗೆ,

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಮಹೀಶೂರನರಪತಿ ಶ್ರೀಕೃಷ್ಣರಾಜೇಂದ್ರರಾಶ್ರಿತ ಹೊಯಿಸಣಿಗಕುಲಸಂಜಾತ ನಾರಾಯಣಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ನಂದಪಂಚತ್ವಕಥನವೆಂಬ ಅಷ್ಟಮಾಶಯಃ ಸಮಾಪ್ತಃ.

ನವಮಾಶ್ವಾಸ : ವಿಷಕನ್ಯಾಗಮನವು

ಅನಂತರದಲ್ಲಿ, ಪುರದಲ್ಲಿ ಇರುವ ಅಮಾತ್ಯ ರಾಕ್ಷಸನು ತನ್ನ ಮನಸ್ಸಿನಲ್ಲಿ ''ಈಗ ಪರ್ವತರಾಯಸೇನೆ ಬಂದು, ಪುರವಂ ಕಾವಲು ಮಾಡಿಕೊಂಡು, ನಂದರಿಗೆ ಆಪ್ತನಾಗಿ ತನಗೆ ವೈರಿಯಾಗಿ ಇದ್ದುದರಿಂದ ನಾನು ಚಂದ್ರಗುಪ್ತನಿಗೆ ಸಿಲುಕಿದರೆ ಏನು ಮಾಡುವನೋ ? ಈ ಸಮಯದಲ್ಲಿ ಮಿತ್ರರುಗಳೇ ಶತ್ರುಗಳಾದಾರು, ನಂದರಿಗೆ ಮುಗಿದ ಕೈಗಳಂ ಪ್ರಭುವೆಂದು ಮತ್ತೊಬ್ಬರಿಗೆ ಮುಗಿದರೆ, ನನ್ನ ಪೌರುಷ ಸಾಹಸ ಸ್ವಾಮಿಭಕ್ತಿಯು ವ್ಯರ್ಥವಾಗುವದು. ನಂದರಿಗೆ ಶತ್ರುವಾದ ಚಂದ್ರಗುಪ್ತನಂ ಯಾವ ಉಪಾಯದಿಂದ

ಲಾದರೂ ಸಂಹರಿಸಿ, ಲೋಕಾಂತರಸ್ಥರಾಗಿ ಇರುವ ನಮ್ಮ ಪ್ರಭುಗಳಿಗೆ ಸಂತೋಷವನ್ನುಂಟುಮಾಡುವೆನಲ್ಲದೆ, ವೃಥಾ ಜೀವನವಂ ಮಾಡುವನಲ್ಲ. ಪ್ರಕೃತದಲ್ಲಿ, ಸ್ವಜನಕ್ಕೆ ಶತ್ರುಬಾಧೆ ತಟ್ಟದಂತೆ ಮಾಡಬೇಕೆಂ"ದು ನಿಶ್ಚೈಸಿ, ರಹಸ್ಯದಲ್ಲಿ ಚಂದನದಾಸನೆಂಬ ಆಪ್ತವರ್ತಕನಂ ಕರೆಕಳುಹಿಸಿ,

"ಎಲೈ ಆಪ್ತಮಿತ್ರನೇ, ನಂದರ ವೈರಿಯಾದ ಚಂದ್ರಗುಪ್ತನಂ ಉಪಾಯಾಂತರದಿಂ ಸಂಹರಿಸಿ, ವೃದ್ಧನಾದ ಸರ್ವಾರ್ಥಸಿದ್ಧಿರಾಯನಿಗೆ ಸ್ವೀಕೃತಪುತ್ರನನ್ನಾದರೂ ಉಂಟುಮಾಡಿ, ಅವನಿಗೆ ರಾಜ್ಯಾಧಿಪತ್ಯವಂ ಕೊಡಿಸಿ, ನಂದಕುಲ ಉತ್ಪನ್ನವಾಗದಂತೆ ಮಾಡುವದಕ್ಕೆ ಈ ಪುರವಂ ಬಿಟ್ಟು ಹೋಗುವೆನು. ಅನ್ಯರಿಗೆ ತಿಳಿಯದಂತೆ ನನ್ನ ಪತ್ನೀ ಪುತ್ರರನ್ನು ರಹಸ್ಯದಲ್ಲಿ ಇಟ್ಟು ಸಲಹುವನಾಗು. ಈ ವಸ್ತುಗಳು ನಿನ್ನ ವಶದಲ್ಲಿ ಇರಲಿ" ಎಂದು ಹೇಳಿ, ಹೆಂಗಸರು ಮಕ್ಕಳುಗಳಂ ಚಂದನದಾಸನ ವಶವಂ ಮಾಡಿ, ಕಳುಹಿಸಿ, ಶತ್ರುನಿಗ್ರಹಕ್ಕೆ ಮಾಡುವ ಕಪಟೋಪಾಯ[೧]ಗಳಂ[೧] ನೆನೆದು ನಿಶ್ಚೈಸಿ, ಯಾವದಾನೊಂದು ಸಮಯದಲ್ಲಿ ಸಾಮಾದಿ ಉಪಾಯಚತುಷ್ಟಯದಿಂದಲಾದರೂ ಜಯಿಸುವದಕ್ಕೆ ಶಕ್ಯನಲ್ಲದೆ ವೈರವಂ ಸಾಧಿಸಬೇಕೆಂದು ಬರುವ ಶತ್ರುನಿಗ್ರಹಾರ್ಥವಾಗಿ ಮೊದಲೇ ಸಮುದ್ರದಲ್ಲಿ ಜನಿಸಿದ ವಿಷಮತ್ಸ್ಯಾಹಾರದಿಂದಲೇ ಜೀವಿಸುತ್ತಿರುವ ಮಾತಾಪಿತೃಗಳ ಗರ್ಭದಲ್ಲಿ ಜನಿಸಿದ ಹೆಣ್ಣುಶಿಶುವಿಗೆ, [೨]ಜರಣಾದಿ[೨] ಸಂಸ್ಕಾರದಿಂದ [೩]ಪಾರದ[೩]ರಸವಂ ಸ್ಪರುಶವೇದಿಯಂ ಮಾಡಿ ಕಾರ್ಯಕ್ಕೆ ಉಪಯೋಗಿಸಿಕೊಳ್ಳುವಂತೆ ಬಾಲ್ಯಾರಭ್ಯ ಆ ಶಿಶುವಿಗೆ ವಯೋನುಗುಣವಾಗಿ ವಿಷಸೇವನೆಯಂ ಮಾಡಿಸಿ, ವರುಷ ಹನ್ನೆರಡರ ಮೇಲೆ ಆ ಶಿಶುವಿನ ಅಂಗಸ್ಪರುಶವಾದರೆ, ಆ ವಿಷದೋಷದಿಂದ ಪ್ರಾಣಿಗಳು ಆಗಲೇ ಹತವಾಗುವದಂ ತಿಳಿದು, ಆ ಕನ್ನಿಕೆಗೆ ಸಂಗೀತಾದಿ ಕುಶಲವಿದ್ಯೆಗಳಂ ಕಲಿಸಿ, ರಸಿಕಜನ ಮೆಚ್ಚುವಂತೆ ಸೌಂದರ್ಯಶಾಲಿನಿಯಾದ ಆ ಸ್ತ್ರೀಯಂ ಪ್ರೌಢೆಯಂ ಮಾಡಿ, "ಸಮಯ ಬಂದಾಗ ಬರಲಿ" ಎಂದು ಹೇಳಿ,ರಕ್ಷಿಸಿ ಇದ್ದ ಆ ಕನ್ನೆಯಂ ಕರೆಕಳುಹಿಸಿ, ದಿವ್ಯಭೂಷಣವಸ್ತ್ರಗಳಿಂದಲಂಕರಿಸಿ, ಅವಳಿಗೆ ಹೇಳುವ ಬುದ್ಧಿಮತಿಯಂ ಹೇಳಿ, ತನಗೆ ಆಪ್ತನಂತೆ ಕಾದುಕೊಂಡಿದ್ದ ಕ್ಷಪಣಕನಂ ಕರೆದು,

"ಎಲೈ ಜೀವಸಿದ್ಧಿಯೇ, ಈ ಕನ್ನೆಯು ಸೆರೆಸಿಕ್ಕಿದ ವಲ್ಲಭರಾಯನ ಪ್ರಿಯಪುತ್ರಿ. ಇವಳು ಮಹಾಪ್ರೌಢೆಯು. ಬಾಲ್ಯದಿಂದ ಹದಿನೈದುವರುಷ ಸಾಕಿ ಪ್ರೌಢೆಯಂ ಮಾಡಿ ಜ್ಯೇಷ್ಠನಂದನಿಗೆ ಪ್ರಿಯಪತ್ನಿಯಂ ಮಾಡಬೇಕೆಂದು ಸಲಹುತ್ತಲಿದ್ದೆನು. ಅವರು ಕಾಲವಾದರು. ರಾಜಯೋಗ್ಯವಾದ ಈ ಕನ್ನೆಯನ್ನು ನಾನು ಕಳುಹಿಸಿದೆನೆಂದು ಚಂದ್ರಗುಪ್ತನಿಗೆ ಒಪ್ಪಿಸಿದರೆ, ಎಲ್ಲವಂ ಬಿಟ್ಟು ರಾಕ್ಷಸನು ಸ್ತ್ರೀಮೂಲಕದಿಂದ ಚಂದ್ರಗುಪ್ತನ ಪ್ರಸಾದವಂ ಸಂಪಾದಿಸಿಕೊಂಡನೆಂಬ ಅಪಯಶಸ್ಸು ಬರುವದರಿಂದ ನನ್ನಿಂದ ಪೋಷಿತಳಾದವಳಾದರೂ 'ಈ ಕನ್ನೆಯು ನನ್ನ ಶಿಷ್ಯಳೆಂ'ದು ಹೇಳಿ, ನೀವಾಗಿ ಒಪ್ಪಿಸುವಂತೆ ಒಪ್ಪಿಸಿ, ಶಯನಗೃಹಕ್ಕೆ ಈ ಕನ್ನೆಯು ಹೋಗುವಂತೆ ಚಂದ್ರಗುಪ್ತನಂ ಒಡಂಬಡಿಸಿದರೆ, ಆ ಕ್ಷಣವೇ ನನ್ನ ಮನೋರಥವು ಸಫಲವಾಗುವದು. 'ನಾನು ಸನ್ಯಾಸಿಯು, ನನಗೆ ಸ್ತ್ರೀಮಧ್ಯಸ್ಥವು ನಿಂದಿತವೆಂ'ದು

---

೧. ವಂ ಮಾಡಿ (ಕ) ೨. ಚರಣಾದಿ (ಕ) ೩. ಪಾದ (ಕ)

ಹೇಳಬೇಡ. ಮತ್ತೊಬ್ಬರ ಸಂಗಡ ಕಳುಹಿಸಿದರೆ ಸೌಂದರ್ಯಕ್ಕೆ ಮೋಹಿಸಿ ಅಪಹರಿಸಿಯಾರು. ಮತ್ತೊಬ್ಬರಿಗೆ ಘಟನೆ ಮಾಡುವುದಕ್ಕೆ ಸಾಮರ್ಥ್ಯವು ಸಾಲದು. ಹ್ಯಾಗಾದರೂ ಈ ಕನ್ನೆಯ ಅಂಗಸ್ಪರ್ಶವು ಸ್ವಲ್ಪವಾದರೂ ಚಂದ್ರಗುಪ್ತನಿಗೆ ಉಂಟಾದರೆ, ನಂದನಾಶನ ದುಃಖವಂ ಮರೆಯಬಹುದು. ಇವಳಿಗೆ ಅನ್ನೋದಕಗಳಂ ಕೊಡುತ್ತ, ಸಮಯವಂ ನಿರೀಕ್ಷಿಸಿ ಚಂದ್ರಗುಪ್ತನಿಗೆ ಒಪ್ಪಿಸುವನಾಗು" ಎಂದು ಹೇಳಲು, ಆ ಮಾತಿಗೆ ಕ್ಷಪಣಕನಿಂತೆಂದನು :

"ಅಯ್ಯ ಅಮಾತ್ಯರೇ, ಈ ಸಮಯದಲ್ಲಿ ನಿನ್ನ ಮಾತಂ ನಾನು ಮೀರುವನಲ್ಲ. ನನ್ನ ಬುದ್ಧಿ ಬಲ್ಲಮಟ್ಟಿಗೆ ಚಂದ್ರಗುಪ್ತನಂ ಒಡಂಬಡಿಸಿ, ಈ ಕನ್ನೆಯಂ ಆತನಿಗೆ ಪ್ರೀತಿ ಪಾತ್ರಳಂ ಮಾಡುವೆನು. ಇದಕ್ಕೆ ಸಂಶಯವಿಲ್ಲ. ಏನಾದರೂ ಒಂದು ವೇಳೆ ಇವಳು ರಾಕ್ಷಸನಿಂದ ಸಂರಕ್ಷಿತಳಾದುದರಿಂದ ಇವಳು ಪರಿಗ್ರಹಕ್ಕೆ ಯೋಗ್ಯಳಲ್ಲವೆಂದು ಚಾಣಕ್ಯನ ವಚನಗೌರವದಿಂದ ಚಂದ್ರಗುಪ್ತನು ಸಮ್ಮತಿಸದೆ ಉಪೇಕ್ಷಿಸಿದರೆ, ನಿನ್ನ ಸಂಕಲ್ಪವು ನಿಷ್ಫಲವಾಗುವದಷ್ಟೆ. ಆಗಲಾದರೂ ಚಂದ್ರಗುಪ್ತನಿಗೆ ಶರಣಾಗತನಾಗುವೆಯೋ ಇನ್ನೂ ಪ್ರಯತ್ನಶೇಷವುಂಟೋ" ಎನಲು,

"ಕ್ಷಪಣಕನೇ, ನಿನ್ನೊಡನೆ ಮರೆಮಾಡುವುದುಂಟೇ ? ಹೀಗೆ ನಿನ್ನ ಮುಖದಿಂ ಮಾಡಿದ ಸಾಮದಾನಗಳಿಗೆ ವಶನಾಗದಿದ್ದರೆ, ಚಂದ್ರಗುಪ್ತ ಚಾಣಕ್ಯರಿಗೆ ಭೇದವಂ ಕಲ್ಪಿಸುವದಕ್ಕೆ ಚಾಣಕ್ಯನು ಜಾಗರೂಕನಾದುದರಿಂದಲೂ ವಿರಕ್ತನಾದುದರಿಂದಲೂ ಅವರಿರ್ವರಿಗೆ ಭೇದ ಸಂಘಟಿಸದಿದ್ದರೂ ನನಗೆ ಪೂರ್ವಮಿತ್ರನಾದ ಪರ್ವತರಾಯನಲ್ಲಿ ಹೋಗಿ ಸೇರಿದರೆ ಪೂರ್ವೋಪಕಾರಸ್ಮರಣೆಯಿಂದ ತನಗೆ ಬಂದ ಚಂದ್ರಗುಪ್ತನ ರಾಜ್ಯಕ್ಕೆ ನನ್ನನ್ನೇ ಅಧಿಪತಿಯಂ ಮಾಡಿಯಾನು. ನಂದಕೋಶದ ರಹಸ್ಯವಂ ತಿಳಿದಿರುವದರಿಂದ ಒಂದು ಕಡೆಯ ಹೊರಗಣ ಬಂಡಾರವಂ ವ್ಯಯಮಾಡಿದರೆ, ಪರ್ವತರಾಯನಂಥ ಅರಸುಗಳು ಎಂಟು ಜನರಾದರೂ ವಶರಾದಾರು. ಹೀಗೆ ನಾವಿರ್ವರೂ ಮಿಳಿತವಾದರೆ, ಚಂದ್ರಗುಪ್ತನಿಗೆ ಆಗಲಾದರೂ ರಾಜ್ಯಲಾಭವೆಂದರೇನು ? ಈ ಅರ್ಥವು ನಿನಗೆ ತಿಳಿದಿರಲಿ. ನಿನ್ನ ಮಧ್ಯಸ್ಥ ಸಫಲವಾಗದಿದ್ದರೆ, ಆ ಬಳಿಕ ಈ ಪ್ರಯತ್ನವು" ಎಂದು ಹೇಳಿ, ಆ ಕನ್ನೆಯಂ ಜೀವಸಿದ್ಧಿಯೆಂಬ ಕ್ಷಪಣಕನ ವಶವಂ ಮಾಡಿ ಕಳುಹಿಸಲು,

ಕ್ಷಪಣಕನು ರಾಕ್ಷಸನ ಮಾತಿಗೆ ಒಡಂಬಟ್ಟು, ಆ ಕನ್ನೆಯಂ ಕರೆತರುತ್ತ, ಹೀಗೆ ಚಿಂತಿಸುತ ಬರುತಲಿದ್ದನು :

"ಹ್ಯಾಗಾದರೂ ಈ ಕನ್ನೆಯ ಅಂಗಸ್ಪರ್ಶವು ಚಂದ್ರಗುಪ್ತನಿಗೆ ಸ್ವಲ್ಪಮಾತ್ರ ಉಂಟಾದರೆ, ಆ ಕ್ಷಣವೇ ತನ್ನ ಮನೋರಥ ಸಫಲವಾಗುವದೆಂದು ನನಗೆ ಮರೆಮಾಚಿ ಹೇಳಿ ರಾಕ್ಷಸನು ಇವಳಂ ಕಳುಹಿಸಿದನು. ಇವಳಿಂದ ಚಂದ್ರಗುಪ್ತನಿಗೆ ಇಷ್ಟವೋ ಅನಿಷ್ಟವೋ ತಿಳಿಯಕೂಡದು. ಇವಳ ಗುಣದೋಷವಂ ಹ್ಯಾಗೆ ತಿಳಿಯಬೇಕೆಂ"ದು ಯೋಚಿಸುತ್ತ, ತಾನಿದ್ದೆಡೆಗೆ ಕರೆತಂದು ಕುಳ್ಳಿರಿಸಿ, ಸ್ವಲ್ಪಹೊತ್ತಿನ ಮೇಲೆ 'ಭುಂಜಿಸೆಂ'ದು ಅನ್ನವನಿಕ್ಕಿಸಲು, ಅವಳು ಅನ್ನವನ್ನುಂಡು ಶೇಷವಂ ಹೊರಕ್ಕೆ ಬಿಸುಟು ಕೈತೊಳೆದು ಕುಳ್ಳಿರಲು, ಅವಳು ಬಿಸುಟ ಎಂಜಲನ್ನವಂ ಮಾರ್ಜಾಲ ಭುಂಜಿಸಿ ಆಗಲೇ ಮೃತವಾಗಲು, ಅದಂ ಕಂಡು ಜೀವಸಿದ್ಧಿಯು "ಈ ಕನ್ನೆಯು ವಿಷಕನ್ನಿಕೆಯು. ಚಂದ್ರಗುಪ್ತನ ನಾಶಾರ್ಥವಾಗಿ

ರಾಕ್ಷಸನು ನನಗೆ ಕಪಟವಂ ಹೇಳಿ ನನ್ನ ಸಂಗಡ ಕಳುಹಿಸಿದನು. ಈ ಅಭಿಪ್ರಾಯಗಳೆಲ್ಲವಂ ನಮ್ಮ ಚಾಣಕ್ಯರಿಗೆ ಅರ್ಥಾಂತರದಿಂ ಸೂಚಿಸುವೆನೆಂ"ದು ನಿಶ್ಚೈಸಿ, ಸಮಯವಂ ನೋಡುತ್ತಿರಲು,

ಪುನಃ ರಾಕ್ಷಸನು ತಾನು ಕಳುಹಿಸಿದ ಕನ್ನೆಗೂ ಚಂದ್ರಗುಪ್ತನಿಗೂ ಘಟನೆಯಾಗದಿದ್ದರೆ, ಪಟ್ಟಾಭಿಷಿಕ್ತನಾಗಿ ರಾಜದ್ವಾರದಲ್ಲಿ ಮೆರವಣಿಗೆಯಲ್ಲಿ ಬರುವಾಗಲಾದರೂ ಸಂಹೃತನಾಗಲೆಂದು ಯೋಚಿಸಿ, ನಂದರ ಗಂಧಮಾದನವೆಂಬ ಪಟ್ಟದಾನೆಯ ಮಾವುತನಂ ಕರೆ ಕಳುಹಿಸಿ,

"ಎಲೈ ಬರ್ಬರಕನೇ, ನಿಮ್ಮ ಅರಸುಗಳಿಗೆ ವೈರಿಯಾದ ಚಂದ್ರಗುಪ್ತನು ಪೂರ್ವಮರ್ಯಾದಾನುಗುಣ್ಯವಾಗಿ ರಾಜ್ಯಾಭಿಷಿಕ್ತನಾದ ಅರಸಿನಂತೆ ಪಟ್ಟದಾನೆಯ ಮೇಲೆ ಕುಳಿತು ರಾಜದ್ವಾರದಲ್ಲಿ ಬರುವ ಸಮಯದಲ್ಲಿ ನಿನಗೆ ಅವಕಾಶ ದೊರಕುವದು. ಇದೆಕೋ, ಸ್ವರ್ಣದಂಡದಲ್ಲಿ ಹುದುಗಿಸಿ ಇರುವ ಗುಪ್ತಿಯೆಂಬ ಈ ಶಸ್ತ್ರದಿಂ ಹಿಂಭಾಗದಲ್ಲಿ ಕುಳಿತಿರುವ ಚಂದ್ರಗುಪ್ತನಂ ಸಂಹರಿಸಿ, ಸಂದಣಿಯಲ್ಲಿ ನೀನು ತಪ್ಪಿಸಿಕೊಳ್ಳುವನಾಗು" ಎಂದು ಹೇಳಿ, ಧನಗಳಂ ಕೊಟ್ಟು ಕಳುಹಿಸಿ, ದಾರುವರ್ಮನೆಂಬ ಶಿಲ್ಪಿಯಂ ಕರೆಕಳುಹಿಸಿ,

"ಎಲೈ ಸ್ವಾಮಿಭೃತ್ಯನೇ, ಚಂದ್ರಗುಪ್ತನು ಪಟ್ಟಾಭಿಷಿಕ್ತನಾಗಿ ಗಜಾರೂಢನಾಗಿ ರಾಜದ್ವಾರದಲ್ಲಿ ಬರುತಲಿದಾನೆ. ಅಲ್ಲಿ ಕಪಟಶಿಲ್ಪವಂ ರಚಿಸಿ, ಆ ಸಮಯವಂ ನಿರೀಕ್ಷಿಸುತ್ತಲಿದ್ದು, ಈ ರೀತಿಯಲ್ಲಿ ಸಂಹರಿಸುವನಾಗು. ನಿನಗೆ ಬೇಕಾದ ಧನವಂ ತೆಗೆದುಕೋ" ಎಂದು ಕೊಟ್ಟು, ಅವನಂ ಕಳುಹಿಸಿ, ಭವನಪಾಲಕನೆಂಬ ರಾಜಭವನದ ಅಧಿಕಾರಿಯಂ ಕರೆದು,

"ಎಲೈ ಆಪ್ತನೇ, ನಾಲ್ಕೆಂಟು ದಿವಸದಲ್ಲಿ ಚಂದ್ರಗುಪ್ತನು ಅರಸಾಗಿ ಪುರಕ್ಕೆ ಬರುವದರಿಂದ ಯೋಗ್ಯವಾದ ಬಿಡಾರವಾಗಬೇಕಾಗುತ್ತಲಿದೆಯಷ್ಟೆ. ತಮ್ಮ ತಂದೆಯ ಗೃಹವು ಉಗ್ರಾಣವಾಗಿ ಬಹುಕಶ್ಮಲವಾದುದರಿಂದ ಆತನ ಮನಸ್ಸಿಗೆ ರುಚಿಸದು. ಪತಿವಿಯೋಗದಿಂದ ದುಃಖಿತರಾಗಿ ಗೋಳಿಡುವ ಬಂಗಾರದ ಸ್ತ್ರೀಜನಪರಿವೃತಮಾದ ನಂದರ ವಾಸಗೃಹವಂ ಆತನು ಇಟ್ಟಣಿಕಿ ನೋಡನು. ವೃದ್ಧರಾಯ ದಂಪತಿಗಳು ಪುತ್ರಶೋಕದಿಂ ದುಃಖಿತರಾಗಿ ಇರುವದರಿಂದ ಆ ಭವನವು ಆತನ ಮನಸ್ಸಿಗೆ ಸಮ್ಮತವಾಗದು. ತಾನು ಪ್ರಭುವಾದುದರಿಂದ ಪ್ರಾರ್ಥಿಸಿದರೂ ಅನ್ಯರ ಗೃಹವಂ ನಿರೀಕ್ಷಿಸುವನಲ್ಲ. ವಾಣೀವಿಲಾಸವೆಂಬ ತೊಟ್ಟಿಯು ವಿದ್ವಾಂಸರ ಗೋಷ್ಠಿಗೆ ಯೋಗ್ಯವು. ಅದರಿಂದ ಓಲಗದ ಹಜಾರದ ಹಿಂಭಾಗದಲ್ಲಿ ನಂದರ ವಿನೋದವಿಹಾರಕ್ಕೆ ಮಾಡಿ ಇರುವ ಕುಮಾರಭವನವನ್ನಲಂಕರಿಸಿ, ಅದರ ಆರನೆ ತೊಟ್ಟಿಯ ಶಯನಗೃಹವಂ ಶೃಂಗರಿಸಿ, ಅಲ್ಲಿ ಈ ರೀತಿ ಕಪಟದಿಂ ಚಂದ್ರಗುಪ್ತನಂ ಸಂಹರಿಸುವಂತೆ ಜನಗಳಿಗೆ ನೇಮಿಸಿ, ಆತನು ಶಯನಗೃಹಾಭಿಮುಖವಾದುದಂ ನೋಡಿ ರಾಜಭವನದ ಸುರಂಗಮಾರ್ಗದಿಂ ತಪ್ಪಿಸಿಕೊಂಡು ಹೋಗುವನಾಗು. ನಾನು ಅದೇ ಮಾರ್ಗದಿಂ ಈ ಪುರವಂ ಬಿಟ್ಟು ಹೋಗುವೆನು. ಒಳಬೊಕ್ಕಸದ ಗೊಲ್ಲನಿಗೆ ಈ ಗುರುತಂ ತೋರಿಸಿ ಬೇಕಾದ ಧನಗಳಂ ತೆಗೆದುಕೊಳ್ಳುವನಾಗು" ಎಂದು ನೇಮಿಸಿ, ಆ ಶಯನಗೃಹದಲ್ಲಿ ಮಾಡತಕ್ಕ ಕಪಟೋಪಾಯವನೆಲ್ಲವಂ ಹೇಳಿ, ಭವನಪಾಲಕನಂ ಕಳುಹಿಸಿ,

ರಾಜವೈದ್ಯನಂ ಕರೆಕಳುಹಿಸಿ, ಅವನಿಗೆ ಹೇಳತಕ್ಕ ವಿವರವೆಲ್ಲವಂ ಹೇಳಿ, ಇಚ್ಛಾನುಸಾರ ದ್ರವ್ಯವಂ ಕೊಟ್ಟು ಕಳುಹಿಸಿ, ಮನೆವಾರ್ತೆಯಂ ವಿಚಾರಿಸುತ್ತ ತನ್ನ ರಾಯಸದವನಾದ ಶಕಟದಾಸನಿಗೆ ಹೇಳುವ ಮಾತುಗಳಂ ಹೇಳಿ, ಗೂಢಚಾರರಂ ಕರೆದು ಅವರಿಗೆ ಹೇಳತಕ್ಕ ಕಾರ್ಯವಂ ನೇಮಿಸಿ, ತಾನಿರುವ ಸ್ಥಳವಂ ತಿಳುಹಿಸಿ, ತನ್ನ ಪರಿಚಾರಕರಂ ಕರೆದು "ಇಷ್ಟು ವಸ್ತು ಸಮೇತರಾಗಿ ಇಂಥಾ ಸ್ಥಳದಲ್ಲಿ ಬಂದು ಇರುವದು" ಎಂದು ನೇಮಿಸಿ ಕಳುಹಿಸಿ, ರಾಕ್ಷಸನು ರಾಜಭವನದ ಸುರಂಗಮಾರ್ಗದಿಂ ಪುರವಂ ಬಿಟ್ಟು ಹೋಗುತ್ತಿದ್ದನು.

ಚಾಣಕ್ಯನು ಸಭೆಯಲ್ಲಿ ಕುಳಿತು, ಚಂದ್ರಗುಪ್ತನಂ ಕುರಿತು, "ಅಯ್ಯ ಅರಸೇ, ಪಾಟಲೀ ಪುರದ ಅಧಿಕಾರಿಗಳೆಲ್ಲರೂ ನಿನ್ನಂ ಕಂಡು ಸಮ್ಮಾನಿತರಾಗಿ, ತಮ್ಮ ತಮ್ಮ ಅಧಿಕಾರಕ್ಕೆ ನಿಯುಕ್ತರಾಗಿ ಹೋದರು. ಚದುರಿದ ಸೇನೆಯಂ ಜೊತೆಗೂಳಿಸುವ ಕಾರ್ಯದಿಂದ ಮತ್ತೆ ಕೆಲಬರು ತಮ್ಮವರ ಕೈಗಳಲ್ಲಿ ಕೈಕಾಣಿಕೆಯಂ ಕೊಟ್ಟು, "ಪ್ರಭುಗಳಂ ಕಂಡು ಬನ್ನಿ, ಹಿಂದಳಿಂದ ನಾವು ಬರುತಲಿದೇವೆ" ಎಂದು ಕಳುಹಿಸಿದ ಬಳಿಕ, ಬಂದಂತೆ ಆಯಿತು. ಕಾರ್ಯಗೌರವದಿಂದ ನಿಂತಿದ್ದಾರು. ಅದಂತಿರಲಿ. ಇವರಿಗೆಲ್ಲರಿಗೂ ಮುಖ್ಯವಾಗಿ ರಾಜ್ಯ ತಂತ್ರವಂ ನಿರ್ವಹಿಸುತ್ತಲಿರುವ ಅಮಾತ್ಯರಾಕ್ಷಸನೊಬ್ಬನೇ ಬಂದು ಕಾಣಲಿಲ್ಲ. ವ್ಯಾಜಾಂ ತರವನ್ನಾದರೂ ಹೇಳಿ, ತನ್ನ ಕಡೆಯವರನ್ನಾದರೂ ಕಳುಹಿಸಲಿಲ್ಲ. ಅದಕ್ಕೆ ನಿಮಿತ್ತವೇನು? ಅವನು ಎಲ್ಲಿ ಇದಾನೆ ? ಏನು ಮಾಡುತ್ತಲಿದಾನೆ ? ತಿಳಿದು ಬಂದು ದೂತರು ಹೇಳಲಿ" ಎನಲು, 'ಬುದ್ಧೀ' ಎಂದು ದೂತರು ಹೋಗಿ, ರಾಕ್ಷಸನ ಮನೆಯಲ್ಲಿ ಹುಡುಕಿ, ಅಲ್ಲಿ ಆತನ ಹೆಂಗಸರು ಮಕ್ಕಳನ್ನೂ ಆ ರಾಕ್ಷಸನ[ನ್ನೂ] ಕಾಣದೆ, ಆತನ ಮನೆವಾರ್ತೆ ರಾಯಸ ದವನಾದ ಶಕಟದಾಸನಂ ಕೇಳಲು, ಆ ಮಾತಿಗೆ ಶಕಟದಾಸನು,

"ಅಯ್ಯ ದೂತರುಗಳಿರ, ಅಮಾತ್ಯರಾಕ್ಷಸರನ್ನು ಯುದ್ಧಕ್ಕೆ ಹೋದ ಸಮಯದಲ್ಲಿ ಕಂಡುದಲ್ಲದೆ, ಇಂದಿನವರೆಗೂ ಅವರ ದರ್ಶನ ಘಟಿಸಲಿಲ್ಲ. ನನ್ನ ಗೃಹಕೃತ್ಯಗೌರವ ದಿಂದ ಈ ದಿವಸವೇ ನಮ್ಮ ಅಮಾತ್ಯರ ಗೃಹಕ್ಕೆ ಬಂದೆನು. ಅವರ ಪತ್ನೀಪುತ್ರರನ್ನು ಸಹ ಕಾಣೆನು. ನಾನು ಯೋಚಿಸುತಲಿದೇನೆ" ಎನಲು, ಅದಂ ಕೇಳಿ ಆ ದೂತರು ಪುರದ ಬಾಗಿಲವರಂ ಕೇಳಲು, ಅವರು "ಸೇನೆ ಗಾಬರಿಯಾದ ವೇಳೆಯಲ್ಲಿ ಬಾಗಿಲಿನಿಂದ ಅಮಾತ್ಯರು ಪುರದ ಒಳಕ್ಕೆ ಹೋದಮೇಲೆ ಪುನಃ ಇಲ್ಲಿಗೆ ಬಂದದ್ದು ಇಲ್ಲ" ಎಂದು ಹೇಳಲು, ಅದಂ ಕೇಳಿ ದೂತರು ಅಲ್ಲಿ ಅಲ್ಲಿ ಹುಡುಕಿ, ರಾಕ್ಷಸನ ಗೊತ್ತು ತಿಳಿಯದೆ ಬಂದು ಚಾಣಕ್ಯರಿಗಿಂತೆಂದರು :

"ಬುದ್ಧೀ, ಅಪ್ಪಣೆಮೇರೆಗೆ ಪುರದಲ್ಲಿಯೂ ಅವರ ಗೃಹದಲ್ಲಿಯೂ ಹುಡುಕಿ ನೋಡಿ ದೆವು. ಅಮಾತ್ಯ ರಾಕ್ಷಸರನೆಲ್ಲಿಯೂ ಕಾಣೆವು. ಆತನ ಗೃಹದಲ್ಲಿ ಅವರ ಹೆಂಗಸರು ಮಕ್ಕಳು ಸಹ ಕಾಣಿಸುವದಿಲ್ಲ. ಪುರದ ಬಾಗಿಲವರಂ ಕೇಳಿದಲ್ಲಿ 'ಯುದ್ಧವಾದ ಬಳಿಕ ಪುರದೊಳಕ್ಕೆ ಬಂದ ಮೇಲೆ ಪುನಃ ಬಾಗಿಲಲ್ಲಿ ಬಂದದ್ದು ಇಲ್ಲವೆಂ'ದು ಹೇಳುತ್ತಾರೆ. ಆತನ ಮನೆಯ ರಾಯಸದ ಶಕಟದಾಸನಂ ಕೇಳಿದರೆ, 'ಈ ದಿವಸವೇ ಅವರ ಗೃಹಕ್ಕೆ ಬಂದೆನು ; ಯುದ್ಧಕ್ಕೆ ಹೋದ ಬಳಿಕ ಅಮಾತ್ಯರ ದರ್ಶನವೇ ತನಗಿಲ್ಲ'ವೆಂದು ಹೇಳುತ್ತಾನೆ" ಎನಲು, ಅದಂ ಕೇಳಿ ಚಾಣಕ್ಯನಿಂತೆಂದನು :

"ಎಲೈ ದೂತರುಗಳಿರ, ಅಮಾತ್ಯ ರಾಕ್ಷಸನು ತಾನು ನಂದರಿಗೆ ಆಪ್ತನಾದುದರಿಂದ

ಚಂದ್ರಗುಪ್ತನ ದೆಸೆಯಿಂದ ತನಗೆ ಭಯ ಬಂದೀತೆಂದು ಈ ಪುರದಲ್ಲಿ ತನಗೆ ಆಪ್ತರಾದವರಲ್ಲಿ ಹೆಂಗಸರು ಮಕ್ಕಳುಗಳನ್ನಿರಿಸಿ, ತಾನು ಕಳ್ಳಮಾರ್ಗದಿಂದ ಹೊರಕ್ಕೆ ಹೋಗಿರಬೇಕು. ಚಂದ್ರಗುಪ್ತನಿಗೆ ನಂದರ ಮೇಲೆ ಮತ್ಸರವಿತ್ತಲ್ಲದೆ ರಾಕ್ಷಸನ ಮೇಲೆ ದ್ವೇಷವುಂಟೇ ? ಅವರು ಮಾಡಿದ ಮೌರ್ಯರ ವಧೆಗೆ ರಾಕ್ಷಸನಿಗೆ ಸಮ್ಮತವಿಲ್ಲವೆಂದು ಸಕಲ ಜನರೂ ತಿಳಿದೇ ಇದ್ದಾರೆ. ಎಲ್ಲರಂತೆ ತಾನೂ ಬಂದು, ಪ್ರಭುವಂ ಕಂಡು ಮಾತನಾಡಿಕೊಂಡು, ಇಲ್ಲಿಂದ ಸಮ್ಮಾನಿತನಾಗಿ ಪೂರ್ವಕ್ಕಿಂತಲೂ ಅಧಿಕನಾಗಿರಬೇಕಲ್ಲದೆ ಧೀರನಾದ ತಾನು ಹೀಗೆ ಭಯಪಟ್ಟು ಮರೆಯಾದವರುಂಟೇ ?[1] ಆತ ಈ ಆಸ್ಥಾನದಲ್ಲಿ ಇಲ್ಲದುದರಿಂದ ಬಹುಜನವಿಲ್ಲದಂತೆ ತೋರುತ್ತಲಿದೆ. ಹುಡುಕಿ, ನಂಬಿಕೆಯಂ ಹೇಳಿ, ಕರೆದು ತನ್ನಿ. ಆತ ಹೇಳಿದಂತೆ ಚಂದ್ರಗುಪ್ತನು ನಡಸಿಕೊಟ್ಟಾನು" ಎಂದು ಹೇಳಿ, ಪುನಃ ಆ ದೂತರಂ ಕಳುಹಿಸಿ,

ತನ್ನ ಮನಸ್ಸಿನಲ್ಲಿ, "ನಂದರಿಗಾಪ್ತನಾದ ರಾಕ್ಷಸನು ಚಂದ್ರಗುಪ್ತನ ಭಯದಿಂದಲೋ ದ್ವೇಷವಂ ಸಾಧಿಸಲೋಸುಗವೋ ಪುರವಂ ಬಿಟ್ಟು ಹೋಗಿ ಇದಾನೆ. ಭಯದಿಂದಲಾದರೆ, ಪತ್ನೀಪುತ್ರರಂ ಮರೆಮಾಡನು. ಅದರಿಂ ದ್ವೇಷವಂ ಸಾಧಿಸುವದಕ್ಕೆಂದು ತೋರುತ್ತಲಿದೆ. ಹೀಗೆ ದ್ವೇಷಿಯಾದವನಂ ಒಡಂಬಡಿಸುವದು ಉಚಿತವಲ್ಲ. ದ್ವೇಷವಂ ಬಿಟ್ಟು 'ಭೀತನಾಗಿರುವೆನೆಂ'ದು ಹೇಳಿ ಕಳುಹಿಸಿದರೆ ಮೊದಲಿಗಿಂತಲೂ ಅಧಿಕನನ್ನಾಗಿ ಮಾಡಬಹುದು. ಜ್ವರವಿದ್ದವಗೆ ಅಪಥ್ಯಸೇವನೆಯಿಂದ ನಾಭಿಯಲ್ಲಿ ಕುಟಿಲವಿದ್ದರೆ ಜಿಹ್ವಾಗ್ರದಲ್ಲಿ ಹ್ಯಾಗೆ ತೋರುವದೋ ಹಾಗೆ ರಾಕ್ಷಸನಲ್ಲಿ ಮನಸ್ಸಿನಲ್ಲಿದ್ದ ದ್ವೇಷವು ಸ್ವಲ್ಪ ದಿವಸದಲ್ಲಿಯೇ ಪ್ರಕಟವಾದೀತು. ಆ ಬಳಿಕ ತದನುಗುಣ್ಯವಾಗಿ ಯತ್ನವಂ ಮಾಡುವೆನು. ಅದಂತಿರಲಿ.

ನಂದರಂ ಸಂಹರಿಸಿ ಚಂದ್ರಗುಪ್ತನಿಗೆ ನಂದರ ಪದವಿಯನ್ನುಂಟುಮಾಡುವೆನೆಂದು ಮಾಡಿದ ಪ್ರತಿಜ್ಞೆಗೆ ನಂದರ ಮೂಲೋತ್ಪಾಟನವಂ ಮಾಡಿದಾಗಲೇ ನಂದರ ಪದವಿಗೆ ಚಂದ್ರಗುಪ್ತನೇ ಅಧಿಪತಿಯಾದನೆಂದು ತಿಳಿದು ಶಿಖೆಯಂ ಬಂಧಿಸಿದೆನು. ನಂದರಾಜ್ಯಾಭಿಷೇಕವನ್ನು ಚಂದ್ರಗುಪ್ತನಿಗೆ ಮಾಡಿಸಿ ಸಾರ್ವಭೌಮನೆಂದು ಮಂಡಲಾಧಿಪತಿಗಳ ಕೈಕಪ್ಪಗಳಂ ಕೊಡಿಸಬೇಕೆಂದರೆ, 'ಮೊದಲು ನಾವು ಹೇಳಿದ ರೀತಿಗೆ ಅರ್ಧರಾಜ್ಯವಂ ನಮಗೆ ಕೊಟ್ಟು, ಉಳಿದ ಅರ್ಧರಾಜ್ಯಾಭಿಷೇಕವಂ ಚಂದ್ರಗುಪ್ತನಿಗೆ ಮಾಡಬಹುದೆಂ'ಬ ಪರ್ವತರಾಯನ ವಾಕ್ಯವಿಘ್ನ ಸಂಭವಿಸುತ್ತಲಿದೆ. ಯಾವ ಉಪಾಯದಿಂದ ಈ ಪರ್ವತರಾಯನ ವಿಘ್ನವಂ ಪರಿಹರಿಸಿಕೊಳ್ಳಬೇಕೆಂ"ದು ಚಿಂತಿಸುತ್ತ, ಚಾಣಕ್ಯನು ಆ ದಿವಸವಂ ಕಳೆಯುತ್ತಲಿದ್ದನು. [2]ಹದಿಮೂರನೆಯ[2]ದಿವಸ ಜ್ಞಾತಿಸೂತಕಸ್ನಾನದಿಂದ ಪರಿಶುದ್ಧನಾದ ಚಂದ್ರಗುಪ್ತನು ರಾಜಸಭೆಗೆ ಬರುತ್ತಿರಲು, ಆಗ ಚಾಣಕ್ಯನು ನಂದರ ಬೊಕ್ಕಸದಲ್ಲಿ ದಿವ್ಯ ಭೂಷಣವಸ್ತ್ರಗಂಧಮಾಲಿಕೆಗಳಂ ತರಿಸಿ, ಚಂದ್ರಗುಪ್ತನಿಗೆ ಅಲಂಕರಿಸಿ, ತಾಂಬೂಲವಂ ಕೊಡಿಸಿ, ಸ್ವರ್ಣಪೀಠದಲ್ಲಿ ಕುಳ್ಳಿರಿಸಿ, ಆಗ ದೂತರಂ ಕರೆದು,

"ಎಲೈ, ಭದ್ರಭಟಾದಿ ಸೇನಾನಾಯಕರ ಕಡೆಯವರು ಸೇನಾಸಮೇತರಾಗಿ ಸಲಾಮಿಗೆ ಬರುತ್ತೇವೆಂದು ಹೇಳಿ ಹೋದಾರಭ್ಯ ಇದುವರಗೂ ಸೇನೆಗಳ ಜೊತೆ ಆಯಿತೋ

---

೧. ಘ ಪ್ರತಿಯಲ್ಲಿ ಕೆಲವು ಸಾಲುಗಳು ಹೆಚ್ಚಾಗಿವೆ. ೨. ಆ ದಿನ ಮೂರನೆಯ (ಖ)

ಇಲ್ಲವೋ ; ಈಗ ಜೊತೆಯಾದ ಸೇನೆಗಳಂ ಕೂಡಿಕೊಂಡು ಮೊದಲು ಬಂದು ಮಾತನಾಡಿ ಹೋದವರೇ ಸಲಾಮಿಗೆ ಬರಲಿ" ಎಂದು ನೇಮಿಸಲು, ಆ ದೂತರು ಅತಿತ್ವರೆಯಿಂದ ಹೊರಟು, 'ಹೊರಡಿ ಹೊರಡಿ' ಎಂದು ಸೇನಾಧಿಕಾರಿಗಳಿಗೆ ಹೇಳಲು, ಆ ಅಧಿಕಾರಿಗಳು ಜೊತೆಯಾದ ಸೇನೆಗಳನೆಲ್ಲವಂ ತೆಗೆದುಕೊಂಡು ಬಂದು ಸಾಲುಸಾಲಾಗಿ ನಿಲ್ಲಿಸಿ, ಕೈಗಳಂ ಮುಗಿಯುತ್ತಿರಲು,

ಆಗ ವೈತಾಳಿಕರು ಅವರವರ ನಾಮಗಳನ್ನು ಹೇಳಿ, "ಇಷ್ಟು ಲಕ್ಷ ಅಶ್ವಸೇನೆಗೆ ಪತಿಯಾದವನು ಸಲಾಮು ಮಾಡುತ್ತಾನೆ, ಜೀಯಾ" [೧]ಎಂದು, "ಇಷ್ಟು ಸಹಸ್ರ ಗಜಗಳಿಗೆ ಅಧಿಪತಿಯಾದವನು, ಇಷ್ಟು ಲಕ್ಷ ಖಡ್ಗಧಾರಿಗಳಿಗೆ, ಇಷ್ಟು ಲಕ್ಷ ಧನುರ್ಧಾರಿಗಳಿಗೆ ನಾಯಕನಾದವನು, ಇಷ್ಟು ಲಕ್ಷ ಕುಂತಧಾರಿಗಳಿಗೆ ಅಧಿಪತಿಯಾದವನು, ಇಷ್ಟು ಸಹಸ್ರ ರಥಿಕರಿಗೆ ಪ್ರೇರಕನಾದವನು, ಇಷ್ಟು ಲಕ್ಷ ಗದಾಪಾಣಿಗಳಿಗೆ ನೇಮಿಸುವನೀತನು, ಇಷ್ಟು ಸಹಸ್ರ ಫಿರಂಗಿದಾರರಿಗೆ ಪೋಷಿಸುವನೀತನು : ಈತನು ಮೈಥಿಳನು, ಈತನು ಬಂಗಾಳ ದೇಶಾಧಿಪತಿಯು, ಈತನು ಭಿಲ್ಲನಾಯಕನು, ಈತನು ಕಳಿಂಗನಾಯಕನು, ಈತನು ಓಢ್ರ ದೇಶಾಧಿಪತಿಯು, ಈತನು ಮತ್ಸ್ಯಾಧಿಪತಿಯು, ಈತನು ಭೋಜಪತಿಯು, ಈತನು ಅವಂತಿಪತಿಯು, ಈತನು ಕೋಸಲೇಶನು, ಈತನು ಸೌರಾಷ್ಟ್ರಪತಿ, ಇವರು ದಕ್ಷಿಣ ದೇಶಾಧಿಪತಿಗಳು, ಇವರು ಪಶ್ಚಿಮದಿಕ್ಕಿನ ಅರಸುಗಳು" ಎಂದು ಅವರವರ ಬಿರುದು ನಾಮಾಂಕಿತಗಳಿಂದ ಘೋಷಿಸುತ್ತ, "ಜೀಯಾ, ನಮಸ್ಕರಿಸುತ್ತಲಿದಾರೆ, ಕೈಕಾಣಿಕೆಗಳಂ ಒಪ್ಪಿಸುತ್ತಲಿದಾರೆ, ಪರಾಕೆಂ"ದು ವಂದಿಮಾಗಧರು ಹೊಗಳುತ್ತಿರಲು,

ಆಗ ಚಂದ್ರಗುಪ್ತನು ಅವರೆಲ್ಲರಂ ಉಚಿತಪ್ರಕಾರದಿಂ ಕುಳ್ಳಿರಿಸಿ, ಬೊಕ್ಕಸದಿಂದ ದಿವ್ಯ ವಸ್ತ್ರಭೂಷಣಗಳಂ ತರಿಸಿ, ಅವರು ತಂದುದಂ ಸ್ವೀಕರಿಸಿ, ಅವರೆಲ್ಲರಂ ವಸ್ತ್ರ ಭೂಷಣಗಂಧಮಾಲೆಗಳಿಂದ ಅಲಂಕೃತರಂ ಮಾಡಿ, ವೀಳಯವಂ ಕೊಡಿಸಿ,

"ಅಯ್ಯ ಅರಸುಗಳಿರಾ, ನಮ್ಮ ಪಿತಾಮಹರ ಆಧಿಪತ್ಯದಲ್ಲಿ ನಿಮಗಿದ್ದ ದೇಶಾಧಿ ಪತ್ಯವಂ ಅದೇ ರೀತಿಯಲ್ಲಿ ನೋಡುತ್ತ, ಎಂದಿನಂತೆ ನಮಗೆ ಕೊಡುವ ಪೊಗುದಿಗಳಂ ಕೊಡುತ್ತ, ನಮ್ಮ ಕಾರ್ಯಕ್ಕೆ ಸಹಾಯವಾಗಿ ಇರಿ" ಎಂದು ನೇಮಿಸಿ, ಆಗ ಅಧಿಕಾರಿಗಳ ಮುಖವಂ ನೋಡಿ,

"ಅಯ್ಯ ನಮ್ಮ ಪರಂಪರೆಯಿಂದ ಬಂದ ಅಧಿಕಾರಿಗಳಿರಾ, ಬುದ್ಧಿಯಲ್ಲಿ ಸುರಗುರುವಿಗೆ ಸಮಾನರಾಗಿ, ನಮಗೆ ಆಪದ್ಬಂಧುಗಳಾಗಿ, ದೇಶಮರ್ಯಾದಾಸ್ಥಾಪನಾರ್ಥವಾಗಿ ಯಜಮಾನರಾದ ಚಾಣಕ್ಯರು ನಮ್ಮ ಬಳಿಯ ಪ್ರಾಧಾನ್ಯಕ್ಕೆ ಒಡಂಬಟ್ಟು, ಪ್ರಾಧಾನ್ಯ ಶಸ್ತ್ರವಂ ಸ್ವೀಕರಿಸಿ ಇದ್ದಾರೆ ; ಅವರ ಆಜ್ಞಾನುಸಾರವಾಗಿ, ಅರಸಾಗಿ ಇದ್ದವನಾದರೂ ಶಿರಸಾ ವಹಿಸುವೆನು. ಅದರಿಂದ ಯಾವ ಸಮಯದಲ್ಲಿ ಇವರ ಅಪ್ಪಣೆ ನಿಮಗೆ ಆದರೆ, ಆ ಕ್ಷಣವೇ ಆ ಕಾರ್ಯವಂ ಮಾಡಿ ಬಂದು ನಮಗೆ ತಿಳುಹಿಸತಕ್ಕದ್ದು" ಎಂದು ಹೇಳಿ ನೇಮಿಸಲು, ಅವರೆಲ್ಲರೂ 'ಮಹಾಪ್ರಸಾದ'ವೆಂದು[೧] ಕೈಮುಗಿದು ಅಪ್ಪಣೆಯಂ ತೆಗೆದು

---

೧. ಎಂದು ಇಷ್ಟು ಸಾಹಸಮಾಡಿ ಬಂದು ನಮಗೆ ತಿಳುಹಿಸತಕ್ಕದು ಎಂದು ನೇಮಿಸಲು ಅವರೆಲ್ಲರೂ ಮಹಾಪ್ರಸಾದವೆಂದು (ಕ)

ಕೊಂಡು ಹೊರಡಲು, ಅವರ ಸೇನೆಯು ಮಹಾಸಮುದ್ರದಂತೆ ದೃಷ್ಟಿಗೆ ಗೋಚರವಾಗದೆ ಹೊರಡುತ್ತಿರಲು, ಅದಂ ನೋಡಿ ಪರ್ವತರಾಯನ ಸೇನಾಜನವು ತಮ್ಮೊಳಗೆ ತಾವೇ "ಇಷ್ಟು ಸೇನಾಪರಿವೃತರಾಗಿ ಇದ್ದವರಾದರೂ ನಂದರು ಹತವಾದುದಕ್ಕೆ ದೈವಸಂಕಲ್ಪವೇ ಕಾರಣ ಹೊರತು ಮನುಷ್ಯಯತ್ನದಿಂದಾಗುವದುಂಟೇ ?" ಎಂದು ಹೇಳಿಕೊಳ್ಳುತ್ತಿರಲು,

ಸೇನೆಯೆಲ್ಲವೂ ಆ ಕುಸುಮಪುರದ ಪೂರ್ವ ದಕ್ಷಿಣದಿಕ್ಕಿನಲ್ಲಿ ಇಳಿಯುತ್ತಿರಲು, ಚಾಣಕ್ಯನು ಶೇಖರನಂ ಕರೆಕಳುಹಿಸಿ, "ಅಯ್ಯ ಸೇನಾಪತಿಯೇ, ನಾವು ಹೇಳಿದ ರೀತಿಗೆ ಸೇನೆಗಳಂ ಜೊತೆಗೂಳಿಸಿ, ಸಾಹಸವಂ ಮಾಡಿ, ನಂದರ ಸಂಹಾರವಂ ಮಾಡಿಸಿದವನಾದೆ; ಪರ್ವತರಾಯನಿಗೆ ಹ್ಯಾಗೆ ನೀನು ಆಪ್ತನೋ ನಮಗೂ ಹಾಗೇ ಆಪ್ತನು ; ಶತ್ರು ನಿಗ್ರಹವಾದ ಬಳಿಕ ಪುನಃ ಯುದ್ಧಕ್ಕೆ ನಿಮಿತ್ತವಿಲ್ಲ. ಉಭಯಸೇನೆಯೂ ಒಂದೇ ಕಡೆಯಲ್ಲಿ ನಿಂತರೆ ಕ್ಷಾಮವೂ ಕ್ಷುದ್ರರೋಗೋಪದ್ರವವೂ ತಟ್ಟುವದರಿಂದ ಪ್ರಜಾಕ್ಷೋಭೆ ಉಂಟಾಗಿ, ಪ್ರಜೆಗಳಿಗೆ ಹಾನಿ ತಟ್ಟಿದರೆ ಅದೇ ಅರಸುಗಳಿಗೆ ಹಾನಿಯು. ಅದರಿಂ ಪಾರ್ವತೀಯ ಸೇನೆಯಲ್ಲಿಯೂ ನಿಮ್ಮೆಲ್ಲರ ಸೇನೆಯಲ್ಲಿಯೂ ಪ್ರಕೃತೋಚಿತವಾಗಿ ನಿಲ್ಲಿಸಿಕೊಂಡು, ಉಳಿದ ಸೇನೆಯೆಲ್ಲವೂ ಅವರವರ ದೇಶಕ್ಕೆ ಹೋಗುವಂತೆ ಪರ್ವತ ರಾಯನಿಗೆ ತಿಳುಹಿಸಿ, ಕಳುಹಿಸುವನಾಗು. ನಂದರಾಜ್ಯಾರ್ಧವಂ ಪರ್ವತರಾಯನಿಗೆ ನಾವು ಕೊಡುವಲ್ಲಿ ರಾಜ್ಯಾನುಗುಣ್ಯವಾಗಿ ಸೇನೆಗಳಂ ನಿಲ್ಲಿಸಿಕೊಂಡು, ಉಳಿದ ಸೇನೆ ಸಹಿತವಾಗಿ ಕೊಡಬೇಕಾಗುತ್ತಲಿದೆ" ಎಂದು ಹೇಳಿ, ಅನರ್ಘ್ಯವಸ್ತ್ರಭೂಷಣಗಳಂ ತರಿಸಿ, ಶೇಖರ ಮುಖ್ಯರಾದ ಅವರ ಕಡೆ ಅರಸುಗಳಿಗೆಲ್ಲರಿಗೂ ಕೊಡಿಸಿ, ಗಂಧಮಾಲ್ಯ ಕರ್ಪೂರವೀಳಯ ಗಳಿಂದುಪಚರಿಸಿ, ಉಚಿತವಾಕ್ಯಗಳಿಂ ಸಂತೋಷಗೊಳಿಸಿ ಕಳುಹಿಸಲು, ಶೇಖರನು ತನಗೆ ಕೊಟ್ಟ ಭೂಷಣಗಳೆಲ್ಲವಂ ಪರ್ವತರಾಯನ ಮುಂದಿಟ್ಟು, ಚಾಣಕ್ಯರು ಹೇಳಿದ ಮಾತು ಗಳೆಲ್ಲವಂ ತಿಳುಹಿಸಲು, ಅದಂ ಕೇಳಿ,

"ಎಲೈ ಶೇಖರನೇ, ಚಾಣಕ್ಯರು ಹೇಳಿದರ್ಥವು ನಿಶ್ಚಯವೇ ಅಹುದು. ಒಂದು ಕಡೆ ಯಲ್ಲಿ ಉಭಯಸೇನೆಯೂ ನಿಂತರೆ, ದೇಶಕ್ಷೋಭೆಯೂ ಸಾಂಕ್ರಾಮಿಕರೋಗಗಳೂ ಉಂಟಾಗಿ ದೇಶಾಧಿಪತಿಗಳಿಗೆ ಹಾನಿ ಉಂಟಾಗುವದರಿಂದ, ನಮ್ಮ ಸೇನೆಗಳಲ್ಲಿ ಸ್ವಲ್ಪ ನಿಲ್ಲಿಸಿಕೊಂಡು ಉಳಿದುದೆಲ್ಲವಂ ನಮ್ಮ ದೇಶಕ್ಕೆ ಕಳುಹಿಸುವನಾಗು. ನಮ್ಮ ಸಂಗಡ ಬಂದಿರುವ ಅರಸುಗಳಿಗೆ ಈ ಅರ್ಥವಂ ಹೇಳಿ ಕಳುಹಿಸುವನಾಗು. ಚಾಣಕ್ಯರು ನಿನ್ನಲ್ಲಿ ಸಂತೋಷದಿಂ ಕೊಟ್ಟ ಭೂಷಣಗಳು ನಿನಗೇ ಇರಲಿ " ಎಂದು ರಾಯನು ಹೇಳಲು, 'ಮಹಾಪ್ರಸಾದ'ವೆಂದು ಶೇಖರನು ಹೊರಟು ಬಂದು, ಸೇನೆಗಳಲ್ಲಿ ಸ್ವಲ್ಪ ಉಳುಹಿಸಿ ಕೊಂಡು, ಮಿಕ್ಕ ಸೇನೆಯೆಲ್ಲವಂ ಅವರವರ ದೇಶಕ್ಕೆ ಹೋಗುವಂತೆ ನೇಮಿಸಲು, ಸೇನಾ ಪ್ರಯಾಣಸೂಚಕವಾದ ಭೇರೀಧ್ವನಿಗಳುಂಟಾಗಿ ಪರ್ವತರಾಯಸೇನೆಯು ಸ್ವದೇಶಕ್ಕೆ ಹೋಗುವದಂ ಕಂಡು "ಚಂದ್ರಗುಪ್ತನ ರಾಜ್ಯಾಭಿಷೇಕವಿಘ್ನದಲ್ಲಿ ಅರ್ಧ ಪರಿಹಾರ ವಾಯಿತು ; ಉಳಿದ ವಿಘ್ನಾರ್ಧವಂ ಯಾವ ರೀತಿಯಿಂ ಪರಿಹರಿಸಿಕೊಳ್ಳಬೇಕೆಂ"ದು ಚಾಣಕ್ಯನು ಚಿಂತಿಸುತ್ತಿದ್ದನು.

ಮತ್ತೊಂದು ದಿವಸ ಸಾಯಾಹ್ನದಲ್ಲಿ ಚಂದ್ರಗುಪ್ತ ಚಾಣಕ್ಯರು ಮಿತಪರಿವಾರದಿಂ ಆಸ್ಥಾನದಲ್ಲಿ ಕುಳಿತಿರುವದಂ ತಿಳಿದು, ರಾಕ್ಷಸನಿಗೆ ಮಿತ್ರನಂತಿರ್ದ ಕ್ಷಪಣಕನು ತನಗೆ

ಇದೇ ಸಮಯವೆಂದು ನಿಶ್ಚೈಸಿ, ರಾಕ್ಷಸ ಹೇಳಿ ತನ್ನ ಸಂಗಡ ಕಳುಹಿಸಿ ಇದ್ದ ಆ ಕನ್ನೆಯಂ ಕರೆದುಕೊಂಡು ಬರುತ್ತಿರಲು,

ಮುಕ್ತಾಮಯಭೂಷಣಗಳಂ ಧರಿಸಿ, ಚಂದ್ರಗಾವಿಯಂ ಮುಸುಗಿಟ್ಟು, ತಾರಾಗಣಗಳಿಂ ಶೋಭಿಸುವ ಸಂಧ್ಯಾಸಮಯಲಕ್ಷ್ಮಿಯೋ ಎಂಬಂತೆ, ಅಮೃತಾವಿರ್ಭಾವಾವಸರದಲ್ಲಿ ಕಪಟಾಂಗನೆಯಾಗಿ ಅವಲೋಕನಮಾತ್ರದಿಂ ಅಸುರವರ್ಗದ ಮನಸ್ಸುಗಳಂ ತವಕಗೊಳಿಸುತ್ತ ಬರುತ್ತಿರುವ ನಾರಾಯಣಿಯ ಪ್ರತಿಬಿಂಬವೋ ಎಂಬಂತೆ, ದೃಷ್ಟಿಪಾತಮಾತ್ರ[1]ದಿಂ[1] ಗುಂಪುಗುಂಪಾಗಿ ನೋಡ ಬರುವ ವಿಟಜನಚಿತ್ತವೃತ್ತಿಯನ್ನಪಹರಿಸುತ್ತ ಸಂಚರಿಸುತ್ತಿರುವ ಶೃಂಗಾರಕಳೆಯೋ ಎಂಬಂತೆ, ಲಾವಣ್ಯವೇ ಸ್ತ್ರೀರೂಪಿನಿಂ ಬಂದಂತೆ, ಅಮೂರ್ತದ್ರವ್ಯದಂತೆ ಸ್ಪರ್ಶಿಸಲಶಕ್ಯಗಳಾಗಿ, ಚಿತ್ರದ ಪುತ್ತಳಿಯಂತೆ ಭೋಗೋಪಯುಕ್ತವಲ್ಲದೆ ವಿಲೋಕನಮಾತ್ರದಿಂದಲೇ ಜನರ ಚಿತ್ತಾನುರಂಜನೆಯಂ ಮಾಡುತ್ತ, ಅತತ್ವವೇದಿಗಳಿಗಭಿಮತವಾದ ಆಭಿಚಾರವಿದ್ಯಾವೈಖರಿಯೇ ನಾರೀರೂಪಿನಿಂ ಬಂದಂತೆ, ಗುರುಕುಚಭಾರಕ್ಕೆ ಬಡನಡು ಬಳುಕುತ್ತ, ಸೂಕ್ಕಿ [2]ಸೋಲುತ್ತ[2], ಬೆಡಗಂ ಬೀರುತ್ತ ಬರುತ್ತಿರುವ ಆ ಕನ್ನೆಯಿಂದೊಡಗೂಡಿ ಕ್ಷಪಣಕನು ಬಂದು, ಚಂದ್ರಗುಪ್ತನಂ ಕಂಡು, 'ಧರ್ಮಾಭಿವೃದ್ಧಿರಸ್ತು' ಎಂದು ಹರಸಿ, ಆ ಕನ್ನೆಯಂ ಮುಂದೆ ನಿಲ್ಲಿಸಲು,

ಆ ಕನ್ನೆಯು ಮಣಿಮಯ ವಲಯರವದಿಂ ಮನೋಹರವಾಗಿ ತೋರುವ ಹಸ್ತಗಳಿಂ ಚಂದ್ರಗುಪ್ತನಿಗೆ ಕೈಮುಗಿದು ವಿಲಾಸವಂ ನಟಿಸುತ, ಕ್ಷಪಣಕನ ಹಿಂದೆ ತಲೆಬಾಗಿ ನಿಂತಿರಲು, ಚಾಣಕ್ಯನು ಆ ಕನ್ನೆಯ ಸೌಂದರ್ಯವಂ ನೋಡಿ, ಕ್ಷಪಣಕವೇಷವಂ ಧರಿಸಿ ಬಂದಿರುವ ಇಂದುಶರ್ಮನಂ ಎಂದಿಗೂ ಅರಿಯದವನಂತೆ ಜನಗಳಿಗೆ ತೋರ್ಪಡಿಸುತ,

"ಅಯ್ಯ ಕ್ಷಪಣಕರೇ, ನೀವೆಲ್ಲಿಂದ ಬಂದಿರಿ ? ನಿಮ್ಮ ಹೆಸರೇನು ? ಶಾಪವಶದಿಂ ಪುರೂರವರಾಯನಂ ಮೋಹಿಸಲು ಭೂಮಿಗೆ ಬಂದ ಊರ್ವಶಿಯೋ ಎಂಬಂತೆ ನವಯೌವನಶಾಲಿನಿಯಾಗಿ ಸುಂದರಾಂಗಿಯಾದ ಈ ಕನ್ನೆಯು ಯಾರ ಪುತ್ರಿಯು ? ನಿನಗೆ ಎಲ್ಲಿ ದೊರಕಿದಳು ? ನಿನ್ನ ದೇಶ ಯಾವದು ? ಕುಳ್ಳಿರಿಸಿಕೊಂಡು ಹೇಳು" ಎನಲು, ಹಾಗೇ ಕುಳಿತು, ಕ್ಷಪಣಕನು ಚಾಣಕ್ಯರಂ ಕುರಿತು,

"ದೇವರೂ, ಮೊದಲು ನಂದರಿಗೆ ಆಪ್ತನಾಗಿ ಈಗ ಚಂದ್ರಗುಪ್ತನ ದೆಸೆಯಿಂ ಭಯಪಟ್ಟು ಹೋಗಿ ಇರುವ ಅಮಾತ್ಯ ರಾಕ್ಷಸನಿಗೆ ಮಿತ್ರನು, ನಾನು. ನನ್ನಂ ಜೀವಸಿದ್ಧಿಯೆಂದು ಹೇಳುವರು. ಈ ಕನ್ನೆಯು ಸೆರೆಸಿಕ್ಕಿದ ವಲ್ಲಭರಾಯನ ಪ್ರಿಯಪುತ್ರಿ ; ಈ ಕನ್ನೆಯಂ ಬಾಲ್ಯಾರಭ್ಯ ಈ ಹದಿನೈದು ವರುಷ ಪರ್ಯಂತವೂ ಸಲಹುತ್ತ ಕುಶಲವಿದ್ಯಗಳಿಂದ ಪ್ರೌಢೆಯಂ ಮಾಡುವಂತೆ ನನಗೆ ನೇಮಿಸಿ, ನನ್ನಿಂದ ಶಿಕ್ಷಿತವಾದ ವಿದ್ಯಾಕೌಶಲವಂ ನೋಡಿ, ಪ್ರೌಢಳಾದಳೆಂದು ಸಂತೋಷಪಡುತ, ಇವಳಂ ಜ್ಯೇಷ್ಠನಂದನಿಗೆ ಪ್ರಿಯಪತ್ನಿಯಂ ಮಾಡಬೇಕೆಂದು ರಾಕ್ಷಸನು ನಿಶ್ಚೈಸಿ ಇರಲು, ನಂದರು ಅನ್ಯಥಾ ಆದುದರಿಂದ, ರಾಕ್ಷಸನು ವಿದೇಶಗತನಾದುದಂ ತಿಳಿದು, ಅನಾಥಳಾದೆನೆಂದು ಖಿನ್ನಳಾಗಿ ಅವಲಂಬನವೃಕ್ಷವಿಲ್ಲದ ಮಾಲತೀಲತೆಯಂತೆ, ತನ್ನ ಯೌವನವು ಅರಣ್ಯದ ಬೆಳದಿಂಗಳಿ

---

೧. ದಿಂದಲೇ (ಕ) ೨. ಸೊಂಬಗುತ (ಕ)

ನಂತೆ ವ್ಯರ್ಥವಾಯಿತೆಂದು ಹಂಬಲಿಸುತ್ತಿರುವ ಈ ಕನ್ನೆಯಂ ನೋಡಿ, ನನಗೆ ಮನ ಮರುಗಿ, 'ರಾಜಯೋಗ್ಯಳಾದ ನಿನಗೆ ಅನುರೂಪನಾದ ಪತಿಯನ್ನುಂಟುಮಾಡುವೆನೆಂ'ದು ಒಡಂಬಡಿಸಿ, ಅಪರ್ಯುಷಿತ ಯೌವನಶಾಲಿನಿಯಾದ ಈ ಕನ್ನೆಯಂ ಅನ್ಯರು ಅಪೇಕ್ಷಿಸುವದಕ್ಕೆ ಮುಂಚಿತವಾಗಿಯೇ ನಿಮ್ಮ ಸನ್ನಿಧಿಗೈತಂದೆನು. ರಾಜೋತ್ತಮನಾದ ಚಂದ್ರಗುಪ್ತನಿಗೆ ವೀಳಯವಂ ಕೊಡುವದಕ್ಕಾಗಲೀ, ಪಾದಸೇವೆಗಾಗಲೀ, ಇಂಗಿತವಿದ್ದಂತೆ ನಡೆದುಕೊಳ್ಳುವದಕ್ಕೆ ಯೋಗ್ಯಳಿವಳು" ಎಂದು ಹೇಳಿ,

"ಅಯ್ಯ ಉಚಿತಜ್ಞರಾದ ಚಾಣಿಕ್ಯರೇ" ಎಂದು ಓರೆನೋಟದಿಂ ನೋಡಿ, "ಈ ಕನ್ನೆಯು ನಾಡಾಡಿ ಹೆಣ್ಣೆಂದು ತಿಳಿಯತಕ್ಕವಳಲ್ಲ. ಪಾರ್ಥನ ಚಿತ್ತವನ್ನಪಹರಿಸಿದ ಉಲೂಪಿಯಂತೆ ಬಹುಚತುರಳು; ಕಾಲಸರ್ಪದಂತೆ ತೋರುವ ರೋಮರಾಜಿಯಿಂ ರಸಿಕಚಿತ್ತವನ್ನಪಹರಿಸುವಳು ; ಹರಕಂಠಚ್ಛವಿಯಂತೆ ಶೋಭಿಸುವ ಕೇಶಭಾರದಿಂ ಪ್ರಿಯನ ಚಿತ್ತವೃತ್ತಿಯಂ ಮೋಹಗೊಳಿಸುವಳು. ಈ ಕನ್ನೆಯ ಅಂಗಸಂಗಸುಖವನ್ನನುಭವಿಸಿ ಸ್ವಸ್ಥನಾಗಿ ಇದ್ದ ವಲ್ಲಭನು ಇವಳನ್ನಗಲಿ ಶಯನಗೃಹದಿಂದ ಮರಳಿ ಬಾರನು" ಎಂಬ ಕ್ಷಪಣಕನ ವಾಕ್ಯವಂ ಕೇಳಿ ಚಾಣಿಕ್ಯನು ತನ್ನ ಮನಸ್ಸಿನಲ್ಲಿ ಆಲೋಚಿಸುತ್ತಲಿದ್ದನು :

"ಈಗ ಜೀವಸಿದ್ಧಿಯು ಇಲ್ಲಿ ಇರುವ ಜನರುಗಳಿಗೆ ತಿಳಿಯದ ನನಗೆ ಮಾತ್ರ ತಿಳಿಯುವಂತೆ ಭಾವಗರ್ಭಿತವಾದ ವಾಕ್ಯದಿಂದ ಸೂಚಿಸಿದನು. ಅದರಲ್ಲಿ ಉಲೂಪಿಯೆಂಬ ಶಬ್ದೋಪಮಾನದಿಂದಲೂ ಕಾಲಸರ್ಪವಂ ಪೋಲುವ ರೋಮರಾಜಿಯೆಂಬುದರಿಂದಲೂ ಹರಕಂಠಚ್ಛವಿಯಂತೆ ಶೋಭಿಸುವ ಕೇಶಭಾರಶಬ್ದದಿಂದಲೂ ವಿಚಾರಿಸಿ ನೋಡಿದರೆ, ಈ ಕನ್ನೆಯಲ್ಲಿ ವಿಷದೋಷವುಂಟೆಂದು ಹೇಳಬೇಕು. 'ಅಂಗಸಂಗಸುಖದಿಂ ಸ್ವಸ್ಥನಾಗಿ ಶಯನಗೃಹದಿಂ ಮರಳಿ ಬಾರನೆಂ'ದು ಹೇಳಿದ ಮಾತಿಗೆ ಈ ಕನ್ನೆಯ ಶರೀರದ ವಿಷಸ್ಪರ್ಶದಿಂದ ಮೃತನಾದ ಪುರುಷನು ಹೊರಕ್ಕೆ ಬರಲಾರನೆಂಬ ಅರ್ಥವಾಯಿತು. ಅದರಿಂದ ಇವಳು ವಿಷಕನ್ನೆಯೆಂದು ತಿಳಿಯಬೇಕು. ರಾಕ್ಷಸನು ಚಂದ್ರಗುಪ್ತನ ಸಂಹಾರನಿಮಿತ್ತವಾಗಿ ಇವಳಂ ಕಳುಹಿಸಿದುದರಿಂದ ದ್ವೇಷವಂ ಸಾಧಿಸುವದಕ್ಕೋಸುಗಲೇ ಎಂದು ತಿಳಿಯಬೇಕು. ಭೀತಿಯಿಂದ ಹೊರಟುಹೋದವನಲ್ಲ ; ಈ ಕನ್ನೆಯಲ್ಲಿ ಇರುವ ವಿಷದೋಷವಂ ಪರೀಕ್ಷಿಸಿ, ಆ ಬಳಿಕ ಮುಂದಣ ಕಾರ್ಯವಂ ಯೋಚಿಸಬೇಕೆಂದು ನಿಶ್ಚೈಸಿ, ಕ್ಷಪಣಕನ ಮುಖವಂ ನೋಡಲು,

"ಅಯ್ಯ ಕಾಲದೇಶಜ್ಞರಾದ ಚಾಣಿಕ್ಯರೇ, ನಿನ್ನ ದೇಶ ಯಾವದೆಂದು ಕೇಳಿದ ಮಾತಿಗೆ ವಿಜ್ಞಾಪಿಸುವೆನು :

ಯುಗಾಂತರದಲ್ಲಿ ಭೂಲೋಕಾಧಿಪತ್ಯವಂ ಬಯಸಿ ಬಂದ ರಾಕ್ಷಸರು ದೇವತೆಗಳಿಂ ಮುರಿದು ಓಡುತ್ತ, ಸಮುದ್ರವಂ ಪೊಕ್ಕು, ಕಾಲಾಂತರದಲ್ಲಿ ಬಂದು ಭೂಲೋಕವಂ ಬಾಧಿಸುತ್ತಿರಲು, ದೇವೇಂದ್ರನು ಅಟ್ಟುತ್ತ ಬಂದರೆ ಎಂದಿನಂತೆ ಸಮುದ್ರವಂ ಹೊಗುತ, ಪುನಃ ಪುನಃ ಭೂಲೋಕವಂ ಬಾಧಿಸುತ್ತಿರುವದಂ ನೋಡಿ, ದೇವತೆಗಳು ಅಗಸ್ತ್ಯಮಹಾಮುನಿಯಂ ಪ್ರಾರ್ಥಿಸಲು, ಆ ಮುನಿಗೆ ಸಮುದ್ರರಾಜನ ಮೇಲೆ ಕೋಪವುಂಟಾಗುವದಕ್ಕೆ ನಿಮಿತ್ತ ದೊರೆತು ಪಾನವಂ ಮಾಡಲು, ಅಲ್ಲಿ ರಾಕ್ಷಸರಿಗೆ ಆಸ್ಪದ ತಪ್ಪಿ ಪಾತಾಳ ಕುಹರವನ್ನಾಶ್ರೈಸಿ ಪುನಃ ಬಂದು ಭೂಮಿಯ ನವಖಂಡಗಳ ಕುಲಾಚಲಗಳ ವಿಸ್ತಾರ

ಗಳಾ[೧]ದ ಪಕ್ಷ[೧]ಕುಹರಗಳನ್ನಾಶ್ರಯಿಸಿ ಭೂಮಿಯಂ ಬಾಧಿಸುತ್ತಿರಲು, ಸಮಯಾಂತರದಲ್ಲಿ ಪರ್ವತಗಳಿಗೆ ಮದ ಹೆಚ್ಚಿ ಪಕ್ಷಗಳಂ ಕೊಡಹುತ್ತ ಹಾರಿ ಬಂದು ಪ್ರಜಾಪಶು ಸಮೇತವಾದ ಗ್ರಾಮಗಳ ಮೇಲೆ ಕುಳಿತು ದೇಶವಂ ಕ್ಷೋಭೆಪಡಿಸುವದಂ ತಿಳಿದು, ಕ್ರುದ್ಧನಾದ ದೇವೇಂದ್ರನು ವೃತ್ರಶೋಣಿತಪಾನದಿಂದತಿಪರುಷಮಾದ ಮಹಾವಜ್ರಪ್ರಹಾರದಿಂದ ನವಕುಲಾಚಲಗಳ ಪಕ್ಷಗಳಂ ಭೇದಿಸಿ ಹೋಗುತ್ತ, ದೇವತಾವಾಸಯೋಗ್ಯವಾಗಿ ಮಹಾಋಷಿಗಳಿಗೆ ಸಮ್ಮತವಾಗಿ ಯಜ್ಞಸಾಧನಗಳಿಗುಪಯುಕ್ತವಾದ ಹಿಮಾಚಲವಂ ನೋಡಿ, ಇದು ಸಹ ಸಮಯಾಂತರದಲ್ಲಿ ರಾಕ್ಷಸರಿಗೆ ಆವಾಸಕ್ಕೆ ಯೋಗ್ಯವಾಗುವದೆಂಬ ಶಂಕೆಯಿಂದ ಗಿರಿರಾಜನೆಂಬ ದಾಕ್ಷಿಣ್ಯವಿಡದೆ, ಅದರ ಪಕ್ಷಗಳಂ ಸಹ ಭೇದಿಸಿದನು. ಆಗ ತಂದೆಯಾದ ಹಿಮಾಚಲದ ಪಕ್ಷಗಳು ಭೇದಿತವಾದುದಂ ನೋಡಿ ಆತನ ಪುತ್ರನಾದ ಮೈನಾಕಪರ್ವತನು ವಾಯುಪ್ರೇರಣೆಯಿಂದ ಹಾರಿ ಹೋಗುವದಂ ಕಂಡು, ಅದರ ಪಕ್ಷಗಳಂ ಭೇದಿಸದೆ, ಪಾತಾಳಕುಹರದಿಂ ಬರುವ ರಾಕ್ಷಸರ ಮಾರ್ಗಕ್ಕೆ ಅಡ್ಡಲಾಗಿ ಸಮುದ್ರದಲ್ಲಿ ಇರುವಂತೆ ಮೈನಾಕನಿಗೆ ನೇಮಿಸಿ, ದೇವೇಂದ್ರನು ಸ್ವಸ್ಥಾನವನ್ನೈದಿದನು. ಆಗ ದೇವೇಂದ್ರನು ನವಕುಲಾಚಲಪಕ್ಷಗಳಂ ಭೇದಿಸಿ, ಹಿಮಾಚಲವು ಬಹು ಉಪಕಾರಿಯೆಂಬ ದಾಕ್ಷಿಣ್ಯದಿಂ ಬಿಟ್ಟು ಮೈನಾಕನಿಗೂ ನೇಮಿಸದೆ ಹೋದವನಾದರೆ ಲೋಕಕ್ಕೆ ರಾಕ್ಷಸರ ಬಾಧೆ ತಪ್ಪದೆ ಇರಲಾರದು. ಪ್ರಕೃತವೇನೆಂದರೆ, ಆ ಪರ್ವತಪಕ್ಷಗಳಂ ಭೇದಿಸುವ ರಭಸಕ್ಕೆ ಒಂದಾನೊಂದು ಪರ್ವತಶಿಖರವು ಭಿನ್ನವಾಗಿ ಹಾರಿಬಂದು ಬಿದ್ದುದರಿಂ ಆ ಪ್ರದೇಶವು ವಜ್ರಪಾತಕ್ಷೇತ್ರವೆನಿಸಿತು. ಅದು ನಮ್ಮ ದೇಶವು" ಎಂದು ಹೇಳಿದ ಕ್ಷಪಣಕನ ವಾಕ್ಯವಂ ಕೇಳಿ, ಚಾಣಕ್ಯನು ಆತನ ಮಾತಿಗೆ ಅಭಿಪ್ರಾಯವಂ ನಿಶ್ಚಯಿಸುತ್ತಿದ್ದನು.

ಈ ಕ್ಷಪಣಕನು ಹೇಳಿದ ಮಾತಿನಲ್ಲಿ ರಾಕ್ಷಸಶಬ್ದಗ್ರಹಣದಿಂದ ಅಮಾತ್ಯರಾಕ್ಷಸನಂ ಉದ್ದೇಶವಂ ಮಾಡಿ ಹೇಳಿದಂತಾಯಿತು. ಗಿರಿರಾಜಶಬ್ದಗ್ರಹಣದಿಂದ ಪರ್ವತೇಶ್ವರನಂ ಲಕ್ಷೀಕರಿಸಿ ಹೇಳಿದಂತಾಯಿತು. ಅಗಸ್ತ್ಯನು ರಾಕ್ಷಸರಿಗೆ ಆವಾಸವಾದ ಸಮುದ್ರವಂ ಪಾನಂಗೈದಿದನೆಂದು ಹೇಳಿದ ಮಾತಿಗೆ ಅಮಾತ್ಯರಾಕ್ಷಸನು ಎಲ್ಲಿ ಆಶ್ರಯವಂ ಸಂಪಾದಿಸಿದವನಾದರೂ, ಆ ಆಶ್ರಯವಂ ನಷ್ಟಗೊಳಿಸಬೇಕೆಂದು ಹೇಳಿದಂತಾಯಿತು. ರಾಕ್ಷಸರಿಗೆ ಆಶ್ರಯವಾಗಿ ಇದ್ದ ನವಕುಲಾಚಲಗಳ ಪಕ್ಷಗಳಂ ಭೇದಿಸಿದ ಬಳಿಕ ಗಿರಿರಾಜನಾಗಿ ಉಪಕಾರಿಯೆಂದು ಹಿಮಾಚಲದ ಪಕ್ಷವನ್ನುಳುಹಿಸದೆ ಭೇದಿಸಿ ಆತನ ಪುತ್ರನಾದ ಮೈನಾಕನು ವಾಯುಪ್ರೇರಣೆಯಿಂ ಓಡುವದಂ ಕಂಡು ಅವನ ಪಕ್ಷಗಳಂ ಭೇದಿಸದೆ ಪಾತಾಳಕುಹರಕ್ಕೆ ಅಡ್ಡಲಾಗಿ ಇರುವದೆಂದು ದೇವೇಂದ್ರನು ಹೇಳಿ ಹೋದನೆಂಬ ಮಾತಿಗೆ ಅಮಾತ್ಯರಾಕ್ಷಸನಿಗೆ ಆಶ್ರಯವಾಗಿ ಇದ್ದ ನವನಂದರು ಸಂಹೃತರಾದುದರಿಂದ ಅವಲಂಬರಹಿತನಾದ ರಾಕ್ಷಸನು ಈಗ ಪರ್ವತೇಶ್ವರನಲ್ಲಿ ಆಶ್ರಯವಂ ಸಂಪಾದಿಸುವನಾಗಿ ಇರುವದರಿಂದ ಈ ಪರ್ವತರಾಯನಲ್ಲಿ ದಾಕ್ಷಿಣ್ಯವಿಡದೆ ಸಂಹರಿಸಬೇಕೆಂದು ಹೇಳಿದಂತಾಯಿತು. ಗಿರಿರಾಜಪುತ್ರನಾದ ಮೈನಾಕನು ವಾಯುಪ್ರೇರಣೆಯಿಂದ ಓಡಿಹೋದುದಂ ಕಂಡು ಅದರ

---

೧. ದ (ಖ)

ಪಕ್ಷಗಳಂ ಛೇದಿಸದೆ ಪಾತಾಳಕುಹರಕ್ಕೆ ಅಡ್ಡಲಾಗಿ ಇರುವದೆಂದು ದೇವೇಂದ್ರನು ನೇಮಿಸಿ ಹೋದನೆಂದ ಮಾತಿಗೆ, ಪರ್ವತೇಶ್ವರನ ಪುತ್ರನಾದ ಮಲಯಕೇತುವಂ ಪರಪ್ರೇರಣೆಯಿಂದೋಡಿಸಿ ಆತನ ದೇಶದಲ್ಲಿ ಇದ್ದುಕೊಂಡು ನಮ್ಮ ಆಜ್ಞಾನುಸಾರ ನಡೆದುಕೊಳ್ಳುವಂತೆ ನೇಮಿಸಬೇಕೆಂದು ಹೇಳಿದಂತಾಯಿತು. ಇಂದ್ರನು ವೃತ್ರಾಸುರಶೋಣಿತ ಪಾನದಿಂದತಿಪರುಷಮಾ[1]ದ[1] ವಜ್ರದಿಂದ ಹಿಮಾಚಲದಲ್ಲಿ ದಾಕ್ಷಿಣ್ಯವಿಟ್ಟು ಅದರ ಪಕ್ಷವಂ ಛೇದಿಸದೆ ಮೈನಾಕನಂ ಬೆದರಿಸಿ ಓಡಿಸದೆ ಸ್ವಸ್ಥಾನಕ್ಕೆ ಹೋದವನಾದರೆ ಲೋಕಕ್ಕೆ ರಾಕ್ಷಸಬಾಧೆ ತಪ್ಪಿ ಕ್ಷೇಮವೆಂತಾಗುವದು ಎಂದು ಹೇಳಿದ ಮಾತಿಗೆ, ವಿಷಸೇವನೆಯಿಂದತಿತಪ್ತಳಾದ ಈ ಕನ್ಯಾಮುಖದಿಂ ಪರ್ವತರಾಯನಂ ಸಂಹಾರಗೊಳಿಸದೆ, ಇವನ ಪುತ್ರನಾದ ಮಲಯಕೇತುವಂ ಓಡಿಸದೆ, ಉಪೇಕ್ಷಿಸಿದರೆ, ಚಂದ್ರಗುಪ್ತನಿಗೆ ಅಭಯವಂ ಕೊಟ್ಟ ಮೇರೆಗೆ ಅಖಂಡರಾಜ್ಯಾಧಿಪತ್ಯವೆಂತು ಲಭಿಸಬೇಕೆಂದು ಹೇಳಿದಂತಾಯಿತು" ಎಂದು ನಿಶ್ಚಯಿಸಿ, ಚಾಣಕ್ಯನು ಇಂದುಶರ್ಮನಂ ನೋಡಿ,

"ಏನೈ ಕ್ಷಪಣಕರೇ, ವೃತ್ರಾಸುರಶೋಣಿತಪಾನದಿಂದತಿಪರುಷಮಾದ ಮಹಾವಜ್ರವು ಹಸ್ತಗತವಾದ ಸಮಯದಲ್ಲಿಯೇ ದೇವೇಂದ್ರನು ಗಿರಿರಾಜನಾದ ಹಿಮಾಚಲದ ಪಕ್ಷವಂ ಛೇದಿಸಬೇಕಾಯಿತಲ್ಲವೇ?" ಎಂದು ಕೇಳಲು, ಆ ಮಾತಿಗೆ ತಾನು ಗೂಢಾರ್ಥದಿಂ ಹೇಳಿದ ಮಾತಿಗೆ ಚಾಣಕ್ಯರಿಗೆ ಅರ್ಥವಾಯಿತೆಂದು ಕ್ಷಪಣಕನು ತಿಳಿದವನಾಗಿ "ಸರ್ವಜ್ಞಚಿತ್ತಕ್ಕೆ ವೇದ್ಯವಾದ ಬಳಿಕ ವಿಶೇಷ ವಿಜ್ಞಾಪಿಸುವರ್ಥ ಏನು ಇದೆ ?" ಎಂದು ಹೇಳಲು, ಚಾಣಕ್ಯನು ತನ್ನ ಮನಸ್ಸಿನಲ್ಲಿ ಕ್ಷಪಣಕವೇಷವಂ ಧರಿಸಿ ಇರುವ ತಮ್ಮ ಇಂದುಶರ್ಮನು ಅರ್ಥಗರ್ಭಿತವಾಗಿ ಹೇಳಿದಂತೆ ರಾಕ್ಷಸನು ಪರ್ವತರಾಯನನ್ನಾಶ್ರಯಿಸಿ ಚಂದ್ರಗುಪ್ತನಲ್ಲಿ ವೈರವಂ ಸಾಧಿಸ್ಸತಕ್ಕವನೇ ಅಹುದು. ಆದರೆ ಪರ್ವತರಾಯನನ್ನುಳುಹಿಸಿ ರಾಕ್ಷಸನಂ ಸಂಹರಿಸೋಣವೆಂದರೆ ಏನು ವ್ಯಯವಾದರೂ ಪೌರುಷ ಬುದ್ಧಿಗಳಲ್ಲಿ ರಾಕ್ಷಸನಿಗೆ ಸಮಾನನಾದ ಪುರುಷನು ದೊರಕಲಾರನು. ಇವರಿರ್ವರನ್ನುಳುಹಿಸಿದರೆ, ಮಧುಘೃತಗಳು ಸಮವಾಗಿ ಮಿಳಿತವಾದರೆ ಸೇವಿಸುವರಿಗೆ ವಿಷವಾಗುವಂತೆ ಇವರಿರ್ವರೂ ಮಿಳಿತರಾಗಿ ರಾಜಕಾರ್ಯದಲ್ಲಿ ಉದ್ಯೋಗಿಸಿದರೆ ಸದ್ಯಃ ಅರ್ಧರಾಜ್ಯವಂ ಪರ್ವತರಾಯನಿಗೆ ಕೊಡಬೇಕಾ[ದೀ]ತು. ನಾನು ತಪೋವನಮುಖವಾಗಲು, ಚಂದ್ರಗುಪ್ತ[2]ನು ತನ್ನ ಅರ್ಧರಾಜ್ಯವಂ ಕಳೆದುಕೊಂಡು ಹಿಂದುಗಡೆಯಲ್ಲೇ ಅರಸುತ ನನ್ನ ಮಾರ್ಗವಂ ಬಳಿವಿಡಿದು ತಪೋವನಕ್ಕೆ ಬರುವದರಲ್ಲಿ ಸಂಶಯವಿಲ್ಲ. ಇವರಿರ್ವರಲ್ಲಿ ಗುಣದೋಷಗಳೇನೆಂದರೆ, ರಾಕ್ಷಸನಾದರೋ ತಮಗೆ ಪ್ರಭುಗಳಾದ ನಂದರು ನಷ್ಟರಾದರೆಂದು ಅವರಿಗೆ ವೈರಿಯಾದ ಚಂದ್ರಗುಪ್ತ[2]ನನ್ನಾಶ್ರಯಿಸಿ ಅವನಿಂದ ಲಬ್ಧವಾಗುವ ತನ್ನ ಮಹಾಪದವಿಯಂ ತ್ಯಜಿಸಿ, ಸ್ವಾಮಿಭಕ್ತಿಯಂ ಸಫಲಗೊಳಿಸಲೋಸುಗ ಚಂದ್ರಗುಪ್ತನಂ ಸಂಹರಿಸಲೆಣಿಸಿ ಇರುವನು. ಪರ್ವತರಾಯನಾದರೋ ಮೊದಲು ನಮಗೆ ಕೊಟ್ಟ ಅಭಯವಂ ಮೀರಿ ತನಗೆ ಲಂಪಾಕಪತಿ[ಯ] ದೆಸೆಯಿಂದ ಅನಿವಾರ್ಯವಾಗಿ ಒದಗಿದ್ದ ವಿಪತ್ತನ್ನು ನಾವು ಇದ್ದ ಬಳಿಯಲ್ಲೇ ಯಾರಿಗೂ ಗೋಚರವಿಲ್ಲದಂತೆ ಕ್ಷಿಪ್ರದಲ್ಲಿ ಪರಿಹಾರವಂ ಮಾಡಿದ ಉಪ

---

೧. ದ ಮಹಾ (ಕ) ೨. ನನ್ನಾಶ್ರಯಿಸಿ (ಖ)

ಕಾರ ಸಾಹಸವಂ ಸ್ಮರಿಸದೆ ನಂದರ ಕಡೆ ನಿಯೋಗಿ ಬಂದು ಹೇಳಿದ ಸ್ವಲ್ಪಮಾತಿಗೆ ವಿಹ್ವಲನಾಗಿ ಚಂದ್ರಗುಪ್ತನಂ ನಂದರಿಗೆ ಒಪ್ಪಿಸುವವನಾಗಿ ಇದ್ದನು. ಅದರಿಂದ ಈತನು ಕೃತಘ್ನನು. ಇವನಲ್ಲಿ ರಾಕ್ಷಸನು ಬಂದು ಮಿಳಿತನಾದರೆ ಚಂದ್ರಗುಪ್ತನ ಮೇಲೆ ರಾಜ ಕಾರ್ಯಕ್ಕೆ ಈ ಪರ್ವತರಾಯನೇ ಮುಂದೆ ನಡೆಯುವದಕ್ಕೆ ಸಂಶಯವಿಲ್ಲ. ಗ್ರಾಮಕ್ಕೆ ಅವಲಂಬನವಾಗಬೇಕೆಂದು ಬೆಳಸಿದ ಹೆಬ್ಬೇಲಿಯು ಚೋರ ವ್ಯಾಘ್ರಗಳಿಗೆ ಆಶ್ರಯ ವಾದರೆ ಗ್ರಾಮದವರಿಗೆ ಅದಂ ಭೇದಿಸುವದೇ ಆವಶ್ಯಕವಾಗುವಂತೆ ರಾಕ್ಷಸನಿಗೆ ಆಶ್ರಯ ವಾಗುವದರಿಂದ ಪರ್ವತರಾಯನನ್ನು ಈಗಲೇ ಸಂಹರಿಸಿ, ರಾಕ್ಷಸನಂ ಸರ್ವೋ ಪಾಯದಿಂ ಸಂಗ್ರಹಿಸಬೇಕಾಯಿತು. ಅದರಿಂದ ವಿಷಕನ್ನೆಯಂ ಪರೀಕ್ಷಿಸಿದಲ್ಲದೆ ಇದ್ಯಾ ವುದೂ ನಿದರ್ಶನಕ್ಕೆ ಬರಲಾರದು" ಎಂದು ನಿಶ್ಚೈಸಿ, ಚಾಣಕ್ಯನು ದೂತರ ಮುಖವಂ ನೋಡಿ,

"ಎಲೈ, ನೂತನವಾಗಿ ಹಿಡಿತಂದ ಗಿಣಿಗಳಿಗೆ ಮಾತು ಕಲಿಸುವಂತೆ ನೇಮಿಸದ ಮೇರೆಗೆ ಅವು ಶಿಕ್ಷಿತವಾಯಿತೋ ಇಲ್ಲವೋ ? ಪಾರಾವತ ಚಕೋರಗಳಿಗೆ ಪೋಷಣೆಯಂ ಮಾಡುವಂತೆ ನೇಮಿಸಿದ ಮೇರೆಗೆ ಆ ಪಕ್ಷಿಗಳು ಪು[೧][ಷ್ಟ][೧]ವಾಗಿ ಇವೆಯೋ, ನೋಡ ಬೇಕು. ಇಲ್ಲಿಗೆ ತೆಗೆದುಕೊಂಡು ಬನ್ನಿ" ಎನಲು, ಆ ದೂತರು ಹೋಗಿ ಆ ಗಿಣಿಯ ಪಂಜರಗಳಂ ಪಾರಾವತ ಚಕೋರ ಪಕ್ಷಿಗಳಂ ತಂದು ಇರಿಸಲು, ಆಗ ಶುಕಗಳು ಆ ವಿಷ ಕನ್ನೆಯಂ ನೋಡಿ ಕೋ ಎಂದು ಅರಚುತ್ತಿರಲು, ಹಾಗೇ ಪಾರಾವತ ಚಕೋರ ಪಕ್ಷಿಗಳು ಆ ಕನ್ನೆಯಂ ನೋಡಿ ಪಕ್ಷಗಳಂ ಒದರುತ್ತ ಬಿರಬಿರನೆ ಕಣ್ಣುಗಳಂ ತಿರುಗಿಸುತ್ತ ಆಗಲೇ ಮೃತವಾಗಲು, ಅದಂ ನೋಡಿ ಚಾಣಕ್ಯನು "ಇವಳು ವಿಷಕನ್ನೆಯೇ ಅಹುದೆಂ"ದು ತನ್ನ ಮನದಲ್ಲಿ ನಿಶ್ಚೈಸಿ, ಆ ಪಕ್ಷಿಗಳ ಪೋಷಿಸುವರ ಮೇಲೆ ಕೋಪವಂ ಮಾಡುವನಂತೆ ಆಹಾರ ಸಾಲದುದರಿಂದ ಪಕ್ಷಿಗಳು ಮೃತವಾದವೆಂದು ಹೇಳುತ್ತ, ಅವಂ ಆಚೆಗೆ ತೆಗೆಯಿಸಿ, ಪುನಃ ತನ್ನ ಮನಸ್ಸಿನಲ್ಲಿ ಆಲೋಚಿಸುತ್ತಿದ್ದನು: "ಈ ವಿಷಕನ್ನೆಯಂ ನೋಡಿ ಈ ಪಕ್ಷಿಗಳು ಮೃತವಾದುದರಿಂದ ವಿಷಸಂಪರ್ಕಪದಾರ್ಥಪರೀಕ್ಷೆಯಂ ಹೇಳಿದ ವೈದ್ಯಶಾಸ್ತ್ರವು ಸತ್ಯವೇ ಸಿದ್ಧ"ವೆಂಬಲ್ಲಿಗೆ,

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಮಹೀಶೂರನರಪತಿ ಶ್ರೀಕೃಷ್ಣರಾಜೇಂದ್ರರಾಶ್ರಿತ ಹೊಯಿಸಣಿಗೆಕುಲಸಂಜಾತ ನಾರಾಯಣಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥ ದಲ್ಲಿ ವಿಷಕನ್ಯಾಗಮನವೆಂಬ ನವಮಾಶಯಸ್ಸಮಾಪ್ತಃ.

ದಶಮಾಶ್ವಾಸ : ಪರ್ವತರಾಯನಿರ್ಯಾಣ ಕಥನವು

ಅನಂತರದಲ್ಲಿ, ಚಾಣಕ್ಯನು ವಿಷಕನ್ಯಾಸಮೇತನಾದ ಇಂದುಶರ್ಮನಂ ಪರ್ವತ ರಾಯನ ಬಳಿಗೆ ಕಳುಹಿಸಬೇಕೆಂದು ನಿಶ್ಚೈಸಿ, ಈ ಕನ್ನೆಯಿಂದ ಪರ್ವತರಾಯ ಮೃತನಾದರೆ ಛದ್ಮನೆಯಿಂದ ಅವನ ಪುತ್ರನಾದ ಮಲಯಕೇತುವನ್ನು ಇಲ್ಲಿಂದ ಅವನ ದೇಶಕ್ಕೆ ಓಡಿಸಿ

---

೧. ಟ (ಗ)

ಚಂದ್ರಗುಪ್ತನಿಗೆ ರಾಜ್ಯಾಭಿಷೇಕವಂ ಮಾಡಬೇಕೆಂದು ಮನಸ್ಸಿನಲ್ಲಿ ಯೋಚಿಸಿ, ಇಂದುಶರ್ಮನಂ ಕುರಿತಿಂತೆಂದನು :

"ಅಯ್ಯ ಜೀವಸಿದ್ಧಿಯೇ, ಚಂದ್ರಗುಪ್ತನು ಪಾಣಿಗ್ರಹಣವಂ ಮಾಡಿದ ಪತ್ನಿಯಲ್ಲಿಯೇ ಹೊರತು ಅನ್ಯರಲ್ಲಿ ಆತನ ಮನಸ್ಸು ಒಡಂಬಡುವನಲ್ಲವಾದುದರಿಂದ ನಮಗೆಲ್ಲರಿಗೂ ಪ್ರಭುವಾದ ಪರ್ವತರಾಯನಿಗೆ ಈ ಕನ್ನೆಯಂ ಒಪ್ಪಿಸಿ, ಚತುರೆಯಾದ ಇವಳ ಯೌವನವು ಸಫಲವಾಗುವಂತೆ ಮಾಡು. ರಾಜಯೋಗ್ಯಳಾದ ಈ ಕನ್ನೆಯನ್ನೊಡಗೂಡಿ ಪರ್ವತರಾಯನು ಸುಖವಾಗಿ ಇದ್ದರೆ, ಅದು ನಮಗೆ ಸಂತೋಷವು. ಈ ಕನ್ನೆಯಿಂದ ಪರ್ವತರಾಯನು ಸಂತುಷ್ಟನಾದರೆ, ಚಂದ್ರಗುಪ್ತನಿಗೆ ರಾಕ್ಷಸನಲ್ಲಿ ಇದ್ದ ಕೋಪವು ನಿರರ್ಥಕವಾದೀತು. ಈಗ ಅಶ್ವಿನೀನಕ್ಷತ್ರ ಕಳೆದು ಬರುವ ಸಮಯವು. ಬೇಗ ಕರೆದುಕೊಂಡು ಹೋಗಿ ಶಯನಗೃಹಕ್ಕೆ ಪರ್ವತರಾಯನು ಬರುವ ಸಮಯದಲ್ಲಿ ಈ ಕನ್ನೆಯಂ ಒಪ್ಪಿಸುವನಾಗು" ಎಂದು ಹೇಳಿ ಕ್ಷಪಣಕನಂ ಕಳುಹಿಸಲು, ಅವನು ಆ ಕನ್ಯಾಸಮೇತನಾಗಿ ಪರ್ವತರಾಯನಿದ್ದೆಡೆಗೆ ಬರುತ್ತಿರಲು,

ಆಗ ಚಾಣಕ್ಯನು ಮುಂದಣ ಕಾರ್ಯವಂ ಮನಸ್ಸಿನಲ್ಲಿ ಯೋಚಿಸಿ, ಕಾಗದವಂ ಬರೆದು, ತನ್ನ ಶಿಷ್ಯನ ಕೈಯಲ್ಲಿ ಕೊಟ್ಟು, 'ಸಿದ್ಧಾರ್ಥಕನ ಕೈಯಲ್ಲಿ ಕೊಟ್ಟು ಬಾರೆಂ'ದು ನೇಮಿಸಲು, ಆ ಶಿಷ್ಯನು ಹೋಗಿ ಸಿದ್ಧಾರ್ಥಕನಂ ಕಂಡು, ಚಾಣಕ್ಯರು ಕೊಟ್ಟ ಕಾಗದವಂ ಕೊಡಲು, ಸಿದ್ಧಾರ್ಥಕನು ಅದಂ ನೋಡಿಕೊಂಡು ಆ ಕ್ಷಣವೇ ಬಾಗುರಾಯಣನಿದ್ದೆಡೆಗೆ ಬಂದು, ಅವನಂ ಕುರಿತು,

"ಅಯ್ಯ ಬಾಗುರಾಯಣನೇ, ಚಾಣಕ್ಯರು ನಿನ್ನಲ್ಲಿ ಆಪ್ತವಿಶ್ವಾಸವಂ ಮಾಡಿ ಇದ್ದಾರೆ. ಚಂದ್ರಗುಪ್ತನ ಕಾರ್ಯವು ನಿನ್ನಿಂದ ಬಹುವಾಗಿ ಆಗಬೇಕಾಗುತ್ತಲಿದೆ. ರಾಕ್ಷಸನಂತೆ ಸಕಲದರಲ್ಲಿಯೂ ಪ್ರೌಢನು ನೀನು. ಈ ಕಾಗದವಂ ನೋಡಿಕೋ. ಇದರಲ್ಲಿದ್ದ ಮೇರೆಗೆ ನಡೆದುಕೊಂಡರೆ ನಿನಗೆ ವಿಶೇಷವಾದ ಅಭ್ಯುದಯವುಂಟಾಗುತ್ತಲಿದೆ" ಎಂದು ಹೇಳಿ ಆ ಕಾಗದವಂ ಕೊಡಲು, ಅದಂ ಓದಿಕೊಂಡು, ಬಾಗುರಾಯಣನು ಆಶ್ಚರ್ಯಪಟ್ಟು,

"ಚಾಣಕ್ಯರ ಆಜ್ಞೆ ಮೇರೆಗೆ[೧] ಶಿರಸಾವಹಿಸಿ ಈ ಕಾರ್ಯವಂ ಮಾಡುತ್ತಲಿದ್ದೇನೆ" ಎಂದು ಹೇಳಿ, ಆಗ ತನ್ನ ದೂತನೊಬ್ಬನಂ ಕರೆದು, "ಡಿಂಗಿರಾತ ಪುರುಷದತ್ತ ಬಲಗುಪ್ತರ ಕಿವಿಯಲ್ಲಿ 'ಚಂದ್ರಗುಪ್ತರ ಅಪ್ಪಣೆ ಆಗಿ ಇದೆ'ಯೆಂದು ಹೇಳಿ, ಈ ಕ್ಷಣವೇ ನಿಮ್ಮ ಸೇನೆಗಳಂ ಸನ್ನಾಹಗೊಳಿಸಿಕೊಂಡು ಹೋಗಿ ಮಲಯಕೇತುವಿನ ದಂಡಿನ ಪಾಳೆಯದ ಪಶ್ಚಿಮ ದಿಕ್ಕಿನಲ್ಲಿ ನಿಂತಿರುವಂತೆ ಹೇಳಿ, ಅವರಂ ಹೊರಡಿಸಿಬಾರೆಂ"ದು ಹೇಳಿ ಕಳುಹಿಸಲು, ಅಪ್ಪಣೆ ಮೇರೆಗೆ ಬಾಗುರಾಯಣನ ದೂತನು ಬಂದು, ಡಿಂಗಿರಾತ ಪುರುಷದತ್ತ ಬಲಗುಪ್ತರ ಕಿವಿಯಲ್ಲಿ ಬಾಗುರಾಯಣ ಹೇಳಿದ ಮಾತಂ ಹೇಳಲು, ಅದಂ ಕೇಳಿ ಆ ಸೇನಾಪತಿಗಳು ಆ ಕ್ಷಣವೇ ತಮ್ಮ ಸೇನೆಯಂ ತೆಗೆದುಕೊಂಡು ಆ ರಾತ್ರಿವೇಳೆಯಲ್ಲಿ ಮಲಯಕೇತುವಿನ ಗುಡಾರದ ಪಶ್ಚಿಮದಿಕ್ಕಿನಲ್ಲಿ ನಿಲ್ಲಿಸುತ್ತಲಿದ್ದರು. ಆಗ ಬಾಗುರಾಯಣನು ತನಗೆ ಚಾಣಕ್ಯರು ಬರೆದ ಕಾಗದವಂ ಪುನಃ ನೋಡಿಕೊಂಡು, ಅದರ

---

೧. ಗೆ ಆಶ್ಚರ್ಯಪಟ್ಟು (ಕ)

ಅಭಿಪ್ರಾಯವಂ ಮನಸ್ಸಿನಲ್ಲಿ ಪರಿಭಾವಿಸುತ್ತಲಿದ್ದನು. ಏನೆಂದರೆ :

"ಈಗ ವಿಷಕನ್ಯಾಸಂಗದಿಂದ ಪರ್ವತರಾಯನು ಮೃತನಾಗುವನು. ಈ ಸಮಯದಲ್ಲಿ ಸೇನೆಗಳಂ ಮಲಯಕೇತುವಿನ ಗುಡಾರದ ಬಳಿಗೆ ಕಳುಹಿಸಿ, ಅವನಿಗೆ ಭಯವಂ ಕಲ್ಪಿಸಿ, ಅಲ್ಲಿಂದ ಅವನಂ ಓಡಿಸಿ, ಅವನಿಗೆ ಆಪ್ತಮಂತ್ರಿಯಾಗಿ ಇದ್ದುಕೊಂಡು, ಏನಾದರೂ ಒಂದು ವೇಳೆ ಅವಲಂಬನವಿಲ್ಲದೆ ರಾಕ್ಷಸನು ಮಲಯಕೇತುವಿನ ಬಳಿಗೆ ಬಂದು ಅವನಂ ಒಡಂಬಡಿಸಿ ಪುನಃ ಚಂದ್ರಗುಪ್ತನ ಮೇಲೆ ರಾಜಕಾರ್ಯವಂ ಯೋಚಿಸಿದರೆ, ಸಮಯವಂ ನೋಡಿ ರಾಕ್ಷಸನಲ್ಲಿ ಇಲ್ಲದ [1]ದೋಷ[1]ವನ್ನಾದರೂ ಕಲ್ಪಿಸಿ ಪ್ರಾಣದಿಂದುಳುಹಿಸಿ, ಅನ್ಯರಿಗೆ ವಿಕಲ್ಪ ತೋರದಂತೆ ಮಾಡುತ್ತ, ಅಲ್ಲಿಂದ ಹೊರಡಿಸತಕ್ಕದ್ದು. ನೀನು ಸ್ವಾಮಿ ಕಾರ್ಯದಲ್ಲೇ ನಿರತನಾಗಿ ಇರತಕ್ಕದ್ದು" ಎಂದು ಬರೆದು ಇರುವ ಕಾಗದಾಭಿಪ್ರಾಯವಂ ತಿಳಿದು,

ಈಗ ವಿಳಂಬವಂ ಮಾಡಿದರೆ ರಾಜಕಾರ್ಯವು ಕೆಟ್ಟು ಪ್ರಭುಕೋಪಕ್ಕೆ ಪಾತ್ರನಾದೇನೆಂದು ನಿಶ್ಚೈಸಿ, ತನ್ನ ಭೂಷಣಗಳಂ ಸಡಲಿಸಿ, ಕರವಸ್ತ್ರವಂ ತಲೆಗೆ ಸುತ್ತಿ, ಬತ್ತ[ಲೆ]ಕುದುರೆಯನ್ನೇರಿ, ತ್ವರಿತದಿಂ ಮಲಯಕೇತುವಿದ್ದೆಡೆಗೆ ಬರುತ್ತಿರಲು, ಆ ಸಮಯದಲ್ಲಿ ಕ್ಷಪಣಕನು ಪರ್ವತರಾಯನ ಗುಡಾರದ ಮುಂದೆ ನಿಂತು, "ಹೀಗೆ ನಾನು ಬಂದು ಇದ್ದೇನೆ ; ಪ್ರಭುವಿಗೆ ತಿಳುಹಿಸಿರಿ" ಎಂದು ಅಲ್ಲಿಯ ಕಂಚುಕಿಗಳಿಗೆ ಹೇಳಲು, ಅವರು ಬಂದು ಪರ್ವತರಾಯನಿಗೆ ಕೈಮುಗಿದು ನಿಂತು, "ಜೀಯ, ಸಕಲವಸ್ತುಗಳ ಲಾವಣ್ಯಲೇಶಗಳಂ ತೆಗೆದು ಬ್ರಹ್ಮನಿಂದ ನಿರ್ಮಿತವಾದ ತಿಲೋತ್ತಮೆಯೋ ಎಂಬಂತೆ, ಅತಿಮೋಹನಾಂಗಿಯಾಗಿ, ಮಂದಮಾರುತದಿಂ ಪ್ರಚಲಿಸುವ ಕನ್ನೈದಿಲೆದಳಗಳಂತೆ ನಿಜನೇತ್ರಕಾಂತಿಯಿಂ ರಸಿಕಜನಚಿತ್ತವಂ ಮೋಹಗೊಳಿಸುತ್ತ, ಚಂದ್ರಗಾವಿಯಂ ಮುಸುಕಿಟ್ಟು, ಕುಚಭಾರದಿಂ ಬಳುಕುವ ಬಡನಡುವಿನಲ್ಲಿ ವಾಮಹಸ್ತವನ್ನಿಟ್ಟು, ಬೆಡಗಂ ಬೀರುತ್ತಿರುವ ಕನ್ಯಾರತ್ನದಿಂ ಸಹಿತನಾಗಿ ಒಬ್ಬ ಕ್ಷಪಣಕನು ಸನ್ನಿಧಿಯಂ ಕಾಣಬೇಕೆಂಬ ಕುತೂಹಲದಿಂದ ಬಂದು ಇದಾನೆ. ಅಪ್ಪಣೆಯೇನಂ"ದೆನಲು, ಆ ಮಾತಿಗೆ ಪರ್ವತರಾಯನು "ಬರಲಿ, ಒಳಕ್ಕೆ ಬಿಡು" ಎನಲು,

ಆ ಕಂಚುಕಿಯು ಕನ್ಯಾಸಮೇತವಾಗಿ ಆ ಕ್ಷಪಣಕನಂ ಕರೆತರಲು, ಆ ಕನ್ನೆಯು ಆ ರಾಯನಿಗೆ ಕೈಮುಗಿದು ಸೊಬಗಂ ಬೀರುತ, ಶಿರವಂ ಬಾಗಿ, ಕ್ಷಪಣಕನ ಹಿಂದೆ ನಿಂತಿರಲು, ಪರ್ವತರಾಯನು ಅವಳಂ ನೋಡಿ, "ಮನುಷ್ಯರಲ್ಲಿ ಈ ಲಾವಣ್ಯ ಈ ರೂಪು ಈ ಸೌಂದರ್ಯ ಈ ಬೆಡಗು ಎಲ್ಲಿಯೂ ಕಂಡುದಿಲ್ಲ. ಬಹುಪುಣ್ಯಶಾಲಿಗೆ ಇವಳು ದೊರಕತಕ್ಕವಳು. ಇವಳ ಅಂಗಸಂಗವಾದ ಪುರುಷನು ಬಹುಧನ್ಯನು. ಇವಳ ನೋಟ ಬೇಟಗಳು ಋಷಿಗಳ ಮನಸ್ಸನ್ನಾದರೂ ಅಪಹರಿಸಿಯಾವು. ಇವಳು ಕೇಳಿದರೆ ತನ್ನ ಪ್ರಾಣವನ್ನಾದರೂ ಕೊಡುವೆನಲ್ಲದೆ ತಪ್ಪುವನಲ್ಲ"ವೆಂದು ಆಲೋಚಿಸುತ್ತ, ಕ್ಷಪಣಕನಂ ನೋಡಿ,

"ಅಯ್ಯ ಕ್ಷಪಣಕನೇ, ನೀನು ಯಾರು ? ಎಲ್ಲಿಂದ ಬಂದೆ ? ಸಂನ್ಯಾಸಿಯಾದ ನಿನಗೆ ಈ ಸ್ತ್ರೀರತ್ನವೆಲ್ಲಿ ದೊರಕಿದಳು ?" ಎನಲು, "ಅಯ್ಯ ಭೂಪತಿಯೇ, ಚಂದ್ರಗುಪ್ತನ

---

೧. ದ್ವೇಷ (ಕ)

ದೆಸೆಯಿಂದ ಭೀತನಾಗಿ ಪುರದಿಂದ ಹೋಗಿರುವ ರಾಕ್ಷಸನಿಗೆ ಮಿತ್ರನು ನಾನು. ನನ್ನಂ ಜೀವಸಿದ್ಧಿಯೆಂದು ಹೇಳುವರು. ಚಂದ್ರಗುಪ್ತನಂ ಅನುಗ್ರಹಿಸಿ ನಂದರಂ ನಿಗ್ರಹಿಸಿದ ಬಳಿಕ ಸಕಲರಾಜ್ಯಕ್ಕೂ ಅಧಿಪತಿಯಾದ ನಿಮ್ಮ ಪ್ರಸಾದವನ್ನಪೇಕ್ಷಿಸುವ ಅಮಾತ್ಯ ರಾಕ್ಷಸ ನಿಂದ ನಿಮಗೆ ಕಳುಹಿಸಿದ ಕನ್ನೆಯು ಇವಳು. ಬಹುಚತುರಳು, ರಾಜಕುಲಸಂಭೂತಳು. ಅಪರ್ಯುಷಿತ ಯೌವನಶಾಲಿಯಾದ ಈ ಕನ್ನೆಯಂ ಪರಿಗ್ರಹಿಸಿ, ರಾಕ್ಷಸನನ್ನನುಗ್ರಹಿಸಿ ಚಂದ್ರಗುಪ್ತನಿಗೆ ರಾಕ್ಷಸನಲ್ಲಿ ಇದ್ದ ವೈರವಂ ಬಿಡುವಂತೆ ನೇಮಿಸಬೇಕು'' ಎನಲು, ಆ ವಾಕ್ಯವಂ ಕೇಳಿ,

''ಅಯ್ಯ ಜೀವಸಿದ್ಧಿಯೇ, ಇನ್ನು ಮೇಲೆ ರಾಕ್ಷಸನು ಚಂದ್ರಗುಪ್ತನ ದೆಸೆಯಿಂ ಬಂದ ಭಯದಿಂದ ಬಿಡಿಸಿಕೊಳ್ಳುವನು. ನಾನು ಸುಪ್ರೀತನಾಗಿ ಇರುವಲ್ಲಿ ರಾಕ್ಷಸನಿಗೆ ಯಾವ ವಿಷಯದಲ್ಲಿ ಕಡಮೆಯಾಗುತ್ತಲಿದೆ ? ಮೊದಲು ಲೇಖನಮುಖದಿಂದ ನಮಗೆ ಅವರಿಗೆ ಮಿತ್ರತ್ವವುಂಟು. ಚಾಣಕ್ಯರು ಮಾಡಿದ ಕಾರ್ಯತ್ವರಿತದಿಂದ ನಂದರು ಸಂಹೃತರಾಗಿ, ರಾಕ್ಷಸನ ಮನಸ್ಸಿಗೆ ವ್ಯಸನವುಂಟಾಯಿತು. ಒಂದು ವೇಳೆ ಏನಾದರೂ ಚಂದ್ರಗುಪ್ತನು ರಾಕ್ಷಸನನ್ನುಪೇಕ್ಷಿಸಿದರೆ, ನಂದರಾಜ್ಯದಲ್ಲಿ ನನಗೆ ಬರುವ ಅರ್ಧರಾಜ್ಯವನ್ನಾದರೂ ರಾಕ್ಷಸನ ವಶವಂ ಮಾಡಿ, ಅದಕ್ಕೆ ಅವನಂ ಅಧಿಪತಿಯಂ ಮಾಡುವೆನು ; ನಿರ್ಭಯದಿಂದ ಬರಲಿ'' ಎಂದು ಹೇಳಿ,

ಅಷ್ಟರಲ್ಲಿಯೇ ಆ ಕನ್ನೆಯಂ ನೋಡಿ, ಕಾಮಪರವಶನಾಗಿ, ತವಕಪಡುತ್ತ, ಸ್ವೇದ ಬಿಂದುಗಳಿಂ ವ್ಯಾಪಿಸಿದ ದೇಹನಡುಕವುಳ್ಳವನಾಗಿ, ಆಸನ್ನಮೃತಿಯುಳ್ಳವನಂತೆ ಸಮೀಪ ದಲ್ಲಿದ್ದ ಜನವಂ ಮೃತ್ಯುಬಳಗದಂತೆ ಕಾಣುತ, ಲಜ್ಜೆಯಂ ಬಿಟ್ಟು, ಕಾತರದಿಂದೆದ್ದು, ಆ ಕನ್ನೆಯನ್ನಾಲಿಂಗಿಸುವದಕ್ಕೆ ಯತ್ನವಂ ಮಾಡಲು, ಕ್ಷಪಣಕನು ಆ ಕನ್ನೆಯಂ ಕುರಿತು,

''ಎಲೈ ನಾರೀಶಿರೋಮಣಿಯೇ, ನಿನಗನುರೂಪನಾದ ಪತಿಯು ದೊರಕಿದನು. ನಿನ್ನ ಯೌವನವಂ ಸೂರೆಗೊಂಬನು. ಈತನ ಚಿತ್ತಾನುಸಾರವಾಗಿ ನಡೆದುಕೊಳ್ಳುವಳಾಗು. ಭಯಪಡಬೇಡ. ನಾನು ಇಲ್ಲಿಯೇ ಇರುವೆನೆಂ''ದು ಹೇಳಿ, ಪರ್ವತರಾಯನಂ ಕುರಿತು,

''ಅಯ್ಯ ಅರಸೇ, ಮಾಲತೀಕುಸುಮದಂತೆ ಮೃದ್ವಂಗಿನಿಯಾಗಿ, ಪುರುಷಸಂಪರ್ಕವ ನ್ನರಿಯದಿರುವ ಈ ಬಾಲಕಿಯಂ ಬಹಳ ಘಾಸಿಪಡಿಸಬೇಡ. ಕೆಲವು ಕಾಲದ ಮೇಲೆ ಈ ಕನ್ನೆಯ ರತಿಕಲಾಪ್ರೌಢಿಮಾಲಹರಿಯು ನಿನ್ನ ಚಿತ್ತವಂ ತನ್ನ ವಶವಂ ಮಾಡಿಕೊಳ್ಳುವದು'' ಎಂದು ಹೇಳಿ, ಆ ಕನ್ನೆಯಂ ತನ್ನ ನವಿಲುಗರಿಪಿಂಛದ ಕಟ್ಟಿನಿಂ ಆತನ ಕೈಯಲ್ಲಿ ಒಪ್ಪಿ ಸಲು,

ಆ ರಾಯನಿಗೆ ವಿಧಿಬಲ ಮೀರಿದ್ದರಿಂದ, ಮಾಂಸಭ್ರಾಂತಿಯಿಂದ ದಾವಾನಲಶಿಖಿಗೆ ಜಿಹ್ವಾಗ್ರವಂ ಚಾಚುವ ಮೃಗರಾಜನಂತೆ ಅವಳಂ ಚುಂಬಿಸುತ್ತ, ತಕ್ಕೈಸಿಕೊಂಡು, ತನ್ನ ಶಯನಗೃಹದ ಮಂಚಕ್ಕೆ ಸೆಳೆದು, ಮನದ ತವಕ ಹೆಚ್ಚಿ ಬರುತ್ತಿರಲು, ''ನನ್ನ ಗಿಣಿಯೇ, ನಾರೀಮಣಿಯೇ'' ಎಂದು ಆಲಿಂಗಿಸಿ, ಚುಂಬಿಸಿ, ಮನದಣಿಯುವಂತೆ ಕ್ರೀಡಿಸಿ, ಆ ಕನ್ನೆಯ ದೇಹದ ವಿಷದ ನಂಜು ತಲೆಗೇರಿ, ಬಲಗುಂದಿ, ತಕ್ಷಕನಿಂದ ದಷ್ಟನಾದ ಪರೀಕ್ಷಿದ್ರಾಯನಂತೆ, ಕಿಂದಮ ಮುನಿಯ ಶಾಪದಿಂದ ಕ್ರೀಡಿಸಿ ಅಸುವಂ ಬಿಟ್ಟು ಮಾದ್ರಾದೇವಿಯ ವಕ್ಷಸ್ಥಳದಲ್ಲಿ ಒರಗಿದ ಪಾಂಡುರಾಯನಂತೆ, ಆ ವಿಷಕನ್ನೆಯ ವಕ್ಷ

ಸ್ಥಳದಲ್ಲಿಯೇ ಒರಗಿದ ಪರ್ವತರಾಯನು ಗತಪ್ರಾಣನಾಗಲು,

ಆಗ ಆ ಕನ್ನೆಯು ಪ್ರಿಯನಾದ ಪರ್ವತರಾಯನು ಮೃತನಾದುದಂ ನೋಡಿ ದುಃಖಾಕ್ರಾಂತಳಾಗಿ, ಎದ್ದು, ಮಂಚದಲ್ಲಿಯೇ ಆ ರಾಯನಂ ಮಲಗಿಸಿ, ಆತನ ಛಾದರದಿಂದಲೇ ತುಂಬಾ ಹೊದ್ದಿಸಿ, "ಮಹಾಪಾಪಿಷ್ಠಳಾದ ತನ್ನಿಂದ ಪ್ರಜಾಪರಿಪಾಲಕನಾದ ಈ ರಾಯನು ಮೃತನಾದನು. ನನಗೆ ಒಡೆಯನಾದ ರಾಕ್ಷಸನು ತನ್ನಂ ಜೀವಸಿದ್ಧಿಯ ವಶವಂ ಮಾಡಿ, 'ಆತ ಹೇಳಿದಂತೆ ನಡೆದುಕೋ' ಎಂದು ನೇಮಿಸಿದ ಮೇರೆಗೆ ಸ್ವಾಮಿಕಾರ್ಯವಂ ಮಾಡಿದವಳಾದರೂ, ರಾಜಹತ್ಯಾದೋಷ ನನಗೆ ಬಂತು. ನಾನು ಭೃಗುಪತನದಿಂದಲಾದರೂ ದೇಹವಂ ಬಿಟ್ಟು ಈ ಪಾಪವಂ ಕಳೆಯುವೆನೆಂದರೆ, ಈ ನನ್ನ ಶರೀರಭಕ್ಷಣೆಯಿಂದ ಬಹುಪ್ರಾಣಿಗಳು ಮೃತವಾದಾವು. ಈ [1]ಶವದ[1] ಗಾಳಿ ಬೀಸಿದರೆ ದೇಶ ಪ್ರಜೆಗಳಿಗೆ ಕ್ಷುದ್ರರೋಗ ಸಂಭವಿಸೀತು. ಅದರಿಂದ ಅಗ್ನಿಯನ್ನಾದರೂ ಪ್ರವೇಶಿಸಿ ಪಾಪಮುಕ್ತಳಾಗುವೆ"ನೆಂದು ಆ ಶಯನಗೃಹದಿಂದ ಈಚೆಗೆ ಬರುತ್ತ, ಅಧರಕ್ಷತವಂ ಕೈಯಿಂದ ಪಿಡಿದು ನೋಡುತ, ಕುಚಮಂಡಲದಲ್ಲಿ ಸೆಳ್ಳುಗುರಿನ ಗುರುತುಗಳಂ ಸೆರಗಿನಿಂದ ಮರೆಮಾಡುತ, ವಸ್ತ್ರವಂ ಓಸರಿಸಿಕೊಳ್ಳುತ, ಜಾರಿದ ಕುರುಳುಗಳಂ ಉಗುರಿನಿಂದ ನೇವರಿಸುತ, ಸೊಕ್ಕಿ ಸೋಲುತ ಬಂದು, "ಜೀವಸಿದ್ಧಿ ಎಲ್ಲಿ ಇದ್ದಾನೆಂ"ದು ಕೇಳುತ ಬರುತ್ತಿರುವ ಕನ್ನೆಯಂ ನೋಡಿ ಅಲ್ಲಿಯ ಕಂಚುಕಿಗಳು "ಹೀಗೇ ಎ[ಷ್ಟೋ] ಮಂದಿ [2]ವಾ[2]ರಾಂಗನೆಯರು ರಾಯನ ಶಯನಗೃಹಕ್ಕೆ ಬರುತ್ತ ಹೋಗುತ್ತಲಿರುವರು" ಎಂದು ಅವಳಂ ತಡೆಯದೆ ಬಿಡಲು, ಆ ಸ್ಥಳವಂ ಬಿಟ್ಟು "ಜೀವಸಿದ್ಧೀ, ಜೀವಸಿದ್ಧೀ" ಎಂದು ಹೇಳುತ್ತ ಬರುತ್ತಿರಲು,

ಆಗ ಬತ್ತಲೆಗುದುರೆಯನ್ನೇರಿ ಬರುತ್ತಲಿರುವ ಬಾಗುರಾಯಣನು ಅವಳಂ ಕಂಡು, ವಿಷಕನ್ನೆಯೆಂದು ತಿಳಿದು, ಅಲ್ಲಿಯ ವೃತ್ತಾಂತ[3]ವಂ ತಿಳಿಯಬೇಕೆಂದು ನಿಶ್ಚೈಸಿ,

"ಎಲೈ ಕನ್ನೆಯೇ, ನೀನು 'ಜೀವಸಿದ್ಧೀ' ಎಂದು ಕೂಗುತ್ತ ಈ ಅರುಣೋದಯ ಸಮಯದಲ್ಲಿ ಯಾವ ರಾಯನಂ ವಂಚಿಸಿ ಹೋಗುತ್ತಲಿದ್ದೀಯೆ ? ನಿನ್ನ ನೋಡಿದರೆ ರಾಕ್ಷಸನು ಸಾಕಿದವಳಂತೆ ತೋರುತ್ತಲಿದೆ. ಆತನಿಗೆ ದ್ರೋಹವನ್ನೆಣಿಸಿ[3] ಎಲ್ಲಿಗೆ ಹೋಗುವೆ? ಯಥಾರ್ಥವಂ ಹೇಳದಿದ್ದರೆ, ನಿನಗೆ ಚಿತ್ರಾಜ್ಞೆಯಂ ಮಾಡಿಸುವೆನು ; ನಾನು ಸೇನಾಪತಿಯಾದ ಬಾಗುರಾಯಣನು" ಎನಲು, ಆ ಮಾತಿಗೆ,

"ಅಯ್ಯ ಬಾಗುರಾಯಣನೇ, ನಾನು ನನ್ನ ಒಡೆಯನಂ ವಂಚಿಸಿದವಳಲ್ಲ. ಆತನ ಆಜ್ಞೆ ಮೇರೆಗೆ ನಡೆದುದರಿಂದ ಈಗ ಪರ್ವತೇಶ್ವರನು ಮೃತವಾದನು. ವಿಚಾರಿಸಿಕೋ. ಈ ಪಾಪನಿಷ್ಕೃತಿಯಂ ಕಳೆಯಲೋಸುಗ ಮಹಾತ್ಮರ ಸನ್ನಿಧಿಗೆ ಹೋಗುವೆನು. ಈಗಲೇ ವಧಿಸಬೇಡ. ಇದು ಸತ್ಯವು" ಎನಲು, ಅದಂ ಕೇಳಿ, "ಹಾಗಾದರೆ ಹೋಗು ; ಜೀವಸಿದ್ಧಿಯು ದೂರದಲ್ಲಿ ಓಡುತ್ತಲಿದಾನೆ" ಎಂದು ಹೇಳಿ,

"ಕುಟಿಲಕನ್ನೆಯ ವಾಕ್ಯದಿಂದಲೇ ಪರ್ವತರಾಯನ ಮೃತಿಯಂ ನಿಶ್ಚಯಿಸಕೂಡದು. ಇನ್ನೂ ಪ್ರಮಾಣಿಸಿ ತಿಳಿದು ಹೋಗಬೇಕೆಂ"ದು ನಿಶ್ಚೈಸಿ, ಆ ರಾಯನ ಶಯನಗೃಹದ ಕಂಚುಕಿಗಳು ಮಲಗುವ ಗುಡಾರದ ಹಿಂದೆ ನಿಂತು, ಆ ಕಂಚುಕಿಗಳು ಆಡಿಕೊಳ್ಳುತಲಿರುವ

---

೧. ವಿಷದ (ಕ) ೨. ವ (ಕ, ಖ) ೩. ವನ್ನೆಣಿಸಿ ಎಲ್ಲಿಗೆ ಹೋಗುವ (ಕ)

ಸಂದಿಗ್ಧವಾರ್ತೆಯಿಂದ ಪರ್ವತರಾಯನು ಮೃತನಾದುದು ಸಿದ್ಧವೆಂದು ತಿಳಿದು, ಬಾಗುರಾಯಣನು ಏಳಿತಿದ್ದ ಕುದುರೆಯಂ ಚಬುಕುಮಾಡಿ, ಅತಿವೇಗದಿಂ ಬಂದು, ಮಲಯಕೇತುವಿನ ಗುಡಾರದ ಬಾಗಿಲಲ್ಲಿ ನಿಂತು, "ಬಾಗುರಾಯಣನು ಬಂದು ಇದ್ದೇನೆ ; ತ್ವರಿತದಿಂದೆದ್ದು ಬರಹೇಳಿ ನಿಮ್ಮ ಮಲಯಕೇತುವನ್ನು" ಎನಲು, ಆ ದ್ವಾರಪಾಲಕರು ಬಂದು, ಮಲಯಕೇತುವಿಗೆ ಕೈಮುಗಿದು,

"ಬುದ್ಧೀ, ಬಾಗುರಾಯಣನು ಬೆತ್ತಲೆಕುದುರೆಯನ್ನೇರಿ, ಭೂಷಣರಹಿತನಾಗಿ, ಸರ್ವಸ್ವವಂ ಕೊಳ್ಳೆಕೊಟ್ಟು ಓಡಿಬಂದವನಂತೆ ಬಾಗಿಲಲ್ಲಿ ನಿಂತು, ತಮ್ಮಂ ಕಾಣಬೇಕೆಂದು ವಿಜ್ಞಾಪಿಸುತ್ತಲಿದ್ದಾನೆ" ಎನಲು, ಅದಂ ಕೇಳಿ, "ಇದೇನಾಶ್ಚರ್ಯವೆಂ"ದು, ಮಲಯಕೇತು ಎದ್ದು ಬಂದು, ಬಾಗುರಾಯಣನಂ ಕುರಿತು, "ಇದೇನೈ ಬಾಗುರಾಯಣನೇ, ನಿನಗೆ ಈ ಅವಸ್ಥೆಯೇನು ?" ಎನಲು, "ಅಯ್ಯ ರಾಜಕುಮಾರಕನೇ, ನಿನ್ನ ನಿಮಿತ್ತವಾಗಿ ನನಗೆ ಈ ಅವಸ್ಥೆ ಬಂತು" ಎನಲು, "ಹಾಗೆಂದರೆ ಏನು ?" ಎಂದು ಕೇಳಲು, "ಅದಂ ಆ ಬಳಿಕ ಹೇಳುವೆನು, ಇಲ್ಲಿ ಕ್ಷಣ ನೀನು ನಿಂತರೆ ನಿನ್ನ ಶರೀರವುಳಿಯುವದಿಲ್ಲ. ಈ ನನ್ನ ಬೆತ್ತಲೆ ಕುದುರೆಯನ್ನಾದರೂ ಏರಿ, ಈ ದಂಡಿನ ಪಾಳಯವಂ ಬಿಟ್ಟು ಎರಡು ಹರಿದಾರಿ ಮೇಲೆ ನಿಂತರೆ, ಚಾಣಕ್ಯನು ನಿನ್ನ ಪ್ರಾಣಕ್ಕೆ ಮುನಿದಿರುವ ವಿವರವಂ ವಿಸ್ತಾರವಾಗಿ ತಿಳುಹುವೆನು, ನಡೆನಡೆ, ನಿಲ್ಲಬೇಡ. ಅಕೋ ನೋಡು, ಸನ್ನದ್ಧವಾಗಿ ಸಮುದ್ರದ ತರಂಗದಲ್ಲಿ ಪ್ರತಿಫಲಿಸಿದ ಸೂರ್ಯಪ್ರಭೆಯಂತೆ ಆಯುಧಗಳಂ ಝಳಪಿಸುತ ಅಪರಿಮಿತವಾಗಿ ನಿನ್ನಂ ಸಂಹರಿಸ ಬರುವ ಸೇನೆಗಳಂ ನೋಡೆ"ನಲು,

ಆ ಮಲಯಕೇತು ಆ ಸೇನೆಯಂ ನೋಡಿ ಭಯಭ್ರಾಂತನಾಗಿ ಹಿಂದೆಮುಂದೆ ತೋರದೆ 'ತಮ್ಮ ತಂದೆ ಏನಾದನೋ' ಎನ್ನುತ್ತ, ಬಾಗಿಲಿನಲ್ಲಿ ಜೀನುಮಾಡಿದ ತುರಗವನ್ನೇರಲು, "ನಿಮ್ಮ ತಂದೆಯ ವಿಚಾರವಂ ಆ ಬಳಿಕ ಹೇಳುವೆನು, ತಡಮಾಡದೆ ನಡೆನಡೆ" ಎನಲು, ಆಗ ಮಹಾಖಿನ್ನನಾಗಿ ಕುದುರೆಯಂ ಚಬುಕುಮಾಡಿ ಓಡಿಬರುತ್ತಿರಲು, ಆತನ ಮೈಗಾವಲಿನವರು ಹಿಂದೆಹಿಂದೆ ಓಡಿಬರುತ್ತಿರಲು, ಅತಿತ್ವರ್‍ಯದಿಂ ದಂಡಿನ ಪಾಳಯವಂ ಬಿಟ್ಟು ಅರ್ಧಯೋಜನದ ಆಚೆಯಿರುವ ತಿಟ್ಟಿನ ಮೇಲೆ ಮಲಯಕೇತುವು ಬಾಗುರಾಯಣನು ಸಹ ನಿಂತು, ವಿಶ್ರಮಿಸಿಕೊಂಡ ಬಳಿಕ ಬಾಗುರಾಯಣನಿಂತೆಂದನು :

"ಅಯ್ಯ ಮಲಯಕೇತುವೇ, ಈಶ್ವರನು ನಿನಗೆ ಈ ಬಾಲ್ಯದಲ್ಲಿಯೇ ಈ ಅವಸ್ಥೆಯನ್ನುಂಟುಮಾಡಬಾರದು. ಈಗ ನಡೆದಿರುವದೊಂದನ್ನರಿಯದೆ ವಿಚಾರರಹಿತನಾಗಿ ಇರುವೆ. ಈಗ ನಿಮ್ಮ ತಂದೆಯು ಮೃತನಾದನೆಂಬ ವರ್ತಮಾನವಂ ಕೇಳಿ, ಈ ಸಮಯದಲ್ಲಿ ನಿನಗೂ ಏನಾದರೂ ಅಪಾಯ ಬಂದರೆ ನಂದರೈಶ್ವರ್ಯವು ರಾಜ್ಯಕ್ಕೆ ಅರುಹನಲ್ಲದ ಚಂದ್ರಗುಪ್ತನ ವಶವಾದಂತೆ, ಬಹುಕಾಲದಿಂ ನಡೆದು ಬಂದ ಪಾರ್ವತೇಯರ ಸಂಪತ್ತು ಕ್ಷುದ್ರವಾದ ಕಿರಾತಾಕ್ರಾಂತವಾದರೆ ಜನಗಳಿಗೆ ಪ್ರಾಪ್ಯಸ್ಥಳವಿಲ್ಲದೆ ಹೋದೀತೆಂಬ ಸಂತಾಪದಿಂದ ದೇಹಶ್ರಮವಂ ಲಕ್ಷೀಕರಿಸದೆ ನಿನ್ನಲ್ಲಿ ಪೂರ್ವಪರಿಚಯವಿಲ್ಲದಿದ್ದರೂ ನೀನಾದರೂ ಉಳಿದರೆ ಉಪಕಾರವಂ ಸ್ಮರಿಸಿಕೊಂಡಾನೆಂದು ನಿಶ್ಚೈಸಿ, ನಿನ್ನ ಬಳಿಗೆ ಬಂದು ತಿಳುಹಿದೆನು. ಅದರ ವಿವರವಂ ಚೆನ್ನಾಗಿ ಹೇಳುವೆನು, ಕೇಳು :

ಇದೇ ರಾತ್ರೆ ಇಪ್ಪತ್ತುಗಳಿಗೆಯಲ್ಲಿ ಚಂದ್ರಗುಪ್ತನ ದೂತರಿಬ್ಬರು ಬಂದು 'ಅಪ್ಪಣೆ

ಯಾಗಿದೆ, ನಿಮ್ಮ ಸೇನೆಗಳಂ ಈ ಕ್ಷಣವೇ ಸನ್ನಾಹವಂ ಮಾಡಿಕೊಂಡು ಹೋಗಿ ಮಲಯ ಕೇತುವಿನ ಗುಡಾರದ ಪಶ್ಚಿಮಭಾಗದಲ್ಲಿ ಯುದ್ಧಸನ್ನದ್ಧರಾಗಿ ದೂರದಲ್ಲಿ ನಿಂತುಕೊಂಡು 'ತಮ್ಮ ಅಪ್ಪಣೆ ಮೇರೆಗೆ ನಡೆದುಕೊಳ್ಳುವದು' ಎಂದು ಪ್ರಭುಗಳ ಅಪ್ಪಣೆಯಾದ ಮೇರೆಗೆ ಈಗಲೇ ನಿಮ್ಮ ನಿಮ್ಮ ಸೇನೆಗಳಂ ಹೊರಡಿಸುವರಾಗಿ' ಎಂದು ನನಗೂ ಡಿಂಗಿ ರಾತನಿಗೂ ಪುರುಷದತ್ತ ಬಲಗುಪ್ತರಿಗೂ ಹೇಳಿ ಹೋಗಲು, ರಾಜಾಜ್ಞೆಯಂ ಮೀರಿದರೆ ಅಪರಾಧಿಗಳಾದೇವೆಂಬ ಭೀತಿಯಿಂದ ನಾವು ನೇಮಿಸಿದ ಮೇರೆಗೆ ಸೇನೆಗಳು ಹೊರಡು ತ್ತಿರಲು,

ನಾನು ನನ್ನ ಮನಸ್ಸಿನಲ್ಲಿ ನಾನಾವಿಕಲ್ಪದಿಂ ಆಲೋಚಿಸುತ್ತ, ಪುನಃ ನನಗೆ ನಿದ್ರೆ ಬಾರದೆ, ಅರುಣೋದಯ ಸಮಯವಾಗಲು, ಆಗ ಎಂದಿನಂತೆ ಪುಷ್ಪವಾಟಿಯಂ ನೋಡು ವದಕ್ಕೆ ಶಯನದಿಂದೆದ್ದು, ಇದೇ ರೀತಿಯಲ್ಲಿ ಪುಷ್ಪವಾಟಿಗೆ ಹೋಗಿ, ಪುಷ್ಪಗಳಾದ ಲತೆಗಳಂ ನೋಡುತ್ತ ನಾನು ಸಂಚರಿಸುತ್ತಿರಲು, ಅಷ್ಟರಲ್ಲಿಯೇ ಅರುಣೋದಯ ವಾಗಲು, ಅಂಧಕಾರ ತೊಲಗುತ್ತಿರಲು, ಆ ಸಮಯದಲ್ಲಿ ಸಕಲಾಭರಣಭೂಷಿತಳಾಗಿ ಸುಂದರಶಾಲಿಯಾದ ಒಬ್ಬ ಸ್ತ್ರೀ ಕೆದರಿದ ಕೇಶಗಳಿಂ, ಬಿಡುವ ನಿಟ್ಟುಸಿರುಗಳಿಂ, ಗಾಬರಿ ಗಾಬರಿಯಾಗಿ ಬಿರಬಿರನೆ ಪಿಂತಿರುಗಿ ನೋಡುತ್ತ, ಮುಂಜೆರಗಂ ಎತ್ತಿ ವಾಮಕರದಿಂ ಪಿಡಿದು ಬೀಳುವದಂ ಕಾಣದೆ ಓಡಿ ಬರುವಳಂ ಕಂಡು, 'ಇವಳ್ಯಾರೋ ತಿಳಿಯಬೇಕೆಂ'ಬ ಕುತೂಹಲದಿಂದ ಹೋಗಿ,

'ಎಲೈ ಕನ್ನೆಯೇ, ನಿನ್ನಂ ನೋಡಿದರೆ ಮೋಹಿನೀಸ್ತ್ರೀಯಂತೆ ಕಾಣುತ್ತಲಿದೆ. ಯಾವ ರಾಯನಂ ಮೋಸವಂ ಮಾಡಿ ಈ ವೇಳೆಯಲ್ಲಿ ಗಾಬರಿಯಾಗಿ ಹೋಗುತ್ತಲಿರುವೆ ? ಇದ್ದಂತೆ ಹೇಳಿದರೆ ಸಮ ; ಅಲ್ಲದಿದ್ದರೆ, ನಾನು ಬಾಗುರಾಯಣನು, ನಿನಗೆ ಚಿತ್ರಾಜ್ಞೆಯಂ ಮಾಡಿಸುವೆನೆಂ'ದು ಬೆದರಿಸಲು, ಅವಳು ಗಡಗಡನೆ ನಡುಗುತ್ತ,

'ಅಯ್ಯ ಬಾಗುರಾಯಣನೇ, ನನ್ನ ವಿಚಾರವು ಯಥಾರ್ಥವನ್ನೇ ಹೇಳುವೆನು. ನಾನು ರಾಕ್ಷಸನಿಂದ ಪೋಷಿತಳಾಗಿ ಇದ್ದ ವಿಷಕನ್ನೆಯು. ಆತನು ಈ ಪುರವಂ ಬಿಟ್ಟು ಹೋಗು ವಾಗ ನನ್ನಂ ಜೀವಸಿದ್ಧಿಯ ವಶವಂ ಮಾಡಿ 'ಆತನು ಹೇಳಿದಂತೆ ಕೇಳುತ್ತಲಿರು' ಎಂದು ನೇಮಿಸಿ ಹೋದ ಬಳಿಕ, ಆಗ ಕ್ಷಪಣಕನು ಪ್ರಬಲಾಧಿಕಾರಿಗಳ ವಾಕ್ಯೋಲ್ಲಂಘನವಂ ಮಾಡುವದಕ್ಕೆ ಅಸಮರ್ಥನಾಗಿ, ಪ್ರಬಲವಿರೋಧ ಬಂದೀತೆಂಬ ಶಂಕೆಯಿಂದ ತನ್ನ ಕ್ಷೇಮಾರ್ಥವಾಗಿ ನನ್ನನ್ನು ಪರ್ವತರಾಯನ ಬಳಿಗೆ ಕಳುಹಿಸಿಕೊಟ್ಟಿದ್ದರಿಂದ, ಈ ಪರ್ವತ ರಾಯನು ನನ್ನಂ ಕಂಡು ಕಾಮಮೋಹಿತನಾಗಿ, ವಿಚಾರಿಸದೆ, ತವಕದಿಂದ ಕುಕ್ಕುಟಾ ಚಾರವಂ ಗೈದು ಕ್ರೀಡಿಸಿ ಮೃತನಾದನು. ಆ ಬಳಿಕ ಉಪಾಯಾಂತರದಿಂದ ಆತನ ಶಯನಗೃಹವಂ ಬಿಟ್ಟು ಪ್ರಾಣವಂ ತಪ್ಪಿಸಿಕೊಂಡು ಓಡಿ ಬಂದೆನು. ಇದು ಸತ್ಯವು. ಇನ್ನು ನಿಮ್ಮ ಮನಬಂದಂತೆ ಮಾಡಬಹುದು. ತಾನು ಪಾಪಿಷ್ಠಳು' ಎನಲು, ಆ ಮಾತಂ ಕೇಳಿ,

'ಓಹೋ ! ಪ್ರಬಲಾಧಿಕಾರಿಯಾದ ಚಾಣಕ್ಯನು 'ನಂದರಾಜ್ಯದಲ್ಲಿ ಅರ್ಧರಾಜ್ಯವಂ ಪರ್ವತೇಶ್ವರ ಇದ್ದರೆ ಕೊಡಬೇಕಾಗುತ್ತಲಿದೆಯಲ್ಲಾ' ಎಂಬ ಲೋಭಬುದ್ಧಿಯಿಂದ ಯಾವ ಕಾರ್ಯಾರ್ಥವಾಗಿಯೋ ರಾಕ್ಷಸನು ಸಂಗ್ರಹಿಸಿದ್ದು ಜೀವಸಿದ್ಧಿಯ ವಶವಂ ಮಾಡಿದ ಈ ವಿಷಕನ್ನೆಯನ್ನು ಪರ್ವತರಾಯನ ಬಳಿಗೆ ಕಳುಹಿಸುವಂತೆ ಕ್ಷಪಣಕನಾದ ಜೀವ

ಸಿದ್ಧಿಯಂ ನಯಭಯದಿಂ 'ಒಡಂಬಡಿಸಿ, ಅವಳಂ ಕಳುಹಿಸಿ, ಪರ್ವತರಾಯನ ಸಂಹಾರವಂ ಗೈಸಿದನು ; ಇದಲ್ಲದೆ ಮೊದಲೇ ಕಾಲೋಚಿತವಾದ ಮೃದುವಾಕ್ಯವಂ ಹೇಳಿ ಪರ್ವತರಾಯಸೇನೆಯನ್ನು ಅವರ ದೇಶಕ್ಕೆ ಹೋಗುವಂತೆ ಮಾಡಿ ಕಳುಹಿಸಿ, ಸ್ವಲ್ಪ ಪರಿವಾರ ಸಮೇತನಾಗಿದ್ದ ಮಲಯಕೇತುವಂ ಸಂಹರಿಸುವದಕ್ಕೋಸುಗ ಈ ರಾತ್ರೆ ಸೇನೆಯಂ ಕರೆಕಳುಹಿಸಿಕೊಂಡನು' ಎಂದು ನನ್ನ ಮನದಲ್ಲಿ ನಿಶ್ಚೈಸಿ, ಆ ಕನ್ನೆಯನ್ನು ಹೋಗೆಂದು ಕಳುಹಿಸಿ, 'ಈ ದುಷ್ಟಕನ್ನೆಯ ವಾಕ್ಯದಿಂದಲೇ ಪರ್ವತರಾಯನ ಮೃತಿಯಂ ಹೇಗೆ ನಿಶ್ಚೈಸಬೇಕು, ರಾಜಕೀಯವಾದುದರಿಂದ ಇನ್ನೂ ಪ್ರಮಾಣಿಸಿ ತಿಳಿಯಬೇಕೆಂ'ದು ನಿಮ್ಮ ತಂದೆಯ ಶಯನಗೃಹದ ಕಂಚುಕಿಗಳು ಬಂದು ಮಲಗುವ ಗುಡಾರದ ಹಿಂದೆ ನಿಂತು ಮಾತುಗಳಂ ನಾನು ಆಲಿಸುತ್ತಿರಲು,

ಅಷ್ಟರಲ್ಲಿಯೇ ಆ ಶಯನಗೃಹದ ಕಂಚುಕಿ ಒಬ್ಬ ಬಂದು ತನಗೆ ಯಜಮಾನನಾದ ವೃದ್ಧಕಂಚುಕಿಯಂ ಕುರಿತು, 'ಅಯ್ಯ ಯಜಮಾನನಾದ ಹಂಸಕನೇ, ಯಾಕೆ ಮಲಗಿದ್ದೀ? ಬೇಗ ಏಳು ; ಇಂದು ವಿಶೇಷವರ್ತಮಾನವುಂಟು, ಕೇಳು :

ಏನೆಂದರೆ, ಅರುಣೋದಯಸಮಯದಲ್ಲಿ ಎಂದಿನಂತೆ ನಿದ್ರೆಯಿಂದೆದ್ದು ಶಯನ ಗೃಹವಂ ಬಿಟ್ಟು ಪರ್ವತರಾಯನು ಎದ್ದು ಬರದೆ ಇದ್ದುದರಿಂದ ಮೊದಲು ಮೇರೆಗೆ ಪ್ರಾತಃಕಾಲದಲ್ಲಿ ಮಾಡುವ ವಾದ್ಯಗಳಂ ಮಾಡಿಸಿ, ಆ ಧ್ವನಿಗೂ ರಾಯನಿಗೆ ಎಚ್ಚರವಿಲ್ಲ ದ್ದರಿಂದ, 'ಶುಕವಾಕ್ಯಶ್ರವಣಕ್ಕೆ ಎಚ್ಚರವಾಗುವ ರಾಯನಿಗೆ ಇನ್ನೂ ಏನು ಕಾರಣ ನಿದ್ರೆ ಸಂಭವಿಸಿತೋ' ಎಂದು ಚಿಂತಿಸಿ, ಕೈ ಚಪ್ಪಾಳೆಗಳಂ ತಟ್ಟಿ, ಶಯನಗೃಹದ ಒಳಕ್ಕೆ ಹೋಗಿ, ಪ್ರಾತಃಕಾಲದ ಶುಕಶಾರಿಕಾನಿನಾದಗಳು ಇಲ್ಲದೆ ಆ ಪಕ್ಷಿಗಳು ಆ ಪಂಜರಗಳಲ್ಲಿಯೇ ಮೃತವಾಗಿ ಇರುವದಂ ನೋಡಿ, ಮನದಲ್ಲಿ ಮಹಾ ಆತಂಕಗೊಂಡು, ರಾಯನಂ ತಟ್ಟಿ ಎಬ್ಬಿಸುವದಕ್ಕೆ ಭೀತನಾಗಿ, ನಾನು ಪಾದಸೇವೆಯಂ ಮಾಡುವಂತೆ ರಾಯನ ಪಾದಗಳಂ ಘಟ್ಟಿಯಾಗಿ ಅಮುಕುತ್ತಿರಲು, ಆತನ ಪಾದಗಳು ಕದಳೀಸ್ತಂಭಗಳಂತೆ ಅತಿಶೀತಳ ಗಳಾಗಿ, ಸುವರ್ಣವರ್ಣವಾಗಿ ಇದ್ದ ಪಾದಗಳು ಹಸಿರುವರ್ಣವಾಗಿ ಇರುವದಂ ನೋಡಿ ಆಕುಲಿತನಾಗಿ, ಪ್ರಭುವಿನ ಮುಸುಕಂ ತೆಗೆದು ನೋಡುವದಕ್ಕೆ ಭೀತನಾಗಿ ತ್ವರಿತದಿಂ ಬಂದು ನಿನಗೆ ತಿಳುಹಿಸಿದೆನು. ನೀನೇ ಹೋಗಿ ವಿಚಾರಿಸು' ಎಂದು ಶಯನಗೃಹದ ಕಂಚುಕಿಯು ತನ್ನ ಗೊತ್ತುಗಾರನಿಗೆ ಹೇಳುತ್ತಿರಲು,

ಅವನು ತನಗೆ ಹೇಳಿದ ಕಂಚುಕಿಯಂ ಕುರಿತು, "ಎಲೈ ದಾತ್ಯೂಹಕನೇ, ವೃದ್ಧನಾದ ನನಗೆ ನಿದ್ರೆಮಬ್ಬಿನಿಂದ ನೀನು ಹೇಳಿದ ವಾಕ್ಯವು ಅರ್ಥವಾಗಲಿಲ್ಲ. ಪಕ್ಷಿಗಳು ಮೃತ ವಾದವು ಎಂದರೇನು ? ಕಾಲುಗಳು ಹಸಿರುಗಳು ಎಂದರೆ ಏನು ? ಇನ್ನೊಮ್ಮೆ ಚೆನ್ನಾಗಿ ಹೇಳು" ಎನಲು, ಅವ[ನು] ಎಂದಿನಂತೆ ಹೇಳುವದಕ್ಕೆ ಉಪಕ್ರಮಿಸಲು, ಕಂಚುಕಿಯು ಮೊದಲು ಹೇಳಿಕೊಂಡ ವಾಕ್ಯದಿಂದಲೇ ಪರ್ವತರಾಯನು ಮೃತನಾದುದು ಸಿದ್ಧವೆಂದು ನಿಶ್ಚೈಸಿ, ನಿನ್ನ ಗುಡಾರಕ್ಕೆ ಅಭಿಮುಖವಾಗಿ ಬರುವ ಶತ್ರುಸೇನೆಯಂ ದೂರದಿಂದ ನೋಡಿ, ತ್ವರಿತದಿಂ ನಿನ್ನ ಬಳಿಗೆ ಬಂದು ತಿಳುಹಿದೆನು ; ಇನ್ನು ನೀನು ಎಲ್ಲಿಯೂ ಇರಕೂಡದು, ತೆರಳುವನಾಗು" ಎಂದು ಬಾಗುರಾಯಣನು ಮಲಯಕೇತುವಿಗೆ ಹೇಳುತ್ತಿರಲು, ಅದಂ ಕೇಳಿ ಮಲಯಕೇತುವು ಮಹಾದುಃಖಿತನಾಗಿ, ರೋದನವಂ ಮಾಡುತ್ತ,

"ಎಲೈ ಬಾಗುರಾಯಣನೇ, ನಮ್ಮ ತಂದೆಯು ಮೃತವಾದುದು ಸತ್ಯವೇ ? ಸತ್ಯವೇ?" "ಹಾ ! ವಿಧಿಯೇ, ಏನು ವಿಪತ್ತಂ ತಂದೆ, ತಂದೆಗೆ ? ತಂದುಬಿಟ್ಟೆ ! ಹಾ ! ರಾಜಾಧಿರಾಜನಾದ ತಂದೆಯೇ, ಯಾರೂ ಕಾಣದ ಈ ದೇಶದಲ್ಲಿ ನಮ್ಮೆಲ್ಲರಂ ಕರೆತಂದು ಶತ್ರುಗಳ ಕಪಟಕ್ಕೆ ವಶನಾಗಿ ಯಾವ ಲೋಕಕ್ಕೆ ಹೋಗಿ ಕಣ್ಮುಮರೆಯಾದೆ ? ನಿನಗೆ ಬಂದ ಆಪತ್ಸಮಯದಲ್ಲಿ ನಿನ್ನ ಬಳಿಯಲ್ಲಿದ್ದು ನಿನ್ನ ಶಿರವಂ ತೊಡೆಯ ಮೇಲಿರಿಸಿಕೊಂಡು, 'ತಂದೆಯೇ, ನಿನಗೆ ಏನು ಸಂಕಟವೆಂ'ದು ಕೇಳುತ್ತ, 'ಏನು ಬಯಸುವೆ'ಯೆಂದು ಮಾತನಾಡಿಸುತ್ತ, 'ನಮಗೆಲ್ಲರಿಗೂ ಏನು ಬುದ್ಧಿಮತಿಗಳಂ ಹೇಳುವೆ'ಯೆಂದು ಪ್ರಾರ್ಥಿಸಿಕೊಳ್ಳುತ್ತ, ಶ್ಲೇಷ್ಮರಭಸದಿಂದ ಶುಷ್ಕವಾಗುತ್ತಿರುವ ನಿನ್ನ ಗಂಟಲುಗಳಿಗೆ ಆಪ್ಯಾಯನವಾಗುವಂತೆ ಶೀತಳಗಳಾದ ಜಲಗಳಂ ಬಿಡುವದಕ್ಕೆ ಪುಣ್ಯವಿಲ್ಲದೆ ಇರುವ ನನ್ನ ಈ ಪುತ್ರತ್ವವನ್ನೀಡಾಡಿಕೊಳ್ಳಬೇಡವೇ ! ನೀನು ಪುರಕ್ಕೆ ಬರುವೆಯೆಂದು ಸಡಗರದಿಂ ಶೃಂಗರಿಸಿಕೊಂಡು ಆರತಿಯಂ ಕೈಯಲ್ಲಿ ಹಿಡಿದು "ನಮ್ಮ ತಂದೆ ಎಲ್ಲಿ ಬರುವನು ?" ಎಂದು ನಿರ್ಬಂಧಪಡಿಸುವ ನನ್ನ ತಂಗಿಯಾದ ಕಾಂತಿಮಾಲಿನಿಗೆ ಏನು ಉತ್ತರವಂ ಹೇಳಲಿ ? ಪ್ರಿಯ ಬರುವನೆಂಬ ಕುತೂಹಲದಿಂ ಶಯನಗೃಹವನ್ನಲಂಕರಿಸಿ, ನೂತನಾಭರಣಗಳಂ ಧರಿಸಿ, ರಾಜಭವನದಲ್ಲಿ ಲಕ್ಷ್ಮಿಯರಂತೆ ಶೋಭಿಸುತ್ತ, ಸಖೀಜನದ ಸ್ತುತಿವಚನಗಳಂ ಕೇಳುತ್ತ, ಅವರ ವಚನಗಳಿಗೆ ಹರುಷಬಡುತ್ತ, ಎದುರುನೋಡುತ್ತಲಿರುವ ನಮ್ಮ ತಾಯಿಗಳಿಗೆ ಏನೆಂದು ಹೇಳಿ ಮುಖವಂ ತೋರಿಸಲಿ ?" ಎಂದು ಹಂಬಲಿಸುತ್ತಿರುವ ಮಲಯಕೇತುವಂ ಕುರಿತು,

"ಅಯ್ಯ ರಾಜಕುಮಾರಕನೇ, ದೈವಸಂಕಲ್ಪದಿಂ ಬಂದ ಆಪತ್ತಿಗೆ ಇನ್ನು ದುಃಖಪಟ್ಟು ಫಲವೇನು ? ಮಹಾರಾಜ್ಯಭಾರವಂ ನಿರ್ವಹಿಸುವದಕ್ಕೆ ಯೋಗ್ಯನಾದ ನೀನು ವ್ಯಸನಪಡುತಲಿದ್ದರೆ, ಪ್ರಜೆಗಳಿಗೂ ವ್ಯಸನವುಂಟಾಗುವದು. ರಾಜಕಾರ್ಯವು ಕೆಡುವದು. ಶತ್ರುಗಳಿಗೆ ಪೌರುಷವುಂಟಾದೀತು. ಈಗ ನಿಮ್ಮ ಚಿಕ್ಕಪ್ಪನಾದ ವಿರೋಚನನು ಅವರ ಬಳಿಯಲ್ಲಿ ತಗುಲಿರಬೇಕು. ಚಾಣಕ್ಯನಿಗೆ ಶೂರನಾದ ನಿನ್ನಲ್ಲಿ ದ್ವೇಷವಿದ್ದಂತೆ ವಿರೋಚನನಲ್ಲಿ ಇರಲಾರದು. ಆತನ ಮುಖದಿಂದಲೇ ನಿಮ್ಮ ತಂದೆಗೆ ಈಗ ಮಾಡತಕ್ಕ ಕ್ರಿಯೆಗಳು ನೆರವೇರಿಯಾವು. ಮುಂದೆ ರಾಜ್ಯಭಾರವಂ ಪ್ರಮಾದವಿಲ್ಲದೆ ನೀನು ನಿರ್ವಹಿಸಬೇಕಾಗುತ್ತಲಿದೆ. ನೀನು ತಿಳಿದವನಾದರೂ ಬಾಲಕನಾದುದರಿಂದ ಪ್ರಮಾದ ಬರುವ ಮಾರ್ಗವಂ ತಿಳುಹಿಸುವೆನು :

ನೀನು ರಾಜ್ಯವಿಚಾರವಂ ಮಾಡುತ್ತಿರುವಲ್ಲಿ ದೇಶಮರ್ಯಾದೆಯಂ ನಿನ್ನ ದೇಹಕ್ಕಿಂತಲೂ ಅಧಿಕವಾಗಿ ರಕ್ಷಿಸುವನಾಗು. ಲೋಕಾಪವಾದಕ್ಕೆ ಭೀತನಾಗಿ ನಡೆ. ಕಾರ್ಯವಂ ವಿಮರ್ಶೆಯಿಂದ ಮಾಡುವನಾಗು. ಅಪರಾಧಿಗಳಂ ವಿಹಿತವರಿತು ದಂಡಿಸು. ನೀನು ಮಾಡುವ ಕಾರ್ಯವಂ ಭೃತ್ಯರಿಗೆ ನೇಮಿಸದೆ, ಅನ್ಯರು ಮಾಡುವ ಕಾರ್ಯಕ್ಕೆ ನೀನು ಮನಗೊಡದೆ, ಇಹಪರತತ್ವವಂ ತಿಳಿದು ಪಾಪಭೀರುಗಳಾಗಿ ವಿಹಿತವಂ ಹೇಳುವ ವಿದ್ವಜ್ಜನವಾಕ್ಯವಂ ಪರಮತಾರಕಮಂತ್ರವೆಂದು ತಿಳಿ. ದೂರದರ್ಶಿಗಳಾಗಿ ಸ್ವಾಮಿಭಕ್ತರಾಗಿ ಕಾರ್ಯದಕ್ಷರಾದವರಂ ಮಂತ್ರಿಪದದಲ್ಲಿ ನಿಲ್ಲಿಸು. ವಿಹಿತದಿಂ ನಡೆವವರಿಗೆ ದಿನೇ ದಿನೇ ಉತ್ಸಾಹ ತಗ್ಗಿ ಬರದಂತೆ ನಡೆಯಿಸುವನಾಗು. ನಿರ್ವಾಹವನ್ನರಿತು ಕಾರ್ಯವಂ ನೇಮಿಸು. ಕಾರ್ಯವಂ

ನೋಡಿ ಸಂಬಳವಂ ಮಾಡು" ಎಂದು ವೃದ್ಧಮಂತ್ರಿಯು ಬಾಲಕನಾದ ಅರಸಿಗೆ ಶಿಕ್ಷಿಸುವ ತೆರದಲ್ಲಿ ಬಾಗುರಾಯಣನು ಮಲಯಕೇತುವಿಗೆ ನಿರ್ವಂಚನೆಯಿಂದ ನೀತಿಮಾರ್ಗವಂ ಹೇಳುವನಂತೆ ಹೇಳುತ್ತಿರಲು,

ಅದಂ ಕೇಳಿ ವಿಹಿತವೆಂದು ತಿಳಿದು, ಶಬರವರ್ಮ ಕಾಲವಾದುದರಿಂದ ಬಾಗುರಾಯಣನನ್ನೇ ಮಂತ್ರಿಯಂ ಮಾಡಿಕೊಳ್ಳಬೇಕೆಂದು ಮಲಯಕೇತುವು ತನ್ನ ಮನಸ್ಸಿನಲ್ಲಿ ನಿಶ್ಚೈಸುತ್ತಿರಲು,

ಅಷ್ಟರಲ್ಲಿಯೇ ಪರ್ವತರಾಯನ ದಂಡಿನ ಪಾಳಯದಿಂ ಮಲಯಕೇತುವು ಹೊರಟು ಹೋದುದಂ ಕಂಡು ಕಂಚುಕಿಗಳು, ಆ ಅರ್ಥವಂ ಪರ್ವತರಾಯನಿಗೆ ತಿಳುಹಿಸಬೇಕೆಂದು ಆತನ ಶಯನಗೃಹಕ್ಕೆ ಬಂದು, ಮಂಚದಲ್ಲಿ ನಿದ್ರೆಗೈವನಂತೆ ಮೃತನಾಗಿ ಮಲಗಿರುವ ಪರ್ವತರಾಯನ ಮುಸುಗಂ ತೆಗೆದು ಅಲ್ಲಾಡಿಸಿ ನೋಡಿ, ಶ್ವಾಸವಿಲ್ಲದಿರಲು, 'ಹೋ ಮೃತನಾದನೆಂ'ದು ತಿಳಿದು, ಈಚೆಗೆ ಬಂದು, ಬೊಬ್ಬೆಗೈದು, ಜನರೆಲ್ಲರೂ ನೆರೆದು ಕಲಕಲವುಂಟಾಗಲು, ಅಷ್ಟರಲ್ಲಿಯೇ ಆಯುಧಗಳಂ ಝಳಪಿಸುತ್ತ ಅಪರಿಮಿತವಾಗಿ ಬರುವ ಚಂದ್ರಗುಪ್ತನ ಸೇನೆಯಂ ಕಂಡು, 'ಇಲ್ಲಿ ಇದ್ದರೆ ಅರಸಿಗೆ ಬಂದಂತೆ ನಮಗೂ ಪ್ರಾಣಾಪತ್ತು ಬಂದೀತೆಂ'ದು ನಿಶ್ಚೈಸಿ, ಅಲ್ಲಿಂದ ಸ್ವಲ್ಪ ಪರಿವಾರಗಳೂ ಮಲಯಕೇತುವಿನ ಬಳಿವಿಡಿದು ಬರುತ್ತಿದ್ದರು.

ಇದೆಲ್ಲವಂ ನೋಡಿ ಇದ್ದುದಿದ್ದಂತೆ ಎಲ್ಲವಂ ಬಿಟ್ಟು ಅರಸಿನ ತಮ್ಮನಾದ ವಿರೋಚನನು ಮತ್ತೊಂದು ದಿಕ್ಕಿಗೆ ಓಡುತ್ತಿದ್ದನು. ಆ ಬಳಿಕ ಶೇಖರ ಮುಖ್ಯರಾದ ಸೇನಾಪತಿಗಳೆಲ್ಲರೂ ಮಿತಪರಿವಾರಪರಿವೃತರಾದುದರಿಂದಲೂ ಪರ್ವತರಾಯನು ಕಾಲವಾದುದರಿಂದಲೂ ಮಲಯಕೇತು ವಿರೋಚನರು ಓಡಿಹೋದುದರಿಂದಲೂ ತಮ್ಮಿಂದ ಇಲ್ಲಿದ್ದು ಕಾರ್ಯವೇನೆಂದು ಆಲೋಚಿಸಿ, ಮಲಯಕೇತುವಿದ್ದೆಡೆಗೆ ಬಂದು ಲಜ್ಜಿತರಾಗಿ ಶಿರಗಳಂ ಬಾಗಿ ನಿಂತು, ಕಾಲೋಚಿತವಾದ ವಾಕ್ಯಗಳಿಂದ ಮಲಯಕೇತುವಂ ಸಮಾಧಾನಗೊಳಿಸುತ್ತಿರಲು, ಆ ಬಾಗುರಾಯಣನು ಮಲಯಕೇತುವಂ ಕುರಿತು

"ಅಯ್ಯ ರಾಜಕುಮಾರನೇ, ನಿನ್ನ ಸೇನಾಪತಿಗಳೆಲ್ಲರೂ ಬಂದರು. ಇಲ್ಲಿ ನಿಲ್ಲದೆ ನಿನ್ನ ದೇಶಕ್ಕೆ ಹೋಗಿ ಮುಂದಣ ಕಾರ್ಯವನ್ನಾಲೋಚಿಸುವನಾಗು. ಏತದರ್ಥಕ್ಕೆ ಎಂದು ಜನಗಳಿಗೆ ತಿಳಿಯದಂತೆ ನಾನು ಹೋಗಬೇಕಾಗುತ್ತಲಿದೆ. ಕಾರ್ಯಗೌರವವೊದಗಿದಲ್ಲಿ ಇನ್ನೊಂದು ವೇಳೆ ನಿನ್ನ ಕಾಣುವೆನು. ನಿನಗೆ ಶುಭವಾಗಲಿ. ಹೋಗಿ ಬರುತ್ತಲಿದೇನೆ, ಅಪ್ಪಣೆಯೇ ?" ಎನಲು, ಆ ಮಾತಿಗೆ ಮಲಯಕೇತುವು ಬಾಗುರಾಯಣನಂ ಕುರಿತು,

"ಅಯ್ಯ ಬಾಗುರಾಯಣನೇ, ಇಂಥ ಆಪತ್ಸಮಯದಲ್ಲಿ ಪ್ರಾಣವಂ ರಕ್ಷಿಸಿ ಶತ್ರುಸೇನೆಯಂ ತಪ್ಪಿಸಿ, ಇಲ್ಲಿಗೆ ನನ್ನಂ ಕರೆತಂದುದರಿಂದ ನೀನು ಪ್ರಾಣಮಿತ್ರನು, ಮಹಾನೀತಿಜ್ಞನು. ನನಗೆ ವೇಳೆ ಸಮಯದಲ್ಲಿ ಬುದ್ಧಿನೀತಿಯಂ ತಿಳುಹಿಸುತ್ತ, ನನ್ನ ಬಳಿಯಲ್ಲಿ ಮಂತ್ರಿಯಾಗಿ ಇರಬೇಕಲ್ಲದೆ ಎಲ್ಲಿಗೆ ಅಪ್ಪಣೆಯಂ ಕೇಳುವೆ ? ಇನ್ನು ನೀನು ಚಂದ್ರ

---

೧. ಖ ಮತ್ತು ಗ ಪ್ರತಿಗಳಲ್ಲಿ ಪಾಠದ ಐಕ್ಯವುಂಟು ; ಕ ಪ್ರತಿಯಲ್ಲಿ ಇಲ್ಲಿಂದ ಮುಂದೆ ಏನೋ ಬರವಣಿಗೆಯ ಗೊಂದಲ ಏಕಾದಶಾಶಯದ ಸ್ವಲ್ಪ ಭಾಗದ ವರೆಗೆ ಇರುವಂತಿದೆ.

ಗುಪ್ತನಂ ಅನುವರ್ತಿಸಿಕೊಂಡು ಇರುವದು ನಿನಗೆ ಬಹುಮಾನವಲ್ಲ. ನಾನು ಕ್ಷತ್ರಿಯ ಪುತ್ರನಾದುದರಿಂದ ಪುನಃ ಸೇನೆಗಳಂ ಜೊತೆಗೊಳಿಸಿಕೊಂಡು ಬಂದು, ಪಾಟಲೀಪುರವಂ ಮುತ್ತಿ, ಚಂದ್ರಗುಪ್ತ ಚಾಣಕ್ಯರಂ ಸಂಹರಿಸುವ ಪರ್ಯಂತವೂ ನನ್ನ ತಂದೆಗೆ ಪಿತೃ [1]ಕಾರ್ಯ[1]ವಂ ಮಾಡುವನಲ್ಲವೆಂ"ದು ಹೇಳುತ್ತ, ಚಂದ್ರಗುಪ್ತ ಚಾಣಕ್ಯರು ಮಾಡಿದ ದ್ರೋಹವು ಸ್ಮರಣೆಗೆ ಬರುತ್ತಿರಲು, ಮಲಯಕೇತುವು ಕೆಣಕಿದ ಮಹೋರಗನಂತೆ ಕ್ರುದ್ಧನಾಗಿ ಖಡ್ಗವಂ ಝಳಪಿಸುತ್ತ, "ನನ್ನ ತಂದೆಗೆ ವಿಪತ್ತನ್ನುಂಟುಮಾಡಿ ಕೃತಘ್ನರಾದ ಚಂದ್ರಗುಪ್ತ ಚಾಣಕ್ಯರ ಶಿರವನ್ನಿಳುಕದೆ ಹಿಂತಿರುಗುವನಲ್ಲ"ವೆಂದು ತುರಗವನ್ನೇರ ಲುದ್ಯುಕ್ತನಾಗಲು, ಆಗ ಬಾಗುರಾಯಣನು ಮಲಯಕೇತುವಿನ ವ್ಯವಸಾಯವಂ ನೋಡಿ, ಅಡ್ಡಲಾಗಿ ತಡೆದು,

"ಅಯ್ಯ ರಾಜಕುಮಾರನೇ, ಏನು ಪ್ರಮಾದಕಾರ್ಯವಂ ಯೋಚಿಸಿದೆ ? ಪ್ರಭುಪದಕ್ಕೆ ಯೋಗ್ಯನಾದವಂಗೆ ಆಪತ್ತು ಸಂಪತ್ತು ಒದಗಿದ ಸಮಯದಲ್ಲಿ ವಿಮರ್ಶೆಯಿರಬೇಕು. ಕಾಲದೇಶವನ್ನರಿಯದೆ, [2]ರಾಜಕಾರ್ಯವಂ[2] ವಿಚಾರಿಸದೆ, ಈ ರೀತಿಯಲ್ಲಿ ದುಡುಕಿದರೆ, ಮಂತ್ರಿಯನ್ನಪೇಕ್ಷಿಸದೆ ಪ್ರಾಜ್ಞಂಮನ್ಯನಾದ ಅರಸಿನಂತೆ ಬುದ್ಧಿಸಂಪನ್ನನಾದ ನೀನು ಹೀಗೆ ಯತ್ನೀಕರಿಸಿದರೆ, ಬಹುಕಾಲದಿಂ ಕ್ರಮವಾಗಿ ನಿಮಗೆ ನಡೆದು ಬರುವ ಪಾರ್ವತೇಯರ ಐಶ್ವರ್ಯಕ್ಕೆ ದಕ್ಷರಾಗುವರ್ಯಾರು ? ಈ ಸಮಯದಲ್ಲಿ ಕೋಪವಂ ಮಾಡುವದು ಯುಕ್ತವಲ್ಲ; ಎಂದಿನಂತೆ ನಿನ್ನ ದೇಶಕ್ಕೆ ಹೋಗಿ, ನಿಮ್ಮ ತಂದೆಗಿಂತಲೂ ಅಧಿಕವಾಗಿ ರಾಜ್ಯಾಧಿಪತ್ಯವಂ ದೃಢಗೊಳಿಸಿಕೊಂಡು, ಸೇನೆಯಂ ಸನ್ನಾಹಗೊಳಿಸಿದ ಬಳಿಕ ಯಾವ ಯತ್ನವಂ ಮಾಡಿದರೂ ಕೂಡಿ ಬರುವದು" ಎಂದು ಹೇಳುತ್ತಿರುವ ಬಾಗುರಾಯಣನ ವಚನವನ್ನಂಗೀಕರಿಸಿ, ಮಲಯಕೇತುವು ಅವನಿಗೆ ಯೋಗ್ಯವಾದ ವಸ್ತ್ರಭೂಷಣ ವಾಹನಗಳಂ ಕೊಟ್ಟು, ತನ್ನ ಸೇನಾಪತಿಗಳು ಬಾಗುರಾಯಣನ ಸಮೇತನಾಗಿ ತನ್ನ ದೇಶವಂ ಕುರಿತು ತೆರಳುತ್ತಿದ್ದನು ಎಂಬಲ್ಲಿಗೆ,

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಮಹೀಶೂರನರಪತಿ ಶ್ರೀಕೃಷ್ಣರಾಜೇಂದ್ರರಾಶ್ರಿತ ಹೊಯಿಸಣೆಗಕುಲಸಂಜಾತ ನಾರಾಯಣಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ಪರ್ವತರಾಯನಿರ್ಯಾಣ ಕಥನಂ ನಾಮ ದಶಮಾಶಯಃ ಸಮಾಪ್ತಃ.

ಏಕಾದಶಾಶಯ : ಸರ್ವಾರ್ಥಸಿದ್ಧಿರಾಯನಿರ್ಯಾಣ ಕಥನವು

ಈ ರೀತಿಯಲ್ಲಿ ಬಾಗುರಾಯಣನ ವಾಕ್ಯವಂ ಕೇಳಿ, ಮಲಯಕೇತುವು ತಮ್ಮ ತಂದೆಯು ಕಾಲಾಧೀನನಾದನೆಂದು ತಿಳಿದು, ಬಾಗುರಾಯಣಸಮೇತನಾಗಿ ತನ್ನ ದೇಶವಂ ಕುರಿತು ತೆರಳುತ್ತಿರಲು, ಇದೆಲ್ಲವಂ ನೋಡಿದ ಚಂದ್ರಗುಪ್ತನ ದೂತರು ಬಂದು ಚಾಣಕ್ಯರಂ ಕುರಿತು,

"ಸ್ವಾಮಿ, ನಿನ್ನೆ ರಾತ್ರಿಯಲ್ಲಿ ಪರ್ವತರಾಯನು ಅಜ್ಞಾತಕುಲಗೋತ್ರಳಾದ ಒಬ್ಬ

---

೧. ಕೃತ್ಯ (ಕ) ೨. ಕಾರ್ಯಾಕಾರ್ಯವಂ (ಕ)

ಕನ್ನೆಯನ್ನೊಡಗೂಡಿ ಸುಖಸನ್ನಿ ತಟ್ಟಿದುದರಿಂದಲೋ ಯಾತರಿಂದಲೋ ದೀರ್ಘನಿದ್ರೆಗೈಯುತ್ತ ಗಗನಗಮನಾಯಾಸದಿಂ ಭೂತಳಕ್ಕೆ ಬಂದು ಶಯನವಂ ಮಾಡಿರುವ ಸೂರ್ಯಾಶ್ವವೋ ಎಂಬಂತೆ, ಕೋಮಲವಾದ ದೂರ್ವಾಂಕುರಗಳಂ ರಾಶಿಗೊಳಿಸಿ ಇದೆಯೋ ಎಂಬಂತೆ, ಹಸಿರು ಮರಳಿಕೊಂಡು ಚೇತನರಹಿತನಾಗಿ ಮಲಗಿ ಇದ್ದಾನೆ. ಇದಂ ತಿಳಿದು, ನಮ್ಮ ಸೇನೆಯಂ ನೋಡಿ, ಆತನ ಪುತ್ರನಾದ ಮಲಯಕೇತುವು ತನಗೆ ಏನೋ ವಿಪತ್ತು ಬಂತು ಎಂದು ಪಲಾಯನಂಗೈಯಲು, ಆತನ ಸೇನಾಪತಿಗಳಾದವರೆಲ್ಲರೂ ಬಿಟ್ಟಿದ್ದು ಬಿಟ್ಟಂತೆ ಬೆಂಬಿಡಿದು ಹೋದರು. ಇದೆಲ್ಲವಂ ನೋಡಿ ವಿರೋಚನನು ಮತ್ತೊಂದು ಕಡೆಗೆ ಪಲಾಯನಂಗೈದಿದನು. ಪರ್ವತರಾಯನ ಬಳಿಯಲ್ಲಿ ಎಂಟು ಜನ ಕಂಚುಕಿಗಳೂ ಮತ್ತೆಂಟು ಜನ ಆತನ ಜ್ಞಾತಿಗಳಾದ ಮೈಗಾವಲಿನ ರಾಜಪುತ್ರರೂ ಮಾತ್ರ ಹಂಬಲಿಸುತ್ತ, ಭೀತರಾಗಿ, ಆತನಂ ಬಿಟ್ಟು ಹೋಗಲಾರದೆ ಅಲ್ಲಿಯೇ ಇದ್ದಾರೆ. ಕಂಡ ವಿದ್ಯಮಾನವಂ ವಿಜ್ಞಾಪಿಸಿದೆವು" ಎನಲು,

ಆ ವಾಕ್ಯವಂ ಕೇಳಿ ಚಾಣಕ್ಯನು ತನ್ನ ಮನಸ್ಸಿನಲ್ಲಿ "ನಾನು ನನ್ನ ಮನಸ್ಸಿನಲ್ಲಿ ಧರ್ಮಸ್ಥಾಪನಾರ್ಥವಾಗಿ ಸಂಕಲ್ಪವಂ ಮಾಡಿ ಆಶ್ರಮದಿಂದ ಹೊರಟು ಪಾಟಲೀಪುರಕ್ಕೆ ಬಂದ ಕಾರ್ಯಕ್ಕೆ ನಂದರು ಸಂಹೃತರಾಗಿ, ಪರ್ವತರಾಯನು ಮೃತನಾದುದರಿಂದ ಧರ್ಮಮಾರ್ಗಕ್ಕೆ ವಿರೋಧಿಗಳಾದ ನಾಸ್ತಿಕಜನದ ಸೊಕ್ಕುಗಳಡಗಿ ಚಂದ್ರಗುಪ್ತನ ರಾಜ್ಯಾಭಿಷೇಕ ವಿಘ್ನವು ಮೂರುಪಾಲು ಪರಿಹಾರವಾದಂತಾಯಿತು" ಎಂದು ನಿಶ್ಚೈಸಿ, ಆ ದೂತನಂ ನೋಡಿ,

"ಇನ್ನೊಂದು ವೇಳೆ ಯಥಾರ್ಥವಾಗಿ ಹೇಳು. ನಮಗೆ ಪರಮಪ್ರಿಯನಾದ ಪರ್ವತರಾಯನು ಪಂಚತ್ವವನ್ನೈದಿದನೇ ? ಏನು ಆಕಸ್ಮಿಕಮೃತ್ಯು ಸಂಭವಿಸಿತು ? ಆತನ ಮೃತ್ಯುವೇ ಆ ಕನ್ಯಾರೂಪದಿಂದ ಒದಗಿದಳೋ ಏನೋ ?" ಎಂದು ಮೂಗಿನ ಮೇಲೆ ಬೆರಳಿಟ್ಟು, ಆಶ್ಚರ್ಯಪಟ್ಟವನಂತೆ ತಲೆ ತೂಗುತ್ತ, ಕ್ಷಣ ಯೋಚಿಸಿ, "ಈಗ ತಿಳಿಯ ಬಂತು, ನಿನ್ನೆ ಕ್ಷಪಣಕನು ನಮ್ಮ ಸಭೆಗೆ ರಾಜಯೋಗ್ಯಳಾದ ಅತಿಸುಂದರಿಯಾದ ಒಬ್ಬ ಸ್ತ್ರೀಯಂ ಕರೆತಂದು, ಚಂದ್ರಗುಪ್ತನಿಗೆ ಒಪ್ಪಿಸಬೇಕೆಂದು ಅವಳ ಗುಣಕೌಶಲ್ಯಕಥನವಂ ಮಾಡಿದುದರಿಂದ, ಆ ಕನ್ನೆಯು ರಾಜಯೋಗ್ಯಳಹುದೆಂದು ನಿಶ್ಚೈಸಿದೆನು.

ಕ್ಷಪಣಕನು ತಾನು ರಾಕ್ಷಸನ ಮಿತ್ರನು ಎಂದು ಹೇಳಿಕೊಂಡಾಗ್ಯೂ, ಅದರ ದೋಷವಂ ವಿಚಾರಿಸದೆ 'ಎಲೈ ಕ್ಷಪಣಕನೇ, ಚಂದ್ರಗುಪ್ತನು ಧರ್ಮಪತ್ನಿಯರುಗಳಂ ಹೊರತು ಅನ್ಯರಂ ಪರಿಗ್ರಹಿಸುವನಲ್ಲ. ರಾಜಯೋಗ್ಯಳಾದ ಈ ಕನ್ಯೆಯು ಅನ್ಯರಿಗೆ ಯೋಗ್ಯಳಲ್ಲ. ನಮಗೆಲ್ಲರಿಗೂ ಪ್ರಭುವಾದ ಪರ್ವತೇಶ್ವರನಿಗೆ ಯೋಗ್ಯಳಾದಾಳು' ಎಂದು ಹೇಳಿದ ಮಾತ್ರಕ್ಕೆ, ಆ ಕ್ಷಣವೇ ಕ್ಷಪಣಕನು ಆ ಕನ್ನೆಯಂ ಪರ್ವತರಾಯನ ಬಳಿಗೆ ಕರೆದುಕೊಂಡು ಹೋದನು. ಇದರಿಂ ರಾಕ್ಷಸನು ಆ ವಿಷಕನ್ನೆಯಂ 'ಚಂದ್ರಗುಪ್ತನಲ್ಲಿ ಪ್ರಯೋಗಿಸಿ ಸಂಹರಿಸುವನಾಗು, ಅದು ಅನುಕೂಲಿಸದಿದ್ದರೆ ಪರ್ವತರಾಯನಲ್ಲಿಯಾದರೂ ಪ್ರಯೋಗಿಸಿ ಸಂಹರಿಸುವನಾಗು' ಎಂದು ಕ್ಷಪಣಕನಿಗೆ ಹೇಳಿ ಕಳುಹಿಸಿ ಇರಬೇಕು ; ನಾವು ಎಷ್ಟು ಜಾಗರೂಕರಾಗಿ ಇದ್ದರೂ ನಮ್ಮ ಬುದ್ಧಿಗೆ ಇದು ಒಂದು ಮಹಾಪ್ರಮಾದವುಂಟಾಗಿ ರಾಕ್ಷಸನಿಗೆ ಸಂತೋಷವುಂಟಾಯಿತು. ಚಂದ್ರಗುಪ್ತ ಪರ್ವತೇಶ್ವರರಲ್ಲಿ ಯಾರು ನಷ್ಟ

ವಾದರೂ ನಮಗೆ ಒಂದು ನೇತ್ರ ನಷ್ಟವಾದಂತಾಯಿತು. ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು ?

ಇದು ಒಂದಂ ವಿಚಾರಿಸದೆ, ಗಣಿತೆಗೆ ಬಂದ ನಮ್ಮ ಸೇನೆಯಂ ಕಂಡು, ತನ್ನಂ ಸಂಹರಿಸ ಬರುವರೆಂದು ಬಾಲಬುದ್ಧಿಯಿಂದ ಆತನ ಪುತ್ರನಾದ ಮಲಯಕೇತುವು ಭೀತನಾಗಿ ಓಡಿಹೋಗಿ ಇರಬೇಕು. ಅದಂ ವಿಚಾರಿಸದೆ ವಿರೋಚನನು ಹಾಗೇ ಹೋಗಿ ಇದ್ದಾನು'' ಎಂದು ಸಭೆಯಲ್ಲಿ ಹೇಳುತ್ತ, ''ಈ ಅರ್ಥವಂ ನಾನೇ ಹೋಗಿ ನೋಡಿ ಬರುವೆನೆಂ''ದು ಎದ್ದು, ಚಂದ್ರಗುಪ್ತಸಮೇತನಾಗಿ ಚಾಣಿಕ್ಯನು ಮೃತನಾದ ಪರ್ವತರಾಯ ನಿದ್ದೆಡೆಗೆ ಬಂದು, ಸಿಂಹನಖಪ್ರಹಾರದಿಂದ ಅಸುವಂ ಬಿಟ್ಟಿರುವ ಮದಗಜದಂತೆ ಮೃತವಾದ ರಾಯನಂ ನೋಡಿ,

"ಎಲೈ ರಾಯನೇ, ನಿನಗೆ ಈ ಅವಸ್ಥೆ ಬರಬಹುದೇ ? ನೀನು ನಮಗೆ ಮಾಡಿದ ಉಪಕಾರವನ್ನೆಂದಿಗೆ ಮರೆಯಬೇಕು ?" ಎಂದು ಜನಗಳ ಮುಂದೆ ದುಃಖಿಸುತ್ತ, ಅಲ್ಲಿರುವ ರಾಜಪುತ್ರರ ಮುಖದಿಂದಲೇ ಆ ರಾಯನ ಕಳೇಬರವಂ ಅವರ ಜಾತಿ ಮರ್ಯಾದೆ ಇರುವಂತೆ ಸಾರ್ಥಕವಂ ಮಾಡಿಸಿ, ಆತನಲಂಕರಿಸಿದ್ದ ಭೂಷಣಗಳಂ ಬೊಕ್ಕಸದಲ್ಲಿ ಕಟ್ಟಿಸಿ, ಆತನಿಗೆ ಸದ್ಗತಿವುಂಟಾಗುವಂತೆ ಬಹುಧನವಸ್ತ್ರಗೋದಾನಗಳಂ ವಿಪ್ರರಿಗೆ ಕೊಡಿಸಿ, ಚಂದ್ರಗುಪ್ತಸಮೇತನಾಗಿ ಗಂಗಾಜಲದಲ್ಲಿ ಸ್ನಾನವಂ ಮಾಡಿ, ತಾನಿದ್ದೆಡೆಗೆ ಬಂದು, ಮತ್ತೆ ಆ [೧]ಮಾರನೆ[೧] ದಿವಸ ಚಾಣಿಕ್ಯನು ಸಭೆಗೆ ಬಂದು ಕುಳಿತು, ತನ್ನ ಪಾರ್ಶ್ವದಲ್ಲಿ ಇಂಗಿತಜ್ಞನಾಗಿ ನಿಂತಿರುವ ದೂತನ ಮುಖವಂ ದೃಷ್ಟಿಸಿ ನೋಡಿ, ಅವನಿಗಿಂತೆಂದನು.

"ಎಲೈ ನಿಪುಣಕನೇ, ಗಣಿತೆಯಾಗುವದಕ್ಕೆ ನಿನ್ನೆ ಕರೆಕಳುಹಿಸಿ ಇದ್ದ ನಮ್ಮ ಸೇನೆಗಳಿಗೆ ಗಣಿತೆಗಳಾಗುತ್ತಲಿದೆಯೋ ಇಲ್ಲವೋ?" ಎಂದು ಕೇಳಲು, ಚಾಣಿಕ್ಯರ ಮನೋಭಾವವಂ ತಿಳಿದು ಆ ದೂತನು, "ಸ್ವಾಮಿ, ನಿನ್ನೆ ಪರ್ವತರಾಯನ ಸೇನೆಯಲ್ಲಿ ನಡೆದ ವಿಶೇಷ ವ್ಯಾಪಾರದಿಂದ ಸೇನೆಗಳಂ ಗಣಿತೆಯಂ ಮಾಡುವದಕ್ಕೆ ಅವಕಾಶವಿಲ್ಲದೆ ನಿಂತು ಇದೆ ; ಅಪ್ಪಣೆಯಾದರೆ, ಇಂದುಮೊದಲು ಆಗುತ್ತಲಿದೆ" ಎನಲು, "ಈ ತಿಂಗಳ ಸಂಬಳವಂ ಕೊಟ್ಟು, ಅದರಲ್ಲಿ ಬಂದವರ್ಯಾರು ಉಳಿದವರ್ಯಾರು ತಿಳಿದು, ಗಣಿತೆಯಾದ ಬಳಿಕ ತಿಳುಹಿಸತಕ್ಕದ್ದು" ಎಂದು ನೇಮಿಸಿ, ಅವನಂ ಕಳುಹಿಸಿ,

ತನ್ನ ಮನಸ್ಸಿನಲ್ಲಿ "ರಾಕ್ಷಸನು ಯಾವ ಪ್ರಕಾರದಿಂದಲಾದರೂ ಚಂದ್ರಗುಪ್ತನಂ ಸಂಹರಿಸಬೇಕೆಂದು ವಿಷಕನ್ನೆಯಂ ಕಳುಹಿಸಿದನು. ದೈವಬಲದಿಂದ ಈ ವಿಪತ್ತು ಚಂದ್ರ ಗುಪ್ತನಂ ತಪ್ಪಿ ಪರ್ವತರಾಯನಂ ಹೊಂದಿತು, ಇದು ಹೊರತು ಇನ್ನೇನು ಕಪಟವಂ ಯೋಚಿಸಿ ಇರುವನೋ ?" ಎಂದು ಚಿಂತಿಸುತ್ತ, ಶತ್ರುಗಳ ಕಪಟದಿಂದ ಅರಸುಗಳಿಗೆ ಕಾಲದೇಶವಸ್ತುವಿಶೇಷದಲ್ಲಿ ಸಂಭವಿಸುವ ವಿಪತ್ತುಗಳೆಲ್ಲವಂ ಪರಿಭಾವಿಸಿ, ನಿಶ್ಚೈಸಿ, ಅದೆಲ್ಲವಂ ಶೋಧಿಸಬೇಕೆಂದು ಯೋಚಿಸುತ್ತ, ದೂತರಂ ಕರೆದು,

"ಎಲೈ, ಈ ಶುದ್ಧ ದಶಮೀ ಬುಧವಾರ ಚಂದ್ರಗುಪ್ತರಾಯನಿಗೆ ರಾಜ್ಯಾಭಿಷೇಕ

---

೧. ಮರಿ (ಕ)

ವಾಗುವದೆಂದು ಪುರದ ಬೀದಿಯಲ್ಲಿ ಡಂಗುರವಂ ಹಾಕಿ ಸಾರಿಸಿರಿ. ಪುರವು ಶೃಂಗಾರವಾಗಲಿ. ರಾಜದ್ವಾರದಲ್ಲಿ ಕುರುಜು ತೋರಣ ಮೇಲುಕಟ್ಟುಗಳು ಕಟ್ಟಲಿ. ಓಲಗದ ಪಜಾರವು ಅಲಂಕೃತವಾಗಲಿ. ರಾಜಯೋಗ್ಯವಾದ ಬಿಡಾರವು ಶೃಂಗರಿಸಿ ಶೋಭಿಸುತ್ತಿರಲಿ. ಅಭಿಷೇಕಸಾಮಗ್ರಿಗಳು ಸಿದ್ಧವಾಗಿ ಇರಲಿ. ಅಧಿಕಾರಿಗಳೆಲ್ಲರೂ ಕಾದುಕೊಂಡಿರಲಿ" ಎಂದು ಚಾಣಕ್ಯನು ಆಜ್ಞಾಪಿಸಲು, ಅದೇ ಮೇರೆಗೆ ದೂತರು ಬಂದು, ಪುರದ ಬೀದಿಗಳಲ್ಲಿ ಡಂಗುರವಂ ಹಾಕಿ ಸಾರಿಸಲು, ಗಂಧೋದಕ ಚಳೆಯಗಳಿಂದಲೂ ಚಿತ್ರತೋರಣ ಮೇಲುಕಟ್ಟು ಕದಳೀಸ್ತಂಭ ಪುಷ್ಪಮಾಲಿಕೆಗಳಿಂದಲೂ ಆ ಕುಸುಮಪುರವು ಅಲಂಕೃತವಾಗಿ ಅಮರಾವತಿಯಂತೆ ಶೋಭಿಸುತ್ತಿರಲು,

ಆ ಸಮಯದಲ್ಲಿ ರಾಕ್ಷಸನಿಂದ ಮೊದಲು ನೇಮಿಸಿ ಇದ್ದ ದಾರುವರ್ಮನೆಂಬ ಶಿಲ್ಪಿಯು ರಾಜದ್ವಾರದಲ್ಲಿ ಕಪಟಶಿಲ್ಪವಂ ರಚಿಸಿ, ಜನಕ್ಕೆ ತಿಳಿಯದಂತೆ ನೀರಾಜಿ ಮೇಲುಕಟ್ಟುಗಳಂ ಕಟ್ಟಿ ವಿಚಿತ್ರತೋರ[೧]ಣ ಕುರುಜು ಮುತ್ತಿನ ಕುಚ್ಚು[೧]ಗಳಿಂದಲಂಕರಿಸಿ, ದೇವತಾವಿಮಾನದಂತೆ ನೋಡುವರ್ಗೆ ವಿಸ್ಮಯಕರವಾಗಿ ವಾದ್ಯಗಳಂ ಮಾಡುವ ಸೂತ್ರದ ಬೊಂಬೆಗಳ ಸಾಲುಗಳಂ ನಿಲ್ಲಿಸಿ, 'ಈಗಲೇ ಬಹುಮಾನವಂ ಪಡೆಯಬೇಕೆಂ'ದು ನಿಶ್ಚೈಸಿ ಬಂದು, ಚಾಣಕ್ಯರಿಗೆ ಕೈಮುಗಿದು,

"ಸ್ವಾಮಿ, ರಾಜದ್ವಾರವು ಕುರುಜು ಮೇಲುಕಟ್ಟುಗಳಿಂದ ಅಲಂಕರಿಸಿ ಸಿದ್ಧವಾಗಿ ಇದೆ" ಎನಲು, ಅದಂ ಕೇಳಿ, "ಎನ್ಯ ಶಿಲ್ಪಿಯೇ, ಬಹುದಿವಸ ಮಾಡತಕ್ಕ ರಾಜದ್ವಾರಶೃಂಗಾರವು ಇಷ್ಟು ಬೇಗೆ ಹ್ಯಾಗೆ ಆಯಿತು ?" ಎನಲು, "ಸ್ವಾಮಿಯವರ ಅಪ್ಪಣೆ ಆಗುವದಕ್ಕೆ ಮುಂಚಿತವಾಗೇ ಕಟಾಕ್ಷಕ್ಕೆ ಪಾತ್ರನಾದೇನು ಎನ್ನುತ್ತ ನಾನು ಕಲಿತಿದ್ದ ಶಿಲ್ಪಕೌಶಲ್ಯದಿಂ ರಚಿಸಿರುವೆನು. ಅದಂ ಪರಾಂಬರಿಸಿ ನನ್ನಲ್ಲಿ ಕೃಪೆಮಾಡಬೇಕೆಂ"ದು ಶಿಲ್ಪಿ ಹೇಳಲು, ಆ ಮಾತಂ ಕೇಳಿ ಚಾಣಕ್ಯನು ತನ್ನ ಮನಸ್ಸಿನಲ್ಲಿ ಹೀಗೆಂದು ನಿಶ್ಚೈಸುತ್ತಿದ್ದನು :

"ನಾವು ಹೇಳುವುದಕ್ಕೆ ಮುಂಚಿತವಾಗೇ ಈ ಶಿಲ್ಪಿಯು ಬಹುದ್ರವ್ಯವನ್ನು ಆದರೂ ವ್ಯಯವಂ ಮಾಡಿ, ರಾಜದ್ವಾರವನ್ನಲಂಕರಿಸುವುದಕ್ಕೆ ನಿಮಿತ್ತವೇನು ?-ಆದರಿಂ ಇವನು ರಾಕ್ಷಸನಿಂದ ನಿಯುಕ್ತನಾಗಿ ರಾಜದ್ವಾರದಲ್ಲಿ ಏನೋ ಕಪಟಶಿಲ್ಪವಂ ಚಂದ್ರಗುಪ್ತನ ನಿಗ್ರಹಕ್ಕೆ ಮಾಡಿ ಇದ್ದಾನು. ಆಗಲಿ, ಚಿಂತೆಯೇನು ? ಈಗ ರಾಜ್ಯವಂ ಬಯಸುವ ಪರ್ವತರಾಯನು ವಿಷಕನ್ಯಾ[೨]ಮೂಲಕ[೨]ದಿಂದ ಮೃತವಾದನು. ಮಲಯಕೇತುವು ಓಡಿಹೋದನು. ಹಾಗೇ ಓಡಿಹೋಗಿರುವ ಪರ್ವತರಾಯನ ತಮ್ಮನಾದ ವಿರೋಚನನಂ ಕರೆಕಳುಹಿಸಿ, 'ನಿಮ್ಮ ಅಣ್ಣ[ನಿ]ಗೆ ಮಾತನಾಡಿ ಇದ್ದ ಅರ್ಧರಾಜ್ಯವಂ ನಿನಗೆ ಪಟ್ಟಾಭಿಷೇಕವಂ ಮಾಡುವೆನೆಂ'ದು ಒಡಂಬಡಿಸಿ, ಆತನಿಗೆ ಚಂದ್ರಗುಪ್ತನ ಆಭರಣಗಳಂ ಅಲಂಕರಿಸಿ, ಅಭಿಷೇಕವಂ ಯಥೋಚಿತವಾಗಿ ಮಾಡಿದರೆ, ಆಗ ಜನರು ಮೊದಲು ಪರ್ವತರಾಯನಂ ಒಡಂಬಡಿಸಿ ಕರೆತಂದು ತಮ್ಮ ಕಾರ್ಯವಂ ಮಾಡಿಸಿಕೊಂಡು, ವಿಷಕನ್ಯಾ[೩]ಮೂಲಕ[೩]ದಿಂದ ಪರ್ವತರಾಯನಂ ಸಂಹರಿಸಿ, ಮಲಯಕೇತುವಂ ಓಡಿಸಿ, ಚಾಣಕ್ಯನು ವಂಚನೆಯಿಂದ ರಾಜ್ಯವಂ ಸಂಪಾದಿಸಿದನೆಂಬ ಲೋಕಾಪವಾದವು ಪರಿಹೃತವಾಗಿ, 'ರಾಕ್ಷಸನೇ ವಿಷ

---

೧. ಣ ಕುಚ್ಚು (ಕ) ೨. ಮೂಲ (ಕ) ೩. ಮೂಲ (ಕ)

ಕನ್ನೆಯಂ ಕಳುಹಿಸಿ, [1]ಆತನಿಗೆ[1] ವೈರಿಯಾದ ಚಂದ್ರಗುಪ್ತನಿಗೆ ಪ್ರಬಲಾಶ್ರಯನಾಶವಂ ಮಾಡಿ, ಮುಂದಣ ಕಾರ್ಯವಂ ಸಾಧಿಸುವದಕ್ಕೆ ಪರ್ವತರಾಯನಂ ಸಂಹಾರವಂ ಗೈಸಿದನು; ಭೀತಿಯಿಂದ ಮಲಯಕೇತು ಓಡಿಹೋದನು ; ಚಾಣಕ್ಯನು ಆಡಿದ ಮಾತಿಗೆ ತಪ್ಪದೆ, ಆತನ ತಮ್ಮನಾದ ವಿರೋಚನನಿಗೆ ಅರ್ಧರಾಜ್ಯಾಭಿಷೇಕವಂ ಮಾಡಿಸಿದನೆಂ'ದು ಹೇಳಿಕೊಂಡಾರು.

ಹೀಗೆ ಅಭಿಷೇಕವಂ ಮಾಡಿಸಿ, ಆ ಬಳಿಕ ವಿರೋಚನನಿಗೆ ಗಜಾರೋಹಣವಂ ಮಾಡಿಸಿ, ಮೆರವಣಿಗೆ ನಿಮಿತ್ತವಾಗಿ ಕರೆತಂದರೆ, ರಾಜದ್ವಾರದಲ್ಲಿ ಈ ದಾರವರ್ಮನು ಚಂದ್ರ ಗುಪ್ತನ ನಿಮಿತ್ತವಾಗಿ ಮಾಡಿದ ಕಪಟಶಿಲ್ಪದ ವಿಪತ್ತಿಗೆ ವಿರೋಚನನು ಪಾತ್ರನಾದಾನು. ರಾಜ್ಯವ್ಯವಹಾರಕ್ಕೆ ಮುಂದೆ ಉಂಟಾಗುವ ಪ್ರತಿವಾದಿಯ ನಾಶವುಂಟಾಗುವದು. ಆ ಕಪಟಶಿಲ್ಪವು ನಾವು ಹೇಳುವದಕ್ಕೆ ಮುಂಚಿತವಾಗಿಯೇ ಮಾಡಿ ಸಿದ್ಧವಾಗಿ ಇರುವದರಿಂದ ಅಪವಾದವು ನಮ್ಮಂ ಹೊಂದದೆ ರಾಕ್ಷಸನನ್ನೇ ಹೊಂದುವದು" ಎಂದು ಮನಸ್ಸಿನಲ್ಲಿ ನಿಶ್ಚೈಸಿ, ಆಗ ದಾರುವರ್ಮನಂ ಕುರಿತು,

"ಎಲೈ ಶಿಲ್ಪಿಯೇ, ನಾವು ಹೇಳುವದಕ್ಕೆ ಮುಂಚಿತವಾಗಿಯೇ ನಮ್ಮ ಅಭಿಪ್ರಾಯವಂ ತಿಳಿದು ರಾಜದ್ವಾರವನ್ನಲಂಕರಿಸಿದ್ದು ಸಂತೋಷವಾಯಿತು. ಚಂದ್ರಗುಪ್ತನ ಪಟ್ಟಾಭಿಷೇಕವಾದಲ್ಲಿ ನೀನು ಮಾಡಿದ ಶಿಲ್ಪಾನುಸಾರವಾಗಿ ಫಲಕ್ಕೆ ಪಾತ್ರನಾಗುವೆ" ಎಂದು ಹೇಳಿ, ವೀಳಯವಂ ಕೊಡಿಸಿ, ಶಿಲ್ಪಿಯಂ ಕಳುಹಿಸಿ, ಚಾಣಕ್ಯನು ಬಾಗುರಾಯಣನ ತಮ್ಮನಾದ ವತ್ಸಲಾಯನನಂ ಕರೆಕಳುಹಿಸಿ, ಅವನ ಸಂಗಡ ರಹಸ್ಯವಾಗಿ ಹೇಳತಕ್ಕ ಮಾತಂ ಹೇಳಿ ಕಳುಹಿಸಲು, ಆತನು ತುರಗವನ್ನೇರಿ, ತ್ವರಿತದಿಂ ಹೋಗಿ, ಸ್ವದೇಶಕ್ಕೆ ಹೋಗುತ್ತಿರುವ ವಿರೋಚನನಂ ಕುರಿತು, ಸನ್ಮಾನದಿಂ ಕುಳ್ಳಿರಿಸಿಕೊಂಡು, ವತ್ಸಲಾಯನನಿಂತೆಂದನು :

"ಅಯ್ಯ ವಿರೋಚನನೇ, ಇದು ಏನು ಯೋಚಿಸಿದೆಯ್ಯ ? ಪುಷ್ಪಮಾಲಿಕೆಗಳಂ ನೋಡಿ ಸರ್ಪಗಳೆಂದು ಭಯಪಟ್ಟು ಓಡುವನ ತೆರದಿಂ ಕಾರ್ಯವಂ ಬಿಟ್ಟು ಹೋಗುತ್ತಲಿರುವೆ. ಮಲಯಕೇತುವು ಬಾಲನಾದುದರಿಂದ ಯುಕ್ತಾಯುಕ್ತವಂ ವಿಚಾರಿಸದೆ ಹೊರಟು ಹೋದನು. ನೀನೂ ಹೀಗೆ ಮಾಡಿದರೆ ಮುಂದೆ ನಿನ್ನಿಂದ ರಾಜಕಾರ್ಯನಿರ್ವಾಹವು ಹ್ಯಾಗಾಗುವದು ?

'ಚಂದ್ರಗುಪ್ತನಂ ಪಕ್ಷೀಕರಿಸಿ ನಂದರಂ ಸಂಹರಿಸಿದ ಪರ್ವತರಾಯನಂ ಸಂಹರಿಸಿದರೆ ಚಂದ್ರಗುಪ್ತನಿಗೆ ಬಲ ತಪ್ಪುವದು, ಆ ಬಳಿಕ ಚಂದ್ರಗುಪ್ತನಲ್ಲಿ ದ್ವೇಷವಂ ಸಾಧಿಸಬಹುದೆಂ'ಬ ಬುದ್ಧಿಯಿಂದ ರಾಕ್ಷಸನೇ ವಿಷಕನ್ನೆಯಂ ಕಳುಹಿಸಿ ಪರ್ವತರಾಯನಂ ಸಂಹರಿಸಿದನು ಎಂದು ತಿಳಿಯದೆ, ಚಾಣಕ್ಯನಲ್ಲಿ ದ್ವೇಷವನ್ನೆಣಿಸಿ ನೀನು ಹೊರಟು ಹೋದುದಕ್ಕೆ ಚಾಣಕ್ಯರು ಬಹುಖಿನ್ನರಾಗಿ, ನನ್ನಂ ಕರೆದು, 'ಲೋಕದವರು ಮೂಲಾನುಮೂಲವಂ ತಿಳಿಯದೆ ಮನಕ್ಕೆ ಬಂದಂತೆ ತನ್ನಂ ಆಡಿಕೊಂಡಾರು. ಈ ಅಪವಾದವು ತಪಸ್ವಿ[2]ಯಾದ ನನಗೆ[2] ಯಾಕೆ ಬೇಕು ? ನಾನು ಹೇಳಿದ ರೀತಿಗೆ ತಪ್ಪದೆ ಪರ್ವತರಾಯನ ತಮ್ಮನಿಗಾದರೂ ಅರ್ಧರಾಜ್ಯವಂ ಅಭಿಷೇಕವಂ ಮಾಡಿಸುವೆನೆಂ'ದು ಲಗ್ನವಂ ನಿಶ್ಚೈಸಿ,

---

೧. ತನಗೆ (ಕ) ೨. ಯಾದವನಿಗೆ (ಕ)

ನನ್ನಂ ಕರೆದು, 'ನೀನು ಹೋಗಿ ವಿರೋಚನನಂ ಕರೆದು ತಾರೆಂ'ದು ಕಳುಹಿಸಿದರು. ನಿನಗೆ ಅಭಿಷೇಕವಂ ಮಾಡಿಸುವದು ನಿಶ್ಚಯವು. ನನ್ನ ಸುಕೃತವೇ ಸಾಕ್ಷಿ. ನಡೆ" ಎಂದು ವತ್ಸಲಾಯನನು ಹೇಳುತ್ತಿರಲು. ಆ ಮಾತಿಗೆ ವಿರೋಚನನು ಒಡಂಬಟ್ಟು, ಹೊರಟು ಬಂದು ಚಾಣಕ್ಯನಂ ಕಂಡು ವಂದಿಸಲು, ಚಾಣಕ್ಯನು

"ಎಲೈ ವಿರೋಚನನೇ, ಜನಾಪವಾದಕ್ಕೆ ನನ್ನಂ ಗುರಿಮಾಡಿ ಮಲಯಕೇತುವಿನಂತೆ ವಿಚಾರಿಸದೆ ನೀನು ಹೋಗುವದೇ ? ಬುಧವಾರದ ದಿವಸ ಲಗ್ನ ನಿಶ್ಚಯವಾಗಿ ಇದೆ. ಅರ್ಧ ರಾಜ್ಯಾಭಿಷೇಕವು ನಿನಗೆ ಮೊದಲೇ ಆಗಲಿ ; ಉಳಿದುದು ಆ ಬಳಿಕ ಆಗಲಿ" ಎಂದು ಹೇಳಿ, ಬುಧವಾರ ಅರ್ಧರಾತ್ರೆಯಲ್ಲಿ ಲಗ್ನನಿಶ್ಚಯವಂ ಮಾಡಿ, ವಿರೋಚನಸಮೇತನಾಗಿ ತಾವೆಲ್ಲರೂ ಪಾಟಲೀಪುರಕ್ಕೆ ಹೋಗಿ, ರೂಪವಂತನಾದ ವಿರೋಚನನಿಗೆ ಚಂದ್ರಗುಪ್ತನಲಂಕರಿಸುವ ಆಭರಣಗಳಿಂದಲಂಕರಿಸಿ, ರತ್ನಕವಚವಂ ತೊಡಿಸಿ, ದಿವ್ಯದುಕೂಲವಂ ಹೊದಿಸಿ, ಚಂದ್ರಗುಪ್ತನ ಪರಿವಾರಸಮೇತವಾಗಿ ವಿರೋಚನನಂ ಕರೆತಂದು, ಸಿಂಹ ಪೀಠದಲ್ಲಿ ಕುಳ್ಳಿರಿಸಿ, ನಾನಾವಿಧ ಪುಷ್ಪಗಳಿಂದ ಅಭಿಷೇಕವಂ ಮಾಡಿಸಿ, ವಂದಿ ಮಾಗಧರಿಂದ ಜಯವೆಂದು ಹೊಗಳಿಸುತ್ತಿರಲು, ಮೊದಲು ಬೀದಿಗಳಲ್ಲಿ ಸಾರಿಸಿದ ಮೇರೆಗೆ ಪುರದ ಜನರೆಲ್ಲರೂ ಚಂದ್ರಗುಪ್ತನಿಗೆ ಪಟ್ಟಾಭಿಷೇಕವೆಂದು ಹೇಳಿಕೊಳ್ಳುತ್ತ ಗುಂಪುಕೂಡಿ ನೆರೆಯುತ್ತಿರಲು, ನಂದರೇರುವ ಪಟ್ಟದಾನೆಯನ್ನಲಂಕರಿಸಿ, ಆ ಮದಗಜದಲ್ಲಿ ವಿರೋಚನನ ಕುಳ್ಳಿರಿಸಿ, ಚಂದ್ರಗುಪ್ತನ ಪರಿವಾರವೆಲ್ಲವಂ ಸಂಗಡ ಕಳುಹಿಸಿ, ಸಕಲವಿಭವದಿಂದ ಹೊರಟು, ಅಲಂಕರಿಸಿ ಇರುವ ರಾಜದ್ವಾರದೆಡೆಗೆ ಬರುತ್ತಿರಲು, ಆಗ ಕಾಲ ನಡೆಯಾಗಿ ಹಿಂದೆ ಬರುತ್ತಿರುವ ಚಂದ್ರಗುಪ್ತನಂ ಕುರಿತು ಚಾಣಕ್ಯನು,

"ಎಲೈ ಕುಮಾರಕನೇ, ಈ ರಾಜದ್ವಾರದಲ್ಲಿ ಏನೋ ಒಂದು ವಿಶೇಷ ನಡೆಯುತ್ತಲಿದೆ. ಹಿಂದೆ ನಿಂತು ನೋಡುವನಾಗು" ಎಂದು ಹೇಳುತ್ತಿರಲು, ಅಷ್ಟರಲ್ಲಿಯೇ ಆ ಪಟ್ಟದಾನೆಯು ರಾಜದ್ವಾರದ ಸಮೀಪಕ್ಕೆ ಬರುತ್ತಿರಲು, ಆ ಬಳಿಯಲ್ಲಿ ವಿಚಿತ್ರನಾಟ್ಯಗಳಂ ವಾದ್ಯಸಮೇತವಾಗಿ ಮಾಡುತ್ತಿರುವ ಬೊಂಬೆಗಳ ಸಾಲುಗಳಂ ನಾನಾವಿಧ ಶಿಲ್ಪಗಳಂ ನೋಡುತ್ತ, ಗಜವಂ ಮೆಲ್ಲನೆ ನಡೆಯಿಸುತ್ತ, ರಾಜದ್ವಾರದಲ್ಲಿ ಬರುತ್ತಿರಲು,

ಮೊದಲು ರಾಕ್ಷಸನಿಂದ ನೇಮಿಸಿ ಇದ್ದ ದಾರುವರ್ಮನು ಮೇಲುಭಾಗದಲ್ಲಿ ಕಾಣದಂತೆ ಅಡಗಿ ನೋಡುತ್ತ, ಗಜಾರೂಢನಾಗಿ ಬರುವವನೇ ಚಂದ್ರಗುಪ್ತನೆಂದು ನಿಶ್ಚೈಸಿ, ಅವನ ಶಿರಸ್ಸಿಗೆ ಸರಿಯಾಗಿ ನೋಡಿ, ತಾನು ಮಾಡಿದ ಕೀಲನ್ನು ತನ್ನ ಕೈಯ "ಕೊಡತಿ"[೧] ಯಿಂದ ಬಡಿಯಲು, ಅಷ್ಟರಲ್ಲಿಯೇ ಮೊದಲು ರಾಕ್ಷಸನಿಂದ ನೇಮಿಸಿ ಇದ್ದ ಬರ್ಬರಕನೆಂಬ ಮಾವುತನು 'ಇದೇ ತನಗೆ ಸಮಯವು, ಹಿಂದೆ ಕುಳಿತಿರುವನೇ ಚಂದ್ರಗುಪ್ತನೆಂ'ದು ತಿಳಿದು, ತನ್ನ ಕೈಯಲ್ಲಿ ಇದ್ದ ಸುವರ್ಣದಂಡದಲ್ಲಿ ಹುದುಗಿಸಿ ಇದ್ದ ಶಸ್ತ್ರವಂ ತನ್ನ ಕೈಯಲ್ಲಿ ತ್ವರಿತದಿಂ ಗ್ರಹಿಸಲು, ಅದಂ ತಿಳಿದು ಆ ಗಜವು ತನ್ನಂ ಪ್ರಹರಿಸುವನೆಂದು ಭೀತಿಯಿಂದ ಒಂದೆರಡು ಹೆಜ್ಜೆ ಹಿಮ್ಮೆಟ್ಟಿ ನಿಲ್ಲಲು, ಆಗ ದಾರುವರ್ಮ ಸಡಲಿಸಿದ ಮಹಾಭಾರದ ತೊಲೆಯು ಮಾವುತನ ಶಿರಸ್ಸಿನ ಮೇಲೆ ಬಿದ್ದು ಅವನು ಹತವಾಗಲು,

---

೧. ಕೊಡಲಿ (ಖ)

ಅದಂ ನೋಡಿ ದಾರುವರ್ಮನು 'ತಾನು ಮಾಡಿದ ಯತ್ನವು ಮಾವುತನಂ ಸಂಹರಿಸಿ ಚಂದ್ರಗುಪ್ತನನ್ನುಳುಹಿಸಿತು. ತಾನು ಈಗ ಸುಮ್ಮನೆ ಇದ್ದರೆ ತನಗೆ ಪ್ರಾಣಾಪತ್ತು ಬರುವದೆಂ'ದು ತಿಳಿದು, ತನ್ನ ಕೈಯಲ್ಲಿದ್ದ ಕಬ್ಬಿಣದ [೧]ಕೊಡತಿ[೧]ಯಿಂದ ಎತ್ತಿ ವಿರೋಚನನ ಶಿರಸ್ಸಿನ ಮೇಲೆ ಪ್ರಹರಿಸಲು, ಶಿರಸ್ಸು ಒಡೆದು. ವಿರೋಚನನು ಕಾಲಾಧೀನವಾಗಲು, ಅದಂ ನೋಡಿ ಜನರೆಲ್ಲರೂ ಚದುರಿ ಓಡಲು, ಆ ಗಾಬರಿಗೆ ಗಜವು ಬೆದರಿ ಓಡುತ್ತಿರಲು,

ಆ ಬಳಿಕ ಮೈಗಾವಲಾಗಿ ಬಂದಿದ್ದ ಭಲ್ಲದವರು ದಾರುವರ್ಮನಂ ತಿವಿದು ಕೆಡಹುತ್ತಿರಲು, ಚಾಣಕ್ಯನು ಚಂದ್ರಗುಪ್ತನ ಮುಖವಂ ನೋಡಿ, "ಈ ವಿರೋಚನನ ಅದೃಷ್ಟವು ಸಹ ರಾಕ್ಷಸನ ಕಪಟಕ್ಕೆ ಒಳಗಾಯಿತು. ನಾವು ಮಾಡುವದೇನು ?" ಎಂದು ಹೇಳಿ, "ಈ ಸ್ಥಳವಂ ಶುದ್ಧಿಮಾಡಿರೆಂ"ದು ದೂತರಿಗೆ ಹೇಳಿ,

'ಇನ್ನು ಚಂದ್ರಗುಪ್ತನು ವಾಸವಂ ಮಾಡುವ ಸ್ಥಳಗಳಂ ಶೋಧಿಸಬೇಕೆಂ'ದು ನಿಶ್ಚೈಸಿ, ಆತನಿಗೆ ಬಿಡಾರವಾಗಿ ಶೃಂಗರಿಸಿದ್ದ ಕುಮಾರಭವನಕ್ಕೆ ಚಾಣಕ್ಯನು ಹೋಗಿ, ಅದೆಲ್ಲವಂ ನೋಡಿ, "ಇಲ್ಲಿ ಯಾರೋ ತಿಳಿಯದವನು ಉಷಃಕಾಲದಲ್ಲಿ ಮಾಡುವ ದೇವತಾದರ್ಶನದ ಪಠವನ್ನು ಎಡದ ಭಾಗದಲ್ಲಿ ಕಟ್ಟಿ ಇದಾನೆ, ಬಲದ ಭಾಗದಲ್ಲಿ ಕಟ್ಟಿ" ಎಂದು ದೂತರಿಗೆ ನೇಮಿಸಲು, ಅವರು ಬಲದ ಮಗ್ಗುಲಿನ ನೇರಕ್ಕೆ ಕಟ್ಟುವದಕ್ಕೆ ತೆಗೆಯಲು, ಅದರ ಹಿಂದೆ ಮಾಡಿರುವ ದೊಡ್ಡ ಗೂಡಿನಲ್ಲಿ ಒಬ್ಬ ಪುರುಷ ಅಡಗುವ ಹಾಗೆ ಮಾಡಿ ಇರಲು, ಅದರಲ್ಲಿ ಹೊಸ ಸಾಣೆಮಾಡಿದ ಶಸ್ತ್ರವಿರಲು, ಅದಂ ತರಿಸಿ ನೋಡಿ, ಒಬ್ಬ ದೂತನ ಕೈಯಲ್ಲಿ ಕೊಟ್ಟು, 'ಹೀಗೇ ಇನ್ನೇನು ವಿಶೇಷ ಇರುವದೋ ಶೋಧಿಸಬೇಕೆಂ'ದು ಬರುತ್ತಿರಲು,

ನಿಲಗನ್ನಡಿಯ ರಂಧ್ರದಿಂದ ಇರುವೆಗಳು ಅನ್ನದಗುಳಂ ಕಚ್ಚಿಕೊಂಡು ಸಾಲಿಡುತ್ತ ಬರುತ್ತಿರಲು, ಅದಂ ನೋಡಿ, "ಈ ಭಿತ್ತಿಯ ಹಿಂಭಾಗದಲ್ಲಿ ಯಾರೋ ಮನುಷ್ಯರಿರಬೇಕು, ನಿಲಗನ್ನಡಿಯಂ ತೆಗೆಯಿರಿ" ಎನಲು, ಆ ಕನ್ನಡಿಗಳಂ ಸಡಿಲಿಸಿ ನೋಡಲು, ಅದರ ಹಿಂದೆ ಮನುಷ್ಯ ಬರುವಂತೆ ಕನ್ನವಿರುವದಂ ಕಂಡು, "ಅಲ್ಲಿಂದ ಆಚೆ ನೋಡಿ" ಎನಲು, ಅದಂ ತಿಳಿದು ರಾಕ್ಷಸನ ಕಡೆ ಭವನಪಾಲಕನು ನೇಮಿಸಿದ ಶಸ್ತ್ರಪಾಣಿಗಳಾದ ಚೋರರು ಸುರಂಗಮಾರ್ಗದಿಂದ ಭೀತರಾಗಿ ಒಳಗೆ ಹೋಗುತ್ತಿರಲು, ಆ ಸುರಂಗಕ್ಕೆ ತೃಣಕಾಷ್ಠಗಳಂ ತುಂಬಿ, ಅಗ್ನಿಯಂ ಮುಟ್ಟಿಸಿ, "ಆ ಗೃಹದ ಹಿಂದೆ ಏನಿರುವದು ?" ಎಂದು ಕೇಳಲು, "ರಾಕ್ಷಸನ ಲಾಯವಿರುವದೆಂ"ದು ತಿಳುಹಿಸಲು, "ಆ ಲಾಯಕ್ಕೆ ಅಗ್ನಿಯಂ ಮುಟ್ಟಿಸೆಂ"ದು ನೇಮಿಸಲು, ಹಾಗೇ ಅಗ್ನಿಯಂ ಮುಟ್ಟಿಸಲು, ಆ ಇತ್ತಂಡದ ಹೊಗೆಯು ಅಡರಿ, ಬಿಲದಲ್ಲಿ ಮೃತವಾಗುವ ಹೆಗ್ಗಣಗಳಂತೆ ಅಲ್ಲಿ ಅಡಗಿದ್ದ ಚೋರರು ಮೃತವಾಗಲು, "ಅದೆಲ್ಲವಂ ಶೋಧಿಸಿ ಶುದ್ಧಿಮಾಡಿ" ಎಂದು ನೇಮಿಸಿ,

ಪಠದಲ್ಲಿ ಇರಿಸಿದ್ದ ಹೊಸಸಾಣೆ ಶಸ್ತ್ರವಂ ತರಿಸಿ ನೋಡಿ, "ಇಲ್ಲಿ ಬರುವ ಜನರೆಲ್ಲರಂ ಕರಸೆಂ"ದು ಚಾಣಕ್ಯನು ದೂತರಿಗೆ ನೇಮಿಸಲು, ಹಾಗೇ ಆ ಜನರೆಲ್ಲರಂ ಕರೆತರಲು, "ಈ

---

೧. ಕೊಡಲಿ (ಖ)

ಶಸ್ತ್ರ ಯಾರದೆಂದು ಕೇಳು" ಎನಲು, ಆ ಜನರು "ನಮ್ಮೊಬ್ಬರದೂ ಅಲ್ಲ" ಎನಲು, ಅದರಲ್ಲಿ ಹೇರಳಕ್ರಯದ ವಸ್ತ್ರವಂ ಧರಿಸಿರುವ ಒಬ್ಬ ಪುರುಷನಂ ನೋಡಿ, "ಇದ್ಯಾರ ದೆಲೋ, ಈ ಶಸ್ತ್ರ"ವೆನಲು, ಅವನು "ನನ್ನದಲ್ಲ, ಮತ್ತಾರದೋ" ಎನಲು, "ಇವನಿಗೆ ಸಂಬಳವೇನೆ"ನಲು, "ಬುದ್ಧೀ, ಎಲ್ಲರಂತೆ ಇವನಿಗೆ ಐದುವರಹ ಸಂಬಳವು ; ಈವರೆಗೂ ಇವನ ಮನೆಯಲ್ಲಿದ್ದ ಜನರು ನಾಲ್ವರು, ಈಗ ಇವನ ಮನೆಯಲ್ಲಿ ನಾಲ್ವತ್ತು ಜನ ಸೇವಕರು ಇದಾರೆ ; ನಾಲ್ಕಾರು ವರಹಗಳಂ ನಟ ವಿಟರಿಗೆ ಕೊಡುತ್ತಲಿದಾನೆ ; ಪಣ್ಯಾಂಗನೆಯರಿಗೆ ನೂರಾರುವರಹ ವ್ಯಯವಂ ಮಾಡುತಾನೆ" ಎಂದು ಆತನ ಸಂಗಡ ದಲ್ಲಿರುವವರು ಹೇಳಲು, "ಎಲೋ, ನಿನಗೆ ಇಷ್ಟು ಧನವೆಲ್ಲಿಯದು ?" ಎನಲು, "ಪ್ರಭು ಕಟಾಕ್ಷಕ್ಕೆ ಪಾತ್ರ[ವಾ]ಗಿ ಇದ್ದ ಜನಕ್ಕೆ ವೆಚ್ಚದ ಮಟ್ಟಿಗೆ ಧನ ದೊರಕದೇ ?" ಎನಲು,

"ಎಲೈ, ಶಸ್ತ್ರಸಾಣೆಯಂ ಮಾಡುವರನೆಲ್ಲರಂ ಕರೆಯಿಸು" ಎಂದು ದೂತರಿಗೆ ನೇಮಿಸಲು, ಹಾಗೇ ಅವರೆಲ್ಲರಂ ಕರೆತಂದು ಮುಂದೆ ನಿಲ್ಲಿಸಲು, ಆ ಶಸ್ತ್ರವಂ ತೋರಿಸಿ, "ಇದಕ್ಕೆ ಸಾಣೆಯಂ ಮಾಡಿದವನ್ಯಾರು ?" ಎನಲು, ಅದರಲ್ಲಿ ಒಬ್ಬನು "ನಾನು ಮಾಡಿದೆ ಬುದ್ಧೀ, ಕೂಲಿಗೆ" ಎನಲು, "ಈ ಶಸ್ತ್ರವ್ಯಾರದೆಂ"ದು ಕೇಳಲು, ಅವನು ಅಲ್ಲಿ ಇಲ್ಲಿ ನೋಡಿ, ವಸ್ತ್ರದಿಂ ವಿಶೇಷಭೂಷಿತನಾದ ಕರ್ಕಟಿಕನನ್ನು 'ಈತನದೆಂ'ದು ತೋರಿಸಲು, ಅವನಂ ನೋಡಿ, "ಎಲೈ ದುಷ್ಟನೇ, ಶಸ್ತ್ರವಂ ನನ್ನದಲ್ಲ ಎಂದು ಹೇಳಿದೆ ; ಈಗ್ಯಾರದು ?" ಎನಲು, ಅವನು ಗಡಗಡನೆ ನಡುಗುತ್ತ, "ಬುದ್ಧೀ, ರಾಕ್ಷಸನ ಕಡೆ ಭವನಪಾಲಕನು ನನಗೆ ಬಹುದ್ರವ್ಯವಂ ಕೊಟ್ಟು, 'ಆ ಗೂಡಿನಲ್ಲಿ ಇದ್ದುಕೊಂಡು ಇದ್ದು, ಈ ಶಸ್ತ್ರದಿಂದ ನಿದ್ರೆಗೈವ ಚಂದ್ರಗುಪ್ತನಂ ಸಂಹರಿಸೆಂ'ದು ನೇಮಿಸಿ ಇದ್ದುದರಿಂದ, ಶಸ್ತ್ರವನ್ನು ಮೊದಲೇ ಅಲ್ಲಿರಿಸಿ, ಹೋಗುವದಕ್ಕೆ ಅವಕಾಶ ದೊರೆಯದೆ ಇದ್ದೆನು" ಎನಲು, ಅವನಿಗೆ ಚಿತ್ರಾಜ್ಞೆಯಂ ಮಾಡಿಸಿ, ಆ ಭವನಪಾಲಕನಂ ಕರೆತರುವಂತೆ ನೇಮಿಸಲು, ದೂತರು ಹೋಗಿ, ಹುಡುಕಿ, ಭವನಪಾಲಕನು ಸಿಕ್ಕದೆ ಓಡಿ ಹೋದುದಂ ತಿಳಿದು ಚಾಣಕ್ಯರಿಗೆ ಬಂದು ಹೇಳುತ್ತಿರಲು,

ಅಷ್ಟರಲ್ಲಿಯೇ ಸೂರ್ಯನುದಯಿಸಲು, ಆ ಭವನಪಾಲಕನೆಲ್ಲಿ ಇದ್ದರೂ ಕರೆತರುವಂತೆ ಚಾರರಿಗೆ ನೇಮಿಸಿ, ಆಗ ಚಂದ್ರಗುಪ್ತನನ್ನು ಕುಮಾರಭವನದಲ್ಲೇ ಇರುವಂತೆ ನೇಮಿಸಿ, ಅಲ್ಲಿ ಬೇಕಾದ ಆಪ್ತಜನರಂ ಸೇವಾರ್ಥವಾಗಿ ನಿಲ್ಲಿಸಿ, ಚಾಣಕ್ಯನು ತಾನು ಒಂದು ಪರ್ಣಶಾಲೆಯಂ ನಿರ್ಮಿಸಿಕೊಂಡು ಶಿಷ್ಯಸಮೇತನಾಗಿ ಅಲ್ಲಿರುತ್ತಿರಲು, ಆಗ ರಾಜ ವೈದ್ಯನು ಒಬ್ಬ ಬಂದು, ಚಾಣಕ್ಯರಂ ಕಂಡು ಕೈಮುಗಿದು,

"ದೇವರೂ, ಬಹು ದಿವಸದಿಂದ ರಾಜಾಶ್ರಿತನಾದ ವೈದ್ಯನು ನಾನು, ನಿಮ್ಮಂ ಕಂಡು ನಿಮ್ಮ ಆಶ್ರಿತನಾಗಬೇಕೆಂದು ಬಂದೆನು" ಎಂದು ಹೇಳಿ, ಅಹೋರಾತ್ರಗಳಲ್ಲಿ ಎಡಬಿಡದೆ ಚಾಣಕ್ಯ ಚಂದ್ರಗುಪ್ತರ ಬಳಿಯಲ್ಲೇ ಇರುವವನಾಗಿ, ದಿನೇ ದಿನೇ ನಂಬಿಕೆಯನ್ನುಂಟು ಮಾಡಿಕೊಳ್ಳುತ್ತ, ವಿಶೇಷವಾಗಿ ಚಂದ್ರಗುಪ್ತನಲ್ಲಿ ಕಾದಿರುವದಂ ಕಂಡು, ಚಾಣಕ್ಯನು ತನ್ನ ಮನಸ್ಸಿನಲ್ಲಿ, "ಇಲ್ಲಿ ರಾಜವೈದ್ಯರು ಬಹುಮಂದಿ ಇರುವಲ್ಲಿ ಈತನೊಬ್ಬನು ಮಾತ್ರ ವಿಶೇಷವಾಗಿ ಅರಸನನ್ನನುವರ್ತಿಸುವದಕ್ಕೆ ನಿಮಿತ್ತವೇನು ? ಆಗಲಿ, ಪರೀಕ್ಷಿಸಿದಲ್ಲಿ ದೋಷವಿಲ್ಲದಿದ್ದರೆ ಇವನಂ ಪರಿಗ್ರಹಿಸಬಹುದೆಂ"ದು ನಿಶ್ಚೈಸಿ,

"ಎಲೈ ಪಂಡಿತರೇ, ಹದಿನೈದು ದಿವಸದಾರಭ್ಯ ಚಂದ್ರಗುಪ್ತನ ಶರೀರದಲ್ಲಿ ಉಷ್ಣ

ವೆಗ್ಗಳವಾಗಿ, ಜ್ವರ ಬಂದಂತೆ, ಅನ್ನ ಅರವಚಿಕೆಯಿಂದ ಕಂಗೆಡುತ್ತಲಿದ್ದಾನೆ. ಆತನ ಹಸ್ತವಂ ಪಿಡಿದು ನಾಡಿಗತಿಗಳಂ ನೋಡಿ, ಒಳ್ಳೆಯ ಔಷಧವಂ ಪ್ರಯೋಗಿಸಿ, ಆರೋಗ್ಯ ವಾಗುವಂತೆ ಮಾಡಿರಿ'' ಎಂದು ನೇಮಿಸಲು, ಚಂದ್ರಗುಪ್ತನಂ ನೋಡಿ,

''ಅಯ್ಯ ಅರಸೇ, ಈ ವೈದ್ಯರು ಸಂಪ್ರದಾಯಸ್ಥರು ; ನಿನ್ನ ಶರೀರದ ಆರ್ತಿಯನ್ನು ಸಮಾಧಾನ ಮಾಡ್ಯಾರು. ಹಸ್ತವಂ ತೋರಿಸಿ, ಔಷಧವಂ ತೆಗೆದುಕೋ'' ಎನಲು, ಆ ವೈದ್ಯನು ಚಂದ್ರಗುಪ್ತನ ಹಸ್ತವಂ ಪಿಡಿದು ನೋಡಿ, ''ಪಿತ್ತಾಧಿಕ್ಯದಿಂದ ಅಗ್ನಿದೀಪನ ತಪ್ಪಿ, ಅರವಚಿಗೆ ಉಂಟಾಗಿ ಇದೆ ; ವಿಶೇಷ ಪ್ರಬಲಮಾತ್ರೆಗಳಂ ಪ್ರಯೋಗಿಸಕೂಡದು ; ಕಲ್ಕವಂ ಕೊಟ್ಟು, ಉಪದ್ರ ಸಮಾಧಾನವಂ ಮಾಡುವೆನೆಂ''ದು ಹೇಳಿ ಯೋಗಚೂರ್ಣವಂ ತೆಗೆಯಲು, ಆಗ ಚಾಣಕ್ಯನು ತನ್ನ ಶಿಷ್ಯನಂ ಕರೆದು, ''ನಮ್ಮ ಕಂಥೆಯಲ್ಲಿ ಸಂಗ್ರಹಿಸಿ ಇರುವ ಬಟ್ಟಲಂ ತೆಗೆದು ತಾರೆಂ''ದು ಕಳುಹಿಸಲು, ಆ ಶಿಷ್ಯನು ಹೋಗಿ ವಿಷಚುಂಬಿನೀ ಎಂಬ ಶಿಲೆಯಿಂ ಮಾಡಿದ ಬಟ್ಟಲಂ ತಂದು ಮುಂದಿರಿಸಲು, ಆ ವೈದ್ಯನು ತಿಳಿಯದೆ ಆ ಬಟ್ಟಲಿಗೆ ತನ್ನ ಬಳಿಯ ಚೂರ್ಣವಂ ಹಾಕಿ ಜಲವಂ ಬಿಡಲು, ಆ ಚೂರ್ಣವು ಆ ಶಿಲಾಸ್ಪರ್ಶದಿಂದ ವಿವರ್ಣವಾಗಿ ನೊರೆಗಟ್ಟಿ ಕುದಿದು ಸುತ್ತುತ್ತಲಿರಲು, ಚಾಣಕ್ಯನು ಆ ಬಟ್ಟಲನ್ನು ತಲೆಕೆಳಗಾಗಿ ಮಗುಚಿ ನೋಡಿದರೆ, ಒಂದು ಬಟ್ಟು ಮಾತ್ರವಾದರೂ ಬೀಳದಿರಲು,

''ಎಲೈ ವೈದ್ಯನೇ, ಔಷಧವು ತೀವ್ರವಾಗಿ ಉಪದ್ರ ಶಮನವು ಆಗುವಂತೆ ತೋರುತ್ತ ಲಿದೆ. ಹಾಗಾದರೂ ವೈದ್ಯರಂ ಪಾಚಕರಂ ಪರೀಕ್ಷಿಸದೆ ಪ್ರಭುವಾದವನು ಪರಿಗ್ರಹಿಸನು. ಈ ಔಷಧವಂ ಈಗ ನೀನೇ ತೆಗೆದುಕೋ. ನಿನ್ನ ಶರೀರಕ್ಕೆ ಅನುಗುಣವಾದುದಂ ನೋಡಿ, ನಾಳೆ ಅರಸು ತೆಗೆದುಕೊಂಡಾನು'' ಎಂದು ನೇಮಿಸಲು, ಆ ಮಾತಂ ಮೀರಲಾರದೆ ಆ ಔಷಧವಂ ಆ ವೈದ್ಯನೇ ಸೇವಿಸಲು, ಅವನಂ ಮನೆಗೆ ಕಳುಹಿಸಿ, ಹಿಂದುಗಡೆಯಲ್ಲಿ ದೂತನಂ ಕಳುಹಿಸಿ, ಈ ವೈದ್ಯನ ಮನೆಯ ಬಾಗಿಲಿನಲ್ಲಿ ಮುಹೂರ್ತವಿದ್ದು, ಅಲ್ಲಿಯ ವರ್ತಮಾನವಂ ತಿಳಿದು ಬಂದು ಹೇಳು'' ಎನಲು,

ಆ ದೂತನು ಅದೇ ಮೇರೆಗೆ ಹೋಗಿ ಬಂದು, ''ಆ ವೈದ್ಯನು ಮೃತನಾದನು'' ಎಂದು ಚಾಣಕ್ಯನಿಗೆ ಹೇಳುತ್ತಿರಲು, ''ರಾಕ್ಷಸನ ಕಪಟಾಚರಣೆ ಇಂದಿಗೆ ಮುಗಿದು ಬಂತು'' ಎಂದು ತಿಳಿಯುತ್ತಿರಲು, ಹೀಗೆ ರಾಕ್ಷಸನು ಚಂದ್ರಗುಪ್ತನಿಗೆ ಮಾಡಿದ್ದ ಕಪಟಗಳಿಗೆಲ್ಲ ಪ್ರತೀ ಕಾರವಂ ತಿಳಿದು ಮಾಡಿದ ಚಾಣಕ್ಯನ ಉಪಾಯವಂ ಕಂಡು ಜನರೆಲ್ಲರೂ ಆಶ್ಚರ್ಯ ಪಡುತ್ತಿದ್ದರು.

ಮತ್ತೊಂದು ದಿವಸದಲ್ಲಿ ಚಾಣಕ್ಯನು ತನಗೆ ಆಪ್ತರಾದ ಗೂಢಚಾರರಂ ಕರೆದು, ''ಎಲೈ ಚಾರರುಗಳಿರಾ, ನೀವೆಲ್ಲರೂ ಸಮಯೋಚಿತ ವೇಷಭಾಷೆಗಳಂ ವಹಿಸಿ ಈ ಪುರ ದಲ್ಲಿ ರಾಕ್ಷಸನ ಕಡೆಯವರು ಯಾರು ಇದ್ದಾರೆ, ಅವರು ಯಾರಲ್ಲಿ ಹೋಗಿ ಬರುವರು, ಚಂದ್ರಗುಪ್ತನಿಗೆ ದ್ವೇಷಿಗಳ್ಯಾರು, ಶ್ರೇಯಶ್ಚಿಂತಕರ್ಯಾರು, ರಾಕ್ಷಸನ ಹೆಂಗಸರು ಯಾರಲ್ಲಿ ಇರುವರು, ರಾಕ್ಷಸನು ಯಾವ ದೇಶದಲ್ಲಿ ಇರುವನು, ಏನು ಮಾಡುವನು, ಇದೆಲ್ಲವಂ ತಿಳಿದು ಬಂದು ಹೇಳಿ'' ಎಂದು ಅವರಂ ಕಳುಹಿಸಿ, ಚಂದ್ರಗುಪ್ತನ ಬಳಿಗೆ ಬಂದು,

''ಎಲೈ ಕುಮಾರಕನೇ, ಸುಮ್ಮನಿರಬಾರದು ; ವೃದ್ಧನಾದ ನಿಮ್ಮ ಪಿತಾಮಹನಂ ಕಂಡು

ಬಾರೆಂ"ದೆನಲು, "ಹಾಗೇ ಆಗಲೆಂ"ದು ಚಂದ್ರಗುಪ್ತನು ಹೋಗಿ, 'ತಾನು ಬಂದು ಇದೇನೆಂ'ದು ಕಂಚುಕಿಗಳ ಮುಖದಿಂದ ವೃದ್ಧರಾಯನ ಬಳಿಗೆ ಹೇಳಿ ಕಳುಹಿಸಿ, ಆತನ ಅಪ್ಪಣೆಯಿಂದ ಹೋಗಿ, ತಮ್ಮ ಪಿತಾಮಹನಾದ ವೃದ್ಧರಾಯನಿಗೆ ದಂಡಪ್ರಣಾಮಂಗೈದು, ಶಿರವಂ ಬಾಗಿ ನಿಂತಿರಲು, ಆತನು ಚಂದ್ರಗುಪ್ತನಂ ನೋಡಿ, ಕಂಬನಿಗಳಂ ತುಂಬುತ್ತ,

"ಎಲೈ ಬಾಲಕನೇ, ನೀನಾದರೂ ಆಯುಷ್ಮಂತನಾಗಿ ನನ್ನ ಯಶಸ್ಸಂ ನಡೆಸುವನಾಗು. ನಿನ್ನಂ ನೋಡಲು, ನನ್ನ ಪುತ್ರನಾದ ಮೌರ್ಯನಂ ಕಂಡಂತಾಯಿತು. ನಿನಗೆ ದ್ರೋಹವನ್ನೆಣಿಸಿದವರು ತಮ್ಮ ಗತಿಗೆ ಸಂದರು. ಅದೆಲ್ಲವಂ ಸ್ವಪ್ನದರ್ಶನದಂತೆ ಸ್ಮರಿಸದೆ ಬಿಟ್ಟೆನು. ನಿನಗೆ ನಾನು ದ್ರೋಹವನ್ನೆಣಿಸಿದವನಲ್ಲ. ಯಾವದಂ ಕಿವಿಯಿಂದಲಾದರೂ ಕೇಳಿದವನಲ್ಲ. ಇನ್ನೂ ಅಂತಃಪುರದಲ್ಲಿ ಬಹುಮಂದಿ ಯುವತಿಜನರಿರುವರು ; ನಿನ್ನ ಒಡಹುಟ್ಟಿದವರಂ ಕಂಡಂತೆ ಪಾಲಿಸುತ್ತಲಿರುವನಾಗು. ನಾನು ಮನಸ್ಸು ಬಂದರೆ ಇಲ್ಲಿ ಇರುವೆನು ; ಅಲ್ಲದಿದ್ದರೆ ತಪೋವನವನ್ನೈದುವೆನು" ಎಂದು ಹೇಳುತ್ತಿರುವ ರಾಯನ ವಾಕ್ಯವಂ ಕೇಳಿ,

"ಹೆತ್ತಪ್ಪಾಜಿಯವರೇ, ನಿಮ್ಮ ಪಾದದರ್ಶನವಾದುದರಿಂದ ನನ್ನ ಪಿತೃ ಸೋದರರ ದುಃಖವಂ ಮರೆತೆನು. ಈಗ ಇರುವದೆಲ್ಲವೂ ನಿಮ್ಮ ಭುಜಾರ್ಜಿತವಲ್ಲದೆ, ಮತ್ತೊಬ್ಬರಿಗೆ ಬಾಧ್ಯತೆ ಎಂತು ಉಂಟಾಗುವದು ? ತಮ್ಮ ಆಜ್ಞಾನುಸಾರವಾಗಿ ನಡೆಯುವದಕ್ಕೆ ನಾನು ಪಾತ್ರನಲ್ಲವೇ ? ನೀವು ನನಗೆ ಶ್ರೇಯಸ್ಸಂ ಚಿಂತಿಸುತ್ತ, ಬುದ್ಧಿಮತಿಗಳಂ ಹೇಳುತ್ತ, ಪರಲೋಕಸಾಧನವಾಗಿ ಮನಬಂದುದಂ ವ್ಯಯವಂ ಮಾಡುತ್ತ ಇರಬೇಕಲ್ಲದೆ, ನನಗೆ ಅಪಖ್ಯಾತಿಯನ್ನುಂಟುಮಾಡಿ ತಪೋವನಕ್ಕಭಿಮುಖವಾಗಿ ನೀವು ಸಹ ಹೊರಟು ಹೋದರೆ, ನಿಮ್ಮ ಸನ್ನಿಧಿಯಂ ಬಿಟ್ಟು ನಾನು ಇಲ್ಲಿದ್ದು ಫಲವೇನು ? ಸಂಗಡಲೇ ಬರುವೆನು" ಎಂದು ಹೇಳಿ, ವೃದ್ಧರಾಯನಂ ಒಡಂಬಡಿಸಿ, ಚಂದ್ರಗುಪ್ತನು ತಾನಿದ್ದೆಡೆಗೆ ಬರುತ್ತಲಿದ್ದನು.

ಅತ್ತಲಾಗಿ[೧] ತನ್ನ ದೇಶವಂ ಕುರಿತು ತೆರಳುವ ಮಲಯಕೇತುವಂ ಆತನ ಚಾರನೊಬ್ಬ ಕಂಡು, ವಿರೋಚನನು ಹತವಾದುದಂ ತಿಳುಹಿಸಲು, ಮಲಯಕೇತು ಮಹಾದುಃಖಿತನಾಗಿ ಸಂಗಡ ಬರುತ್ತಿರುವ ಬಾಗುರಾಯಣನಂ ನೋಡಿ, "ಎಲೈ ಮಿತ್ರನೇ, ಖಡ್ಗಘಾಯದಲ್ಲಿ ಬಾಣ ಬಂದು ನೆಟ್ಟುಕೊಂಡಂತೆ ನಮಗೆ ಬಂದ ದುಃಖಪರಂಪರೆಯನ್ನು ನೋಡಿದೆಯಾ? ಕಾಶೀರಾಯನ ನಿಮಿತ್ತವಂ ಮಾಡಿ ನಂದರ ಸಂಹರಿಸಿ, ವಿಷಕನ್ಯಾಮುಖದಿಂದ ತಮ್ಮ ಅಣ್ಣನಾದ ಪರ್ವತರಾಯನನ್ನು ಸಂಹರಿಸಿದನೆಂದು ತಿಳಿದು ಭೀತನಾಗಿ ಓಡಿ ಬಂದವನಾದರೂ ನಮ್ಮ ಚಿಕ್ಕಪ್ಪನಾದ ವಿರೋಚನನು ಪುನಃ ಅದೇ ಚಾಣಕ್ಯನ ಕಪಟವಾಕ್ಯಕ್ಕೆ ಒಳಗಾಗಿ ಅಸುವಂ ಬಿಟ್ಟನೆಂಬುವದು ದೈವಸಂಕಲ್ಪವೇ ಹೊರತು ಮನುಷ್ಯಯತ್ನವುಂಟೇ? ಹೀಗೆ ಸ್ವಜನ ನಾಶವಾದ ಬಳಿಕ ಇನ್ನು ನನಗೆ ರಾಜ್ಯಸುಖವೆಂದರೇನು ? ಇದಲ್ಲದೆ, ಆಪ್ತಮಂತ್ರಿಯಾದ ಶಬರವರ್ಮನು ಶೌರ್ಯವಂ ತೋರಿಸಿ, ನಂದನಿಂದ ಹತವಾದನು. ಅಂತಃಪುರದ ಜನಗಳಿಗೆ ಯಾರ್ಯಾರಿಗೆ ಏನೆಂದು ಹೇಳಲಿ ?" ಎನ್ನುತ್ತ ದುಃಖಿಸು

---

೧. ಅತ್ತಲಾ (ಕ)

ತ್ತಿರಲು, ಆಗ ಬಾಗುರಾಯಣನು ಸಮಯೋಚಿತವಾಕ್ಯಗಳಿಂದ ಮಲಯಕೇತುವಿಗೆ ದುಃಖ ಸಮಾಧಾನವಂ ಮಾಡುತ್ತ, ಆತನ ಪುರಕ್ಕೆ ಕರೆತರುತ್ತಲಿದ್ದನು.

ಹೀಗಿರುತ್ತಿರಲು, ಪಾಟಲೀಪುರದಲ್ಲಿ ಇರುವ ಚಾಣಕ್ಯರಿಗೆ ಒಬ್ಬ ಗೂಢಚಾರನು ಬಂದು ಕೈ ಮುಗಿದು, "ಸ್ವಾಮಿ, ಚಂದ್ರಗುಪ್ತನಿಗೆ ಶಯನಗೃಹದಲ್ಲಿ ಕಪಟವಂ ರಚಿಸಿದ್ದ ಭವನಪಾಲಕನೆಂಬುವನು ಮುನಹಳ್ಳಿ ತೋಟದಲ್ಲಿ ಜೀತಗಾರನಂತೆ ವೇಷವಂ ಧರಿಸಿ, ಆ ಆಳುಗಳ ಸಂಗಡ ಗಿಡಗಳಿಗೆ ನೀರು ಎತ್ತುತ್ತಲಿದಾನೆ" ಎನಲು, ಅದಂ ಕೇಳಿ, "ಅವನಂ ಕರೆತನ್ನಿ" ಎಂದು ಭಟರಂ ಕಳುಹಿಸಲು, ಅವರು ಹೋಗಿ ಅವನಂ ಹಿಡಿದು ಕಟ್ಟಿತಂದು ಚಾಣಕ್ಯರ ಮುಂದೆ ನಿಲ್ಲಿಸಲು, ಅವನಂ ನೋಡಿ,

"ಎಲೈ ದುರ್ಬುದ್ಧಿಯಾದ ಭವನಪಾಲಕನೇ, ನೀನು ಚಂದ್ರಗುಪ್ತನಿಗೆ ಮಾಡಿದ ದ್ರೋಹವಂ ಇದ್ದದ್ದು ಇದ್ದಂತೆ ಹೇಳಿದರೆ ಪ್ರಾಣಸಮೇತನಾಗಿ ಉಳಿಯುವೆ" ಎನಲು, ಅವನು ಗಡಗಡನೆ ನಡುಗುತ್ತ, "ಸ್ವಾಮಿ ನನಗೆ ಚಂದ್ರಗುಪ್ತನಲ್ಲಿ ದ್ವೇಷವೆಂಬುವದು ಇಲ್ಲ. ಅನ್ನ ವಸ್ತ್ರವಂ ಕೊಟ್ಟು ಪೋಷಕನಾದ ರಾಕ್ಷಸನು ನೇಮಿಸಿದಂತೆ ಶಯನಗೃಹದಲ್ಲಿ ಕಪಟವಂ ರಚಿಸಿದ್ದು ಉಂಟು. ಚಿತ್ತಕ್ಕೆ ಬಂದಂತೆ ಮಾಡಬಹುದು" ಎನಲು, ಹಾಗಾದ[೧]ರೆ[೧] ರಾಜಗೃಹದ ರಹಸ್ಯವು ನಿನಗೆ ತಿಳಿದಿರುವದಷ್ಟೆ. ರಾಕ್ಷಸನು ಇಲ್ಲಿಂದ ಜನಗಳಿಗೆ ತಿಳಿಯದಂತೆ ಯಾವ ಮಾರ್ಗದಿಂದ ಹೋದನು ? ಅದಂ ಹೇಳಿದರೆ ನಿನ್ನ ಅಪರಾಧವಂ ಕ್ಷಮಿಸುವೆನು" ಎನಲು, "ರಹಸ್ಯವಾದರೆ ಹೇಳುವೆನು" ಎನಲು, ಹಾಗೇ ರಹಸ್ಯದಲ್ಲಿ ಕೇಳಲು,

"ಸ್ವಾಮಿ, ಅಂತಃಪುರದ ಸುರಂಗದಿಂದ ಹೊರ ಉದ್ಯಾನದ ಸೀಗೇಬೇಲಿಗೆ ಹೋಗುವ ಮಾರ್ಗದ ಬಾಗಿಲಿನಿಂದ ಹೊರಟುಹೋದನು. ಇದು ಸತ್ಯವು" ಎನಲು ಅದಂ ಕೇಳಿ, ಅವನಂ ಬಿಟ್ಟು ಕಳುಹಿಸಿ, ರಹಸ್ಯದಲ್ಲಿ ಕಳ್ಳಬಂಟರಂ ಕರೆದು,

"ಎಲೈ ಚೋರರುಗಳಿರಾ, ಉದ್ಯಾನದ ಸೀಗೇಬೇಲಿಯಲ್ಲಿ ಸುರಂಗದ ಬಾಗಿಲಿರುವದು. ಆ ಬಳಿಯಲ್ಲಿ ನೀವು ಅಡಗಿ ಇದ್ದು, ಯಾರಾದರೂ ಒಳಗಿನಿಂದ ಬಂದರೆ, ಅವರು ಎಲ್ಲಿಗೆ ಹೋಗುವರು, ತಿಳಿದು ಬಂದು ಹೇಳಿ" ಎಂದು ನೇಮಿಸಿ ಕಳುಹಿಸಿ, ಆಸ್ಥಾನಕ್ಕೆ ಹೋಗಿ ರಾಜಸನ್ನಿಧಿಯಲ್ಲಿ ಹೊಗಳುವ ವಂದಿಮಾಗಧರಂ ಕರೆದು,

"ಎಲೈ ಭಟರುಗಳಿರಾ, ಈ ದಿವಸ ಚಂದ್ರಗುಪ್ತನ ಶೌರ್ಯವನ್ನೇ ಅಧಿಕವಾಗಿ ಹೊಗಳುವರಾಗಿ" ಎಂದು ನೇಮಿಸಿ ಕಳುಹಿಸಲು, ಅವರು ರಾಜಗೃಹಸಮೀಪದ ಹಜಾರದಲ್ಲಿ ಕುಳಿತು ಸಾಮಂತ ನರಪತಿಗಳು ಕಳುಹಿಸಿದ ಪಗುದಿಗಳಂ ವಿಚಾರಿಸುತಲಿರುವ ಚಂದ್ರಗುಪ್ತನ ಮುಂದೆ ನಿಂತು, ಸ್ತುತಿಪದ್ಯಗಳಿಂದ ಕೈಗಳಂ ನೀಡಿ ಹೊಗಳುತ್ತಿದ್ದರು : "ಜಯ ವೈರಿದಲ್ಲಣನೇ, ರಾಜಚೂಡಾಮಣಿಯೇ, ನಂದನಿತಂಬಿನೀಸೌಮಾಂಗಲ್ಯವಂ ಸೂರೆಗೊಂಡವನೇ" ಎಂದು ಒಬ್ಬ ಮಾಗಧನು, "ಜಯ ಕುರುವಂಶಾಬ್ಧಿಚಂದ್ರನೇ, ನಂದಗಜಕಂಠೀರವನೇ, ಚಂದ್ರಗುಪ್ತ ಮಹಾರಾಯನೇ" ಎಂದು ಒಬ್ಬ ವಂದಿಯು, "ಜಯ ಮೌರ್ಯಕುಲತಿಲಕನೇ, ನಂದಕುಲವನದಾವಾನಲನೇ" ಎಂದು [ಕೂಡಿ] ಹೊಗಳುತ್ತಿರಲು, ಆ

---

೧. ರೆ ನೀನು (ಕ, ಖ, ಗ)

ಧ್ವನಿಯಂ ಕೇಳಿ ಸರ್ವಾರ್ಥಸಿದ್ಧಿರಾಯನು ಮನದಲ್ಲಿ ಮಹಾವ್ಯಸನಗೊಂಡು, ತನ್ನ ಪತ್ನಿಯಾದ ಸುನಂದಾದೇವಿಯಂ ಕುರಿತು,

"ಎಲೈ ರಾಣಿಯೇ, ನಾನು ಸಕಲರಾಯರಿಗೆ ಮೇಟಿಯಾಗಿ ಬದುಕಿ, ಈಗ ಶೂರರಾದ ಪುತ್ರರಂ ಹೋಗಲಾಡಿಸಿಕೊಂಡು, ಈ ನೀಚನ ಕೈಕೂಳಿಗೆ ಬಾಯಿತೆರೆದು, ದೀನನಾಗಿ ಈ ಪರುಷವಾಕ್ಯವಂ ಕೇಳುತ, ಉಕ್ಕಿಬರುವ ಕ್ಲೇಶವನ್ನನುಭವಿಸುತ, ನಾಯಿಗಳ ಹಿಂಡಿಗೆ ಸಿಕ್ಕಿ ಹಲ್ಲು ಕಿರಿಯುತಲಿರುವ ವಾನರನಂತೆ ಇಲ್ಲಿ ಇರುವದಕ್ಕಿಂತಲೂ ಪರಮಪಾವನಮಾದ ಗಂಗಾತರಂಗಶೀಕರಗಳಿಂ ಸಂಗತಮಾಗಿ ಮಹಾಮುನಿಜನಚರಣಾರವಿಂದರೇಣುಗಳಿಂ ಪವಿತ್ರತಮವಾದ ತಪೋವನದಲ್ಲಿ ವಾಸವಂ ಮಾಡುತ, ಅಲ್ಲಿಯ ಕಂದಮೂಲಾಶನದಿಂ ತೃಪ್ತನಾಗುತ, ತಪೋಧನದರ್ಶನದಿಂ ಸಕಲಕ್ಲೇಶವಂ ಮರೆಯುತ ಈ ಜನ್ಮವಂ ಕಳೆದರೆ ಅದೇ ಪುರುಷಾರ್ಥವು. ಇಲ್ಲಿಂದ ತಪೋವನಕ್ಕೆ ಹೋಗುವೆನು. ನೀನು ಚಂದ್ರಗುಪ್ತನ ನ್ನನುವರ್ತಿಸಿ ಜೀವಿಸುತ ಇರುವಳಾಗು. ಎಲ್ಲ ದುಃಖಕ್ಕಿಂತಲೂ ಶೀತೋಷ್ಣಸಹನ ದುಃಖವು ದುಸ್ಸಹವಾಗಿ ಇರುವದು. ಅರಣ್ಯದಲ್ಲಿ ಮತ್ತೂ ಅತಿದುಸ್ಸಹವಾದುದರಿಂದ ನಿನ್ನಿಂದ ಸಹಿಸಲಶಕ್ಯವು" ಎಂದು ಹೇಳುತ್ತಿರುವ ಪತಿಯ ವಾಕ್ಯವಂ ಕೇಳಿ,

"ರಾಜಾಧಿರಾಜನೇ, ಶ್ರೀಮಂತನಾದ ನಿನಗೆ ವನವಾಸದುಃಖ ಸಹನವಾದ ಬಳಿಕ ಪಾಪಿಷ್ಠವಾದ ಈ ಸ್ತ್ರೀಜನ್ಮಕ್ಕೆ ಅಸಹನವೆಂತಾಗುವದು ? ಚಂದ್ರನಂ ಚಂದ್ರಕಾಂತಿ ಹೊಂದುವಂತೆ ನಿನ್ನ ಸಂಗಡಲೇ ಬರುವೆನಲ್ಲದೆ ಈ ದುಃಖಕೂಪದಲ್ಲಿ ನಾನೆಂತು ವಾಸವಂ ಮಾಡುವೆನು ? ನಿಮ್ಮ ಚರಣಸೇವೆಯಂ ಮಾಡುತ, ಮುನಿಪತ್ನಿಯರ ಪುಣ್ಯ ಕಥಾಶ್ರವಣದಿಂ ಸಕಲಕ್ಲೇಶವಂ ಮರೆಯುತ, ಈ ಜನ್ಮವಂತರಿಸುವೆನಲ್ಲದೆ ಸರ್ವಥಾ ಇಲ್ಲಿ ಇರತಕ್ಕವಳಲ್ಲ" ಎಂದು ಹೇಳಲು, "ಆದರೆ ನಿನ್ನ ಮನಕ್ಕೆ ಬಂದಂತೆ ಮಾಡು" ಎಂದು ರಾಯನು ಹೇಳಲು, ಆ ದೇವಿಯ ಚೇಟಿ ಒಬ್ಬಳು ಬಂದು, ದೂರದಲ್ಲಿ ನಮಸ್ಕರಿಸಿ ನಿಂತು,

"ಅಮ್ಮಣ್ಣಿಯವರೇ, ಬಾಲ್ಯ ಮೊದಲುಗೊಂಡು ನಿಮಿಷವಾದರೂ ನಾನು ನಿಮ್ಮ ನ್ನಗಲಿ ಇದ್ದವಳಲ್ಲ. ನಿಮ್ಮ ಪಾದಸೇವೆಯಂ ಮಾಡಿಕೊಂಡು, ಫಲಪರ್ಣಗಳಿಂದ ಜೀವಿ ಸುತ, ನಿಮ್ಮ ಸನ್ನಿಧಿಯಲ್ಲಿ ಸುಖವಾಗಿ ಇರುವೆನಲ್ಲದೆ ಅನಾಥಳಾಗಿ ಎಲ್ಲಿ ಹೋಗಲಿ? ಸಂಗಡಲೇ ಅಪ್ಪಣೆಯಾಗಬೇಕು" ಎನಲು, ಆ ದೇವಿಯು "ಹಾಗೇ ಆಗಲಿ" ಎನಲು,

ಅಷ್ಟರಲ್ಲಿಯೇ ಬೀಸಣಿಗೆಯಂ ಬೀಸುವ ಭೃತ್ಯನೊಬ್ಬನು ರಾಯನಿಗೆ ಅಡ್ಡಬಿದ್ದು, ಕೈಮುಗಿದು, "ಬುದ್ಧೀ, ಸೂತಿಕಾಗೃಹದಲ್ಲಿ ಮಾತೃವಿಯುಕ್ತನಾದ ಶಿಶುವಾದ ನನ್ನಂ ಪೋಷಣೆಗೈಸಿ, ಇಷ್ಟು ದಿವಸವೂ ಪಾದಸೇವೆಯಲ್ಲೇ ಇರುತ, [ಈಗ] ತಮ್ಮ ವಿಯೋಗ ಕ್ಲೇಶವ ನ್ನನುಭವಿಸುತ ದೀನನಾಗಿ ಮತ್ತೊಬ್ಬರ ಸೇವೆಯಂ ಏನೆಂದು ಮಾಡಲಿ ? ದೇವರ ಸಂಗಡಲೇ ಬರುತ, ಕಂದಮೂಲಗಳಂ ಒದಗಿಸುತ, ಹಗಲಿರುಳಲ್ಲಿ ಮೃಗಾದಿಬಾಧೆ ಯಿಲ್ಲದಂತೆ ಜಾಗ್ರತೆಯಿಂದ ಶಸ್ತ್ರವಂ ಪಿಡಿದು ಕಾವಲಾಗಿರುತ, ಪರ್ಣಶಾಲೆಯಂ ರಚಿಸುತ, ಚರಣಸನ್ನಿಧಿಯಲ್ಲಿ ಇರುವೆನಲ್ಲದೆ ಮತ್ತೊಬ್ಬರಂ ಹೊಂದುವನಲ್ಲ" ಎಂದು ಬೀಸಣಿಗೆಯ ಭೃತ್ಯನು ಹೇಳುತ್ತಿರಲು, ಸೇವೆಗೆ ಒಬ್ಬನಿರಬೇಕೆಂದು ತಿಳಿದು, ಆ ರಾಯನು ಅವನಿಗೆ 'ಹಾಗೇ ಆಗಲಂ'ದು ನೇಮಿಸಲು,

ಅಷ್ಟರಲ್ಲಿಯೇ ಅರುಣೋದಯ ಸಮಯವಾಗಲು, ಸುನಂದಾದೇವಿಯು ತಾನು ಪೂಜೆಗೈಯುವ ಗೌರಿಯಂ ತೆಗೆದುಕೊಂಡು, ಮಲಿನವಾದ ವಸ್ತ್ರವಂ ತುಂಬ ಮುಸುಕಿಟ್ಟು ಕೊಂಡು ಹೊರಡುವದಕ್ಕೆ ಚೇಟಿಸಮೇತವಾಗಿ ಜನರಿಗೆ ತಿಳಿಯದಂತೆ ಬಂದು ನಿಲ್ಲಲು,

ಆಗ ರಾಯನು ತನ್ನ ಖಡ್ಗ ಧನುಸ್ಸನ್ನು ಆ ಭೃತ್ಯನ ಕೈಯಲ್ಲಿ ಕೊಟ್ಟು, ಪೂಜೆಗೈವ ಶಿವಲಿಂಗ ಸಂಪುಟವಂ ತೆಗೆದುಕೊಂಡು, ನಿಶ್ಚಿಂತನಾಗಿ ಅಂತಃಪುರದ ಸುರಂಗಮಾರ್ಗ ದಿಂದ ಪತ್ನೀಸಮೇತನಾಗಿ ಹೊರಟು, ರಾಜಮಾರ್ಗವಂ ಬಿಟ್ಟು ಮಾರ್ಗವಿಲ್ಲದ ಅರಣ್ಯ ದಲ್ಲಿ ಹೋಗುತ್ತಿರಲು, ಮೊದಲು ಚಾಣಕ್ಯರಿಂದ ನೇಮಿಸಿ ಸುರಂಗದ ಬಳಿಯಲ್ಲಿ ಅಡಗಿದ್ದ ಚೋರರು ಈ ನಾಲ್ವರು ಅರಣ್ಯಕ್ಕೆ ತೆರಳುವದಂ ನೋಡಿ ಬಂದು, ಚಾಣಕ್ಯರಂ ಕಂಡು, ಕೈಮುಗಿದು,

"ಸ್ವಾಮೀ, ಈ ದಿವಸ ಅರುಣೋದಯ ಸಮಯದಲ್ಲಿ ಎಲ್ಲಿಯಿಂದಲೋ ಉದ್ಯಾನದ ಬೇಲಿಯಲ್ಲಿ ಬರುವ ಸುರಂಗದ ಬಾಗಿಲಿನಿಂದ ಒಬ್ಬ ವೃದ್ಧನೂ ಒಬ್ಬ ಸ್ತ್ರೀಯೂ ಒಬ್ಬ ಚೇಟಿಯೂ ಆಯುಧಸಮೇತನಾದ ಒಬ್ಬ ಬೀಸಣಿಗೆಯವನೂ ಈ ನಾಲ್ವರೂ ಹೊರಟು ರಾಜಮಾರ್ಗವಂ ಬಿಟ್ಟು ಅರಣ್ಯದಲ್ಲಿ ನಡೆಯುತ, ನೈಮಿಷಾರಣ್ಯಕ್ಕೆ ಅಭಿಮುಖವಾಗಿ ಹೋಗುತ್ತಲಿದಾರೆ. ಚಿತ್ತಕ್ಕೆ ತಿಳಿದಿರಬೇಕೆಂದು ಬಿನ್ನೈಸಿದೆವು" ಎಂದು ಚೋರರು ಹೇಳಲು, ಅದಂ ಕೇಳಿ ಚಾಣಕ್ಯನು ತನ್ನ ಮನಸ್ಸಿನಲ್ಲಿ,

"ಈಗ ಸರ್ವಾರ್ಥಸಿದ್ಧಿಯು ಇಲ್ಲಿ ನಿಲ್ಲಲಾರದೆ ಪತ್ನೀಸಮೇತನಾಗಿ ತಪೋವನವಂ ಹೊಂದುವನು. ಈ ವೃತ್ತಾಂತವಂ ರಾಕ್ಷಸ ಕೇಳಿದರೆ, ಈ ವೃದ್ಧನಿದ್ದೆಡೆಗೆ ಬಂದು, ಅವನಿಗೆ ಬೋಧಿಸಿ, ಕುಲೀನರಾದ ಅರಸುಗಳಲ್ಲಿ ಒಂದು ಶಿಶುವನ್ನಾದರೂ ತಂದು ಆ ವೃದ್ಧನಿಗೆ ದತ್ತಪುತ್ರನನ್ನಾದರೂ ಮಾಡಿ, ಆ ಬಳಿಕ ನಮ್ಮಂತೆ ಯಾವ ಅರಸನ್ನಾದರೂ ಆಶ್ರಯಿಸಿ, ದಂಡೆತ್ತಿ ಬಂದು, ಚಂದ್ರಗುಪ್ತನಲ್ಲಿ ಇರುವ ದ್ವೇಷವಂ ಸಾಧಿಸಿ, ನಂದವಂಶವು ಪುನಃ ಅಂಕುರಿಸಿತೆಂದು ಹೇಳುತ, ಆ ಸ್ವೀಕೃತಪುತ್ರನಿಗಾದರೂ ರಾಜ್ಯಾಧಿಪತ್ಯವನ್ನುಂಟು ಮಾಡುವನಲ್ಲದೆ ಸುಮ್ಮನಿರಲಾರನು. ಅದರಿಂದ ಚಂದ್ರಗುಪ್ತನ ರಾಜ್ಯವು ನಿಷ್ಕಂಟಕ ವಾಗುವದಕ್ಕೆ ಈಗಲೇ ಆ ವೃದ್ಧರಾಯನನ್ನು ಆ ತಪೋವನದಲ್ಲಿ ಸಂಹಾರಗೈಸಬೇಕೆಂ"ದು ನಿಶ್ಚೈಸಿ, ದೂತನ ಮುಖವಂ ನೋಡಿ,

"ಎಲೈ, 'ಚಂದ್ರಗುಪ್ತನು ದರ್ಶನಕ್ಕೆ ಬರುವನು. ವೃದ್ಧರಾಜ ರಾಜದಂಪತಿಗಳ ಸಮಯವೇನೆಂ'ದು ಅಂತಃಪುರದ ಕಂಚುಕಿಯಂ ಕೇಳಿ ಬಾರೆ"ನಲು, "ಬುದ್ಧೀ" ಎಂದು, ಆ ದೂತನು ಹೋಗಿ ಅಂತಃಪುರದ ಕಂಚುಕಿಯಂ ಅದೇ ರೀತಿಗೆ ಕೇಳಲು, ಆ ವೃದ್ಧ ಕಂಚುಕಿಯು ಅಂತಃಪುರಕ್ಕೆ ಹೋಗಿ, ಸರ್ವತ್ರ ಹುಡುಕಿ, ಅಲ್ಲಿ ರಾಜದಂಪತಿಗಳು ಇಲ್ಲದುದಂ ತಿಳಿದು, "ನಾನೇ ಬಂದು ತಿಳಿಸುವೆನೆಂ"ದು ಬಂದು, ಆ ವೃದ್ಧಕಂಚುಕಿಯು ಚಾಣಕ್ಯರಿಗೆ ಕೈಮುಗಿದು,

"ಸ್ವಾಮೀ, ಅಪ್ಪಣೆ ಬಂದ ಮೇರೆಗೆ ಅಂತಃಪುರದಲ್ಲಿ ಗೋಷ್ಪಾದಮಾತ್ರವೂ ಉಳಿಯ ದಂತೆ ಹುಡುಕಿ ನೋಡಿದರೂ ರಾಜದಂಪತಿಗಳು ಅಲ್ಲಿ ಸರ್ವಥಾ ಇಲ್ಲ. ಒಬ್ಬ ಚೇಟಿಯೂ ಇಲ್ಲ ; ಬೀಸಣಿಗೆಯವನೂ ಕಾಣುವದಿಲ್ಲ. ಬಾಗಿಲಿನಲ್ಲಿ ಬಂದುದೇ ಇಲ್ಲ. ಈ ಅರ್ಥವಂ ತಿಳಿದು ಅಂತಃಪುರದ ಸ್ತ್ರೀಜನರು ಮತ್ತೂ ದುಃಖಪಡುತ್ತಿದಾರೆ. ಏನು ವಿಚಿತ್ರವೋ !

ಸ್ವಾಮಿಯ ಚಿತ್ತಕ್ಕೆ ವೇದ್ಯವಾಗಬೇಕು" ಎಂದು ವೃದ್ಧಕಂಚುಕಿಯು ಹೇಳುತ್ತಿರಲು, ಚಾಣಕ್ಯನು 'ವೃದ್ಧರಾದ ರಾಜದಂಪತಿಗಳು ಅಂತಃಪುರದಲ್ಲಿ ಇಲ್ಲದಿದ್ದ ಬಳಿಕ ಚೋರರು ಹೇಳಿದ ವಾಕ್ಯವು ಅನೃತವಲ್ಲವೆಂ'ದು ಮನದಲ್ಲಿ ನಿಶ್ಚೈಸಿ,

"ಎಲೈ ವೃದ್ಧಕಂಚುಕಿಯೇ, ಅಂತಃಪುರದ ಕಾವಲಿನಲ್ಲೇ ಎಂದಿನಂತೆ ಇರುವನಾಗು. ನಾವು ವಿಚಾರಿಸುತ್ತಲಿದೇವೆ" ಎಂದು ಹೇಳಿ, ಅವನಂ ಕಳುಹಿಸಲು, ಆಗ ರಹಸ್ಯದಲ್ಲಿ ಮೊದಲು ಹೇಳಿದ ಚೋರರಂ ಕರೆದು, "ಎಲೈ ಚೋರರುಗಳಿರಾ, ಆಶ್ರಮಮಾರ್ಗದಲ್ಲಿ ನೀವು ನೋಡಿದವನೇ ವೃದ್ಧನಾದ ಸರ್ವಾರ್ಥಸಿದ್ಧಿಯು. ನೀವು ಅಲ್ಲಿಗೆ ಹೋಗಿ, ಕಾಣದಂತೆ ವಾಸವಂ ಮಾಡಿಕೊಂಡು ಇದ್ದು, ಶಸ್ತ್ರರಹಿತನಾಗಿ ಏಕಾಕಿಯಾಗಿ ಇದ್ದ ಸಮಯವಂ ನೋಡಿ ಆತನಂ ಸಂಹರಿಸಿ ಬಂದು ನಮಗೆ ಹೇಳಿ" ಎಂದು ನೇಮಿಸಿ ಆ ಚೋರರಂ ಕಳುಹಿಸಲು, ಅವರು ನೈಮಿಷಾರಣ್ಯ[ದ] ಬಳಿವಿಡಿದು ವೃದ್ಧರಾಯನಂ ಹುಡುಕುತ್ತ ಬರುತ್ತಿದ್ದರು.

ಹೀಗಿರುತ್ತಿರಲು, ಮತ್ತೆ ಕೆಲವು ದಿವಸದ ಮೇಲೆ ಆ ರಾಯನು ನೈಮಿಷಾರಣ್ಯವಂ ಕುರಿತು ತೆರಳುತ್ತ, ಗಂಗಾನದಿಯಂ ಸುತ್ತುವರಿದು, ಅತಿನೀಲಮಾಗಿ ಸೂರ್ಯಪ್ರಭೆಗೆ ಅವಕಾಶಮಾಗದ ನಿಶಾಸಮಯದಂತೆ ಕಂಗೊಳಿಸುವ ಆಶ್ರಮವಂ ದೂರದಿಂದಲೇ ನೋಡಿ, ತನ್ನ ಪತ್ನಿಯಾದ ಸುನಂದಾದೇವಿಯಂ ಕುರಿತು,

"ಎಲೈ ರಾಣಿಯೇ, ಇದೆಕೋ, ಮಹಾಮುನಿಗಳ ಆಶ್ರಮವು ಕಾಣಿಸುತ್ತಲಿದೆ. ಜನರ ಭಯವಂ ಬಿಟ್ಟು, ಹರಿಣಸಮೂಹವು ಪೂರ್ವಪರಿಚಯವುಳ್ಳವಂತೆ ಸಮೀಪಕ್ಕೆ ಬರುವವು. ನದಿಯಿಂದ ಆಶ್ರಮವಂ ಹೊಂದಿದ ಋಷಿಗಳ ವಲ್ಕಲಾಂಚಲಗಳಿಂ ನಿಸ್ಯತಮಾದ ಜಲಧಾರೆಗಳಿಂದಾರ್ದ್ರಿತಮಾದ ಮಾರ್ಗವು ಇದೇ ಆಶ್ರಮವೆಂದು ತೋರಿಸುವಂತೆ ಕಂಗೊಳಿಸುವದು. ಬಹು ಕುಸುಮ ಫಲಸಮೃದ್ಧಮಾದ ತಮಾಲ ಕೃತಮಾಲ ತಾಲ ಹಿಂತಾಲ ವಕುಳ ಪುನ್ನಾಗ ಚಂಪಕ ಸಾಲ ಲೋಧ್ರ ಲವಂಗ ಚಂದನ ಪೂಗ ನಾಳಿಕೇರ ಕರ್ಕಂಧು ಕಪಿತ್ಥ ಪ್ರಿಯಾಳ ಪನಸ ಕದಳೀ ದಾಡಿಮ ಮುಖ್ಯವಾದ ವೃಕ್ಷಸಮೂಹವು ನಮ್ರಮಾದ ಶಿಖಾಗ್ರಗಳಿಂ ಛಾಯವನ್ನಾಶ್ರಯಿಸಿ ಅಜಗರವೃತ್ತಿಯನ್ನವಲಂಬಿಸಿ ಶಯನವಂ ಮಾಡಿ ಇರುವ ಪರಮಹಂಸರ ವದನಗಳಿಗೆ ಫಲಗಳನ್ನರ್ಪಿಸುತ್ತ, ಪಲ್ಲವಾಂಜಲಿಗಳಿಂ ಪುಷ್ಪನಿಕರವನ್ನರ್ಪಿಸುವಂತೆ, ಉನ್ಮದಶುಕಶಾರಿಕಾಮಧುಕರರವಕೋಲಾಹಲಗಳಿಂ ತಮ್ಮ ಜಡಜನ್ಮವಂ ಪರಿಹರಿಸಬೇಕೆಂದು ಬೇಡಿಕೊಂಬ ಮುಮುಕ್ಷುಗಳಂತೆ ಕಂಗೊಳಿಸುವವು" ಎಂದು ಮುಂದೆ ತೆರಳುತ್ತ,

"ಇದೆಕೋ, ವೇದಗಳೇ ತೇಜೋಮಯಮೂರ್ತಿಗಳಾಗಿ ಸಂಚರಿಪಂತೆ ಅವಿಚ್ಛಿನ್ನಾಧ್ಯಯನದಿಂ ಮುಖರಿತರಾಗಿ, ಫಲಪುಷ್ಪಸಮಿತ್ಕುಶಗಳಂ ಪಿಡಿದು, ಅನುಸರಿಸಿ ಬರುವ ಹರಿಣಶಿಶುಗಳಿಂ ಕೂಡಿ ತೆರಳುತಲಿರುವ ಋಷಿಪುತ್ರನಿಕರವು ನೇತ್ರಜಾಡ್ಯವಂ ಪರಿಹರಿಸುವದು. ಕ್ರತುಶಾಲೆಯಿಂದವಿರತಮಾಗಿ ಹೊರಹೊಮ್ಮುತ್ತ ಆಜ್ಯಾಹುತಿಪರಿಮಳದಿಂ ಕೂಡಿದ ಹೋಮಧೂಮ ಪಂಕ್ತಿಗಳು ಅಂತರಿಕ್ಷವನ್ನಡರಿ ಸ್ವರ್ಗಮಾರ್ಗಸೋಪಾನ ಪರಂಪರೆಯೋ ಎಂಬಂತೆ ನೋಡುವರ ದುರಿತವಂ ಪರಿಹರಿಸುವುದು.

ಮತ್ತೊಂದು ಎಡೆಯೊಳು, ಅಮೃತಚರುಗಂಧವಂ ದೂರದಿಂದಾಘ್ರಾಣಿಸುತ, ಅರ್ಧ

ಪಕ್ವಪುರೋಡಾಶಪರಿಮಳದಿಂ ಪ್ರಮುದಿತರಾದ ಅತಿಥಿವರ್ಗಂಗಳು ಗುಂಪುಗುಂಪಾಗಿ ಪರ್ಣಶಾಲೆಗಳಂ ಪ್ರವೇಶಿಸುವರು.

ಮತ್ತೊಂದು ಕಡೆಯಲ್ಲಿ, ಋಷಿವಟುಗಳಿಗೆ ತಮ್ಮ ಶೃಂಗಗಳಿಂ ಕೆದಕಿ ಕಂದಮೂಲಗಳಂ ಕೊಡುವ ಹರಿಣಗಳಂ, ಹೇಳಿದಂತೆ ಜಲಗಳಂ ಗ್ರಹಿಸಿ ಪುಷ್ಕರಾಗ್ರದಿಂ ಪುಷ್ಪಲತೆಗಳಿಗೆ ಸೇಚನಂಗೈವ ಕರಿಕಲಭಗಳಂ, ಋಷಿಕುಮಾರರಿಂ ಪ್ರಾರ್ಥಿತವಾಗಿ ವೃಕ್ಷಮೂಲಂಗಳಿಗೆ ತಮ್ಮ ಮುಖದಿಂದಗತೆಯಂ ಮಾಡುವ ವನವರಾಹಗಳಂ, ಪರಿಚಿತರಾದ ಋಷಿಸಂಘದ ಹೋಮಾಗ್ನಿಗಳಂ ತಮ್ಮ ಪಕ್ಷಮಾರುತಗಳಿಂ ಪ್ರಜ್ವಲನಂಗೈವ ಮಯೂರನಿಕರಗಳಿಂ, ಅವಿರತಶ್ರವಣಗೃಹೀತ ವಷಟ್ಕಾರರವ ಮನೋಹರವಾದ ಶುಕಕುಲಗಳಂ, ಅನೇಕಶಾರಿಕೋದ್ಘುಷ್ಯಮಾಣ ರಥಂತರಸಾಮವಂ ಕಲಿಯಲಿಚ್ಛೈಸಿರುವ ಪಕ್ಷಿವಿಶೇಷಗಳಂ, ಮೃಗೀಜಿಹ್ವಾಪಲ್ಲವದಿಂ[ದಿರುವೆಗಳಂ] ನೆಕ್ಕುವ ಋ[ಕ್ಷ]ಶಾಬಕಗಳಂ, ಮಹಾಮುನಿ ಸಾನ್ನಿಧ್ಯದಿಂ ಸ್ವಾಭಾವಿಕವೈರವಂ ಬಿಟ್ಟು ಇಂದೀವರದಂತೆ ತೋರುತಲಿರುವ ಮಯೂರಬರ್ಹಿಗಳಂ [ನೋಡಿ] ದೂರ್ವಾಸಮೂಹಭ್ರಾಂತಿಯಿಂದ ಹೋಗುವ ಪನ್ನಗಗಳಂ, ವ್ಯಾಘ್ರಶಿಶುಗಳೊಡನಾಡುವ ಗೋವತ್ಸಗಳಂ, ಮೃಣಾಳಮೂಲವೆಂದು ಕೇಸರಿಯ ಪುಚ್ಛವಂ ಸೆಳೆವ ಕರಿಕಲಭಗಳಂ ನೋಡಿ ಸುಮ್ಮನಿರುವ ಸಿಂಹಕದಂಬವಂ,

ಮತ್ತೊಂದೆಡೆಯೊಳು ವಾಯುಸಹಾಯಮಿಲ್ಲದೆ ತೂಗುತಲಿರುವ ವನದೇವತಾಯೋಗ್ಯಗಳಾದ ಡೋಲಾಲತೆಗಳಂ, ಚಮರೀವಾಲಸಮೂಹದಂತೆ ಅತಿಧವಳಮಾಗಿ ಭೂಮಿಯಲ್ಲಿ ಮಂಡಲಾಕಾರಮಾಗಿ ಜೋಲುವ ಮುನಿಜಟಾಭಾರದಲ್ಲಿ ಗೂಡುಗಳಂ ಕಟ್ಟಿ ವಿಹರಿಪ ಟಿಟ್ಟಿಭಯುಗ್ಮಂಗಳಂ, ಒಂದೆಡೆಯೊಳು ಶಿಷ್ಯರಿಂ ಸಮರ್ಪಿಸುವ ನೀವಾರದಿಂ ಪ್ರಾಣವಂ ಧರಿಸಿರುವ ದಂತೋಲೂಖಲರಂ, ವತ್ಸಗಳ ಕಟವಾಯಿಗಳಿಂ ಬೀಳುವ ಕ್ಷೀರಫೇನಗಳಿಂ ಜೀವಿಸುವ ಫೇ[ನ]ಪರಂ, ಎಂದಿಗೂ ಚಲಿಸದೆ ಭೂಮಿಯಂತಿಪ್ಪ ಸಮಾಧಿನಿಷ್ಠರಾದ ಮಹಾಮುನಿಗ[೧]ಳಂ [ನೋಡು]

ಈ ಮಹಾತ್ಮರಿಂದಲೇ ಭೂಮಿಯು ಚಲಿಸದೆ ಇರುವದು ; ವಾಯುವು ಮಿತವಾಗಿ ಬೀಸುವದು, ಸಮುದ್ರವು ಮೇರೆತಪ್ಪಲಾರದು. ಕಾಲಚಕ್ರವು ನಿಲ್ಲದೆ ತಿರುಗುತಲಿರುವದು. [ಇವರು] ಧರ್ಮಗಳಿಗೆ ಆಶ್ರಯರಾಗಿರುವರು. ಇವರೇ ಕರುಣಾರಸಕ್ಕೆ ಸಾಗರರು, ಸಂಸಾರಾಂಬುಧಿಗೆ ಸಂತರಣಸೇತುಗಳು, ಉಪಶಾಂತಿವೃಕ್ಷಕ್ಕೆ ಮೂಲಭೂತರು, ಲೋಭಾರ್ಣವಕ್ಕೆ ಬಡಬಾನಲರು, ಶಾಸ್ತ್ರರತ್ನಕ್ಕೆ ನಿಕಷೋಪಲರು. ಈ ಮಹಾಮುನಿಚರಣಾರವಿಂದ ಸಂಪರ್ಕದಿಂದೀ ಆಶ್ರಮವು ಕಲಿಕಲ್ಮಷದಿಂದೆಂದಿಗೂ ಲಿಪ್ತವಾಗದು. ಅನ್ಯತವು ಇಟ್ಟಣಿಕಿನೋಡದು. ಮದಮತ್ಸರಗಳು ಹಜ್ಜೆಯನ್ನೂರದು. ಕಾಮವಿಲಾಸವು ಕಣ್ತೆರೆದುನೋಡದು.

ಕಮಲಯೋನಿಯಂತೆ ತ್ರಿಭುವನವಂದಿತಮಾಗಿ, ವಿಷ್ಣುವಿನವತಾರದಂತೆ ಪ್ರಕಟಿತ ಹರಿವರಾಹರೂಪಮುಳ್ಳುದಾಗಿ, ಸಾಂಖ್ಯದಂತೆ ಕಪಿಲಾಧಿಷ್ಠಿತಮಾಗಿ, ಉಪಶಾಂತರಿಗೆ ವಾಸಯೋಗ್ಯಮಾದ ಬ್ರಹ್ಮಲೋಕವೇ ಆಶ್ರಮರೂಪವಂ ಧರಿಸಿ ಇರುವಂತೆ ಕಂಗೊಳಿ

---

೧. ಳಂ (ಕ, ಖ, ಗ) ; ಘ ಪ್ರತಿಯಲ್ಲಿ 'ಟಿಟ್ಟಿಭಯುಗ್ಮಂಗಳಂ' ಎಂಬುದರಿಂದ ಮುಂದೆ 'ಳಂ ನೋಡು'ವರೆಗೆ ಬಿಟ್ಟಿದೆ.

ಸುವ ಈ ನೈಮಿಷಕ್ಷೇತ್ರದಲ್ಲಿ ಮಾಲಿನ್ಯವೆಂಬುವದು ಹೋಮಾಗ್ನಿಧೂಮಶಿಖೆಯಲ್ಲಿ, ಮುಖರಾಗವು ಶುಕಗಳಲ್ಲಿ, ತೀಕ್ಷ್ಣತೆಯು ದರ್ಭಾಗ್ರದಲ್ಲಿ, ಚಾಂಚಲ್ಯವು ಕದಳೀವನದಲ್ಲಿ, ನೇತ್ರರಾಗವು ಕೋಗಿಲೆಗಳಲ್ಲಿ, ಕಂಠಗ್ರಹಣವೆಂಬುವದು ಕಮಂಡಲಗಳಲ್ಲಿ, ಸ್ತನ ಸ್ಪರ್ಶವು ಗೋದೋಹನದಲ್ಲಿ, ಪಕ್ಷಪಾತವು ವನಕುಕ್ಕುಟ[1]ಗಳಲ್ಲಿ, ಭ್ರಾಂತಿಯೆಂಬುವದು ಅಗ್ನಿಪ್ರದಕ್ಷಿಣೆಯಲ್ಲಿ, ರಾಮಾನುರಾಗವು ರಾಮಾಯಣದಲ್ಲಿ, ಶಕುನಿವಧೆಯು ಮಹಾ ಭಾರತದಲ್ಲಿ, ದ್ವಿಜಪತನವು ವೃಕ್ಷಗಳಲ್ಲಿ, ಗೀತವ್ಯಸನವು ಹರಿಣಗಳಲ್ಲಿ, ಶ್ರೀಫಲಾಭಿ ಲಾಷೆಯು ಕಪಿಗಳಲ್ಲಿ, ಭೋಗಾಭಿಲಾಷೆಯು[1] ಭುಜಂಗಗಳಲ್ಲಿ, ನೃತ್ತಕ್ರಮವು ಮಯೂರ ಗಳಲ್ಲಿ, ಅಧೋಗತಿಯು ವೃಕ್ಷಮೂಲಗಳಲ್ಲಿಯೇ ಇರುವದು.

ಮತ್ತೊಂದು [2]ಕಡೆಯಲ್ಲಿ[2] ವಾಪೀಹಂಸ[3]ಗಳಿಂ ಭುಂಜಿಪ[3] ನೀವಾರಬಲಿಯಂ, [ನೋಡು]. ಒಂದೆಡೆಯೊಳು ವಾಚಿಸುವ ಶ್ರಾದ್ಧಕಲ್ಪಗಳಂ, ಪಠಿಸುವ ಉಪನಿಷತ್ತುಗಳಂ, ಘೋಷಿಸುವ ಶತರುದ್ರೀಯಗಳಂ, ಜಪಿಸುವ ಮಹಾಮಂತ್ರಂಗಳಂ, ಉಚ್ಚರಿಸುವ ಸಾಮಗಾನಂಗಳಂ, ಕಥನಗೈವ ದಿವ್ಯಕಥೆಗಳಂ, ಸ್ತುತಿಸುವ ಹರಿಹರಪಿತಾಮಹ ಸ್ತೋತ್ರಂ ಗಳಂ ಶ್ರವಣಗೈವಳಾಗು. ಉಪದೇಶಿಸುವ ಸಾಂಖ್ಯರಹಸ್ಯವಂ, ಪ್ರಕಟಗೈವ ಯೋಗ ಸಾಧನೆಗಳಂ, ವ್ಯವಹರಿಸುವ ನಾನಾ ಶಾಸ್ತ್ರಾರ್ಥಗಳಂ, ನಿಷೇಧಿಸುವ ಪಾಷಂಡಮತ ಪ್ರಕ್ರಿಯೆಗಳಂ, ಸಿದ್ಧಾಂತಗೈವ ವೇದಮಾರ್ಗಗಳಂ ಆಲಿಸುವಳಾಗು.

ಈ ಪರಿಯಲ್ಲಿ ಧರ್ಮಸಂಸ್ಥಾಪಕರಾದ ಮಹಾಮುನಿಗಳಿಗೆ ವಾಸಯೋಗ್ಯಮಾದ ಈ ಆಶ್ರಮದಲ್ಲಿ ವಾಸವಂ ಮಾಡುತ್ತಲಿರುವ ಜನಗಳಿಗೆ ಲಬ್ಧಮಾಗುವ ಆನಂದಾಂಬುಧಿಯ ಲೇಶವನ್ನಾದರೂ ಹೋಲಲಾರದು ನಮ್ಮ ಸಾಮ್ರಾಜ್ಯಸುಖವು. ಆದರಿಂ ಕೈವಲ್ಯ ಕರಗತ ವಾಗುವದು ; ಸಾಲೋಕ್ಯಾದಿ ಮುಕ್ತಿಗಳು ಅವರು ಅನುಗ್ರಹಿಸಿದವರಿಗುಂಟಾಗುವದು. ಬಹುಜನ್ಮಸುಕೃತದಿಂ ಈ ಆಶ್ರಮವು ನಮಗೆ ಗೋಚರವಾಯಿತಲ್ಲದೆ ಸಾಧಾರಣ ಜನಗಳಿಗೆ ಮಹಾಕೀಕಟಾರಣ್ಯವಾಗಿ ಕಾಣಿಸುವದು. ಇಂದು ನಮ್ಮ ಜನ್ಮ ಸಫಲ ವಾಯಿತು" ಎಂದು ಹೇಳುತ್ತ, ಆ ರಾಯನು ಅಲ್ಲಿಯ ಮುನಿಸಂಘಕ್ಕೆ ನಮಸ್ಕರಿಸುತ್ತ, ಸಶರೀರನಾಗಿ ಸ್ವರ್ಗವನ್ನೈದಿದವನಂತೆ [ಇರಲು], ಆನಂದಭರಿತನಾಗಿ ಅಡಿಯಿಡುತ್ತ ಲಿರುವ ರಾಜದಂಪತಿಗಳಂ ನೋಡಿ, "ಈತನ್ಯಾರೋ ರಾಜೋತ್ತಮನು, ವಿರಕ್ತಿಯಿಂ ವಾನಪ್ರಸ್ಥನಾಗಿ ಬಂದಿರಬೇಕು" ಎಂದು ಮಹಾಮುನಿಯೊಬ್ಬನು ತನ್ನ ಶಿಷ್ಯನ ಮುಖ ದಿಂದ ರಾಯನಂ ಕರೆಕಳುಹಿಸಲು,

ಆ ರಾಜದಂಪತಿಗಳು ಅಶೋಕವೃಕ್ಷಚ್ಛಾಯೆಯಲ್ಲಿ ಶಿಷ್ಯವರ್ಗಸಮೇತನಾಗಿ ಕುಳಿತಿ ರುವ ಮಹಾಮುನಿಸನ್ನಿಧಿಗೆ ಬರುತ್ತಿರಲು, ಮಧ್ಯಾಹ್ನಮಾರ್ತಂಡಾವಲೋಕನದಂತೆ ಪ್ರಜ್ವಲಿಸುತಿರುವ ಆ ಮಹಾಮುನಿಯ ತೇಜೋಮಂಡಲದಿಂ ಹೊರಹೊಮ್ಮುವ ಕಿರಣ ಗಳಿಂ ವಿಹ್ವಲಮಾದ ನೇತ್ರಮುಳ್ಳವನಾಗಿ ಆತನಡಿದಾವರೆಗಳಿಗಭಿವಂದಿಸಿ, ಭಯಭಕ್ತಿ ಯಿಂದಂಜಲಿಬದ್ಧನಾಗಿ ನಿಂತಿರುವ ಆ ರಾಯನಂ ನೋಡಿ, ಉಚಿತಾಸನದಲ್ಲಿ ಕುಳ್ಳಿರಿಸಿ, ಆ ಮುನಿಯು ಕುಶಲಪ್ರಶ್ನೆಯಂ ಕೇಳಲು, ಆ ರಾಯನು ತಾನು ಬಂದಿರುವದಂ

---

೧. ಗಳಲ್ಲಿ ಭೋಗಾಭಿಲಾಷೆಯು (ಕ) ೨. ಕಡೆಯೊಳು (ಕ) ೩. ಭುಂಜಿಗಳಿಂ ಭುಂಜಿಪ (ಕ, ಗ)

ಆನುಪೂರ್ವಕವಾಗಿ ವಿಜ್ಞಾಪಿಸಿ, ಅನುಗ್ರಹಿಸಬೇಕೆಂದು ಪ್ರಾರ್ಥಿಸಲು, ಆ ಮಾತಿಗೆ ಸಮ್ಮತನಾದ ಮುನಿಯು ಮುಕ್ತಿದಾಯಕಮಾದ ಜ್ಞಾನಯೋಗರಹಸ್ಯವನ್ನುಪದೇಶವಂ ಗೈದು, "ಇದರಿಂ ಕೃತಾರ್ಥನಾಗುವೆ ನೀನೆಂ"ದನುಗ್ರಹಿಸಿ, ಕಂದಮೂಲಫಲಗಳಂ ತರಿಸಿ ಕೊಟ್ಟು, ಅಪ್ಪಣೆಗೊಡಲು, ಆ ರಾಯನು 'ತಾನು ಧನ್ಯನಾದೆನೆಂ'ದು ಗುರುಪಾದಗಳಿಗಭಿವಂದಿಸಿ ಹೊರಟು, ಒಂದು ಮನೋಹರಮಾದ ಪ್ರದೇಶದಲ್ಲಿ ತನ್ನ ಅನುಚರನಿಂದ ರಚಿಸಿದ ಪರ್ಣಶಾಲೆಯಲ್ಲಿ ವಾಸವಂ ಮಾಡುತ್ತ, ತ್ರಿಷವಣಸ್ನಾನವಂ ಮಾಡುತ, ಶಿವಾರ್ಚನೆಯಂ ಗೈಯುತ, ಯೋಗಾರೂಢನಾಗಿ ಧ್ಯಾನವಂ ಮಾಡುತ, ಕಂದಮೂಲಫಲಗಳಿಂ ಕ್ಷುತ್ಪಿಪಾಸೆಗಳಂ ಶಮನಗೊಳಿಸುತ, ಅಡಿಗಡಿಗೆ ಗುರುಪಾದವಂ ಸ್ಮರಿಸುತ್ತಿರಲು,

ಸುನಂದಾದೇವಿಯು ಮುನಿಗಳಿಗೆ ಅಭಿವಂದಿಸುತ್ತ, ಮುನಿಪತ್ನಿಯರುಗಳ ಪುಣ್ಯಕಥಾಶ್ರವಣಗಳಿಂ ಕಾಲಹರಣವಂ ಮಾಡುತ, ಅಡಿಗಡಿಗೆ ಗೌರಿಯಂ ಪೂಜಿಸುತ, ಪತಿಯು ಮಾಡುವ ದೇವತಾಪೂಜೆಗೆ ಪತ್ರ ಪುಷ್ಪ ಫಲೋದಕಗಳಂ ಒದಗಿಸಿ ಕೊಡುತ, ಕಂದ ಮೂಲಗಳಿಂದ ತೃಪ್ತಳಾಗುತ, ಮನಸ್ಸಿನ ದುಃಖವಂ ಮರೆತು ತಾನೂ ಋಷಿಪತ್ನಿಯಂತೆ ಇರುತ್ತಿರಲು,

ಮೊದಲು ಚಾಣಕ್ಯರಿಂದ ನೇಮಿಸಿ ಇದ್ದ ಚೋರರು ಆಶ್ರಮವೆಲ್ಲವಂ ಹುಡುಕಿ, ಮತ್ತೊಂದು ದಿವಸ ಸ್ನಾನವಂ ಮಾಡಿ ಪರ್ಣಶಾಲೆಗೆ ಹೋಗುವ ರಾಯನಂ ನೋಡಿ, 'ಈಗ ಸಾಧ್ಯವಾಗದೆಂ'ದು ತಿಳಿದು, ಪ್ರಚ್ಛನ್ನರಾಗಿ ಸಮಯವಂ ನೋಡುತ್ತಿರಲು, ಆ ಬೀಸಣಿಗೆಯವನು ಕಂದಮೂಲಗಳಂ ತಂದು ಒದಗಿಸುತ್ತ, ಆಯುಧಪಾಣಿಯಾಗಿ ಆ ರಾಯನನ್ನು ಎಡೆಬಿಡದೆ ಕಾದಿರಲು,

ಮತ್ತೊಂದು ದಿವಸ ಆ ವೃದ್ಧರಾಯನು ಗಂಗೆಯಲ್ಲಿ ಸ್ನಾನವಂ ಮಾಡಿ, ಸೂರ್ಯದರ್ಶನವಂ ಮಾಡುವ ಸಮಯದಲ್ಲಿ ಅಂತರಿಕ್ಷದಲ್ಲಿ ಸೋಪಾನಪಂಕ್ತಿಯು ಕಾಣಿಸಿ, ಅದರಲ್ಲಿ ಸುವರ್ಣವೃಕ್ಷಸಮೂಹವು ಕಾಣಿಸಲು, ಅದಂ ನೋಡಿ ರಾಯನು ತನಗೆ ಆಯುಃಕಲೆಯು ಮೀರಿತೆಂದು ತಿಳಿದು, ಬೇಗ ನಿತ್ಯಕರ್ಮವಂ ನೆರವೇರಿಸಿ, ಗಂಗಾತೀರದಲ್ಲಿ ಮತ್ತೊಂದು ಲತಾಗೃಹದಲ್ಲಿ ದರ್ಭಾಸನವಂ ಹಾಕಿ ಕುಳಿತು, ವಿಭೂತಿ ರುದ್ರಾಕ್ಷಿಯಂ ಧರಿಸಿ, ತನ್ನ ಸಮೀಪದಲ್ಲಿರುವ ಬೀಸಣಿಗೆಯವನಂ ಕುರಿತು,

"ಎಲೈ ಕ್ಷೌಮಕನೇ, ಈ ತಪೋವನದಲ್ಲಿಯೂ ಕೂಡ ನನ್ನ ಸೇವೆಯಂ ಮಾಡಿ ಶ್ರಮಪಡುತ್ತಲಿರುವೆ. ಇನ್ನು ಶರೀರ ನಿಲ್ಲಲಾರದು. ಎಲ್ಲವಂ ಬಿಟ್ಟು, ಮರೆತು ಈ ರತ್ನದುಂಗುರವಂ ತಂದೆನು. ವಿರಕ್ತನಾದ ನನ್ನ ಕೈಯಲ್ಲಿ ಇದ್ದು ಫಲವೇನು ? ನಿನಗಿರಲಿ" ಎಂದು ಉಂಗುರವಂ ಕೊಟ್ಟು, "ಎಂದಿನಂತೆ ಕಂದಮೂಲಗಳಂ ಸುನಂದಾದೇವಿಗೆ ತಂದು ಒಪ್ಪಿಸುವನಾಗು" ಎಂದು ಹೇಳಿ, ಆ ದೂತನಂ ಕಳುಹಿಸಿ,

ಶುದ್ಧಾಚಮನವಂ ಮಾಡಿ, ತನಗೆ ಗುರುಗಳು ಉಪದೇಶಿಸಿದ ಯೋಗರಹಸ್ಯವಂ ನೆನೆದು, ಮನದಲ್ಲಿ ಗುರುಗಳ ಚರಣಗಳಿಗಭಿವಂದಿಸಿ, ಸ್ಥಿರಾಸನವಂ ಬಲಿದು, ಶ್ವಾಸವಂ ನಿರೋಧಿಸಿ, ನಿಶ್ಚಲಚಿತ್ತದಿಂ ಯೋಗಾರೂಢನಾಗಿ, ಸುಷುಮ್ನಾಮಾರ್ಗದಿಂ ಶ್ವಾಸವಂ ನಿರೋಧಿಸಿ, ನಿರ್ವಿಕಲ್ಪಬ್ರಹ್ಮದಲ್ಲಿ ಚಿತ್ತವೇಕರಸವಾಗಿ, ಪ್ರಾಣವಾಯು ಸುಷುಮ್ನಾ ಮಾರ್ಗದಿಂದ ಊರ್ಧ್ವಕ್ಕೆ ನಡೆದು, ಬ್ರಹ್ಮರಂಧ್ರವಂ ಭೇದಿಸಿಕೊಂಡು ಬ್ರಹ್ಮದಲ್ಲಿ

ಲೀನವಾಗಲು, ಪುನಃ ಭವಕ್ಕೆ ಬಾರದಂತೆ ಆ ವೃದ್ಧರಾಯನು ಮುಕ್ತಿಯಂ ಹೊಂದಿದನು.

ಆತ ಬಲಿದಿದ್ದ ಆಸನಜಯದಿಂ ಆ ಶರೀರವು ಕುಳಿತಿದ್ದಂತೇ ಇರಲು, ಆ ಸಮಯದಲ್ಲಿ ಛಿದ್ರವಂ ನೋಡುತ್ತಿದ್ದ ಚೋರರು 'ಇದೇ ಸಮಯವೆಂ'ದು ಬಂದು, ಜಪವಂ ಮಾಡುವ ನಂತೆ ಕಣ್ಣುಮುಚ್ಚಿ ಕುಳಿತಿರುವ ಆ ರಾಯನಂ ನೋಡಿ, ಖಡ್ಗದ ಮೊನೆಯಿಂದ ಸೋಂಕಿಸಲು, ಅದಕ್ಕೆ ಆ ಶರೀರ ಉರುಳಿ ಬೀಳಲು, "ಹೋ ವೃದ್ಧನು ಮೃತವಾದನು. ಇನ್ನು ಈ ಶರೀರವಂ ಛೇದಿಸಿದ್ದರಿಂ ಫಲವೇನೆಂ"ದು ಹೇಳಿಕೊಳ್ಳುತ್ತ, ಸಡಿಲಿ ಬಿದ್ದಿರುವ ಆತನ ಜಪಮಾಲೆಯಂ ಗುರುತಿಗೆ ತೆಗೆದುಕೊಂಡು, ಚಾಣಕ್ಯರಿಗೆ ಒಪ್ಪಿಸಬೇಕೆಂದು ಹೊರಟು ಹೋಗಲು.

ಆ ರಾಯನ ದೂತನು ಎಂದಿನಂತೆ ಕಂದಮೂಲಗಳಂ ತಂದು ಸುನಂದಾದೇವಿಗೆ ಒಪ್ಪಿಸಿ, ರಾಯನಿದ್ದೆಡೆಗೆ ಬಂದು, ಯೋಗಪಟ್ಟ ಸಹಿತ ಉರುಳಿ ಗತಪ್ರಾಣನಾದ ರಾಯನಂ ಕಂಡು, 'ಹೋ' ಎಂದು ಹಂಬಲಿಸುತ್ತ, ತ್ವರಿತದಿಂದ ಓಡಿ ಬಂದು ಸುನಂದಾ ದೇವಿಗೆ ತಿಳುಹಿಸಲು, ಅದಂ ಕೇಳಿ ಮೂರ್ಛಾಗತಳಾಗಿ ನೆಲಕ್ಕೆ ಬಿದ್ದು, ಮತ್ತಷ್ಟು ಹೊತ್ತಿನ ಮೇಲೆ ಎಚ್ಚರಗೊಂಡು, ರೋದನಂಗೆಯ್ಯುತ, ಪತಿಯಿದ್ದೆಡೆಗೆ ಬಂದು, ಪತಿಯ ಕಳೇಬರವಂ ನೋಡಿ, ಮನಕ್ಕೆ ಬಂದಂತೆ ಹಂಬಲಿಸಿದ ಬಳಿಕ ವಿವೇಕವಂ ತಂದುಕೊಂಡು, "ಇನ್ನು ಹಂಬಲಿಸಿ ಫಲವೇನು ? ಇಂದಿಗೆ ಸಕಲದುಃಖವೂ ಶಮನವಾಯಿತೆಂ"ದು ಧೈರ್ಯವನ್ನವಲಂಬಿಸಿ, ದೂತನಂ ಕರೆದು "ಗಂಗಾಜಲ ಸಮೀಪದಲ್ಲಿ ವಿಸ್ತಾರವಾಗಿ ಚಿತೆಯಂ ರಚಿಸೆಂ"ದು ಹೇಳಿ, ಗಂಗೆಯಲ್ಲಿ ಸ್ನಾನವಂ ಮಾಡಿ, ಗೌರೀದೇವಿಯಂ ಮನಬಂದಂತೆ ಪೂಜಿಸಿ, ಆ ರತ್ನಸಂಪುಟವಂ ಋಷಿಪತ್ನಿಯ ಕೈಯಲ್ಲಿ ಕೊಟ್ಟು, ರತ್ನತಾಟಂಕಗಳಂ ಗುರುಪತ್ನಿಗೆ ಕೊಟ್ಟು, ಅನರ್ಘ್ಯ ಮುಕ್ತಾಹಾರವಂ "ನೀವೆಲ್ಲರೂ ತೆಗೆದುಕೊಳ್ಳಿರೆಂ"ದು ಋಷಿಪತ್ನಿಯರಿಗೆ ಕೊಟ್ಟು, ಪತಿಯ ಶಿವಲಿಂಗಸಂಪುಟವಂ ಗುರುಪುತ್ರನಿಗೆ ಕೊಟ್ಟು, ಪತಿಯ ಶರೀರವಂ ಗಂಗಾಜಲದಿಂ ಕ್ಷಾಳನೆಗೈದು, ಚಿತೆಯ ಮೇಲಿರಿಸಿ, ಋಷಿಗಳ ಅನುಮತಿಯಿಂದ ಪತಿಯ ಔಪಾಸನಾಗ್ನಿಯಿಂದ ಚಿತೆಯಂ ಹತ್ತಿಸಿ, ಋಷಿಸಂಘಕ್ಕೆ ನಮಸ್ಕರಿಸಿ, ಸುನಂದಾದೇವಿಯು ಹರಿಹರಮೂರ್ತಿಗಳಂ ನೆನೆದು, ಮಹಾಬೆಳಕಿನಿಂ ಕೂಡಿ ಪ್ರಜ್ವಲಿಸುವ ಚಿತಾಗ್ನಿಯಂ ಪ್ರವೇಶಿಸಿ, ಮೇಘದಲ್ಲಿ ತೋರಿದ ಮಿಂಚು ಮರೆಯಾಗುವಂತೆ ಅಗ್ನಿಯಲ್ಲಿ ಲೀನವಾಗಿ ಪುಣ್ಯಲೋಕವನ್ನೈದಿದಳು.

ಆ ಮರುದಿವಸ ಆಕಸ್ಮಿಕವೃಷ್ಟಿ ಉಂಟಾಗಿ, ಗಂಗಾನದೀಜಲವು ಹೆಚ್ಚಿ ಬಂದು ಆ ಭಸ್ಮರಾಶಿಯಂ ಕದಡುವದಂ ನೋಡಿ, "ರಾಜದಂಪತಿಗಳು ಸುಕೃತಶಾಲಿಗಳು; ವೃದ್ಧರಾಯನು ರಾಜಯೋಗದಿಂ ಮುಕ್ತಿಯಂ ಹೊಂದಿದನು; ಆತನ ಪತ್ನಿಯೂ ತವರುಮನೆಗೆ ಹೋಗುವ ಕನ್ನೆಯಂತೆ ನಿರಾತಂಕಳಾಗಿ ಪತಿಯೊಡನೆ ಅನುಗಮನವಂ ಮಾಡಿ ಗೌರೀದೇವಿಯರ ಪಾದಪಂಕಜದ ಸನ್ನಿಧಿಗೆ ಸಂದಳು" ಎಂದು ಹೇಳಿಕೊಳ್ಳುವ ಋಷಿಗಳ ವಾಕ್ಯವಂ ಕೇಳಿ, ಬೀಸಣಿಗೆಯವನು "ಇನ್ನು ತಾನು ಅನಾಥನಾಗಿ ವಿರಕ್ತನಲ್ಲದೆ ಇಲ್ಲಿ ಇದ್ದು ಫಲವೇನು ? ಪುರವನ್ನಾದರೂ ಸೇರುವೆನೆಂ"ದು ಬರುತ್ತ, ರೋದನವಂ ಗೈಯುವ ಚೇಟಿಯಂ ಕಂಡು,

"ಎಲೈ ಕುಸುಮಲೇಖೆಯೇ, ನಾನು ಪುರಕ್ಕೆ ಹೋಗುವೆನು ; ಇಲ್ಲಿದ್ದು ಫಲವೇನು ?

ಸಂಗಡಲೇ ಬಾರೆಂ"ದು ಹೇಳುವ ದೂತನಂ ಕುರಿತು, "ಎಲೈ ಕ್ಷೌಮಕನೇ, ಯಾರ ನಿಮಿತ್ತ ನಾನು ಪುರಕ್ಕೆ ಬರಲಿ ? ಇಲ್ಲಿ ಮಹಾಮುನಿಗಳು ಸಂಚರಿಸುವ ಮಾರ್ಗವಂ ಗುಡಿಸುತ, ಅವರ ಪುಷ್ಪವಾಟಿಗಳಿಗೆ ಜಲವಂ ತಂದು ಹಾಕುತ, ಮುನಿಪತ್ನಿಯರು ತೋರಿದ ಕಾರ್ಯವಂ ಮಾಡಿಕೊಡುತ, ಅವರ ಭೋಜನಶೇಷದ ಕಂದಮೂಲಗಳಿಂ ಪ್ರಾಣಧಾರಣೆಯಂ ಮಾಡಿ, ಜನ್ಮಸಫಲವಂ ಮಾಡಿಕೊಂಡು ಇಲ್ಲಿಯೇ ಇರುವೆನು. ನೀನು ಪತ್ನೀಪುತ್ರರ ಬಳಿಗೆ ಹೋಗುವನಾಗು" ಎಂದು ಹೇಳಲು, "ನಿನ್ನ ಮನಬಂದಂತೆ ಮಾಡೆಂ"ದು ಚೇಟಿಗೆ ಹೇಳಿ, ಆ ಆಶ್ರಮವಂ ಬಿಟ್ಟು ಪುರಕ್ಕೆ ಬರುತ್ತಿದ್ದನು ಎಂಬಲ್ಲಿಗೆ,

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಮಹೀಶೂರನರಪತಿ ಶ್ರೀಕೃಷ್ಣರಾಜೇಂದ್ರರಾಶ್ರಿತ ಹೊಯಿಸಣಿಗಕುಲಸಂಜಾತ ನಾರಾಯಣಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ಸರ್ವಾರ್ಥಸಿದ್ಧಿರಾಯನಿರ್ಯಾಣ ಕಥನವೆಂಬ ಏಕಾದಶಾಶಯಃ [ಸಮಾಪ್ತಃ].

ದ್ವಾದಶಾಶಯ : ಮಲಯಕೇತುವಿಗೂ ರಾಕ್ಷಸನಿಗೂ ಸಖ್ಯವು

ಅನಂತರದಲ್ಲಿ ವೃದ್ಧರಾಯನ ಬೀಸಣಿಗೆಯವನು ತನಗೆ ಒಡೆಯನಾದ ಸರ್ವಾರ್ಥ ಸಿದ್ಧಿರಾಯನು ಮುಕ್ತನಾದುದಂ ತಿಳಿದು, ಆತನಂ ನೆನೆಯುತ, ಕ್ಲೇಶಪಡುತ, ಪುರಕ್ಕೆ ಅಭಿಮುಖವಾಗಿ ಬರುತ್ತಿರಲು, ಆ ಮಾರ್ಗಮಧ್ಯದಲ್ಲಿ ಮೊದಲು ರಾಕ್ಷಸನಿಂದ ನೇಮಿಸಿದ್ದ ವಾಸಕನೆಂಬ ಗೂಢಚಾರನು ಪರ್ವತರಾಯಸೇನೆಯಲ್ಲಿ ನಡೆದ ವಿಶೇಷ ವರ್ತಮಾನವಂ ತಿಳಿದು, ರಾಕ್ಷಸನಿಗೆ ತಿಳುಹಿಸಬೇಕೆಂದು ಬರುತ್ತ ಬೀಸಣಿಗೆಯವನಂ ಕಂಡು,

"ಎಲೈ ಕ್ಷೌಮಕನೇ, ರಾಜಸನ್ನಿಧಿಯ ಸೇವಕನಾಗಿ ಇದ್ದ ನೀನು ಎಲ್ಲಿಗೆ ಹೋಗುವೆ ? ನಿನ್ನ ಮುಖದಲ್ಲಿ ಜಾರಿದ ಬಾಷ್ಪದ ಕೋಡಿಗಳೇನು ?" ಎನಲು, "ಎಲೈ ವಾಸಕನೇ, ನಮ್ಮ ಒಡೆಯನಾದ ವೃದ್ಧರಾಯನು ತಪೋವನದಲ್ಲಿಯೇ ಲಯವಾದನು. ಇನ್ನು ಮೇಲೆ ನನಗೆ ಅಲ್ಲಿ ಕೆಲಸವೇನೆಂದು, ಎಲ್ಲಿಗಾದರೂ ಹೋಗುವೆನೆಂದು ಬಂದೆನು" ಎನಲು, "ಎಲೈ ಕ್ಷೌಮಕನೇ, ಇದೆಕೋ ಈ ವನದಲ್ಲಿ ಅಮಾತ್ಯ ರಾಕ್ಷಸ ಇದಾನೆ. ಈ ಅರ್ಥವಂ ಆತನಿಗೆ ತಿಳುಹಿಸಿದರೆ, ನಿನ್ನ ದುಃಖ ಶಮನವಾಗುವದು" ಎಂದು ಹೇಳಿ, ಆ ಕ್ಷೌಮಕನಂ ಕರೆದುಕೊಂಡು ವಾಸಕನು ಬಂದು, ರಾಕ್ಷಸನಂ ಕಂಡು,

"ಸ್ವಾಮಿ, ಈ ಬೀಸಣಿಗೆಯವನು ವಿಶೇಷ ವರ್ತಮಾನವಂ ಹೇಳುವನು. ಪರಾಂಬರಿಸ ಬಹುದು. ನಾನು ತಿಳಿದುದಂ ಆ ಬಳಿಕ ವಿಜ್ಞಾಪಿಸುವೆನೆಂ"ದು ವಾಸಕನು ಹೇಳಲು, ಆ ರಾಕ್ಷಸನು ಕ್ಷೌಮಕನಂ ನೋಡಿ,

"ಎಲೈ ವ್ಯಜನಧಾರಿಯೇ, ನೀನು ಎಲ್ಲಿಂದ ಬಂದೆ ? ವೃದ್ಧರಾಯದಂಪತಿಗಳು ಕ್ಷೇಮದಲ್ಲಿ ಇದಾರೆಯೇ ? ಚಂದ್ರಗುಪ್ತನು ಭಕ್ತಿಯಿಂ ಭಾವಿಸುವನೇ ? ಏನು ಹೇಳಿ ಕಳುಹಿಸಿದರು ?" ಎನಲು, ಆ ಮಾತಿಗೆ ಕ್ಷೌಮಕನು ರೋದನವಂ ಮಾಡುತ್ತ,

"ಸ್ವಾಮೀ, ವೃದ್ಧರಾಜದಂಪತಿಗಳ ಕ್ಷೇಮವನ್ನಾಕೆ ಇನ್ನು ಕೇಳುವಿರಿ ? ಶತ್ರುಮಧ್ಯದಲ್ಲಿ ಇರಲಾರದೆ ಸುರಂಗಮಾರ್ಗದಲ್ಲಿ ಹೊರಟು, ಋಷಿಗಳ ಆಶ್ರಮಕ್ಕೆ ಬಂದು, ಕೆಲವು ಕಾಲದ ಮೇಲೆ ವೃದ್ಧರಾಯರು ಧ್ಯಾನಾರೂಢರಾಗಿ ಮುಕ್ತರಾದರು. ಆ ಕ್ಲೇಶವಂ

ಸಹಿಸಲಾರದೆ ಸುನಂದಾದೇವಿಯು ಆ ರಾಯನ ಸಂಗಡ ಅನುಗಮನವಂ ಮಾಡಿ ಪರಲೋಕವನ್ನೈದಿದಳು" ಎಂದು ಅಲ್ಲಿಯ ವರ್ತಮಾನವೆಲ್ಲವಂ ವಿವರವಾಗಿ ಹೇಳಿ, "ಆ ರಾಯನಂತೆ ನಾನು ಪ್ರಾಣವಂ ತ್ಯಜಿಸೇನೆಂದರೆ, ಆತ್ಮಹತ್ಯಾದೋಷ ಘಟಿಸುವದೆಂದು ತಿಳಿದು ಅಲ್ಲಿ ಇರಲಾರದೆ, ವಿದೇಶಗತನಾಗುವೆನೆಂದು ಬಂದೆನು" ಎನಲು, ಆ ವಾಕ್ಯವಂ ಕೇಳಿ ರಾಕ್ಷಸನು ಮನಸ್ಸಿನಲ್ಲಿ ಕ್ಲೇಶಪಡುತ್ತ, "ಹಾ ವೃದ್ಧರಾಯನೇ, ಹಾ ಸುನಂದಾದೇವಿಯೇ, ಕಾಲಾಧೀನವಾ[ದಿ]ರೇ, ನಾನು ಮನದಲ್ಲಿ ಮಾಡಿದ್ದ ಯತ್ನವು ಇಂದಿಗೆ ನಿಷ್ಫಲವಾಯಿತು. ಇನ್ನು ನಂದವಂಶವಾರ್ತೆಯೆಂದರೇನು ?" ಎಂದು ಹಂಬಲಿಸುತ್ತ, ಸ್ನಾನವಂ ಮಾಡಿ ಬಂದು, ಅಶನ ನಿದ್ರೆ ರುಚಿಸದೆ, ಚಿಂತಿಸುತ್ತ, ವಾಸಕನೆಂಬ ಗೂಢ ಚಾರನಂ ಕುರಿತು,

"ಎಲೈ ಚಾರನೇ, ವೃದ್ಧರಾಜದಂಪತಿಗಳ ದೆಸೆ ಈ ರೀತಿಯಲ್ಲಿ ಆಯಿತು. ಪಾಟಲೀಪುರ ಸಮೀಪದಲ್ಲಿ ಇಳಿದಿದ್ದ ಪರ್ವತರಾಯನ ದಂಡಿನ ವರ್ತಮಾನವೇನು?" ಎನಲು, ಆ ಮಾತಿಗೆ ಗೂಢಚಾರನು,

"ಸ್ವಾಮಿ ಅಮಾತ್ಯರೇ, ನೀವು ಪುರವಂ ಬಿಟ್ಟು ಬಂದ ಬಳಿಕ ಜೀವಸಿದ್ಧಿಯೆಂಬ ಕ್ಷಪಣಕನು ಒಬ್ಬ ಸ್ತ್ರೀಯಂ ಕರೆದು ತಂದು ಚಂದ್ರಗುಪ್ತನಿಗೆ ಒಪ್ಪಿಸಲು, ಆಗ ಚಾಣಕ್ಯನು ಅವಳಂ ನೋಡಿ ಏನೋ ಒಂದರ್ಥವಂ ಮನಸ್ಸಿನಲ್ಲಿ ತಿಳಿದು, 'ಎಲೈ ಜೀವಸಿದ್ಧಿಯೇ, ಈ ಕನ್ನೆಯು ಪರ್ವತರಾಯನಿಗೆ ಸಲ್ಲತಕ್ಕವಳು ; ಅವನಿಗೆ ಒಪ್ಪಿಸು' ಎನಲು, ಆತನ ಮಾತು ಮೀರಲಾರದೆ ಕ್ಷಪಣಕನು ಆ ಕನ್ನೆಯಂ ಕರೆತಂದು ಪರ್ವತರಾಯನಿಗೆ ಒಪ್ಪಿಸಲು, ಕಾಮುಕನಾದ ಆ ರಾಯನು ಅವಳಂ[ಗ]ಸಂಗದಿಂದ ನಂಜು ತಟ್ಟಿ ಮೃತನಾದನು. ಆ ಸಮಯದಲ್ಲಿ ಸನ್ನದ್ಧರಾಗಿ ತನ್ನ ಮೇಲೆ ಬರುತ್ತಿರುವ ಚಂದ್ರಗುಪ್ತನ ಸೇನೆಯಂ ಕಂಡು, ಭೀತನಾಗಿ, ಮಲಯಕೇತುವು ಓಡಿಹೋದನು. ಹೀಗಿರುವಲ್ಲಿ ಆ ಅರ್ಧರಾಜ್ಯವಂ ಬಯಸಿ ಬಂದ ಪರ್ವತರಾಯನಂ ದುಷ್ಟಕನ್ಯಾಮುಖದಿಂ[1]ದ[1] ಸಂಹಾರಗೈಸಿದವನಾದರೂ ಚಾಣಕ್ಯನು ಲೋಕಾಪವಾದವಂ ಮತ್ತೊಬ್ಬರಿಗೆ ಉಂಟುಮಾಡುವದಕ್ಕೆ ಸಮರ್ಥನೆಂದು ತಿಳಿಯುತ್ತಲಿದೆ" ಎನಲು, ಅದಂ ಕೇಳಿ ರಾಕ್ಷಸನು ಬಹುಖಿನ್ನನಾಗಿ,

"ಓಹೋ ನಾನು ಮಾಡಿದ ಮಹಾಪ್ರಯತ್ನವು ವಿಫಲವಾಯಿತು. ಅರ್ಜುನನ ಸಂಹಾರಕ್ಕೋಸುಗ ಕರ್ಣನು ಇಂದ್ರನ ದೆಸೆಯಿಂದ ಸಂಪಾದಿಸಿದ [2]ಶಕ್ತ್ಯಾ[2]ಯುಧಕ್ಕೆ ಘಟೋತ್ಕಚನಂ ಗುರಿಮಾಡಿಸಿ ವಾಸುದೇವನು ಅರ್ಜುನನಂ ರಕ್ಷಿಸಿದ ತೆರದಲ್ಲಿ ನಾನು ಚಂದ್ರಗುಪ್ತನ ಸಂಹಾರಕ್ಕೆ ಕಳುಹಿಸಿದ ವಿಷಕನ್ನೆಯಿಂದ ಪರ್ವತರಾಯನಂ ಸಂಹಾರಗೈಸಿ, ಚಾಣಕ್ಯನು ಚಂದ್ರಗುಪ್ತನಂ ರಕ್ಷಿಸಿದನು. ನಾನು ಮಾಡಿದ ಮಹತ್ಪ್ರಯತ್ನವೇ ಈ ಗತಿಯಾದರೆ ಕಡಮೆ ಅಲ್ಪಪ್ರಯತ್ನಗಳು ಚಾಣಕ್ಯನ ಉಪಾಯವಂ ಮೀರಿ ಚಂದ್ರಗುಪ್ತನನ್ನೇನು ಮಾಡಿಯಾವು ?"

ಹೀಗೆಂದು ಚಿಂತಿಸುತ, "ಪ್ರಭುವಾದ ನಂದರು ಕಾಲವಶವಾದಾಗ್ಯೂ ನನಗೆ ಪೌರುಷ ತಪ್ಪಿ ಬರದೆ ಇರುವದರಿಂದ ಇನ್ನೂ ಸಾಹಸವಂ ಮಾಡಿ, ಪಿತೃಕ್ಲೇಶದಿಂದ ಚಂದ್ರಗುಪ್ತ

---

೧. ದ ಪರ್ವತರಾಯನಂ (ಕ, ಖ, ಗ) ೨. ಶಸ್ತ್ರಾ (ಕ)

ನಿಗೆ ವೈರಿಯಾದ ಮಲಯಕೇತುವು ಖಿನ್ನನಾಗಿ ತನ್ನ ಪುರಕ್ಕೆ ಬಂದು ಇರುವದರಿಂದ ಈ ವೇಳೆಯಲ್ಲಿ ನಾನು ಹೋಗಿ ಅವನಂ ಪ್ರೋತ್ಸಾಹಿಸಿ, ಅವನ ಸೇನೆಯಂ ಕರೆತಂದು, ಪಾಟಲೀಪುರವಂ ಮುತ್ತಿ, ಚಂದ್ರಗುಪ್ತ ಚಾಣಕ್ಯರ ಗರ್ವವಂ ಮುರಿದು, ನಂದರಾಜ್ಯವಂ ಮಲಯಕೇತುವಿಗಾದರೂ ಕೊಟ್ಟು, ಲೋಕಾಂತರಸ್ಥರಾದ ನಂದರಿಗೆ ಸಂತೋಷವುಂಟಾಗುವಂತೆ ಮಾಡುವೆನಲ್ಲದೆ, ಚಂದ್ರಗುಪ್ತನ ಅಭ್ಯುದಯವಂ ನೋಡಿ ಸಹಿಸುವನಲ್ಲವೆಂ"ದು ನಿಶ್ಚೈಸಿ, ಪುನಃ ಆ ಚಾರನಂ ಕುರಿತು,

"ಎಲೈ ವಾಸಕನೇ, ಪರ್ವತರಾಯನು ಕಾಲಾಧೀನನಾಗಿ ಎಷ್ಟು ದಿವಸವಾಯಿತು ? ಮಲಯಕೇತು ತನ್ನ ಪುರಕ್ಕೆ ತಲಪಿ ಇರುವನೋ ?" ಎನಲು, "ಸ್ವಾಮೀ, ಪರ್ವತರಾಯನು ಕಾಲವಶನಾಗಿ ಎರಡು ತಿಂಗಳು ಆಯಿತು. ಮಲಯಕೇತು ಪುರವಂ ತಲಪಿ ಇದ್ದಾನು. ಈ ವರ್ತಮಾನವಂ ತಮಗೆ ತಿಳುಹಿಸಬೇಕೆಂದು ಅರಸುತ್ತ, ನಿಮ್ಮಿಂದ ಆಜ್ಞಪ್ತನಾಗಿ ಪಾಟಲೀಪುರಕ್ಕೆ ಹೋಗುತ್ತಿರುವ ವಿರಾಧಗುಪ್ತನೆಂಬ ಚಾರನಂ ಕಂಡುದರಿಂದ ತಮ್ಮ ಸನ್ನಿಧಿ ಗೊತ್ತಾಗಿ ಬಂದೆನು" ಎನಲು, "ನಮ್ಮ ಸಂಗಡಲೇ ಇರುವದೆಂ"ದು ಚಾರನಿಗೆ ನೇಮಿಸಿ, ಅಲ್ಲಿಂದ ಹೊರಟು ಪರ್ವತದೇಶಾಭಿಮುಖವಾಗಿ ಹೋಗುತ್ತಿರಲು, ಆಗ ಆತನ ಪರಿವಾರ ಕೆಲವು ಬಂದು ಸೇರಲು, ರಾಕ್ಷಸನು ಪರ್ವತರಾಜ್ಯದ ರಮಣೀಯತೆಯಂ ನೋಡುತ್ತ ಬಂದು, ಶಾಹುರೀ ಪಟ್ಟಣದ ಉದ್ಯಾನದಲ್ಲಿ ಇಳಿಯುತ್ತಿದ್ದನು.

ಅತ್ತಲಾ ಪಾಟಲೀಪುರದಲ್ಲಿ, ರಾಜಭವನದಲ್ಲಿ ವೃದ್ಧರಾಜದಂಪತಿಗಳು ಇಲ್ಲದೆ ಇರುವದಂ ಕೇಳಿ, ಚಂದ್ರಗುಪ್ತನು ಅತ್ಯಂತ ವ್ಯಸನಂಗೊಂಡು ತಾನೇ ಬಂದು ರಾಜಭವನವೆಲ್ಲವೂ ನೋಡಿ, ಕಾಣದೆ, ಅಂತಃಪುರದಲ್ಲಿ ಇರುವ ಸುರಂಗದ ಬಾಗಿಲು ತೆರೆದಿರುವದಂ ನೋಡಿ, "ವೃದ್ಧದಂಪತಿಗಳು ಪುತ್ರಶೋಕವಂ ಸಹಿಸಲಾರದೆ ತಪೋವನಕ್ಕೆ ಹೋಗಿರಬೇಕಲ್ಲದೆ ನನ್ನಿಂದ ಅಪರಾಧವೆಳ್ಳನಿತೂ ಇಲ್ಲ ; ಈ ಅರ್ಥ ಸರ್ವಜನಕ್ಕೆ ವಿದಿತವಾಗಿ ಇರುವದು. ಆದಡೆಯೂ ಅವರಿರುವ ನೆಲೆಯಂ ತಿಳಿದು ನಾನೇ ಹೋಗಿ ಸರ್ವಪ್ರಕಾರದಲ್ಲೂ ಕರೆತರುವದೇ ಯುಕ್ತವು" ಎಂದು ನಿಶ್ಚೈಸಿ,

ವೃದ್ಧನಾದ ವಕ್ರನಾಸನೆಂಬ ಮಂತ್ರಿಯಂ ಕರೆಸಿ, ರಾಜದಂಪತಿಗಳು ತಪೋವನಕ್ಕೆ ಹೋದುದಂ ತಿಳುಹಿ, ನಂದರ ಅಂತಃಪುರದಲ್ಲಿ ಇರುವ ಅವರ ಭೋಗಸ್ತ್ರೀಯರುಗಳಿಗೆ ಆವಶ್ಯಕಮಾದುದಂ ಒದಗಿಸುತ್ತ, ವ್ಯತ್ಯಾಸ ಬಾರದಂತೆ ಜಾಗರೂಕನಾಗಿ ಇರುವದೆಂದು ನೇಮಿಸಿ, ಸುರಂಗದ ಬಾಗಿಲಂ ಮುಚ್ಚುವದೆಂದು ಕಟ್ಟಲೆಯಂ ಮಾಡಿ, ಚಾರರಂ ಕರೆದು, "ನಮ್ಮ ಪಿತಾಮಹರಾದ ರಾಜದಂಪತಿಗಳು ನಮಗೆ ತಿಳಿಯದಂತೆ ತಪೋವನಕ್ಕೆ ಹೋಗಿ ಇರುವದರಿಂದ ನೈಮಿಷಾರಣ್ಯದ ಋಷ್ಯಾಶ್ರಮಂಗಳಲ್ಲಿ ಅರಸಿ ತಿಳಿದು ಬಂದು ನಮಗೆ ಹೇಳುವರಾಗಿ" ಎಂದು ನೇಮಿಸಿ ಕಳುಹಿಸಿ, ಚಂದ್ರಗುಪ್ತನು ತಾನಿದ್ದೆಡೆಗೆ ಬರುತ್ತಿರಲು, ಅಷ್ಟರಲ್ಲಿಯೇ ಮೊದಲು ಚಾಣಕ್ಯನಿಂದ ನೇಮಿಸಿದ್ದ ಚೋರರು ಬಂದು ರಹಸ್ಯದಲ್ಲಿ ಅವನಂ ಕಂಡು,

"ಬುದ್ಧೀ, ಅಪ್ಪಣೆ ಮೇರೆಗೆ ಗಂಗಾತೀರದ ಋಷ್ಯಾಶ್ರಮದಲ್ಲಿ ವಾಸವಂ ಮಾಡಿಕೊಂಡಿದ್ದ ವೃದ್ಧರಾಯನಂ ಸಂಹರಿಸಿ ಬಂದೆವು ; ಅವರ ಕೈ ಅಕ್ಷಮಾಲೆಯಿದು" ಎಂದು ತೋರಿಸಲು, ಅದಂ ನೋಡಿ, ಅವರಂ ಆಚೆಗೆ ಕಳುಹಿಸಿ, ಚಂದ್ರಗುಪ್ತನ ಆಧಿಪತ್ಯವು

ನಿಷ್ಕಂಟಕವಾಯಿತೆಂದು ಹೇಳಿ, ಚಾಣಕ್ಯನು ಸ್ನಾನಕ್ಕೆ ಹೋಗುತ್ತಿದ್ದನು.

ಮತ್ತೆ ಕೆಲವು ದಿವಸದ ಮೇಲೆ ಚಂದ್ರಗುಪ್ತನಿಂದಾಜ್ಞಪ್ತರಾದ ಚಾರರು ಗಂಗಾತೀರದ ಆಶ್ರಮಗಳಲ್ಲಿ ಹುಡುಕಿ, ವೃದ್ಧರಾಯನಂ ಕಾಣದೆ, ಗಂಗಾನದಿಗೆ ಸ್ನಾನಕ್ಕೆ ಬಂದಿದ್ದ ಚೇಟಿಯಂ ಕಂಡು,

"ಎಲೈ ರಾಜಾಂತಃಪುರದ ಚೇಟಿಯೇ, ನೀನೆಲ್ಲಿ ಬಂದೆ ? ವೃದ್ಧರಾಜದಂಪತಿಗಳ ವೃತ್ತಾಂತಮೇನೆಂದೆ"ನಲು, ಆ ದೂತಿಯು ವೃದ್ಧದಂಪತಿಗಳು ಕಾಲಾಧೀನವಾದುದಂ ವಿವರಿಸಿ ಹೇಳಿ ರೋದನವಂ ಮಾಡುತ್ತಿರಲು, ಅದಂ ತಿಳಿದು ಆ ದೂತರು ಅಲ್ಲಿಂದ ಹೊರಟು ಪಾಟಲೀಪುರಕ್ಕೆ ಬಂದು, ಚಂದ್ರಗುಪ್ತನಂ ಕಂಡು ಕೈಮುಗಿದು,

"ಬುದ್ಧೀ, ಅಪ್ಪಣೆ ಮೇರೆಗೆ ವೃದ್ಧರಾಯರಂ ಹುಡುಕುವದಕ್ಕೆ ಹೋಗಿದ್ದ ದೂತರು ನಾವು. ಇಂದಿಗೆ ಹದಿನೈದು ದಿವಸದಲ್ಲಿ ವೃದ್ಧರಾಯರು ಯೋಗಾರೂಢರಾಗಿ ಅನಾಯಾಸದಿಂ ಮುಕ್ತರಾದುದರಿಂದ, ದೇವಿಯರು ಸಹ ಅವರ ಸಂಗಡಲೇ ಅನುಗಮನಮಂ ಮಾಡಿದರಂತೆ. ಅವರ ಸಂಗಡ ಹೋಗಿ ಇದ್ದ ಚೇಟಿಯು ಆ ಸ್ಥಳವಂ ಪೂಜಿಸುತ ಅಲ್ಲಿಯೇ ಇದಾಳೆ. ಬೀಸಣಿಗೆಯ ಸೇವಕನು ಆ ಋಷ್ಯಾಶ್ರಮವಂ ಬಿಟ್ಟು ಹೋದನಂತೆ" ಎಂದು ವಿಜ್ಞಾಪಿಸಲು, ಆ ಮಾತಿಗೆ ಚಂದ್ರಗುಪ್ತನು ವ್ಯಸನಪಡುತ್ತ, "ಪಿತಾಮಹನೊಬ್ಬನಾದರೂ ಜೀವಿಸಿ ಇದ್ದರೆ ಬಹುಸೇವೆಯಂ ಮಾಡಿ ಸುಕೃತಕ್ಕೆ ಪಾತ್ರನಾಗಬೇಕೆಂದು ಎಣಿಸಿದೆನು. ದೈವಸಂಕಲ್ಪ ಹೀಗೆ ಪರಿಣಮಿಸಿತು" ಎಂದು ವ್ಯಸನಪಡುತ್ತಿರುವ ಚಂದ್ರಗುಪ್ತನಂ ಸಮಯೋಚಿತವಾದ ವಾಕ್ಯಗಳಿಂದ ಚಾಣಕ್ಯನು ಸಮಾಧಾನಗೊಳಿಸಿ, ಚಂದ್ರಗುಪ್ತನ ಮನಸ್ಸು ಬರುವಂತೆ ಆತನ ಕೈಯಿಂದಲೇ ಪಿತೃಕೃತ್ಯವಂ ಮಾಡಿಸಿ, ಬ್ರಾಹ್ಮಣರಿಗೆ ಬಹುದ್ರವ್ಯದಕ್ಷಿಣೆಗಳಂ ಕೊಡಿಸುತ್ತಿದ್ದನು.

ಅತ್ತಲಾ ಪರ್ವತರಾಯನ ಪುರದ ಉದ್ಯಾನದಲ್ಲಿ ರಾಕ್ಷಸನು ಬಂದು ಇಳಿದಿರುವದಂ ಬಾಗುರಾಯಣನು ಚಾರರ ಮುಖದಿಂ ತಿಳಿದು, ಹೀಗೆಂದು ಯೋಚಿಸುತ್ತಿದ್ದನು :

"ನಾನು ಮಲಯಕೇತುವಂ ಓಡಿಸುವದಕ್ಕೆ ಚಾಣಕ್ಯರು ನನಗೆ ಸಿದ್ಧಾರ್ಥಕನ ಕೈಯಲ್ಲಿ ಕಳುಹಿಸಿ ಇದ್ದ ಕಾಗದದಲ್ಲಿ ಇದ್ದ ರೀತಿಗೆ ರಾಕ್ಷಸನು ಮಲಯಕೇತುವನ್ನನುವರ್ತಿಸಿ ಚಂದ್ರಗುಪ್ತನ ಮೇಲೆ ರಾಜಕಾರ್ಯಕ್ಕೆ ಬಂದಿದ್ದಾನು. ಚಾಣಕ್ಯರು ಹೇಳಿದ ರೀತಿಗೆ ಈಗಲೇ ರಾಕ್ಷಸನಲ್ಲಿ ಏನಾದರೂ ಇಲ್ಲದ ದೋಷಾರೋಪಣವಂ ಮಾಡಿ ಮಲಯಕೇತುವಿನಲ್ಲಿ ಬಂದು ಆಶ್ರೈಸದಂತೆ ಈಗಲೇ ನಿರಾಕರಿಸಿದರೆ, ಖ್ಯಾತಿವಂತನಾದ ರಾಕ್ಷಸನು ಆಶ್ರಯಿಸಬೇಕೆಂದು ಮತ್ತ್ಯಾವ ಅರಸಿನ ಬಳಿಗೆ ಹೋದರೆ, ಇವನು ಮಹಾಕಾರ್ಯದಕ್ಷನಾದುದರಿಂದ ಶತ್ರುವಾದರೂ ಆ ರಾಯನು ಮಿತ್ರನಾದಾನು. ಮಿತ್ರನೇ ಆಗಿ ಇದ್ದವನು ಕೇಳತಕ್ಕದೇನು? ಹೀಗೆ ಕೆಲವು ದೇಶಾಧಿಪತಿಗಳಂ ಒಡಂಬಡಿಸಿ, ರಾಕ್ಷಸನು ಚಂದ್ರಗುಪ್ತನ ಮೇಲೆ ಕಾರ್ಯಭಾಗಕ್ಕೆ ಯತ್ನವಂ ಮಾಡಿದರೆ ಚಂದ್ರಗುಪ್ತನ ಯೋಗಕ್ಷೇಮ ಹೇಗೆ ಆಗುವದೋ? ಅದರಿಂದ ಚಾಣಕ್ಯರ ಮನೋಗತವು ವ್ಯರ್ಥವಾದೀತು. ನಾನು ಮಲಯಕೇತುವಿನ ಸಮೀಪದಲ್ಲಿ ಇದ್ದುದು ವ್ಯರ್ಥವಾಗುವದು. ಅದರಿಂದ ಮಲಯಕೇತುವಿಗೆ ರಾಕ್ಷಸನಲ್ಲಿ ಉಪೇಕ್ಷೆ ಬರುವಂತೆ ಮಾಡುವದಕ್ಕೆ ಇದು ಸಮಯವಲ್ಲ. ರಾಕ್ಷಸನು ಮಲಯಕೇತುವಂ ಒಡಂಬಡಿಸಿ, ಸೇನೆಯಂ ಕರೆದುಕೊಂಡು, ಚಂದ್ರಗುಪ್ತನ ಮೇಲೆ ಕಾರ್ಯಭಾಗಕ್ಕೆ ಪಾಟಲೀ

ಪುರವಂ ಕುರಿತು ಹೋಗಲಿ. ಚಾಣಕ್ಯರ ಗೂಢಚಾರರು ಯಾರಾದರೂ ಕಪಟದಿಂದ ರಾಕ್ಷಸನಲ್ಲಿ ಬಂದು ಅನುವರ್ತಿಸಿದ ಬಳಿಕ, ದುಷ್ಟಮಾರ್ಜಾಲವಂ ನಯದಿಂದ ಸಮೀಪಕ್ಕೆ ಕರೆದು ಉಷ್ಣೋದಕವನ್ನೆರಚಿ ಹೊರಡಿಸುವಂತೆ ರಾಕ್ಷಸನಲ್ಲಿ ಮಲಯಕೇತುವಿಗೆ ಕೋಪ ಬರುವಂತೆ ಮಾಡಿ, ಇಲ್ಲಿಂದ ಹೊರಡಿಸಬೇಕೆಂ"ದು ನಿಶ್ಚೈಸಿ, ಬಾಗುರಾಯಣನು ಮಲಯಕೇತುವಿನ ಸಮೀಪಕ್ಕೆ ಬರುತ್ತಿರಲು,

ಪುರದ ಉದ್ಯಾನದಲ್ಲಿ ಇಳಿದಿದ್ದ ರಾಕ್ಷಸನು "ತಾನು ಬಂದು ಇದೇನೆ, ನಿಮ್ಮಂ ಕಾಣಬೇಕೆಂದು ಇದೇನೆ ಎಂದು ಅರಸಾದ ಮಲಯಕೇತುವಿಗೆ ತಿಳುಹಿಸಿ ಬನ್ನಿರೆಂ"ದು ತನ್ನ ದೂತರಿಗೆ ನೇಮಿಸಿ ಕಳುಹಿಸಲು, ಅವರು ಓಲಗದಲ್ಲಿ ಕುಳಿತಿದ್ದ ಮಲಯಕೇತುವಂ ಕಂಡು, ಕೈಮುಗಿದು, "ಬುದ್ಧೀ, ಪಾಟಲೀಪುರದ ಅಮಾತ್ಯರಾಕ್ಷಸರು ಪುರದ ಉದ್ಯಾನದಲ್ಲಿ ಬಂದು ಇಳಿದಿದ್ದಾರೆ ; ತಮ್ಮ ದರ್ಶನವಾಗಬೇಕೆಂದು 'ವಿಜ್ಞಾಪಿಸಿ ಬನ್ನಿ' ಎಂದು ನಮ್ಮಂ ಕಳುಹಿಸಿದರು" ಎಂದು ಹೇಳಲು, ಆ ವಾಕ್ಯವಂ ಕೇಳಿ ಮಲಯಕೇತುವು ಹೀಗೆಂದು ಯೋಚಿಸುತ್ತಿದ್ದನು :

"ನಂದರಿಗೆ ಮಂತ್ರಿಯಾದ ರಾಕ್ಷಸನು ಚಂದ್ರಗುಪ್ತನ ದೆಸೆಯಿಂದ ಭೀತನಾಗಿ, ಆ ರಾಜ್ಯದಲ್ಲಿ ನಿಲ್ಲಲಶಕ್ಯವಾಗಿದ್ದುದರಿಂದ ಇಲ್ಲಿಗೆ ಬಂದನೋ ಅಥವಾ ಚಂದ್ರಗುಪ್ತನಿಗೂ ನಮಗೂ ಉಂಟಾಗಿರುವ ವೈರವಂ ತಿಳಿದು ಇದೇ ಸಮಯದಲ್ಲಿ ನಮ್ಮ ಸಹಾಯದಿಂದ ಹೋಗಿ ಚಂದ್ರಗುಪ್ತನಲ್ಲಿ ದ್ವೇಷವಂ ಸಾಧಿಸುವದಕ್ಕೆ ಬಂದನೋ ತಿಳಿಯಬೇಕು. ಈ ರಾಕ್ಷಸನು ನಂದರಿಗೆ ಮಂತ್ರಿಯಾಗಿದ್ದುದರಿಂದಲೇ ಅನೇಕ ರಾಜಮಂಡಲವು ನಂದರಂ ಅನುವರ್ತಿಸಿಕೊಂಡು ಇದ್ದರು. ಈ ರಾಕ್ಷಸನ ಪ್ರಶಂಸೆಯಂ ನಮ್ಮ ತಂದೆಯೂ ಮೊದಲು ಬಹುವಾಗಿ ಮಾಡುತಲಿದ್ದನು. ಕಾರ್ಯದಕ್ಷನಾಗಿ, ಬುದ್ಧಿಶಾಲಿಯಾಗಿ, ಸತ್ಯವಂತ ನಾಗಿ, ಪ್ರಜಾರಂಜಕನಾದ ಈ ರಾಕ್ಷಸನು ನಾವು ಅಪೇಕ್ಷಿಸುವದಕ್ಕೆ ಮುಂಚಿತವಾಗಿಯೇ ತಾನಾಗಿಯೇ ನಮ್ಮ ಬಳಿಗೆ ಬಂದು ಚಂದ್ರಗುಪ್ತನ ಮೇಲೆ ದ್ವೇಷವಂ ಸಾಧಿಸಬೇಕೆಂದು ಹೇಳಿಕೊಂಡರೆ, ನಮ್ಮ ಬಳಿಯ ಸರ್ವಾಧಿಕಾರವಂ ಈತನಿಗೆ ನೇಮಿಸಿ, ಇವನ ಮುಖ ದಿಂದಲೇ ಶತ್ರುಗಳಾದ ಚಂದ್ರಗುಪ್ತ ಚಾಣಕ್ಯರಂ ನಿಗ್ರಹಿಸಬೇಕೆಂ"ದು ನಿಶ್ಚೈಸಿ, ಆಗ ಸಮೀಪಕ್ಕೆ ಬಂದ ಬಾಗುರಾಯಣನಂ ನೋಡಿ,

"ಅಯ್ಯ, ನಂದರಿಗೆ ಮಂತ್ರಿಯಾದ ರಾಕ್ಷಸನು ನಮ್ಮ ಪುರವುದ್ಯಾನದಲ್ಲಿ ಇಳಿದು, ನಮ್ಮ ಕಾಣಬೇಕೆಂದು ತನ್ನ ದೂತರಂ ಕಳುಹಿಸಿ ಇದಾನೆ. ಈತನು ಚಂದ್ರಗುಪ್ತನಿಗೆ ವೈರಿಯಾದುದರಿಂದ ನಮಗೆ ಮಿತ್ರನಾದಾನು. ರಾಕ್ಷಸನು ಕಾರ್ಯದಕ್ಷನು, ಸತ್ಯವಂತನು, ದೂರದರ್ಶಿಯು, ಖ್ಯಾತಿವಂತನು. ಇವನು ಚಂದ್ರಗುಪ್ತನಲ್ಲಿ ಭಯಪಟ್ಟು ಬಂದವ ನಾದರೂ ಈತನ ಮುಖದಿಂದ ಪಾಟಲೀಪುರವಂ ಸಾಧಿಸಬೇಕು. ನಮ್ಮನ್ನವಲಂಬಿಸಿ ತನಗೆ ಚಂದ್ರಗುಪ್ತನಲ್ಲಿ ಇರುವ ದ್ವೇಷವಂ ಸಾಧಿಸಬೇಕೆಂದು ಹೇಳಿಕೊಂಡರೆ, ರಾಕ್ಷಸನಂ ನಾವಾಗಿ ಕರೆಕಳುಹಿಸಿದಂತಾಯಿತು" ಎಂದು ಹೇಳಲು,

"ಅಯ್ಯ ರಾಜಕುಮಾರಕನೇ, ರಾಕ್ಷಸನ ವಿಚಾರವಾಗಿ ನೀನು ಹೇಳಿದುದೆಲ್ಲವೂ ಸಹಜವೇ ಸರಿ. ಒಂದರಲ್ಲಿಯೂ ಕಳೆಯತಕ್ಕವನಲ್ಲ. ಚಂದ್ರಗುಪ್ತನಲ್ಲಿ ವೈರವಂ ಸಾಧಿಸಲೋಸುಗ ಬಂದು ಇರುವದೇ ನಿಶ್ಚಯವಾದರೆ, ನಿನ್ನ ಮನೋರಥವೆಲ್ಲವೂ

ಕ್ಕೈವಶವಾಯಿತು ಎಂದು ತಿಳಿಯುವನಾಗು" ಎನಲು, "ಅಯ್ಯ ಮಿತ್ರನೇ, ರಾಕ್ಷಸನಿಂದ ನನ್ನ ಮನೋರಥ ಸಫಲಪ್ರಾಯವೆಂದು ಹೇಳಿದೆಯಲ್ಲವೇ ! ಮೊದಲು ರಾಕ್ಷಸನು ಮಾಡಿದ ಸಾಹಸವೆಲ್ಲವೂ ಚಾಣಕ್ಯನಲ್ಲಿ ಏನು ಸಾಗಿತು ?" ಎನಲು, "ಅಯ್ಯ ರಾಜ ಕುಮಾರಕನೇ, ಹ್ಯಾಗಾದರೂ ದುರಹಂಕಾರಿಯಾಗಿ ಧೂರ್ತನಾಗಿ ನಿಷ್ಠುರಹೃದಯನಾದ ಚಾಣಕ್ಯನಿಗೂ ಸರಳಹೃದಯನಾಗಿ ರಾಜನೀತಿಜ್ಞನಾಗಿ ಪ್ರಭುವಾದ ಚಂದ್ರಗುಪ್ತನಿಗೂ ದೈವಯೋಗದಿಂದ ನಡೆದು ಬರುವ ಮಿತ್ರತ್ವವು ತಪ್ಪಿ ಅವರಿರ್ವರಿಗೂ ಮನಸ್ತಾಪ ವುಂಟಾದ ಸಮಯದಲ್ಲಿ ರಾಕ್ಷಸನ ಮುಖದಿಂದಲೇ ನಿನ್ನ ಕಾರ್ಯವೆಲ್ಲವೂ ಕೃತ ಕೂಡಿ ಬಂದಾವು" ಎನಲು,

"ಅಯ್ಯ ಬಾಗುರಾಯಣನೇ, ನಮ್ಮ ಪರಿವಾರವೆಲ್ಲವಂ ತೆಗೆದುಕೊಂಡು ನೀನೇ ಹೋಗಿ ರಾಕ್ಷಸನಂ ಕಂಡು, ಉಚಿತಪ್ರಕಾರದಿಂ ಕರೆತರುವನಾಗು" ಎಂದು ಹೇಳಿದ ಮಾತಿಗೆ, ಎಲ್ಲ ಮಂತ್ರಿಪರಿವಾರಸಮೇತನಾಗಿ ಬಾಗುರಾಯಣನು ಪುರದ ಉದ್ಯಾನಕ್ಕೆ ಹೋಗಿ, ಉಚಿತಪ್ರಕಾರದಿಂ ಎಲ್ಲರೂ ರಾಕ್ಷಸನಿಗೆ ನಮಸ್ಕರಿಸಿ ಕುಳ್ಳಿರಲು, ಎಲ್ಲರ ಯೋಗಕ್ಷೇಮವಂ ಕೇಳಿ, ರಾಕ್ಷಸನು ಬಾಗುರಾಯಣನಂ ಕುರಿತು, "ಏನಯ್ಯ ಸೇನಾ ಪತಿಯೇ, ನೀನು ಮಲಯಕೇತುವಿನ ಬಳಿಗೆ ಬರುವದಕ್ಕೆ ನಿಮಿತ್ತವೇನು ?" ಎನಲು,

"ಸ್ವಾಮೀ, ನಂದರು ಕಾಲವಾದ ಬಳಿಕ ಚಂದ್ರಗುಪ್ತನು ರಾಜ್ಯಕ್ಕೆ ಯೋಗ್ಯನಲ್ಲವೆಂಬ ಬುದ್ಧಿಯಿಂದ ಅವನಂ ಅನುವರ್ತಿಸುವದಕ್ಕೆ ಮನ ಒಡಂಬಡದೆ ನಂದರಾಜ್ಯದಲ್ಲಿ ಅರ್ಧ ರಾಜ್ಯಕ್ಕೆ ಕರ್ತು ಆಗುವ ಪರ್ವತರಾಯನನ್ನು ಅನುವರ್ತಿಸಬೇಕೆಂಬ ಬುದ್ಧಿಯಿಂದ ಚಂದ್ರಗುಪ್ತನಂ ಕಾಣಿಸಿಕೊಳ್ಳದೆ ಉದಾಸೀನನಾಗಿ ಇದ್ದುದಕ್ಕೆ, ಸಭೆಯಲ್ಲಿ ನನ್ನಂ ಕರೆ ಕಳುಹಿಸಿ ಅಪಮಾನಗೊಳಿಸಬೇಕೆಂಬ ಚಾಣಕ್ಯನ ಆಲೋಚನೆಯಂ ಆಪ್ತಮುಖದಿಂ ತಿಳಿದಿರಲು, ಅಷ್ಟರಲ್ಲಿಯೇ ಆ ರಾತ್ರೆಯೇ ಚಂದ್ರಗುಪ್ತನ ದೂತರು ಬಂದು, 'ನಿಮ್ಮ ಸೇನೆಗಳು ಈಗಲೇ ಯುದ್ಧಸನ್ನದ್ಧರಾಗಿ ಮಲಯಕೇತುವಿನ ಗುಡಾರಕ್ಕೆ ಪಶ್ಚಿಮದಿಕ್ಕಿನಲ್ಲಿ ನಿಂತು 'ಅಪ್ಪಣೆ ಬಂದ ಮೇರೆಗೆ ನಡೆದುಕೊಳ್ಳುವದು' ಎಂದು ಪ್ರಭುಗಳ ಅಪ್ಪಣೆಯಾಗಿ ಇದೆ'ಯೆಂದು ಸೇನೆಗಳಂ ಹೊರಡಿಸುತ್ತಿರಲು,

'ಇದೇನೋ ಚಾಣಕ್ಯನು ಪುತ್ರಸಮೇತನಾದ ಪರ್ವತರಾಯನಿಗೆ ಏನೋ ದ್ರೋಹ ವನ್ನೆಣಿಸಿ ಇರಬೇಕು, ಈ ಅರ್ಥವಂ ತಿಳಿಯಬೇಕೆಂ'ದು ನಿಶ್ಚೈಸಿ, ತ್ವರಿತದಿಂ ಪರ್ವತ ರಾಯನ ಗುಡಾರದ ಸಮೀಪಕ್ಕೆ ನಾನು ಬರುವಷ್ಟರಲ್ಲಿಯೇ, ಚಾಣಕ್ಯನು ಕಳುಹಿಸಿದ ವಿಷಕನ್ನೆಯಿಂದ ಪರ್ವತರಾಯನು ಮೃತನಾಗಿ, ಚಂದ್ರಗುಪ್ತನ ಸೇನೆಯು ಮಲಯ ಕೇತುವಿನ ಮೇಲೆ ಬರುವದಂ ತಿಳಿದು, ಮನಮರುಗಿ, ಮಲಯಕೇತುವಿಗೆ ಈ ಅರ್ಥವಂ ಬೇಗ ತಿಳುಹಿಸಿ, ಅವನಂ ಶತ್ರುಸೇನೆಗೆ ಸಿಕ್ಕದಂತೆ ತಪ್ಪಿಸಿ ದೂರವಾಗಿ ಕರೆತಂದು ಬಿಡಲು, ತನಗೆ ಉಪಕಾರವಂ ಮಾಡಿದನೆಂಬ ಪ್ರೀತಿಯಿಂದ ನನ್ನಂ ಪುರಕ್ಕೆ ಹೋಗಲೀಸದ ತನ್ನ ಸಂಗಡಲೇ ಕರೆತಂದನು. ಇನ್ನು ನೀವು ಮಲಯಕೇತುವಿನಲ್ಲಿ ಅನುಗ್ರಹವಂ ಮಾಡಿ ಬಂದ ಬಳಿಕ ಆತನು ಬಯಸಿದುದೆಲ್ಲವೂ ಸಫಲವಾಗುವದು. ಇನ್ನು ದಯಮಾಡ ಬಹುದು" ಎಂದು ಬಾಗುರಾಯಣನು ಹೇಳಿದ ಮಾತಿಗೆ ರಾಕ್ಷಸನೆದ್ದು, ಪರಿವಾರಸಮೇತ ನಾಗಿ ರಾಜಸಭೆಗೆ ಬರುತ್ತಿರಲು,

ಅದಂ ಕಂಡು ಮಲಯಕೇತು ಪೀಠದಿಂದೆದ್ದು ಬಂದು ರಾಕ್ಷಸನಿಗೆ ನಮಸ್ಕರಿಸಲು, ಮಲಯಕೇತುವಂ ತಕ್ಕೈಸಿ, 'ಜಯಶೀಲನಾಗೆಂ'ದು ಹರಸಿ, ಅವರಿರ್ವರೂ ಉಚಿತ ಪ್ರಕಾರದಿಂ ಕುಳಿತು,

"ಅಮಾತ್ಯಶ್ರೇಷ್ಠರೇ, ನೀವು ಕ್ಷೇಮಿಗಳೇ ?" ಎನಲು, "ಅಯ್ಯ ಕುಮಾರಕನೇ, ನೀನು ಶ್ರೇಯೋವಂತನಾಗಿ ಇರುವದಂ ಕೇಳಿ ನಾವು ಕ್ಷೇಮಿಗಳಾಗಿ ಇದೇವೆ. ಪ್ರಜಾಪರಿವಾರ ಸಮೇತನಾದ ನಿನಗೆ ಕ್ಷೇಮವೇ ? ನಾನು ನಿಮ್ಮ ತಂದೆಗೆ ಮಿತ್ರನಾದ ಸಲಿಗೆಯಿಂದ ನಿನ್ನಂ ಕುಮಾರಕನೆಂದು ಸಂಬೋಧಿಸಬೇಕಾಯಿತು. ನಮ್ಮಿರ್ವರಿಗೆ ಉಂಟಾಗಿ ಇದ್ದ ಮಿತ್ರ ತ್ವವಂ ನಿಮ್ಮ ವೃದ್ಧಮಂತ್ರಿಗಳಂ ಕೇಳಿದರೆ ವಿವರವಾಗಿ ತಿಳಿಯಲಾದೀತು. ಅದಂತಿರಲಿ. ವಂಚಕನಾದ ಚಾಣಕ್ಯನ ಕಪಟವಂ ನಿಶ್ಚಯವೆಂದು ಎಣಿಸಿ, ಮಾಡಿದ ಯತ್ನಗಳು ಪ್ರಯೋಜನಕ್ಕೆ ಬಾರದೆ, ಪರ್ವತರಾಯನು ಮಹಾವಿಪತ್ತಿಗೆ ತಗುಲಿದನು. ನೀನು ಪಿತೃ ಕ್ಲೇಶದಿಂದ ಖಿನ್ನನಾಗಿ, ಬಹುಪ್ರಜಾನಿಕರಕ್ಕೆ ಆಧಾರವಾದ ಪರ್ವತರಾಜ್ಯವಿಚಾರದಲ್ಲಿ ಉಪೇಕ್ಷಾವಂತನಾಗಿ ಇದಾನೆಂದು ತಿಳಿದು, ನಿನ್ನಂ ನೋಡ ಬಂದೆನು" ಎನಲು,

"ಅಯ್ಯ ಅಮಾತ್ಯಶ್ರೇಷ್ಠರೇ, ನಿಗ್ರಹಿಸಲೆಣಿಸಿದ ದೈವವು ವಂಚಕರಂ ಆಪ್ತರನ್ನಾಗಿ ಮಾಡಿ ತೋರಿಸಿ, ಅವರ ಮುಖದಿಂದ ಪುರುಷನಂ ಸಂಹಾರಗೊಳಿಸುವದಲ್ಲದೆ ಪ್ರತ್ಯಕ್ಷ ವಾಗಿ ಬಂದು ನಿಗ್ರಹಿಸುವದುಂಟೇ ? ಮೊದಲಿನಂತೆ ಎಂದು ಭಾವಿಸದೆ, ಈಗ ನನ್ನಲ್ಲಿ ಪುತ್ರವಾತ್ಸಲ್ಯವಿಟ್ಟು, ಸಕಲಕ್ಕೂ ನನಗೆ ಸಹಾಯರಾಗಿ ಇರಬೇಕು. ಬಹಳ ಕೃಪೆಯಿಂದ 'ಬಾಲಕನಂ ನೋಡಬೇಕೆಂ'ದು ಬಂದುದರಿಂದ ನಮ್ಮ ಪಿತೃಕ್ಲೇಶವು ನಿವೃತ್ತಿ ಆಯಿತು. ವಿಶ್ರಮಿಸಿಕೊಳ್ಳಬಹುದೆಂ"ದು ರಾಕ್ಷಸನಿಗೆ ಹೇಳಿ, ಸಕಲ ಸೋಪಸ್ಕರ ಸಮೇತವಾಗಿ ರಾಜಯೋಗ್ಯವಾದ ಬಿಡಾರವಂ ಮಾಡಿಸಿ, ರಾಕ್ಷಸನಂ ಬಿಡಾರಕ್ಕೆ ಕಳುಹಿಸಿ, ಮಲಯ ಕೇತುವು ಮಜ್ಜನಗೃಹಾಭಿಮುಖನಾಗುತ್ತಿದ್ದನು.

ಆ ಮಾರನೆಯ ದಿವಸ, ರಾಕ್ಷಸನಂ ಕರೆಕಳುಹಿಸುವ ಕುತೂಹಲದಿಂದ "ಅಮಾತ್ಯರ ಸಮಯವೇನು, ನೋಡಿ ಬಾರೆಂ"ದು ಮಲಯಕೇತುವು ದೂತರಂ ಕಳುಹಿಸಲು, ಆ ದೂತರು ಬಂದು ರಾಕ್ಷಸನಿಗೆ ಕೈಮುಗಿದು, "ತಮ್ಮ ಸಮಯವೇನೆಂದು ತಿಳಿದು ಬರಹೇಳಿ ನಮ್ಮ ದೊರೆಯವರು ಕಳುಹಿಸಿದರು" ಎನಲು, ಅದಂ ಕೇಳಿ "ನಾವೇ ಬರುತಲಿದೇವೆ" ಎಂದು, ರಾಕ್ಷಸನೆದ್ದು ಆಸ್ಥಾನಕ್ಕೆ ಹೋಗಿ, ಮಲಯಕೇತುವಂ ಕಂಡು, ಉಚಿತಪ್ರಕಾರ ವಾಗಿ ಕುಳ್ಳಿರಲು, ಮಲಯಕೇತುವಿಂತೆಂದನು :

"ಅಮಾತ್ಯಶ್ರೇಷ್ಠರೇ, ಪಾಟಲೀಪುರವಂ ಬಿಟ್ಟು ಬಂದ ಬಳಿಕ ಇಷ್ಟು ದಿವಸ ನಿಮಗೆ ವಾಸವೆಲ್ಲಿ ? ಮುಂದಣ ಕಾರ್ಯವು ನೆರವೇರುವದಕ್ಕೆ ಏನು ಸಂಕಲ್ಪಿಸಿ ಇದ್ದೀರಿ ? ಕರ್ತವ್ಯ ಕಾರ್ಯವು ಅವಶ್ಯವಾಗಿರುವಲ್ಲಿ ಲೋಕದವರಂತೆ ಸುಮ್ಮನಿರತಕ್ಕವರಲ್ಲ ಎಂದು ಕೇಳಿದೆನು" ಎನಲು, "ಅಯ್ಯ ಕುಮಾರಕನೇ" ಎಂದು ರಾಕ್ಷಸನು ನಾಲ್ಕು ದಿಕ್ಕಿನ ಜನವಂ ನೋಡಲು, ಅಲ್ಲಿದ್ದ ಜನರೆಲ್ಲರೂ ಏಕಾಂತಸಮಯವೆಂದು ತಿಳಿದು ಅಲ್ಲಲ್ಲಿ ತೆರಳುತ್ತಿರಲು, "ಅಯ್ಯ ಮಲಯಕೇತುವೇ, ಅವಶ್ಯಕರ್ತವ್ಯ ರಾಜಕಾರ್ಯವೇನು ನನಗಿದ್ದರೂ ಪ್ರಭುವಿನ ಅವಲಂಬ ಹೊರತು ಸಿದ್ಧಿಸದು. ಅದೇನೆಂದರೆ,

ಚಾಣಕ್ಯನೆಂಬ ಬ್ರಾಹ್ಮಣನು ನಿಮ್ಮ ತಂದೆಗೆ ಬೋಧಿಸಿ ಕರೆಕೊಂಡು ಹೋಗಿ, ಛದ್ಮನೆ

ಯಿಂದ ನಂದರಂ ಸಂಹರಿಸಿ, ನಿಮ್ಮ ತಂದೆಗೆ ತಾನು ಆಡಿದ ಅರ್ಧರಾಜ್ಯವಂ ಕೊಡಬೇಕಲ್ಲಾ ಎಂಬ ಲೋಭಬುದ್ಧಿಯಿಂದ ಆತನಿರಬಾರದೆಂದು ವಿಷಕನ್ನೆಯಂ ಕಳುಹಿಸಿ, ನಿಮ್ಮ ತಂದೆಯಾದ ಪರ್ವತರಾಯನಂ ಸಂಹಾರಗೈಸಿ, ಈಗಲೂ ಆ ಅರ್ಧರಾಜ್ಯವಂ ನಿನಗೆ ಕೊಡದೆ, ನಿನ್ನಂ ಲಕ್ಷೀಕರಿಸದೆ ಇರುವದರಿಂದ, ದ್ರೋಹಿಗಳಾದವರಂ ದಂಡಿಸಬೇಕಲ್ಲದೆ ಪ್ರಭುವಾದವನು ಸುಮ್ಮನಿರಬಾರದು. ಅವರು ಮಾಡಿದ ದ್ರೋಹಕ್ಕೆ ಏನು ಮಾಡಿದರೂ ಮಾಡಬಹುದು. ನಂದರಾಜ್ಯದಲ್ಲಿ [೧]ನನಗೆ[೧] ಪ್ರಜಾಸಮ್ಮತಿಯಿರುವಂತೆ ಅನ್ಯರಿಗಿರಲಾರದು. ಪ್ರಮುಖರಾದ ನನ್ನ ಕಡೆಯವರು ಕಪಟದಿಂ ಚಂದ್ರಗುಪ್ತನಂ ಸಂಹರಿಸಲುದ್ಯುಕ್ತರಾಗಿ ಸಮಯವಂ ನೋಡುತಲಿದಾರೆ. ಈ ವೇಳೆಯಲ್ಲಿ ನೀನು ಧೈರ್ಯವಂ ಮಾಡಿ, ಪುನಃ ಸೇನೆಗಳಂ ಜೊತೆಗೊಳಿಸಿಕೊಂಡು ಪಾಟಲೀಪುರವಂ ಮುತ್ತಿದರೆ, ನಿನ್ನ ಅವಲಂಬವಿರುವದರಿಂದ ಯಾವ ಉಪಾಯದಿಂದಲಾದರೂ ಚಂದ್ರಗುಪ್ತನಂ ಸಂಹರಿಸಿ, ನಂದರಾಜ್ಯಾಧಿಪತ್ಯವನ್ನು ಸಹ ನಿನಗೆ ಉಂಟುಮಾಡಿ, ಶತ್ರುಸಂಹಾರವಾದುದರಿಂದ ಲೋಕಾಂತರಸ್ಥರಾದ ನಂದರಿಗೆ ಸಂತೋಷವನ್ನುಂಟುಮಾಡುವೆನಲ್ಲದೆ, ನಾನು ಭೋಗಾಸಕ್ತನಾಗಿ ರಾಜ್ಯವಂ ಸಾಧಿಸಬೇಕೆಂದು ಬಂದವನಲ್ಲ ; ಸ್ವಾಮಿಭಕ್ತಿಯಂ ನೆರವೇರಿಸಿ ಕೀರ್ತಿಯನ್ನಾದರೂ ಸಂಪಾದಿಸುವೆನು'' ಎಂದು ರಾಕ್ಷಸನು ಮಲಯಕೇತುವಿಗೆ ಹೇಳುತ್ತಿರಲು,

''ಅಯ್ಯ ಅಮಾತ್ಯಶ್ರೇಷ್ಠರೇ, ನಾನು ಬಯಸಿದರ್ಥವನ್ನೇ ನೀವು ಬಯಸಿರುವಿರಿ. ನೀವು ಬೇಕೆಂದು ಸಾಹಸವಂ ಮಾಡಿದರೆ, ಚಂದ್ರಗುಪ್ತನಂ ವಹಿಸಿರುವ ಚಾಣಕ್ಯನ ಕಪಟೋಪಾಯವೆಷ್ಟು ಮಾತ್ರವು ? ಚಂದ್ರಗುಪ್ತನಂ ಸಂಹರಿಸಿದಲ್ಲದೆ ಪಿತೃಕಾರ್ಯವಂ ನೆರವೇರಿಸಿ ಗಂಧಮಾಲಿಕೆಗಳಂ ಸ್ವೀಕರಿಸುವದಿಲ್ಲವೆಂಬ ವೀರವ್ರತ ಸಫಲವಾಗುವದಕ್ಕೆ ನೀವು ನನ್ನ ಬಳಿಗೆ ಬಂದಿರಿ. ಮೊದಲಿನಂತೆ ಸೇನೆಗಳಂ ಜೊತೆಗೊಳಿಸುವೆನು. ನನ್ನ ರಾಜ್ಯದ ಸರ್ವಾಧಿಕಾರವಂ ಬುದ್ಧಿಸಂಪನ್ನರಾದ ನಿಮಗೆ ಕೊಟ್ಟು, ನೀವು ಹೇಳಿದಂತೆ ನಡೆದುಕೊಳ್ಳುತ್ತಲಿರುವೆನು. ನನ್ನ ಪ್ರಜಾಪರಿವಾರಗಳಿಗೆ ನಮ್ಮ ತಂದೆಯಾದ ಪರ್ವತರಾಯನಿಗಿಂತಲೂ ಅಧಿಕವಾಗಿ ಸಂತೋಷವಂ ಮಾಡುತ್ತ, ನಮ್ಮ ಶತ್ರುಗಳಂ ನಿಗ್ರಹಿಸಿ, ನನ್ನಂ ಸಕಲ ರಾಜ್ಯಾಧಿಪತಿಯೆಂದೆನಿಸಿ, ಇನ್ನೂ ಖ್ಯಾತಿವಂತ[೨][ರಾಗಿರಿ][೨]'' ಎಂದು ರಾಕ್ಷಸನಿಗೆ ಹೇಳಿ, ಕರ್ಪೂರ ವೀಳಯವನ್ನಿತ್ತು, ಬಿಡಾರಕ್ಕೆ ಕಳುಹಿಸುತ್ತಿದ್ದನು.

ಮತ್ತೊಂದು ದಿವಸ, ಸಕಲವಾದ ಅಧಿಕಾರಿಗಳಿಂದಲೂ ಶೇಖರಮುಖ್ಯರಾದ ಸೇನಾಪತಿಗಳಿಂದಲೂ ಚಿತ್ರವರ್ಮಮುಖ್ಯರಾದ ಅರಸುಗಳಿಂದಲೂ ಶೋಭಿಸುತ್ತ ಇಂದ್ರಸಭೆಯಂತೆ ಬುದ್ಧಿಸಂಪನ್ನರಾದ ಮಂತ್ರಿಗಳಿಂದ ಯುಕ್ತವಾಗಿರುವ ರಾಜಾಸ್ಥಾನಕ್ಕೆ ಮಲಯಕೇತು ಬಂದು ಕುಳಿತು, ರಾಕ್ಷಸನಂ ಕರೆಕಳುಹಿಸಿ, ಕುಳ್ಳಿರಿಸಿಕೊಂಡು, ಮಂತ್ರಿಗಳು ಮುಖ್ಯರಾದ ಅಧಿಕಾರಿಗಳಂ ಕುರಿತು, ಇಂತೆಂದನು :

''ಅಯ್ಯ ಅಧಿಕಾರಿಗಳಿರಾ, ಕಾರ್ಯದಕ್ಷರಾಗಿ ಬುದ್ಧಿಸಂಪನ್ನರಾಗಿ ನಮ್ಮ ತಂದೆಗಳಿಗೆ ಮಿತ್ರಭಾವದಿಂದಿರುತ್ತಿದ್ದ ಅಮಾತ್ಯರಾಕ್ಷಸರು ನಮ್ಮ ಶ್ರೇಯೋಲಾಭಕ್ಕೆ ಅನುಕೂಲರಾಗಿ

---

೧. ನಿನಗೆ (ಕ) ೨. ನಾಗು (ಕ, ಖ, ಗ)

ಇರುವದರಿಂದ, ನಮ್ಮ ಬಳಿಯ ಸರ್ವಾಧಿಕಾರವಂ ವಿಚಾರಿಸುವಂತೆ ನಾವು ಒಡಂಬಡಿಸಿ ಇರುವದರಿಂದ, ಅವರು ಹೇಳಿದ ರೀತಿಗೆ ರಾಜಕಾರ್ಯವಂ ಮಾಡುತ್ತಲಿರುವರಾಗಿ" ಎಂದು ಅಧಿಕಾರಿಗಳಿಗೆ ನೇಮಿಸಿ, ಶೇಖರ ಮುಖ್ಯರಾದ ಸೇನಾಪತಿಗಳನ್ನು, ಚಿತ್ರವರ್ಮಮುಖ್ಯ ರಾದ ಅರಸುಗಳಂ ಕುರಿತು,

"ಅಯ್ಯ ನಮಗೆ ಪರಮಪ್ರಿಯರಾದ ಅರುಸಗಳಿರಾ, ಈಗ ಪುನಃ ಪಾಟಲೀಪುರಕ್ಕೆ ರಾಜಕಾರ್ಯವಾಗಿ ಸೇನೆಗಳು ತೆರಳಬೇಕಾಗಿ ಇದೆ. ಅಮಾತ್ಯಶ್ರೇಷ್ಠರು ಹೇಳಿದ ಮೇರೆಗೆ ಮೊದಲಿನಂತೆ ನಿಮ್ಮ ಸೇನೆಗಳಂ ಸಜ್ಜುಮಾಡಿಕೊಂಡು, ಹೊರಡುವ ಸಮಯಕ್ಕೆ ನೀವು ಸಿದ್ಧವಾಗಿ ಕಾದಿರತಕ್ಕುದು" ಎಂದು ನೇಮಿಸಿ, ಆಗ ಬೊಕ್ಕಸದಿಂದ ಅನರ್ಘ್ಯವಸ್ತ್ರಭೂಷಣ ಗಳಂ ತರಿಸಿ ರಾಕ್ಷಸನ ಮುಂದೆ ಇರಿಸಲು, ರಾಕ್ಷಸನು ಅದಂ ನೋಡಿ, "ಏನಯ್ಯ ಕುಮಾರಕನೇ ವಿಶೇಷಪ್ರಯತ್ನವು" ಎನಲು, "ಸ್ವೀಕರಿಸಬೇಕೆಂ"ದು ಮಲಯಕೇತುವು ಹೇಳಲು,

"ಅಯ್ಯ ಕುಮಾರಕನೇ, ಭೂಷಣಧಾರಣಕ್ಕೆ ಸಮಯ ಬೇರೆ ಉಂಟು. ನೀನು ಕೊಟ್ಟ ಭೂಷಣವಂ ಧರಿಸಬೇಕಾದರೆ, ನಿನಗೆ ಶತ್ರುವಾದ ಚಂದ್ರಗುಪ್ತನನ್ನು ನಿನ್ನಿಂದ ಸಂಹಾರ ಗೈಸಿ ಸಕಲನರಪತಿಮಕುಟಮಣಿಪ್ರಭಾನೀರಾಜಿತಮಾದ ಪಾದಪ್ರಾಂತದಿಂ ಶೋಭಿಸುವ ನಂದರ ಸಿಂಹಾಸನದಲ್ಲಿ ನಿನ್ನಂ ಕುಳ್ಳಿರಿಸಿ, ಸಕಲ ರಾಜ್ಯಾಭಿಷೇಕವಂ ಮಾಡಿಸಿ, ವಂದಿ ಮಾಗಧರು ಹೊಗಳುತ್ತಿರಲು, ಸಕಲ ರಾಜಮಂಡಲವೂ ಕಪ್ಪಗಳನ್ನೊಪ್ಪಿಸುತ್ತಿರಲು, ಆಗ ನಾನು ಕೃತಕೃತ್ಯನಾಗಿ ನೀನು ಕೊಟ್ಟ ಆಭರಣವಂ ಸ್ವೀಕರಿಸುವೆನಲ್ಲದೆ, ಪ್ರಭುಗಳಾದ ನಂದರನ್ನಗಲಿ, ಶತ್ರುಗಳಂ ನಿಗ್ರಹಿಸದೆ, ತ್ಯಜಿಸಿದ್ದ ಆಭರಣಗಳಂ ಯಾವ ಮಹೋತ್ಸವ ಕ್ಕೋಸುಗ ಅಂಗೀಕರಿಸುವೆನು" ಎಂದು ರಾಕ್ಷಸನು ಹೇಳುತ್ತಿರಲು, ಮಲಯಕೇತುವು ನಿರ್ಬಂಧಪಡಿಸುವದಕ್ಕೆ ಲಜ್ಜಿತನಾಗಿ ಸಮೀಪದಲ್ಲಿ ಇದ್ದ ಉಲೂಕನೆಂಬ ವೃದ್ಧ ಮಂತ್ರಿಯ ಮುಖವಂ ನೋಡಲು, ಪ್ರಭುವಿನ ಮನೋಗತವಂ ತಿಳಿದು ಆ ಉಲೂಕ ನೆಂಬ ಮಂತ್ರಿ ಇಂತೆಂದನು :

"ಸ್ವಾಮೀ ಅಮಾತ್ಯರೇ, ನೀವು ಮಲಯಕೇತುವಿನ ಆಸ್ಥಾನವಂ ಪ್ರವೇಶಿಸಿದಾಗಲೇ 'ಶತ್ರುಸಂಹಾರವಾಗಿ ನಂದರಾಜ್ಯವು ಮಲಯಕೇತುವಿನ ವಶವಾಯಿತು' ಎಂದು ಜನ ರೆಲ್ಲರೂ ತಿಳಿದೇ ಇದಾರೆ. ಕಾರ್ಯದಕ್ಷರಾದ ನೀವು ಸಂಕಲ್ಪಿಸಿದರ್ಥವು ಅನ್ಯಥಾ ಆಗುವ ದುಂಟೇ ? ನೀವು ಆಭರಣರಹಿತರಾಗಿ ಇರುವದಂ ನೋಡಿ ಪ್ರಭುವಿನ ಚಿತ್ತಕ್ಕೆ ಸಮಾ ಧಾನವಿಲ್ಲ. ನೀವು ಅಲಂಕೃತವಾಗಿ ಇದ್ದರೆ ಸಭೆಯೆಲ್ಲವೂ ಅಲಂಕೃತವಾಗಿ ತೋರುವದು. ಪ್ರಭುವಿನ ಮನಸ್ಸಿಗೆ ಸಂತೋಷವನ್ನುಂಟುಮಾಡುವದೇ ನಿಶ್ಚಯವಾದರೆ, ಪ್ರಥಮದಲ್ಲಿ ಶುಭಸೂಚಕವಾಗಿ ನೀವೇ ಧರಿಸಬೇಕೆಂದು ಪ್ರೀತಿಯಿಂದ ಕೊಟ್ಟ ಆಭರಣವನ್ನಂಗೀಕರಿಸ ಬೇಕು. ನಿಮಗಿಂತಲೂ ಸಮಯೋಚಿತಜ್ಞರುಂಟೇ ?" ಎಂದು ಹೇಳಲು, ಆದಕ್ಕೆ ರಾಕ್ಷಸನು ವಿಹಿತವೆಂದು ತಿಳಿದು, "ನಿಮ್ಮ ಬಳಿಗೆ ಬಂದ ಬಳಿಕ ನಾನು ನಿಮ್ಮ ಅಧೀನನು ; ನಿಮ್ಮ ಚಿತ್ತಕ್ಕೆ ಬಂದಂತಾಗಲಿ" ಎಂದು ಹೇಳಲು,

ಆಗ ಶೇಖರನೆದ್ದು ಬಂದು ರಾಕ್ಷಸನಿಗೆ ದಿವ್ಯಗಂಧಲೇಪನವಂ ಮಾಡಿ, ಪುಷ್ಪ ಮಾಲ್ಯದಿಂದಲಂಕರಿಸಿ, ವಜ್ರದ ತುರಾಯಿನಿಂದ ಶೋಭಿಸುವ ಉಷ್ಣೀಷಧಾರಣೆಯಂ

ಮಾಡಿಸಿ, ದಿವ್ಯಮುಕ್ತಾಹಾರವಂ ಕಂಠಕ್ಕೆ ಅಲಂಕರಿಸಿ, ರತ್ನಕಟಕಗಳಂ ತೊಡಿಸಿ, ನವರತ್ನದಂಗುಳೀಯಕಗಳಂ ಬೆರಳುಗಳಿಗಲಂಕರಿಸಿ, ದಿವ್ಯವಸ್ತ್ರಧಾರಣೆಯಂ ಮಾಡಿಸಿ, ಕರ್ಪೂರವೀಳಯವಂ ತಂದು ಇರಿಸಲು, ಅದಂ ಸ್ವೀಕರಿಸಿ, ರಾಕ್ಷಸನೆದ್ದು ಬಂದು, ಮಲಯಕೇತುವಿಗೆ 'ಜಯಶೀಲನಾಗೆಂ'ದು ಹರಸಿ ಕುಳ್ಳಿರಲು, ಮಲಯಕೇತುವು ರಾಕ್ಷಸನಂ ನೋಡಿ ಸಂತೋಷಪಡುತ್ತ,

"ಅಯ್ಯ ಅಮಾತ್ಯರೇ, ಅಧಿಕಾರಿಗಳೆಲ್ಲರಿಗೂ ನೀವೇ ಅಪ್ಪಣೆ ಕೊಟ್ಟು ಕಳುಹಿಸಿರಿ" ಎನಲು, ರಾಕ್ಷಸನು ಕ್ರಮವಾಗಿ ಅಧಿಕಾರಿಗಳಂ ತನ್ನ ಬಳಿಗೆ ಕರೆದು, ಅವರಿಗೆ ಪ್ರಕೃತೋಚಿತ ಕಾರ್ಯವಂ ನೇಮಿಸುತ್ತ, [ಚಿತ್ರವರ್ಮ]ಮುಖ್ಯರಾದ ಅರಸುಗಳೆಲ್ಲರಂ ಕರೆದು, ಎಲ್ಲರಿಗೂ · ಉಚಿತಪ್ರಕಾರವಾಗಿ ಗಂಧಮಾಲ್ಯಕರ್ಪೂರವೀಳಯಗಳಿಂದುಪಚರಿಸುತ್ತಿರಲು, ಮಧ್ಯಾಹ್ನ ಸೂಚಕವಾದ ಶಂಖಭೇರೀವಾದ್ಯಗಳು ಭೋರಿಡುತ್ತಿರಲು, ಮಲಯಕೇತುವು ಆಸ್ಥಾನದಿಂದೆದ್ದು ಸ್ನೇಹಿತರಾದ ರಾಜಪುತ್ರರೊಡನೆ ಸಲ್ಲಾಪವಂ ಗೈಯುತ, ರಾಜಭವನವನ್ನೈದುತ್ತಿರಲು,

ರಾಕ್ಷಸನು ಶೇಖರಮುಖ್ಯರಾದ ಸೇನಾಪತಿಗಳೊಡಗೂಡಿ ತನ್ನ ಬಿಡಾರಕ್ಕೆ ಬಂದು, ಅಂದುಮೊದಲುಗೊಂಡು ಪರ್ವತರಾಜ್ಯದಲ್ಲಿ ಪೂರ್ವದಿಂ ನಡೆದು ಬಂದ ಆಯಕಟ್ಟುಗಳಂ ಚೆನ್ನಾಗಿ ವಿಚಾರಿಸಿ ತಿಳಿದು, "ಆ ದೇಶಮರ್ಯಾದಾನುಗುಣ್ಯವಾಗಿಯೇ ನಡೆದು ಬರುವದರಲ್ಲಿ ಪ್ರಜೆಗಳು ಕೊಡುವ ಈ ತೆರಿಗೆಯಿಂದ ಪ್ರಜೆಗಳಿಗೆ ಸೌಖ್ಯವೂ ರಾಜಭಂಡಾರಕ್ಕೆ ಆದಾಯವೂ ಕಾಣೆಸಲಿಲ್ಲ ; ಇದಂ ತಪ್ಪಿಸಿ ಈ ರೀತಿಯಿಂದ ಪ್ರಜೆಗಳೆಲ್ಲರೂ ತೆತ್ತು ಬರುವಂತೆ ಮಾಡಿದರೆ ಪ್ರಜೆಗಳಿಗೆ ಸೌಖ್ಯವುಂಟಾಗಿ ರಾಜಕೋಶವು ಸಮೃದ್ಧಮಾಗಿ ಇರುವದು" ಎಂದು ನಿಶ್ಚೈಸಿ, ರಾಕ್ಷಸನು ಆಸ್ಥಾನಕ್ಕೆ ಬಂದು ಕುಳಿತು, ಕಟ್ಟುಕರಣಿಕರಂ ಕರಸಿ, ತಾನು ಮಾಡಿದ ಆಯಕಟ್ಟುಗಳಂ ಬರೆಸಿ, ರಾಯಸದವರ-ಕರೆದು, ಗಡಿಗಳ ಅಧಿಕಾರಿಗಳೆಲ್ಲರಿಗೂ ಈ ರೀತಿಯಲ್ಲಿ ನಡೆದುಕೊಳ್ಳುವಂತೆ ಉತ್ತರಗಳಂ ಬರೆಸಿ, ಬೇಹಿನ ಚಾವಡಿ ಗೊತ್ತುಗಾರನ ವಶಕ್ಕೆ ಕೊಡಲು, ಅವನು ಕಳುಹಿಸಿದ ಉತ್ತರದ ರೀತಿಗೆ ಗಡಿಗಳ ಅಧಿಕಾರಿಗಳು ದೇಶದ ಪ್ರಜೆಗಳಂ ಕರೆಕಳುಹಿಸಿ, "ಈ ರೀತಿಯಲ್ಲಿ ನೀವು ನಡೆದುಕೊಳ್ಳುವಂತೆ ಅಮಾತ್ಯ ರಾಕ್ಷಸರೆಂಬ ಸರ್ವಾಧಿಕಾರಿಗಳ ಅಪ್ಪಣೆಯಾಗಿ ಇದೆ" ಎನಲು, ಅದಂ ಕೇಳಿ ಸಂತುಷ್ಟರಾದ ಪ್ರಜೆಗಳೆಲ್ಲರೂ ಅದೇ ಮೇರೆಗೆ ಅರಮನೆಗೆ ಹಣಗಳಂ ಕೊಡುತಿರಲು, ಮೊದಲಿನ ಮೇರೆಗೆ ಇಮ್ಮಡಿಯಾಗಿ ಪ್ರಜೆಗಳಿಂದ ಬಂದ ದ್ರವ್ಯಗಳು ರಾಜಕೋಶಕ್ಕೆ ಬರುತ್ತಿರಲು, ಅದಂ ನೋಡಿದ ಅಧಿಕಾರಿಗಳೆಲ್ಲರೂ ರಾಕ್ಷಸನು ಮಾಡುವ ರಾಜ್ಯತಂತ್ರವಿಚಾರಕೌಶಲ್ಯವಂ, ಆತನ ಆಜ್ಞಾಶಕ್ತಿಯಂ, ಪದೇ ಪದೇ ಶ್ಲಾಘಿಸುತ್ತಿದ್ದರು" ಎಂಬಲ್ಲಿಗೆ,

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಮಹೀಶೂರನರಪತಿ ಶ್ರೀಕೃಷ್ಣರಾಜೇಂದ್ರರಾಶ್ರಿತ ಹೊಯಿಸಣೆಗಕುಲಸಂಜಾತ ನಾರಾಯಣಶರ್ಮ ವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ಮಲಯಕೇತುವಿಗೂ ರಾಕ್ಷಸನಿಗೂ ಸಖ್ಯವೆಂಬ ದ್ವಾದಶಾಶಯಃ ಸಮಾಪ್ತಃ.

ತ್ರಯೋದಶಾಶಯ : ಅಮಾತ್ಯರಾಕ್ಷಸನ ಕೈಮೊಹರವಂ ಸಂಗ್ರಹಿಸಿದ ಕಥನವು

ಅನಂತರದಲ್ಲಿ ಮೊದಲು ಪಾಟಲೀಪುರವಂ ಬಿಟ್ಟು ಹೋಗಿ ಇರುವ ರಾಕ್ಷಸನ ವೃತ್ತಾಂತವಂ ತಿಳಿಯಲೋಸುಗ ಚಾಣಕ್ಯನಿಂದ ನೇಮಿಸಿದ್ದ ಗೂಢಚಾರರೊಳಗೆ ಸಮಿದ್ಧಕನೆಂಬ ಒಬ್ಬ ಚಾರನು ಅಲ್ಲಿ ಅಲ್ಲಿ ರಾಕ್ಷಸನಿರುವದಂ ಹುಡುಕುತ್ತ, ಎಲ್ಲಿಯೂ ಗೊತ್ತಾಗದಿರಲು, ಪರ್ವತರಾಯನ ಪಟ್ಟಣಕ್ಕೆ ಬಂದು, ಮಲಯಕೇತುವು ರಾಕ್ಷಸನಂ ಸನ್ಮಾನಗೊಳಿಸಿ ತನ್ನ ಬಳಿಯ ಸರ್ವಾಧಿಕಾರವಂ ರಾಕ್ಷಸನಿಗೆ ಕೊಟ್ಟು, ಚಿತ್ರವರ್ಮಮುಖ್ಯರಾದ ಅರಸುಗಳಿಗೆ ರಾಕ್ಷಸನ ಅಪ್ಪಣೆ ಮೇರೆಗೆ ನಡೆಯುವಂತೆ ನೇಮಿಸಿ, ಚಂದ್ರಗುಪ್ತನ ಮೇಲೆ ಕಾರ್ಯಭಾಗಕ್ಕೆ, ಪಾಟಲೀಪುರವಂ ಮುತ್ತುವದಕ್ಕೆ, ಮೊದಲಿನಂತೆ ಸೇನೆಗಳೆಲ್ಲವೂ ಸಿದ್ಧವಾಗಲೆಂದು ಆಸ್ಥಾನದಲ್ಲಿ ಮಲಯಕೇತುವು ಹೇಳಿದ ವೃತ್ತಾಂತವಂ ತಿಳಿದು, ಪಾಟಲೀಪುರಕ್ಕೆ ಬಂದು ಚಾಣಕ್ಯರಂ ಕಂಡು ಕೈಮುಗಿದು,

''ಸ್ವಾಮಿಯವರ ಅಪ್ಪಣೆ ಮೇರೆಗೆ ರಾಕ್ಷಸನ ವೃತ್ತಾಂತವಂ ತಿಳಿಯುವದಕ್ಕೆ ನೇಮಿಸಿದ್ದ ಸಮಿದ್ಧಕನೆಂಬ ಚಾರನು ನಾನು. ಅಪ್ಪಣೆಯಾದರೆ ವಿಜ್ಞಾಪಿಸುವೆನು'' ಎನಲು, ಆಗ ರಹಸ್ಯದಲ್ಲಿ 'ಮತ್ತೇನೈ?' ಎನಲು, ''ಸ್ವಾಮಿ, ರಾಕ್ಷಸನು ಪರ್ವತರಾಯನ ಪಟ್ಟಣಕ್ಕೆ ಬಂದು, ಸಮ್ಮಾನದಿಂ ಮಲಯಕೇತುವಂ ಕಂಡು, ಅವರವರ ಮನಸ್ಸುಗಳು ಒಡಂಬಟ್ಟದ್ದರಿಂದ ತನ್ನ ಬಳಿಯ ಸರ್ವಾಧಿಕಾರವಂ ರಾಕ್ಷಸನಿಗೆ ನೇಮಿಸಿ, ಆತನು ಹೇಳಿದ ಮೇರೆಗೆ ನಡಕೊಳ್ಳುವಂತೆ ತನ್ನ ಸೇನಾಪತಿಗಳಿಗೆಲ್ಲರಿಗೂ ನೇಮಿಸಿ, ಅನರ್ಘ್ಯ ವಸ್ತ್ರಭೂಷಣಗಳಂ ರಾಕ್ಷಸನಿಗೆ ಕೊಡಿಸಿ, ಚಂದ್ರಗುಪ್ತನ ಮೇಲೆ ಕಾರ್ಯಭಾಗಕ್ಕೆ ಪುನಃ ಸೇನೆಗಳೆಲ್ಲವೂ ಸನ್ನಾಹವಾಗಲೆಂದು ಮಲಯಕೇತುವು ನೇಮಿಸಿದ್ದರಿಂದ, ಅವರ ಬಳಿಯ ದೇಶಾಧಿಪತಿಗಳ ಸೇನೆಗಳು ಗುಂಪು ಕೂಡುತ್ತಲಿದೆ. ಇನ್ನು ಕೆಲವು ದಿವಸದ ಮೇಲೆ, ನಿಮ್ಮ ಮೇಲೆ ರಾಜಕಾರ್ಯಕ್ಕೆ ಮಲಯಕೇತುವಂ ಕೂಡಿಕೊಂಡು ರಾಕ್ಷಸನು ಬರುವನಾಗಿ ಇದ್ದಾನೆ. ಇದು ಸತ್ಯವು'' ಎಂದು ಚಾರನು ಹೇಳುತ್ತಿರಲು,

ಅದಂ ಕೇಳಿ ಚಾಣಕ್ಯನು ತನ್ನ ಮನಸ್ಸಿನಲ್ಲಿ, ''ಈಗ ರಾಕ್ಷಸನು ಚಂದ್ರಗುಪ್ತನಿಗೆ ಮಾಡಿದ ಕಪಟೋಪಾಯಗಳೆಲ್ಲವೂ ಭಗ್ನವಾಗುತ್ತಿರಲು, ಮತ್ತೂ ದ್ವೇಷವಂ ಸಾಧಿಸುವೆನೆಂದು ಮಲಯಕೇತುವನ್ನಾಶ್ರೈಸಿ, ಅವನಂ ಒಡಂಬಡಿಸಿ, ಚಂದ್ರಗುಪ್ತನ ಮೇಲೆ ದಂಡೆತ್ತಿ ಬರುತಲಿದ್ದಾನೆ. ಹಾಗಾದರೂ ಅವನ ಯತ್ನವಂ ಸಾಗಲೀಸುವನಲ್ಲ. ಇನ್ನೂ ಮಾಡುವ ಯತ್ನವಂ ಮಾಡಲಿ. ಪಾಟಲೀಪುರಸಮೀಪಕ್ಕೆ ಬರಲಿ. ಮಲಯಕೇತುವಂ ನಿರಾಕರಿಸಿ, ಅರಣ್ಯದಲ್ಲಿ ಇರುವ ಗಜವಂ ದಾಪಿನಾನೆಗಳಿಂದ ವಂಚನೆಗೈಸಿ ಹಿಡಿತಂದು ಪಟ್ಟದಾನೆಯಂ ಮಾಡುವಂತೆ ನಾನು ಮಾಡುವ ಉಪಾಯಕೌಶಲ್ಯವು ಆ ರಾಕ್ಷಸನನ್ನು ತಾನಾಗಿ ಇಲ್ಲಿಗೆ ಬರುವಂತೆ ಮಾಡಿಯಾವು'' ಎಂದು ನಿಶ್ಚೈಸಿ, ಪುನಃ ಅದೇ ಗೂಢಚಾರನಂ ಕುರಿತು,

''ಎಲೈ ಸಮಿದ್ಧಕನೇ, ನೀನು ಆ ರಾಕ್ಷಸನ ಬಳಿಗೆ ಹೋಗಿ ತಿಳಿಯದಂತೆ ಅಲ್ಲಿಯೇ ಇದ್ದು, ಅಲ್ಲಿ ನಡೆದ ವಿಶೇಷ ವರ್ತಮಾನವಿದ್ದರೆ ಬಂದು ತಿಳುಹಿಸು'' ಎಂದು ಹೇಳಿ, ಪುನಃ ಅವನಂ ಅಲ್ಲಿಗೆ ಕಳುಹಿಸಿ, ಆಸ್ಥಾನಕ್ಕೆ ಬಂದು ಕುಳ್ಳಿರಲು, ಆ ಸಮಯದಲ್ಲಿ

ದೂತರು ಬಂದು ಚಾಣಕ್ಯರಿಗೆ ಕೈಮುಗಿದು,

"ಸ್ವಾಮಿ, ಮೊದಲು ಅಪ್ಪಣೆಯಾಗಿದ್ದ ಮೇರೆಗೆ ಸೇನೆಗಳೆಲ್ಲವೂ ಗಣಿತೆಗಳಾಗಿ ಇಂದಿನ ವರೆಗೆ ಸಂಬಳ ಸಂದು ಇದೆ. ಎಂದಿನ ಮೇರೆಗೆ ಬಾಗುರಾಯಣಾದಿ ಸೇನಾನಾಯಕರು ಬಂದು ಸಂಬಳವಂ ಸೇನಾಜನಕ್ಕೆ ಕೊಡಿಸುವಂತೆ ಈವರೆಗೂ ಅವರೊಬ್ಬರೂ ಬಂದುದಿಲ್ಲ. ಅವರ ಸಂಬಳಗಳು ಕಟ್ಟಿ ಇರಿಸಿ ಇದೆ. ಇದಕ್ಕೆ ಅಪ್ಪಣೆಯೇನು ?" ಎನಲು, ಅದಂ ಕೇಳಿ ಚಾಣಕ್ಯನು ಕೋಪಿಸಿಕೊಂಡವನಂತೆ ಕಪಟಕೋಪವಂ ಮಾಡಿ, ಅಲ್ಲಿ ಇರುವ ಅಧಿಕಾರಿಗಳ ಮುಖವಂ ನೋಡಿ,

"ಎಲೈ ಅಧಿಕಾರಿಗಳಿರಾ, ಈ ದೂತರು ಹೇಳಿದ ಮಾತುಗಳಂ ಕೇಳಿದಿರಾ ? ಈ ಪುರವು ಚಂದ್ರಗುಪ್ತನ ಸ್ವಾಧೀನವಾದುದು ಮೊದಲುಗೊಂಡು ಇಂದಿನವರೆಗೂ ಬಾಗುರಾಯಣ ಭದ್ರಭಟಾದಿ ಸೇನಾನಾಯಕರುಗಳು ಬಂದು ಚಂದ್ರಗುಪ್ತನಂ ಕಂಡುದಿಲ್ಲ. ಮನಸ್ಸಿನಲ್ಲಿ ಏನೋ ಯೋಚಿಸಿಕೊಂಡು ನಮ್ಮ ಲಕ್ಷೀಕರಿಸದೆ ಇದ್ದಾರೆ. ಚಂದ್ರಗುಪ್ತನ ಅಭ್ಯುದಯವು ಇವರಿಗೆ ಸಮ್ಮತವಿಲ್ಲದಂತೆ ತೋರುತ್ತಲಿದೆ. ಮತ್ತರಾದ ಈ ಜನಗಳಿಂದ ಆಗುವ ಕಾರ್ಯಭಾಗವು ಏನು ಇದ್ದಾಗ್ಯೂ ನಾವು ನೋಡಿಕೊಳ್ಳುತಲಿದೇವೆ. ಈ ಬಾಗುರಾಯಣ ಭದ್ರಭಟಾದಿಗಳ ಅಧಿಕಾರಗಳನ್ನು ತೆಗೆದುಬಿಡಿರಿ" ಎಂದು ಸೇನೆಯ ಕರಣಿಕರಿಗೆ ನೇಮಿಸಿ, ಆಗ ದೂತರ ಮುಖವಂ ನೋಡಿ,

"ಎಲೈ ದೂತರುಗಳಿರಾ, ನೀವು ಬಾಗುರಾಯಣಾದಿಗಳ ಬಳಿಗೆ ಹೋಗಿ 'ಚಂದ್ರಗುಪ್ತರ ಅಪ್ಪಣೆ ಆಗಿ ಇದೆ. [೧]ಇಲ್ಲಿ[೧] ಇರಕೆಲಸವಿಲ್ಲ. ಈ ಕ್ಷಣವೇ ಈ ದೇಶವಂ ಬಿಟ್ಟು ಹೋಗ ತಕ್ಕುದು. ಇಲ್ಲದಿದ್ದರೆ, ರಾಜಕೋಪಕ್ಕೆ ಪಾತ್ರರಾದೀರೆಂ'ದು ಹೇಳಿ ಬನ್ನಿ" ಎಂದು ದೂತರಿಗೆ ನೇಮಿಸಿ, ಚಾಣಕ್ಯನು ತನ್ನ ಗೃಹಕ್ಕೆ ಬಂದು, ಸಿದ್ಧಾರ್ಥಕನಂ ಕರೆದು, 'ಈ ರೀತಿಯಲ್ಲಿ ಮಾಡೆಂ'ದು ಅವನ ಕಿವಿಯಲ್ಲಿ ಹೇಳಿ ಕಳುಹಿಸಲು,

ಅದೇ ರೀತಿಗೆ ಸಿದ್ಧಾರ್ಥಕನು ಹೋಗಿ ಬೊಕ್ಕಸದ ಅಧಿಕಾರಿಯಾದ [೨]ರುಕ್ಮ[೨]ನಂ ಕಂಡು, ಚಾಣಕ್ಯನು ತನಗೆ ರಹಸ್ಯವಾಗಿ ಹೇಳಿದ ಮೇರೆಗೆ ಹನ್ನೆರಡು ಲಕ್ಷ [೩]ಮೊಹರನ್ನು[೩] ಭದ್ರಭಟಾದಿ ಸೇನಾನಾಯಕರಿಗೆ ಕೊಡುವಂತೆ ದೇಶಾಂತರಸ್ಥರಾದ ವರ್ತಕರಿಗೆ ರುಕ್ಮನ ಕೈಯಿಂದ ಹುಂಡಿಕಾಗದವಂ ಬರೆಸಿ, ಅದಂ ತೆಗೆದುಕೊಂಡು ರಹಸ್ಯವಾಗಿ ಭದ್ರಭಟಾದಿಗಳ ಸಮೀಪಕ್ಕೆ ಹೋಗಿ, ಚಾಣಕ್ಯರು ಹೇಳಿದ ರಹಸ್ಯವಾಕ್ಯವಂ ಹೇಳಿ, ಆ ಹುಂಡಿ ಕಾಗದವಂ ಅವರ ಕೈಯಲ್ಲಿ ಕೊಡಲು, "ಶಿರಸಾವಹಿಸಿ ಈ ಕೆಲಸವಂ ನಿರ್ವಹಿಸುತ್ತಲಿದೇವೆ" ಎಂದು ಸಿದ್ಧಾರ್ಥಕನಿಗೆ [ಅವರು] ಹೇಳಲು,

ಅವರ ಕೈಯಿಂದ ಚಂದ್ರಗುಪ್ತನ ಸನ್ನಿಧಿಗೆ ಕೈಕಾಗದವಂ ಬರೆಸಿಕೊಂಡು, ಅದಂ ಸಿದ್ಧಾರ್ಥಕನು ತೆಗೆದುಕೊಂಡು, "ಅಯ್ಯ ಭದ್ರಭಟಾದಿ ಸೇನಾನಾಯಕರುಗಳಿರಾ, ನೀವು ಹೋಗಿ ಮಲಯಕೇತುವಂ ಸೇರಿ, ಅಲ್ಲಿರುವ ಬಾಗುರಾಯಣ ಹೇಳಿದಂತೆ ಸೇನಾ ಸಮೇತರಾಗಿ ಇದ್ದುಕೊಂಡು, ಪ್ರಕೃತ ಬಂದಲ್ಲಿ ಚಂದ್ರಗುಪ್ತನ ಕಾರ್ಯದಲ್ಲಿ ಅನುಕೂಲರಾಗಿರತಕ್ಕದ್ದು. ಈಗಲೇ ಪ್ರಸ್ಥಾನವಂ ಮಾಡಿರೆಂ"ದು ಭದ್ರಭಟಾದಿಗಳಿಗೆ ಹೇಳಿ, ರಹಸ್ಯ

---

೧. ಅಲ್ಲಿ (ಕ) ೨. ರುಕ್ಮಕ (ಕ) ೩. ಸಮೊಹರವನ್ನು (ಕ)

ವಾಗಿ ಚಾಣಕ್ಯರ ಬಳಿಗೆ ಬಂದು, ಅವರು ಚಂದ್ರಗುಪ್ತನಿಗೆ ಬರೆದು ಕೊಟ್ಟ ಕೈಕಾಗದವಂ ಸಿದ್ಧಾರ್ಥಕನು ಚಾಣಕ್ಯರ ಕೈಗೆ ಕೊಡಲು.

ಆಗ ಆಸ್ಥಾನದಲ್ಲಿ ನೇಮಿಸಿದ್ದ ದೂತರು ಬಂದು, ಬಾಗುರಾಯಣಾದಿಗಳ ಮನೆ ಬಾಗಿಲಿನಲ್ಲಿ ನಿಂತು, "ಚಂದ್ರಗುಪ್ತರ ಅಪ್ಪಣೆಯಾಗಿ ಇದೆ. ನೀವೆಲ್ಲರೂ ಈಗಲೇ ಈ ದೇಶವಂ ಬಿಟ್ಟು ಹೋಗತಕ್ಕದ್ದು. ಅಲ್ಲದಿದ್ದರೆ ರಾಜಕೋಪಕ್ಕೆ ಪಾತ್ರರಾದೀರೆಂ"ದು ಭದ್ರಭಟಾದಿಗಳಂ ಕುರಿತು ಹೇಳುತ್ತಿರಲು, ಆ ಭದ್ರಭಟಾದಿಗಳು ರಾಜಾಪರಾಧವಂ ಮಾಡಿದವರಂತೆ ಭೀತರಾಗುತ್ತ, ತಮಗೆ ಬೇಕಾದಷ್ಟು ಸೇನೆಗಳಂ ಕರೆದುಕೊಂಡು, ಪಾಟಲೀಪುರವಂ ಬಿಟ್ಟು, ಕೆಲವು ದಿವಸದ ಮೇಲೆ ಪರ್ವತರಾಜ್ಯವಂ ಸೇರಿ, ಮತ್ತೊಂದು ದಿವಸದಲ್ಲಿ ಬಾಗುರಾಯಣ ಶೇಖರರಿಗೆ ಹೇಳಿ ಕಳುಹಿಸಿ, ಅವರ ಸಮ್ಮತಿಯಿಂದ ಆಸ್ಥಾನದಲ್ಲಿ ಕುಳಿತಿದ್ದ ಮಲಯಕೇತುವಂ ಭದ್ರಭಟಾದಿಗಳು ಕಾಣಿಸಿಕೊಂಡು, ಕೈಕಾಣಿಕೆಗಳಂ ಕೊಟ್ಟು, ಕೈಮುಗಿದು ವಿಜ್ಞಾಪಿಸುತ್ತಿದ್ದರು :

"ಮಹಾರಾಜಪುತ್ರರಾದ ಮಲಯಕೇತು ಮಹಾರಾಯರೇ, ನಾವು ನಂದಸೇನಾನಾಯಕರು ; ಭದ್ರಭಟಾದಿಗಳೆಂಬುವರು. ಪಾಟಲೀಪುರವು ಚಂದ್ರಗುಪ್ತನ ಅಧೀನವಾಗಲು, ಒಂದೊಂದು ಉಪಾಧಿಯಿಂದ ನಾವು ಚಂದ್ರಗುಪ್ತನಂ ಕಾಣಿಸಿಕೊಳ್ಳುವದಕ್ಕೆ ಇಲ್ಲದೆ, ನಮ್ಮ ಕಡೆಯವರಂ ಸಲಾಮಿಗೆ ಕಳುಹಿಸಿ, ಕೆಲವು ದಿನದ ಮೇಲೆ ಕಾಣಬಹುದೆಂದು ಕಾರ್ಯೋಪಾಧಿಯಿಂದ ನಾವು ಸಲಾಮಿಗೆ ಹೋಗದೆ ಇರಲು, ಚಾಣಕ್ಯನು ಕೆಲವು ದಿನದ ಮೇಲೆ, 'ಬಾಗುರಾಯಣ ಮುಖ್ಯರಾದ ಸೇನಾನಾಯಕರು ಇನ್ನೂ ಸಲಾಮಿಗೆ ಬಾರದೆ ಇರುವದಕ್ಕೆ ಕಾರಣವೇನು?' ಎಂದು ದೂತರಂ ಕೇಳಲು, ಆ ದೂತರು ತಿಳಿದು ಬಂದು, 'ಬುದ್ಧೀ, ಬಾಗುರಾಯಣನು ಪರ್ವತರಾಜ್ಯಕ್ಕೆ ಅಂದೇ ಹೊರಟು ಹೋದನಂತೆ' ಎನಲು,

'ಹಾಗಾದರೆ ಮಲಯಕೇತುವನ್ನಾಶ್ರಯಿಸಿ ಇನ್ನೂ ಅಧಿಕನಾಗಬೇಕೆಂದು ಹೋಗಿ ಇದ್ದಾನಾದೀತು. ಅದಂತಿರಲಿ. ಭದ್ರಭಟನಂ ಕರೆತನ್ನಿ' ಎನಲು, ಮೂರ್ಖನಾದ ಭಾವಮೈದನಿಗೆ ಕೊಟ್ಟಿದ್ದ ತಂಗಿಯ ಮುಖವಂ ನೋಡುವದಕ್ಕಿಲ್ಲದೆ, 'ಹನ್ನೆರಡು ವರುಷ ಕಳೆದು ಮುಖ ತೊರೆದುಹೋಗುತ್ತಲಿದೆ' ಎಂಬ ವ್ಯಸನದಿಂದ ಭದ್ರಭಟನು ಹೋಗಿ ಎಂಟು ದಿವಸವಾಯಿತು. ಬರುವದಕ್ಕೆ ನಾಲ್ಕಾರುದಿವಸವಾಗಬೇಕು' ಎನಲು,

'ಹಾಗಾದರೆ, ಡಿಂಗಿರಾತನಂ ಕರೆತನ್ನಿ' ಎನಲು, ಅವರು ತಿಳಿದು ಬಂದು, "ಬುದ್ಧೀ, ರಾಜೀಕವುಂಟಾದುದರಿಂದ ಕೀಕಟದೇಶದ ಪಂಜಿನ ಕಳ್ಳರು ರಾತ್ರೆ ವೇಳೆ ಬಂದು ಕೆಲವು ಗ್ರಾಮಗಳಂ ಕೊಳ್ಳೆಮಾಡಿ, ಡಿಂಗಿರಾತನ ಮುಖಾಶೀಗ್ರಾಮವನ್ನು ಸಹ ಸೂರೆಮಾಡಿ ಬೆಂಕಿಗಳಂ ಹತ್ತಿಸಿದ್ದರಿಂದ ಅಲ್ಲಿ ಪ್ರಜೆಗಳು ಓಡಿಹೋಗಲು, ಆ ಕಳ್ಳರಂ ನಿಗ್ರಹಿಸಿ ಪ್ರಜೆಗಳಂ ಒಡಂಬಡಿಸುವದಕ್ಕೆ ಡಿಂಗಿರಾತನು ಹೋಗಿ ಇದಾನೆ' ಎನಲು,

'ಆದರೆ ಬಲಗುಪ್ತನಂ ಕರೆದು ತನ್ನಿ' ಎನಲು, ಆ ದೂತರು ತಿಳಿದು ಬಂದು, 'ಬುದ್ಧೀ, ಪರ್ವತರಾಯಸೇನೆಗೂ ನಮ್ಮ ಸೇನೆಗೂ ಯುದ್ಧವಾಗುವಾಗ ಸೇನೆಯಿಂದ ತಪ್ಪಿಸಿಕೊಂಡು ಹೋದ ತನ್ನ ಕುಮಾರಕನ ಗೊತ್ತು ತಿಳಿಯದೆ, ಏಕಪುತ್ರನಾದ ಬಲಗುಪ್ತನು 'ತನ್ನ ಪುತ್ರನು ಅತಂತ್ರವಾದರೆ ಈ ಸಂಸಾರವೊಂದು ನನಗೇತಕ್ಕೆಂ'ದು ಹೇಳುತ್ತ,

ಅವನಂ ಹುಡುಕುವದಕ್ಕೆ ಬಲ್ಲಗುಪ್ತನೇ ಹೋಗಿ ಇದಾನಂತೆ, ಬುದ್ಧೀ' ಎನಲು,

'ಆದರೆ ವಿಜಯವರ್ಮನಂ ಕರೆದು ತನ್ನಿ' ಎನಲು, ದೂತರು ತಿಳಿದು ಬಂದು, 'ಬುದ್ಧೀ, ರೋಗೋಪದ್ರವದಿಂದ ತಪ್ಪನಾಗಿ, ಆರೋಗ್ಯಸ್ನಾನವಾದ ಬಳಿಕ ಪ್ರಭುಗಳ ಸಮೀಪಕ್ಕೆ ಬರುತಲಿದೇನೆಂದು ವಿಜಯವರ್ಮನು ಹೇಳುತ್ತಲಿದ್ದಾನೆ' ಎನಲು,

'ಆದರೆ ಪುರುಷದತ್ತನಂ ಕರೆದು ತನ್ನಿ' ಎನಲು, ಆ ದೂತರು ತಿಳಿದು ಬಂದು, 'ಬುದ್ಧೀ, ತನಗೆ ಸಂಭವಿಸಿ ಇರುವ ಕ್ಷಯಸೂತಕ ನಿವೃತ್ತಿಯಾದ ಬಳಿಕ ಪ್ರಭುಗಳ ಕಾಣುವದಕ್ಕೆ ಬರುತಲಿದೇನೆಂದು ಪುರುಷದತ್ತ ವಿಜ್ಞಾಪಿಸುತ್ತಲಿದ್ದಾನೆ, ಬುದ್ಧೀ' ಎನಲು,

'ಆದರೆ ರಾಜಸೇನನಂ ಕರೆದು ತನ್ನಿ' ಎಂದು ಹೇಳಲು, ದೂತರು ತಿಳಿದು ಬಂದು, 'ಸ್ವಾಮೀ, ರಾಜಸೇನನ ಮಾತೃವಿಗೆ ಪ್ರಾಣೋತ್ಕ್ರಮಣಸಮಯವಾದುದರಿಂದ 'ಬ್ರಾಹ್ಮರ ಮುಖದಿಂದ ಸರ್ವಪ್ರಾಯಶ್ಚಿತ್ತವಂ ಮಾಡಿಸುತ್ತಲಿದ್ದಾನೆ' ಹೀಗೆಂದು ವಿಜ್ಞಾಪಿಸೆಂದು ಹೇಳಿಕೊಂಡನು' ಎನಲು,

'ಆದರೆ ಲೋಹಿತಾಕ್ಷನಂ ಕರೆದು ತನ್ನಿ' ಎನಲು, ಆ ದೂತರು ಆತನಂ ಕಂಡು ಬಂದು, "ಬುದ್ಧೀ, ಲೋಹಿತಾಕ್ಷನು ಸನ್ನಿಧಿಗೆ ವಿಜ್ಞಾಪಿಸುತ್ತಲಿದಾನೆ : 'ಉಳಿದ ಸೇನಾಪತಿಗಳೊಬ್ಬರೂ ಪ್ರಭುಗಳ ಪ್ರಥಮದರ್ಶನಕ್ಕೆ ಬರುವದಕ್ಕಿಲ್ಲದ ಬಳಿಕ ನಾನು ಒಬ್ಬನೇ ಬಂದು ಕಾಣಿಸಿಕೊಳ್ಳುವ ರೀತಿ ಹೇಗೆ ಇರುವದೋ ? ನಮಗೆ ಯಜಮಾನನಾದ ಭದ್ರಭಟನು ಇಂದು ನಾಳೆ ಬರುವನಾಗಿ ಇದಾನೆ. ಅವನ ಸಂಗಡಲೇ ನಾನು ಬಂದು ಪ್ರಭುಗಳಂ ಕಾಣಿಸಿಕೊಳ್ಳುತ್ತೇನೆ. ವಿಶೇಷ ಅರಿಕೆ ಮಾಡಿಕೊಳ್ಳುವದಕ್ಕೆ ಶಕ್ತನಲ್ಲ. ಹಾಗಲ್ಲವೆಂದರೆ ಸಿದ್ಧವಾಗಿ ಇದೇನೆ' ಎಂದು ಲೋಹಿತಾಕ್ಷನು ಅರಿಕೆಮಾಡಿಕೊಳ್ಳುತ್ತಲಿದಾನೆ" ಎನಲು,

ಆ ದೂತರು ಹೇಳಿದ ವಾಕ್ಯವಂ ಚಾಣಕ್ಯನು ಕೇಳಿ, "ಈ ಭದ್ರಭಟಾದಿಗಳು ಪುರವಂ ಬಿಟ್ಟು ಹೋಗುವ ರಾಕ್ಷಸನು ಎರಚಿದ ಮಂಕುಬೂದಿಗೆ ಮರುಳಾಗಿ ನಮ್ಮಂ ಲಕ್ಷೀಕರಿಸದೆ ಮತ್ತಾವ ದೇಶಾಧಿಪತಿಯಲ್ಲೋ ಮನಸ್ಸು ಮಾಡಿ, ವ್ಯಾಜಾಂತರದಿಂದ ಮುಖವಂ ತಪ್ಪಿಸಿಕೊಂಡು ಇದಾರೆ. ಇವರಿಂದ ಆಗುವದಂ ನೋಡಿಕೊಂಡೇನು. ಇವರ ಕೈಕೆಳಗಿನ ಸರದಾರರಂ ಕರೆದುಕೊಂಡು ಬನ್ನಿ" ಎಂದು ದೂತರಿಗೆ ನೇಮಿಸಲು, ಅವರು ಬಂದು, ನಮ್ಮ ಬಳಿಯ ಲಕ್ಷಲಕ್ಷಸೇನೆಗೆ ಅಧಿಪತಿಗಳಾಗಿ ನಾವು ನೇಮಿಸಿದಂತೆ ಕೇಳುತ್ತಲಿರುವ ಲಚ್ಮನೋಜಿ, ವಿಜಯ ಶಿಂಗು, ಯಶವಂತ ರಾವು, ತುಲಜಾ ಖಿಂಡು, ಪತ್ತೆಬಹದರ, ಮುಕುಂದ ಗೋಸಾವಿ, ಹಿಮ್ಮತ ಖಾನ, ಪುರುಷೋತ್ತಮ ಲಾಲಾ, ಶಿಂಧೂ ಕಾಕರ, ಮಹತಾಪ ಜಂಗು, ಕಿಶೋರ ಘೋರ್ಪಡೆ, ರಾಮಜಿ ವಾಘ್ಮಾರೆಂಬ ಸರದಾರರಂ ಷಂಷರ್ನಬಾಬು ಅಲ್ಲಿ ನಬಾಬರೆಂಬ ಅಕ್ಷೋಹಿಣೀಪತಿಗಳಂ ಕರೆಕಳುಹಿಸಿಕೊಂಡು,

"ಎಲೈ ಸರದಾರರುಗಳಿರಾ, ಭದ್ರಭಟಾದಿಗಳ ಕಡೆಯಿಂದ ತೆಗೆದು ಮತ್ತೊಂದು ಕಡೆಯಲ್ಲಿ ನಿಮಗೆಲ್ಲರಿಗೂ ಚಾಕರಿಗಳಂ ನೇಮಿಸಿ ಅಧಿಕಸನ್ಮಾನಗಳಂ ಮಾಡುತ್ತಲಿದೇವೆ. ನಿಮ್ಮ ಕಡೆ ಸೇನೆಗಳಂ ಕರೆದುಕೊಂಡು ಭದ್ರಭಟಾದಿಗಳಂ ಬಿಟ್ಟು ಬನ್ನಿ" ಎನಲು, ಆ ಮಾತಿಗೆ ಆ ಸರದಾರರು "ಸ್ವಾಮೀ, ಬಹುಕಾಲದಿಂದ ನಮ್ಮಂ ಸಂರಕ್ಷಿಸಿ, ವ್ಯಸನಾಭ್ಯುದಯಗಳಿಗೆ ನಮಗೆ ಅಭಯವಂ ಕೊಟ್ಟು, ತಮ್ಮ ವಾಕ್ಯವಂ ಮೀರದಂತೆ ನಮ್ಮ ಆಯುಧಗಳಂ ಮುಟ್ಟಿಸಿಕೊಂಡು ಇರುವ ಭದ್ರಭಟಾದಿಗಳನ್ನಗಲಿ ನಾವು ಬರತಕ್ಕದ್ದಿಲ್ಲ;

ಅವರಿಗೆ ಮಾಡಿದ ಸನ್ಮಾನವೇ ನಮ್ಮೆಲ್ಲರದು'' ಎಂದು ಚಾಣಕ್ಯರಿಗೆ ಸರದಾರರು ಹೇಳಿಕೊಳ್ಳುತ್ತಿರಲು,

''ಇವರೆಲ್ಲರೂ ಕೃತಸಂಕೇತರಾಗಿ, ತಮ್ಮಿಂದಲ್ಲದೆ ರಾಜಕಾರ್ಯ ನಿರ್ವಾಹವಾಗದೆಂಬ ಗರ್ವದಿಂದ, 'ಯಾವ ತೆರದಲ್ಲಿಯೂ ನಮ್ಮನ್ನೇ ಒಡಂಬಡಿಸುವರು' ಎಂದು [ಇದಾರೆ]. ದುರಹಂಕಾರಿಗಳಾಗಿ ಮತ್ತರಾದ ಈ ಭದ್ರಭಟಾದಿಗಳ ಚಾಕರಿಗಳಂ ತೆಗೆಯಿರಿ'' ಎಂದು ಕರಣಿಕರಿಗೆ ನೇಮಿಸಿ, ತಮ್ಮ ಬಳಿಯ ದೂತರಂ ಕರೆದು, ''ಎಲೈ ದೂತರುಗಳಿರಾ, ಈ ಭದ್ರಭಟಾದಿಗಳನ್ನು ಈ ದೇಶ ಪುರಗಳಲ್ಲಿ ಇರಲೀಸದೆ ಹೊರಡಿಸಿ ಬನ್ನಿ. ಆ ಬಳಿಕ 'ಪ್ರಭುವಂ ಲಕ್ಷೀಕರಿಸದೆ ಪುಂಡುಪಾಳೆಯಗಾರರಾಗಿ ಇದ್ದುದರಿಂದ ಈ ದೇಶವಂ ಬಿಟ್ಟು ಭದ್ರಭಟಾದಿಗಳನ್ನು ಹೊರಡಿಸಿ ಇದೇವೆ' ಎಂದು ಡಂಗುರವಂ ಹಾಕಿಸಿ ಸಾರಿಬಿಡಿ'' ಎನಲು,

ಆ ಚಾಣಕ್ಯ ಹೇಳಿದ ರೀತಿಗೆ ಆ ದೂತರು ನಾವಿದ್ದ ಬಳಿಗೆ ಬಂದು, 'ಈ ಕ್ಷಣವೇ ಈ ದೇಶವಂ ಬಿಟ್ಟು ಹೋಗಿರಿ' ಎಂದು ನಿರ್ಬಂಧಪಡಿಸಿ ಹೊರಡಿಸಿ ಬಿಟ್ಟುದರಿಂದ, ಹೀಗೆ ನಮ್ಮ ಕಾರ್ಯೋಪಾಧಿಯಂ ಉಂಟು ಇಲ್ಲವೆಂದು ವಿಚಾರಿಸದೆ ಅಪಮಾನವಾಕ್ಯಪೂರ್ವಕ ವಾಗಿ ಚಾಣಕ್ಯನು ನಮ್ಮಂ ಹೊರಡಿಸಿದವನಾದರೂ, ಪುನಃ ಆತನ ಮೇಲೆ ಎದುರಾದರೆ 'ತಾವೇ ಪ್ರಭುತ್ವವನ್ನಪೇಕ್ಷಿಸಿ ಈ ಭದ್ರಭಟಾದಿಗಳು ದುಡುಕಿದರು' ಎಂಬ ಲೋಕಾಪ ವಾದಕ್ಕೆ ಭೀತರಾಗಿ, ಅನ್ಯದೇಶಾಧಿಪತಿಗಳಲ್ಲಿ 'ನಾವು ಒಬ್ಬರು ಗೃಹಸ್ಥರು' ಎಂದು ಸೇವಕಭಾವದಲ್ಲಿರುವದಕ್ಕೆ ಆ ದೇಶವಂ ಬಿಟ್ಟು, ನೀವು ಯಶೋವಂತರಾಗಿ ಇರುವದಂ ಕೇಳಿ, ನಿಮ್ಮಂ ಕಂಡು, ನೀವು ಸಂರಕ್ಷಿಸಿಯಾರೆಂದು ತಿಳಿದು, ಬಹುಕಾಲದಿಂ ನಮ್ಮ ನಂಬಿ ಇರುವ ಸೇನೆಗಳಂ ಕರೆದುಕೊಂಡು ಬಂದು ಇದೇವೆ. ಪ್ರಭುಗಳ ಅವಲಂಬನವಿಲ್ಲದೆ ಈ ಸೇನೆಯಂ ಇಟ್ಟು ಸಂರಕ್ಷಿಸುವದಕ್ಕೆ ಶಕ್ಯವಲ್ಲ. ನಿಮ್ಮಲ್ಲಿ ಚಾಕರಿಯಿದ್ದರೆ ಇರುತಲಿದೇವೆ. ಇಲ್ಲದಿದ್ದರೆ ಮುಂದಕ್ಕೆ ಅಪ್ಪಣೆ ನೇಮಿಸತಕ್ಕುದು'' ಎಂದು ಭದ್ರಭಟಾದಿಗಳು ಮಲಯ ಕೇತುವಿಗೆ ಹೇಳಿಕೊಳ್ಳುತ್ತಿರಲು, ಆ ವಾಕ್ಯವಂ ಕೇಳಿ ಮಲಯಕೇತುವು ಬಾಗುರಾಯಣನ ಮುಖವಂ ನೋಡಲು, ಆತನು ಮಲಯಕೇತುವಿಗಿಂತೆಂದನು :

''ಅಯ್ಯ ರಾಜಕುಮಾರಕನೆ, ಇವರು ಹೇಳಿಕೊಂಡದ್ದು ನಿನ್ನ ಚಿತ್ತಕ್ಕೆ ವೇದ್ಯವಾಯಿತಷ್ಟೆ. ಈ ಭದ್ರಭಟಾದಿಗಳಿಗೆ ಚಂದ್ರಗುಪ್ತನ ದೆಶೆಯಿಂದ ಅಪಮಾನವುಂಟಾಗಿ ಅಧಿಕಾರವಂ ತೆಗೆದು ಹೊರಡಿಸಿದ್ದೇ ನಿಶ್ಚಯವಾದರೆ'' ಎಂದು ಮಲಯಕೇತುವಿನ ಬಳಿಯಲ್ಲಿ ಇದ್ದ ಜನಗಳ ಮುಖವಂ ನೋಡಲು, ಅವರೆಲ್ಲರೂ ದೂರದಲ್ಲಿ ನಿಲ್ಲಲು,

''ಚಂದ್ರಗುಪ್ತನು ನಿನ್ನ ಕೈವಶವಾದನೆಂದು ತಿಳಿಯಬೇಕು. ನಾವಾಗಿ ಭೇದೋ ಪಾಯವಂ ಚಂದ್ರಗುಪ್ತನಿಗೂ ಈ ಸೇನಾಪತಿಗಳಿಗೂ ಉಂಟುಮಾಡಿ, ಒಡಂಬಡಿಸಿ, ಕರೆ ಕಳುಹಿಸುವದಕ್ಕೆ ಮುಂಚಿತವಾಗಿಯೇ ತಾವಾಗಿ ಚಂದ್ರಗುಪ್ತನಲ್ಲಿ ವಿರೋಧವಂ ಸಂಪಾ ದಿಸಿ, ನಿನ್ನನ್ನಾಶ್ರಯಿಸಬಂದುದು ನಿನ್ನ ಕಾರ್ಯಕ್ಕೆ ಅನುಕೂಲವಾದಂತಾಯಿತು. ಈ ಪ್ರಮುಖ ನಾದ ಭದ್ರಭಟನು, ಶೂರನಾದ ಪುರುಷದತ್ತನು, ಕಾರ್ಯದಕ್ಷನಾದ ಡಿಂಗಿರಾತನು, ಸಾಹಸಿ ಯಾದ ಬಲಗುಪ್ತನು, ಸೇನಾರಂಜಕನಾದ ರಾಜಸೇನನು, ಸಮರದಲ್ಲಿ ಹಿಮ್ಮೆಟ್ಟದ ಲೋಹಿತಾಕ್ಷನು, ಶತ್ರುಗಳಂ ತೃಣದಂತೆ ಕಾಣುವ ವಿಜಯವರ್ಮನು ಎಂಬ ಈ ಸೇನಾ

ಪತಿಗಳು ಪಾಟಲೀಪುರವಂ ಬಿಟ್ಟು ಬಂದ ಬಳಿಕ. ಚಂದ್ರಗುಪ್ತನಲ್ಲಿ ಕಾರ್ಯನಿರ್ವಾಹಿಗಳು ಯಾರು ಇದ್ದಾರು ? ಅದರಿಂ ಮುಂದಣ ರಾಜಕಾರ್ಯವು ಸುಲಭದಿಂ ಅನುಕೂಲವಾದೀತೆಂ"ದು ಹೇಳಲು,

ಅದಂ ಕೇಳಿ ಮಲಯಕೇತುವು ತನ್ನ ಮನಸ್ಸಿನಲ್ಲಿ, ಪೂರ್ವದಲ್ಲಿ ನಡೆದ ವೃತ್ತಾಂತವಂ ಸೇರಿಸಿಕೊಂಡು, 'ಆದಿಯಲ್ಲಿ ಚಾಣಕ್ಯನು ಕೊಟ್ಟಿದ್ದ ಕಾಗದವಂ ತೆಗೆದು, ಅದಕ್ಕೆ ಏನು ಉತ್ತರವಂ ಹೇಳುವನೋ ತಿಳಿಯಬೇಕೆಂ'ದು ನಿಶ್ಚೈಸಿ. ಬಾಗುರಾಯಣನ ಕೈಯಲ್ಲಿ ಕೊಟ್ಟು,

"ಅಯ್ಯಾ ಮಿತ್ರನೇ. ಈ ಕಾಗದವಂ ನೋಡಿಕೊಳ್ಳುವನಾಗು. ಇದರಲ್ಲಿ 'ಚಂದ್ರಗುಪ್ತನ ಅಭಿಮತವು ನಮಗೆ ಸಮ್ಮತವೆಂದು ನಿಮ್ಮ ಎಲ್ಲರ ಅಕ್ಷರಗಳಿಂ ಬರೆದು ಇದೆ. ಇದಂ ನೋಡಲು. ಚಂದ್ರಗುಪ್ತನು ನಮ್ಮ ತಂದೆ ವಶಕ್ಕೆ ಕೊಟ್ಟ ಇದರ ಭರವಸವಂ ತೋರಿಸಿ, ನಮ್ಮೆಲ್ಲರಂ ಕರೆದುಕೊಂಡು ನಂದರ ಮೇಲೆ ಕಾರ್ಯಭಾಗಕ್ಕೆ ನಡೆದನು. ಆ ವೇಳೆಯಲ್ಲಿ ಇದೇ ಸೇನಾಪತಿಗಳು ಚಂದ್ರಗುಪ್ತನ ಕಾರ್ಯಕ್ಕೆ ಅನುಕೂಲರಾಗಿ, ಸ್ವಹಸ್ತಾಕ್ಷರ ಸಮ್ಮತಿಗಳಂ ಬರೆದುಕೊಟ್ಟು, ಈ ವೇಳೆಯಲ್ಲಿ ಚಂದ್ರಗುಪ್ತನ ಸಂಗಡ ವಿರೋಧವಂ ಉಂಟುಮಾಡಿಕೊಂಡು ನಮ್ಮಲ್ಲಿ ಚಾಕರಿಯನ್ನಪೇಕ್ಷಿಸಿ ಬಂದಿರುವದಂ ನೋಡಿದರೆ, ಆಶ್ಚರ್ಯವಾಗಿ ತೋರುತ್ತಲಿದೆ. ನೀನಾದರೋ ನಮಗೆ ಬಂದು ಒದಗಿದ ಆಪತ್ತಿನ ಸಮಯದಲ್ಲಿ ಪ್ರಾಣವಂ ರಕ್ಷಿಸಿ ಇಲ್ಲಿಗೆ ಕರೆತಂದವನಾದುದರಿಂದ ನಿನ್ನಂ ಪರಮಾಪ್ತನೆಂದು ತಿಳಿದಿರುವೆನು" ಎಂದು ಮಲಯಕೇತುವು ಹೇಳುತ್ತಿರಲು,

ಬಾಗುರಾಯಣನು ಕಾಗದವಂ ನೋಡಿಕೊಂಡು, ತಮ್ಮೆಲ್ಲರ ಅಕ್ಷರ ಅಹುದೆಂದು ನಿಶ್ಚೈಸಿ. ಅದರ ಸಂಗತಿಯಂ ತಿಳಿದು, 'ಉಂಟಾದುದಂ ಹೇಳಿ, ಈತನ ಮನಸ್ಸಿನ ಸಂಶಯವಂ ಬಿಡಿಸುವೆ'ನೆಂದು ನಿಶ್ಚೈಸಿ,

"ಅಯ್ಯ ರಾಜಕುಮಾರಕನೇ, ಈ ಕಾಗದದಲ್ಲಿ ಇರುವ ಸಮ್ಮತಿಗಳು ನಮ್ಮೆಲ್ಲರ ಅಕ್ಷರಗಳಹುದು. ನೀನು ಕೇಳುವದು ವಿಹಿತವೇ ಸರಿ. ಇದರ ವಿವರವಂ ತಿಳುಹಿಸುವೆನು; ಚಿತ್ತದಲ್ಲಿ ತರುವನಾಗು :

ಮೊದಲು ಚಂದ್ರಗುಪ್ತನು ಅನ್ನಸತ್ರವಂ ಬಿಟ್ಟು ಹೋಗಬೇಕೆಂಬ ಸಮಯದಲ್ಲಿ ನಮ್ಮ ಬಳಿಗೆ ಬಂದು. ತಮ್ಮ ತಂದೆಯು ಕಾಶೀಪಟ್ಟಣದಲ್ಲಿ ಮಾಡಿಸಿ ಇರುವ ಶಿವಾಲಯದ ಗೋಪುರಪ್ರಾಕಾರವಂ ರಚಿಸುವ ಬಗ್ಗೆ ಕೇಶವದಾಸನೆಂಬ ವರ್ತಕನಲ್ಲಿ ಕೆಲವು ದ್ರವ್ಯವನ್ನಿಟ್ಟು, ಕಾಲವಾದ ಬಳಿಕ ಆ ಕಾರ್ಯವಂ ನಡಸುವದಕ್ಕೆ ತಾನು ಬಾಲಕನೆಂದು ಮುಂದೆ ತನ್ನ ಮೇಲೆ ಮಾತು ಬಂದೀತೆಂದು ಭೀತನಾಗಿ 'ನಿಮ್ಮೆಲ್ಲರ ಸಮ್ಮತಿಯಾದರೆ ಕೇಶವದಾಸನು ದೇವಾಲಯದ ಕಾರ್ಯವಂ ಪೂರೈಸುತ್ತಲಿದಾನೆ' ಎಂದು ನಮ್ಮಂ ಒಡಂಬಡಿಸಿ, ಆ ಕಾರ್ಯವಂ ಮಾಡುವಂತೆ ಕೇಶವದಾಸನಿಗೆ ಅಖಂಡವಾದ ಕಾಗದವಂ ಬರೆದು, ಮೊದಲು ತನ್ನ ಸಮ್ಮತಿಯಂ ಬರೆದು, ಅದರಲ್ಲಿ ನಮ್ಮ ಸಮ್ಮತಿಗಳಂ ಬರೆಸಿಕೊಂಡು ಚಂದ್ರಗುಪ್ತನು ಹೋದ ಬಳಿಕ, ಪಾರ್ವತೇಯಸೇನಾಸಮೇತನಾಗಿ ಬಂದಾಗಲೇ ಆತನಂ ಕಂಡೆವಲ್ಲದೆ, ಈ ಮಧ್ಯೆ ಅವನ ಹೆಸರನ್ನಾದರೂ ಕೇಳಿದವರಲ್ಲ. ಅಖಂಡವಾಗಿ ಆಗ ಬರೆದು ಇದ್ದ ಕಾಗದದಲ್ಲಿ ಉಪಯುಕ್ತವಾದ ಮಟ್ಟಿಗೆ ನಿಲ್ಲಿಸಿಕೊಂಡು, ಶೇಷವು ಛೇದಿಸಿ

ಹೋಗಿ ಇರುವದರಿಂದ ಇದೆಲ್ಲವೂ ಚಾಣಕ್ಯನ ಕಪಟೋಪಾಯವು. ಇದ[ಂ] ಆಹುದೋ ಅಲ್ಲವೋ ನೀನೇ ನೋಡಿ ತಿಳಿಯುವನಾಗು" ಎಂದು ಬಾಗುರಾಯಣನು ಹೇಳಲು,

"ಚಾಣಕ್ಯನು ಮಹಾಕಪಟಿಯಾದುದರಿಂದ ಹೀಗೆ ಭದ್ರ[ನೆಯಂ] ಮಾಡಿ ಇದ್ದಾನು" ಎಂದು ಮಲಯಕೇತುವು ತಿಳಿದು, "ಅಯ್ಯ, ನೀನು ಹೇಳಿದ ಬಳಿಕ ಭದ್ರಭಟಾದಿಗಳು ಇರಲಿ. ಇವರ ಸೇನೆಗೆ ಸಂಬಳವಂ ಚಾಕರಿಯಂ ನೇಮಿಸುವೆವು" ಎಂದು ಬಾಗು ರಾಯಣನಿಗೆ ಹೇಳುತ್ತಿರಲು, ಈ ಭದ್ರಭಟಾದಿಗಳು ಬಂದು ಮಲಯಕೇತುವಂ ಕಂಡು, ವಿನೀತರಾಗಿ ನಿಂತಿರುವದಂ ಕಂಡು, ರಾಕ್ಷಸನು ಬಂದು ನೋಡಿ, ತನ್ನ ಮನಸ್ಸಿನಲ್ಲಿ ಆಲೋಚಿಸುತ್ತಿದ್ದನು :

"ಮೊದಲು ನಾವು ಪಾಟಲೀಪುರದಲ್ಲಿ ಈ ಭದ್ರಭಟಾದಿಗಳಿಗೆ ನಿಯಾಮಕರಾಗಿ ಇದ್ದು, ಈಗ ಮಲಯಕೇತುವಿನ ಬಳಿಯಲ್ಲಿ ಸರ್ವಾಧಿಕಾರವಂ ನಾನು ಮಾಡುತ್ತಿರುವದಂ ತಿಳಿದೂ ನನ್ನ ಕಂಡು ಮಾತನಾಡದೆ, ಬಾಗುರಾಯಣ ಶೇಖರರ ಮುಖದಿಂದಲೇ ಮಲಯ ಕೇತುವಂ ಕಂಡು ಇಲ್ಲಿಯೂ ಸೇನಾಪತಿತ್ವಕ್ಕೆ ಯತ್ನವಂ ಮಾಡುವದರಿಂದ ಚಂದ್ರಗುಪ್ತ ನಲ್ಲಿ ಉಪೇಕ್ಷೆಯಿಂದ ಬಂದು ಇದಾರೆಯೋ ಚಾಣಕ್ಯನಿಂ ಪ್ರೇರಿತರಾಗಿ ಕಪಟವಂ ಎಣಿಸಿ ಬಂದು ಇದಾರೆಯೋ ತಿಳಿಯ ಕೂಡದು. ಇವರಿಗೆ ಇಲ್ಲಿ ಆಶ್ರಯವಾಗದಂತೆ ಮಲಯ ಕೇತುವಿಗೆ ಹೇಳಿ ಹಿಂದಕ್ಕೆ ಕಳುಹಿಸೋಣವೆಂದರೆ, ಇವರ ಬಹುಸೇನೆಯು ಯಾವ ಅರ್ಥ ಕ್ಕಾಗಲಿ ಪಾಟಲೀಪುರವಂ ಬಿಟ್ಟು ಬಂದದ್ದು ನಾವು ಮಾಡುವ ರಾಜಕಾರ್ಯಕ್ಕೆ ಅನುಕೂಲ ವಾಯಿತು. ಇಲ್ಲಿಯೂ ಇವರಂ ಇರದಂತೆ ಕಳುಹಿಸಿದರೆ, ಮತ್ತ್ಯಾವ ದೇಶಾಧಿಪತಿಯ ನ್ನಾಗಲಿ ಆಶ್ರಯಿಸಿದರೆ ಮುಂದೆ ನಮಗೆ ಶತ್ರುಗಳಾದರೂ ಆಗಬಹುದು. ಹಾಗಲ್ಲದೆ ಪುನಃ ಲಜ್ಜಾರಹಿತರಾಗಿ ಸ್ಥಳದಲ್ಲಿ ಇರುವ ಸ್ತ್ರೀಪುತ್ರರ ಮೇಲಿನ ಆಶೆಯಿಂದ ಚಂದ್ರಗುಪ್ತ ನಿಗೆ ಶರಣಾಗತರಾದರೆ, ಹನಿಗೂಡಿ ಹಳ್ಳವಾಗಿ ನದಿಯಾಗುವ ರೀತಿಗೆ ಕಳೆದುಹೋದ ಸೇನೆಯು ಪುನಃ ಪಾಟಲೀಪುರದಲ್ಲಿ ಒಟ್ಟುಗೂಡಿದರೆ, ನಾವು ಮಹತ್ತ್ರಯತ್ನವು ಮಾಡ ಬೇಕಾದೀತು ; ಸುಲಭದಲ್ಲಿ ತೀರದು. ಆದುದರಿಂದ ಈ ಭದ್ರಭಟಾದಿಗಳಂ ಅನ್ಯತ್ರ ಕಳುಹಿಸದೆ, ಪಾಟಲೀಪುರಕ್ಕೆ ಪುನಃ ಹೋಗಲೀಸದೆ, ಇಲ್ಲಿಯೂ ವಿಶೇಷಸ್ವಾತಂತ್ರ್ಯವು ಇಲ್ಲದಂತೆ ಕಾರ್ಯವಂ ನೇಮಿಸಿ ಇರಿಸಿಕೊಳ್ಳುವೆನೆಂ"ದು ರಾಕ್ಷಸನು ಆಲೋಚಿಸುತ್ತಿರಲು,

ಆಗ ಮಲಯಕೇತುವು ರಾಕ್ಷಸನಂ ಕುರಿತು, "ಅಮಾತ್ಯರೇ, ನಂದಸೇನಾಪತಿಗಳಾದ ಭದ್ರಭಟಾದಿಗಳು ಚಂದ್ರಗುಪ್ತನನ್ನುಪೇಕ್ಷಿಸಿ, ನಮ್ಮನ್ನಾಶ್ರಯಿಸಲೋಸುಗ ಬಂದು ಇದಾರೆ. ಇವರು ದೊಡ್ಡಮನುಷ್ಯರಂತೆ. ಚಂದ್ರಗುಪ್ತನು ಇವರಿಗೆ ಅಪಮಾನವಂ ಮಾಡಿದನಂತೆ. ವಿಚಾರಿಸಿ, ಇವರ ನಿರ್ವಾಹಾನುಗುಣ್ಯವಾಗಿ ಕಾರ್ಯವಂ, ಸಂಬಳ ಸನ್ಮಾನ ಗಳಂ ಮಾಡಿಸುವರಾಗಿ" ಎಂದು ಮಲಯಕೇತುವು ಹೇಳಲು, ಆ ಮಾತಿಗೆ "ಅಯ್ಯ ಕುಮಾರಕನೇ , ಭದ್ರಭಟಾದಿಗಳು ದೊಡ್ಡಮನುಷ್ಯರಹುದು. ಪಾಟಲೀಪುರವಂ ಬಿಟ್ಟು ಇಲ್ಲಿ ಬಂದದ್ದು ನಮ್ಮ ಕಾರ್ಯಗಳಿಗನುಕೂಲವಾಯಿತು. ಕಾರ್ಯವಂ ನೇಮಿಸುವೆನೆಂ"ದು ಹೇಳಲು,

ಅಷ್ಟರಲ್ಲಿಯೇ ಮಧ್ಯಾಹ್ನವಾದ ಸೂಚಕವಾದ್ಯಧ್ವನಿಯಾಗಲು, ಎಂದಿನಂತೆ ಎಲ್ಲರೂ ಎದ್ದು ತಮ್ಮ ತಮ್ಮ ವಾಸಗೃಹವನ್ನೈದಿದರು. ಆ ಮಾರನೆ ದಿವಸ ರಾಕ್ಷಸನು ಮಲಯ

ಕೇತುವಿನ ಓಲಗದ ಹಜಾರಕ್ಕೆ ಬರುವದಂ ತಿಳಿದು ಭದ್ರಭಟಾದಿಗಳು ಬಂದು ರಾಕ್ಷಸನಂ ಕಾಣಿಸಿಕೊಳ್ಳುತ್ತಿರಲು, ಅವರಂ ಉಚಿತಪ್ರಕಾರವಾಗಿ ಕುಳ್ಳಿರಿಸಿಕೊಂಡು, ರಾಕ್ಷಸನು ಭದ್ರಭಟಾದಿಗಳಿಗೆ ಕಾರ್ಯವಂ ನೇಮಿಸುತ್ತಿದ್ದನು.

"ಅಯ್ಯ ಭದ್ರಭಟ ಡಿಂಗಿರಾತರುಗಳಿರಾ, ರಾಜಕಾರ್ಯಾರ್ಥವಾಗಿ ಮಲಯಕೇತುವಿನ ಸೇನೆಯು ಪಾಟಲೀಪುರಕ್ಕೆ ಪುನಃ ಹೋಗುವದರಿಂದ, ಸೇನೆಗಳಿಗೆ ಆಧಾರವಾದ ಧನಧಾನ್ಯಗಳು ಬರುವಲ್ಲಿ ಶತ್ರುಬಾಧೆ ಅದಕ್ಕೆ ತಗುಲದಂತೆ ನೀವು ಸೇನಾಸಮೇತರಾಗಿ ಕಾದುಕೊಂಡು ಇರುವರಾಗಿ" ಎಂದು ಭದ್ರಭಟ ಡಿಂಗಿರಾತರಿಗೆ ನೇಮಿಸಿ, "ಅಯ್ಯ ಬಲಗುಪ್ತನೆ, ಮಹಾನದಿಗಳಂ ದಾಟಿ ಸೇನೆಗಳು ಹೋಗುವಲ್ಲಿ ಶತ್ರುಗಳು ಬಂದು ಮೊದಲೇ ಸಿದ್ಧವಾಗಿ ಇರುವ ನಾವೆಗಳನ್ನಾಕ್ರಮಿಸದಂತೆ ನದೀತೀರಗಳಲ್ಲಿ ಕಾದಿರುವನಾಗು" ಎಂದು ನೇಮಿಸಿ, "ಅಯ್ಯ ಪುರುಷದತ್ತನೇ, ಮಲಯಕೇತು ಮಹಾರಾಯನು ವಿತರಣಶಾಲಿ ಅಲ್ಲವೆಂದು ಜನರು ಹೇಳಿಕೊಳ್ಳದಂತೆ ಸೇನೆಯ ಸಂಗಡ ಬರುವ ದೀನಾನಾಥವಿಪನ್ನಜನಗಳಿಗೆ ಅನ್ನೋದಕಗಳಂ ಕೊಡುತ ಹಾಹಾಕಾರವಿಲ್ಲದಂತೆ ಮಾಡುತಲಿರುವನಾಗು" ಎಂದು ನೇಮಿಸಿ, "ಅಯ್ಯ ವಿಜಯವರ್ಮನೇ, ಸೇನಾಪ್ರಯಾಣದಲ್ಲಿ ಆಯಾಸವಿಲ್ಲದೆ ಸುಲಭವಾಗಿ ತೆರಳುವಂತೆ ಮಾರ್ಗದ ಹಳ್ಳತಿಟ್ಟುಗಳಂ ಸಮಂ ಮಾಡುತ್ತ, ಸೇನಾನಿವೇಶದ ಭೂಮಿಯಂ ಶೋಧಿಸುತ ಬರುವನಾಗು" ಎಂದು ನೇಮಿಸಿ, "ಅಯ್ಯ ಲೋಹಿತಾಕ್ಷನೇ, ಸೇನೆ ತೆರಳುವಲ್ಲಿ ಶತ್ರುಗಳ ಆಗಮನವಂ ತಿಳಿಯುತ, ಮುಂದೆ ಬರಲೀಸದೆ ತಡೆದು ನಿಲ್ಲಿಸುತ, ಗೂಢಚಾರರಂ ಶೋಧಿಸುತ, ಜಾಗ್ರತೆಯಿಂದ ಇರುವನಾಗು" ಎಂದು ನೇಮಿಸಿ, "ಅಯ್ಯ ರಾಜಸೇನನೇ, ಮಲಯಕೇತುವಿನ ಸೇನೆಯು ಶತ್ರುಗಳ ದುರ್ಗವನ್ನಾಕ್ರಮಿಸುವಲ್ಲಿ ಸೇನಾಸಮೇತನಾಗಿ ನೀನು ಸಹಾಯವಂ ಮಾಡುತಲಿರುವನಾಗು" ಎಂದು ನೇಮಿಸಲು,

ಆ ಭದ್ರಭಟಾದಿಗಳು ತಮಗೆ ಅನುಗಣ್ಯವಲ್ಲದ ಕಾರ್ಯವಂ ರಾಕ್ಷಸನು ನೇಮಿಸುತ್ತಿರುವದಂ ಕೇಳಿ, ತಮ್ಮ ಮನಸ್ಸಿಗೆ ಸಮ್ಮತವಿಲ್ಲದಿದ್ದರೂ ತಾವು ಯೋಚಿಸಿ ಬಂದ ಕಾರ್ಯವಂ ಸಾಧಿಸಲೋಸುಗ ಕಾಲಹರಣನಿಮಿತ್ತವಾಗಿ ರಾಕ್ಷಸನು ನೇಮಿಸಿದ ಮೇರೆಗೆ ಸಮ್ಮತರಾಗುತ್ತಿರಲು, ಅವರಿಗೆಲ್ಲರಿಗೂ ಕರ್ಪೂರವೀಳಯ[1]ಗಳಂ ತರಿಸಿಕೊಟ್ಟು, ಅವರಂ ಕಳುಹಿಸಿ, ತಾನಿದ್ದೆಡೆಗೆ ರಾಕ್ಷಸನು ಬರುತ್ತಿದ್ದನು.

ಹೀಗಿರುತ್ತಿರಲು, ಆ ಬಳಿಕ ಪಾಟಲೀಪುರದಲ್ಲಿ ಇದ್ದ ಭದ್ರಭಟಾದಿ ಸೇನಾನಾಯಕರು ಚಾಣಕ್ಯನ ಮನೋನುಸಾರವಾಗಿ ಮಲಯಕೇತುವಿನ ಬಳಿಗೆ ಹೋಗಿ, ಆತನಂ ಕಂಡು, ಬಾಗುರಾಯಣನ ವಾಕ್ಯದಿಂದ ತಮಗೆ ಅಧಿಕಾರಗಳಂ ನೇಮಿಸುವಂತೆ ಮಲಯಕೇತುವಿನ ಅಪ್ಪಣೆಯಂ ರಾಕ್ಷಸನಿಗೆ ಮಾಡಿಸಲು, ಆ ರಾಕ್ಷಸನು ಈ ಭದ್ರಭಟಾದಿಗಳಲ್ಲಿ ಸಂಶಯಬುದ್ಧಿಯಿಂದ ಅವರ ಮನುಷ್ಯವಾಸಿಗೆ ಯೋಗ್ಯವಲ್ಲದ ಕಾರ್ಯಗಳಂ ನೇಮಿಸಿ, ಮಲಯಕೇತುವಿನ ಸಮೀಪದಲ್ಲಿ ವಿಶೇಷಸ್ವಾತಂತ್ರ್ಯವಿಲ್ಲದಂತೆ ಮಾಡಿ, ಸಂಬಳಗಳಂ ನಿಗದಿಯಂ ಮಾಡದೆ, ಅಲ್ಲಿಂದಲೂ ಅನ್ಯತ್ರ ಹೋಗಲೀಸದೆ, ಪ್ರತ್ಯಾಶೆಯಂ ತೋರಿಸುತ, ಅವರ

೧. ವಂ (ಕ)

ಕೈಯ ದ್ರವ್ಯಗಳಂ ವ್ಯಯವಂ ಮಾಡಿಸುತ, ಅವರ ಮನೋಭಾವವಂ ತಿಳಿಯ ಬೇಕೆಂದು ಎಣಿಸಿ ಇರುವ ರಾಕ್ಷಸನ ಅಭಿಪ್ರಾಯವಂ ಸಮಿದ್ಧಕನೆಂಬ ಗೂಢಚಾರನ ಮುಖದಿಂ ತಿಳಿದು, ಚಾಣಕ್ಯನು ರಾಕ್ಷಸನ ಬುದ್ಧಿಗೆ ಸಂತೋಷಪಟ್ಟು, ತನಗೆ ಪ್ರಿಯಶಿಷ್ಯನಂ ಕುರಿತು,

"ಎಲೈ ಶಾರ್ಙ್ಗರವನೇ, ನಾನು ಮಾಡಿದ ಪ್ರತಿಜ್ಞಾನುಸಾರವಾಗಿ ನಂದರೆಲ್ಲರಂ ಮೂಲೋತ್ಪಾಟನಂಗೈದು, ಧ್ರುವಜಲದಲ್ಲಿ ತಾವರೆಯಂ ನೆಟ್ಟಂತೆ ಚಂದ್ರಗುಪ್ತನಲ್ಲಿ ರಾಜ್ಯಲಕ್ಷ್ಮಿಯಂ ನಿಲ್ಲಿಸಿದೆನು. ರಾಜ್ಯಲಕ್ಷ್ಮಿಯು ಸ್ಥಿರವಾಗಿ ಇರುವದಕ್ಕೆ ಪ್ರಾಧಾನ್ಯ ಶಸ್ತ್ರವಂ ಸ್ವೀಕರಿಸಿದವನಾದರೂ, ನಾನು ತಪೋವನವನ್ನೈದುವಲ್ಲಿ ಈ ಪ್ರಾಧಾನ್ಯಶಸ್ತ್ರ ಗ್ರಹಣಕ್ಕೆ ರಾಕ್ಷಸನೊಬ್ಬ ಹೊರತು ಇನ್ನೊಬ್ಬರು ಕಾಣಿಸುವದು ಇಲ್ಲ. ಅವನ ಗುಣಗಳೂ ಸ್ವಾಮಿಭಕ್ತಿಯೂ ಬುದ್ಧಿಕೌಶಲ್ಯವೂ ಕಾರ್ಯದಕ್ಷತೆಯೂ ಸತ್ಯಸಂಧತೆಯೂ ಅವನ ಧೀರತ್ವವೂ ಒಂದಕ್ಕಿಂತ ಒಂದು ಅನ್ಯಾದೃಶವಾಗಿ ಇರುವವು. ಲೋಕದಲ್ಲಿ ಜನರು ಅರ್ಥಾರ್ಥಿಗಳಾಗಿ ಅರಸುಗಳನ್ನನುವರ್ತಿಸುತ, ದೈವಯೋಗಗಳಿಂದ ಆ ಅರಸುಗಳಿಗೆ ಕಷ್ಟವುಂಟಾದ ಸಮಯದಲ್ಲಿ ಭೃತ್ಯರು ಅವರಂ ಬಿಡದೆ ಪುನಃ ಅವರ ಶ್ರೇಯಸ್ಸಂ ಚಿಂತಿಸುತ ಇರುವ ಜನರಂ ಕಂಡುಂಟು. ರಾಕ್ಷಸನಾದರೋ ತನಗೆ ಪ್ರಭುಗಳಾದ ನಂದರು ನಿಶ್ಶೇಷವಾಗಿ ಹತರಾದುದಂ ಕಂಡೂ, ತಾನು ಭೋಗಾಸಕ್ತಿಯಂ ಬಿಟ್ಟು, ಪರಲೋಕದಲ್ಲಿ ಇರುವ ನಂದರಿಗೆ ಸಂತೋಷವಂ ಮಾಡುವೆನೆಂದು ಸ್ವಾಮಿಭಕ್ತಿಯನ್ನವಲಂಬಿಸಿ, ನಂದ ವಿರೋಧಿಯಾದ ಚಂದ್ರಗುಪ್ತನಂ ಜಯಿಸುವೆನೆಂದು ಸಾಹಸವಂ ಮಾಡುತಲಿರುವ[ನು].

ರಾಕ್ಷಸನು ಈಗ ಸರ್ವಾರ್ಥಸಿದ್ಧಿಯು ಕಾಲಾಧೀನನಾದುದಂ ತಿಳಿದು ಇರುವನಾದರೂ, ತಾನು ಸಂಕಲ್ಪಿಸಿದ ಕಾರ್ಯವಂ ನೆರವೇರಿಸುವೆನೆಂದು ಮಲಯಕೇತುವನ್ನಾಶ್ರಯಿಸಿ, ದಂಡೆತ್ತಿ ಬರುವನಾಗಿ ಇದಾನೆ. ಈ ಅರ್ಥವಂ ಮೊದಲೇ ತಿಳಿದು ಅದಕ್ಕೆ ಪ್ರತೀಕಾರೋಪಾಯವಂ ತಿಳುಹಿ, ಭದ್ರಭಟಾದಿಗಳಂ ಕಳುಹಿಸಿ ಇರುವೆನು. ಇದರಿಂದ ಮಲಯಕೇತುವಿನ ಗರ್ವವಂ ಮುರಿದು, ರಾಕ್ಷಸನನ್ನು ತಾನಾಗಿ ಇಲ್ಲಿಗೆ ಬರುವಂತೆ ಮಾಡಿ ಇರುವದರಿಂದ ಚಂದ್ರಗುಪ್ತನು ಈ ಭಾರವೆಲ್ಲವಂ ನನ್ನಲ್ಲಿ ನಿಲ್ಲಿಸಿ, ನಾನು ಮಾಡುವ ಕಾರ್ಯವಂ ನೋಡುತ, ತಾನು ತಟಸ್ಥನಾಗಿ ಇದಾನೆ. ಲೋಕದಲ್ಲಿ ಅರಸುಗಳು ಬಹುದ್ರವ್ಯಗಳಂ ಸಂಪಾದಿಸಿ, ಸೇನೆಗಳಂ ಕಟ್ಟಿ, ಶತ್ರುಗಳಂ ನಿಗ್ರಹಿಸಿಯೂ ಬಹುಪ್ರಯತ್ನದಿಂ ರಾಜ್ಯವನ್ನಾಳುವರು. ಅನಾಯಾಸದಿಂ ಚಂದ್ರಗುಪ್ತನು ರಾಜ್ಯವಂ ಸಂಪಾದಿಸಿ ಸುಖಿಸುವಂತೆ ಉಳಿದ ಅರಸುಗಳಿಗೆ ಲಭಿಸಲಾರದು. ರಾಕ್ಷಸನು ಸಹ ಕೈವಶನಾದರೆ ಚಂದ್ರಗುಪ್ತನ ಅದೃಷ್ಟಕ್ಕೆ ಎಣೆಯಿಲ್ಲ" ಎಂದು ಶಾರ್ಙ್ಗರವನೆಂಬ ಶಿಷ್ಯನಂ ಕುರಿತು ಚಾಣಕ್ಯನು ಹೇಳುತ್ತಿರುವ ಸಮಯದಲ್ಲಿ,

ಮೊದಲು ರಾಕ್ಷಸನ ಮನೆಜನ ಇರುವ ಸ್ಥಳವಂ ತಿಳಿದು ಬಂದು ಹೇಳುವಂತೆ ಚಾಣಕ್ಯನಿಂದ ನೇಮಿಸಿ ಇದ್ದ ಗೂಢಚಾರರೊಳಗೆ ಮರಾಳನೆಂಬ ಚಾರನು ಚಿತ್ರಪಟಗಳಂ ತೆಗೆದುಕೊಂಡು, ತದನುಗುಣವಾದ ವೇಷವಂ ಧರಿಸಿ, ತಾಳಲಯದಿಂದ ಗಾನವಂ ಮಾಡುತ, ಅಲ್ಲಿ ಅಲ್ಲಿ ಗುಂಪುಕೂಡಿ ನೋಡ ಬಂದ ಜನಕ್ಕೆ ತನ್ನ ಚಿತ್ರಪಟಗಳಂ ತೋರಿಸಿ, "ಇದು ಸ್ವರ್ಗವು ; ಸುಕೃತಿಗಳಿಗೆ ಪ್ರಾಪ್ಯಸ್ಥಾನವಿದು ; ಇದಕ್ಕೆ ನಿಯಾಮಕನು ಧರ್ಮಮೂರುತಿಯು. ಇದು ನರಕಸ್ಥಾನವು ; ಪಾಪಿಗಳಂ ದಂಡಿಸುವ ಭಟರುಗಳಿವರು;

ಇದಕ್ಕೆ ನಿಯಾಮಕನು ಯಮಮೂರ್ತಿಯು. ಇದು ಸತ್ಯವು, ಅದರಿಂದ ನೀವೆಲ್ಲರೂ ಧರ್ಮವನ್ನಾಚರಿಸಿ ಸದ್ಗತಿಗೆ ಪಾತ್ರರಾಗಿರಿ ; ಪಾಪವನ್ನಾಚರಿಸಬೇಡಿ" ಎಂದು ಅಲ್ಲಲ್ಲಿ ಹೇಳುತ, ಪ್ರತಿಗೃಹದಲ್ಲಿಯೂ ಹೊಕ್ಕು, ಗಾನವಂ ಮಾಡಿ, ಯಾಚಿಸುತ, ಆ ಬಳಿಕ ಚಂದನದಾಸನ ಗೃಹವಂ ಹೊಕ್ಕು, ಅಲ್ಲಿಯೂ ಗಾನವಂ ಮಾಡುತ, ಚಿತ್ರಪಟಗಳಂ ತೋರಿಸುತ, ಅಲ್ಲಿ ನಡೆದ ವಿದ್ಯಮಾನವಂ ಚೆನ್ನಾಗಿ ನೋಡಿ ತಿಳಿದು, ಮಾರ್ಗಗೊಂಡು ಬಂದು, ಚಾಣಕ್ಯನ ಶಾಲೆ ಸಮೀಪಕ್ಕೆ ಬಂದು, ಬಾಗಿಲಲ್ಲಿ ನಿಂತಿರುವ ಶಿಷ್ಯನಂ ಕುರಿತು,

"ಅಯ್ಯ ಬ್ರಾಹ್ಮಣನೇ, ಬ್ರಹ್ಮಲೋಕದಲ್ಲಿ ಇರುವ ಮರಾಳಪಕ್ಷಿಯ ಭಾವಚಿತ್ರವು ನನ್ನಲ್ಲಿ ಇರುವದು. ಪ್ರಾಜ್ಞರಾದವರು ನೋಡಿ, ಅದರ ಅಭಿಪ್ರಾಯವಂ ತಿಳಿದು ಹೇಳುವರುಂಟೋ ?" ಎಂದು ಕೇಳಲು, "ಎಲೈ ಚಿತ್ರಪಟಧಾರಿಯೇ, ಈ ಅರ್ಥವಂ ನಮ್ಮ ಗುರುಗಳಿಗೆ ವಿಜ್ಞಾಪಿಸಿ ಬರುವೆನು, ನಿಲ್ಲು" ಎಂದು ಹೇಳಿ, ಚಾಣಕ್ಯರಿಗೆ ಈ ಅರ್ಥವಂ ತಿಳುಹಿಸಲು, "ಮರಾಳನೆಂಬ ನಮ್ಮ ಗೂಢಚಾರನಾಗಿ ಇರಬೇಕು" ಎಂದು ತಿಳಿದು, "ಒಳಕ್ಕೆ ಬರಲಿ" ಎಂದು ಹೇಳಲು, ಆ ಮಾತಿಗೆ ಚಿತ್ರಪಟದವನಂ ಒಳಕ್ಕೆ ಬಿಡಲು, ಅವನಂ ನೋಡಿ ಚಾಣಕ್ಯನು, "ಎಲೈ ಮರಾಳನೇ, ಇಷ್ಟು ದಿವಸ ಯಾವ ಕಾರ್ಯವಂ ನೋಡುತ್ತಲಿದ್ದೆ? ಚಂದ್ರಗುಪ್ತನಲ್ಲಿ ಯಾರಿಗೆ ಅನುರಾಗವಿರುವದು ? ಯಾರಿಗೆ ಅಸಹನವುಂಟಾಗಿ ಇರುವದು ?" ಎನಲು,

"ಸ್ವಾಮೀ, ಈ ಪುರದಲ್ಲಿ ಮೂವರು ಹೊರತು ಉಳಿದ ಪ್ರಜೆಗಳೆಲ್ಲರೂ ಚಂದ್ರಗುಪ್ತನಲ್ಲಿ ಅನುರಕ್ತರಾಗಿ ಇರುವರು" ಎನಲು, ಆ ಮಾತಿಗೆ "ಅವರ್ಯ್ಯಾರ್ಯೈ ?" ಎಂದು ಕೇಳಲು, "ಸ್ವಾಮಿ, ರಾಕ್ಷಸನಿಗೆ ಮಿತ್ರನಾಗಿ, ಚಂದ್ರಗುಪ್ತನ ಅಭ್ಯುದಯವಂ ನೋಡಿ ಸಹಿಸಲಾರದೆ, ಹಿಂದೆ ಮುಂದೆ ಆಡಿಕೊಳ್ಳುತ್ತಿರುವ ಜೀವಸಿದ್ಧಿಯೆಂಬ ಕ್ಷಪಣಕ ಒಬ್ಬನು ; ರಾಕ್ಷಸನಿಗೆ ಆಪ್ತ ರಾಯಸದವನಾಗಿ ಲೋಕಾಯತಮತಸ್ಥನಾದ ಶಕಟದಾಸನೊಬ್ಬನು ; ರಾಕ್ಷಸನಿಗೆ ಪರಮಮಿತ್ರನಾಗಿ ಬುದ್ಧಮತಸ್ಥನಾದ ಚಂದನದಾಸನೆಂಬ ವರ್ತಕನೊಬ್ಬನು. ರಾಕ್ಷಸನು ಈ ಪುರವಂ ಬಿಟ್ಟು ಹೋಗುವಲ್ಲಿ ತನ್ನ ಪತ್ನೀ ಪುತ್ರರಂ ಆ ಚಂದನದಾಸನ ಮನೆಯಲ್ಲಿ ಇಟ್ಟು ಇರುವಂತೆ ಇದೆ" ಎಂದ ಮಾತಿಗೆ ಅತ್ಯಾವಶ್ಯಕದಿಂದ, "ಎಲೈ ಮರಾಳನೇ, ಈ ಅರ್ಥವು ನಿನಗೆ ತಿಳಿದ ಪರಿ ಹ್ಯಾಗೆ ?" ಎನಲು,

"ಸ್ವಾಮಿ, ಈ ಚಿತ್ರಪಟಗಳಂ ತೆಗೆದುಕೊಂಡು ತಾಳಲಯದಿಂ ಗಾನವಂ ಮಾಡುತ, ಪ್ರತಿ ಗೃಹಗಳಲ್ಲಿಯೂ ಈ ಪಟವಂ ತೋರಿಸುತ, ಅವರು ಕೊಟ್ಟುದಂ ಸ್ವೀಕರಿಸುತ, ಹಾಗೇ ಚಂದನದಾಸನ ಗೃಹಕ್ಕೆ ಹೋಗಿ ತಾಳಲಯದಿಂ ಗಾನವಂ ಮಾಡುತ, ಚಿತ್ರಪಟವಂ ತೋರಿಸುತಲಿರುವ ಸಮಯದಲ್ಲಿ, ಐದು ವರುಷದ ಬಾಲಕ ಬಾಲಕನಾಗಿ ರೂಪದಲ್ಲಿ ಅಮಾತ್ಯರಾಕ್ಷಸನಂ ಹೋಲುತ, ಸುಕುಮಾರಾಂಗನಾದ ಶಿಶುವು ಈ ಗಾನವಂ ಕೇಳಿ ಬಾಲಸ್ವಭಾವದಿಂದ ಅಂತರಗೃಹದಿಂದ ಓಡಿಬಂದು, ನನ್ನ ಪಟದ ಸಮೀಪದಲ್ಲಿ ಬಂದು ನಿಲ್ಲಲು, ಆ ಶಿಶುವಂ ಕಾಣಲು ಮನಸ್ಸಿಗೆ ಸಂಶಯ ತೋರಿ, ಆ ಶಿಶುವನ್ನೇ ನಾನು ನಿರೀಕ್ಷಿಸಿ ನೋಡುತ್ತಿರುವ ಸಮಯದಲ್ಲಿ, ಆ ಶಿಶು ಓಡಿಬಂದ ಅಂತರಗೃಹದಲ್ಲಿ ಸ್ತ್ರೀಜನದ ಭೀತಿಗೆ ಅನುಗುಣವಾದ ಕಂಕಣರವದಿಂ ಮುಖರಿತಮಾದ ಚಪ್ಪಾಳೆ ಧ್ವನಿಯೂ ಶಿಶು ಓಡಿಪೋದುದಕ್ಕೆ ಭೀತಿಯಿಂದ ತಾನೆ ಹೇಳಿಕೊಳ್ಳುವ ವಚನವು ಸಹ ಕೇಳಿ

ಬರುತ್ತಿರಲು,

"ಇದೇನೋ ವಿಶೇಷ ಇಲ್ಲಿರುವದು; ತಿಳಿಯಬೇಕೆಂ"ದು ನಂದರ ಭಾವಚಿತ್ರಗಳಂ ಹರಡಿಕೊಂಡು, ಅಮಾತ್ಯರಾಕ್ಷಸನ ಭಾವಚಿತ್ರವಂ ತೆಗೆದು ತೋರಿಸುತ್ತ, ಗಾನವಂ ಮಾಡಿ ಅವರ ಯಶಸ್ಸಂ ಹೊಗಳುತ್ತ, ಸಾವಕಾಶವಂ ಮಾಡುತ್ತಿರಲು, ಆ ಅಂತರಗೃಹದ [1]ಬಾಗಿಲಿನಲ್ಲಿ ಶಿಶುವಂ ಸನ್ನೆಯಂ ಮಾಡಿ ಕರೆಯಲು, ಆ ಶಿಶುವು ಹೋಗದೆ ಪಟದ ಬಳಿಯಲ್ಲೇ ನಿಂತು ಇರಲು, ಅತಿತ್ವರ್‍ಯದಿ ಬಂದು ಆ ಶಿಶುವಂ ಜರಿದು ಅದರ ಭುಜವಂ ಪಿಡಿದು ಸೆಳೆಯಲು, ಹೋರುತ ಪಟವಂ ಬಿಟ್ಟು ಶಿಶುವು ಹೋಗದಿರಲು, ಸಮೀಪದಲ್ಲಿ ನಿಲ್ಲಿಸಿ ಇದ್ದ ನಂದರ ಭಾವಚಿತ್ರವಂ, ಅಮಾತ್ಯ ರಾಕ್ಷಸನ ಚಿತ್ರಭಾವವಂ ನೋಡಿ, ಆ ಸ್ತ್ರೀಯು ಖಿನ್ನಳಾಗಿ ಕಂಬನಿಯಂ ತುಂಬುತ, ಸೆರಗಿನಿಂ ಕಣ್ಣೀರ್ಗಳಂ ಒರಸಿಕೊಳ್ಳುತ, ಶಿಶುವಂ ಒಂದು ಕೈಯಲ್ಲಿ ಸೆಳೆದುಕೊಂಡು ಹೋಗುತ್ತಿರಲು, ಆ ಸ್ತ್ರೀಯ ಬೆರಳಿನಲ್ಲಿ ಪುರುಷನು ಧರಿಸತಕ್ಕ ವ್ಯಕ್ತವಾದ ಅಕ್ಷರದಿಂ ಯುಕ್ತವಾದ ಅಷ್ಟಕೋಣ ಮೊಹರವಂ ಕಂಡೆನು. ಪೂರ್ಣಗರ್ಭವಂ ಧರಿಸಿ ಮೆಲ್ಲಮೆಲ್ಲನೆ ತೆರಳಿದುದರಿಂದ, ಆ ಸ್ತ್ರೀಯ ಸೌಂದರ್ಯ ಲಕ್ಷಣಗಳು ಸಾವಕಾಶವಾಗಿ ತಿಳಿಯಬಂತು. ಇದೆಲ್ಲವಂ ಭಾವಿಸಿ ನೋಡಿದರೆ, ರಾಕ್ಷಸನ ಪತ್ನೀ ಪುತ್ರರು ಚಂದನದಾಸನ ಮನೆಯಲ್ಲಿ ಪ್ರಚ್ಛನ್ನರಾಗಿ ಇದಾರೆ" ಎನಲು,

ಅದಂ ಕೇಳಿ ಚಾಣಕ್ಯನು ತನ್ನ ಮನದಲ್ಲಿ, "ಈ ಚಾರನು ಹೇಳಿದ ಮಾತಿನ ಭಾವವಂ ನೋಡಿದರೆ, ಚಂದನದಾಸನ ಗೃಹದಲ್ಲಿ ಇವನ ಪಟದ ಬಳಿಗೆ ಓಡಿ ಬಂದ ಶಿಶುವಂ ಕರೆದುಕೊಂಡು ಹೋದ ಸ್ತ್ರೀಯೇ ರಾಕ್ಷಸನ ಪತ್ನಿಯಹುದು ; ಅವಳ ಕೈಯಲ್ಲಿ ಪುರುಷ ರಿಡುವ ಮೊಹರು ಇದ್ದುದರಿಂದ ಅದೇ ರಾಕ್ಷಸನ ಮೊಹರವಾಗಿ ಇದ್ದೀತು ; ಅದು ನಮ್ಮ ವಶವಾದರೆ, ಬಹುಕಾರ್ಯಕ್ಕೆ ಉಪಯುಕ್ತವಾದೀತು" ಎಂದು ನಿಶ್ಚೈಸಿ, ಅದಂ ಸಂಗ್ರಹಿಸುವ ಉಪಾಯವಂ ಯೋಚಿಸಿ,

"ಎಲೈ ಮರಾಳಕನೇ, ನೀನು ಹೇಳಿದರ್ಥವು ತಿಳಿಯಲಾಯಿತು. ನೀನು ಹೇಳಿದ ಕ್ಷಪಣಕಾದಿ ಮೂವರಿಗೆ ತಕ್ಕುದುದಂ ಮಾಡಿಸುವೆವು ; ನಿನ್ನ ಕೆಲಸದ ಮೇಲೆ ಇರುವನಾಗು" ಎಂದು ಅವನಂ ಕಳುಹಿಸಿ, ಸಿದ್ಧಾರ್ಥಕನಂ ಕರೆಕಳುಹಿಸಿ,

"ಎಲೈ, ಚಂದನದಾಸನೆಂಬ ವರ್ತಕನ ಮನೆಯಲ್ಲಿ ರಾಕ್ಷಸನ ಪತ್ನೀಪುತ್ರರು ಇರುವರು. ಆಕೆ ಕೈಯಲ್ಲಿ ರಾಕ್ಷಸನ ಮುದ್ರೆಯುಂಗುರವಿರುವದು. ಈ ರೀತಿಯಿಂದ ಆ ಮೊಹರವಂ ತರಿಸು" ಎಂದು ನೇಮಿಸಿ, ರಾಯಸದವರ ಬಳಿಯಲ್ಲಿ ಇರುವ ರಾಕ್ಷಸನ ಮೊಹರವಂ ಮಾಡಿದ ಕಾಗದವಂ ತರಿಸಿ, ಸಿದ್ಧಾರ್ಥಕನ ಕೈಯಲ್ಲಿ ಕೊಟ್ಟು ಕಳುಹಿಸಲು,

ಚಾಣಕ್ಯರು ನೇಮಿಸಿದ ರೀತಿಗೆ, ಸಿದ್ಧಾರ್ಥಕನು ಆ ಕಾಗದದಲ್ಲಿ ಒತ್ತಿಯಿರುವ ಮೊಹರದ ಮೇರೆಗೆ ಸುವರ್ಣದಿಂ ಮೊಹರವಂ ಮಾಡಿಸಿ, ಹೇಳಿದ ಕಾರ್ಯವಂ ನಿರ್ವಹಿಸುವದರಲ್ಲಿ ನಿಪುಣೆಯಾದ ಒರ್ವ [2]ಸೂಲಗಿತ್ತಿಯಂ ಏಕಾಂತದಲ್ಲಿ ಕರೆದು, ಅವಳಿಗೆ ಸನ್ಮಾನವಂ ಮಾಡಿ, ಆ ಮೊಹರವಂ ಅವಳ ಕೈಯಲ್ಲಿ ಕೊಟ್ಟು, ಈ ರೀತಿಯಿಂದ ಅಮಾತ್ಯ ರಾಕ್ಷಸನ ಉಂಗುರವಂ ತಂದು ಕೊಡುವಳಾಗು" ಎಂದು ನೇಮಿಸಿ, ಸೂಲಗಿತ್ತಿಯಂ

೧. ಲೂ ಆ ಅಂತರಗೃಹದ (ಕ) ೨. ಹಸ್ತಪ್ರತಿಗಳಲ್ಲಿ ಸರ್ವತ್ರ ಶೂಲಗಿತ್ತಿ ಎಂದು ರೂಪವಿದೆ.

ಕಳುಹಿಸಿ, ಪುರದ ತಳವಾರನಂ ಕರೆಕಳುಹಿಸಿ,

"ಎಲೈ, ನೀನು ಈ ಪುರದಲ್ಲಿ ನಡೆದ ವೃತ್ತಾಂತವಂ ದಿನಗಟ್ಲೆ ಪ್ರಭುಗಳ ಸನ್ನಿಧಿಯಲ್ಲಿ ಅರಿಕೆಮಾಡುವ ವೇಳೆಯಲ್ಲಿ; ವಿಶೇಷ ಇದೊಂದು ವರ್ತಮಾನವಂ ವಿಜ್ಞಾಪಿಸುವನಾಗು" ಎಂದು ಹೇಳಿ ಕಳುಹಿಸಲು, ಅದೇ ರೀತಿಗೆ ಆ ತಳವಾರನು ತನ್ನ ವೇಳೆಯಲ್ಲಿ ಹೋಗಿ ಆಸ್ಥಾನದಲ್ಲಿ ಕುಳಿತಿದ್ದ ಚಾಣಕ್ಯರಿಗೆ ಕೈಮುಗಿದು, ಆ ದಿನ ಪುರದಲ್ಲಿ ನಡೆದ ವೃತ್ತಾಂತವಂ ಹೇಳುತ್ತಿರುವಲ್ಲಿ,

"ಸ್ವಾಮೀ, ಈ ದಿವಸ ಒಬ್ಬ ಬ್ರಾಹ್ಮಣಸ್ತ್ರೀ ಪ್ರಸವಿಸುವ ಸಮಯದಲ್ಲಿ ಏನೋ ಮತ್ಸರದಿಂ ಆ ಶಿಶುವಂ ಘಾತಿಸಿ ವಂಚಿಸಿ ಓಡಿಹೋದಳು" ಎಂದು ಹೇಳಿದ ಮಾತಿಗೆ ಕ್ರುದ್ಧನಾಗಿ ಚಾಣಕ್ಯನು, "ಎಲೈ , ಈ ಅಕಾರ್ಯವು ಎಷ್ಟು ನಡೆದು ಇರುವದೋ ? ಈ ಪುರದ ಸೂಲಗಿತ್ತಿಯರೆಲ್ಲರಂ ಹಿಡಿತಂದು ವಿಚಾರಿಸಿ ದಂಡಿಸಿ, ಮುಂದೆ ಅಕಾರ್ಯವಂ ನಡೆಯದಂತೆ ಮಾಡುವನಾಗು" ಎಂದು ನೇಮಿಸಲು,

ಅದೇ ರೀತಿಗೆ ತಳವಾರರು ಬೀದಿಬೀದಿಯಂ ಹುಡುಕಿ, ಸೂಲಗಿತ್ತಿಯರುಗಳಂ ಹಿಡಿದು ಕೊಂಡು ಹೋಗುತ್ತಿರಲು, ಆ ವೇಳೆಯಲ್ಲಿ ಸಿದ್ಧಾರ್ಥಕನಿಂದ ನೇಮಿಸಿದ್ದ ಸೂಲಗಿತ್ತಿಯು ತ್ವರಿತದಿಂ ಹೋಗಿ, ಚಂದನದಾಸನ ಗೃಹದ ನಡವೆಯ ಬಾಗಿಲಿನ ಮರೆಯಲ್ಲಿ ಅತಿ ಭೀತಿಯಿಂ ನಡುಗುವಳಂತೆ ನಿಂತಿರುವಳಂ ಕಂಡು, ಆ ಗೃಹದವರು, "ನೀನು ಯಾರು? ಯಾಕೆ ಬಂದೆ ?" ಎಂದು ಕೇಳಲು, ಎಲ್ಲರ ಕಾಲುಗಳಂ ಕಟ್ಟಿಕೊಳ್ಳುತ, ಈ ಪುರದ ಸೂಲಗಿತ್ತಿಯರೆಲ್ಲರಂ ಹಿಡಿದು ಅರಮನೆಯವರು ಎಲ್ಲೋ ದೇಶಾಂತರಕ್ಕೆ ಕಳುಹಿಸುವ ರಂತೆ. ನಾನು ನಾಲ್ಕು ಮಕ್ಕಳುಳ್ಳವಳು. ಈ ಅವಾಂತರ ನಿಲ್ಲುವವರೆಗೂ ನಾಲ್ಕು ದಿವಸ ಎಲ್ಲಿಯಾದರೂ ಕಣ್ಣುಮರೆಯಾಗಿ ಇರಬೇಕು" ಎನಲು, ಇದಂ ಕೇಳಿ ಚಂದನದಾಸನ ಪತ್ನಿಯು, "ನಮ್ಮ ರಾಕ್ಷಸನ ಪತ್ನಿಗೆ ಪ್ರಸವಕಾಲ ಸನ್ನಿಹಿತವಾಗಿ ಇರುವದರಿಂದ ಆ ಸಮಯಕ್ಕೆ ದೊರಕುವದೋ ದೊರಕುವದಿಲ್ಲವೋ, ಅದರಿಂ ಈ ಸೂಲಗಿತ್ತಿಯೇ ಇರಲಿ" ಎಂದು ನಿಶ್ಚೈಸಿ, "ಎಲೈ ಸೂಲಗಿತ್ತಿಯೇ, ನಿನ್ನಿಂದ ನಮಗೆ ಕೆಲಸವುಂಟು. ಅನ್ಯತ್ರ ಹೋಗಬೇಡ. ನಮ್ಮ ಮನೆಯಲ್ಲಿಯೇ ಇರುವಳಾಗು" ಎಂದು ಹೇಳಲು, ಅದೇ ಮೇರೆಗೆ ಇರುತ್ತಿರಲು,

ಮತ್ತೊಂದು ದಿವಸ, ರಾಕ್ಷಸನ ಪತ್ನಿಗೆ ಪ್ರಸವವೇದನೆ ತೋರಲು, ಆ ಸೂಲಗಿತ್ತಿಯಂ ಪ್ರಸವಗೃಹಕ್ಕೆ ಕಳುಹಿಸಲು, ಅವಳು ಲೋಕದ ಸೂಲಗಿತ್ತಿಯರಿಗಿಂತ ಅತಿಶಯವಾಗಿ ರಾಕ್ಷಸಪತ್ನಿಯಂ ಸಂತೈಸುತಿರಲು, ಸ್ತ್ರೀ[ಯ]ರು ಕಟ್ಟಳೆ ಮೇರೆಗೆ ಆಭರಣಗಳಂ ಸಡಿಲಿಸಿ ಸೂಲಗಿತ್ತಿವಶವಂ ಮಾಡಿ, ಉಟ್ಟಿದ್ದ ಸೀರೆಯಂ ತೆಗೆದು, ಬದಲು ಒಂದು ಅರುವೆಯ ನ್ನುಟ್ಟು, ಪ್ರಸವವೇದನೆಯನ್ನನುಭವಿಸುತ ಸುತನಂ ಪಡೆಯುತಿರಲು, ಆ ವೇಳೆಯಲ್ಲಿ ಆಭರಣದಲ್ಲಿ ಇದ್ದ ರಾಕ್ಷಸನ ಮೊಹರವಂ ತೆಗೆದುಕೊಂಡು, ಸಿದ್ಧಾರ್ಥಕನು ತನ್ನ ಕೈಯಲ್ಲಿ ಕೊಟ್ಟು [illegible] ಮೊಹರವಂ ಆಭರಣದಲ್ಲಿ ಇರಿಸಿ, ಅಲ್ಲಿಯ ಕಾರ್ಯವಂ ನೆರ ವೇರಿಸಿ, ಆಕೆಯ ಆಭರಣಗಳಂ ಮುಂದುಗಡೆಯಲ್ಲಿ ಲೆಕ್ಕವಂ ಮಾಡಿ ಅವಳಿಗೆ ಒಪ್ಪಿಸಿ ಬಂದು, ಚಂದನದಾಸನ ಪತ್ನಿಯಂ ಅಪ್ಪಣೆ ಕೇಳಲು, ಆಕೆಯು ಸೂಲಗಿತ್ತಿಗೆ ಸನ್ಮಾನವಂ ಮಾಡಿ ವೀಳಯವಂ ಕೊಟ್ಟು ಕಳುಹಿಸಲು,

ಅಲ್ಲಿಂದ ಸಿದ್ಧಾರ್ಥಕನ ಕೈಯಲ್ಲಿ ಮೊಹರವಂ ತಂದುಕೊಡಲು, ಆ ಕ್ಷಣದಲ್ಲೇ ಸಿದ್ಧಾರ್ಥಕನು ಚಾಣಕ್ಯನ ವಶಕ್ಕೆ ಒಪ್ಪಿಸಲು, ಆ ಮೊಹರವಂ ನೋಡಿ, "ಮರಾಳಕನು ಹೇಳಿದ ಮೇರೆ ಅಷ್ಟಕೋಣವು ; ರಾಕ್ಷಸನ ಹೆಸರಿನ ಅಕ್ಷರದಿಂದ ಮೊಹರವು ಪುರಾತನ ವಾದುದರಿಂದ ರಾಕ್ಷಸನದು ಅಹುದೆಂ"ದು ಚಾಣಕ್ಯನು ತನ್ನ ಮನಸ್ಸಿನಲ್ಲಿ 'ರಾಕ್ಷಸನ ಉಂಗುರವು ತನಗೆ ದೊರಕಿದುದರಿಂದ ಮಲಯಕೇತುವನ್ನನುವರ್ತಿಸಿ ಇರುವ ರಾಕ್ಷಸ ನಲ್ಲಿ ಮಲಯಕೇತುವಿಗೆ ಕೋಪವುಂಟಾಗುವಂತೆ ಮಾಡಿ, ಅವನಿಂದಲೇ ರಾಕ್ಷಸನು ತಿರಸ್ಕೃತನಾದ ಬಳಿಕ ತಾನಾಗಿ ಇಲ್ಲಿ ರಾಕ್ಷಸನು ಬರುವಂತೆ ಮಾಡುವೆನೆಂ'ದು ನಿಶ್ಚೈಸಿ, ತನ್ನ ಬಳಿಗೆ ರಾಕ್ಷಸನು ಬರುವ ಪರಿಯಂತವೂ ಮಾಡುವ ಪ್ರಯತ್ನವಂ ಯೋಚಿಸಿ, ಇಂಥವರ ಬಳಿಯಿಂದ ಇಂಥವರಿಗೆ ಎಂಬುದಾಗಿ ಒಬ್ಬರ ಹೆಸರಂ ಕಾಣಿಸದೆ ಒಂದು ಕಾಗದದಲ್ಲಿ ಪ್ರಕೃತೋಚಿತವಾದ ಕಾರ್ಯಗಳಂ ಬರೆದು, ಸಿದ್ಧಾರ್ಥಕನಂ ರಹಸ್ಯವಾಗಿ ಕರೆ ಕಳುಹಿಸಿ, ಅವನಂ ಕುರಿತು ಚಾಣಕ್ಯನಿಂತೆಂದನು :

"ಎಲೈ ಆಪ್ತನಾದ ಸಿದ್ಧಾರ್ಥಕನೇ, ಒಂದು ಕಾರ್ಯಾರ್ಥವಾಗಿ ಬರೆದಿರುವ ಕಾಗದದಲ್ಲಿ ಇರುವ ಅಕ್ಷರಗಳು ವೈದೀಕರ ಅಕ್ಷರವಾದುದರಿಂದ, ನಿನಗೆ ಪರಿಚಿತನಾದ ಶಕಟದಾಸನ ಅಕ್ಷರದಿಂದ ಸ್ಫುಟವಾಗಿ ಈ ಕಾಗದಕ್ಕೆ ಬದಲುಪ್ರತಿಯನ್ನು ಬರಸಿಕೊಂಡು ಬರುವ ನಾಗು" ಎಂದು ಕಾಗದವಂ ಸಿದ್ಧಾರ್ಥಕನ ಕೈಯಲ್ಲಿ ಕೊಡಲು, 'ಮಹಾಪ್ರಸಾದವೆಂ'ದು ಅದಂ ತೆಗೆದುಕೊಂಡು, ಸಿದ್ಧಾರ್ಥಕನು ಶಕಟದಾಸನ ಸಮೀಪಕ್ಕೆ ಹೋಗಿ, ಕಾಗದವಂ ನೋಡಿ, "ಚಾಣಕ್ಯರು ಏನೋ ಒಂದು ಮಹತ್ಕಾರ್ಯವಂ ಯೋಚಿಸಿ, ಅನ್ಯರಿಗೆ ತಿಳಿಯ ದಂತೆ ಕಾಗದವಂ ಬರೆದು ಇದ್ದಾರೆ ; ಪರ್ಯವಸಾನದಲ್ಲಿಯೇ ಹೊರತು ತಿಳಿಯ ಕೂಡದು" ಎಂದು ನಿಶ್ಚೈಸಿ, ಶಕಟದಾಸನ ಸಂಗಡ ಪ್ರಕೃತೋಚಿತವಾಗಿ ಮಾತನಾಡುತ್ತ ಮತ್ತಷ್ಟು ಹೊತ್ತಿನ ಮೇಲೆ ತನ್ನ ಬಳಿಯಲ್ಲಿ ಇದ್ದ ಕಾಗದವಂ ಶಕಟದಾಸನ ಕೈಯಲ್ಲಿ ಕೊಟ್ಟು,

"ಅಯ್ಯ ಶಕಟದಾಸನೇ, ಈ ಪತ್ರದಲ್ಲಿ ಒಂದು ಕೌತುಕವುಂಟು ; ಇದು ಪ್ರಾಕೃತವಾಕ್ಯ ದಿಂದ ಬರೆದು ಇರುವದಾದರೂ ಇದರ ಅಕ್ಷರಗಳಂ ವ್ಯತ್ಯಾಸವಾಗಿ ಪ್ರಯೋಗಿಸಿದರೆ ಸಂಸ್ಕೃತ ಶ್ಲೋಕಗಳು ಆಗುತ್ತಲಿದೆ ; ಆ ಶ್ಲೋಕಗಳಂ ಪ್ರತಿಲೋಮವಾಗಿ ಬರೆದರೆ, ಚಿತ್ರಬಂಧಗಳೂ ಆಗುತ್ತಲಿದೆ. ಸ್ಫುಟವಾಗಿ ಇನ್ನೊಂದು ಪ್ರತಿಯನ್ನು ಬರೆಯುವನಾಗು. ಈ ಅಕ್ಷರಗಳು ಸಂದಿಗ್ಧವಾಗಿ ಇದೆ. ಒಬ್ಬ ಕವೀಶ್ವರನು ಬರೆದು ಇದರ ಪದ್ಧತಿಯಂ ಹೇಳಿದನು" ಎನಲು, ಆ ಮಾತಿಗೆ ಶಕಟದಾಸನು ತನ್ನ ಅಕ್ಷರದಿಂದ ಸಿದ್ಧಾರ್ಥಕನ ಕಾಗದಕ್ಕೆ ಮತ್ತೊಂದು ಪ್ರತಿಯಂ ಬರೆದು ಅವನ ಕೈಯಲ್ಲಿ ಕೊಟ್ಟು, 'ಇದರ ಪದ್ಧತಿ ಏನೆಂ' ದೆನಲು, ಆಗ ಸಿದ್ಧಾರ್ಥಕನು ಒಂದು ಘಳಿಗೆ ಯೋಚಿಸುವನಂತೆ ನೋಡಿ, "ಅಯ್ಯ ಶಕಟದಾಸನೇ, ಕವೀಶ್ವರನು ಹೇಳಿದ ಪದ್ಧತಿಯು ಸ್ವಲ್ಪ ವಿಸ್ಮೃತವಾದಂತೆ ಇದೆ ; ಇನ್ನೊಂದು ವೇಳೆ ಕೇಳಿ ತಿಳಿದು ಬಂದು ಹೇಳುವೆನೆಂ"ದು ಶಕಟದಾಸನಿಗೆ ಹೇಳಿ,

ಅಲ್ಲಿಂದ ಹೊರಟು ಆ ಕಾಗದವಂ ಚಾಣಕ್ಯರ ಕೈಯಲ್ಲಿ ಕೊಡಲು, ಅದಂ ನೋಡಿ ಕೊಂಡು, ಆ ಕಾಗದವಂ ಮಡಿಸಿ,ತನ್ನ ಬಳಿಯಲಿದ್ದ ರಾಕ್ಷಸನ ಮುದ್ರೆವುಂಗುರದಿಂದ ಆ ಕಾಗದಕ್ಕೆ ಮೊಹರವಂ ಮಾಡಿ, ಆ ಕಾಗದಕ್ಕೆ ಅನುಕೂಲವಾಗಿ ಮೊದಲು ಬೊಕ್ಕಸದಲ್ಲಿ

ಕಟ್ಟಿಸಿ ಇರುವ ಪರ್ವತರಾಯನ ಆಭರಣವಂ ರಾಕ್ಷಸನ ಬೊಕ್ಕಸದಲ್ಲಿ ಸೇರುವಂತೆ ಮಾಡಬೇಕೆಂದು ನಿಶ್ಚೈಸಿ. ಆ ಬಳಿಕ ಸಿದ್ಧಾರ್ಥಕನಂ ಕರೆದು,

"ಎಲೈ ನಮಗೆ ಆಪ್ತನಾದ ಸಿದ್ಧಾರ್ಥಕನೇ. ಈಗಿನವರೆಗ್ಯೆ ಚಂದ್ರಗುಪ್ತನ ಕಾರ್ಯವು ನಿನ್ನಿಂದ ಬಹು ಅನುಕೂಲಿಸಿತು. ಕಾರ್ಯಘಟನೆಯಲ್ಲಿ ಸಮರ್ಥನಾದುದರಿಂದ ಇನ್ನೊಂದು ಕಾರ್ಯವಂ ಹೇಳುವೆನು. ಹೇಳಿದ ರೀತಿಗೆ ಸಾಧಿಸುವನಾಗು" ಎಂದು ಹೇಳತಕ್ಕ ಕಾರ್ಯ ಗಳೆಲ್ಲವಂ ಸಿದ್ಧಾರ್ಥಕನ ಕಿವಿಯಲ್ಲಿ ಹೇಳಿ. ಆ ಕಾಗದವಂ ರಾಕ್ಷಸನ ಮೊಹರವಂ ಸಹ ಅವನ ಕೈಯಲ್ಲಿ ಕೊಟ್ಟು, "ಹೋಗಿ ಬಾರೆಂ"ದು ಕಳುಹಿಸಲು, ಅವನು ತೆರಳುತ್ತಿರಲು,

ಆ ಸಮಯದಲ್ಲಿ, ಚಂದ್ರಗುಪ್ತನ ಅಪ್ಪಣೆಯಿಂದ ಅಂತಃಪುರದ ಕಂಚುಕಿ ಒಬ್ಬ ಬಂದು, ಚಾಣಕ್ಯರಂ ಕಂಡು ಕೈಮುಗಿದು, 'ಸ್ವಾಮೀ. ಈ ದಿವಸ ಪರ್ವತರಾಯನಿಗೆ ಮಾಡಿಸಿದ ಪರಲೋಕ ಕ್ರಿಯೆಗಳು ಪರಿಸಮಾಪ್ತವಾಗುವದರಿಂದ, ಆತನು ಅಲಂಕರಿಸಿದ್ದ ಆಭರಣಗಳು ಬೊಕ್ಕಸದಲ್ಲಿ ಕಟ್ಟಿ ಇರುವದರಿಂದ, ಇದಕ್ಕೆ 'ಅಪ್ಪಣೆಯೇನಂ'ದು ಚಂದ್ರ ಗುಪ್ತ ಮಹಾರಾಯರು 'ವಿಜ್ಞಾಪಿಸಿ ಬಾರೆಂ'ದು ನನ್ನಂ ಕಳುಹಿಸಿದರು. ಅಪ್ಪಣೆಯೇನು?" ಎಂದು ಕಂಚುಕಿ ಕೇಳಲು, ಅದಂ ಕೇಳಿ ಚಾಣಕ್ಯನು "ನಾನು ಯೋಚಿಸಿದ್ದ ಅರ್ಥವನ್ನೇ ಚಂದ್ರಗುಪ್ತನು ಹೇಳಿ ಕಳುಹಿಸಿದನು ; ಉತ್ತಮವಾಯಿತು" ಎಂದು ತಿಳಿದು, ಕಂಚು ಕಿಯಂ ಕುರಿತು, "ಎಲೈ ಶೋಣಕನೇ, ಪರ್ವತರಾಯನ ಆಭರಣವು ಅಮೂಲ್ಯವಾದುದ ರಿಂದ ಅದರ ದಾನಕ್ಕೆ ಪಾತ್ರರನ್ನು ಪರೀಕ್ಷಿಸಿ, ಸಂಗ್ರಹಿಸಿ ಇದೇನೆ. ಈ ಬ್ರಾಹ್ಮಣರಂ ಕರೆದುಕೊಂಡು ಹೋಗಿ ನಾವು ಹೇಳಿದೆವೆಂದು ಹೇಳಿ, ಆಭರಣಗಳಂ ಈ ವಿಪ್ರರಿಗೆ ಕೊಡಿಸುವನಾಗು" ಎಂದು ಹೇಳಿ, ವಿಶ್ವಾವಸುವೆಂಬ ತನಗೆ ಅನುಕೂಲನಾದ ಬ್ರಾಹ್ಮಣ ಮುಖ್ಯನಾದ ಮೂರು ಮಂದಿ ವಿಪ್ರರಂ ಕರೆದು,

"ಅಯ್ಯ ವಿದ್ಯಾಸಂಪನ್ನರಾದ ಬ್ರಾಹ್ಮಣರುಗಳಿರಾ. ಈ ದಿವಸ ಚಂದ್ರಗುಪ್ತನು ನಿಮಗೆ ಆಭರಣದಾನವಂ ಕೊಡುವನು. ನೀವು ಅಲಂಕರಿಸಿಕೊಂಡು ಇಲ್ಲಿ ಬಂದರೆ, ಸುಪ್ರೀತ ರಾದ ನಿಮ್ಮಂ ನೋಡಿ ಸಂತೋಷಪಡುವೆನು. ಕಂಚುಕಿಯ ಸಂಗಡ ಹೋಗಿ" ಎಂದು ಹೇಳಿ,

ಮತ್ತೊಂದು ಕಾರ್ಯಗೌರವವಂ ಯೋಚಿಸಿ, ಕಂಚುಕಿಯಂ ಕರೆದು, "ಎಲೈ ಶೋಣಕನೇ, ನಾವು ಹೇಳಿದೆವೆಂದು ನಿಮ್ಮ ಅರಸಿಗೆ ಹೇಳುವನಾಗು, 'ನೀನು ಪ್ರಭುವಾಗಿ ರಾಜ್ಯ ವಿಚಾರವಂ ಮಾಡುವಲ್ಲಿ ಯಾವದೊಂದು ಸ್ವಲ್ಪ ಮಾತಿಗೂ ನಮ್ಮ ಬಳಿಗೆ ಹೇಳಿ ಕಳುಹಿಸಿ ಕಾರ್ಯವಂ ಮಾಡುತಿದ್ದರೆ, ಇನ್ನು ಎಷ್ಟು ದಿವಸಕ್ಕೆ ರಾಜ್ಯಭಾರದಲ್ಲಿ ಬುದ್ಧಿ ನಿನಗೆ ಸ್ಫುರಿಸಬೇಕು ? ಇನ್ನು ಬಳಿಕ ಸ್ವರಾಷ್ಟ್ರವಿಚಾರವೇನಿದ್ದರೂ ವಿಮರ್ಶೆಯಿಂದ ಮಾಡುತ ಪರರಾಷ್ಟ್ರವಿಚಾರದಲ್ಲಿ ನಮಗೆ ತಿಳುಹಿಸಿ ಮಾಡುವನಾಗು' ಎಂದು ಚಂದ್ರಗುಪ್ತನಿಗೆ ಹೇಳು" ಎಂದು ಕಂಚುಕಿಗೆ ಹೇಳಿಕಳುಹಿಸಲು, ಆ ಕಂಚುಕಿಯು ಬ್ರಾಹ್ಮರು ಸಮೇತನಾಗಿ ಬಂದು, ಚಂದ್ರಗುಪ್ತನಂ ಕಂಡು ಕೈಮುಗಿದು ನಿಂತು,

"ಜೀಯ, ಪರ್ವತರಾಯನಾಭರಣದಾನಕ್ಕೆ ಉತ್ತಮಪಾತ್ರರನ್ನು ನೋಡಿ ಚಾಣಕ್ಯರು ಈ ಬ್ರಾಹ್ಮಣರಂ ಕಳುಹಿಸಿ ಇದ್ದಾರೆ. 'ಯಾವ ಕಾರ್ಯ ಸ್ವರಾಷ್ಟ್ರವಿಷಯವಾಗಿ ಇದ್ದರೂ ಪ್ರಭುವಾಗಿ ಇದ್ದದ್ದರಿಂದ ಅದೆಲ್ಲವಂ ಸ್ವತಂತ್ರದಿಂದ ನೋಡುತ್ತ, ಪರರಾಷ್ಟ್ರವಿಷಯಕ

ವಾದ ಕಾರ್ಯವೇನಿದ್ದರೂ ತಮಗೆ ತಿಳುಹಿಸಿ ಮಾಡತಕ್ಕದ್ದು' ಎಂದು ಯಜಮಾನರಾದ ಚಾಣಕ್ಯರ ಅಪ್ಪಣೆಯಾಗಿ ಇದೆ" ಎನಲು, ಅದಂ ಕೇಳಿ ಪರ್ವತರಾಯ ಧರಿಸಿದ್ದ ಭೂಷಣ ಗಳಂ ತರಿಸಿ, ಆ ವಿಶ್ವಾವಸು ಮುಖ್ಯರಾದ ಆ ಬ್ರಾಹ್ಮಣರಿಗೆ ಅಲಂಕರಿಸಿ ಕಳುಹಿಸಿ, ಆ ಬಳಿಕ ಚಂದ್ರಗುಪ್ತನು ಚಾಣಕ್ಯರು ಹೇಳಿ ಕಳುಹಿಸಿದ ವಾಕ್ಯವಂ ನೆನೆದು, "ಏನೋ ಒಂದು ಕಾರ್ಯಾರ್ಥವಾಗಿ ತಮ್ಮನ್ನಪೇಕ್ಷಿಸದೆ ಸ್ವರಾಷ್ಟ್ರವಿಚಾರವಂ ಮಾಡುವಂತೆ ಯಜಮಾನರು ತನಗೆ ಹೇಳಿ ಕಳುಹಿಸಿದ ಬಳಿಕ, ಎಂದಿನಂತೆ ನಾನು ಸುಮ್ಮನಿದ್ದರೆ ನಿಷ್ಕಾರಕ್ಕೆ ಯೋಗ್ಯ ನಾದೇನೆಂ"ದು ತಿಳಿದು, ಸ್ವರಾಷ್ಟ್ರವಿಚಾರವಂ ಪರಾಪೇಕ್ಷೆಯಿಲ್ಲದೆ ಚಂದ್ರಗುಪ್ತನು ತಾನೇ ಮಾಡುತಲಿದ್ದನು.

ಪರ್ವತರಾಯನ ಆಭರಣದಿಂದ ಅಲಂಕೃತರಾಗಿ ತನ್ನ ಬಳಿಗೆ ಬಂದ ವಿಶ್ವಾವಸು ಮುಖ್ಯರಾದ ಬ್ರಾಹ್ಮಣರಂ ನೋಡಿ ಚಾಣಕ್ಯನು, "ಎಲೈ ಆಪ್ತರಾದ ವಿಪ್ರೋತ್ತಮರು ಗಳಿರಾ, ಒಂದು ಕಾರ್ಯಾರ್ಥವಾಗಿ ಆಭರಣದಾನವಂ ನಿಮಗೆ ಕೊಡಿಸಿದೆನು. ಈಗಲೂ ಮಲಯಕೇತುವನ್ನಾಶ್ರೈಸಿ ಪರ್ವತರಾಜ್ಯದಲ್ಲಿ ಇರುವ ಅಮಾತ್ಯ ರಾಕ್ಷಸನ ಗೃಹದ ಸಮೀಪದಲ್ಲಿ ನೀವು ವರ್ತಕರ ವೇಷವಂ ಧರಿಸಿ, ನೀವು ಅಲಂಕರಿಸಿ ಇರುವ ಈ ಆಭರಣಗಳಂ ಮೂರು ಸಂಪುಟದಲ್ಲಿ ಇರಿಸಿಕೊಂಡು, ರಾಕ್ಷಸನಲ್ಲಿ ಹೋಗಿ ಬರುವ ಆಪ್ತಜನರಂ ಕುರಿತು, 'ಈ ಆಭರಣಗಳಂ ಕ್ರಯಕ್ಕೆ ಕೊಡುವೆವು', ಎಂದು ಹೇಳಿ ಕಳುಹಿಸಿ, ರಾಕ್ಷಸನಲ್ಲಿ ಅಗ್ಗವಾಗಿಯಾದರೂ ಕ್ರಯಕ್ಕೆ ಹೊಂದಿಸಿ, ಅದರ ಕ್ರಯದ ದ್ರವ್ಯವನ್ನು ಯಾಗಾರ್ಥವಾಗಿ ನೀವೇ ತೆಗೆದುಕೊಳ್ಳುವರಾಗಿ. ಎಷ್ಟು ಕಡಮೆಯಾದರೂ ಮೂರು ಲಕ್ಷ ದ್ರವ್ಯಕ್ಕೆ ಕಡಮೆಯಾಗದು. ಈ ಕಾರ್ಯವಂ ಮಾಡಿ ಬಂದು ತಿಳುಹಿಸಿ" ಎಂದು ಆ ಬ್ರಾಹ್ಮರಂ ಕಳುಹಿಸಿ, ತನ್ನ ಬಳಿಯ ಶಿಷ್ಯರಂ ಕರೆದು,

"ಎಲೈ ಕುಶಬರ್ಹಿಯೇ, 'ರಾಕ್ಷಸನಿಂದ ಪ್ರೇಷಿತನಾಗಿ ಜೀವಸಿದ್ಧಿಯೆಂಬ ಕ್ಷಪಣಕನು ವಿಷಕನ್ನೆಯಂ ಪರ್ವತರಾಯನಿಗೆ ಒಪ್ಪಿಸಿ ಅವನಂ ಸಂಹಾರಗೈದುದುದರಿಂದ, ದೋಷಿ ಯಾದ ಕ್ಷಪಣಕನನ್ನು ಚಂದ್ರಗುಪ್ತರ ಅಪ್ಪಣೆ ಮೇರೆಗೆ ಪುರವಂ ಬಿಟ್ಟು ಹೊರಡಿಸು ವೆವೆಂ'ದು ಸಾರುತ, ಜೀವಸಿದ್ಧಿಯಂ ಹೊರಡಿಸುವಂತೆ ನಾವು ಹೇಳಿದೆವೆಂದು ತಳವಾರ ದಂಡಕಗೆ ಹೇಳಿ ಬಾರೆಂದು ಕಳುಹಿಸಲು, ಅದೇ ರೀತಿಗೆ ಶಿಷ್ಯನು ಹೋಗಿ, ದಂಡಕನಿಗೆ ಹೇಳಲು, ಅವನು ಜೀವಸಿದ್ಧಿಯಂ ಹುಡುಕುವದಕ್ಕೆ ಹೋಗುತ್ತಿರಲು, ಪುನಃ ಚಾಣಿಕ್ಯನು ಮತ್ತೊಬ್ಬ ಶಿಷ್ಯನಂ ಕರೆದು,

"ಎಲೈ ಪಶುಲೋಮನೇ, 'ರಾಕ್ಷಸನಿಗೆ ಮಿತ್ರನಾದ ಶಕಟದಾಸನು ಈವೂರಲ್ಲಿ ಇದ್ದು ಕೊಂಡು, ದಾರುವರ್ಮಾದಿಗಳಿಗೆ ಹೇಳಿ, ಚಂದ್ರಗುಪ್ತನಿಗೆ ದ್ರೋಹವಂ ಎಣಿಸಿದ್ದರಿಂದ, ಅವರ ಅಪ್ಪಣೆಮೇರೆ ಈ ಶಕಟದಾಸನಂ ಶೂಲಕ್ಕೆ ಹಾಕುವೆವೆಂ'ದು ಅವನ ಹಿಡಿದು ತಂದು, ಸಾರಿಕೊಂಡು ಹೋಗಿ, ಶೂಲಕ್ಕೆ ಹಾಕುವಂತೆ ನಾವು ಹೇಳಿದೆವೆಂದು ದಂಡ ಪಾಶಕನಿಗೆ ಹೇಳಿ ಬಾರೆಂ"ದು ಹೇಳಿ, ಕಿವಿಯಲ್ಲಿ ಮತ್ತೊಂದು ವಾಕ್ಯವಂ ಹೇಳಲು, ಅದೇ ರೀತಿಗೆ ಆ ಶಿಷ್ಯನು ಬಂದು, ಚಾಣಕ್ಯರು ಹೇಳಿದರ್ಥವಂ ದಂಡಪಾಶಕನಿಗೆ ಹೇಳಲು, ಅಂತ್ಯಜನಾದವನಾದಂತೆ ತೋರುವ ದಂಡಪಾಶಕನು ಶಕಟದಾಸನಂ ಹಿಡಿದು ತರುವದಕ್ಕೆ ಹೋಗುತ್ತಿರಲು,

ಆ ಬಳಿಕ ಚಾಣಕ್ಯನು ಮತ್ತೊಬ್ಬ ಶಿಷ್ಯನಂ ಕರೆದು, "ಎಲೈ ಶೀಘ್ರಕಾರಿಯೇ, ಬಳೆಗಾರ ಶೆಟ್ಟಿಯಾದ ಚಂದನದಾಸನಂ ಕರೆದುಕೊಂಡು ಬಾರೆಂ"ದು ಹೇಳಲು, 'ಒಳ್ಳೇದೆಂ'ದು ಶಿಷ್ಯನು ಹೋಗಿ, ಚಂದನದಾಸನಂ ಕಂಡು, "ನಿನ್ನಂ ಬರಹೇಳಿ ಚಾಣಕ್ಯರ ಅಪ್ಪಣೆಯಾಗಿ ಇದೆ" ಎನಲು, ಆಗ ಚಂದನದಾಸನು ತನ್ನ ಮನಸ್ಸಿನಲ್ಲಿ, "ಕಠಿಣಚಿತ್ತವುಳ್ಳ ಚಾಣಕ್ಯನಂ ಕಂಡರ ಅಪರಾಧ ಇಲ್ಲದವನಾದರೂ ಭೀತನಾಗುವನು. ತಾನು ಮಹಾಪರಾಧಿಯು, ಅವನಂ ಕಂಡ ಬಳಿಕ ತನಗೆ ಏನು ಆಪತ್ತು ಬರುವದೋ ? ಮಿತ್ರಕಾರ್ಯಾರ್ಥವಾಗಿ ಬಂದರೂ ಬರಲಿ. ರಾಕ್ಷಸನ ಗೃಹಜನ ಮಾತ್ರ ಕಾಣಿಸಿಕೊಳ್ಳದಿದ್ದರೆ ಅದೇ ಪರಮ ಲಾಭವೆಂ"ದು ನಿಶ್ಚೈಸಿ, ಚಾಣಕ್ಯನ ಶಿಷ್ಯನಂ ಕುರಿತು,

"ಅಯ್ಯ ವಿಪ್ರೋತ್ತಮನೇ, ನಾನು ಧರಿಸಿ ಇರುವ ವಸ್ತ್ರವು ಮಲಿನವಾಗಿ ಇದೆ ; ದೊಡ್ಡವರಂ ಕಾಣುವದಕ್ಕೆ ಬದಲುವಸ್ತ್ರವಂ ಧರಿಸಿ ಬರುವೆನು. ಈ ಪೀಠದ ಮೇಲೆ ಕುಳಿತಿರಬಹುದು" ಎಂದು ಹೇಳಿ, ಒಳಕ್ಕೆ ಹೋಗಿ, ತನಗೆ ಆಪ್ತನಾದ ಧನಸೇನನಂ ಕರೆದು, "ಎಲೈ, ಕ್ರೂರಿಯಾದ ಚಾಣಕ್ಯನು ನನ್ನಂ ಕರೆಕಳುಹಿಸಿ ಇದ್ದಾನೆ. ಅವನಲ್ಲಿ ಹೋದ ಬಳಿಕ ಏನಾಗುವದೋ ತಿಳಿಯಕೂಡದು. ರಾಕ್ಷಸನ ಗೃಹಜನವನ್ನು ಮತ್ತೊಂದು ರಹಸ್ಯವಾದ ಸ್ಥಳದಲ್ಲಿ ಇರಿಸಿ ಕಾದುಕೊಂಡು ಇರು" ಎಂದು ನೇಮಿಸಿ, ಬದಲುವಸ್ತ್ರವಂ ಧರಿಸಿ, ಚಂದನದಾಸನು ಹೊರಟು ಬಂದು, ಚಾಣಕ್ಯನಂ ಕಂಡು ಕೈಮುಗಿಯಲು,

"ಎಲೈ ಚಂದನದಾಸನೇ, ನೀನು ಕ್ಷೇಮದಲ್ಲಿ ಇದ್ದೀಯಾ ? ಮಾಡುವ ವ್ಯಾಪಾರಗಳು ನಿರುಪಾಧಿಕಗಳಾಗಿ ನಡೆಯುತ್ತಲಿವೆಯೇ ? ಕುಳ್ಳಿರು" ಎಂದು ಚಾಣಕ್ಯನು ಹೇಳಲು, ಆ ಮಾತಿಗೆ, "ಸ್ವಾಮೀ. ತಮ್ಮ ಕೃಪೆಯಿಂದ ಎಲ್ಲವೂ ನಿರುಪಾಧಿಕವೆಂ"ದು ಹೇಳಿ, ನಮಸ್ಕರಿಸಿ. ಚಂದನದಾಸನು ಕುಳ್ಳಿರಲು,

"ಎಲೈ ಚಂದನದಾಸನೇ, ಪ್ರಜೆಗಳು ಚಂದ್ರಗುಪ್ತನಂ ಒಳ್ಳೆಯವನು ಎಂದು ಹೇಳುತ್ತಾರೆಯೋ. ನಂದರನ್ನೇ ಒಳ್ಳೆಯವರು ಎಂದು ಹೇಳಿಕೊಳ್ಳುತ್ತಾರೆಯೋ ?" ಎನಲು, "ಸ್ವಾಮೀ, ಶರತ್ಕಾಲಚಂದ್ರನಂ ಕಂಡ ನೈದಿಲೆಗಳಂತೆ ಪ್ರಜೆಗಳು ಚಂದ್ರಗುಪ್ತ ಮಹಾರಾಯರನ್ನು ಅಪೇಕ್ಷಿಸುತ್ತಲಿದ್ದಾರೆ" ಎನಲು,

"ಎಲೈ ಚಂದನದಾಸನೇ, ಸಂತುಷ್ಟರಾದ ಪ್ರಜೆಗಳ ದೆಸೆಯಿಂದ ಅರಸುಗಳು ಪ್ರತ್ಯುಪಕಾರವನ್ನಪೇಕ್ಷಿಸುವದು ಪೂರ್ವಮರ್ಯಾದೆಯು" ಎನಲು, "ಸ್ವಾಮಿಯವರ ಅಪ್ಪಣೆಯಾದರೆ ನನ್ನ ಶಕ್ತಿಯಂ ಮೀರಿ ನಡೆದುಕೊಳ್ಳುವೆನು" ಎನಲು,

"ಎಲೈ ಚಂದನದಾಸನೇ, ನಿರಪರಾಧಿಗಳಾದ ಪ್ರಜೆಗಳ ದೆಸೆಯಿಂದ ದಂಡಗಳಂ ತೆಗೆಯುವದಕ್ಕೆ ನಂದರ ಪ್ರಭುತ್ವವಲ್ಲ. ನೀವೆಲ್ಲರೂ ಕ್ಷೇಮಿಗಳಾಗಿ ಇದ್ದರೆ, ಅದೇ ಚಂದ್ರಗುಪ್ತನಿಗೆ ಮಹಾಭ್ಯುದಯವು" ಎನಲು, "ಸ್ವಾಮೀ, ಅದೇ ಮೇರೆಗೆ ನಮ್ಮೆಲ್ಲರಂ ರಕ್ಷಿಸತಕ್ಕದ್ದು" ಎನಲು,

"ಎಲೈ ಚಂದನದಾಸನೇ, ದೊರೆಗಳಿಗೆ ಅಪ್ರಿಯವಂ ಮಾಡದಿದ್ದರೆ ಸಂರಕ್ಷಿತರಾದೀರಿ" ಎನಲು, "ಸ್ವಾಮೀ, ದುರಾತ್ಮಕನಾದವನು ದೊರೆಗಳಿಗೆ ಅಪ್ರಿಯವನ್ನೆಣಿಸುವನು" ಎನಲು,

"ಎಲೈ ಚಂದನದಾಸನೇ, ಮೊದಲು ನೀನು ರಾಜದ್ರೋಹಿಯು" ಎನಲು, 'ಬುದ್ಧೇಶ ಬುದ್ಧೇಶ'ನೆಂದು ತನ್ನ ದೇವರಂ ಸ್ಮರಿಸುತ್ತ, "ಸ್ವಾಮಿ, ಅಗ್ನಿಯೊಡನೆ ತೃಣಗಳಿಗೆ

ಕಲಹವುಂಟೇ ?" ಎನಲು, "ಎಲೈ ವರ್ತಕನೇ, ರಾಜಾಪರಾಧಿಯಾದ ರಾಕ್ಷಸನ ಗೃಹ ಜನವಂ ಮನೆಯಲ್ಲಿ ಮರೆಮಾಡಿ ಇರಿಸಿಕೊಂಡು, ಈಗಿನವರೆಗೂ ಪ್ರಭುವಿಗೆ ವಿಜ್ಞಾಪಿಸದೆ ಇರುವದು ನಿನ್ನಲ್ಲಿ ಅಪರಾಧವುಂಟೋ ಇಲ್ಲವೋ ?" ಎನಲು,

"ಬುದ್ಧೀ, ಯಾರೋ ಅನೃತವಂ ಹೇಳಿರಬೇಕು. ಈ ಅರ್ಥವಂ ನಾನು ಕಂಡವನಲ್ಲ" ಎನಲು, "ಈ ಅರ್ಥವಂ ನೀನು ಕಂಡದ್ದು ಉಂಟಾದರೆ, ನಿನ್ನ ಸರ್ವಸ್ವವನ್ನರಮನೆಗೆ ತೆಗೆದುಕೊಂಡು, ನಿನಗೆ ತೀಕ್ಷ್ಣವಾದ ದಂಡನೆಯಂ ಮಾಡಬಹುದೋ ?" ಎನಲು,

"ರಾಕ್ಷಸನು ಹೋಗುವ ಸಮಯದಲ್ಲಿ ತನ್ನ ಗೃಹಜನವಂ ನನ್ನ ಮನೆಯಲ್ಲಿ ಇರಿಸಿ ಇದ್ದುದುಂಟು. ಆ ಬಳಿಕ ನನ್ನಂ ವಂಚಿಸಿ ಎಲ್ಲಿಯೋ ಹೋದುದರಿಂದ ವಿಜ್ಞಾಪಿಸುವದಕ್ಕೆ ಭಯಪಡುತ್ತಿದ್ದೆನು" ಎನಲು, "ಎಲೈ ಶೆಟ್ಟಿಯೇ, ಮೊದಲು 'ಕಾಣೆ'ನೆಂದು ಹೇಳಿ ಈಗ 'ಕಂಡದ್ದು ಉಂಟು, ಎಲ್ಲಿಯೋ ಹೋದರು' ಎಂದು ಎರಡುಮಾತುಗಳಂ ಹೇಳ ಬಹುದೇ ?" ಎನಲು,

"ಬುದ್ಧೀ, ಭಯದಿಂದ ಬಾಯಿತಪ್ಪಿ ಹೇಳಿದೆನು" ಎನಲು, "ಎಲೈ ವ್ಯಾಪಾರಿಯೇ, ಚಂದ್ರಗುಪ್ತನ ಪ್ರಭುತ್ವದಲ್ಲಿ ಬಾಯಿತಪ್ಪೂ ಬರಕೂಡದು. ಸುಮ್ಮನೆ ರಾಕ್ಷಸನ ಗೃಹದ ಜನವಂ ತಂದು ಒಪ್ಪಿಸು" ಎನಲು,

ಆ ಮಾತಿಗೆ ಚಂದನದಾಸನು, ತನ್ನ ಮನಸ್ಸಿನಲ್ಲಿ ಚಿಂತಿಸುತ್ತಿದ್ದನು. "ಈಗ ಶಿರಸ್ಸಿನ ಮೇಲೆ ಸರ್ಪಬಾಧೆಯು ; ಪರ್ವತಪ್ರಾಂತ್ಯದಲ್ಲಿ ವಿಷಹರ ಔಷಧವಿದ್ದಂತಾಯಿತು. ಏನೋ ಮಹದಾಪತ್ತು ಬಂತು" ಎಂದು ಚಿಂತಿಸುತ್ತಿರುವ ಸಮಯದಲ್ಲಿ, ಹೊರಗೆ ಕಲಕಲಧ್ವನಿ ಆಗಲು, ಆಗ ಚಾಣಕ್ಯನು 'ಅದೇನು ತಿಳಿದು ಬಾರೆಂ'ದು ಶಿಷ್ಯನಿಗೆ ನೇಮಿಸಲು, ಆ ಶಿಷ್ಯನು ಹೋಗಿ ತಿಳಿದು ಬಂದು, "ಸ್ವಾಮಿ ಉಪಾಧ್ಯಾಯರೇ, ವಿಷಕನ್ಯಾ ಮುಖದಿಂದ ಪರ್ವತರಾಯನನ್ನು ಸಂಹಾರಗೈಸಿದುದರಿಂದ ಅರಸಿನ ಅಪ್ಪಣೆ ಮೇರೆಗೆ ಜೀವಸಿದ್ಧಿಯೆಂಬ ಕ್ಷಪಣಕನನ್ನು ಅಪಮಾನಪೂರ್ವಕವಾಗಿ ಹಿಡಿದು ಸಾರುತ್ತ ಊರಿಂದ ಹೊರಡಿಸುತಲಿದಾರೆ" ಎನಲು, "ತಾನು ಮಾಡಿದುದಕ್ಕೆ ಫಲವನ್ನನುಭವಿಸಲಿ" ಎಂದು ಚಾಣಕ್ಯನು ಹೇಳುತ್ತ,

"ಎಲೈ ಚಂದನದಾಸನೇ, ರಾಜಾಪರಾಧಿಗಳಿಗೆ ಈ ರೀತಿಯಾಗುವದು ; ವಂಚಿಸದೆ ರಾಕ್ಷಸನ ಗೃಹಜನವಂ ಒಪ್ಪಿಸುವನಾಗು" ಎನಲು, "ಸ್ವಾಮೀ, ನಾನು ಅರಿತವನೇ ಅಲ್ಲ" ಎನಲು, ಅಷ್ಟರಲ್ಲಿಯೇ ಪುನಃ ಬೀದಿಯಲ್ಲಿ ಕೋಲಾಹಲಧ್ವನಿ ಕೇಳಿ ಬರುತ್ತಿರಲು, ಅದು ಏನೆಂದು ಶಿಷ್ಯನಂ 'ನೋಡಿ ಬಾರೆ'ನಲು, ಅವನು ತಿಳಿದು ಬಂದು, "ಉಪಾಧ್ಯಾಯರೇ, ರಾಜಾಪರಾಧಿಯಾದ ಶಕಟದಾಸನನ್ನು ಅರಸಿನ ಅಪ್ಪಣೆ ಮೇರೆಗೆ ಶೂಲಕ್ಕೆ ಹಾಕುವುದಕ್ಕೆ ಸಾರುತ್ತ ಕರೆದುಕೊಂಡು ಹೋಗುತ್ತಲಿದ್ದಾರೆ" ಎನಲು, "ಅವನು ಮಾಡಿದ ದ್ರೋಹಕ್ಕೆ ಅನುಗುಣ್ಯವಾದ ಫಲವನ್ನನುಭವಿಸಲಿ" ಎಂದು ಹೇಳುತ್ತ, ಚಂದನದಾಸನಂ ಕುರಿತು,

"ಎಲೈ ಶೆಟ್ಟಿಯೇ, ರಾಜಾಪರಾಧಿಗಳಿಗೆ ಹೀಗೆ ತೀಕ್ಷ್ಣದಂಡವಾಗುವದಂ ಕಂಡು, ಇನ್ನೂ 'ಅರಿಯೆ' ಎಂದು ಹೇಳುತ್ತಲಿರುವೆ. ನಿನ್ನ ಹೆಂಗಸರು ಮಕ್ಕಳಿಗೆ ಕ್ಷೇಮವಾಗಬೇಕಾದರೆ, ರಾಕ್ಷಸನ ಗೃಹಜನವಂ ತಂದು ಒಪ್ಪಿಸು" ಎನಲು, "ಸ್ವಾಮೀ, ನನ್ನ ಬೆದರಿಸುವಿರಿ. ರಾಕ್ಷಸನ ಗೃಹಜನವಂ ನಾನು ಒಪ್ಪಿಸುವನಲ್ಲ. ಎಲ್ಲಿ ಇದ್ದರೆ ಒಪ್ಪಿಸಲಿ ?" ಎನಲು,

"ಎಲೈ ಶೆಟ್ಟಿಯೇ, ನಿನ್ನ ನಿಶ್ಚಯವಿದೇ ಸರಿಯೇ ?" ಎನಲು, "ಸ್ವಾಮೀ, ಹಾಗೇ ಸರಿ" ಎನಲು, ಆಗ ಚಾಣಕ್ಯನು ತನ್ನ ಮನಸ್ಸಿನಲ್ಲಿ "ಈ ಶೆಟ್ಟಿಯು ಸತ್ಯವಂತನು. ಮಿತ್ರಕಾರ್ಯ ಕ್ಕೋಸುಗ ತನ್ನ ಪ್ರಾಣವನ್ನಾದರೂ ಬಿಡತಕ್ಕವನು" ಎಂದು ನಿಶ್ಚೈಸಿ, ಕೋಪಿಸಿಕೊಂಡವ ನಂತೆ ಹುಬ್ಬುಗಂಟಿಕ್ಕಿ, "ಎಲೈ ದುರಾತ್ಮಕನಾದ ಶೆಟ್ಟಿಯೇ, ಹಾಗಾದರೆ ನೀನು ಮಾಡಿದ ದ್ರೋಹಕ್ಕೆ ಫಲವನ್ನನುಭವಿಸೀಯೆ" ಎನಲು, "ಸ್ವಾಮೀ, ನಿಮ್ಮ ಸ್ವಾತಂತ್ರ್ಯಾನುಗಣ್ಯವಾಗಿ ಮಾಡಿದ್ದು ಮಾಡಿರಿ. ನಾನು ಸಿದ್ಧವಾಗಿ ಇದೇನೆ" ಎನಲು,

ಆಗ ಚಾಣಕ್ಯನು ಶಿಷ್ಯನಂ ಕರೆದು, "ಎಲೈ ಶೀಘ್ರಕಾರಿಯೇ, ಈ ದುಷ್ಟವರ್ತಕನ ಮನೆ ಪದಾರ್ಥವೆಲ್ಲವಂ ರಾಜಕೋಶಕ್ಕೆ ತೆಗೆದುಕೊಂಡು, ಇವನ ಸ್ವಜನಸಮೇತನಾಗಿ ಇವನಂ ಕಾವಲಿನಲ್ಲಿ ಇರಿಸುವಂತೆ ದುರ್ಗಪಾಲಕನಿಗೆ ಹೇಳು. ನಾನು ಚಂದ್ರಗುಪ್ತನಿಗೆ ಹೇಳಿ ಇವನಿಗೆ ತೀಕ್ಷ್ಣದಂಡನೆಯಂ ಮಾಡಿಸುವೆ"ನೆಂದು ಹೇಳಿ, ಚಂದನದಾಸನಂ ಕಳುಹಿಸಿ, ತನ್ನ ಮನಸ್ಸಿನಲ್ಲಿ,

"ಈ ಚಂದನದಾಸನು ಮಿತ್ರನಾದ ರಾಕ್ಷಸನ ನಿಮಿತ್ತ ತನ್ನ ಪ್ರಾಣವನ್ನಾದರೂ ಕೊಟ್ಟು, ಆತನ ಗೃಹಜನವಂ ರಕ್ಷಿಸುವೆನೆಂದು ಹ್ಯಾಗೆ ನಿಶ್ಚೈಸಿ ಇದಾನೆಯೋ, ಹಾಗೇ ರಾಕ್ಷಸನು ತನ್ನ ನಿಮಿತ್ತವಾಗಿ ಚಂದನದಾಸನಿಗೆ ಬಂದ ವಿಪತ್ತಿಂ ಪರಿಹರಿಸಲೋಸುಗ ತನ್ನ ಪ್ರಾಣ ವನ್ನಾದರೂ ಒಪ್ಪಿಸಿ, 'ಈ ಚಂದನದಾಸನಂ ಬಿಡಿಸುವೆ'ನೆಂದು ಎಳಗಂದಿ ಕರುವಿದ್ದೆಡೆಗೆ ಬರುವಂತೆ ಇಲ್ಲಿಗೆ ಬಂದಾನು. ಶಕಟದಾಸನಂ ಶೂಲಸ್ಥಾನಕ್ಕೆ ಕಳುಹಿಸಿದಂತೆ, ಸಮಯವ ನ್ನರಿತು ಈ ಚಂದನದಾಸನಂ ಅದೇ ಸ್ಥಾನಕ್ಕೆ ಕಳುಹಿಸಬೇಕೆಂ"ದು ನಿಶ್ಚೈಸುತ್ತಿರಲು,

ಮೊದಲು ಚಾಣಕ್ಯರು ತನ್ನ ಕಿವಿಯಲ್ಲಿ ಹೇಳಿದ ರೀತಿಗೆ ಶಕಟದಾಸನನ್ನು ಶೂಲಸ್ಥಾನಕ್ಕೆ ಚಂಡಾಲರು ಕರೆತರುವದಕ್ಕೆ ಮುಂಚಿತವಾಗಿಯೇ ಸಿದ್ಧಾರ್ಥಕನು ಖಡ್ಗಪಾಣಿಯಾಗಿ ಮರೆಯಾಗಿ ನಿಂತಿರಲು, ಆ ಶಕಟದಾಸನಂ ಶೂಲಸ್ಥಾನಕ್ಕೆ ಕರೆತಂದು ನಿಲ್ಲಿಸುವದಂ ನೋಡಿ, ಸಿದ್ಧಾರ್ಥಕನು ಖಡ್ಗವಂ ಝುಳಪಿಸುತ್ತ, ಆ ಘಾತಕರ ಮೇಲೆ ಅಟ್ಟಿ ಬಂದು, ಮೇಲೆ ಬಿದ್ದು, ಛೇದಿಸುವನಂತೆ ಮೊರೆಯುತ್ತ, ಕಣ್ಣುಸನ್ನೆಯಂ ಮಾಡಲು, ಆ ಚಂಡಾಲರು ಅವನ ರಭಸಕ್ಕೆ ಭೀತರಾದವರಂತೆ ಶಕಟದಾಸನಂ ಬಿಟ್ಟು ದಿಕ್ಕುದಿಕ್ಕಿಗೆ ಓಡಿ ಹೋಗಲು, ಆಗ ಚಾಣಕ್ಯ ಚಂದ್ರಗುಪ್ತರಂ ನಿಂದಿಸುತ, "ಎಲೈ ಶಕಟದಾಸನೇ, ಭಯ ಪಡಬೇಡ : ಈ ಸ್ಥಳವಂ ಬಿಟ್ಟು ಎಲ್ಲಿಯಾದರೂ ಹೋಗೋಣವೇ ?" ಎಂದು ಅವನಂ ಕರೆದುಕೊಂಡು, ಪರ್ವತರಾಜ್ಯಾಭಿಮುಖನಾಗಿ ಸಿದ್ಧಾರ್ಥಕನು ಹೋಗುತ್ತಿರಲು, ಈ ಅರ್ಥವು ಜನಜನಿತವಾಗಿ ತಿಳಿಯಲು, ಆಗ ಚಾಣಕ್ಯನ ಶಿಷ್ಯನು ಕೇಳಿ ಬಂದು,

"ಸ್ವಾಮೀ ಉಪಾಧ್ಯಾಯರೇ, ಶಕಟದಾಸನಂ ಶೂಲಕ್ಕೆ ಏರಿಸುವ ಸಮಯದಲ್ಲಿ ಸಿದ್ಧಾರ್ಥಕನೆಂಬವನು ಖಡ್ಗಪಾಣಿಯಾಗಿ ಅಟ್ಟಿ ಬಂದು, ಚಂಡಾಲರಂ ಬೆದರಿಸಿ ಓಡಿಸಿ, ಶಕಟದಾಸನಂ ಕರೆದುಕೊಂಡು ಎಲ್ಲಿಯೋ ಪಲಾಯನಂಗೈದಿದನಂತೆ" ಎನಲು, ಅದಂ ಕೇಳಿ ಚಾಣಕ್ಯನು ತನ್ನ ಮನಸ್ಸಿನಲ್ಲಿ "ಶಕಟದಾಸನ ಸಮೇತನಾಗಿ ಸಿದ್ಧಾರ್ಥಕನು ಹೋದುದು ಉತ್ತಮವಾಯಿತು. ಇಲ್ಲಿದ್ದ ಸೇನಾಪತಿಗಳಂ ಹೊರಡಿಸಿ ಕಳುಹಿಸಿದುದಕ್ಕೆ ಈ ಪುರದ ಜನರು ಏನೆಂದು ಹೇಳಿಕೊಳ್ಳುವರು, ಅದಂ ತಿಳಿಯಬೇಕೆಂ"ದು ನಿಶ್ಚೈಸಿ, ಶಿಷ್ಯನಂ ಕುರಿತು,

"ಎಲ್ಯೆ ಭಾಗಪುಚ್ಛಕನೆಂಬ ವಟುಕನೇ, ಶಕಟದಾಸನೂ ಸಿದ್ಧಾರ್ಥಕನೂ ಎಲ್ಲಿ ಓಡಿ ಹೋಗಿ ಇರುವರು, ಹಿಡಿದು ತರುವಂತೆ ಬಾಗುರಾಯಣನಿಗೆ ಹೇಳಿ ಬಾರೆಂ"ದೆನಲು, 'ಒಳ್ಳೆಯದೆಂ'ದು ಶಿಷ್ಯನು ಹೋಗಿ ತಿಳಿದು ಬಂದು,

"ಉಪಾಧ್ಯಾಯರೇ, ಬಾಗುರಾಯಣನು ಅಂದೇ ಹೊರಟು ಹೋದನಂತೆ" ಎನಲು, "ಆ ವಂಚಕನಾದ ಬಾಗುರಾಯಣನು ಎಲ್ಲಿಗೆ ಹೋಗಿ ಇದ್ದಾಗ್ಯೂ ಹಿಡಿದು ತರುವದು" ಎಂದು ಭದ್ರಭಟಾದಿ ಸೇನಾನಾಯಕರಿಗೆ ಹೇಳಿ ಬಾರೆಂ"ದೆನಲು, ಹಾಗೇ ಆ ಶಿಷ್ಯನು ಹೋಗಿ ತಿಳಿದು ಬಂದು,

"ಓಹೋ ಉಪಾಧ್ಯಾಯರೇ, ಮೊದಲು ನೀವು ಆಸ್ಥಾನದಲ್ಲಿ ಕುಳಿತು ಕೋಪವಂ ಮಾಡಿದುದರಿಂದ ಭದ್ರಭಟಾದಿ ಸೇನಾನಾಯಕರು ನಿಮ್ಮ ಮೇಲೆ ರಾಜಕಾರ್ಯವಂ ಮಾಡುವರಾಗಿ ಸೇನಾಸಮೇತರಾಗಿ ಇಲ್ಲಿಂದ ಹೋಗಿ ಪರರಾಯರಂ ಕಟ್ಟಿಕೊಂಡು ನಿಮ್ಮ ಮೇಲೆ ದಂಡೆತ್ತಿ ಬರುವರಾಗಿ ಇದಾರಂತೆ. ಕೆಲಸವೆಲ್ಲವೂ ಕೆಟ್ಟುಹೋಯಿತು. ಈ ಅರ್ಥವಂ ಜನರು ಆಡಲಂಜಿ ಗುಸುಗುಟ್ಟುತ್ತಲಿದಾರೆ. ತಾವು ಮಹಾಚತುರರಾದುದರಿಂದ ಆ ಶತ್ರುಗಳ ಸೇನೆಗೆ ಸಿಕ್ಕದೆ ತಪ್ಪಿಸಿಕೊಂಡೀರಿ. ಆಗ ಅನಾಥರಾಗಿ ಇರುವ ನಮ್ಮಂ ಹಿಡಿದು, 'ನಿಮ್ಮ ಗುರುಗಳೆಲ್ಲಿ?' ಎಂದು ನಿರ್ಬಂಧಬಡಿಸಿದರೆ, ಬ್ರಾಹ್ಮಣರು ಅನೃತವಂ ಹೇಳಬಾರದಷ್ಟೆ. ನೀವು ಹೋಗಿ ಇರುವ ಸ್ಥಳವಂ ಈಗಲೇ ತಿಳಿದು ಇರಬೇಕಾಗುತ್ತಲಿದೆ" ಎನಲು, ಆ ಮಾತಿಗೆ ಚಾಣಕ್ಯನು ನಸುನಗುತ್ತ,

"ಎಲ್ಯೆ ವಟುವೇ, ಶತ್ರುಗಳಿಗೆ ನಮ್ಮಂ ತೋರಿಸುವೆಯಾ ? ಆದರೆ ನಾವು ರಾಮೇಶ್ವರಕ್ಕೆ ಹೋಗಿ ಇರುವೆವು" ಎನ[೧]ಲು, "ಸ್ವಾಮೀ, ರಾಮೇಶ್ವರವು ಎಲ್ಲಿ ಇರುವದು?" ಎನಲು, "ಎಲ್ಕೆ[೧] ವಟುವೇ, ರಾಮೇಶ್ವರವು ರಾಮಸೇತುವಿದ್ದಲ್ಲಿ ಇರುವದು" ಎನಲು, "ಸ್ವಾಮೀ, ರಾಮದೇವರು ತನ್ನ ಪಟ್ಟಣದ ಸರಯೂನದಿಯಲ್ಲಿ ಸೇತುವೆ ರಚಿಸಿ ಇರುವರೋ ಯಮುನಾನದಿಯಲ್ಲಿ ರಚಿಸಿ ಇರುವರೋ ?" ಎನಲು, "ಎಲ್ಯೆ ವಟುವೇ, ಸಮುದ್ರದಲ್ಲಿ ರಚಿಸಿ ಇರುವರು" ಎನಲು, "ಸ್ವಾಮೀ, ಸಮುದ್ರಕ್ಕೆ ಸಹ ಸೇತುವೆ ಉಂಟಾದರೆ ಕ್ಷೀರಸಮುದ್ರಕ್ಕೋ ಮತ್ತ್ಯಾವ ಸಮುದ್ರಕ್ಕೆ ?" ಎನಲು, "ಎಲ್ಯೆ ವಟುವೇ, ಲವಣಸಮುದ್ರಕ್ಕೆ" ಎನಲು, "ಸ್ವಾಮೀ, ಲವಣಖಂಡವೇ ಸಮುದ್ರವಾದರೆ, ಸಂಚರಿಸುವ ಜನಕ್ಕೆ ಪಾದಗಳಿಗೆ ಕ್ಲೇಶ ತಗುಲದಂತಲೇ ಸೇತುಬಂಧನ"ವೆನಲು, ಅದಂ ಕೇಳಿ ಶಾರ್ಙ್ಗರವನು,

"ಎಲ್ಯೆ ವಟುವೇ, ಏನು [೨]ಅಸಂಬದ್ಧ[೨]ವಾಗಿ ಕೇಳುತಲಿರುವೆ ? ಶತ್ರುಬಾಧೆ ಉಂಟಾದರೆ, ಮೊದಲೇ ನಿನ್ನಂ ದಾಟಿಸುತ್ತಲಿರುವೆವು. ಭಯಪಡಬೇಡ, ಹೋಗು. ಕಂದಮೂಲಗಳಂ ತೊಳೆದು ಸಿದ್ಧಮಾಡು. ಮೊದಲು ಹೋದವರೆಲ್ಲಾ ಹೋದರು, ಮುಂದೆ ಹೋಗಬೇಕೆಂಬವರೆಲ್ಲಾ ಈ ಪುರವಂ ಬಿಟ್ಟು ಹೋಗಲಿ. ನಮ್ಮ ಗುರುಗಳ ಕಾರ್ಯೋತ್ಸವ ಮಾತ್ರ ಹೋಗದಿದ್ದರೆ ಸಕಲವೂ ಸಾಧ್ಯವಾಗುವದು" ಎಂದು ಹೇಳಿ ಭಾಗಪುಚ್ಛ[ಕ]ನಂ ಆಚೆಗೆ ಕಳುಹಿಸುತ್ತಿದ್ದನು ಎಂಬಲ್ಲಿಗೆ,

---

೧. ಲೂ ಎಲ್ಕೆ (ಕ) ೨. ಸಂಬಂಧವಾಗಿ (ಕ)

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಮಹೀಶೂರನರಪತಿ ಶ್ರೀಕೃಷ್ಣರಾಜೇಂದ್ರರಾಶ್ರಿತ ಹೊಯಿಸಣಿಗೆಕುಲಸಂಜಾತ ನಾರಾಯಣಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ಅಮಾತ್ಯರಾಕ್ಷಸನ ಕೈಮೊಹರವಂ ಸಂಗ್ರಹಿಸಿದ ಕಥನವೆಂಬ ತ್ರಯೋದಶಾಶಯಃ [ಸಮಾಪ್ತಃ].

ಚತುರ್ದಶಾಶಯ : ಕ್ಷಪಣಕಾಪಮಾನಕಥನವು

ಹೀಗಿರುತ್ತಿರಲು, ಚಾಣಕ್ಯರು ಹೇಳಿಕಳುಹಿಸಿದಂತೆ ಸ್ವತಂತ್ರದಿಂದ ರಾಜ್ಯವಂ ವಿಚಾರಿಸುತ್ತಿರುವ ಚಂದ್ರಗುಪ್ತನು ಒಂದಾನೊಂದು ಸಮಯದಲ್ಲಿ, "ಶರತ್ಕಾಲಚಂದ್ರ ಚಂದ್ರಿಕಾನಿಕರಗಳೆಂಬ ಜಲಾಸಾರಗಳಿಂದ ಆದ್ರ್ರಗಳಾಗಿ, ಅತಿಶುಭ್ರಗಳಾದ ಮೇಘಪಂಕ್ತಿಗಳೆಂಬ ಪುಳಿನರಾಶಿಗಳಿಂದಲೂ ಮಧುರವಾಗಿ ಧ್ವನಿಗೈವ ಸಾರಸಪಕ್ಷಿಗಳಿಂ [ದಲೂ] ಶೋಭಿಸುತ್ತ, ನಕ್ಷತ್ರಗಳೆಂಬ ಬಿಳಿನೈದಿಲೆಗಳಿಂ ವ್ಯಾಪ್ತವಾಗಿ, ನದಿಗಳ ಛಂದದಿಂ ಪ್ರಕಾಶಿಸುವ ದಿಙ್ಮುಖಶೋಭಾವಿಶೇಷವಂ ನೋಡಿ, "ಈ ಶರತ್ಕಾಲವು ಜನಗಳಿಗೆ ಮಹಾ ಸಂತೋಷಕರವು. ಈ ದಿವಸಗಳಲ್ಲಿ ಕೌಮುದೀಮಹೋತ್ಸವವು ಮಹಾರಮಣೀಯಕರವು. ನಮಗೆ ಆಧಿಪತ್ಯವಾದ ಬಳಿಕ ಈ ಪುರದಲ್ಲಿ ವಿಶೇಷೋತ್ಸವಗಳು ನಡೆದುದಿಲ್ಲ. ನಂದನಾಶದಿಂದ ದುಃಖಿತರಾಗಿ ಇರುವ ಪ್ರಜೆಗಳಿಗೆ ಹರುಷವುಂಟಾಗುವಂತೆ ಉತ್ಸವವಂ ಮಾಡಬೇಕೆಂ"ದು, ಈ ಶುದ್ಧಪೌರ್ಣಮಿ ದಿವಸ ನಮಗೆ ವರುಷವರ್ಧಂತೀ ಉತ್ಸವವು ಆಗಬೇಕಾಗುತ್ತಲಿದೆ.

ಮೊದಲು ಪೌರ್ಣಮಿಯ ಚಂದ್ರೋದಯವಾದ ಸಮಯದಲ್ಲಿ ನಾನು ಜನಿಸಿದವನಾದುದರಿಂದ ನಮ್ಮ ತಂದೆಯು ನನಗೆ ಚಂದ್ರಗುಪ್ತನೆಂಬ ನಾಮಾಂಕಿತವಂ ಗೈದನು. ಆದರಿಂದ ಇಂದು ಮೊದಲುಗೊಂಡು ಬಹುಳ ಪಂಚಮೀ ಹದಿನೈದುದಿವಸ ಪರ್ಯಂತ ಉತ್ಸವವಂ ಮಾಡಿಸುವೆನು" ಎಂದು ಮನಸ್ಸಿನಲ್ಲಿ ನಿಶ್ಚೈಸಿ, ಸಮೀಪದ ದೂತರಂ ನೋಡಿ, "ಎಲ್ಕೆ, ಈ ದಿವಸ ಮೊದಲುಗೊಂಡು ಇನ್ನು ಹದಿನೈದನೆ ಬಹುಳ ಪಂಚಮೀ ಪರ್ಯಂತವೂ ಈ ಪುರದಲ್ಲಿ ಕೌಮುದೀಮಹೋತ್ಸವವಾಗಲಿ. ಪುರವೆಲ್ಲವೂ ಶೃಂಗಾರವಾಗಲಿ. ಸುಗಾಂಗವೆಂಬ ನಮ್ಮ ಪ್ರಾಸಾದವು ಮುಕ್ತಾಮಣಿ ಮೇಲುಕಟ್ಟುಗಳಿಂದಲಂಕೃತವಾಗಲಿ. ಈ ಪುರದ ಜನರೆಲ್ಲರೂ ತಮ್ಮ ಸ್ತ್ರೀಜನಸಮೇತರಾಗಿ ಸಕಲಭೂಷಣಗಂಧಮಾಲೆಗಳಿಂದಲಂಕೃತರಾಗಿ ಸಂತೋಷದಿಂದಿರಲಿ. ದೇವಾಲಯಗಳಲ್ಲಿ ಉತ್ಸವಗಳು ನಡೆಯಲಿ. ನಮ್ಮ ಆಶ್ರಿತ ವಿದ್ವಜ್ಜನಗಳಿಗೂ ಅಧಿಕಾರಿಗಳಿಗೂ ನಮ್ಮ ಬೊಕ್ಕಸದಲ್ಲಿ ವಿವಿಧವಸ್ತ್ರಭೂಷಣಗಳಂ ಕಳುಹಿಸಲಿ. ಸಕಲರಾಜಬೀದಿಗಳಲ್ಲಿ ಮಣಿಮಂಜೀರಧ್ವನಿಗಳಿಂ ಮನೋಹರಮಾದ ವೇಶ್ಯಾಸ್ತ್ರೀಯರುಗಳ ಸಂಗೀತಗಳು ನಡೆಯುತ್ತಿರಲಿ. ಬ್ರಾಹ್ಮಣ ರಿಗೆ ಭೂರಿಭೋಜನಗಳಾಗಲಿ. ದೀನಾನಾಥರಿಗೆ ಅನ್ನವಸ್ತ್ರಗಳಂ ಕೊಡಲಿ. ಕಾರಾಗೃಹದಲ್ಲಿ ಇದ್ದ ಜನಗಳಂ ಬಿಟ್ಟು ಕಳುಹಿಸಲಿ" ಎಂದು ಚಂದ್ರಗುಪ್ತನು ದೂತರಿಗೆ ಆಜ್ಞಾಪಿಸುತ್ತಿರಲು,

ಆ ದೂತರು 'ಮಹಾಪ್ರಸಾದ'ವೆಂದು ಬಂದು ರಾಜಾಜ್ಞೆ ಮೇರೆಗೆ ಉತ್ಸವವು ನಡೆಯುವಂತೆ ನೇಮಿಸಿ, ರಾಜಬೀದಿಗಳಲ್ಲಿ ಡಂಗುರವಂ ಹಾಕಿ ಸಾರುತ ಬರುತ್ತಿರಲು, ಆ ಸಮಯದಲ್ಲಿ ಆ ಧ್ವನಿಯಂ ಚಾಣಕ್ಯನು ಕೇಳಿ, ಶಿಷ್ಯನಂ ಕರೆದು

"ಎಲೈ ಶೀಘ್ರಕಾರಿಯೇ, ಅದೇನು ಕೋಲಾಹಲ, ತಿಳಿದು ಬಾರೆ"ನಲು, ಆತನು ಹೋಗಿ ತಿಳಿದು ಬಂದು, "ಉಪಾಧ್ಯಾಯರೇ, ಈ ಪುರದಲ್ಲಿ ಕೌಮುದೀಮಹೋತ್ಸವ ಆಗುವಂತೆ ಚಂದ್ರಗುಪ್ತನ ಅಪ್ಪಣೆಯಾಗಿ ಇರುವದರಿಂದ 'ಪುರಶೃಂಗಾರವಾಗಲಿ, ಸಕಲರ ಗೃಹ ದಲ್ಲಿಯೂ ಉತ್ಸವಗಳು ನಡೆಯಲಿ, ಆಶ್ರಿತರಿಗೆ ಬೊಕ್ಕಸದಿಂದ ವಸ್ತ್ರಭೂಷಣಗಳಂ ಕೊಡುವಂತೆ ಅಪ್ಪಣೆಗಳಾಗಿ ಇದೆ' ಎಂಬ ಇತ್ಯಾದಿ ವಾಕ್ಯದಿಂದ ಸಾರುತ ಭಟರು ಬೀದಿಯಲ್ಲಿ ಬರುತಲಿದಾರೆ" ಎನಲು,

ಅದಂ ಕೇಳಿ ಚಾಣಕ್ಯನು ಕ್ಷಣಮಾತ್ರವು ಯೋಚಿಸಿ, ಶಿಷ್ಯನಂ ನೋಡಿ, "ಎಲೈ ಶೀಘ್ರ ಕಾರಿಯೇ, 'ಈಗ ಈ ಉತ್ಸವವಂ ಮಾಡ ಕೆಲಸವಿಲ್ಲ, ನಿಲ್ಲಿಸತಕ್ಕದ್ದು, ನಾವು ಹೇಳಿದೆ ವೆಂ'ದು ಸಾರುವ ಭಟರಿಗೆ ಹೇಳಿ ಬಾರೆ"ನಲು, ಆ ಶಿಷ್ಯನು 'ಒಳ್ಳೆಯದೆಂ'ದು ಹೇಳಿ ಹೋಗಿ, ಸಾರುತ್ತ ಬರುವರಂ ಕುರಿತು "ಎಲೈ ಭಟರುಗಳಿರಾ, ಚಾಣಕ್ಯರ ಅಪ್ಪಣೆಯಾಗಿ ಇದೆ ; ಈಗ ಕೌಮುದೀಮಹೋತ್ಸವವಂ ಮಾಡ ಕೆಲಸವಿಲ್ಲ. ನೀವು ಹಿಂದಕ್ಕೆ ಹೋಗಿ, ನಿಲ್ಲಿಸಿ ಬಿಡಿ" ಎನಲು, ಆ ವಾಕ್ಯವಂ ಕೇಳಿ ದೂತರುಗಳು, 'ಚಾಣಕ್ಯರ ಆಜ್ಞೆಯಂ ಮೀರಿದರೆ ಅಪರಾಧಕ್ಕೆ ನಾವು ಪಾತ್ರರಾದೇವೆಂ'ಬ ಭೀತಿಯಿಂದ ಸಾರುತ ಬರುವದಂ ಬಿಟ್ಟು, ಹಿಂದಕ್ಕೆ ತಿರುಗಿ ಹೋಗಲು,

ಆಗ ಪುರದ ಜನರೆಲ್ಲರೂ ಅದಂ ಕೇ[೧]ಳಿ[೨], "ಈಗ ರಾಜಾಜ್ಞೆಗೆ ಭಂಗವುಂಟಾದುದ ರಿಂದ ಚಾಣಕ್ಯ ಚಂದ್ರಗುಪ್ತರಿಗೆ ಏನೋ ಮನಸ್ತಾಪವುಂಟಾಗಿ ಇರಬೇಕೆಂ"ದು ರಹಸ್ಯ ವಾಗಿ ಆಡಿಕೊಳ್ಳುತ್ತಿರಲು, ಮೊದಲು ರಾಕ್ಷಸನಿಂದ ನೇಮಿಸಿ ಕಳುಹಿಸಿ ಇದ್ದ ಒಬ್ಬ ಗೂಢ ಚಾರನು ಹಾವಾಡಿಗ ವೇಷವಂ ಧರಿಸಿ, ಅಲ್ಲಿ ಅಲ್ಲಿ ತಿರುಗುತ್ತ, ಈ ವೃತ್ತಾಂತವಂ ತಿಳಿದು, ತನ್ನ ಒಡೆಯನಾದ ರಾಕ್ಷಸನಿಗೆ ತಿಳುಹಿಸಬೇಕೆಂದು ನಿಶ್ಚೈಸಿ, ಪಾಟಲೀಪುರವಂ ಬಿಟ್ಟು ರಾಕ್ಷಸನಿದ್ದೆಡೆಗೆ ಬರುತ್ತಿದ್ದನು.

ಹೀಗಿರುತ್ತಿರಲು, "ಕೌಮುದೀಮಹೋತ್ಸವವು ನಡೆಯಕೂಡದು" ಎಂದು ಆಜ್ಞಾಪಿ ಸಿದ ಚಾಣಕ್ಯನ ವಾಕ್ಯವಂ ಕೇಳಿ, ಶಾರ್ಙ್ಗರವನೆಂಬ ಆತನ ಶಿಷ್ಯನು ಚಾಣಕ್ಯನಂ ಕುರಿತು ರಹಸ್ಯದಲ್ಲಿ,

"ಸ್ವಾಮಿ ಉಪಾಧ್ಯಾಯರೇ, ಈ ರಾಜ್ಯವನ್ನಾಳುವ ಚಂದ್ರಗುಪ್ತನಿಗೆ ಸಮ್ಮತವಾದ ಈ ಕೌಮುದೀಮಹೋತ್ಸವವಂ ನಿಲ್ಲಿಸಿದ್ದರಿಂದ ತನ್ನ ಆಜ್ಞೆಯ ರೀ[ತಿ]ಗೆ ಭಂಗವುಂಟಾಯಿ ತೆಂಬ ವ್ಯಸನದಿಂದ ನಿಮ್ಮಲ್ಲಿ ಅನುರಾಗವಂ ಬಿಟ್ಟಾನು. ಅದಲ್ಲದಿದ್ದರೆ, ಚಂದ್ರಗುಪ್ತನು ಮಾನಶಾಲಿಯಾದುದರಿಂದ ಈ ಆಧಿಪತ್ಯವನ್ನಾದರೂ ಬಿಟ್ಟಾನು. ಜನರು ನಿಮ್ಮಲ್ಲಿ ಮಾತ್ಸರ್ಯವನ್ನಾರೋಪಿಸಿಯಾರು. ಈಗ ಮಾಡಿದ ಶ್ರಮವೆಲ್ಲವೂ ನಿರರ್ಥಕವಾದೀತು. ನಿಮ್ಮ ವಾಕ್ಯದಿಂದಲೇ ರಾಜ್ಯಭಾರವಂ ಸ್ವತಂತ್ರದಿಂದ ಮಾಡುವ ಚಂದ್ರಗುಪ್ತನ ಆಜ್ಞಾಭಂಗವಂ ನೀವೇ ಮಾಡಿದುದರಿಂದ ಪರಸ್ಪರ ಕಲಹವುಂಟಾಗಿ, ಜನಗಳಿಗೆ ಹಾಸ್ಯಾ ಸ್ಪದಗಳಾಗಿ, ಶತ್ರುಗಳಿಗೆ ಸಂತೋಷವುಂಟಾಗುವದು. ತಾವು ಅಭಿಜ್ಞರು. ಇದು ಏನು ನಿಮಿತ್ತವಾಗಿ ಈ ಮಹೋತ್ಸವವಂ ನಿಲ್ಲಿಸಿ ಇದೀರೋ, ತಿಳಿಯ ಕೂಡದು" ಎನಲು, ಆ

೧. ಳಿ ಪುರದ ಜನರೆಲ್ಲರೂ (ಕ, ಖ) ೨. ಗೆ (ಕ)

ವಾಕ್ಯವಂ ಕೇಳಿ,

"ಎಲೈ ಪ್ರಿಯಶಿಷ್ಯನಾದೆ ಶಾರ್ಙ್ಗರವನೇ, ನೀನು ಹೇಳಿದುದು ವಿಹಿತವು. ನಾನು ಚಂದ್ರಗುಪ್ತನ ಕಾರ್ಯಾರ್ಥವಾಗಿಯೇ ಈ ಉತ್ಸವವಂ ನಿಲ್ಲಿಸಿದೆನಲ್ಲದೆ ಅವನಲ್ಲಿ ಮತ್ಸರವು ನನಗುಂಟೇ ? ಆದರೆ ಕೇಳು. ಲೋಕದಲ್ಲಿ ಅಧಿಕಾರಿಯಾದ ಶಿಷ್ಯನಿಗಲ್ಲದೆ ಮಂತ್ರರಹಸ್ಯವು ಹ್ಯಾಗೆ ಹೇಳಕೂಡದೋ ಹಾಗೇ ಮಂತ್ರಾಲೋಚನೆಯೂ. ತನಗಿಂತಲೂ ಬುದ್ಧಿಯಿಂದಧಿಕನಾದವನಲ್ಲಿ, ನಿರ್ವಂಚಕನಲ್ಲಿ, ದಕ್ಷನಾದ ಆಪ್ತನಲ್ಲಿ, ದೂರದೃಷ್ಟಿ ಉಂಟಾದವನಲ್ಲಿ ಆಲೋಚನೆಯಂ ಮಾಡಬೇಕು ; ಅಪ್ರಾಜ್ಞನಲ್ಲಿ, ಅನಾಪ್ತನಲ್ಲಿ, ವಂಚಕನಲ್ಲಿ, ಚಂಚಲನಲ್ಲಿ, ಅಶುಚಿವಂತನಲ್ಲಿ, ಮುಗ್ಧಸ್ತ್ರೀಜನದಲ್ಲಿ ಸಹ ಮಾಡಕೂಡದು. ಮಂತ್ರಾಲೋಚನೆಯಂ ಮಾಡುವದೇನೆಂದು ಕೇಳುವೆಯಾ ? ತಾನು ಮಾಡುವ ಕಾರ್ಯದಲ್ಲಿ ಪ್ರಮಾದ ಬಂದೀತೆಂದು ಅನ್ಯರಲ್ಲಿ ಆಲೋಚಿಸಬೇಕು. ತನ್ನ ಬುದ್ಧಿಯಲ್ಲಿ ಪ್ರಮಾದವಿಲ್ಲದಿದ್ದರೆ, ತನ್ನ ಮನದ ಆಲೋಚನೆಯೇ ಉತ್ತಮವು. ಈಗ ಯೋಗ್ಯನಾದ ನಿನಗೆ ಕುತೂಹಲವಿದ್ದರೆ ಹೇಳುವೆವು, ಕೇಳು :

ಈಗ ರಾಕ್ಷಸನು ಮಲಯಕೇತುವಂ ಒಡಂಬಡಿಸಿ, ಚಂದ್ರಗುಪ್ತನ ಮೇಲೆ ದಂಡೆತ್ತಿ ಬರುತ್ತಲಿದಾನಂತೆ. ವಾಸವಂ ಮಾಡುವ ಗೃಹವಂ ಸೋಕಿದ ಅಗ್ನಿಯನ್ನು ಸ್ವಲ್ಪಮಾತ್ರವೆಂದು ಉಪೇಕ್ಷಿಸಿದರೆ, ಅದು ವಾಯುಸಹಾಯದಿಂದ ಮಹತ್ತಾಗಿ ಗೃಹವಂ ದಹಿಸಬಂದರೆ ಶಮನವಂ ಮಾಡುವದಕ್ಕೆ ಅವಶ್ಯವೆಂತಾಗುವದೋ, ಅದೇ ರೀತಿಯಲ್ಲಿ ಬಲಿಷ್ಠನಾದ ಶತ್ರುವು ಸಮೀಪಸ್ಥನಾಗುವದಕ್ಕೆ ಮುಂಚಿತವಾಗಿಯೇ ಯಾವ ಉಪಾಯದಿಂದಲಾದರೂ ಅವನಂ ನಿಗ್ರಹಿಸದೆ ಉಪೇಕ್ಷಿಸಿದರೆ ಮಹಾಪ್ರಯತ್ನವಂ ಮಾಡಬೇಕಾಗುವುದರಿಂದ, ಸುಲಭದಲ್ಲಿಯೇ ಶತ್ರುಜಯವಾಗುವಂತೆ ಆಲೋಚಿಸಿ ಇರುವೆನು. ಅದೇನೆಂದರೆ,

ನಿನ್ನೆ ಸಿದ್ಧಾರ್ಥಕನ ಕೈಯಲ್ಲಿ ಶಕಟದಾಸನ ಅಕ್ಷರದಿಂದ ಬರೆಸಿದ ಕಾಗದಕ್ಕೆ ರಾಕ್ಷಸನ[೧] ಮುದ್ರೆವುಂಗುರದಲ್ಲಿ ಮೊಹರವಂ ಮಾಡಿಸಿ ಕಳುಹಿಸಿ ಇರುವ ಕಾಗದವು ಸಮಯಾಂತರದಲ್ಲಿ ಮಲಯಕೇತುವಿನ ದಂಡಿನ ಉಕ್ಕಡದಲ್ಲಿ ಸಿಕ್ಕಿ, ಆ ಮಲಯಕೇತುವಿನ ಬಳಿಗೆ ತಲಪುವದು. ಆ ಕಾಗದವಂ ಬಿಚ್ಚಿ ಓದಿಕೊಂಡರೆ, ಚಂದ್ರಗುಪ್ತನು ಬರೆದು ಕಳುಹಿಸಿ ಇದ್ದ ಕಾಗದಕ್ಕೆ ರಾಕ್ಷಸನು ಬದಲು ಬರೆದಂತೆ ತೋರುವದು.

ಅದರ ಅರ್ಥವಂ ಪರಿಭಾವಿಸಿದರೆ, ಚಂದ್ರಗುಪ್ತನಲ್ಲಿ ರಾಕ್ಷಸನು [೨]ಮಂತ್ರಿತ್ವ[೨]ವನ್ನಪೇಕ್ಷಿಸಿ ಬರೆದು ಕಳುಹಿಸಿದಂತೆ ತೋರಿದ ಬಳಿಕ, ಮಲಯಕೇತುವು ತನ್ನ ಬಳಿಯಲ್ಲಿ ಆಶ್ರಯಿಸಿ ಇರುವ ರಾಕ್ಷಸನನ್ನು ಕಪಟಮಿತ್ರನೆಂದು ತಿಳಿದು, 'ತನ್ನನ್ನು ಚಂದ್ರಗುಪ್ತನಿಗೆ ಒಪ್ಪಿಸಿ, ತನ್ನ ರಾಜ್ಯವಂ ಸಹ ಚಂದ್ರಗುಪ್ತನ ವಶವಂ ಮಾಡಿ, ಅವನಲ್ಲಿ ಶ್ರೇಷ್ಠವಾದ ಮಂತ್ರಿತ್ವವನ್ನಪೇಕ್ಷಿಸಿ, ಚಂದ್ರಗುಪ್ತನ ಬಳಿಗೆ ಈ ಕಾಗದವಂ ರಾಕ್ಷಸನು ಬರೆದು ಇದ್ದಾನು' ಎಂದು ನಿಶ್ಚೈಸಿ ರಾಕ್ಷಸನ ಮೇಲೆ ಕೋಪವಂ ಮಾಡಿ ಹೊರಡಿಸುವ ಸಮಯದಲ್ಲಿ ನಮಗೂ ಚಂದ್ರಗುಪ್ತನಿಗೂ ಎಂದಿನಂತೆ ಸೌಜನ್ಯವಾಗಿ ಇರುವ ಅರ್ಥವು ಲೋಕಪ್ರಸಿದ್ಧವಾಗಿ ಇದ್ದರೆ, ಆಗ 'ಚಂದ್ರಗುಪ್ತ ಚಾಣಕ್ಯರಿಗೆ ಪರಸ್ಪರ ಸೌಜನ್ಯವಿರುವಲ್ಲಿ

---

೧. ೧೫೮ನೆಯ ಪತ್ರ ಮುರಿದಿದೆ (ಕ) ೨. ಮಂತ್ರಿತನ (ಖ)

ರಾಕ್ಷಸನು ತನ್ನಲ್ಲಿ ಕಪಟವನ್ನೆಣಿಸಿ ಚಂದ್ರಗುಪ್ತನಿಗೆ ಕಾಗದವಂ ಸ್ನೇಹಾರ್ಥವಾಗಿ ಬರೆಯುವದಕ್ಕೆ ನಿಮಿತ್ತವಿಲ್ಲ. ಆದುದರಿಂದ ತನಗೂ ರಾಕ್ಷಸನಿಗೂ ವಿರೋಧವಂ ಕಲ್ಪಿಸುವದಕ್ಕೆ ರಾಕ್ಷಸನ ದ್ವೇಷಿಗಳಾದವರು ಯಾರೋ ಬರೆದು ಇದ್ದಾರೆ' ಎಂದು ಮಲಯಕೇತುವು ವಿಚಾರಿಸಿ ತಿಳಿದರೆ, ನಾವು ಯೋಚಿಸಿದ ಕಾರ್ಯವು ಕೆಟ್ಟು, ಕಾಗದದಿಂದ ಸಿಕ್ಕಿದ ಸಿದ್ಧಾರ್ಥಕನಿಗೂ ಏನಾದರೂ ಒಂದು ಪ್ರಾಣಾಪತ್ತು ಬಂದರೆ, ತನ್ನ ಪ್ರಾಣಸಂರಕ್ಷಣಾರ್ಥವಾಗಿ ಇದ್ದದ್ದು ಇದ್ದಂತೆ ಹೇಳಿದರೆ ರಾಜಕಾರ್ಯವು ಮತ್ತೂ ಅಧಿಕವಾಗುವದರಿಂದ, ಆ ಕಾಗದವಂ ಓದಿ ನಿಶ್ಚೈಸುವ ಸಮಯದಲ್ಲಿ ನಮಗೂ ಚಂದ್ರಗುಪ್ತನಿಗೂ ಮನಸ್ತಾಪ ಅಧಿಕವಾಗಿ ಇದೆಯೆಂಬ ಅರ್ಥವು ಲೋಕದಲ್ಲಿ ಪ್ರಸಿದ್ಧವಾಗಿ ಇದ್ದರೆ, 'ಚಾಣಕ್ಯ ಚಂದ್ರಗುಪ್ತರಿಗೆ ಮಹತ್ತಾಗಿ ವಿರೋಧವುಂಟಾಗಿ ಇರುವದರಿಂದ ಸಮರ್ಥನಾದ ರಾಕ್ಷಸನನ್ನು ಚಂದ್ರಗುಪ್ತನು ತನ್ನ ಮಂತ್ರಿಯಂ ಮಾಡಿಕೊಳ್ಳಬೇಕೆಂದು ಬರೆದು ಇದ್ದ ಕಾಗದಕ್ಕೆ ರಾಕ್ಷಸನು ಸಮ್ಮತನಾಗಿ ಇದೇ ಸಮಯದಲ್ಲಿ ಚಂದ್ರಗುಪ್ತನಲ್ಲಿ ಮಂತ್ರಿತ್ವವನ್ನೊಡಂಬಟ್ಟು ಅದಕ್ಕೆ ಬದಲುಕಾಗದವಂ ಬರೆಸಿ ಕಳುಹಿಸಿ ಇದ್ದಾನು' ಎಂದು ಮಲಯಕೇತುವು ಮನದಲ್ಲಿ ನಿಶ್ಚೈಸಿ, ಆಪ್ತನಂತೆ ತನ್ನ ಬಳಿಯಲ್ಲಿ ಇರುವ ಬಾಗುರಾಯಣನ ಸಂಗಡ ಆಲೋಚಿಸಿ, ರಾಕ್ಷಸನನ್ನು ತನ್ನ ಬಳಿಯಿಂದ ಹೊರಡಿಸಿ ಬಿಡುವನು.

ಆ ಬಳಿಕ ರಾಕ್ಷಸನು ತನ್ನ ತಾನಾಗಿ ಇಲ್ಲಿ ಬರುವಂತೆ ಬೇರೆ ಪ್ರಯತ್ನವಂ ಮಾಡುವೆನು. ಇದಲ್ಲದೆ ಆ ಕಾಗದದಿಂದ ಮಲಯಕೇತುವಿನ ಸಮೀಪದಲ್ಲಿ ಮಹದನರ್ಥವು ನಮ್ಮ ಕಾರ್ಯಕ್ಕೆ ಉಪಯುಕ್ತವಾಗಿ ನಡೆದೀತು. ನಮಗೂ ಚಂದ್ರಗುಪ್ತನಿಗೂ ಮನಸ್ತಾಪವುಂಟಾಗಿ ಇದೆಯೆಂದು ಆ ಕಾಗದವಂ ನೋಡಿಕೊಳ್ಳುವ ಸಮಯದಲ್ಲಿ ಶತ್ರುಸೇನೆಯಲ್ಲಿ ಪ್ರಸಿದ್ಧವಾಗಬೇಕೆಂದು ಈ ಕೌಮುದೀಮಹೋತ್ಸವವಂ ಆಗದಂತೆ ನಿಲ್ಲಿಸಿದೆನು'' ಎಂದು ಶಾರ್ಙ್ಗರವನಿಗೆ ಚಾಣಕ್ಯನು ಹೇಳುತ್ತಿರಲು, ಆ ವಾಕ್ಯವಂ ಕೇಳಿ ಪ್ರಿಯಶಿಷ್ಯನಾದ ಶಾರ್ಙ್ಗರವನು,

''ಸ್ವಾಮಿ ಮಹಾನುಭಾವರಾದ ಗುರುಗಳೇ, ನಿಮ್ಮ ಮನೋಭಿಪ್ರಾಯವಂ ತಿಳಿಯುವದಕ್ಕೆ [೧]ಪಂಡಿತರಾರಿಗಾದರೂ[೧] ಅಶಕ್ಯವು. ನಮ್ಮಂಥವರು ಎಷ್ಟು ಮಾತ್ರದವರು ? ದಂಡನೀತಿಶಾಸ್ತ್ರದಲ್ಲಿ ಶುಕ್ರಾಚಾರ್ಯರೇ ಅವತರಿಸಿ ಇದ್ದಾರೆಂದು ನಿಮ್ಮಂ ತಿಳಿಯಬೇಕಲ್ಲದೆ ಉಪಚಾರೋಕ್ತಿಗಳಲ್ಲ. ಮತ್ತೆ ಒಂದು ಸಂಶಯವಿರುವದಂ ಕೇಳುವೆನು. ಇಂದುಶರ್ಮರಿಗೆ ಕ್ಷಪಣಕವೇಷವಂ ಹಾಕಿಸುವದಕ್ಕೆ ನಿಮಿತ್ತವೇನು ? ಅವರ ಶಿಷ್ಯರಿಗೆ ಬುದ್ಧಮತಸ್ಥರ ವೇಷವಂ ಹಾಕಿಕೊಂಡು ಕಾರ್ಯವಂ ನೋಡುವಂತೆ ನೇಮಿಸಿ ಇರುವದಕ್ಕೆ ನಿಮಿತ್ತವೇನು ? ಅರಣ್ಯವಾಸಿಗಳಾದ ನಿಮಗೆ ಈ ಲೌಕಿಕವ್ಯವಹಾರದಿಂದ ಪ್ರಯೋಜನವೇನು ? ಆರಂಭ ಪರ್ಯವಸಾನಗಳಲ್ಲಿ ಲೋಕವ್ಯವಹಾರವು ಹೇಗೆ ಇರಬೇಕೆಂ[೨]ಬ[೨] ನಿಮ್ಮ ಮನೋಗತಾರ್ಥವು ? ಇದಂ ಕೇಳುವದಕ್ಕೆ ನಾನು ಯೋಗ್ಯನಾಗಿ ಇದ್ದರೆ, ಕೃಪೆ ಮಾಡಬಹುದು'' ಎಂದು ಶಾರ್ಙ್ಗರವಂ ಕೇಳುತ್ತಿರಲು,

''ಎಲೈ ಪ್ರಿಯಶಿಷ್ಯನಾದ ಶಾರ್ಙ್ಗರವನೇ, 'ಆರಂಭ ಪರ್ಯವಸಾನದಲ್ಲಿ ಲೋಕ

---

೧. ಪಂಡಿತರಾದರೂ (ಕ, ಖ) ೨. [ದು]? (ಕ, ಖ, ಗ)

ಮರ್ಯ್ಯಾದೆಯು ಹೇಗಿರಬೇಕೆಂಬ ನಿಮ್ಮ ಮನೋಗತಾರ್ಥವು' ಎಂದು ಕೇಳಿದ್ದಕ್ಕೆ, ನೀನು ಯೋಗ್ಯನಾದುದರಿಂದ ಹೇಳುವೆನು. ಈ ಲೌಕಿಕವ್ಯವಹಾರದಿಂದ ನಮಗೇನೂ ಪ್ರಯೋಜನವಿಲ್ಲದಿದ್ದರೂ ಅಂಗೀಕರಿಸಬೇಕಾಯಿತು.

ಏನೆಂದರೆ, ಯುಗಾಂತರದಲ್ಲಿ ಅಸುರಸಂಘವು ತಪೋಬಲದಿಂದ ಲೋಕಾಧಿಪತ್ಯವಂ ಮಾಡುತ್ತ, ಧರ್ಮಕ್ಕೆ ಆಧಾರವಾದ ವೇದಮಾರ್ಗಗಳಂ ನಷ್ಟಗೊಳಿಸುವದಂ ನೋಡಿ, ದೇವತೋತ್ತಮರಾದ ಮೂರ್ತಿಗಳು ಅವತಾರವಂ ಮಾಡಿ, ಅಸುರಸಂಘಗಳಂ ನಾಶಗೊಳಿಸಿ, ಧರ್ಮಸ್ಥಾಪನಂ ಮಾಡಿದರು.

ಆಗ ನಷ್ಟವಾದ ಅಸುರ[೧]ರು[೧] ಈ ಕಲಿಯುಗದಲ್ಲಿ ಕಾಲಾನುಗುಣವಾದ ಮನುಷ್ಯರಲ್ಲಿ ಜನಿಸಿ, ಅರ್ಹತ ಬೌದ್ಧ ಲೋಕಾಯತಿಕಾದಿ ನಾಸ್ತಿಕಮತವನ್ನವಲಂಬಿಸಿ, "ನಾಸ್ತಿ ಪರಲೋಕಃ ನಾಸ್ತಿ ಈಶ್ವರಃ" ಎಂದು ಶಾಸ್ತ್ರವಿರುದ್ಧವಾದ ಯುಕ್ತಿಯಿಂದ ಮೂಢರಂ ಮೋಹಗೊಳಿಸುತ್ತ, ಸ್ವೇಚ್ಛಾಚಾರದಿಂ ನಡೆಯುತ್ತ, ಜನಗಳಿಗೆ ಇದೇ ಅರ್ಥವಂ ಬೋಧಿಸುತ್ತ, ಭೂಲೋಕವನ್ನಾಕ್ರಮಿಸುತ್ತ, ಕುಲೀನರಾದ ಅರಸುಗಳಂ ಮೋಹಗೊಳಿಸಿ, ಅವರಿಗೆ ಪ್ರೀತಿಪಾತ್ರರಾಗಿ ಧರ್ಮಮಾರ್ಗವಂ ದೂಷಿಸುತ, ಜನಗಳಿಗೆ ಧರ್ಮದಲ್ಲಿ ಉಪೇಕ್ಷೆ ಉಂಟಾಗುವಂತೆ ಮಾಡುತ, ತಾವೂ ನರಕಭಾಜನರಾಗಿ, ಲೋಕವಂ ಕೆಡಿಸುವದಂ ತಿಳಿದು, ನಮ್ಮ ಆಚಾರ್ಯರು ನನ್ನಂ ಕರೆದು ಇದೆಲ್ಲವಂ ತಿಳುಹಿಸಿ, 'ಈ ದುಷ್ಟಜನವಂ ನಿಗ್ರಹಿಸಿ ಧರ್ಮಪ್ರಚಾರವುಂಟಾಗುವಂತೆ ಮಾಡಿದರೆ, ಇದೇ ತಮಗೆ ಗುರುದಕ್ಷಿಣೆಯು. ಇದಕ್ಕೋಸುಗಲೇ ನಿನಗೆ ದಂಡನೀತಿಶಾಸ್ತ್ರರಹಸ್ಯವಂ ಸಹ ಹೇಳಿದೆನು. ಇದಕ್ಕೆ ನೀನೇ ದಕ್ಷನು. ಬದಲುತ್ತರವಂ ಹೇಳದೆ ಈ ಕಾರ್ಯವಂ ನಿರ್ವಹಿಸಿ ಬಾರೆಂ'ದು ಆಜ್ಞಾಪಿಸಿದುದರಿಂದ, ನಾನು ಆಶ್ರಮದಿಂದ ಹೊರಟು, 'ಈ ನಾಸ್ತಿಕಸಂಘವಿಷ್ಟು ಪ್ರಚಾರವಾಗುವದಕ್ಕೆ ಮೂಲ ಯಾವುದೆಂ'ದು ವಿಚಾರಿಸುವಲ್ಲಿ,

ಪಾಟಲೀಪುರದರಸುಗಳೂ ಪಾರ್ವತೇಯರೂ ಸಹ ಮೂಲಭೂತರೆಂದು, ಬೌದ್ಧರ ದುರ್ಬೋಧನೆಯಿಂದಲೇ ಇಲ್ಲಿಯ ರಾಯನಿಗೆ ಸರ್ವಾರ್ಥಸಿದ್ಧಿಯೆಂಬ ನಾಮಾಂಕಿತವುಂಟಾದುದಂ ಸಹ ತಿಳಿದು, ಪ್ರಥಮದಲ್ಲಿ ಪಾಟಲೀಪುರವಂ ಕುರಿತು ಬರುವಲ್ಲಿ ದೈವಯೋಗದಿಂ ಚಂದ್ರಗುಪ್ತನು ಇದೆಲ್ಲಕ್ಕೂ ನಿಮಿತ್ತವಾಗಿ ದೊರಕಿದನು. ರಾಕ್ಷಸನೊಬ್ಬ ಹೊರತು ಇಲ್ಲಿಯ ಮುಖ್ಯಾಧಿಕಾರಿಗಳೆಲ್ಲರೂ ನಾಸ್ತಿಕರೆಂದು ತಿಳಿದು, ಅವರ ಮೋಹಗೊಳಿಸುವದಕ್ಕೆ, ದಾಪಿನ ಆನೆಯಿಂದಲೇ ಮಹಾವನಗಜವಂ ಹಿಡಿಯುವಂತೆ ಇಂದುಶರ್ಮನಿಗೆ ವೃದ್ಧಸಂನ್ಯಾಸಿಯ ವೇಷವಂ ಹಾಕಿ, ಅವನ ಶಿಷ್ಯರಿಗೆ ಬೌದ್ಧಮತಸ್ಥರ ವೇಷವಂ ಮಾಡಿಸಿ, ಮೂಲವಂ ಭೇದಿಸಿ ಶಾಖೋಪಶಾಖೆಗಳಂ ಒಣಗಿಸುವಂತೆ ಪಾಟಲೀಪುರದರಸುಗಳು ಅಂಕುರಿಸದಂತೆ ಮಾಡಿ, ಪಾರ್ವತೇಯಾಧಿಪತಿಯಾದ ಪರ್ವತರಾಯನಂ ಸಹ ಸಂಹಾರಗೈಸಿದೆನು. ಕ್ಷಪಣಕವೇಷಧಾರಿಯಾದ ಇಂದುಶರ್ಮನ ವಾಕ್ಯಾನುಸಾರ ಕೃಪೆಯಿಂದ ಮಲಯಕೇತುವಂ ಉಳುಹಿಸಿದೆನು.

ಈಗಿನ ವರೆಗೆ ನೋಡಿದರೆ, ನಾಸ್ತಿಕಮತವು ಮೂರುಪಾಲು ಉತ್ಪನ್ನವಾದಂತಾಯಿತು.

---

೧. ರುಗಳು (ಕ)

ರಾಕ್ಷಸನಂ ಕರೆತಂದು ಚಂದ್ರಗುಪ್ತನಲ್ಲಿ ಮಂತ್ರಿಯಂ ಮಾಡಿದರೆ, ನಾಸ್ತಿಕರೆಲ್ಲರೂ ನಷ್ಟಪ್ರಾಯರಾಗುವರು. ಅದರಲ್ಲಿ ಮುಖ್ಯರಾದವರು ಮೊದಲಿನಂತೆ ಸಮುದ್ರದ ಎಡೆ ತಿಟ್ಟಂ ಸೇರುವರು. ಉಳಿದವರು ಕ್ಷುದ್ರಮತದಲ್ಲಿ ವಿಶ್ವಾಸವಂ ಬಿಟ್ಟು, ಬ್ರಾಹ್ಮಣರು ಹೇಳಿದಂತೆ ನಡೆದುಕೊಳ್ಳುವರು. ಮಲೆತು ನಡೆಯುವರಿಗೆ ದಂಡಧಾರಿಯಾಗಿ ಚಂದ್ರ ಗುಪ್ತನಿರುವನು. ಶಿಷ್ಯರು ಗುರುದಕ್ಷಿಣಾರ್ಥವಾಗಿ ಅಕಾರ್ಯವಂ ಮಾಡಿದವರಾದಾಗ್ಯೂ, ಪ್ರತ್ಯವಾಯಕ್ಕೆ ಪಾತ್ರರಾಗಲಾರರು. ಮಾಡಿದ ಕಾರ್ಯವು ಧರ್ಮದಲ್ಲಿ ಪರ್ಯವಸಾನವಾಗು ವದರಿಂದ ನನಗೆ ಇಹ ಪರದಲ್ಲಿ ಶ್ರೇಯೋಲಾಭಕ್ಕೆ ಸಂಶಯವಿಲ್ಲ.

ಇದಂ ತಿಳಿಯದೆ ಮುಗ್ಧಜನರು ಮನಬಂದಂತೆ ಆಡಿಕೊಂಡಾರು. ತಿಳಿದ ಮಹಾತ್ಮರು ಸಂತೋಷಪಡುವರು. ಗುರುಗಳ ಆಜ್ಞಾನುಸಾರವಾಗಿ ಧರ್ಮವಂ ಸ್ಥಾಪನವಂ ಗೈಯ ಲೋಸುಗ ಲೌಕಿಕವ್ಯವಹಾರವನ್ನಂಗೀಕರಿಸಿದೆನು. ಇದು ನನ್ನ ಮನೋಗತಾಭಿಪ್ರಾಯವು. ಕೃತಕೃತ್ಯನಾಗಿ ಸ್ವಲ್ಪದಿವಸದಲ್ಲಿಯೇ ಆಚಾರ್ಯಸನ್ನಿಧಿಯನ್ನೈದುವೆನು. ಈ ಕಲಿಯುಗದ ಜನರು ಎಷ್ಟು ಕಶ್ಮಲಚಿತ್ತರಾದರೂ ನಾನು ಸ್ಥಾಪಿಸಿ ಇರುವ ಧರ್ಮದಾರ್ಢ್ಯವು ಬಹುಕಾಲ ನಡೆದು ಬರುವದು" ಎಂದು ಚಾಣಕ್ಯನು ಹೇಳುತ್ತಿರಲು,

ಅದಂ ಕೇಳಿದ ಶಾರ್ಙ್ಗರವನು ದಂಡವತ್ಪ್ರಣಾಮವಂ ಗೈದು, "ಮಹಾನುಭಾವರಾದ ಉಪಾಧ್ಯಾಯರೇ, ಲೋಕದಲ್ಲಿ ಧರ್ಮವಂ ಸ್ಥಾಪನಂಗೈದುದರಿಂದ ನಿಮ್ಮಂ ದೇವಾಂಶ ಪುರುಷರೆಂದು ಹೇಳಬೇಕು. ಇದರಿಂ ಸರ್ವದೇವತೆಗಳೂ ಸುಪ್ರೀತರಾಗುವರು. ನಿಮ್ಮ ಯಶಸ್ಸು ಆಚಂದ್ರಾರ್ಕಮಾಗಿ ಸ್ಥಿರಮಾಗಿ ಇರುವದು. ಈಗಲೇ ವರುಷಾಕಾಲದಲ್ಲಿ ಒಟ್ಟಾಗುವ ಮೇಘತಂಡಗಳು ಶರತ್ಕಾಲದಲ್ಲಿ ವಿರಳವಾಗಿ ಹೋಗುವಂತೆ ನಾಸ್ತಿಕ ಸಂಘವೆಲ್ಲವೂ ನಷ್ಟವಾದಂತೆ ತೋರುತ್ತಲಿದೆ. ನಿಮ್ಮಂ ಸ್ತುತಿಸುವದಕ್ಕೆ ನಾನು ಎಷ್ಟು ಮಾತ್ರದವನು?" ಎಂದು ಸ್ತುತಿಸುತ್ತಿರಲು,

ಮೊದಲು ರಾಕ್ಷಸನಿಂದ ನೇಮಿಸಿದ್ದ ದಾತ್ಯೂಹಕನೆಂಬ ಗೂಢಚಾರನು ಪಾಟಲೀಪುರ ದಲ್ಲಿ ವಿರೋಚನ ಸಂಹೃತವಾದುದು ಮೊದಲುಗೊಂಡು ಸಕಲವೃತ್ತಾಂತವಂ ತಿಳಿದು, ಪಾಟಲೀಪುರವಂ ಬಿಟ್ಟು, ಪರ್ವತರಾಯನ ಶಾಹುರೀಪುರಕ್ಕೆ ಬಂದು, ಪಾಟಲೀಪುರಕ್ಕೆ ಹೊರಡುತ್ತಿರುವ ಮಲಯಕೇತುವಿನ ಸೇನಾನಿವಹವಂ ನೋಡಿ, ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸುತ್ತಿದ್ದನು :

"ರಾಕ್ಷಸನ ಉಪಾಯಗಳಂ ನೋಡಿದರೆ, ಚಂದ್ರಗುಪ್ತನಂ ಜಯಿಸುವದು ಸ್ವಲ್ಪ ಮಾತ್ರವೆಂದು ತೋರುತ್ತಲಿದೆ. ಚಾಣಕ್ಯನ ಕೌಶಲವಂ ನೋಡಿದರೆ, ರಾಕ್ಷಸನ ಪ್ರಯತ್ನ ವೆಲ್ಲವೂ ನಿಷ್ಫಲವಾಗುವದೆಂದು ತೋರುತ್ತಲಿದೆ. ಹೆಣ್ಣಾನೆ ನಿಮಿತ್ತವಾಗಿ ಕಾದಾಡುವ ಪುರುಷಗಜಯುಗ್ಮಮಧ್ಯದಲ್ಲಿ ತಗುಲಿರುವ ಕರೇಣುವಿನಂತೆ ಒಬ್ಬರೊಬ್ಬರೂ ಜಯಿಸ ಲಿಚ್ಛೈಸಿದ ಚಾಣಕ್ಯ ರಾಕ್ಷಸರ ಮಧ್ಯದಲ್ಲಿ ತಗುಲಿರುವ ರಾಜಲಕ್ಷ್ಮಿಯು ಇವರಿಬ್ಬ ರಲ್ಲಿಯೂ ದೃಷ್ಟಿ ಉಳ್ಳವಳಾಗಿ ಇದ್ದಾಳೆ. ಮುಂದೆ ಹೇಗಾಗುವದೋ ತಿಳಿಯಕೂಡದು" ಎಂದು ಯೋಚಿಸುತ್ತ, ನಾಗಸರಧ್ವನಿಯಿಂದ ತಲೆ ತೂಗುತ್ತಿರುವ ಸರ್ಪಗಳನ್ನಾಡಿಸುತ್ತ, ರಾಕ್ಷಸನ ಗೃಹಸಮೀಪಕ್ಕೆ ಬರುತ್ತಲಿರಲು, ಆ ದ್ವಾರಪಾಲಕನು ನೋಡಿ,

"ಎಲೈ ಗಾರುಡಿಗನೇ, ನಿನ್ನ ಪೆಟ್ಟಿಗೆಯಲ್ಲಿ ಇರುವ ಸರ್ಪಗಳು ನಿನಗೆ ಹ್ಯಾಗೆ ವಶ

ವಾದವು ?" ಎನಲು, "ಎಲೈ ದ್ವಾರಪಾಲಕನೇ, ಅದಂ ಹೇಳುವೆನು. ಈ ಗೃಹವು ಯಾರದು?" ಎನಲು, ಆ ಮಾತಿಗೆ "ಇದು ಅಮಾತ್ಯ ರಾಕ್ಷಸನ ಗೃಹವು" ಎಂದೆನಲು, "ಅಮಾತ್ಯ ರಾಕ್ಷಸರು ಮಂತ್ರಾಲೋಚನೆಯಿಂದ ಶತ್ರುಗಳಂ ತಮ್ಮ ವಶವಂ ಮಾಡಿ ಕೊಳ್ಳುವಂತೆ ನಾವು ಮಂತ್ರೌಷಧಿಗಳಿಂದ ಸರ್ಪಗಳಂ ವಶವಂ ಮಾಡಿಕೊಳ್ಳುವದರಿಂದ ರಾಕ್ಷಸರು ನಮಗೆ ಸಮಾನರು ಎಂದು ಹೇಳಬೇಕು" ಎನಲು, "ಎಲೈ ಮೂಢನೇ, ಸರ್ಪಗಳಂ ಸ್ವಾಧೀನಂ ಮಾಡಿಕೊಂಡ ಮಾತ್ರಕ್ಕೆ ನೀನು ಅಮಾತ್ಯರಿಗೆ ಸಮಾನನೇ ?" ಎನಲು, "ಎಲೈ ಪ್ರತಿಹಾರಿ, ನನ್ನಂ ಮೂಢನೆಂದೆನಬೇಡ. ಇದಲ್ಲದೆ ಪ್ರಾಕೃತಗದ್ಯವಂ ರಚಿಸುವ ಕವಿ ನಾನು. ನಾನು ಮಾಡಿದ ಕವಿತ್ವವಂ ಅಮಾತ್ಯರಿಗೆ ತೋರಿಸಿದರೆ ಇದಂ ನೋಡಿ ನನ್ನಂ ಪ್ರೌಢನೆಂದು ಮೆಚ್ಚುವರು. ಕವಿತ್ವವಂ ಪತ್ರದಲ್ಲಿ ಬರೆದಿಹೆನು. ತೋರಿಸು ವನಾಗು" ಎಂದು ದ್ವಾರಪಾಲಕನ ಕೈಯಲ್ಲಿ ಕೊಡುತ್ತಿರಲು,

ಆ ಸಮಯದಲ್ಲಿ ಗೃಹದಲ್ಲಿ ಇರುವ ರಾಕ್ಷಸನು ತನ್ನ ಮನಸ್ಸಿನಲ್ಲಿ "ತಾನು ಪಾಟಲೀ ಪುರದಿಂದ ಬರುವ ಸಮಯದಲ್ಲಿ ಗೃಹಜನವಂ ಚಂದನದಾಸನಲ್ಲಿ ಇರಿಸಿ ಬಂದುದ ರಿಂದ, ನಮ್ಮ ಕಡೆಯವರು ಚಂದ್ರಗುಪ್ತನಲ್ಲಿ ದ್ವೇಷವಂ ಸಾಧಿಸಲೋಸುಗ ನನ್ನಂ ಹೊರಟುಹೋದನೆಂದು ತಿಳಿದು, ನಾನು ನೇಮಿಸಿದ್ದ ಮೇರೆಗೆ ಕಪಟತಂತ್ರಗಳಂ ಸಮಯ ವನ್ನರಿತು ಆಚರಿಸಿದ್ದಾರು. ವಾಸಕನೆಂಬ ಗೂಢಚಾರನು ಬಂದ ಬಳಿಕ ಅಲ್ಲಿಯ ವರ್ತ ಮಾನಗಳು ಏನೋ ತಿಳಿಯದಲ್ಲ" ಎಂದು ಚಿಂತಿಸುತ್ತ, ತನ್ನ ಬಳಿಯ ದೂತನಂ ನೋಡಿ, "ಎಲೈ, ನಮ್ಮ ಕಾಣಬೇಕೆಂದು ಹೊಸಜನರು ಬಂದರೆ ತಡೆಯ ಬೇಡಿ, ಒಳಕ್ಕೆ ಕರೆದು ಕೊಂಡು ಬನ್ನಿ" ಎನಲು, 'ಒಳ್ಳೆಯದೆಂ'ದು ದೂತರು ಹೋಗಿ ತಿಳಿದು ಬಂದು,

"ಸ್ವಾಮೀ, ಬಾಗಿಲಲ್ಲಿ ಅಧಿಕಾರಿಗಳ ಸಂಘವೇ ಹೊರತು ವಿಶೇಷ ಹೊಸಜನರಿಲ್ಲ. ಒಬ್ಬ ಹಾವಾಡಿಗ ಮಾತ್ರವೇ 'ತಮ್ಮಂ ಕಂಡು ಸರ್ಪಗಳಂ ತೋರಿಸುವೆನು. ತಾನು ಮಾಡಿದ ಪ್ರಾಕೃತ ಕವಿತ್ವವು, ತೋರಿಸುವದೆಂ'ದು ಈ ಪತ್ರವಂ ಕೊಟ್ಟನು" ಎಂದು ಆ ಚೀಟಂ ತಂದು ಒಪ್ಪಿಸಲು, ಅದಂ ರಾಕ್ಷಸಂ ನೋಡಿಕೊಂಡು, ಪರಿಭಾವಿಸಿ, ಅದರಲ್ಲಿ 'ಭ್ರಮರವು ಪುಷ್ಪಮಕರಂದಪಾನವಂ ಮಾಡಿ ಮತ್ತೊಂದೆಡೆಯಲ್ಲಿ ಕಾರಿದರೆ, ಅದು ಮಧುವೆನಿಸಿ ಜನಕ್ಕೆ ಮಧುರವಾಗಿ ಇರುವದು' ಎಂದು ಬರೆದಿರುವದರಿಂದ, ಇದರ ಭಾವವಂ ನೋಡಿದರೆ, 'ಪಾಟಲೀಪುರದಲ್ಲಿ ತಿಳಿದ ವರ್ತಮಾನವಂ ನಿಮಗೆ ಉಪಯುಕ್ತ ಮಾಗಿ ಹೇಳುವೆನು' ಎಂಬ ಅರ್ಥವು ತೋರುವದರಿಂದ, ಈ ಹಾವಾಡಿಗನು ನಮ್ಮ ಗೂಢಚಾರನಾಗಿ ಇರಬೇಕು" ಎಂದು ತಿಳಿದು,

ದೂತನಂ ನೋಡಿ, "ಎಲೈ, ಹಾವಾಡಿಗನಂ ಬರಹೇಳು ; ಸರ್ಪಗಳಂ ನೋಡ ಬೇಕೆಂ"ದು ಹೇಳುವ ಸಮಯದಲ್ಲಿ, ತನ್ನ ವಾಮನೇತ್ರವು ಹಾರುವದಂ ನೋಡಿ, "ಸರ್ಪದರ್ಶ[ನ]ಕ್ಕಿಂತಲೂ ಅಪಶಕುನವಾದ ವಾಮನೇತ್ರವು ಅದುರುತ್ತಲಿದೆ" ಎಂದು ಚಿಂತಿಸಿ, "ಎಲೈ ಹಾವಾಡಿಗನಂ ಮಾತ್ರ ಸರ್ಪವಂ ಅಲ್ಲೇ ಇಟ್ಟು ಬರಹೇಳು" ಎನಲು, ಆ ದೂತರು "ಒಳ್ಳೆಯದು" ಎಂದು ಹೋಗಿ, ಆ ಹಾವಾಡಿಗನಂ ಕರೆತಂದು ನಿಲ್ಲಿಸಲು, ಅವನಂ ನೋಡಿ ವಿರಾಧಗುಪ್ತನೆಂಬ ಚಾರನೆಂದು ನಿಶ್ಚೈಸಿ,

ಏಕಾಂತದಲ್ಲಿ ವಿರಾಧಗುಪ್ತನಂ ಕರೆದು, "ಎಲೈ ಚಾರನೇ, ಸುಖದಿಂದ ಬಂದೆಯಾ ?

ಕುಳ್ಳಿರು. ಚಂದ್ರಗುಪ್ತನು ಪಾಟಲೀಪುರವಂ ಪ್ರವೇಶಿ[1]ಸಿ ಆದ[1] ಬಳಿಕ, ಮಲಯಕೇತು ಓಡಿಹೋದ ಬಳಿಕ, ಪುರದಲ್ಲಿ ಏನು ವಿಶೇಷ ನಡೆಯಿತು ?" ಎಂದು ರಾಕ್ಷಸನು ಕೇಳುತ್ತಿರಲು,

"ಸ್ವಾಮಿ, ಅವನ ಚಿಕ್ಕಪ್ಪನಾದ ವಿರೋಚನನಿಗೆ ಅರ್ಧರಾಜ್ಯಾಧಿಪತ್ಯವಂ ಕೊಡುವೆನೆಂದು ಕರೆಸಿ, ಅರ್ಧರಾತ್ರೆಯಲ್ಲಿ ಲಗ್ನನಿಶ್ಚಯವಂ ಮಾಡಿ, ಸ್ವರ್ಣಪೀಠದಲ್ಲಿ ಕುಳ್ಳಿರಿಸಿ, ಅಭಿಷೇಕವಂ ಮಾಡಿದಂತೆ ಮಾಡಿಸಿ, ನಂದರ ಪಟ್ಟದಾನೆಯ ಮೇಲೆ ಕುಳ್ಳಿರಿಸಿ, ಮೆರವಣಿಗೆಯಾಗಿ ರಾಜದ್ವಾರದಲ್ಲಿ ಬರುತಿರುವ ವಿರೋಚನನಂ ಚಂದ್ರಗುಪ್ತನೆಂದು ತಿಳಿದು ಮೇಲಿರ್ದ ದಾರುವರ್ಮನು ಕೀಲಂ ಸಡಿಲಿಸಲು, ಭಾರವಾಸಿಯಾದ ತೊಲೆ ಬಿದ್ದು, ಅದರ ಮಾವುತ ಸಂಹೃತನಾಗಲು, ಅದಂ ನೋಡಿ ದಾರುವರ್ಮನು ತನ್ನ ಕೈಕೊಡತಿಯಿಂದ ವಿರೋಚನನಂ ಸಂಹಾರವಂ ಮಾಡಲು, ಹಾಗೇ ಅಲ್ಲಿದ್ದ ಭಲ್ಲೆ[ಯ]ದವರು ದಾರುವರ್ಮನಂ ತಿವಿದು ಕೆಡಹಲು, ಆ ಬಳಿಕ ಶಯನಗೃಹದ ಹಾಸಿಕೆವೂಳಿಗದವನು ಪಟದ ಗೂಡಿನಲ್ಲಿರಿಸಿದ್ದ ಶಸ್ತ್ರವಂ ನೋಡಿ ಅವನಂ ದಂಡಿಸಲು, ನಿಲುಗನ್ನಡಿಯ ಹಿಂದಣ ಕನ್ನವಂ ನೋಡಿ ಅಲ್ಲಿದ್ದ ಸುರಂಗಕ್ಕೆ ಅಗ್ನಿಯಂ ಮುಟ್ಟಿಸಿದುದರಿಂದ ಶಸ್ತ್ರಪಾಣಿಗಳಾದ ಚೋರರು ಅಲ್ಲಿಯೇ ಮೃತರಾಗಲು, ವಿಷಚೂರ್ಣಪ್ರಯೋಗದಿಂದಲೇ ಆ ವೈದ್ಯನೂ ಮೃತನಾಗುತ್ತಿರಲು, ಎಲ್ಲ ವಿಪತ್ತುಗಳೂ ಚಂದ್ರಗುಪ್ತನಂ ತಪ್ಪಿ, ಆತನಿಗೆ ವೈರಿಗಳಾದ ನಮ್ಮ ಜನವನ್ನೇ ಸಂಹರಿಸಿದವು" ಎನಲು,

ಅದಂ ಕೇಳಿ ರಾಕ್ಷಸನು ತನ್ನ ಮನಸ್ಸಿನಲ್ಲಿ ಮಹಾವ್ಯಸನಪಡುತ ಆಶ್ಚರ್ಯದಿಂದ ತಲೆದೂಗಿ, "ಎಲೈ ಚಾರನೇ, ನಾನು ಚಂದ್ರಗುಪ್ತನ ಸಂಹಾರಕ್ಕೆ ಮಾಡಿಸಿ ಇದ್ದ ಯತ್ನವೆಲ್ಲಾ ಅವನಂ ಬಿಟ್ಟು ನಮ್ಮ ಜನವನ್ನೇ ಸಂಹರಿಸಿತು. ಅವನಿಗೆ ಉಂಟಾಗಿರುವ ದೈವಬಲವಂ ನೋಡಿದೆಯಾ ?" ಎಂದು ಕಂಬನಿಗಳಂ ತುಂಬುತ್ತಿರುವ ರಾಕ್ಷಸನಂ ಕುರಿತು, [ಚಾರನು] ಇಂತೆಂದನು :

"ಸ್ವಾಮಿ, ಲೋಕದಲ್ಲಿ ಅಧಮರಾದ ಪುರುಷರು ವಿಘ್ನಭಯದಿಂದ ಕಾರ್ಯಾರಂಭವೇ ಮಾಡರು ; ಮಧ್ಯಮಪುರುಷರು ಕಾರ್ಯಾರಂಭವಂ ಮಾಡಿ ವಿಘ್ನಭಯಮುಂಟಾದರೆ ಬಿಟ್ಟುಬಿಡುವರು. ಉತ್ತಮಪುರುಷರು ಕಾರ್ಯಾರಂಭವಂ ಮಾಡಿ ಎಷ್ಟು ವಿಘ್ನ ಬಂದೊದಗಿದರೂ ಪೌರುಷದಿಂದ ಪರಿಹರಿಸಿಕೊಂಡು ಕಾರ್ಯನಿರ್ವಾಹವನ್ನೇ ಮಾಡುವರು. ಆದಿಶೇಷನು ಮಹಾಭಾರವಾದರೂ ಭೂಮಿಯಂ ಹೊತ್ತು ನಿರ್ವಹಿಸುವಂತೆ ಕಾರ್ಯದಕ್ಷರಾದ ನಿಮ್ಮಂಥವರು ಯತ್ನವಂ ಮಾಡಿದ ಬಳಿಕ ನಿರ್ವಹಿಸಬೇಕಲ್ಲದೆ ಸಾಧಾರಣರಂತೆ ಉಪೇಕ್ಷಿಸಬಾರದು" ಎನಲು,

"ಎಲೈ ವಿರಾಧಗುಪ್ತನೇ, ಪುರುಷನು ವಿಮರ್ಶೆಯಿಂದ ಆರಂಭಿಸಿದ ಕಾರ್ಯಕ್ಕೆ ದೈವಸಹಾಯವಾಗದೆ, ಬಳಿಕ ವಿಘ್ನವುಂಟಾದರೆ, ಮುಂದೆ ಕಾರ್ಯಾಚರಣೆಯಲ್ಲಿ ಹೇಗೆ ಉತ್ಸಾಹವಂತನಾದಾನು ? ಅದಂತಿರಲಿ. ಆ ಚಾಣಕ್ಯನು ಚಂದ್ರಗುಪ್ತನಲ್ಲಿ ಎಂದಿನಂತೆ ಅನುರಕ್ತನಾಗಿ, ರಾಜ್ಯವಿಚಾರವಂ ಮಾಡುತ್ತ, ಶತ್ರುಗಳು ಮಾಡುವ ಕಾರ್ಯವಂ ತಿಳಿದು ಉದಾಸೀನ

---

೧. ದ (ಕ).

ದಿಂದಿರುವನೋ ? ಅಭಿನಿವೇಶದಿಂದಿರುವನೋ ?" ಎನಲು,

"ಸ್ವಾಮಿ, ಚಾಣಕ್ಯನು ಚಂದ್ರಗುಪ್ತನಲ್ಲಿ ಎಂದಿನಂತೆ ಅನುರಕ್ತನಾಗಿ, ರಾಜ್ಯ ವಿಚಾರವಂ ಮಾಡುತ, ಶತ್ರುಗಳು ಮಾಡುವ ಕಾರ್ಯವಂ ತಿಳಿದು, ಕಾರ್ಯಕ್ಕೆ ವಿಘಾತಕರಾದ ಜನರಂ ಹುಡುಕಿಸಿ ನಿಗ್ರಹಿಸಿದನು. ಹೇಗೆಂದರೆ, ವಿಷಕನ್ಯಾಮುಖದಿಂದ ಪರ್ವತರಾಯನಂ ಸಂಹಾರಗೈಸಿದನೆಂದು ಜೀವಸಿದ್ಧಿಯೆಂಬ ಕ್ಷಪಣಕನಂ ಅಪಮಾನಪೂರ್ವಕವಾಗಿ ಪುರದಿಂ ಹೊರಡಿಸಿದನು" ಎನಲು,

ಆ ವಾಕ್ಯವಂ ಕೇಳಿ, "ಎಲೈ ಚಾರನೇ, ಬುದ್ಧಿವಂತನಾದ ಚಾಣಕ್ಯನು ತನ್ನ ಕಾರ್ಯವಂ ನಿರ್ವಹಿಸಿಕೊಂಡು, ಅರ್ಧರಾಜ್ಯಕ್ಕೆ ಪಾಲುಗಾರನಾದ ಪರ್ವತೇಶ್ವರನಂ ಸಂಹಾರವಂ ಗೈಸಿ ಮತ್ತು ತಾನು ಆತನಿಗೆ ಮಿತ್ರನಂತೆ ಜನರಲ್ಲಿ ನಟಿಸುತ, ಜೀವಸಿದ್ಧಿಯಂ ಹೊರಡಿಸಿ, ನಮಗೆ ಅಪಕೀರ್ತಿ ಉಂಟಾಗುವಂತೆ ಮಾಡಿದುದರಿಂದ, ಆ ಚಾಣಕ್ಯನು ಮಾಡಿದ ಒಂದೊಂದು ಕಾರ್ಯವೇ ಬಹುಫಲವನ್ನುಂಟುಮಾಡುತಲಿದೆ" ಎಂದು ಚಾಣಕ್ಯನ ಉಪಾಯಕ್ಕೆ ಮೆಚ್ಚುತ, 'ಮತ್ತೇನು ವಿಶೇಷ'ವೆಂದೆನಲು,

"ಸ್ವಾಮಿ, ಚಂದ್ರಗುಪ್ತನ ಮೇಲೆ ದ್ರೋಹವಂ ಮಾಡಲೆಣಿಸಿದ ದಾರುವರ್ಮ ಮೊದಲಾದ ಜನಗಳು ಮಾಡಿದ ಕಪಟಗಳಿಗೆ ಇವನೇ ಮುಖ್ಯಕಾರಣನೆಂದು ತಿಳಿದು, ಬೀದಿಯಲ್ಲಿ ಸಾರಿಸಿ, 'ಶಕಟದಾಸನಂ ಶೂಲಕ್ಕೆ ಹಾಕಿರೆಂ'ದು ನೇಮಿಸಲು, ಅದೇ ಮೇರೆಗೆ ಚಂಡಾಲರು ಶಕಟದಾಸನಂ ಹಿಡಿದು ವಧ್ಯಸ್ಥಾನಕ್ಕೆ ಕರೆದುಕೊಂಡು ಹೋಗುವದಂ ಕಣ್ಣಾರ ಕಂಡೆನು" ಎನಲು,

ಆ ಮಾತಿಗೆ ರಾಕ್ಷಸನು ಮಹಾವ್ಯಸನಪಡುತ, "ಹಾ ಮಿತ್ರನಾದ ಶಕಟದಾಸನೇ, ನಿನಗೂ ಇಂಥ ದುರ್ದಶೆ ಬರಬಹುದೇ ?" ಎಂದು ಕಂಬನಿಗಳಂ ತುಂಬುತ, "ದಾರುವರ್ಮಾದಿಗಳಿಗೆ ಸಹಾಯವಂ ಮಾಡುತಲಿರುವಂತೆ ನಾವು ಶಕಟದಾಸನಿಗೆ ನೇಮಿಸಿದುದಕ್ಕೆ ಕಾರ್ಯಘಾತವಾಯಿತು. ನಂದರನ್ನಗಲಿ ನಾನು ಜೀವಂತನಾಗಿರುವದಕ್ಕೆ ದುಃಖ ಪಡಬೇಕಲ್ಲದೆ ಸ್ವಾಮಿಕಾರ್ಯಕ್ಕೋಸುಗ ಅಸುವಂ ತ್ಯಜಿಸಿದವರ್ಗೆ ದುಃಖಪಡಲೇಕೆ ?" ಎಂದು ಹೇಳಿ, 'ಮತ್ತೇನು ?' ಎನಲು,

"ಸ್ವಾಮಿ, ಶಕಟದಾಸನಿಗೆ ತೀಕ್ಷ್ಣದಂಡನೆಯಂ ನೇಮಿಸಿದ ಬಳಿಕ, ಬಳೆಗಾರ ಚಂದನದಾಸನೆಂಬ ವರ್ತಕನಂ ಕರಸಿ, 'ನೀನು ಅಮಾತ್ಯರಾಕ್ಷಸನಿಗೆ ಆಪ್ತನಾದುದರಿಂದ ಆತನ ಗೃಹಜನವಂ ತೋರಿಸೆಂ'ದು ನಯಭಯದಿಂದ ಚಾಣಕ್ಯನು ನಿರ್ಬಂಧಪಡಿಸಲು, 'ಸರ್ವಥಾ ನಾನು ಅರಿತವನಲ್ಲ' ಎಂದು ಚಂದನದಾಸನು ಹೇಳಲು, ಆ ಮಾತಿಗೆ ಕ್ರುದ್ಧನಾದ ಚಾಣಕ್ಯನು ಚಂದನದಾಸನ ಸರ್ವಸ್ವಮಂ ರಾಜಭಂಡಾರಕ್ಕೆ ತೆಗೆದುಕೊಂಡು, ಪತ್ನೀಪುತ್ರಸಮೇತ ಅವನಂ ಕಾರಾಗೃಹದಲ್ಲಿ ಇರಿಸುವಂತೆ ನೇಮಿಸಿ ಕಳುಹಿಸಿದನು" ಎನಲು,

ಆ ಮಾತಿಗೆ ಮನದಲ್ಲಿ ಆತಂಕಗೊಳ್ಳುತ್ತ, "ನನ್ನ ಗೃಹಜನವು ಚಂದನದಾಸನ ಗೃಹದಲ್ಲಿ ಇರುವರ್ಥವು ಬಾಲಕನಾದ ನಮ್ಮ ಪುತ್ರನ ಚಾಪಲ್ಯದಿಂದ ಚಾಣಕ್ಯನಿಗೆ ತಿಳಿದಿದ್ದರೂ ಇರಬಹುದು. ಚಂದನದಾಸನು ನಿರ್ಬಂಧಕ್ಕೆ ಸಿಲುಕಿದ ಬಳಿಕ ನಾನೇ ಚಾಣಕ್ಯನ ವಶವಾದಂತಾಯಿತು" ಎಂದು ರಾಕ್ಷಸನು ಮನದಲ್ಲಿ ಚಿಂತಿಸುತ್ತ, " 'ಪತ್ನೀ

ಪುತ್ರ ಸಮೇತನಾದ ಚಂದನದಾಸನಂ ಕಾರಾಗೃಹದಲ್ಲಿ ಇಟ್ಟನು' ಎಂದು ಇಷ್ಟೇ ಹೇಳಿದುದರಿಂದ, ಚಂದನದಾಸನು ನಮ್ಮ ಪತ್ನೀಪುತ್ರರನ್ನು ಮೊದಲೇ ಅನ್ಯತ್ರ ಮರೆಮಾಡಿ ಇದ್ದಾನು; ಆದರಿಂ ಚಂದನದಾಸನು ಬಹುಬುದ್ಧಿಶಾಲಿ"ಯೆಂದು ಯೋಚಿಸುತ್ತಿರುವ ಸಮಯದಲ್ಲಿ ಒಬ್ಬ ದೂತನು ಬಂದು,

"ಸ್ವಾಮೀ, ಶಕಟದಾಸನು ಬಂದು ಬಾಗಿಲಿನಲ್ಲಿ ನಿಂತು, 'ಅರಿಕೆಮಾಡೆಂ'ದು ಹೇಳಿದನು" ಎನಲು, ಅದಂ ಕೇಳಿ ಸಮೀಪದಲ್ಲಿದ್ದ ವಿರಾಧಗುಪ್ತನೆಂಬ ಚಾರನಂ ನೋಡಿ, 'ಇದೇನಾಶ್ಚರ್ಯವೈ ?' ಎನಲು, "ಸ್ವಾಮೀ, ಈಶ್ವರನ ಕೃಪೆಯಿಂದ ಆಪತ್ತಿನಿಂದ ಮುಕ್ತನಾಗಿ ಶಕಟದಾಸನು ಬಂದು ಇದ್ದಾನು" ಎನಲು, ಹಾಗೇ ಶಕಟದಾಸನಂ ಕರೆಕಳುಹಿಸಿ, ಆತನಂ ನೋಡಿ, "ಅಯ್ಯ ಶಕಟದಾಸನೇ, ನೀನು ಅಸಹಾಯನಾಗಿ ತಪ್ಪಿಸಿಕೊಂಡು ಚಾಣಕ್ಯನೆಂಬ ವ್ಯಾಘ್ರಮುಖಗ್ರಸ್ತವಾದವನಾದರೂ, ನೀನು ಬಂದ ಪ್ರಕಾರ ಹೇಗೆ"ನಲು, ಅವನು ನಮಸ್ಕರಿಸಿ, ಕುಳಿತು,

"ಸ್ವಾಮೀ, ನಂದರಾಜ್ಯದಲ್ಲಿ ಚಾಣಕ್ಯನಿಂದ ನಿಲ್ಲಿಸಿ ಇರುವ ಚಂದ್ರಗುಪ್ತನಂತೆ ನೋಡುವದಕ್ಕೆ ಅಸಹ್ಯವಾಗಿ ವಧ್ಯಸ್ಥಾನದಲ್ಲಿ ನೆಟ್ಟಿರುವ ಶೂಲದ ಸಮೀಪಕ್ಕೆ ಚಂಡಾಲರು ನನ್ನಂ ಕರೆತರಲು, ಆಗ ಪರಮಮಿತ್ರನಾದ ಸಿದ್ಧಾರ್ಥಕನು ಕೇಳಿ, ಖಡ್ಗಪಾಣಿಯಾಗಿ ಬಂದು, ಆ ಘಾತಕರ ಮೇಲೆ ಕಾಣಿಸಿಕೊಳ್ಳಲು, ಅವನ ರಭಸಕ್ಕೆ ನಿಲ್ಲಲಾರದೆ ಆ ಚಂಡಾಲರು ಹೋಗುತ್ತಿರಲು, ಅಲ್ಲಿಂದ ಇಲ್ಲಿಗೆ ನನ್ನಂ ಕರೆತಂದನು" ಎನಲು, ಅದಂ ಕೇಳಿ ಸಂತೋಷಭರಿತನಾಗಿ, ಹೊರಗೆ ಇದ್ದ ಸಿದ್ಧಾರ್ಥಕನಂ ಕರೆಕಳುಹಿಸಿ,

"ಎಲೈ ಆಪ್ತನಾದ ಸಿದ್ಧಾರ್ಥಕನೇ, ಶಕಟದಾಸನಂ ಬಿಡಿಸಿ ಕರೆತಂದುದಕ್ಕೆ ನಿನಗೆ ಏನು ಕೊಟ್ಟರೂ ಸಲುವದು" ಎಂದು ಹೇಳಿ, ರಾಕ್ಷಸನು ತಾನು ಅಲಂಕರಿಸಿದ್ದ ದಿವ್ಯಭೂಷಣಗಳನ್ನೆಲ್ಲವಂ ತೆಗೆದು ಸಿದ್ಧಾರ್ಥಕನಿಗೆ ಕೊಡಲು, ಅವನು ನಮಸ್ಕರಿಸಿ ರಾಜಯೋಗ್ಯಗಳಾದ ಭೂಷಣಗಳಂ ಸ್ವೀಕರಿಸಿ,

"ಸ್ವಾಮಿ, ನನಗೆ ಇಲ್ಲಿ ಆಪ್ತರು ಬೇರೆಯಿಲ್ಲ. ಈ ಭೂಷಣಗಳಂ ತಮ್ಮ ಬೊಕ್ಕಸದಲ್ಲಿಯೇ ಇರಿಸಿ, ನಾನು ಕೇಳಿದಾಗ ಕೊಡುವಂತೆ ಶಕಟದಾಸನಿಗೆ ಅಪ್ಪಣೆಯಾಗಬೇಕು" ಎನಲು, "ಹಾಗೇ ಮಾಡಿಸೈ ಶಕಟದಾಸನೇ" ಎಂದು ರಾಕ್ಷಸನು ಹೇಳಲು, ಆಗ ಒಂದು ಪೆಟ್ಟಿಗೆಯಂ ತರಿಸಿ ಭೂಷಣಗಳಂ ಪೆಟ್ಟಿಗೆಯಲ್ಲಿ ಹಾಕಿ, ಮೊಹರವಂ ಮಾಡುವದಕ್ಕೆ ಯತ್ನವಂ ಮಾಡಲು, ಆಗ ಸಿದ್ಧಾರ್ಥಕನು ತನ್ನ ಕೈಯಲ್ಲಿ ಚಾಣಕ್ಯ ಕೊಟ್ಟಿದ್ದ ಮೊಹರದಿಂದಲೇ [೧]ಪೆಟ್ಟಿಗೆ[೧]ಗೆ ಮುದ್ರೆಯಂ ಮಾಡಲು, ಶಕಟದಾಸನು ಅದರ ಅಕ್ಷರವಂ ನೋಡಿ,

"ಸ್ವಾಮಿ, ಈ ಉಂಗುರದಲ್ಲಿ ತಮ್ಮ ನಾಮಾಂಕಿತ ಇರುವದರಿಂದ ಇದು ತಮ್ಮದೆಂದು ತೋರುತ್ತಲಿದೆ" ಎನಲು, ಆ ಉಂಗುರವಂ ರಾಕ್ಷಸನು ನೋಡಿ, ತನ್ನದೆಂದು ತಿಳಿದು, 'ತಾನು ಬರುವ ಸಮಯದಲ್ಲಿ ತನ್ನ ಸ್ಮರಣೆಗೆ ಇರಬೇಕೆಂದು ತನ್ನ ಪತ್ನಿ ಕೇಳಲಾಗಿ ಕೊಟ್ಟು ಬಂದೆನು ; ಇದು ಸಿದ್ಧಾರ್ಥಕನಿಗೆ ಸಿಕ್ಕಿದ ಪರಿ ಹೇಗೆಂ'ದು ಯೋಚಿಸುತ್ತ, "ಎಲೈ ಸಿದ್ಧಾರ್ಥಕನೇ, ಈ ಉಂಗುರವು ನಿನಗೆ ಎಲ್ಲಿ ದೊರಕಿತು ?" ಎನಲು, "ಸ್ವಾಮೀ,

---

೧. ಪಿಡಿಗೆ (ಖ)

ಪಾಟಲೀಪುರದಲ್ಲಿ ಮಾರ್ಗವಶವಾಗಿ ನಾನು ಹೋಗುವ ಸಮಯದಲ್ಲಿ ಚಂದನದಾಸನೆಂಬ ಒಬ್ಬ ಬಳೆಗಾರ ವರ್ತಕನ ಪಟ್ಟಸಾಲೆ ಕೆಳಗೆ ಈ ಉಂಗುರವು ಬಿದ್ದು ಇದ್ದುದರಿಂದ ನನ್ನ ಕಣ್ಣಿಗೆ ಗೋಚರವಾಯಿತು. ಏಕೆ ಬಿಡಬೇಕೆಂದು ಗ್ರಹಿಸಿದ್ದೆನು" ಎನಲು, "ಸಹಜವೇ ಸರಿ. ಇಂಥ ವಸ್ತುಗಳು ವರ್ತಕನಲ್ಲಿ ಎಷ್ಟು ಇರುವವೋ ?" ಎಂದು ಹೇಳಿ, "ಈ ಉಂಗುರವು ಇವನ ಕೈಗೆ ಸಿಕ್ಕಿದುದರಿಂದ ಉತ್ತಮವಾಯಿತು ; ಅಲ್ಲದೆ ಕಪಟಿಗಳಾದ ಶತ್ರುಗಳಿಗೆ ಸಿಕ್ಕಿದ್ದರೆ ಮೋಸ ಬರುತಲಿತ್ತು. ಆಡುತಲಿದ್ದ ತನ್ನ ಶಿಶುವು ಕೆಡಹಿತೋ ಏನೋ" ಎಂದು ಆಲೋಚಿಸುತ್ತಿರಲು, ಆಗ ಶಕಟದಾಸನು ಸಿದ್ಧಾರ್ಥಕನಿಗಿಂತೆಂದನು :

"ಎಲೈ ಮಿತ್ರನೇ, ಈ ಉಂಗುರದಲ್ಲಿ ನಮ್ಮ ಅಮಾತ್ಯರ ಹೆಸರು ಬರೆದಿರುವದರಿಂದ ಅವರಿಗೆ ಸಲ್ಲತಕ್ಕದೆಂದು ಕೈಗಾಣಿಕೆಯಾಗಿ ಒಪ್ಪಿಸುವನಾಗು" ಎಂದು ಹೇಳಲು, "ನಾನು ಧನ್ಯನಾದೆನು" ಎಂದು ಸಿದ್ಧಾರ್ಥಕನು ಆ ಉಂಗುರವಂ ರಾಕ್ಷಸನಿಗೆ ಒಪ್ಪಿಸಲು, ಅದಂ ತೆಗೆದುಕೊಂಡು ಶಕಟದಾಸನ ಕೈಯಲ್ಲಿ ಕೊಟ್ಟು, ಇಂದು ಮೊದಲು ನಮ್ಮ ಕಾಗದಗಳಿಗೆ ಈ ಉಂಗುರದಿಂದಲೇ ಮೊಹರವಂ ಮಾಡುತ್ತಲಿರುವನಾಗು" ಎಂದು ಹೇಳುತ್ತಿರಲು,

ಸಿದ್ಧಾರ್ಥಕನು "ಸ್ವಾಮೀ, ಮತ್ತೊಂದು ವಿಜ್ಞಾಪನೆ ಉಂಟು. ಚಾಣಕ್ಯನಿಗೆ ವಿರುದ್ಧ ಕಾರ್ಯವಂ ಮಾಡಿ ಇಲ್ಲಿಗೆ ಬಂದುದರಿಂದ ನಾನು ಪಾಟಲೀಪುರದಲ್ಲಿ ಇರಕೂಡದೆಂಬ ಅರ್ಥವು ಸ್ವಾಮಿಚಿತ್ತಕ್ಕೆ ತಿಳಿದಿದೆಯಷ್ಟೆ, ಅಪ್ಪಣೆಯಾದರೆ ರಾಜಕಾರ್ಯ ಪರ್ಯವಸಾನವಾಗುವವರೆಗೂ ತಾವು ಹೇಳಿದ ಕಾರ್ಯವಂ ಮಾಡುತ್ತ, ಸ್ವಾಮಿಯವರ ಸನ್ನಿಧಾನದಲ್ಲೇ ಇರಬೇಕೆಂದು ನನ್ನ ಮನಸ್ಸಿನಲ್ಲಿ ಬಯಕೆಯಿರುವದು" ಎನಲು, ಶಕಟದಾಸನಂ ನೋಡಿ, "ನನ್ನ ಮನಸ್ಸಿನಲ್ಲಿ ಇದ್ದಂತೆ ಸಿದ್ಧಾರ್ಥಕನು ನುಡಿದನು. ಇವನಂ ಆದರಿಸಿ ನಮ್ಮ ಮನೆಯಲ್ಲೇ ಇಟ್ಟುಕೋ" ಎಂದು ಹೇಳಿ, "ಎಲೈ ಸಿದ್ಧಾರ್ಥಕನೇ, ಶಕಟದಾಸನಂತೆ ನಮ್ಮ ಬಳಿಯಲ್ಲಿ ಆಪ್ತನಾಗಿ ಇರುವನಾಗು. ನೀವಿರ್ವರೂ ಮಾರ್ಗಶ್ರಮದಿಂದ ಬಂದಿರಿ ; ವಿಶ್ರಮಿಸಿಕೊಳ್ಳಿರಿ" ಎಂದು ಹೇಳಿ, ಶಕಟದಾಸ ಸಿದ್ಧಾರ್ಥಕರಂ ಆಚೆಗೆ ಕಳುಹಿಸಿ,

ಆ ಬಳಿಕ ಪುನಃ ಹಾವಾಡಿಗನಾದ ಚಾರನಂ ನೋಡಿ, "ಏನೈ, ಇನ್ನೂ ಏನಾದರೂ ಪಾಟಲೀಪುರದಲ್ಲಿ ವರ್ತಮಾನಗಳು ಉಂಟೋ ?" ಎನಲು,

"ಸ್ವಾಮಿ, ಮತ್ತೊಂದು ವಿಶೇಷವುಂಟು. ವಿರೋಚನನು ನಷ್ಟವಾದ ಬಳಿಕ ಭದ್ರಭಟಾದಿಗಳಂ ಅಪಮಾನಗೈದು ಹೊರಡಿಸಿದ್ದರಿಂದಲೋ, ಮತ್ತೆ ಯಾತರಿಂದಲೋ, ಚಾಣಕ್ಯನಲ್ಲಿ ಚಂದ್ರಗುಪ್ತನಿಗೆ ವಿರೋಧವುಂಟಾಗಿ ಇದೆಯೆಂದು ಜನರು ಹೇಳಿಕೊಳ್ಳುವದಂ ಕೇಳಿ, ಅದಂ ನಿಶ್ಚೈಸಬೇಕೆಂದು ನಾನು ಅಲ್ಲಿಯೇ ಇರುತ್ತಿರಲು, ಮತ್ತೊಂದು ದಿವಸ, ಪುರದಲ್ಲಿ ಕೌಮುದೀಮಹೋತ್ಸವ ನಡೆಯುವಂತೆ ಚಂದ್ರಗುಪ್ತನ ಆಜ್ಞಾನುಸಾರವಾಗಿ ಸಾರುತ್ತ ಬರುವ ದೂತನ ವಚನಕೋಲಾಹಲಧ್ವನಿಯಂ ಕೇಳಿ, ಚಾಣಕ್ಯನು ಸಹಿಸಲಾರದೆ ಆವುತ್ಸವ ನಡೆಯ ಕೆಲಸವಿಲ್ಲವೆಂದು ಹೇಳಿ ಕಳುಹಿಸಿ, ಸಾರುತ ಬರುವರಂ ಹಿಂದಕ್ಕೆ ಕಳುಹಿಸಿದನು. ಅದಂ ನೋಡಿ ಪುರದ ಜನರು 'ಚಾಣಕ್ಯನು ಸ್ವತಂತ್ರನಾದುದರಿಂದ ಚಂದ್ರಗುಪ್ತನಿಗಭಿಮತವಾದ ಈವುತ್ಸವವಂ ನೋಡಿ ಸಹಿಸಲಾರದೆ ನಿಲ್ಲಿಸಿದನು. ಹೀಗೆ ಆಜ್ಞಾಭಂಗವಾಗಲು ಮುಂದೆ ಚಂದ್ರಗುಪ್ತ ಚಾಣಕ್ಯರಿಗೆ ಮನಸ್ತಾಪ ಹೆಚ್ಚೀತು' ಎಂದು ಆಡಿಕೊಳ್ಳುವುದಂ ಸಹ ತಿಳಿದು, ತ್ವರಿತದಿಂ ಬಂದು ಸ್ವಾಮಿಗೆ ವಿಜ್ಞಾಪಿಸಿದೆನು"

ಎಂಬ ಚಾರನ ವಾಕ್ಯವಂ ಕೇಳಿ,

ರಾಕ್ಷಸನು ಸಂತೋಷಪಟ್ಟು, ಇದೇ ಸಮಯದಲ್ಲಿ ಚಂದ್ರಗುಪ್ತ ಚಾಣಕ್ಯರಿಗೆ ವಿರೋಧ ಹೆಚ್ಚಿ ಬರುವಂತೆ ಮಾಡಬೇಕೆಂದು ನಿಶ್ಚೈಸಿ, "ಎಲೈ ಚಾರನೇ, ಇದೇ ವೇಷ ದಿಂದ ಪುನಃ ಪಾಟಲೀಪುರಕ್ಕೆ ಹೋಗಿ, ಮುಂದೆ ನಡೆಯುವ ವರ್ತಮಾನವೇನಿದ್ದರೂ ಕರಭಕನೆಂಬ ಚಾರನಿಗೆ ತಿಳುಹಿಸಿ ಕಳುಹಿಸುವನಾಗು. ಅವನಂ ಇಲ್ಲಿಂದ ಪಾಟಲೀಪುರಕ್ಕೆ ಕಳುಹಿಸುವೆನು" ಎಂದು ಹೇಳಿ, ಕರಭಕನೆಂಬ ಚಾರನಂ ಕರೆಕಳುಹಿಸಿ,

"ಎಲೈ ಕರಭಕನೇ, ಪಾಟಲೀಪುರದಲ್ಲಿ ನಮಗೆ ಆಪ್ತರಾಗಿ ಚಂದ್ರಗುಪ್ತನ ಆಸ್ಥಾನದಲ್ಲಿ ಸ್ತುತಿಪಾಠಕರಾದ ನಮ್ಮ ಕಲಶಕ ವಿಜಯರೆಂಬವರಿಗೆ ನಾನು ಹೇಳಿದೆನೆಂದು ಹೇಳುವ ನಾಗು. ಏನೆಂದರೆ, 'ಚಾಣಕ್ಯನು ಚಂದ್ರಗುಪ್ತನ ಆಜ್ಞಾಭಂಗವಂ ಮಾಡಿದ್ದರಿಂದ ರಾಜ ಸಭೆಯಲ್ಲಿ ಅವರಿರ್ವರಿಗೂ ವಾಕ್ಕಲಹವುಂಟಾಗುವದು. ಆ ಸಮಯದಲ್ಲಿ ಚಂದ್ರಗುಪ್ತ ನಿಗೆ ಚಾಣಕ್ಯನಲ್ಲಿ ವಿರೋಧ ಹೆಚ್ಚುವಂತೆ ಸ್ತುತಿಪದ್ಯಗಳಿಂದ ಹೊಗಳತಕ್ಕದ್ದು' ಎಂದು ಹೇಳಿ, ಆ ಸಮಯದಲ್ಲಿ ನಡೆದ ವರ್ತಮಾನವಂ ತಿಳಿದು ಬಂದು ಹೇಳುವನಾಗು. ವೇಗಶಾಲಿಯಾದ ತುರಗವನ್ನೇರಿ ಹೋಗುವನಾಗು" ಎಂದು ರಾಕ್ಷಸನು ಆ ಚಾರನಿಗೆ ನೇಮಿಸಿ, ಪಾಟಲೀಪುರಕ್ಕೆ ಕಳುಹಿಸುತ್ತಲಿದ್ದನು. ಹಾಗೇ ಆ ಚಾರರು ಬಂದು ಪಾಟಲೀಪುರ ದಲ್ಲಿದ್ದ ಸ್ತುತಿಪಾಠಕರಿಗೆ ರಾಕ್ಷಸನ ವಚನವಂ ಹೇಳುತ್ತಿದ್ದರು ಎಂಬಲ್ಲಿಗೆ,

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಶ್ರೀಮಹಿಶೂರನರಪತಿ ಶ್ರೀಕೃಷ್ಣರಾಜೇಂದ್ರ ರಾಶ್ರಿತ ಹೊಯಸಣೆಗಕುಲಸಂಜಾತ ನಾರಾಯಣಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ಕ್ಷಪಣಕಾಪಮಾನಕಥನವೆಂಬ ಚತುರ್ದಶಾಶಯಃ ಸಮಾಪ್ತಃ.

ಪಂಚದಶಾಶಯ : ಚಾಣಕ್ಯ ಚಂದ್ರಗುಪ್ತರ ಕಪಟಕಲಹಕಥನವು

ಹೀಗಿರುತ್ತಿರಲು, ಮೊದಲು ಚಾಣಕ್ಯನಿಂದ ನೇಮಿಸಿ ಕಳುಹಿಸಿ ಇರುವ ವಿಶ್ವಾವಸು ಮುಖ್ಯರಾದ ಮೂರು ಮಂದಿ ಬ್ರಾಹ್ಮಣರು ವರ್ತಕವೇಷವಂ ಧರಿಸಿ ಬಂದು, ರಾಕ್ಷಸನ ಗೃಹದ ಸಮೀಪದಲ್ಲಿ ನಿಂತು, "ತಾವು ದೇಶಾಂತರದ ವರ್ತಕರು ; ಶ್ಲಾಘ್ಯವಾದ ಆಭರಣಗಳಂ ಕೊಡುವೆವು ; ನಿಮ್ಮ ಧಣಿಗಳಿಗೆ ಯೋಗ್ಯವು ; ತಿಳುಹಿಸಿರಿ" ಎಂದು ರಾಕ್ಷಸನ ದೂತರಿಗೆ ಹೇಳಲು, ಅವರು ಹೋಗಿ ಆ ರಾಕ್ಷಸನಿಗೆ ಹೀಗೆಂದು ತಿಳುಹಿಸಿ, ಆತನ ಅಪ್ಪಣೆಯಿಂದ ಈ ವರ್ತಕರಂ ಕರೆದುಕೊಂಡು ಹೋಗಿ ರಾಕ್ಷಸನ ಮುಂದೆ ನಿಲ್ಲಿಸಲು, ಅವರಲ್ಲಿದ್ದ ಮೂರು ಸಂಪುಟದ ಆಭರಣಗಳಂ ನೋಡಿ, 'ಮಹಾಶ್ಲಾಘ್ಯ ವಹುದೆಂ'ದು ತಿಳಿದು, ರಾಜಸಭೆಗೆ ಹೋಗುವಲ್ಲಿ ಧರಿಸುವದಕ್ಕೆ ಯೋಗ್ಯವಾದುದರಿಂದ 'ಈ ಆಭರಣಕ್ಕೆ ಉಂಟಾದ ಕ್ರಯದ್ರವ್ಯವಂ ಕೊಟ್ಟು ಬೊಕ್ಕಸದಲ್ಲಿ ಕಟ್ಟಿ ಇರಿಸಲಿ' ಎಂದು ಶಕಟದಾಸನಿಗೆ ರಾಕ್ಷಸನು ಹೇಳುತ್ತಿರಲು, 'ಹಾಗೇ ಆಗಲೆಂ'ದು ಅದರ ಕ್ರಯದ್ರವ್ಯವಂ ಆ ವರ್ತಕರಿಗೆ ಕೊಟ್ಟು, ಪರ್ವತರಾಯನ ಆಭರಣವಂ ಬೊಕ್ಕಸದಲ್ಲಿ ಶಕಟದಾಸನು ಕಟ್ಟಿಸಿದನು.

ಆ ಸಮಯದಲ್ಲಿ ರಾಕ್ಷಸನು ಹೀಗೆಂದು ನಿಶ್ಚೈಸುತಲಿದ್ದನು : "ಈಗ ನಮ್ಮಿಂದ

ಆಜ್ಞಪ್ತನಾಗಿ ಇರುವ ಕರಭಕನೆಂಬ ಚಾರನು ಪಾಟಲೀಪುರವಂ ಸೇರಿ, ನಾವು ಹೇಳಿ ದರ್ಥವಂ ಸ್ತುತಿಪಾಠಕರಿಗೆ ಹೇಳಿದ ಬಳಿಕ ಸಭೆಯಲ್ಲಿ ಚಂದ್ರಗುಪ್ತ ಚಾಣಕ್ಯರಿಗೆ ವಾಕ್ಕಲಹವುಂಟಾದರೆ, ಆ ಸಮಯದಲ್ಲಿ ಸ್ತುತಿಪಾಠಕರು ಸ್ತುತಿಪದ್ಯಗಳಿಂದ ಅವರಿರ್ವ ರಿಗೆ ಪರಸ್ಪರವಾಗಿ ಮನಸ್ತಾಪ ಹೆಚ್ಚುವಂತೆ ಮಾಡಿಯಾರು. ಈ ಕರಭಕನು ಹೋಗಿ ಸ್ತುತಿ ಪಾಠಕರಂ ಕಂಡು ಹೇಳುವದಕ್ಕಿಂತಲೂ ಮುಂಚಿತವಾಗಿಯೇ ಚಂದ್ರಗುಪ್ತ ಚಾಣಕ್ಯರಿಗೆ ವಾಕ್ಕಲಹವುಂಟಾಗಿದ್ದರೆ, ಈ ಕರಭಕನ ಶ್ರಮವು ವ್ಯರ್ಥವಾಗುವದು. ಹಾಗಾದರೂ ಸಕಲಜನವರಿಯುವಂತೆ ತನ್ನ ಆಜ್ಞೆಗೆ ಭಂಗವಂ ಮಾಡಿದ ಚಾಣಕ್ಯನಲ್ಲಿ ಅಲಕ್ಷ್ಯತೆಯಿಂದ ಚಂದ್ರಗುಪ್ತನು 'ತನ್ನ ರಾಜ್ಯವು ತನ್ನ ಕೈವಶವಾಗಿ ಎಲ್ಲರಿಗೂ ತಾನರಸಾದ ಬಳಿಕ ಯಾರಿಂದ ತನಗೆ ಆಗತಕ್ಕದ್ದೇನು ?' ಎಂದು ತಿಳಿದು ಇದ್ದಾನು. ಚಾಣಕ್ಯನಾದರೋ 'ತಾನು ಮಾಡಿದ್ದ ಪ್ರತಿಜ್ಞೆಯಂ ನಿರ್ವಹಿಸಿಕೊಂಡ ಬಳಿಕ ಇನ್ನು ಯಾವದು ಹೇಗಾದ ರಾಗಲಿ' ಎಂದು ಚಂದ್ರಗುಪ್ತನಲ್ಲಿ ಉಪೇಕ್ಷೆಯಂ ಮಾಡಿ ಇದ್ದಾನು. ಯಾವ ರೀತಿಯಿಂ ದಾಗಲಿ ಅವರಿರ್ವರಿಗೆ ಅನುರಾಗ ತಪ್ಪಿ ಮನಸ್ತಾಪವುಂಟಾಗಿರುವ ಈ ಸಮಯದಲ್ಲಿ ಮಲಯಕೇತುಸಮೇತನಾಗಿ ನಾನು ದಂಡೆತ್ತಿ ಹೋದರೆ, ಕಾರ್ಯವು ನನ್ನ ಕೈವಶವಾಗುವದು" ಎಂದು ರಾಕ್ಷಸನು ನಿಶ್ಚೈಸುತ್ತಿದ್ದನು.

ಹೀಗಿರುತ್ತಿರಲು, ಪಾಟಲೀಪುರದಲ್ಲಿ ಚಂದ್ರಗುಪ್ತನು ತನ್ನ ಆಜ್ಞೆ ಮೇರೆಗೆ ಶೃಂಗರಿಸಿ ಶೋಭಿಸುತ್ತಿರುವ ತನ್ನ ಪುರದ ವೈಭವವಂ ನೋಡಲಿಚ್ಛೈಸಿದವನಾಗಿ, ಸುಗಾಂಗವೆಂಬ ಪ್ರಾಸಾದಮಾರ್ಗವಿಡಿದು ಮಿತಪರಿವಾರಯುಕ್ತನಾಗಿ ಬಂದು, ಅಲ್ಲಿ ರಾಜಯೋಗ್ಯವಾದ ಪೀಠದಲ್ಲಿ ಕುಳಿತು, ನಾಲ್ಕು ದಿಕ್ಕುಗಳಂ ನೋಡಲು, ಪುರದ ವೀಧಿಗಳೂ ಪ್ರಾಸಾದಗಳೂ ಅಲಂಕೃತಗಳಾಗದೆ ಎಂದಿನಂತೆ ಇರುವದಂ ನೋಡಿ, ಸಮೀಪದಲ್ಲಿ ನಿಂತಿರುವ ಅವಸರ ದವನಂ ನೋಡಿ,

"ಎಲೈ ವೈತಾಳಿಕನೇ, 'ಈ ಪುರದಲ್ಲಿ ಕೌಮುದೀಮಹೋತ್ಸವ ನಡೆಯುವ ನಿಮಿತ್ತ ರಾಜಬೀದಿಗಳು ಅಲಂಕರಿಸಲಿ, ಜನರೆಲ್ಲರೂ ಹರುಷಯುಕ್ತರಾಗಿ ಸಕಲವೈಭವದಿಂದ ನಮ್ಮಂ ಕಾಣುವದಕ್ಕೆ ಬರಲಿ' ಎಂದು ನಾವು ಆಜ್ಞಾಪಿಸಿದಂ[೧]ತೆ ಒಂದನ್ನೂ ನಡಸಿದಂತೆ[೧] ಕಾಣಿಸುವುದಿಲ್ಲ. ಈ ಪುರದಲ್ಲಿ ಇರುವ ಜನರು ನಮ್ಮ ಆಜ್ಞಾನುಸಾರವಾಗಿ ನಡೆದುಕೊಳ್ಳು ವರೋ, ಏನು ?" ಎನಲು, ಆ ಮಾತಿಗೆ ವೈತಾಳಿಕನು ಕೈಮುಗಿದು,

"ಜೀಯಾ, ಸ್ವಾಮಿಯವರ ಆಜ್ಞೆಯಂ ಮೀರಿ ನಡೆಯುವುದಕ್ಕೆ ಲೋಕದಲ್ಲಿ ಮತ್ತೊಬ್ಬ ರಿಗೆ ಸಾಮರ್ಥ್ಯವೆಂದರೇನು ? ಬಿನ್ನೈಸುವದಕ್ಕೆ ಭಯಪಡುವೆವು" ಎನಲು, ಆ ವಾಕ್ಯದ ಭಾವವಂ ತಿಳಿದು, "ಹಾಗಾದರೆ, ಈ ಉತ್ಸವವಂ ಮಾಡ ಕೆಲಸವಿಲ್ಲವೆಂದು ಯಜಮಾನ ರಾದ ಚಾಣಕ್ಯರ ಅಪ್ಪಣೆಯಾಗಿ ಇದೆಯೋ, ಏನೋ ?" ಎಂದು ಕೇಳಲು, "ಬುದ್ಧಿ, ಅಹುದೆಂ"ದು ವೈತಾಳಿಕನು ವಿಜ್ಞಾಪಿಸಲು,

ಆಗ ಚಂದ್ರಗುಪ್ತನು ತನ್ನ ಮನದಲ್ಲಿ ಹೀಗೆಂದು ಆಲೋಚಿಸುತ್ತಿದ್ದನು : "ಸಕಲ ರಾಷ್ಟ್ರದಲ್ಲಿಯೂ ನನ್ನ ಆಜ್ಞೆಯು ಅವಿಚ್ಛಿನ್ನವಾಗಿ ನಡೆಯಬೇಕೆಂದು ನಮ್ಮ ಯಜಮಾನ

---

೧. ತೆ (ಕ)

ರಾದ ಚಾಣಕ್ಯರು ತಮ್ಮ ಚಿತ್ತದಲ್ಲಿ ನಿಶ್ಚೈಸಿ, ಮಹಾಸಾಹಸವಂ ಮಾಡಿ, ನನ್ನ ಶತ್ರುಗಳಂ ನಿಗ್ರಹಿಸಿ, ಈ ಮಹಾರಾಜ್ಯಕ್ಕೆ ನಾನೇ ಅಧಿಪತಿಯೆಂದೆನಿಸಿ, ನನ್ನ ರಾಜ್ಯವಂ ಸ್ವತಂತ್ರದಿಂದ 'ನೀನೇ ವಿಚಾರಿಸೆಂ'ದು ನೇಮಿಸಿದ ಬಳಿಕ ಅವರ ಆಜ್ಞಾನುಸಾರವಾಗಿಯೇ ರಾಜ್ಯ ವಿಚಾರವಂ ಮಾಡುವದಂ ತಿಳಿದು, ನನ್ನ ಆಜ್ಞಾಭಂಗವಂ ಏನು ನಿಮಿತ್ತ ಮಾಡಿಸಿದರೋ ತಿಳಿಯಕೂಡದು.

ತಾವು ಸಕಲ ಆಶೆಯಂ ತ್ಯಜಿಸಿ ವಿರಕ್ತರಾಗಿ ಆರ್ಜಿಸುವ ತಪಸ್ಸಂ ನಿಲ್ಲಿಸಿ, ನಾನು ಮಾಡುವ ರಾಜ್ಯವಿಚಾರವಂ ನೋಡಿ, ತಾವು ವಹಿಸಿದ ಕಾರ್ಯವು ಸಫಲವಾಯಿತೆಂದು ಸಂತೋಷಪಡುವ ಅಭಿಜ್ಞರಾದ ನಮ್ಮ ಯಜಮಾನರಿಗೆ ನನ್ನಲ್ಲಿ ಎಂದಿಗೂ ಅಸೂಯ ವೆಂಬುವದು ಬರಲಾರದು ;

ಮತ್ತು ನನ್ನ ಆಜ್ಞಾಭಂಗವಂ ಮಾಡಿದುದುರಿಂದ ತಮಗೂ ನನಗೂ ಮನಸ್ತಾಪ ವುಂಟಾದುದೆಂಬ ಅರ್ಥವು ಲೋಕಪ್ರಸಿದ್ಧವಾಗಿ ಶತ್ರುಗಳ ಕಿವಿಗೆ ಬಿದ್ದರೆ, ಇಂಥಾ ಸಮಯವಂ ನೋಡಿ ರಾಕ್ಷಸನು ಮಲಯಕೇತುವಂ ಕಟ್ಟಿಕೊಂಡು ದಂಡೆತ್ತಿ ಬೇಗ ಬರಲೆಂದು, ಹಾಗೆ ಬಂದರೆ ನಿಗ್ರಹಿಸಬೇಕೆಂಬ ಬುದ್ಧಿಯಿಂದ ಹೀಗೆ ಆಜ್ಞಾಭಂಗವಂ ಮಾಡಿ ಇದ್ದಾರೆಂದರೆ, ಪರಾಜಿತನಾಗಿ ಓಡಿಹೋಗಿ ಇರುವ ಶತ್ರುವನ್ನು ತನ್ನ ಮೇಲೆ ದಂಡೆತ್ತಿಕೊಂಡು ಬರುವಂತೆ ಮಾಡಿಕೊಳ್ಳುವ ಪುರುಷನು ಅಪ್ರಬುದ್ಧನಾದುದರಿಂದ ಈ ಅರ್ಥವು ನಮ್ಮ ಯಜಮಾನರ ಮನೋಗತವಲ್ಲ ;

ಮತ್ತು ನಮ್ಮಿಂದ ತಿಳಿಯದೆ ಅಪರಾಧವುಂಟಾದರೆ, ರಹಸ್ಯದಲ್ಲಿ ಬುದ್ಧಿಯಂ ಕಲಿಸು ವರಲ್ಲದೆ ಸಕಲಜನ ತಿಳಿಯುವಂತೆ ನನ್ನ ಆಜ್ಞಾಭಂಗವಂ ಮಾಡರು.

ಮತ್ತೇನೆಂದರೆ, ಅಜೇಯರಾದ ನಂದರಂ ಸ್ವಲ್ಪಯತ್ನದಲ್ಲೇ ನಿಗ್ರಹಿಸಿದ ಚಾಣಕ್ಯರು ಈಗ ನನ್ನಲ್ಲಿ ವೈರವಂ ಎಣಿಸಿ ಇರುವ ಮಲಯಕೇತು ರಾಕ್ಷಸರಂ ಸಹ ನಿಗ್ರಹಿಸಲೆಣಿಸಿ ನನಗೂ ತಮಗೂ ವಿರೋಧವುಂಟಾಗಿ ಇದೆ ಎಂಬ ಅರ್ಥವನ್ನು ಶತ್ರುಸೇನೆಯಲ್ಲಿ ಪ್ರಸಿದ್ಧಿ ಆಗುವಂತೆ ಮಾಡಿ, ಯಾವ ಉಪಾಯದಿಂದಲೋ ಶತ್ರುವಂ ನಿಗ್ರಹಿಸುವ ನಿಮಿತ್ತವಾಗಿ ಉತ್ಸವವಂ ನಿಲ್ಲಿಸಿ ಇದ್ದಾರು. ಯಜಮಾನರು ಮಾಡಿದ ಸಂಕಲ್ಪವೆಲ್ಲವೂ ನನ್ನ ಕಾರ್ಯಕ್ಕೆ ಉಪಯೋಗಿಸುವದು. ಅವರ ಮನೋನುಗುಣವಾಗಿ ನಡೆದುಕೊಳ್ಳುವದೇ ನನಗೆ ಶ್ರೇಯ ಸ್ಕರವು. ಹೀಗಾದರೂ ಮೊಕತ ಚರ್ಚೆಯಂ ಮಾಡಿದಲ್ಲದೆ ವಿವರವಾಗದೆಂದು ನಿಶ್ಚೈಸಿ, ಚಂದ್ರಗುಪ್ತನು ಪುನಃ ವೈತಾಳಿಕನಂ ನೋಡಿ,

"ಎಲೈ ಕುಮುದಕನೇ, ನಮ್ಮ ಯಜಮಾನರಿಗೆ 'ಶಿರಸ್ಸಿನಿಂದ ನಮಸ್ಕರಿಸಿದೆನೆಂ'ದು ಹೇಳಿ, 'ನಿಮ್ಮಂ ನೋಡಲಿಚ್ಛೈಸುತಲಿದಾನೆ'ಯೆಂದು ಬಿನ್ನೈಸಿ, ಕಾರ್ಯಗೌರವವಿಲ್ಲದೆ ಬಂಧರೆ ಇಲ್ಲಿಗೆ ಕರೆತರುವವನಾಗು" ಎಂದು ಹೇಳಲು, 'ಮಹಾಪ್ರಸಾದ'ವೆಂದು ಕೈ ಮುಗಿದು, ವೈತಾಳಿಕನು ಬಂದು ಸಮಿತ್ಕುಶಾಸ್ತರಣ ದಾರುಪಾತ್ರ ಕೃಷ್ಣಾಜಿನ ಕಂದಮೂಲ ಗಳಿಂದ ಶೋಭಿತಮಾಗಿ, ಋಷಿಗಳ ಆಶ್ರಮದಂತೆ ಕಂಗೊಳಿಸುತಲಿರುವ ಚಾಣಕ್ಯರ ಪರ್ಣಶಾಲೆಯಂ ನೋಡಿ ವಿಸ್ಮಿತನಾಗಿ, "ಈ ಚಾಣಕ್ಯನು ಆಶಾಪಾಶಮುಕ್ತನಾದುದ ರಿಂದಲೇ ಪ್ರಭುವಾದ ಚಂದ್ರಗುಪ್ತನಂ ಲಕ್ಷೀಕರಿಸದೆ, ತನ್ನ ಕುಮಾರಕನಂ ಕಂಡಂತೆ, 'ಎಲೈ ಅರಸೇ, ಬಾರೈ' ಎನ್ನುತ್ತ ಮಾತನಾಡಿಸುವನು. ವಿರಕ್ತರಾದವರಿಗೆ ಯಾವದು

ವಿಷಯವಾದೀತು ?" ಎನ್ನುತ ಯೋಚಿಸುತ ಬಂದು ಪ್ರಜ್ವಲಿಸುತಲಿರುವ ಅಗ್ನಿಯಂತೆ ಕುಶಾಸನದಲ್ಲಿ ಕುಳಿತು ಶಿಷ್ಯರಿಗೆ ಧರ್ಮೋಪದೇಶವಂ ಮಾಡುತಲಿರುವ ಚಾಣಕ್ಯನಿಗೆ ಕೈಮುಗಿದು 'ಜಯಾ' ಎಂದು ದೂರದಲ್ಲಿಯೇ ನಿಂತಿರಲು,

"ಏನೈ ವೈತಾಳಿಕನೇ ?" ಎಂದು ಕೇಳಲು, "ಸ್ವಾಮೀ ಮಹಾತ್ಮರಾದ ಯಜಮಾನರೇ, ಸಕಲಸುರಾಸುರವಂದ್ಯಮಾನನಾಗಿ ತ್ರೈಲೋಕ್ಯಗುರುವಾದ ಕಪರ್ದೀಶ್ವರನೆಂಬ ಇಷ್ಟ ದೇವರಿಗೆ ಶಿರವಂ ಬಾಗಿ ನಮಸ್ಕರಿಸುವಂತೆ ಚಂದ್ರಗುಪ್ತ ಮಹಾರಾಯರು ತಮ್ಮ ಪಾದಾರವಿಂದಂಗಳಿಗೆ ಅಭಿವಂದಿಸಿದರು. ಇಲ್ಲಿ ಕಾರ್ಯಗೌರವವಿಲ್ಲದಿದ್ದರೆ, ತಮ್ಮ ದರ್ಶನ ವಾಗಬೇಕೆಂದು ಸುಗಾಂಗವೆಂಬ ಪ್ರಾಸಾದದಲ್ಲಿ ಮುಹೂರ್ತಮಾಡಿ ಇದ್ದಾರೆ, ಬುದ್ಧೀ" ಎನಲು, "ಆತ ಮಾಡಿದ ನಮಸ್ಕಾರಗಳು ಈಶ್ವರನಿಗೆ ಸಮರ್ಪಣವಾಗಲಿ ; ಏನೈ ವೈತಾಳಿಕನೇ, ಅರಸು ನಮ್ಮಂ ಕರೆಕಳುಹಿಸಿ ಇದ್ದಾನೆಯೇ ? ಹಾಗಾದರೆ ಕೌಮುದೀ ಮಹೋತ್ಸವವಂ ನಾವು ನಿಲ್ಲಿಸಿದೆವೆಂದು ಅರಸಿಗೆ ಯಾರೋ ತಿಳುಹಿಸಿ ಇರಬೇಕು" ಎನಲು, "ಬುದ್ಧಿ, ಯಾರೂ ಅರಿಕೆ ಮಾಡಲಿಲ್ಲ. ಸುಗಾಂಗ ಪ್ರಾಸಾದಕ್ಕೆ ಪ್ರಭುಗಳು ತಾವೇ ಬಂದು, ಉತ್ಸವರಹಿತಮಾದ ಪುರವಂ ನೋಡಿ ತಾವೇ ತಿಳಿದುಕೊಂಡಂತೆ ತೋರುತ್ತಲಿದೆ" ಎನಲು,

"ಎಲಾ, ನೀವೆಲ್ಲರೂ ಅರಸಿಗೆ ಏನೋ ಬೋಧಿಸಿ, ನನ್ನಲ್ಲಿ ಆತನಿಗೆ ಇದ್ದ ಅನುರಾಗವಂ ತಪ್ಪಿಸಿದಂತೆ ತೋರುತ್ತೆ. ಆಗಲದಕ್ಕೇನು" ಎನಲು, ಆ ಮಾತಿಗೆ ವೈತಾಳಿಕನು ಭಯದಿಂದ ತಲೆವಾಗಿ ನಿಂತಿರಲು, "ಎಲೈ ಅವಸರದವನೇ, ರಾಜಪರಿವಾರಕ್ಕೆ ನನ್ನಲ್ಲಿ ದ್ವೇಷವುಂಟಾಗಿ ಇರುವಂತೆ ತೋರುತಲಿದೆ. ಹಾಗಾದರೂ ಅರಸಂ ಕಂಡು ಬರುವೆವೆಂ"ದು ಚಾಣಕ್ಯರು ಎದ್ದು ಬಂದು, ಸುಗಾಂಗ ಪ್ರಾಸಾದವನ್ನೇರಿ ಅರಸುಗಳಿಂದ ಉಪಾಸ್ಯಮಾನನಾಗಿ ಭದ್ರಪೀಠದಲ್ಲಿ ಕುಳ್ಳಿರುವ ಚಂದ್ರಗುಪ್ತನಂ ದೂರದಿಂದಲೇ ನೋಡಿ, ಸಂತೋಷಪಡುತ್ತ ಬರುತ್ತಿರಲು, ತನ್ನ ಸಮೀಪಕ್ಕೆ ಬರುವ ಚಾಣಕ್ಯನಂ ನೋಡಿ, ಪೀಠದಿಂದೆದ್ದು, ಆತನ ಪಾದಕ್ಕೆ ನಮಸ್ಕರಿಸಲು,

"ಅಯ್ಯ ಅರಸೇ, ಸರ್ವೋತ್ಕೃಷ್ಟನಾಗಿ ಆಯುಷ್ಮಂತನಾಗಿ ಇರು" ಎಂದು ಆಶೀರ್ವಾದವಂ ಮಾಡಲು, "ಸ್ವಾಮಿ, ವೇದಸದೃಶಮಾದ ತಮ್ಮ ಆಶೀರ್ವಾದದಿಂದಲೇ ಅದೇ ಅರ್ಥವು ಅನುಭವಿಸಲ್ಪಡುತ್ತಲಿದ್ದೇನೆ. ಕುಳ್ಳಿರಬಹುದೆಂ"ದು ಸ್ವರ್ಣಪೀಠದಲ್ಲಿ ಚಾಣಕ್ಯನಂ ಕುಳ್ಳಿರಿಸಿ, ಯಥಾಯೋಗ್ಯಮಾಗಿ ಎಲ್ಲರೂ ಕುಳ್ಳಿರಲು,

ಆಗ ಚಾಣಕ್ಯನು ಚಂದ್ರಗುಪ್ತನಂ ನೋಡಿ, "ಎಲೈ ಕುಮಾರಕನೇ, ಯಾವ ನಿಮಿತ್ತ ನಮ್ಮಂ ಕರೆಕಳುಹಿಸಿದವನಾದೆ ?" ಎನಲು, "ಸ್ವಾಮಿಯವರ ದರ್ಶನದಿಂ ಧನ್ಯನಾಗುವೆನೆಂದು ಇಚ್ಛೈಸಿದೆನು" ಎನಲು, "ಎಲೈ ಅರಸೇ, ಅತಿವಿನಯವಂತಿರಲಿ ; ನಿಮಿತ್ತವಿಲ್ಲದೆ ಕರೆಕಳುಹಿಸುವದುಂಟೇ ?" ಎನಲು, "ಸ್ವಾಮೀ, ಕೌಮುದೀ ಉತ್ಸವವಂ ನಿಲ್ಲಿಸಿದುದಕ್ಕೆ ಪ್ರಯೋಜನವೇನು ?" ಎನಲು, "ಹಾಗಾದರೆ, ಆಕ್ಷೇಪಿಸುವದಕ್ಕೆ ಮುಖ್ಯವಾಗಿ ನಮ್ಮಂ ಕರೆಕಳುಹಿಸಿದೆಯೋ?" ಎನಲು, 'ಸ್ವಾಮೀ, ಅದಲ್ಲ ; ಅರಿಕೆಮಾಡಿಕೊಳ್ಳುವದಕ್ಕೆ' ಎನಲು, "ಎಲೈ ಅರಸೇ, ಸ್ವತಂತ್ರಿಗಳಾದ ಗುರುಗಳಿಗೆ ಅರಿಕೆ ಮಾಡಬೇಕಾದರೆ ಭೃತ್ಯರಂ ಕಳುಹಿಸಿ ನಿರ್ಬಂಧದಿಂದ ಕರೆಕಳುಹಿಸಿದವರುಂಟೇ ?" ಎನಲು, "ಸ್ವಾಮೀ, ನಿರರ್ಥಕವಾಗಿ

ಉತ್ಸವವಂ ನಿಲ್ಲಿಸುವರಲ್ಲ, ತಿಳಿಯಬೇಕೆಂದು ಕರೆಕಳುಹಿಸಿದೆನು" ಎನಲು, "ಎಲೈ ಅರಸೇ, 'ಚಾಣಿಕ್ಯನು ಸ್ವಪ್ನದಲ್ಲಿಯಾದರೂ ಪ್ರಯೋಜನವಿಲ್ಲದೆ ಕಾರ್ಯಾರಂಭವಂ ಮಾಡುವನಲ್ಲ'ವೆಂಬ ಅರ್ಥವು ನಿನಗೆ ತಿಳಿದೇ ಇದೆಯಷ್ಟೆ" ಎನಲು, "ಸ್ವಾಮೀ, ಅದೇ ಕಾರ್ಯವಂ ತಿಳಿಯಲೋಸುಗ ಕರೆಕಳುಹಿಸಿದೆ" ಎನಲು, "ಎಲೈ ಅರಸೇ ಕೇಳು, ದಂಡನೀತಿ ಶಾಸ್ತ್ರದಲ್ಲಿ ಸ್ವಾಯತ್ತವೆಂದೂ ಸಚಿವಾಯತ್ತವೆಂದೂ ಉಭಯಾಯತ್ತವೆಂದೂ ಸಿದ್ಧಿಗಳು ಮೂರು ತೆರನಾಗಿ ಹೇಳಿ ಇಹವು. ಹಾಗೆ ಮಂತ್ರಿ ಅಧೀನ ಸಿದ್ಧಿ ಉಳ್ಳ ನಿನಗೆ ಪ್ರಯೋಜನ ವಿಚಾರ ಯಾತಕ್ಕೆ ? ಏನು ಇದ್ದರೂ ನಾವೇ ವಿಚಾರಿಸಿಕೊಳ್ಳುವೆವು" ಎನಲು, ಆ ಮಾತಿಗೆ ಅರಸು ಕೋಪದಿಂ ಮುಖವಂ ಹಿಂದಿರುಗಿಸಲು,

ಆಗ ಇದೇ ಸಮಯವೆಂದು ಮೊದಲು ರಾಕ್ಷಸನ ಚಾರನಿಂದ ನೇಮಿಸಿದ್ದ ಕಲಶಕ ವಿಜಯರೆಂಬ ಸ್ತುತಿಪಾಠಕರು ಬಂದು, ಅರಸಿನ ಮುಖಾಂಗದಲ್ಲಿ ನಿಂತು, ಸ್ತುತಿಪದ್ಯಂ ಗಳನ್ನಾರಂಭಿಸಿ ಹೊಗಳುತಲಿದ್ದರು. ಹೇಗೆಂದರೆ,

"ಜೀಯಾ, ಮಾನಶಾಲಿಗಳಾದ ಭೂಪತಿಗಳೆಂಬ ತಾರಾಗಣಮಧ್ಯದಲ್ಲಿ ಚಂದ್ರನಂತೆ ಶೋಭಿಸುವ ಚಂದ್ರಗುಪ್ತ ಸಾರ್ವಭೌಮರೇ" ಎಂದು ವಿಜಯನೆಂಬ ವಂದಿಯು ಹೊಗ ಳಲು, "ಜೀಯಾ, ಪ್ರಬಲಮದಗಜಗಳ ಮೇಲೆ ಕೈಮಾಡುವ ಸಿಂಹದ ಕೋರೆದಾಡೆಗಳಂ ಬಲಹೀನಮೃಗವು ಕೀಳುತಲಿದ್ದರೆ, ಅದರ ಅಪಮಾನವಂ ಹೇಗೆ ಸಹಿಸಲಾರದೋ ಅದೇ ರೀತಿಗೆ ಭೂಪತಿಯು ಸಾಧಾರಣರಿಂದಾಗುವ ಆಜ್ಞಾಭಂಗವಂ ಸಹಿಸಲಾರನು ; ಮತ್ತು ದಿವ್ಯವಸ್ತ್ರಭೂಷಣಗಳಿಂದ ಭೂಷಿತನಾದ ಮಾತ್ರದಿಂದಲೇ ಪುರುಷನು ಪ್ರಭುವೆನಿಸಿ ಕೊಳ್ಳಲಾರನು. ಪರರಿಂದ ಉಲ್ಲಂಘಿಸುವದಕ್ಕೆ ಅಶಕ್ಯವಾದ ಆಜ್ಞೆಯಿಂದಲೇ ಅಲಂಕೃತ ರಾದ ನಿಮ್ಮಂಥಾ ಭೂಪತಿಗಳೇ ಪ್ರಭುವೆನಿಸಿಕೊಳ್ಳುವರು" ಎಂದು ಕಲಶಕನೆಂಬ ವಂದಿಯು ಹೊಗಳುತ್ತಿರಲು,

ಅದಂ ಕೇಳಿ, "ದುಷ್ಟನಾದ ರಾಕ್ಷಸನು ನನಗೂ ಚಂದ್ರಗುಪ್ತನಿಗೂ ವಾಕ್ಕಲಹ ಬಂದ ಸಮಯದಲ್ಲಿ ನಮ್ಮಿರ್ವರಿಗೆ ಮನಸ್ತಾಪ ಹೆಚ್ಚುವಂತೆ ಸ್ತುತಿಪದ್ಯಂಗಳಿಂ ಹೊಗಳುವಂತೆ ಈ ವಂದಿಗಳಿಗೆ ನೇಮಿಸಿ ಇದ್ದಾನು. ಇದರಿಂದ ಹೆಚ್ಚುವ ಮನಸ್ತಾಪದಿಂದ ನಾನು ಚಂದ್ರಗುಪ್ತನನ್ನು ಉಪೇಕ್ಷಿಸಿದರೆ, ಇವನಂ ತಾನು ಜಯಿಸೇನು ಎಂದು ಯತ್ನವಂ ಮಾಡಿ ಇದ್ದಾನು. ಹೀಗಾದರೂ ಆ ರಾಕ್ಷಸನು ಎಲ್ಲಿ ಹೋದಾನು ? ತನ್ನ ಕೈವಶನೇ ಆದಾನು" ಎಂದು ಚಾಣಿಕ್ಯನು ಆಲೋಚಿಸುತ್ತಿರಲು, ಆ ಸಮಯದಲ್ಲಿ ಚಂದ್ರಗುಪ್ತನು ವೈತಾಳಿಕನಂ ನೋಡಿ,

"ಎಲೈ ಕುಮುದಕನೇ, ಬುದ್ಧಿವಂತರಾದ ಈ ಸ್ತುತಿಪಾಠಕರಿಗೆ ಉಚಿತವಾಗಿ [೧]ಸಹಸ್ರ ಸಹಸ್ರ[೧] ಮೊಹರಗಳಂ ಬೊಕ್ಕಸದಿಂದ ಕೊಡಿಸು" ಎನಲು, ಅದಂ ಕೇಳಿ ಚಾಣಿಕ್ಯನು ಹುಬ್ಬುಗಂಟಿಕ್ಕಿ, ಚಂದ್ರಗುಪ್ತನಂ ಕುರಿತು,

"ಎಲೈ ವೃಷಳನೇ, ಅಕಾರಣವಾದ ಇಂಥಾ ಪೋಲುವೆಚ್ಚವಂ ಮಾಡಕೂಡದು" ಎಂದು ಹೇಳಿ, "ಎಲೈ ವೈತಾಳಿಕನೇ, ಧನವನ್ನಾರ್ಜಿಸುವ ಶ್ರಮವು ಆರ್ಜಿಕನಿಗೆ ತಿಳಿಯುವದಲ್ಲದೆ

---

೧. ಸಹಸ್ರ (ಕ)

ಈ ಅರಸು ಏನು ಬಲ್ಲನು ? ಈ ವಂದಿಗಳಿಗೆ ದ್ರವ್ಯವಂ ಕೊಡ ಕೆಲಸವಿಲ್ಲ, ನಿಲ್ಲಿಸಿಬಿಡು" ಎನಲು, ಅದಂ ಕೇಳಿದ ಅರಸು,

"ಇದೇನು ದೇವರು, ಯಾವ ನನ್ನ ಮಾತುಗಳಂ ಹೀಗೆ ಸಾಗಲೀಸದೆ ಅಡ್ಡಿಮಾಡುವಿರಿ? ಹೀಗಾದರೆ ನನಗೆ ಇದು ಪ್ರಭುತ್ವವಲ್ಲ, ಕಾರಾಗೃಹವಾಸವೆಂದು ತಿಳಿಯಬೇಕು" ಎನಲು, ಆ ಮಾತಿಗೆ "ಎಲೈ ವೃಷಳನೇ, ನಿನ್ನ ಭುಜಶೌರ್ಯದಿಂದ ಆರ್ಜಿತಮಲ್ಲದೆ ಇರುವ ಈ ರಾಷ್ಟ್ರವನ್ನನುಭವಿಸುತ್ತಲಿರುವ ನಿನಗೆ ಆ ಅರ್ಥವೇ ಸಿದ್ಧವೆಂದು ಹೇಳಬೇಕು. ಇದಂ ಅಪಮಾನವೆಂದು ಸಹಿಸಲಾರದಿದ್ದರೆ ಈ ರಾಜ್ಯಭಾರವಂ ನೀನೇ ನಿರ್ವಹಿಸಿಕೊಳ್ಳುವನಾಗು" ಎನಲು, "ಸ್ವಾಮೀ, ಹಾಗೇ ಆಗಲಿ ; ನನ್ನ ರಾಜ್ಯವಿಚಾರವಂ ನಾನೇ ನಿರ್ವಹಿಸಿಕೊಳ್ಳುತ್ತಲಿದೇನೆ" ಎನಲು, "ಎಲೈ ವೃಷಳನೇ, ಹಾಗಾದರೆ ನನಗೆ ಭಾರ ಕಳೆಯಿತು ; ಹಾಗೇ ಮಾಡಿಕೋ ; ನಮ್ಮ ಕೆಲಸದಲ್ಲಿ ಜಾಗ್ರತೆಯಾಗಿ ಇರುವೆವು" ಎನಲು,

"ಆದರೆ ಉತ್ಸವವಂ ನಿಲ್ಲಿಸಿದ್ದಕ್ಕೆ ಪ್ರಯೋಜನವೇನೆಂದು ನಾನು ಕೇಳಿದ್ದೇ ತಪ್ಪಾಯಿತೇ ?" ಎನಲು, "ಎಲೈ ವೃಷಳನೇ, ಉತ್ಸವವಂ ಮಾಡದಿದ್ದರೆ ಯಾವ ಕಾರ್ಯವು ಕೆಡುವುದೆಂದು ಕೇಳಿದ್ದಕ್ಕೆ ದೋಷವುಂಟೋ ಏನು ?" ಎನಲು, "ಸ್ವಾಮೀ, ನನ್ನ ಆಜ್ಞಾವಚನವು ಸಫಲವಾಗುವದೇ ಪ್ರಯೋಜನ"ವೆನಲು, "ಎಲೈ ವೃಷಳನೇ, ನಿನ್ನ ಆಜ್ಞೆ ಸಾಗದಂತೆ ಮಾಡೋಣವೇ ನಮಗೆ ಪ್ರಥಮಪ್ರಯೋಜನವು ;

ಅದು ಏನೆಂದರೆ, ಚತುಸ್ಸಮುದ್ರಮಧ್ಯಭೂಭಾಗಂಗಳನ್ನಾಳುತ್ತಿರುವ ರಾಜಮಂಡಲಗಳು ಕೋಮಲತರವಾದ ಪರಿಮಳಭರಿತಗಳಾದ ಪುಷ್ಪಮಾಲೆಗಳಂ ಶಿರಸ್ಸಿನಿಂದ ವಹಿಸುವಂತೆ ಯಾವ ನಿನ್ನ ಆಜ್ಞಾವಚನಗಳಂ ತಮ್ಮ ಶಿರಸ್ಸಿನಿಂದ ವಹಿಸುತ್ತಾರೆಯೋ ಅಂಥಾ ನಿನ್ನ ಆಜ್ಞೆಯು ನನ್ನಲ್ಲಿ ಸಾಗದೆ ಇರುವದರಿಂದ ಈ ನಿನ್ನ ಪ್ರಭುತ್ವವು ವಿನಯದಿಂದಲಂಕೃತವಾಗಿ ನಿನಗೆ ಕೀರ್ತಿಯನ್ನುಂಟುಮಾಡುತ್ತಲಿದೆ. ಅದರಿಂದ ನಿನ್ನ ಆಜ್ಞೆಯು ನನ್ನಲ್ಲಿ ಸಾಗದ ಇರುವದೆಂಬುವದೇ ನಿನಗೆ ಶ್ರೇಯಸ್ಕರವು. ಹೀಗೆಂದು ತಿಳಿಯುವನಾಗು. ಎರಡನೆಯ ಪ್ರಯೋಜನವೇನೆಂದರೆ, ಇಕೋ ಈ ಕಾಗದವಂ ಓದಿಕೊಂಡು ತಿಳಿದುಕೊಳ್ಳುವನಾಗು" ಎಂದು ತನ್ನ ಸೊಂಟದಲ್ಲಿ ಸೆಕ್ಕಿ ಇದ್ದ ಭದ್ರಭಟಾದಿಗಳ ಕೈಕಾಗದವಂ ಚಂದ್ರಗುಪ್ತನ ಕೈಯಲ್ಲಿ ಕೊಡಲು, ಅದಂ ನೋಡಿಕೊಳ್ಳುತ್ತಿರಲು, ಅದರ ಒಕ್ಕಣೆಯು,

"ಶ್ರೀಮತು ಚಂದ್ರಗುಪ್ತ ಮಹಾರಾಯರ ಸನ್ನಿಧಿಗೆ, ಭದ್ರಭಟಮುಖ್ಯರಾದ ಸೇನಾಪತಿಗಳು ಬರೆದು ಒಪ್ಪಿಸಿದ ಕಾಗದವೇನೆಂದರೆ, ನಾವೆಲ್ಲರೂ ಕೋಪಿಸಿಕೊಂಡು ಹೋದವರಂತೆ ಈ ಪುರದಿಂದ ಹೊರಟು ದೇಶಾಂತರದಲ್ಲಿ ನಿಮ್ಮ ಕಾರ್ಯದಲ್ಲಿ ಜಾಗರೂಕರಾಗಿ ನಿಮ್ಮಲ್ಲಿ ಭೃತ್ಯಭಾವದಿಂದಲಿರುತ್ತಲಿದೇವೆ" ಎಂದು ಬರೆದಿರುವದಂ ನೋಡಿಕೊಂಡು, ಚಾಣಕ್ಯರಿಗೆ ಚಂದ್ರಗುಪ್ತನಿಂತೆಂದನು :

"ಸ್ವಾಮೀ, ಇದರಲ್ಲಿ ಬರೆದಿರುವ ಸೇನಾಪತಿಗಳಿಗೆ ಇಲ್ಲಿ ಉಪೇಕ್ಷೆವುಂಟಾಗಿ ಹೊರಟು ಹೋಗುವದಕ್ಕೆ ಕಾರಣವೇನು ?" ಎನಲು, ಅದಂ ಕೇಳಿ, "ಈ ಅರಸು ಕಾಗದವಂ ನೋಡಿಕೊಂಡು ರಾಜ್ಯಕಾರ್ಯವಂ ತಿಳಿದವನಾದರೂ ತಿಳಿಯದವನಂತೆ ಕೇಳುವದರಿಂದ ನಮ್ಮ ಮನೋಭಾವವಂ ತಿಳಿದು ನಮಗಿರ್ವರಿಗೂ ವಾಕ್ಕಲಹವು ಇನ್ನೂ ಅಧಿಕವಾಗಲೆಂದು ಅಪೇಕ್ಷಿಸಿದಂತೆ ತೋರುತಲಿದೆ. ಇದಕ್ಕೆ ಯಥಾರ್ಥವಂ ಹೇಳಿದರೆ, ಈ ಸಭೆಯಲ್ಲಿ

ಶತ್ರುಪಕ್ಷದವರಿದ್ದರೆ, ಶತ್ರುಗಳು ತಿಳಿದಂತಾಗುವದು. ಹಾಗೇ ಶತ್ರುಗಳು ಜಾಗ್ರತರಾದರೆ ನಮ್ಮ ಯತ್ನವು ಭಗ್ನವಾದೀತು. ರಹಸ್ಯದಲ್ಲಿ ತಿಳುಹಿಸೋಣವೆಂದರೆ, ಸಭೆಯಲ್ಲಿ ಕಿವಿ ಮಾತುಗಳಂ ಹೇಳಬೇಕಾಗುತ್ತಲಿದೆ. ಇದರಲ್ಲಿ ನಿಪುಣರಾದವರು ಅಧರಸ್ಪಂದದಿಂದಲೂ ಮುಖಚೇಷ್ಟೆಯಂ ನೋಡಿ[ಯೂ] ರಹಸ್ಯಕಾರ್ಯವಂ ಊಹಿಸುವದುಂಟು. ಅದರಿಂ ರಾಜ ಸಭೆಯಲ್ಲಿ ಕಿವಿಮಾತುಗಳನ್ನಾಡುವಣವೂ ಅಂಗಚೇಷ್ಟೆಗಳೂ ಅಸಮಾನರಲ್ಲಿ ಸಂವಾದವೂ ಮಾತನಾಡಿ ನಗುತ್ತ ಮತ್ತೊಬ್ಬರ ನೋಡುವಣವೂ ರಾಜಕಾರ್ಯವಂ ಹೇಳು ವಲ್ಲಿ ಅರ್ಥಾಂತರ ತೋರುವಂತೆ ಮಾತನಾಡುವಣವೂ ಪರಿಹಾಸವಚನಗಳೂ ಎಂಬ ಈ ವಿಕಾರಗಳು ಸಭಾಜನಕ್ಕೆ ಯೋಗ್ಯವಲ್ಲ. ಇವು ಯಶಸ್ಕರವಲ್ಲ. ಅದರಿಂದ ಯಶಸ್ಕರ ವಾಗಿ ತಿಳುಹಿಸುವದಕ್ಕೆ ಸಮಯವಲ್ಲ. ಆದುದರಿಂದ ಈ ಅರಸು ಆಕ್ಷೇಪಿಸಿದ್ದಕ್ಕೆ ಪ್ರಕಾರಾಂತರದಿಂದ ಹೇಳುತ್ತ, ವಾಕ್ಕಲಹವಂ ಹೆಚ್ಚಿಸಿ, ಕೋಪಿಸಿಕೊಂಡವನಂತೆ ಎದ್ದು ಹೋಗಬೇಕೆಂದು ನಿಶ್ಚೈಸಿ, ಆ ಚಂದ್ರಗುಪ್ತನಂ ಕುರಿತು,

"ಎಲೈ ಅರಸೇ, ಭದ್ರಭಟಾದಿ ಸೇನಾಪತಿಗಳು ಇಲ್ಲಿ ಉಪೇಕ್ಷೆಯಂ ಮಾಡಿ ಅನ್ಯತ್ರ ಹೋಗುವದಕ್ಕೆ ಕಾರಣವೇನು ಎಂದು ಕೇಳುವೆಯಾ ? ಗಜಾಧ್ಯಕ್ಷನಾದ ಭದ್ರಭಟನೂ ಅಶ್ವಾಧ್ಯಕ್ಷನಾದ ಪುರುಷದತ್ತನೂ ಇವರಿರ್ವರೂ ಸ್ತ್ರೀ ಮದ್ಯ ದ್ಯೂತಾಸಕ್ತರಾಗಿ ಸೇನಾ ವಿಚಾರವಂ ಮಾಡದೆ ಮತ್ತರಾಗಿ ಇರುವದಂ ಕಂಡು ಅವರ ಅಧಿಕಾರವಂ ತೆಗೆದುದರಿಂ ಈ ಪುರವಂ ಬಿಟ್ಟು ಹೋದರು. ಕುಮಾರಸಂತತಿಯಲ್ಲಿ ಜನಿಸಿದ ರಾಜಸೇನ ಡಿಂಗಿ ರಾತರುಗಳು ಸೇನೆಗಳು ಗಣಿತೆಯಾದಲ್ಲಿ, ಪ್ರಭುತ್ವವು ನೂತನವಾದುದರಿಂದ ಎಂದಿನಂತೆ ಇರಲೀಸದೆ ತಮ್ಮಿಚ್ಛೆ ಬಂದಂತೆ ಮಾಡಿಕೊಂಡಾರೆಂಬ ಶಂಕೆಯಿಂದ ಅಧಿಕವಾದ ಸೇನೆಗಳಂ ತೆಗೆದುಕೊಂಡು ಮಲಯಕೇತುವನ್ನಾಶ್ರಯಿಸಿ ಬದುಕಬೇಕೆಂದು ಹೊರಟು ಹೋದರು. ಬಾಗುರಾಯಣನಾದರೋ, ಪರ್ವತೇಶ್ವರನು ಕಾಲವಾದ ಸಮಯದಲ್ಲಿ ಮಲಯಕೇತುವಿಗೆ ಇಲ್ಲದ್ದು ಸಲ್ಲದ್ದು ಮಾತುಗಳಂ ಹೇಳಿ, ಬೆದರಿಸಿ, ಇಲ್ಲಿಂದ ಅವನಂ ಓಡಿಸಿಕೊಂಡು ಹೋಗಿ, ಅವನಿಗೆ ಆಪ್ತನಾಗಿ ಮಂತ್ರಿಪದದಲ್ಲಿ ಇರುವವನಂತೆ. ಆಡಿದ ಮಾತು ಕೂಡಿ ಬಂದರೆ ಮನುಷ್ಯನು ಎಂದಿನಂತೆ ಇರುವನೇ ? ಲೋಹಿತಾಕ್ಷ ವಿಜಯ ವರ್ಮರುಗಳಾದರೋ ತಮ್ಮ ದಾಯಾದಿಗಳಿಗೆ ನಿಮ್ಮಿಂದ ಉಂಟಾದ ಬಹುಮಾನವಂ ಕಂಡು ಸಹಿಸಲಾರದೆ, ನಿಮ್ಮಲ್ಲಿ ಅಸೂಯಾವಂತರಾಗಿ ಹೋಗಿ ಮಲಯಕೇತುವನ್ನಾ ಶ್ರಯಿಸಿದರು. ಇಲ್ಲಿಂದ ಈ ಸೇನಾಪತಿಗಳು ಹೋಗುವದಕ್ಕೆ ನಿಮಿತ್ತವಿದು. ಹೀಗೆ ಇವರ ದುರ್ಬೋಧನೆಯಿಂದ ಮತ್ತೆ ಕೆಲಬರು ಹೋದರು" ಎಂದು ಚಂದ್ರಗುಪ್ತನು ಕೇಳಿದ ಮಾತಿಗೆ ಚಾಣಕ್ಯನು ಉತ್ತರವಂ ಹೇಳುತ್ತಿರಲು,

"ಸ್ವಾಮೀ, ಈ ಜನಗಳ ಅಪರಾಧವಂ ತಿಳಿದ ಬಳಿಕ, ಹೋಗುತ್ತಿದ್ದರೆ ಅವರಂ ನಿಗ್ರಹಿಸುವದಕ್ಕೆ ಸಾಮರ್ಥ್ಯವಿಲ್ಲದೆ ಉಪೇಕ್ಷಿಸಿದಿರೋ, ಕಾರ್ಯಾರ್ಥವಾಗಿ ಉಪೇಕ್ಷಿಸಿ ದಿರೋ ?" ಎನಲು

"ಏನೈ ಅರಸೇ, ನಮಗೆ ಸಾಮರ್ಥ್ಯವಿಲ್ಲವೆಂದರೇನು ? ಕಾರ್ಯಾರ್ಥವಾಗಿಯೇ ದಂಡಿಸ ಲಿಲ್ಲ. ಯಾಕೆಂದರೆ, ನಂದರ ಐಶ್ವರ್ಯಕ್ಕೆ ತಗುಲಾದ ಈ ಜನವನ್ನು ತೀಕ್ಷ್ಣದಂಡನೆಯಿಂದ ನಿಗ್ರಹಿಸಿದರೆ, ನಂದಕುಲದಲ್ಲಿ ಅನುರಕ್ತರಾದ ಜನಗಳೆಲ್ಲರಿಗೂ ನಾವೇ ಶತ್ರುಗಳೆಂಬ

ಭೀತಿಯು ತೊಲಗದೆಂಬ ಯೋಚನೆಯಿಂದ ದಂಡಿಸದೆ ಉಪೇಕ್ಷಿಸಿದೆವು" ಎನಲು. "ಹಾಗಾದರೆ, ಸ್ವಾಮಿ, ಅನುಗ್ರಹವಂ ಮಾಡಿದ ಮೇಲೆ ಅವರಂ ಸ್ವಾಧೀನವಂ ಮಾಡಿಕೊಳ್ಳಲಿಲ್ಲವೇಕೆ ?" ಎನಲು.

"ಎಲೈ ಅರಸೇ, ಅಧಿಕಾರವಂ ಹೋಗಲಾಡಿಸಿಕೊಂಡಿರುವ ಭದ್ರಭಟ ಪುರುಷದತ್ತರಿಗೆ ಅಧಿಕಾರವಂ ನೇಮಿಸಿ, ಪುನಃ ಅಧಿಕಾರವಂ ಅನುಗ್ರಹಿಸಿದರೆ, ತಮ್ಮ ಹೊರತು ಮತ್ತೊಬ್ಬರಿಂದ ನಿರ್ವಹಿಸದೆ ಇದ್ದುದರಿಂದ ಎಂದಿನಂತೆ ನಮಗೆ ಅಧಿಕಾರವಂ ನೇಮಿಸಿದರೆಂದು ಗರ್ವಾಂಧರಾಗಿ, ಎಂದಿನಂತೆ ಸ್ತ್ರೀ ಮದ್ಯಾದಿಗಳಲ್ಲಿ ಆಸಕ್ತರಾಗಿ, ರಾಜಸಂಪದಂಗಮಾದ ಗಜಾಶ್ವಗಳಂ ನೋಡಿ ವಿಚಾರಿಸದೆ ಕೆಡಿಸುವರಾದುದರಿಂದ ಅವರಂ ಅನುಗ್ರಹಿಸಲಿಲ್ಲ. ಡಿಂಗಿರಾತ ಬಲಗುಪ್ತರಾದರೋ ಈ ರಾಜ್ಯವಂ ಉಚಿತವಾಗಿ ಕೊಟ್ಟರೂ ಅವರಿಗೆ ತೃಪ್ತಿ ಸಾಲದು. ಹೇಗೆ ಅವರಂ ಅನುಗ್ರಹಿಸಬೇಕು ? ರಾಜಸೇನ ಬಾಗುರಾಯಣರಿಗೆ ತಾವು ಸಂಪಾದಿಸಿದ ದ್ರವ್ಯಗಳಿಗೆ ಎಲ್ಲಿ ಮೋಸ ಬರುವದೋ ಎಂದು ಚಿಂತಿಸುತ್ತ ಪ್ರಭುಗಳಿಗೆ ವಿಪತ್ತನ್ನೇ ಹಾರೈಸುವರಾದುದರಿಂದ ಅವರಲ್ಲಿ ಹೇಗೆ ಅನುಗ್ರಹ ಘಟಿಸೀತು ? ಲೋಹಿತಾಕ್ಷ ವಿಜಯವರ್ಮರು ತಮ್ಮ ಜ್ಞಾತಿಗಳಿಗಾದ ರಾಜಸನ್ಮಾನವಂ ನೋಡಿ ಸಹಿಸಲಾರದೆ ರಾಜಕಾರ್ಯದಲ್ಲಿ ಉಪೇಕ್ಷಾವಂತರಾದುದರಿಂದ ಅವರ ಮನಸ್ಸು ಪ್ರಸನ್ನವಾಗುವದಕ್ಕೆ ನಿಮಿತ್ತವಿಲ್ಲದೆ, ಅವರ ಜ್ಞಾತಿಗಳಂ ನಿಗ್ರಹಿಸುವದು ಯುಕ್ತವಲ್ಲವಾದುದರಿಂದ, ನಮ್ಮ ಅನುಗ್ರಹಕ್ಕೆ ಪಾತ್ರರಾಗಲಿಲ್ಲ.

ಹೀಗೆ ಈ ಪುರವಂ ಬಿಟ್ಟು ಕೋಪಿಸಿಕೊಂಡು ಹೋಗಿ ಇರುವ ಈ ಜನಗಳಂ ಸಹ ಕಟ್ಟಿಕೊಂಡು, ರಾಕ್ಷಸನ ವಾಕ್ಯದಲ್ಲಿ ವಿಶ್ವಾಸವಂ ಮಾಡಿ, ಮಲಯಕೇತು ಸೇನಾಸಮೇತನಾಗಿ ನಮ್ಮ ಮೇಲಣ ಕಾರ್ಯಭಾಗಕ್ಕೆ ಬರುವನಾದುದರಿಂದ, ಈ ಸಮಯದಲ್ಲಿ ಕೋಟೆ ಕೊತ್ತಳಗಳಂ ಭದ್ರವಂ ಮಾಡಿಕೊಂಡು, ಸೇನೆಗಳಂ ಜೊತೆಗೊಳಿಸಿ, ಯುದ್ಧಪ್ರಯತ್ನವಂ ಮಾಡಿ ಕಾರ್ಯವಂ ಸಾಧಿಸುವದಕ್ಕೆ ಸಿದ್ಧವಾಗಿರಬೇಕಲ್ಲದೆ, ಕೌಮುದೀ ಮಹೋತ್ಸವವೆಂದು ಮೈಮರೆತು ಇರಬಾರದೆಂದು ಈ ಉತ್ಸವವಂ ನಿಲ್ಲಿಸಿದೆನು" ಎಂದು ಚಾಣಕ್ಯನು ಚಂದ್ರಗುಪ್ತನಿಗೆ ಹೇಳಲು,

"ಸ್ವಾಮಿ, ಇಷ್ಟು ಅನರ್ಥಕ್ಕೆ ಕಾರಣವಾದ ಮಲಯಕೇತುವನ್ನು ಇಲ್ಲಿ ಇದ್ದಾಗಲೇ ನಿಗ್ರಹಿಸದೆ ಯಾಕೆ ಉಪೇಕ್ಷಿಸಿದಿರಿ ?" ಎನಲು, "ಎಲೈ ಅರಸೇ, ಆಗಲೇ ಮಲಯಕೇತುವನ್ನು ನಿಗ್ರಹಿಸಿದರೆ ಪರ್ವತರಾಯನನ್ನು ನಾವೇ ಸಂಹಾರಗೊಳಿಸಿದೆವೆಂಬ ಲೋಕಾಪವಾದವು ನಮ್ಮ ಶಿರಸ್ಸಿನ ಮೇಲೆ ಕಟ್ಟುವದು : ನಿಗ್ರಹಿಸದೆ ಮಲಯಕೇತುವಿಗೆ ಅರ್ಧರಾಜ್ಯವಂ ಕೊಟ್ಟರೆ ನಮಗೆ ಅಪವಾದ ಮಾತ್ರ ತಪ್ಪಿ ಅರ್ಧರಾಜ್ಯವನ್ನು ಕಳೆದುಕೊಂಡಂತೆ ಆಗುವದೆಂದು ತಿಳಿದು, ಓಡುತ್ತಲಿದ್ದ ಮಲಯಕೇತುವಂ ಉಪೇಕ್ಷಿಸಿ ಬಿಟ್ಟೆವು" ಎನಲು,

"ಸ್ವಾಮಿ, ವಿರೋಧಿಯಾದ ರಾಕ್ಷಸನು ಈ ಪುರದಲ್ಲಿಯೇ ಇದ್ದ ಸಮಯದಲ್ಲಿ ಅವನಂ ಇಲ್ಲಿಯೇ ನಿಲ್ಲಿಸಿಕೊಳ್ಳದೆ ಬಿಟ್ಟುದಕ್ಕೆ ಕಾರಣವೇನು ?" ಎನಲು,

"ರಾಕ್ಷಸನು ಪ್ರಭುಗಳಾದ ನಂದರಲ್ಲಿ ಬಹುಕಾಲ ಈ ಪುರದಲ್ಲಿ ಪ್ರಾಧಾನ್ಯಮಾಡುತ್ತ, ಪ್ರಜಾರಂಜಕನಾಗಿ ಪ್ರಜ್ಞಾಬಲಪೌರುಷನಾಗಿ ಮಹಾಧನಿಕನಾದುದರಿಂದ, ಆ ರಾಕ್ಷಸನು ಇಲ್ಲಿಯೇ ಇದ್ದರೆ ಏನಾದರೂ ಒಂದು ಕಪಟವನ್ನೆಣಿಸಿ ನಮಗೆ ಕೋಪವುಂಟಾಗುವಂತೆ

ಮಾಡಿಕೊಂಡಾನು. ಊರಿಂದ ಹೊರಗಿದ್ದರೆ ಪುರದಲ್ಲಿ ನಡೆದ ರಹಸ್ಯವಂ ತಿಳಿಯಲಾರನು. ಆತನು ಸಂಗ್ರಹಿಸುವದಕ್ಕೆ ಯೋಗ್ಯನಾದರೆ ಉಪಾಯಾಂತರದಿಂದ ಮುಂದೆ ಸಂಗ್ರಹಿಸಬಹುದೆಂದೆಣಿಸಿ ಇಲ್ಲಿಂದ ಹೋಗುತ್ತಿದ್ದರೆ ಉಪೇಕ್ಷೆಯಂ ಮಾಡಿದೆವು" ಎನಲು. "ಸ್ವಾಮೀ, ರಾಕ್ಷಸನನ್ನು ಬಲಾತ್ಕರಿಸಿ ಹಿಡಿಯದೆ ಇದ್ದುದಕ್ಕೆ ಅಶಕ್ಯವಾದುದರಿಂದ ಉಪೇಕ್ಷಿಸಿದಿರಾದೀತು" ಎನಲು,

"ಎಲೈ ವೃಷಳನೇ, ರಾಕ್ಷಸನಂ ಬಲಾತ್ಕರಿಸಿ ಹಿಡಿಯ ಹೋದರೆ, ಆತನು ಮಹಾಶೂರನಾಗಿ ಆಪ್ತಬಂಧುಗಳಾದ ಶೂರಪರಿವಾರವುಳ್ಳವನಾದುದರಿಂದ ಹಿಡಿಯ ಹೋದ ನಿನ್ನ ಸೇನೆಯಂ ಬಹುವಾಗಿ ಸಂಹರಿಸಿಯಾನು. ಅದಕ್ಕೂ ಅಶಕ್ಯವಾದರೆ, ಮಾನಶಾಲಿ ಆದುದರಿಂದ ಪ್ರಾಣವನ್ನಾದರೂ ಹೋಗಲಾಡಿಸಿಕೊಂಡಾನು. ಹೀಗಾದರೆ ಕಾರ್ಯದಕ್ಷನಾಗಿ ಸಂಗ್ರಾಹ್ಯನಾದ ರಾಕ್ಷಸನು ಗತಪ್ರಾಣನಾದರೂ ಸರಿ ಅಥವಾ ನಿನ್ನ ಸೇನಾಭೇದನವಾದರೂ [ಸರಿ], ಉಭಯತಾಪಿ ನಿನಗೆ ಕಾರ್ಯಹಾನಿ ಉಂಟಾದೀತೆಂದು ತಿಳಿದು, ಬಲಾತ್ಕರಿಸದೆ ಬಿಟ್ಟೆವು" ಎಂದು ಚಾಣಕ್ಯನು ಹೇಳುತ್ತಿರಲು,

"ಸ್ವಾಮೀ, ನೀವು ಲಕ್ಷ ಹೇಳಿದಾಗ್ಯೂ ನಿಮಗಿಂತಲೂ ರಾಕ್ಷಸನೇ ಬುದ್ಧಿಶಾಲಿಯೆಂದು ತೋರುತಲಿದೆ" ಎನಲು, "ಎಲೈ ಅರಸೇ, ರಾಕ್ಷಸನು ಬುದ್ಧಿಶಾಲಿಯೆಂದು ಹೇಳಿದುದರಿಂದ ನಾವು ಬುದ್ಧಿಶಾಲಿಗಳಲ್ಲವೆಂದು ಹೇಳಿದ್ದಾಯಿತು. ಬುದ್ಧಿಶಾಲಿಯಾಗಿ ಅವನು ಮಾಡಿದ್ದೇನು ?" [ಎನಲು], "ಸ್ವಾಮೀ, ರಾಕ್ಷಸನು ಈ ಪುರದಲ್ಲಿ ನಿಂತು ನಮ್ಮೆಲ್ಲರಂ ಲಕ್ಷೀಕರಿಸದೆ ತಾನೇ ತಾನಾಗಿ ಯುದ್ಧವಂ ಮಾಡುತ, ನಮ್ಮಿಂದ ಮಾಡುವ ಸೇನಾಜಯಘೋಷಕಾಲದಲ್ಲಿಯೂ ಪರ್ಯವಸಾನವಾಗುವ ಯುದ್ಧಾರಂಭಕಾಲದಲ್ಲಿಯೂ ನಮಗೆ ತನ್ನ ನೀತಿಕಾರ್ಯಾತಿಶಯದಿಂದ ಹಿಂದೆ ಮುಂದೆ ತೋರದಂತೆ ಮಾಡಿ ಅಟ್ಟಿದನು. ಗುಣಕ್ಕೆ ಮತ್ಸರವುಂಟೇ ? ಕಾರ್ಯದಕ್ಷರಲ್ಲಿಯೇ ಹೊರತು ನನಗೆ ಅನ್ಯರಲ್ಲಿ ಸ್ವಜನಾಭಿಮಾನವುಂಟಾಗದು" ಎನಲು,

"ಎಲೈ ವೃಷಳನೇ, ರಾಕ್ಷಸನು ಮಾಡಿದ್ದು ಇಷ್ಟು ಮಾತ್ರವೇ ಸರಿಯಷ್ಟೆ. ನಿನಗೆ ಶತ್ರುಗಳಾದ ನಂದರಂ ಮೂಲೋತ್ಪಾಟನವಂ ಮಾಡಿ, ಈ ಮಹಾರಾಜ್ಯಾಧಿಪತ್ಯದಲ್ಲಿ ನಾವು ನಿನ್ನಂ ನಿಲ್ಲಿಸಿದಂತೆ ರಾಕ್ಷಸನು ನಿನ್ನಂ ನಿರಾಕರಿಸಿ ತಾನು ವಹಿಸಿದ ಮಲಯಕೇತುವಿಗೆ ಈ ರಾಜ್ಯಾಧಿಪತ್ಯವನ್ನುಂಟುಮಾಡಿದನೋ ಏನು ?" ಎನಲು, "ಏನೋ ನನ್ನ ಅದೃಷ್ಟದಿಂದ ಈ ರಾಜ್ಯವು ಲಬ್ಧವಾಯಿತೆಂದು ತಿಳಿಯದೆ ನನ್ನಂ ಬಹುವಾಗಿ ತಿರಸ್ಕರಿಸುವಿರಿ" ಎನಲು,

"ಎಲೈ ಅರಸೇ, ನಂದರಂ ಸಂಹರಿಸದೆ ಬಿಚ್ಚಿ ಹೋದ ಶಿಖಾಬಂಧನವಂ ಮಾಡುವುದಿಲ್ಲವೆಂದು ಮಹಾಪ್ರತಿಜ್ಞೆಯಂ ಮಾಡಿ, ಆ ಪ್ರತಿಜ್ಞಾನುಸಾರವಾಗಿ ನವಾರ್ಬುದ ಧನಾಧಿಪತಿಗಳಾದ ನಂದರೆಲ್ಲರಂ ಶೂರನಾದ ರಾಕ್ಷಸನು ನೋಡುತ್ತಿರುವಾಗಲೇ ಸಂಹರಿಸಿ, ಅವರ ರಕ್ತಗಳಿಂದಲೇ ಭೂತ ವೇತಾಳ ಹದ್ದು ನರಿಗಳಿಗೆ ಔತಣವಂ ಮಾಡಿಸಿದಾಗ್ಯೂ, ನನ್ನ ಕ್ರೋಧಾಗ್ನಿಯು ಇನ್ನೂ ಚನ್ನಾಗಿ ಶಾಂತವಾಗದು" ಎನಲು,

"ಸ್ವಾಮೀ, ಈ ಕಾರ್ಯವಂ ನಂದದ್ವೇಷಿಯಾದ ದೈವವೇ ಮಾಡಿತಲ್ಲದೆ ಮತ್ತೊಬ್ಬರಿಂದ ಶಕ್ಯವಾಗುವದುಂಟೇ ?" ಎನಲು,

“ಎಲೈ ವೃಷಳನೇ, ದೈವವೇ ಪ್ರಮಾಣವೆಂದು ಪೌರುಷಹೀನರಾದವರು ಹೇಳುವರು” ಎನಲು, “ಸ್ವಾಮೀ, ವಿದ್ವಾಂಸರಾದವರು ಹೀಗೆ ಆತ್ಮಸ್ತುತಿಯಂ ಮಾಡಿಕೊಳ್ಳುವುದುಂಟೇ?” ಎನಲು,

“ಎಲೈ ಅರಸೇ, ನಮ್ಮಂ ಭೃತ್ಯರಂ ಕಂಡಂತೆ ಆಡಿಕೊಂಡು ಬರುತಲಿರುವೆ. ಪುನಃ ಪ್ರತಿಜ್ಞೆಯಂ ಮಾಡಲೋಸುಗ ನನ್ನ ಚಿತ್ತವು ತವಕಪಡುತ್ತಲಿದೆ. ನಂದನಾಶನಾ[ನ]ಂತರ ಸ್ವಲ್ಪ ಶಾಂತವಾದ ನನ್ನ ಕೋಪಾಗ್ನಿಯಂ ದೈವಬಲಹೀನನಾದ ನೀನು ಪುನಃ ಪ್ರಜ್ವಲಿಸುವಂತೆ ಮಾಡಿಕೊಳ್ಳುತ್ತಲಿರುವೆ” ಎಂದು ಕೋಪದಿಂದ ಹುಬ್ಬುಗಂಟಿಕ್ಕಿ ಚಾಣಕ್ಯನು ಹೇಳುತ್ತಿರಲು, ಅದಂ ನೋಡಿ, “ನಾನು ಮರ್ಯಾದೆಯಂ ಮೀರಿ ಹೆಚ್ಚುಮಾತುಗಳನ್ನಾಡಿದ್ದರಿಂದ ನಮ್ಮ ಯಜಮಾನರಿಗೆ ಪ್ರಾಮಾಣಿಕವಾಗಿ ಪ್ರಳಯಾಗ್ನಿಯಂತೆ ಕೋಪವುಂಟಾದಂತೆ ತೋರುತ್ತೆ” ಎಂದು ಚಂದ್ರಗುಪ್ತನು ಯೋಚಿಸುತ್ತಿರಲು, ಆಗ ಚಾಣಕ್ಯನು ಕಪಟಕೋಪವಂ ಶಾಂತವಂ ಮಾಡಿಕೊಂಡು,

“ಎಲೈ ವೃಷಳನೇ, ಮಾತಿಗೆ ಮಾತುಗಳಂ ಬೆಳಸಿ ಪ್ರಯೋಜನವೇನು ? ನಮಗಿಂತಲೂ ರಾಕ್ಷಸನೇ ಬುದ್ಧಿವಂತನೆಂದು ನಿನಗೆ ತಿಳಿದ ಬಳಿಕ ಈ ಪ್ರಾಧಾನ್ಯಶಸ್ತ್ರವಂ ಅವನಿಗೇ ಕೊಟ್ಟು ಅವನ ಮುಖದಿಂದಲೇ ನಿನ್ನ ಕಾರ್ಯನಿರ್ವಾಹವಂ ಮಾಡಿಸಿಕೊಳ್ಳುವನಾಗು. ನಮ್ಮ ಮನಬಂದಂತೆ ನಾವು ಇರುವೆವು” ಎಂದು ಪ್ರಾಧಾನ್ಯಶಸ್ತ್ರವಂ ಚಂದ್ರಗುಪ್ತನ ಮುಂದೆ ಇರಿಸಿ, ಚಾಣಕ್ಯನು ರಾಜಸಭೆಯಿಂದ ಎದ್ದು ಹೊರಟುಹೋಗಲು, ಚಂದ್ರಗುಪ್ತನು ಅವಸರದವನಂ ನೋಡಿ,

“ಎಲೈ ವೈತಾಳಿಕನೇ, ಈ ದಿವಸ ಮೊದಲುಗೊಂಡು ಚಾಣಕ್ಯರ ಪ್ರಾಧಾನ್ಯವಂ ತೆಗೆದು, ‘ಅರಸುಗಳಾದ ಚಂದ್ರಗುಪ್ತರೇ ರಾಜ್ಯವಿಚಾರವಂ ಮಾಡುವದರಿಂದ ಅಧಿಕಾರಿಗಳಾದವರು ಚಾಣಕ್ಯನಂ ಕಾಣಿಸಿಕೊಳ್ಳ ಕೆಲಸವಿಲ್ಲ’ ಎಂದು ರಾಜಬೀದಿಗಳಲ್ಲಿ ಸಾರಿಸತಕ್ಕದ್ದು” ಎನಲು,

ಆ ಮಾತಿಗೆ ವೈತಾಳಿಕನು, ‘ಮಹಾಪ್ರಸಾದ’ವೆಂದು ಕೈಮುಗಿದು, ತನ್ನ ಮನಸ್ಸಿನಲ್ಲಿ, “ಈ ರಾಯನು ಚಾಣಕ್ಯರಂ ಇಂದಿನವರೆಗೂ ‘ಯಜಮಾನರು’ ಎಂದು ಹೇಳುತ್ತ ಇದ್ದು, ಈಗ ಚಾಣಕ್ಯನೆಂದು ಏಕವಚನಪ್ರಯೋಗದಿಂದ ಪ್ರಾಮಾಣಿಕವಾಗಿ ಚಾಣಕ್ಯರ ಅಧಿಕಾರವು ಹೋದಂತೆ ತೋರುತ್ತಲಿದೆ, ಇದು ದೈವಕೃತವೆಂದು ಹೇಳಕೂಡದು. ಅಶಿಕ್ಷಿತವಾದ ಗಜವು ಮಾವುತನಂ ನಿರಾಕರಿಸಿದರೆ ಅದು ಮಾವುತನ ದೋಷವಲ್ಲದೆ ಗಜನಿಷ್ಠದೋಷವೆಂತಲ್ಲವೋ. ಅದೇ ರೀತಿಗೆ ಅರಸಾದವನು ಮಂತ್ರಿಯಂ ನಿರಾಕರಿಸುವದು ಮಂತ್ರಿಯ ದೋಷವಲ್ಲದೆ ಪ್ರಭುನಿಷ್ಠದೋಷವಲ್ಲವೆಂ”ದು ಯೋಚಿಸುತ್ತಿರುವ ವೈತಾಳಿಕನಂ ನೋಡಿ, “ಎಲೈ, ಏನು ಯೋಚಿಸುತ್ತಿರುವೆ ?” ಎಂದು ಅರಸು ಕೇಳಲು,

“ಬುದ್ಧಿ, ಮತ್ತೇನೂ ಅಲ್ಲ : ‘ಈಗ ಪ್ರಾಮಾಣಿಕವಾಗಿ ಸ್ವಾಮಿಯವರಿಗೆ ಪ್ರಭುತ್ವದಲ್ಲಿ ಸ್ವಾತಂತ್ರ್ಯವುಂಟಾಯಿತು’ ಎಂದು ನಿಶ್ಚೈಸುತ್ತಿದ್ದೆನು” ಎನಲು,

ಅದಂ ಕೇಳಿ ಚಂದ್ರಗುಪ್ತನು ತನ್ನ ಮನಸ್ಸಿನಲ್ಲಿ “ನಮ್ಮ ಯಜಮಾನರು ಸಭೆಯಲ್ಲಿ ನನ್ನಂ ಕೆಣಕಿ, ಹೆಚ್ಚುಮಾತುಗಳನ್ನಾಡಿಸಿ, ಕೋಪಿಸಿಕೊಂಡವರಂತೆ ಎದ್ದು ಹೋದುದರಿಂದ ಇದಕ್ಕೆ ಏನು ಪ್ರಯೋಜನವೋ, ಕಾರ್ಯಪರ್ಯವಸಾನದಲ್ಲಿ ಅಲ್ಲದೆ ಹೀಗೆಂದು ನಿಶ್ಚೈಸ

ಕೂಡದು. ಹೀಗೆ ಹೆಚ್ಚುಮಾತುಗಳಂ ಅವರ ಮನೋನುಗುಣ್ಯವಾಗಿ ಆಡಿದಾಗ್ಯೂ, ನನ್ನ ಮನಸ್ಸು ಭೂಮಿಗೆ ಇಳಿದು ಇದೆ. ಯಥಾರ್ಥವಾಗಿ ಗುರುಗಳಂ ನಿರಾಕರಿಸಿದವನು ಶ್ರೇಯೋವಂತನಾಗುವದುಂಟೇ ?" ಎಂದು ಯೋಚಿಸುತ್ತ, ಅರಸು ಅಂತಃಪುರವನ್ನೈದು ತ್ತಿರಲು, ರಾಜಾಜ್ಞೆ ಮೇರೆಗೆ ಬೀದಿಗಳಲ್ಲಿ ಸಾರುತ್ತಿದ್ದರು ಎಂಬಲ್ಲಿಗೆ.

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಶ್ರೀಮಹೀಶೂರನರಪತಿ ಶ್ರೀಕೃಷ್ಣರಾಜೇಂದ್ರ ರಾಶ್ರಿತ ಹೊಯಸಣಿಗಕುಲಸಂಜಾತ ನಾರಾಯಣಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ಚಾಣಕ್ಯ ಚಂದ್ರಗುಪ್ತರ ಕಪಟಕಲಹಕಥನವೆಂಬ ಪಂಚಾದಶಾಶಯಃ ಸಮಾಪ್ತಃ.

ಷೋಡಶಾಶಯ : ಮಲಯಕೇತು ರಾಕ್ಷಸ ಸಂವಾದಕಥನವು

ಹೀಗಿರುತ್ತಿರಲು, ರಾಕ್ಷಸನಿಂದ ಆಜ್ಞಪ್ತನಾಗಿ ಬಂದು ಪಾಟಲೀಪುರದ ಆಸ್ಥಾನದಲ್ಲಿ ಚಂದ್ರಗುಪ್ತ ಚಾಣಕ್ಯರಿಗೆ ವಾಕ್ಕಲಹದಿಂ ಚಾಣಕ್ಯನ ಅಧಿಕಾರವಂ ತೆಗೆಯಲು, ಆತನು ಕೋಪದಿಂದೆದ್ದು ಹೋಗಲು, ರಾಜ್ಯವಿಚಾರವಂ ಚಂದ್ರಗುಪ್ತನೇ ಮಾಡುವದಂ ಸಹ ತಿಳಿದು ಕರಭಕನೆಂಬ ಗೂಢಚಾರನು ಪಾಟಲೀಪುರದಿಂದ ಹೊರಟು, ಎಂದಿನಂತೆ ಪರ್ವತರಾಯನ ಪಟ್ಟಣಕ್ಕೆ ಬಂದು, ರಾಕ್ಷಸನ ಗೃಹದ್ವಾರದಲ್ಲಿ ನಿಂತು, ಅಲ್ಲಿಯ ದ್ವಾರ ಪಾಲಕನಂ ಕುರಿತು,

"ಎಲೈ ಪ್ರತೀಹಾರಿಯೇ, 'ಪಾಟಲೀಪುರಕ್ಕೆ ಹೋಗಿ ಇದ್ದ ಕರಭಕನೆಂಬ ಚಾರನು ಬಂದು ವಿಜ್ಞಾಪಿಸುತ್ತಾನೆ' ಎಂದು ಅಮಾತ್ಯ ರಾಕ್ಷಸರಿಗೆ ಬಿನ್ನಯಿಸು" ಎನಲು,

"ಎಲೈ ಕರಭಕನೇ, ಕಾರ್ಯಾಲೋಚನೆಯಿಂದ ರಾತ್ರೆ ನಿದ್ರಾರಹಿತರಾಗಿ ಶಿರೋವೇದನೆ ಯಿಂದ ಅಮಾತ್ಯರು ಪವಡಿಸಿ ಇದ್ದಾರೆ. ಅರೆಘಳಿಗೆ ನಿಲ್ಲುವನಾಗು. ಸಮಯವಂ ನೋಡಿ ವಿಜ್ಞಾಪಿಸುವೆನು" ಎಂದು ಹೇಳಿ, ಆ ದ್ವಾರಪಾಲಕನು ಒಳಕ್ಕೆ ಹೋಗಿ ನೋಡಿ, ಹಾಸಿಗೆ ಯಲ್ಲಿ ಕುಳಿತು ಶಕಟದಾಸನೊಡನೆ ಮಾತನಾಡುತ್ತ ಚಿಂತಾಕ್ರಾಂತನಾದ ರಾಕ್ಷಸನಂ ಕಂಡು, ಹೇಳಲಂಜಿ ದೂರದಲ್ಲಿ ನಿಂತಿರಲು, ಒಳಗೆ ರಾಕ್ಷಸನು ಶಕಟದಾಸನಿಗಿಂತೆಂದನು:

"ಅಯ್ಯ ಶಕಟದಾಸನೇ, ನಾನು ಯಾವ ಕಾರ್ಯವ[ನ್ನು] ಆರಂಭಿಸಿದರೂ ದೈವವು ಪ್ರತಿಕೂಲವೇ ಆಗುತ್ತಲಿದೆ. ನಮ್ಮ ಕಾರ್ಯಕ್ಕೆಲ್ಲಾ ಚಾಣಕ್ಯನು ಪ್ರತಿಕ್ರಿಯೆಯನ್ನೇ ಮಾಡುತ ಲಿದಾನೆ. 'ಹಿಡಿದ ಕೆಲಸ ಹೇಗೆ ನೆರವೇರುವದೋ ? ಚಾಣಕ್ಯನು ನನ್ನ ಕೈಯಿಗೆ ಹೇಗೆ ಸಿಕ್ಕುವನೋ ?' ಎಂಬ ಚಿಂತೆಯಿಂದಲೇ ರಾತ್ರೆಗಳು ಕಳೆಯುತಲಿವೆ. ಹೇಗೆ ಎಂದರೆ, ಪ್ರಥಮದಲ್ಲಿ ಒಂದು ಕಾರ್ಯಾರಂಭವಂ ಮಾಡಿ, ಅದಕ್ಕೆ ವಿಸ್ತಾರ೧ವಂ೧ ನಿಶ್ಚೈಸುತ್ತ, ಗೂಢವಾದ ಕಾರ್ಯಬೀಜವಂ ಸ್ವಲ್ಪವಾಗಿ ವ್ಯಕ್ತವಂ ಮಾಡುತ್ತ, ಚನ್ನಾಗಿ ಬುದ್ಧಿಯಿಂದ ಅದಂ ಪರಿಭಾವಿಸುತ್ತ, ಒಂದಕ್ಕೊಂದು ಸಂಬಂಧವಿಲ್ಲದೆ ನಾನಾ ಮುಖವಾಗಿ ಹರಹಿ ಕೊಂಡು ಇರುವ ಕಾರ್ಯಸಮೂಹವನ್ನು ಮುಖ್ಯವಾದ ಫಲಕ್ಕೆ ಸಾಧನವನ್ನಾಗಿ ಮಾಡುತ್ತ, ಅದರ ಗುಣ ದೋಷಗಳಂ ನಿಶ್ಚೈಸುತ್ತ, ಅದಕ್ಕೆ ಸಾಧಕ ಬಾಧಕಗಳಂ ಲಾಭಾಲಾಭಗಳಂ

---

೧. ವಂ ಮಾಡಿ ಅದಕ್ಕೆ ವಿಸ್ತಾರವಂ (ಕ, ಖ, ಗ)

ಪರಿಭಾವಿಸುತ್ತ, ಹೀಗೆ ಚಿತ್ತಕ್ಲೇಶವಂ ನಾನೊಬ್ಬನು ಅನುಭವಿಸು[ವ]ವನು ; ಪೂರ್ವೋತ್ತರವಿರೋಧವಿಲ್ಲದಂತೆ ಗ್ರಂಥದಲ್ಲಿ ಸಂವಿಧಾನವಂ ರಚಿಸಿ ಹೇಳುವ ಕವಿಯು ಒಬ್ಬನು ಅನುಭವಿಸುವ[ವ]ನು'' ಎಂದು ಹೇಳುತ್ತಿರುವ ಸಮಯದಲ್ಲಿ,

ರಾಕ್ಷಸನಿಗೆ ವಾಮಭುಜವು ಅದರಲು, "ಯಾಕೋ ಅಪಶಕುನವಾಗುತಲಿದೆ ; ಹಿಡಿದ ಕಾರ್ಯವಂ ಸಾಧಿಸಲೇ ಬೇಕು'' ಎಂದು ಹೇಳುತ, ದೂರದಲ್ಲಿ ನಿಂತಿರುವ ದ್ವಾರಪಾಲಕನಂ ನೋಡಿ, "ಎಲೈ ಏನ[ಂ] ಹೇಳಬೇಕೆಂದು ಸಮಯವಂ ನೋಡುತಲಿರುವೆ ?'' ಎಂದು ರಾಕ್ಷಸನು ಕೇಳಲು, "ಬುದ್ಧಿ, ಕರಭಕನೆಂಬ ಚಾರನು ಪಾಟಲೀಪುರದಿಂದ ಬಂದು 'ವಿಜ್ಞಾಪಿಸೆಂ'ದು ಹೇಳುತಾನೆ'' ಎನಲು, "ಬೇಗ ಬರಹೇಳೆಂ''ದು ರಾಕ್ಷಸನು ಹೇಳಲು, "ಬುದ್ಧೀ'' ಎಂದು ಹೋಗಿ, ಕರಭಕನಂ ಒಳಕ್ಕೆ ಕಳುಹಿಸಲು, ಹಾಗೆ ಬಂದು ಕೈಮುಗಿದ ಕರಭಕನಂ ನೋಡಿ, "ಏನೈ ಬಂದೆಯಾ, ಕುಳ್ಳಿರೆಂ''ದು ಹೇಳಿ, ಶಕಟದಾಸನು ಹೇಳಿಕೊಳ್ಳುವ ಮಾತಿಗೆ ಪ್ರತ್ಯುತ್ತರವಂ ಕೊಡುತ, ರಾಕ್ಷಸನು ಅಲ್ಲಿಯೇ ಇರಲು,

ಶಿರೋವೇದನೆಯಿಂದ ಶ್ರಮಪಡುತಲಿರುವ ರಾಕ್ಷಸನ ಬಳಿಗೆ ಪಾಟಲೀಪುರದಿಂದ ಕರಭಕನೆಂಬ ಚಾರನು ಬಂದು ಇರುವದಂ ತಿಳಿದು ಬಾಗುರಾಯಣನು ಮಲಯಕೇತುವಿಗೆ ತಿಳುಹಿಸಲು, 'ರಾಕ್ಷಸನಿಗೂ ಬಂದ ಗೂಢಚಾರನಿಗೂ ಪಾಟಲೀಪುರದ ರಹಸ್ಯ ಸಂವಾದವು ಹೇಗಿರುವದೋ ತಾನೇ ಕೇಳಬೇಕೆಂ'ದು ಮಲಯಕೇತುವು ರಾಕ್ಷಸನ ಶಿರೋವೇದನೆಯಂ ವಿಚಾರಿಸುವ ನೆವದಿಂದ ರಾಕ್ಷಸನ ಗೃಹವಂ ಕುರಿತು ಹೊರಡುತ್ತ, ಒಬ್ಬ ಕಂಚುಕಿಯಂ ನೋಡಿ,

"ಎಲೈ ಪುಷ್ಕರನೇ, ನಾವು ರಾಕ್ಷಸನ ಗೃಹಕ್ಕೆ ಹೋಗಬೇಕಾಗುತ್ತಲಿದೆ. ಮಾರ್ಗದಲ್ಲಿ ಇದ್ದ ಜನರಂ ಹೊರಚ್ಚು ಮಾಡಿ, ರಾಕ್ಷಸನ ಗೃಹದ್ವಾರದಲ್ಲಿ ನೀನೇ ನಿಂತು, ನಾವು ಮಾತ್ರ ಒಳಕ್ಕೆ ಹೋದ ಬಳಿಕ ಯಾರನ್ನೂ ಒಳಕ್ಕೆ ಬಾರಲೀಸದೆ ಇರುವನಾಗು'' ಎನಲು, ಅವನು 'ಮಹಾಪ್ರಸಾದ'ವೆಂದು ಹೋಗಿ, ಮಾರ್ಗದಲ್ಲಿ ಇರುವ ಜನರಂ ಹೊರಚ್ಚುಮಾಡಿ, ರಾಕ್ಷಸನ ಗೃಹದ್ವಾರದಲ್ಲಿ ಆ ಕಂಚುಕಿ ನಿಂತು ಜನರಂ ಒಳಕ್ಕೆ ಹೋಗಲೀಸದೆ ಸಂದಣಿಯಿಲ್ಲದಂತೆ ಮಾಡುತಿರಲು, ಈ ವರ್ತಮಾನವಂ ರಾಕ್ಷಸನಿಗೆ ತಿಳುಹಿಸುವದಕ್ಕೆ ಅವಕಾಶವಿಲ್ಲದೆ. ಎಲ್ಲಿ ಇದ್ದ ಜನರು ಅಲ್ಲಿಯೇ ಇರುತ್ತಿರಲು,

ಆಗ ಕಾಲುನಡೆಯಲ್ಲೇ ಮಲಯಕೇತು ಹೊರಡುತ್ತಿರಲು, ಎಂದಿನಂತೆ ಆತನ ಪರಿವಾರವು ಸಿದ್ಧವಾಗಲು, ಹಾಗೇ ಭದ್ರಭಟಾದಿಗಳು ಮಲಯಕೇತುವನ್ನನುಸರಿಸಿ ಬರುತ್ತಿರಲು, ಅದಂ ನೋಡಿ ಮಲಯಕೇತುವು ಭದ್ರಭಟಾದಿಗಳಿಗಿಂತೆಂದನು :

"ಅಯ್ಯ ಸೇನಾಪತಿಗಳಿರಾ, ರಾಕ್ಷಸನು ಶಿರೋವೇದನೆಯಿಂದ ಶ್ರಮಪಡುವನಂತೆ. ನಾನು ಮಾತ್ರ ಹೋಗಿ ಅವನಂ ಕಂಡು ವಿಚಾರಿಸಿ ಬರುವೆನು. ನೀವೆಲ್ಲರೂ ಇಲ್ಲಿಯೇ ಇರಬಹುದು'' ಎನಲು, ಆ ಮಾತಿಗೆ ಭದ್ರಭಟಾದಿಗಳು ಬಾಗುರಾಯಣಸಮೇತರಾಗಿ ಇರುವ ಮಲಯಕೇತುವಿಗಿಂತೆಂದರು :

"ಸ್ವಾಮೀ ರಾಜಕುಮಾರಕರೇ, ನಾವು ರಾಕ್ಷಸನ ಮುಖದಿಂದ ನಿಮ್ಮನ್ನಾಶ್ರಯಿಸಲಿಲ್ಲ. ದುರ್ಮಂತ್ರಿಯಾದ ಚಾಣಕ್ಯನ ವಶವರ್ತಿಯಾದ ಚಂದ್ರಗುಪ್ತನಲ್ಲಿ ಮನಸ್ಸು ಒಡಂಬಡದೆ ಶೇಖರನ ಮುಖಾಂತರದಿಂದಲೇ ಸ್ವಾಮಿಯವರನ್ನಾಶ್ರಯಿಸಿದೆವು. ಅಪ್ಪಣೆ

ಮೇರೆಗೆ ಇಲ್ಲಿಯೇ ಇರುವೆವು" ಎನಲು, "ಹಾಗೇ ಮಾಡಿರೆಂ"ದು ಹೇಳಿ, ಹಾಗೇ ಬಾಗುರಾಯಣನ ಹಸ್ತವಂ ಹಿಡಿದು, "ಬಾರೈ ಮಿತ್ರನೇ" ಎಂದು ಹೇಳುತ್ತ ಮಲಯಕೇತು ನಡೆಯುತ್ತಿರಲು,

"ಅಯ್ಯ ರಾಜಕುಮಾರಕನೇ, ರಾಕ್ಷಸನಂ ವಿಚಾರಿಸುವದಕ್ಕೆ ಹೋಗತಕ್ಕುದು ಯುಕ್ತವೇ ಸರಿ ; ಆದರೂ ಪಾಟಲೀಪುರದ ರಹಸ್ಯವರ್ತಮಾನವಂ ರಾಕ್ಷಸನು ತಾನಾಗಿ ತಿಳಿಯ ಪಡಿಸಿದರೆ ಅಷ್ಟು ಮಾತ್ರವೇ ತಿಳಿಯ ಬಂದೀತು" ಎಂದು ಬಾಗುರಾಯಣ ಹೇಳುತ್ತ, ಸಂಗಡ ಹೋಗುತ್ತಿರಲು,

"ಅಲ್ಲಿ ಸಮಯ ದೊರಕಿದಂತೆ ಮಾಡೋಣ. ಅದಂತಿರಲಿ. ಅಯ್ಯ ಮಿತ್ರನೇ, ನಾವು ಇಲ್ಲಿಗೆ ಹೊರಟ ಸಮಯದಲ್ಲಿ 'ಎಲ್ಲರೂ ಇಲ್ಲಿಯೇ ಇರತಕ್ಕದೆಂ'ದು ಹೇಳಿದ ಮಾತಿಗೆ ಭದ್ರಭಟಾದಿಗಳು ರಾಕ್ಷಸನ ವಿಷಯವಾಗಿ ಹೇಳಿಕೊಂಡ ಮಾತಿಗೆ ಭಾವವೇನೆಂ"ದು ಬಾಗುರಾಯಣನಂ ಕೇಳಲು, ಆತನು ಭದ್ರಭಟಾದಿಗಳು ಹೇಳಿಕೊಂಡ ಮಾತಿಗೆ ತಾತ್ಪರ್ಯವಂ ಯೋಚಿಸುವನಂತೆ ನಟಿಸುತ್ತ, 'ಈ ಮಲಯಕೇತುವಿಗೆ ರಾಕ್ಷಸನಲ್ಲಿ ವಿಶ್ವಾಸ ತಪ್ಪುವಂತೆ ಮಾಡುವದಕ್ಕೆ ಇದೇ ಮೊದಲುಗೊಂಡು ಸಮಯವೆಂ'ದು ತಿಳಿದು,

"ಅಯ್ಯ ರಾಜಕುಮಾರಕನೇ, 'ಶೇಖರನ ಮುಖದಿಂದಲೇ ಹೊರತು ರಾಕ್ಷಸನ ಮುಖಾಂತರವಾಗಿ ನಿನ್ನಂ ಆಶ್ರಯಿಸಿದವರಲ್ಲ' ಎಂದು ಭದ್ರಭಟಾದಿಗಳು ಹೇಳಿಕೊಂಡ ಮಾತಿಗೆ ತಾತ್ಪರ್ಯವು ಅಷ್ಟು ಪ್ರಯಾಸವಾಗಿ ತೋರುವದಿಲ್ಲ. ಆದರೂ ಹೇಳುವೆನು. ಲೋಕದಲ್ಲಿ ಗುಣವಂತನಾದ ಪ್ರಭುವಂ ಆಶ್ರಯಿಸಬೇಕಾದರೆ, ಅವರಿಗೆ ಪ್ರಿಯಮಿತ್ರ ರಾಗಿ ಆಪ್ತರಾಗಿ ಘಟಿಕರಾದ ಜನರ ಮುಖದಿಂದ ಆಶ್ರೈಸುವದು ನ್ಯಾಯವೇ ಸರಿ" ಎನಲು,

"ಅಯ್ಯ ಮಿತ್ರನೇ, ರಾಕ್ಷಸನು ನಮಗೆ ಆಪ್ತಮಿತ್ರನಹುದಷ್ಟೆ" ಎನಲು, "ಅಯ್ಯ ರಾಜಕುಮಾರಕನೇ, ನೀನು ಹೇಳಿದ್ದು ಯುಕ್ತವೇ ಸರಿ ; ಹಾಗಾದರೂ ರಾಕ್ಷಸನಿಗೆ ಚಾಣಕ್ಯನಲ್ಲಿ ವೈರವಿರುವಂತೆ ಚಂದ್ರಗುಪ್ತನಲ್ಲಿ ವೈರ ಇರುವಂತೆ ತೋರುವದಿಲ್ಲ. ಚಾಣಕ್ಯನು ಅತ್ಯಂತಗರ್ವಿತನಾಗಿ ಚಂದ್ರಗುಪ್ತನಂ ಲಕ್ಷೀಕರಿಸದೆ ಇರುವದರಿಂದ, ಚಂದ್ರ ಗುಪ್ತನು ರಾಕ್ಷಸನಲ್ಲಿ ದೃಷ್ಟಿಯನ್ನಿಟ್ಟು ಸಮಯಾಂತರದಲ್ಲಿ ಚಾಣಕ್ಯನ ಪ್ರಾಧಾನ್ಯವಂ ತೆಗೆದಾನು. ಆ ಸಮಯದಲ್ಲಿ ನಂದವಂಶೋತ್ಪನ್ನನಾದವನೆಂಬ ಅಭಿಮಾನದಿಂದಲೂ ತನ್ನ ಗೃಹಜನವು ಪಾಟಲೀಪುರದಲ್ಲಿ ಸಿಕ್ಕಿರುವದರಿಂದಲೂ ರಾಕ್ಷಸನು ಚಂದ್ರಗುಪ್ತನಲ್ಲಿ ಸಂಧಿಗೆ ಒಡಂಬಟ್ಟಾನು. ಹಾಗೇ ಚಂದ್ರಗುಪ್ತನು ಕೂಡ ಬಹುಕಾಲ ತನ್ನ ವಂಶದ ಮಂತ್ರಿತ್ವವಂ ಮಾಡಿದವನಾದುದರಿಂದಲೂ ಪ್ರಜಾರಂಜಕನಾದುದರಿಂದಲೂ ದಕ್ಷ ನಾದುದರಿಂದಲೂ ರಾಕ್ಷಸನಲ್ಲಿ ಸಂಧಿಗೆ ಸಮ್ಮತಿಸಿಯಾನು. ಹೀಗಾದರೆ, ಪಾಟಲೀಪುರದ ಜನರೆಲ್ಲರೂ ಇಂಥವರೇ ಸರಿಯೆಂದು ಪ್ರಭುವಾದ ನಿನಗೆ ನಮ್ಮಲ್ಲಿ ವಿಶ್ವಾಸತಪ್ಪಿದರೆ ಉಭಯತಾಪಿ ಭ್ರಷ್ಟರಾದೇವೆಂದು ಭೀತಿಯಿಂದ ಭದ್ರಭಟಾದಿಗಳು ಮುಂಚಿತವಾಗಿಯೇ ನಿನಗೆ ವಿಜ್ಞಾಪಿಸಿಕೊಂಡಂತಾಯಿತು. ಇದು. ಅವರು ಹೇಳಿಕೊಂಡ ಮಾತಿಗೆ ಇದೇ ಅರ್ಥವು" ಎನಲು,

"ಆ ಮಾತಿಗೆ ಎಷ್ಟಾದರೂ ಜನಗಳಿಗೆ ಸ್ಥಳಾಭಿಮಾನ ತಪ್ಪುವದುಂಟೇ ? ವಿಹಿತವೇ

ಸರಿ" ಎಂದು ಒಪ್ಪಿಕೊಂಡು, ಆ ಬಳಿಕ ಬಾಗುರಾಯಣಸಮೇತವಾಗಿ ಮಲಯಕೇತು ರಾಕ್ಷಸನ ಗೃಹವಂ ಪ್ರವೇಶಿಸಿ, ಆತನ ಶಯನಗೃಹದ ಬಳಿಗೆ ಹೋಗುತ್ತಿರಲು, ಆ ಶಯನಗೃಹದಲ್ಲಿ ರಾಕ್ಷಸನು ಶಕಟದಾಸನೊಡನೆ ಆಡುತಲಿರುವ ಮಾತುಗಳಂ ನಿಲ್ಲಿಸಿ, ಪಾಟಲೀಪುರದಿಂದ ಬಂದಿದ್ದ ಕರಭಕನೆಂಬ ಚಾರನಂ ಕುರಿತು ಇಂತೆಂದನು :

"ಏನ್ನ ಚಾರನೇ, ಪಾಟಲೀಪುರದ ವರ್ತಮಾನಗಳು ಏನೆಂ"ದು ಕೇಳಲು, ಆ ವಾಕ್ಯವಂ ಮಲಯಕೇತುವು ಕೇಳಿ, ಬಾಗುರಾಯಣನಂ ನೋಡಿ, "ಅಯ್ಯ ಮಿತ್ರನೇ, ರಾಕ್ಷಸನಿಗೂ ಗೂಢಚಾರನಿಗೂ ಪಾಟಲೀಪುರದ ರಹಸ್ಯವರ್ತಮಾನ ಸಂವಾದವಾಗುತ್ತಲಿದೆ. ನಾವು ಇನ್ನೂ ಒಳಕ್ಕೆ ಹೋದರೆ, ರಹಸ್ಯಗಳು ಯಥೋಚಿತವಾಗಿ ತಿಳಿದಾವು. ಆದರಿಂದ ಇಲ್ಲೇ ನಿಂತು ವರ್ತಮಾನವೆಲ್ಲವಂ ತಿಳಿಯಬೇಕೆಂದು ಹೇಳಿ, ಮಲಯಕೇತು ಬಾಗುರಾಯಣ ಸಮೇತನಾಗಿ ಹೊರಗೆ ಕಿವಿಗೊಟ್ಟು ಹೊಂಚಿ ಆಲೈಸುತ್ತಿರಲು, ಶಯನಗೃಹದೊಳಗೆ ಕರಭಕನೆಂಬ ಚಾರನು ರಾಕ್ಷಸನಂ ಕುರಿತು,

"ಸ್ವಾಮಿ ಅಮಾತ್ಯರೇ, ನಾನು ತಮ್ಮ ಅಪ್ಪಣೆ ಮೇರೆಗೆ ಪಾಟಲೀಪುರಕ್ಕೆ ಹೋಗಿ ತಾವು ಹೇಳಿದ ಅರ್ಥವನ್ನು ಅಲ್ಲಿಯ ಸ್ತುತಿಪಾಠಕರಿಗೆ ಹೇಳಲು, ತಮ್ಮ ಪ್ರಭಾವದಿಂದ ತಾವು ಸಂಕಲ್ಪಿಸಿದ ಕಾರ್ಯವು ಘಟಿಸಿತು" ಎನಲು,

ಅದಂ ಕೇಳುತ್ತ ಹೊರಗೆ ನಿಂತಿದ್ದ ಮಲಯಕೇತು ಬಾಗುರಾಯಣನಂ ನೋಡಿ, "ಅಯ್ಯ ಮಿತ್ರನೇ, ಸಂಕಲ್ಪಿಸಿದ ಕಾರ್ಯವೆಂದರೇನು ?" ಎನಲು, "ಅಯ್ಯ ರಾಜಪುತ್ರನೇ, ಇಷ್ಟು ಮಾತ್ರಕ್ಕೆ ತಿಳಿಯ ಕೂಡದು. ಮತ್ತೇನು ನಡೆಯುವದೋ, ಚನ್ನಾಗಿ ಆಲೈಸುವ ನಾಗು" ಎನಲು, ಪುನಃ ಒಳಗೆ,

"ಸ್ವಾಮಿ ಅಮಾತ್ಯರೇ, ಕಾರ್ಯ ಘಟಿಸಿದ್ದು ಹೇಗೆಂದರೆ, ನಂದವಿನಾಶದಿಂದ ದುಃಖಿತ ರಾದ ಪುರಜನರಿಗೆ ಸಂತೋಷಾರ್ಥವಾಗಿ ಚಂದ್ರಗುಪ್ತನು ಮಾಡ ಹೇಳಿದ ಕೌಮುದೀ ಮಹೋತ್ಸವವಂ ಸಾಗದಂತೆ ಚಾಣಕ್ಯನು ನಿಲ್ಲಿಸಲಾಗಿ, ತನ್ನ ಆಜ್ಞೆಗೆ ಭಂಗವುಂಟಾದುದಕ್ಕೆ ಕಾರಣವೇನೆಂದು ಕೇಳುವದಕ್ಕೆ ಚಾಣಕ್ಯನಂ ಸಭೆಗೆ ಕರೆಕಳುಹಿಸಿ, ಬಂದ ಚಾಣಕ್ಯನಂ ಕುರಿತು 'ಉತ್ಸವವಂ ನಿಲ್ಲಿಸಿದ್ದಕ್ಕೆ ಕಾರಣವೇನೆಂದೆ'ನಲು, ಆ ಸಮಯದಲ್ಲಿ ತಮ್ಮ ಆಜ್ಞೆ ಮೇರೆಗೆ ಸ್ತುತಿಪಾಠಕರು ಚಂದ್ರಗುಪ್ತನಿಗೆ ಚಾಣಕ್ಯನ ಮೇಲೆ ಕೋಪ ಹೆಚ್ಚುವಂತೆ ಗದ್ಯಸ್ತುತಿಗಳಿಂದ ಹೊಗಳುತ್ತಿದ್ದರು. ಅದು ಹೇಗೆಂದರೆ, 'ಮಾನಶಾಲಿಗಳಾದ ಅರಸುಗಳು ಪರರಿಂದ ಉಂಟಾಗುವ ತಮ್ಮ ಆಜ್ಞಾಭಂಗವಂ ಸರ್ವಥಾ ಸಹಿಸಲಾರರು' ಎಂದು. ಇದೇ ಅರ್ಥವಂ ವಿಸ್ತರಿಸಿ, ಹೊಗಳುತ್ತಿದ್ದರು" ಎನಲು,

ಆ ಮಾತಿಗೆ ಸಂತೋಷಪಡುತ್ತ, "ಆ ಬಳಿಕ ಏನು ನಡೆಯಿತು ? ಲೋಕದಲ್ಲಿ ಸಾಧಾರಣಪುರುಷನಾದರೂ ತಾನು ಮಾಡಿದ ಕೆಲಸಕ್ಕೆ ಅಡ್ಡಿ ಬಂದರೆ ಸಹಿಸಲಾರನು. ಮಹಾಪ್ರಭುವಾದವನು ಸಹಿಸುವನೇ ?" ಎನಲು,

"ಸ್ವಾಮಿ, ಚಾಣಕ್ಯನಿಂದ ಭಗ್ನವಾದ ಆಜ್ಞೆಯುಳ್ಳವನಾದುದರಿಂದ, ಕ್ರುದ್ಧನಾದ ಚಂದ್ರ ಗುಪ್ತನು ಪ್ರಸಂಗಸಂಗತಿಯಿಂದ 'ಅಮಾತ್ಯ ರಾಕ್ಷಸನಿಗಿಂತಲೂ ಬುದ್ಧಿವಂತರುಂಟೇ?' ಎಂದು ನಿಮ್ಮ ಗುಣಪ್ರಶಂಸೆಯಂ ಮಾಡಿ, ಚಾಣಕ್ಯನ ಪ್ರಾಧಾನ್ಯವಂ ತೆಗೆಯಲು, ಖಿನ್ನನಾಗಿ ಚಾಣಕ್ಯನು ಸಭೆಯಿಂದ ಎದ್ದು ಹೋದನು" ಎನಲು, ಆ ವಾಕ್ಯವಂ ಹೊಂಚು

ಕೇಳುವ ಮಲಯಕೇತು ಕೇಳಿ,

"ಅಯ್ಯ ಬಾಗುರಾಯಣನೇ, ಚಂದ್ರಗುಪ್ತನು ರಾಕ್ಷಸನ ಗುಣಪ್ರಶಂಸೆಯಂ ಮಾಡಿದ್ದ ರಿಂದ ನೀನು ಹೇಳಿದಂತೆ ರಾಕ್ಷಸನಿಗೆ ಚಂದ್ರಗುಪ್ತನಲ್ಲಿ ಪಕ್ಷಪಾತವಿದ್ದೀತು ಎಂದು ತೋರುತ್ತೆ" ಎನಲು, "ಅಯ್ಯ ರಾಜಕುಮಾರನೇ, ರಾಕ್ಷಸನಿಗೆ ಗುಣಪ್ರಶಂಸಾಮಾತ್ರದಿಂ ದಲೇ ಅಲ್ಲ, ಚಾಣಕ್ಯನ ಅಧಿಕಾರವಂ ತೆಗೆದುದರಿಂದಲೂ ಚಂದ್ರಗುಪ್ತನಲ್ಲಿ ಪಕ್ಷಪಾತ ಅಧಿಕವಾಗುವದೆಂದು ಹೇಳಬೇಕು" ಎನಲು, ಒಳಗೆ,

"ಎಲೈ ಚಾರನೇ, ಚಂದ್ರಗುಪ್ತನಿಗೆ ಚಾಣಕ್ಯನ ಮೇಲೆ ಕೋಪವುಂಟಾಗುವದಕ್ಕೆ ಕೌಮುದೀಮಹೋತ್ಸವವಂ ನಿಲ್ಲಿಸಿದುದರಿಂದಲೋ ಮತ್ತೇನಾದರೂ ನಿಮಿತ್ತಾಂತರ ವುಂಟೋ ?" ಎನಲು,

"ಸ್ವಾಮಿ, 'ರಾಕ್ಷಸನೂ ಮಲಯಕೇತುವೂ ಪಾಟಲೀಪುರವಂ ಬಿಟ್ಟು ಹೋಗುವಲ್ಲಿ ತಿಳಿದಿದ್ದವನಾದರೂ ತಡೆದು ನಿಲ್ಲಿಸದೆ ಉಪೇಕ್ಷೆಯಂ ಮಾಡಿದ'ನೆಂದು ಚಾಣಕ್ಯನಲ್ಲಿ ಕೋಪವುಂಟಾಗುವದಕ್ಕೆ ಇದು ಒಂದು ಕಾರಣವು" ಎಂದು ಚಾರನು ಹೇಳುತ್ತಿರಲು, ಅದಂ ಕೇಳಿ ಶಕಟದಾಸನಂ ನೋಡಿ,

"ಏನೈ ಶಕಟದಾಸನೇ, ಇನ್ನು ಚಂದ್ರಗುಪ್ತನು ನನ್ನ ಕೈವಶವಾದನಲ್ಲವೇ ? ಹೀಗಾದರೆ, ಚಂದನದಾಸನ ಬಂಧನವು ನಿವೃತ್ತಿಯಾದೀತು. ನೀನು ನಿನ್ನ ಹೆಂಗಸರು ಮಕ್ಕಳುಗಳಂ ನೋಡೀಯೆ" ಎನಲು, ಹೊರಗೆ,

"ಅಯ್ಯ ಬಾಗುರಾಯಣನೇ, 'ಚಂದ್ರಗುಪ್ತನು ನನ್ನ ಕೈವಶವಾದನೆಂ'ದು ರಾಕ್ಷಸನು ಚಾರನೊಡನೆ ಆಡಿಕೊಂಡಿದ್ದಕ್ಕೆ ಅಭಿಪ್ರಾಯವೇನೆಂ"ದೆನಲು,

"ಅಯ್ಯ ರಾಜಕುಮಾರಕನೇ, ಚಾಣಕ್ಯನಂ ಹೊರತಟ್ಟಿ ಇರುವ ಚಂದ್ರಗುಪ್ತನಲ್ಲಿ ರಾಕ್ಷಸನು ಚಾಣಕ್ಯನಂತೆ ಇರುತ್ತಿದ್ದರೆ, ನೀತಿಕೌಶಲ್ಯದಿಂದ ಚಂದ್ರಗುಪ್ತನು ತನ್ನ ವಶ ವಾಗುವನೆಂದು ರಾಕ್ಷಸನು ಹೇಳಿದಂತಾಯಿತು" ಎನಲು, ಒಳಗೆ,

"ಎಲೈ ಚಾರನೇ, ಚಾಣಕ್ಯನು ಈಗ ಪಾಟಲೀಪುರದಲ್ಲಿಯೇ ಇದ್ದಾನೆಯೋ, ಕೋಪ ದಿಂದ ಚಂದ್ರಗುಪ್ತನ ಮೇಲೆ ಸಹ ಪ್ರತಿಜ್ಞೆಯಂ ಮಾಡಿ ಹೋದನೋ ?" ಎಂದು ಕೇಳಲು, "ಸ್ವಾಮಿ, 'ಚಾಣಕ್ಯನು ತಪೋವನಕ್ಕೆ ಹೋಗುತಲಿದಾನೆ' ಎಂಬ ವರ್ತಮಾನ ಉಂಟಾಗಿ ಇದೆ" ಎಂದು ಚಾರನು ಹೇಳಲು,

"ಅಯ್ಯ ಶಕಟದಾಸನೇ, ನಂದರಿಂದ ಉಂಟಾದ ಅಪಮಾನಕ್ಕೆ ನಂದರಲ್ಲಿ ತೀಕ್ಷ್ಣ ಪ್ರತಿಜ್ಞೆಯಂ ಮಾಡಿ, ನಿರ್ವಹಿಸಿಕೊಂಡು, ಚಾಣಕ್ಯನು ಈಗ ತನ್ನಿಂದಲೇ ಪ್ರಭುಪದದಲ್ಲಿ ನಿಲ್ಲಿಸಿ ಇರುವ ಚಂದ್ರಗುಪ್ತನಿಂದ ಬಂದ ಅಪಮಾನವಂ ಸಹಿಸಿಕೊಂಡು, ಪ್ರತಿಜ್ಞೆಯಂ ಮಾಡದೆ, ಅಶಕ್ತನಂತೆ 'ತಪೋವನಕ್ಕೆ ಹೋಗುವನು' ಎಂಬ ವಾರ್ತೆಯು ಸಂಗತವಾಗಿ ತೋರುವದಿಲ್ಲ"ವೆಂದು ಹೇಳಿ,

"ಎಲೈ ಚಾರನೇ, ಚಾಣಕ್ಯನು ತಪೋವನಕ್ಕೆ ಹೋಗುವನೆಂಬ ವಾರ್ತೆಯು ಪ್ರಸಿದ್ಧವಾಗಿ ಇದೆಯೋ ಏನು ?" ಎನಲು,

ಹೊರಗೆ ಇರುವ ಮಲಯಕೇತುವು ಬಾಗುರಾಯಣನಂ ಕುರಿತು, "ಎಲೈ ಮಿತ್ರನೇ, ಚಾಣಕ್ಯನು ಚಂದ್ರಗುಪ್ತನಲ್ಲಿ ಪ್ರತಿಜ್ಞೆಯಂ ಮಾಡಿ ತಪೋವನಕ್ಕೆ ಹೋಗುವ ವಾರ್ತೆಯಂ

ಕೇಳಿದ್ದರಿಂದ ರಾಕ್ಷಸನಿಗೆ ಏನು ಪ್ರಯೋಜನವು ?" ಎನಲು,

"ಅಯ್ಯ ರಾಜಪುತ್ರನೇ, ಚಾಣಕ್ಯನು ಯಶಸ್ಸಿನಲ್ಲಿ ದೃಷ್ಟಿಯನ್ನಿಟ್ಟು ಈಗ ಚಂದ್ರಗುಪ್ತನಿಂದ ಉಂಟಾದ ಅಪಮಾನಕ್ಕೆ ಅವನಂ ಕೃತಘ್ನನೆಂದು ತಿಳಿದು 'ಸರ್ವಾತ್ಮನಾ ಅವನ ಮುಖಾವಲೋಕನವಂ ಮಾಡುವದಿಲ್ಲ'ವೆಂದು ಪ್ರತಿಜ್ಞೆಯಂ ಮಾಡಿ, ತಾನು ಸಂಪಾದಿಸಿದ ಯಶಸ್ಸಿಗೆ ಹಾನಿಯು ಇಲ್ಲದಂತೆ ತಪೋವನಕ್ಕೆ ಹೋಗಬಹುದು. ಇದಲ್ಲದೆ, ಎಷ್ಟು ಎಷ್ಟು ಚಾಣಕ್ಯನ ಸಂಬಂಧವು ಚಂದ್ರಗುಪ್ತನಿಗೆ ತಪ್ಪಿದರೆ, ಅಷ್ಟು ಅಷ್ಟು ತನ್ನ ಕಾರ್ಯಸಿದ್ಧಿಗೆ ಅನುಕೂಲವಾದೀತೆಂದು ರಾಕ್ಷಸನ ಮನೋಭಿಪ್ರಾಯವಾಗಬಹುದು" ಎನಲು,

ಒಳಗೆ, ಶಕಟದಾಸನು "ಸ್ವಾಮಿ ಅಮಾತ್ಯರೇ, ಚಾಣಕ್ಯನು ತಪೋವನಕ್ಕೆ ಹೋಗುವದು ಯಥಾರ್ಥವಾಗಬಹುದು. ಹೇಗೆಂದರೆ, ಬಹುರಾಜಸಮೂಹದಿಂದ ಉಪಾಸ್ಯಮಾನನಾದ ಚಂದ್ರಗುಪ್ತನು ಚಾಣಕ್ಯನಿಂದ ತನ್ನ ಆಜ್ಞೆಗೆ ಭಂಗವುಂಟಾದುದರಿಂದಲೂ ನಿಮ್ಮಲ್ಲಿ ಇರುವ ಕಾರ್ಯನಿರ್ವಾಹಶಕ್ತಿಯಂ ತಿಳಿದವನಾದುದರಿಂದಲೂ ಚಾಣಕ್ಯನ ಅಧಿಕಾರವಂ ತೆಗೆದಿದ್ದಾನು. ಚಾಣಕ್ಯನಾದರೋ ಮೊದಲು ಕ್ರೋಧವಶದಿಂ ನಂದರ ಮೇಲೆ ತೀಕ್ಷ್ಣ ಪ್ರತಿಜ್ಞೆಯಂ ಮಾಡಿ, ದೈವಬಲದಿಂದ ಅದಂ ನಿರ್ವಹಿಸಿಕೊಂಡನು. 'ಅದೇ ರೀತಿಯಲ್ಲಿ ಪ್ರತಿಜ್ಞೆಯಂ ಮಾಡಿದರೆ, ಈಗ ನಿರ್ವಹಿಸುವದೋ ಇಲ್ಲವೋ' ಎಂದು ಆಲೋಚಿಸಿ, ತಾನು ಸಂಪಾದಿಸಿದ ಯಶಸ್ಸಿಗೆ ಹಾನಿ ಬರಬಾರದೆಂದು ನಿಶ್ಚೈಸಿ, ಮೃದುಪ್ರತಿಜ್ಞೆಯಂ ಮಾಡಿ, ತಪೋವನವನ್ನೈದುವನು" ಎನಲು,

ಆ ಮಾತಿಗೆ ರಾಕ್ಷಸನು, "ಲೋಕದಲ್ಲಿ ಉತ್ತಮಪುರುಷರು ಉಪಾರ್ಜಿತವಾದ ಯಶಸ್ಸಿನಲ್ಲಿ ದೃಷ್ಟಿಯನ್ನಿರಿಸುವರಲ್ಲದೆ ಕಾಮಕ್ರೋಧವಶರಾಗರು ; ಮತ್ತು ಪ್ರಭುಪದವಂ ಪಡೆದವರು ಕಾರ್ಯದಕ್ಷರಂ ಪುರಸ್ಕರಿಸುವುದರಿಂದಲೇ ಅವರ ಪದವಿಯು ನಿಷ್ಕಂಟಕವಾಗಿ ಇರುವದು" ಎಂದು ಹೇಳುತ್ತಿರಲು,

ಹೊರಗೆ ಬಾಗುರಾಯಣನು, "ಅಯ್ಯ ರಾಜಪುತ್ರನೇ, ಒಳಗೆ ರಾಕ್ಷಸನಿಗೂ ಶಕಟದಾಸನಿಗೂ ನಡೆದ ಸಂವಾದದಿಂದ ಚಂದ್ರಗುಪ್ತನಲ್ಲಿ ರಾಕ್ಷಸನಿಗೆ ಅಭಿಮಾನವುಂಟಾಗಿ ಇರುವದಕ್ಕೆ ಸಂಶಯವುಂಟೇ ?" ಎನಲು, ಬಾಗುರಾಯಣನ [ಆ] ವಾಕ್ಯವಂ ಕೇಳಿ ಮಲಯಕೇತುವು, "ಮುಂದೆ ರಾಕ್ಷಸನ ಗುಣವಂ ಪರೀಕ್ಷಿಸಿದಲ್ಲದೆ ಕಾರ್ಯೋದ್ಯೋಗವಂ ಮಾಡಕೂಡದು" ಎಂದು ನಿಶ್ಚೈಸುತ್ತಿರಲು,

ಆಗ ರಾಕ್ಷಸನು ಚಾರನಂ "ಹೊರಗೆ ವಿಶ್ರಮಿಸಿಕೋ" ಎಂದು ಹೇಳುತ್ತಿರಲು, ಆಗ ಮಲಯಕೇತುವು ರಾಕ್ಷಸನ ಸಮೀಪಕ್ಕೆ ಬಾಗುರಾಯಣಸಮೇತನಾಗಿ ಹೋಗುತ್ತಿರಲು, ಆಗ ರಾಕ್ಷಸನು ಮಲಯಕೇತು ಬಂದುದಂ ಕಂಡು, ತಾನೇ ಎದ್ದು ಬಂದು ಹಾಸಿಗೆಯಲ್ಲಿ ಮಲಯಕೇತುವಂ ಕುಳ್ಳಿರಿಸಿಕೊಂಡು, "ಅಯ್ಯ ಕುಮಾರಕನೇ, ಬಡವರ ಮನೆಗೆ ಭಾಗ್ಯ ದೇವತೆ ಬಂದಂತೆ ಈ ನನ್ನ ಗೃಹವು ಮಂಗಳಕರವಾಯಿತು. ಒಮ್ಮಿಂದೊಮ್ಮೆ ಬಂದ ಪ್ರಯೋಜನವೇನಂ"ದೆನಲು,

"ಸ್ವಾಮೀ ಅಮಾತ್ಯರೇ, ತಾವು ಶಿರೋವೇದನೆಯಿಂದ ಶ್ರಮಪಡುವರೆಂದು ಕೇಳಿ ನಿಮ್ಮಂ ನೋಡ ಬಂದೆನು" ಎನಲು, "ಅಯ್ಯ ಕುಮಾರಕನೇ, ನಿನ್ನಂ ಹೇಳುವ ಶಬ್ದದಲ್ಲಿ ರಾಜಾಧಿರಾಜನೆಂಬ ಹೆಸರುಂಟಾಗುವ ಪರ್ಯಂತವೂ ನನ್ನ ಶಿರೋವೇದನೆ ಹೇಗೆ

ಶಾಂತವಾಗುವದು ?" ಎನಲು, "ಅಮಾತ್ಯರೇ, ತಾವು ಅಭಿಮಾನಿಸಿ ಇರುವಲ್ಲಿ ಈ ಅರ್ಥವು ಲಭಿಸುವದಕ್ಕೆ ಸಂಶಯವುಂಟೇ ? ಈಗ ಇಲ್ಲಿ ಬಹುಸೇನೆಗಳಂ ನಿಲ್ಲಿಸಿಕೊಂಡು, ಶತ್ರುವಿನ ವ್ಯಸನಕಾಲವಂ ನಿರೀಕ್ಷಿಸುತ್ತ, ಎಷ್ಟು ದಿವಸ ಕಾಲಹರಣವಂ ಮಾಡಬೇಕು?" ಎನಲು,

"ಅಯ್ಯ ರಾಜಕುಮಾರಕನೇ, ಈಗಲೇ ವಿಜಯಪ್ರಯಾಣವಂ ಮಾಡಬಹುದು. ಶತ್ರುವಾದ ಚಂದ್ರಗುಪ್ತನಿಗೆ ವ್ಯಸನಕಾಲ ಪ್ರಾಪ್ತವಾಗಿ ಇದೆ" ಎನಲು, "ಅಯ್ಯ ಅಮಾತ್ಯರೇ, ಆ ವ್ಯಸನ ಎಂಥದು ?" ಎನಲು, "ಅಯ್ಯ ರಾಜಕುಮಾರಕನೇ, ಮಂತ್ರಿವ್ಯಸನ ಸಂಭವಿಸಿ ಇದೆ" ಎನಲು, "ಅಮಾತ್ಯರೇ, ಮಂತ್ರಿವ್ಯಸನ ಪ್ರಭುವಿಗೆ ವ್ಯಸನಕೂಟವಲ್ಲ" ಎನಲು, "ಮಿಗಿಲಾದ ಅರಸುಗಳಿಗೆ ಹಾಗೆ ಇದ್ದರೂ ಇರಬಹುದು. ಚಂದ್ರಗುಪ್ತನಿಗೆ ಹಾಗೆ ಹೇಳಕೂಡದು" ಎನಲು, "ಅಮಾತ್ಯರೇ, ಚಂದ್ರಗುಪ್ತನು ಚಾಣಕ್ಯನಲ್ಲಿ ಅನುರಕ್ತನಾಗಿ ಇದ್ದುದರಿಂದ ಚಂದ್ರಗುಪ್ತನಲ್ಲಿ ಪ್ರಜೆಗಳಿಗೆ ವಿಶ್ವಾಸ ಸಾಲದೆ ಇತ್ತು. ಆ ಚಾಣಕ್ಯನು ಚಂದ್ರಗುಪ್ತನಂ ಬಿಟ್ಟು ಹೋದ ಬಳಿಕ ಪ್ರಜೆಗಳಿಗೆ ಚಂದ್ರಗುಪ್ತನಲ್ಲಿ ಅನುರಾಗವುಂಟಾಗಿಯೇ ಇದ್ದೀತು" ಎನಲು,

"ಅಯ್ಯ ರಾಜಕುಮಾರಕನೇ, ಪ್ರಜೆಗಳಲ್ಲಿ ಎರಡು ತೆರನಾಗಿ ಇರುವರು. ಅದರಲ್ಲಿ ಚಂದ್ರಗುಪ್ತನ ಅಭ್ಯುದಯವಂ ಹಾರೈಸುವವರು ಕೆಲವರು ; ನಂದರಲ್ಲಿ ಅನುರಕ್ತರಾಗಿ ಇದ್ದವರು ಕೆಲವರು. ಚಂದ್ರಗುಪ್ತಾನುರಕ್ತರಾದ ಪ್ರಜೆಗಳಿಗೆ ಇಷ್ಟು ದಿನವೂ ಚಾಣಕ್ಯನ ಸಹವಾಸದುರ್ವಾಸನೆ ಚಂದ್ರಗುಪ್ತನಿಗೆ ಬಿಡದೆ ಇರುವದರಿಂದ ಆ ಪ್ರಜೆಗಳಿಗೆ ಚಂದ್ರಗುಪ್ತನಲ್ಲಿ ಉಪೇಕ್ಷೆಗೆ ಕಾರಣವಾಯಿತು. ನಂದಾನುರಕ್ತರಾದ ಪ್ರಜೆಗಳಿಗೆ ಚಂದ್ರಗುಪ್ತನಲ್ಲಿ ಎಂದಿಗೂ ವಿರೋಧ ಸಿದ್ಧವು. ಈ ಉಭಯಪಕ್ಷದ ಪ್ರಜೆಗಳು ಅವಲಂಬಾಂತರವಿಲ್ಲದೆ ಇರುವದರಿಂದ ಚಂದ್ರಗುಪ್ತನನ್ನು ಅನುವರ್ತಿಸಿಕೊಂಡು ಕಾಲಹರಣವಂ ಮಾಡುತ್ತಲಿದಾರೆ. ಶತ್ರುಗಳಂ ನಿಗ್ರಹಿಸುವದರಲ್ಲಿ ಸಮರ್ಥನಾಗಿ ಪ್ರಜಾರಕ್ಷಕನೂ ಆದುದರಿಂದ ಪ್ರಜೆಗಳೆಲ್ಲರೂ ನಿನ್ನನ್ನೇ ಆಶ್ರಯಿಸಿ, ಚಂದ್ರಗುಪ್ತನಂ ತ್ಯಜಿಸುತ್ತಲಿದಾರೆ. ಈ ಅರ್ಥದಲ್ಲಿ ನಾನೇ ದೃಷ್ಟಾಂತವು" ಎನಲು,

"ಅಮಾತ್ಯರೇ, ಚಂದ್ರಗುಪ್ತನು ಸ್ವತಂತ್ರದಿಂದ ರಾಜ್ಯಭಾರವಂ ನಿರ್ವಹಿಸಲಾರನೇ?" ಎನಲು, "ಅಯ್ಯ ಕುಮಾರಕನೇ, ಚಂದ್ರಗುಪ್ತನು ಅಷ್ಟಕ್ಕೆ ಯೋಗ್ಯನಲ್ಲ ; ಯಾಕೆಂದರೆ, ಲೋಕದಲ್ಲಿ ತನ್ನ ಬಾಹುಬಲದಿಂದ ರಾಜ್ಯವಂ ಸಂಪಾದಿಸಿದ ಅರಸಿಗೆ ರಾಜ್ಯಭಾರ ನಿರ್ವಾಹವು ಘಟಿಸುವದೆಂದು ಹೇಳಬೇಕು. ಈಗ ಚಂದ್ರಗುಪ್ತನಿಗೆ ಚಾಣಕ್ಯನ ಬುದ್ಧಿಬಲದ ಅವಲಂಬನವಿಲ್ಲದುದರಿಂದ ರಾಜ್ಯನಿರ್ವಾಹವಂ ಮಾಡುವದಕ್ಕೆ ಹೇಗೆ ಸಮರ್ಥತ್ವವು ಘಟಿಸೀತು ? ಲೋಕದಲ್ಲಿ ಸ್ತನ್ಯಪಾನದಿಂದ ಜೀವಿಸುವ ಶಿಶುವು ಸ್ತನ್ಯವಿಲ್ಲದಿದ್ದರೆ ಹೇಗೆ ಜೀವಿಸಲಾರದೋ, ಅದೇ ರೀತಿಯಲ್ಲಿ ಮಂತ್ರಿಸಿದ್ಧಿ ಉಳ್ಳ ಅರಸು ದಕ್ಷನಾದ ಮಂತ್ರಿಯಂ ಬಿಟ್ಟು ರಾಜ್ಯತಂತ್ರವಂ ನಿರ್ವಹಿಸಲಾರನು" ಎನಲು,

"ಸ್ವಾಮೀ ಅಮಾತ್ಯರೇ, ಹಾಗಾದರೆ ಶತ್ರುವಿನ ಮೇಲೆ ನಾವು ದಂಡೆತ್ತಿ ಹೋಗಬೇಕಾಗುತ್ತಲಿದೆಯಷ್ಟೆ. ಶತ್ರುಜಯಕ್ಕೆ ಅನೇಕ ಕಾರಣವಿರಲಾಗಿ, ಶತ್ರುವ್ಯಸನವನ್ನೇ ಮುಖ್ಯವಾಗಿ ನಿರೀಕ್ಷಿಸುತ್ತ ನಾವು ಯುದ್ಧಕ್ಕೆ ತೆರಳಿದರೆ, ನಮಗೆ ಕಾರ್ಯಸಿದ್ಧಿ ಆಗುವ ಪರಿ ಹೇಗೆಂ"

ದೆನಲು.

"ಅಯ್ಯ ಕುಮಾರಕನೇ, ಅದು ಮಾತ್ರವೇ ಅಲ್ಲ, ನೀನು ಶೂರಸೇನಾಪರಿವೃತನಾದುದರಿಂದಲೂ ಅಧಿಕಾರಭ್ರಷ್ಟನಾಗಿ ಚಾಣಕ್ಯನು ಚಂದ್ರಗುಪ್ತನಂ ಬಿಟ್ಟು ಹೋದುದರಿಂದಲೂ ಚಂದ್ರಗುಪ್ತನು ನೂತನಪ್ರಭುವಾಗಿ ಮಂತ್ರಿರಹಿತನಾಗಿ ಇರುವದರಿಂದಲೂ ನಿನಗೆ ವೇಳೆ ಸಮಯದಲ್ಲಿ ಉಪಾಯವನ್ನುಪದೇಶಿಸುತ್ತ ನಾನು ನಿನ್ನವನಾಗಿ ಇರುವದರಿಂದಲೂ ನೀನು ಎಣಿಸಿದಂತೆ ಕಾರ್ಯಸಿದ್ಧಿಯಾಗುವದರಲ್ಲಿ ಸಂಶಯವುಂಟೇ ?" ಎನಲು.

"ಅಯ್ಯ ಅಮಾತ್ಯರೇ, ಹಾಗಾದರೆ ನಮ್ಮ ಸೇನೆಯು ಗೌಡದೇಶದಲ್ಲಿ ಶೋಣಾನದೀತೀರಕ್ಕೆ ಹೋಗಿ ಇಳಿಯುವಂತೆ ನಮ್ಮ ಸೇನಾಪತಿಗಳಿಗೆಲ್ಲರಿಗೂ ನೀವೇ ಅಪ್ಪಣೆಯ ಕೊಡತಕ್ಕದ್ದು" ಎಂದು ಮಲಯಕೇತುವು ರಾಕ್ಷಸನಿಗೆ ಹೇಳಿ, ಅವನಿಂದ ಆದ ಸಮ್ಮಾನವಂ ಕೈಕೊಂಡು ಬಾಗುರಾಯಣಸಮೇತನಾಗಿ ತನ್ನ ಗೃಹಕ್ಕೆ ಬರುತ್ತಿದ್ದನು ಎಂಬಲ್ಲಿಗೆ.

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಶ್ರೀಮಹೀಶೂರನರಪತಿ ಶ್ರೀಕೃಷ್ಣರಾಜೇಂದ್ರರಾಶ್ರಿತ ಹೊಯಿಸಣಗಕುಲಸಂಜಾತ ನಾರಾಯಣಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ಮಲಯಕೇತು ರಾಕ್ಷಸ ಸಂವಾದಕಥನವೆಂಬ ಷೋಡಶಾಶಯಃ ಸಮಾಪ್ತಃ.

ಸಪ್ತದಶಾಶಯ : ರಾಕ್ಷಸನಿಷ್ಕಾಸಕಥನವು

ಹೀಗೆ ರಾಕ್ಷಸನೊಡನೆ ಮಲಯಕೇತುವು ಮಾತನಾಡಿಕೊಂಡು ತನ್ನ ಗೃಹವಂ ಸೇರಲು, ಮೊದಲಿಗಿಂತಲೂ ಅಧಿಕವಾಗಿ ದೇಶಾಧಿಪತಿಗಳ ಸೇನೆಗಳೆಲ್ಲವೂ ಗುಂಪುಕೂಡಿ ಪಾಟಲೀಪುರಕ್ಕೆ ತೆರಳಲುದ್ಯುಕ್ತವಾಗಿ, ಅಘನಾಶಿನೀತೀರಪರ್ಯಂತವೂ ಭೂಮಂಡಲ ಕಾಣಿಸದಂತೆ ಇಳಿಯುತ್ತ, ಆ ಸೇನಾಧೂಳೀನಿಕರದಿಂದ ನಭೋಮಂಡಲವೆಲ್ಲವೂ ಮುಚ್ಚಿ ದಿಕ್ತಟಂಗಳು ಕಾಣಿಸದೆ ಇರಲು, ಗೌಡದೇಶಪ್ರಜೆಗಳಿಗೆ ಮೊದಲಿನಂತೆ ಆತಂಕವುಂಟಾಗಿ ವಲಸೆ ಹೋಗುವದಕ್ಕೆ ಯತ್ನವಂ ಮಾಡುತ್ತಿರಲು, ಇದೆಲ್ಲವಂ ತಿಳಿದು ಪಾಟಲೀಪುರದಿಂದ ಮೊದಲು ಅಪಮಾನಿತನಾಗಿ ಹೊರಟು ಬಂದ ಕ್ಷಪಣಕನು ಪರ್ವತರಾಜ್ಯಕ್ಕೆ ಬಂದು, ರಾಕ್ಷಸನ ಗೃಹದ್ವಾರದಲ್ಲಿ ಬಂದು ನಿಂತಿರಲು,

ಆ ಸಮಯದಲ್ಲಿ ರಾಕ್ಷಸನು ಮಲಯಕೇತುಸೇನೆಯು ಮುಂದೆ ಪಾಟಲೀಪುರಕ್ಕೆ ಹೊರಡಲೋಸುಗ ಲಗ್ನವಂ ನಿಶ್ಚೈಸಬೇಕೆಂದು ಆಲೋಚಿಸುತ್ತ ದೂತನ ಮುಖವಂ ನೋಡಿ, "ಎಲೈ, ಹೊರಗೆ ಜ್ಯೋತಿಷಜ್ಞರಾದವರು ಯಾರಾದರೂ ಇದ್ದರೆ ಕರೆತರುವನಾಗು" ಎಂದು ನೇಮಿಸಲು, ಹಾಗೇ ದೂತನು ಬಂದು ನೋಡಿ ಹೋಗಿ, "ಬುದ್ಧಿ, ಜ್ಯೋತಿಷಜ್ಞರು ಯಾರೂ ಹೊರಗೆ ಸಿದ್ಧವಾಗಿ ಇಲ್ಲ, ಮೊದಲಿನ ಕ್ಷಪಣಕನು ನಿಂತಿಹನೆಂ"ದು ಹೇಳಲು, "ಕ್ಷಪಣಕನ ದರ್ಶನವು ಅಪಶಕುನವು ; ಆದರೂ ಸೌಮ್ಯವೇಷದಿಂದ ಬರ ಹೇಳೆಂ"ದು ರಾಕ್ಷಸನು ಹೇಳಲು, ಹಾಗೇ ಹೇಳಿ, ಆ ಕ್ಷಪಣಕನಂ ಕರೆತಂದು ರಾಕ್ಷಸನ ಮುಂದೆ ಬಿಡಲು, "ಧರ್ಮನಿಯತರಿಗೆ ಜಯವಾಗಲೆಂ"ದು ಹರಸಿ ಕ್ಷಪಣಕನು ನಿಂತಿರಲು, ಆತನಂ ನೋಡಿ,

"ಅಯ್ಯಾ ಜೀವಸಿದ್ಧಿಗಳೇ, ಬಂದಿರೇ ? ಕುಳ್ಳಿರಿ. ಉಳಿದ ವರ್ತಮಾನವೇನಿದ್ದರೂ ಆ ಬಳಿಕವಾಗಲಿ. ಪ್ರಕೃತದಲ್ಲಿ ವಿಜಯಯಾತ್ರೆಗೆ ಈ ದಿವಸ ಮುಹೂರ್ತವಂ ನಿಶ್ಚೈಸಿ" ಎನಲು, ಆ ಮಾತಿಗೆ "ಅಯ್ಯ ಅಮಾತ್ಯರೇ, ಈ ದಿವಸ ಮಧ್ಯಾಹ್ನಾತ್ಪರದಲ್ಲಿ ಸಕಲ ಗುಣಯುಕ್ತವಾದ ತಿಥಿಯೂ ಪೌರ್ಣಮಾಸೆಯೂ ಬರುತಲಿದೆ. ಉತ್ತರದಿಕ್ಕಿನಿಂದ ದಕ್ಷಿಣಕ್ಕೆ ಹೋಗಲಿಚ್ಛೈಸಿದ ನಿನಗೆ ನಕ್ಷತ್ರವು ವಾಮಭಾಗಕ್ಕೆ ಆಗುತಲಿದೆ. ಬಹು ಒಳ್ಳೆಯದು. ತೆರಳಬಹುದೆಂ"ದು ಕ್ಷಪಣಕನು ಹೇಳುತಿರಲು, ರಾಕ್ಷಸನು ಪೂರ್ವಸ್ಮರಣೆ ಯಿಂದ ಸಂಶಯಾವಿಷ್ಟನಾಗಿ "ಎಲೈ ಕ್ಷಪಣಕನೇ, ಮೊದಲು ವಿಜಯಯಾತ್ರೆಗೆ ಲಗ್ನವಂ ಹೇಳಿದಂತೆ ಹೇಳಬೇಡ. ಮಿಕ್ಕ ಜ್ಯೋತಿಷಜ್ಞರೊಡನೆ ಆಲೋಚಿಸಿ ಏಕವಾಕ್ಯತೆಯಿಂದ ಬಂದು ಹೇಳುವನಾಗು" ಎನಲು, "ಎಲೈ ಅಮಾತ್ಯನೇ, ನೀನೇ ಹೋಗಿ ಆ ಯಾವ ಜ್ಯೋತಿಷಜ್ಞರಂ ಕೇಳಬೇಕೋ ಕೇಳಿಕೊಂಡು ನಿಶ್ಚಯವಂ ಮಾಡಿಕೋ. ನಾನು ಮತ್ತೆ ಎಲ್ಲಾದರೂ ಹೋಗುವೆನೆಂ"ದೆನಲು, "ಎಲೈ ಕ್ಷಪಣಕನೇ, ಇಷ್ಟು ಮಾತ್ರಕ್ಕೇ ಸಂನ್ಯಾಸಿ ಯಾದವನಿಗೆ ಕೋಪ ಬಂತೇನೋ ?" ಎನಲು, "ಎಲೈ ಅಮಾತ್ಯನೇ, ನನಗೆ ನಿನ್ನ ಮೇಲೆ ಕೋಪ ಯಾತಕ್ಕೆ ?" ಎನಲು, "ಎಲೈ ಕ್ಷಪಣಕನೇ, ಮತ್ತೆ ಯಾರಿಗೆ ನನ್ನ ಮೇಲೆ ಕೋಪ"ವೆಂದು ರಾಕ್ಷಸನು ಹೇಳಲು,

"ಎಲೈ ರಾಕ್ಷಸನೇ, ಸ್ವ ಆಶ್ರಿತರಂ ಬಿಟ್ಟು, ಅನ್ಯರನ್ನಪೇಕ್ಷಿಸುತ್ತ, ದೈವಬಲಹೀನನಾದ ನಿನ್ನ ಮೇಲೆ ದೈವವೇ ಕೋಪವಂ ಮಾಡುತಲಿದೆ" ಎಂದು ಹೇಳಿ, ಕ್ಷಪಣಕನು ಅಲ್ಲಿಂದ ಎದ್ದು ಹೋಗಲು, ಅದಂ ನೋಡಿ ರಾಕ್ಷಸನ ಬಳಿಯಲ್ಲಿ ಆಪ್ತನಂತೆ ಆಶ್ರೈಸಿಕೊಂಡಿದ್ದ ಸಿದ್ಧಾರ್ಥಕನು, ತಾನು ಇನ್ನು ವಿಳಂಬವಂ ಮಾಡಿದರೆ ಮೊದಲಿಗಿಂತಲೂ ಅಧಿಕವಾಗಿ ಕೂಡಿ ಇರುವ ಮಲಯಕೇತುವಿನ ಸೇನಾಪಾದಘಾತದಿಂದ ಗೌಡದೇಶವೆಲ್ಲವೂ ಕ್ಷುಬ್ಧ ವಾಗಿ ರಾಜಕಾರ್ಯವು ಬಹುಪ್ರಯತ್ನಕ್ಕೆ ಸಾಧ್ಯವಾಗುವದೆಂದು ತಿಳಿದು, ರಹಸ್ಯದಲ್ಲಿ ಬಂದು ಬಾಗುರಾಯಣನಂ ಕಂಡು, ಅಲ್ಲಿಂದ ಹೋಗಿ ಬಾಗುರಾಯಣ ಹೇಳಿದಂತೆ ಜಾಗ್ರತೆ ಯಾಗಿ ಇರತಕ್ಕುದೆಂದು ಭದ್ರಭಟಾದಿಗಳಿಗೆ ರಹಸ್ಯದಲ್ಲಿ ಹೇಳಿ, ಪುನಃ ರಾಕ್ಷಸನ ಗೃಹಕ್ಕೆ ಬಂದು ಸಿದ್ಧಾರ್ಥಕನು ಶಕಟದಾಸನಿಗೆ ಇಂತೆಂದನು :

"ಅಯ್ಯ ಮಿತ್ರನೇ, ನನಗೆ ಹೆಣ್ಣು ಕೊಟ್ಟ ಮಾವನ ಗ್ರಾಮವು ಇಲ್ಲಿಗೆ ಸಮೀಪವಾಗಿ ಇದೆ. ನಾನು ವಿದೇಶಗತನಾದುದಂ ತಿಳಿದು ನನ್ನ ಹೆಂಡಿರು ಸ್ಥಳದಲ್ಲಿ ಇರಲಂಜಿ ತವರು ಮನೆಯಂ ಸೇರಿದಳಂತೆ. ಅವರೆಲ್ಲರಂ ನೋಡಿ 'ಅಮಾತ್ಯರಿಗೆ ನಾನು ಪ್ರೀತಿಪಾತ್ರ' ನೆಂದು ತಿಳಿ[ಯ]ಪಡಿಸಿ ಬರುವೆನು. ನನಗೆ ಅಮಾತ್ಯರು ಸಂತೋಷದಿಂದ ಕೊಟ್ಟ ಭೂಷಣಂಗಳಂ ಕೊಟ್ಟು ಪತ್ನೀದುಃಖವಂ ಶಮನವಂ ಮಾಡಿ ಬರುವೆನು" ಎನಲು,

ಅದಂ ಕೇಳಿ ಶಕಟದಾಸನು "ಹಾಗೇ ಮಾಡಿಕೋ" ಎಂದು ರಾಕ್ಷಸನು ಸಿದ್ಧಾರ್ಥಕನಿಗೆ ಕೊಟ್ಟಿದ್ದ ಭೂಷಣಂಗಳಂ ಅವನಿಗೆ ಕೊಡಲು, ಆ ಭೂಷಣದ ಪೆಟ್ಟಿಗೆಯಂ ತೆಗೆದು ಕೊಂಡು ಚಾಣಕ್ಯನು ತನ್ನ ಕಿವಿಯಲ್ಲಿ ಮೊದಲು ಹೇಳಿ ಕಳುಹಿಸಿದ ಮೇರೆಗೆ ಎಲ್ಲವಂ ನೆನೆದು, ಅವನು ಬರೆದುಕೊಟ್ಟು ಇದ್ದ ಕಾಗದವಂ ಸಹ ತೆಗೆದುಕೊಂಡು ಅಲ್ಲಿಂದ ಹೊರಟು, ಆ ಉಕ್ಕಡದ ಮಾರ್ಗವಾಗಿ ಬರುತ್ತಿರಲು, ಸಿದ್ಧಾರ್ಥಕನು ಹೇಳಿ ಹೋದ ರೀತಿಗೆ ಬಾಗುರಾಯಣನು ಮಲಯಕೇತುವಿಗೆ ಬೋಧಿಸಿ, ದಂಡಿಗೆ ಹೋಗುವ ಸ್ಥಳ

ಪರಸ್ಥಳದ ಜನರಂ ವಿಚಾರಿಸಿಕೊಂಡು, "ಉಕ್ಕಡಕ್ಕೆ ಉಂಡಿಗೆಯಂ ಕೊಡುವ ಅಧಿಕಾರವಂ ತಾನೇ ನೋಡುವೆನೆಂ"ದು ಹೇಳಿ, ಅಧಿಕಾರದಲ್ಲಿ ನೇಮಿತನಾಗಿ ಜನಗಳಿಗೆ ಉಂಡಿಗೆಯಂ ಕೊಡುತ್ತಿರಲು, ಆ ಮಾರ್ಗಗೊಂಡು ಬರುವ ಸಿದ್ಧಾರ್ಥಕನಿಗೆ ಕ್ಷಪಣಕನು ಎದುರಾಗಲು, ಅವನಂ ಕಂಡು "ನಮ್ಮ ಕ್ಷಪಣಕನು ಎದುರಾದುದರಿಂದ ಅಪಶಕುನವಾದರೂ ನನಗೆ ಶಕುನವೇ ಸರಿ. ಈತನು ಕ್ಷಪಣಕನು ಯಥಾರ್ಥನಾಗಿ ಇದ್ದರೆ ಬಾಧಕವು. ವೇಷವಂ ಧರಿಸಿ ಇರುವದರಿಂದ ದೊಡ್ಡವರಂ ಕಂಡಂತೆ ಶಕುನವೇ ಆಯಿತೆಂ"ದು ತಿಳಿಯುತ್ತ, ವಿಶೇಷವುಂಟಾಗಿ ಇದ್ದರೆ ವಿಚಾರಿಸಬೇಕೆಂದು ನಿಶ್ಚೈಸಿ,

"ಸ್ವಾಮೀ ಕ್ಷಪಣಕರೇ, ನಮಸ್ಕಾರವು. ಎಲ್ಲಿಂದ ಬಂದಿರಿ ? ಎಲ್ಲಿಗೆ ಪ್ರಯಾಣ"ವೆಂದು ಸಿದ್ಧಾರ್ಥಕನು ಕೇಳಲು, "ಎಲೈ ಸಿದ್ಧಾರ್ಥಕನೇ, ಯಜಮಾನರ ವಾಕ್ಯಾನುಸಾರವಾಗಿ ಹೊರಟು ಇರುವಂತೆ ತೋರುತ್ತೆ" ಎನಲು, "ಕ್ಷಪಣಕರೇ, ನೀವು ಜ್ಯೋತಿಷಜ್ಞರಾದುದರಿಂದ ತಿಳಿದಿರೋ ಏನು ?" ಎನಲು, ಆ ಮಾತಿಗೆ "ಎಲೈ ಸಿದ್ಧಾರ್ಥಕನೇ, ನಿನ್ನ ಬಳಿಯಲ್ಲಿ ಇರುವ ಕಾಗದವೇ ನಿನ್ನ ಪ್ರಯಾಣವಂ ಸೂಚಿಸುತಲಿದೆ" ಎನಲು, "ಕ್ಷಪಣಕರೇ, ನಾನು ಮತ್ತೊಂದು ದೇಶಕ್ಕೆ ಹೋಗಬೇಕಾಗುತಲಿದೆ. ಪ್ರಯಾಣಕ್ಕೆ ದಿವಸ ಹೇಗಿರುವದೋ ?" ಎನಲು, "ಎಲೈ ಸಿದ್ಧಾರ್ಥಕನೇ, ವಪನವಂ ಮಾಡಿಕೊಂಡ[1] ಬಳಿಕ 'ಆಯುಷ್ಕರ್ಮಕ್ಕೆ ದಿನ ಹೇಗಿರುವದೆಂ'ದು ಕೇಳುವನಂತೆ, ಪ್ರಯಾಣಸನ್ನಾಹದಿಂದ ಬರುತ್ತ ಲಗ್ನವಂ ಕೇಳುವದು ಬಹುಕೌತುಕವಾಯಿತು" ಎನಲು, "ಅದಂತಿರಲಿ, ತಾವು ಎಲ್ಲಿಗೆ ಹೋಗುವಿರಿ ? ಮತ್ತೇನು ವಿಶೇಷ"ವೆಂದೆನಲು,

"ಎಲೈ ಸಿದ್ಧಾರ್ಥಕನೇ, ನಿನ್ನೆ ಮೊದಲುಗೊಂಡು ಪಾಟಲೀಪುರದ ಮಾರ್ಗವಾಗಿ ಹೋಗುವ ಜನರು ಬಾಗುರಾಯಣ ಕೊಡುವ ಉಂಡಿಗೆಯಂ ಉಕ್ಕಡದವರಿಗೆ ತೋರಿಸಿದಲ್ಲದೆ ಸುಮ್ಮನೆ ಹೋಗಕೂಡದಂತೆ. ರಾತ್ರೆ ವೇಳೆಯಲ್ಲಿ ಮತ್ತೂ ಅಶಕ್ಯವಂತೆ. ನೀನು ರಾತ್ರೆ ವೇಳೆಯಲ್ಲಿ ಉಕ್ಕಡದವರಿಗೆ ಸಿಕ್ಕಿ ಬಂಧನಕ್ಕೆ ತಗುಲಿ ರಾಜಪುತ್ರನಾದ ಮಲಯಕೇತುವಿನ ಮುಂದೆ ಹೋಗಿ ನಿಲ್ಲಬೇಕಾದರೆ ಉಂಡಿಗೆಯನ್ನಪೇಕ್ಷಿಸದೆ ಹೋಗುವನಾಗು. ನೀನು ರಾಕ್ಷಸನ ಕಡೆ ಹರಿಕಾರನಾದುದರಿಂದ ನಿನ್ನ ಯಾರೂ ತಡೆಯರು. ನಿನ್ನ ಕಾರ್ಯಸಿದ್ಧಿಯಾಗುವ ಸಮಯ ಸನ್ನಿಹಿತವಾಯಿತು, ಹೋಗು. ನಾನು ಬಾಗುರಾಯಣನಂ ಉಂಡಿಗೆಯಂ ಕೇಳುವದಕ್ಕೆ ಹೋಗುವೆನು" ಎಂದು ಹೇಳಿ, ಸಿದ್ಧಾರ್ಥಕನಂ ಉಕ್ಕಡದ ಬಳಿಗೆ ಕಳುಹಿಸಿ ಕ್ಷಪಣಕನು ಬಾಗುರಾಯಣನ ಬಳಿಗೆ ಬರುತ್ತಿದ್ದನು.

ಆಗ ಬಾಗುರಾಯಣ ತನ್ನ ಮನಸ್ಸಿನಲ್ಲಿ "ನಮ್ಮ ಯಜಮಾನರಾದ ಚಾಣಕ್ಯರ ನೀತಿ ಪ್ರಯೋಗವು ಅಕಾಲಮೇಘದಂತೆ, ವಿಚಿತ್ರವಾದ ದೈವವಿಲಾಸದಂತೆ, ಒಂದು ವೇಳೆ ಮಹಾಫಲವಂ ತೋರುತ, ಹಾಗೆ ಕಾಣಿಸಿಕೊಳ್ಳದೆ ಕೃಶವಾಗುತ, ಪುನಃ ತೋರಿ ಅಡಗುತ, ಮೂಲವಂ ಕಾಣಿಸಿಕೊಳ್ಳದೆ ಅಶಕ್ಯವಾಗಿ ಇದೆ. ಮಲಯಕೇತುವಿನ ಸೇನೆಗಳೆಲ್ಲವೂ ರಾಕ್ಷಸ ಹೇಳಿದಂತೆ[2] ಪಾಟಲೀಪುರವಂ ಮುತ್ತುವದಕ್ಕೆ ಯತ್ನವಂ ಮಾಡುತ್ತಲಿದೆ. ಈ ವೇಳೆಯಲ್ಲಿ ನಾನು ದೂರದಲ್ಲಿದ್ದರೆ ಮಲಯಕೇತುವಿಗೆ ರಾಕ್ಷಸನಲ್ಲಿ ಸಂಶಯ ತೋರಿ ಇರುವಂತೆ

೧. ಮಾಡಿದ (ಕ) ೨. ತೆ ಪಾಟಲೀಪುರವಂ (ಕ)

ನನ್ನಲ್ಲಿಯೂ ತೋರೀತು. ಅದರಿಂದ ರಾಜಪುತ್ರನ ಸಮೀಪದಲ್ಲಿಯೇ ಇರಬೇಕು ಮತ್ತು ಮಲಯಕೇತುವು ನನಗೆ ಮಿತ್ರನಾದವನಾದರೂ ಚಾಣಕ್ಯರ ವಾಕ್ಯಗೌರವದಿಂದ ಇವನಂ ವಂಚಿಸಿ ಧನದ ಆಸೆಗೆ ಒಳಗಾಗಿ ದೇಹವಂ ಮಾರಿಕೊಂಡಂತೆ ಪರಾಧೀನವಾಗಿ ಕುಲ ಲಜ್ಜೆ ಯಶಸ್ಸಿನಲ್ಲಿ ದೃಷ್ಟಿಯಿಡದೆ ಹೀಗೆ ಇರುವ ನನಗೆ ಸ್ವಾಮಿಕಾರ್ಯವಂ ಬಿಟ್ಟು ಯುಕ್ತಾಯುಕ್ತವಿಚಾರದಿಂದ ಪ್ರಯೋಜನವೇನು ?" ಎಂದು ಚಿಂತಿಸುತ್ತ, ತನ್ನ ಬಳಿ ಯಲ್ಲಿದ್ದ ದೂತನಂ ಕರೆದು.

"ಎಲೈ, ಇಲ್ಲಿಯ ಉಕ್ಕಡದಿಂದ ಹೊರಕ್ಕೆ ಹೋಗುವ ಜನರು ಬಂದು ಉಂಡಿಗೆಯಂ ಕೇಳಿದರೆ, ಇಲ್ಲಿಗೆ ಕರೆತರುವನಾಗು" ಎನಲು, 'ಒಳ್ಳೆಯದೆಂ'ದು, ಹಾಗೇ ಹೊರಗೆ ನೋಡಿ, ಕಾದುಕೊಂಡಿರುವ ಕ್ಷಪಣಕನಂ ನೋಡಿ, ಕರೆತಂದು ನಿಲ್ಲಿಸಿ,

"ಈತನು ಉಂಡಿಗೆ ಬಗ್ಗೆ ಕಾದಿದ್ದನು" ಎಂದು ಬಾಗುರಾಯಣನಿಗೆ ದೂತನು ಹೇಳಲು, ಆಗ ಕ್ಷಪಣಕನು "ಧರ್ಮಿಷ್ಠರಿಗೆ ಧರ್ಮವೃದ್ಧಿ ಉಂಟಾಗಲಿ" ಎಂದು ಹೇಳಿ ಕುಳ್ಳಿರಲು, ಅವನಂ ನೋಡಿ, 'ರಾಕ್ಷಸನ ಸ್ನೇಹಿತನಾದ ಕ್ಷಪಣಕನಾದ ಜೀವಸಿದ್ಧಿ'ಯೆಂದು ತಿಳಿದು, "ಬನ್ನಿ ಜೀವಸಿದ್ಧಿಗಳೇ, ಕ್ಷೇಮವೇ ?" ಎನಲು,

"ಸ್ವಾಮೀ, ಕಾರ್ಯದುರಂಧರರಾದ ನಿಮ್ಮ ಕ್ಷೇಮದಿಂದ ನಾವೆಲ್ಲರೂ ಕ್ಷೇಮಿಗಳು" ಎಂದು ಹೇಳುವ ಸಮಯದಲ್ಲಿ, ಒಳಗೆ[೧] [ಮಲಯಕೇತುವು][೧] ತನ್ನ ಮನಸ್ಸಿನಲ್ಲಿ "ಈಗ ನಮ್ಮ ಸೇನೆಗಳು ಪಾಟಲೀಪುರಕ್ಕೆ ಹೋಗಿ ಮುತ್ತಿಗೆಯಂ ಹಾಕುವದಕ್ಕೆ ಯತ್ನವಂ ಮಾಡಿ ದಲ್ಲಿ ರಾಕ್ಷಸನು ತನ್ನ ಪತ್ನೀಪುತ್ರರು ಪಾಟಲೀಪುರದಲ್ಲಿ ಸಿಕ್ಕಿ ಇರುವದರಿಂದಲಾಗಲಿ, ನಂದವಂಶದಲ್ಲಿ ಜನಿಸಿದನೆಂದು ಅಭಿಮಾನದಿಂ[ದಲಾಗಲಿ], ಚಂದ್ರಗುಪ್ತನಲ್ಲಿ ಸಂಧಿಯಂ ಮಾಡಿಕೊಂಡಾನೋ, ಅಲ್ಲದಿದ್ದರೆ ನಮಗೆ ಕೊಟ್ಟ ಮಾತು ತಪ್ಪಬಾರದು ಎಂದು ನನ್ನ ಕಾರ್ಯವನ್ನೇ ಸಾಧಿಸುವನೋ ತಿಳಿಯಕೂಡದು. ಆದುದರಿಂದ ಪುನಃ ಬಾಗುರಾಯಣನ ಸಂಗಡ ಆಲೋಚಿಸಿ ನಿರ್ಧರಿಸಬೇಕೆಂ"ದು ತನ್ನ ಬಳಿಯ ಕಂಚುಕಿಯಂ ನೋಡಿ,

"ಎಲೈ, ಬಾಗುರಾಯಣ ಎಲ್ಲಿ ಇದ್ದಾನೆ ?" ಎನಲು, 'ಬುದ್ಧೀ' ಎಂದು ಬಂದು ನೋಡಿ ಹೋಗಿ, "ಜೀಯಾ, ಬಾಗುರಾಯಣನು ಉಂಡಿಗೆ ಬಗ್ಗೆ ಬಂದ ಕ್ಷಪಣಕನೊಡನೆ ಮಾತನಾಡುತ್ತ ಉಂಡಿಗೆಚಾವಡಿಯಲ್ಲಿ ಕುಳಿತಿದ್ದಾನೆ" ಎಂದು ಬಿನ್ನೈಸಲು, ಆ ಮಾತಿಗೆ "ಪಾಟಲೀಪುರದಲ್ಲಿ ಇದ್ದ ರಾಕ್ಷಸನಿಗೆ ಆಪ್ತನಾದ ಕ್ಷಪಣಕನೊಡನೆ ಬಾಗುರಾಯಣನು ಮಾತನಾಡುತ್ತಲಿದ್ದಾನು. ಅವರಿರ್ವರ ಸಲ್ಲಾಪರಹಸ್ಯವೆಂತಿರುವದೋ ತಿಳಿಯ ಬೇಕೆಂ"ದು ಮಲಯಕೇತುವು ಉಂಡಿಗೆಚಾವಡಿಗೆ ಅಭಿಮುಖವಾಗಲು, ಆಗ ಪಂಜರದ ಗಿಣಿಯು ಆತನ ಕಂಡು "ಪರಾಕು ಚಿಕ್ಕದೊರೆಯೇ" ಎಂದು ಕೂಗುತ್ತಿರಲು, ಆ ಧ್ವನಿಯು ಬಾಗುರಾಯಣನಿಗೆ ಕೇಳಿಬರಲು, ಕಂಚುಕಿ ಬಂದು ಇಣಿಕಿ ನೋಡಿ ಸುಮ್ಮನೆ ಹೋದುದ ರಿಂದಲೂ ಪಂಜರದ ಗಿಣಿಯ ಧ್ವನಿಯು ಪರಾಕೆಂದು ಕೇಳಿಬಂದುದರಿಂದಲೂ "ರಾಜ ಕುಮಾರಕನು ನನ್ನ ಬಳಿಗೆ ವ್ಯಾಜಾಂತರವನ್ನವಲಂಬಿಸಿ ಬರುವನಾಗಿ ಇದಾನೆ ; ಈ

---

೧. ಗೆ (ಕ, ಖ, ಗ)

ಸಮಯದಲ್ಲಿಯೇ ಕ್ಷಪಣಕನ ಸಂಗಡ ಮಾತನಾಡುವ ಸಂದರ್ಭದಿಂದ ಕ್ಷಪಣಕನ ಕೆಣಕಿದಂತೆ ಮಾಡಿ ಅವನ ಮುಖವಚನದಿಂದಲೂ ಮಲಯಕೇತುವಿಗೆ ರಾಕ್ಷಸನಲ್ಲಿ ಕೋಪವುಂಟಾಗುವಂತೆ ಮಾಡುವೆನೆಂ"ದು ತಿಳಿದು, ಆಗ ಕ್ಷಪಣಕನಂ ನೋಡಿ,

"ಅಯ್ಯ ಕ್ಷಪಣಕರೇ, ರಾಕ್ಷಸನ ಕಾರ್ಯಾರ್ಥವಾಗಿ ಹೋಗುವದಕ್ಕೆ ಉಂಡಿಗೆಯನ್ನಪೇಕ್ಷಿಸಿ ಬಂದವರಲ್ಲವಷ್ಟೆ ?" ಎನಲು, ಅಷ್ಟರಲ್ಲಿಯೇ ಮಲಯಕೇತುವು ಬಂದು ವಿನೋದಾರ್ಥವಾಗಿ ಬಾಗುರಾಯಣನ ಕಣ್ಣುಮುಚ್ಚುವ ನೆಪದಿಂದ ಆತನು ಕುಳಿತಿದ್ದ ಸ್ಥಾನದ ತೆರೆ ಹಿಂದೆ ನಿಂತು ಮಾತುಗಳಂ ಕೇಳುತ್ತಿರಲು, ಆಗ ಬಾಗುರಾಯಣ ಹೇಳಿದ ಮಾತಿಗೆ ಕ್ಷಪಣಕನು 'ಸೌಗತ ಸೌಗತ'ವೆಂದು ಕಿವಿಗಳಂ ತನ್ನ ಕೈಯಿಂದ ಮುಚ್ಚುತ್ತ, "ಅಯ್ಯ ಬಾಗುರಾಯಣನೇ, ವಂಚಕನಾದ ರಾಕ್ಷಸನ ಕಾರ್ಯ ನನಗೇಕೆ ಬೇಕು ? ಅವನ ನಾಮ ಗ್ರಹಣವು ಯಾವ ದೇಶದಲ್ಲಿ ಇಲ್ಲವೋ ಅಲ್ಲಿಗೆ ಹೋಗುವೆನು ; ಉಂಡಿಗೆಯಂ ಕೊಡುವನಾಗು" ಎನಲು,

"ಅಯ್ಯ ಕ್ಷಪಣಕರೇ, ಮಿತ್ರನಾದ ನಿಮ್ಮ ರಾಕ್ಷಸನಲ್ಲಿ ಹೀಗೆ ಪ್ರಣಯಕಲಹವಂ ಮಾಡುವದಕ್ಕೆ ಆತನಿಂದ ನಡೆದ ಅಪರಾಧವೇನೆಂ"ದೆನಲು, "ಅವನಿಂದ ಏನು ದೋಷ? ಆತನ ಸ್ವಭಾವವೇ ಹಾಗೆ ಇರುವದು. ನಾನು ಮಾಡಿಕೊಂಡಿದ್ದಕ್ಕೆ ಲಜ್ಜೆಪಡುತ್ತ ಹೀಗೆ ನಿರ್ಭಾಗ್ಯನಾದೆನು. ಅದು ಹೇಳತಕ್ಕ ಪ್ರಸ್ತಾಪವಲ್ಲ"ವೆಂದು ಕ್ಷಪಣಕ ಹೇಳಲು, "ಅಯ್ಯ ಜೀವಸಿದ್ಧಿಯೇ, ಅದು ಅಂಥ ರಹಸ್ಯವೇನು ಇದ್ದೀತು ?" ಎನಲು, "ಅಂಥ ರಹಸ್ಯವಲ್ಲದಿದ್ದರೂ ಮಹಾಘಾತುಕವ್ಯಾಪಾರವಾದುದರಿಂದ ಲಜ್ಜೆಪಡಬೇಕಾಯಿತು" ಎನಲು, "ಕ್ಷಪಣಕನೇ, ಹೇಳಕೂಡದ ರಹಸ್ಯವಾದರೆ ಉಂಡಿಗೆಯಂ ಕೇಳ ಕೆಲಸವಿಲ್ಲ" ಎನಲು,

"ಅಯ್ಯ ಬಾಗುರಾಯಣನೇ, ಕೌತೂಹಲವಿದ್ದರೆ ಹೇಳುವೆನು, ಕೇಳು : ಮೊದಲು ಪಾಟಲೀಪುರದಲ್ಲಿ ನಾನು ರಾಕ್ಷಸನಿಗೆ ಮಿತ್ರನಾಗಿ ಇರುತ್ತಿರಲು, ಒಂದಾನೊಂದು ಸಮಯದಲ್ಲಿ ರಾಕ್ಷಸನು, ನಂದರ ಮೇಲೆ ದಂಡೆತ್ತಿ ಬಂದು ಅವರಂ ಸಂಹಾರವಂಗೈಸಿದನೆಂಬ ವೈರವನ್ನೆಣಿಸಿ ವಿಷಕನ್ನೆಯಂ ರಹಸ್ಯವಾಗಿ ಕಳುಹಿಸಿ ಪರ್ವತರಾಯನಂ ಸಂಹಾರವಂ ಗೈಸಿದುದಕ್ಕೆ ಕೆಲವು ದಿನದ ಮೇಲೆ, ರಾಕ್ಷಸನ ಮಿತ್ರನೆಂದು ಕೇಳಿ ಚಾಣಕ್ಯನು ನನ್ನನ್ನು ಹಿಡಿದು ಅವಮಾನಪೂರ್ವಕವಾಗಿ ಸಾರಿಸಿ, ಪುರವಂ ಬಿಟ್ಟು ದಾಟಿಸಿದನು. ಆ ಬಳಿಕ ಅವಲಂಬನ ಮತ್ತೆಲ್ಲಿಯೂ ದೊರಕದೆ, ರಾಕ್ಷಸನನ್ನೇ ಆಶ್ರಯಿಸಿ ಕಾಲಹರಣವಂ ನಾನು ಮಾಡುತ್ತಿರಲು, ಇಲ್ಲಿಯೂ ಅದೇ ರಾಕ್ಷಸನು ಕೆಲವು ಅರಸುಗಳೊಡನೆ ಆಲೋಚಿಸುತ, ಚಂದ್ರಗುಪ್ತನಲ್ಲಿ ವಿಶ್ವಾಸವಂ ಬಳಸುವನಾಗಿ ಈ ಬಳಿಯಲ್ಲಿಯೂ ಮಹಾಘಾತುಕವ್ಯಾಪಾರವಂ ಮಾಡಲೆಣಿಸಿ ಇರುವವನಾದುದರಿಂದ, ಆತನ ಸಹವಾಸದೋಷದಿಂದ ಮೊದಲಿನಂತೆ ಮತ್ತೂ ಅನಿಷ್ಟ ಸಂಭವಿಸಿದರೆ ನಾನು ಈ ಲೋಕದಲ್ಲಿಯೇ ಇರದಂತೆ ಆಗುವದೆಂದು ತಿಳಿದು, ದೇಶಾಂತರವಂ ಕುರಿತು ಹೋಗುವದಕ್ಕೆ ಉಂಡಿಗೆಯಂ ಕೇಳ ಬಂದೆನು. ಈ ಅರ್ಥವಂ ಲಜ್ಜೆಪಟ್ಟವನಾಗಿ ಹೇಳುವದಕ್ಕೆ ಕೂಡದೆ ಇದ್ದೆನು" ಎನಲು,

"ಹಾಗಾದರೆ, ಪರ್ವತೇಶ್ವರನಿಗೆ ಅರ್ಧರಾಜ್ಯವಂ ಕೊಡಬೇಕಾದುದರಿಂದ ಲೋಭಬುದ್ಧಿಯಂ ನೆನೆದು ಚಾಣಕ್ಯನು ವಿಷಕನ್ಯಾಮುಖದಿಂದ ಪರ್ವತೇಶ್ವರನಂ ಸಂಹಾರಗೈಸಿದ

ನೆಂಬ ವಾರ್ತೆಯೂ ಅನೃತವಾಯಿತಷ್ಟೆ" ಎನಲು, ಆ ಮಾತಿಗೆ ಕ್ಷಪಣಕನು ಕಿವಿಗಳಂ ಮುಚ್ಚಿಕೊಂಡು, "ಬುದ್ಧೇಶಸಾಕ್ಷಿಯಾಗಿ ಚಾಣಕ್ಯನು ಇದು ಒಂದ[೧][ನ್ನೂ] ಅ[೧]ರಿತವನಲ್ಲ. ಸುಮ್ಮನೆ ದೋಷವಂ ಕಲ್ಪಿಸಬಹುದೇ ?" ಎನಲು, "ಅಯ್ಯ ಕ್ಷಪಣಕನೇ, ಹಾಗಾದರೆ ಈ ಅರ್ಥವಂ ರಾಜಪುತ್ರನಾದ ಮಲಯಕೇತುವಿನ ಮುಂದೆ ಹೇಳಬಹುದಲ್ಲ" ಎನಲು, "ಅಯ್ಯ ಬಾಗುರಾಯಣನೇ, ಆ ವೇಳೆಯಲ್ಲಿ ರಾಕ್ಷಸನಿಗೆ ನಾನು ಮಿತ್ರನಾಗಿ ಇದ್ದು, ಈಗ ಶತ್ರುಭಾವವನ್ನಾಚರಿಸಬಹುದೇ ?" ಎಂದು ಬಾಗುರಾಯಣನಿಗೆ ಕ್ಷಪಣಕನು ಹೇಳುತ್ತಿರಲು,

ಆ ವೃತ್ತಾಂತವನ್ನೆಲ್ಲವಂ ಮರೆಯಾಗಿ ನಿಂತು ಕೇಳುತ್ತಿದ್ದ ಮಲಯಕೇತುವು ಪಿತೃಮೃತವಂ ಸ್ಮರಿಸಿ, ದುಃಖಿತನಾಗಿ, ರಾಕ್ಷಸನಲ್ಲಿ ಅಸಹ್ಯವಾದ ಕೋಪವುಳ್ಳವನಾಗಿ ಬಾಗುರಾಯಣನ ಮುಂದೆ ಬಂದು ನಿಂತು, "ಅಯ್ಯ ಮಿತ್ರನಾದ ಬಾಗುರಾಯಣನೇ, ಯಥಾರ್ಥವಾದಿಯಾದ ಈ ಕ್ಷಪಣಕನು ನಿನ್ನ ಸಂಗಡ ಹೇಳಿದ ಕರ್ಣಕಠೋರವಾದ ವಾಕ್ಯವಂ ಕೇಳಿ ಮರೆತುಹೋಗಿ ಇದ್ದ ಪಿತೃಕ್ಲೇಶವುಳ್ಳ ನನಗೆ ದ್ವಿಗುಣಕ್ಲೇಶವುಂಟಾಯಿತು" ಎನಲು, ಆಗ ಕ್ಷಪಣಕನು, "ತಾನು ಯಾವ ಅರ್ಥವಂ ಮಲಯಕೇತುವಿಗೆ ಹೇಳಬೇಕೆಂದು ನಿಶ್ಚೈಸಿ ಇದ್ದೆನೋ ಆ ಅರ್ಥವು ಮಲಯಕೇತುವಿಗೆ ತಿಳಿದಂತಾಯಿತು. ಇನ್ನು ನಾನು ಕೃತಾರ್ಥನಾದೆನು" ಎಂದು ಯೋಚಿಸುತ್ತ, ಭಯಪಟ್ಟವನಂತೆ ಮರೆಯಾಗುತ್ತಿರಲು,

ಆಗ ಮಲಯಕೇತು ಬಾಗುರಾಯಣನಂ ನೋಡಿ, "ಅಯ್ಯ ಮಿತ್ರನೇ, ಈ ರಾಕ್ಷಸನು ನಮ್ಮ ತಂದೆಗೆ ತಾನು ಮಿತ್ರನಾದುದರಿಂದ ಸಕಲ ಅಧಿಕಾರವಂ ಕೊಟ್ಟು ನಂಬಿಗೆಯಿಂದ ಇರುತ್ತಿದ್ದೆನು. ಈತನು ಹೀಗೆ ಗೂಢಶತ್ರುತ್ವವನ್ನಾಚರಿಸಿ ಬಂದು ನಮಗೆಲ್ಲರಿಗೂ ಇಂಥ ವ್ಯಸನವನ್ನುಂಟುಮಾಡಿದನು. ಈತನು ನಮಗೆ ಪ್ರತ್ಯಕ್ಷರಾಕ್ಷಸನೇ ಸರಿ" ಎಂದು ಕಂಬನಿಗಳ ತುಂಬುತ ಶೋಕಪಡುತ್ತಿರುವ ಮಲಯಕೇತುವಂ ನೋಡಿ, ಬಾಗುರಾಯಣನು ಆಲೋಚಿಸುತ್ತಲಿದ್ದನೇನೆಂದರೆ :

"ನಾನು ಇಲ್ಲಿಗೆ ಬರುವ ಅವಸರದ[೨]ಲ್ಲಿ[೨], 'ಮಲಯಕೇತುವಿನ ಬಳಿಯಲ್ಲಿ ಮಿತ್ರನಾಗಿ ಇರುವ ಸಮಯಾಂತರದಲ್ಲಿ ರಾಕ್ಷಸನು ಆಶ್ರಯರಹಿತನಾಗಿ ಬಂದು ಮಲಯಕೇತುವನ್ನಾಶ್ರಯಿಸಿ ಚಂದ್ರಗುಪ್ತನ ಮೇಲೆ ಕಾರ್ಯಭಾಗಕ್ಕೆ ಯತ್ನವಂ ಮಾಡಿದರೆ, ಸಮಯವಂ ನೋಡಿ ರಾಕ್ಷಸನಲ್ಲಿ ಮಲಯಕೇತುವಿಗೆ ವಿಶ್ವಾಸವಂ ತಪ್ಪಿಸಿ ಕೋಪವುಂಟಾಗುವಂತೆ ಮಾಡಿ ಜೀವಸಹಿತವಾಗಿ ರಾಕ್ಷಸನಂ ಅಲ್ಲಿಂದ ಹೊರಡಿಸತಕ್ಕದ್ದು' ಎಂದು ನಮ್ಮ ಯಜಮಾನರಾದ ಚಾಣಕ್ಯರು ನನಗೆ ಬರೆದು ಕಳುಹಿಸಿ ಇರುವದರಿಂದ, ಅದೇ ರೀತಿಗೆ ರಾಕ್ಷಸನು ಮಲಯಕೇತುವನ್ನಾಶ್ರಯಿಸಿ, ಚಂದ್ರಗುಪ್ತನಲ್ಲಿ ವೈರವಂ ಸಾಧಿಸುವನಾಗಿ ಸೇನೆಗಳಂ ಜೊತೆಗೂಳಿಸಿ ಹೊರಡುವ ಈ ಸಮಯದಲ್ಲಿ, ಪ್ರಸಂಗವಶದಿಂದ ಕ್ಷಪಣಕನಿಗೂ ನಮಗೂ ಉಂಟಾದ ವಾಗ್ವಾದದಿಂದ ರಾಕ್ಷಸನೇ ವಿಷಕನ್ಯೆಯಂ ಕಳುಹಿಸಿ ಪರ್ವತರಾಯನಂ ಸಂಹಾರಗೈಸಿದನೆಂಬ ಅರ್ಥವು ಹೊಂಚು ಕೇಳುತ್ತಿದ್ದ ಮಲಯಕೇತುವಿನ ಮನಸ್ಸಿಗೆ ಖಚಿತವಾಗಿ ತಟ್ಟಿ ಇರುವದರಿಂದ, ಈಗ ರಾಕ್ಷಸನಲ್ಲಿ ಮಲಯಕೇತುವಿಗೆ

೧. ನ್ನು (ಕ. ಖ. ಗ) ೨. ಲ್ಲಿ ನನ್ನನ್ನು (ಕ. ಖ. ಗ)

ಮಹಾಕೋಪವುಂಟಾಗಿ ಮಹಾವಿಪತ್ತು ಸಂಭವಿಸುವಂತೆ ತೋರುತಲಿದೆ. ಈ ವೇಳೆಯಲ್ಲಿ ರಾಕ್ಷಸನ ಪ್ರಾಣದಿಂದುಳುಹಿಸಿದ ಬಳಿಕ ಇದಕ್ಕಿಂತಲೂ ಅತಿಶಯವಾದ ಸಂಶಯವು ರಾಕ್ಷಸನಲ್ಲಿ ಮಲಯಕೇತುವಿಗೆ ಉಂಟಾಗುವ ನಿಮಿತ್ತ ಇರುವದರಿಂದ. ಆ ವೇಳೆಯಲ್ಲಿ ಸ್ವಾಭಿಪ್ರಾಯ ಅನ್ಯರಿಗೆ ತೋರದಂತೆ ರಾಕ್ಷಸನಂ ಈ ಬಳಿಯಿಂದ ಹೊರಡಿಸಬೇಕು" ಎಂದು ಬಾಗುರಾಯಣನು ಮನದಲ್ಲಿ ನಿಶ್ಚೈಸುತ್ತ, ಮಲಯಕೇತುವಂ ಕುರಿತು ಇಂತೆಂದನು[೧] :

"ಅಯ್ಯ ರಾಜಕುಮಾರಕನೇ, ಕಳೆದುಹೋದ ಮಾತಿಗೆ ಕಳವಳಗೊಂಡು ಫಲವೇನು ? ಈ ನನ್ನ ಬಿನ್ನಪವಂ ಸಾವಧಾನದಿಂದ ಅವಧಾರಿಸುವನಾಗು. ಅದೇನೆಂದರೆ 'ಲೋಕದಲ್ಲಿ ವಿಮರ್ಶೆಯಿಲ್ಲದೆ ಮಾಡುವ ಕೋಪವೂ ವ್ಯಸನವೂ ಅನರ್ಥಕ್ಕೆ ಕಾರಣ'ವೆಂದು ನೀತಿಜ್ಞರು ಹೇಳುವರು. ಅದರಿಂದ ನೀತಿಮಾರ್ಗವನ್ನನುಸರಿಸಿ ನಡೆಯುವ ಅರಸುಗಳಿಗೆ ಸಕಲ ಶ್ರೇಯಸ್ಸು ಉಂಟಾಗುವದು ಮತ್ತು ರಾಜ್ಯಾಧಿಪತ್ಯವಂ ಮಾಡುವಂಗೆ ಶತ್ರುಗಳೂ ಮಿತ್ರರೂ ಉದಾಸೀನರೆಂಬ ಜನರೂ ಮೂರು ತೆರನಾಗಿಹರು. ಅರಸುಗಳಿಗೆ ಅದರಲ್ಲಿ ಕಾರ್ಯವಶದಿಂದ ಒಂದು ವೇಳೆ ಶತ್ರುಗಳು ಮಿತ್ರರಾಗುವದುಂಟು. ಹಾಗೇ ಮಿತ್ರರು ಶತ್ರುಗಳಾದಾರು.

ಅದೆಂತೆಂದರೆ, ಮೊದಲು ನಂದರು ಸಂಹೃತರಾದ ಸಮಯದಲ್ಲಿ ಅವರುಗಳ ತಂದೆಯಾದ ಸರ್ವಾರ್ಥಸಿದ್ಧಿರಾಯನಿಗೆ ಸ್ವೀಕೃತಪುತ್ರನನ್ನಾದರೂ ಉಂಟುಮಾಡಿ ಪುನಃ ನಂದವಂಶವನ್ನಂಕುರಿಸುವಂತೆ ಮಾಡಲೆಣಿಸಿದ ರಾಕ್ಷಸನಿಗೆ ಆ ವೇಳೆಯಲ್ಲಿ ಪರ್ವತರಾಯನೂ ಚಂದ್ರಗುಪ್ತ ಚಾಣಕ್ಯರೂ ಸಹ ಶತ್ರುಗಳೇ ಆಗಿ ಇದ್ದರು. ಶತ್ರುತ್ವವುಂಟಾಗಿದ್ದಲ್ಲಿ, ರಾಕ್ಷಸನು ಶತ್ರುಪ್ರತೀಕಾರವನ್ನಾಚರಿಸಿ ಇದ್ದಾನು. ಅದಂ ದೋಷವೆಂದು ಎಣಿಸಕೂಡದು.

ಮತ್ತೆ ಕೆಲವು ದಿವಸದ ಮೇಲೆ ಆ ವೃದ್ಧರಾಯನು ಕಾಲಾಧೀನನಾಗಿ ರಾಕ್ಷಸನು ಯೋಚಿಸಿ ಇದ್ದರ್ಥವು ನಿಷ್ಫಲವಾಗಲು. ನಂದವೈರಿಯಾದ ಚಂದ್ರಗುಪ್ತನನ್ನಾಗಲಿ ಸಂಹರಿಸಲೆಣಿಸಿ ಅವಲಂಬನ ದೊರಕದೆ ಇದ್ದುದರಿಂದ ನಿನ್ನನ್ನಾಶ್ರಯಿಸಿ ನಿನ್ನ ಮುಖದಿಂದ ಚಂದ್ರಗುಪ್ತನಂ ಸಂಹಾರಗೈಸಿ ನಂದರಾಜ್ಯವಂ ನಿನಗೆ ಉಂಟುಮಾಡುವೆನೆಂದು ಉದ್ಯುಕ್ತನಾಗಿ ಇದ್ದರೆ. ರಾಕ್ಷಸನಲ್ಲಿ ದೋಷವಂ ಹೇಳಕೂಡದು.

ರಾಜನೀತಿಯಂ ನೀನು ತಿಳಿದಿರುವೆಯಷ್ಟೆ. ರಾಜತಂತ್ರವು ಕಾರ್ಯಾನುಗುಣವಾಗಿ ಶತ್ರುಗಳಂ ಮಿತ್ರರನ್ನಾಗಿ ಮಾಡುವುದು. ಈಗ ನಂದರಾಜ್ಯ ಕೈವಶವಾಗುವ ಈ ಸಮಯದಲ್ಲಿ ರಾಕ್ಷಸನಲ್ಲಿ ಅಸಹ್ಯತೆ ತೋರಿದರೂ. ಗತವೃತ್ತಾಂತವೊಂದನ್ನೂ ಸ್ಮರಿಸದೆ ಉಪೇಕ್ಷೆಯಿಂದ ಇರುತ್ತ. ನಂದರಾಜ್ಯವು ನಮ್ಮ ಕೈವಶವಾದ ಬಳಿಕ ಆವಶ್ಯಕ ನಮಗೆ ಉಂಟಾದರೆ ರಾಕ್ಷಸನಂ [೨]ಪುರಸ್ಕರಿಸ[೨]ಬಹುದು ; ಅಲ್ಲದಿದ್ದರೆ ಪರಿತ್ಯಜಿಸಬಹುದು. ಹೀಗೆ ವಿಮರ್ಶಾಪೂರ್ವಕವಾಗಿ ಕಾರ್ಯವನ್ನಾಚರಿಸುವ ಅರಸಿಗೆ ಆಪತ್ತೆಲ್ಲವೂ ಸಂಪತ್ತುಗಳೇ ಆಗುವವು" ಎಂದು ನೀತಿವಾಕ್ಯಗಳಿಂದ ಮಲಯಕೇತುವಿಗೆ ರಾಕ್ಷಸನಲ್ಲಿ ಉಂಟಾಗಿದ್ದ ಕೋಪವಂ ಸಮಾಧಾನಗೊಳಿಸಲು,

---

೧. ಘ ಪ್ರತಿಯಲ್ಲಿ ಪಾಠಭೇದವಿದೆ. ೨. ತಿರಸ್ಕರಿಸ (ಕ)

"ಅಯ್ಯ ಮಿತ್ರನೇ, ವಿಚಾರವಿಲ್ಲದೆ ರಾಕ್ಷಸನಲ್ಲಿ ನಮಗೆ ಬಂದು ಒದಗಿದ ಕೋಪವಂ ಸಮಾಧಾನಗೊಳಿಸಿ, ಅಪಯಶಸ್ಸು ಬರದಂತೆ ಮಾಡಿ, ಮುಂದೆ ಯೋಚಿಸಿ ಇರುವ ಕಾರ್ಯಕ್ಕೆ ಅನುಗುಣವಾದ ನೀತಿಯಂ ತಿಳುಹಿಸಿ, ಪ್ರಮಾದದಿಂದ ದಾಟಿಸಿದವನಾದೆ" ಎಂದು ಮಲಯಕೇತುವು ಬಾಗುರಾಯಣನಿಗೆ ಹೇಳಿ, ತನ್ನ ಅಂತಃಪುರಕ್ಕೆ ಹೋಗುತ್ತಿದ್ದನು.

ಹೀಗೆ ಇರುತ್ತಿರಲು, ಆ ಮಾರನೆ ದಿವಸ ರಾತ್ರೆ ವೇಳೆಯಲ್ಲಿ ಮೊದಲು ಕ್ಷಪಣಕನಂ ಕಂಡು ಮಾತನಾಡಿ ಹೋದ ಸಿದ್ಧಾರ್ಥಕನು ಬೇಕಾಗಿ[೧]ಯೇ ಅಲ್ಲಿಯೇ[೧] ಸಮೀಪದ ಉಕ್ಕಡಕ್ಕೆ ಹೋಗಿ ನಿಂತು, ಭೀತನಾದವನಂತೆ ಹಿಂದಕ್ಕೆ ಹೋಗುತ್ತ, ಪುನಃ ಉಕ್ಕಡದ ಸಮೀಪವಂ ಸೇರುತ್ತ, ನಾಲ್ಕೂ ಕಡೆಯಲ್ಲಿ ಬೆದರಿ ನೋಡುತ್ತ, ಉಕ್ಕಡವಂ ಮೀರಿ ಹೋಗುವನಂತೆ ಯತ್ನವಂ ಮಾಡಲು, ಅವನಂ ಅಲ್ಲಿ ಇದ್ದ ಕಾವಲುಗಾರರು ನೋಡಿ, "ಇವನ್ಯಾರೋ ಈ ವೇಳೆಯಲ್ಲಿ ಕದ್ದು ಬಂದವನಂತೆ ತೋರುತ್ತಲಿದೆ. [೨]ದಟ್ಟಿಯಲ್ಲಿ[೨] ಲಕ್ಕೋಟು ಕಾಗದವಂ ಕಟ್ಟಿಕೊಂಡು ಇದಾನೆ" ಎಂದು ಮಾತನಾಡಿಕೊಳ್ಳುತ್ತ,

ಆ ಸಿದ್ಧಾರ್ಥಕನಂ ಹಿಡಿದು, "ಎಲೈ, ಎಲ್ಲಿ ಹೋಗುವೆ ? ಉಂಡಿಗೆಯ ತೋರಿಸು" ಎನಲು, "ಉಂಡಿಗೆಯೆಂದರೇನು ? ನಮ್ಮ ಬಳಿಯಲ್ಲಿ ಇಲ್ಲ. ದಮ್ಮಯ್ಯ, ಹೇಗಾದರೂ ಬಿಟ್ಟು ಬಿಡಿ" ಎನಲು, "ಈ ರಾತ್ರೆ ವೇಳೆಯಲ್ಲಿ ನಿನಗೆ ಅಂಥ ಕಾರ್ಯವೇನು ?" ಎನಲು, "ಕಾರ್ಯವುಂಟು, ಪುನಃ ಬರುತಲಿದೇನೆ. ಬಿಟ್ಟು ಕೊಡಿ, ದಮ್ಮಯ್ಯ" ಎನಲು, "ಇವನು ವಂಚಕನು ; ಇವನ[ಂ] ಕಾಗದಸಮೇತವಾಗಿ ಕರೆದುಕೊಂಡು ಹೋಗಿ ಬಾಗುರಾಯಣನ ವಶಕ್ಕೆ ಒಪ್ಪಿಸಿದರೆ, ಯಾವದಿದ್ದರೂ ಆತನೇ ವಿಚಾರಿಸಿಕೊಂಡಾನು" ಎಂದು ಹೇಳಿ ಕೊಳ್ಳುತ್ತ, ಆ ಸಿದ್ಧಾರ್ಥಕನಂ ಹಿಡಿದು ತಂದು ರಾಜದ್ವಾರದ ಬಳಿಯಲ್ಲಿ ನಿಲ್ಲಿಸಿ, ದ್ವಾರ ಪಾಲಕರಿಗೆ ಹೇಳಲು,

ಅವರು ಹೋಗಿ ಬಾಗುರಾಯಣನೊಡನೆ ಸಲ್ಲಾಪವ ಮಾಡುತ್ತಲಿರುವ ಮಲಯ ಕೇತುವಿಗೆ ಕೈಮುಗಿದು, "ಬುದ್ಧಿ, ಈ ರಾತ್ರೆವೇಳೆಯಲ್ಲಿ ಉಂಡಿಗೆಯಿಲ್ಲದೆ ಒಬ್ಬ ಪುರುಷನು ಸಿಕ್ಕಿದನಂತೆ. ಅವನ ಬಳಿಯಲ್ಲಿ ಲಕ್ಕೋಟಿನ ಕಾಗದವಿರುವದಂತೆ. ಅವನಂ ಹಿಡಿತಂದು ಬಾಗಿಲಲ್ಲಿ ನಿಲ್ಲಿಸಿ ಇದಾರೆ. ಅಪ್ಪಣೆಯೇನೆ"ನಲು, ಆಗ "ಕಾಗದವಂ ತರುವರಾಗಿ" ಎಂದು ಮಲಯಕೇತು ಹೇಳಲು, ಹಾಗೇ ಸಿದ್ಧಾರ್ಥಕನ ಬಳಿಯಲ್ಲಿ ಇದ್ದ ಕಾಗದವಂ ತಂದು ಮಲಯಕೇತುವಿನ ಮುಂದೆ ಇರಿಸಲು, ಆ ಬಾಗುರಾಯಣನು ಗವಾಕ್ಷದಿಂದ ಸಿದ್ಧಾರ್ಥಕನಂ ನೋಡಿ, "ಇವನು ಬೇಕಾಗಿಯೇ ಉಕ್ಕಡದಲ್ಲಿ ಸಿಕ್ಕಿದವ ನಾದುದರಿಂದ ರಾಕ್ಷಸನ ಉಚ್ಚಾಟನೆಗೆ ಸಮಯ ಸನ್ನಿಹಿತವಾಯಿತೆಂ"ದು ಆಲೋಚಿಸುತ್ತ, ಅಲ್ಲಿಯ ದೂತನಂ ನೋಡಿ,

"ಎಲೈ, ಈ ಉಕ್ಕಡದಲ್ಲಿ ಸಿಕ್ಕಿದವನು ಇಲ್ಲಿಗೆ ನೂತನವಾಗಿ ಬಂದವನೋ ? ಇಲ್ಲದಿದ್ದರೆ, ಇಲ್ಲಿ ಯಾವನಾದರೂ ಅಧಿಕಾರಿಯ ಭೃತ್ಯನಾಗಿ ಇದ್ದವನೋ ? ಕೇಳು" ಎನಲು, ಆ ಮಾತಿಗೆ "ಬುದ್ಧೀ, ನಾನು ಅಮಾತ್ಯರಾಕ್ಷಸರ ಸೇವಕನು" ಎಂದು ಸಿದ್ಧಾರ್ಥಕನು ಹೇಳಲು, "ಹಾಗಾದರೆ, ಇಲ್ಲಿಗೆ ಬಂದು ಉಂಡಿಗೆಯಂ ಯಾಕೆ ಕೇಳಲಿಲ್ಲ ?" ಎನಲು,

---

೧. ಯೇ (ಕ), ಯೇ ಅಲ್ಲಿಯ (ಗ) ೨. ದಟ್ಟದಲ್ಲಿ (ಕ)

"ಸ್ವಾಮೀ, ಕಾರ್ಯತ್ವರಿತದಿಂದ ಸಾವಕಾಶವಿಲ್ಲದೆ ಹೋಗುತ್ತಿದ್ದೆನು" ಎನಲು, "ಎಲೋ, ರಾಜಶಾಸನವಂ ಮೀರಿ ಹೋಗುವದಕ್ಕೆ ಅಂಥ ಕಾರ್ಯವೇನು ?" ಎಂದು ಬಾಗುರಾಯಣ ಕೇಳಲು, ಆಗ ಮಲಯಕೇತುವು "ಅಯ್ಯ ಮಿತ್ರನೇ, ಈ ಭೃತ್ಯನ ಬಳಿಯಲ್ಲಿ ಈ ಕಾಗದ ಸಿಕ್ಕಿತಂತೆ, ನೋಡುವನಾಗು" ಎನಲು, ಅದಂ ನೋಡಿ, "ಅಯ್ಯ ರಾಜಕುಮಾರಕನೇ, ಈ ಕಾಗದದ ಮೇಲೆ ರಾಕ್ಷಸನ ಮೊಹರ ಮಾಡಿ ಇದೆ. ಮುದ್ರೆ ಒಡೆಯದಂತೆ ಕಾಗದವಂ ತೆಗೆದು ಓದಿಕೊಡುವಂತೆ ಅಪ್ಪಣೆಯಾದರೆ, ವಿಜ್ಞಾಪಿಸುವೆನೆಂ"ದು ಹೇಳಿ, ಆತನ ಅಪ್ಪಣೆ ಯಿಂದ ಕಾಗದವಂ ತೆಗೆದು, ಅದರಲ್ಲಿ ಇದ್ದ ಒಕ್ಕಣೆಯಂ ಓದಿಕೊಡುವಲ್ಲಿ,

"ಶ್ರೀಮತು ಸ್ಥಳದಲ್ಲಿ ಇರುವ ಒಬ್ಬ ಪುರುಷಶ್ರೇಷ್ಠರಿಗೆ ಸ್ಥಳಾಂತರದಲ್ಲಿ ಇರುವ ಒಬ್ಬ ಪುರುಷನು ವಿಜ್ಞಾಪಿಸುವ ಅರ್ಥವೇನೆಂದರೆ, ನಮಗೆ ಪ್ರತಿಪಕ್ಷಿಯಾದ ಪುರುಷನಂ ನಿರಾಕರಿಸಿ, ಆತ ಕೇಳುವಂತೆ ನನ್ನ ಗುಣಕಥನವಂ ಮಾಡಿದುದಂ ಪರೋಕ್ಷವಾಗಿ ಕೇಳಿ ಇದ್ದುದರಿಂದಲೂ ಆಭರಣಗಳ ಪೆಟ್ಟಿಗೆಗಳು ಮೂರೂ ಬಂದು ತಲುಪಿದುದರಿಂದಲೂ ಸಂತೋಷವಾಯಿತು. ಇಲ್ಲಿ ನಮಗೆ ಆಪ್ತರಾಗಿ ಸಮಯವಂ ನಿರೀಕ್ಷಿಸುತ್ತ, ನಿಮ್ಮ ಕಾರ್ಯದಲ್ಲಿ ಉದ್ಯುಕ್ತರಾಗಿ ಇರುವ ಪುರುಷರಿಗೆ ಕಾರ್ಯ ಕೈಸೇರಿದ ಬಳಿಕ ಆ ಜನಗಳಿಗೆ ನಡಸಿ ಕೊಡತಕ್ಕದ್ದೇನೆಂದರೆ, ಕೆಲವರಿಗೆ ಶತ್ರುವಿನ ಬೊಕ್ಕಸದಲ್ಲಿ ಅಪೇಕ್ಷೆಯಿರುವದು ; ಮತ್ತೆ ಕೆಲವರು ಶತ್ರುವಿನ ಸೇನೆಯನ್ನಪೇಕ್ಷಿಸುವರು ; ಉಳಿದವರು ನಿಮ್ಮ ಶತ್ರುವಿನ ರಾಜ್ಯವಂ ಬಯಸುವರು. ಇದು ಚಿತ್ತದಲ್ಲಿ ಇರಬೇಕು. ಈ ಕಾಗಜದ ಸಂಗಡ ಕಳುಹಿಸಿ ಇರುವ ರಾಜಯೋಗ್ಯವಾದ ಆಭರಣವಂ ನೋಡಿದುದರಿಂದ ಇಲ್ಲಿ ನನಗೆ ಸರ್ವಸ್ವಾತಂತ್ರ್ಯ ವುಂಟೆಂಬುವ ಅರ್ಥವು ಚಿತ್ತಕ್ಕೆ ವೇದ್ಯವಾಗುವದು. ಕಡಮೆ ಬಾಯಿಮಾತು ಏನು ಇದ್ದರೂ ಆಪ್ತನಾದ ಈ ಪುರುಷನ ಮುಖವಚನದಿಂದ ವೇದ್ಯವಾಗುತಲಿದೆ" ಎಂದು ಬರೆದಿರುವ ಒಕ್ಕಣೆಯಂ ಮಲಯಕೇತುವಿಗೆ ಓದಿ ತಿಳುಹಿಸಿ, ಸಿದ್ಧಾರ್ಥಕನಂ ನೋಡಿ.

"ಎಲೈ ಚಾರನೇ, ಈ ಕಾಗದವಂ ಯಾರು ಕೊಟ್ಟರು ?" ಎಂದು ಬಾಗುರಾಯಣನು ಕೇಳಲು, ಆ ಮಾತಿಗೆ ಸಿದ್ಧಾರ್ಥಕನು, "ಸ್ವಾಮಿ, ಕಾಗದವಂ ಕೊಟ್ಟವರ ನೆಪ್ಪು ನಾನರಿಯೆ" ಎನಲು, "ಆದರೆ ನಿನ್ನಲ್ಲಿ ಇರುವ ಆಭರಣವಂ ತೋರಿಸೆಂ"ದೆನಲು,

"ಆಭರಣವೆಂದರೇನು ?" ಎನಲು, ಆ ಮಾತಿಗೆ ಬಾಗುರಾಯಣನು ದೂತನ ಮೊಖವಂ ನೋಡಿ, "ಈ ಚಾರನು ವಂಚಕನಾಗಿ ತೋರುವದರಿಂದ ಯಥಾರ್ಥವಂ ಹೇಳುವ ಪರ್ಯಂತವೂ ಇವನಂ ಕಶೆಗಳಿಂದ ಪ್ರಹರಿಸು" ಎನಲು, ಹಾಗೇ [ಮಾಡಲು], ಕಶಾಪ್ರಹಾರಕ್ಕೆ ತಾಳದವನಂತೆ ನಡುಗುತ್ತ, ಕಕ್ಷಗತವಾಗಿ ಇದ್ದ ಪೆಟ್ಟಿಗೆಯಂ ಕೆಡಹಲು, ಅದಂ ದೂತನು ತಂದು ಮಲಯಕೇತುವಿನ ಮುಂದೆ ಇರಿಸಿ, "ಈ ಪೆಟ್ಟಿಗೆಯು ಸಹ ಚಾರನಲ್ಲಿಯೇ ಇತ್ತು" ಎನಲು,

ಅದಂ ನೋಡಿ ಬಾಗುರಾಯಣನು, "ಈ ಪೆಟ್ಟಿಗೆ ಕಾಗದಕ್ಕೆ ಸಹ ಮಾಡಿ ಇರುವ ಮುದ್ರೆ ಒಂದೇ ಆಗಿ ಇದೆ" ಎಂದು ಮಲಯಕೇತುವಿಗೆ ತಿಳುಹಿಸಲು, "ಮುದ್ರೆ ಒಡೆಯ ದಂತೆ ಆಭರಣವಂ ತೆಗೆದು ತೋರಿಸುವನಾಗು" ಎನಲು, ಹಾಗೇ ಪೆಟ್ಟಿಗೆಯ ಮುಚ್ಚಳವಂ ತೆಗೆದು ಆಭರಣಗಳಂ ತೋರಿಸಲು, ಅದಂ ನೋಡಿ, "ಇದು ಮೊದಲು ರಾಕ್ಷಸನು ನಮ್ಮ ಬಳಿಗೆ ಬಂದ ಸಮಯದಲ್ಲಿ ಆತನು ಅಲಂಕರಿಸಿಕೊಳ್ಳುವದಕ್ಕೆ ನಾವು ಕೊಟ್ಟ ಆಭರಣಂ

ಗಳು. ಇವು ನಾವು ಧರಿಸಿದವಾದುದರಿಂದ ರಾಜಯೋಗ್ಯವೆಂದು ರಾಕ್ಷಸನು ಚಂದ್ರಗುಪ್ತನಲ್ಲಿ ಅಧಿಕಾರವಂ ಬಯಸಿ, ಚಾಣಕ್ಯನಿಲ್ಲದ ಸಮಯದಲ್ಲಿ ಈ ಕಾಗದದ ಸಂಗಡ ಈ ಆಭರಣಗಳಂ ಸಹ ಕಳುಹಿಸಿ ಇದ್ದಾನು. ಈಗ ರಾಕ್ಷಸನ ಹೃದಯ ತಿಳಿಯ ಬಂತು'' ಎಂದು ಮಲಯಕೇತು ಹೇಳುತ್ತಿರಲು,

"ಅಯ್ಯ ರಾಜಕುಮಾರಕನೇ, ಈ ಅರ್ಥವು ಮತ್ತೂ ನಿನಗೆ ದೃಢವಾಗುವಂತೆ ಮಾಡುವೆನು" ಎಂದು ಹೇಳಿ, ಬಾಗುರಾಯಣನು ದೂತನ ಮೊಖವಂ ನೋಡಿ, "ಉಂಟಾದರ್ಥವಂ ಹೇಳದೆ ಇರುವ ಈ ತುಂಟಚಾರನಂ ಗಂಟುಕಶೆಯಿಂದ ಪ್ರಹರಿಸು"ವಂತೆ ಹೇಳಲು, ಆ ಪ್ರಹಾರಕ್ಕೆ ಸಿದ್ಧಾರ್ಥಕನು ನೆಲಕ್ಕೆ ಬಿದ್ದು, ಭೀತನಂತೆ ಕೈಮುಗಿಯುತ್ತ, "ಸ್ವಾಮೀ, ನನಗೆ ಅಭಯವಂ ಕೊಟ್ಟರೆ ಉಂಟಾದರ್ಥವಂ ಯಥಾರ್ಥವಾಗಿ ವಿಜ್ಞಾಪಿಸುವೆನೆ"ನಲು, "ಎಲೋ, ಭೃತ್ಯನಾದವನು ಯಥಾರ್ಥವಂ ಹೇಳಿದರೆ, ಅಭಯವಲ್ಲದೆ ಭಯವೇನು ? ಇರುವದು ಅರಿಕೆ ಮಾಡಿಕೋ" ಎನಲು, ಸಿದ್ಧಾರ್ಥಕನು ಕೈಮುಗಿದು, ನಡುಗುತ್ತ, "ಸ್ವಾಮೀ, ಅಮಾತ್ಯ ರಾಕ್ಷಸರು 'ಈ ಪೆಟ್ಟಿಗೆ ಕಾಗದಗಳಂ ಪಾಟಲೀಪುರಾಧಿಪತಿ ಚಂದ್ರಗುಪ್ತ ಮಹಾರಾಯರಿಗೆ ಒಪ್ಪಿಸಿ ಬಾರೆಂ'ದು ನನ್ನಂ ಕಳುಹಿಸಿದರು ; ನಾನವರ ದೂತನು" ಎನಲು, "ಎಲೋ ಭೃತ್ಯನೇ, ಈ ಅರ್ಥವು ತಿಳಿದೇ ಇರುವದು. ರಾಕ್ಷಸರು ಚಂದ್ರಗುಪ್ತನಿಗೆ ಏನು ಬಾಯಿಮಾತುಗಳಂ ಹೇಳೆಂದು ಕಳುಹಿಸಿದರು ? ಅದಂ ಯಥಾರ್ಥವಾಗಿ ಹೇಳು" ಎಂದು ಬಾಗುರಾಯಣನು ಕೇಳಲು,

"ಸ್ವಾಮೀ, ಅಮಾತ್ಯ ರಾಕ್ಷಸರು ಚಂದ್ರಗುಪ್ತ ಮಹಾರಾಯರಿಗೆ ತಿಳುಹಿಸೆಂದು ಹೇಳಿದ ಮಾತು ಯಾವುದೆಂದರೆ, 'ಇಲ್ಲಿ ತಮಗೆ ಆಪ್ತರಾದ ಐದು ಮಂದಿ ಅರಸುಗಳು ಇರುವರು. ಅವರುಗಳು ನಿಮ್ಮ ಕಾರ್ಯದಲ್ಲಿ ಅತಿಜಾಗರೂಕರಾಗಿ ಸಮಯವಂ ಪ್ರತೀಕ್ಷಿಸುತ್ತ, ಇಲ್ಲಿಗೂ ಆಪ್ತರಂತೆ ಇರುವದರಿಂದ ಸ್ವಲ್ಪ ದಿವಸದಲ್ಲಿಯೇ ನಿಮ್ಮ ಕಾರ್ಯ ಕೈಸೇರುವದು. ಆ ಬಳಿಕ ಅವರ ಮನೋರಥವಂ ನಡಸಿ ಕೊಡಬೇಕೆಂ'ದು ಹೇಳಿ, 'ಅವರುಗಳ ಹೆಸರುಗಳಂ ಸೂಚಿಸೆಂ'ದು ನನಗೆ ಅಪ್ಪಣೆಯಂ ಕೊಟ್ಟರು. ಇದೇ ಅಮಾತ್ಯರಾಕ್ಷಸರು ಹೇಳಿ ಕಳುಹಿಸಿದ ಬಾಯಿಮಾತುಗಳು" ಎಂದು ಸಿದ್ಧಾರ್ಥಕನು ಹೇಳಲು, ಅದಂ ಕೇಳಿ "ಆ ಅರಸುಗಳ ಹೆಸರೇನೆಂ"ದು ಕೇಳಲು,

"ಸ್ವಾಮೀ, ಕುಲೂತಪತಿಯಾದ ಚಿತ್ರವರ್ಮನೊಬ್ಬನಂತೆ ; ಮಲಯದೇಶಾಧಿಪತಿ ಸಿಂಹನಾದನೊರ್ವನು ; ಕಾಶ್ಮೀರಪತಿಯಾದ ಪುಷ್ಕರಾಕ್ಷನೆಂಬವನು ; ಸಿಂಧುಪತಿ ಸಿಂಧುಷೇಣನೆಂಬನವನೊರ್ವನು ; ಪಾರಶೀಕಪತಿಯಾದ ಮೇಘನಾದನೆಂಬವನೇ ಐದನೆಯವನು. 'ಈ ಐದು ಮಂದಿ ಅರಸುಗಳ ಹೆಸರುಗಳನ್ನೇ ಸೂಚಿಸೆಂ'ದು ಅಮಾತ್ಯರ ಅಪ್ಪಣೆಯಾಗಿ ಇತ್ತು" ಎಂದು ಹೇಳಲು, ಅದಂ ಕೇಳಿ ಮಲಯಕೇತುವು ಮನಸ್ಸಿನಲ್ಲಿ ವ್ಯಸನಗೊಂಡು,

"ಅಹಹ ! ಚಿತ್ರವರ್ಮಾದಿಗಳು ಕೂಡ ನನಗೆ ದ್ರೋಹವಂ ಮಾಡಲೆಣಿಸಿ, ರಾಕ್ಷಸನಲ್ಲಿ ವಿಶ್ವಾಸವಂ ಬಳಸಿದರ್ಥವು ತಿಳಿದ ಬಳಿಕ ಇನ್ನಾರಂ ಆಪ್ತರೆಂದು ಭಾವಿಸಬಹುದು ? ಕಾಲಗತಿ ಎಂತಿರುವದೋ ? ಹರಹರ ! ಇವರು ಎಷ್ಟು ದಿವಸದ ಮತ್ಸರವಂ ಮನಸ್ಸಿನಲ್ಲಿ ಅಡಗಿಸಿ ಇದ್ದರೋ ? ಈ ದುಷ್ಟಸಾಮಂತರಂ ನಮ್ಮ ತಂದೆಯು ಸಲಹಿದ್ದು ಸರ್ಪಕ್ಕೆ

ಕ್ಷೀರವನ್ನೆರೆದು ಸಲಹಿದಂತಾಯಿತು" ಎಂದು ಹೇಳಿ, ತನ್ನ ಬಳಿಯ ಕಂಚುಕಿಯಂ ನೋಡಿ,

"ಎಲೈ ಹಂಸಕನೇ, ನೀನು ಹೋಗಿ ಅಮಾತ್ಯ ರಾಕ್ಷಸರು ಯಾವ ಕಾರ್ಯವಂ ನೋಡುವರು, ತಿಳಿದು ಬಂದು ಹೇಳುವನಾಗು" ಎಂದು ಆಜ್ಞಾಪಿಸಲು, ಅಪ್ಪಣೆ ಮೇರೆಗೆ ಕಂಚುಕಿ ಹೋಗಿ ಆತನ ಸಮಯವಂ ನೋಡುತ್ತಿರಲು, ಆಗ ರಾಕ್ಷಸನು ತನ್ನ ಬಳಿಯ ದೂತನ ಮುಖವಂ ನೋಡಿ, "ಎಲೈ ಪಿಂಗಳನೇ, 'ಗೌಡದೇಶದಲ್ಲಿ ರಾಜಕಾರ್ಯಕ್ಕೋಸುಗ ಸೇನೆಗಳು ಹೊರಟು ಸಿದ್ಧವಾಗಲಿ. ರಾಜಪುತ್ರನಾದ ಮಲಯಕೇತುವಿನ ಸುತ್ತಲೂ ಸ್ವಸೇನೆಗಳಂ ವ್ಯೂಹವಂ ರಚಿಸಿಕೊಂಡು ಕುಲೂತಪತಿ ಚಿತ್ರವರ್ಮನೂ ಮಲಯಪತಿ ಸಿಂಹನಾದನೂ ಕಾಶ್ಮೀರಪತಿ ಪುಷ್ಕರಾಕ್ಷನೂ ಸಿಂಧುಪತಿ ಸಿಂಧುಷೇಣನೂ ಪಾರಶೀಕಪತಿ ಮೇಘನಾದನೂ ಈ ಐದು ಮಂದಿ ಅರಸುಗಳೂ ನಮ್ಮ ಅಪ್ಪಣೆ ಮೇರೆಗೆ ಜಾಗರೂಕರಾಗಿ ತೆರಳುತ್ತಿರಲಿ. ನಾವು ಹಿಂದೆ ಬರುವೆವು. ನಮ್ಮ ಸಂಗಡ ಮಗಧ ಗಾಂಧಾರ ಶಕ ನರಪತಿಗಳು ವ್ಯೂಹವಂ ರಚಿಸಿಕೊಂಡು ಬರಲಿ. ಚೀಣ ಹೂಣಾಧಿಪತಿಗಳು ನಮ್ಮ ಹಿಂಭಾಗದಲ್ಲಿ ಬರುತ್ತಿರಲಿ. ಪಾರ್ವತೇಯಸೇನಾಸಮೇತವಾಗಿ ಶೇಖರನೆಂಬ ಸೇನಾಪತಿಯು ಈ ಪುರ ದೇಶಗಳಂ ರಕ್ಷಿಸಿಕೊಂಡು ಇಲ್ಲಿಯೇ ಇರುವನಾಗಲೆಂ'ದು ನಾವು ಹೇಳಿದವೆಂದು ಈ ಸೇನಾಪತಿಗಳೆಲ್ಲರಿಗೂ ಹೇಳಿ ಬಾರೆಂ"[೧]ದು[೧] ಆಜ್ಞಾಪಿಸುತ್ತಿರಲು,

ಈ ಅರ್ಥವಂ ತಿಳಿದು ಹಂಸಕನೆಂಬ ಮಲಯಕೇತುವಿನ ಬಳಿಯ ಕಂಚುಕಿಯು ಬಂದು ರಾಕ್ಷಸನು ಸೇನೆಗೆ ಆಜ್ಞಾಪಿಸಿದ ಅರ್ಥವಂ ಮಲಯಕೇತುವಿಗೆ ಕೈಮುಗಿದು ವಿವರವಾಗಿ ತಿಳುಹಿಸಲು, ಅದಂ ಕೇಳಿ ಬಾಗುರಾಯಣನಂ ಕುರಿತು "ಎನ್ನ ಮಿತ್ರನೇ, ರಾಕ್ಷಸನು ಸೇನೆಗೆ ಆಜ್ಞಾಪಿಸಿದರ್ಥವಂ ತಿಳಿದೆಯಷ್ಟೆ. ನಮ್ಮ ವಂಶಪರಂಪರೆಗೆ ಆಪ್ತರಾದ ಪಾರ್ವತೇಯ ಸೇನೆಗಳೊಡಗೂಡಿ ಶೇಖರನು ಈ ಪುರದಲ್ಲಿಯೇ ಇರಬೇಕಂತೆ ; ನಮಗೆ ದ್ರೋಹಿಗಳಾದ ಚಿತ್ರವರ್ಮಾದಿಗಳು ವ್ಯೂಹವಂ ರಚಿಸಿಕೊಂಡು ಆತ ಹೇಳಿದ ಮೇರೆಗೆ ಜಾಗರೂಕರಾಗಿ ನಮ್ಮ ಬಳಸಿಕೊಂಡು ತೆರಳುತ್ತಿರಲೀ ರಾಕ್ಷಸನು ತಾನು ಕೆಲವು ದೇಶಾಧಿಪತಿಗಳೊಡನೆ ಹಿಂದೆ ಬರುವ[ನಂ]ತೆ. ಹೀಗೆ ರಾಕ್ಷಸನು ಸೇನೆಗೆ ಆಜ್ಞಾಪಿಸಿದ ಭಾವವಂ ನೋಡಿದರೆ, ಈಗ ಉಕ್ಕಡದಲ್ಲಿ ಸಿಕ್ಕಿದ ಆತನ ಚಾರ ಹೇಳಿದ ಮಾತುಗಳು ಈಗಲೇ ನಿದರ್ಶನಕ್ಕೆ ಬಂದಂತಾಯಿತು" ಎಂದು ಹೇಳಿ, ಮೊಖವಂ ಗಂಟಿಕ್ಕಿ, ರಾಕ್ಷಸನ ಮೇಲೆ ಕೋಪಭಾವದಿಂದ "ಆತನಂ ಕರೆಕಳುಹಿಸೆಂ"ದು ಮಲಯಕೇತುವು ಹೇಳುತ್ತಿರಲು, ಅದೇ ಮೇರೆಗೆ ಬಾಗುರಾಯಣನು ಒಬ್ಬ ಕಂಚುಕಿಯಂ ಕರೆದು, "ಎಲೈ ದಾತ್ಯೂಹಕನೇ, ಅಮಾತ್ಯ ರಾಕ್ಷಸರಂ ಇಲ್ಲಿಗೆ ಕರೆತರುವಂತೆ ದೊರೆಗಳ ಅಪ್ಪಣೆಯಾಗಿ ಇದೆ ; ಕರೆತರುವನಾಗು" ಎಂದು ಹೇಳಲು. "ಬುದ್ಧೀ" ಎಂದು ಅವನು ಹೋಗುತ್ತ ತನ್ನ ಮನಸ್ಸಿನಲ್ಲಿ, "ಏನು ನಿಮಿತ್ತವಾಗಿಯೋ ಮುಖವಂ ಗಂಟಿಕ್ಕಿ 'ಆತನಂ ಕರೆಕಳುಹಿಸೆಂ'ದು ಬಾಗುರಾಯಣನಿಗೆ ನೇಮಿಸಿದನಲ್ಲದೆ, ಎಂದಿನಂತೆ ಮುಖಪ್ರಸಾದದಿಂದ ನನ್ನಂ ಕುರಿತು ಆಜ್ಞಾಪಿಸಲಿಲ್ಲ. ಅಮಾತ್ಯರಲ್ಲಿ ಅರಸಿಗೆ ಏನೋ ಕೋಪವುಂಟಾಗಿ ಇರುವಂತೆ ತೋರುತ್ತಲಿದೆ. ಈ ರಾಕ್ಷಸನಿಂದ ಏನೋ ಅಚಾತುರ್ಯ ನಡೆದಿರಬೇಕು" ಎಂದು ಯೋಚಿಸುತ್ತ ಹೋಗಿ,

---

೧. ದು ಮೂತರಿಗೆ (ಕ, ಖ, ಗ)

ರಾಕ್ಷಸನ ಸಮೀಪದಲ್ಲಿ ನಿಂತು, ತಲೆಬಾಗದೆ ಸುಮ್ಮಗೆ ಕೈಮುಗಿದು, "ಸ್ವಾಮೀ, ದೊರೆಗಳ ಅಪ್ಪಣೆಯಾಗಿ ಇದೆ. ಜಾಗ್ರತೆಯಾಗಿ ಹೊರಡಬಹುದು" ಎನಲು, ಅವನಂ ರಾಕ್ಷಸಂ ನೋಡಿ, "ಈ ಕಂಚುಕಿಯು ಎಂದಿನಂತೆ ದೂರದಲ್ಲಿ ನಿಂತು ವಿನಯದಿಂ ನೆಲಮುಟ್ಟಿ ಕೈಮುಗಿದು ನಿಂತಲ್ಲಿ, 'ಅದೇನೈ' ಎಂದು ನಾವು ಕೇಳಿದುದಕ್ಕೆ 'ಬುದ್ಧೀ' ಎಂದು ತಾನು ಬಂದ ಕಾರ್ಯವಂ ವಿಜ್ಞಾಪಿಸುವನಲ್ಲದೆ, ಸಮೀಪದಲ್ಲಿ ನಿಂತು 'ಜಾಗ್ರತೆಯಿಂದ ಹೊರಡಬೇಕೆಂ'ದು ನಮ್ಮಂ ತ್ವರಿತಪಡಿಸುವದರಿಂದ ಬಾಲಕನಾದ ಮಲಯಕೇತುವು ವಂಚಕರ ವಾಕ್ಯಕ್ಕೆ ವಿಹ್ವಲನಾಗಿ ಪರೋಕ್ಷದಲ್ಲಿ ಏನೋ ಬಿ⌜ಡಿ⌝ಮಾತುಗಳಂ ಆಡಿ ಇದ್ದಾನು. ಅದರಿಂದ ಈ ಕಂಚುಕಿಗೆ ಲಘುತ್ವಬುದ್ಧಿ ತೋರಿದುದರಿಂದ ಹೀಗೆ ನಡೆದು ಇರುವನು. ಪ್ರಭುವಿಗೆ ಯಾರಲ್ಲಿ ಗೌರವ ತೋರಿದರೆ ಜನರೆಲ್ಲರೂ ಅವರಂ ವಿನಯದಿಂದನುವರ್ತಿಸುವರು ; ಉಪೇಕ್ಷೆ ತೋರಿದರೆ, ಜನರೂ ಅವನಲ್ಲಿ ಉಪೇಕ್ಷೆಯಂ ಮಾಡುವರು ; ಮತ್ತು ಲೋಕದಲ್ಲಿ ಬಾಲಕನು ಪ್ರಭುವಾದರೆ, ಅವನ ಹೃದಯವಂ ತಿಳಿದ ವಂಚಕರು ಸ್ವಕಾರ್ಯಪರರಾಗಿ ಗುಣಗಳಂ ದೋಷದಲ್ಲಿ ಪರ್ಯವಸಾನಗೊಳಿಸಿ, ದೋಷಗಳಂ ಗುಣವಾಗಿ ಕಲ್ಪಿಸಿ, ನಷ್ಟದಲ್ಲಿ ಲಾಭಭ್ರಾಂತಿಯನ್ನುಂಟುಮಾಡಿ, ಲಾಭದಲ್ಲಿ ಉಪೇಕ್ಷೆಯನ್ನುಂಟುಮಾಡಿ, ಇದರಿಂದ ಪ್ರಭುವಿಗೆ ಉಂಟಾಗುವ ಹಾನಿಯಂ ಗಣನೆಗೆ ತಾರದೆ, ಅರಸಿಗೆ ಗುರುಹಿರಿಯರಲ್ಲಿ ವಿಶ್ವಾಸವಂ ತಪ್ಪಿಸುವರು" ಎಂದು ಆಲೋಚಿಸುತ್ತ, ಬಂದಿದ್ದ ಕಂಚುಕಿಯಂ ನೋಡಿ, "ಎಲೈ, ಸ್ವಲ್ಪ ನಿಲ್ಲುವನಾಗು ; ಬರುವೆವು" ಎಂದು ಹೇಳಿ, ರಾಕ್ಷಸನು ಶಕಟದಾಸನಂ ಕರೆದು,

"ಅಯ್ಯ, ರಾಜಕುಮಾರಕನು ನಮ್ಮಂ ಕರೆಕಳುಹಿಸಿ ಇರುವನು. ಆತನು ನಮಗೆ ಕೊಟ್ಟ ಆಭರಣಂಗಳು ವೆಚ್ಚವಾಯಿತಷ್ಟೆ. ಆಸ್ಥಾನಕ್ಕೆ ಹೋಗುವಲ್ಲಿ ಭೂಷಣರಹಿತನಾಗಿ ಹೋಗುವದು ಯುಕ್ತವಲ್ಲವಾದುದರಿಂದ, ನಮಗೆ ವರ್ತಕರ ಕಡೆಯಿಂದ ಕ್ರಯಲಬ್ಧವಾಗಿ ಬಂದ ಆಭರಣಗಳು ನಮ್ಮ ಬೊಕ್ಕಸದಲ್ಲಿ ಇರುವದಷ್ಟೆ. ಅದಂ ತರುವನಾಗು" ಎಂದು ನೇಮಿಸಲು, ಅದೇ ರೀತಿಗೆ ಶಕಟದಾಸನು ಮೂರು ಸಂಪುಟದ ಆಭರಣಗಳಂ ತಂದು ಇರಿಸಲು, ಆ ಪರ್ವತರಾಯ ಧರಿಸಿದ್ದ ಆಭರಣಗಳಂ ಧರಿಸಿ, ರಾಕ್ಷಸನು ತನ್ನ ಗೃಹದಿಂದ ಹೊರಟುಬರುತ್ತ,

ತನ್ನ ಮನಸ್ಸಿನಲ್ಲಿ, "ಪ್ರಭುಸನ್ನಿಧಿಯಲ್ಲಿ ಪ್ರಮುಖನಾದ ಪುರುಷನು ತನಗೆ ಯಾವ ವೇಳೆಯಲ್ಲಿ ಏನು ಬರುವದೋ ಎಂದು ಭಯಪಟ್ಟವನಾಗಿ ಇದ್ದರೂ, ಪ್ರಭುಕಟಾಕ್ಷದಿಂದ ಹೆಚ್ಚಿ ಬಂದರೆ ಅವನಂ ನೋಡಿ ಸಹಿಸಲಾರದ ಕ್ಷುದ್ರಜನರು ಅವನು ಮಾಡಿದ ಕಾರ್ಯನಿರ್ವಾಹಗಳಂ ದೋಷದಲ್ಲಿ ಪರ್ಯವಸಾನಗೊಳಿಸಿ ಪರೋಕ್ಷದಲ್ಲಿ ಹೇಳುತ, ಎದುರಿಗೆ ಇದ್ದರೆ ಸ್ತುತಿಸುತ, ಸಮಯವಂ ನೋಡಿ ಪ್ರಭುವಿಗೆ ಅವನಲ್ಲಿ ಮಹಾಸಂಶಯವನ್ನುಂಟುಮಾಡಿ, ಪುನಃ ತಲೆಯೆತ್ತದಂತೆ ಮಾಡುವರು. ಅದರಿಂದ ವಿಮರ್ಶಕಾರ್ಯದ ಪ್ರಭುವಿನ ಅವಲಂಬನ ದೊರಕುವದು ದುರ್ಲಭವು" ಎಂದು ಆಲೋಚಿಸುತ್ತ ಬರುತ್ತಿರಲು,

ಆಗ ಆಸ್ಥಾನದಲ್ಲಿ ಇರುವ ಬಾಗುರಾಯಣನು ತನ್ನ ಮನಸ್ಸಿನಲ್ಲಿ, "ಈಗ ರಾಕ್ಷಸನಲ್ಲಿ

---

೧. ಡ (ಕ), ಡು (ಗ)

ಉಂಟಾಗಿ ಇರುವ ದ್ರೋಹವಂ ಮಲಯಕೇತುವು ಆತನ ಪ್ರತ್ಯಕ್ಷವಾಗಿ ವಿಚಾರಿಸುವಲ್ಲಿ, ಈ ಸಿದ್ಧಾರ್ಥಕನು ಎದುರಿಗಿದ್ದರೆ ಮಲಯಕೇತುವು ಇವನಂ ಪುನಃ ಈಗ ನಡೆದು ಇರುವದಂ ಕೇಳುವನು ; ಮೊದಲಿನಂತೆ ಈ ಕಪಟವಾಕ್ಯವಂ ಹೇಳಲುಪಕ್ರಮಿಸಿದರೆ, ರಾಕ್ಷಸನು 'ಈ ಸಿದ್ಧಾರ್ಥಕನು ಚಾಣಕ್ಯನಿಂದ ಪ್ರೇಷಿತನಾಗಿ, ಶಕಟದಾಸನಿಗೆ ಆಪ್ತನಂತೆ ಅವನಂ ಓಡಿಸಿಕೊಂಡು ಬಂದು, ನಮ್ಮಲ್ಲಿ ಆಪ್ತದೂತಭಾವದಲ್ಲಿ ಇರುತ, ನಮ್ಮಲ್ಲಿ ಭದ್ರಭಟಾದಿಗಳಲ್ಲಿ ಸಂಚು ನಡಸುತ, ಸಮಯವಂ ನಿರೀಕ್ಷಿಸಿ, ನಾವು ಕೊಟ್ಟ ಆಭರಣ ಗಳಂ ಸ್ವೀಕರಿಸಿ ಉಕ್ಕಡದಲ್ಲಿ ಸಿಕ್ಕಿದ ಕಳ್ಳಚಾರನಂತೆ ನಟಿಸುತ, ಆಭರಣ ಕಾಗಜಗಳಂ ತಂದು ಮಲಯಕೇತುವಿಗೆ ಒಪ್ಪಿಸಿ ಇರುವನು' ಎಂದು ರಾಕ್ಷಸನು ತಿಳಿದು, ಮಲಯ ಕೇತುವಿಗೆ 'ಇದೆಲ್ಲವೂ ಚಾಣಕ್ಯನ ಛದ್ಮನೆ' ಎಂದು ತಿಳುಹಿಸಿ, ಪಾಟಲೀಪುರದಿಂದ ಬಂದಿರುವ ಪ್ರಮುಖರೆಲ್ಲರೂ ಚಾಣಕ್ಯನಿಂದ ಪ್ರೇಷಿತರಾಗಿ ಬಂದಿರುವರೆಂದು ನಿಶ್ಚಯ ವಾಗುವಂತೆ ತಿಳುಹಿಸಿ, ಆತನಿಗೆ ಈಗ ಬಂದೊದಗಿರುವ ವಿಪತ್ತಂ ನಮ್ಮೆಲ್ಲರ ಮೇಲೆ ಒರಗಿಸುವನು. ಅದರಿಂ ಈ ಕಪಟದ ಮೂಲವಂ ರಾಕ್ಷಸನು ತಿಳಿಯದಂತೆ ಈ ಸಿದ್ಧಾರ್ಥಕನಂ ಕಣ್ಣುಮರೆಯಾಗಿ ಇರುವಂತೆ ಮಾಡಬೇಕಾಯಿತು" ಎಂದು ನಿಶ್ಚೈಸಿ, ಬಾಗುರಾಯಣನು,

"ಅಯ್ಯ ರಾಜಪುತ್ರನೇ, ರಾಕ್ಷಸನು ಬರುವ ಸಮಯದಲ್ಲಿ ಈ ಚಾರನು ಎದುರಿಗೆ ಇಲ್ಲದೆ ಇರುವದೇ ಲೇಸೆಂದು ತೋರುತಲಿದೆ" ಎನಲು, ಅಷ್ಟಕ್ಕೆ ಮಲಯಕೇತುವು 'ಇದರಲ್ಲಿ ಏನೋ ಇರುವದೆಂ'ದು ತಿಳಿದು, "ಹಾಗೇ ಆಗಲೆಂ"ದೆನಲು, ಆಗ ಸಮೀಪ ದಲ್ಲಿ ಇದ್ದ ದೂತನಂ ನೋಡಿ, "ಈ ಚಾರನಂ ವಿಂಗಡವಾಗಿ ಇರಿಸುವದೆಂ"ದು ಬಾಗುರಾಯಣನು ನೇಮಿಸಲು, ಅದೇ ರೀತಿಗೆ ದೂತನು ಸಿದ್ಧಾರ್ಥಕನಂ ದೂರವಾಗಿ ಕಾವಲಿನಲ್ಲಿ ಇರಿಸಲು,

ಅಷ್ಟರಲ್ಲಿ ರಾಕ್ಷಸನು ಮಲಯಕೇತುವಿನ ಸಭೆಗೆ ಬಂದು ನೋಡಿ, "ಯಾಕೋ ರಾಜಪುತ್ರನು ಬಹಳ ಚಿಂತಾಕ್ರಾಂತನಾಗಿ ಇರುವಂತೆ ತೋರುತ್ತೆ ; ಯಾರು ಏನು ಹೇಳಿ ಇರುವರೋ?" ಎಂದು ಸಮೀಪಕ್ಕೆ ಬಂದು, "ಅಯ್ಯ ರಾಜಕುಮಾರಕನೇ, ನಿನಗೆ ವಿಜಯವಾಗಲಿ" ಎಂದು ಹರಸಲು, ಅದಂ ಕೇಳಿ ಮಲಯಕೇತು ಎದ್ದು ನಿಂತವನಾಗಿ, "ಯಜಮಾನರಾದ ಅಮಾತ್ಯರೇ, ತಮ್ಮಡಿಗಳಿಗೆ ನಮಸ್ಕರಿಸಿದೆನೆಂ"ದು ಹೇಳಿ, ರಾಕ್ಷಸನಂ ತನ್ನ ಹಾಸಿಗೆಯಲ್ಲಿ ಕುಳ್ಳಿರಿಸಿಕೊಂಡು, "ನಿಮ್ಮಂ ನೋಡಲಿಚ್ಛೈಸಿ ಕರೆಕಳುಹಿಸಿದೆನೆ"ನಲು,

"ಅಯ್ಯ ಕುಮಾರಕನೇ, ಸೇನಾಪ್ರಯಾಣಸನ್ನಾ[ಹಂ]ಗೊಳಿಸುವ ತ್ವರಿತದಿಂದ ನಿನ್ನಂ ಕಾಣುವದಕ್ಕೆ ಕೂಡಲಿಲ್ಲ" ಎನಲು, "ಅಮಾತ್ಯರೇ, ತಾವು ಸೇನಾಪ್ರಯಾಣಗೊಳಿಸಿದುದಂ ನಾನು ಕೇಳಲಿಚ್ಛೈಸಿ ಇದೇನೆ" ಎನಲು, "ಅಯ್ಯ ಅರಸೇ, ಪಾಟಲೀಪುರವಂ ಮುತ್ತುವದಕ್ಕೆ ನಾನೇ ಸೇನಾಸಮೇತನಾಗಿ ಮುಂಭಾಗದಲ್ಲಿ ತೆರಳಬೇಕಾಗಿ ಇರುವದರಿಂದ, ಮಗಧ ಗಾಂಧಾರ ಚೀಣ ಹೂಣಪತಿಗಳು ಸೇನಾಸಮೇತರಾಗಿ ನನ್ನಂ ಬಳಸಿಕೊಂಡು ಬರುತಿರು ವಂತೆ, ಕುಲೂತಪತಿ ಚಿತ್ರವರ್ಮ ಮುಖ್ಯರಾದ ಐದು ಮಂದಿ ಅರಸುಗಳು ಸೇನಾವ್ಯೂಹ ಸಮೇತರಾಗಿ ಜಾಗ್ರತೆಯಿಂದ ನಿನ್ನ ಅಂಗರಕ್ಷಕರಾಗಿ ಬರುವಂತೆ ನೇಮಿಸಿ ಇದೇನೆ. ಶೇಖರಸೇನೆಯಂ ಪುರರಕ್ಷಣೆಗೆ ಇಲ್ಲಿಯೇ ಇರುವಂತೆ ನೇಮಿಸಿ ಇದೇನೆ" ಎನಲು,

ಆ ಮಾತಿಗೆ ಬಾಗುರಾಯಣನು, "ಅಯ್ಯ ರಾಜಪುತ್ರನೇ, ಕುಲೂತಪತಿ ಚಿತ್ರವರ್ಮ ಮುಖ್ಯರಾದ ಐದು ಮಂದಿ ಅರಸುಗಳ ಸೇನಾವ್ಯೂಹವಂ ರಚಿಸಿಕೊಂಡು ಜಾಗ್ರತೆಯಿಂದ ನಿನ್ನ ಯೋಗಕ್ಷೇಮವಂ ವಿಚಾರಿಸುತ್ತ ನಿನ್ನಂ ಬಳಸಿ ಬರುವಂತೆ ಅಮಾತ್ಯರು ಆಜ್ಞಾಪಿಸಿ ಇರುವದು ಚೆನ್ನಾಯಿತಷ್ಟೆ" ಎನಲು, "ಅಯ್ಯ ಬಾಗುರಾಯಣನೇ, ಎಲ್ಲರ ಯೋಗ ಕ್ಷೇಮಕ್ಕೆ ರಾಜಕುಮಾರನೇ ಬಾಧ್ಯನಾದುದರಿಂದ ಈತನ ಯೋಗಕ್ಷೇಮಕ್ಕೆ ನಾವೆಲ್ಲರೂ ಬಾಧ್ಯರೆಂಬುವದು ಔಪಚಾರಿಕವು" ಎಂದು ರಾಕ್ಷಸನು ಹೇಳಲು, "ಅಯ್ಯ ಅಮಾತ್ಯರೇ, ಉಳಿದ ಸಮಯದಲ್ಲಿ ಹೇಗೇ ಇದ್ದರೂ ಇಂಥ ಸಮಯದಲ್ಲಿ ದಕ್ಷರಾದ [೧]ನಮ್ಮಂಥ ವರೇ[೧] ಕುಮಾರಕನ ಯೋಗಕ್ಷೇಮಕ್ಕೆ ಬಾಧ್ಯರು" ಎಂದು ಬಾಗುರಾಯಣ ಹೇಳಲು, ಆ ಮಾತಿಗೆ "ಈ ಬಾಗುರಾಯಣ ಹೇಳಿದ ವಾಕ್ಯದಲ್ಲಿ ವ್ಯಾಜಸ್ತುತಿಯಿಂದ ಅರ್ಥಾಂತರ ತೋರುವದರಿಂದ ಮರೆಮಾಚಿ ರಾಜಪುತ್ರನಿಗೆ ಹೇಳಿ ನನ್ನಲ್ಲಿ ಸಂಶಯವನ್ನುಂಟುಮಾಡಿ ಇದ್ದಾನು. ಇವನು ಶತ್ರುಪ್ರೇರಿತನಾಗಿ ಈ ರಾಜಪುತ್ರನಂ ವಂಚಿಸುವಂತೆ ತೋರುತ್ತೆ. ಈತನಿಂದ ಈ ರಾಜಪುತ್ರನಿಗೆ ಕ್ಷೇಮವುಂಟಾಗಲಾರದು" ಎಂದು ರಾಕ್ಷಸನು ಯೋಚಿಸುತ್ತಿರಲು,

ಆಗ ಮಲಯಕೇತುವು ತನ್ನ ಮನಸ್ಸಿನಲ್ಲಿ, "ರಾಕ್ಷಸನ ಚಾರ ಹೇಳಿದ ಮಾತಿನಿಂದಲೂ ಈ ಕಾಗದದ ಅಭಿಪ್ರಾಯದಿಂದಲೂ ಚಿತ್ರವರ್ಮಾದಿಗಳು ನನಗೆ ದ್ರೋಹಿಗಳೆಂಬ ಅರ್ಥವು ಪ್ರಕಟವಾದುದರಿಂದ ನಾಳೆ ಹೊರಡುವ ವೇಳೆಯಲ್ಲಿ ಈ ಚಿತ್ರವರ್ಮಾದಿಗಳೇ ವ್ಯೂಹವಂ ರಚಿಸಿಕೊಂಡು ನನ್ನಂ ಬಳಸಿಕೊಂಡು ತೆರಳುವಂತೆ ನೇಮಿಸಿ ಇರುವದರಿಂದಲೂ ಈ ಅರಸುಗಳೇ ನನ್ನಂ ಕೈಸೆರೆಯಾಗಿ ತೆಗೆದುಕೊಂಡು ಹೋಗಿ ಚಂದ್ರಗುಪ್ತನಿಗೆ ಒಪ್ಪಿಸುವಂತಾಯಿತು" ಎಂದು ರಾಕ್ಷಸನಂ ಇಳಿಯಾರಾ ನೋಡಿ, "ಲೋಕದಲ್ಲಿ ವಚನದಿಂದ, ಚೇಷ್ಟೆಯಿಂದ, ಮುಖಪ್ರಸಾದದಿಂದ, ಸಹವಾಸದಿಂದಲಾದರೂ ಪುರುಷನ ಹೃದಯವಂ ಹೀಗೆಂದು ತಿಳಿಯಬಹುದು. ಈ ರಾಕ್ಷಸನಾದರೋ ಆಕಾರ ಗೋಪನದಲ್ಲಿ ನಿಪುಣನಾದುದರಿಂದ ಈತನ ಹೃದಯವು ಯಾರಿಂದಲಾದರೂ ತಿಳಿಯಲಶಕ್ಯವು" ಎಂದು ಆಲೋಚಿಸುತ್ತ ರಾಕ್ಷಸನಂ ನೋಡಿ,

"ಅಮಾತ್ಯರೇ, ಈಗ ಪಾಟಲೀಪುರಕ್ಕೆ ಯಾರಾದರೂ ಹೋಗತಕ್ಕವರುಂಟೋ ?" ಎನಲು, "ಅಯ್ಯ ರಾಜಕುಮಾರಕನೇ, ಈ ವೇಳೆಯಲ್ಲಿ ನಾವೇ ಸೇನಾಸಮೇತರಾಗಿ ಹೋಗತಕ್ಕವರು" ಎನಲು, "ಹಾಗಾದರೆ ಈ ಕಾಗದ ಯಾರದು ? ಇದಕ್ಕೆ ಮಾಡಿ ಇರುವ ಮುದ್ರೆ ಯಾರದು ? ಅದರಲ್ಲಿ ಏನು ಅಭಿಪ್ರಾಯ ಬರೆದು ಇರುವದು ? ನೋಡಬಹುದೆಂ"ದು ಆ ಕಾಗದವಂ ರಾಕ್ಷಸನ ಕೈಯಲ್ಲಿ ಕೊಡಲು, ಆ ಕಾಗದವಂ ಓದಿಕೊಂಡು, "ಇದು ನಮ್ಮ ಶತ್ರುಗಳ ಕಪಟಲೇಖನವು ; ಈ ಮುದ್ರೆಯೂ ಅಂಥದೇ ಸರಿ" ಎಂದೆನಲು, "ಅಮಾತ್ಯರೇ, ಹಾಗಾದರೆ ಈ ಭೂಷಣದ ಪೆಟ್ಟಿಗೆ ಯಾರದು ?" ಎಂದು ಮುಂದಿರಿಸಲು, ಆ ಆಭರಣಗಳಂ ನೋಡಿದ ರಾಕ್ಷಸನು ತನ್ನ ಮನಸ್ಸಿನಲ್ಲಿ,

"ಈ ಭೂಷಣಗಳು ಮೊದಲು ನನಗೆ ಮಲಯಕೇತುವಿನಿಂದ ಲಬ್ಧವಾಗಿ ಶಕಟ

---

೧. [ತಮ್ಮಂಥವರೇ]?

ದಾಸನಂ ಕರೆತಂದ ಸಿದ್ಧಾರ್ಥಕನಿಗೆ ಕೊಟ್ಟು [೧]ಇತ್ತು[೧]. ಇದು ಈ ಆಸ್ಥಾನಕ್ಕೆ ಬರುವದಕ್ಕೆ ನಿಮಿತ್ತವೇನು ? ಈ ಕಾಗದಾಭಿಪ್ರಾಯವಂ ನೋಡಿದರೆ, ಚಂದ್ರಗುಪ್ತನು ಮೊದಲು ನಮಗೆ ಆಭರಣಗಳಂ ಕಳುಹಿಸಿದ ಹಾಗೂ ಅದಕ್ಕೆ ನಾವು ಬದಲಾಗಿ ಆಭರಣವಂ ಕೊಟ್ಟು ಅವನಲ್ಲಿ ಅಧಿಕಾರವಂ ನಾವು ಅಪೇಕ್ಷಿಸಿ ಇರುವರಾಗಿಯೂ ಇಲ್ಲಿಯ ಐದು ಮಂದಿ ಅರಸುಗಳೂ ನಾನೂ ಸಹ ಮಲಯಕೇತುವಂ ಹಿಡಿದು ಚಂದ್ರಗುಪ್ತನ ವಶಕ್ಕೆ ಒಪ್ಪಿಸಿ ಕೊಡುವಂತೆ ನೋಡಿದವರಿಗೆ ಅಭಿಪ್ರಾಯವಾಗುವಂತೆ [ಯೂ ಇದೆ]. ಈ ಕಪಟವು ಚಾಣಕ್ಯನಿಂದಲ್ಲದೆ ಮತ್ತೊಬ್ಬರಿಂದ ನಡೆಯಲಾರದು. ಇದರಿಂದ ಇಲ್ಲಿಯ ಐದು ಮಂದಿ ಅರಸುಗಳಿಗೂ ನನಗೂ ಸಹ ವಿಪತ್ತು ಸಂಭವಿಸುವಂತೆ ಇದೆ" ಎಂದು ಆಲೋಚಿಸುತ್ತಿರುವಲ್ಲಿ,

"ಅಮಾತ್ಯರೇ, ಭೂಷಣವಂ ನೋಡಿ ಸುಮ್ಮನೆ ಆಗುವದಕ್ಕೆ ನಿಮಿತ್ತವೇನು ?" ಎನಲು, "ಅಯ್ಯ ರಾಜಪುತ್ರನೇ, ಆ ಭೂಷಣಗಳು ಸಹ ನಮ್ಮದಲ್ಲ. ಇದು ಏನೋ ಕಪಟವೆಂ"ದೆನಲು, "ಇದು ಪ್ರಕಟಕ್ಕೆ ಬಂದ ಬಳಿಕ ಕಪಟ ಎಲ್ಲಿಹುದು?" ಎನಲು, ಬಾಗುರಾಯಣನು,

"ಸ್ವಾಮಿ ಅಮಾತ್ಯರೇ, ಈ ಮುದ್ರೆಯು ನಿಮ್ಮದಲ್ಲವೇ ? ಈ ಕಾಗದದ ಅಕ್ಷರವು ನಿಮ್ಮ ರಾಯಸದವನ ಬರಹವಲ್ಲವೇ ? ಇನ್ನೊಮ್ಮೆ ಚೆನ್ನಾಗಿ ನೋಡಬಹುದು" ಎನಲು, "ನಮ್ಮ ಶಕಟದಾಸ ಬರೆಯುವದಕ್ಕೆ ನಿಮಿತ್ತವೇನು ? ಈ ಕಾಗದದ ಅಕ್ಷರವು ಶಕಟದಾಸನದಾದರೆ, ಇದೆಲ್ಲವೂ ನಮ್ಮಿಂದಲೇ ನಡೆದಂತಾಯಿತು" ಎನಲು, ಆ ಮಾತಿಗೆ ಮಲಯಕೇತುವು ತನ್ನ ಬಳಿಯ ಕಂಚುಕಿಯಂ ಕರೆದು, "ಎಲೈ ಹಂಸಕನೇ, ಅಮಾತ್ಯರ ರಾಯಸದವನಾದ ಶಕಟದಾಸನ ಕೈಯಿಂದ ನೂತನವಾಗಿ ಒಂದು ಕಾಗದವಂ ಬರೆಸಿಕೊಂಡು ಅಮಾತ್ಯರ ಮೊಹರವಂ ಸಹ ತೆಗೆದುಕೊಂಡು ಬಾರೆಂ"ದು ಕಳುಹಿಸಲು,

ಅವನು ಹೋಗಿ, ಅದೇ ರೀತಿಗೆ ಶಕಟದಾಸನ ಕೈಯಿಂದ ಒಂದು ಕಾಗದವಂ ಬರೆಸಿಕೊಂಡು, ಮೊಹರವಂ ಸಹ ತೆಗೆದುಕೊಂಡು ಬಂದು ಮಲಯಕೇತುವಿನ ಮುಂದೆ ಇರಿಸಿ, "ಇದೇ ಮುದ್ರೆ ಉಂಗುರ, ಇದೇ ಕಾಗದ" ಎಂದೆನಲು, ಆ ಕಾಗದವಂ ಮುದ್ರೆ ಉಂಗುರವಂ ಸಹ ರಾಕ್ಷಸನ ಕೈಯಲ್ಲಿ ಕೊಟ್ಟು, "ಈ ಎರಡು ಕಾಗದದ ಅಕ್ಷರವೂ ಒಬ್ಬನದು ಅಹುದೋ ನೀವೇ ನೋಡಬಹುದು" ಎನಲು, ಅದಂ ನೋಡಿ ರಾಕ್ಷಸನು ತನ್ನ ಮನಸ್ಸಿನಲ್ಲಿ, "ಎರಡು ಕಾಗದದ ಅಕ್ಷರವೂ ಶಕಟದಾಸನದೇ ಅಹುದು. ಇವನಂ ಆಪ್ತನೆಂದು ನಂಬಿ ಇದ್ದೆನು. ಈ ಉಂಗುರ ಸಹ ಶಕಟದಾಸನ ವಶದಲ್ಲಿಯೇ ಇತ್ತು. ಸಿದ್ಧಾರ್ಥಕನು ಇವನಿಗೆ ಮಿತ್ರನಾದುದರಿಂದ ಶಕಟದಾಸನ ಕೈಯಲ್ಲಿ ಕಾಗದ ಬರೆಸಿದನೋ. ಅಲ್ಲದಿದ್ದರೆ ಶತ್ರುವಿನ ಭೇದಕ್ಕೆ ವಶನಾಗಿ ತನ್ನ ಕ್ಷೇಮಕ್ಕೋಸುಗ ಹೀಗೆ ಮಾಡಿದನೋ?" ಎಂದು ಚಿಂತಿಸುತ್ತಿರಲು,

"ಅಮಾತ್ಯರೇ, ಕಾಗದಗಳಂ ನೋಡಿ ಹೇಳ ಕೂಡದೆ ಸುಮ್ಮನಿರುವಿರಿ. ಇದಂತಿರಲಿ. 'ಪೆಟ್ಟಿಗೆ ಆಭರಣವು ನಮ್ಮದಲ್ಲ'ವೆಂದು ಹೇಳಿ ಇರುವಿರಷ್ಟೆ. ಆದರೆ ಮೊದಲು ನಿಮಗೆ

---

೧. ಇದ್ದಾತು (ಕ)

ಧರಿಸಿಕೊಳ್ಳುವದಕ್ಕೆ ಕೊಟ್ಟ ಆಭರಣಗಳು ಎಲ್ಲಿ ಇರುವದು ? ತರಿಸಬಹುದು" ಎಂದು ಮಲಯಕೇತುವು ಕೇಳಲು, "ಅಯ್ಯ ರಾಜಪುತ್ರನೇ, ನೀನು ಕೊಟ್ಟ ಆಭರಣಗಳು ಒಂದು ಸಂತೋಷಕಾರ್ಯಾರ್ಥವಾಗಿ ಒಬ್ಬ ದೂತನಿಗೆ ಕೊಟ್ಟೆವು ; ಪರರಿಗೆ ಕೊಟ್ಟ ವಸ್ತುಗಳು ಪುನಃ ನಮ್ಮದೆಂತಾಗುವದು ?" ಎಂದು ರಾಕ್ಷಸನು ಹೇಳಲು, ಆ ಮಾತಿಗೆ ಬಾಗು ರಾಯಣನು, "ಅಯ್ಯ ಅಮಾತ್ಯರೇ, ರಾಜಪುತ್ರನು ಅಮೂಲ್ಯವಾದ ತನ್ನ ಆಭರಣಗಳಂ ನೀವೇ ಧರಿಸಬೇಕೆಂದು ಕೊಟ್ಟು ಇದ್ದ ಆಭರಣಗಳಿಗೆ ತುಚ್ಛನಾದ ಒಬ್ಬ ದೂತನು ಧರಿಸು ವದಕ್ಕೆ ಯೋಗ್ಯವೆಂದು ನಿಮ್ಮ ಮನಸ್ಸಿಗೆ ಸಮರ್ಪಕವಾಯಿತೋ ? ನಿಮ್ಮಂಥವರೇ ಲೋಕಸಮ್ಮತವಲ್ಲದೆ ಹೀಗೆ ಅಪಾತ್ರವ್ಯಯವಂ ಮಾಡಿದ ಬಳಿಕ ಯಾವ ಅನರ್ಥ ತಾನೇ ಸಂಭವಿಸಲಾರದು ?" ಎನಲು, "ಅಯ್ಯ ಬಾಗುರಾಯಣನೇ, ಕಾರ್ಯವಂ ನೋಡಿ ಕೊಟ್ಟೆ ತಲ್ಲದೆ ಪಾತ್ರವಂ ನೋಡಿ ಕೊಟ್ಟುದಲ್ಲ"ವೆಂದು ರಾಕ್ಷಸನು ಹೇಳಲು, ಆ ಮಾತಿಗೆ ಮಲಯಕೇತುವು "ಅಯ್ಯ ಮಿತ್ರನೇ, ಅಮಾತ್ಯರು ಅಂಥ ಮಹತ್ಕಾರ್ಯಾರ್ಥವಾಗಿಯೇ ಕೊಟ್ಟಿದ್ದಾರಾದೀತು. ಅವರು ಹೇಳಿದುದು ಸತ್ಯವೇ ಸರಿ" ಎಂದು,

ರಾಕ್ಷಸನು ಅಲಂಕರಿಸಿ ಇರುವ ಆಭರಣಗಳಂ ಚೆನ್ನಾಗಿ ದೃಷ್ಟಿಸಿ ನೋಡಿ, "ಈ ಆಭರಣವು ನನ್ನ ತಂದೆಯಾದ ಪರ್ವತರಾಯರು ಧರಿಸಿ ಇದ್ದುದು" ಎಂದು ನಿಶ್ಚೈಸಿ, "ಎಲೈ ಹಂಸಕನೇ, ಈ ಅಮಾತ್ಯರು ಧರಿಸಿ ಇರುವ ಆಭರಣವಂ ಮೊದಲು ನೀನು ನೋಡಿ ಬಲ್ಲೆಯಾ ?" ಎನಲು, "ಬುದ್ಧಿ, ನಾನು ಈ ಆಭರಣವಂ ಚೆನ್ನಾಗಿ ಬಲ್ಲೆನು" ಎಂದು ಕಂಚುಕಿ ಹೇಳಲು, "ಅಮಾತ್ಯರೇ, ನೀವು ಈಗ ಧರಿಸಿ ಇರುವ ಆಭರಣ ಎಲ್ಲಿಯದು ?" ಎನಲು, "ಅಯ್ಯ ರಾಜಪುತ್ರನೇ, ಇದು ನಮಗೆ ವರ್ತಕರ ಕಡೆಯಿಂದ ಕ್ರಯಕ್ಕೆ ಬಂದವು" ಎನಲು, "ಎಲೈ ಕಂಚುಕಿಯೇ, ಅಮಾತ್ಯರು ಹೇಳುವದಂ ಕೇಳಿದೆಯಾ ?" ಎಂದು ಮಲಯಕೇತು ಕೇಳಲು, "ಬುದ್ಧೀ, ಈ ಆಭರಣಗಳಂ ಮೊದಲು ನಮ್ಮ ದೊಡ್ಡರಾಯರು ಪಾಟಲೀಪುರಕ್ಕೆ ವಿಜಯಾರ್ಥವಾಗಿ ತೆರಳುವಲ್ಲಿ ಅಲಂಕರಿಸಿಕೊಂಡು ಇದ್ದವು. ಇದಂ ಎಂತು ಮರೆವೆನು ?" ಎನಲು,

ಆಗ ಮಲಯಕೇತುವು ಆ ಆಭರಣಗಳಂ ನೋಡಿ, ತಮ್ಮ ತಂದೆಯಂ ನೆನೆದು ದುಃಖಪಡುತ್ತ, 'ಹಾ ಕುಲಭೂಷಣನಾದ ನನ್ನ ತಂದೆಯೇ, ಈ ಭೂಷಣಂಗಳಂ ಧರಿಸಿ, ನಕ್ಷತ್ರಸಮೂಹಮಧ್ಯದಲ್ಲಿ ರಾಜಿಸುವ ಪೂರ್ಣಚಂದ್ರನ ಚಂದದಿಂ ಲೋಕಾನಂದಕರ ವಾಗಿ ಈ ಜಗವನ್ನಾಳುತ್ತಿದ್ದೆಯಲ್ಲ. ನಮ್ಮೆಲ್ಲರಂ ಅನಾಥರಂ ಮಾಡಿ, ಶತ್ರುಗಳ ಕಪಟಕ್ಕೆ ಒಳಗಾಗಿ ಎಲ್ಲಿ ಮರೆಯಾದೆ ? ಆತತಾಯಿಗಳಂ ಮಿತ್ರರೆಂದು ಭಾವಿಸಿ ಇದ್ದುದಕ್ಕೆ ತದನುಗುಣಫಲ ನಿನ್ನಲ್ಲಿ ಮಾತ್ರವೇ ಪರ್ಯವಸಾನವಾಗಲಿಲ್ಲ ; ಇಂಥ ಜನರು ಎಲ್ಲಿ ಇದ್ದರೆಯೂ ಆ ಆಶ್ರಯಕ್ಕೆ ಕ್ಷೇಮವಾಗುವದುಂಟೇ ? ನಾನು ಶ್ರೇಯಸ್ಸಂ ಪಡೆವೆನೆಂದು ಇವರಂ ಸಂಗ್ರಹಿಸಿದ್ದುದಕ್ಕೆ ಕುಲದೇವತೆಯೇ ಕ್ಷೇಮವನ್ನುಂಟುಮಾಡಬೇಕು" ಎಂದು ಕಂಬನಿಗಳಂ ತುಂಬುತ ಹಂಬಲಿಸುತಿರುವ ಮಲಯಕೇತುವಂ ನೋಡಿ, ರಾಕ್ಷಸನು

"ಅಹಹ, ನಾನು ಧರಿಸಿ ಇರುವ ಆಭರಣಂಗಳು ಪರ್ವತರಾಯನದೇ ಎಂದು ನಿಶ್ಚಯ ವಾದ ಬಳಿಕ ನನ್ನಲ್ಲಿ ಇವರು ಏನು ಆರೋಪಣವಂ ಮಾಡಿದರೂ ಮಾಡಬಹುದು. ನನ್ನ ಶತ್ರುವಾದ ಚಾಣಕ್ಯನು ಈ ಭೂಷಣಗಳಂ ವರ್ತಕರ ಮೊಖದಿಂದ ನಮ್ಮಲ್ಲಿ ಸೇರುವಂತೆ

ಮಾಡಿ ಇರಬಹುದು" ಎಂದು ಚಿಂತಿಸುತ್ತಿರಲು,

"ಅಯ್ಯ ಬಾಗುರಾಯಣನೇ, ಅಮಾತ್ಯರು ಅಲಂಕರಿಸಿಕೊಂಡು ಇರುವ ಆಭರಣಗಳು 'ತಮಗೆ ಕ್ರಯವಾಗಿ ಬಂದು ಇದೆ' ಎಂದು ಹೇಳಿದ ಮಾತು ನಿನಗೆ ಸಮ್ಮತವೇ ?" ಎಂದು ಕೇಳಲು, ಆ ಮಾತಿಗೆ ಬಾಗುರಾಯಣನು ತನ್ನ ಮನಸ್ಸಿನಲ್ಲಿ "ಪರ್ವತರಾಯನ ಆಭರಣವನ್ನು ಚಂದ್ರಗುಪ್ತನು ಮಲಯಕೇತುವಿನ ಬಳಿಯಲ್ಲಿ ಪ್ರಾಧಾನ್ಯವಂ ಮಾಡಿ ಕೊಂಡು ಇರುವ ರಾಕ್ಷಸನಿಗೆ ಕಳುಹಿಸಬಹುದೇ ಎಂದು ಮಲಯಕೇತುವಿಗೆ ತೋರಿದರೆ, ಚಂದ್ರಗುಪ್ತನು ಆಭರಣವಂ ರಾಕ್ಷಸನಲ್ಲಿ ವಿಶ್ವಾಸದಿಂ ಕಳುಹಿಸಿದಂತಾಗುವದಿಲ್ಲ. ಮಲಯಕೇತುವಿಗೂ ರಾಕ್ಷಸನಿಗೂ ವಿರೋಧವನ್ನುಂಟುಮಾಡುವದಕ್ಕೆ ಕಳುಹಿಸಿದಂತಾ ಗುವ ಈ ಅರ್ಥವು ಮಲಯಕೇತುವಿಗೆ ತೋರಿದರೆ ಚಾಣಕ್ಯನ ಉಪಾಯ ಭಗ್ನವಾಗು ವದು. ಅದರಿಂ ಪ್ರಕಾರಾಂತರದಿಂ ತಿಳುಹಿಸಿಬೇಕೆಂ"ದು ನಿಶ್ಚೈಸಿ,

"ಅಯ್ಯ ರಾಜಪುತ್ರನೇ, ಲೋಕದಲ್ಲಿ ಪ್ರಭುಗಳು ಪರರಾಯರು ನಿತ್ಯದಲ್ಲೂ ಧರಿಸುವ ಆಭರಣಗಳು ದೊರಕಿದರೆ ತಮ್ಮ ಖ್ಯಾತಿಗೋಸುಗ ಬೊಕ್ಕಸದಲ್ಲಿ ಇರಿಸಿ ರಕ್ಷಿಸುವರಲ್ಲದೆ ಕ್ರಯವಿಕ್ರಯವಂ ಮಾಡರು. ಚಾಣಕ್ಯನು ನಿಮ್ಮ ತಂದೆ[ಯ] ಆಭರಣವಂ ಸಂಗ್ರಹಿಸಿ ಬೊಕ್ಕಸದಲ್ಲಿ ಇಟ್ಟಿರಲು, ಅವನಲ್ಲಿ ಚಂದ್ರಗುಪ್ತನಿಗೆ ಮನಸ್ತಾಪವುಂಟಾದುದರಿಂದ ತನಗೆ ಬೇಕಾದವರ ಪ್ರೀತಿಯಂ ಸಂಪಾದಿಸಲೋಸುಗ ಬೊಕ್ಕಸದಲ್ಲಿ ರಾಜಾರ್ಹಗಳಾದ ಆಭರಣಗಳಂ ತರಿಸಿ ನೋಡಿ, ಇವು ಅತ್ಯುತ್ತಮವಾದುದರಿಂದ ಆಭರಣಗಳು ಬಂದ ಪರಿಯನ್ನರಿಯದೆ ಕಳುಹಿಸಿ ಇದ್ದಾನು" ಎಂದು ಹೇಳಲು, ಆ ಮಾತಿಗೆ ಮಲಯಕೇತುವು 'ಯುಕ್ತ'ವೆಂದು ಹೇಳಿ, ರಾಕ್ಷಸನಂ ನೋಡಿ,

"ಅಮಾತ್ಯರೇ, ಚಂದ್ರಗುಪ್ತನು ಈ ಭೂಷಣಗಳಿಂದ ಅಧಿಕಲಾಭವಂ ಪಡೆಯ ಬೇಕೆಂದು ನಿಮಗೆ ಕ್ರಯಕ್ಕೆ ಕೊಟ್ಟುದರಿಂದ ಈ ಭೂಷಣದ ಕ್ರಯದ ಬಗ್ಗೆ ಚಂದ್ರ ಗುಪ್ತನಿಗೆ ನನ್ನೇ ಒಪ್ಪಿಸಿ ಕೊಡುವದಕ್ಕೆ ಯತ್ನವಂ ಮಾಡಿ ಇರುವಿರಿ" ಎನಲು, ಆ ಮಾತಿಗೆ ರಾಕ್ಷಸನು, "ಶಿವ ಶಿವ ! ಇಂಥ ಅಪವಾದ ನನಗೆ ಉಂಟಾಗಬಹುದೇ ? ಶತ್ರು ಪ್ರಯೋಗವು ಚೆನ್ನಾಗಿ ಬಂದೊದಗಿತು. ನಾನು ಧರಿಸಿ ಇರುವ ಭೂಷಣದ ವಿವರವಂ ಶಕಟದಾಸನ ಕೇಳ ಹೋದರೆ, ಶತ್ರುಗಳ ಕಾರ್ಯಕ್ಕನುಕೂಲವಾಗಿ ಕಾಗದವಂ ಬರೆದು ಇರುವದರಿಂದ ಅವರಿಗೆ ಅನುಕೂಲವಾಗಿಯೇ ಹೇಳಿಯಾನು. ಈ ವೇಳೆಯಲ್ಲಿ ಯಾವರ್ಥ ಕ್ಕಾದರೂ ಅಹುದು ಅಲ್ಲ ಎನ್ನಕೂಡದು" ಎಂದು ಚಿಂತಿಸುತ್ತಿರಲು, ರಾಕ್ಷಸನಂ ಕುರಿತು,

"ಯಜಮಾನರೇ, ಮುಂದೆ ಮಾಡತಕ್ಕದ್ದೇನು ?" ಎಂದು ಮಲಯಕೇತು ಕೇಳಲು, "ಅಯ್ಯ ಪ್ರಭುವೇ, ಯಜಮಾನರಾದವರಂ ಕೇಳಬಹುದು ; ಈಗ ನಾವು ಅಪ್ರಯೋ ಜಕರು ಆದೆವು" ಎಂದು ರಾಕ್ಷಸನು ಹೇಳಲು, "ಎಲೈ ರಾಕ್ಷಸನೇ, ಚಂದ್ರಗುಪ್ತನಾದರೋ ನಿನಗೆ ಸ್ವಾಮಿಪುತ್ರನಾದ ಮೌರ್ಯಪುತ್ರನು. ನಾನಾದರೋ ನಿನ್ನಂ ಮಿತ್ರನೆಂದು ಭಾವಿಸಿದ್ದ ಪರ್ವತೇಶ್ವರನ ಪುತ್ರನು. ಅದಲ್ಲದೆ, ನಿನಗೆ ಸೇವಕನಂತೆ ಇದ್ದೆನು. [ಅಲ್ಲಿ] ಚಂದ್ರ ಗುಪ್ತನು ನಿನಗೆ ಏನಾದರೂ ಕೊಟ್ಟಿರುಂಟು ; ಇಲ್ಲಿ ನೀನು ನನಗೆ ಕೊಟ್ಟಿರುಂಟು. ಅಲ್ಲಿ ನಿನಗೆ ಭೃತ್ಯಭಾವವು ; ಇಲ್ಲಿ ಸರ್ವಸ್ವಾತಂತ್ರ್ಯ ಉಂಟಾಗಿ ಇತ್ತು. ಹೀಗಿದ್ದರೂ ಇಂಥ ದುರಾಲೋಚನೆಯಂ ಮಾಡಿದವನಾದುದರಿಂದ, ಈ ದುಷ್ಕೃತ್ಯವೇ ನಿನ್ನಂ ಅಪ್ರಯೋ

ಜಕನಂ ಮಾಡಿತು" ಎನಲು,

"ಅಯ್ಯ ಪ್ರಭುವೇ, ನಿಷ್ಠುರವಚನವಂ ಹೇಳುವದು ಈಗ ನಿನಗೆ ಯುಕ್ತವೇ ಸರಿ. ನಿನ್ನಿಂದ ದೋಷವೇನೆಂ"ದು ಕಂಬನಿಗಳಂ ತುಂಬುತ್ತಿರಲು, ಆ ಮಾತಿಗೆ ಕ್ರುದ್ಧನಾದ ಮಲಯಕೇತುವು, ಆ ಪೆಟ್ಟಿಗೆಯಂ ಕಾಗದವಂ ಸಹ ನೆಲಕ್ಕೆ ಒಗೆದು, "ಎಲೈ ಕೃತಘ್ನನೇ, ಇದು ಯಾರ ದೋಷವು ? ನಿರಪರಾಧಿಯಂತೆ ಈಗಲೂ ತಪ್ಪಿಸಿಕೊಂಡು ಮಾತನಾಡುವೆ" ಎನಲು,

"ಅಯ್ಯ ಅರಸೇ, ಮೊದಲು ನಾನು ಅಪಮಾನಾಸ್ಪದವಾದ ಭೃತ್ಯಭಾವದಲ್ಲಿ ಇದ್ದವ ನಾದರೂ ಕೃತಜ್ಞರಾದ ನಂದರು ನನಗೆ ಮಾಡುತ್ತಲಿದ್ದ ಸನ್ಮಾನದಿಂದ ಲೋಕದಲ್ಲಿ ಪೂಜ್ಯ ನಾಗಿ ಇದ್ದೆನು. ಅಂಥ ಲೋಕೇಶ್ವರರಾದ ನಂದರಂ ಸಂಹರಿಸಿ, ನನ್ನ ಶತ್ರುವಿಗೆ ಭೃತ್ಯನಾಗಿ ಇರುತ್ತ, ಸ್ವಾಮಿಭಕ್ತಿಯಿಂದ ನಾನು ಮಾಡುವ ಕಾರ್ಯ ಯಾವುದನ್ನೂ ಸಾಗಲೀಸದೆ ಇರುವ ದೈವವಿಲಾಸದೋಷವೇ ಹೊರತು ಮತ್ತೆ ಯಾರ ದೋಷವೂ ಅಲ್ಲ" ಎನಲು, ಆ ಮಾತಿಗೆ ಮತ್ತೂ ಕ್ರುದ್ಧನಾಗಿ,

"ಎಲೈ ಪ್ರತ್ಯಕ್ಷರಾಕ್ಷಸನೇ, ಇದು ದೈವವಿಲಾಸವೇ ? ಹೊರತು, ಲೋಭವಿಲಾಸ ವಲ್ಲವೇನೋ ? ಎಲೈ ವಂಚಕನೇ, ತ್ಯಾಗಶೀಲನಾಗಿ ಗುಣಜ್ಞನಾದ ನಮ್ಮ ತಂದೆಯು ನೀನು ಸತ್ಯವಂತನೆಂದೂ ಕಾರ್ಯದಕ್ಷನೆಂದೂ ಮತಿವಂತನೆಂದೂ ನಿನ್ನಂ ಮಿತ್ರನನ್ನಾಗಿ ಎಣಿಸಿ, ನಿನ್ನ ಹೃದಯವನ್ನರಿಯದೆ ತನಗೆ ಲಬ್ಧವಾಗುವ ನಂದರಾಜ್ಯಾರ್ಧಕ್ಕೆ ನಿನ್ನನ್ನೇ ಅಧಿಪತಿಯನ್ನಾಗಿ ಮಾಡಿ, ತನ್ನ ಅಮಾತ್ಯಪದದಲ್ಲಿ ಇರಿಸಿಕೊಳ್ಳಬೇಕೆಂದು ಸಂಕಲ್ಪಿಸಿ ಇದ್ದ[ನು. ಅಂಥ] ನಮ್ಮ ತಂದೆಯನ್ನು ವಿಷಕನ್ಯಾಮುಖದಿಂದ ಸಂಹರಿಸಿದವನಾದೆ. ಇಂಥ ನಿನ್ನ ಹೃದಯವಂ ನಾನೂ ಅರಿಯದೆ ನಿನ್ನಂ ಆಪ್ತನೆಂದು ತಿಳಿದು ಸರ್ವಾಧಿಕಾರ ದಲ್ಲಿ ನಿಲ್ಲಿಸಿದುದಕ್ಕೆ ಮಾಂಸವಿಕ್ರಯವಂ ಮಾಡುವನಂತೆ ಶತ್ರುವಾದ ಚಂದ್ರಗುಪ್ತನಿಗೆ ನನ್ನಂ ಒಪ್ಪಿಸಿ ಕೊಡುವದಕ್ಕೆ ಉದ್ಯೋಗಿಸಿದವನಾದೆ" ಎನಲು,

ಆ ಮಾತಿಗೆ ರಾಕ್ಷಸನು, 'ಶಿವ ಶಿವಾ' ಎಂದು ಕಿವಿಗಳಂ ಮುಚ್ಚಿಕೊಳ್ಳುತ್ತ, "ನಾನು ಪರ್ವತೇಶ್ವರನಲ್ಲಿ ವಿಷಕನ್ನೆಯಂ ಪ್ರಯೋಗಿಸಿದವನಲ್ಲ" ಎನಲು, "ಹಾಗಾದರೆ ನಮ್ಮ ತಂದೆಯಂ ಸಂಹರಿಸಿದವರ್ಯಾರು, ಹೇಳೆ"ನಲು, "ದೈವವಂ ಕೇಳಬೇಕೆಂ"ದು ರಾಕ್ಷಸನು ಹೇಳಲು, "ದೈವವಂ ಕೇಳಬೇಕಲ್ಲದೆ ಜೀವಸಿದ್ಧಿಯೆಂಬ ಕ್ಷಪಣಕನಂ ಕೇಳಬೇಡವಲ್ಲಾ" ಎಂದು ಮಲಯಕೇತು ಕೇಳಲು, "ಹಾ ! ಕ್ಷಪಣಕನು ಸಹ ಚಾಣಕ್ಯನ ಗೂಢಚಾರನಾದ ಬಳಿಕ, ಶತ್ರುಗಳು ನನ್ನ ಹೃದಯವನ್ನು ಸಹ ಆಕ್ರಮಿಸಿದ ಬಳಿಕ, ಇನ್ನು ಪುರುಷಪ್ರಯತ್ನ ಸಾಗುವದುಂಟೇ ?" ಎಂದು ರಾಕ್ಷಸನು ಚಿಂತಿಸುತ್ತಿರಲು, ಆಗ ಕ್ರುದ್ಧನಾದ ಮಲಯ ಕೇತು ತನ್ನ ಅಕ್ಷರದಿಂದ ಒಂದು ಕಾಗದವಂ ಬರೆದು ಮೊಹರವಂ ಮಾಡಿ, "ಇದಂ ಶೇಖರನ ಕೈಲಿ ಕೊಟ್ಟು ಇದಕ್ಕೆ ಬದಲಂ ಬರೆಸಿಕೊಂಡು ಬಾರೆಂ"ದು ಕಲವಿಂಕನೆಂಬ ಕಂಚುಕಿಯ ಕೈಯಲ್ಲಿ ಕೊಟ್ಟು ಕಳುಹಿಸಲು, ಆ ಕಂಚುಕಿಯು ಹೋಗುವ ವೇಗವಂ ನೋಡಿ, ರಾಕ್ಷಸನು "ಯಾರಿಗೋ ಆಪತ್ತು ಒದಗಿರುವದು" ಎಂ[೧]ದು[೧] ಚಿಂತಿಸುತ್ತಿರಲು,

---

೧. ದು ರಾಕ್ಷಸನು (ಕ, ಖ, ಗ)

ಆ ಕಂಚುಕಿಯು ತ್ವರಿತದಿಂ ಹೋಗಿ ಸೇನಾಪತಿಯಾದ ಶೇಖರನ ಕೈಯಲ್ಲಿ ಕೊಟ್ಟು, "ಇದರಲ್ಲಿ ಇದ್ದರ್ಥವು ಈಗಲೇ ನಡಸಬೇಕೆಂದು ರಾಜಾಜ್ಞೆಯಾಗಿ ಇದೆ" ಎನಲು,

ಹಾಗೇ ಆ ಕಾಗದವಂ ಶೇಖರನು ನೋಡಿಕೊಳ್ಳುವಲ್ಲಿ, "ನಮಗೆ ಆಪ್ತಸೇನಾಪತಿಯಾದ ಶೇಖರನು ನೋಡಿಕೊಳ್ಳುವದು : ನಮ್ಮ ಬಳಿಯಲ್ಲಿ ಇಷ್ಟು ದಿವಸವೂ ಆಪ್ತರಂತೆ ಇರುತ, ನಮ್ಮ ಶತ್ರುವಿಗೆ ಭೃತ್ಯರಾಗಿ, ನಮ್ಮ ರಾಜ್ಯಕೋಶಂಗಳಂ ಬಯಸಿ ಇರುವ ಕುಲೂತಪತಿ ಚಿತ್ರವರ್ಮನಂ, ಮಲಯಪತಿ ಸಿಂಹನಾದನಂ, ಕಾಶ್ಮೀರಪತಿ ಪುಷ್ಕರಾಕ್ಷನಂ, ಸಿಂಧುಪತಿ ಸಿಂಧುಷೇಣನಂ, ಪಾರಶೀಕಪತಿ ಮೇಘನಾದರೆಂಬ ಈ ಐದು ಮಂದಿ ಅರಸುಗಳಂ ಕಾಲನ ನಗರಕ್ಕೆ ಕಳುಹಿಸಿ, ಆ ವಿವರಕ್ಕೆ ಬರೆದು ಕಳುಹಿಸತಕ್ಕದ್ದು ; ಪುನಃ ಅಪ್ಪಣೆ ಕೆಲಸವಿಲ್ಲ" ಎಂದು ಐದು ಸೊನ್ನೆಗಳಂ ಹಾಕಿ ಇರುವ ಕಾಗದವಂ ನೋಡಿಕೊಂಡು, ಶೇಖರನು ವಿಳಂಬವಂ ಮಾಡುವದಕ್ಕೆ ಅಂಜಿ, ಈಗ ರಾಜಕಾರ್ಯದ ಮಂತ್ರಾಲೋಚನೆಯಿರುವದೆಂದು ಆ ಅರಸುಗಳಿಗೆ ಹೇಳಿ ಕಳುಹಿಸಿ ಕರಸಿಕೊಂಡು, ಅದರಲ್ಲಿ ಮೂವರಂ ದೊಡ್ಡಹಳ್ಳದಲ್ಲಿ ಹೂಳಿಸಿ, ಮತ್ತಿಬ್ಬರಂ ಆನೆಯ ಕಾಲಿಗೆ ಕಟ್ಟಿಸಿ ಸಂಹರಿಸಿ, ಆ ಅರ್ಥವಂ ಬರೆದು ಕಂಚುಕಿಯ ಕೈಯಲ್ಲಿ ಕೊಟ್ಟು ಕಳುಹಿಸಲು, ಹಾಗೇ ಆ ಕಂಚುಕಿ ಬಂದು ಆ ಕಾಗದವಂ ಮಲಯಕೇತುವಿನ ಮುಂದಿಟ್ಟು ಕೈಮುಗಿಯಲು, ಆ ಕಾಗದವಂ ನೋಡಿಕೊಂಡು, "ಅಲ್ಲಿ ನಡೆದುದೇನ್ನೆ ?" ಎಂದು ಕಲವಿಂಕನಂ ಕೇಳಲು, "ಬುದ್ಧೀ, ಚಿತ್ರವರ್ಮನೂ ಸಿಂಹನಾದನೂ ಪುಷ್ಕರಾಕ್ಷನೂ ಈ ಮೂವರೂ ಅಪ್ಪಣೆ ಮೇರೆಗೆ ಭೂಗತರಾದರು ; ಉಳಿದಿಬ್ಬರೂ ಆನೆಕಾಲಲ್ಲಿ ಅಡಕವಾದರು" ಎಂದು ವಿಜ್ಞಾಪಿಸಲು,

ಆಗ ಮಲಯಕೇತು, "ಎಲೈ ರಾಕ್ಷಸನೇ, ನಿನ್ನಲ್ಲಿ ಸ್ನೇಹವಂ ಬೆಳಸಿದುದಕ್ಕೆ ಚಿತ್ರವರ್ಮಾದಿಗಳು ಇಹಲೋಕದ ಆಶೆಯಂ ಬಿಟ್ಟರು. ನಾನು ನಿನ್ನಂತೆ ವಿಶ್ವಾಸಘಾತಕನಲ್ಲ. ಪ್ರಾಣಸಮೇತನಾಗಿ ನಿನ್ನಂ ಬಿಟ್ಟು ಕಳುಹುವೆನು, ಹೋಗು ; ಚಂದ್ರಗುಪ್ತನಂ ಹೊಂದಿ, ಏನು ರಾಜಕಾರ್ಯವಿದ್ದರೂ ಮಾಡುವನಾಗು. ದುರ್ನೀತಿಯು ಧರ್ಮಾರ್ಥಕಾಮಗಳಂ ಕೆಡಿಸುವಂತೆ ನಿನ್ನನ್ನೂ ಚಂದ್ರಗುಪ್ತನಂ ಸಹ ನಿಗ್ರಹಿಸುವದಕ್ಕೆ ನಾನೇ ಸಿದ್ಧವಾಗಿ ಇರುವೆನು" ಎನಲು, ಬಾಗುರಾಯಣನು,

"ಅಯ್ಯ ರಾಜಕುಮಾರಕನೇ, ಪ್ರಯಾಣಕ್ಕೆ ಇಂದು ಲಗ್ನವು ಪ್ರಶಸ್ತವಾಗಿ ತೋರುವದಿಲ್ಲ. ಮತ್ತೊಂದು ಲಗ್ನವಂ ನಿಶ್ಚೈಸಿ, ನಮ್ಮ ಸೇನೆಗಳಂ ಪ್ರಯಾಣಗೊಳಿಸಿ, ಪಾಟಲೀಪುರಕ್ಕೆ ಅಗಳಿನಂತೆ ಬಳಸಿಕೊಂಡು ಇರುವ ಮಹಾನದಿಯಂ ಧೂಳೀನಿಕುರುಂಬಗಳಿಂದ ಪಂಕಪ್ರಾಯವನ್ನಾಗಿ ಮಾಡುವಂತೆ ಸೇನೆಗೆ ಆಜ್ಞಾಪಿಸುವನಾಗು. ಈ ರಾತ್ರೆಯು ಮೂರು ಯಾಮ ಕಳಿದು ಬಂತು. ವಿಶ್ರಮಿಸಿಕೊಳ್ಳಬಹುದು. ಚಿತ್ರವರ್ಮಾದಿಗಳು ನಷ್ಟವಾದುದರಿಂದ ಅವರಲ್ಲಿ ಇದ್ದ ವಸ್ತುವಾಹನಗಳಂ ಅಲ್ಲಿಯ ಜನರೇ ಕೊಳ್ಳೆಯಂ ಮಾಡುವರು. ಅದರಿಂದ ಅದೆಲ್ಲವಂ ತಂದು ರಾಜಕೋಶಕ್ಕೆ ಸೇರಿಸುವಂತೆ ಸೇನಾಪತಿಯಾದ ಶೇಖರನಿಗೆ ಆಜ್ಞಾಪಿಸುವನಾಗು" ಎನಲು,

ಅದೇ ಮೇರೆಗೆ ಶೇಖರನಂ ಕರೆ ಕಳುಹಿಸಿ, "ಅಯ್ಯಾ ಸೇನಾಪತಿಯೇ, ಚಿತ್ರವರ್ಮಾದಿಗಳ ವಸ್ತುವಾಹನಗಳಂ ಅನ್ಯರು ಆಕ್ರಮಿಸುವದಕ್ಕೆ ಮುಂಚಿತವಾಗಿಯೇ ಸೇನಾಸಮೇತನಾಗಿ ಈಗಲೇ ಹೋಗಿ ಅದೆಲ್ಲವಂ ತಂದು ಬೊಕ್ಕಸಕ್ಕೆ ಸೇರಿಸುವನಾಗು" ಎಂದು

ಆಜ್ಞಾಪಿಸಲು, "ಬುದ್ಧೀ" ಎಂದು ಶೇಖರನು ಸೇನಾಸಮೇತನಾಗಿ ತೆರಳುತ್ತಿರಲು,

"ಅಯ್ಯ ರಾಜಪುತ್ರನೇ, ಕಾವಲಲ್ಲಿ ಇರುವ ಅಮಾತ್ಯರ ಭೃತ್ಯನಿಗೆ ಏನು ಅಪ್ಪಣೆ ?" ಎಂದು ಬಾಗುರಾಯಣನು ಕೇಳಲು, "ಆ ಭೃತ್ಯನು ಹೇಳಿದರ್ಥಗಳೆಲ್ಲವೂ ನಿದರ್ಶನಕ್ಕೆ ಬಂದ ಬಳಿಕ ಅವನಂ ದಂಡಿಸುವದು ಯುಕ್ತವಲ್ಲ. ಸ್ವಾಮಿ ಭೃತ್ಯರಿರ್ವರಂ ಜೊತೆಗೂಳಿಸಿ ನಮ್ಮ ದೇಶವಂ ಬಿಟ್ಟು ಈಗಲೇ ಹೋಗುವಂತೆ ಹೇಳುವನಾಗು" ಎಂದು ನಿರೂಪಿಸಿ, ರಾಜಪುತ್ರರೊಡಗೂಡಿ ಮಲಯಕೇತು ಶಯನಗೃಹಕ್ಕೆ ತೆರಳುತ್ತಿರಲು,

ರಾಕ್ಷಸನು ತನ್ನ ಮನಸ್ಸಿನಲ್ಲಿ, "ಬಾಗುರಾಯಣನು 'ಭೃತ್ಯನಿಗೆ ಏನಪ್ಪಣೆ?' ಎಂದು ಕೇಳಿದ್ದಕ್ಕೆ ಮಲಯಕೇತು 'ಆ ಭೃತ್ಯನಂ ನನ್ನ ಸಂಗಡ ಈಗಲೇ ಕಳುಹುವುದೆಂ'ದು ಹೇಳಿದ ಮಾತಿಗೆ 'ಆ ಭೃತ್ಯನಾರೋ?' ಎಂದು ಯೋಚಿಸುತ್ತಿರುವ ಸಮಯದಲ್ಲಿ, ಬಾಗು ರಾಯಣನು ಸಿದ್ಧಾರ್ಥಕನಂ ಕರೆತರಿಸಿ,

"ಎಲೈ ಭೃತ್ಯನೇ, ನಿಮ್ಮ ಅಮಾತ್ಯರ ಸಂಗಡ ನಿನ್ನಂ ಕಳುಹಿಸುವಂತೆ ಅಪ್ಪಣೆಯಾಗಿ ಇದೆ ; ಹೋಗೆಂದೆ"ನಲು, ಆ ಸಿದ್ಧಾರ್ಥಕನು ರಾಕ್ಷಸನಿಗೆ ಅಡ್ಡಬಿದ್ದು ಲಜ್ಜಿತನಂತೆ ತಲೆ ವಾಗಿ ನಿಂತಿರಲು, ಅವನಂ ನೋಡಿ ರಾಕ್ಷಸನು "ಇವನಿಂದಲೇ ಈ [೧]ಅನರ್ಥ[೧]ವೆಲ್ಲವೂ ನಡೆದಿದ್ದೀತು" ಎಂದು ನಿಶ್ಚೈಸಿ,

"ಎಲೈ, ನೀನು ಯಾರಿಗೆ ಭೃತ್ಯನೆಂ"ದೆನಲು, "ಸ್ವಾಮಿ, ಅಪ್ಪಣೆ ಮೇರೆ ಹೋಗುವಲ್ಲಿ ನನ್ನ ಉಪಾಯಗಳೊಂದೂ ಉಕ್ಕಡದಲ್ಲಿ ಸಾಗಲಿಲ್ಲವೆಂದೆ"ನಲು,

"ಎಲೈ, ನಿನಗೇನು ಅಪ್ಪಣೆಯಂ ಕೊಟ್ಟಿದ್ದೆವು ?" ಎನಲು, "ಸ್ವಾಮಿ, ಕಾಗದವು ಯಾರಿಗೂ ಸಿಕ್ಕದಂತೆ ಮರಸಿಕೊಂಡು ಇದ್ದೆನು" ಎನಲು,

"ಎಲೈ, ಕಾಗದವೆಂದರೆ ಏನೋ ?" ಎನಲು, "ಸ್ವಾಮಿ, ನಾನು ಮಾಡುವದೇನು ? ಬಹುವಾಗಿ ಪ್ರಹರಿಸಿದ್ದರಿಂದ ಕಂಕುಳಲ್ಲಿ ಇದ್ದ ಪೆಟ್ಟಿಗೆ ಸಹ ನೆಲಕ್ಕೆ ಬಿದ್ದುದರಿಂದ ಸಿಕ್ಕಿ ಹೋಯಿತು" ಎನಲು,

"ಎಲೋ, ಪೆಟ್ಟಿಗೆಯೆಂದರೆ ಏನು ?" ಎನಲು, "ಸ್ವಾಮಿ, ಆಭರಣಂಗಳಿದ್ದದ್ದು" ಎನಲು,

"ಎಲೋ, ಆಭರಣಂಗಳೆಂದರೇನು ?" ಎನಲು, "ಬುದ್ಧೀ, ಮೊಹರುಸಹಿತವಾಗಿಯೇ ತಲಪಿಸೆಂದು ಪಾಟಲೀಪುರಕ್ಕೆ ಅಪ್ಪಣೆಯಾಗಿ ಇತ್ತಷ್ಟೆ" ಎನಲು,

"ಎಲೋ ದ್ರೋಹಿಯೇ, ಮೊಹರವಂ ಮಾಡಿ ಕೊಟ್ಟವರ್ಯಾರು ?" ಎನಲು, "ಸ್ವಾಮಿ, ನಾನು ಯಾವದಂ ಬೇಕೆಂದು ಹೇಳಿದವನಲ್ಲ. ಅಪ್ಪಣೆ ಮೇರೆಗೆ ಮೊಹರವು ಶಕಟದಾಸನು ಮಾಡಿದ್ದು" ಎನಲು,

"ಎಲೋ ಘಾತಕನೇ, ಶಕಟದಾಸನು ಮೊಹರವಂ ಮಾಡಿದ್ದು ನಿಜವೇನೋ?" ಎನಲು, "ಬುದ್ಧೀ, ಪಾದಸಾಕ್ಷಿಯಾಗಿ ಆ ರಹಸ್ಯಗಳೊಂದನ್ನೂ ನಾನು ಬಾಯಿಬಿಟ್ಟವನಲ್ಲ. ಮೊದಲೇ ಅದೆಲ್ಲವಂ ನಿಷ್ಕಪಟಿಯಾದ ಕ್ಷಪಣಕನೇ ಹೇಳಿಬಿಟ್ಟನು" ಎನಲು,

"ಎಲೋ ದುರಾತ್ಮಕನೇ, ಕ್ಷಪಣಕನೆಂದರೆ ಯಾರೋ ?" ಎನಲು, "ಏನು ಬುದ್ಧೀ,

---

೧. ಅರ್ಥ (ಕ)

ಒಂದನ್ನೂ ಅರಿಯದವರಂತೆ ನೂತನವಾಗಿ ಕೇಳುವಿರಿ ? ಮೊದಲು ಮನ್ಮಥನ ಹೊಸ ಮಸೆ ಅಲಗಿನಂತೆ ಇದ್ದ ಕನ್ನೆಯಂ ಅಪ್ಪಣೆ ಮೇರೆಗೆ ಪರ್ವತರಾಯನ ಬಳಿಗೆ ಕರೆದು ಕೊಂಡು ಹೋದ ಜೀವಸಿದ್ಧಿಯಲ್ಲವೇ ?" ಎನಲು.

ಅದಂ ಕೇಳಿ ರಾಕ್ಷಸನು " 'ಶಿವ ಶಿವಾ' ಈ ದುರಾತ್ಮಕನು ಮದ್ಯಪಾಯಿಗಳಂತೆ ಅನನ್ವಯವಾಗಿ ಬಗುಳುವನು. ಇವನೊಡನೆ ಮಾತನಾಡಿದ್ದೇ ಅಚಾತುರ್ಯವಾಯಿತು" ಎಂದು ಅಡ್ಡಮುಖನಾಗಿ. ತನ್ನ ಮನದೊಳು, "ಈ ಸಿದ್ಧಾರ್ಥಕ ಕ್ಷಪಣಕ ಶಕಟದಾಸರು ಗಳೇ ಶತ್ರುಪಕ್ಷದವರಾದ್ದರಿಂದಲೇ ಈಗ ನನಗೆ ಈ ದೆಸೆ ಒದಗಿತು. ಬಾಗುರಾಯಣ ಭದ್ರಭಟಾದಿಗಳು ಸಹ ಶತ್ರುವಿನಿಂದ ಪ್ರೇರಿತರಾಗಿ ಬಂದಿರುವದರಿಂದ ಸಮಯವಂ ನೋಡಿ ಮಲಯಕೇತುವಂ ನಿಗ್ರಹಿಸಿಯಾರು. ಚಿತ್ರವರ್ಮಾದಿಗಳಂ ಸಂಹರಿಸಿ. ಶೇಖರನಂ ಸೇನಾಸಮೇತನಾಗಿ ಪುರವಂ ಬಿಟ್ಟು ಹೋಗುವಂತೆ ಮಾಡಿ ಇರುವದರಿಂದ. ಕ್ಷಿಪ್ರದಲ್ಲಿ ಮಲಯಕೇತುವಿಗೆ ಏನೋ ಅರಿಷ್ಟ ತಟ್ಟುವದರಲ್ಲಿ ಸಂದೇಹವಿಲ್ಲ" ಎಂದು ನಿಶ್ಚೈಸು ತ್ತಿರಲು.

ಬಾಗುರಾಯಣನು ಸಿದ್ಧಾರ್ಥಕನಾಡಿದ ಅಸಂಗತಪ್ರಲಾಪವಂ ಕೇಳಿ ವಿಮುಖನಾಗಿ ರುವ ರಾಕ್ಷಸನಂ ನೋಡಿ ಪರಿಹಾಸಗೊಂಡು, "ಅಮಾತ್ಯರೇ. ಸಮಯಕ್ಕೆ ಒದಗುವ ನೆಂದು ಇವನಂ ಭೃತ್ಯನನ್ನಾಗಿ ಭಾವಿಸಿದಿರಿ" ಎಂದು ಹೇಳಲು. "ಅಹುದೈ ಬಾಗು ರಾಯಣನೇ. ಶತ್ರುಗ್ರಸ್ತನಾಗುತ್ತಿದ್ದ ಮಲಯಕೇತುವಂ ಈ ರಾಜ್ಯಕ್ಕೆ ಕರೆತಂದು ನೀನು ಅವನಿಗೆ ಆಪ್ತನಾಗಿ ಇರುವಂತೆ, ಈ ಸಿದ್ಧಾರ್ಥಕನು ಶಕಟದಾಸನಂ ಇಲ್ಲಿಗೆ ಕರೆತಂದು ನಮಗೆ ಆಪ್ತನಂತೆ ಇದ್ದದ್ದರಿಂದ ನಮಗೆ ಈ ಫಲವಾಯಿತು. ಹೀಗೇ ಕ್ಷಿಪ್ರದಲ್ಲಿ ಮಲಯಕೇತುವಿಗೂ ಫಲವಾದೀತು" ಎಂದು ಹೇಳಿ. ರಾಕ್ಷಸನು ರಾಜಸಭೆಯಿಂದ ಹೊರಟು. ಖಿನ್ನನಾಗಿ ಗೃಹಾದಿಗಳಂ ಬಿಟ್ಟು ಪುರದಿಂದ ಹೊರಟು ತೆರಳುತ್ತಿರಲು.

ಇತ್ತಲಾ ಚಿತ್ರವರ್ಮಾದಿಗಳು ನಷ್ಟರಾದುದಂ ಕೇಳಿ. ಅವರ ಸೇನೆಗಳೆಲ್ಲವೂ ಭೀತರಾಗಿ ದಿಕ್ಕುದಿಕ್ಕಿಗೆ ಓಡುತ್ತಿರಲು. ಅದಂ ಬೆಂಬಳಿಗೊಂಡು ಶೇಖರನ ಸೇನೆಯು ಅವರಂ ಅಟ್ಟಿ ಕೊಂಡು ಹೋಗುತ್ತಿರಲು. ಇದೆಲ್ಲವಂ ಕೇಳಿ ಶಕ ಚೀಣ ಹೂಣ ಗಾಂಧಾರಪತಿಗಳು "ತಾವು ಇಲ್ಲಿ ಇದ್ದರೆ ಚಿತ್ರವರ್ಮಾದಿಗಳಂತೆ ತಮಗೂ ಏನು ವಿಪತ್ತು ಸಂಭವಿಸು ವದೋ?" ಎಂದು ಭೀತರಾಗಿ ತಮ್ಮ ತಮ್ಮ ದೇಶಾಭಿಮುಖರಾಗಿ ತೆರಳುತ್ತಿರಲು.

ಇತ್ತಲಾ ಮಾರ್ಗವಿಡಿದು ಬರು[ತ] ತೆರಳುತಿರುವ ರಾಕ್ಷಸನು ತನ್ನ ಮನಸ್ಸಿನಲ್ಲಿ. "ಸ್ವಾಮಿಭಕ್ತಿಯನ್ನವಲಂಬಿಸಿ ಎಷ್ಟು ಸಾಹಸವಂ ಮಾಡಿದರೂ ದೈವಸಹಾಯವಿಲ್ಲದುದ ರಿಂದ ಅದೆಲ್ಲವೂ ನಿರರ್ಥಕವಾಯಿತು. ನನ್ನ ನಿಮಿತ್ತದಿಂದ ನಿರಪರಾಧಿಗಳಾದ ಚಿತ್ರ ವರ್ಮಾದಿ ದೇಶಾಧಿಪತಿಗಳು ವಿನಷ್ಟರಾದರು ; ಮತ್ತು ಸ್ಥಾನಾಂತರವನ್ನಾಶ್ರಯಿಸಿ ಕಾರ್ಯವಂ ಸಾಧಿಸೋಣವೆಂದರೆ. ಈ ಮೃಷಾಪವಾದಗ್ರಸ್ತನಾಗಿ ಮತ್ತೊಂದು ಕಡೆ ಇಟ್ಟಣಿಕಿ ನೋಡಕೂಡದು ; ಮತ್ತು ತಪೋವನವನ್ನಾಶ್ರಯಿಸಿ ಸಂಗರಹಿತನಾಗೋಣವೆಂದರೆ. ಮಹಾವೈರಾಂಧಕಾರದಿ[ಂ] ಗ್ರಸ್ತವಾದ ಮನಸ್ಸಿಗೆ ಅಲ್ಲಿ ತಾನೇ ಉಪಶಾಂತಿಪ್ರಕಾಶ ವೆಂತುಂಟಾಗುವದು ? ಅಥವಾ ನಂದರು ಹೋದ ಮಾರ್ಗವನ್ನೇ ಅನುಸರಿಸೋಣ ವೆಂದರೆ. ಅದು ಮೂರ್ಖಸ್ತ್ರೀಯರುಗಳು ಆಚರಿಸುವ ದುಷ್ಕೃತ್ಯವು. ಹೀಗಲ್ಲದೆ ಖಡ್ಗಪಾಣಿ

ಯಾಗಿ ಚಂದ್ರಗುಪ್ತನ ಸೇನೆಯ ಮೇಲೆ ಬಿದ್ದು ಸಂಹರಿಸೋಣವೆಂದರೆ, ಪರ್ಯವಸಾನದಲ್ಲಿ ಕಾರ್ಯವೆಂತಹುದೋ ?'' ಎಂದು ಮನದಲ್ಲಿ ನಾನಾವಿಧ ವಿಕಲ್ಪಗಳಂ ನೆನೆಯುತ್ತ,

''ಪ್ರಕೃತದಲ್ಲಿ ಇವು ಒಂದೂ ಕಾರ್ಯಕಾರಿಯಾಗಲರಿಯದು. ಚಂದನದಾಸನು ನನ್ನ ನಿಮಿತ್ತದಿಂದ ಬಂಧನಕ್ಕೆ ತಗುಲಿ ಇರುವನು. ಮಿತ್ರನಾದ ಆತನಂ ಉಳುಹಿಸುವದೇ ನನಗೆ ಪುರುಷಾರ್ಥವಾದುದರಿಂದ ಈಗಿನ ಅಪಮಾನವೆಲ್ಲವಂ ಸಹಿಸಿಕೊಂಡು ಪಾಟಲೀಪುರಕ್ಕೆ ಸೇರಿದಲ್ಲದೆ ಆತನ ಬಂಧನನಿವೃತ್ತಿಯಾಗಲಾರದು'' ಎಂದು ನಿಶ್ಚೈಸಿ, ಪಾಟಲೀಪುರಾಭಿಮುಖವಾಗಿ ಹೋಗುತ್ತಿದ್ದನು ಎಂಬಲ್ಲಿಗೆ.

ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಮಹೀಶೂರನರಪತಿ ಶ್ರೀಕೃಷ್ಣರಾಜೇಂದ್ರರಾಶ್ರಿತ ಹೊಯಿಸಣಿಗಕುಲಸಂಜಾತ ನಾರಾಯಣಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ರಾಕ್ಷಸನಿಷ್ಕಾಸಕಥನವೆಂಬ ಸಪ್ತದಶಾಶಯಃ ಸಮಾಪ್ತಃ.

ಅಷ್ಟಾದಶಾಶಯ : ಚಂದ್ರಗುಪ್ತರಾಜ್ಯಾಭಿಷೇಕಕಥನವು

ಈ ರೀತಿಯಲ್ಲಿ ರಾಕ್ಷಸನಿಗೆ ಅಪಮಾನ ಉಂಟಾಗಿ, ಆತನು ಮಲಯಕೇತುವಿನ ಆಸ್ಥಾನವಂ ಬಿಟ್ಟು ಹೊರಟ ಬಳಿಕ, ಚಿತ್ರವರ್ಮಾದಿಗಳಿಗೆ ಉಂಟಾದ ವಿಪತ್ತಂ ಕೇಳಿ, ಗಾಂಧಾರಾದಿಪತಿಗಳು ಪಲಾಯನವಂ ಗೈದರೆಂಬ ಅರ್ಥವಂ ತಿಳಿದು, ಬಾಗುರಾಯಣನು ತನ್ನ ಮನಸ್ಸಿನಲ್ಲಿ ''ಯಜಮಾನರಾದ ಚಾಣಕ್ಯರು ನನಗೆ ನೇಮಿಸಿ ಕಳುಹಿಸಿದಂತೆ ಕಾರ್ಯವೆಲ್ಲವೂ ಕೈಗೂಡಿ, ಮಲಯಕೇತುವಂ ಕೈಸರೆಯಾಗಿ ಹಿಡಿಯುವದೊಂದೆ ಉಳಿದಿರುವದು. ರಾಜಪುತ್ರನಿಗೆ ಬೆಂಬಲವಾಗಿ ಇದ್ದ ಗಾಂಧಾರ ಚೀಣ ಹೂಣ ಮೊದಲಾದ ಅರಸುಗಳೆಲ್ಲರೂ [೧]ದ್ರವ್ಯಂ[೧] ಕಳೆದುಕೊಂಡವನ ಬಳಗದಂತೆ ಸ್ವದೇಶವಂ ಕುರಿತು ತೆರಳಿ ಹೋದರು ; ಸ್ವಜನರೊಡನೆ ವಿರೋಧವಂ ಬಳಸಿದವನ ಸಂಪತ್ತಿನಂತೆ ಮಲಯಕೇತುವಿನ ಸೇನೆಯು ಸಹ ದೂರಗತವಾಯಿತು ; ಪಂಚಾಕ್ಷರೀಜಪಶೀಲನ ಪಾತಕಗಳಂತೆ ಚಿತ್ರವರ್ಮಾದಿ ಅರಸುಗಳೈದು ಮಂದಿಯೂ ನಷ್ಟರಾದರು. ಈ ವೇಳೆಯಲ್ಲಿ ಭದ್ರಭಟಾದಿಗಳು ಏನು ಯೋಚಿಸಿ ಇರುವರೋ?'' ಎಂದು ಚಿಂತಿಸುತ ಆಸ್ಥಾನದಿಂದ ಬರುತಿರುವ ಬಾಗುರಾಯಣನ ಬಳಿಗೆ ಭದ್ರಭಟಾದಿಗಳು ಕಳುಹಿಸಿದ ದೂತನು ಬಂದು ಕೈಮುಗಿದು,

''ಸ್ವಾಮಿ, ತಮ್ಮ ಸಮಯವಂ ತಿಳಿದು ಬಂದು ಹೇಳುವಂತೆ ಭದ್ರಭಟಾದಿ ಸೇನಾಪತಿಗಳು ನನ್ನಂ ಕಳುಹಿಸಿದರು'' ಎನಲು, ''ಎಲೈ ದೂತನೇ, ನಮ್ಮ ಸೇನಾಪತಿಗಳು ಮೃಗಬೇಟೆಯಂ ಮಾಡಬೇಕೆಂದು ಎಣಿಸಿ ಇರುವ ಮೇರೆಗೆ 'ಈಗ ಅರುಣೋದಯ ಸಮಯ ಸನ್ನಿಹಿತವಾಗುವದರಿಂದ ನಿದ್ರೆಗೈಯುತ್ತಿರುವ ಮೃಗವು ಎದ್ದು ತನ್ನ ಬಳಗ ದೊಡಗೂಡಿ ಹೋಗುವದಕ್ಕೆ ಮುಂಚಿತವಾಗಿಯೇ ಬೇಟೆಸಾಮಗ್ರಿಯ ಸಹಿತ ಹೋಗಿ ಬಳಸಿಕೊಂಡು ಹಿಡಿಯದಿದ್ದರೆ ಶ್ರಮಸಾಧ್ಯವಾಗುವದು' ಎಂದು ನಾವು ಹೇಳಿದೆವು ಎಂದು ತಿಳುಹಿಸಿ ಹೊರಡುವಂತೆ ಮಾಡುವನಾಗು'' ಎಂದು ಹೇಳಲು, 'ಬುದ್ಧಿ' ಎಂದು

---

೧. ಧನವಂ (ಕ), × (ಗ)

ಆ ದೂತನು ಹೋಗಿ,

ಬಾಗುರಾಯಣನು ಹೇಳಿದ ವಾಕ್ಯವಂ ಭದ್ರಭಟಾದಿ ಸೇನಾಪತಿಗಳಿಗೆ ತಿಳುಹಿಸಲು, ಅವರು ಆ ವಾಕ್ಯವಂ ಪರಿಭಾವಿಸಿ, "ಸುಹೃಜ್ಜನಸಮೇತವಾಗಿ ನಿದ್ರೆಗೈವ ಮಲಯಕೇತುವಂ ಈಗಲೇ ಕೈಸೆರೆಯಾಗಿ ಹಿಡಿಯಬೇಕೆಂದು ಬಾಗುರಾಯಣನ ಅಭಿಪ್ರಾಯವಿದೆಂ"ದು ನಿಶ್ಚೈಸಿ, ಭದ್ರಭಟಾದಿಗಳು ಸನ್ನದ್ಧರಾಗಿ ಪುರವಂ ಮುತ್ತಿ, ನಗರದ್ವಾರವಂ ಹಿಡಿದು, ರಾಜಭವನದ ಮಾರ್ಗವಾಗಿ ಬರುತ್ತಿರುವರಂ ಕಂಡು, ಬಾಗುರಾಯಣನು ಆ ಸೇನಾಪತಿಗಳಂ ನೋಡಿ, "ಮಲಯಕೇತುವಂ ಜಾಗ್ರತೆಯಾಗಿ ತರುವದೆಂ"ದು ಹೇಳಿ, ಸಿದ್ಧಾರ್ಥಕನಂ ನೋಡಿ, "ರಾಕ್ಷಸನು ಹೋಗುವ ಮಾರ್ಗವಂ ತಿಳಿದು ಚಾಣಕ್ಯರಿಗೆ ವಿಜ್ಞಾಪನವ ಮಾಡುವನಾಗು" ಎಂದು ನೇಮಿಸಿ, ತಾನು ತುರಗಾರೂಢನಾಗಿ ಹೊರಟು ಪಾಟಲೀಪುರಾಭಿಮುಖವಾಗಿ ತೆರಳುತ್ತಿರಲು, ಭದ್ರಭಟಾದಿಗಳು ತೀವ್ರದಿಂ ಬಂದು ರಾಜದ್ವಾರವನ್ನಾಕ್ರಮಿಸಿ, ಶಯನಗೃಹದ ಕಂಚುಕಿಗಳಂ ಬಂಧಿಸಿ, ಅಲ್ಲಿದ್ದ ಶೂರರಾದ ರಾಜಕುಮಾರರಂ ಪ್ರಹರಿಸುತ್ತಿರಲು, ಆ ಜನರ ಕಲಕಲಧ್ವನಿಗೆ ಮಲಯಕೇತುವು ಎಚ್ಚೆತ್ತು, ನಿದ್ರೆ ಮೊಬ್ಬಿನಿಂದ ಹೊರಟು 'ಇದೇನಿದೇನೆಂ'ದು ಬರುತ್ತಿರಲು, ಆಗ ಆಯುಧಪಾಣಿಗಳಾದ ಭದ್ರಭಟಾದಿಗಳು ಅವನಂ ಸುತ್ತಿಕೊಂಡು,

"ಎಲೈ ರಾಜಪುತ್ರನೇ, ಕಾರ್ಯದಕ್ಷರಾದ ಅಮಾತ್ಯರಾಕ್ಷಸರು ಪಾಟಲೀಪುರಾಧಿಪತ್ಯವಂ ನಿನಗೆ ಉಂಟುಮಾಡುವೆವೆಂದು ಪ್ರತಿಜ್ಞೆಯಂ ಮಾಡಿದ ರೀತಿಗೆ ಆ ಪುರವು ಸ್ವಾಧೀನವಾಯಿತು. ನಿಮ್ಮಂ ಜಾಗ್ರತೆಯಾಗಿ ಕರೆದು ತರುವದೆಂದು ಹೇಳಿ ಅಂದಳವಂ ಕೊಟ್ಟು, ನಮ್ಮಂ ಕಳುಹಿ, ಅವರು ಮುಂಚಿತವಾಗಿ ತೆರಳಿದರು. ಇನ್ನು ಸಾವಕಾಶವಂ ಮಾಡದೆ ಅಂದಳವನ್ನೇರಬಹುದು" ಎನಲು,

"ಹಾ ! ಇದೇನೋ ಆಪತ್ತು ಸಂಭವಿಸಿತು. ನಮ್ಮಿಂದ ತಿರಸ್ಕೃತನಾಗಿ ಹೋದ ರಾಕ್ಷಸನು ನಮಗೆ ಅಂದಳವಂ ಕಳುಹಿಸುವದುಂಟೇ ? ಇದೇನೋ ಆಶ್ಚರ್ಯವಾಗಿರುವದು" ಎಂದು ಚಿಂತಿಸುತ್ತ, "ಅಯ್ಯಾ ಸೇನಾಪತಿಗಳಿರಾ, ನಮ್ಮ ಬಾಗುರಾಯಣನೆಲ್ಲಿಹನು ?" ಎನಲು, "ಅಯ್ಯಾ ರಾಜಪುತ್ರನೇ, ಆತನು ಅಮಾತ್ಯ ರಾಕ್ಷಸರೊಡನೆ ಆಗಲೇ ತೆರಳಿ ಹೋದನು" ಎನಲು,

"ಅಕಟಕಟ ! ರಾಕ್ಷಸನಲ್ಲಿ ಅಪರಾಧವಂ ಸ್ಥಾಪಿಸಿ, ನಮ್ಮಿಂದ ಧಿಕ್ಕಾರಗೊಳಿಸಿ, ಆಗ ನಮಗೆ ಆಪ್ತನಾಗಿ ಇದ್ದ ಬಾಗುರಾಯಣನು ಈಗ ರಾಕ್ಷಸನಿಗೆ ಅನುಚರನಾಗಿ ತೆರಳಿದ ಬಳಿಕ ಇನ್ನು ಸಂಶಯಪಡಲೇಕೆ ? ಪಾಟಲೀಪುರದಿಂದ ಬಂದಿದ್ದ ಈ ಜನರೆಲ್ಲರೂ ಶತ್ರುಪ್ರೇರಿತರಾಗಿ ಸಮಯವಂ ನೋಡುತ್ತ, ನನ್ನಂ ವಿಪತ್ತಿಗೆ ಗುರಿಮಾಡಿದರು.

ಈ ಜನರುಗಳ ಸಂಸರ್ಗವು ದೇಹದಲ್ಲಿ ಅಡಗಿರುವ ಸಾಂಗಿಕವ್ರಣವು ಸಮಯಾಂತರದಲ್ಲಿ ಪ್ರಕೋಪಿಸುವಂತಾಯಿತು. ನಾನು ಸಂಕಲ್ಪಿಸಿದುದೆಲ್ಲ ಲುಬ್ಧಗಳಿಸಿದ ಧನದಂತೆ ವ್ಯರ್ಥವಾಯಿತು ; ಭೃತ್ಯರೊಡನೆ ಸರಸವಾಡುವನ ಗೌರವದಂತೆ ಕಾಂಭೋಜಾದಿಪತಿಗಳ ಸೇನೆಯು ಕೈತಪ್ಪಿಹೋಯಿತು ; ಧನವಂ ಕಳೆದುಕೊಂಡಾತನ ಪರಿವಾರದಂತೆ ಶಕ ಹೂಣ ಸೇನೆಯು ಪಲಾಯನಂಗೈದವು ; ವಂಚಕರೊಡನೆ ಮಂತ್ರಾಲೋಚನೆಯಂ ಗೈವನ ಚಿಂತಿತಾರ್ಥಗಳಂತೆ ಚಿತ್ರವರ್ಮಾದಿಗಳು ಪಂಚತ್ವವನ್ನೈದಿದರು ; ಅತಿಭಾಷೆಯನ್ನಾಡು

ವನ ಆಜ್ಞೆ ತೊಲಗುವಂತೆ ಶೇಖರಸೇನೆಯು ಸಹ ಸಮಯಕ್ಕೆ ಉಪಯೋಗಿಸದೆ ತೊಲಗಿ ಹೋಯಿತು ; ದೂರದೃಷ್ಟಿಯಿಲ್ಲದೆ ದುಡುಕಿ ಕಾರ್ಯವಂ ಕಳೆದುಕೊಂಡವನ ಪಶ್ಚಾತ್ತಾಪ ದಂತೆ ಮಹದಾಪತ್ತು ಸಂಭವಿಸಿತು.

ಮಿಂಚಿಹೋದ ಮಾತಿಗೆ [1]ಮಿಡುಕಿ[1] ಫಲವೇನು ? ಅಹುದಲ್ಲವೆಂದರೆ, ಅವಮಾನ ಪೂರ್ವಕವಾಗಿ ಬಂಧಿಸಿ, ಇವರು ನನ್ನಂ ಹಿಡಿದುಕೊಂಡು ಹೋಗುವರು" ಎಂದು ಚಿಂತಿಸುತ್ತ, "ಅಯ್ಯ ಸೇನಾಪತಿಗಳಿರಾ, ಅಮಾತ್ಯರು ನಮ್ಮಂ ಬರುವಂತೆ ನಿಮ್ಮಂ ಕಳುಹಿಸಿದರೇ ? ಮಿತ್ರರಾದ ನಿಮಗೆಲ್ಲರಿಗೂ ಸಮ್ಮತವಾದರೆ, ಹಾಗೇ ಆಗಲಿ" ಎಂದು ಮಲಯಕೇತುವು ಹೇಳುತ್ತಿರಲು,

ಆ ಮಾತಿಗೆ ಖಿನ್ನರಾದ ಭದ್ರಭಟಾದಿಗಳು, "ಅಯ್ಯ ಅರಸೇ, ಪುತ್ರ ಕಳತ್ರ ಕ್ಷೇತ್ರಾದಿ ವ್ಯಾಮೋಹಕ್ಕೆ ತಗುಲಿ ದೇಹವಂ ಸ್ವಾಮಿಯಾದವಂಗೆ ಮಾರಿಕೊಂಡು ಲೋಕಾಪ ವಾದವಂ ಗಣನೆಗೆ ತಾರದಿರುವ ನಮ್ಮಂಥವರಿಗಲ್ಲದೆ ನಿನ್ನಂ ಅನ್ಯರಿಗೆ ವಶವಂ ಮಾಡೋಣವೆಂಬುವದು ಯಾರಿಗೆ ಸಮ್ಮತವಾದೀತು ? ಚಿಂತಿಸಬೇಡ. ನಿನ್ನ ಕ್ಷೇಮ ವೆಲ್ಲವೂ ನಮ್ಮ ಕ್ಷೇಮದಂತಾಗುವದು. ಹೊರಡಬಹುದು" ಎನಲು,

ಆ ವಾಕ್ಯವಂ ಕೇಳಿ ಚಂದ್ರಗುಪ್ತನ ದೆಸೆಯಿಂದ ಪ್ರಾಣಾಪತ್ತು ಸಂಭವಿಸಲಾರದೆಂದು ತಿಳಿದು, ಮಲಯಕೇತುವು ಅಂದಳದಲ್ಲಿ ಕುಳಿತು, 'ವಂಚಕರಂ ಆಪ್ತನೆಂದು ಭಾವಿಸಿದವನ ಬಾಳು ಎಂದಿದ್ದರೂ ಇಷ್ಟೇ ಸರಿ' ಎಂದು ತಿಳಿದು ತಲೆಬಾಗಿ ಮುಸುಗನ್ನಿಕ್ಕಲು, ಅಲ್ಲಿ ಇದ್ದ ರಾಜಪುತ್ರಪರಿವಾರವಂ ಹಿಡಿದು ಕಾವಲಿಟ್ಟು ಹೊರಡಿಸಿ, ಅಲ್ಲಿಯ ಅಂತಃಪುರ ಪುರರಕ್ಷಣೆಗೋಸುಗ ವಿಜಯವರ್ಮನೆಂಬ ಸೇನಾಪತಿಯಂ ನೇಮಿಸಿ, ಭದ್ರಭಟಾದಿಗಳು ಆ ಅಂದಳವಂ ಸುತ್ತಿಕೊಂಡು ಆ ಶಾಹುರೀನಗರದಿಂದ ಹೊರಟು ತಮ್ಮ ದುರ್ಗಗಳ ಮಾರ್ಗವಿಡಿದು ಪಾಟಲೀಪುರಾಭಿಮುಖರಾಗಿ ಬರುತ್ತಿರಲು,

ಇವೆಲ್ಲವಂ ತಿಳಿದಿರುವ ಸಿದ್ಧಾರ್ಥಕನು ರಾಕ್ಷಸನು ಹೋಗುವ ಮಾರ್ಗವನ್ನನುಸರಿಸಿ ಆತನಿಗೆ ಕಾಣಿಸಿಕೊಳ್ಳದಂತೆ ತೆರಳುವವನಾಗಿ, ಶೋಣಾನದೀತೀರದಲ್ಲಿ ಸನ್ನದ್ಧವಾಗುವ ಚಂದ್ರಗುಪ್ತನ ಸೇನೆಯಂ ನೋಡುತ್ತ, ಕೋಟೆ ಕೊತ್ತಳಗಳಲ್ಲಿ ಯುದ್ಧವಂ ಮಾಡು ಲುದ್ಯೋಗಿಸಿ ಇರುವ ಭಟರುಗಳ ತಂಡಂಗಳನ್ನವಲೋಕಿಸುತ್ತ, ಪಾಟಲೀಪುರವಂ ಪ್ರವೇ ಶಿಸಿ, ಅರುಣೋದಯದಲ್ಲಿ ಜಪಾಸನದಲ್ಲಿ ಕುಳಿತಿರುವ ಚಾಣಕ್ಯರಿಗೆ ದೂರದಿಂ ನಮ ಸ್ಕರಿಸಿ ನಿಂತಿರಲು,

ಆ ಸಿದ್ಧಾರ್ಥಕನಂ ನೋಡಿದ ಚಾಣಕ್ಯನು ಜಪವಂ ಪರಿಸಮಾಪ್ತಿಗೊಳಿಸಿ, "ಎಲೈ ಸಿದ್ಧಾರ್ಥಕನೇ, ಕ್ಷೇಮದಿಂ ಬಂದೆಯಾ ? ಕುಳ್ಳಿರು. ನೀನು ಹೋಗಿ ಇದ್ದ ಕಾರ್ಯವು ಹೇಗಾಯಿತು ? ರಾಕ್ಷಸನ ವೃತ್ತಾಂತವೇನು ?" ಎನಲು,

"ಸ್ವಾಮಿಯವರ ಅಪ್ಪಣೆ ಮೇರೆಗೆ ಹೋಗಿ ಇದ್ದ ಕಾರ್ಯವೆಲ್ಲವೂ ಕೈವಶವಾಯಿತು" ಎನಲು, "ಶಾಭಾಸು ! ವಿವರವಾಗಿ ಹೇಳೆಂ"ದೆನಲು, "ಇಲ್ಲಿ ಅಪ್ಪಣೆ ಮೇರೆಗೆ ಶಕಟ ದಾಸನಂ ಕರೆದುಕೊಂಡು ಹೋದುದರಿಂದ ಸಂತುಷ್ಟನಾದ ರಾಕ್ಷಸನು ಅಲಂಕರಿಸಿ ಇದ್ದ

---

೧. ದುಡುಕಿ (ಕ)

ಭೂಷಣಗಳಂ ಉಚಿತವಾಗಿ ನನಗೆ ಕೊಡಲು, ಅದಂ ಪೆಟ್ಟಿಗೆಯಲ್ಲಿ ಇಟ್ಟು, ನನ್ನ ಬಳಿಯಲ್ಲಿ ಇದ್ದ ರಾಕ್ಷಸನ ಮುದ್ರಿಕೆಯಿಂದಲೇ ಮೊಹರವಂ ಮಾಡಿ ತಂದು, ತಮ್ಮ ಅಪ್ಪಣೆ ಮೇರೆಗೆ ಆ ಮೊಹರವಂ ರಾಕ್ಷಸನ ವಶವಂ ಮಾಡಿ, ಆತನ ಬಳಿಯಲ್ಲಿಯೇ ಕೆಲವು ದಿನ ಆಪ್ತಭಾವದಿಂದಿರುತ, ಮಲಯಕೇತುವಿನ ಸೇನೆಯು ನಮ್ಮ ದೇಶಕ್ಕೆ ಹೊರಡುವ ಸಮಯದಲ್ಲಿ ಆ ಭೂಷಣದ ಪೆಟ್ಟಿಗೆಯಂ ತಾವು ಕೊಟ್ಟ ಕಾಗಜ ಸಹ ತೆಗೆದುಕೊಂಡು ಅವರ ದಂಡಿನ ಉಕ್ಕಡದಲ್ಲಿ ಸಿಕ್ಕಲು, ಆ ಕಾವಲುಗಾರರು ನನ್ನಂ ಹಿಡಿದು ಮಲಯಕೇತುವಿನ ಸನ್ನಿಧಿಗೆ ಕೊಂಡೊಯ್ಯಲು, ಆತನು ನನ್ನ ಬಳಿಯಲ್ಲಿ ಇದ್ದ ಕಾಗಜವಂ ಓದಿ ಪರಿಭಾವಿಸಿ, 'ಈಗ ರಾಕ್ಷಸನಿಗೂ ಚಂದ್ರಗುಪ್ತನಿಗೂ ಮಿತ್ರತ್ವವೇ ಇರುವದು, ಇನ್ನೂ ಸಹ ರಾಕ್ಷಸನಲ್ಲಿ ವಿಶ್ವಾಸವಂ ಬಳಸಿದರೆ ಪ್ರಮಾದವುಂಟಾಗುವದರಲ್ಲಿ ಸಂದೇಹ ವಿಲ್ಲವೆಂ'ದು ನಿಶ್ಚೈಸಿ, ಬಾಗುರಾಯಣನೊಡನೆ ಆಲೋಚಿಸಿ, ರಾಕ್ಷಸನಂ ಧಿಕ್ಕರಿಸಿ, ನನ್ನ ಬಾಯಿಮಾತಿನಿಂದ ಚಿತ್ರವರ್ಮಾದಿ ಐದು ಮಂದಿ ಅರಸುಗಳಂ ನಷ್ಟಗೊಳಿಸಿ ಮಲಯ ಕೇತುವು ಶಯನಗೃಹಕ್ಕೆ ತೆರಳುತ್ತಿರಲು, ಆಗ ರಾಕ್ಷಸನು ಖಿನ್ನನಾಗಿ ಆಸ್ಥಾನವಂ ಬಿಟ್ಟು ಹೋಗಿ, ದೆಸೆಯಂ ಕಾಣದೆ ಪಾಟಲೀಪುರಾಭಿಮುಖವಾಗಿ ಖಡ್ಗಹಸ್ತನಾಗಿ ಬರುತ್ತಿರಲು, ನಾನು ಪ್ರಚ್ಛನ್ನನಾಗಿ ಬೆಂಬಿಡಿದು ಬರುತ್ತ, ನಮ್ಮ ಪುರದ ಉತ್ತರ ದಿಕ್ಕಿನ ವಸಂತವನವಂ ಹೊಕ್ಕು, ಒಂದು ಮರದಡಿಯಲ್ಲಿ ಕುಳಿತು ಚಿಂತಾಗ್ರಸ್ತನಾಗಿ ರಾಕ್ಷಸನು ಇರುವದಂ ನೋಡಿ, ಸನ್ನಿಧಿಗೆ ಬಂದೆನು. ಉಳಿದ ಕಾರ್ಯವಂ ಅಪ್ಪಣೆ ಮೇರೆಗೆ ಬಾಗುರಾಯಣ ನಿರ್ವಹಿಸಿಕೊಂಡು ಕ್ಷಿಪ್ರದಲ್ಲಿ ಬರುವನು. ಸ್ವಾಮಿಯವರ ತಪಃಪ್ರಭಾವದಿಂದ ನಿರ್ವಿಘ್ನ ವಾಗಿ ಸಂಕಲ್ಪಿಸಿದ ಕಾರ್ಯವೆಲ್ಲವೂ ಪಾತ್ರವರಿತು ಕೊಟ್ಟವನ ಸುಕೃತವಂತೆ ಸಫಲವಾ ಯಿತು'' ಎಂದು ಸಿದ್ಧಾರ್ಥಕನು ವಿಜ್ಞಾಪಿಸಲು,

ಆ ವಾಕ್ಯವಂ ಕೇಳಿದ ಚಾಣಕ್ಯನು ಸಂತೋಷಭರಿತನಾಗಿ ಎದ್ದು, ಚಂದ್ರಗುಪ್ತಗೃಹಕ್ಕೆ ಹೋಗುತ್ತಿರಲು, ಆಗ ಶಯನಗೃಹದಿಂದೆದ್ದು ವಿಪ್ರಯುಗ್ಮಧೇನುಗಳಂ ದರ್ಶನವಂ ಮಾಡುತ್ತಿರುವ ಚಂದ್ರಗುಪ್ತನು ಚಾಣಕ್ಯನು ಬಂದುದಂ ಕಂಡು ಸಾಷ್ಟಾಂಗವೆರಗಿ, ಉಚಿತಪ್ರಕಾರ ಕುಳ್ಳಿರಿಸಿ, ''ಸ್ವಾಮಿ, ನಿಯಮವನ್ನಾಚರಿಸುವ ಸಮಯದಲ್ಲಿ ಸೂರ್ಯ ನುದಯಿಸುವಂತೆ ದಯಮಾಡಿ ದರ್ಶನವನ್ನುಂಟುಮಾಡಿದಂತಾಯಿತು'' ಎಂದು ಚಂದ್ರ ಗುಪ್ತನು ಹೇಳುತ್ತಿರಲು,

''ಅಯ್ಯ ಕುಮಾರಕನೇ, ಕಾರ್ಯಗೌರವದಿಂದ ಬಂದೆವು. ಮೊದಲು ನೀನು ನೇಮಿಸಿ ಇದ್ದ ಕೌಮುದೀಮಹೋತ್ಸವವಿರೋಧದಿಂದುಂಟಾದ ನಮ್ಮಿರ್ವರ ವಾಕ್ಕಲಹಕ್ಕೆ ಫಲರೂಪ ವಾಗಿ ಒದಗಿರುವ ಅಭ್ಯುದಯವಂ ಈ ಸಿದ್ಧಾರ್ಥಕನು ವಿಜ್ಞಾಪಿಸುವನು ; ಕೇಳುವನಾಗು'' ಎನಲು,

ಆಗ ಸಿದ್ಧಾರ್ಥಕನು ತಾನು ಚಾಣಕ್ಯನಿಗೆ ವಿಜ್ಞಾಪಿಸಿದಂತೆ ಮಲಯಕೇತುವಿನ ಆಸ್ಥಾನ ದಲ್ಲಿ ನಡೆದ ವರ್ತಮಾನವೆಲ್ಲವಂ ವಿವರಿಸಿ ಚಂದ್ರಗುಪ್ತನಿಗೆ ವಿಜ್ಞಾಪಿಸಲು, ಅದಂ ಕೇಳಿ ವಿಸ್ಮಯಗೊಂಡು, ಪುನಃ ಚಾಣಕ್ಯರ ಪಾದಂಗಳಿಗೆ ನಮಸ್ಕರಿಸಲು, ''ವಿಜಯೋಸ್ತು, ಕುಳ್ಳಿರ್ರ್ಯ'' ಎಂದು ಹೇಳಲು, ಆಗ ಚಂದ್ರಗುಪ್ತನು ಕೈಗಳಂ ಜೋಡಿಸಿಕೊಂಡು,

''ನಮ್ಮ ಇಷ್ಟದೇವತೆಯೇ ತಮ್ಮ ರೂಪಿನಿಂ ಕರುಣಿಸಿ ಇರುವಲ್ಲಿ, 'ಬೆಟ್ಟದಂತ

[೧]ಒದಗುತ್ತಿದ್ದ[೧] ವಿಪತ್ತೆಲ್ಲವೂ ಮಂಜಿನಂತೆ ಪರಿದುಹೋಯಿತು' ಎಂಬಲ್ಲಿ ಸಂದೇಹವೇ ನಿರುವದು ? ಅಲ್ಪಾಧಿಕಾರಿಯಾದ ಶಿಷ್ಯನು ಗುರುಗಳು ಉಪದೇಶವಂ ಗೈಯುವ ಅರ್ಥವಂ ತಿಳಿಯದೆ ವ್ಯಧಿಕರಣವಂ ಹೇಳುತ ಅವರ ಮನಸ್ಸಿಗೆ ಅಸಮಾಧಾನವಂ ತರುವಂತೆ, ತಮ್ಮ ಮನೋಭಾವವಂ ತಿಳಿಯದೆ ಸಭೆಯಲ್ಲಿ ಹೆಚ್ಚಕ್ಷರವಂ ನುಡಿದ ನನ್ನಪರಾಧವೇನಿದ್ದರೂ ಕ್ಷಮಿಸಬೇಕೆಂ"ದು ಚಂದ್ರಗುಪ್ತನು ಪ್ರಾರ್ಥಿಸುತ್ತಿರಲು,

"ಅಯ್ಯ ಕುಮಾರಕನೇ, ಶಿಶುಗಳು ತೊದಲುನುಡಿಗಳಿಂದ ತಂದೆಯಾದವನಂ ಬಯ್ದರೆ, ಅದು ಸಂತೋಷಕರವೇ ಹೊರತು ಖೇದವಾಗುವದುಂಟೇ ? ಕುಳ್ಳಿರು. ನಾವು ಮಾಡಿದ ಯತ್ನದಿಂದ ಶತ್ರುಗಳ ಉತ್ಸಾಹವು ಶಾಂತವಾಯಿತು. ರಾಕ್ಷಸನು ತಾನಾಗಿ ಇಲ್ಲಿಗೆ ಬರುವಂತಾಯಿತು. ಮಲಯಕೇತುವು ನಮ್ಮ ಕೈವಶವಾದನು. ಆತನ ತಂದೆ ದೆಸೆ ಯಿಂದ ನಮಗೆ ಆಗಿರುವ ಉಪಕಾರವಂ ತಿಳಿದಿರುವೆಯಷ್ಟೆ. ಗುಣಶಾಲಿಯಾದ ಶತ್ರುವು ಕೈವಶನಾದರೆ, ಗುಣಜ್ಞರಾದವರು ಅವನಂ ಅಪಮಾನಗೊಳಿಸರು. ಮಲಯಕೇತುವು ರಾಕ್ಷಸನಿಂದ ಪ್ರೇರಿತನಾಗಿ ನಮ್ಮ ಮೇಲೆ ರಾಜಕಾರ್ಯಕ್ಕೆ ಯತ್ನವಂ ಮಾಡಿದನಲ್ಲದೆ ಬುದ್ಧಿ ಪೂರ್ವಕವಾಗಿ ಮಾಡಿದವನಲ್ಲ. ಆತನಂ ಬಹುಮಾನಗೊಳಿಸಿ, ಎಂದಿನಂತೆ ಅವನ ರಾಜ್ಯವಂ ಆತನಿಗೆ ಕೊಟ್ಟು, ನಿನ್ನ ವಶವರ್ತಿಯಾಗಿ ಇರುವಂತೆ ನೇಮಿಸಿ ಕಳುಹಿಸಬೇಕು" ಎಂದು ಚಾಣಕ್ಯನು ಹೇಳುತ್ತಿರಲು,

"ಸ್ವಾಮಿಯವರ ಆಜ್ಞಾನುಸಾರವಾಗಿ ಎಲ್ಲವೂ ನಡೆಯುವದು" ಎಂದು ಚಂದ್ರ ಗುಪ್ತನು ವಿಜ್ಞಾಪಿಸುತ್ತಿರಲು, ಆಗ ಸಿದ್ಧಾರ್ಥಕನಂ ಕರೆದು, "ಎಲೈ, ಸ್ವಲ್ಪ ಕಾರ್ಯಶೇಷ ವಿರುವದು. ಅದಂ ನಿರ್ವಹಿಸುವನಾಗು" ಎಂದು ಕಿವಿಯಲ್ಲಿ ಹೇಳತಕ್ಕ ಮಾತುಗಳಂ ಹೇಳಿ, ಅವನಂ ಕಳುಹಿಸಿ, ಆಗ ದೂರದಲ್ಲಿ ನಮಸ್ಕರಿಸುತ್ತಿರುವ ಬಾಗುರಾಯಣನಂ ನೋಡಿ ಮಂದಸ್ಮಿತನಾಗಿ,

"ಏನೈ ಸೇನಾಪತಿಯೇ, ನೇಮಿಸಿದಂತೆ ಕಾರ್ಯವಂ ನಿರ್ವಹಿಸಿಕೊಂಡು ಕ್ಷೇಮದಿಂ ಬಂದೆಯಾ ? ಚಂದ್ರಗುಪ್ತನಿಗೆ ನಿಮ್ಮಂಥ ಆಪ್ತರಿರುವಲ್ಲಿ ಯಾವ ಕಾರ್ಯ ತಾನೇ ಅಸಾಧ್ಯ ವಾಗುವದುಂಟೇ ? ಸಕಲ ಸೇನಾಧಿಕಾರವೂ ನಿನ್ನನ್ನೇ ಹೊಂದುವದರಿಂದ ಮೊದಲಿ ಗಿಂತಲೂ ಯಶೋವಂತನಾಗಿ ಇರುವನಾಗು. ಮಲಯಕೇತುವಿನ ವೃತ್ತಾಂತವೇನಂ" ದೆನಲು, "ಸ್ವಾಮಿ, ಅಲ್ಲಿ ನಡೆದ ವರ್ತಮಾನವೆಲ್ಲವಂ ಮೊದಲೇ ಸಿದ್ಧಾರ್ಥಕನು ತಿಳುಹಿಸಿಯೇ ಇದ್ದಾನು. ಭದ್ರಭಟಾದಿಗಳು ಅನಾಯಾಸದಿಂದ ಕ್ಷಿಪ್ರವಾಗಿ ಮಲಯ ಕೇತುವಂ ಕರೆತರುವರು. ಸ್ವಾಮಿ ಸಂಕಲ್ಪಿಸಿದುದೆಲ್ಲವೂ ಆದಾನ ನಿದಾನವನ್ನರಿತು ಮಾಡಿದ ಚಿಕಿತ್ಸೆಯಿಂದ ಆರೋಗ್ಯವುಂಟಾಗುವಂತೆ ಚಂದ್ರಗುಪ್ತನಿಗೆ ಅಭ್ಯುದಯವಂ, ತಮಗೆ ಶಾಶ್ವತವಾದ ಕೀರ್ತಿಯನ್ನುಂಟುಮಾಡಿತು" ಎಂದು ಬಾಗುರಾಯಣನು ವಿಜ್ಞಾಪಿ ಸಲು, ಆಗ ಬಾಗುರಾಯಣನಂ ದಿವ್ಯಭೂಷಣ ವಸ್ತ್ರಾದಿಗಳಿಂದ ಸನ್ಮಾನಗೊಳಿಸಿ,

"ಎಲೈ ಸೇನಾಪತಿಯೇ, ಇಲ್ಲಿ ಬರುವ ಮಲಯಕೇತುವಿಗೆ ಸಕಲ ವಸ್ತುಸಮೇತಮಾಗಿ ಉಚಿತಮಾದ ಬಿಡಾರವಂ ಮಾಡಿಸಿ, ಲಜ್ಜೆಯಂ ಬಿಟ್ಟು ಕಾದಿರುವನಾಗು" ಎಂದು

---

೧. ಒದಗಿದ್ದ (ಕ)

ನೇಮಿಸಿ ಕಳುಹಿಸಿ, ಚಾಣಕ್ಯನು ತಾನಿದ್ದೆಡೆಗೆ ಬರುತ್ತಿರಲು, ಸಿದ್ಧಾರ್ಥಕನಾದರೋ ತನಗೆ ಚಾಣಕ್ಯನು ಕಿವಿಯಲ್ಲಿ ರಹಸ್ಯವಾಗಿ ಹೇಳಿ ಇದ್ದ ರೀತಿಗೆ ಪಶುಲೋಮ[ಕ]ನೆಂಬವನಂ ಕರೆದು, ಹೇಳತಕ್ಕ ಮಾತುಗಳಂ ಹೇಳಿ, ರಾಕ್ಷಸನು ಕುಳಿತಿರುವ ವನವಂ ತೋರಿಸಿ, ಹೋಗೆಂದು ಕಳುಹಿಸಿ, ಚಂದನದಾಸನಂ ಶೂಲವಂ ನೆಟ್ಟಿರುವ ವಧ್ಯಸ್ಥಾನಕ್ಕೆ ಕರೆತರ ಲೋಸುಗ ಸಿದ್ಧಾರ್ಥಕನು ಹೋಗುತ್ತಿದ್ದನು.

ಇತ್ತ ರಾಕ್ಷಸನು ತನಗೆ ಮಿತ್ರನಾದ ಚಂದನದಾಸನ ಯೋಗಕ್ಷೇಮವಂ ವಿಚಾರಿಸು ವದಕ್ಕೆ ಉಪಾಯವಂ ಕಾಣದೆ, ಮೊದಲು ನಂದರು ಒಂದು ವಿನೋದವಿಹಾರದಲ್ಲಿ ಇರು ತ್ತಿದ್ದ ವನಪ್ರದೇಶವಂ ನೋಡಿ, "ಭೂಪತಿಗಳಾದ ನಂದರು ದಿವ್ಯಾಶ್ವಗಳನ್ನೇರಿ ಬಂದು ಈ ಸರೋವರದಲ್ಲಿ ಜಲಕೇಳಿಯನ್ನಾಡಿ, ಈ ಚಿತ್ರಮಂಟಪದಲ್ಲಿ ಕುಳಿತು, ನನ್ನೊಡನೆ ಸಲ್ಲಾಪವಂ ಗೈಯುತ್ತ ರಾಜಭೋಗವನ್ನನುಭವಿಸುತ್ತಿದ್ದ ಉದ್ಯಾನವಿದು. ಈಗ ಗಳಿತ ವಯಸ್ಕಳಾದ ಪಣ್ಯಾಂಗನಾಂಗಗಳಂತೆ ರಕ್ಷಕರಿಲ್ಲದೆ ಜೀರ್ಣವಾಗಿ, ನೋಡುವರಿಗೆ ಉತ್ಸಾಹಶೂನ್ಯವಂ ಮಾಡುವದು" ಎಂದು ಹಂಬಲಿಸುತ, ತೃಷ್ಣಾತುರನಾಗಿ, ಸರೋವರ ಇದ್ದೆಡೆಗೆ ಬಂದು, ಜಲಪಾನವಂ ಗೈದು, ಮುಂದೆ ತೆರಳುತಿರಲು,

ಆಗ ಸಿದ್ಧಾರ್ಥಕನಿಂದ ನೇಮಿಸಿದ್ದ ಪಶುಲೋಮಕನೆಂಬ ಚಾಣಕ್ಯನ ಶಿಷ್ಯನು ರಾಕ್ಷಸನು ಬರುವದಂ ಕಂಡು, ದೂರದಲ್ಲಿಯೇ ಒಂದು ವೃಕ್ಷದ ಕೊನೆಗೆ ಹಗ್ಗವಂ ಹಾಕಿ, ಕೆಳಗೆ ಇರುವ ಹುತ್ತದ ಮೇಲೆ ನಿಂತು, ಹಗ್ಗದ ಕುಣಿಕೆಯನ್ನು ತನ್ನ ಕೊರಳಿಗೆ ಹಾಕಿ ಕೊಂಡು, ನಿಂತು ನಾಲ್ಕು ದಿಕ್ಕಿಗೆ ಕೈಗಳಂ ಮುಗಿಯುತ, ದೇವತೆಗಳಂ ಪ್ರಾರ್ಥಿಸುವಂತೆ, "ಸಕಲಲೋಕೇಶ್ವರರಾಗಿ ಪ್ರಾಣಿಗಳ ಅಂತರಂಗವಂ ತಿಳಿದು ಕರ್ಮಾನುಗುಣಫಲಗಳಂ ಕೊಡುವ ಇಂದ್ರಾದಿ ಸಕಲದೇವತೆಗಳಿರಾ, ನಿಮಗೆ ಸಾಷ್ಟಾಂಗವಾಗಿ ಪ್ರಣಾಮವಂ ಗೈವೆನು. ನಾನು ಜನನಾರಭ್ಯವೂ ಮನಃಪೂರ್ವಕವಾಗಿ ಪಾಪಗಳನ್ನಾಚರಿಸಿದವನಲ್ಲ. ಲೋಕಾಪವಾದಕ್ಕೆ ಅಂಜದೆ ನಡೆದುಕೊಂಡವನಲ್ಲ. ಡಾಂಭಿಕನಂತೆ ವ್ಯರ್ಥವ್ಯಯವಂ ಮಾಡಿದವನಲ್ಲ. ಕಾಮಕ್ರೋಧಗಳ ವಶವಾದವನಲ್ಲ. ಆತ್ಮಮಿತ್ರನಿಗೆ ಅಕಾಲದಲ್ಲಿ ಉಂಟಾಗುವ ಮರಣವಂ ನೋಡಲಾರದೆ ಪ್ರಾಣಗಳಂ ತ್ಯಜಿಸುತ್ತಿರುವ ನನಗೆ ಆತ್ಮಹತ್ಯಾ ದೋಷ ಸಂಭವಿಸದಂತೆ ಕೃಪೆಮಾಡಬೇಕೆಂ"ದು ಕೂಗಿ ಹೇಳಿಕೊಳ್ಳುತ್ತಿರುವ ವಾಕ್ಯವಂ ಕೇಳಿ,

ರಾಕ್ಷಸನು ನೋಡಿ, "ಇವನಾರೋ ಮಿತ್ರನಾಶವಂ ನೋಡಲಾರದೆ ಪ್ರಾಣಗಳಂ ತ್ಯಜಿಸುವನಾಗಿ ದೇವತಾಪ್ರಾರ್ಥನೆಯಂ ಮಾಡುವದರಿಂದ ನನ್ನಂತೆ ಇವನಿಗೂ ಏನೋ ಮಿತ್ರವ್ಯಸನ ಸಂಭವಿಸಿ ಇರುವಂತೆ ತೋರುತ್ತೆ. ಇದಂ ವಿಚಾರಿಸಿ ನೋಡುವೆನೆಂ"ದು ಅವನ ಸಮೀಪಕ್ಕೆ ಬಂದು,

"ಎಲೈ ಪುರುಷನೇ, ನೀನು ಯಾರು ? ದುಷ್ಟಸ್ತ್ರೀಯರುಗಳಂತೆ ಪ್ರಾಣಗಳಂ ತ್ಯಜಿಸ ಲಿಚ್ಛೈಸುತಿರುವೆ. ಸ್ತ್ರೀವಿಯೋಗದಿಂದಲೋ, ಕೊಟ್ಟ ಭಾಷೆ ಕೆಟ್ಟುದರಿಂದಲೋ, ಏನೋ ಪ್ರಮಾದ ಘಟಿಸಿದುದರಿಂದಲೋ, ಬಲವದ್ವಿರೋಧ ಉಂಟಾದುದರಿಂದಲೋ ಅಥವಾ ಮಿತ್ರಾರ್ಥವಾಗಿಯೋ, ಯಥಾರ್ಥವಂ ಹೇಳೆಂ"ದು ಕೇಳಲು,

"ಅಯ್ಯ ಮಾರ್ಗಸ್ಥನೇ, ಭಾಗ್ಯಹೀನನಾದ ನನ್ನ ವೃತ್ತಾಂತವಂ ಯಾಕೆ ಕೇಳುವೆ ?

ಇದರಿಂದ ನಿನಗೇನು ಫಲ ? ವೃಥಾ ಸಾವಕಾಶವಾಗುವದು. ನಿನ್ನ ಮಾರ್ಗಗೊಂಡು ತೆರಳುವನಾಗು." ಎನಲು, "ಎಲೈ ಪುರುಷನೇ, ವಿಶ್ವಾಸದಿಂದ ಕೇಳುವರಿಗೆ ಉತ್ತರವಂ ಹೇಳದೆ, ಪ್ರಾಣಗಳಂ ನೀಗಲಾಡಲೋಸುಗ ತ್ವರಿತಪಡುವೆ ಯಾಕೆ ? ವಿಮಾನಸ್ಥ ದೂತರು ನಿನ್ನಂ ತ್ವರೆಪಡಿಸುವರೋ ?" ಎಂದು ರಾಕ್ಷಸನು ಕೇಳುತ್ತಿರಲು, "ಅಷ್ಟಕ್ಕೆ ನಾನು ಪಾತ್ರನೆಂತಹೆನು ? ಕೌತುಕವಿದ್ದರೆ ಹೇಳುವೆನು. ಈ ಪಾಟಲೀಪುರದಲ್ಲಿ ನನಗೆ ಪರಮ ಮಿತ್ರನಾದ ವಿಷ್ಣುದಾಸನೆಂಬ ಒರ್ವ ವರ್ತಕನುಂಟು. ಆತನಿಗೆ ಸಂಭವಿಸಿ ಇರುವ ಬುದ್ಧಿ ಪೂರ್ವಕ ಮರಣವಂ ಕೇಳಿ, ಅದಂ ನೋಡಲಾರದೆ, ಮುಂಚಿತವಾಗಿಯೇ ಪ್ರಾಣಗಳಂ ಬಿಡುವದೇ ಉತ್ತಮವೆಂದು ನಿಶ್ಚೈಸಿ, ಜನರಹಿತವಾದ ಈ ಸ್ಥಾನಕ್ಕೆ ಬಂದೆನು. ಇದು ನನ್ನ ವೃತ್ತಾಂತವು" ಎಂದು ಪಶುಲೋಮಕನು ಹೇಳಲು.

"ಎಲೈ ಪುರುಷನೇ, ಆ ವಿಷ್ಣುದಾಸನೆಂಬವನಿಗೆ ಬುದ್ಧಿಪೂರ್ವಕಮರಣ ಉಂಟಾಗುವದಕ್ಕೆ ಕಾರಣವೇನೆಂ"ದೆನಲು, "ಅಯ್ಯ ಮಾರ್ಗಸ್ಥನೇ, ಆ [೧]ಆಶ್ಚರ್ಯವಂ[೧] ಏನು ಹೇಳುವೆನು ? ವಿಷ್ಣುದಾಸನು ತನಗೆ [೨]ಮಹೋಪಕಾರಿ[೨]ಯಾದ ಚಂದನದಾಸನೆಂಬವನಿಗೆ ಸಂಭವಿಸಿದ ವಿಪತ್ತಂ ತಿಳಿದು, ಆ ವ್ಯಸನವಂ ಸಹಿಸಲಾರದೆ, ತನ್ನ ಗೃಹಸೋಪಸ್ಕರವಂ ದೀನಾನಾಥರಿಗೆ ಕೊಟ್ಟು, ಅಗ್ನಿಪ್ರವೇಶವಂ ಮಾಡುವೆನೆಂದು ನಿಶ್ಚೈಸಿ ಹೊರಟುದಂ ತಿಳಿದು, ಅವನಂ ನಿಲ್ಲಿಸುವದಕ್ಕೆ ಉಪಾಯವಂ ಕಾಣದೆ, ಅವನಂತೆ ನಾನೂ ಭೂಲೋಕದಾಶೆಯಂ ಬಿಟ್ಟು, ಈ ಯತ್ನವಂ ಮಾಡಿರುವೆನು" ಎಂದೆನಲು.

ರಾಕ್ಷಸನು ತನ್ನ ಮನಸ್ಸಿನಲ್ಲಿ "ಅಹಹ ! ಏನೋ ಮಹಾಪ್ರಮಾದ ಬಂದಂತೆ ತೋರುತಲಿದೆ. ಚಂದನದಾಸನ ಯೋಗಕ್ಷೇಮವಂ ವಿಚಾರಿಸಲೆಣಿಸಿ ಬಂದ ಸಮಯದಲ್ಲಿ ಈ ಅಶ್ಲೀಲವಂ ಕೇಳಿದೆನು. ಇದುವರೆಗೆ ಆತನು ಜೀವಂತನಾಗಿ ಇದ್ದರೆ, ನನ್ನ ದೇಹದ ಆಸೆಯನ್ನಾದರೂ ಬಿಟ್ಟು, ಆತನಿಗೆ ಕ್ಷೇಮವುಂಟಾಗುವಂತೆ ಮಾಡುವೆನು. ಅದಿಲ್ಲದಿ[ದ್ದ]ರೆ ಅವನ ಮಾರ್ಗವನ್ನೈದುವೆನು" ಎಂದು ನಿಶ್ಚೈಸಿ,

"ಅಯ್ಯ ಪುರುಷನೇ, ಆ ಚಂದನದಾಸನಿಗೆ ಉಂಟಾದ ವಿಪತ್ತಂ ವಿವರಿಸಿ ಹೇಳುವನಾಗು" ಎಂದು ರಾಕ್ಷಸನು ಕೇಳಲು, "ಅಯ್ಯ ಮಾರ್ಗಸ್ಥನೇ, ದೈವವಿಲಾಸವಂ ಏನೆಂದು ಹೇಳಲಿ ? ಚಂದನದಾಸನೆಂಬವನು ಅಮಾತ್ಯರಾಕ್ಷಸನೆಂಬವನಿಗೆ ಪರಮಮಿತ್ರನಂತೆ. ಆತನಿಗೆ ಆತಂಕ ಉಂಟಾದ ಸಮಯದಲ್ಲಿ ತನ್ನ ಗೃಹಜನವಂ ಯಾರಿಗೂ ತಿಳಿಯದಂತೆ ಚಂದನದಾಸನ ವಶವಂ ಮಾಡಿ, ಪುರವಂ ಬಿಟ್ಟು ದೇಶಾಂತರಗತನಾದನೆಂದು ಕೇಳಿ, ಬಳಿಕ ಚಾಣಕ್ಯನು ಚಂದನದಾಸನಂ ಕರೆಕಳುಹಿಸಿ, 'ರಾಕ್ಷಸನ ಗೃಹಜನವಂ ತಂದು ತೋರೆಂ'ದು ನಿರ್ಬಂಧವಂ ಪಡಿಸಲು, ಆಗ ಚಂದನದಾಸನು ತನ್ನ ವಶದಲ್ಲಿ ರಾಕ್ಷಸನ ಗೃಹಜನವಿಲ್ಲದುದರಿಂದಲೋ ಅಥವಾ ಮಿತ್ರಾಭಿಮಾನದಿಂದಲೋ ಚಾಣಕ್ಯನು ಹೇಳಿದುದಕ್ಕೆ ಒಡಂಬಡದೆ ಇರಲು, ಕ್ರುದ್ಧನಾದ ಚಾಣಕ್ಯನು ಆಗ ಚಂದನದಾಸನಂ ಶೂಲಕ್ಕೆ ಹಾಕುವದೆಂದು ಭಟರಿಗೆ ನೇಮಿಸಲು, ಅವರು ಆತನಂ ವಧ್ಯಸ್ಥಾನಕ್ಕೆ ಕರೆದುಕೊಂಡು ಹೋಗುವರೆಂಬ ವಾರ್ತೆಯಂ ಕೇಳಿ, ನಮ್ಮ ವಿಷ್ಣುದಾಸನು ಪುರದ ಹೊರಗೆ ಅಗ್ನಿ

---

೧. ಐಶ್ವರ್ಯಮಂ (ಕ) ೨. ಪರೋಪಕಾರಿ (ಕ)

ಕುಂಡವಂ ಮಾಡುವಂತೆ ಭೃತ್ಯರಿಗೆ ನೇಮಿಸಿ, ತನ್ನ ಗೃಹವಂ ಬಿಟ್ಟು ಹೊರಡುವದಂ ನೋಡಿ, ನಾನು ಈ ಯತ್ನವಂ ಮಾಡಿ ಬಂದೆನು'' ಎನಲು,

ಆ ವಾಕ್ಯವಂ ಕೇಳಿ ರಾಕ್ಷಸನು "ಇನ್ನು ವಿಳಂಬವಂ ಮಾಡಲಾಗದು" ಎಂದು ತಿಳಿದು, "ಎಲೈ ಪುರುಷನೇ, ನೀನು ಜೀವವನ್ನೇಕೆ ತ್ಯಜಿಸಬೇಕು ? 'ಚಂದನದಾಸನಿಗೆ ಬಂದ ವಿಪತ್ತು ಪರಿಹಾರವಾಗುವದೆಂ'ದು ಹೇಳಿ, ವಿಷ್ಣುದಾಸನಂ ನಿಲ್ಲಿಸುವನಾಗು, ನಡೆ" ಎಂದು ಹೇಳಿ, ಶಿಬಿರಾಯನಿಗೆ ಉಂಟಾದಂತೆ ಚಂದನದಾಸನಿಗೆ ಶಾಶ್ವತಯಶಸ್ಸು ಲಬ್ಧವಾಯಿತೆಂದು ಆಲೋಚಿಸುವ ರಾಕ್ಷಸನಂ ನೋಡಿ, ಪಶುಲೋಮಕನು,

''ಅಯ್ಯ ಮಾರ್ಗಸ್ಥನೇ, ಚಂದನದಾಸನ ವಿಪತ್ತು ಹೇಗೆ ಪರಿಹಾರವಾದೀತು ? ನೀನು ಜ್ಯೋತಿಷಜ್ಞನೇ ?'' ಎನಲು, ಆ ಮಾತಿಗೆ ರಾಕ್ಷಸನು ತನ್ನ ಕೈಯ ಖಡ್ಗವಂ ಝುಳಪಿಸುತ, "ಎಲೈ ಪುರುಷನೇ, ನನ್ನ ಖಡ್ಗವೇ ಚಂದನದಾಸನ ವಿಪತ್ತಂ ಪರಿಹರಿಸುವದು'' ಎನಲು, ಅದಂ ನೋಡಿ, "ಈತನು ಯುದ್ಧಮುಖದಿಂದ ಚಂದನದಾಸನಂ ಬಿಡಿಸಬೇಕೆಂದು ಎಣಿಸಿ ಇರುವನಾದುದರಿಂದ ಮುಂದಣ ಕಾರ್ಯವೆಂತಾಗುವದೋ ? ಅದರಿಂದ ಈತನು ಹಿಡಿದಿರುವ ಖಡ್ಗವಂ ಬಿಸುಡುವಂತೆ ಮಾಡಬೇಕೆಂ''ದು ನಿಶ್ಚೈಸಿ,

''ಸ್ವಾಮಿ ಮಾರ್ಗಸ್ಥರೇ, ಚಂದನದಾಸನಿಗೆ ಆಪದ್ಬಂಧುಗಳಾಗಿ ಒದಗಿರುವ ನಿಮ್ಮನ್ನು ಯಾರೆಂದು ತಿಳಿಯಬೇಕು ?'' ಎನಲು, "ಎಲೈ ಪುರುಷನೇ, ಪ್ರಭುಗಳಾದ ನಂದರಂ ನೀಗಲಾಡಿಕೊಂಡು, ಮಿತ್ರನಂ ಆಪತ್ತಿಗೆ ತಗುಲಿಸಿ, ರಾಕ್ಷಸರಂತೆ ದಯಾಹೀನನಾದ ನನ್ನನ್ನು ರಾಕ್ಷಸನೆಂದು ತಿಳಿಯುವನಾಗು" ಎನಲು, ಅಷ್ಟುಮಾತ್ರಕ್ಕೆ ತಿಳಿದುಕೊಂಡವನಂತೆ ಆಶ್ಚರ್ಯಪಡುತ್ತ, ಕೊರಳಿಗೆ ಹಾಕಿ ಇದ್ದ ಹಗ್ಗವಂ ತೆಗೆದು ಬಿಸುಟು,

''ಸ್ವಾಮಿ, ಅಸಹಾಯಶೂರರಾದ ತಮಗೆ ಅಲ್ಲದೆ ಈ ನಿಶ್ಚಯವು ಮತ್ತಾರಿಗುಂಟಾಗುವದು ? ನಮ್ಮೆಲ್ಲರ ವಿಪತ್ತುಗಳೆಲ್ಲವೂ ತೊಲಗಿದವು. ಸಂಶಯವಂ ಬಿಟ್ಟೆನು. ಆದರೆ ಇನ್ನೊಂದು ವಿಜ್ಞಾಪನೆಯುಂಟು. ತಾವು ಈಗ ಶೌರ್ಯಮೂಲಕದಿಂದ ಮಿತ್ರನಾದ ಚಂದನದಾಸನಿಗೆ ಕ್ಷೇಮವನ್ನುಂಟುಮಾಡುವೆವೆಂದು ಶಪಥವಂ ಮಾಡಿದಿರಿ. ಅದರಲ್ಲಿ ಒಂದು ಪ್ರಮಾದ ತೋರುವದು.

ಅದು ಹೇಗೆಂದರೆ, ಮೊದಲು ಚಾಣಕ್ಯನು ಶಕಟದಾಸನೆಂಬವನಂ ಶೂಲಕ್ಕೆ ಹಾಕುವಂತೆ ನೇಮಿಸಿ, ವಧ್ಯಸ್ಥಾನಕ್ಕೆ ಕಳುಹಿಸಲು, ಆ ಸಮಯದಲ್ಲಿ ಒಬ್ಬ ಪುರುಷನಾರೋ ಖಡ್ಗಪಾಣಿಯಾಗಿ ಬಂದು ಕರೆದುಕೊಂಡು ಹೋಗುತ್ತಿರುವ ಘಾತಕರ ಮೇಲೆ ಕಾಣಿಸಿಕೊಂಡು, ಅವರನ್ನೋಡಿಸಿ, ಶಕಟದಾಸನಂ ಬಿಡಿಸಿಕೊಂಡು ಹೋದನಂತೆ. ಅದಂ ಕೇಳಿ ಕ್ರುದ್ಧನಾದ ಚಾಣಕ್ಯನು ಶಕಟದಾಸನಂ ಬಿಟ್ಟ ಅಪರಾಧಕ್ಕೆ ಆ ಘಾತಕರಂ ಸಂಹಾರಗೈಸಿದನು. ಅದು ಕಾರಣ, ಅಂದು ಮೊದಲುಗೊಂಡು ರಾಜಾಪರಾಧಿಗಳಂ ವಧ್ಯಸ್ಥಾನಕ್ಕೆ ಕರೆದುಕೊಂಡು ಹೋಗುವಲ್ಲಿ, ಆ ವಧ್ಯಸ್ಥಾನಕ್ಕೆ ಮತ್ತಾರಾದರೂ ಆಯುಧಪಾಣಿಗಳಾಗಿ ಕಾಣಿಸಿಕೊಂಡರೆ, ಅವರು ಸಮೀಪಗತರಾಗುವದಕ್ಕೆ ಮುನ್ನಲೇ ಯಾವದಂ ನೋಡದೆ ಆ ಕ್ಷಣದಲ್ಲಿಯೇ ರಾಜಾಪರಾಧಿಗಳಂ ಸಂಹರಿಸಿ, ಆ ಬಳಿಕ ಆಯುಧಪಾಣಿಗಳಾಗಿ ಬಂದವರಂ ಬಂಧಿಸಿ ತರುವದೆಂದು ಚಾಣಕ್ಯನು ಆಜ್ಞಾಪಿಸಿ ಇರುವನಂತೆ.

ಈಗ ಚಂದನದಾಸನಂ ವಧ್ಯಸ್ಥಾನಕ್ಕೆ ಕರೆತರುವ ಸಮಯ ಸನ್ನಿಹಿತವಾಗಿ ಇದೆ. ಈಗ

ನೀವು ಚಂದನದಾಸನಂ ರಕ್ಷಿಸುವದು ಸತ್ಯವಾದಡೆ, ಶೂಲ ಇರುವ ಸ್ಥಾನಕ್ಕೆ ನೀವು ಖಡ್ಗ ಪಾಣಿಗಳಾಗಿ ಹೋಗುವದು ಪ್ರಮಾದವಾಗಿ ತೋರುತ್ತಲಿದೆ. ಕಾಲೋಚಿತಜ್ಞರಾದ ನಿಮ್ಮಂ ಥವರಿಗೆ ವಿಶೇಷವಾಗಿ ವಿಜ್ಞಾಪಿಸುವದಕ್ಕೆ ಶಕ್ತನಲ್ಲ" ಎಂದು ಪಶುಲೋಮ[ಕ]ನು ಹೇಳು ತ್ತಿರಲು.

ಅದಂ ಕೇಳಿ ರಾಕ್ಷಸನು ತನ್ನ ಮನಸ್ಸಿನಲ್ಲಿ, "ಮೊದಲು ಚಾಣಕ್ಯನು ಶಕಟದಾಸನಂ ಶೂಲಕ್ಕೆ ಹಾಕುವಂತೆ ನೇಮಿಸಿ ಕಳುಹಿಸಿ, ಸಂಗಡಲೇ ಸಿದ್ಧಾರ್ಥಕನಂ ಕಳುಹಿಸಿ ಬಿಡಿಸಿ ದಂತೆ ಮಾಡಿ ನನ್ನ ಬಳಿಗೆ ಕಳುಹಿಸಿ ಇದ್ದಾನೋ ಎಂದರೆ, ಶಕಟದಾಸನಂ ಬಿಟ್ಟು ಕಳುಹಿದ ಘಾತಕರಂ ಸಂಹರಿಸುವದಕ್ಕೆ ನಿಮಿತ್ತವಿಲ್ಲ. ದ್ವೇಷದಿಂದಲೇ ಶಕಟದಾಸನಂ ವಧ್ಯಸ್ಥಾನಕ್ಕೆ ಕಳುಹಿಸಿದ್ದಲ್ಲಿ ಅದೃಷ್ಟದಿಂದ ತಪ್ಪಿಸಿಕೊಂಡವನಾಗಿ ನನ್ನ ಬಳಿಗೆ ಬಂದು ತನಗೆ ಒದಗಿ ಇದ್ದ ವಿಪತ್ತಂ ಪರಿಹರಿಸಿದನೆಂದು ಸಿದ್ಧಾರ್ಥಕನಿಗೆ ಉಚಿತವಂ ಕೊಡಿಸಿದನೋ ಎಂದು ನಿಶ್ಚೈಸೋಣ ಎಂದರೆ, ಶಕಟದಾಸನು ಚಂದ್ರಗುಪ್ತನ ಕಾರ್ಯಕ್ಕೆ ಅನುಕೂಲವಾಗಿ ಕಪಟ ಕಾಗದವಂ ಬರೆದು ಸಿದ್ಧಾರ್ಥಕನ ಕೈಯಲ್ಲಿ ಕೊಡುವದಕ್ಕೆ ನಿಮಿತ್ತವಿಲ್ಲ. ಯಾವ ತೆರದಲ್ಲಿ ಯೋಚಿಸಿ ನೋಡಿದರೂ ಚಾಣಕ್ಯನ ಕಪಟೋಪಾಯವು ಹೀಗೆಂದು ನಿಶ್ಚೈಸುವದಕ್ಕೆ ಅಶಕ್ಯವು.

ಅದು ಹೇಗಾದರೂ ಆಗಲಿ. ಪ್ರಕೃತ, ಈ ಪುರುಷನು ಹೇಳಿದ ವಾಕ್ಯವಂ ಭಾವಿಸಿ ನೋಡಿ ದರೆ, ಶೌರ್ಯಮೂಲಕದಿಂದ ಚಂದನದಾಸನಿಗೆ ಕ್ಷೇಮ ಉಂಟಾಗಲಾರದು. ಉಪಾಯಾಂ ತರದಿಂದ ನಾವಿರ್ವರೂ ಕ್ಷೇಮವಂತರಾಗೋಣವೆಂದರೆ, ಅದು ಕಾಲಾಂತರಕ್ಕಲ್ಲದೆ ಈಗ ಉಪಯೋಗಿಸಲಾರದು. ನನ್ನ ನಿಮಿತ್ತದಿಂದಲೇ ವಿಪತ್ತಿಗೆ ತಗುಲಿ ನಷ್ಟವಾಗುವ ಚಂದನ ದಾಸನಂ ಕಣ್ಣಿನಿಂದ ನೋಡುವದಕ್ಕಿಂತಲೂ ಅವನಿಗೆ ಉಂಟಾಗುವ [೧]ಶೂಲಾರೋ ಹಣ[೧]ಕ್ಕೆ ನಾನೇ ಸಮ್ಮತನಾಗಿ ಪ್ರಾಣಗಳನ್ನಾದರೂ ತ್ಯಜಿಸಿ, ಮಿತ್ರನಾದ ಚಂದನದಾಸನಂ ಬಂಧನದಿಂದ ಬಿಡಿಸುವದೇ ಉತ್ತಮಧರ್ಮ"ವೆಂದು ತಿಳಿದು, ರಾಕ್ಷಸನು ತನ್ನ ಕೈ ಖಡ್ಗವಂ ಬಿಸುಟು ಶೂಲಸ್ಥಾನಕ್ಕೆ ಹೋಗುತ್ತಿರಲು,

"ಸ್ವಾಮಿ, ತಾವು ಕೊಟ್ಟ ಅಭಯವಚನದಿಂದ ನನಗೆ ಮಿತ್ರನಾದ ವಿಷ್ಣುದಾಸನಿಗೆ ಶಪಥವನ್ನಾದರೂ ಮಾಡಿ ತಡೆದು ಬರುವೆನು" ಎಂದು ಹೇಳಿ, ಪಶುಲೋಮಕನು ತ್ವರಿತದಿಂ ಓಡಿಹೋಗಿ ಚಾಣಕ್ಯನಂ ಕಂಡು, ತನಗೂ ರಾಕ್ಷಸನಿಗೂ ಉಂಟಾದ ಸಂವಾದ ವನ್ನೆಲ್ಲವಂ ಹೇಳಿ, "ರಾಕ್ಷಸನು ಆಯುಧವಂ ಬಿಟ್ಟು ಚಂದನದಾಸನಂ ಉಳುಹಿಸುವೆ ನೆಂದು ಶೂಲಸ್ಥಾನಕ್ಕೆ ಹೋಗಿ ಇರುವನು ; ನಾನು ವ್ಯಾಜಾಂತರದಿಂದ ಬಂದು ಸನ್ನಿಧಿಗೆ ವಿಜ್ಞಾಪಿಸಿದೆನು" ಎಂದು ಹೇಳಲು, ಅದಂ ಕೇಳಿ,

"ಎಲೈ ಪಶುಲೋಮಕನೇ, ಚಂದನದಾಸನಂ ಸಿದ್ಧಾರ್ಥಕನು ವಧ್ಯಸ್ಥಾನಕ್ಕೆ ಕರೆದು ಕೊಂಡು ಹೋದನೋ ಇಲ್ಲವೋ ತಿಳಿದು ಬಾರೆಂ"ದು ನೇಮಿಸಿ ಕಳುಹಿಸಲು, ಆತನು ಹೋಗುತ್ತಿರಲು,

---

೧. ಶೂಲಾರೋಹಣ (ಕ)

ಆಗ ಸಿದ್ಧಾರ್ಥಕನು ಚಾಣಕ್ಯನ ಸಂಕೇತಪ್ರಕಾರ ವೇಷಧಾರಿಗಳಾದ ಘಾತಕರಂ ಕಳುಹಿಸಿ, ಚಂದನದಾಸನಂ ಹಿಡಿದು, ಕೊರಳಿಗೆ ಎಕ್ಕದ ಹೂವಿನ ಮಾಲೆಯಂ ಹಾಕಿಸಿ, ಪರುಷವಾದ್ಯಧ್ವನಿಯಿಂದ ಕೂಗಿ ಸಾರಿಕೊಂಡು ರಾಜಬೀದಿವಿಡಿದು ವಧ್ಯಸ್ಥಾನಕ್ಕೆ ಕರೆದುಕೊಂಡು ಹೋಗುತಿರಲು,

ಆಗ ಪುರಜನವು ನೆರೆದು ನೋಡಿ, ವ್ಯಸನಪಡುತ, ಮಿತ್ರಕಾರ್ಯಕ್ಕೋಸುಗ ಶೂಲಾರೋಹಣಕ್ಕೆ ಸಮ್ಮತನಾಗಿ ಇರುವ ಚಂದನದಾಸನಂ ಶ್ಲಾಘಿಸುತಿರಲು, ಆಗ ಪತಿಯನ್ನಗಲದೆ ಇರುತ್ತಿದ್ದ ಆತನ ಪತ್ನಿಯು ಪುತ್ರಸಮೇತಳಾಗಿ ರೋದನವಂ ಮಾಡುತ ಅವನ ಹಿಂಭಾಗದಲ್ಲಿ ಹೋಗುತಿರಲು, ಅದಂ ನೋಡಿ ಚಂದನದಾಸನು,

"ಎಲೈ ಪ್ರಾಣಪ್ರಿಯಳೇ, ಅನ್ಯಾಯವನ್ನಾಚರಿಸಿ ರಾಜದಂಡನೆಗೆ ಒಳಗಾದವರ ಪತ್ನಿಯರು ರೋದನವಂ ಮಾಡುವಂತೆ ಮಿತ್ರಾರ್ಥವಾಗಿ ಪ್ರಾಣತ್ಯಾಗವಂ ಮಾಡಲೆಣಿಸಿ ಇರುವ ನನ್ನ ನಿಮಿತ್ತವಾಗಿ ವೃಥಾ ರೋದನವನ್ನೇಕೆ ಮಾಡುವೆ ? ಬೇಟೆಗಾರರು ಮೃಗಗಳ ತಾರತಮ್ಯವಂ ನೋಡದಂತೆ ಈ ಘಾತಕರು ಕೊಂಡು ಒಯ್ವರು. ನನ್ನ ಮೇಲಣ ಆಸೆಯಂ ಬಿಟ್ಟು ಹಿಂದಕ್ಕೆ ಹೋಗುವಳಾಗು" ಎಂದು ಪತ್ನಿಗೆ ಹೇಳುತ ಶೂಲಸ್ಥಾನಕ್ಕೆ ಹೋಗುತಿರಲು,

ಆಗ ಒಬ್ಬ ಘಾತಕ ಬಂದು, "ಎಲೈ ಶೆಟ್ಟಿಯೇ, ಶೂಲ ಸಮೀಪವಾಯಿತು. ನೀನು ಅಲಂಕರಿಸಿಕೊಂಡು ಇದ್ದ ಭೂಷಣಂಗಳು ನಮಗೆ ಸಲ್ಲತಕ್ಕವು ; ತೆಗೆದುಕೊಡುವನಾಗು. ನಿನ್ನ ಸ್ವಜನವಂ ಹಿಂದಕ್ಕೆ ಹೋಗುವಂತೆ ನೇಮಿಸುವನಾಗು" ಎನಲು, ಅದಂ ಕೇಳಿ ರೋದನವಂ ಮಾಡುತ್ತಿರುವ ಪತ್ನಿಯಂ ನೋಡಿ,

"ಎಲೈ ಪ್ರಿಯಳೇ, ಇನ್ನು ರೋದನವಂ ಮಾಡುವದಂ ನಿಲ್ಲಿಸಿ, ಪುತ್ರನಂ ಕರೆದುಕೊಂಡು ಗೃಹವಂ ಸೇರುವಳಾಗು. ಮುಂದೆ ನಡೆಯುವ ಘೋರಕರ್ಮವಂ ನೋಡಿ ಈ ಶಿಶುವು ಭೀತಿಪಟ್ಟವನಾಗಿ ಎಂತು ಜೀವಿಸಿಯಾನು ?" ಎಂದು ಪುತ್ರನ ಶಿರಸ್ಸಂ ನೇವರಿಸುತ್ತ ಕಂಬನಿಗಳಂ ತುಂಬುತ್ತಿರಲು,

"ಹಾ ನಾಥನೇ, ಇನ್ನು ನಿನ್ನನ್ನಗಲಿಯೂ ಯಾವ ಪುರುಷಾರ್ಥಕ್ಕೆ ಪ್ರಾಣವಂ ಧರಿಸಿ ಇರಲಿ ? ಸಂಗಡಲೇ ಬರುವೆನು" ಎಂದು ಪಾದದ ಮೇಲೆ ಬಿದ್ದು ಹಂಬಲಿಸುವ ಪತ್ನಿಯಂ ನೋಡಿ, "ಎಲೈ ಮರುಳೇ, ಈ ಬಾಲಕನು ಲೋಕವ್ಯವಹಾರವನ್ನರಿತವನಲ್ಲ. ಈತನಂ ರಕ್ಷಿಸಿಕೊಂಡು ಪ್ರಾಣಧಾರಣವಂ ಮಾಡುವಳಾಗು" ಎಂದು ಚಂದನದಾಸನು ಹೇಳುತ್ತಿರಲು,

"ಹಾ ಕಾಂತನೇ, ಪ್ರವಾಸವಂ ಮಾಡುವರ ಪತ್ನಿಯರುಗಳು ಕೆಲವು ಕಾಲಾಂತರದಲ್ಲಿಯಾದರೂ ಪತಿಮುಖಾವಲೋಕನಾಭಿಲಾಷೆಯಿಂದ ಪ್ರಾಣಧಾರಣೆಯಂ ಮಾಡಿಕೊಂಡಿರುವರು. ಲೋಕಾಂತರವನ್ನೈದುವ ನಿನ್ನನ್ನಗಲಿ ಅನಾಥಳಾಗಿ ಜೀವಿಸಿಕೊಂಡು ಇರುವದಕ್ಕಿಂತಲೂ ನಿನ್ನಂ ಬೆಂಬಿಡದೆ ತೆರಳುವದು ಶ್ರೇಯಸ್ಕರವು. ಸೃಷ್ಟಿಸಿದ ದೈವವೇ ಈ ಬಾಲಕನಂ ರಕ್ಷಿಸುವದು. ಸತ್ಯವು ಪ್ರಾಮಾಣಿಕವಾದರೆ ನಮ್ಮಿರ್ವರಿಗೂ ಸದ್ಗತಿಯಂ ಕೊಡುವದು" ಎಂದು ಹೇಳಿ, ಪುತ್ರನಂ ನೋಡಿ, "ಎಲೈ ಬಾಲಕನೇ, ನಿಮ್ಮ ತಂದೆಯ

ಮುಖವಂ ಈಗಲೇ ಚೆನ್ನಾಗಿ ನೋಡಿ, ನಿನಗೆ ಏನು ಬುದ್ಧಿಯ [೧]ಹೇಳುವರೋ[೧] ಕೇಳಿಕೊಳ್ಳುವನಾಗು" ಎಂದು ಹೇಳುತಿರಲು, ಹಾಗೇ ಆ ಪುತ್ರನು ಪಾದದ ಮೇಲೆ ಬಿದ್ದು ಹೊರಳುತ,

"ಎನ್ನಂ ಪೆತ್ತವನೇ, ಇನ್ನು ಯಾರನ್ನು 'ಅಪ್ಪಾಜಿಯವರೇ' ಎಂದು ಕರೆದು ಭಾವಿಸಲಿ? ಯಾರಿಗೆ ನಮಸ್ಕರಿಸಲಿ ? ವಿಯೋಗವನ್ನೆಂತು ಸಹಿಸಲಿ ? ನಾನು ಜೀವಿಸುವ ತೆರನಾವುದು?" ಎಂದು ರೋದನವಂ ಮಾಡುವ ಪುತ್ರನಂ ನೋಡಿ, "ಎಲೈ ಆಯುಷ್ಮಂತನೇ, ಚಾಣಕ್ಯನೆಂಬ ಶಬ್ದವು ಯಾವ ದೇಶದಲ್ಲಿ ಇಲ್ಲವೋ ಅಲ್ಲಿ ವಾಸವಂ ಮಾಡುತ ಜೀವಿಸಿಕೊಂಡಿರುವನಾಗು. ಅನ್ಯಧರ್ಮವನ್ನಾಚರಿಸದೆ ಸತ್ಯವಂತನಾಗಿ ಇರುವನಾಗು" ಎನಲು,

ಅಷ್ಟರಲ್ಲಿಯೇ ಅಲ್ಲಿಯ ಘಾತಕರು ಬಂದು, "ಎಲೈ ಶೆಟ್ಟಿಯೇ, ಶೂಲವು ಸಿದ್ಧವಾಗಿ ಇದೆ. ಮುಂದೆ ಬಾರೆ"ನಲು, "ಎಲೈ ಅಣ್ಣಂದಿರುಗಳಾ, ಪತಿಯಂ ಶೂಲಕ್ಕೆ ಹಾಕದಿರಿ, ರಕ್ಷಿಸಿ" ಎನಲು, "ಎಲೈ ಪತ್ನಿಯೇ, ಪರಾಧೀನರಾದ ಘಾತಕರಂ ಪ್ರಾರ್ಥಿಸಿದರೇನುಂಟು? ಸ್ವರ್ಗಸ್ಥರಾಗುವರ ಪತ್ನೀಪುತ್ರಾದಿಗಳಂ ದೇವರೇ ರಕ್ಷಿಸಬೇಕಲ್ಲದೆ ವೃಥಾ ಹಂಬಲಿಸಿ ಫಲವೇನು?" ಎನಲು,

ಆಗ ಚಂದನದಾಸನಂ ಘಾತಕರು ಶೂಲಾರೋಹಣವಂ ಮಾಡಿಸುವದಕ್ಕೆ ಸನ್ನಾಹವಂ ಮಾಡುತ್ತಿರಲು, ಆಗ ಪುತ್ರನಂ ನೋಡಿ, "ಎಲೈ ಬಾಲಕನೇ, ಇನ್ನು ಇಲ್ಲಿ ಇರದಿರು. ನಿನ್ನ ತಾಯಂ ಸಮಾಧಾನಗೊಳಿಸುತ, ಹಿಂದಕ್ಕೆ ಕರೆದುಕೊಂಡು ಹೋಗೆಂ"ದೆನಲು,

"ಅಯ್ಯ ತಂದೆಯೇ, ಪರೋಪಕಾರಾರ್ಥವಾಗಿ ಸರ್ವಸ್ವವನ್ನಾದರೂ ವ್ಯಯವಂ ಮಾಡಿ ಕೀರ್ತಿಯಂ ಪಡೆಯುವರುಂಟು. ನೀನಾದರೋ ಪರಾರ್ಥವಾಗಿ ಪ್ರಾಣವಂ ಸಹ ವ್ಯಯವಂ ಮಾಡುವದಕ್ಕೆ ಉದ್ಯುಕ್ತನಾದ ಬಳಿಕ ಇಹಪರದಲ್ಲಿ ಶಾಶ್ವತವಾದ ಯಶಸ್ಸು ಉಂಟಾಯಿತು. ನಾವು ಮಾತ್ರವೇ ಅನಾಥರಾದೆವು" ಎಂದು ಕಂಬನಿಗಳಂ ತುಂಬುತ್ತಿರಲು,

ಆ ಸಮಯದಲ್ಲಿ ಘಾತಕರು ಚಂದನದಾಸನ ಪತ್ನೀಪುತ್ರಾದಿಗಳಂ ನೋಡಿ, "ಯಾರೂ ಇಲ್ಲಿ ಇನ್ನು ಇರಕೂಡದು, ಹೋಗಿ ಹೋಗಿ" ಎಂದು ಘರ್ಜಿಸುತ್ತಿರಲು, ಆಗ ಆತನ ಪತ್ನಿಯು ಉರಸ್ತಾಡನವಂ ಮಾಡುತ್ತ, ಭೂಮಿಯಲ್ಲಿ ಬಿದ್ದು ಹೊರಳುತ್ತಿರಲು, ಆ ಧ್ವನಿಯಂ ರಾಕ್ಷಸನು ಕೇಳಿ, "ಅಹಹಾ ! ಕಾರ್ಯ ಮಿಂಚಿಹೋಗುವದೆಂ"ದು ಅತಿವೇಗದಿಂದ ಬಂದು, ಆತನ ಪತ್ನಿಯ ಶೋಕವಂ ನೋಡಿ,

"ಎಲೈ ತಾಯೇ, ಅಂಜದಿರು ; ಶೋಕವಂ ಬಿಡು ; ನಿನ್ನ ಪತಿಯಂ ಬಿಡಿಸಿ ಕಳುಹಿಸುವೆನು" ಎಂದು ಹೇಳಿ, "ಎಲೈ ಘಾತಕರುಗಳಿರಾ, ಪ್ರಭುಗಳಾದ ನಂದರಂ ಪರಲೋಕವನ್ನೈದಿಸಿ, ಮಿತ್ರನಂ ವಿಪತ್ತಿಗೆ ಗುರಿಮಾಡಿದ ಪಾಪಿಷ್ಠನಾದ ರಾಕ್ಷಸನೆಂಬ ನನ್ನಂ ಶೂಲಾರೋಹಣವಂ ಮಾಡಿಸಬೇಕಲ್ಲದೆ ನಿರಪರಾಧಿಯಾದ ಚಂದನದಾಸನಂ ಕೊಲ್ಲುವರುಂಟೇ? ಶೂಲಾರೋಹಣವು ಚಂದನದಾಸನಿಗೆ ಸಂಭವಿಸಿದ್ದು ನನ್ನ ನಿಮಿತ್ತವಷ್ಟೆ. ಪ್ರಕೃತ, ದಂಡನೆಗೆ ಯೋಗ್ಯನಾದ ನಾನೇ ಬಂದಿರುವಲ್ಲಿ, ಆತನಂ ಏಕೆ ಬಾಧಿಸಬೇಕು ?

---

೧. ನೋಡಿದರು (ಕ)

ನಾನೇ ಶೂಲಾರೋಹಣಕ್ಕೆ ಒಡಂಬಟ್ಟಿರುವೆನು. ಅವನಂ ಬಿಟ್ಟು ಕಳುಹಿಸಿ" ಎನಲು,

ಆಗ ಚಂದನದಾಸನು ಬಂದು, ಶೂಲಾರೋಹಣಕ್ಕೆ ಸಿದ್ಧವಾದುದಂ ನೋಡಿ[೧], "ಸ್ವಾಮಿ ಅಮಾತ್ಯರೇ, ನಾನು ಇಂದಿನವರೆಗೂ ಮಾಡಿದ ಸಾಹಸವಂ ವ್ಯರ್ಥವಂ ಮಾಡಿ, ನೀವು ಮಾಡಿದ್ದ ಮಹಾಪ್ರಯತ್ನವಂ ತೊರೆದು, ಸ್ವಲ್ಪಮನುಷ್ಯನಾದ ನನ್ನ ನಿಮಿತ್ತ ನೀವಿಲ್ಲಿಗೆ ಬರಬಹುದೇ ? ನೀವು ಎಲ್ಲಿಯಾದರೂ ಶ್ರೇಯೋವಂತರಾಗಿ ಇದ್ದವರಾದರೆ, ನಿಮ್ಮ ಛಾಯಾವಲಂಬನದಿಂದ ಬಹುಜನರು ಜೀವಿಸಿಕೊಂಡು ಇರುವರು. ಹೀಗೆ ದುಡುಕ ಬಹುದೇ ?" ಎನಲು,

"ಅಯ್ಯ ಮಿತ್ರನಾದ ಚಂದನದಾಸನೇ, ನೀನು ನನಗೆ ಮಾಡಿದ ಉಪಕಾರಕ್ಕೆ ಪ್ರತ್ಯುಪ ಕಾರವಂ ಎಂದಿಗೆ ತಾನೇ ಮಾಡಿಯೇನು ? ನಾನು ಬಂದುದಕ್ಕೆ ವ್ಯಸನಪಡಬೇಡ. ವಿಹಿತವನ್ನೇ ಆಚರಿಸುತಲಿದೇನೆ" ಎನಲು,

"ಎಲೈ ಘಾತಕರುಗಳಿರಾ, ಸಕಲವಾದ ಅಧರ್ಮಂಗಳಿಗೆ ಆಲಯವಾದ ಈ ಕಲಿಯುಗ ದಲ್ಲಿಯೂ ಕೂಡ, ಚಂದನದಾಸನು ಬೌದ್ಧಮತಸ್ಥನಾದವನಾದರೂ, ನನ್ನ ನಿಮಿತ್ತ, ದೇಹವಂ ಕೊಡುವದಕ್ಕೆ ಯತ್ನವಂ ಮಾಡಿದ ಶಿಬಿರಾಯನಂತೆ ಯಶಸ್ಸಿಗೆ ಪಾತ್ರನಾದನು. ಚಂದ್ರಗುಪ್ತ ಚಾಣಕ್ಯರಿಗೆ ಹೇಳುವರಾಗಿ ; ಇಕೋ ಸಿದ್ಧವಾದೆನು" ಎನಲು,

ಅದಂ ಕೇಳಿ ಘಾತಕರು, "ಸ್ವಾಮಿ ಅಮಾತ್ಯರೇ, ಪ್ರಭುಗಳ ಅಪ್ಪಣೆ ಹೊರತು ನೀವು ಶೂಲಾರೋಹಣವಂ ಮಾಡಕೂಡದು. ಚಂದನದಾಸನಂ ಸಹ ಬಿಡಕೂಡದು. ಮಿತ್ರ ವಾತ್ಸಲ್ಯವಿದ್ದರೆ ನೀವೇ ಹೋಗಿ ಅಪ್ಪಣೆಯಂ ಮಾಡಿಸಿರಿ. ಆ ವರ್ತಮಾನ ಬರುವವರೆಗೂ ಕೈತಡೆದು ಚಂದನದಾಸನಂ ನಿಲ್ಲಿಸಿ ಇರುವೆವು. ಮಾರ್ಗವಂ ತೋರುತ್ತ ಸಂಗಡ ನಾವೇ ಬರುವೆವು" ಎನಲು, "ಹಾಗೇ ಆಗಲಿ, ಪತ್ನೀಪುತ್ರಸಮೇತನಾದ ಈ ಚಂದನದಾಸನನ್ನು ಈ ವೃಕ್ಷದ ನೆರಳಿನಲ್ಲಿ ನಿಲ್ಲಿಸಿ ಇರಿ" ಎಂದು ಹೇಳಿ, ರಾಕ್ಷಸನು ಅಲ್ಲಿಂದ ಹೊರಟು, ಅಲ್ಲಿಯ ಚಂಡಾಲರು ಸಹಿತವಾಗಿ ಚಾಣಕ್ಯನ ಸಮೀಪಕ್ಕೆ ಬರುತ್ತಿರಲು,

ಆಗ ಉತ್ತರದಿಕ್ಕಿನಲ್ಲಿ ಪ್ರಳಯಕಾಲಮೇಘಸಂಘಗಳುದಯಿಸಿದಂತೆ ಭದ್ರಭಟಾದಿ ಸೇನಾಪತಿಗಳ ಸೇನಾಧೂಳೀನಿಕುರುಂಬವು ದಿಕ್ತಟಗಳಂ ಆಕ್ರಮಿಸುತ್ತಲಿರಲು, ಭೇರೀ ಧ್ವನಿಗಳು ಭೂಮಿ ಇಬ್ಭಾಗಿಸುವಂತೆ ಪ್ರಪಂಚವಂ ವ್ಯಾಪಿಸುತ್ತಿರಲು, ಶತ್ರುಗಳ ಆಗಮನ ಶಂಕೆಯಿಂದ ಪ್ರಜಾನಿಕರವೆಲ್ಲವೂ ಭಯಭ್ರಾಂತರಾಗಿ ತಲ್ಲಣಗೊಳುತ್ತಿರಲು, ಅದೆ ಲ್ಲವಂ ರಾಕ್ಷಸನು ನೋಡಿ, "ಚಂದ್ರಗುಪ್ತನ ಮೇಲೆ ಮಲಯಕೇತುವು ದಂಡೆತ್ತಿ ವೈರವಂ ಸಾಧಿಸಲೋಸುಗ ಬರುವನೇನೋ" ಎಂದು ಆಲೋಚಿಸುತ್ತ, ಪ್ರಾಕಾರದ ಮೇಲೆ ಯುದ್ಧ ಯತ್ನವಿಲ್ಲದೆ ನಿರ್ಭೀತರಾಗಿ ವಿನೋದವಂ ನೋಡುತಿರುವ ಜನರಂ ನೋಡಿ, ಸಂಗಡ ಬರುತಿರುವ ಚಂಡಾಲರು ತಮ್ಮೊಳಗೆ ತಾವೇ ಪರಸ್ಪರಮುಖಗಳಂ ನೋಡುತ್ತ ನಗುವದಂ ನೋಡಿ, "ಇದು ಏನೋ ಒಂದು ಛದ್ಮನೆಯು ; ಪ್ರಾಕಾರದ ಮೇಲೆ ಯುದ್ಧ ಸನ್ನಾಹವಿಲ್ಲದೆ ಇರುವದರಿಂದ ಈಗ ಬರುವ ಸೇನೆಯು ಚಂದ್ರಗುಪ್ತನ ಶತ್ರುಗಳ

---

೧. ಇಲ್ಲಿಂದ ಮುಂದೆ ಕ ಪ್ರತಿಯಲ್ಲಿ (ಪತ್ರ ೧೯೮-೨೦೯) ಪಾಠಭೇದಗಳು ಅಲ್ಲಲ್ಲಿ ಕೊಂಚ ಹೆಚ್ಚಾಗಿವೆ.

ಕಡೆ[ಯ]ದಲ್ಲ ; ಭದ್ರಭಟಾದಿ ಸೇನೆಗಳಾಗಿ ಇರಬೇಕು. ಈ ಘಾತಕರು ಸೇನಾಧೂಳಿಯಂ ನೋಡಿ, ಪರಸ್ಪರ ನೋಟಗಳಿಂದ ಹರ್ಷಪಡುತಲಿದಾರೆ. ಇದರ ರಹಸ್ಯ ಈ ಘಾತಕರಿಗೇ ತಿಳಿದಿರಬೇಕು. ಹೀಗಿದ್ದರೆ, ವೇಷಧಾರಿಗಳಾದ ಗೂಢಚಾರರಿವರೇ ಅಹುದು ; ತಿಳಿಯ ಲಾಯಿತು. ಮಲಯಕೇತುವಿನ ಸಮೀಪದಲ್ಲಿ ನಾನಿದ್ದರೆ ಅಶಕ್ಯವಾದುದರಿಂದ ಮೊದಲೇ ಕಪಟಕಾಗದದ ವ್ಯಾಜದಿಂದ ನನ್ನಂ ಹೊರಡಿಸಿ, ಆ ಸಮಯದಲ್ಲಿ ಚಿತ್ರವರ್ಮಾದಿಗಳಂ ನಷ್ಟಗೊಳಿಸಿ, ಅವರ ಸೇನೆಗಳು ಚದುರಿಹೋದುದಂ ತಿಳಿದು, ವಂಚಕರಾದ ಭದ್ರಭಟಾದಿ ಗಳು ಮಲಯಕೇತುವಂ ಸುತ್ತಿಕೊಂಡು ಪಾಟಲೀಪುರಕ್ಕೆ ತರುವರಾಗಿ ಇರಬೇಕು. ಅಲ್ಲ ದಿದ್ದರೆ ಈ ಜಯಭೇರಿ ಶಬ್ದಕ್ಕೆ ನಿಮಿತ್ತವಿಲ್ಲ. ಚಾಣಕ್ಯನು ಒಂದು ಕಾರ್ಯವಂ ಯೋಚಿಸಿ ಮಾಡಿದುದಕ್ಕೆ ಎರಡು ಪ್ರಯೋಜನವು ಲಭ್ಯವಾಯಿತು. ಹಾಗಲ್ಲದೆ, ನೀತಿಕೌಶಲ್ಯನಾದ ನಾನು ಸಿದ್ಧಾರ್ಥಕ ಶಕಟದಾಸರಂ ಆಪ್ತರೆಂದೆಣಿಸಿ ಮೋಸಹೋದಂತೆ, ಮಲಯಕೇತು ಬಾಗುರಾಯಣನಂ ಆಪ್ತನೆಂದು ಭಾವಿಸಿ ಮೋಸಹೋದನು" ಎಂದು ನಿಶ್ಚೈಸುತ್ತ ಚಾಣಕ್ಯನ ಗೃಹಸಮೀಪಕ್ಕೆ ಬರುತ್ತಿರಲು,

ಆಗ ಸಂಗಡ ಬಂದ ಘಾತಕನು ಚಾಣಕ್ಯನ ಗೃಹದ್ವಾರದ ಬಳಿಯಲ್ಲಿ ನಿಂತು ಇರುವ ಶಿಷ್ಯನಂ ದೂರದಿಂದಲೇ ನೋಡಿ, "ವಿಪ್ರಪಾದಂಗಳೇ, ಚಾಣಕ್ಯಪಾದಂಗಳ ನೀತಿಪಾಶ ಬದ್ಧರಾಗಿ ಅಮಾತ್ಯರಾಕ್ಷಸರು ಬಂದು ಇದಾರೆ" ಎಂದು ಕೂಗಿ ಹೇಳಲು, ಆ ಅರ್ಥವಂ ಶಿಷ್ಯರು ಚಾಣಕ್ಯರಿಗೆ ತಿಳುಹಿಸಲು, ಆತನು ತನ್ನ ದರ್ಭೆತಡಿಕೆ ಕದವಂ ವಾರೆಮಾಡಿಕೊಂಡು ನೋಡುತ್ತ, ರಾಕ್ಷಸನಂ ನೋಡಿ, 'ಈತನೇ ರಾಕ್ಷಸ ಅಹುದೆಂ'ದು ನಿಶ್ಚೈಸಿ, ಸಂತೋಷ ಪಟ್ಟು, ಘಾತಕರಂ ನೋಡಿ ಇಂತೆಂದನು :

"ಎಲೈ, ಪ್ರಜ್ವಲಿಸುವ ಅಗ್ನಿಯಂ ಒಡಲಿನಲ್ಲಿ ಕಟ್ಟಿದಂತೆ, ಚಂಡಮಾರುತನಂ ಹಗ್ಗ ದಲ್ಲಿ ಕಟ್ಟಿದಂತೆ, ಮಹಾಸಿಂಹವಂ ಮೈತಡಹಿ ತಂದಂತೆ, ಅಮಾತ್ಯರಾಕ್ಷಸನಂ ಇಲ್ಲಿಗೆ ಹೇಗೆ ಕರೆತಂದಿರಿ ?" ಎನಲು, "ಬುದ್ಧೀ, ಪಾದಂಗಳ ನೀತಿಕೌಶಲ್ಯವೇ ಹೊರತು ಮತ್ತೆ ಯಾರು ಶಕ್ಯರಾದಾರು ?" ಎನಲು, "ಹಾಗಲ್ಲವೈ, ನಂದಕುಲದ್ವೇಷಿಯಾದ ದೈವವೇ ರಾಕ್ಷಸರಂ ಇಲ್ಲಿಗೆ ಕರೆತಂದಿತು ಎನ್ನಬೇಕು" ಎಂದು ಹೇಳುತ್ತಿರಲು,

ಆಗ ರಾಕ್ಷಸನು ಚಾಣಕ್ಯನಂ ನೋಡಿ, "ಈತನೇ ದುರಾತ್ಮನಾದ ಚಾಣಕ್ಯನಾಗಿ ಇರಬೇಕು" ಎಂದು ನಿಶ್ಚೈಸುತ್ತ, ಗುಣದಲ್ಲಿ ದೃಷ್ಟಿಯಿರಿಸಿ ಪುನಃ "ದುರಾತ್ಮನೆಂದು ಹೇಳಬಾರದು. ಸಕಲವಿದ್ಯಾವಾಸಭೂತನಾದುದರಿಂದ, ಮಹಾಭ್ಯುದಯಕಾಲದಲ್ಲಿಯೂ ವಿರಕ್ತನಾದುದರಿಂದ, ಚಾಣಕ್ಯನಂ ಮಹಾತ್ಮನೆನ್ನಬೇಕು. ತೇಜೋವಂತನಾದ ಈ ಬ್ರಾಹ್ಮಣನಂ ಅವಮಾನಗೊಳಿಸಿದುದರಿಂದಲೇ ನಂದರು ನಷ್ಟರಾದರೆಂದು ಹೇಳಬೇಕು. ಈತನ ಸಾಹಸಕ್ಕೆ ಮೆಚ್ಚದಿದ್ದರೆ ನನ್ನಲ್ಲಿ ಮತ್ಸರದೋಷವುಂಟಾದೀತು" ಎಂದು ಯೋಚಿ ಸುತ್ತಿರಲು,

ಚಾಣಕ್ಯನಾದರೋ, "ಈ ಮಹಾಪುರುಷನ ಸಾಹಸಚಿಂತೆಯಿಂದಲೇ [1]ನನಗೆ ನಿದ್ರಾ

---

೧. ಖ ಪ್ರತಿಯಲ್ಲಿ ೨೦೧ನೆಯ ಓಲೆಯಲ್ಲಿ ಎಡಬದಿ ಸ್ವಲ್ಪ ಮುಕ್ಕಾಗಿದೆ. ಪಾಠವನ್ನು ಗ ಪ್ರತಿಯನ್ನು ಆಶ್ರಯಿಸಿ ತುಂಬಿದೆ.

ಹಾರ ರುಚಿಸದೆ, ಚಂದ್ರಗುಪ್ತನ ಸೇನೆಗಳು ಸಹ ಮಹಾಆಯಾಸಪಡುತಲಿದ್ದುವು. ಇಂದಿಗೆ ಈ ಪುರುಷ ದೊರಕಿದನು. ಸಂಕಲ್ಪಿಸಿದ ಅರ್ಥವು ಎನಗೆ ಕೈಗೂಡಿತು" ಎಂದು ಎದ್ದವನಾಗಿ, ರಾಕ್ಷಸನ ಸಮೀಪಕ್ಕೆ ಬಂದು, "ಸ್ವಾಮಿ ಅಮಾತ್ಯ ರಾಕ್ಷಸರೇ, ಚಣಕಪುತ್ರನಾದ ವಿಷ್ಣುಶರ್ಮನಾಮಕನು ನಮಸ್ಕರಿಸುವೆ" ಎಂದು ಚಾಣಕ್ಯ ಹೇಳಲು, "ಅಯ್ಯ ವಿಷ್ಣುಶರ್ಮರೇ, ಚಂಡಾಲಪರಿವಾರದಿಂದ ದೂಷಿತನಾದ ನನಗೆ ನಮಸ್ಕರಿಸಬಹುದೇ, ನೀವು?" ಎನಲು, "ಅಯ್ಯ ಅಮಾತ್ಯರೇ, ಇನ್ನು ಮರೆಮಾಚಿ ಫಲವೇನು ? ನಿಮ್ಮ ಸಂಗಡ ಬಂದವರು ಚಂಡಾಲರಲ್ಲ, ವೇಷಧಾರಿಗಳು" ಎನಲು, "ಹಾಗಾದರೆ ನಾನು ದೂಷಿತನಾಗಲಿಲ್ಲ; ಬ್ರಾಹ್ಮಣೋತ್ತಮರಾದ ನಿಮಗೆ ಸಾಷ್ಟಾಂಗವಾಗಿ ನಮಸ್ಕರಿಸುವೆನು. ಮತ್ತೆ ಯಾರು ಇವರು ?" ಎನಲು,

"ಮೊದಲು ನಿಮ್ಮ ಬಳಿಯಲ್ಲಿ ಇದ್ದ ಸಿದ್ಧಾರ್ಥಕನೆಂಬವನೀತನು. ಮತ್ತೆ ಒಬ್ಬನು ಸಮಿದ್ಧಾರ್ಥಕನು. ನಿಮ್ಮ ಶಕಟದಾಸನಂ ವಂಚಿಸಿ ಕಾಗದವಂ ಬರಸಿದಾತನೇ ಮೊದಲು ಹೇಳಿದವನು. ನಿಮಗೆ ಮಿತ್ರನಾಗಿ ಇದ್ದ ಈ ಕ್ಷಪಣಕನೇ ಈ ಇಂದುಶರ್ಮನೆಂಬ ಬ್ರಾಹ್ಮಣನು. ಬಾಗುರಾಯಣಾದಿಗಳು ನನ್ನಿಂದ ಪ್ರೇಷಿತರಾಗಿ ಮಲಯಕೇತುವಿನ ಬಳಿಯಲ್ಲಿ ಸಮಯವಂ ನೋಡುತ್ತಲಿದ್ದವರಾದರು. ಆಭರಣದ ಸಂಪುಟಗಳು ಮೂರೂ ನಾನು ಕಳುಹಿಸಿ ಇದ್ದುದು. ಮೊದಲು ನಂದರಂ ವಂಚಿಸಿದ ಮಾಸೋಪವಾಸಿಯು ಇವನು. ಇಂದು ಕೊರಳಿಗೆ ಹಗ್ಗವಂ ಹಾಕಿಕೊಂಡಿದ್ದವನು ಈ ಪಶುಲೋಮಕನು. ಚಂದ್ರಗುಪ್ತನಿಗೂ ನಿಮಗೂ ಸಂಧಿಯಂ ರಚಿಸುವ ನಿಮಿತ್ತವಾಗಿ ಇಷ್ಟು ಕಪಟತಂತ್ರವನಾಚರಿಸಬೇಕಾಯಿತಲ್ಲದೆ ನಿಮ್ಮ ಮೇಲೆ ನಮಗೆ ದ್ವೇಷವಿಲ್ಲ. ಚಂದ್ರಗುಪ್ತನು ನಿಮ್ಮಂ ನೋಡಲಿಚ್ಛೈಸುತ್ತಾನೆ. ತಾನಾಗಿ ಬಂದರೂ ಬಂದಾನು" ಎನಲು,

"ಇಷ್ಟು ವೈರವಂ ಬೆಳಸಿ ಮಾಡಿದ ಯತ್ನವೆಲ್ಲವೂ ನಿಷ್ಪ್ರಯೋಜನಗಳಾಗಿ, ಈಗ ಲಜ್ಜೆಯಂ ತ್ಯಜಿಸಿ ಕಾರ್ಯಾರ್ಥವಾಗಿ ಚಂದ್ರಗುಪ್ತನ ಮುಖವಂ ನೋಡುತ ಪ್ರಾರ್ಥಿಸಬೇಕಾಗಿ ಇತ್ತಲ್ಲ. ದೈವಸಂಕಲ್ಪವು ಬಲಿಷ್ಠವು" ಎಂದು ನಿಶ್ವೈಸಿ, "ಅಯ್ಯಾ ಚಾಣಕ್ಯರೇ, ಚಂದ್ರಗುಪ್ತನ ದರ್ಶನಾರ್ಥವಾಗಿಯೇ ನಾನು ಇಲ್ಲಿಗೆ ಬಂದವನಾದೆನು" ಎನಲು,

ಅಷ್ಟರಲ್ಲಿಯೇ ದೂತರು ಹೋಗಿ, "ಚಾಣಕ್ಯ ರಾಕ್ಷಸರಿಗೆ ಪರಸ್ಪರ ಸಲ್ಲಾಪವಾಗುತಲಿದೆ" ಎಂದು ಚಂದ್ರಗುಪ್ತನಿಗೆ ಹೇಳಲು, ಅದಂ ಕೇಳಿ, "ಅವರಿರ್ವರ ಸಂವಾದವೆಂತಾಗುವದೋ, ನೋಡಬೇಕೆಂ"ಬ ಕುತೂಹಲದಿಂದ ಚಂದ್ರಗುಪ್ತನೆದ್ದು, ಪರಿವಾರಸಮೇತವಾಗಿ ಚಾಣಕ್ಯರು ಇರುವ ಎಡೆಗೆ ಬರುತ, "ತಮ್ಮ ಯಜಮಾನರಾದ ಚಾಣಕ್ಯರು ಯುದ್ಧಮುಖದಲ್ಲಿ ಜಯಿಸಲಶಕ್ಯರಾದ ಶತ್ರುಗಳನ್ನು ಯುದ್ಧವು ಇಲ್ಲದಂತೆ ತಮ್ಮ ನೀತಿಕೌಶಲ್ಯದಿಂದಲೇ ಜಯಿಸಿದರು. ಯುದ್ಧಾರ್ಥವಾಗಿ ಸಾಣೆಗಳಂ ಮಾಡಿಸಿದ ಬಾಣಗಳು ರಾಣಿವಾಸದ ಸ್ತ್ರೀಯರುಗಳಂತೆ ಹೊರಗೆ ಮುಖಗಳಂ ತೋರಿಸದೆ ಬತ್ತಳಿಕೆಗಳಲ್ಲಿಯೇ ಇರುತಲಿದೆ. ಚಾಣಕ್ಯರ ನೀತಿಪ್ರಯೋಗವೆಂಬ ಬ್ರಹ್ಮಾಸ್ತ್ರವು ನನಗೆ ಸಹಾಯವಾಗಿ ಇರುವಲ್ಲಿ ಯಾವ ಧೈರ್ಯದಿಂದ ಶತ್ರುಗಳು ಮುಖವನ್ನೆತ್ತಿ ನೋಡ್ಯಾರು?" ಎಂದು ಯೋಚಿಸುತ,

ಚಾಣಕ್ಯರ ಬಳಿಗೆ ಬಂದು ಅವರಿಗೆ ಅಭಿನಂದಿಸಲು, 'ವಿಜಯೀಭವ'ವೆಂದು ಹರಸಿ, "ಅಯ್ಯಾ ಕುಮಾರಕನೇ, ಅಮಾತ್ಯ ರಾಕ್ಷಸರು ಬಂದು ನಿನ್ನ ಕಾಣಲಿಚ್ಛೈಸಿ ಇದಾರೆ.

ಅವರಿಗೂ ನಮಸ್ಕರಿಸು" ಎನಲು, ಅದೇ ರೀತಿಗೆ ಚಂದ್ರಗುಪ್ತನು ಅಭಿವಂದಿಸಲು, "ಅಯ್ಯಾ ಅರಸೇ, ವಿಜಯಶೀಲನಾಗಿ ಸುಖಿಯಾಗಿ ಇರುವನಾಗು" ಎಂದು ಆಶೀರ್ವಾದವಂ ಮಾಡಲು, "ಅಯ್ಯಾ ಅಮಾತ್ಯರೇ, ಯಜಮಾನರಾದ ತಾವಿರ್ವರೂ ನನ್ನ ರಾಜ್ಯತಂತ್ರವಂ ನಿರ್ವಹಿಸಲು ಉದ್ಯುಕ್ತರಾಗಿ ಇರುವಲ್ಲಿ ನಾನು ಜಯಶೀಲನಾಗುವದಕ್ಕೆ ಸಂಶಯವುಂಟೇ ?" ಎನಲು,

ಆ ಮಾತಿಗೆ, "ಈ ಚಂದ್ರಗುಪ್ತನು ನನ್ನನ್ನು ಕೂಡ ತನ್ನ ಬಳಿಯ ಮಂತ್ರಿಯಂ ಮಾಡಿಕೊಳ್ಳುವದಕ್ಕೆ ಸೂಚನೆಯಂ ಮಾಡಿದವನಂತೆ ತೋರುತ್ತೆ. ಈತನು ಜನ್ಮಾದಾರಭ್ಯ ವಿನಯಾದಿ ಗುಣಸಂಪನ್ನನು. ಈತನಲ್ಲಿ ಪ್ರಭುತ್ವಲಕ್ಷಣಗಳಂ ನೋಡಿ, ಈತನ ವಾಕ್ಯದಲ್ಲಿಯೇ ಪ್ರಭುಪದಕ್ಕೆ ಯೋಗ್ಯವಾದ ಲಕ್ಷಣವುಳ್ಳವನು ಎಂದು ತಿಳಿದಿದ್ದೆನು. ವೃದ್ಧ ರಾಯನಿಗೆ ಪ್ರಿಯಪತ್ನೀ ಪೌತ್ರನಾದುದರಿಂದ ಸಂದೇಹವುಂಟಾಗಿ ಇತ್ತು. ದೈವಸಂಕಲ್ಪವು ಹ್ಯಾಗೆ ಇರುವದೋ ? ಮರಿಯಾನೆಯೇ ಯೂಥಪತಿಯಾದಂತೆ ಪ್ರಭುವಾದನು. ಮತ್ಸರದಿಂದ ಈತನಲ್ಲಿ ವಿಕಲ್ಪ ತೋರಿ ಇತ್ತಲ್ಲದೆ ಸಹಜವಲ್ಲ.

ಹಾಗೇ ಈ ಚಾಣಕ್ಯನು ಯಶೋವಂತನು. ಬುದ್ಧಿವಂತನಾದ ಈ ಚಂದ್ರಗುಪ್ತನಂ ಪರಿಗ್ರಹಿಸಿದುದರಿಂದ ಖ್ಯಾತಿಯಂ ಪಡೆದನು. ಲೋಕದಲ್ಲಿ ಪ್ರಭುವಾದವನು ಜನಗಳಿಗೆ ಅಧಿಕಾರವಂ ನೇಮಿಸುವಲ್ಲಿ ಪುರುಷಲಕ್ಷಣವಂ ತಿಳಿದು ನೇಮಿಸಬೇಕು. ಕೆಲವರು ಆಕಾರದಲ್ಲಿ ಸೌಮ್ಯರಾಗಿ ಹೃದಯಶುದ್ಧಿಯಿಲ್ಲದೆ ಇರುವರು. ಕೆಲವರು ಆಕಾರದಲ್ಲಿ ಕುರೂಪಿಗಳಾಗಿ ಪರಿಶುದ್ಧಹೃದಯರಾಗಿ ಇರುವರು. ಹೀಗೇ ಉಭಯಮಿಶ್ರವಾಗಿಯೂ ಇರುವರು. ಅದರಿಂದ ಬ್ರಹ್ಮತತ್ವದಂತೆ ಪುರುಷನಿಷ್ಠಗುಣಗಳು ತಿಳಿಯಲಶಕ್ಯವಾಗಿ ಇರುವವು.

ಸಮಯವಿಶೇಷಗಳಲ್ಲಿ ಕಾಮಲೋಭಾದಿಗಳಿಂದ ದೋಷವೇ ಗುಣದಂತೆ, ಗುಣವೇ ದೋಷವಾಗುವವು. ಇದರ ನಿಶ್ಚಯ ಹೀಗೆಂದು ತಿಳಿಯಲಶಕ್ಯವಾದರೂ, ಅಧಿಕಾರವಂ ನೇಮಿಸುವಲ್ಲಿ ಪುರುಷನ ಶೀಲ ಕುಲ ಸ್ವಭಾವವಂ ಪ್ರತ್ಯಕ್ಷ ಪರೋಕ್ಷದಲ್ಲಿ ವಿಚಾರಿಸಿ ತಿಳಿದು, ನಿರ್ವಾಹವನ್ನರಿತು ಅಧಿಕಾರಗಳಂ ನೇಮಿಸಿ, ಕಾರ್ಯಾನುಸಾರ ಸಂಬಳ ಸನ್ಮಾನಂಗಳಂ ಮಾಡುತ, ಮತ್ತರಾದವರಂ ಶಿಕ್ಷಿಸುತ, ಮಾನ್ಯರಿಗೆ ಅವಮಾನವನ್ನಾಚರಿಸದೆ, ಅಪೂಜ್ಯರಂ ಪೂಜಿಸದೆ, ಕಾರ್ಯದಲ್ಲಿ ಜನಗಳಿಗೆ ಉತ್ಸಾಹ ಹೆಚ್ಚುವಂತೆ ಮಾಡುತ, ಅಪ್ರಮತ್ತನಾಗಿ, ನೀತಿಜ್ಞನಾಗಿ, ರಾಜ್ಯಭಾರವಂ ನಿರ್ವಹಿಸುತಲಿರುವ ಅರಸು ತಾನು ಸನ್ಮಾರ್ಗದಿಂ ನಡೆದು ಜನರಂ ನಡಸಿದಂತೆ, ಅವರು ಕಾರ್ಯವು ನಿರ್ವಹಿಸುತಲಿರುವರು. ಆ ಪ್ರಭುವಿನ ಚಿತ್ತಸ್ಥೈರ್ಯದಂತೆ ಲಕ್ಷ್ಮಿಯು ಸ್ಥೈರ್ಯವಾಗಿ ಇರುವಳು.

ಹಾಗಲ್ಲದೆ ಜನಗಳ ಶೀಲಸ್ವಭಾವವಂ ವಿಚಾರಿಸದೆ ಮನಬಂದಂತೆ ಕೊಡುತ, ಕಾರ್ಯವಂ ನೇಮಿಸಿ, ಆದಾಯ ವ್ಯಯಂಗಳನ್ನರಿಯದೆ, ಕರ್ತವ್ಯವಂ ಬಿಟ್ಟು, ಅರಸನಾಗಿ ಇರುವ ಅರಸಿನ ರಾಜ್ಯದಲ್ಲಿ ಅಪೂಜ್ಯರಿಗೆ ಬಹುಮಾನವು, ನಿರ್ವಾಹಿಗಳಿಗಪಮಾನವು ಉಂಟಾಗಿ, ಪ್ರಜಾಪೀಡನೆಯೂ [೧]ದುರ್ಭಿಕ್ಷವೂ ಭಯವೂ[೧] ಸಂಭವಿಸಿ, ಮತ್ತರಾದ ಜನರು ದ್ರವ್ಯವಂತರಾಗಿ ಸ್ವಾಮಿಯಂ ಲಕ್ಷೀಕರಿಸದೆ ಪ್ರಭುತ್ವವಂ ಅಪೇಕ್ಷಿಸುತ್ತ, ಶಕ್ಯ

---

೧. ದುರ್ಭಿಕ್ಷಭಯವೂ (ಕ)

ವಿಲ್ಲದಿದ್ದರೆ ಕಾರ್ಯಂಗಳಂ ಕೆಡಿಸುತ್ತ, ಸ್ವಾಮಿಗೆ ಅಪಯಶಸ್ಸನ್ನೇ ಹಾರೈಸುತಿರುವರು. ಅದರಿಂದ ಪುರುಷಲಕ್ಷಣವೆಂಬುವದು ಬಹುವಿಮರ್ಶಸಾಧ್ಯವು.

ಪ್ರಕೃತವೇನೆಂದರೆ, ಇಷ್ಟು ಶ್ರಮವೇನೂ ಇಲ್ಲದೆ ಅನಾಯಾಸವಾಗಿ ದೊರಕಿದ ಬುದ್ಧಿ ಸಂಪನ್ನನಾದ ಚಾಣಕ್ಯನಂ ಚಂದ್ರಗುಪ್ತನಲ್ಲಿ ಮಂತ್ರಿಯಾಗಿ ಮಾಡಿ ಇರುವದು ಈಶ್ವರ ಸಂಘಟನೆಯಲ್ಲದೆ ಮನುಷ್ಯಪ್ರಯತ್ನವಲ್ಲ. ನಾನಾದರೋ ವಿವೇಕಶೂನ್ಯನಾದ ಮಲಯ ಕೇತುವಂ ಪರಿಗ್ರಹಿಸಿ ಈ ರೀತಿಯಾದೆನು. ಲೋಕದಲ್ಲಿ ಜಯಶೀಲನಾಗಿ ಉತ್ಸಾಹವಂತ ನಾಗಿ ವಿವೇಕಶಾಲಿಯಾದ ಅರಸನ್ನು ಪರಿಗ್ರಹಿಸಿ ನೀತಿಯಂ ಪ್ರಯೋಗಿಸುವ ಮಂತ್ರಿಗೆ ಖ್ಯಾತಿ ಉಂಟಾಗುವದು. ಪೌರುಷಹೀನನಾಗಿ ಚಪಲಚಿತ್ತನಾಗಿ ದೂರದೃಷ್ಟಿಯಿಲ್ಲದ ಅರಸು ಉಭಯತೀರಂಗಳಂ ಕೆಡಹುತ, ಅಲ್ಲಿಯ ವೃಕ್ಷಂಗಳಂ ಮೇಲೆ ಕೆಡಹಿಕೊಳ್ಳುತ ವೇಗದಿಂ ಹೋಗುವ ಕ್ಷುದ್ರನದಿಯಂತೆ ತಾನು ಭ್ರಷ್ಟನಾಗಿ, ಸೇರಿದವರಂ ಕೆಡಿಸಿ ಲೋಕಾಪ ವಾದಕ್ಕೆ ಪಾತ್ರನಾಗುವನು" ಎಂದು ರಾಕ್ಷಸನು ಆಲೋಚಿಸುತ್ತಿರಲು,

ಚಾಣಕ್ಯನು "ಅಯ್ಯ ಅಮಾತ್ಯರೇ, ಚಂದ್ರಗುಪ್ತನು ಸಭೆಯಲ್ಲಿ ನಿಮ್ಮ ಗುಣ ಪ್ರಶಂಸೆಯಂ ಬಹುವಾಗಿ ಮಾಡಿ ಇರುವನಾದುದರಿಂದ ನಿಮ್ಮಲ್ಲಿ ಅನುರಾಗ ಬಹುವಾಗಿ ಇರುವದು. ನೀವು ಬಂದುದು ಚೆನ್ನಾಯಿತು. ವೃದ್ಧರಾಯನಿಗೆ ಪೌತ್ರನಾಗಿ ಯಶೋವಂತ ನಾದ ಈ ಚಂದ್ರಗುಪ್ತನಲ್ಲಿ ಪೂರ್ವಾಭಿಮಾನವುಂಟಾಗಿ ನೋಡಬೇಕೆಂದು ಬಂದಿರೋ ಅಥವಾ ಮಿತ್ರನಾದ ಚಂದನದಾಸನ ಕ್ಷೇಮಕ್ಕೋಸುಗ ಬಂದಿರೋ ? ಹೇಳಿ" ಎನಲು,

"ಅಯ್ಯ ಚಾಣಕ್ಯರೇ, ಕ್ಷೇಮದಾಯಕನಾದ ಪ್ರಭುದರ್ಶನವಾದ ಬಳಿಕ ಚಂದನದಾಸ ನಿಗೆ ಕ್ಷೇಮಲಾಭ ಹೇಗೆ ಉಂಟಾಗದೆ ಇರುವದು ?" ಎನಲು, "ಆ ಅರ್ಥವು ನಿಮಗೆ ಅಭಿಮತವಾದ ಪಕ್ಷದಲ್ಲಿ ನೀವು ಚಂದ್ರಗುಪ್ತನಲ್ಲಿ ಅನುಗ್ರಹಿಸಿ ಪ್ರಾಧಾನ್ಯಶಸ್ತ್ರವಂ ಪರಿಗ್ರಹಿಸಿದರೆ ಚಂದನದಾಸನಿಗೆ ಕ್ಷೇಮವುಂಟಾಗುವದು" ಎಂದು ಚಾಣಕ್ಯ ಹೇಳಲು, ಆ ಮಾತಿಗೆ, "ಅಯ್ಯ ಚಾಣಕ್ಯರೇ, ನಿಮ್ಮಿಂದ ಪರಿಗ್ರಹೀತವಾದ ಪ್ರಾಧಾನ್ಯಶಸ್ತ್ರವಂ ಪರಿ ಗ್ರಹಿಸಿಬೇಕಾದರೆ, ನಿಮ್ಮ ಬುದ್ಧಿಕೌಶಲ್ಯದಂತೆ ನನ್ನ ಬುದ್ಧಿಗೆ ಕೌಶಲ್ಯ ಸಾ[ಲ]ದುದರಿಂದ, ಪ್ರಾಧಾನ್ಯಶಸ್ತ್ರವಂ ಪರಿಗ್ರಹಿಸಿದರೆ ನಿರ್ವಹಿಸಲಶಕ್ಯವಾದುದರಿಂದ, ಮಂತ್ರಿಪದವು [ನ]ಮಗೆ ಹೇಗೆ ಯೋಗ್ಯವಹುದು ?" ಎನಲು,

ಆ ಮಾತಿಗೆ "ಅಯ್ಯ ಅಮಾತ್ಯರೇ, ನಿಮ್ಮ ಸಾಹಸವಂ ನಾವು ಕಂಡು ಕೇಳಿ ಬಲ್ಲೆವು, ಗರ್ವಿಸಿದ ಶತ್ರುಗಳ ಗರ್ವಭಂಗವಂ ಮಾಡುವ ಮಹಾಶೂರರಾದ ನಿಮ್ಮ ಪರಾಕ್ರಮ ವಿಜೃಂಭಣೆಯಿಂದ ನಮ್ಮ ಸೇನಾಜನರು ಅಶ್ವಾದಿ ವಾಹನಗಳನ್ನೇರಿ, ಅನ್ನಾಹಾರಕ್ಕೆ ಸಮಯ ದೊರಕದೆ, ನಿಂತಲ್ಲಿ ನಿಲ್ಲುವದಕ್ಕಿಲ್ಲದೆ, ಕಡಿವಾಣ ಜೀನುಗಳಂ ಬದಲಾಯಿಸದೆ, ನಿದ್ರಾರಹಿತರಾಗಿ ಸುತ್ತುತ, ಕೃಶಾಂಗರಾಗಿ ಶ್ರಮಪಡುತಲಿರುವರು.

ಹೀಗೆ ಶತ್ರು[1]ಜನಕ್ಕೆ[1] ಆತಂಕವನ್ನುಂಟುಮಾಡುತ್ತಲಿರುವ ನೀವೇ ಪ್ರಾಧಾನ್ಯಕ್ಕೆ ಯೋಗ್ಯರಲ್ಲದ ಬಳಿಕ, ಮತ್ತೆ ಯಾರು ಯೋಗ್ಯರಾದಾರು ? ನಿಮ್ಮ ಮಿತ್ರನಾದ ಚಂದನ ದಾಸನು ಜೀವಂತನಾಗಿ ಇರಬೇಕಾದರೆ ಬದಲುಮಾತುಗಳಂ ಹೇಳದೆ, ನೀವು ಪ್ರಾಧಾನ್ಯಕ್ಕೆ

---

೧. ಜನಂಗಳಿಗೆ (ಕ)

ಸಮ್ಮತಿಸಬೇಕು" ಎನಲು,

ಆ ಮಾತಿಗೆ ರಾಕ್ಷಸನು ತನ್ನ ಮನಸ್ಸಿನಲ್ಲಿ, "ನಂದರಿಗೆ ನನ್ನಲ್ಲಿ ಇದ್ದ ವಿಶ್ವಾಸವಂ ಸ್ಮರಿಸಿಕೊಂಡರೆ, ಮತ್ತೊಬ್ಬ ಪ್ರಭುವಂ ಸೇವಿಸುವದಕ್ಕೆ ಮನಸ್ಸು ಒಡಂಬಡದು.[೧] ಮಿತ್ರನಾದ ಚಂದನದಾಸನ ಕ್ಷೇಮಕ್ಕೋಸುಗ ನಂದವೈರಿಯಾದರೂ ಚಂದ್ರಗುಪ್ತನಂ ಸೇವಿಸಬೇಕಾಗಿ ಸಂಭವಿಸಿತು. ದೈವವಿಲಾಸವು ಅನ್ಯಾದೃಶವು[೨] ; ಮೀರುವವರಾರು ?" ಎಂದು ಚಿಂತಿಸುತ್ತ, ಚಾಣಕ್ಯರಂ ಕುರಿತು,

"ಅಯ್ಯ ಚಾಣಕ್ಯರೇ, ಯಾವ ಕಾರ್ಯಕ್ಕಾದರೂ ಒಡಂಬಡುವದಕ್ಕೆ ಕಾರಣವಾದ ಮಿತ್ರ ಕ್ಷೇಮಲಾಭವೇ ಪರಮಲಾಭವಾದುದರಿಂದ, ನೀವು ಹೇಳಿದಂತೆ ಕೇಳುವೆನು" ಎಂದು ರಾಕ್ಷಸನು ಹೇಳುತ್ತಿರಲು, ಆಗ "ಅಯ್ಯ ಅರಸೇ, ಇನ್ನು ತಡವೇತಕ್ಕೆ ? ಪ್ರಾಧಾನ್ಯಶಸ್ತ್ರವಂ ತರಿಸಿ ಅಮಾತ್ಯರಿಗೆ ನಿನ್ನ ಹಸ್ತದಿಂದಲೇ ಕೊಟ್ಟು, ಅನಾಯಾಸದಿಂದ ರಾಜ್ಯವಿಚಾರವಂ ಮಾಡುತ್ತ, ಸುಖದಿಂದ ಇರುವವನಾಗು. ಅರಣ್ಯವಾಸಿಗಳಾದ ನಮ್ಮನ್ನಪೇಕ್ಷಿಸದೆ ಇನ್ನು ನೀವಿರ್ವರೂ ಕ್ಷೀರದಲ್ಲಿ ಉದಕ ಬೆರೆದಂತೆ ಐಕಮತ್ಯದಿಂದಿರುತ್ತ ಅಧಿಕವಾಗಿ ಯಶಸ್ಸನ್ನಾರ್ಜಿಸುವರಾಗಿ" ಎಂದು ಹೇಳಿ, ದಿವ್ಯಾಭರಣ ವಸ್ತ್ರ ಗಂಧ ಮಾಲ್ಯಗಳಿಂದ ರಾಕ್ಷಸನಂ ಅಲಂಕರಿಸಿ, ಪ್ರಾಧಾನ್ಯಶಸ್ತ್ರವಂ ಚಂದ್ರಗುಪ್ತನ ಹಸ್ತದಿಂದ ಅಮಾತ್ಯರಿಗೆ ಕೊಡಿಸಲು, ಆಗ ಶಂಖ ಭೇರೀ ನಿಸ್ಸಾಳ ಮೊದಲಾದ ವಾದ್ಯಗಳು ಭೋರಿಡುತ್ತಿರಲು,

ಆಗ ಅಮಾತ್ಯರು ಪ್ರಾಧಾನ್ಯಶಸ್ತ್ರವಂ ಗ್ರಹಿಸಿ, ಚಂದ್ರಗುಪ್ತ ಚಾಣಕ್ಯರಿಗೆ ಕೈಗಳಂ ಮುಗಿದು, "ಇಂದಿಗೆ ನಂದರ ಸ್ಮರಣೆ ಸಮಾಪ್ತವಾಯಿತೆಂ"ದು ತಿಳಿದು, ಉಚಿತಪ್ರಕಾರ ಕುಳ್ಳಿರಲು,

ಆಗ ಚಾಣಕ್ಯನು ತಾನು ಕೃತಕೃತ್ಯನಾದೆನೆಂದು ಸಂತೋಷಪಡುತ್ತ, "ಅಯ್ಯ ಅರಸೇ, ಅಮಾತ್ಯ ರಾಕ್ಷಸರು ನಿನ್ನಲ್ಲಿ ಮಂತ್ರಿಪದವಂ ಪಡೆ[ದ]ರು. ಇನ್ನು ಬಾಲಚಂದ್ರನಂತೆ ದಿನೇ ದಿನೇ ಪ್ರವೃದ್ಧಮಾನವಾಗುತ್ತಿರುವೆ" ಎನಲು, ಆ ಮಾತಿಗೆ "ಮಹಾತ್ಮರಾದ ತಮ್ಮ ಕೃಪೆಯಿಂದಲೇ ನಾನು ಸಕಲಯಶಸ್ಸಂ ಪಡೆದೆನು" ಎನಲು,

ಆ ಸಮಯದಲ್ಲಿ ಒಬ್ಬ ದೂತನು ಬಂದು ಕೈಗಳಂ ಮುಗಿದು, "ಸ್ವಾಮಿ, ಭದ್ರಭಟಾದಿ ಸೇನಾಧಿಪತಿಗಳು ಮಲಯಕೇತುವಂ ಕರೆತಂದು ಪುರದ್ವಾರದ ಬಳಿಯಲ್ಲಿ ಇಳುಹಿ ಇದಾರೆ. 'ಮುಂದೆ ಏನು ಅಪ್ಪಣೆ ?' ಎಂದು ಬಿನ್ನೈಸ ಹೇಳಿದರು" ಎನಲು, ಆ ದೂತನಂ ನೋಡಿ ಚಾಣಕ್ಯನು "ಎಲೈ ಯಾವ ಕಾರ್ಯವಿದ್ದರೂ ಅಮಾತ್ಯ ರಾಕ್ಷಸರಿಗೆ ಬಿನ್ನೈಸುವರಾಗಿ. ಅದಕ್ಕೆ ಉತ್ತರವಂ ಈ ಅಮಾತ್ಯರೇ ಹೇಳುವರು" ಎನಲು, ಆ ಮಾತಿಗೆ "ಈಗ ಭೃತ್ಯಭಾವದಲ್ಲಿ ಪ್ರಕೃತಕಾರ್ಯವಂ ಅರಸಿಗೆ ಅರಿಕೆ ಮಾಡಿಕೊಳ್ಳುವಂತೆ ಚಾಣಕ್ಯರ ಮನೋಭಾವ ವಿದಿತವಾಯಿತು. ಇನ್ನು ಲಜ್ಜೆಪಟ್ಟರೆ ಸಾಗುವದೇ ?" ಎಂದು ತಿಳಿದು, "ಸ್ವಾಮಿ ಚಂದ್ರಗುಪ್ತ ಸಾರ್ವಭೌಮರೇ, ನಾನು ಮಲಯಕೇತುವಿನ ಬಳಿಯಲ್ಲಿ ಕೆಲವು ದಿನ ಇದ್ದುದನ್ನು ನೀವೇ ತಿಳಿದು ಇರುವಿರಿಯಷ್ಟೇ. ಶತ್ರುಭಾವದಲ್ಲಿ ಇದ್ದವನಾದರೂ ನಿಮ್ಮ ವಶನಾದ ಬಳಿಕ ಮಲಯಕೇತುವಂ ಸಂರಕ್ಷಿಸಬೇಕು" ಎಂದು ರಾಕ್ಷಸನು ಎದ್ದು,

---

೧. ದು ಆದರೆ ಪರಮಾಪ್ತತೆಯಿಂದ ನನಗೆ (ಕ) ೨. ಏದಂ (ಕ)

ಕೈಗಳಂ ಮುಗಿದು ವಿಜ್ಞಾಪಿಸಲು, [ಚಾಣಕ್ಯನು]

"ಅಯ್ಯ ಅರಸೇ, ಅಮಾತ್ಯ ರಾಕ್ಷಸರ ಪ್ರಥಮವಿಜ್ಞಾಪನೆಯಂ ನಡಸಿಕೊಡಬೇಕು" ಎಂದು ಹೇಳಿ, ಬಂದು ಇದ್ದ ದೂತನಂ ನೋಡಿ, "ಎಲೈ, ಈಗ ಅಮಾತ್ಯ ರಾಕ್ಷಸರು ಪ್ರಾಧಾನ್ಯಕ್ಕೆ ಒಡಂಬಟ್ಟು ಮಲಯಕೇತುವಿನ ವಿಷಯವಾಗಿ ಪ್ರಭುಗಳಿಗೆ ವಿಜ್ಞಾಪಿಸಿ, ಆತನ ಪಿತೃಪಿತಾಮಹಾರ್ಜಿತವಾದ ಪರ್ವತರಾಜ್ಯಾಧಿಪತ್ಯವು ಮೊದಲಿನಂತೆ ಆತನಿಗೆ ನಡೆದು ಇರುವಂತೆ ಅಪ್ಪಣೆ ಮಾಡಿಸಿ ಇರುವದರಿಂದ, 'ಆತನಂ ರಾಜ್ಯಕ್ಕೆ ಕಳುಹಿಸುವ ಪರ್ಯಂತವೂ ಬಿಡಾರದಲ್ಲಿ ಇಳುಹಿಸಿ, ಹೇಳಿದಂತೆ ಕಾದುಕೊಂಡು ಇರತಕ್ಕದು' ಎಂದು ಭದ್ರಭಟಾದಿಗಳಿಗೆ ಹೇಳುವನಾಗು" ಎನಲು, 'ಬುದ್ಧೀ' ಎಂದು ಹೋಗಿ, ಆ ದೂತನು ಚಾಣಕ್ಯರು ಹೇಳಿದರ್ಥವಂ ಭದ್ರಭಟಾದಿಗಳಿಗೆ ಹೇಳಲು, ಅದೇ ರೀತಿಗೆ ರಾಜಾರ್ಹವಾದ ಬಿಡಾರದಲ್ಲಿ ಮಲಯಕೇತುವಂ ಇಳುಹಿಸಿ ಬಂದು, ಚಾಣಕ್ಯ ಚಂದ್ರಗುಪ್ತರಿಗೆ ನಮಸ್ಕರಿಸಿ, ಅವರ ಅಪ್ಪಣೆಯಿಂದ ಸ್ವಸ್ಥಾನವನ್ನೈದುತ್ತಿರಲು,

ಮತ್ತೆ ಒಬ್ಬ ದೂತನಂ ಕರೆದು, "ರಾಕ್ಷಸರು ಮಂತ್ರಿಪದಕ್ಕೆ ಒಡಂಬಟ್ಟುದರಿಂದ ಸುಪ್ರೀತರಾದ ಚಂದ್ರಗುಪ್ತರು ವರ್ತಕನಾದ ಚಂದನದಾಸನಿಗೆ ತಮ್ಮ ಮಹಾರಾಜ್ಯದಲ್ಲಿ ಶ್ರೇಷ್ಠವಾದ ಶೆಟ್ಟಿತನವಂ ಕೊಡುವಂತೆ ನಿಶ್ಚೈಸಿ ಇರುವದರಿಂದ, ಅವರ ಮನೆಯ ವಸ್ತು ವಾಹನಂಗಳೆಲ್ಲವಂ ತೆಗೆದುಕೊಂಡು ಇದ್ದುದಂ ಅವನ ವಶವಂ ಮಾಡಿ, 'ಆತನನ್ನು ವಧ್ಯಸ್ಥಾನದಿಂದ ಕರೆತಂದು, ನೂತನ ವಸ್ತ್ರಾದಿಗಳಿಂದಲಂಕರಿಸಿ, ಆಸ್ಥಾನದ ಬಳಿಯಲ್ಲಿ ಕಾದಿರುವಂತೆ ನೇಮಿಸೆಂ'ದು ದುರ್ಗಪಾಲನಿಗೆ ಹೇಳುವನಾಗು" ಎನಲು, 'ಬುದ್ಧೀ' ಎಂದು ಹೋಗಿ, ಚಾಣಕ್ಯರು ಹೇಳಿದರ್ಥವಂ ದುರ್ಗಪಾಲನಿಗೆ ಹೇಳಿ, ಆತನ ಪದಾರ್ಥವೆಲ್ಲವಂ ಆತನ ಗೃಹಕ್ಕೆ ಸೇರಿಸಿ, ಆ ಚಂದನದಾಸನಂ ವಧ್ಯಸ್ಥಾನದಿಂದ ಕರೆತಂದು, ಸ್ನಾನಾದಿಗಳಂ ಮಾಡಿಸಿ, ನೂತನವಸ್ತ್ರಾದಿಗಳಿಂದ ಅಲಂಕೃತನಾದ ಚಂದನದಾಸನಿಗೆ ನಾಳೆ ರಾಜಸಭೆಗೆ ಬರುವಂತೆ ನೇಮಿಸಿ, ಆತನ ಗೃಹಕ್ಕೆ ಅವನ ಪತ್ನಿ ಮತ್ತು ಪುತ್ರಸಮೇತವಾಗಿ ಕಳುಹಿಸಿ, ತಾನು ಮಾಡಿಸಿ ಬಂದು, ತಾನು ಮಾಡಿದುದಂ ಚಾಣಕ್ಯರಿಗೆ ವಿಜ್ಞಾಪಿಸುತ್ತಿರಲು,

ಆಗ "ಅಯ್ಯ ಅಮಾತ್ಯರೇ, ಇಲ್ಲಿಂದ ಮುಂದೆ ಆಗತಕ್ಕ ಕಾರ್ಯವೇನಿದ್ದರೂ ನಿಮ್ಮನ್ನೇ ಕೂಡಿ ಇರುವದು. ನಮಗೆ ಆಹ್ನಿಕದ ವೇಳೆ ಸನ್ನಿಹಿತವಾಗುತ್ತಲಿದೆ. ಹೋಗಿ ಬನ್ನಿ" ಎಂದು ಹೇಳಿ, ರಾಕ್ಷಸನಂ ಚಂದ್ರಗುಪ್ತನಂ ಸಹ ಅವರ ಗೃಹಕ್ಕೆ ಕಳುಹಿಸಿ, ಚಾಣಕ್ಯನು ಆಹ್ನಿಕಕ್ಕೆ ಹೋಗುತ್ತಲಿದ್ದನು.

ಆ ಮಾರನೆ ದಿವಸ ರಾಕ್ಷಸನೆದ್ದು, ಸ್ನಾನಾದಿ ನಿತ್ಯಕರ್ಮವಂ ನೆರವೇರಿಸಿ, ಅಲಂಕೃತನಾಗಿ ಬಂದು, ಚಂದ್ರಗುಪ್ತನಂ ಕಂಡು, ಆಸ್ಥಾನದಲ್ಲಿ ಕುಳಿತು, ಬಾಗುರಾಯಣಾದಿ ಅಧಿಕಾರಿಗಳಂ ಕರೆಕಳುಹಿಸಿಕೊಂಡು, ಬಾಗುರಾಯಣನಂ ಕುರಿತು ಇಂತೆಂದನು :

"ಅಯ್ಯ ಸೇನಾಪತಿಯೇ, ಚಾಣಕ್ಯರು ಚಂದ್ರಗುಪ್ತನಿಗೆ ಮಾಡಿದ ಉಪಕಾರದಲ್ಲಿ ಲಕ್ಷಾಂಶದಲ್ಲಿ ಒಂದು ಅಂಶವನ್ನಾದರೂ ಪ್ರತ್ಯುಪಕಾರವಂ ಮಾಡುವದಕ್ಕೆ ಬುದ್ಧಿಗೆ ತೋರಲಿಲ್ಲ. ಹಾಗಾದರೂ ಪರಮವಿರಕ್ತರಾದ ಚಾಣಕ್ಯರ ಸ್ಮರಣೆಯು ಪದೇ ಪದೇ ಉಂಟಾಗುವದಕ್ಕೆ ಅವರು ಈ ಪ್ರದೇಶಗಳಲ್ಲಿ ಎಲ್ಲಿ ವಿಶ್ರಮಿಸಿಕೊಂಡರೋ ಅಲ್ಲಿ ದೇವಾಲಯವಂ ಮಾಡಿಸಿ, ಪೂಜಾದಿಗಳು ನಡೆಯುತ್ತಿರಲಿ ; ಕುಳಿತು ಇದ್ದ ಕಡೆಯಲ್ಲಿ

ಎಲ್ಲವೂ ಅನ್ನಸತ್ರಗಳಾಗಲಿ ; ಸಂಚರಿಸಿದ್ದ ಪ್ರದೇಶಗಳಲ್ಲಿ ಅಗ್ರಹಾರ ಕೂಪಾರಾಮ ವುಂಟಾಗಲಿ : ನೈಮಿಷಾರಣ್ಯಮಾರ್ಗಗಳು ಅರವಟ್ಟಿಗೆ ಸಾಲುತೋಪು ಸರೋವರ ಪುಷ್ಪ ವಾಟಿಕೆಗಳಿಂದಲಂಕೃತಗಳಾಗಿರಲಿ.

ಮತ್ತು ಚಂದ್ರಗುಪ್ತರು ಈ ಶುದ್ಧ ಪೌರ್ಣಮೀ ದಿವಸ ಪ್ರಾತಃಕಾಲದಲ್ಲಿ ಮಹಾ ಸಿಂಹಾಸನಾರೋಹಣವಂ ಮಾಡುವದರಿಂದ ಪುರವೆಲ್ಲವೂ ಶೃಂಗಾರವಾಗಲಿ. ಕಾರಾಗೃಹ ದಲ್ಲಿದ್ದ ಜನರು ಸೆರೆಸಂಕೋಲೆಗಳಿಂ ವಿಮುಕ್ತರಾಗಿ ಮನಬಂದಂತೆ ಹೋಗಲಿ. ಆಶ್ರಿತ ವಿದ್ವಜ್ಜನಗಳಿಗೆ, ಅಧಿಕಾರಿಗಳಿಗೆ, ಕಪ್ಪಗಳಂ ಒಪ್ಪಿಸುವ ದೇಶಾಧಿಪತಿಗಳಿಗೆ ಸಹ, ಉಚಿತ ಪ್ರಕಾರ ಬೊಕ್ಕಸದಿಂದ ವಸ್ತ್ರಭೂಷಣ ಗಂಧಮಾಲ್ಯಾದಿಗಳಂ ಕಳುಹಿಸತಕ್ಕದು ; ಔತಣ ಗಳಂ ಮಾಡಿಸತಕ್ಕದು. ಬ್ರಾಹ್ಮಣನಿಕರಕ್ಕೆ ಮೃಷ್ಟಾನ್ನಭೋಜನ ದಕ್ಷಿಣೆಗಳು ನಡೆಯು ತ್ತಿರಲಿ. ದೀನಾನಾಥರಿಗೆ ಅನ್ನವಸ್ತ್ರಗಳು ಲಭ್ಯವಾಗ[೧]ಲಿ. ದೇವಾಲಯಗಳಲ್ಲಿ ಉತ್ಸವಗಳು ನಡೆಯಲಿ. ಸೇನೆಗಳು ಶೃಂಗರಿಸಿಕೊಂಡಿರಲಿ. ಆಸ್ಥಾನವು ಮಣಿಮೇಲುಕಟ್ಟುಗಳಿಂದಲಂ ಕೃತವಾಗಲಿ.

ಪೌರಜನರೆಲ್ಲರೂ ಅಲಂಕೃತರಾಗಿ ತಮ್ಮ ತಮ್ಮ ಇಷ್ಟದೇವತಾರಾಧನೆಗಳಂ ಮಾಡು ತ್ತಿರಲಿ. ಪ್ರಾಸಾದಹರ್ಮ್ಯಂಗಳು ಪತಾಕ ಧ್ವಜ ತೋರಣ ಚಿತ್ರಗಳಿಂದಲಂಕರಿಸಿ ಶೋಭಿ ಸಲಿ. ರಾಜಬೀದಿಗಳು ವಾರಾಂಗನಾಚರಣಮಂಜೀರಮನೋಹರಸಂಗೀತಧ್ವನಿಗಳಿಂ ಶೋಭಿಸುತ್ತಿರಲಿ. ಅಭಿಷೇಕಸಾಮಗ್ರಿಯಗಳೆಲ್ಲವೂ ಸಿದ್ಧವಾಗಿರಲಿ" ಎಂದು ರಾಕ್ಷಸನು ಬಾಗುರಾಯಣನಿಗೆ ನೇಮಿಸಲು, 'ಒಳ್ಳೆಯದೆಂ'ದು ಹೋಗಿ ಆತನು ಅಲ್ಲಿಯ ಅಧಿಕಾರಿ ಗಳಿಗೆ ನೇಮಿಸಲು, ಅದೇ ರೀತಿಗೆ ಪುರವಂ ಸಿಂಗರಿಸುತ್ತಿರಲು,

ಆಗ ರಾಕ್ಷಸನು ಸಾಮಂತದೇಶಾಧಿಪತಿಗಳಾದ ಕಾಶೀರಾಯ ಮೊದಲಾದ ಅರಸು ಗಳೆಲ್ಲರೂ ಮಿತಪರಿವಾರಯುತರಾಗಿ ಕಪ್ಪಗಳಂ ತೆಗೆದುಕೊಂಡು ಅಭಿಷೇಕಸಮಯ ದಲ್ಲಿ ಬಂದು ಕಾದುಕೊಂಡು [೨]ಇರುವಂತೆ[೨] ಅವರೆಲ್ಲರಿಗೂ ಲೇಖನವಂ ಬರಸಿ ಕಳುಹಿಸಿ, ಸಿದ್ಧವಾಗುತ್ತಿರುವ ಸಾಮಗ್ರಿಯಗಳೆಲ್ಲವಂ ಕಣ್ಣಾರ ನೋಡುತ, ಅಧಿಕವಾಗಿ ಒದಗಿಸುತ, ಕಾರ್ಯಗಳಲ್ಲಿ ಜನರಂ ನೇಮಿಸುತ, ಕೋಶಗೃಹದಿಂದ ಧನರತ್ನಂಗಳಂ ರಾಶಿಗೊಳಿಸುತ, ಪ್ರಾಕಾರವನ್ನೇರಿ ಪುರಶೃಂಗಾರವಂ ನೋಡುತ, ಅಭಿಷೇಕಕಾರ್ಯದಲ್ಲಿ ತತ್ಪರನಾಗಿ ಇರು ತ್ತಿರಲು,

ಆಗ ಆಗುವ ಗಂಧೋದಕಚಳಯಗಳಿಂದಲೂ ಕುರುಜು ಮೇಲುಕಟ್ಟು ತೋರಣ ಗಳಿಂದಲೂ ಕಾಳಾಗರುಧೂಪ ಕುಸುಮಮಾಲೆಗಳಿಂದಲೂ ವಿವಿಧ ದೀಪಪರಂಪರೆ ಗಳಿಂದಲೂ ಅನೇಕ ಫಲವಸ್ತು ತಂಡೋಪತಂಡಗಳಿಂದಲೂ ಕದಲೀಸ್ತಂಭ ತೋರಣ ಸಹಸ್ರೋಪಸಹಸ್ರಗಳಿಂದಲೂ ರಾಜಬೀದಿಗಳೆಲ್ಲವೂ ರಾಜ್ಯಲಕ್ಷ್ಮಿಯ ಪೂಜಾಮಂಟಪ ದಂತೆ, ಕೆಲವೆಡೆಯಲ್ಲಿ ವಸಂತಾಗಮನದಂತೆ, ಎಲ್ಲಿ ನೋಡಿದರೂ ನಂದನವನ ರಾಜಿಯೋ ಎಂಬಂತೆ, ಕೆಲವು ಕಡೆಯಲ್ಲಿ ವಿವಿಧ ವಾರವಿಲಾಸಿನೀಮಂಜುಮಂಜೀರ ಧ್ವನಿಯುತಸಂಗೀತದಿಂ ಗಂಧರ್ವಲೋಕವೋ ಎಂಬಂತೆ, ಅನೇಕತೂರ್ಯಮಹಾ

---

೧. ಲಿ (ಗ) ೨. ಇರುವದೆಂದು (ಗ)

ಘೋಷದಿಂ ಸಮುದ್ರಮಥನಸಮಯದಂತೆ, ಕೆಲವೆಡೆಯಲ್ಲಿ ಭೂಸುರಸ್ವಸ್ತಿವಾಚನ ಧ್ವನಿಗಳಿಂ ಬ್ರಹ್ಮಸದನವೇ ಪ್ರತ್ಯಕ್ಷವಾದಂತೆ, ಮುದಿತಭುಜಂಗನಿಕರದಿಂ ಭೋಗ ವತಿಯೇ ಕಂಗೊಳಿಸಿದಂತೆ, ಅನೇಕ ಧಾರಾಯಂತ್ರಗಳಿಂ ವರ್ಷಾಕಾಲವು ಸನ್ನಿಹಿತ ವಾದಂತೆ, ವಂದಿಮಾಗಧಸ್ತುತಿಪಾಠಂಗಳಿಂ ಲೋಕವೇ ಶಬ್ದಮಯವಾದಂತೆ, ರಾಜ ಮಾರ್ಗವೆಲ್ಲವೂ ಕುಸುಮಧೂಳೀಮಯವಾಗಿ, ಆಸ್ಥಾನಗಳೆಲ್ಲವೂ ರಾಜಕುಲಮಕುಟ ಮಣಿಪ್ರಭಾಮಯವಾದಂತೆ, ಗಗನಾಭೋಗವೆಲ್ಲವೂ ಕಾಲಾಗರುಧೂಮಮಯವಾ ದಂತೆ, ಪ್ರಾಸಾದವಾತಾಯನಗಳೆಲ್ಲವೂ ಕಾಮಿನೀಮುಖಪದ್ಮಮಯವಾದಂತೆ, ಪ್ರಜಾ ನಿಕರಗಳೆಲ್ಲವೂ ವಿಭೂಷಣಮಯವಾದಂತೆ ತೋರುತ್ತಿರಲು,

ಹೀಗೆ ಪುರವೆಲ್ಲವೂ ಅಮರಾವತಿಯೋ ಎಂಬಂತೆ ಮಂಗಳಕರವಾಗಿ ಶೋಭಿಸು ತ್ತಿರಲು, ಆಗ ಬ್ರಾಹ್ಮಣನಿಕರದಿಂ ಭುಂಜಿಸಿ ಉಳಿದ ಘೃತಗಳು ಮಡುಗಳಂತೆ, ದಧಿಕ್ಷೀರ ಗಳು ಕಾಲುವೆಗಳಂತೆ, ಭಕ್ಷ್ಯರಾಶಿಗಳು ಪರ್ವತದಂತೆ ಕಾಣಿಸುತ್ತ, ಹೀಗೆ ಮಹೋತ್ಸವ ನಡೆಯುತ್ತಿರಲು,

ಆಗ ಚಂದ್ರಗುಪ್ತನು ತನ್ನ ಪತ್ನಿಯ ಕೈಯಲ್ಲಿದ್ದ ರತ್ನಕಲಶೋದಕದಿಂದ ಚಾಣಕ್ಯರ ಪಾದವಂ ತೊಳೆದು, ರತ್ನರಾಶಿಗಳಿಂದ ಪಾದಕ್ಕೆ ಅಭಿಷೇಕವಂ ಮಾಡಿ, ಯಥಾವಿಧಿಯಿಂ ಪೂಜಿಸಿ, ರತ್ನಪಾದುಕೆಗಳಂ ತಂದು ಪಾದಕ್ಕೆ ಅಳವಡಿಸಿ, ಆ ತೀರ್ಥವಂ ಸೇವಿಸಿ, ಪುರಾತನವಾದ ಅವರ ಪಾದುಕೆಗಳನ್ನು ತನ್ನ ಶಿರಸ್ಸಿನಲ್ಲಿ ಇಟ್ಟುಕೊಂಡು, "ಇದೇ ನಮಗೆ ದೇವತಾಸ್ವರೂಪವು. ನಾನು ಮಾಡುವ ನಿತ್ಯಪೂಜೆಗೆ ಕೊಡಬೇಕೆಂ"ದು ಪ್ರಾರ್ಥಿಸಿ, ತೆಗೆದುಕೊಂಡು, ಅದಕ್ಕೆ ವಜ್ರಕವಚವನ್ನಳವಡಿಸಿ, ದೇವತಾಗೃಹದಲ್ಲಿ ಇರಿಸಿ, ಆಗ ಚಾಣಕ್ಯರ ಅನುಮತಿಯಿಂದ ಮಂಗಳಮಜ್ಜನವಂ ಗೈದು, ಅನರ್ಘ್ಯವಸ್ತ್ರಭೂಷಣಗಳಿಂದ ಅಲಂಕೃತನಾಗಿ, ವಿಪ್ರವರ್ಗಕ್ಕೆ ಷೋಡಶಮಹಾದಾನವನ್ನಿತ್ತು, ಸಕಲಜನಾನುಮತಿಯಿಂದ ಮಹಾಸಿಂಹಾಸನಾರೋಹಣವಂ ಮಾಡಲು, ಮಾಣಿಕ್ಯಮಯವಾದ ಉಷ್ಣೀಷವಂ ಧರಿಸಿ, ರಾಜಮಂಡಲಪರಿವಾರಮಧ್ಯದಲ್ಲಿ ನಕ್ಷತ್ರಸಮೂಹದಿಂದ ಪ್ರಕಾಶಿಸುವ ಪೂರ್ಣಚಂದ್ರ ನಂತೆ ಚಂದ್ರಗುಪ್ತನು ಸಿಂಹಾಸನದಲ್ಲಿ ಒಪ್ಪುತ್ತಿರಲು,

ಆಗ ಭೂಸುರನಿಕರವು ಆಶೀರ್ವಾದಮಂತ್ರಾಕ್ಷತೆಗಳಂ ಚಂದ್ರಗುಪ್ತನ ಶಿರಸ್ಸಿನಲ್ಲಿ ತಳಿಯಲು, ಸುವಾಸಿನಿಯರು ರತ್ನದಾರತಿಗಳಂ ಪಿಡಿದು ಮಂಗಳಗೀತಂಗಳಂ ಪಠಿಸು ತ್ತಿರಲು, "ಜಯ ರಾಜಾಧಿರಾಜ, ಕುರುಕುಲಾಬ್ಧಿಚಂದ್ರ, ಚಂದ್ರಗುಪ್ತಸಾರ್ವಭೌಮ" ರೆಂದು ವಂದಿಮಾಗಧರು ಹೊಗಳುತ್ತಿರಲು, ಬಾಗುರಾಯಣನು ಶ್ವೇತಛತ್ರವನ್ನು ಪಿಡಿದು ನಿಂತಿರಲು, [೧]ಭದ್ರಭಟಾದಿ[೧]ಗಳು ಚಾಮರಂಗಳಂ ಪಿಡಿದು ಬೀಸುತ್ತಿರಲು, ಆಗ ಅಮಾತ್ಯ ರಾಕ್ಷಸನು ಪುಷ್ಪಗಳಿಂ ಪೂಜಿಸಿ, ರತ್ನಗಳಂ ಕಾಣಿಕೆಗಳಂ ಒಪ್ಪಿಸಲು, ಹಾಗೇ ಕಾಶೀರಾಜನು ಶಿರವಂ ಬಾಗಿಸಿ ನಿಂತು ಕಾಣಿಕೆಗಳಂ ಒಪ್ಪಿಸಲು, ಅದೇ ರೀತಿಗೆ ಮಲಯಕೇತುವು ಕೈಗಾಣಿಕೆಗಳಂ ತಂದು ಒಪ್ಪಿಸಲು, ಆ ಬಳಿಕ ಮತ್ಸ್ಯ ಮೈಥಿಳ ಬಂಗಾಳ ಕಳಿಂಗ ಭೋಜ ಪಾಂಚಾಲ ಸೌರಾಷ್ಟ್ರ ಓಢ್ರ ದೇಶಾಧಿಪತಿಗಳು ವಿವಿಧ ಭೂಷಣ ವಸ್ತುವಾಹನ ರತ್ನಂಗಳಂ

---

೧. ಭದ್ರಭಟ ರಾಜಸೇನರುಗಳು (ಗ)

ಒಪ್ಪಿಸಿ ಕೈಗಳಂ ಜೋಡಿಸಿಕೊಂಡು ಓಲೈಸುತ್ತಿರಲು, ಅವರೆಲ್ಲರಂ ದಿವ್ಯಭೂಷಣ ವಸ್ತ್ರ ಗಂಧಮಾಲ್ಯ ಕರ್ಪೂರವೀಳಯಗಳಿಂದುಪಚರಿಸಿ ಕುಳ್ಳಿರಿಸಲು,

ಆಗ ದಿಕ್ಕುಗಳೆಲ್ಲವೂ ಪ್ರಸನ್ನವಾಗಿ ಕಾಣುತಿರಲು, ಸೌರಭ್ಯದಿಂದ ಕೂಡಿಕೊಂಡು ಮಂದಮಾರುತ ಬೀಸುತಿರಲು, ಆ ದಿವಸವು ಅಮೃತಾವಿರ್ಭಾವದಿನದಂತೆ, ಆ ಸಮಯದಲ್ಲಿ ಗಿರಿಜಾಕಲ್ಯಾಣಸಮಯದಂತೆ, ಸಕಲಜನನಿಕರಕ್ಕೆಲ್ಲವೂ ಆನಂದಮಯವಾಗಿರುತ್ತಿರಲು, ಅದೇ ಲಗ್ನದಲ್ಲಿ ಚಾಣಕ್ಯನು ರಾಕ್ಷಸನ ಅಭಿಮತಾನುಸಾರವಾಗಿ ಸಮಾನ ರಾಜಕುಲ ಕನ್ಯಾರತ್ನವಂ ಪುನಃ ಚಂದ್ರಗುಪ್ತನಿಗೆ ವಿವಾಹವಂ ಮಾಡಿಸಿ,

ಆಗ ಬೊಕ್ಕಸದಿಂದ ಕೋಟಿದ್ರವ್ಯಗಳಂ ತರಿಸಿ ಬ್ರಾಹ್ಮಣರಿಗೆ ಭೂದಾನಶಾಸನಗಳಂ ಕೊಡುತ್ತಿರಲು, ಹಾಗೇ ಚಾಣಕ್ಯನು ರತ್ನಭೂಷಣಂಗಳಿಂದ ವಿಪ್ರನಿಕರಕ್ಕೆ ಸಂತೋಷವಂ ಮಾಡುತ್ತಿರಲು, ಹಾಗೇ ರಾಕ್ಷಸನು ಧನಗಳಂ ವಿಪ್ರರಿಗೆ ಹೊರಿಸಿ ಕಳುಹಿಸಲು, ವಕ್ರದಾಸಕನು ವಸ್ತ್ರಗಳಂ, ಸುಮತಿಯು ವಾಹನಂಗಳಂ, ಬಾಗುರಾಯಣನು ಗೋಲಕ್ಷಗಳಂ, ರುಕ್ಮನೆಂಬವನು ಬೇಕಾದ ವಸ್ತುಗಳನ್ನು ಕೊಡುತ್ತಿರಲು, ಸಕಲರೂ ಸಂತುಷ್ಟರಾಗಿ ಮಹಾರಾಜಾಧಿರಾಜನಾದ ಚಂದ್ರಗುಪ್ತನನ್ನು "ಯಶೋವಂತನಾಗಿ ಸುಖದಿಂದಿರುವನಾಗು" ಎಂದು ಹರಸುತ್ತಿರಲು,

ಆಗ ಬಡತನವೆಂಬುವದು ಸ್ತ್ರೀಜನರ ಮಧ್ಯಪ್ರದೇಶದಲ್ಲಿ, ವಕ್ರಭಾವವು ಕುಡಿಹುಬ್ಬುಗಳಲ್ಲಿ, ಕಾಠಿಣ್ಯವು ಕುಚಕುಟ್ಮಲಗಳಲ್ಲಿ, ಯಾಚನೆಯೆಂಬುವದು ಪ್ರಿಯಾಧರಪಾನ ಸಮಯದಲ್ಲಿ, ಕೊಲೆಗಳೆಂಬುವದು ಅಕ್ಷಕ್ರೀಡೆಯಲ್ಲಿ, ಚಾಂಚಲ್ಯವೆಂಬುವದು ನೇತ್ರಾಂಚಲದಲ್ಲಿ, ಕೌಟಿಲ್ಯವೆಂಬುವದು ಕುಂತಳಪ್ರದೇಶದಲ್ಲಿ, ನಿಗ್ರಹವೆಂಬುವದು ಇಂದ್ರಿಯಗಳಲ್ಲಿಯೇ ಇರುತ್ತಿದ್ದವು.

ಈ ರೀತಿಯಲ್ಲಿ ಸಕಲಜನಾನಂದಕರಮಾದ ಚಂದ್ರಗುಪ್ತನ ಪಟ್ಟಾಭಿಷೇಕವಾದುದಂ ನೋಡಿ ಚಾಣಕ್ಯನು 'ತಾನು ಕೃತಾರ್ಥನಾದೆ'ನೆಂದು ತಿಳಿದು, ಆಗ ಸಕಲರಾಜಮಂಡಲ ಸಮೇತನಾದ ಚಂದ್ರಗುಪ್ತನನ್ನು ಮಹಾಗಜಾರೋಹಣವಂ ಮಾಡಿಸಿ, ಮಹಾವಿಭವದಿಂದ ರಾಜಬೀದಿಗಳಲ್ಲಿ ಮೆರವಣಿಗೆಯಾಗಿ ಬಂದು, ಚಾಣಕ್ಯರ ಪಾದಂಗಳಿಗೆ ನಮಸ್ಕರಿಸುತಲಿರುವ ಚಂದ್ರಗುಪ್ತನಂ ಕುರಿತು,

"ಅಯ್ಯ ರಾಜಾಧಿರಾಜನಾದ ಚಂದ್ರಗುಪ್ತನೇ, ನನಗಿಂತಲೂ ಅಧಿಕನಾದ ಅಮಾತ್ಯ ರಾಕ್ಷಸ ನಿನಗೆ ಶ್ರೇಯಸ್ಸನ್ನಪೇಕ್ಷಿಸುವ ಮಂತ್ರಿಯಾದನು. ಸಕಲರಾಜಮಂಡಲವೂ ನಿನ್ನ ಪರಿವಾರವಾಯಿತು. ನೀನು ಸಾರ್ವಭೌಮನೆಂದೆನಿಸಿಕೊಂಡವನಾದೆ. ಯಶೋವಂತನಾಗಿ ಇರುವವನಾಗು. ನಾನು ತಪಸ್ಸನ್ನಾರ್ಜಿಸುವದಕ್ಕೆ ಋಷ್ಯಾಶ್ರಮಗಳಂ ಹೊಂದುವೆನು. ಅನುಮತನಾಗು" ಎನಲು, ಆ ಮಾತಿಗೆ ಚಂದ್ರಗುಪ್ತನು ಪುತ್ರನಲ್ಲಿ ರಾಜ್ಯಭಾರವ ನಿಲ್ಲಿಸಿ ವಿರಕ್ತನಾಗಿ ತಪಸ್ಸಿಗೆ ವನವನ್ನೈದುತ್ತಿರುವ ತಂದೆಯನ್ನಗಲಿರಲಾರದೆ ದುಃಖಪಡುವ ಅರಸಿನಂತೆ ಕಂಬನಿಗಳಂ ತುಂಬುತ, ಅಂಜಲಿಬದ್ಧಯುಕ್ತನಾಗಿ, ಚಾಣಕ್ಯರಂ ಕುರಿತು ಇಂತೆಂದನು :

"ಮಹಾನುಭಾವರಾದ ಯಜಮಾನರೇ, ವಿಪತ್ಪ್ರವಾಹಮಗ್ನನಾಗಿ ಇದ್ದವನನ್ನು ಉದ್ಧಾರವಂ ಮಾಡಿ, ರಾಜಾಧಿರಾಜನೆಂದೆನಿಸಿದಿರಿ. ನನಗೆ ತಾವು ಪ್ರತ್ಯಕ್ಷ ಇಷ್ಟದೇವರಾ

ದುದರಿಂದ ನಾನು ಮಾಡುವ ಸ್ತುತಿಗಳೆಲ್ಲವೂ ಸೂರ್ಯನಿಗೆ ದೀಪೋಪಚಾರದಂತೆ, ಸರಸ್ವತಿಯಂ ಪ್ರಾಕೃತವಾಕ್ಯಗಳಿಂದ ಸ್ತುತಿಸಿದಂತೆ, ಮೇರುಪರ್ವತಕ್ಕೆ ಸುವರ್ಣ ಪುಷ್ಪ[1]ವನ್ನರ್ಪಿಸಿ[2]ದಂತೆ ತೋರುವದು. ನಿಮ್ಮಂ ಸೇವಿಸುತ ವಾಸವಂ ಮಾಡುತ್ತಿದ್ದ ಅರಣ್ಯವು ಮಹಾರಾಜ್ಯಾಧಿಪತ್ಯದಲ್ಲಿ ಇದ್ದಂತೆ ಸುಖಕರವಾಗಿ ಇತ್ತು. ನಿಮ್ಮನ್ನಗಲಿ ಮಾಡುವ ಸಾಮ್ರಾಜ್ಯವಾದರೂ ಮನಸ್ಸಿಗೆ ಸಂತೋಷವಂ ಮಾಡಲಾರದು. ಇನ್ನು ಮೇಲೆಯೂ ನಿಮ್ಮಂ ನಿರ್ಬಂಧಪಡಿಸುವದಕ್ಕೆ ಹೇಗೆ ಶಕ್ತನಾದೇನು ? ಈ ರಾಜ್ಯ ವಿಚಾರದಲ್ಲಿ ಪ್ರಮಾದವಿಲ್ಲದೆ ನಡೆದುಕೊಳ್ಳುವಂತೆ ಬುದ್ಧಿನೀತಿಯಂ ಹೇಳಬೇಕೆಂ"ದು ಪ್ರಾರ್ಥಿಸಲು, ಆ ಮಾತಿಗೆ

"ಅಯ್ಯ ಅರಸೇ, ಅನಾದಿಕಾಲದಿಂದ ನಡೆದು ಬಂದಿರುವ ದೇಶಮರ್ಯಾದೆಗಳಿಗೆ ಓಸರ ಬಾರದಂತೆ ನೋಡುತ್ತ, ಅದಂ ರಕ್ಷಿಸುತ್ತಲಿರುವದೇ ರಾಜ್ಯಭಾರನಿರ್ವಾಹವೆಂದು ತಿಳಿಯಬೇಕು. ಅದು ಬಹುಸನ್ನೆಗಳಿಂದ ಎತ್ತಿ ನಿಲ್ಲಿಸಿದ ಮಹಾಭಾರವಾಸಿಯಾದ ಸ್ತಂಭವು ಓಸರ ಬಾರದಂತೆ ತಿದ್ದುವ ಪುರುಷನ ವಶವರ್ತಿಯಾಗಿ ನಿಂತಿರುವಂತೆ, ಸಮುದ್ರದಲ್ಲಿ ಸಂಚರಿಸುತ್ತಿಪ್ಪ ಪಡಗುಗಳು ವೀಕ್ಷಣಕನ ವಶವಾಗಿ ಇರುವಂತೆ, ಪೂರ್ಣತಟಾಕವು ರಂಧ್ರವಂ ಮುಚ್ಚುತ್ತಿರುವವನಿಂದ ನಿಂತಿರುವಂತೆ, ಪೂರ್ವಮರ್ಯಾದೆಗೆ ಓಸರ ಬಾರದಂತೆ ವಿಚಾರಿಸುತ್ತಿರುವ ಪುರುಷನಿಂದ ರಾಜ್ಯವು ನಿರ್ವಹಿಸುವದು.

ಮರ್ಯಾದೆಯೆಂಬುವದು ಯಾವದೆಂದರೆ : ಪ್ರಜೆಗಳಲ್ಲಿ ವರ್ಣಾಶ್ರಮಂಗಳಿಗೆ ವ್ಯತ್ಯಾಸ ಬರದಂತೆ ರಾಜ್ಯವಂ ವಿಚಾರಿಸಿ ನಿಗ್ರಹಾನುಗ್ರಹವಂ ಮಾಡುತ್ತಲಿರುವದೇ ಮರ್ಯಾದಾಪಾಲನೆಯು. ಅದಂ ಉಪೇಕ್ಷಿಸಿದರೆ, ಸ್ವಾಮಿ ಭೃತ್ಯತ್ವವಿಲ್ಲದೆ ಧರ್ಮಕ್ಕೆ ಹ್ರಾಸವುಂಟಾಗಿ, ಲೋಕವು ನಷ್ಟಪ್ರಾಯ ಉಂಟಾಗುವದರಿಂದ, ಪೂರ್ವದಲ್ಲಿ ಮಹಾರಾಯರುಗಳೆಲ್ಲರೂ ಮರ್ಯಾದೆಗೆ ಓಸರ ಬಾರದಂತೆ ರಾಜ್ಯವಂ ಸುಲಭವಾಗಿ ನಿರ್ವಹಿಸುತ ಯಶೋವಂತರಾದರು. ಇದರಿಂದ ಇಹಪರದಲ್ಲಿ ಶ್ರೇಯೋಲಾಭವುಂಟಾಗುವದು ಸತ್ಯವೆಂದು ತಿಳಿಯುವನಾಗು.

ನೀನು ನಿನ್ನ ವಿಹಿತದಿಂದ ನಡೆಯುವದಂ ನೋಡಿ ಸಕಲಪ್ರಜೆಗಳೂ ತಮ್ಮ ವಿಹಿತ ಮಾರ್ಗದಿಂದಲೇ ನಡೆದುಕೊಳ್ಳುವರಾದುದರಿಂದ, ನಿನ್ನ ರಾಜ್ಯದಲ್ಲಿ ಧರ್ಮವಧಿಕವಾಗಿ, ಆತಂಕರಹಿತರಾಗಿ ಪುಷ್ಟರಾದ ಪ್ರಜೆಗಳಿಂದ ಬಂದ ಧನಗಳು ನಿನ್ನ ಕೋಶಗೃಹದಲ್ಲಿ ತುಂಬಿದವಾಗಿ. ರಾಜ್ಯತಂತ್ರಕ್ಕೆ ಉಪಯೋಗಿಸುತ್ತ, ಇಹದಲ್ಲಿ ಹೇಗೆ ನಿನಗೆ ಶ್ರೇಯಸ್ಸನ್ನುಂಟುಮಾಡುವದೋ, ಅದೇ ರೀತಿಗೆ ಪ್ರಜಾಪರಿಪಾಲನೆಯಿಂದ ಉಂಟಾದ ಪುಣ್ಯರಾಶಿಗಳು ಪರತ್ರ ನಿನಗೆ ಶ್ರೇಯಸ್ಸನ್ನುಂಟುಮಾಡುವವು. ಇದಕ್ಕಿಂತ ಪ್ರಭುವಿಗೆ ಧರ್ಮವೆಂಬುವದು ಯಾವದೂ ಬೇರೆಯಲ್ಲ.

ಆದರಿಂದ ವರ್ಣಾಶ್ರಮಮರ್ಯಾದೆಯಂ ನಿನ್ನ ದೇಹವಂ ರಕ್ಷಿಸುವಂತೆ ರಕ್ಷಿಸುವನಾಗಿ, ಇದಕ್ಕೆ ವ್ಯತ್ಯಾಸವಾಗಿ ನಡೆದು ರಾಜ್ಯಭ್ರಷ್ಟರಾಗಿ ಲೋಕಾಪವಾದಕ್ಕೆ ಪಾತ್ರರಾದವರಂ ವೇಳೆವೇಳೆಯಲ್ಲಿ ಸ್ಮರಿಸುತ್ತಿರುವನಾಗು. ಮತ್ತು ನಿನ್ನ ಸಂಪತ್ತಿಗೆ ಸಾಧವವಾದ ಪ್ರಜಾನಿಕರದ

---

೧. ವನ್ನೊಪ್ಪಿಸಿ (ಗ) ೨. ತೆ (ಗ)

ಯೋಗಕ್ಷೇಮವಂ ನಿನ್ನ ಬಾಲಕರ ಯೋಗಕ್ಷೇಮದಂತೆ ವಿಚಾರಿಸುತ್ತ, ನಿನ್ನಲ್ಲಿ ಭಯ ವಿಶ್ವಾಸ ಉಂಟಾಗುವಂತೆ ಮಾಡುತ್ತಿರುವನಾಗು. ವಿಹಿತವಂ ಮೀರಿ ನಡೆಯುವರಂ ವಿಹಿತವರಿತು ದಂಡಿಸುವನಾಗು.

ನಿನ್ನ ದಯದಾಕ್ಷಿಣ್ಯಗಳು ಸಾಧುಸಜ್ಜನರಲ್ಲೇ ಇರಲಿ. ನ್ಯಾಯದಲ್ಲಿ ನಿನಗೆ ಪಕ್ಷಪಾತ ವಿರಲಿ. ಲೋಕಾಪವಾದಕ್ಕೆ ಅಂಜಿ ನಡೆಯುವನಾಗು. ನೀತಿಮಾರ್ಗವಂ ಬಿಟ್ಟು ನಡೆಯ ಬೇಡ. ಅಪೂಜ್ಯರಂ ಪೂಜ್ಯರಂತೆ ಕಾಣಬೇಡ. ವಿಹಿತವಾಗಿ ಖಂಡಿತವಂ ಹೇಳುವವರಂ ನಿನ್ನ ಆಪ್ತಬಂಧುಗಳೆಂದು ಎಣಿಸುವನಾಗು. ಕಾರ್ಯಗಳಂ ವಿಮರ್ಶೆಯಿಂದ ಮಾಡುವ ನಾಗು. ಪಾಪಭೀತರುಗಳಾದ ವಿದ್ವಜ್ಜನಗಳಂ ಸೇವಿಸುವನಾಗು. ಕಾರ್ಯದಕ್ಷರ ಮುಂದೆ ಹೇಡಿಗಳಿಗೆ ಬಹುಮಾನವಂ ಮಾಡದಿರು ; ಅವರಿರ್ವರಂ ಸಮಾನಗೊಳಿಸದಿರು.

ವಂಚಕರ ವಾಕ್ಯವಂ ಮನಕ್ಕೆ ತರಬೇಡ. ಈಗ ಮಾಡುವದಂ ನಾಳೆಯೆಂದೆನಬೇಡ. ಮುಂದೆ ಮಾಡುವ[ದ]ಕ್ಕೆ ತ್ವರಿತಪಡಬೇಡ. ನೀನು ಮಾಡುವದಂ ಭೃತ್ಯರಿಗೆ ನೇಮಿಸ ಬೇಡ. ಅನ್ಯರು ಮಾಡುವದಕ್ಕೆ ನೀನು ಮನಗೊಡಬೇಡ. ಪಶ್ಚಾತ್ತಾಪಕರವಾದ ಕಾರ್ಯವಂ ಆರಂಭಿಸಲೇ ಬೇಡ. ಆರಂಭಿಸಿದ ಮಹಾಕಾರ್ಯಕ್ಕೆ ಇದೇ ಫಲವೆಂದು ಜನಗಳಿಗೆ ತೋರ್ಪ ಡಿಸಬೇಡ. ಬೀಜಾವಾಪನಾದಿಯಾಗಿ ವೃದ್ಧಿಯಂ ಪಡೆದು ವಿಸ್ತಾರವಾಗುವ ಉದ್ಯಾನ ವೃಕ್ಷವಂ ರಕ್ಷಿಸುವಂತೆ, ಪುಣ್ಯಕೀರ್ತಿದಾಯಕವಾದ ಕಾರ್ಯವಂ ಆದಿಯಲ್ಲಿ ಸ್ವಲ್ಪವಾಗಿ ಆರಂಭಿಸಿ, ಅದು ವಿಸ್ತಾರವಾದ ಬಳಿಕ ತಗ್ಗಿ ಬರದಂತೆ ನಿರ್ವಹಿಸುತ್ತಿರುವನಾಗು. ಪುರುಷ ಸ್ವಭಾವವಂ ವಿಚಾರಿಸದೆ ಕಾರ್ಯವಂ ನೇಮಿಸಬೇಡ.

ಕಾರ್ಯಾನುಸಾರವಾಗಿ ಜೀವನವಂ ಕಲ್ಪಿಸುವನಾಗು. ಹಿತೈಷಿಗಳಾಗಿ ಕಾರ್ಯದಕ್ಷರಾದವರಿಗೆ ಉತ್ಸಾಹ ಹೆಚ್ಚಿ ಬರುವಂತೆ ಮಾಡುತಲಿರುವನಾಗು. ಸಾಧುಗಳಾಗಿರುವ ದೀನಾನಾಥರಿಗೆ ದಿಕ್ಕಾಗಿ ಇರುವನಾಗು. ಉದಯಿಸಿ ಬರುವ ಪೂರ್ಣಚಂದ್ರನಂತೆ ಸಕಲರಿಗೂ ಸಂತೋಷ ಕರನಾಗಿ ಇರುವನಾಗು.

ವಸಂತಾದಿ ಋತುವಿನಲ್ಲಿ ವಿಜೃಂಭಿಸುವ ಕಿರಣಗಳಿಂದ ಭೂಮಿಯ ಜಾಡ್ಯಗಳಂ ಪರಿ ಹರಿಸಿ, ಪುನಃ ಅದೇ ಕಿರಣಗಳಿಂ ವೃಷ್ಟಿಯಂ ಕಲ್ಪಿಸಿ, ಜೀವನವನ್ನುಂಟುಮಾಡಿ, ಹೆಚ್ಚಿದ ಭೂಮಿಯ ಜಾಡ್ಯವಂ ಕಿರಣಗಳಿಂದಲೇ ಆಕರ್ಷಿಸುತ ಲೋಕಕ್ಕೆ ಕ್ಷೇಮದಾಯಕನಾದ ಸೂರ್ಯನಂತೆ ಧನವಂತರಾದವರ ಕಡೆಯಿಂದ ನ್ಯಾಯಪೂರ್ವಕವಾಗಿ ಧನವನ್ನಾಕರಿಸಿ, ರಿಕ್ತರಾದ ಪ್ರಜೆಗಳಂ ಅದರಿಂದ ಪೋಷಿಸಿ, ಮೀರಿ ಹೆಚ್ಚದಂತೆ ತಗ್ಗದಂತೆ ಸಮಸ್ಥಿತಿ ಯಿಂದ ಪ್ರಜೆಗಳಂ ಪಾಲಿಸುವನಾಗು. ದೇಶ ಕಾಲ ಗುಣ ದೋಷವನ್ನರಿತು ಕಾರ್ಯವನ್ನಾ ರಂಭಿಸುವನಾಗು.

ಹೀಗೆ ರಾಜ್ಯಭಾರವಂ ನಿರ್ವಹಿಸುತಲಿದ್ದರೆ, ಶತ್ರುಗಳೆಲ್ಲರೂ ಪಾದಾಕ್ರಾಂತರಾಗಿ ಇರುವರು. ಕ್ಷುದ್ರರು ಕ್ಷುದ್ರಕರ್ಮಗಳಂ ಬಿಡುವರು. ಹೇಡಿಗಳು ಕಾರ್ಯದಕ್ಷರಾಗಿ ಪ್ರಭುವಂ ಸೇವಿಸುವರು. ಈ ಕಲಿಯುಗವು ಕೃತಯುಗದಂತೆ ಆತಂಕರಹಿತವಾಗಿ, ಪುಷ್ಟರಾದ ಪ್ರಜಾ ಪಶುಗಳಿಂ ಸಮೃದ್ಧವಾಗಿ, ಲೋಕಕ್ಕೆ ಕ್ಷೇಮವುಂಟುಮಾಡುವದು. ಹೀಗೆ ನ್ಯಾಯ ನೀತಿ ತಪ್ಪದೆ ಸ್ತ್ರೀ ಮದ್ಯಾದಿಗಳಿಗೆ ವಶ್ಯನಾಗದೆ ರಾಜ್ಯವಂ ಪಾಲಿಸುತ್ತಲಿರುವ ನಿನ್ನ ಚಿತ್ತಸ್ಥೈರ್ಯ ದಂತೆ ಸಾಮ್ರಾಜ್ಯಲಕ್ಷ್ಮಿಯು ಸ್ಥಿರವಾಗಿ ನಿನ್ನನ್ನಗಲದೆ ಇರುವಳು.

ಈ ಅರ್ಥವೆಲ್ಲವೂ ದಂಡನೀತಿಜ್ಞರಾದ ಪಂಡಿತರಿಗಭಿಮತವು. ಧರ್ಮಾದಿ ಪುರುಷಾರ್ಥಸಾಧನಗಳು. ಇದಂ ಪಠಿಸುವವನು ಅಲ್ಪಮೇಧಸ್ಸಿಯಾದವನಾದರೂ ಬುದ್ಧಿಸಂಪನ್ನನಹನು ; ಮನನಕ್ಕೆ ತಂದವನು ಲೋಕವ್ಯವಹಾರವನ್ನರಿವನು ; ಇದೇ ವ್ಯಾಸಂಗದಲ್ಲಿರುವವನು ರಾಜವಲ್ಲಭನಾಗಿ ಶ್ರೇಯೋವಂತನಾಗುವನು.

ಇದು ನೀತಿಶಾಸ್ತ್ರವಾದುದರಿಂದ ನೀನು ಪ್ರೀತಿಪಾತ್ರನಾಗಿ ಅಧಿಕಾರಿಯಾದುದರಿಂದ ನಿನಗೆ ತಿಳುಹಿದೆನು. ಇದೆಲ್ಲವಂ ಮನಕ್ಕೆ ತರುವನಾಗು. ಈ ನೀತಿಯು ರಾಜ ಮಂತ್ರಿಗಳಿಂದ ಅವಶ್ಯವಾಗಿ ತಿಳಿದು ಆಚರಿಸತಕ್ಕದ್ದು" ಎಂದು ಹೇಳುತ್ತಿರುವ ಚಾಣಕ್ಯರ ನೀತಿವಾಕ್ಯವಂ ಕೇಳಿ ಚಂದ್ರಗುಪ್ತನು ಸಂತೋಷಭರಿತನಾಗಿ ಇಂತೆಂದನು :

"ಮಹಾನುಭಾವರಾದ ಯಜಮಾನರೇ, ತಾವು ಉಪದೇಶಂಗೈದ ನೀತಿರಹಸ್ಯ ಅಂಧ ಗಾಢಸುಪ್ತದಿಂದೆಚ್ಚರವಾದಂತೆ, ಅಂಧಕನಿಗೆ ನೇತ್ರಪ್ರಕಾಶವುಂಟಾದಂತೆ, ನನ್ನ ಮನಸ್ಸು ಸಂಶಯಾಂಧಕಾರದಿಂ ಮುಕ್ತವಾಯಿತು. ಆಜ್ಞಾನುಸಾರ ನಡೆದುಕೊಳ್ಳುವೆನು. ಮತ್ತೆ ಒಂದು ವಿಜ್ಞಾಪನೆಯುಂಟು : ನನ್ನ ಕಾರ್ಯದಲ್ಲಿಯೇ ನಿರತರಾಗಿ ನಿದ್ರಾಹಾರವಂ ಲಕ್ಷೀಕರಿಸದೆ ಶ್ರಮಪಟ್ಟು ಇರುವ ಇಂದುಶರ್ಮಾದಿಗಳಿಗೆ ಏನು ಅಪ್ಪಣೆಯಾದರೂ ಸೇವಿಸುವೆನು" ಎನಲು,

"ಅಯ್ಯ ಅರಸೇ, ಅವರ ಮನೋಭೀಷ್ಟವಿದ್ದಂತೆ ನಡಸಿಕೊಡುವನಾಗು" ಎನಲು, ಆ ಮಾತಿಗೆ ಇಂದುಶರ್ಮಾದಿಗಳು "ಅಯ್ಯ ಮಹಾರಾಯನೇ, ತಪೋನಿಧಿಗಳಾದ ಚಾಣಕ್ಯರು ನಮ್ಮಲ್ಲಿ ಸುಪ್ರೀತರಾದುದಕ್ಕಿಂತಲೂ ಲೌಕಿಕವಸ್ತುಲಾಭದಿಂದ ನಮಗೆ ಏನು ಪ್ರಯೋಜನವು ? ನೀನು ಬಹುಕಾಲ ಶ್ರೇಯೋವಂತನಾಗಿ, ಬ್ರಾಹ್ಮಣ್ಯಪ್ರಭುವಾಗಿ ಇರುವದೇ ನಮಗೆಲ್ಲರಿಗೂ ಇಷ್ಟಾರ್ಥದಾನವು" ಎನಲು, "ಅದಂ ಕೇಳಿದವರೆಲ್ಲರೂ ಮಹಾ ವಿರಕ್ತರು. ಆದುದರಿಂದ ನಾನು ಕೊಡುವ ಧನರತ್ನಾದಿಗಳು ಇವರಿಗೆ ಲೋಷ್ಠಸಮಾನ" ವೆಂದು ತಿಳಿದು, ಆಗ ಸ್ಫಟಿಕಕಮಂಡಲಗಳಂ ಮೃದುವಾದ ಕೃಷ್ಣಾಜಿನ ಕಾಷಾಯ ಕೌಪೀನಂಗಳಂ ಹೇರಳವಾಗಿ ತರಿಸಿಕೊಟ್ಟು, ಚಾಣಕ್ಯರನ್ನಗಲಲಾರದೆ ಕಂಬನಿಗಳಂ ತುಂಬುತ್ತಿರಲು, ಅದಂ ನೋಡಿ,

"ಅಯ್ಯ ರಾಯನೇ, ಏಕೆ ವ್ಯಸನಪಡುವೆ ? ನಿನಗೆ ಪುತ್ರೋತ್ಸವವಾದುದಂ ಕೇಳಿ, ಇನ್ನೊಮ್ಮೆ ನಾವೆಲ್ಲರೂ ಬರುವೆವು. ನಿನಗೆ ಶ್ರೇಯಸ್ಸುಂಟಾಗಲಿ" ಎಂದು ಚಾಣಕ್ಯರು ಹೇಳುತ್ತಿರುವ ಸಮಯದಲ್ಲಿ, ಅಮಾತ್ಯ ರಾಕ್ಷಸನ ಅಪ್ಪಣೆಯಿಂದ ಮಣಿಮಯರಥಗಳು ಅಲಂಕರಿಸಿ ಬಂದು ನಿಂತಿರಲು, ಅರಸಿನ ಪ್ರಾರ್ಥನೆಯಿಂದ ಚಾಣಕ್ಯರು ಮುಖ್ಯರಾದವರೆಲ್ಲರೂ ರಥಗಳನ್ನೇರಲು,

ಆಗ ಮಲಯಕೇತುಮುಖ್ಯರಾದ ಮಂಡಲಾಧಿಪತಿಗಳೆಲ್ಲರೂ ಚಾಣಕ್ಯರಿಗೆ ನಮಸ್ಕರಿಸಿ ಸ್ತೋತ್ರಗಳಂ ಮಾಡುತಿರಲು, ಅವರಿಗೆಲ್ಲರಿಗೂ ಉಪಚಾರೋಕ್ತಿಯಂ ಹೇಳಿ, ಅವರಂ ಅವರವರ ದೇಶಕ್ಕೆ ಹೋಗಿ ಚಂದ್ರಗುಪ್ತನಿಗೆ ನಿಯಮ್ಯರಾಗಿ ನಡೆದುಕೊಳ್ಳುವಂತೆ ಹೇಳಿ ಕಳುಹಿಸುತ್ತಿರಲು, ಆಗ ಅಮಾತ್ಯರಾಕ್ಷಸನ ಸಮೇತನಾಗಿ ಚಂದ್ರಗುಪ್ತನು ರಥವನ್ನೇರಿ, ಮಂಡಲಾಧಿಪತಿಗಳ ಪರಿವಾರದಿಂ ಕೂಡಿ, ಚಾಣಕ್ಯರಂ ಪ್ರಸ್ಥಾನಂಗೆಯಿಸುತ್ತಿರಲು, ಪುತ್ರನಾದ ದೇವೇಂದ್ರನ ಅಭ್ಯುದಯವಂ ನೋಡ ಬಂದಿದ್ದ ತಂದೆ

ಯಾದ ಕಶ್ಯಪಮಹಾಮುನೀಶ್ವರರಂ ಆಶ್ರಮಕ್ಕೆ ಕಳುಹಿಸುತ್ತಿರುವ ದೇವೇಂದ್ರನ ಪರಿವಾರದಂತೆ ಮಹಾಸಂತೋಷಕರವಾಗಿ ಚಂದ್ರಗುಪ್ತನ ಪರಿವಾರ ಕಂಗೊಳಿಸುತ್ತಿರಲು.

ಆಗ ಚಲ್ಲುತಲಿರುವ ಪುಷ್ಪ ಧನ ವಸ್ತ್ರಂಗಳ ವೃಷ್ಟಿಯಿಂದ ರಾಜಮಾರ್ಗವೆಲ್ಲವೂ ತುಂಬುತ್ತಿರಲು, ಪ್ರಾಸಾದವಾತಾಯನಸ್ಥನಾರೀನಿಕುರುಂಬನಯನಾಪಾಂಗವೀಕ್ಷಣಗಳಿಂ ಮಂಡಲಾಧಿಪತಿಗಳ ಛತ್ರಪಙ್ಕ್ತಿಗಳೆಲ್ಲವೂ ಮಯೂರಪಿಂಛಿಕಾನಿರ್ಮಿತಂಗಳಾದಂತೆ ಕಂಗೊಳಿಸುತ್ತಿರಲು.

ಆಗ ಪುರದ್ವಾರವಂ ದಾಟಿ ನೈಮಿಷಾರಣ್ಯಾಮುಖವಾಗಿ ಚಾಣಕ್ಯರ ರಥವು ಮುಂದೆ ನಡೆಯುತ್ತಿರಲು, ಆಗ ಚಂದ್ರಗುಪ್ತನು ತನ್ನ ಸಂಗಡ ಬಂದು ಇರುವ ಮಂಡಲಾಧಿಪತಿಗಳೆಲ್ಲರಿಗೂ ಹಿಂದೆ ನಿಲ್ಲುವಂತೆ ಆಜ್ಞಾಪಿಸಿ, ರಾಕ್ಷಸಸಮೇತನಾಗಿ ನಾಲ್ಕಾರು ದಿವಸ ಚಾಣಕ್ಯರ ಸಂಗಡಲೇ ಇರುವವನಾಗಿ ನೈಮಿಷಾರಣ್ಯವಂ ಪೊಂದಿ, ಇಂದುಶರ್ಮನ ಆಶ್ರಮದಲ್ಲಿ ಎಲ್ಲರೂ ರಥದಿಂದಿಳಿದು, ಅಲ್ಲಿಯ ಋಷಿಗಳಂ ಅವರಿಗುಪಯುಕ್ತವಾದ ವಸ್ತುಗಳಿಂದುಪಚರಿಸಿ ಸೇವಿಸುತ್ತ, ಕ್ರತು ದೇವಾಲಯಂಗಳಿಗೆ ಉಪಯುಕ್ತವಾಗುವದೆಂದು ಪ್ರಾರ್ಥಿಸಿ ಇಂದುಶರ್ಮಾದಿಗಳಿಗೆ ಲಕ್ಷೋಪಲಕ್ಷ ಧನ ರತ್ನ ಗೋಸಹಸ್ರಗಳಂ ಕೊಟ್ಟು,

ಆ ದಿವಸ ಅಲ್ಲಿಯೇ ಇದ್ದು, ಇಂದುಶರ್ಮ ಮಾಡಿಸಿದ ಆತಿಥ್ಯವಂ ಸ್ವೀಕರಿಸಿ, ಅರುಣೋದಯಸಮಯದಲ್ಲಿ ಗಂಗಾನದಿಯಲ್ಲಿ ಸ್ನಾನಾದಿಗಳಂ ಮಾಡಿ, ಜಪಾಸನದಲ್ಲಿ ಕುಳಿತಿದ್ದ ಚಾಣಕ್ಯರಿಗೆ ಚಂದ್ರಗುಪ್ತನು ಅಭಿವಂದಿಸಲು, ಹಾಗೇ ರಾಕ್ಷಸನು ನಮಸ್ಕರಿಸಲು,

"ಅಯ್ಯ ಅಮಾತ್ಯರೇ, ಚಂದ್ರಗುಪ್ತನಂ ಪುತ್ರನಂತೆ ಸಲಹುವರಾಗಿ", "ಅಯ್ಯ ಅರಸೇ, ಅಮಾತ್ಯ ರಾಕ್ಷಸರಂ ನಮ್ಮ ಕಂಡಂತೆ ಕಾಣುತ್ತಲಿರುವನಾಗು. ಇನ್ನು ತಡಮಾಡಬೇಡ. ನಿನ್ನ ಪುರವಂ ಕುರಿತು ತೆರಳುವನಾಗು. ನಿನಗೆ ಶ್ರೇಯೋಲಾಭ ಉಂಟಾಗಲಿ" ಎಂದು ಆಶೀರ್ವಾದವಂ ಮಾಡಲು, ಆಗ ರಾಕ್ಷಸಸಮೇತನಾಗಿ ಚಂದ್ರಗುಪ್ತನು ಚಾಣಕ್ಯರಿಗೆ ಪ್ರದಕ್ಷಿಣೆಯಂ ಮಾಡಿ ನಮಸ್ಕರಿಸಿ, ಅಲ್ಲಿಯ ಋಷಿಗಳ ಮಂಡಲವೆಲ್ಲವಂ ಪ್ರದಕ್ಷಿಣೆಯಾಗಿ ಬಂದು ನಮಸ್ಕರಿಸಿ, ಅವರೆಲ್ಲರ ಅನುಮತಿಯಿಂದ ರಾಕ್ಷಸಸಮೇತನಾಗಿ ರಥವನ್ನೇರಿ ಆಶ್ರಮವಂ ಬಿಟ್ಟು ಬಂದು, ಪಾಟಲೀಪುರವನ್ನೈದಿ, ಅಲ್ಲಿ ಅಮಾತ್ಯರೊಡಗೂಡಿ ಮಹಾರಾಜ್ಯಾಧಿಪತ್ಯವಂ ಸುಖದಿಂದ ಮಾಡುತಲಿದ್ದನು ಎಂಬಲ್ಲಿಗೆ.

ಶ್ರೀಮದ್ರಾಜಾಧಿರಾಜಮಾರ್ತಾಂಡನಪ್ರತಿಮವೀರನರಪತಿ ಬಿರುದೆಂತೆಂಬರ ಗಂಡ ಲೋಕೈಕವೀರ ಯದುಕುಲಪಯಃಪಾರಾವಾರಕಲಾನಿಧಿ ಶಂಖಚಕ್ರಾದ್ಯನೇಕಬಿರುದಾಂಕಿತ ಶ್ರೀಚಾಮರಾಜಮಹೀಪಾಲಧರ್ಮಪತ್ನಿ ಕೆಂಪನಂಜಮಾಂಬಾಗರ್ಭಸುಧಾಂಬುಧಿರಾಕಾಸುಧಾಕರಾಯಮಾನ ಶ್ರೀಚಾಮುಂಡಿಕಾಂಬಾವರಪ್ರಸಾದೋದ್ಭವರಾದ ಆತ್ರೇಯಸಗೋತ್ರಸಂಭೂತ ಆಶ್ವಲಾಯನಸೂತ್ರಾನುವರ್ತಿಗಳಾದ ಶ್ರೀಮಹಿಶೂರಪುರವರಾಧೀಶ ಶ್ರೀಮತ್ಕೃಷ್ಣರಾಜೇಂದ್ರರಾಶ್ರಿತ ಹೊಯಿಸಣಿಗಕುಲಸಂಜಾತ ಶ್ರೀನಾರಾಯಣಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಕಾವ್ಯಗ್ರಂಥದಲ್ಲಿ ಚಂದ್ರಗುಪ್ತರಾಜ್ಯಾಭಿಷೇಕಕಥನವೆಂಬ ಅಷ್ಟಾದಶಾಶಯಸ್ಸಮಾಪ್ತಃ. ಶ್ರೀ ಸಾಂಬಾಯ ನಮಃ.

ಚಿರಂ ಜೀವತು ಚಾಮೇಂದ್ರ | ತನೂಜಃ ಕೃಷ್ಣಭೂಮಿಪಃ |
ಯತ್ಕಟಾಕ್ಷಾಂಕುರಸ್ತೋಮಃ | ಕವಿಕಲ್ಪದ್ರುಮಾಯತೇ ||

ಶಾಲೀವಾಹನ ಶರತ್ಸು[೧] ಗತಾಸು ಬಾಣಯುಗಮುನೀಂದುಸಂಖ್ಯಾಸು |
ನಾರಾಯಣೇನ ರಚಿತಂ ಮುದ್ರಾಮಂಜೂಷಕಾಹ್ವಯಂ ಕಾವ್ಯಂ ||೨

ಪರಗುಣಶೀಕರಮುದಧಿಂ | ಕೃತ್ವಾ ತತ್ರೈವ ಖೇಲದ್ಭ್ಯಃ |
ಅಜ್ಞಾತಮತ್ಸರೇಭ್ಯಃ | ಸದ್ಭ್ಯಸ್ತೇಭ್ಯೋ ನಮೋಸ್ತು ವಿದ್ವದ್ಭ್ಯಃ ||೩

---

೧. ಶಕೇ (ಕ)

ಟಿಪ್ಪಣಿಗಳು

ಪ್ರಥಮಾಶಯ

ಪು. ೧-೨ : ಭೂಪತಿ–ದೊರೆ. ಪ್ರಜ್ಞಾಶಾಲಿ–ಬುದ್ಧಿವಂತ. ಸಾಮಾದಿ ಚತುರುಪಾಯ –ಸಾಮ ದಾನ ಭೇದ ದಂಡ ಎಂಬ ನಾಲ್ಕು ರಾಜನೀತಿಯ ಕಾರ್ಯವಿಧಾನಗಳು. ಕಾಮಂದ ಕಾದಿ ಪ್ರಣೀತವಾದ ದಂಡನೀತಿಶಾಸ್ತ್ರ–ಕಾಮಂದಕ ರಾಜನೀತಿಶಾಸ್ತ್ರಗ್ರಂಥವಾದ 'ನೀತಿ ಸಾರ'ದ ಕರ್ತೃ, ಚಾಣಕ್ಯನಿಗಿಂತ ಈಚಿನವನು (೭ನೆಯ ಶ.ದ ಪೂರ್ವ); ಅವನ ಅರ್ಥ ಶಾಸ್ತ್ರವನ್ನೇ ಆಧರಿಸಿ ಕೃತಿ ರಚಿಸಿದವನು. ಆದ್ದರಿಂದ ಇಲ್ಲಿ ಈ ಮಾತಿನ ಅರ್ಥವನ್ನು ರಾಜನೀತಿಪ್ರವರ್ತಕರೆಂದು ಸಾಮಾನ್ಯವಾದ ಅರ್ಥದಲ್ಲಿ ಪರಿಗ್ರಹಿಸಬೇಕಾಗುತ್ತದೆ ; ಇಲ್ಲವೆ ಅಂಗರಿಷ್ಠನೆಂಬವನಿಗೆ ರಾಜಧರ್ಮವನ್ನು ಉಪದೇಶಿಸಿದ ಮಹಾಭಾರತದ ಒಬ್ಬ ಪ್ರಾಚೀನ ಋಷಿ ಕಾಮಂದಕನನ್ನೇ (ಮಹಾಭಾರತ, ಶಾಂತಿ. ೧೨೩.೧೫-೨೫) ಇಲ್ಲಿ ಕುರಿತಿರಬಹುದು. ವಿಪ್ರವರ್ಯ–ಬ್ರಾಹ್ಮಣಶ್ರೇಷ್ಠ. ಛದ್ಮನೆ–ಕಪಟ, ವಂಚನೆ. ನಿಗ್ರಹಿಸು– ಅಡಗಿಸು, ತೊಲಗಿಸು. ನವನಂದರು–ಪಾಟಲೀಪುತ್ರದ ಅರಸು ಸರ್ವಾರ್ಥಸಿದ್ಧಿರಾಯನಿಗೆ ಅವನ ಪಟ್ಟದ ರಾಣಿ ಸುನಂದಾದೇವಿಯಲ್ಲಿ ಹುಟ್ಟಿದ ನಂದ, ಸುನಂದ, ಉಪನಂದ, ಪ್ರನಂದ, ಲೋಕನಂದ, ಕುರುನಂದ, ಪ್ರಿಯನಂದ, ಮಿತ್ರನಂದ ಮತ್ತು ವಿನಂದ ಎಂಬ ೯ ಮಂದಿ ಪುತ್ರರು. ಚಂದ್ರಗುಪ್ತ–ಸರ್ವಾರ್ಥಸಿದ್ಧಿರಾಯನಿಗೆ ಶೂದ್ರಸ್ತ್ರೀ ಹಾಗೂ ಪ್ರಿಯಪತ್ನಿಯಾದ ಮುರಾದೇವಿಯಲ್ಲಿ ಹುಟ್ಟಿದ ಮೌರ್ಯನೆಂಬವನ ಬಹುಪತ್ನಿಯರಲ್ಲಿ ಒಬ್ಬಳ ಮಗ. ಅನುಪೂರ್ವಕವಾಗಿ–ಕ್ರಮವಾಗಿ. ಕಾವ್ಯಸರಣಿಯುಕ್ತವಾದ ಕನ್ನಡ ಭಾಷಾ ರೂಪ–ಸಾಂಪ್ರದಾಯಿಕವಾದ ಅಲಂಕಾರಗಳು ವರ್ಣನೆಗಳು ಮೊದಲಾದುವುಗಳಿಂದ ಕೂಡಿದ ಕನ್ನಡ ಭಾಷೆಯ ರೂಪ.

ನೀರಾಜಿತ–ಆರತಿ ಬೆಳಗಿದ. ಗಿರಿಜಾಕಾಂತ–ಶಿವ. ನಿಸ್ಸೃತ–ಸುರಿದ, ಸ್ರವಿಸಿದ. ಸುಧಾ ಸಾರಶೀಕರನಿಕರ–ಅಮೃತದ ಮಳೆಯ ತುಂತುರುಗಳ ಗುಂಪು. ನಾಭಿಪುಂಡರೀಕ– ನಾಭಿ ಕಮಲ. ಮೃಣಾಳವಲಯಸಂತಾನಗಳು–ತಾವರೆದಂಟಿನ ಸುರುಳಿಗಳ ಸಮೂಹ. ತರಂಗ ಮಾಲಾಶ್ಲೇಷ–ಅಲೆಗಳ ಹಾರದ ಅಪ್ಪುಗೆ, ಒಡಗೂಡಿರುವಿಕೆ. ರುಚಿರ ಧವಳೋಷ್ಣೀಷ– ಮನೋಹರವಾದ ಬಿಳಿಯ ಶಿರೋಭೂಷಣ, ಕಿರೀಟ. ಜಟಾಮಂಡಲ–ಜಡೆಗಳ ಸುತ್ತು. ಉದುಭವಿಸು–ಉದ್ಭವಿಸು. ಕಾಳಿಂದೀಕಲ್ಲೋಲ–ಯಮುನೆಯ ಹೆದ್ದೆರೆ, ಯಮುನಾ ತರಂಗ.

ಪ್ರಯಾಗ–ಗಂಗಾಯಮುನಾನದಿಗಳ ಸಂಗಮಸ್ಥಳದಲ್ಲಿರುವ ಒಂದು ಪುಣ್ಯಕ್ಷೇತ್ರ; ಇದು ಈಗಿನ ಉತ್ತರಪ್ರದೇಶದ ಅಲಹಾಬಾದು. ಕಾಶೀಕ್ಷೇತ್ರ–ಪುರಾಣಪ್ರಸಿದ್ಧವಾದ ಏಳು ಭಾರತೀಯ ಪುಣ್ಯಸ್ಥಳಗಳಲ್ಲಿ ಒಂದು, ವಾರಣಾಸಿ ; ಈಗಿನ ಉತ್ತರಪ್ರದೇಶದಲ್ಲಿ ಗಂಗಾ ನದೀತೀರದಲ್ಲಿರುವ ಬನಾರಸ್; ಅಧಿದೈವ ವಿಶ್ವೇಶ್ವರ. ಗೌಡದೇಶ–ವಂಗದೇಶದಿಂದ (ದಕ್ಷಿಣದಲ್ಲಿ ಸುಂದರಬನ್ಸ್‌ನ ಪೂರ್ವಭಾಗ ಹಾಗೂ ಉತ್ತರದಲ್ಲಿ ಮೈಮನ್‌ಸಿಂಗ್ ಜಿಲ್ಲೆಯ ಅರ್ಧಭಾಗದ ಸೀಮೆ) ಭುವನೇಶದ (ಒರಿಸ್ಸದ ಭುವನೇಶ್ವರ)ವರೆಗೆ ವ್ಯಾಪಿಸಿದ್ದ ದೇಶ. ಆಧುನಿಕ ಕಾಲದಲ್ಲಿ ಬಂಗಾಳಿ ಮಾತಾಡುವ ಜನ ವಾಸಿಸುವ ಸಮಸ್ತ ಪ್ರದೇಶವನ್ನು

ಇದು ಸಾಮಾನ್ಯವಾಗಿ ಸೂಚಿಸುತ್ತದೆ. ಮೂಲತಃ ಈ ದೇಶ ಮಾಲ್ವಾವಿನ ತೀರದ ದಕ್ಷಿಣದ ತುದಿಯೂ ಸೇರಿದಂತೆ ಇಂದಿನ ಮುರ್ಷಿದಾಬಾದು ಜಿಲ್ಲೆಯನ್ನು ಒಳಕೊಂಡಿದ್ದಂತೆ ತೋರುತ್ತದೆ. ಅಗಳು–ಕಂದಕ, ತೋಡು. ಕೊತ್ತಲ–ಕೋಟೆಯ ಬುರುಜು, ಕೋಟೆಯ ಗೋಡೆಯ ಮೇಲೆ ಅಡಗಿ ನಿಂತು ಶತ್ರುಗಳನ್ನು ಹೊಡೆಯುವುದಕ್ಕೆ ಕಟ್ಟಿದ ಮರೆ. ಪೂರ್ವಾಚಲ–ಪೂರ್ವದಿಕ್ಕಿನ ಬೆಟ್ಟ. ಪ್ರಾಸಾದ–ಉಪ್ಪರಿಗೆ ಮನೆ, ಸೌಧ.

ಮಯೂರಪಿಂಛ ಪಿಶಂಗವರ್ಣ–ನವಿಲಿನ ಸೋಗೆಯ ಬಣ್ಣವಾದ ಕೆಂಗಂದು ಬಣ್ಣ, ಕಪಿಲವರ್ಣ. ಮರಕತಮಣಿ–ಪಚ್ಚೆ. ಕುಸುಮಧೂಳಿ ಧೂಸರಿತ–ಪರಾಗದಿಂದ ಮಲಿನವಾದ. ಕಾರಂಡವಿರುತ–ನೀರುಹಕ್ಕಿಯ ಉಲಿ. ಕಮಲ ಕುವಲಯ ಕಲ್ಹಾರ–ಎಲ್ಲ ತಾವರೆಯ ಜಾತಿಯೇ. ಆದರೆ, ಕಮಲ–ಬೆಳ್ದಾವರೆ, ಕುವಲಯ–ಕನ್ನೈದಿಲೆ, ಕಲ್ಹಾರ–ಕೆಂಪುನೈದಿಲೆ. ಸ್ಫಟಿಕಸರೋವರ–ಸ್ವಚ್ಛವಾದ ಕೊಳ. ಹರ್ಮ್ಯಸ್ಥಳ–ಮನೆಗಳ ಆವರಣ. ಶುಕ ಶಾರಿಕಾನಿನದ–ಗಂಡುಗಿಳಿ ಹೆಣ್ಣುಗಿಳಿಗಳ ದನಿ. ಮಯೂರತಾಂಡವ–ನವಿಲಿನ ನಾಟ್ಯ. ಪ್ರಮುದಿತ–ಸಂತೋಷಗೊಂಡ. ಗೌಡನಿತಂಬಿನೀ ಚರಣಾಲಕ್ತಕರಸ–ಗೌಡ ದೇಶದ ಸ್ತ್ರೀಯರ ಪಾದಗಳ ಅಲತಿಗೆಯ ರಸ. ಆಕೀರ್ಣ–ಚದುರಿದ.

ಚಿತ್ರವರ್ಣಾಸ್ತರಣ–ಬಣ್ಣಬಣ್ಣಗಳಲ್ಲಿ ಸಿದ್ಧವಾದ ರತ್ನಗಂಬಳಿ. ಪ್ರಮದಾವನ–ರಾಜನ ಅಂತಃಪುರಸ್ತ್ರೀಯರ ವಿಹಾರಕ್ಕೆ ಇರುವ ಉದ್ಯಾನವನ. ಪನ್ನಗಕುಲ–ಹಾವುಗಳ ಸಂತಾನ. ಕೋಶಗೃಹ–ಭಂಡಾರ. ಮಕರಪತ್ರ–ಮುಖ ಮೊದಲಾದೆಡೆ ಬಣ್ಣದ ಪುಡಿಗಳಿಂದ ವಿವಿಧಾಕೃತಿಗಳಲ್ಲಿ ಬರೆದುಕೊಳ್ಳುತ್ತಿದ್ದ ಚಿತ್ತಾರ ; ಸ್ತ್ರೀಯರ ಅಲಂಕಾರವಾಗಿ ಉಲ್ಲೇಖವಾಗುವುದೇ ಸಾಮಾನ್ಯ, ಈ ಶಬ್ದ. ನಿರಂತರಕಾರಿತ–ಎಡೆಬಿಡದೆ ಮಾಡಿಸಿದ. ಸೇತುಕೂಪಾರಾಮಪ್ರಪಾವಸಥ–ಸೇತುವೆ ಬಾವಿ ಉದ್ಯಾನವನ ಅರವಟಿಗೆಯ ಮನೆ. ಪ್ರತಿಷ್ಠಾವಿಖ್ಯಾತ–ಹೆಚ್ಚುಗಾರಿಕೆಯಿಂದ ಪ್ರಸಿದ್ಧರಾದ. ಸುಕೃತಿಜನ–ಪುಣ್ಯಶಾಲಿಗಳು. ಮದನಶರ–ಕಾಮನ ಬಾಣ. ವಾರಾಂಗನಾನಿಕುರುಂಬ–ವೇಶ್ಯೆಯರ ಸಮೂಹ. ವಂದಿಮಾಗಧಗೀಯಮಾನ–ಸ್ತುತಿಪಾಠಕರಿಂದ ಹಾಡಲ್ಪಡುವ. ಬಿರುದಪ್ರಬಂಧ–ಗೌರವ ಸೂಚಕವಾದ ಪ್ರಶಸ್ತಿಗಳ ಕಾವ್ಯಪಾಠ. ಘೋಷಾಕರ್ಣನ ಪ್ರಮುದಿತ–ಉಗ್ಗಡಣೆಯನ್ನು ಆಲಿಸುವುದರಿಂದ ಸಂತೋಷಗೊಂಡ. ಆತಪತ್ರಚ್ಛಾಯೆ–ಕೊಡೆಯ ನೆರಳು.

ಪ್ರಬುದ್ಧ ಸರ್ವಲೋಕಯುತವಾದುದರಿಂ . . . ದ್ವಿಜರಾಜಸುರಸರಿತ್ಸಜ್ಜನನಿಕರ ಸಮೇತಮಾಗಿ–ಈ ಮುಂದಿನ ಕೆಲವು ವಾಕ್ಯಖಂಡಗಳಲ್ಲಿ ಪಾಟಲೀಪುತ್ರದ ವರ್ಣನೆ ಶ್ಲೇಷಾಲಂಕಾರದೊಂದಿಗೆ ಬಂದಿದೆ. ಇಲ್ಲಿ ಉಪಮೇಯದ ಭಾಗದಲ್ಲಿ ಆ ಶ್ಲೇಷಾರ್ಥವುಂಟು. ಮೊದಲು ಸರಳವಾದ ನೇರವಾದ ಅರ್ಥವೂ ಅನಂತರದಲ್ಲಿ ರಾಜಧಾನಿ ಪಾಟಲೀಪುತ್ರಕ್ಕೆ ಅನ್ವಯಿಸುವ ಚಮತ್ಕಾರಿಕವಾದ ಅರ್ಥವೂ ಹೊರಡುವಂತಿದೆ. ಅದು ಹೀಗೆ : ೧. ಎಲ್ಲ ಲೋಕಗಳನ್ನೂ ನಿದ್ದೆಯಿಂದ ಎಚ್ಚರಿಸುವುದು (ಪ್ರಾತಃಕಾಲ), ೨. ಬುದ್ಧಿವಂತರಾದ ಜನಸಮುದಾಯದಿಂದ ಕೂಡಿದುದು ; ೧. ನೂರು ಯಜ್ಞಗಳ ಹೊಗೆಯಿಂದ ಪವಿತ್ರವಾದವನು (ಶತಮಖನೆನಿಸಿದ ಇಂದ್ರ), ೨. ನೂರು ಯಜ್ಞಗಳು ನಡೆದು ಪವಿತ್ರವಾದ ಸ್ಥಳ ; ೧. ಹೆಚ್ಚು ಜಲಚರ ಜೀವರಾಶಿಗಳಿಗೆ, ಜಲಸಮೃದ್ಧಿಗೆ (=ಜೀವನ) ಆಧಾರವಾದುದು (ಸಮುದ್ರ), ೨. ಬಹುಜನರ ಜೀವನಕ್ಕೆ ಆಧಾರವಾದುದು ; ೧. ಸಂತುಷ್ಟ

ವಾದ ಹಾವುಗಳ ಸಮೂಹದಿಂದ ಕೂಡಿದುದು (ನಾಗಲೋಕ), ೨. ಸಂತುಷ್ಟರಾದ ವಿಟಜನರ ಸಮೂಹದಿಂದ ಕೂಡಿದುದು ; ೧. ಬಹಳ ಮಂದಿ ದೇವತೆಗಳ ನೆಲೆಯಾಗಿದೆ (ಮೇರು), ೨. ಅನೇಕ ದೇವಾಲಯಗಳಿಂದ ಕೂಡಿದೆ ; ೧. ಅತ್ಯುಚ್ಚವಾದ ಅಬ್ಬರದ ದನಿಯಿಂದ ತುಂಬಿರುವುದು (ಸಮುದ್ರ), ೨. ತೂರ್ಯವೆಂಬ ವಾದ್ಯದ ದೊಡ್ಡಧ್ವನಿ ಯಿಂದ ಕೂಡಿರುವುದು ; ೧. ಚಿನ್ನದ ಜಲಪಾತ್ರೆಗಳು (ಪವಿತ್ರತೀರ್ಥಗಳಿಂದ ತುಂಬಿಸಿದುದು) ಶೋಭಿಸುತ್ತಿರುವುದು. ೨. ಚಿನ್ನದ ಕಲಶಗಳು (ಸೌಧಗಳು, ದೇವಾಲಯಗಳಲ್ಲಿ) ಶೋಭಿಸುತ್ತಿರುವುದು : ೧. ವಿಷ್ಣುವಿನ ಕಥೆಯಲ್ಲಿ ಬರುವ ಅವನ ಬಾಲಕ್ರೀಡೆಗಳಿಂದ ಮನೋಹರವಾದುದು (ಹರಿಕಥೆ). ೨. ಮನೆಮನೆಗಳಲ್ಲಿ ಮಕ್ಕಳ ಆಟಗಳಿಂದ ರಂಜನೀಯ ವಾದುದು ; ೧. ಸಂತಾನವೆಂಬ ಪವಿತ್ರವೃಕ್ಷದಿಂದ ಸಮೃದ್ಧವಾಗಿ (ಇಂದ್ರನ ವನ), ೨. ಎಡೆಗಡಿಯದ ಸಂತತಿಯ ಸೌಭಾಗ್ಯದಿಂದ ಸಮೃದ್ಧವಾಗಿ ; ೧. ಆಕಾಶದ ವಿಸ್ತಾರದ ಹಾಗೆ ಪಕ್ಷಿರಾಜ ಗರುಡನಿಂದಲೂ ದೇವಗಂಗೆ ಮತ್ತು ಪುಣ್ಯಶಾಲಿಗಳಿಂದಲೂ ಕೂಡಿದುದು, ೨. ಬ್ರಾಹ್ಮಣಶ್ರೇಷ್ಠರು, ಗಂಗಾನದಿ ಮತ್ತು ಒಳ್ಳೆಯ ಜನದಿಂದ ಕೂಡಿದುದು.

ವರುಷಿಸು–ಮಳೆಗರೆ. ಕರಿಘಟೆ–ಆನೆಗಳ ಹಿಂಡು. ವಾರವಿಲಾಸಿನಿ–ಗಣಿಕೆ, ವೇಶ್ಯೆ. ಮಣಿಶೇಖರ–ರತ್ನದ ಕಿರೀಟ. ಸಮಯಾತಿಪಾತಶಂಕಾಯುತರಾಗಿ–ಹೊತ್ತು ಮೀರುವುದೇನೋ ಎಂಬ ಅನುಮಾನದಿಂದ ಕೂಡಿದವರಾಗಿ ; ಇದು ಆಧುನಿಕ ಕಲ್ಪನೆ. ರಥಿಕ ಸಮ್ಮರ್ದ–ರಥಾರೂಢರಾದವರ ದಟ್ಟಣೆ. ಸಂಕ್ಷೋಭೆ–ಕೋಲಾಹಲ. ಜಗುಳು–ಜಾರು. ಮುಕ್ತಾಹಾರ–ಮುತ್ತಿನ ಹಾರ. ವರುಷಬಿಂದು–ಮಳೆಹನಿ. ವರುಷಾಕಾಲಛಂದ–ಮಳೆಗಾಲದ ರೀತಿ.

ಪು. ೩-೪ : ರತ್ನಸಿಂಹಾಸನ–ಮೈಸೂರಿನ ಅರಸರ ನೆನಪು ತರುವ ಮಾತು. ಸೂರ್ಯನಂತೆ ಬುಧಾನುಗತನಾಗಿ . . . ಭೂಭಾರಧಾರಣಕುಶಲನಾಗಿರುವ–ಇಲ್ಲಿಯ ವಾಕ್ಯಖಂಡಗಳಲ್ಲಿ ಈ ಮೊದಲು ನೋಡಿದಂತಹ ಶ್ಲೇಷಾರ್ಥದ ಚಮತ್ಕಾರವಿದೆ. ೧. ಬುಧಗ್ರಹವನ್ನು ಅನುಸರಿಸುವುದು, ೨. ವಿದ್ವಾಂಸರಿಂದ ಕೂಡಿರುವುದು ; ೧. ಸುಮಿತ್ರೆಯೆಂಬ ಪತ್ನಿಯಿಂದ ಸೇವೆಗೊಳ್ಳುವವನು, ೨. ಒಳ್ಳೆಯ ಸ್ನೇಹಿತರಿಂದ ಸುತ್ತುವರಿದವನು ; ೧. ಷಣ್ಮುಖನಿಂದ ಕೂಡಿದವನು, ೨. ದೊಡ್ಡ ಸೈನ್ಯವನ್ನು ಹೊಂದಿರುವವನು ; ೧. ಭೂಮಿಯನ್ನು ಹೊತ್ತಿರುವುದು, ೨. ಭೂಮಿಯನ್ನು ಕಾಪಾಡುವುದು. ಪೃಥ್ವೀಸಾಮ್ರಾಜ್ಯಂಗೆಯ್–ಭೂಮಂಡಲದ ಆಧಿಪತ್ಯವನ್ನು ಮಾಡು.

ವರ್ಣಸಾಂಕರ್ಯ ಶುದ್ಧಿಗಳು ಕನಕದಲ್ಲಿ . . . ಅಶ್ವಗತಿಶಿಕ್ಷಾವಿಶೇಷದಲ್ಲಿ–ಇಲ್ಲಿಯೂ ಶ್ಲೇಷಾರ್ಥದ ಚಮತ್ಕಾರಗಳುಂಟು. ಬೇರೆ ಲೋಹದ ಬಣ್ಣ ಬೆರೆಯುವುದು ಹಾಗೂ ಶುದ್ಧತೆ ಚಿನ್ನದಲ್ಲಿ, ಆದರೆ ಆಳಿಕೆಯ ಸೀಮೆಯಲ್ಲಿ ಬ್ರಾಹ್ಮಣಾದಿ ವರ್ಣಗಳ ನಡುವೆ ವರ್ಣಸಂಕರವಾಗುವ ಸಮಾಚಾರ ಎಂಬುದಿಲ್ಲ (ಶುದ್ಧಿ=ಸಮಾಚಾರ) ; ಸೂರ್ಯನೊಂದಿಗೆ (ಮಿತ್ರ=ಸೂರ್ಯ) ದ್ವೇಷ ನೈದಿಲೆಗಳಲ್ಲಿ ಉಂಟು, ಆದರೆ ಸ್ನೇಹಿತರನ್ನು ದ್ವೇಷಿಸುವುದು ಎಂಬುದಿಲ್ಲ ; ಕೋಲು ಹಿಡಿಯುವುದು ಎನ್ನುವುದು ಮುಪ್ಪಿನಲ್ಲಿ, ಆದರೆ ದಂಡದ ವಸೂಲಿ ಎನ್ನುವುದಿಲ್ಲ ; ಚಂಚಲತೆ ಎನ್ನುವುದು ಬಾವುಟದ ಹಾರಾಟದಲ್ಲಿ, ಮನುಷ್ಯ ಸ್ವಭಾವದಲ್ಲಿ ಅಲ್ಲ ; ಕಟ್ಟುವುದು ಎನ್ನುವುದು ಹೂವಿನಲ್ಲಿ (ಹೂ ಕಟ್ಟುವುದು), ಆದರೆ

ಬಂಧಿಸುವುದು ಎನ್ನುವುದಿಲ್ಲ ; ಜ್ಯೇಷ್ಠಾನಕ್ಷತ್ರವನ್ನು ಮೀರುವುದು ಎನ್ನುವುದು ಚಂದ್ರ ಗ್ರಹದಲ್ಲಿ, ಆದರೆ ಹಿರಿಯರನ್ನು ಮೀರುವುದು ಎನ್ನುವುದು ಇಲ್ಲ ; ಹಿಡಿತದಲ್ಲಿಟ್ಟು ಕೊಳ್ಳುವುದು ಮನಸ್ಸಿನ ವಿಷಯದಲ್ಲಿ, ಆದರೆ ರಾಜ್ಯದಲ್ಲಿ ಹಿಂಸೆ ಪೀಡೆ ಎನ್ನುವುದು ಇಲ್ಲ; ಮಲಿನವಾದ ಆಕಾಶ ಎನ್ನುವುದು ಮಳೆಗಾಲದಲ್ಲಿ, ರಾಜ್ಯದಲ್ಲಿ ಕೊಳಕುಬಟ್ಟೆ ತೊಟ್ಟಿರುವುದು ಎನ್ನುವುದಿಲ್ಲ ; ಚಾವಟಿಯ ಪೆಟ್ಟಿನ ಭಯ ಕುದುರೆಗೆ ನಡಗೆಗಳನ್ನು ಕಲಿಸುವುದರಲ್ಲಿ ಉಂಟು, ಆದರೆ ಜನಸಾಮಾನ್ಯಕ್ಕೆ ಚಾವಟಿಪೆಟ್ಟಿನ ಭಯವಿಲ್ಲ.

ಕಲಾಕಲಾಪ–ಕಲೆಗಳ ಸಮೂಹ. ಅಷ್ಟಮಂತ್ರಿಗಳು–ಸರ್ವಾರ್ಥಸಿದ್ಧಿರಾಯನ ೮ ಮಂದಿ ಮಂತ್ರಿಗಳು : ವಕ್ರನಾಸ, ಸುಮತಿ, ಅಮಾತ್ಯರಾಕ್ಷಸ ಮೊದಲಾದವರು. ಘಟಿತ ಸಂಧಿವಿಗ್ರಹವುಳ್ಳವನು–ಸಂಧಿಸ್ಥಾನಗಳನ್ನು ಕೂಡಿಸಿದ ಶರೀರವುಳ್ಳವನು, ಜರಾಸಂಧ; ಸಂಧಿ ಮತ್ತು ಯುದ್ಧಗಳನ್ನು ಘಟನೆಮಾಡುವವನು ಅಮಾತ್ಯರಾಕ್ಷಸ. ಜರಾಸಂಧ–ಜರೆಯೆಂಬ ರಾಕ್ಷಸಿ ಎರಡು ಸೀಳುಗಳನ್ನು ಕೂಡಿಸಿ ಜೀವ ಬಂದ ಶಿಶು (ನೋ. ಪುನಾಚೂ. ಪು. ೨೪೪); ಧೌಮ್ಯ-ಪ್ರತ್ಯೂಷನ ಮಗ ; ದೇವಲ ಮಹರ್ಷಿಯ ಸೋದರ ; ಪಾಂಡವರ ಪುರೋಹಿತ (ಪುನಾಚೂ. ಪು. ೩೫೮). ಬೃಹಸ್ಪತಿ–ಅಂಗಿರಸ ಮುನಿಯ ಮಗ ; ದೇವತೆಗಳ ಗುರು ; ವೃಷಪರ್ವ-ಕಶ್ಯಪ ಮತ್ತು ದನು ಇವರ ಪುತ್ರನಾದ ಒಬ್ಬ ದಾನವ ; ಗುರು ಶುಕ್ರಾಚಾರ್ಯ (ಪುನಾಚೂ. ಪು. ೫೮೫ ೩); ರಾಕ್ಷಸನೆಂಬ ಅಮಾತ್ಯನು– ನೋಡಿ : ಪೀಠಿಕೆ. ಅಷ್ಟಸೇನಾನಾಯಕರು–ಸರ್ವಾರ್ಥಸಿದ್ಧಿರಾಜನ ೮ ಮಂದಿ ಸೇನಾಪತಿಗಳು ; ಅವರು ಬಾಗುರಾಯಣ, ಸಿಂಹಬಲ, ಭದ್ರಭಟ, ಡಿಂಗಿರಾತ, ಬಲಗುಪ್ತ, ವಿಜಯವರ್ಮ, ಲೋಹಿತಾಕ್ಷ, ಪುರುಷದತ್ತ ಎಂಬವರು. ಸ್ವಾಮಿನಿ–ಒಡತಿ.

ಮುದಿತ–ಹರ್ಷಿಸಿದ. ಚಂದ್ರಿಕೆ–ಬೆಳುದಿಂಗಳು. ಕನ್ನೈದಿಲೆ–ಕಪ್ಪುನ್ನೈದಿಲೆ, ನೀಲೋತ್ಪಲ. ಪದ್ಮರಾಗಾಭರಣ–ಮಾಣಿಕ್ಯದ ಒಡವೆ. ಕುಸುಂಭವಸ್ತ್ರ–ಕೇಸರಿಬಣ್ಣದ (ಕೆಂಪು ಬಣ್ಣ) ಬಟ್ಟೆ. ಧವಳಾಂಶುಕ–ಬಿಳಿಯ ಬಟ್ಟೆ. ಚಂಪಕಮಾಲಿಕಾಸದೃಶ–ಸಂಪಿಗೆಹೂಹಾರವನ್ನು ಹೋಲುವ. ಸೀಮಂತಿನೀ–ಸ್ತ್ರೀ. ಅಲಕ್ತಕರಸ–ಅಲತಿಗೆಯ ದ್ರವ. ಲಲಾಟದೇಶ–ಹಣೆಯಪ್ರದೇಶ. ಧಮ್ಮಿಲ್ಲಕುಸುಮಧೂಳಿ–ಕೇಶರಾಶಿಯ ಪುಷ್ಪಪುರಾಗ. ಸಮಯವಿಶೇಷ –ಪ್ರತ್ಯೇಕವಾದ, ಬೇರೆಯಾದ ವೇಳೆ. ರತಿ–ಸಂಭೋಗ. ಶ್ರಮಜಲಬಿಂದು–ಬೆವರಿನ ಹನಿ. ಸಮಯಾಂತರ–ಬೇರೆ ವೇಳೆ. ವಾಸಿತಮಾದ–ವಾಸನೆ ಹತ್ತಿದ. ಹೇಮಶೃಂಗ–ಚಿನ್ನದ ಕೊಂಬು. ಗವಾಕ್ಷ–ಬೆಳಕುಕಿಂಡಿ. ಕಿಟಕಿ. ಕಾಲಾಗರುಧೂಮ–ಕಪ್ಪು ಅಗಿಲುಚಕ್ಕೆಯ ಹೊಗೆ. ಧೂಮಧೂಪಿತ–ಹೊಗೆಯಿಂದ ಮಲಿನಗೊಂಡ. ಮೇಲುಗಟ್ಟು–ಚಪ್ಪರ ಕಂಬ ಛಾವಣಿ ಮೊದಲಾದವುಗಳಲ್ಲಿ ಅಲಂಕಾರಕ್ಕೆ ಕಟ್ಟುವ ತೋರಣ ಮೊದಲಾದವು, ವಿತಾನ. ಶ್ವೇತಪರ್ಯಂಕಗತ ಹಂಸತೂಲಿಕಾತಲ್ಪ–ಬಿಳಿಯ ಮಂಚದಲ್ಲಿರುವ, ಹಂಸದ ಗರಿಗಳನ್ನು ತುಂಬಿ ಸಿದ್ಧಪಡಿಸಿದ ಮೃದುವಾದ ಹಾಸಿಗೆ. ಮಧುಕರರವ–ದುಂಬಿಯ ಝೇಂಕಾರ. ಕಪ್ಪ–ಸಾಮಂತರಿಂದ ಅಧಿರಾಜನಿಗೆ ನಿಯತವಾಗಿ ಸಲ್ಲುವ ಹಣ ಒಡವೆ ಮೊದಲಾದ ಕಾಣಿಕೆ, ಪೊಗದಿ. ಅಂಜಲಿಬಂಧ–ಕೈಗಳನ್ನು ಬೊಗಸೆಯಾಗಿ ಜೋಡಿಸಿ ಹಣೆಯ ಬಳಿ ಇಟ್ಟುಕೊಂಡು ಮಾಡುವ ನಮಸ್ಕಾರ, ಕೈಮುಗಿಯುವುದು. ತುರಗಖುರರವ–ಕುದುರೆಗಳ ಗೊರಸಿನ ಧ್ವನಿ. ಬಧಿರೀಕೃತ–ಕಿವುಡುಮಾಡಲ್ಪಟ್ಟ. ಡೋಳಾಯಮಾನ–ತೂಗುಯ್ಯಾಲೆ

ಯಂತಿರುವ. ಗಜಘಟಾಗಂಡಮಂಡಲೀನಿಸ್ಸೃತ–ಆನೆಗಳ ಹಿಂಡಿನ ಕಪೋಲಸ್ಥಲದಿಂದ ಸುರಿಯುವ. ಪಂಕಿಲಮಾದ–ಕೆಸರೆದ್ದ. ಸೇನಾಚರಣಕ್ಷೋಭಪ್ರಸೃತಧೂಳೀನಿಕುರುಂಬದಿಂ ಧೂಸರವರ್ಣಗಳಾದ–ಸೈನ್ಯದ ಪಾದಗಳ ಘಟ್ಟಣೆಯಿಂದ ಹರಡಿದ ದೂಳಿನ ರಾಶಿ. ಪದಾತಿ–ಸೇನೆಯ ಕಾಲುಬಲ, ನೆಲದ ಮೇಲೆ ನಿಂತು ಹೋರಾಡುವವರು. ಶೀರ್ಯಮಾಣ –ಸೀಳಿ ಹೋದ. ಕರ್ಣವಿವರಗಳು–ಕಿವಿಯ ರಂಧ್ರಗಳು. ಪ್ರಚಲಿತ–ಅಲುಗಾಡುವ. ಪುಂಜೀಭೂತ–ಒಟ್ಟುಗೂಡಿದ. ನಿವಾರಿತ–ಹೋಗಲಾಡಿಸಿದ.

ಶರತ್ಕಾಲ–ಆಶ್ವಯುಜ ಕಾರ್ತಿಕ ಮಾಸಗಳನ್ನೊಳಕೊಂಡ ಕಾಲ : ಮಳೆಗಾಲದ ನಂತರದ ಋತು. ಕಾರ್ಮುಗಿಲು–ಮಳೆಗಾಲದ ಮೋಡ. ಧವಳಾಪಾಂಗವೀಕ್ಷಣ–ಬೆಳ್ಳನೆಯ ಕಡೆಗಣ್ಣಿನ ನೋಟ. ಪುರವೀಧಿ–ಪಟ್ಟಣದ ಬೀದಿ. ಕ್ಷಾಳಿತ–ತೊಳೆಯಲ್ಪಟ್ಟುದು. ಅಶ್ವಿನೀ ದೇವತೆಗಳಿಂ ಕೂಡಿರುವ ಭಾರ್ಗವಚ್ಯವನನಂತೆ–ದೇವಲೋಕದ ವೈದ್ಯರಾದ ಅಶ್ವಿನೀ ದೇವತೆಗಳಿಂದ ಕೂಡಿರುವ, ಭೃಗುಮಹರ್ಷಿಪುತ್ರನಾಗಿ ಭಾರ್ಗವನೆನ್ನಿಸಿದ, ಚ್ಯವನ ಮಹರ್ಷಿಯ ಹಾಗೆ ; ಚ್ಯವನನು ಅಶ್ವಿನೀದೇವತೆಗಳ ಮೂಲಕ ತಾರುಣ್ಯವನ್ನು ಪಡೆದ ಕಾರಣ, ತನ್ನ ಮಾವ ಶರ್ಯಾತಿರಾಜನಿಂದ ಯಜ್ಞಮಾಡಿಸಿ, ಆ ದೇವತೆಗಳಿಗೆ ಹವಿರ್ಭಾಗ ಕೊಡಿಸಿದನು. ವೀತಹವ್ಯ–ಮಹಾಭಾರತದ ಅನುಶಾಸನಪರ್ವದಲ್ಲಿ ಈ ಹೆಸರಿನ ವ್ಯಕ್ತಿಯೊಬ್ಬನ ಪ್ರಸ್ತಾವವಿದೆ, ಅವನು ಶರ್ಯಾತಿವಂಶದ ವತ್ಸನೆಂಬವನ ಮಗ ; ಆದರೆ ಮುದ್ರಾಮಂ. ದಲ್ಲಿ ಉಕ್ತನಾದವನು ಒಬ್ಬ ಮುನಿ (ಮುದ್ರಿತ ಪರಿಷ್ಕರಣಗಳಲ್ಲಿ ವೀತಿಹೋತ್ರ ಎಂದಿದೆ; ಮಹಾಭಾರತದ ಆದಿಪರ್ವದಲ್ಲಿ ಈ ಹೆಸರಿನ ಒಬ್ಬ ದೊರೆಯಿದ್ದಾನೆ).

ಕಂಚುಕೀವಾಕ್ಯ–ದ್ವಾರಪಾಲಕನ ಮಾತು. ಹಸ್ತಲಾಘವ–ಗೌರವದಿಂದ ಸ್ವಾಗತಿಸುವಾಗ ಇಲ್ಲವೆ ಆಸರೆಗಾಗಿ ಇನ್ನೊಬ್ಬರ ಕೈಯನ್ನು ಹಿಡಿದು ಕರೆತರುವುದು. ಅಂಜಲಿಬದ್ಧ ಯುಕ್ತನಾಗಿ–ಕೈಮುಗಿದುಕೊಂಡವನಾಗಿ.

ಪುತ್ರಪ್ರದಾಯಕ–ಮಗನನ್ನು ನೀಡುವುದು, ಕರುಣಿಸುವುದು. ಅಮೃತಾಪಾಂಗನಿರೀಕ್ಷಣ–ಅಮೃತಪ್ರಾಯವಾದ ಕಡೆಗಣ್ಣಿನ ನೋಟ. ಪಿತೃಋಣ–ಮಕ್ಕಳು ತಂದೆತಾಯಂದಿರು ಮೊದಲಾದ ಗತಿಸಿದ ಹಿರಿಯರಿಗೆ ಅವಶ್ಯವಾಗಿ ಸಲ್ಲಿಸಬೇಕಾದ ಪಿತೃಕಾರ್ಯಗಳ ಕರ್ತವ್ಯ. ಸುರನದೀತರಂಗಶೀಕರ–ದೇವಗಂಗೆಯ ಅಲೆಗಳಿಂದೆದ್ದ ತುಂತುರುಹನಿ. ಆಲವಾಲ ಮಂಡಲಗಳು–ನೀರು ನಿಲ್ಲಲೆಂದು ಗಿಡಮರಗಳ ಸುತ್ತ ಕಟ್ಟಿದ ಪಾತಿಗಳು. ಮೂಲ ಪ್ರದೇಶ–ಗಿಡಮರಗಳ ಬುಡದ ಭಾಗ. ಉಪಶಾಂತ–ತಾಳ್ಮೆ ಸಹನೆಗಳಿಂದ ಕೂಡಿದ. ಸಿಂಹಶಾಬಕ–ಸಿಂಹದ ಮರಿ. ಸುಹೃತ್–ಸ್ನೇಹ. ಪ್ರವರ್ತಮಾನ–ತೊಡಗುವ. ಕ್ರತುಮಂತ್ರವಷಟ್ಕಾರಶ್ರವಣಶಿಕ್ಷಿತ–ಯಜ್ಞಯಾಗಗಳಲ್ಲಿ ಉಚ್ಚರಿಸುವ ಮಂತ್ರವಾದ ವಷಟ್ಕಾರ (ದೇವತೆಗಳನ್ನು ಉದ್ದೇಶಿಸಿ ಹವಿಸ್ಸನ್ನು ಅರ್ಪಿಸುವಾಗ ಹೇಳುವ ಮಂತ್ರಾಕ್ಷರ) ವನ್ನು ಕೇಳಿ ಕಲಿತ.

ಕನಕಪುತ್ತಳಿ–ಚಿನ್ನದ ಪ್ರತಿಮೆ. ನೂಪುರಧ್ವನಿ–ಕಾಲಂದುಗೆಯ ದನಿ. ಗೃಹಹಂಸೆ–ಸಾಕಿದ ಹೆಣ್ಣುಹಂಸ. ಪಕ್ಷ–ರೆಕ್ಕೆ. ವಜ್ರಶಲಾಕೆ–ವಜ್ರದ ಸರಳು. ಕೌಶೇಯವಸ್ತ್ರ–ರೇಶ್ಮೆ ವಸ್ತ್ರ. ಅತಿಗುರು ನಿತಂಬಜಘನಭಾಗ–ತುಂಬ ಭಾರವಾದ ಪಿರ್ರೆಗಳು ಮತ್ತು ಸೊಂಟದ ಮುಂಭಾಗ. ಮಯೂರ ಪಿಂಛಕಲಾಪ–ನವಿಲುಗರಿಗಳ ಕಟ್ಟು. ಕಾಂಚೀದಾಮ–ಹೆಂಗಸರ

ನಡುಕಟ್ಟು, ಕಟಿಸೂತ್ರ. ಮರಕತಮಣಿ–ಪಚ್ಚೆ. ದೂರ್ವಾಂಕುರ ಬುದ್ಧಿಯಿಂ–ಎಳೆಚಿಗುರು ಎಂಬ ಭಾವನೆಯಿಂದ. ಜಿಹ್ವಾಪಲ್ಲವ–ಚಿಗುರಿನಂತಹ ನಾಲಗೆ. ಗತಿನಿರೋಧಕುಪಿತ–ಚಲನೆಯ ತಡೆಯಿಂದ ಕೆರಳಿದ. ಚಾಮರಗ್ರಾಹಿಣಿ–ಬೀಸಣಿಗೆ ಹಿಡಿದಿರುವವಳು, ಚಾಮರಿಗಿತಿ. ಕುಸುಮಶರ–ಮನ್ಮಥ. ವಿಜಯವರ್ಣಾವಳಿ ಪಂಗ್ತಿ–ಜಯದ ಬರಹದ ಸಾಲು.

ರೋಮರಾಜಿ–ಕೂದಲ ರಾಶಿ (ಇಲ್ಲಿ ಬಾಸೆ, ಎಂದರೆ ಎದೆಯ ಮಧ್ಯಭಾಗದಿಂದ ಹೊಕ್ಕುಳ ಮೇಲು ಭಾಗದವರೆಗೆ ರೇಖಾಕೃತಿಯಾಗಿರುವ ತೆಳುಗೂದಲಿನ ಸಾಲು). ಮಾಲತೀಲತೆ–ಜಾಜಿಯ ಬಳ್ಳಿ. ಮುಕ್ತಾಹಾರ–ಮುತ್ತಿನ ಹಾರ. ಉದುಭವಿಸು–ಉದ್ಭವಿಸು, ಹುಟ್ಟು. ಭವನದೇಶ–ಮನೆಯ ಭಾಗ. ನೀಲೋತ್ಪಲ–ಕನ್ನೈದಿಲೆ. ವಿಧಿವಿಲಾಸ–ಬ್ರಹ್ಮನ ವಿಚಿತ್ರ. ಚಂಪಕಕುಟ್ಮಲ–ಸಂಪಿಗೆಮೊಗ್ಗು. ಒಡಂಬಡಿಸು–ಹೋಲು. ರೋಹಿಣೀನಕ್ಷತ್ರ–೨೭ ನಕ್ಷತ್ರಗಳಲ್ಲಿ ೪ನೆಯದು, ಕೆಂಪುಬಣ್ಣದ ಹೊಳಪಿನ ನಕ್ಷತ್ರ. ನಾಸಾಮೌಕ್ತಿಕ–ಮೂಗುಬೊಟ್ಟು. ಕರ್ಣಾವತಂಸ–ಕರ್ಣಾಭರಣ. ನಿಷ್ಯಂದ–ಸ್ರವಿಸುವ. ತಾಟಂಕಯುಗ್ಮ–ಓಲೆಯ ಜೋಡಿ, ಜೋಡಿ ಕರ್ಣಾಭರಣ. ಫಾಲದೇಶ–ಹಣೆಯ ಭಾಗ. ಕೌಶೇಯವಿತಾನ–ರೇಶ್ಮೆಯ ಮೇಲುಕಟ್ಟು. ಕೌಸುಂಭ ವಸ್ತ್ರವಿತಾನ–ಕೇಸರಿ ವರ್ಣದ ಬಟ್ಟೆಯ ಮೇಲುಕಟ್ಟು. ಪದ್ಮರಾಗ–ಮಾಣಿಕ್ಯ, ಕೆಂಪು.

ಈ ಮುಂದಿನ ಕೆಲವು ವಾಕ್ಯಖಂಡಗಳಲ್ಲಿ ಶ್ಲೇಷಾರ್ಥವುಂಟು ; ಪರ್ಷಾಕಾಲಶ್ರೀ-ಮಳೆಗಾಲದ ಸೊಗಸು (ಮಳೆಗಾಲವೆಂಬ ಲಕ್ಷ್ಮಿ) ; ಘನಕೇಶಪಾಶ–೧. ಮೋಡಗಳೆಂಬ ಕೂದಲ ಬಲೆ, ೨. ಭಾರವಾದ ಕೂದಲ ರಾಶಿ. ಧನಾಧಿಪಲಕ್ಷ್ಮಿ–ಕುಬೇರನ ಸಂಪತ್ತು. ಅಳಕೋದ್ಭಾಸಿನಿ–೧. ಅಲಕಾನಗರದಿಂದ ಬೆಳಗುವುದು, ೨. ಮುಂಗುರುಳಿನಿಂದ ಶೋಭಿಸುವವಳು. ಮೂರ್ತಿಮತಿ–ಆಕಾರ ತಳೆದುದು. ಸುರತಾಧಿರಾಜ್ಯ–ಕಾಮಸಾಮ್ರಾಜ್ಯ.

ಅಭಿವಂದಿಸು–ನಮಸ್ಕರಿಸು. ಮಧುಪರ್ಕಾದಿಗಳು–ಪೂಜ್ಯರಾದ ಅತಿಥಿಗಳಿಗೆ ಸತ್ಕಾರಪೂರ್ವಕವಾಗಿ ಅರ್ಪಿಸುವ ಮೊಸರು ತುಪ್ಪ ನೀರು ಜೇನುತುಪ್ಪ ಮತ್ತು ಸಕ್ಕರೆ ಈ ಐದರ ಮಿಶ್ರಣ. ತಳಿ–ಸಿಂಪಡಿಸುವುದು, ಸೂಸು. ಸ್ತಿಮಿತವಾಗು–ಅಲುಗಾಡದಿರು, ಸ್ಥಿರವಾಗು. ಅನುಮತನಾಗು–ಒಪ್ಪುವವನಾಗು. ನಭೋಮಂಡಲದಲ್ಲಿ . . . ಚಲಿಸದೆ ನಿಂತಿತು–ಇಲ್ಲಿ ಬರುವ 'ಚಂದ್ರಮಂಡಲ', 'ಚಂದ್ರಬಿಂಬ' ಎಂಬ ಮಾತುಗಳು ಪರೋಕ್ಷವಾಗಿ ಚಂದ್ರಗುಪ್ತನನ್ನೇ ನೆನಪಿಸುತ್ತವೆ. ಮಹೋದಯ ಪುಣ್ಯಕಾಲ–?. ಮುನಿಪ–ತಪಸ್ವಿಗಳಲ್ಲಿ ಮುಖ್ಯನು. ಪೂರ್ವಕ–ಸಹಿತವಾಗಿ.

ದ್ವಿತೀಯಾಶಯ

ಪು. ೮-೧೦ : ಮೌರ್ಯ–ಸರ್ವಾರ್ಥಸಿದ್ಧಿರಾಯನ ಮುರಾದೇವಿಯೆಂಬ ಶೂದ್ರಸ್ತ್ರೀ ಪತ್ನಿಯ ಪುತ್ರನಾದುದರಿಂದ ಈ ಹೆಸರು ; ಅವನಿಗೆ ಪ್ರತ್ಯೇಕವಾಗಿ ಬೇರೆ ಹೆಸರು ಇರಲಿಲ್ಲವೆಂಬುದು. ಅವನು ಅರಸನಿಗೆ ಔರಸಪುತ್ರನಲ್ಲವೆಂಬುದನ್ನೂ ತಿರಸ್ಕಾರವನ್ನೂ ಹೇಳುತ್ತದೆ. ಪೂರ್ವಸಂಚಿತಧನ–ಮೊದಲೇ ಕೂಡಿಟ್ಟ ಹಣ. ಬಹುಪತ್ನಿಯರಲ್ಲಿ ಚಂದ್ರಗುಪ್ತ ಮೊದಲಾದ ನೂರು ಮಂದಿ ಕುಮಾರರು–ಮೌರ್ಯನಿಗೆ ಆ ಪತ್ನಿಯರು ಯಾರು, ಇವರಲ್ಲಿ ಚಂದ್ರಗುಪ್ತ ಯಾರ ಮಗ, ಒಂದೂ ತಿಳಿಯುವುದಿಲ್ಲ. ಇಲ್ಲಿಯೂ ತಿರಸ್ಕಾರ

ಸ್ಪಷ್ಟ. ಕಡಮೆ ಕುಮಾರರು–ಇತರ ಪುತ್ರರು. ಕನಿಷ್ಠ–ಚಿಕ್ಕ ವಯಸ್ಸಿನವನು. ಬುದ್ಧಿಮತಿ–ಬುದ್ಧಿವಾದ, ವಿವೇಕ.

ಗಳಿತವಾಗು–ಕಳೆದುಹೋಗು. ಮಹಾದಾನಂಗಳು–ತುಲಾಪುರುಷ, ಹಿರಣ್ಯಗರ್ಭ ಇತ್ಯಾದಿ ೧೬ ದಾನಗಳು (ನೋಡಿ : ಶ್ರೀವತ್ಸ ನಿಘಂಟು, ಪು. ೩೨೭). ಮತ್ತರು–ಸೊಕ್ಕಿದವರು. ಜ್ಞಾತಿಗಳು–ಅಣ್ಣತಮ್ಮಂದಿರ ಮಕ್ಕಳು, ಮೊಮ್ಮಕ್ಕಳು. ವ್ಯಾಘ್ರನಿಗ್ರಹಕ್ಕೆ ಚೋರರಂ ನೇಮಿಸುವಂತೆ–ತಾನು ಕಳ್ಳರ ಕಾಟದಿಂದ ತಪ್ಪಿಸಿಕೊಳ್ಳಲು ಅವರಿಗೆ ಹುಲಿಯ ಬೆದರಿಕೆ ಹುಟ್ಟಿಸಿ ಓಡಿಸುವ ಒಂದು ಉಪಾಯ (ಮುದ್ರಿತ ಪರಿಷ್ಕರಣಗಳಲ್ಲಿ " 'ಕಳ್ಳಾ ಕಳ್ಳಾ ಹುಲೀ ಇರಿ' ಎಂಬ ಲೋಕದ ಗಾದೆಯಂತೆ" ಎಂದು ಇದು ಮಾರ್ಪಟ್ಟಿದೆ). ನಿಗ್ರಹ–ನಾಶ, ಅಳಿವು. ಚಂದ್ರವಂಶಸ್ಥರಾದ ಪೂರ್ವೀಕರಾದ ಅರಸುಗಳು–ಕವಿ ಇಲ್ಲಿ ಆ ವಂಶದ ಕೌರವ ಪಾಂಡವರ ಜ್ಞಾತಿಕಲಹವನ್ನು ನೆನೆದಿದ್ದಾನೆ. ಅಪಥ್ಯಸೇವಾಸಮಯ–ಶರೀರಕ್ಕೆ ಅನಾರೋಗ್ಯಕರವಾದ ಆಹಾರಪದಾರ್ಥಗಳನ್ನು ರೋಗಿ ಸೇವಿಸುವ ಸಂದರ್ಭ. ಸರ್ಪಹನನ–ಹಾವುಗಳನ್ನು ಕೊಲ್ಲುವುದು. ಸಂಹೃತರಾಗು–ಸಂಹಾರವಾಗು. ಉಪಚಯ–ಅಭಿವೃದ್ಧಿ, ಏಳಿಗೆ. ಮನಸ್ವಿ–ಸ್ವಾಭಿಮಾನಿ, ಉತ್ಸಾಹಶಾಲಿ.

ಪು. ೧೧-೧೩ : ಕಲಿಯುಗದಲ್ಲಿ ಶೂದ್ರವೃತ್ತಿಯಿಂದ . . . ಶಾಸ್ತ್ರಸಿದ್ಧವು–(?). ಪುತ್ರಕ್ಲೇಶ–ಮಕ್ಕಳ ದೆಸೆಯಿಂದ ಕಷ್ಟ. ಭ್ರಾತುಗಳು–ಸೋದರರು (<ಸಂ. ಭ್ರಾತೃ). ಈ ಶಬ್ದರೂಪ ಚಿಂತನೀಯ. ಭಾಗಕರ್ತ–ಪಾಲುದಾರ, ಭಾಗಸ್ಥ. ವ್ಯಾಜಾಂತರ–ಏನಾದರೊಂದು ನೆಪ.

ದಾರುವರ್ಮ–ಒಬ್ಬ ಬಡಗಿ ಅಥವಾ ಶಿಲ್ಪಿಯ ಹೆಸರು (ದಾರು=ಕಾಷ್ಠ, ಮರ ಎಂಬುದರಿಂದ ಹೆಸರು ಅನ್ವರ್ಥಕವಾದುದು), 'ಮುದ್ರಾರಾಕ್ಷಸ'ದಲ್ಲಿಯೂ ಇದೇ ಹೆಸರು ಉಂಟು. ಗೃಹಪುರೋಭಾಗ–ಮನೆಯ ಮುಂಭಾಗ. ರಾಜಪೌರಾಣಿಕ–ಅರಸನಿಗೆ ಪುರಾಣೇತಿಹಾಸಗಳನ್ನು ಓದಿ ಹೇಳಿ, ವ್ಯಾಖ್ಯಾನಿಸಿ, ಕಾಲಕ್ಷೇಪಕ್ಕೆ ನೆರವಾಗುತ್ತಿದ್ದವನು. ಮುಮ್ಮಡಿಯವರ ಆಸ್ಥಾನದಲ್ಲಿ ಅಂತಹ ಏರ್ಪಾಡಿತ್ತು.

ಮುದ್ರಾಮಂ.ದಲ್ಲಿ ಮಹಾಭಾರತವನ್ನೇ ಪುರಾಣವೆಂದಿದೆ. ಅದು ದಿಟವಾಗಿ ಒಂದು ಇತಿಹಾಸಕಾವ್ಯ. ನಿಗ್ರಹಿಸು–ಕೊಲ್ಲು, ನಾಶಪಡಿಸು. ಪ್ರಯಾಗಮಾಹಾತ್ಮ್ಯಶ್ರವಣ–ಪ್ರಯಾಗಕ್ಷೇತ್ರದ ಮಹಿಮೆಯನ್ನು ಕೇಳಿಸುವುದು. ಅರ್ಧೋದಯ ಪುಣ್ಯಕಾಲ–ತಿಥಿ ವಾರಾದಿಗಳ ಯೋಗದಿಂದ ಉಂಟಾಗುವ ಒಂದು ಪರ್ವಕಾಲ. ಪುಷ್ಯ ಅಥವಾ ಮಾಘ ಮಾಸದಲ್ಲಿ ಅಮಾವಾಸ್ಯೆ ಭಾನುವಾರ, ಶ್ರವಣನಕ್ಷತ್ರ ಮತ್ತು ವ್ಯತೀಪಾತ ಇವು ಸೇರಿದಾಗ ಉಂಟಾಗುವ ಕಾಲ. ಮಾಘಮಾಸಸ್ನಾನ ಮಹಾವಿಶೇಷವೆಂಬ ಪುರಾಣವಾಕ್ಯ–ವಾಯು, ಪದ್ಮ ಈ ಕೆಲವು ಪುರಾಣಗಳಲ್ಲಿ ಮಾಘಮಾಸದ ಮಾಹಾತ್ಮ್ಯವರ್ಣನೆಯುಂಟು. ಸ್ಥಳಾಂತರವಾಸ–ಬೇರೆ ಸ್ಥಳದಲ್ಲಿ ವಾಸ. ಬೊಕ್ಕಸ–ಕೋಶಾಗಾರ.

ಪು. ೧೩-೧೬ : ಪಾಚಕರು–ಅಡಿಗೆಯವರು. ಶ್ರಾಂತರಾಗಿ–ದಣಿದವರಾಗಿ. ಅಂತರಗೃಹ–ಅಂತರ್ಗೃಹ, ನೆಲಮಾಳಿಗೆ. ಎಡೆಗಳಂ ಮಾಡಿಸು–ಊಟದ ಸಲುವಾಗಿ ಎಲೆ ಹಾಕಿಸು. ಮೇಲುಪಂಕ್ತಿ–ಮೇಲಿನ ಮನೆಯಲ್ಲಿ ಹಾಕಿಸಿರುವ ಭೋಜನಪಂಕ್ತಿ. ಕೈಮೊಹರ–ಸ್ವಂತ ಅಂಕಿತದ ಮುದ್ರೆ. ಗವಾಕ್ಷ–ಬೆಳಕುಕಿಂಡಿ, ಕಿಟಕಿ. ವಿಪರ್ಯಾಸಬರು–

ಸಾವುಂಟಾಗು. ಶ್ರವಗಂಧಭೂಯಿಷ್ಠ–ಹೆಣದ ಕೊಳೆತ ವಾಸನೆ ತುಂಬಿದುದು. ಪತ್ರಿಕಾಂತರ–ಬೇರೊಂದು ಕಾಗದ.

ಸುವಾಸಿನೀರೂಪ–ಸುಮಂಗಲಿಯ ವೇಷ. ತ್ರಿವೇಣಿ–ಪ್ರಯಾಗದ ಹತ್ತಿರ ಗಂಗೆ ಯಮುನೆ ಮತ್ತು ಸರಸ್ವತಿ ನದಿಗಳು ಸೇರುವ ಒಂದು ಪುಣ್ಯಸ್ಥಳ. ಪರಲೋಕಾರ್ಥವಾಗಿ–ಪಿತೃಲೋಕದ ಪ್ರಾಪ್ತಿಗಾಗಿ.

ಪುಷ್ಪವಾಟಿ–ಹೂದೋಟ. ಕ್ಷುತ್ತು–ಹಸಿವು. ಕಾಪಿಶಾಯನ–ಒಂದು ಬಗೆಯ ಮದ್ಯ. ಮಾಘನ 'ಶಿಶುಪಾಲವಧ'ದಲ್ಲಿ 'ಕಾಪಿಶಾಯನ ಸುಗಂಧಿ ವಿಘೂರ್ಣನ್ ಉನ್ಮದೋಽಧಿಶಯಿತುಂ ಸಮಶೇತ' ಎಂದು (ಸ. ೧೦-೪) ಇದರ ಉಲ್ಲೇಖವಿದೆ. ದೇಹಸ್ಮೃತಿ–ಶರೀರದ ಮೇಲಿನ ಪ್ರಜ್ಞೆ. ಪಾಕಶೇಷ–ಉಳಿದ ಅಡುಗೆ. ಸನ್ನೆಮರ–ಭಾರವಾದ ಅಥವಾ ಹೂತಿರುವ ಮರ ಅಥವಾ ಕಬ್ಬಿಣದ ವಸ್ತುವನ್ನು ಮೇಲೆತ್ತಲು ಬಳಸುವ ಸಾಧನ. ಸನ್ನೆಕೋಲು. ಒಳಪೊಗು–ಒಳಗೆ ಪ್ರವೇಶಿಸು. ಭಾರವಾಸಿಯಾದ–ಭಾರವಾದ. ಘಾತ–ಪೆಟ್ಟು. ವಿಂಗಡಿಸಿ–ಬೇರ್ಪಡಿಸಿ. ಸನ್ನಿಧಿಗೆ–ಹಿರಿಯರಾದ ತಮಗೆ. ಅನಿಷ್ಟ–ಅರಿಷ್ಟ, ಕೇಡು, ವಿಪತ್ತು ; ರೋಗಾದಿ ಉಪದ್ರವ. ಅನ್ಯೋನ್ಯಕಲಹ–ಪರಸ್ಪರ ಜಗಳ.

ಪು. ೧೭-೧೮ : ಒಕ್ಕಣೆ–ತಿಳಿಸಬೇಕಾದ ವಿಷಯದ ಬರೆವಣಿಗೆ. ಶೈತ್ಯೋಪಚಾರ–ಮೂರ್ಛೆ ಜ್ವರ ಮೊದಲಾದ ಸಂದರ್ಭಗಳಲ್ಲಿ ತಣ್ಣೀರು ಸಿಂಪಡಿಸುವುದು, ಗಾಳಿ ಬೀಸುವುದು ಮುಂತಾಗಿ ನಡಸುವ ತಂಪುಮಾಡುವ ಉಪಚಾರ. ಹೊರೆ–ರಕ್ಷಿಸು. 'ಕಸ್ಯ ಸೌಖ್ಯಂ ನಿರಂತರಂ'–ಸೌಖ್ಯ ಯಾರಿಗೆ ತಾನೇ ಸತತವಾಗಿರುತ್ತದೆ ?. ತಿಲೋದಕವಂ ಕೊಡು–ಮೃತರ ಸಲುವಾಗಿ ಅವರಿಗೆ ಸದ್ಗತಿ ಕೋರಿ ಮಂತ್ರಪೂರ್ವಕವಾಗಿ ಎಳ್ಳುನೀರು ಬಿಡು, ತರ್ಪಣ ಕೊಡು. ಅಕಾರಣಜ್ಞಾತಿದ್ರೋಹಿ–ನಿಷ್ಕಾರಣವಾಗಿ ದಾಯಾದಿಗಳಿಗೆ ದ್ರೋಹ ಬಗೆದವನು. ವಾನಪ್ರಸ್ಥ–ಗೃಹಸ್ಥನು ವೃದ್ಧಾಪ್ಯದಲ್ಲಿ ಸಾಂಸಾರಿಕಕ್ಲೇಶಗಳಿಂದ ಬಿಡುಗಡೆ ಪಡೆಯಲು ಕಾಡಿನಲ್ಲಿ ವಾಸಮಾಡಲೆಂದು ತೆರಳುವುದು. ರಂಧ್ರಾನ್ವೇಷಿ–ತಪ್ಪು ಅಥವಾ ದೋಷಗಳನ್ನು ಹುಡುಕುವವನು ಹಾಗೂ ತನ್ನ ಅನುಕೂಲಕ್ಕೆ ಅವುಗಳ ಪ್ರಯೋಜನ ಪಡೆಯುವವನು. ವಿಹ್ವಲ–ಕಳವಳ. ಪ್ರಬುದ್ಧರಾದ–ವಯಸ್ಕರಾದ. ತುಚ್ಛಜೀವನ–ಕ್ಷುದ್ರವಾದ ಬದುಕು. ತಿರಿ–ಬೇಡು, ಯಾಚಿಸು. ಪಕ್ಷೀಕರಿಸು–ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳು.

ಪು. ೧೯-೨೦ : ಸಂತರ್ಪಣೆ–ಸಂತೃಪ್ತಿಗಾಗಿ ಭೋಜನ ಮಾಡಿಸುವುದು. ಗ್ರಾಮ ಶಾಂತಿಯಂ ಮಾಡಿಸು–ಊರಿಗೆ ಬಂದ ಅಶುಭದ ಪರಿಹಾರಕ್ಕೆ ನವಗ್ರಹಾದಿ ಪೂಜೆ, ಶಾಂತಿಕ್ರಿಯೆಗಳನ್ನು ವೈದಿಕರಿಂದ ಮಾಡಿಸು. ಉಂಬಳಿ–ಮಾನ್ಯವಾಗಿ ಕೊಡುವ ಕೊಡುಗೆ, ಎಂದರೆ ಕಂದಾಯವಿಲ್ಲದೆ ಅನುಭವಿಸಿಕೊಂಡು ಬರುವಂತೆ ದಾನಮಾಡುವ ಭೂಮಿ ಕಾಣಿಗೆಗಳ ಕೊಡುಗೆ, ಜಹಗೀರು. ಬಹುಮತಿ–ಬಹುಮಾನ. ಪರರಾಯ–ಬೇರೆರಾಜ, ಶತ್ರುರಾಜ. ಪರ್ವತೇಶ್ವರ–ಶಾಹುರೀನಗರದ ಅರಸು, ಗುಡ್ಡಗಾಡು ಪ್ರಾಂತದ ಒಬ್ಬ ದೊರೆ. ಶಬರವರ್ಮ–ಆ ದೊರೆಯ ಮಂತ್ರಿ. ಈ ಎರಡೂ ಹೆಸರುಗಳು ಒಂದು ರೀತಿ ಅನ್ವರ್ಥವಾದವು. ಛಾಯಾನುವರ್ತಿ–ವ್ಯಕ್ತಿಗೆ ಅವನ ನೆರಳಿನಂತೆ ಅನುಸರಿಸಿಕೊಂಡಿರುವ ಆಶ್ರಿತ ವ್ಯಕ್ತಿ. ಭೃತ್ಯಪದ–ಸೇವಕವೃತ್ತಿ. ರಣಾಂಕಣ–ರಣಭೂಮಿ. ಅಪ್ಪಣೆ ಪಾಲಿಸಿದರ್ಥ–ಅಪ್ಪಣೆ ಮಾಡಿದ, ವಿವರಿಸಿದ ಅಭಿಪ್ರಾಯ. ಅಂತರಂಗಶುದ್ಧಿ–ಮನಸ್ಸಿನೊಳಗೆ ಅನ್ಯೋನ್ಯವಿಶ್ವಾಸ.

ಬಂಧನನಿವೃತ್ತಿ–ಸೆರೆಯಿಂದ ಬಿಡುಗಡೆ. ಸಾವಂತರು–ಸಾಮಂತರಾಜರು. ಮೇಘೋದಯ–(ಇದ್ದಕ್ಕಿದ್ದಂತೆ) ಮೋಡಗಳು ಕಾಣಿಸಿಕೊಳ್ಳುವುದು.

ಪು. ೨೧-೨೪ : ಲಂಪಾಕದೇಶ–ಇಂದಿನ ಆಫ್‌ಘನೀಸ್ಥಾನದ ಲಘಮನ್ (Laghman) ಎಂಬ ಸ್ಥಳ. ಬೃಹತ್‌ಸಂಹಿತೆಯಲ್ಲಿ ಆಫ್‌ಘನ್ನರನ್ನು ಆವಗಾನರೆಂದಿದೆ. "ಲಂಪಾಕೀನಾಂ ಕಿರಂತಶ್ಶಿಕುರವಿರಚನಾಂ" ಎಂದು ರಾಜಶೇಖರನ ಮಾತು. ಪಾರ್ವತೇಯರು–ಪರ್ವತ ರಾಜ್ಯದವರು. ಅಟ್ಟುಳಿ–ಕಾಟ, ಬಾಧೆ. ನಗ್ನದೇಶಾಧಿಪತಿ–ಈ ದೇಶ ಯಾವುದೆಂದು ತಿಳಿಯದು. ವಿನಾಯಕ ಚತುರ್ಥೀ ಚಂದ್ರದರುಶನ–ಗಣೇಶ ಚತುರ್ಥಿಯ ಪೂಜೆಯ ದಿನ ಚಂದ್ರನನ್ನು ನೋಡಿದರೆ ಅಪವಾದ ಬರುವುದೆಂದು ನೋಡದಿರುವುದು. ಈ ಸಂಬಂಧವಾದ ಕಥೆಗೆ ವಿನಾಯಕವ್ರತದ ಕಥೆಯನ್ನು ನೋಡಬಹುದು. ವಿದ್ವದ್ವೃಂದ –ವಿದ್ವಾಂಸರ ಸಮೂಹ. ನಾಸ್ತಿಕವಾದವೆಂಬುವದು ಶಶಶೃಂಗಸದೃಶವು–ಮೊಲಕ್ಕೆ ಕೊಂಬು ಇರುವುದು ಎಷ್ಟು ಅಸಂಭವವೋ ಅಷ್ಟೇ ಅಸಂಭವವಾದುದು ಒಂದು ದರ್ಶನವಾದ ನಾಸ್ತಿಕವಾದ ಎನ್ನುವುದು. ಸಮ್ಮಾನ–ಮರ‍್ಯಾದೆ. ಗಣಕ–ಲೆಕ್ಕಿಗ, ಗುಮಾಸ್ತೆ. ಹಸ್ತಚ್ಛೇದ–ಕೈ ಕತ್ತರಿಸುವುದು. ಕಾಮಾಟದವರು–ಕೂಲಿಯಾಳುಗಳು, ಕೆಲಸದ ಆಳುಗಳು. ನಾವೆ–ದೋಣಿ. ಉಡುಪೋತ್ಸವ–ತೆಪ್ಪೋತ್ಸವ. ದೀಪಾಲಂಕಾರ ಗೀತವಾದ್ಯಾದಿಗಳ ನಡುವೆ ಕೊಳ ಸರೋವರಗಳಲ್ಲಿ ತೆಪ್ಪದ ಮೇಲೆ ಕುಳಿತು ಸುತ್ತುಹಾಕುವ ಒಂದು ಸಂಭ್ರಮದ ಉತ್ಸವ. ಲಗ್ಗೆಯಂ ಹತ್ತುವ ನೂಲೇಣಿ–ಕೋಟೆಯನ್ನೇರಿ ಪುರಪ್ರವೇಶ ಮಾಡುವುದಕ್ಕೆ ಬಳಸುವ, ಹಗ್ಗದಿಂದ ಹೆಣೆದು ಮಾಡಿದ ನಿಚ್ಚಣಿಕೆ. ಪೂರ್ವವೈರ–ಹಳೆಯ ದ್ವೇಷ. ಇಡಿ–ಕುಟ್ಟು, ಪುಡಿಮಾಡು. ಕೋಟೆಕೊತ್ತಳ–ಪಟ್ಟಣದ ಸುತ್ತುಗೋಡೆ ಮತ್ತು ಗೋಡೆಯ ಮೇಲೆ ಅಡಗಿ ನಿಂತು ಶತ್ರುಗಳನ್ನು ಹೊಡೆಯುವುದಕ್ಕೆ ಕಟ್ಟಿದ ಮರೆ, ಕೋಟೆಯ ಬುರುಜು. ಶೇಖರ–ಪರ್ವತರಾಜನ ಸೇನಾಪತಿ. ಯುದ್ಧಾಭಿನಿವೇಶ–ಯುದ್ಧದ ಬಗೆಗೆ ಇರುವ ಅಭಿಪ್ರಾಯ, ನಿಶ್ಚಯ. ಚಾರ–ದೂತ. ಅಮಾನುಷಕೃತ–ಮನುಷ್ಯನಿರ್ಮಿತವಲ್ಲದುದು. ಪ್ರೌಢ–ಬುದ್ಧಿಶಾಲಿ. ಒರೆ–ಹೇಳು. ಆಬಾಲವೃದ್ಧರು–ಹುಡುಗರಿಂದ ಮುದುಕರವರೆಗೆ ಎಲ್ಲರೂ. ಕಾರಾಗೃಹ–ಸೆರೆಮನೆ. ಸೆರೆಯವನು–ಬಂದಿ. ನೋಟಕ–ನೋಡುವವನು. ಅಪಲಾಪವಾಕ್ಯ–ಸುಳ್ಳುಮಾತು, ಮುಚ್ಚುಮರೆಯ ಮಾತು. ಉಪಾಸಕ–ಪೋಷಿಸುವವನು, ಆದರಿಸುವವನು. ದೂರಸ್ಥ–ದೂರವಿರುವವನು.

ಪು. ೨೫-೨೮ : ಪುಚ್ಛಾಗ್ರ–ಬಾಲದ ತುದಿ. ಅರಗು ಮೇಣ ಮುಖ್ಯವಾದ ಸರಿಗಳು –ಸಸ್ಯ ಮತ್ತು ಪ್ರಾಣಿಜನ್ಯವಾದ ಅಂಟಿನ ಪದಾರ್ಥ. ಲಿಪ್ತ–ಬಳಿದ. ಅಸ್ಥಿಸ್ಥಾನ–ಶರೀರದಲ್ಲಿ ಮೂಳೆಗಳಿರುವ ಸ್ಥಳ. ಶಲಾಕ–ಸಲಾಕೆ. ಸೂಜಿಕಲ್ಲು–ಕಬ್ಬಿಣವನ್ನು ಸೆಳೆಯುವ ಶಕ್ತಿಯುಳ್ಳ ಕಲ್ಲು, ಅಯಸ್ಕಾಂತಶಿಲೆ. ಜನ್ಮಾರಭ್ಯ–ಹುಟ್ಟಿದಂದಿನಿಂದ. ಶಲಾಕಾಗ್ರ–ಸಲಾಕೆಯ ತುದಿ. ರಿಕ್ತಹಸ್ತ–ಬರಿಗೈ. ಜಾರಸ್ತ್ರೀ–ವ್ಯಭಿಚಾರಿಣಿ. ಅಗ್ನಿಸೆಕೆ–ಬೆಂಕಿಯ ಶಾಖ. ಜಿತರಾಗು–ಸೋತುಹೋಗು. ವಿಡಂಬನಾರ್ಥ–ಪರಿಹಾಸದ ಸಲುವಾಗಿ. ಉದ್ಭೂಷಣ–ಎದ್ದು ಕಾಣುವ ಅಲಂಕಾರ. ಭೈರಾಗಿ ವೇಷ–ಜೋಗಿಯ ವೇಷ. ಜಡಸಿಂಹ–ನಿರ್ಜೀವ ಸಿಂಹ. ಶಿಥಿಲ–ಕೃಶ. ಶತ್ರುಶೇಷನಾಗು–ಉಳಿದುಕೊಂಡ ಶತ್ರುವಾಗು. ಸೆಕೆ–ಶಾಖ. ಸ್ವಲ್ಪ ಜೀವನ–ಸಾಮಾನ್ಯವಾದ ಬದುಕು. ಸ್ವಲ್ಪಾಧಿಕಾರ–ಸಣ್ಣಹುದ್ದೆ. ಭುಂಜಿಸು–ಊಟಮಾಡು.

ಅನ್ನಸತ್ರಾಧಿಕಾರ–ದಾರಿಹೋಕರಿಗೆ ಉಚಿತವಾಗಿ ಊಟವಿಕ್ಕುವ ಛತ್ರದ ಮೇಲ್ವಿಚಾರಣೆಯ ಹುದ್ದೆ. ವೇದ್ಯವಾಗು–ತಿಳಿ. ಪೌತ್ರ–ಮೊಮ್ಮಗ. ನ್ಯೂನತೆ–ಕೊರತೆ. ಮನೋಗತ–ಅಭಿಪ್ರಾಯ. ದಂಡಪ್ರಣಾಮ–ದಂಡಾಕಾರವಾಗಿ ಅಡ್ಡಬೀಳು. ತಿಲಾಂಜಲಿಯಂ ಕೊಡು–ತರ್ಪಣ ಕೊಡು.

ತೃತೀಯಾಶಯ

ಪು. ೨೮-೩೦ : ಕೃಷ್ಣಾಜಿನ–ಕರಿಯ ಜಿಂಕೆಯ ಹದಗೊಳಿಸಿದ ಚರ್ಮ. ನೈಮಿಶಾರಣ್ಯ-ಗೋಮತೀ ನದೀತೀರದಲ್ಲಿರುವ ಮಹಾಪವಿತ್ರವಾದ ಒಂದು ವನ. ಈಗ ಇದು ಅಯೋಧ್ಯೆ ಮತ್ತು ರೋಹಿಲ್‌ಖಂಡದ ರೈಲುಮಾರ್ಗದಲ್ಲಿ ಸಾಂಡಿಲ (Sondila) ಎಂಬ ರೈಲುನಿಲ್ದಾಣದಿಂದ ೨೪ ಮೈಲಿ ದೂರದಲ್ಲಿಯೂ ಸೀತಾಪುರದಿಂದ ೨೦ ಮೈಲಿ ದೂರದಲ್ಲಿಯೂ ಇದೆ. ಇದನ್ನು ಈಗ ನಿಮ್ಸಾರ್ (Nimsar) ಎಂದು ಕರೆಯುತ್ತಾರೆ. ಹಂಬು–ಬಳ್ಳಿ, ಕೊನೆ. ಮಾರ್ಗನಿರೋಧ–ದಾರಿಗೆ ಅಡ್ಡಿ. ಮುಲೋತ್ಪಾಟನ–ಬೇರುಸಹಿತ ಕಿತ್ತೆಸೆಯುವುದು. ಆಶ್ರಿತಾಭಿಮಾನ–ಆಶ್ರಯ ಕೋರಿ ಬಂದವರ ವಿಷಯದಲ್ಲಿ ಅಭಿಮಾನ. ಮಧುಪರ್ಕಾದಿಗಳು–ಮೊಸರು ತುಪ್ಪ ನೀರು ಜೇನು ಸಕ್ಕರೆ ಈ ಐದರ ಮಿಶ್ರಣವೇ ಮಧುಪರ್ಕ ; ಹಿರಿಯರ, ಆತ್ಮೀಯರ ಆತಿಥ್ಯದಲ್ಲಿ ಇದನ್ನು ಅರ್ಪಿಸಲಾಗುವುದು ; ಇವು ಸೇರಿ ಬೇರೆ ಉಪಚಾರಗಳು. ಅರ್ಘ್ಯಪಾದ್ಯ–ದೇವತೆಗಳಿಗೂ ಪೂಜ್ಯರಿಗೂ ಕೈ ತೊಳೆಯಲು ಕೊಡುವ ಶುದ್ಧೋದಕ ಅರ್ಘ್ಯವೆಂದೂ ಕಾಲು ತೊಳೆಯಲು ಕೊಡುವ ಶುದ್ಧೋದಕ ಪಾದ್ಯವೆಂದೂ ಎನಿಸಿದೆ. ನಾಲ್ಕು ಮೂರು ದಿನ–ನಾಲ್ಕುದಿನ, ಅದು ಆಗದಿದ್ದರೆ ಮೂರು ದಿನ ಎನ್ನುವುದು ಇಲ್ಲಿಯ ಆಶಯ ; ಈಗಿನ ರೂಢಿ ಮೂರು ನಾಲ್ಕು ದಿನ. ದುರ್ದೆಶೆ–ಕೆಟ್ಟ ಸ್ಥಿತಿ. ಅಸಹಾಯಶೂರ–ಬೇರೆಯವರ ಸಹಾಯವಿಲ್ಲದೆ ಒಂಟಿಯಾಗಿ ಕಾದುವ ವೀರ. ಜ್ಞಾತಿಗಳು–ಅಣ್ಣತಮ್ಮಂದಿರ ಮಕ್ಕಳು, ಮೊಮ್ಮಕ್ಕಳು, ದಾಯಾದಿಗಳು. ನಿಮಿತ್ತಾಂತರ–ಯಾವುದೋ ಒಂದು ಕಾರಣ. ಹೀನವೃತ್ತಿ–ವ್ಯಕ್ತಿಯ ಘನತೆಗೆ ತಕ್ಕುದಲ್ಲದ ಕೆಲಸ. ನವಾರ್ಬುದ–೯೦ ಕೋಟಿ (ಅರ್ಬುದ–೧೦ ಕೋಟಿ. ೯ ಹತ್ತು ಕೋಟಿಗಳು). ಪೌತ್ರ–ಮಗನ ಮಗ, ಮೊಮ್ಮಗ. ಕಂದಮೂಲ–ಗೆಡ್ಡೆ ಗೆಣಸು. ಪ್ರಭುಪದ–ರಾಜತ್ವ. ತಂಡುಲಮಾತ್ರ–ಅಕ್ಕಿಯ ಕಾಳಿನಷ್ಟು ಮಾತ್ರ. ಅಗ್ನಿಕಣ–ಬೆಂಕಿಯ ಕಿಡಿ. ಪ್ರತ್ಯವಾಯ–ಪಾಪ, ದೋಷ.

ಪು. ೩೧-೩೨ : ಮಾಧ್ಯಾಹ್ನಿಕ–ಮಧ್ಯಾಹ್ನಕಾಲದ ಸಂಧ್ಯಾವಂದನೆ. ಬಿಜಮಾಡಬೇಕು–ದಯಮಾಡಿಸಬೇಕು (ಸಂ. ವಿಜಯ > ಬಿಜಯ > ಬಿಜ). ರಾಜರು ಗುರುಗಳು ಮುಂತಾದವರ ಆಗಮನ ನಿರ್ಗಮನಗಳಿಗೆ ಅನ್ವಯಿಸುವ ಗೌರವಸೂಚಕಶಬ್ದ. ಸತ್ರ–ಛತ್ರ. ಧೋತ್ರ–ಪಂಚೆ. ಪಂಚೆಬ್ರಾಹ್ಮಣ–ಬಡಬ್ರಾಹ್ಮಣ, ಹೀನಸ್ಥಿತಿಯಲ್ಲಿರುವ ನಾಡಾಡಿ ಬ್ರಾಹ್ಮಣ. ಅಗ್ರಸ್ಥಾನ–ಮುಂಭಾಗ. ಲಕ್ಷೀಕರಿಸು–ಲಕ್ಷ್ಯಮಾಡು. ಮತ್ತರಾಗು–ಸೊಕ್ಕಿದವರಾಗು. ಅಗ್ನಿಶಿಖೆಯಲ್ಲಿ... ಪತಂಗಗಳಂತೆ–ಬೆಳಕಿನಿಂದ ಆಕರ್ಷಿತವಾಗಿ ದೀಪಕ್ಕೆ ಮುತ್ತುವುದರಿಂದ ರೆಕ್ಕೆ ಉದುರಿಹೋಗುವ ಒಂದು ಬಗೆಯ ಕೀಟ, ದೀಪದ ಹುಳು. ಪತಂಗ. 'ಆಹಾರಬುದ್ಧಿಯಿಂದ ಬೀಳಲೆಳಸುವುದು' ಎನ್ನುವುದು ಕವಿಸಮಯ (ಹೋಲಿಸಿ :

"ಪಣ್ಣೊಂದು ಭ್ರಮಿಸಿ ಪತಂಗ ದೀಪದಿ ಬಿದ್ದು | ಕಣ್ಣುಗೆಡುವುದನು ಕಂಡು," ಪುರಂದರ ದಾಸರ ಕೀರ್ತನೆಗಳು, ೫-೯೫-೪). ಶಿಖೆ–ಕಟ್ಟಿದ ಜುಟ್ಟು, ಚಂಡಿಕೆ. ಅವುಡುಗಳಂ ಕಚ್ಚು–ಕೆಳದುಟಿಯನ್ನು ತಾನೇ ಕೋಪದಿಂದ ಕಚ್ಚು. ದಂತಗಳಂ ಮಸೆ– ಹಲ್ಲು ಕಡಿ. ಮೊರೆದು ಮುಸುಗುಟ್ಟು–ಹೂಂಕರಿಸು, ಬುಸುಗುಟ್ಟು. ಪರುಷವಾಕ್ಯ–ಕಠಿನವಾದ ಮಾತು. ಗ್ರಾಸಾರ್ಥವಾಗಿ–ಆಹಾರದ ಸಲುವಾಗಿ. ಭೃಗುವಂಶಜನಾದ . . . ನಾಶವಂ ಮಾಡಿದಂತೆ–ಹೈಹಯರಾಜ ಕಾರ್ತವೀರ್ಯಾರ್ಜುನ ; ಅವನು ಜಮದಗ್ನಿಯನ್ನು ಕೊಂದುದರಿಂದ ಕೆರಳಿದ ಆ ಋಷಿಯ ಮಗ ಪರಶುರಾಮನು ಮಾಹಿಷ್ಮತಿಗೆ ಹೋಗಿ ಆ ರಾಜನ ಸಾವಿರ ತೋಳುಗಳನ್ನು ಮುರಿದು, ಅವನ ಸೈನ್ಯವನ್ನು ನಷ್ಟಗೊಳಿಸಿದನು (ಮಹಾಭಾ. ಸಭಾ ಪರ್ವ). ತಪೋಲೇಶವ್ಯಯ–ತಪಸ್ಸಿನ ಸ್ವಲ್ಪಭಾಗದ ವ್ಯಯ. ಭೃಗುನಂದನನಾದ ಶುಕ್ರಾಚಾರ್ಯ–ವರುಣಪುತ್ರನಾದ ಭೃಗುಮಹರ್ಷಿಗೆ ಪುಲೋಮೆಯಲ್ಲಿ ಜನಿಸಿದ ಚ್ಯವನಾದಿಯಾದ ಏಳು ಮಕ್ಕಳಲ್ಲಿ ಒಬ್ಬ ಎನ್ನುವುದು ಪೌರಾಣಿಕವೃತ್ತಾಂತ ; ದಂಡನೀತಿಶಾಸ್ತ್ರದ ಕೃತಿ 'ಶುಕ್ರನೀತಿಸಾರ'ವೆಂಬ ಹೆಸರಿನಿಂದ ಕ್ರಿ. ಪೂ. ೨ನೆಯ ಶ.ದಲ್ಲಿ ರಚಿತವಾದಂತೆ ತಿಳಿಯಲಾಗಿದೆ. ಭೃಗುಕುಲೋತ್ಪನ್ನನಾದ ಪರಶುರಾಮನು . . . ವಿಶ್ರಮಿಸಿಕೊಂಡಂತೆ–ಭೃಗುವಂಶದ ಜಮದಗ್ನಿ ಹಾಗೂ ಪ್ರಸೇನಜಿತ ಮಹಾರಾಜಪುತ್ರಿ ರೇಣುಕೆ ಇವರ ಪುತ್ರ ಪರಶುರಾಮ; ಈತನು ಉನ್ಮತ್ತರಾದ ಕ್ಷತ್ರಿಯರನ್ನು ಧ್ವಂಸಗೊಳಿಸುವ ಉದ್ದೇಶದಿಂದ ತ್ರೇತಾಯುಗದಲ್ಲಿ ಜನಿಸಿದ ವಿಷ್ಣುವಿನ ಅವತಾರವೆಂದು ಪುರಾಣಗಳಲ್ಲಿದೆ. ೨೧ ಸಾರಿ ಕ್ಷತ್ರಿಯರನ್ನು ಕೊಂದು ಅವರ ರಕ್ತದಿಂದ ಪಿತೃಗಳಿಗೆ ತರ್ಪಣಕೊಟ್ಟನೆಂದು ಭಾರತದಲ್ಲಿದೆ. ಡಾಂಭಿಕ–ಧರ್ಮದ್ರೋಹಿ. ಬ್ರಾಹ್ಮಣರು ಮಾಡುವ ವೇದಾಧ್ಯಾಯನವಂ. . . ಪರಲೋಕದಂಡನೆಯೆ ನನಗಾಗಲಿ–ಇದು ಕೆಲವು ಪ್ರಾಚೀನ ಸ್ಮೃತಿಗಳ ಮಾತು.

ಬ್ರಹ್ಮ–ಬ್ರಹ್ಮತತ್ತ್ವ. ಭಾಮೆ–ಸುಂದರಸ್ತ್ರೀ. ಭುಂಜಿಸು–ಅನುಭವಿಸು. ಬಣಗು–ಶುಷ್ಕ. ಭವ–ಸಂಸಾರ. ಮಹೋತ್ಪಾತ–ವಿನಾಶ ಇಲ್ಲವೆ ಅಶುಭಸೂಚನೆಗೆ ಕಾಣಿಸಿಕೊಳ್ಳುವ ಭೂಕಂಪ ಉಲ್ಕಾಪಾತ ಮುಂತಾದುವು. ಚಿತ್ತವೃತ್ತಿ–ಮನೋಧರ್ಮ. ಪ್ರತ್ಯವಾಯ–ತೊಂದರೆ, ಹಾನಿ. ಲಘುತ್ವ–ಲಾಘವ, ಅಸಡ್ಡೆ. ಸಮಯಬಂಧ–ಒಪ್ಪಂದ, ಒಡಂಬಡಿಕೆ, ಸಂಕೇತ ಮಾಡಿಕೊಳ್ಳುವುದು.

ಪು. ೩೩-೩೪ : ಕೈತಿಲೋದಕ–ಕೈಯಲ್ಲಿ ತಾನಾಗಿ ಕೊಡುವ ತರ್ಪಣ. ಪರುಷವಾಕ್ಯ–ಕಠಿನವಾದ ಮಾತು. ಪಶುಪ್ರಾಯಗಳಾಗಿ–ಮೂಕಪ್ರಾಣಿಗಳ ಹಾಗೆ. ಸ್ತಬ್ಧಭಾವ–ನಿಶ್ಚೇಷ್ಟತೆ. ಶಿಷ್ಟಗ್ರಾಹ್ಯವಲ್ಲದೆ ಇರುವ ಈ ಸತ್ರದ ಸಂಘಾನ್ನ–ಸ್ವಯಂಪಾಕವೆ ಶ್ರೇಷ್ಠವೆಂದೂ ಪರಾನ್ನ ದೂಷ್ಯವೆಂದೂ ಮಡಿವಂತರ ನಂಬಿಕೆ. ಪಂಜೆಬ್ರಾಹ್ಮಣ–ಬಡಬ್ರಾಹ್ಮಣ. ಉಪೇಕ್ಷಿಸು–ಉದಾಸೀನಮಾಡು. ನೀರಾಜನಗ್ಗೈ–ಬೆಳಗು. ಪಾದ ಬೆಳೆ–ದೊಡ್ಡವರ ವಿಷಯದಲ್ಲಿ ನಡೆ, ಹೋಗು ಎಂಬುದನ್ನು ತಿಳಿಸುವ ನುಡಿಗಟ್ಟು. ಮೇರೆ–ರೀತಿ. ಸಾಂತ್ವವಚನ–ಸಮಾಧಾನದ, ಉಪಶಮನದ ಮಾತು. ಬಡಬಾಗ್ನಿ–ಸಮುದ್ರದ ಬೆಂಕಿ. ಶ್ರೀಗಂಧಕಾಷ್ಠ–ಗಂಧದ ಕೊರಡು. ಅಕಾಲಪುಷ್ಪ–ಗೊತ್ತಾದ ಋತುವಿನಲ್ಲಿ ಅಲ್ಲದೆ ಬೇರೆ ಕಾಲದಲ್ಲಿ ಬಿಡುವ ಹೂ. ಅಸ್ವಾತಂತ್ರ್ಯ–ನಿರ್ಬಂಧದ, ಸಂಯಮದ ಸ್ಥಿತಿ. ಗೌರವ–ಗುರುತ್ವ. ಆಪದಾಗಮಸ್ಮರಣೆ–ಆಪತ್ತು ಬರುವುದೆಂಬ ನೆನಪು. ಹೊಳಲು ಕೊಡು– ಪ್ರತಿಧ್ವನಿಸು.

ವಿಷಯ-ಇಂದ್ರಿಯಕಾಂಕ್ಷೆ. ದಿಗ್ಭ್ರಮೆ-ದಿಕ್ಕು ದಾರಿಗಳು ತಿಳಿಯದ ಭ್ರಾಂತಿ. ಅಂಜನ ಸಾಧ್ಯವಾಗು-ಕಣ್ಣಿಗೆ ಹಚ್ಚಿಕೊಳ್ಳುವ ಮುಲಾಮಿನಿಂದ ಪರಿಹಾರವಾಗು. ಅವಲಂಬಿಸು-ಆಶ್ರಯಿಸು. ಪೂರ್ವಯುಗದಲ್ಲಿ ಉನ್ಮತ್ತನಂತೆ . . . ಅಸುರರ ಪಾಲಾಗಲಿಲ್ಲವೇ? -ಒಮ್ಮೆ ದೂರ್ವಾಸಮುನಿ ದೇವಲೋಕಕ್ಕೆ ಹೋಗಿ ಬರುವಾಗ, ಒಬ್ಬ ವಿದ್ಯಾಧರಿಯ ಕೈಯಲ್ಲಿದ್ದ ಕಲ್ಪವೃಕ್ಷದ ಹೂಮಾಲೆಯನ್ನು ಕಂಡು ಅದರ ಪರಿಮಳಕ್ಕೆ ಮೋಹಗೊಂಡು ಆಕೆಯಿಂದ ಅದನ್ನು ಬೇಡಿ ಪಡೆದ. ಅದನ್ನು ತನ್ನ ತಲೆಗೆ ಸುತ್ತಿಕೊಂಡು ಉನ್ಮತ್ತವಾಗಿ ಬರುತ್ತಿರಬೇಕಾದರೆ, ಶಚಿಸಮೇತವಾಗಿ ಐರಾವತವೇರಿ ಬರುತ್ತಿದ್ದ ಇಂದ್ರನನ್ನು ಕಂಡು ಆ ಮಾಲೆಯನ್ನು ಅವನ ಮೇಲೆಸೆದ. ಇಂದ್ರ ಅದನ್ನು ಐರಾವತದ ಕುಂಭಸ್ಥಳದ ಮೇಲೆ ಹಾಕಿದ. ಅದರ ಪರಿಮಳದಿಂದ ಐರಾವತ ಮದವೇರಿ ಅದನ್ನು ನೆಲಕ್ಕೆ ಹಾಕಿಬಿಟ್ಟಿತು. ಕೆರಳಿದ ದೂರ್ವಾಸ "ಎಲೈ ದುಷ್ಟನೇ, ನಾನಿತ್ತ ಹೂಮಾಲೆಯನ್ನು ನೀನು ಹೀಗೆ ತಿರಸ್ಕರಿಸಿದೆಯಾದ್ದರಿಂದ ನಿನ್ನ ಮೂರು ಲೋಕದ ಸಂಪತ್ತು ನಾಶವಾಗಲಿ" ಎಂದು ಇಂದ್ರನನ್ನು ಶಪಿಸಿದ (ವಿಷ್ಣುಪುರಾಣ, ೧-೯).

ಪು. ೩೫-೩೬ : ಇಲ್ಲಿ ಬಾಣನ ಕಾದಂಬರಿಯ ಲಕ್ಷ್ಮೀವಿಡಂಬನದ ನಿರೂಪಣೆಯನ್ನು ಈ ಕತೆಗಾರನು ಅನುವಾದಿಸಿದ್ದಾನೆ. ಘೂಕಪ್ರವಿಷ್ಟವಾದ ಗೃಹವಂ ಶ್ರೇಯೋವಂತರು ಬಿಡುವಂತೆ-ಗೂಬೆ ಹೊಕ್ಕ ಮನೆಯನ್ನು ಶ್ರೇಯಃಕಾಂಕ್ಷಿಗಳು ಬಿಡುವ ಹಾಗೆ. ಖದ್ಯೋತ ಪ್ರಕಾಶ-ಮಿಂಚುಹುಳುವಿನ ಬೆಳಕು ; ಇದು ಕ್ಷಣಿಕತೆಗೆ ಸಂಕೇತ. ಮನಸ್ವಿ-ಸ್ವಾಭಿಮಾನಿ. ವಿವೇಕಿ. ವಿನೀತ-ವಿನಯಶಾಲಿ. ಖಲಜನೇಷ್ಟಳು-ನೀಚರಿಗೆ ಇಷ್ಟವಾದವಳು. ಮಲಿನ ಕರ್ಮ-ನೀಚಕಾರ್ಯ. ಆತ್ಮಭೋಗ-ಸ್ವಂತಸುಖ. ದಂಡಾಘಾತ-ಕೋಲಿನ ಪೆಟ್ಟು. ದಂಡಗಳಂ ಕಟ್ಟಿಸು-ದಂಡ ವಸೂಲುಮಾಡು. ಶಿಥಿಲಂಗೈಸು-ದುರ್ಬಲಗೊಳಿಸು. ಜಿತೇಂದ್ರಿಯತ್ವ-ಇಂದ್ರಿಯನಿಗ್ರಹ. ಮತ್ತತೆ-ಸೊಕ್ಕು. ದರ್ವ. 'ದರ್ವಿಯಿರುವಲ್ಲಿ ಹಸ್ತಕ್ಕೆ ಸೆಕೆ ಉಂಟೇ'-ಯಜ್ಞಯಾಗಾದಿಗಳಲ್ಲಿ ಯಜ್ಞಕುಂಡಕ್ಕೆ ತುಪ್ಪವನ್ನು ಹಾಕಲು ಬಳಸುವ, ಸವುಟನ್ನು ಹೋಲುವ, ಮುತ್ತುಗ ಮೊದಲಾದ ಮರಗಳಲ್ಲಿ ಒಂದರಿಂದ ಮಾಡಿದ ಸಾಧನ; ದರ್ವಿ. ಅದರ ಸಹಾಯದಿಂದ ತುಪ್ಪ ಹಾಕುವುದರಿಂದಾಗಿ ಕೈಗೆ ಬೆಂಕಿಯ ಶಾಖ ತಟ್ಟುವುದಿಲ್ಲ. ಬ್ರಾಹ್ಮಣಕವಿ ತನಗೆ ಪರಿಚಿತವಾದ ಗಾದೆಮಾತನ್ನು ಇಲ್ಲಿ ಬಳಸಿದ್ದಾನೆ. ದೇವತಾಹೇಳನ-ದೇವತೆಗಳ ತಿರಸ್ಕಾರ, ಅನಾದರ. ರಾಜಾ ಪ್ರತ್ಯಕ್ಷದೇವತಾ-ರಾಜನು ಕಣ್ಣಿಗೆ ಕಾಣುವ ದೇವರು. ಭುಜಯುಗ್ಮ-ಎರಡು ತೋಳು. ಮಿಥ್ಯಾಮಾಹಾತ್ಮ್ಯ-ಸುಳ್ಳು ದೊಡ್ಡಸ್ತಿಕೆ. ಸಲ್ಲದ ಹಿರಿಮೆ. ಶ್ರೋತ್ರಿಯರು-ನಿಷ್ಠಾವಂತ ಬ್ರಾಹ್ಮಣರು. ಅಭಿಚಾರ-ವಿರುದ್ಧವಾದ ಆಚರಣೆ. ವಿವರ-ಅಭಿಪ್ರಾಯ. ಆಜ್ಞಪ್ತನಾಗು-ಅಪ್ಪಣೆಯನ್ನು ಪಡೆ.

ಪು. ೩೭-೩೮ : ಸನ್ನಿಧಾನದಿಂದಲೇ-ತಮ್ಮಿಂದಲೇ ; ಹಿರಿಯರ ಸಂಬೋಧನೆಯಲ್ಲಿ ಬಳಸುವ ಶಬ್ದ. ಪಕ್ಷೀಕರಿಸು-ಪಕ್ಷಕ್ಕೆ ಸೇರಿಸಿಕೊಳ್ಳು, ತಮ್ಮ ಕಡೆಗೆ ಮಾಡಿಕೊಳ್ಳು. ಹೇಳನಾರ್ಥ-ತಿರಸ್ಕಾರಕ್ಕೆ. ಸ್ಥಾನಾಂತರವನ್ನೈದು-ಬೇರೆ ಕಡೆಗೆ ತೆರಳು. ಶುದ್ಧಕ್ಷತ್ರಿಯ ಸಂತತಿ-ಆದಿಕ್ಷತ್ರಿಯ ವಂಶ, ಸಂಕರವಿಲ್ಲದ ಕ್ಷತ್ರಿಯರ ಪೀಳಿಗೆ. ಶುದ್ಧಕ್ಷತ್ರಿಯನಾಗಿ ದುರಾತ್ಮನಾದ ವೇನರಾಯನಂತೆ-ಅಂಗದೇಶಾಧಿಪತಿ ಅಂಗರಾಜನಿಗೆ ಸುನೀಥೆಯೆಂಬವಳಲ್ಲಿ ಜನಿಸಿದ ವೇನರಾಯನು ನಾಸ್ತಿಕನಾಗಿದ್ದುದರಿಂದ ಭೂಮಿಯಲ್ಲಿ ಬೆಳೆಯಾಗದೆ

ಬಿತ್ತಿದ ಬೀಜಗಳನ್ನು ಭೂಮಿಯೇ ನುಂಗುತ್ತಿತ್ತು. ಆಗ ಪ್ರಜೆಗಳು ಒಗ್ಗೂಡಿ ಅವನನ್ನು ಕೊಂದರು (ವಿಷ್ಣು, ಮತ್ಸ್ಯ ಮತ್ತು ವಾಮನ ಪುರಾಣಗಳು, ೧-೨೩, ಅ. ೧೦, ಅ. ೪೭). ಶೂದ್ರಸ್ತ್ರೀಪುತ್ರನಾದ ವಿದುರನು . . . ಖ್ಯಾತಿವಂತನಾದಂತೆ–ವಿಚಿತ್ರವೀರ್ಯನ ಪತ್ನಿ ಅಂಬಿಕೆಯ ದಾಸಿಗೆ ಕೃಷ್ಣದ್ವೈಪಾಯನವ್ಯಾಸರಿಂದ ಜನಿಸಿದವನು ವಿದುರ ; ಅಂಬಿಕೆಯ ಮಗನೇ ಆದ ಧೃತರಾಷ್ಟ್ರನ ರಾಜ್ಯಭಾರದ ನಿರ್ವಹಣೆಯಲ್ಲಿ ಆಗಾಗ ನೀತಿಮಾತು ಹೇಳುತ್ತ ಸಹಕರಿಸುತ್ತಿದ್ದನು. ಪ್ರತ್ಯವಾಯ–ಹಾನಿ, ತೊಂದರೆ, ಪಾಪ. ಫಲೋಪಹಾರ–ಹಣ್ಣಿನ ಕಾಣಿಕೆ. ಸೆಕೆ–ತಾಪ. ಕೃಪಾಪಾಂಗಾಮೃತಧಾರಾಸೇಚನ–ದಯಾದೃಷ್ಟಿಯೆಂಬ ಅಮೃತವರ್ಷದ ಸಿಂಪಡಿಕೆ. ಪ್ರಭಾನೀರಾಜಿತ–ಕಾಂತಿಯಿಂದ ಬೆಳಗಿದುದು. ಸುಕೃತ–ಪುಣ್ಯ. ಉಪಾಯಚತುಷ್ಟಯ–ಸಾಮ ದಾನ ಭೇದ ದಂಡಗಳೆಂಬ ನಾಲ್ಕು ರಾಜನೀತಿಯ ವಿಧಾನಗಳು.

ಪು. ೩೯-೪೩ : ಅಂಕುಶ–ಆನೆಯ ಗತಿಯನ್ನು ಹದ್ದಿನಲ್ಲಿಡುವುದಕ್ಕೆ ಬಳಸುವ ಲೋಹದ ಕೊಕ್ಕೆಯಾಕಾರದ ಸಾಧನ. ನಿಯಮ್ಯರಾಗು–ಕಟ್ಟಿಗೆ ಒಳಪಡುವರಾಗು. ಲಕ್ಷೀಕರಿಸು–ಲಕ್ಷ್ಯಮಾಡು. ಸ್ವಾಮಿಭೃತ್ಯನ್ಯಾಯ–ಯಜಮಾನ, ಆಳು ಇವರ ನಡುವಣ ಹೆಚ್ಚು ಕಡಮೆಗಳ ಅಂತರವನ್ನು ತಿಳಿಸುವ ನ್ಯಾಯ. ಉದಾಸೀನಪಕ್ಷ–ಶತ್ರುತ್ವ ಮಿತ್ರತ್ವವಿಲ್ಲದೆ ತಟಸ್ಥಭಾವದಲ್ಲಿರುವುದು. ನಿಯಾಮಕ–ನಿಯಮಿಸುವವನು. ಹೇಳನ–ತಿರಸ್ಕಾರ, ಅಪಹಾಸ್ಯ. ಸಹಸ್ರಾಕ್ಷನು ಪರ್ವತಗಳ ಪಕ್ಷಗಳಂ ಕ್ಷೋದಗೈವಂತೆ–ಒಂದು ಕಾಲಕ್ಕೆ ಪರ್ವತಗಳು ರೆಕ್ಕೆಯುಳ್ಳುವಾಗಿ, ಆಗಾಗ ಹಾರಿಹೋಗಿ ಜನವಸತಿಗಳ ಮೇಲೆ ಇಳಿದು ಹಾನಿ ಮಾಡುತ್ತಿದ್ದುದರಿಂದ ಇಂದ್ರನು ತನ್ನ ವಜ್ರಾಯುಧದಿಂದ ಅವುಗಳ ರೆಕ್ಕೆಗಳನ್ನು ಕತ್ತರಿಸಿದನೆಂದೂ ಅಂದಿನಿಂದ ಅವು ಸ್ತಂಭನಗೊಂಡುವೆಂದೂ ಪುರಾಣೋಕ್ತಿ. ಕ್ಷೋದಗೈ–ಕುಟ್ಟಿ ಪುಡಿಮಾಡು. ವಿಕ್ಷೋಭಪಡಿಸು–ಅಲ್ಲಕಲ್ಲೋಲವಾಗುವಂತೆ ಮಾಡು. ಹೊರಚ್ಚು ಮಾಡು–ಪ್ರತ್ಯೇಕಿಸು. ಸಂಗ್ರಹಿಸು–ಸ್ವಾಧೀನಮಾಡಿಕೊಳ್ಳು. ಸಮ್ಮತಿ–ಒಪ್ಪಿಗೆ, ಅನುಮೋದನೆ. ಬದಲು ಕಾಗದ–ಪ್ರತ್ಯುತ್ತರ.

ಪು. ೪೧-೪೨ : ನಿತ್ಯಕಟ್ಟೆ ಆರಾಧನೆ–ನಿತ್ಯಕಟ್ಟಳೆಯಾಗಿ ಮಾಡುವ ಸಾಮಾನ್ಯ ಪೂಜಾವಿಧಿ. ಕೈಸಾಲೆ ಗೋಪುರ–ಹೊರ ಅಂಗಳ ಹಾಗೂ ದೇವಸ್ಥಾನದ ಪ್ರಾಕಾರದಲ್ಲಿ ಪ್ರವೇಶ ದ್ವಾರದ ಮೇಲೆ ಕಟ್ಟಿರುವ ಅಂತಸ್ತುಗಳನ್ನೊಳಕೊಂಡ ವಾಸ್ತುರಚನೆ, ಶಿಖರ. ಕಿಂಚಿತ್ಸುಕೃತ–ಸ್ವಲ್ಪ ಪುಣ್ಯ. ಪ್ರಚ್ಛನ್ನರಾಗು–ಕಣ್ಮರೆಯಾದವರಾಗು. ಪಿತೃವಾಕ್ಯ–ತಂದೆಯ ಮಾತು. ಶೇಷ–ಉಳಿದ ಭಾಗ. ಪರಿಹರಿಸು–ವಿಸರ್ಜಿಸು. ಸಹಾಧ್ಯಾಯಿ–ಜೊತೆಗೆ ವೇದ ಶಾಸ್ತ್ರಗಳನ್ನು ಅಭ್ಯಾಸ ಮಾಡಿದವನು.

ಚತುರ್ಥಾಶಯ

ಪು. ೪೪-೪೬ : ಕ್ಷಪಣಕವೇಷ–ಬೌದ್ಧಸಂನ್ಯಾಸಿಯ ವೇಷ. ಮಾಸೋಪವಾಸಿ ಮೊದಲಾದವರ ಹೆಸರುಗಳು ಬೌದ್ಧ ಇಲ್ಲವೆ ಜೈನ ಹೆಸರುಗಳಂತೆಯೇ ಇವೆ. ಮಂತ್ರಜ್ಞ–ಮಂತ್ರಶಾಸ್ತ್ರ ತಿಳಿದವನು. ಆಜ್ಞಪ್ತರು–ಆಜ್ಞೆ ಪಡೆದವರು. ಬ್ರಾಹ್ಮಣಸಂಘ–ಬ್ರಾಹ್ಮಣರ ಸಮೂಹ. ಅಗ್ರಸ್ಥಾನ–ಮುಂಭಾಗ. ಶಿಖೆ–ಕಟ್ಟಿದ ಜುಟ್ಟು. ಶುಕ್ರಾಚಾರ್ಯರ ಶಿಷ್ಯನಾ

ಗಿಯೂ–ಶುಕ್ರಾಚಾರ್ಯನ ರಾಜನೀತಿಶಾಸ್ತ್ರವನ್ನು ಕಲಿತವನು ಎಂದಿರಬಹುದು. ಪ್ರತಿಜ್ಞಾಪುಂಜ–ಶಪಥಗಳ ಸರಣಿ. ಮೂರ್ತೀಭಾವ–ವಿಗ್ರಹದ ಹಾಗಿರುವುದು. ಸಭಾಸ್ತಂಭನೆ–ಸಭೆ ನಿಶ್ಚೇಷ್ಟವಾಗುವುದು. ಅರಿಯದು–ಸಾಧ್ಯವಿಲ್ಲ. ತಪೋಲೇಶವ್ಯಯ–ತಪಸ್ಸಿನ ಫಲದಲ್ಲಿ ಸ್ವಲ್ಪ ಭಾಗವನ್ನಾದರೂ ಕಳೆದುಕೊಳ್ಳುವುದು.

ಲಂಪಾಕದೇಶ–ನೋ. ಟಿ. ೨೧-೨೪. ನೈರುತ್ಯದಿಗ್ಭಾಗ–ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳ ನಡುವಣ ಭಾಗ. ವ್ಯಾಘ್ರಶಿಶು–ಹುಲಿಮರಿ. ಮಾರ್ಜಾಲ–ಬೆಕ್ಕು.

ಕಿರಾತ–ವಿಂಧ್ಯಪರ್ವತದಲ್ಲಿ ತಪ್ತಕುಂಡದಿಂದ ಹಿಡಿದು ರಾಮಕ್ಷೇತ್ರದವರೆಗೆ ಹಬ್ಬಿದ ಪ್ರದೇಶವೆಂದು ವರ್ಣಿತವಾಗಿರುವ ದೇಶ. ತಪ್ತಕುಂಡ (ಬಿಹಾರ್‌ಪ್ರಾಂತದ ಪಟ್ನ ಜಿಲ್ಲೆಯ ರಾಜ್‌ಗಿರ್ ಅಥವಾ ಮೊಂಘೈರ್ ಹತ್ತಿರದ ಬಿಸಿನೀರುಚಿಲುಮೆಗಳು) ಹಾಗೂ ರಾಮಕ್ಷೇತ್ರ (ರಾಮಗಿರಿ ಅಥವಾ ರಾಮ್‌ಟೇಕ್). ವಿಂಧ್ಯದ ಗಿರಿಜನರನ್ನು ಹೇಳುವ ಮಾತು ಕಿರಾತ ಎಂದು ತಿಳಿಯಲಾಗಿದ್ದರೂ, ಹಿಮಾಲಯಪ್ರಾಂತದ ಗಿರಿಜನರೆಂದೂ ಪ್ರಾಚೀನ ಸಾಹಿತ್ಯದ ಮೂಲಕ ತಿಳಿಯಲಾಗಿದೆ.

ಕಾಂಭೋಜ–ನಿಷಧಪರ್ವತಕ್ಕೆ ದಕ್ಷಿಣದಲ್ಲಿದೆಯೆಂದು ಮಹಾಭಾರತದಲ್ಲಿದೆ. ಅಶ್ವಗಳಿಗೆ ಉತ್ಪತ್ತಿಸ್ಥಾನವಾದ್ದರಿಂದ ಅಶ್ವಸ್ಥಾನ (ಅಫ್‌ಘನೀಸ್ಥಾನ) ಎಂದು ಕರೆಯಲ್ಪಡುವುದು. ಕಾಶ್ಮೀರದಿಂದ ಕಾಂದಹಾರ್ ವರೆಗೆ ಹಬ್ಬಿದ್ದ ಪ್ರದೇಶದಲ್ಲಿ ಕಾಂಭೋಜರು ತಮ್ಮ ನೆಲೆಗಳನ್ನು ಹೊಂದಿದ್ದರು. ಪಶ್ಚಿಮ ಪಂಜಾಬು, ದಕ್ಷಿಣ ಕಾಶ್ಮೀರದ ಪಾಂಚಾಲದೇಶಗಳಿಂದ ದಕ್ಷಿಣ ಆಫ್‌ಘನೀಸ್ಥಾನದ ಕಾಂದಹಾರ್ ಪ್ರಾಂತದವರೆಗೆ ಮ್ಲೇಚ್ಛಭಾಗವನ್ನು ಒಳಕೊಂಡಿತ್ತು, ಈ ದೇಶ.

ಹೂಣ–ಕಾಮಗಿರಿಯ (ಕಾಮಗಿರಿಯ ಹಾಗೂ ದ್ವಾರಕೆಗಳ ನಡುವಣ ದೇಶ ಶ್ರೀಕುಂತಲ) ದಕ್ಷಿಣದ ಹಾಗೂ ಮರುದೇಶಕ್ಕೆ (ಮರುಭೂಮಿ) ಉತ್ತರದ ಭಾಗವಾದ ದೇಶ. 'ಹರ್ಷಚರಿತ'ದಲ್ಲಿ ಹೂಣದೇಶವನ್ನು ಪಂಜಾಬು ಪ್ರಾಂತದಲ್ಲಿ ಗುರುತಿಸಿದೆ. ಹೂಣ ಅರಸುಮನೆತನಗಳು ಪ್ರತಿಹಾರ, ಕಲಚುರಿ ಮತ್ತು ಇತರ ರಾಜಮನೆತನಗಳಲ್ಲಿ ಉಕ್ತವಾಗಿವೆ. ಚೀಣ–ಮಾನಸ ಸರೋವರದ ಈಶಾನ್ಯಭಾಗದ ದೇಶವಾಗಿರುವ ಟಿಬೆಟ್ಟನ್ನೆ ಹೀಗೆ ಕರೆದಿರಬಹುದು. ಒಂದು ಕಾಲಕ್ಕೆ ಇದು ಚೀಣದ ಪ್ರಭುಗಳ ಭಾಗವಾಗಿ ಸೇರಿತ್ತು. ಶಕ–ಭಾರತದ ಪಶ್ಚಿಮಸಮುದ್ರತೀರದಲ್ಲಿ ವಿದೇಹಕ್ಕೆ ಪೂರ್ವದಿಕ್ಕಿನಲ್ಲಿದ್ದ ಒಂದು ದೇಶ. ಶಕರು ಈ ದೇಶವಾಸಿಗಳು. ಕುಲೂತ–ಇಂದಿನ ಕಂಗ್ರಾಜಿಲ್ಲೆಯ ಕೂಲೂ ಪ್ರದೇಶ ; ಇಲ್ಲಿಯ ಜನ ಕುಲೂತರು. ಪಾರಸಿಕ–ನೈರುತ್ಯ ಏಷ್ಯದಲ್ಲಿರುವ ಇರಾನ್ ದೇಶಕ್ಕೆ, ಮುಖ್ಯವಾಗಿ ಯೂರೋಪಿನಲ್ಲಿಯೂ ಪಶ್ಚಿಮದ ಇತರ ದೇಶಗಳಲ್ಲಿಯೂ ಹಲವು ಶತಮಾನಗಳಿಂದ ಪ್ರಚಲಿತವಾಗಿರುವ ಹೆಸರು ಇದು. ಇರಾನಿನ ಒಂದು ಭಾಗವಾದ ಪರ್ಸಿಸ್>ಪರ್ಷಿಯ ಎಂದಾಗಿದೆ. ಈ ದೇಶದ ಜನವನ್ನು ಪಾರಸಿಕರೆಂದು 'ಪಾದತಾಡಿತಕ' (ಭಾಣ), 'ಮುದ್ರಾರಾಕ್ಷಸ' 'ಗೌಡವಹ'ಗಳಲ್ಲಿ ಹೇಳಿದೆ. ಮಲಯ–ಭರತಖಂಡದ ಒಂದು ಉಪಪರ್ವತದ ಪ್ರದೇಶ, ಪಶ್ಚಿಮಘಟ್ಟಗಳಿಗೆ ಸೇರಿದ್ದು. ತಿರುವಾಂಕೂರು ಬೆಟ್ಟಗಳಿಗೆ ಹಾಗೂ ಪಶ್ಚಿಮಘಟ್ಟಗಳ ದಕ್ಷಿಣದ ತುತ್ತತುದಿಯ ಭಾಗಕ್ಕೆ ಇದು ಅನ್ವಯಿಸುತ್ತದೆ. ಸಿಂಧು–ಸೈಂಧವದೇಶ, ಲಂಕಾಪ್ರದೇಶದಿಂದ (ಸಿಲೋನ್) ಮೆಕ್ಕಾದವರೆಗೆ (ಪಶ್ಚಿಮ

ಏಸಿಯದ ಮುಸ್ಲಿಂ ಪ್ರದೇಶ) ಹಬ್ಬಿದ್ದ ಮಹಾದೇಶ . ಕಾಶ್ಮೀರ–ಭಾರತದ ವಾಯವ್ಯ ಭಾಗದ ಒಂದು ರಾಜ್ಯ, ಒಂದು ಪ್ರಾಚೀನ ಸಾಂಸ್ಕೃತಿಕ ಕೇಂದ್ರ ; ಕಲ್ಹಣನ 'ರಾಜತರಂಗಿಣಿ'ಯಲ್ಲಿ (೧೧೪೮-೪೯) ಇದರ ಇತಿಹಾಸವುಂಟು. ಚಂದ್ರಗುಪ್ತ-ಚಾಣಕ್ಯರ ಕಥೆಯ ಕಾಲಕ್ಕೆ ಇಲ್ಲಿ ಕಾರ್ಕೋಟರಾಜವಂಶದ ಅರಸರು ಆಳುತ್ತಿದ್ದರು. ರಾಜಧಾನಿ ಶ್ರೀನಗರ. ಪರ್ವತರಾಜ್ಯ–ಈ ರಾಜ್ಯವೂ ಇದರ ರಾಜಧಾನಿಯಾಗಿ ಉಕ್ತವಾಗಿರುವ ಶಾಹುರೀ ನಗರವೂ ಯಾವುದೆಂದು ಸ್ಪಷ್ಟವಾಗಬೇಕಾಗಿವೆ (ನೋಡಿ : ಪೀಠಿಕೆ). ಮ್ಲೇಚ್ಛ–ಉತ್ತರ ಅಫ್ಘಾನೀಸ್ಥಾನದ ಖುರಾಶನ (ಇರಾನ್ ಇತ್ಯಾದಿ ಪ್ರದೇಶಗಳು ಮತ್ತು ಇರಾನಿನ ಈಶಾನ್ಯ ದಿಕ್ಕಿಗೆ ಇರುವ ಪ್ರದೇಶಗಳು ಮತ್ತು ಸಮೀಪದ ಪ್ರದೇಶಗಳು) ಎಂಬ ದೇಶ ; ಮುಸ್ಲಿಮರು ಇಲ್ಲಿಯ ದೇಶವಾಸಿಗಳು.

ಪು. ೪೭-೪೮ : ಯೋಜನಾಯತ–ಯೋಜನವಿಸ್ತೀರ್ಣವಾದ (ಯೋಜನ–ಎರಡು ಗಾವುದ ಅಥವಾ ನಾಲ್ಕು ಹರಿದಾರಿಗಳ ದೂರದ ಅಳತೆ). ದುರವಗಾಹ–ಪ್ರವೇಶಿಸಲು ಕಷ್ಟವಾದ. ಹರ್ಮ್ಯ ಪ್ರಾಸಾದ ರಾಜಭವನ–ವಾಸದ ಗೃಹಗಳ ಭೇದಗಳು. ನೋಡಿ : 'ಸಿರಿವಂತರ ಮನೆಯಂ ಹರ್ಮ್ಯವೆಂಬುದು', 'ಇಟ್ಟಿಗೆ ಮೊದಲಾದುವಱಿಂ ಮಾಡಿದರ ಮನೆ ದೇಗುಲಂಗಳಂ ಪ್ರಾಸಾದವೆಂಬುದು' (ಹಲಾಯುಧನ 'ಅಭಿಧಾನ ರತ್ನಮಾಲಾ' ಕನ್ನಡ ಟೀಕೆ, ೪೯-೧೩೮). ವಿತಾನ–ಮೇಲುಕಟ್ಟು. ಸಂಯಮಿನಿ–ಯಮನ ರಾಜಧಾನಿ. ಗಜಗಂಡನಿಸ್ಸೃತ–ಆನೆಗಳ ಕಪೋಲಸ್ಥಳದಿಂದ ಸುರಿಯುವ. ಚತುರ್ದಂತಗಳಿಂದೊಪ್ಪುವ ಗಜ–ನಾಲ್ಕು ದಂತಗಳ ಆನೆ, ಐರಾವತ. ನದೀಮಾತೃಕದೇಶ–ಹೊಳೆಯ ನೀರಿನಿಂದ ಬೆಳೆ ಬೆಳೆಯುವ ಭೂಮಿಯನ್ನುಳ್ಳ, ಎಂದರೆ ನೀರಾವರಿ ಭೂಮಿಯನ್ನುಳ್ಳ ದೇಶ. ಮಧುಮತ್ತ–ಪರಾಗದಿಂದ ಸೊಕ್ಕಿದ. ಮುಖರಿತ–ಧ್ವನಿತ. ಸಲಾಮಿಗೆ ಹೋಗು–ಗೌರವಾರ್ಪಣೆಗೆ ತೆರಳು. ತುರಗಾವಳೀಖುರಪುಟ–ಕುದುರೆಗಳ ಗುಂಪಿನ ಕಾಲಗೊರಸು ; ಅರಸರಿಗೆ ಗೌರವ ಸಲ್ಲಿಸಲು ಅಶ್ವದಳ ಹೋಗುವುದು ಒಡೆಯರ ಕಾಲದ ಪದ್ಧತಿ. ಪ್ರತಿಷ್ಠಿತವಾಗಿ–ಸುಸ್ಥಿತವಾಗಿ. ಈಶಾನ್ಯ–ಉತ್ತರ ಮತ್ತು ಪೂರ್ವಗಳಿಗೆ ಮಧ್ಯದ ದಿಕ್ಕು.

ಪಾಟಲೀಪುರ–ಇಂದಿನ ಬಿಹಾರ ಪ್ರಾಂತದ ಪಾಟ್ನದ (<ಪಟ್ಟಣ) ಹತ್ತಿರದ ಒಂದು ನಗರ ; ಪ್ರಾಚೀನ ಗ್ರೀಕ್-ರೋಮನ್ ಲೇಖಕರು ಪಾಲಿಬೋಥ್ರ ಎಂದಿದ್ದಾರೆ. ಮಗಧ ರಾಜ್ಯವು ಇಂದಿನ ಬಿಹಾರದ ಪಾಟ್ನ ಮತ್ತು ಗಯಾ ಜಿಲ್ಲೆಗಳನ್ನು ಒಳಕೊಂಡಿದ್ದು, ಮೊದಲು ಅದರ ರಾಜಧಾನಿ ರಾಜಗೃಹ (ರಾಜಗಿರ್) ಆಗಿದ್ದು, ಬಳಿಕ ಪಾಟಲೀಪುತ್ರಕ್ಕೆ ವರ್ಗಾಯಿಸಿತು. ಈಯೆರಡೂ ಇಂದಿನ ಪಾಟ್ನ ಜಿಲ್ಲೆಯೊಳಗೇ ಬರುತ್ತವೆ ; ಪ್ರತಿನಾಮ ಕುಸುಮಪುರ.

ಪ್ರತಿಹಾರಿ–ದ್ವಾರಪಾಲಕ, ಅರಸನ ೧೮ ಅಧಿಕಾರಿಗಳಲ್ಲಿ ಒಬ್ಬ. ಬಾಲಚಂದ್ರನೊಡಗೂಡಿದ ಅಂಗಾರಕನಂತೆ–ಮೇಲುನೋಟಕ್ಕೆ ಉಜ್ವಲವೆಂದು ಕಂಡರೂ, ಬೃಹಜ್ಜಾತಕ ಜಾತಕಾಭರಣಗಳ ಪ್ರಕಾರ ಇದು ಕುಟಿಲಯೋಗ. ಪರ್ವತರಾಜನ ಭಾಗಕ್ಕೆ ಚಂದ್ರಗುಪ್ತ ಚಾಣಕ್ಯರ ಬರುವಿಕೆ ವಿಪತ್ಕರವೇ ಆಯಿತು.

ಚಂದ್ರಸೂರ್ಯರೇಕತ್ರ ಕೂಡಿದರೆ . . . ಲೋಕಪ್ರಸಿದ್ಧವು–"ಸ್ಪಷ್ಟಂ ಸೂರ್ಯೇಂದು ಸಮಾಶ್ಲಿಷ್ಟವಮಾವಾಸ್ಯೆಯೆಂಬುದಕ್ಕುಂ ದರ್ಶಂ" ('ಅಭಿಧಾನ ವಸ್ತುಕೋಶ', ೧೭-೮);

ಅಮಾವಾಸ್ಯೆಯ ದಟ್ಟಕತ್ತಲಾಗುವುದು. ಕೆಲನಾಗಿ–ಪಕ್ಕವಾಗಿ. ಸೂರ್ಯಾತಪದ ಸೆಕೆ–ಸೂರ್ಯನ ಬಿಸಿಲ ಧಗೆ. ಛತ್ರಚ್ಛಾಯಾಗಮನ–ಕೊಡೆಯ ನೆರಳಿಗೆ ಬರುವುದು. ಅನುಪ್ರವೇಶ–ಒಳಗೆ ಸೇರಿಕೊಳ್ಳುವುದು. ಸಾಮಾಜಿಕರು–ಸಭಾಸದರು.

ಪು. ೪೯-೫೦ : ಪ್ರಭುಪದ–ರಾಜತ್ವ ; "ಜ್ಞಾತಿಶ್ಚೇದನಲೇನ ಕಿಂ" ಭರ್ತೃಹರಿಯ ನೀತಿ ಶತಕದ ಮಾತು. ದಾಯಾದಿಯೇ ಇರುವಾಗ (ಬೇರೆ) ಬೆಂಕಿ ಏಕೆ ? ಇದರ ಪೂರ್ಣಪಾಠ ಪ್ರಚಲಿತಮುದ್ರಣದಲ್ಲಿ ಉಂಟು (೧೯೪೫ರ ಮುದ್ರಣ. ಪು. ೪೦). ಅಣ್ಣತಮ್ಮಂದಿರ ಮಕ್ಕಳು ಆಸ್ತಿಗಾಗಿ ಪರಸ್ಪರರನ್ನು ರೋಷದ್ವೇಷಗಳಿಂದ ಕಾಣುವುದರಿಂದಾಗಿ ಹುಟ್ಟಿರುವ ಸೂಕ್ತಿ. ಅನಾದಿಸಿದ್ಧವು–ಎಂದಿನಿಂದಲೂ ತಿಳಿದುಬಂದುದು. ಪೂರ್ವಮತ್ಸರ–ಹಳೆಯ ಹೊಟ್ಟೆಕಿಚ್ಚು. ಮಾಧ್ಯಾಹ್ನಿಕ ಸಮಯ–ಮಧ್ಯಾಹ್ನಕಾಲದ ಸಂಧ್ಯಾವಂದನೆ. ಆಲೋಚನಾಶೇಷ–ಆಲೋಚನೆಯಲ್ಲಿ ಉಳಿದ ಭಾಗ. ನಿಸ್ಸಾಣ–ಒಂದು ಬಗೆಯ ಚರ್ಮವಾದ್ಯ. ಸಮ್ಮರ್ದಕ್ಷೋಭೆ–ದಟ್ಟಣೆಯ ಕೋಲಾಹಲ. ಅಂಗದ–ತೋಳಿನ ಬಳೆ, ಕಡಗ. ಖದ್ಯೋತಸಹಸ್ರ–ಸಾವಿರ ಮಿಂಚುಹುಳುಗಳು. ರಾಜಮಂಡಲ–ರಾಜಸಮೂಹ. ಶೇಖರ ಮಾಲತೀ ಕುಸುಮ–ಶಿರೋಭೂಷಣವಾದ ಜಾಜಿಹೂ. ಮತ್ತಮಧುಕರ–ಮದಿಸಿದ ದುಂಬಿ. ಬಿರುದಪ್ರಬಂಧ–ಪ್ರಶಸ್ತಿವಾಕ್ಯ. ಕಾರಂಡ–ಒಂದು ಬಗೆಯ ನೀರುಹಕ್ಕಿ. ಕಲ್ಹಾರ–ಕೆಂಪುನ್ನೈದಿಲೆ. ಗಗನಾಭೋಗ–ಆಕಾಶದ ವಿಸ್ತಾರ. ಪಲ್ಲವಾಂಜಲಿ–ಚಿಗುರುಗಳ ಬೊಗಸೆಗೈ. ಶುಕಶಾರಿಕಾನಿನಾದ–ಗಂಡುಹೆಣ್ಣು ಗಿಣಿಗಳ ದನಿ. ಪ್ರಮದವನ–ರಾಜನ ಅಂತಃಪುರಸ್ತ್ರೀಯರ ವಿಹಾರಕ್ಕೆ ಇರುವ ಉದ್ಯಾನವನ. ಮಣಿಪುತ್ರಿಕೆ–ರತ್ನದ ಗೊಂಬೆ, ಪುತ್ತಳಿ. ವೈಣಿಕ–ವೀಣಾವಾದಕ. ವೈತಾಳಿಕ–ರಾಜನ ಗುಣಶೀಲ ಪ್ರತಾಪಾದಿಗಳನ್ನೂ ಬಿರುದಾವಳಿಯನ್ನೂ ಉಗ್ಗಡಿಸುವವನು. ಪರಿಹಾಸಕ–ಹಾಸ್ಯಗಾರ. ನಾತಿದೂರಸ್ಥ–ಹತ್ತಿರದಲ್ಲಿರುವವನು.

ಪು. ೫೦-೫೧ : ವಿತರಣಶಾಲಿ–ಉದಾರಿ. ಭಾರ–ಜವಾಬ್ದಾರಿ. ಕೃತೋಪಕಾರನು–ಉಪಕಾರ ಮಾಡಿದವನು. ಮೂಷಕಸಂಗ್ರಹಕ್ಕೆ ಪರ್ವತಭೇದನವಂ ಮಾಡು–"ಇಲಿಯಂ ಹಿಡಿಯುವುದಕ್ಕೆ ಬೆಟ್ಟವನಗುಳ್ವಂತೆ" ಒಂದು ಹಳೆಯ ಗಾದೆ. ಕವಿ ಇದನ್ನು ಸಂಸ್ಕೃತಶೈಲಿಯಲ್ಲಿ ಹೇಳಿದ್ದಾನೆ. ಶಿಶಿರಾಂತದ ವೃಕ್ಷಪರ್ಣದಂತೆ–ಶಿಶಿರ ಋತುವಿನಲ್ಲಿ ಮೂಡಣ ಗಾಳಿಯ ಸಂಪರ್ಕದಿಂದ ಮರದ ಎಲೆಗಳು ಹಣ್ಣಾಗಿ ಉದುರಿ ಹೋಗುವುವು. ಜಘನ್ಯ–ಕೀಳು, ಅಲ್ಪವ್ಯಕ್ತಿ. ಪಗುದಿ–ಆಶ್ರಿತರಾಜರು ಪೋಷಕರಾಷ್ಟ್ರದ ಅಧಿರಾಜರಿಗೆ ಕೊಡುತ್ತಿದ್ದ ವಾರ್ಷಿಕವಾದ ಕಪ್ಪ ಕಾಣಿಕೆಗಳು (ಪೊಗುದಿ ರೂಪಾಂತರ). ದಶಾರ್ಣದೇಶ–ದಕ್ಷಿಣದ ಕೋಸಲದಲ್ಲಿರುವ (ಸರಯೂನದಿಯ ದಕ್ಷಿಣಭಾಗದ ಪ್ರದೇಶ) ಒಂದು ದೇಶ. ಇದು ಈಗಿನ ಛತ್ತೀಸ್‌ಘರ್ ಜಿಲ್ಲೆಯ ಒಂದು ಭಾಗ. ಕಲಹಶಮನ–ಜಗಳದ ಪರಿಹಾರ. ಭೃತ್ಯಪದ–ಸೇವಕಸ್ಥಾನ. ಶರಾವತೀನದಿ–ಅಯೋಧ್ಯೆಯ ಬಳಿ ಫೈಜಾಬಾದಿನಲ್ಲಿ ಹರಿಯುವ ಸರಸ್ವತೀನದಿ ಇಲ್ಲವೆ ಗುಜರಾತಿನ ಈಗಿನ ಸಬರ್ಮತಿ ನದಿ. ಛಿದ್ರ–ಬಿರುಕು, ಶೈಥಿಲ್ಯ. ಅಭ್ಯಾಗತ–ಅನಿರೀಕ್ಷಿತವಾಗಿ ಬಂದ ಅತಿಥಿ. ಮನಸ್ವಿ–ಸ್ವಾಭಿಮಾನಿ. ತಪೋಗ್ಲಾನಿ–ತಪಸ್ಸಿಗೆ ಕೊರತೆ. ಭೀತರಕ್ಷಕ–ಹೆದರಿದವರಿಗೆ ರಕ್ಷಣೆ ಕೊಡುವವನು. ಗುಂಡಿಗೆ–ಹೃದಯ. ಮಹಾಮತ್ಸ್ಯ–ದೊಡ್ಡಮೀನು. 'ಮಡುವುಗಳ ದೆಸೆಯಿಂದ' ಸಾಂಪ್ರದಾಯಿಕ ಪಂಚಮೀವಿಭಕ್ತಿಪ್ರಯೋಗ. ಮಡುವು–ನೀರಿನ ಮಡು. ವರುಷಾಕಾಲ ಕಳೆದು...ದಂಡ

ಯಾತ್ರಾಸಮಯವು–ಮಳೆಗಾಲದ ಬಳಿಕ ಬರುವ ಶರದೃತುವಿನ ಆಶ್ವಯುಜ ಮತ್ತು ಕಾರ್ತಿಕಮಾಸಗಳನ್ನು ಒಳಕೊಂಡ ಕಾಲ ; ಅರಸರು ವಿಜಯಯಾತ್ರೆ ಹೊರಡಲು ವಾತಾವರಣ ಹಿತಕರವಾಗಿರುವ ಕಾಲವಿದು. ಪಂಚತ್ವ–ಸಾವು. ನಗ್ನದೇಶ–ಯಾವುದೆಂದು ತಿಳಿಯದು. ಕಾರ್ಯಾಂತರ–ಬೇರೆ ಕೆಲಸ. ಸ್ಥಾನಭ್ರಷ್ಟನಾದ ತ್ರಿಶಂಕು ರಾಜನಂತೆ–ಅಯೋಧ್ಯೆಯ ಅರಸು ಸೂರ್ಯವಂಶದ ನಿಬಂಧನನೆಂಬವನ ಮಗನಾದ ಸತ್ಯವ್ರತ. ಸಶರೀರ ಸ್ವರ್ಗದ ಅಪೇಕ್ಷೆಯಿಂದ ಯಜ್ಞಮಾಡಲು ಹೋಗಿ, ಕುಲಗುರು ವಸಿಷ್ಠನೂ ಆತನ ಪುತ್ರರೂ ಅದಕ್ಕೆ ಒಪ್ಪದಿರಲು, ವಿಶ್ವಾಮಿತ್ರನ ಮೂಲಕ ಆ ಪ್ರಯತ್ನ ಮಾಡಿದನು ; ಇಂದ್ರನು ತಿರಸ್ಕರಿಸಲಾಗಿ, ಅವನು ಭೂಮಿಗೆ ಬೀಳುತ್ತಿರುವಾಗ ವಿಶ್ವಾಮಿತ್ರ ಬೇರೊಂದು ಸ್ವರ್ಗವನ್ನು ಅವನಿಗಾಗಿ ಸೃಷ್ಟಿಸತೊಡಗಿದನು ; ಆಗ ಅವನು ಇತ್ತ ಸ್ವರ್ಗದಲ್ಲಿಯೂ ಇರದೆ, ಅತ್ತ ಭೂಮಿಯಲ್ಲಿಯೂ ಇರದೆ ಅಂತರಾಳದಲ್ಲಿ ಇರುವ ಹಾಗೆ ಆಯಿತು (ನೋಡಿ. ಪುನಾಚೂ. ಪು. ೨೭೫-೭೬). ಪಾರ್ಷ್ಣಿಗ್ರಾಹಿ–ಹಿಂಭಾಗದಲ್ಲಿದ್ದು, ಎಂದರೆ ತಿಳಿಯದ ಹಾಗೆ ಹಿಂದಿನಿಂದ, ಮೇಲೆ ಬೀಳುವ ಶತ್ರು. ಶ್ರೋತ್ರಿಯೋತ್ತಮ–ಬ್ರಾಹ್ಮಣೋತ್ತಮ. ಮಾತ್ಸ್ಯನ್ಯಾಯ–ಲೌಕಿಕನ್ಯಾಯಗಳಲ್ಲಿ ಒಂದು ; ದೊಡ್ಡಮೀನು ಚಿಕ್ಕಚಿಕ್ಕ ಮೀನುಗಳನ್ನು ನುಂಗುವ ಹಾಗೆ, ಬಲಿಷ್ಠನಾದವನು ದುರ್ಬಲರನ್ನು ಹಿಡಿದು ಕಾಡುವುದು ಸಾಮಾನ್ಯ (ಆದಿಪುರಾಣ ೮-೭೪ ವ., ಪಂಪರಾಮಾಯಣ ೨-೩೨). ಸನ್ನಾಹ–ಸೇನಾಸಿದ್ಧತೆ. ವಿರಕ್ತ– ವೈರಾಗ್ಯಪರ, ಸಂನ್ಯಾಸಿ.

ಪು. ೫೫-೫೬ : ಉಪಾಯತ್ರಯ–ಸಾಮ ದಾನ ಭೇದಗಳು. ಷಡ್ಗುಣ–ರಾಜನೀತಿಯಲ್ಲಿ ಸಂಧಿ, ವಿಗ್ರಹ, ಯಾನ, ಆಸನ, ಸಂಶ್ರಯ, ದ್ವೈಧೀಭಾವ ಎಂಬ ೬ ಗುಣಗಳು ಅಥವಾ ಕ್ರಮಗಳು (ನೋ. ಶ್ರೀವತ್ಸ ನಿಘಂಟು, ಪು. ೧೪೭-೪೮). ಜಿತನಾಗು–ಗೆಲ್ಲಲ್ಪಡು. ಪ್ರಾರ್ಥಿಸುವಣ (>ಪ್ರಾರ್ಥಿಸೋಣ), ಧಾತು + ಅಣ ಪ್ರತ್ಯಯ. ತಪ್ತಾಯೋನ್ಯಾಯ–ಲೌಕಿಕನ್ಯಾಯಗಳಲ್ಲಿ ಒಂದು ; ಕಬ್ಬಿಣ ಕಾದಿರುವಾಗಲೇ ಅದನ್ನು ಬೇಕಾದ ಆಕೃತಿಗೆ ಬಗ್ಗಿಸಿಕೊಳ್ಳುವ ಹಾಗೆ, ಸಂದರ್ಭ ಅನುಕೂಲವಾಗಿರುವಾಗ ಶತ್ರುನಿಗ್ರಹ ಮಾಡಬೇಕು. ಜ್ಞಾತವಾಗು–ತಿಳಿ. ತದರ್ಥವಾಗಿ–ಆ ಸಲುವಾಗಿ. ಕುಲಘ್ನ–ಕುಲಕ್ಕೆ ಕೆಟ್ಟಹೆಸರು ತರುವವನು. ಅಂಜನ–ನಿಧಿನಿಕ್ಷೇಪಾದಿಗಳನ್ನು ಕಂಡುಹಿಡಿಯಲು ಕಣ್ಣಿಗೆ ಹಚ್ಚಿಕೊಳ್ಳುವ ಕಪ್ಪು ಅಥವಾ ಮುಲಾಮು. ರಾಜಾಧಿರಾಜ–ರಾಜರಿಗೆ ಮೇಲ್ಪಟ್ಟ ರಾಜ. ವಿಹಿತಜ್ಞ–ತಕ್ಕುದನ್ನು ತಿಳಿದವನು. ನಿಯೋಗಿ–ರಾಜಕಾರ್ಯವನ್ನು ನಿರ್ವಹಿಸಬಲ್ಲವನು. ರಾಜಮೊಹರ–ರಾಜಮುದ್ರೆ. ಕಾಮರೂಪದೇಶ–ಹಿಮಾಲಯ ಪ್ರಾಂತದ ಇಂದಿನ ಅಸ್ಸಾಂ ; ರಾಜಧಾನಿ ಪ್ರಾಗ್ಜ್ಯೋತಿಷಪುರ ; ಪಾಂಡವರ ಕಾಲದಲ್ಲಿ ನರಕಾಸುರನ ಮಗ ಭಗದತ್ತ ಇಲ್ಲಿ ರಾಜ್ಯ ವಾಳುತ್ತಿದ್ದನು. ಕಾರ್ಯಘಟನೆ–ಕೆಲಸ ಕೈಗೂಡುವಿಕೆ. ನಿರೂಪ–ಸಂದೇಶ, ಆಜ್ಞಾಪತ್ರ. ಬೇಹುಗಾರ–ಗೂಢಚರ. ಚಿಕದೇವರಾಜ ಒಡೆಯರ ಕಾಲದ ರಾಜ್ಯವ್ಯವಸ್ಥೆಯಲ್ಲಿ ಬೇಹಿನ ಚಾವಡಿ ಆಡಳಿತದ ಒಂದು ಭಾಗವಾಗಿತ್ತು (ಕನಿ., ಪು. ೧೨೧). ಛದ್ಮನೆ–ಕಪಟ, ವಂಚನೆ.

ಪು. ೫೭-೫೮ : ಸಾಂಖ್ಯ ಯೋಗಗಳ ಫಲಿತಾರ್ಥವು ಒಂದು ಆಗುವಂತೆ–ತಾತ್ತ್ವಿಕವಾಗಿ ಸಾಂಖ್ಯವೂ ಯೋಗವೂ ಒಂದೇ, ಎರಡರಿಂದ ಸಿಕ್ಕುವ ಫಲವೂ ಒಂದೇ. "ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ" (ಭಗವದ್ಗೀತೆ ೫-೫). ತನೂಜ

ಯುಗ್ಮ–ಮಕ್ಕಳ ಜೋಡಿ. ಚಂದ್ರಿಕೆ–ಬೆಳುದಿಂಗಳು. ಮನಶ್ಚಕೋರ–ಮನಸ್ಸೆಂಬ ಚಕೋರಪಕ್ಷಿ (ಬೆಳುದಿಂಗಳನ್ನು ಕುಡಿಯುವುದೆಂಬ ಪ್ರತೀತಿಯ ಹಕ್ಕಿ). ಗಾರ್ಹಸ್ಥ್ಯಾಶ್ರಮ–ಗೃಹಸ್ಥನ ಜೀವನಕ್ರಮ. ಜಾತಪತ್ರಿಕೆ–ಜನನಕಾಲದ ಜಾತಕ. ಏತದರ್ಥ–ಅದೇ ಅಭಿಪ್ರಾಯ. ದರುಶನ–ದರ್ಶನ. ಸಂವಾದ–ಸಂಭಾಷಣೆ. ಸಾಂಕರ್ಯದೋಷ–ಹೀನಕುಲದವರ ಬಾಂಧವ್ಯಮಾಡಿ ಆದ ದೋಷ. ನ್ಯೂನವಾದ–ಕೊರತೆಯುಳ್ಳ. ಭೂಮಿದೇವಿಗೆ ಪೌತ್ರನಾದ ಭಗದತ್ತ ಮಹಾರಾಯ–ವಿಷ್ಣು ವರಾಹಾವತಾರ ಎತ್ತಿದಾಗ ಆತನ ದೇಹದಿಂದ ಒಂದು ಹನಿ ಬೆವರು ನೆಲದ ಮೇಲೆ ಬೀಳಲಾಗಿ ಭೂದೇವಿಯಲ್ಲಿ ಜನಿಸಿದವನು ನರಕಾಸುರ ; ಇವನ ಮಗನಾಗಿ ಪ್ರಾಗ್ಜ್ಯೋತಿಷನಗರದಲ್ಲಿ ಆಳುತ್ತಿದ್ದವನೇ ಭಗದತ್ತ. ತುಚ್ಛವಾಕ್ಯ–ಅಸಭ್ಯವಾದ ಮಾತು.

ಪು. ೫೯-೬೦ : ಮನಃಪ್ರಶಸ್ತ–ಮನಸ್ಸಿಗೆ ಸರಿಕಾಣುವುದು. ಶುಭಪ್ರಸ್ತ–ಮಂಗಳ ಕಾರ್ಯ. ಡಂಗುರವಂ ಹಾಕು–ಸ್ಥಳವಾಸಿಗಳ ಗಮನಕ್ಕೆ ತುರ್ತಾಗಿ ಮುಖ್ಯವಾದ ವಿಷಯವನ್ನು ತರಬೇಕಾದಾಗ ಅಧಿಕಾರಸ್ಥರು ಗ್ರಾಮ ಅಥವಾ ಪಟ್ಟಣದ ಬೀದಿಗಳಲ್ಲಿ ತಮಟೆ ಮೊದಲಾದ ವಾದ್ಯ ಬಾರಿಸುತ್ತ ವಿಷಯವನ್ನು ಘೋಷಿಸುವುದು. ತರಂಗಿಣೀನದಿ– ಯಾವುದೆಂದು ತಿಳಿಯದು. ಬದಲುಲೇಖನ–ಪ್ರತ್ಯುತ್ತರ. ಜವಾಬು. ಪಟಹ–ಒಂದು ಬಗೆಯ ಚರ್ಮವಾದ್ಯ. "ಅಸ್ಮಾಭಿರ್ಯದನುಷ್ಠೇಯಂ ಗಂಧರ್ವೈಸ್ತದನುಷ್ಠಿತಂ"– ಮಹಾಭಾರತದ ಘೋಷಯಾತ್ರಾಸಂದರ್ಭದ ಮಾತು (ವನಪರ್ವ) ; ನಾವು ಮಾಡಬೇಕಾಗಿದ್ದುದನ್ನು ಗಂಧರ್ವರೇ ಮಾಡಿದ್ದಾರೆ. ಪರ್ಯವಸಾನವಾಗು–ನೆರವೇರು. ಮುಕ್ತಾಯವಾಗು. ಉಲೂಕ–ಇದು ಮಂತ್ರಿಯ ಹೆಸರು. ವಾಚ್ಯಾರ್ಥ ಗೂಬೆಯೆಂದಾಗುವುದರಿಂದ ಶಬರವರ್ಮನ ಹಾಸ್ಯಕ್ಕೆ ಅದು ವಿಷಯವಾಯಿತು. ಚಿತ್ತರಂಜನೆ–ಮನಸ್ಸಿನ ವಿನೋದ. ಅನೃತ–ಸುಳ್ಳು. ಪ್ರವೃತ್ತಿಸು–ಶಬ್ದರಚನೆ ಚಿಂತನೀಯ. ತೂಷ್ಣೀಂಭಾವ–ಮಾತಾಡದೆ ಸುಮ್ಮನಿರುವುದು. ಉದಾಸೀನಮಾಡುವುದು. ಒಸಗೆ–ಶುಭವಾರ್ತೆ. ಸಂಧ್ಯಾಕಾಲ–ಸಂಧ್ಯಾವಂದನೆಯ ಹೊತ್ತು.

ಆಗ ಕಮಲಿನೀಹೃದಯಾನುರಾಗದಿಂ . . . ಕುಮುದಬಾಂಧವ ಕರಗೊಳಿಸುತ್ತಿರಲು–ಶೈಲಿ ಸಂಸ್ಕೃತಪದಗಳಿಂದ ನಿಬಿಡವಾಗಿ ಅಲಂಕಾರಯುಕ್ತವಾಗಿದೆ. ಕಮಲಿನಿ– ತಾವರೆಯೆಂಬ ಹೆಣ್ಣು (ತಾವರೆಗೊಳದ ತಾವರೆ). ಕೆಂಪಡರು–ಕೆಂಪೇರು. ಕಮಲಬಾಂಧವ–ಸೂರ್ಯ. ಸಿಂದೂರವರ್ಣ–ಕೇಸರಿ ಬಣ್ಣ. ಪ್ರಾಚೀನಿತಂಬನಿ–ಪೂರ್ವದಿಗ್ವನಿತೆ. ರಾಜೀವಪಂಕ್ತಿ–ತಾವರೆಸಾಲು. ಹರಿತವರ್ಣ–ಹಸಿರುಬಣ್ಣ (ಕಪ್ಪಿಡು, ಮ್ಲಾನವಾಗು). ಕುವಲಯನಿಕರ–ನೈದಿಲೆಸಮೂಹ. ಕುಸುಮಶರದಂದಹ್ಯಮಾನ–ಕಾಮನ ಬಾಧೆಯಿಂದ ಬೇಯುವ. ಚಕ್ರವಾಕ ಹೃದಯೇಂಧನ ಧೂಮರಾಜಿ–ಚಕ್ರವಾಕ ಪಕ್ಷಿಗಳ ಹೃದಯಗಳೆಂಬ ಕಟ್ಟಿಗೆಯಿಂದ ಹೊರಡುವ ಹೊಗೆಯ ದಟ್ಟಣೆ. ತಿಮಿರನಿಕರ–ಕತ್ತಲ ಹರಹು. ಶಶಿಕರಸಿಂಹನಖರ ವಿಶೀರ್ಯಮಾಣ–ಚಂದ್ರನೆಂಬ ಸಿಂಹದ ಕಾಲುಗುರುಗಳಿಂದ ಸೀಳಲ್ಪಟ್ಟ. ತಿಮಿರಗಜಕುಂಭಸ್ಥಲೋತ್ಕ್ಷಿಪ್ತ ಮುಕ್ತಾಫಲನಿಕರ–ಕತ್ತಲೆಯೆಂಬ ಆನೆಯ ಕುಂಭಸ್ಥಳದಿಂದ ಸಿಡಿದು ಸೂಸಿದ ಮುತ್ತುಗಳ ಸಮೂಹ. ತಾರಾನಿನಹ–ನಕ್ಷತ್ರಗಳ ಗುಂಪು. ದಿಶಾವನಿತಾ ಮುಗುಳುನಗೆ–ಅರಿಸಮಾಸದ ಪ್ರಯೋಗ. ಛಂದ–ರೀತಿ. ಮಂದಾಕಿನೀಫೇನಪುಂಜ–

ಗಂಗೆಯ ನೀರ ಬೊಬ್ಬುಳಿಗಳ ಗುಂಪು. ರೋಹಿಣೀಚರಣಾಲಕ್ತಕರಸಲಾಂಛನನು–ದಕ್ಷ ಬ್ರಹ್ಮನ ಮಗಳು ರೋಹಿಣಿ; ಚಂದ್ರನ ೨೭ ಮಂದಿ ಪತ್ನಿಯರಲ್ಲಿ ಒಬ್ಬಳು; ಇವಳ ಕಾಲುಗಳ ಅಲತಿಗೆರಸದ ಗುರುತು ಬಿದ್ದವನು (ಕೋಪದಿಂದ ಅವಳು ಚಂದ್ರನನ್ನು ಒದೆದಳು). ಶಶಿಕರಸುಧಾರಸದಿಂ ಭಾವಿಸಿದಂತೆ–ಚಂದ್ರನ ಬೆಳುದಿಂಗಳಿನಲ್ಲಿ ನೆನೆ ಹಾಕಿದಂತೆ, ತಳಿತವಾಗು–ಸೇಚನೆಯಾಗು. ಶ್ವೇತದ್ವೀಪ–ವಿಷ್ಣುವಿನ ವಾಸಸ್ಥಾನ. ಅಭಿಸಾರಿಕೆ–ಪ್ರಿಯನನ್ನು ಕೂಡಲು ಕಣ್ಮರೆಯಲ್ಲಿ ಸಂಕೇತಸ್ಥಾನಕ್ಕೆ ಹೋಗುವ ಹೆಂಗುಸು. ಸತ್ತಿಗೆ–ಛತ್ರಿ. ಕುಮುದಬಾಂಧವ–ಚಂದ್ರ. ದೀಪಿಕಾಸಹಸ್ರ–ಬಹುಸಂಖ್ಯೆಯ ದೀವಟಿಗೆ. ಸಮ್ಮಾನ–ಮರ್ಯಾದೆ, ಸನ್ಮಾನ. ಅಶ್ವಿನೀದೇವತೆಗಳು–ಸೂರ್ಯಪತ್ನಿ ಸಂಜ್ಞಾದೇವಿ ಕುದುರೆಯ ರೂಪದಿಂದಿದ್ದಾಗ ಸೂರ್ಯನಿಂದ ಹುಟ್ಟಿದ ಅವಳಿಮಕ್ಕಳು, ದೇವತೆಗಳ ವೈದ್ಯರು. ನಂದನಿತಂಬಿನೀ . . . ರಕ್ತಿಮೆಯಂ ಕೆಡಿಸು–ನಂದಪತ್ನಿಯರ ಸ್ತನಗಳೆಂಬ ಮೊಗ್ಗುಗಳ ಕೆಂಪುಚಿತ್ತಾರಕ್ಕೆ ಹತ್ತಿ ಅದರ ಕೆಂಪುಬಣ್ಣವನ್ನು ಕೆಡಿಸು. ದೇವಸೇನಾಪತಿ–ಸ್ಕಂದ, ಸುಬ್ರಹ್ಮಣ್ಯ. ಕುದ್ದಾಲಕ (ಕುದ್ದಾಲ=ಗುದ್ದಲಿ), ದಾಶ (ಬೆಸ್ತ) ಎಂಬ ಹೆಸರುಗಳು ಅಂಕಿತನಾಮಗಳಾಗಿ ಅನ್ವರ್ಥಗಳೂ ಆಗಿವೆ. ಕಾಮಾಟದವರು–ಕೆಲಸದ ಆಳುಗಳು. ಅರವಟಿಗೆ–ದಾರಿಹೋಕರ ಪಾನೀಯದ ಶಾಲೆ. ತೃಣಕಾಷ್ಠ–ಹುಲ್ಲು ಮತ್ತು ಕಡ್ಡಿ. ಅಹೋರಾತ್ರಿ–ಹಗಲು ಮತ್ತು ರಾತ್ರಿ. ಗಮನಾಗಮನ–ಹೋಗುವುದು ಬರುವುದು. ಗಾಂಧಾರ–ಭಾರತದ ವಾಯವ್ಯದಿಕ್ಕಿನಲ್ಲಿ ಉತ್ತರಾಪಥದ ಭೂಭಾಗ ; ಇಂದಿನ ರಾವಲ್‌ಪಿಂಡಿ ಮತ್ತು ಪೆಷಾವರ್ ಜಿಲ್ಲೆಗಳು ; ರಾಜಧಾನಿ ಪೆಷಾವರ್ (ಪುರುಷಪುರ, ಪುಷ್ಕರಾವತಿ). ಅಘನಾಶಿನೀ–ಯಾವುದೆಂದು ತಿಳಿಯದು.

ತರುಣತಮಾಲಕದಳಿಕಾನಿಕರ–ಎಳೆಯ ಹೊಂಗೆಯ ಮರ ಮತ್ತು ಬಾಳೆಯ ಗಿಡಗಳ ಸಮೂಹ. ಪುಷ್ಪವೃಂತ–ಹೂವಿನ ತೊಟ್ಟು. ಜಗುಳು–ಜಾರು. ಶರಾಸನಾಕರ್ಷಣಶ್ರಮವಿಹ್ವಲಮದನನಿಶ್ವಾಸ–ಬಿಲ್ಲನ್ನು ಸೆಳೆಯುವ ಶ್ರಮದಿಂದ ಆಯಾಸಗೊಂಡು ಮನ್ಮಥ ಬಿಡುವ ಉಸಿರು. ಸ್ವೈರಿಣಿ–ಜಾರಸ್ತ್ರೀ, ವಿಕಚ–ಅರಳಿದ. ರಕ್ತಿಮೆ–ಕೆಂಪುಬಣ್ಣ. ಪ್ರಾಚೀವನಿತೆ–ಪೂರ್ವ ದಿಕ್ಕೆಂಬ ಹೆಣ್ಣು. ರಾಜೀವಬಾಂಧವ–ಸೂರ್ಯ. ಅರುಣಚ್ಛವಿ–ಹೊಂಬಣ್ಣ. ವಿಪ್ರಯುಗ್ಮ ಧೇನುದರ್ಶನ–ಬೆಳಗ್ಗೆ ಶುಭಶಕುನಗಳಾಗಿ ಇಬ್ಬರು ಬ್ರಾಹ್ಮಣರು ಮತ್ತು ಹಸು ಇವುಗಳನ್ನು ರಾಜರು ದರ್ಶಿಸಬೇಕು. ಯಾತ್ರಾದಾನ–ವಿಜಯಯಾತ್ರೆಯ ಕಾಲದಲ್ಲಿ ಮಾಡುವ ದಾನ. ಅಂದಳ–ಮೇನೆ. ಮುಕ್ತಾಫಲಚಿತ್ರಿತ–ಅಲಂಕಾರಕ್ಕೆ ಮುತ್ತುಗಳನ್ನು ಕಟ್ಟಿದ. ಆಂದೋಳಿಕ–ಪಲ್ಲಕ್ಕಿ.

ಪು. ೬೫-೬೬ : ಗಜಸ್ಕಂಧ–ಆನೆಯ ಹೆಗಲು. ಪಾರ್ಶ್ವಸ್ಥಿತ–ಪಕ್ಕದಲ್ಲಿರುವ. ಆನಕ–ನಗಾರಿ. ನಿಸ್ಸಾಣ–ಒಂದು ಬಗೆಯ ಚರ್ಮವಾದ್ಯ. ಕದಂಬ–ಸಮೂಹ. ಪ್ರೋನ್ನತ–ತುಂಬ ಎತ್ತರವಾದ. ಕುಂಜರ–ಆನೆ. ವಲಾಹಕ–ಅತಿಶಯವಾದ ಮಳೆ ಸುರಿಸುವುದೆಂದು ಭಾವಿಸಲಾದ ಪ್ರಳಯಕಾಲದ ಏಳು ಮೇಘಗಳಲ್ಲಿ ಒಂದಾದ ಬಲಾಹಕವೆಂಬ ಮೇಘ. ಬಲಸಮ್ಮರ್ದ–ಸೇನೆಯ ದಟ್ಟಣೆ. ಅಂಗರಾಗ–ಲೇಪನದ ಸುಗಂಧದ್ರವ್ಯ. ಪಟವಾಸ–ಪರಿಮಳದ ಹುಡಿ. ಶ್ಮಶ್ರುರೋಮ–ಮೀಸೆಯ ಕೂದಲು. ಪಲಿತ–ನರೆಗೂದಲು. ಪುರೋಭಾಗ–ಮುಂಭಾಗ. ಗಂಡನಿಸೃತ–ಕಪೋಲಸ್ಥಲದಲ್ಲಿ ಸುರಿಯುವ. ಶೃಂಖಲಕ್ಷೋಭೆ–

ಕಟ್ಟಿದ ಸರಪಳಿಗಳ ಕೋಟಲೆ. ಕೀರ್ಯಮಾಣ–ತುಂಬಿ ಸೂಸಿದ. ತುರಗಮುಖಫೇನ ಪಟಲ–ಕುದುರೆಬಾಯಿಯ ನೊರೆಗಳ ಗುಂಪು. ರೇಣುಪಟಲ–ದೂಳಿನ ದಟ್ಟಣೆ. ಶತಘ್ನಿ –ಫಿರಂಗಿ, ತೋಪು. ತೋಮರ ಪರಿಘ–ಲೋಹದ ಗದೆ ಮತ್ತು ಕಬ್ಬಿಣದ ಮೊನೆಗಳಿಂದ ಕೂಡಿದ ಗದೆ. ಪ್ರಾಸ ಕುಂತ–ಒಂದು ಬಗೆಯ ಎಸೆಯುವ ಆಯುಧಗಳು. ಶತಾಂಗ– ವಿಶೇಷವಾಗಿ ಯುದ್ಧಸಮಯದಲ್ಲಿ ಬಳಸುವ ಬಂಡಿ, ರಥ. ಶರವಣ–ಲಾಳದ ಮೆಳೆ, ಜೊಂಡಿನ ಪೊದೆ. ಪಟಗೃಹಪಂಕ್ತಿ–ಗುಡಾರಗಳ ಸಾಲು. ಪಾರ್ಶ್ವ ಪುರೋಭಾಗ–ಅಕ್ಕಪಕ್ಕ ಮತ್ತು ಮುಂಭಾಗ.

ಪಂಚಮಾಶಯ

ಪು. ೬೭-೬೮ : ಕಶೆ–ಬಾರುಕೋಲು. ಪ್ರಹಾರ–ಹೊಡೆತ. ದಂಡು–ಸೈನ್ಯ. ಮ್ಲೇಚ್ಛೋಪ ದ್ರವ–ಭಾರತೀಯರಲ್ಲದ ದೇಶವಾಸಿಗಳ ಕಾಟ. ವಲಸೆಹೋಗು–ಪಟ್ಟಣ ಬಿಟ್ಟು ಬೇರೆ ಕಡೆಗೆ ಒಕ್ಕಲುಹೋಗು. ಕಟ್ಟುಕರಣಿಕರು–ಮೈಸೂರು ಒಡೆಯರ ಕಾಲದ ಆಡಳಿತ ಪದ್ಧತಿಯ ಅಧಿಕಾರಿಗಳಲ್ಲಿ ಸೇರಿದ, ಬಹುಶಃ ಭೂಮಿಕಾಣಿಗಳ ದಾಖಲೆಯಿಡುವ ಗುಮಾಸ್ತರು. ತಲಗಟ್ಟು–ಗಡಿಯ ಭಾಗ. ಮೃಷಾವರ್ತಮಾನ–ಸುಳ್ಳುಸುದ್ದಿ. ಮಲಿನರತ್ನ –ಮಂಕಾದ ಹರಳು. ಅಂಚೆಯ ಹರಿಕಾರ–ಟಪ್ಪಾಲಿನ ಓಡಾಟದ ಆಳು. ಕಾಶಪ್ರಸ್ಥ, ಕ್ರೌಂಚಪ್ರಸ್ಥ–ಶಕ್ತಿಸಂಗಮತಂತ್ರದಲ್ಲಿ (೩-೮) ಇಂದ್ರ ಯಮ ವರುಣ ಕೂರ್ಮ ಮತ್ತು ದೇವ ಎಂಬ ಹೆಸರಿನಲ್ಲಿ ಪಂಚಪ್ರಸ್ಥಗಳನ್ನು ಹೇಳಿದೆ. ಆದರೆ ಈ ಹೆಸರಿನವು ಬಂದಿಲ್ಲ. ಉಷ್ಟ್ರಾರೂಢ–ಒಂಟೆಯ ಸವಾರ. ತೋರಣಸ್ತಂಭ–ಪಟ್ಟಣದ ಹೊರಬಾಗಿಲು ಅಥವಾ ಹೆಬ್ಬಾಗಿಲ ಕಂಬ. ಉನ್ಮಾದದೆಸೆ–ಹುಚ್ಚು. ಪ್ರಮತ್ತ–ಸೊಕ್ಕಿದ. ಎಡವಟ್ಟು–ತೊಂದರೆ. ಮಂತ್ರಬೀಜ–ಮಂತ್ರದ ಬೀಜಾಕ್ಷರ. ಕೋಶ–ಭಂಡಾರ. ಆಕಾಶವೆ ಉಳಿ–ಏನೇನೂ ಇಲ್ಲದೆ ಹೋಗು. ಶೂನ್ಯವಾಗು. ಪಿಶುನವಾಕ್ಯ–ಚಾಡಿಮಾತು. ಗೂಢದಸ್ಯು–ಒಳಗಿನ ಕಳ್ಳ. ಗಣಕ–ಲೆಕ್ಕಿಗ. ಗೂಢಮಂತ್ರಿ–ಗುಟ್ಟುವಿದ್ಯಮಾನಗಳ ಮಂತ್ರಿ. ಮರ್ಮಜ್ಞ–ಲೌಕಿಕವನ್ನು ಚೆನ್ನಾಗಿ ತಿಳಿದವನು.

ಪು. ೬೯-೭೦ : ಇಟ್ಟಣಿಕೆ ನೋಡು–ಕೊಂಚವಾದರೂ ಬಗ್ಗಿ ನೋಡು (ಇಡು + ಇಣಿಕು = ಇಟ್ಟಣಿಕು). ಅನುಚಿತ ಕರ್ಮಾರಂಭಃ . . ಸ್ಪರ್ಧಾ–ಉಚಿತವಲ್ಲದ ಕಾರ್ಯಮಾಡುವುದು, ಸ್ವಜನರ ವಿರೋಧ ಕಟ್ಟಿಕೊಳ್ಳುವುದು, ತನಗಿಂತ ಹೆಚ್ಚು ಶಕ್ತಿವಂತನಾದವನಲ್ಲಿ ಸ್ಪರ್ಧಿ ಸುವುದು. ತೀಕ್ಷ್ಣಪ್ರತಿಜ್ಞೆ–ಭಯಂಕರವಾದ ಶಪಥ. ಬ್ರಾಹ್ಮತೇಜಸ್ಸು–ಬ್ರಾಹ್ಮಣನ ಪ್ರಭಾವ. "ಧಿಗ್‌ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋ ಬಲಂ ಬಲಂ" ಎಂಬುದಾಗಿ ವಸಿಷ್ಠರು ವಿಶ್ವಾಮಿತ್ರನಿಗೆ ಹೇಳುವ ರಾಮಾಯಣದ ಉಕ್ತಿ (೧-೫೬-೨೩) ಇಲ್ಲಿ ನೆನಪಾಗು ವುದು. ತಿರೋಧಾನವಾಗು–ಮರೆಯಾಗು. "ವಿಧಿವಿಹಿತಂ ಬುದ್ಧಿರನುಸರತಿ"–ವಿಧಿ ಗೊತ್ತು ಮಾಡಿದಂತೆಯೇ ಬುದ್ಧಿಯೂ ಓಡುತ್ತದೆ. ಹೊನ್ನಗಟ್ಟ–ಸ್ಥಳೀಯವಾದ ಸ್ಥಲನಾಮ ವಿದು. ಸರಯೂತೀರದ ಸುರಭಿವಾಟಿ–ಸರಯೂ ಆಯೋಧ್ಯೆ ಬಳಿ ಹರಿಯುವ ನದಿ ; ಈಗ ಇದನ್ನು ಗೋಗ್ರ ಎನ್ನುತ್ತಾರೆ ; ಇಲ್ಲಿಯ ಗೋಶಾಲೆ, ಗೋಪರು, ಗೋಪಾಲಕರು. ಮೂಲಾನುಮೂಲ–ಮುಖ್ಯ ಮತ್ತು ಉಪಕಾರಣಗಳು. ಸುರಂಗ–ಭೂಮಿಯೊಳಗೆ

ಕೊರೆದು ಮಾಡುವ ಒಳದಾರಿ. ಪ್ರಾಕಾರ–ಕೋಟೆಯ ಸುತ್ತುಗೋಡೆ. ಆಖ್ಯೆ–ಹೆಸರು. ಚಂಪಕಾವತಿ–ಅಂಗದೇಶದ (ಪೂರ್ವ ಬಿಹಾರ) ರಾಜಧಾನಿಯಾದ ಚಂಪಾನಗರವೆ ಇರ ಬಹುದು ; ಇದು ಈಗಿನ ಭಾಗಲ್ಪುರ ಸಮೀಪದ ಸ್ಥಳ. ಶೃಂಗಾರಪಾಳ್ಯ–ಸ್ಥಳೀಯವಾದ ಹೆಸರು. ಸೌರಂಭ–ಇದು ಕವಿಕಲ್ಪಿತ ಪಾತ್ರವಿರಬಹುದು.

ಪು. ೭೧-೭೨ : ಗಾವುದ–ಸು. ಆರು ಮೈಲಿ ದೂರ (ಸಂ. ಗವ್ಯೂತ). ಅಹೋರಾತ್ರಿ–ಹಗಲು ರಾತ್ರಿ. ಕರ್ಣಾಕರ್ಣಿಕೆ–ಒಬ್ಬರಿಂದ ಒಬ್ಬರಿಗೆ ಹಬ್ಬುವ ಸುದ್ದಿ (ಕಿವಿಯಿಂದ ಕಿವಿಗೆ). ಸಮ್ಮಾನಿತನಾಗು–ಮರ್ಯಾದೆಯನ್ನು ಹೊಂದು. ಅನೀಕ, ಚತುರಂಗ, ಬಲ, ವಾಹಿನಿ, ಚಮು, ಸೇನೆ ಹೀಗೆ ಸೈನ್ಯವನ್ನು ಹೇಳುವ ಹಲವು ಶಬ್ದಗಳನ್ನು ಇಲ್ಲಿ ಬಳಸಿದೆ. ಬಲವದ್ವಿರೋಧ–ಬಲಿಷ್ಠರ ವೈರ. ಮುಹೂರ್ತ–ಸ್ವಲ್ಪಹೊತ್ತು.

ಪು. ೭೩-೭೪ : ರಾಯಸದವರು–ಅರಸರ ಆಜ್ಞಾಪತ್ರ ಅಥವಾ ನಿರೂಪಗಳನ್ನು ಬರೆ ಯುವ ಹಾಗೂ ಓದಿ ಹೇಳುವ ವೃತ್ತಿಯವರು. ದಶಾರ್ಣದೇಶ–ದಕ್ಷಿಣಕೋಸಲದ ಒಂದು ದೇಶ. ಇದು ಈಗಿನ ಛತ್ತೀಸ್‌ಘರ್ ಜಿಲ್ಲೆಯ ಒಂದು ಭಾಗ.

ಶೂರಸೇನ–ಆಗ್ನೇಯದಿಕ್ಕಿನಲ್ಲಿ ಮಗಧದಿಂದ ಆರಂಭಿಸಿ ವಿಂಧ್ಯಪರ್ವತದ ಪಶ್ಚಿಮ ಭಾಗದವರೆಗೆ ಹಬ್ಬಿದ್ದ ಪ್ರದೇಶ. ಪ್ರಾಚೀನ ಶೂರಸೇನಿಗಳು ಮಧುರೆಯ ಪ್ರಾಂತದಲ್ಲಿ ವಾಸಿಸುತ್ತಿದ್ದರು. ಕೃತಘ್ನ–ಮಾಡಿದ ಉಪಕಾರ ಮರೆಯುವವನು. ಅನ್ಯಾಕ್ರಾಂತವಾಗು–ಬೇರೆಯವರು ಆಕ್ರಮಿಸಿಕೊಳ್ಳು. ಮನೋಗತ–ಅಭಿಪ್ರಾಯ. ಪೂರ್ವಶತ್ರುಗಳು–ಹಳೆಯ ವೈರಿಗಳು. ದೇಶಕಾಲಜ್ಞರು–ಯಾವ ಸ್ಥಳದಲ್ಲಿ ಯಾವ ಸಮಯದಲ್ಲಿ ಕೆಲಸ ಮಾಡಬೇಕು ಎನ್ನುವುದನ್ನು ಬಲ್ಲವರು. ಗ್ರಹಬಲ–ನವಗ್ರಹಗಳ ಶುಭಪ್ರದಾನ ಶಕ್ತಿ. ಜ್ಯೋತಿಷರು–ಜ್ಯೋತಿಷ್ಯ ಬಲ್ಲವರು. ಕಾಗದ ಕಡ್ಡಿಗಳಂ ಪಿಡಿದು–ಮೌರ್ಯರ ಕಾಲಕ್ಕೆ ಬರಹಕ್ಕೆ ಕಾಗದ ಕಡ್ಡಿಗಳ ಬಳಕೆ ಇರಲಿಲ್ಲ ; ಸ್ಥಳೀಯ ವಿದ್ಯಮಾನದ ಮಾತು. ವಾದ ವಶ್ಯ ಮಂತ್ರ ನೀತಿ–ತರ್ಕ, ವಶೀಕರಣ, ಮಂತ್ರೋಚ್ಚಾರದಿಂದ ಕಾರ್ಯಸಿದ್ಧಿ ಮಾಡಿಕೊಳ್ಳುವುದು, ಹಿತೋ ಪದೇಶ ಈ ವಿದ್ಯೆಗಳು. ದೊಂದೆ–ಕಟ್ಟು, ಕುಚ್ಚು ; ಜೈನಸಂನ್ಯಾಸಿಗಳು ಸ್ಥಳಶುದ್ಧಿಗಾಗಿ ಪಿಂಛವನ್ನು ಇಟ್ಟುಕೊಳ್ಳುವುದು ಸಾಮಾನ್ಯ. 'ಧರ್ಮಿಷ್ಠರಿಗೆ ಶ್ರೇಯೋಸ್ತು'–ಇದು ವ್ಯಂಗ್ಯೋಕ್ತಿ; ಚಂದ್ರಗುಪ್ತ ಚಾಣಕ್ಯರನ್ನು ಕುರಿತು ಆಡಿದ ಮಾತು. ಸಮಯಜ್ಞ–ಸಂದರ್ಭ ತಿಳಿದವನು. ನೀವು ಕೇಳಿದ ಪ್ರಶ್ನೆಯು . . . ಬಂದವರು ಭೇದಕ್ಕೆ ಒಳಗಾದಾರು–'ರಾಕ್ಷಸನು ಮೂಲತಃ ಪಾಟಲೀಪುರದ ಅರಸನ ಮಂತ್ರಿ, ಹಾಗೆಯೇ ಚಂದ್ರಗುಪ್ತನಲ್ಲಿ ಮಂತ್ರಿ ಯಾಗಿ ನಿಯುಕ್ತನಾಗುವವನು. ಆ ದೃಷ್ಟಿಯಲ್ಲಿ ಶತ್ರುಸ್ಥಾನದ ಗ್ರಹ ಪರ್ವತರಾಜನೇ. ಅದನ್ನು ನೋಡುವ ಶತ್ರುಗ್ರಹ ಚಂದ್ರಗುಪ್ತನೇ. ಶತ್ರು ಜೀವಂತನಾಗಿ ಹೋಗುವುದಿಲ್ಲ, ಎಂದರೆ ಪರ್ವತರಾಜನ ಮರಣ ಸಿದ್ಧವೆಂದರ್ಥ. ಕಾರ್ಯಪರ್ಯವಸಾನದಲ್ಲಿ ಜಯಲಾಭ ವೆಂದರೆ ರಾಕ್ಷಸ ಈಗ ಕಳೆದುಕೊಂಡಿರುವ ಅಮಾತ್ಯಪದವಿಯನ್ನು ಚಂದ್ರಗುಪ್ತನಲ್ಲಿ ಪಡೆಯುವುದು. ಬುಧಾದಿ ಪಂಚಗ್ರಹಗಳು ಎಂದರೆ, ಚಾಣಕ್ಯ, ಚಂದ್ರಗುಪ್ತ, ಬಾಗು ರಾಯಣ, ಇಂದುಶರ್ಮ, ಸಿದ್ಧಾರ್ಥಕ ಎಂದು ತಿಳಿಯಬಹುದು. ಲಗ್ನಕ್ಕೆ ಎಂದರೆ ಈಗಿನ ಯುದ್ಧ ಸಂದರ್ಭಕ್ಕೆ ಭೇದೋಪಾಯದಿಂದ ಪ್ರಯೋಜನ ಪಡೆಯುತ್ತಾರೆ, ಇವರು. ಶತ್ರುವಾದ ಪರ್ವತರಾಜನ ಸಹಾಯಕರಾದ ಚಿತ್ರವರ್ಮ ಮೊದಲಾದವರು ಆ ಭೇದೋ

ಪಾಯಕ್ಕೆ ಒಳಗಾಗುತ್ತಾರೆ. ದಂಡೋಪಾಯದಿಂದ ನಂದರು ಹತರಾಗುತ್ತಾರೆ.' ಇದು ಇಲ್ಲಿಯ ಆಶಯವಿರಬಹುದು. ಮಾಯಾಧಾರನೇ–ಬುದ್ಧನನ್ನು ನೆನೆಯುವ ಮಾತು; ಬುದ್ಧ ಮಾಯಾದೇವಿಯ ಮಗನಾದ್ದರಿಂದ ಆಕೆಗೆ ಆಧಾರಪ್ರಾಯನೆಂದಿದೆ. ದುರ್ನಿಮಿತ್ತ –ಅಪಶಕುನ. ಆರ್ತ್ವಿಜ್ಯ–ಋತ್ವಿಜನಾಗಿರುವಿಕೆ. ನಾತಿದೂರ–ಬಹುದೂರವಾಗಿ ಇರದಿರುವುದು. ಹತ್ತಿರದಲ್ಲಿರುವುದು. ಮಾರ್ಗವಶಾತು–ಆಕಸ್ಮಿಕವಾಗಿ ದಾರಿಯಲ್ಲಿ ಬರುವುದು.

ಪು. ೭೭-೭೮ : ಶಿಷ್ಯಚತುಷ್ಟಯ–ನಾಲ್ವರು ಶಿಷ್ಯರು. ನಿಯೋಗಿತನ–ರಾಜ್ಯಕಾರ್ಯ ನಿರ್ವಹಣೆಯ ಅಧಿಕಾರ. ವ್ಯಾಪಾರಮುಖ–ವ್ಯಾಪಾರದ ಮೂಲಕ. ಆಶ್ರಯಭೂತರು–ಆಶ್ರಯಸ್ಥಾನರು. ನಿಯಮ್ಯರಾಗಿ–ಆಜ್ಞಾಬದ್ಧರಾಗಿ. ನಿಮಿತ್ತಾಂತರ–ಕಾರಣಾಂತರ. ವ್ಯಾಜಾಂತರ–ಬೇರೊಂದು ನೆಪ. ವೇಷಾಂತರ–ಬೇರೆ ವೇಷ. ಭಿಕ್ಷಾಸಮಯ–ಯತಿಗಳ ಊಟದ ವೇಳೆ. ಅನ್ಯಥಾ ಆಗು–ಉದ್ದೇಶಿಸಿದ್ದಕ್ಕಿಂತ ಬೇರೆ ರೀತಿಯಾಗು. ಈ ಕಾಡಿಗೆಯಂ ಅದರ ಹಣೆಗೆ ಇಟ್ಟು . . . ಕಾಡಿಗೆಯಂ ಚೂರ್ಣವಂ ಕೊಟ್ಟು ಕಳುಹಿಸಲು–ಇದು ಕೃತಿಯಲ್ಲಿ ವಿರಳವಾಗಿ ಬಂದಿರುವ ಅಲೌಕಿಕ ಸಂದರ್ಭ. ಇಂದ್ರಜಾಲವಿದ್ಯೆಗೆ ಸಾಧ್ಯವಾಗತಕ್ಕ ಕಾರ್ಯಗಳನ್ನು ಇಲ್ಲಿ ಹೇಳಿದೆ. ಶಿವತತ್ತ್ವರತ್ನಾಕರಾದಿ ಗ್ರಂಥಗಳನ್ನು ಈ ಬಗೆಗೆ ನೋಡಬಹುದು.

ಪು. ೭೯-೮೦ : ಉಕ್ಕಡ–ಊರಿನ ಎಲ್ಲೆಯ ಸುಂಕದ ಕಟ್ಟೆ. ಪಿರಂಗಿ ಮುಂತಾದ ಯುದ್ಧಸಾಮಗ್ರಿಯಂ–ಪಿರಂಗಿ ತುಪಾಕಿ ಮದ್ದು ಗುಂಡುಗಳು ಮೌರ್ಯರ ಕಾಲದಲ್ಲಿ ಪರಿಚಿತವಲ್ಲದ ಆಯುಧಗಳು. ಮಡುಹು–ನೀರಿನ ಆಸರೆ, ಸಣ್ಣ ಹೊಂಡ ಅಥವಾ ಕೊಳ. ಕಂದಾಯವಂ ಬಿಡಿಸು–ಕಂದಾಯವನ್ನು ಕೊಡದಂತೆ ಮಾಡು. ಪಾಚಕ–ಅಡಿಗೆಯವನು. ರಜಕ–ಅಗಸ, ಮಾಲ್ಯಕಾರ–ಹೂವಾಡಿಗ. ಭಂಗಿ–ಒಂದು ಮಾದಕವಸ್ತು, ಗಾಂಜಾ. ಮದ್ಯ ಭಂಗಿ. . . ವಿಷಚೂರ್ಣವಂ ಬೆರಸಿ–ಹೆಂಡ, ಗಾಂಜಾ, ಹೊಗೆಸೊಪ್ಪು, ಉಪ್ಪು, ಹುಳಿ ಎಳ್ಳು, ಬೆಲ್ಲ, ತುಪ್ಪಗಳಲ್ಲಿ ೧೫ ದಿನಗಳಲ್ಲಿ ಹಾಗೂ ತಿಂಗಳಲ್ಲಿ ಪರಿಣಾಮತೋರುವ ವಿಷದ ಪುಡಿ ಬೆರಸಿ. ಇರಕಟವಾದ–ಇಕ್ಕಟ್ಟಾದ. ಮದ್ದುಗಳಂ ಹೂಳಿಸು–ನೆಲದಲ್ಲಿ ಬೆಂಕಿ ಕೊಟ್ಟರೆ ಸಿಡಿಯುವ ಸ್ಫೋಟಕವಸ್ತುಗಳನ್ನು ಹೂಳಿಸು. ಧನಿಕಸಂಘ–ಶ್ರೀಮಂತಕೂಟ. ದೇವ ಬ್ರಾಹ್ಮಣಕಂಟಕರಾದ ಕಿರಾತ ಮ್ಲೇಚ್ಛ ಪಾರ್ವತೇಯರ ಪಾಲುಮಾಡು–ದೇವತಾ ಮೂರ್ತಿಗಳಿಗೆ ಬ್ರಾಹ್ಮಣರಿಗೆ ತೊಂದರೆ ಕೊಡುವ ಕಾಡುಜನ ಪಾಖಂಡಿಗಳು (ಅನಾರ್ಯರಾದ ವಿದೇಶೀಯರು) ಹಾಗೂ ಗುಡ್ಡಗಾಡು ಜನರ ಪಾಲುಮಾಡು.

ಪು. ೮೧-೮೨ : ಒಂಟಿಶೂರ–ಏಕಾಂಗ ಸಾಹಸಿ. ಕಿರುಬ–ಹುಲಿಯ ಜಾತಿಗೆ ಸೇರಿದ ಒಂದು ಕಾಡುಮೃಗ, ನಾಯಿಹುಲಿ. 'ಸಂಘೇ ಶಕ್ತಿಃ ಕಲೌ ಯುಗೇ'–ಕಲಿಯುಗದಲ್ಲಿ ಶಕ್ತಿಯಿರುವುದು ಒಗ್ಗಟ್ಟಿನಲ್ಲಿ. ಸಂಘ–ಸಮೂಹ. ಅಭಿಭವ–ಸೋಲು. ಕತ್ತೆಕಿರುಬ –ಒಂದು ಜಾತಿ ಕಾಡುಮೃಗ. ತಿಟ್ಟು–ದಿಣ್ಣೆನೆಲ. ಕಿರಾತದಸ್ಯು–ಕಳ್ಳಬೇಡ. ಹುಂಡಿ–ಸಣ್ಣ ಹಳ್ಳಿ, ಕೊಪ್ಪಲು. ಕೀಕಟದೇಶ–ಕಠಿನವೂ ದಟ್ಟವಾದುದೂ ಆದ ದೇಶ, ಗೊಂಡಾರಣ್ಯ. ಭೌಗೋಳಿಕವಾಗಿ ಮಗಧದ ದಕ್ಷಿಣಭಾಗದ ಚರಣಾದಿ(ಗಯಾದ ಬಳಿಯ ವಿಷ್ಣುಪಾದ ಗಿರಿ ಇರಬಹುದು)ಯಿಂದ ಗೃಧ್ರಕೂಟದ(ಇಂದಿನ ಶೈಲಗಿರಿ)ವರೆಗೆ ವ್ಯಾಪಿಸಿದೆಯೆಂದು ತಿಳಿಯಲಾಗಿದೆ. ಗಿರಿವ್ರಜ–ಮಗಧದ ಒಂದು ಮುಖ್ಯನಗರ. ಈಗ ಬಿಹಾರಿಗೆ ಸೇರಿ ರಾಜ

ಗಿರ್ ಎಂದು ಹೆಸರಾಗಿದೆ. ಶೋಣಭದ್ರಾನದಿ–ಮಗಧಕ್ಕೆ ಪಶ್ಚಿಮಭಾಗದ ಸರಹದ್ದು ಆಗಿರುವ ನದಿ. ಈಗಿನ ಸೋನ್ ನದಿ. ವ್ಯೂಹರಚನೆ–ಯುದ್ಧದ ಮೊದಲಿಗೆ ಸೈನ್ಯವನ್ನು ಒಂದು ವಿಶಿಷ್ಟವಾದ ಆಕಾರದಲ್ಲಿ ನಿಲ್ಲಿಸುವುದು. ಅಲ್ಪಸತ್ವ–ಕಡಿಮೆ ಬಲವುಳ್ಳವನು. ಅತವಣೆ–ಕಂದಾಯದ ಇಲಾಖೆ. ಬಿಡುಜನ–ಪರಸ್ಪರ ಪರಿಚಯವಿರದ ಒಂಟಿಯಾಳುಗಳ ಗುಂಪು. ಅಧಿಕಾರಗುಣ–ಅರ್ಹತೆಯ ಗುಣ. ಆರ್ಜಕತ್ವ–ಸಂಪಾದಿಸುವ ಗುಣ. ಬೇಕಾದುದನ್ನು ಒದಗಿಸುವ ಸಾಮರ್ಥ್ಯ. ವ್ಯವಹರ್ತೃತ್ವ–ವ್ಯವಹಾರಶಕ್ತಿ. ಯುದ್ಧಾಭಿನಿವೇಶ–ಯುದ್ಧದ ಆಸಕ್ತಿ. ಮತ್ತತೆ–ಸೊಕ್ಕು. ಶಂಖಮುಖದಿಂದ ಪಾವನತೀರ್ಥವಾಗುವಂತೆ– 'ಶಂಖದಲ್ಲಿ ಬಿದ್ದರೆ ತೀರ್ಥ' ಎಂಬ ಗಾದೆಮಾತು ನೆನೆಯಬಹುದು.

ಪು. ೮೩-೮೬ : ಭುಜಾರ್ಜಿತ–ಸ್ವಶಕ್ತಿಯಿಂದ ಸಂಪಾದಿಸಿದ. ಶ್ರೋತ್ರಿಯ –ನಿಷ್ಠಾವಂತ ಬ್ರಾಹ್ಮಣ. ಧಾರ್ಮ್ಯಾಗ್ನಿ–ಅಗ್ನಿಹೋತ್ರದ ಯಜ್ಞೇಶ್ವರ. ಮೂಲಕದಿಂದ–ಈ ಶಬ್ದಪ್ರಯೋಗ ಕುತೂಹಲಕರ. ವಿಪನ್ನ–ವಿಪತ್ತಿನಲ್ಲಿರುವವನು. ಅಂತರ್ಭೂತಗಳು–ಒಳಗೆ ಸೇರತಕ್ಕವು. ತುಷ್ಟ–ತೃಪ್ತ. ಬೊಕ್ಕಸ–ದ್ರವ್ಯಭಂಡಾರ. ಅನರ್ಘ್ಯ–ಶ್ರೇಷ್ಠ. ಮುಕ್ತಾಹಾರ–ಮುತ್ತಿನ ಹಾರ. ತುರಾಯಿ–ಪೇಟ ಟೋಪಿ ಕಿರೀಟ ಮುಂತಾದುವುಗಳಿಗೆ ಸಿಕ್ಕಿಸುವ ಹೂವಿನ ಅಥವಾ ಮುತ್ತಿನ ಆಭರಣ. ಅಲಂಕಾರದ ಕುಚ್ಚು. ಕಡಗ–ದಪ್ಪ ಕೈಬಳೆ. ಬಾಹುಪುರಿ–ಸಂ. ಬಾಹುಪೂರ ; ತೋಳಬಂದಿ. ಸಾಮಗ್ರ್ಯ–ಸಾಮಗ್ರಿ ; ಸಾಧನಸಲಕರಣೆ. ವ್ಯಾಜಾಂತರ–ಬೇರೆ ನೆಪ. ಭಲ್ಲೆಯದವರು–ಈಟಿಯ ಯೋಧರು. ಜಾಮಿಗೆಯವರು–ಸುಡುವ ಮದ್ದುಗಳನ್ನು ಹತ್ತಿಸಲು ಉಪಯೋಗಿಸುವ ಸಾಧನ(ಬತ್ತಿ)ವನ್ನು ಬಳಸಿ ಮದ್ದು ಹಾರಿಸುವವರು. ಮಹಾಗಂಭೀರವಾದ ಅಗಳು–ತುಂಬ ಆಳವಾದ ಕಂದಕ, ತೋಡು. ಮುಂದಲೆ–ತಲೆಯ ಮುಂಭಾಗದಲ್ಲಿರುವ ಕೂದಲು. ಗೂಢಮಂತ್ರಿ–ವೇಷ ಮರೆಸಿಕೊಂಡ ಮಂತ್ರಿ. ನಾಗಸರ–ಸಂ. ನಾಗಸ್ವರ, ಪುಂಗಿ. ಗಾರುಡಿಗ–ಹಾವಾಡಿಗ, ಹಾವು ಹಿಡಿಯುವವನು. ಛದ್ಮನೆ–ಕಪಟ, ವಂಚನೆ. ಹೊರಚ್ಚುಮಾಡು–ಬೇರೆಮಾಡು. ಜೋಗಿ–ಬೈರಾಗಿ, ದಾಸಯ್ಯ. ಸಿಂಗನಾತ–ಜೋಳಿಗೆ (?) (ಸಿಂಗನಾದ–ಪುರಸಪ್ಪಗಳು ಊದಲು ಬಳಸುವ ಕೊಂಬು, ಶೃಂಗನಾದ, 'ಜನಪದ ನಿಘಂಟು' ೧೯೮೭, ಪು. ೨೫೫). ನಿಯಮ್ಯರಾಗು–ಒಳಪಟ್ಟವರಾಗು. ನಾಸಿಕಾಚ್ಛೇದವಂ ಮಾಡಿಸು–ಮೂಗು ಕತ್ತರಿಸು. ಸೈಕತಸೇತುವೆ–ಮರಳಿನ ಸೇತುವೆ. ಮೈಥಿಲ–ವಿದೇಹದ ಪ್ರಾಚೀನಕಾಲದ ರಾಜಧಾನಿ ಮಿಥಿಲೆ. ಇದು ನೇಪಾಲೀಯರ ತರಾಯಿ ಪ್ರದೇಶದ ಇಂದಿನ ಜನಕಪುರ. ಇದರ ದೊರೆ ಮೈಥಿಲ. ಮತ್ಸ್ಯದೇಶಾಧಿಪತಿ–ಇಂದಿನ ಬಂಗಾಳದ ಈಶಾನ್ಯದಿಕ್ಕಿಗಿರುವ ವಿರಾಟದೇಶದೊಂದಿಗೆ ಸಮೀಕರಿಸಬಹುದು ಮತ್ಸ್ಯದೇಶವನ್ನು (ಭವಿಷ್ಯಪುರಾಣ); ವಿರಾಟರಾಜ ಮತ್ಸ್ಯದೇಶದ ಪ್ರಸಿದ್ಧನಾದ ದೊರೆ. ಇಂದಿನ ರಾಜಸ್ಥಾನದ ಆಳ್ವರ್ ಜಯಪುರ ಭರತಪುರದ ಭಾಗಗಳಲ್ಲಿ ವ್ಯಾಪಿಸಿದ್ದ ಈ ದೇಶದ ರಾಜಧಾನಿ ವಿರಾಟನಗರವೆಂದಿದ್ದು, ಇಂದಿನ ಜಯಪುರದ ಬೈರಾಟ್‌ನೊಂದಿಗೆ ಅದನ್ನು ಸಮಾನವಾಗಿ ತಿಳಿಯಲಾಗಿದೆ ; ಇದು ಮೀನು ಸಮೃದ್ಧವಾದ ಪ್ರದೇಶ. ಮೊಹರ–ಮುದ್ರೆ.

ಪು. ೮೭-೯೦ : ಪುಲಸ್ತ್ಯಪುತ್ರನ ಕಾರ್ಯಕ್ಕೋಸುಗ . . . ಕಾಲನೇಮಿಯ ದುರ್ದಶೆ–ರಾವಣನ ಸೂಚನೆಯಂತೆ ಕಾಲನೇಮಿ (ರಾವಣನ ಸೋದರಮಾವನಾದ ಮಾರೀಚನ

ಮಗ) ಚಂದ್ರದ್ರೋಣಪರ್ವತದಲ್ಲಿ ಋಷ್ಯಾಶ್ರಮ ಮಾಡಿಕೊಂಡು ಆಂಜನೇಯನ ಸಂಜೀವಿನೀಲತೆಯ ಸಂಗ್ರಹಕಾರ್ಯದಲ್ಲಿ ಅಡ್ಡಿಪಡಿಸಲು ಯತ್ನಿಸಿದಾಗ ಆಂಜನೇಯನು ಅವನನ್ನು ನಿಗ್ರಹಿಸಿದನು. ಜಗತೀಕಟ್ಟೆ-ಅರಳಿ ಆಲ ಮಂತಾದ ಮರಗಳ ಸುತ್ತ ಹಾಕಿರುವ ಜಗಲಿಯ ಕಟ್ಟೆ. ಆರ್ತ್ವಿಜ್ಯ-ಋತ್ವಿಕ್ಕಾಗುವ ಜವಾಬ್ದಾರಿ. ಸಾಮುದ್ರಿಕಾಲಕ್ಷಣ-ಹಸ್ತರೇಖೆ, ಶರೀರಾಕೃತಿಲಕ್ಷಣ ಇವನ್ನು ಗಮನಿಸಿ ವ್ಯಕ್ತಿಯ ಪೂರ್ವೋತ್ತರ ಜೀವನಘಟನೆಗಳನ್ನು ಹೇಳುವ ಪುರಾತನ ಭಾರತೀಯಶಾಸ್ತ್ರ. ಮಂತ್ರಜ್ಞ-ವ್ಯಕ್ತಿಗೆ ಹಿಡಿಯುವುದೆನ್ನಲಾದ ಭೂತ ಪಿಶಾಚಿಗಳ ಆವಾಹನೆಯನ್ನು ಬಿಡಿಸುವ ಮಂತ್ರತಂತ್ರಗಳನ್ನು ಬಲ್ಲವನು. ಆಹ್ನಿಕ-ಸಂಧ್ಯಾವಂದನೆ. ಪೂರ್ಣಾಹುತಿ-ಯಜ್ಞದ ಕಾರ್ಯವು ಸಾಂಗವಾದ ಮೇಲೆ ಕೊನೆಯಲ್ಲಿ ಯಜ್ಞೇಶ್ವರನಿಗೆ ಒಪ್ಪಿಸುವ ಹವಿಸ್ಸು ವಸ್ತ್ರಾದಿಗಳ ಆಹುತಿ. ಕೈಕಾಣಿಕೆ-ನಜರು, ಹಿರಿಯರಿಗೆ ಒಪ್ಪಿಸುವ ಸಣ್ಣಪುಟ್ಟ ಕಾಣಿಕೆ. ಕಡಮೆ ಯಾವದಿದ್ದರೂ-ಉಳಿದ ವಿಷಯಗಳು ಏನಿದ್ದರೂ. ಮುಗ್ಧತನ, ಮೂಢತನ-ಸಂಸ್ಕೃತ ಪದಗಳಿಗೆ ತನ ಪ್ರತ್ಯಯ ಸೇರಿದ ಈಚಿನ ಕಾಲದ ಶಿಥಿಲಪ್ರಯೋಗಗಳು. ತುರಗಾರೂಢ-ಕುದುರೆಸವಾರ. ಮಣಿಕರ್ಣಿಕಾಸ್ನಾನ-ಕಾಶೀಪಟ್ಟಣದ ಹತ್ತಿರ ಹರಿಯುವ ಗಂಗಾನದಿಯ ಪವಿತ್ರವಾದ ಒಂದು ಸ್ನಾನಘಟ್ಟದಲ್ಲಿ ಮಾಡುವ ಸ್ನಾನ. ಸಾಯಾಹ್ನನಿಯಮ-ಸಂಧ್ಯಾವಂದನೆಯ ವಿಧಿ.

ಷಷ್ಠಾಶಯ

ಪು. ೯೩-೯೪ : ಬೇಹುಗಾರ-ಗೂಢಚಾರ. ವಿಂಗಡವಾಗಿ ಇರು-ತನ್ನ ಪಾಡಿಗೆ ತಾನು ಒಂಟಿಯಾಗಿರು. ಪತ್ರಿಕೆ-ಪತ್ರ. ಸಾರಿಸಿಕೊಂಡು ಬರು-ಸಾರ್ವಜನಿಕವಾದ ಘೋಷಣೆಯೊಂದಿಗೆ ಬರು. ಪರಿಹರಿಸಿ-ಹಾಳುಮಾಡಿ. ಕಡಮೆ ಚಾರರು-ಇತರ ಸೇವಕರು. ಯೋಜನ-ಸುಮಾರು ೧೨ ಮೈಲಿ ದೂರ. ಕೈಕೂಡು-ಯುದ್ಧ ಘಟಿಸು. ಪಂಜರಸ್ಥಶುಕ-ಪಂಜರದೊಳಗಿನ ಗಿಣಿ. ಉಪೇಕ್ಷೆ-ಉದಾಸೀನ. ತಮಾಲವೀಥಿ-ಹೊಂಗೆಮರಗಳ ಸಾಲು. ವೈವಸ್ವತನ ಚಮು-ವೈವಸ್ವತನೆಂಬ ಮನುವಿನ (ವಿವಸ್ವಂತ-ಸಂಜ್ಞಾದೇವಿಯರ ಮಗ) ಸೈನ್ಯ. ನಿವಾತ ಕವಚರು-ಪ್ರಹ್ಲಾದನ ತಮ್ಮ ಸಂಹ್ಲಾದನ ಪುತ್ರರು ; ಇವರು ತಮ್ಮ ಪರಿವಾರದೊಂದಿಗೆ ಇಂದ್ರನನ್ನು ಕಾಡುತ್ತಿದ್ದರು ; ಪಾಶುಪಾತಾಸ್ತ್ರಪ್ರಾಪ್ತಿಯ ಬಳಿಕ ಅರ್ಜುನನು ಸ್ವಲ್ಪಕಾಲ ಇಂದ್ರನೊಂದಿಗೆ ಸ್ವರ್ಗದಲ್ಲಿರುತ್ತಿದ್ದಾಗ ಇವರ ಹಾವಳಿಯನ್ನು ಇಂದ್ರನ ಕೋರಿಕೆಯಂತೆ ತಡೆದು ಅವನಿಂದ ಸನ್ಮಾನಿತನಾದನು. ರತ್ನವಸ್ತ್ರ-ಕೆಂಪುಬಟ್ಟೆ (ಮಾಣಿಕ್ಯರತ್ನದ ವರ್ಣದ ಬಟ್ಟೆ). ಕದಳಿಕಾವನ-ಬಾಳೆಯ ತೋಟ. ಮಯೂರಪಿಂಛ-ನವಿಲುಗರಿ, ಸೋಗೆ. ಗಾರ್ದಭ-ಕತ್ತೆ.

ಪು. ೯೫-೯೬ : ಶಶಲಾಂಛನ-ಮೊಲದ ಚಿಹ್ನೆ. ಪಕ್ವ-ಬೇಯಿಸಿದ. ಕಾಷಾಯವಸ್ತ್ರ-ಕಾವಿ ಬಣ್ಣದ ಬಟ್ಟೆ. ತ್ರಿಪುಂಡ್ರಲಾಂಛನ-ಮೂರು ಅಡ್ಡಗೆರೆಗಳ ಚಿಹ್ನೆ. ಕುಯಿಲು-ಕಟಾವು. ಕೇದಾರಭೂಮಿ-ಗದ್ದೆ. ಕಾಲಿಕಾಪುತ್ರರು-(?)

ಹರಿಣಲಾಂಛನ-ಜಿಂಕೆಯ ಚಿಹ್ನೆ. ಸುವರ್ಣಸೈಕತ-ಚಿನ್ನದ ಮರಳು. ಕಪಿಲವರ್ಣ-ಕೆಂಗಂದು ಬಣ್ಣ. ಅಶನಿಘಾತ-ಸಿಡಿಲ ಹೊಡೆತ. ಕಾರ್ಮುಗಿಲು-ಕಾರ್ಗಾಲದ ಮೋಡ. ತಾಳಧ್ವಜ-ತಾಳೆಯ ಮರದ ಚಿಹ್ನೆಯ ಬಾವುಟ. ಚಿತ್ರಾಸ್ತರಣ-ಹಲವು ಬಣ್ಣಗಳ ಅಥವಾ

ಚುಕ್ಕೆಗಳ ಬಟ್ಟೆಯ ಹಾಸು ; ಚಿತ್ರವಸ್ತ್ರ–ಅಂತಹ ಬಟ್ಟೆ. ಚಿತ್ರಮೃಗಲಾಂಛಿತ ಕೇತನ–ಬಿಳಿ ಚುಕ್ಕೆಗಳ ಜಿಂಕೆ ಅಥವಾ ಸಾರಂಗದ ಗುರುತಿನ ಬಾವುಟ. ಧೂಮರೇಖೆ–ಹೊಗೆಯ ಗೆರೆ. ಭ್ರಮಣಗೊಳಿಸು–ಸುಳಿಯುವಂತೆ ಮಾಡು. ಶಿಶಿರಾಂತದ ವನನಿಕರದಂತೆ ಬಭ್ರುವರ್ಣ ಮಾಗು–ಎಲೆ ಉದುರಿದ ಕಾಡಿನ ಹಾಗೆ ಕಂದುಬಣ್ಣದಿಂದ ಕೂಡು. ಅನಿಮಿಷರು–ದೇವತೆಗಳು. ಚಿತ್ರನೀರಾಜನೋಪಚಾರ–ಪ್ರಕಾಶಮಾನವಾದ ಆರತಿಯ ಸೇವೆ. ಹಸ್ತಲಾಘವ–ವೃದ್ಧರನ್ನೂ ಗುರುಹಿರಿಯರನ್ನೂ ಎಚ್ಚರಿಕೆಯಿಂದ ನಡಸಲು ಚಿಕ್ಕವರು ಕೈನೀಡಿ ಸಹಾಯಮಾಡುವುದು. ಪೂರಣಂ ಮಾಡಿಕೊಳ್ಳು–ತುಂಬಿಕೊಳ್ಳು.

ಬಂಗಾಳಪತಿ–ಇಂದಿನ ದಕ್ಷಿಣ ಮತ್ತು ಆಗ್ನೇಯ ದಿಕ್ಕಿಗೆ ಇರುವ ಬಂಗಾಳ ದೇಶದ ದೊರೆ; ಬಂಗಾಳಕೊಲ್ಲಿಯಿಂದ ಹಿಡಿದು ಬ್ರಹ್ಮಪುತ್ರದವರೆಗೆ ಹಬ್ಬಿದ್ದಂತೆ ತಿಳಿದು ಬರುವ ದೇಶದ ಒಡೆಯ. ಓಡ್ರದೇಶ–ಮೊದಲಿನ ಉತ್ಕಲಪ್ರಾಂತ. ಇಂದಿನ ತೀರಪ್ರದೇಶ ಒರಿಸ್ಸ ಇವನ್ನು ಒಳಕೊಂಡಿದ್ದ ಭೂಭಾಗ. ಕಳಿಂಗ–ಮೂಲತಃ ಕಳಿಂಗವು ಇಂದಿನ ಒರಿಸ್ಸದ ಪುರಿ ಮತ್ತು ಗಂಜಾಂ ಜಿಲ್ಲೆಗಳನ್ನೂ ಅವುಗಳ ನೆರೆಪ್ರದೇಶಗಳನ್ನೂ ಒಳಕೊಂಡಿತ್ತು. ಈಗ ಈ ದೇಶ ಆಂಧ್ರದ ರಾಜಮಹೇಂದ್ರವರ, ವಿಶಾಖಪಟ್ಟಣ, ಗಂಜಾಂ ಜಿಲ್ಲೆಗಳ ಮತ್ತು ಉತ್ಕಲದ ಒಂದು ಭಾಗ ಇವುಗಳಿಂದ ಕೂಡಿದೆ. ವಿಕಲ್ಪ–ಅನಿಶ್ಚಿತಸ್ಥಿತಿ.

ಪು. ೯೭-೯೮ : ಸ್ಥಾಣು–ಕಂಬ, ಮರದ ಬೊಡ್ಡೆ. ಪ್ರಚ್ಛನ್ನನಾಗಿ–ಮರೆಯಲ್ಲಿದ್ದುಕೊಂಡವನಾಗಿ. ಆರೂಢಯೋಗಿ–ಯೋಗಸ್ಥನಾದ ಯೋಗಿ. ಪಿಂಛ–ನವಿಲುಗರಿಯ ದೊಂದೆ. ಶೂನ್ಯಲಲಾಟರು–ಯಾವ ಚಿಹ್ನೆಯನ್ನೂ ಧರಿಸದ ಬೋಳುಹಣೆಯವರು. ತಿಲಕದ ಕಲೆ–ವೈದಿಕರು ಇಟ್ಟುಕೊಳ್ಳುವ ಹಣೆಯ ಚಿಹ್ನೆ. ಪ್ರೇಷಿತ–ಕಳುಹಿಸಲ್ಪಟ್ಟವನು. ದಿಗಂಬರಸಿದ್ಧಾಂತವನ್ನುಪದೇಶಿಸುವದು–ಇದು ಜೈನಪಂಥದ ಸಿದ್ಧಾಂತ ; ಇದನ್ನು ಬೌದ್ಧಗುರು ಏಕೆ ಮತ್ತು ಹೇಗೆ ಕೊಡಬಲ್ಲ ? ಅದನ್ನು ವೇಷಧಾರಿ ಶಿಷ್ಯ ಏಕೆ ಪ್ರಶ್ನಿಸಲಿಲ್ಲ? ಈ ಪ್ರಶ್ನೆಗಳಿಗೆ ಅವಕಾಶವಿದೆ. ಮಧ್ಯ ಮತ್ತು ಆಧುನಿಕ ಕಾಲದ ವೈದಿಕಪಂಥದ ಲೇಖಕರು ನಾಸ್ತಿಕಧರ್ಮಗಳಾದ ಜೈನ ಬೌದ್ಧಗಳ ನಡುವೆ ವ್ಯತ್ಯಾಸ ಮಾಡುವುದಿಲ್ಲ. ಇದರಿಂದ ಕೆಲವು ಗೊಂದಲಗಳುಂಟಾಗಿವೆ. ಆದಿಸಂಸ್ಕಾರ–ಮೊದಲು ಆದ ವಿಶಿಷ್ಟಪಂಗಡದ ಸಂಸ್ಕಾರ. ವ್ಯಾಹೃತಿ–ಸಂಸ್ಕಾರದ ವೇಳೆ ಹೇಳಿಕೊಡುವ ಮೂಲಮಂತ್ರ. ಪಿಂಛಸಮ್ಮಾರ್ಜನೆ–ನವಿಲುಗರಿ ದೊಂದೆಯಿಂದ ದೇಹವನ್ನು ಸ್ಪರ್ಶಿಸುವುದು.

ಮುಂಡನ–ತಲೆ ಬೋಳಿಸುವುದು. ಮಾರ್ಗಸ್ಥ–ದಾರಿಹೋಕ. ಕಪ್ಪರೆ–ಓಡು, ಚಿಪ್ಪು. ಅಯಾಚಿತವೃತ್ತಿ–ಪಂಚವಿಧ ಭಿಕ್ಷೆಗಳಲ್ಲಿ ಒಂದು ; ತಾನೇ ಭಿಕ್ಷೆ ಬೇಡದೆ ಕೊಟ್ಟುದನ್ನು ಪಡೆಯುವುದು. ಚೈತ್ಯವಂದನ–ಜಿನಬಸದಿಗಳಲ್ಲಿ ಪೂಜೆ ಸಲ್ಲಿಸುವುದು. ಪರತತ್ವ–ಮೋಕ್ಷ ಮಾರ್ಗ. ಕರ್ತ–ಆಚಾರ್ಯ, ಸ್ವಾಮಿ. ಅಷ್ಟೋತ್ತರಶತವಾರ–ನೂರೆಂಟು ಸಲ. ಸಾಯಾಹ್ನ–ಸಾಯಂಕಾಲ. ವಲ್ಕಲ–ನಾರುಬಟ್ಟೆ. ಗಂಡಕಿ–ಹಿಮವತ್ಪರ್ವತದಲ್ಲಿ ಗಂಗೆಯ ಒಂದು ಶಾಖೆಯಾಗಿ ಹುಟ್ಟಿ, ದಕ್ಷಿಣವಾಹಿನಿಯಾಗಿ ಹರಿದು, ಇಂದಿನ ಬಿಹಾರದ ಮುಜಫರ್‌ನಗರ ಜಿಲ್ಲೆಯ ಹರಿಹರ ಕ್ಷೇತ್ರದ ಹತ್ತಿರದಲ್ಲಿ ಮತ್ತೆ ಗಂಗೆಯನ್ನು ಸೇರಿಕೊಳ್ಳುವ ನದಿ. ಇದು ಸಾಲಿಗ್ರಾಮಶಿಲೆಗಳಿಗೆ ಪ್ರಸಿದ್ಧವಾದುದು.

ಪು. ೯೯-೧೦೦ : ಮೂಲಸೇನೆ–ಮೀಸಲುಸೈನ್ಯ. ಸುಧಾಸಾರ–ಅಮೃತದ ಮಳೆ.

ತ್ವದೀಯಾಧರಪಾನ–ನಿನ್ನ ತುಟಿಯ ಚುಂಬನ. ಪಸುಳೆ–ಎಳೆಯ ಹುಡುಗಿ. ಋತುಸ್ನಾನ–ಮುಟ್ಟಿನ ಮೈಲಿಗೆ ಕಳೆದ ಮೇಲೆ ಮಾಡುವ ಸ್ನಾನ. ಪ್ರಸ್ಥಾನ–ಹೊರಡುವುದು (ನೋಡಿ. ಪುನಾಚೂ.. ಪು. ೬೫೨) ವೆಲ್ಲಭ–ಪತಿ, ಸ್ವಾಮಿ. ತುಲಾಲಗ್ನದಲ್ಲಿ . . . ಪಂಚಮೀ ತತ್ಪುರುಷವಾಗಬಹುದು–ತುಲಾ ಎಂದರೆ ತಕ್ಕಡಿ ; ಆದ್ದರಿಂದ ಯಾವ ಕಡೆ ಜಯವಾಗುವುದೆಂದು ಹೇಳುವುದು ಕಷ್ಟ. ವೃಶ್ಚಿಕ ಎಂದರೆ ಚೇಳು ಎಂದಾಗುವುದರಿಂದ ಶತ್ರುವಿನಿಂದ ಕಚ್ಚಿಸಿಕೊಳ್ಳುವುದು (ಎಂದರೆ ಪಾರ್ವತೇಯರ ಸೇನೆಯಿಂದ ನಂದರ ಘಾತಿ) ಎಂಬ ಅಂತರಾರ್ಥವುಂಟು. ಶತ್ರುಕ್ಷಯ ಎಂಬ ಮಾತಿಗೆ ಪಂಚಮೀ ತತ್ಪುರುಷವಾದರೆ ಶತ್ರುವಿನಿಂದ (ಪಾರ್ವತೇಯರ ದೆಸೆಯಿಂದ) ತನ್ನ ಕ್ಷಯ (ನಂದರ ನಾಶ) ಎಂದು ಅಭಿಪ್ರಾಯವಾಗುವುದು. ವಿಜಯಯಾತ್ರಾದಾನ–ದಂಡೆತ್ತಿಹೋಗುವಾಗ ಮಾಡುವ ವಿಶೇಷದಾನ. ಭೂಸುರ–ಬ್ರಾಹ್ಮಣ. ನಿತ್ಯದಾನಂಗೊಡು–ನಿತ್ಯಕಟ್ಟಳೆಯಾಗಿ ಕೊಡುವ ದಾನ. ಬಾಣಗಾರ–ಬಿಲ್ಲುಬಾಣಗಳಿಂದ ಕಾದುವವನು. ದಂಡು–ಸೈನ್ಯ.

ಪು. ೧೦೧-೧೦೨ : ಕೆಲನಾಗು–ಪಕ್ಕಕ್ಕೆ ಹೋಗು. ಘಾತ–ಪೆಟ್ಟು. ಮಡುಹು–ನೀರಿನ ಮಡು. ಉಕ್ಕಡ–ಊರಿನ ಪ್ರವೇಶಸ್ಥಾನ. ಮೂಲಬಲ–ಮೀಸಲು ಪಡೆ. ದ್ವಿಜವರ್ಗ–ಬ್ರಾಹ್ಮಣರ ಸಮೂಹ. ಆಯುಷ್ಮಂತ–ದೀರ್ಘಾಯು, ಚಿರಂಜೀವಿ. ಅಸಂಗತ–ಬಿಕ್ಕಟ್ಟಿನ ಸಂದರ್ಭ. ನಿಗ್ರಹಿತನಾಗು–ನಿಗ್ರಹಿಸಲ್ಪಡುವವನಾಗು. ಅಸ್ತಾಚಲ–ಪಶ್ಚಿಮದ ಬೆಟ್ಟ. ನಿಮೀಲಿತ–ಮುಚ್ಚಿಕೊಳ್ಳುವ. ರಕ್ತೋತ್ಪಲ–ಕೆಂಪುನೈದಿಲೆ. ಮಯೂರಪಿಂಛ–ನವಿಲು ಸೋಗೆ. ಕರಿಣಿ–ಹೆಣ್ಣಾನೆ. ಕರಿಣೀಸಮೇತಗಳಾದ ದಿಗ್ಗಜಾವಳಿ–ಐರಾವತ-ಅಭ್ರಮು, ಪುಂಡರೀಕ-ಕಪಿಲಾ, ವಾಮನ-ಪಿಂಗಲಾ, ಕುಮುದ-ಅನುಪಮಾ, ಅಂಜನ-ತಾಮ್ರಕರ್ಣಿ, ಪುಷ್ಪದಂತ-ಶುಭ್ರದಂತೀ, ಸಾರ್ವಭೌಮ-ಅಂಗನಾ, ಸುಪ್ರತೀಕ-ಅಂಜನಾವತೀ ಇವು ಕ್ರಮವಾಗಿ ಗಂಡಾನೆ ಹೆಣ್ಣಾನೆಗಳು. ಭಲ್ಲದಾರಿ–ಈಟಿ ಹಿಡಿದ ಯೋಧ. ಸೂರ್ಯಾತಪ–ಬಿಸಿಲು. ಹರವೃಷಭ–ಶಿವನ ವಾಹನವಾದ ನಂದಿ. ಕಲಹಿಸು–ಜಗಳವಾಡು. ಕುಲಾಚಲ–ಏಳು ಕುಲಪರ್ವತಗಳು. ಭೈರವ–ಶಿವನ ಒಂದು ರೂಪಭೇದ. ವಂದಿಮಾಗಧ–ರಾಜನ ಹೊಗಳುಭಟರು. ಬಿರುದ ಶಬ್ದಗಳು–ಅಗ್ಗಳಿಕೆಯನ್ನು ಸಾರುವ ಪ್ರಶಸ್ತಿಯ ಮಾತುಗಳು. ಸೌಧವಾತಾಯನಸ್ಥ–ಉಪ್ಪರಿಗೆ ಮನೆಯ ಕಿಟಕಿಗಳೆಡೆ ಇರುವ. ನಯನಾಪಾಂಗ–ಕಡೆಗಣ್ಣಿನ ನೋಟ. ಶ್ವೇತಾತಪತ್ರ–ಬೆಳ್ಗೊಡೆ. ಲತಾವಿಪ್ರಕೀರ್ಣ–ಬಳ್ಳಿಗಳಿಂದ ಸೂಸಿದ. ವನವೀಥಿ–ಅರಣ್ಯದ ಸಾಲು. ಪೌರಕುಮಾರಿಕಾನಿಕರ–ಪಟ್ಟಣದ ಕನ್ಯೆಯರ ಗುಂಪು. ಲಾಜಕುಸುಮವರ್ಷ–ಬತ್ತದ ಅರಳುಗಳೆಂಬ ಹೂವಿನ ಮಳೆ. ಪುರದ್ವಾರದೇಶ–ನಗರದ ಹೆಬ್ಬಾಗಿಲ ಜಾಗ.

ಪು. ೧೦೩-೧೦೪ : ವಾಮನೇತ್ರ–ಎಡಗಣ್ಣು. ಹಂಗ–ಒಂದು ಬಗೆಯ ಶಕುನದ ಹಕ್ಕಿ, ಹಂಗಾಗೆ. ಅಡರು–ಏರು. ಚೋರಮಾರ್ಗ–ಕಳ್ಳಗಂಡಿ. ದುರ್ನಿಮಿತ್ತ–ಕೆಟ್ಟ ಶಕುನ. ಉಡುಗಳಿಗೆ ಹಗ್ಗವಂ ಕಟ್ಟಿ ಮೇಲಕ್ಕೇರು–ಉಡು ಒಂದು ಬಗೆಯ ಸರೀಸೃಪ, ಬೃಹದಾಕಾರದ ಹಲ್ಲಿ. ಇವುಗಳ ಕಾಲುಬೆರಳುಗಳಿಗೆ ಬಾಗಿದ ಬಲವಾದ ನಖಗಳಿವೆ. ಇವುಗಳ ಸಹಾಯದಿಂದ ಅದು ನೆಲವನ್ನು ಬಿಗಿಯಾಗಿ ಹಿಡಿದರೆ ಬಿಡಿಸುವುದು ಕಷ್ಟ. ಈ ವಿಶೇಷಲಕ್ಷಣದಿಂದಾಗಿ ಹಿಂದಿನ ಕಾಲದಲ್ಲಿ ಕೋಟೆಗಳಿಗೆ ಲಗ್ಗೆಹಾಕಿ ಮೇಲೇರಲು ಉಡುಗಳನ್ನು

ಉಪಯೋಗಿಸುತ್ತಿದ್ದರೆಂದು ತಿಳಿಯಲಾಗಿದೆ. ನೂಲೇಣಿ–ದಪ್ಪ ಹಗ್ಗದಿಂದ ಹೆಣೆದ ಏಣಿ. ಸೀಸವರುಷ–ಕಾದ ಸೀಸದ ಮಳೆ. ಶತಘ್ನಿ–ಚೂಪಾದ ಮೊನೆಗಳಿರುವ ಒಂದು ದುಂಡು ಆಯುಧ. ರಂಜಕ–ಸಿಡಿಮದ್ದು ತಯಾರಿಸುವ ಅಲೋಹಮೂಲಧಾತು. ಖಂಡತುಂಡ–ಕತ್ತರಿಸಿದ ತಲೆ. ರಕ್ತಚಂದನ–ಕೆಂಪು ಶ್ರೀಗಂಧ. ಶಿಲಾವರುಷ–ಕಲ್ಲಿನ ಮಳೆ. ಇತ್ತಂಡ–ಎರಡು ಪಕ್ಷ. ಹರಿದಾರಿ–ಸುಮಾರು ಮೂರು ಮೈಲಿ ದೂರ. ಹೇಷಾನಿನದ–ಕುದುರೆಗಳ ಕೆನೆತ. ಪಾದಘಾತ–ಕಾಲನ್ನು ಘಟ್ಟಿಸುವಿಕೆ. ಧೂಳೀನಿಕುರುಂಬ–ದೂಳಿನ ದಟ್ಟಣೆ. ವಿನೋದಕೇಳೀಪಟವಾಸ–ವಿನೋದಕ್ರೀಡೆಯಲ್ಲಿ ಎರಚಾಡಲು ಬಳಸುವ ಸುಗಂಧದ ಪುಡಿ, ಬುಕ್ಕಿಹಿಟ್ಟು. ಮೊರೆಯಿಡುವರೆ–ಮೊರೆಯಿಡುವೊಡೆ (ಪಕ್ಷಾರ್ಥಕ ಪ್ರತ್ಯಯದ ಮಧ್ಯಕಾಲೀನ ರೂಪ ಅರೆ (<ಒಡೆ). ರೇಣುರೂಪು–ದೂಳಿನ ಕಣಗಳ ಆಕೃತಿ. ಧಾವನ–ಓಡುವುದು. ಶ್ರಮಜಲಶೀಕರ–ಬೆವರ ಹನಿ. ಪಂಕಪ್ರಾಯವಾಗು–ಕೆಸರಿನಂತಾಗು. ಭೂಸುರಸ್ತೋಮ–ಬ್ರಾಹ್ಮಣಸಮೂಹ. ಮಂತ್ರಕೋವಿದ–ಮಂತ್ರಜ್ಞ. ಶಾಶ್ವತಸ್ಥಿತಿ–ಶಾಶ್ವತವಾದ ಜೀವನೋಪಾಯಕ್ಕೆ ಕಲ್ಪಿಸುವ ಭೂಮಿಗ್ರಾಮಗಳ ಉಂಬಳಿ.

ಜಟಾಭಾರ–ಜಡೆಗಟ್ಟಿದ ಕೂದಲ ಹೊರೆ. ನ್ಯಗ್ರೋಧವೃಕ್ಷ–ಆಲದ ಮರ. ಪವಿತ್ರಪಂಚಕ–ವೈದಿಕಕಾರ್ಯಗಳಲ್ಲಿ ಬಳಸುವ ದರ್ಭೆಯ ಉಂಗುರಗಳು ಐದು. ಅಂಗುಲಿನಖಾಗ್ರ–ಬೆರಳಿನ ಉಗುರುಗಳ ತುದಿ. ಭ್ರೂಮಧ್ಯ–ಹುಬ್ಬಿನ ನಡುಭಾಗ. ವಾಮಾಚಾ ಮಾಟ ಮುಂತಾದ ಅಭಿಚಾರಕ್ರಿಯೆ. ತ್ರಿಪುಂಡ್ರಭಸ್ಮ–ಶರೀರದ ಮೇಲೆ (ತಲೆ, ಹ ಎದೆ) ಮೂರುರೇಖೆಗಳಲ್ಲಿ ಧರಿಸುವ ಭಸ್ಮಲಾಂಛನ. ಫಾಲದೇಶ–ಹಣೆಯ ಪ್ರದೇ ಕಕ್ಷಗತ–ಕಂಕುಳಲ್ಲಿ ಸೇರಿರುವ. ಪಾದುಕಾಗ್ರ–ಹಾವುಗೆಗಳ ತುದಿ. ಕೃಷ್ಣಾಜಿನೋತ್ತರೀ ಕೃಷ್ಣಮೃಗಚರ್ಮದ ಹೊದೆಯುವ ವಸ್ತ್ರ. ಗೋಮಯೋದಕ–ಸಗಣಿ ನೀರು. ದಂಭ–ಮೃ ಮತ್ತು ಅಧರ್ಮಗಳ ಪುತ್ರ, ಮಾಯೆಯ ಸೋದರ ಎಂದು ಭಾಗವತದಲ್ಲಿದೆ.

ಪು. ೧೦೫-೧೦೬ : ದತ್ತಾತ್ರೇಯ ಮುನಿ–ಸ್ವಾಯಂಭುವ ಮನ್ವಂತರದಲ್ಲಿ ಅತ್ರಿ ಮಹರ್ಷಿಯ ಪತ್ನಿಯಾದ ಅನಸೂಯೆಯಲ್ಲಿ ಜನಿಸಿದ ಮೂವರು ಪುತ್ರರಲ್ಲಿ ಒಬ್ಬ. ಈತನು ಸ್ವಾರೋಚಿಷ ಮನ್ವಂತರಗಳಲ್ಲಿ ಒಬ್ಬನಾಗಿಯೂ ಪ್ರಸಿದ್ಧನು. ಗಂಗೋತ್ತರಿಯ–ಗಂಗೆಯ ಜನ್ಮಸ್ಥಾನ (ಸಂ.<ಗಂಗೋತ್ತರಾ ?). ಪರಾರ್ಥ–ಬೇರೆಯವರಿಗೆ ಪುಣ್ಯಪ್ರಾಪ್ತಿಗಾಗಿ ಮಾಡುವ ಉಪಕಾರ (?). ವಾಕ್ಕಲಹಶಾಂತ್ಯರ್ಥವಾಗಿ–ವಾಗ್ವಾದ ಬೇಡವೆಂಬ ಕಾರಣದಿಂದ. ಶೂಲಿನೀಜಪಹೋಮಗಳ–ದುರ್ಗೆಯ ಹೆಸರಿನಲ್ಲಿ ನಡೆಯುವ ಜಪಹೋಮಗಳು. ಪ್ರದೋಷಕಾಲ–ಸಾಯಂಕಾಲ, ರಾತ್ರಿಯ ಪ್ರಾರಂಭಕಾಲ. ಪ್ರಧಾನಹೋಮ–ಮುಖ್ಯ ಹೋಮ. ಸ್ರುಕ್ ಸ್ರುವ–ಹೋಮಾಗ್ನಿಗೆ ತುಪ್ಪ ತುಂಬಿಕೊಂಡು ಸುರಿಯುವುದಕ್ಕೆ ಬಳಸುವ ಎರಡು ವಿಧದ ಸವುಟುಗಳು. ಸುಕೃತಿ–ಪುಣ್ಯಶಾಲಿ. ಕುಕ್ಷಿಶೂಲೋಪದ್ರವ–ಹೊಟ್ಟೆನೋವಿನ ಬಾಧೆ. ಯಾಮ–ಜಾವ, ಮೂರು ಗಂಟೆಗಳ ಕಾಲ. ಜಪದಕ್ಷಿಣೆ–ಜಪ ಮಾಡಿದ್ದಕ್ಕೆ ಋತ್ವಿಕ್ಕುಗಳು ಮೊದಲಾದವರಿಗೆ ನೀಡಲಾಗುವ ಸಂಭಾವನೆ. ಶೂದ್ರಾದಿಗಳು–ವರ್ಣಚತುಷ್ಟಯದಲ್ಲಿ ಸೇರುವ ಚತುರ್ಥವರ್ಣದವರು ಮತ್ತು ಸೇರದೆ ಉಳಿಯುವ ಆ ಮುಂದಿನ ಪಂಗಡದವರು. ಹರಿಕಾರ–ಚಾರ, ಸಂದೇಶವಾಹಕ.

ಸಪ್ತಮಾಶಯ

ಮೂಲಾನುಮೂಲ–ಕಾರಣ ಮತ್ತು ಉಪಕಾರಣ. ಗಯಾಶ್ರಾದ್ಧ–ಪಿತೃಗಳ ಪ್ರೀತ್ಯರ್ಥವಾಗಿ ಮಾಡಿದ ಪಿಂಡದಾನ ಅಕ್ಷಯವಾಗಲೆಂದು ರಾಕ್ಷಸನಾದ ಗಯ ವಿಷ್ಣುವನ್ನು ಪ್ರಾರ್ಥಿಸಿ, ಆ ಮೂಲಕ ಪ್ರಸಿದ್ಧಿಗೆ ಬಂದ ಕ್ಷೇತ್ರದಲ್ಲಿ ಮಾಡಿದ ಶ್ರಾದ್ಧ (ನೋಡಿ. ಪುನಾಚೂ. ಪು. ೧೮೦).

ಪು. ೧೦೭-೧೦೮ : ವಿತರಣಶಾಲಿ–ದಾನಿ, ಉದಾರಿ. ಈ ಮುಂದೆ ಕನ್ನಡ, ತೆಲುಗು ಮತ್ತು ತಮಿಳು ಮನೆಮಾತಿನ ಬ್ರಾಹ್ಮಣರ ಮಾತುಗಳು ಬಂದಿವೆ : "ಎಲ್ಲೈ ಕೃಷ್ಣಭಟ್ಟರೆ, ಪಾಪಯ್ಯ ಶಾಸ್ತ್ರಿಗಳೆ, ನಮ್ಮ ಚಿಕ್ಕವನಿಗೆ ಮದುವೆ ನಡೆಯಬೇಕಾಗಿದೆ. ಇದೇ ಸಮಯ. ನಡೆಯಿರಯ್ಯ" (ತೆಲುಗು). "ಯಾರೋ ಒಬ್ಬ ರಾಜ ಬರುತ್ತಾನೆ, ಬಹಳ ಕೊಡುತ್ತಾನೆ ; ಅಣ್ಣಾ ವಾಧ್ಯಾರನ್ನು ಕರೆದುಕೊಂಡು ನೀವೂ ಬರುವುದಾದರೆ ನಿಮಗೂ ಕೊಡಿಸಿ ಕೊಡುತ್ತೇನೆ, ಬರುವ ಹಾಗಿದ್ದರೆ ಬನ್ನಿ" (ತಮಿಳು).

ರಾಯಸದವನು–ರಾಜನ ಬಳಿ ಉದ್ಯೋಗದಲ್ಲಿರುವ ಲೇಖನವೃತ್ತಿಯವನು. ಕಾಯಸ್ಥರ ಜಾತಿ–ಕರಣಿಕವೃತ್ತಿಯವರ ಪಂಗಡ. ಕ್ಷೇಮೇಂದ್ರ ಕಲ್ಹಣರ ಪ್ರಕಾರ ಪೌರಾಡಳಿತದ ಒಬ್ಬ ಸರ್ಕಾರಿ ಉದ್ಯೋಗಿ ಎಂದಾಗುವುದು (ರಾಜತರಂಗಿಣಿ ೮-೮೭-೯೦). ಗೊತ್ತುಗಾರ–ಮುಖ್ಯಸ್ಥ. ಮೈಗಾವಲು–ಅಂಗರಕ್ಷೆ. ನಿರ್ವಹಿಸು–ತಡೆ, ತಾಳಿಕೊಳ್ಳು. ದೋಷಸಾಂಕರ್ಯ–ಅನಾರೋಗ್ಯಕರ ಗಾಳಿ ನೀರು ಮುಂತಾದುವುಗಳಿಂದ ಉಂಟಾಗುವ ಸೋಂಕು. ಸನ್ನಿಪಾತ–ಜ್ವರಾಧಿಕ್ಯದಿಂದ ಉಂಟಾಗುವ ಬುದ್ಧಿಭ್ರಮಣೆ. ಅಪಥ್ಯಸೇವನೆ–ಆರೋಗ್ಯಕರವಲ್ಲದ ಅನ್ನಪಾನಗಳನ್ನು ಸೇವಿಸುವುದು. ಗೂಢಸಹಾಯ–ರಹಸ್ಯದಲ್ಲಿ ಮಾಡುವ ಸಹಾಯ. ದುರ್ದಶೆ–ಹೀನಸ್ಥಿತಿ.

ಪು. ೧೦೯-೧೧೦ : ಅಜಾಯುದ್ಧ–ಕಾಲವಂಚನೆಗಾಗಿ ಮಾಡುವ ತೋರಿಕೆಯ ಯುದ್ಧ (ಕುರಿಗಳು ಮೇಲೆ ಬೀಳುವುದಕ್ಕೆ ಮುನ್ನುಗ್ಗುವಂತೆ ಕಾಣುತ್ತಿದ್ದರೂ ಆತ್ಮರಕ್ಷಣೆಗಾಗಿ ಹಿಂದೆ ಹಿಂದೆ ಸರಿಯುತ್ತಿರುತ್ತವೆ). ಆಪ್ತವಾಕ್ಯ–ಶಾಸ್ತ್ರವಚನದಂತೆ ತಿಳಿಯಲಾಗುವ ಹಿರಿಯರ ಮಾತು.

ಭೋಜ–ಮೂಲತಃ ಬೀರಾರ್ ಪ್ರಾಂತದಲ್ಲಿ ಪೂರ್ಣಾನದಿಯ ದಂಡೆಯ ಮೇಲೆ ಎಲ್ಲಿಚ್‌ಪುರ್ ಎಂದು ಹೆಸರಾಗಿದ್ದ ಪಟ್ಟಣವನ್ನು ಒಳಕೊಂಡ ಪ್ರದೇಶ. ಮಹಾಭಾರತದ ಕಾಲದಲ್ಲಿ ಕೃತವರ್ಮ ಇಲ್ಲಿಯ ಅರಸು. ಅವಂತಿ ದೇಶ–ನರ್ಮದಾನದಿಯ ದಕ್ಷಿಣಕ್ಕೆ ಮಾಳವ ದೇಶದ ಒಳಗಣ ಒಂದು ಚಿಕ್ಕದೇಶ. ಸೌರಾಷ್ಟ್ರ–ಈಗಿನ ಗುಜರಾತ್ ಪ್ರಾಂತದ ಸೂರತ್ ಮತ್ತು ಅದನ್ನು ಒಳಕೊಂಡ ಪ್ರದೇಶ. ರುಚಿರತರ–ಮನೋಹರವಾದ. ವಾರವಿಲಾಸಿನೀ ಮಂಜುಮಂಜೀರ ಕಿಂಕಿಣೀರವಮಿಳಿತ ತಂತ್ರೀನಿನದಾನುಗತ–ವೇಶ್ಯೆಯರ ಮನೋಹರವಾದ ಕಾಲಂದುಗೆಯ ಗೆಜ್ಜೆದನಿಯೊಂದಿಗೆ ಬೆರೆತ ತಂತಿವಾದ್ಯಗಳ ತಂತಿಯ ಮಿಡಿತದ ದನಿಗಳೊಂದಿಗೆ ಒಡಗೂಡಿದ. ರಕ್ತಸಿಕ್ತ–ರಕ್ತದಲ್ಲಿ ತೊಯ್ದು. ರೌದ್ರವಾಗಿ–ಭೀಕರವಾಗಿ. ಕೈಭಲ್ಲ–ಕೈ ಈಟಿ (ಹಸ್ತಭಲ್ಲೆಯ ಎಂದು ಘ.ಪ್ರತಿ. ಮೂಲದ ದೇಸಿ ಸರಳ ಶಬ್ದಗಳನ್ನು ಇಲ್ಲಿ ಪ್ರೌಢ ಸಂಸ್ಕೃತದ ಸರಳ ಇಲ್ಲವೆ ಪ್ರೌಢ ಶಬ್ದಗಳಿಗೆ ತಿರುಗಿಸಿರುವುದು ತುಂಬ ಸಾಮಾನ್ಯ). ಭಿನ್ನಾಭಿನ್ನವಾಗಿ–ತುಂಡುತುಂಡಾಗಿ. ಆರಬ್ಧ–ಮೊದಲುಗೊಂಡು.

ಪದಾತಿವರ್ಗ—ಕಾಲುಬಲ, ನೆಲದ ಮೇಲೆ ನಿಂತು ಯುದ್ಧಮಾಡುವವರು. ವೇಧೆ ತಟ್ಟು–ಸಂಕಟ ಬರು. ಘೂರ್ಜರಕ–ಈಗಿನ ಗುಜರಾತ್ ಪ್ರಾಂತದ ಅರಸು. ವಿದರ್ಭ– ಈಗಿನ ಮಧ್ಯಪ್ರದೇಶದ ಬೀರಾರ್ ಮತ್ತು ಸುತ್ತಣ ಪ್ರದೇಶಗಳನ್ನು ಒಳಕೊಂಡಿದ್ದ ಪ್ರಾಂತ.

ಪು. ೧೧೩-೧೧೪ : ಸರಪಣಿಸೇತುವೆ–ಶ್ರೀರಂಗಪಟ್ಟಣದ ವೆಲ್ಲೆಸ್ಲಿ ತೂಗು ಸೇತುವೆಯು ಕವಿಯ ಲಕ್ಷ್ಯದಲ್ಲಿರಬಹುದು. ಕಾಷ್ಠಪ್ರಹಾರ–ಬೆತ್ತದ ಏಟು. ದೇವಸೇನಾ ಪರಿವೃತನಾಗಿ ಅಸುರರ ಮೇಲೆ . . . ಕುಮಾರಸ್ವಾಮಿಯಂತೆ–ದೇವತೆಗಳ ಸೇನೆಯೊಂದಿಗೆ ಕೂಡಿ ತಾರಕಾಸುರ ಮೊದಲಾದ ರಾಕ್ಷಸರನ್ನು ಷಣ್ಮುಖನು ಅಪಹರಿಸಿದ ಕಥೆ ಮಹಾಭಾರತದಲ್ಲಿ ಬರುತ್ತದೆ. ವರುಷಾಕಾಲ–ಮಳೆಗಾಲ. ಪತಂಗಸಂಘ–ಮಿಡಿತೆಗಳ ದಂಡು. ವೇತಂಡ–ಆನೆ. ಬಾಣದ ಕೊಳವಿ–ಅಧಿಕಸಂಖ್ಯೆಯ ಬಾಣಗಳನ್ನು ಚಿಮ್ಮಿಸುವ ನಳಿಕೆ (?). ಭಲ್ಲೆ–ಈಟಿ. ಮೊಹರು–ಒಂದು ಬಗೆಯ ಚಿನ್ನದ ನಾಣ್ಯ (ಅನ್ಯದೇ. ಮುಹರ್). ಅಶನಿಘಾತ–ಸಿಡಿಲಿನ ಹೊಡೆತ. ಶತಘ್ನೀಘಾತ–ಚೂಪಾದ ಮೊನೆಗಳಿಂದ ಕೂಡಿದ ಗುಂಡಾಗಿರುವ ಒಂದು ಬಗೆಯ ಆಯುಧದ ಹೊಡೆತ. ಪ್ರಾಸ–ಒಂದು ಬಗೆಯ ಆಯುಧ. ಜಂಝೂಮಾರುತ–ಬಿರುಗಾಳಿ. ಕುಲಾಲಚಕ್ರ–ಕುಂಬಾರನ ತಿಗುರಿ. ಶುಷ್ಕಪರ್ಣ–ಒಣಗಿದ ಎಲೆ. ಧನುರ್ಮುಕ್ತವಾದ–ಬಿಲ್ಲಿನಿಂದ ಬಿಡುಗಡೆಯಾದ. ವಿಶಿಖಪರಂಪರೆ–ಬಾಣ ಸಮೂಹ.

ಪು.೧೧೫ -೧೧೮ : ಚಕ್ರರಕ್ಷಕ–ಸೈನ್ಯರಕ್ಷಕ. ತರಹರಿಸು–ತಡೆದುಕೊಳ್ಳು. ಆಜ್ಯಾಹುತಿ–ತುಪ್ಪದ ಆಹುತಿ. ನಿವಾತಕವಚರೆಂಬ ಅಸುರಸಮೂಹವಂ . . . ಪಾರ್ಥನಂತೆ–ಹಿಂದಿನ ಟಿಪ್ಪಣಿ ನೋಡಿ. ಭರವಸ–ನಂಬಿಕೆ. ಕೊಂಕಣಪತಿ–ಈಗಿನ ಬೊಂಬಾಯಿಯಿಂದ ಪೂರ್ವಕ್ಕೆ ಸಹ್ಯಾದ್ರಿ, ಪಶ್ಚಿಮಕ್ಕೆ ಸಮುದ್ರ, ಉತ್ತರದಲ್ಲಿ ಗುಜರಾತು, ದಕ್ಷಿಣದಲ್ಲಿ ಗೋಕರ್ಣ ಇವುಗಳ ನಡುವಣ ಪ್ರದೇಶ ಕೊಂಕಣ ; ಇದರ ಒಡೆಯ. ಆಂಧ್ರದೇಶ–ಕೃಷ್ಣಾ ಗೋದಾವರೀ ನದಿಗಳ ನಡುವಣ ಈಗಿನ ಆಂಧ್ರಪ್ರದೇಶ. ವೀರವಾದಧ್ವನಿ–ಪರಾಕ್ರಮವನ್ನು ಸಾರುವ ಧ್ವನಿ. ಖುರಪುಟ–ಕುದುರೆಗಳ ಕಾಲಿನ ಗೊರಸು. ಬೃಂಹಿತ–ಆನೆಗಳ ಘೀಂಕಾರ. 'ಸಲಾಮುಗಳಂ ನೋಡು'–ಗೌರವರಕ್ಷೆಯನ್ನು ಸ್ವೀಕರಿಸು. ಅಹಂ ಪೂರ್ವ ಮಹಂ ಪೂರ್ವವೆಂದು–ನಾನು ಮೊದಲು, ತಾನು ಮೊದಲು ಎಂದು. ಶರವಣ–ಜೊಂಡಿನ ಮೆಳೆ. ಖೇಡ್ಯ–ಖೇಟಕ, ಗುರಾಣಿ. ಕೈಪಟ್ಟಸ–ಬಹಳ ಹರಿತವಾದ ಮೊಳೆಯುಳ್ಳ ಕೈಭರ್ಜಿ. ಗಂಡಮಂಡಲ–ಕಪೋಲಸ್ಥಲ. ಚಬುಕುಮಾಡು–ಚಾವಟಿಯಿಂದ ಹೊಡೆ. ಕರಲಾಘವ–ಹಸ್ತಕೌಶಲ. ರಥಿಕ–ರಥದಲ್ಲಿ ಕುಳಿತು ಕಾದುವವರು. ಅರಿ–ಕತ್ತರಿಸು. ತುಮುರುತುಮುರಾಗು–ಚೂರು ಚೂರಾಗು. ಚಿತ್ರಾಸ್ತರಣ–ಬಣ್ಣದ ಹಾಸು, ರತ್ನಕಂಬಳಿ. ತೋಮರ–ಒಂದು ಬಗೆಯ ಆಯುಧ. ಪರಿಘ–ಲಾಳವಿಂಡಿಗೆ. ವಾರಣಾಧಿಪ–ಆನೆಯ ಮೇಲೆ ಕುಳಿತು ಕಾದುವ ಯೋಧ. ಅಶ್ವಸಾದಿ–ಕುದುರೆಯ ಸವಾರ. ಛೇದಿತ–ಕತ್ತರಿಸಿ ಹೋದ. ತುರಗಸಾದಿ–ಕುದುರೆಸವಾರ. ಮುಖಕುಹರ–ಬಾಯಿಯ ಬಿಲ. ಕಬಂಧ–ರುಂಡವಿಲ್ಲದ ದೇಹ. ಶ್ರಾಂತರಾಗು–ಆಯಾಸಗೊಂಡವರಾಗು.

ಪು. ೧೧೯-೧೨೦ : ಪ್ರೇಷಿತರಾಗು–ಕಳುಹಿಸಲ್ಪಡು. ಮೇಲುಬಲ–ಒತ್ತಾಸೆಗಾಗಿ ಕೂಡುವ ಹೆಚ್ಚಿನ ಸೇನೆ. ನೀಲವಸ್ತ್ರಾವಕುಂಠಿತನಾಗು–ಕಪ್ಪುಬಟ್ಟೆಯನ್ನು ಮುಖಕ್ಕೆ ಮರಸಿ

ಕೊಂಡವನಾಗು. ಸ್ವಸಂಕೇತವಾಕ್ಯ–ಮಾತಾಡುವ ಇಬ್ಬರಿಗಷ್ಟೇ ಅಭಿಪ್ರಾಯವಾಗುವಂತೆ ಸಂಕೇತಮಾಡಿಕೊಂಡ ಗೂಢೋಕ್ತಿ. ಸಾಯಾಹ್ನ–ಸಾಯಂಕಾಲ. ಸಂಹೃತನಾಗು–ಕೊಲ್ಲಲ್ಪಡು. ಒಂಟಿಶೂರ–ಏಕಾಂಗಸಾಹಸಿ. ಗೊತ್ತುಗಾರ–ಮುಖ್ಯಸ್ಥ. ಪಾಗು–ರುಮಾಲು. ರುದ್ರಪರಿವಾರಭಂದ–ಶಿವನ ಗಣಗಳ ಸ್ವರೂಪ.

ಪು. ೧೨೧-೧೨೨ : ವೇಧೆ–ಬಾಧೆ, ತೊಂದರೆ. ಜ್ಞಾತಿಮತ್ಸರ–ದಾಯಾದಿಭಾವದ ಹೊಟ್ಟೆಕಿಚ್ಚು. ಸಲ್ಲಕೀವನ–ಆನೆಬೇಲದ ಗಿಡಗಳ ಕಾಡು. ಮಹಾಪಂಕದೇಶ–ದೊಡ್ಡ ಕೆಸರಿನ ಕೊಂಪೆ. ಸ್ವಲ್ಪಮನುಷ್ಯ–ಸಣ್ಣಮನುಷ್ಯ. ಹೇಳಿದರ್ಥಕ್ಕೆ ನಾವೇ ಇದೇವೆ–ನಿಮ್ಮ ಇಷ್ಟವನ್ನು ಪೂರೈಸಿಕೊಡಲು ನಾವು ಸಿದ್ಧವಾಗಿದ್ದೇವೆ. ಆಚ್ಛಾದನಂಗೈ–ಮರಸು, ಮುಚ್ಚಿಕೊಳ್ಳು. ಶರಣಾಗತನಾದ ತಕ್ಷಕನಂ . . . ಕ್ಷೇಮವಂತನಾದಂತೆ–ಜನಮೇಜಯನ ಸರ್ಪಯಾಗ ಸಮಯದಲ್ಲಿ ತಕ್ಷಕ ಇಂದ್ರನನ್ನು ಮರೆಹೊಕ್ಕ. ಆಗ ಋತ್ವಿಜರು ಇಂದ್ರನೂ ತಕ್ಷಕನೂ ಇಬ್ಬರೂ ಸೇರಿ ಅಗ್ನಿಕುಂಡದಲ್ಲಿ ಬಿದ್ದು ಆಹುತಿಯಾಗುವಂತೆ ಮಂತ್ರವನ್ನು ಉಚ್ಚರಿಸಿದರು. ತಕ್ಷಕನೊಂದಿಗೆ ಇಂದ್ರನೂ ಆಹುತಿಯಾಗಬೇಕಾಗಿ ಬಂತು. ಅಷ್ಟರಲ್ಲಿ ಆಸ್ತೀಕನು ಸರ್ಪಯಾಗವನ್ನು ನಿಲ್ಲಿಸಿದನು.

ಪು. ೧೨೩-೨೪ : ಅನಭಿಮತ–ಇಷ್ಟವಾಗದ, ಒಪ್ಪಿಗೆಯಾಗದ. ಅರ್ಥ–ಅಭಿಪ್ರಾಯ. ಸಾಗಲೀಸನು–ಸಾಗಲು ಬಿಡುವುದಿಲ್ಲ. ಮುಖವಚನ–ಬಾಯಿಮಾತು. ಈರ್ಷ್ಯೆ–ಹುರುಡು. ಅಬಲಿಷ್ಠ–ದುರ್ಬಲ. ಗುಮ್ಮ–ಭಯ ಹುಟ್ಟಿಸುವ ಒಂದು ಕಾಲ್ಪನಿಕಭೂತ. ಬಿಭೀಷಿಕೆ–ಬೆಚ್ಚುಗೊಂಬೆ, ಬೆದರುಗೊಂಬೆ. ಜಂಗುಳಿ–ದಟ್ಟಣೆ. ಲಕ್ಷೋಪಲಕ್ಷ–ಲಕ್ಷ ಮತ್ತು ಅದರ ಭಾಗಗಳಾದ ಸಾವಿರಗಳು. ಆನಕಧ್ವನಿ–ಭೇರಿಯ ಸದ್ದು. ಪಲಾಯಿತರು–ಓಡಿ ಹೋದವರು. ಸನ್ನಿಹಿತವಾಗು–ಒದಗಿ ಬಂದಿರು. ಪಂಚಾಕ್ಷರಿಯ ಜಪ–'ನಮಃ ಶಿವಾಯ' ಎಂಬ ಮಂತ್ರದ ಉಚ್ಚಾರ. ಕಲ್ಪ–ಬ್ರಹ್ಮನ ಒಂದು ದಿವಸ, ಸಹಸ್ರಯುಗಗಳ ಕಾಲಾವಧಿ. ಮಸಣಿಸು–(<ಮಸುಳಿಸು) ಮೊಂಡಾಗು, ಕಾಂತಿಹೀನವಾಗು. ಶ್ಯೇನಪಕ್ಷಿ–ಗಿಡುಗ, ಶುಕಶಾಬಕ–ಗಿಳಿಮರಿ. ಅರಿಷ್ಟನಿವೃತ್ತಿ–ಪೀಡೆಯ ಪರಿಹಾರ.

ಆಶ್ವಮಾಶಯ

ಪು. ೧೨೭-೧೨೮ : ಸ್ಫುರತ್ತಾದ–ಸುಂದರವಾದ. ಯುದ್ಧಪ್ರಸಕ್ತ–ಯುದ್ಧದ ಸಂದರ್ಭ. ಪರ್ಯಂಕ–ಮಂಚ, ಹಾಸಿಗೆ. ಕೂರ್ಚಸಮೇತವಾದ ಉದಕಪಾತ್ರೆಗಳು–ಕುಚ್ಚು ಬರುವಂತೆ ಕಟ್ಟಿದ ದರ್ಭೆಯ ಸುತ್ತು ಸಹಿತವಾದ ಮಂತ್ರೋದಕದ ಪಾತ್ರೆ. ಕುಶಾಸ್ತರಣ ಪವಿತ್ರ–ದರ್ಭೆಯ ಆಸನ ಮತ್ತು ದರ್ಭೆಯ ಉಂಗುರ.

ಪು. ೧೨೯-೧೩೦ : ದೂರ್ವಾಸ್ತಂಬ–ದರ್ಭೆಹುಲ್ಲಿನ ಮೆದೆ. ವಲ್ಮೀಕ–ಹುತ್ತ. ಕುಶಶಕಲ–ದರ್ಭೆಯ ಕತ್ತರಿಸಿದ ತುಂಡು. ಕೂರ್ಚೆ–ದರ್ಭೆಯ ಸುತ್ತು. ಪ್ರೋಕ್ಷಿಸು–ಮಂತ್ರೋದಕವನ್ನು ಸಿಂಪಡಿಸು. ವೈಖಾನಸವೇಷದಿಂ ವಾತಾಶನರಂ . . . ವಾತಾಪಿ ಇಲ್ವಲರೋ ಎಂಬಂತೆ–ಇಲ್ವಲ ವಾತಾಪಿಗಳು ರಾಕ್ಷಸರಾದ ಅಣ್ಣತಮ್ಮಂದಿರು. ತಮಗೆ ಇಂದ್ರನಂತಹ ಮಗ ಹುಟ್ಟಬೇಕೆಂದು ಅಪೇಕ್ಷಿಸಿ ಬ್ರಾಹ್ಮಣರ ಅನುಗ್ರಹವನ್ನು ಬೇಡಿದರು. ತಮ್ಮ ಅಪೇಕ್ಷೆ ಈಡೇರದ ಕಾರಣ ಬ್ರಾಹ್ಮಣರನ್ನು (ವಾತಾಶನರು) ಋಷಿಗಳ

ವೇಷದಿಂದ (ವೈಖಾನಸವೇಷ) ಪೀಡಿಸತೊಡಗಿದರು. ಇಲ್ವಲನು ತಮ್ಮನನ್ನು ಮೇಕೆಯನ್ನಾಗಿಸಿ ಕೊಂದು ಆ ಮಾಂಸವನ್ನು ಬ್ರಾಹ್ಮಣರಿಗೆ ಅಡುಗೆಮಾಡಿ ಬಡಿಸಿ, ಅವರು ತಿಂದ ಬಳಿಕ ತಮ್ಮನನ್ನು ಹೊರಗೆ ಬರುವಂತೆ ಕರೆಯುತ್ತಿದ್ದನು. ಅವನು ಆ ಬ್ರಾಹ್ಮಣರ ಹೊಟ್ಟೆ ಸೀಳಿಕೊಂಡು ಹೊರಬರುತ್ತಿದ್ದನು. ಹೀಗೆ ಅನೇಕ ಮಂದಿ ಬ್ರಾಹ್ಮಣರು ಸತ್ತರು. ಆದರೆ ಅಗಸ್ತ್ಯನಾದರೋ ವಾತಾಪಿಯನ್ನು ಹೊಟ್ಟೆಯಲ್ಲಿಯೇ ಜೀರ್ಣವಾಗುವಂತೆ ಮಾಡಿ ಇಲ್ವಲನಿಗೆ ಬುದ್ಧಿಗಲಿಸಿದನು (ನೋ. ಪುನಾಚೂ. ಪು. ೫೧-೫೨).

ಸ್ಪರುಶ–ಸ್ಪರ್ಶ. ಕೂರ್ಚೋದಕ–ಕೂರ್ಚೆಯನ್ನದ್ದಿ ಪ್ರೋಕ್ಷಿಸುವ ಮಂತ್ರದ ನೀರು. ಕುಳೀರಕ–ಏಡಿ, ನಳ್ಳಿ. ಮುಟ್ಟು ಮೈಲಿಗೆ–ಮಡಿಗೆ ಭಂಗತರುವ ಸ್ಪರ್ಶಾದಿಗಳು. ಇತ್ತಂಡ–ಎರಡು ಕಡೆ. ಒಸಗೆ–ಶುಭವಾರ್ತೆ.

ಉಕ್ಕಡದವರು–ಊರಿನ ಕಾವಲು ಕಟ್ಟೆಯ (ಸಂ. ಗುಲ್ಮಸ್ಥಾನ) ಅಧಿಕಾರಿಗಳು. ಪರಾಕು–ಹಿರಿಯರನ್ನು ಸಂಬೋಧಿಸುವಾಗ ಗಮನ ಸೆಳೆಯಲು ಉಪಯೋಗಿಸುವ ಶಬ್ದ. ಮಾರ್ಗಾಂತರ–ಬೇರೆ ದಾರಿ. ಸುಪಥ –ಒಳ್ಳೆಯ ದಾರಿ.

ಪು. ೧೩೧-೧೩೪ : ದೋಲಿ–ಮೇನೆ, ಅಂದಣ. ಮುಸುಗು–ಮುಸುಕು. ತುರಗಾರೂಢ–ಕುದುರೆ ಸವಾರ. ಪರಿವೇಷಮಂ ಕಟ್ಟು–ಸುತ್ತುಗಟ್ಟು. ಲಕ್ಷೀಕರಿಸು–ಲಕ್ಷ್ಯಮಾಡು. ಮುಖ ವಿವರ್ಣವಿಲ್ಲದೆ–ಮುಖ ಬಿಳಿಚಿಕೊಳ್ಳದೆ, ಮಂಕಾಗದೆ. ಪಾಗು–ತಲೆಯ ಸುತ್ತು, ರುಮಾಲು. ಕೋಶ–ಕತ್ತಿಯನ್ನಿಡುವ ಒರೆ. ಹಿರಿ–ಸೆಳೆ. ಕಾರ್ಯಘಾತವಾಗು–ಕೆಲಸ ಕೆಡು. ನಿರ್ವಾಹ–ಕರ್ತವ್ಯವನ್ನು ನಿಭಾಯಿಸುವುದು. ಸಮಯಬಂಧದೋಷ–ಒಡಂಬಡಿಕೆ ಅಥವಾ ವ್ಯವಸ್ಥೆಯ ಪ್ರಮಾದ. 'ಹರ ಮಹಾದೇವ' ಇದು ಮರಾಠರ ಯುದ್ಧಗಳಲ್ಲಿ ಸೈನಿಕರು ಬಳಸುತ್ತಿದ್ದ ಮಾತಿನ ಹಾಗೆ ತೋರುತ್ತದೆ. ಕಾಸೆ–ಕಚ್ಚೆ. ಖೇಡ್ಯ–ಗುರಾಣಿ (<ಪ್ರಾ. ಖೇಡಯ<ಸಂ. ಖೇಟಕ). ಖಡ್ಗಸ್ತಂಭನಮಂತ್ರ–ಎತ್ತಿದ ಕತ್ತಿ ಎತ್ತಿದಂತೆಯೇ ಅಲುಗದ ಹಾಗೆ ಮಾಡುವ ಮಂತ್ರ. (ತ್ರಿಭಿರ್ವರ್ಷೈಸ್ತ್ರಿಭಿರ್ಮಾಸೈಸ್ತ್ರಿಭಿಃ ಪಕ್ಷೈಸ್ತ್ರಿಭಿರ್ದಿನೈಃ |) ಅತ್ಯುತ್ಕಟೈಃ ಪುಣ್ಯಪಾಪೈಃ ಇಹೈವ ಫಲಮಶ್ನುತೇ ||(ಮನುಸ್ಮೃತಿ)–ಅತ್ಯುತ್ಕಟವಾದ ಪುಣ್ಯಪಾಪಗಳ ಫಲವನ್ನು ಜನರು ಮೂರು ವರ್ಷಗಳೊಳಗೆ, ಮೂರು ತಿಂಗಳೊಳಗೆ, ಮೂರು ಪಕ್ಷಗಳೊಳಗೆ ಅಥವಾ ಮೂರು ದಿನಗಳೊಳಗೇ ಈ ಲೋಕದಲ್ಲಿಯೇ ಅನುಭವಿಸುತ್ತಾರೆ. ಮರ್ಮಸ್ಪೃಕ್ಕಾದ–ಮಾರ್ಮಿಕವಾದ, ಮರ್ಮವನ್ನು ಸ್ಪರ್ಶಿಸುವ.

ಪು. ೧೩೫-೩೬ : ಭಲ್ಲೆ–ಈಟಿ. ಶರೀರಲಾಘವ–ಮೈ ಹಗುರವಾಗಿರುವಿಕೆ. ಮಂಡಲಾಕಾರವಾಗಿ–ದುಂಡಗೆ. ಕರಲಾಘವ–ಹಸ್ತಕೌಶಲ. ಉತ್ತರೀಯ–ಹೊದೆಯುವ ವಸ್ತ್ರ. ನಿಷಂಗ–ಬತ್ತಳಿಕೆ. ನೇಜ್ಯ–ಈಟಿ (<ನೇಜಯ). ಪೆಣ–ಹೆಣ. ಧೂಮರಾಜಿ–ಹೊಗೆಯ ದಟ್ಟಣೆ. ದಿಕ್ತಳ–ದಿಗಂತ. ಚಬುಕುಮಾಡು–ಕುದುರೆಯನ್ನು ಚಾವಟಿಯಿಂದ ಹೊಡೆದು ಚುರುಕುಗೊಳಿಸು. ತುರಗಾಭರಣ–ಕುದುರೆಗಳ ಅಲಂಕಾರ. ಗೊತ್ತುಗಾರ–ಮುಖ್ಯಸ್ಥ. ಅವಧರಿಸು–ಕಿವಿಗೊಡು, ಲಾಲಿಸು.

ಪು. ೧೩೭-೧೩೮ : ಮ್ಲೇಚ್ಛರು–ಅನ್ಯಭಾಷಿಕರಾದ ವಿದೇಶೀಯರು, ಶಕ ಹೂಣ ಮುಂತಾದವರು. ಸ್ಖಲಿತವಾಗು–ಹಾಳಾಗು, ಕೆಡು. ರಣಾಂಕಣ–ಯುದ್ಧಭೂಮಿ. ದರ್ವಿ–ಯಜ್ಞಯಾಗಾದಿಗಳಲ್ಲಿ ತುಪ್ಪವನ್ನು ಹಾಕಲು ಬಳಸುವ ಸಟ್ಟುಗ. ಕೈಕೋದಂಡ–ಕೈ ಬಿಲ್ಲು.

ಆಕರ್ಣಾಂತವಾಗಿ–ಕಿವಿಯ ವರೆಗೆ. ಭಾರವಾಸಿ–ತೂಕವಾದುದು. ಭಲ್ಲ–ಈಟಿ. ವಜ್ರ ಪ್ರಹಾರ–ಇಂದ್ರನ ವಜ್ರಾಯುಧದ ಹೊಡೆತ. ಹೊರತಟ್ಟು–ಹೊರಗೆ ಬೀಳುವಂತೆ ಮಾಡು. ಅಸು–ಪ್ರಾಣ, ಪ್ರಾಸ–ಒಂದು ಬಗೆಯ ಆಯುಧ. ಮುಸಲ–ಒನಕೆಯನ್ನು ಹೋಲುವ ಆಯುಧ. ನೇಣು–ಹುರಿ, ಹಗ್ಗ. ನೀಟಗಳಾದ ಉರುಳು–ಉದ್ದವಾದ ಬಿಗಿಯುವ ನೇಣು.

ಪು. ೧೩೯-೧೪೦ : ಕಿರಾತಸದೃಶ–ಕಾಡ ಬೇಡನಿಗೆ ಸಮಾನನಾದ. ಮಹಾಧರ್ಮಾಚರಣೆ–ಮಹಾ+ಅಧರ್ಮಾಚರಣೆ. ಪರುಷವಾಕ್ಯ–ಕಠಿನವಾದ ಮಾತು. ಕುಂಡಲ ತುರಾಯಿ –ಕಿವಿಯ ಆಭರಣ ಮತ್ತು ತಲೆಯಲ್ಲಿ ಧರಿಸಿದ ಅಲಂಕಾರದ ಕುಚ್ಚು. ಮೊಕೊಡೆಯನಾಗಿ –ಮುಖ ಕೆಳಗೆ, ಬೆನ್ನು ಮೇಲೆ ಇರುವಂತೆ ಹಾಸಿಗೆಯಲ್ಲಿ ಮಲಗಿದವನಾಗಿ ; ಇದೊಂದು ಲೋಕರೂಢಿಯ ಮಾತು ಇರುವಂತೆ ಇದೆ. ಮುಖ ಅಡಿಯಾಗಿ ಎಂಬುದರ ಗ್ರಾಮ್ಯ ರೂಪವಿದು. ಲುಬ್ಧ–ಜಿಪುಣ. ಹುಲ್ಲೆ–ಜಿಂಕೆ. ಅನುಲೇಪನ–ಸುಗಂಧ ದ್ರವ್ಯ. ಅವುಡು–ಕೆಳದುಟಿ. ದುರ್ವಿನಯ–ಧೂರ್ತತೆ. ಮರಣಾವಧಿಕ–ಸಾಯುವವರೆಗೆ. ಕಬಂಧ–ರುಂಡವಿಲ್ಲದ ಶರೀರ. ತೈಲಕಟಾಹ–ಎಣ್ಣೆ ಕೊಪ್ಪರಿಗೆ.

ಪು. ೧೪೧-೧೪೨ : ಗಂಧಮಾಲಿಕೆ–ಪರಿಮಳದ್ರವ್ಯ ಮತ್ತು ಹೂಹಾರ. **ಶಿಖಾಬಂಧನ** –ಜುಟ್ಟು ಕಟ್ಟಿಕೊಳ್ಳುವುದು. ಜಾತಿಕ್ಷತ್ರಿಯ ಸಂತತಿ–ಸಂಕರವಿಲ್ಲದೆ ಆದಿಕಾಲದಿಂದ ಬಂದ ಕ್ಷತ್ರಿಯವಂಶ. ಗವಾಕ್ಷ–ಕಿಟಕಿ. ಬಾಷ್ಪೋದಕ–ಕಣ್ಣೀರು. ಈಶಸಂಕಲ್ಪ–ದೈವ ಸಂಕಲ್ಪ. ಅನುನಯಸಹಸ್ರ–ಪರಿಪರಿಯಾದ ಸಮಾಧಾನದ ಮಾತು. ಇಂಧನಾಗ್ನಿ–ಕಟ್ಟಿಗೆಯಿಂದ ಹೊತ್ತಿಕೊಳ್ಳುವ ಬೆಂಕಿ. ಗ್ರಹ–ಪೀಡೆಯುಂಟುಮಾಡುವ ಅತಿಮಾನುಷ ಕ್ಷುದ್ರ ಶಕ್ತಿ. ಅಂತರಾಯ–ವಿಘ್ನ. ಪಾದಾಂಶ–೧/೪ ಭಾಗ. ಪೂರ್ತಕರ್ಮ–ಉತ್ತರಕ್ರಿಯೆ. ಕಳೇಬರ–ಶವ. ಹವ್ಯ–ಹವಿಸ್ಸು. ಹವ್ಯವಾಹ–ಅಗ್ನಿ. ಬಾಲಬುದ್ಧಿಯಿಂದ–ತಿಳಿವಳಿಕೆಯಿಲ್ಲದೆ. ಶಿಷ್ಟಾನುಮತ–ದೊಡ್ಡವರಿಗೆ ಸಮ್ಮತವಾದುದು. ರಣಾಂಕಣ–ಯುದ್ಧಭೂಮಿ. ಮಾನಿತ–ಅಭಿಮಾನಶಾಲಿ, ಗೌರವಾಸ್ಪದವ್ಯಕ್ತಿ.

ಪು. ೧೪೩-೪೪ : ಜಡನಾಗು–ಮಂಕಾಗು. ಅವಲಂಬನಾಂತರ–ಬೇರೆ ಆಶ್ರಯ. ಬಾಧ್ಯ–ಹಕ್ಕುದಾರ. ಆಗ್ರಹ–ಹಠ. ಅನಾಯಕರಾಜ್ಯ–ರಾಜನಿಲ್ಲದ ರಾಜ್ಯ. ರೋದನೆ–ಅಳು, ಗೋಳು. ಪರಿಚಾರಿಣಿ–ಸೇವಕಿ. ತಕ್ಕವಿಸು–ಆಲಿಂಗಿಸು. ಅವಿಹಿತ–ತಕ್ಕುದಲ್ಲದ. ಜನ್ಮಾಂತರೀಯ–ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಫಲ. ಲೋಕಾಂತರಸ್ಥ–ಮೃತ. ಅನಧಿಕಾರಿಗಳಾದ ಶೂದ್ರರು . . . ರಾಜ್ಯಾರಿಷ್ಟವಾಗಿ–ಇದು ನ್ಯಾಯವಾದ ಕಾರಣವಲ್ಲ. ನ್ಯಾಯವಾದ ಕಾರಣ ಜ್ಞಾತಿವಧೆಯೇ, ಅಹಂಕಾರವೇ. ಕತೆಗಾರ ತನ್ನ ಕಾಲದ ಜಾತಿ ವ್ಯವಸ್ಥೆಯ ಮೇಲುಕೀಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಬ್ರಾಹ್ಮಣರಿಗೆ ಬ್ರಾಹ್ಮಣೇತರರಿಂದ ಆಗುತ್ತಿದ್ದಿರಬಹುದಾದ ಕಿರುಕುಳವನ್ನು ನೆನೆದು ಹೀಗೆ ಬರೆದಿರಬಹುದು. ರಾಜ್ಯಾರಿಷ್ಟ –ರಾಜ್ಯದ ಕೇಡು. 'ರಾಜ್ಞೋ ರಾಷ್ಟ್ರಕೃತಂ ಪಾಪಂ'–ಇದು "ರಾಜಾ ರಾಷ್ಟ್ರಕೃತಂ ಪಾಪಂ| ರಾಜಪಾಪಂ ಪುರೋಹಿತಃ || ಭರ್ತಾ ಚ ಸ್ತ್ರೀಕೃತಂ ಪಾಪಂ | ಶಿಷ್ಯಪಾಪಂ ಗುರುಸ್ತಥಾ" (ಚಾಣಕ್ಯ) ಎಂಬುದರ ಭಾಗ. "ಪ್ರಜೆಗಳ ಪಾಪವು ಅರಸನನ್ನೂ ಅರಸನ ಪಾಪವು ಪುರೋಹಿತನನ್ನೂ ಹೆಂಡತಿಯ ಪಾಪವು ಗಂಡನನ್ನೂ ಶಿಷ್ಯನ ಪಾಪವು ಗುರುವನ್ನೂ

ಸೇರುತ್ತದೆ.'' ಜಾತಿಕ್ಷತ್ರಿಯ–ಕುಲೀನಕ್ಷತ್ರಿಯ. ವ್ಯಸನಾಭ್ಯುದಯ–ಸಂಕಟ ಮತ್ತು ಏಳಿಗೆ.

ಪು. ೧೪೫-೧೪೬ : ಪರಮಪದ–ಮುಕ್ತಿ. ಅಧಿಕಾರಿ–ಯೋಗ್ಯ, ಅರ್ಹವ್ಯಕ್ತಿ. ಈಶ್ವರಗತ–(ಮನಸ್ಸು) ದೇವರಲ್ಲಿರುವವನು. ಪೌತ್ರ–ಮಗನ ಮಗ. ಔರಸಪುತ್ರ–ಸ್ವಂತಮಗ. ಬೀಗಮುದ್ರೆ–ಬೀಗ, ಕೀಲಿ. ಸಿದ್ಧಾರ್ಥಕ–ಹೀಗಾಗಬಹುದೆಂದು ಹೇಳಿದ, ಉದ್ದೇಶಿಸಿದ ಅಭಿಪ್ರಾಯವೆಲ್ಲ ಹಾಗೆಯೇ ನಡೆಯುವುದು ಯಾರ ವಿಷಯದಲ್ಲಿ ಸಾಧ್ಯವಿದೆಯೋ ಅವನು ; ಅಂಕಿತ ಮತ್ತು ಅನ್ವರ್ಥನಾಮ. ಅಸಿತಪಕ್ಷಾಂತ–ಕೃಷ್ಣಪಕ್ಷದ ಕೊನೆ. ಪೊಂದು–ಸೇರು. ಕುಮುದನಿಕರ–ನೈದಿಲೆಗಳ ಸಮೂಹ. ವರಣಮಾಲೆ–ಸ್ವಯಂವರ ಸಮಯದಲ್ಲಿ ವರಿಸಿದ್ದರ ಸಂಕೇತವಾಗಿ ವಧು ವರನ ಕೊರಳಿಗೆ ಹಾಕುವ ಹೂವಿನ ಹಾರ. ಪಿತಾಮಹ–ತಂದೆಯ ತಂದೆ (ಸರ್ವಾರ್ಥಸಿದ್ಧಿರಾಯ). ಅನುಗಮನ–ಸಹಗಮನ. ಸಾಂತ್ವವಚನ–ಸಮಾಧಾನದ ಮಾತು. ಅನ್ಯಥಾ ಬರು–ಭಂಗವಾಗು. ಜಗುಳಿ ಹೋಗು–ಜಾರಿಹೋಗು.

ಪು. ೧೪೯-೧೫೦ : ಜನಸಂಘ–ಜನಸಮೂಹ. ನೆರೆ–ಗುಂಪುಕೂಡು. ಸುವಾಸಿನಿ–ಸುಮಂಗಲಿ, ಮುತ್ತೈದೆ. ಸರಭಸದಿಂ–ತ್ವರಿತವಾಗಿ. ವಾತಾಹತಿ–ಗಾಳಿಯ ಹೊಡೆತ. ಕದಳಿಕಾನಿಕರ–ಬಾಳೆಗಿಡಗಳ ಸಮೂಹ. ದಂಡವತ್ಪ್ರಣಾಮ–ಉದ್ದಕ್ಕೆ ನೆಲದ ಮೇಲೆ ಅಡ್ಡಬೀಳು. ಸೂರ್ಯಾತಪ–ಬಿಸಿಲು. ಇಂದ್ರಚಾಪ–ಕಾಮನಬಿಲ್ಲು. ಬಾಷ್ಪಧಾರೆ–ಕಣ್ಣೀರಿನ ಪ್ರವಾಹ. ವರುಷಬಿಂದು–ಮಳೆಹನಿ. ಆಕ್ರಂದನ–ಅಳು. ಅಶನಿರವ–ಸಿಡಿಲು. ಚಾತಕರಾಜಿ–ಮಳೆಯನೀರನ್ನು ಮಾತ್ರ ಕುಡಿಯುವುದೆಂದು ತಿಳಿಯಲಾಗುವ ಹಕ್ಕಿಗಳ ಗುಂಪು. ಶ್ವೇತಪರಿಧಾನ–ಬಿಳಿಯುಡುಗೆ. ಚೇಟೀನಿಕರ–ಸಖಿಯರ ಗುಂಪು. ಬಲಾಕ–ಬೆಳ್ಳಕ್ಕಿ. ದುರ್ದಿನ–ಮಳೆ ಬಾರದೆ ಬರಿಯ ಮೋಡ ಕವಿದ ದಿನ.

ಅಶನಿಘಾತ–ಸಿಡಿಲಿನ ಹೊಡೆತ. ಫಲಗುಚ್ಛ–ಹಣ್ಣಿನ ಗೊನೆ. ವನಕರಿ–ಕಾಡಾನೆ. ವಾರಿಜನಿಕರ–ತಾವರೆಗಳ ಗುಂಪು. ಮಂಡಿತ–ಅಲಂಕೃತವಾದ. ಕುರುಳುಕೂದಲು–ಸುರಳಿಗೊಂಡ ತಲೆಗೂದಲು. ಪಾರವಶ್ಯ–ಪರವಶತೆ. ಕಪೋಲ–ಕೆನ್ನೆ. ಮರುಳು–ಪಿಶಾಚ. ಪುಷ್ಪಶಯನ–ಹೂಹಾಸಿಗೆ. ಹಳಿ–ನಿಂದಿಸು. ಕಂಟಕಪಾಷಾಣಗಳು–ಮುಳ್ಳು ಕಲ್ಲುಗಳು. ಪರುಷ–ಕಠಿನ. ಭೂಶಯನ–ನೆಲವೇ ಹಾಸಿಗೆ. ಅಂಬ–ತಾಯಿ. ಮಕರಪತ್ರ–ಕೆನ್ನೆಯ ಮೇಲೆ ಚಿತ್ರಿಸಿದ ಬಣ್ಣದ ಅಲಂಕಾರ. ಬಂಗಾರದವಳು–ಉಪಪತ್ನಿ (<ಭೃಂಗಾರ–ಗಿಂಡಿ, ಕಾಳಂಜಿ. ಬಹುಶಃ ಮೂಲಾರ್ಥ ಕಾಳಂಜಿ ಹಿಡಿಯುವವಳು). ಬನ್ನಣೆ–ವಿಲಾಸ, ಬಿನ್ನಾಣ. ಸೈಳೇಂದ್ರಿ–ಅರಮನೆಯ ಅಂತಃಪುರದ ದಾಸಿ (<ಸಂ. ಸೈರಂಧ್ರಿ). ಪ್ರಳಾಪಪಡು–ಗೋಳಾಡು. ಸುಕೃತವಿಮಾನ–(ಸಹಗಮನಾನಂತರ ಸ್ವರ್ಗಕ್ಕೆ ಕರೆದೊಯ್ಯಲು ಸಿದ್ಧವಾದ) ಪುಣ್ಯದ ವಿಮಾನ. ಕ್ಷಾಳನೆಗೈ –ತೊಳೆ. ಬಂಗಾರದ ಸ್ತ್ರೀ–ಉಪಪತ್ನಿ.

ಪು. ೧೫೧-೧೫೩ : ಭೂಸುರಸ್ತೋಮ–ಬ್ರಾಹ್ಮಣಸಮೂಹ. ಮಹಾದಾನ–೧೬ ಶ್ರೇಷ್ಠವಾದ ದಾನಗಳು (ನೋಡಿ : ಶ್ರೀವತ್ಸನಿಘಂಟು). ಬಾಗಿನ–ಮದುವೆ ವ್ರತ ಮೊದಲಾದ ಸಂದರ್ಭಗಳಲ್ಲಿ ಹೆಂಗಸರು ಕೊಡುವ ಕಾಣಿಕೆ, ಉಪಾಯನ. ಅಗಿಲು–ಒಂದು ಬಗೆಯ ಸುಗಂಧದ ಮರದ ಚಕ್ಕೆ. ದಾವಾಗ್ನಿ–ಕಾಡುಕಿಚ್ಚು. ತರಣಿ–ಸೂರ್ಯ. ತಾರಕಿ–ನಕ್ಷತ್ರ. ಆಶುಶುಕ್ಷಣಿ–ಅಗ್ನಿ. ಭೂರಿ–ದೊಡ್ಡಪ್ರಮಾಣ. ಪೂರ್ತಕರ್ಮ–ಉತ್ತರಕ್ರಿಯೆ.

ನವಮಾಶಯ

ಲೋಕಾಂತರಸ್ಥರು–ಪಿತೃಲೋಕದಲ್ಲಿರುವವರು, ಮೃತರು. ಸ್ವಜನ–ಕುಟುಂಬದ ಜನ. ಸ್ವೀಕೃತಪುತ್ರ–ದತ್ತುಮಗ. ಉತ್ಪನ್ನವಾಗು–ಕಡಿದುಹೋಗು, ನಿಂತುಹೋಗು. ವಿಷ ಮತ್ಸ್ಯ–ವಿಷದ ಮೀನು. ಜರಣಾದಿ ಸಂಸ್ಕಾರ–ಕರಗಿಸುವುದು ಇಲ್ಲವೆ ದ್ರವೀಕರಿಸುವುದು ಮುಂತಾದ ಸಂಸ್ಕಾರ. ಪಾರದರಸ–ಪಾದರಸ. ಸ್ಪರುಶವೇದಿ–ಸ್ಪರ್ಶಮಣಿ. ಸೋಕಿದ ಲೋಹವನ್ನು ಚಿನ್ನವನ್ನಾಗಿ ಪರಿವರ್ತಿಸುವುದೆಂದು ನಂಬಲಾದ ಕಲ್ಲು. ಇದು ರಸಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರ. ಬಾಲ್ಯಾರಭ್ಯ–ಎಳೆಯ ವಯಸ್ಸಿನಿಂದ ತೊಡಗಿ. ಸ್ಪರುಶ–ಸ್ಪರ್ಶ. ಕುಶಲವಿದ್ಯೆ–ನಿಪುಣಕಲೆ. ಬುದ್ಧಿಮತಿ–ಬುದ್ಧಿಯ ಮಾತು. ಪ್ರೌಢೆ–ಯೌವನಾವಸ್ಥೆಗೆ ಬಂದ ಸ್ತ್ರೀ. ಮಹಾಪ್ರೌಢೆ–ತುಂಬ ಪ್ರೌಢಿಮೆಯುಳ್ಳವಳು. ವಿಷಕನ್ಯೆಯನ್ನು ಶತ್ರು ಸಂಹಾರಕ್ಕೆ ರಹಸ್ಯವಾಗಿ ಬಳಸುವ ಒಂದು ಕ್ರಮ ಹಿಂದಿನಿಂದಲೂ ಇದ್ದಂತೆ ತೋರುತ್ತದೆ. *Gesta Romanorum* ಎಂಬ ಗ್ರಂಥದ ೧೧ನೆಯ ಕಥೆಯಲ್ಲಿ ಅಲೆಕ್ಸಾಂಡರನ ವಧೆಗೆ ಒಬ್ಬ ಭಾರತೀಯ ರಾಣಿ ವಿಷಕನ್ಯೆಯನ್ನು ಕಳಿಸಿದ್ದಳೆಂದೂ ಅರಿಸ್ಟಾಟಲ್ ಅದನ್ನು ಪತ್ತೆ ಹಚ್ಚಿ ಆ ಪ್ರಯತ್ನವನ್ನು ವಿಫಲಗೊಳಿಸಿದನೆಂದೂ ಉಲ್ಲೇಖವಿರುವುದಾಗಿ ಟಾನಿ ಬರೆಯುತ್ತಾರೆ (ಆರ್. ಎಸ್. ಪಂಡಿತ್, ಪು. ೨೪೭-೪೮). ಸುಶ್ರುತನ ವೈದ್ಯಶಾಸ್ತ್ರದಲ್ಲೂ (೧-೫) ವಿವರಗಳುಂಟು.

ಪು. ೧೫೩-೫೪ : ಸ್ತ್ರೀ ಮಧ್ಯಸ್ಥ–ಬೇರೆಯವರ ಸಲುವಾಗಿ ಹೆಣ್ಣು ಒಪ್ಪಿಸುವ ಮಧ್ಯಸ್ಥಿಕೆ. ನಿಂದಿತ–ತಪ್ಪು, ಅನುಚಿತ. ಘಟನೆಮಾಡು–ಸಂಬಂಧವನ್ನು ಸಂಘಟಿಸು, ಒಡಗೂಡಿಸು. ಈ ಕನ್ಯೆಯ ಅಂಗಸ್ಪರ್ಶವು . . . ದುಃಖವನ್ನು ಮರೆಯಬಹುದು–ನಾಟಕೀಯವ್ಯಂಗ್ಯದ ಸೊಗಸಾದ ಮಾತು. ಎರಡು ನೆಲೆಗಳಲ್ಲಿ ಇದರ ಅರ್ಥವುಂಟು.

ವಚನಗೌರವ–ಮಾತಿಗೆ ಬೆಲೆಕೊಡುವುದು. ಜಾಗರೂಕ–ಹುಷಾರಿ. ವಿರಕ್ತ–ಸಂನ್ಯಾಸಿ. ಕೋಶ–ಭಂಡಾರ (ಇಲ್ಲಿ ಬಚ್ಚಿಟ್ಟ ನಿಧಿಯೆಂದು ಅರ್ಥ). ಭುಂಜಿಸು–ಊಟಮಾಡು. ಮಾರ್ಜಾಲ–ಬೆಕ್ಕು. ಶೇಷ–ಉಳಿದದ್ದು. ಅರ್ಥಾಂತರದಿಂ–ಬೇರೆ ಅರ್ಥ ಹೊರಡುವ ಹಾಗೆ. ಸ್ವರ್ಣದಂಡ–ಚಿನ್ನದ ಕೋಲು. ಗುಪ್ತಿ–'ಬಚ್ಚಿಟ್ಟ ಶಸ್ತ್ರ'. ಭವನಪಾಲಕ–ಮನೆ ಪೆಗ್ಗಡೆ ಎಂಬ ಅನ್ವರ್ಥವೂ ಉಂಟು. ಉಗ್ರಾಣ– ಆಹಾರಧಾನ್ಯಗಳ ದಾಸ್ತಾನುಕೋಣೆ. ಇಟ್ಟಿಣಿಕಿ ನೋಡು–ಸ್ವಲ್ಪವಾದರೂ ಇಣಿಕಿ ನೋಡು. ಓಲಗದ ಹಜಾರ–ಆಸ್ಥಾನ ಮಂಟಪ, ಸಭಾಗೃಹ. ತೊಟ್ಟಿ–ಹಜಾರದ ಮಧ್ಯೆ ಚಾವಣಿಯಿಲ್ಲದ ಚಚ್ಚೌಕವಾದ ಸ್ಥಳ. ಮನೆಯೊಳಗೆ ಜನ ಕೂಡಲು ಅನುಕೂಲವಾದ ವಿಶಾಲವಾದ ಜಾಗ (ಇಲ್ಲಿ ಬರುವ 'ವಾಣೀವಿಲಾಸ', 'ಓಲಗದ ಹಜಾರ', 'ತೊಟ್ಟಿ', 'ಕುಮಾರಭವನ' ಇವೆಲ್ಲ ಒಡೆಯರ ಕಾಲದ ಸನ್ನಿವೇಶವನ್ನು ಹೇಳುವಂತಿವೆ).

ಒಳಬೊಕ್ಕಸ–ಖಾಸಾ ಭಂಡಾರ. ಗೊಲ್ಲನೊಬ್ಬ ಇಲ್ಲಿ ಭಂಡಾರದ ಅಧಿಕಾರಿಯಾಗಿದ್ದನೆಂಬುದು ಸ್ವಾರಸ್ಯಕರ ಸಂಗತಿ.

ಪು. ೧೫೫-೫೬ : ಮನೆವಾರ್ತೆ–ಮನೆಯ ವ್ಯವಹಾರ. ಸಮ್ಮಾನಿತ–ಸನ್ಮಾನಿತ. ವ್ಯಾಜಾಂತರ–ಬೇರೆ ನೆಪ. ರಾಯಸದವನು–ಕರಣಿಕ, ಬರವಣಿಗೆ ಕೆಲಸದವನು. ಕಳ್ಳ ಮಾರ್ಗ–ಬೇರೆಯವರಿಗೆ ತಿಳಿಯದ ಚಿಕ್ಕ ಒಳದಾರಿ. ನಾಭಿಯಲ್ಲಿ ಕುಟಿಲ–ಹೊಟ್ಟೆ ನುಲಿ

ಯುವುದು. ಕರುಳು ಕಿವುಚುವಂತಾಗುವುದು. ಜಿಹ್ವಾಗ್ರ–ನಾಲಗೆಯ ತುದಿ. ಮೂಲೋತ್ಪಾಟನ–ಬೇರುಸಹಿತ ಕಿತ್ತು ಹಾಕುವುದು, ಸಂಪೂರ್ಣನಾಶ. ಮಂಡಲಾಧಿಪತಿ–ಸಾಮಂತ ರಾಜ. ಸಣ್ಣ ಪ್ರದೇಶದ ಅರಸು. ವಾಕ್ಯವಿಘ್ನ–ಕೊಟ್ಟ ಮಾತಿಗೆ ತಪ್ಪುವುದು. ಜ್ಞಾತಿಸೂತಕ ಸ್ನಾನ–ದಾಯಾದಿಗಳ ಸಾವಿನ ಮೈಲಿಗೆ ಕಳೆಯಲು ಮಾಡುವ ಸ್ನಾನ.

ಪು. ೧೫೭-೫೮ : ಸಲಾಮಿಗೆ ಬರು–ಗೌರವ ಸಲ್ಲಿಸಲು ಹಾಜರಾಗು. ವೈತಾಳಿಕ–ಹೊಗಳುಭಟ್ಟ. ಪೊಗುದಿ–ಪರರಾಜರು ಅಧಿರಾಜರಿಗೆ ಕೊಡುವ ಧನಕನಕಾದಿಗಳ ಕಾಣಿಕೆ. ಸುರಗುರು–ಬೃಹಸ್ಪತಿ. ಯಜಮಾನ–ಗೃಹಕೃತ್ಯದಲ್ಲಿ ಹಿರಿಯನಾದ ವ್ಯಕ್ತಿ ; ಮೈಸೂರು ಕಡೆಯ ಲೋಕರೂಢಿಯ ಮಾತು. ಪ್ರಾಧಾನ್ಯಶಸ್ತ್ರ–ಜವಾಬ್ದಾರಿಯನ್ನು ಹೊತ್ತುಕೊಂಡುದನ್ನು ಹೇಳುವ ಹಿರಿತನದ ಲಾಂಛನ. ಶಿರಸಾ ವಹಿಸು–ತಲೆಯ ಮೇಲೆ ಹೊತ್ತುಕೊಳ್ಳು. ಪೂರ್ತಿ ಒಪ್ಪಿಕೊಳ್ಳು. ಕುಸುಮಪುರ–ಪಾಟಲೀಪುರ.

ಪು. ೧೫೯-೧೬೦ : ಮುಕ್ತಾಮಯ–ಮುತ್ತುಗಳು ತುಂಬಿದ. ಚಂದ್ರಗಾವಿ–ಸಿಂದೂರ ವರ್ಣದ ಬಟ್ಟೆ. ನಾರಾಯಣಿ–ಮೋಹಿನಿ. ದೃಷ್ಟಿಪಾತ–ದೃಷ್ಟಿ ಹರಿಯುವುದು. ಚಿತ್ತವೃತ್ತಿ–ಮನಸ್ಸಿನ ವರ್ತನೆ. ಅಮೂರ್ತದ್ರವ್ಯ–ಆಕಾರವಿಲ್ಲದ ವಸ್ತು. ಪುತ್ತಳಿ–ಗೊಂಬೆ. ಅತತ್ತ್ವವೇದಿ–ಪರತತ್ತ್ವದ ತಿಳಿವಳಿಕೆಯಿಲ್ಲದವನು. ಅಭಿಮತವಾದ–ಇಷ್ಟವಾದ. ಅಭಿಚಾರವಿದ್ಯೆ–ಮಂತ್ರಮಾಟಗಳ ವಿದ್ಯೆ. ಗುರುಕುಚಭಾರ–ದೊಡ್ಡ ಸ್ತನದ ಭಾರ. ಧರ್ಮಾಭಿವೃದ್ಧಿರಸ್ತು–'ಧರ್ಮ ಬೆಳೆಯುವುದಾಗಲಿ'. ಮಣಿಮಯ ವಲಯ–ಹರಳಿನ ಬಳೆ. ಪುರೂರವ ರಾಯನಂ ಮೋಹಿಸಲು ಭೂಮಿಗೆ ಬಂದ ಊರ್ವಶಿಯೋ ಎಂಬಂತೆ–ಮಿತ್ರನಾಮಕ ಸೂರ್ಯನ ಶಾಪದಿಂದ ಭೂಮಿಯಲ್ಲಿ ಪುರೂರವನೊಂದಿಗೆ ಸಂಸಾರ ಮಾಡಿಕೊಂಡಿದ್ದು, ಅವನಿಂದ ಆಯು ಮೊದಲಾದ ಆರು ಮಂದಿ ಮಕ್ಕಳನ್ನು ಪಡೆದಳು.

ದೇವರೂ–ಮೈಸೂರು ಸಂಸ್ಥಾನದಲ್ಲಿ ಇತ್ತೀಚೆಯ ವರೆಗೆ ಕೇಳಿ ಬರುತ್ತಿದ್ದ ಹಿರಿಯರನ್ನು ಸಂಬೋಧಿಸುವ ಗೌರವದ ಮಾತು. ಅವಲಂಬನ ವೃಕ್ಷ–ಹಬ್ಬಲು ಆಸರೆಯಾಗಿರುವ ಮರ. ಮಾಲತೀಲತೆ–ಜಾಜಿ ಬಳ್ಳಿ. ಅರಣ್ಯದ ಬೆಳುದಿಂಗಳು–ನೋಡಿ ಸವಿಯುವ ರಸಿಕರಿಲ್ಲದೆ ಸುಮ್ಮನೆ ಹರಡಿರುವ ಕಾಡಿನ ಬೆಳುದಿಂಗಳು. ಅಪರ್ಯುಷಿತ ಯೌವನಶಾಲಿನಿ–ಹಳೆಯದಲ್ಲದ (ಎಂದರೆ ಹೊಸದಾದ) ಯೌವನದಲ್ಲಿರುವವಳು, ನವಯೌವನವತಿ. ನಾಡಾಡಿಹೆಣ್ಣು–ಸಾಮಾನ್ಯಹೆಣ್ಣು. ಉಲೂಪಿ–ಅರ್ಜುನನು ತೀರ್ಥಯಾತ್ರೆಗೆ ಹೋಗಿದ್ದಾಗ ಈ ನಾಗಕನ್ಯೆಯನ್ನು ಮದುವೆಯಾಗಿ ಇರಾವಂತನೆಂಬ ಮಗನನ್ನು ಪಡೆದನು. ಹರಕಂಠಚ್ಛವಿ–ಈಶ್ವರನ ಕೊರಳಿನ ಹಾಲಾಹಲವಿಷದ ಕಾಂತಿ. ಅಂಗಸಂಗಸುಖ– ಶರೀರ ಸ್ಪರ್ಶದ ಸುಖ. ಸ್ವಸ್ಥನಾಗಿ–೧. ನೆಮ್ಮದಿಯಾಗಿ, ೨. ಸ್ವರ್ಗಸ್ಥನಾಗಿ. ಮುರಿದುಓಡು–ಸೋತು ಪಲಾಯನಮಾಡು. ಪಾತಾಳಕುಹರ–ಪಾತಾಳದ ಗವಿ. ನವಖಂಡಗಳ ಕುಲಾಚಲಗಳು–ಭಾರತದ ೯ ಖಂಡಗಳ (ಇಂದ್ರ, ಶ್ವೇತ, ತಾಮ್ರ, ಗಭಸ್ತಿ, ನಾಗ, ಸೌಮ್ಯ, ಗಂಧರ್ವ, ಚಾರಣ, ಭರತ ಎಂಬವು) ಕುಲಪರ್ವತಗಳು.

ಪು. ೧೬೦-೧೬೧ : ಪಕ್ಷಕುಹರ–ರೆಕ್ಕೆಗಳ ಗವಿ, ಗುಹೆ. ವೃತ್ರಶೋಣಿತಪಾನ–ವೃತ್ರಾಸುರನ ರಕ್ತದ ಪಾನ. ಮಹಾವಜ್ರ–ಇಂದ್ರನ ಘನವಾದ ವಜ್ರಾಯುಧ. ನವಕುಲಾಚಲಗಳು–ಸಪ್ತ ಇಲ್ಲವೆ ಅಷ್ಟ ಸಂಖ್ಯೆಯ ಕುಲಪರ್ವತಗಳು ಪ್ರಸಿದ್ಧವಾದವು (ನೋ. ಶ್ರೀವತ್ಸ

ನಿಘಂಟು); ಇಲ್ಲಿ ನವಸಂಖ್ಯೆಯನ್ನು ಹೇಳಿದೆ. ಭೇದಿತವಾಗು–ಕತ್ತರಿಸಿ ಹೋಗು. ವಜ್ರಪಾತ ಕ್ಷೇತ್ರ–ವಜ್ರಾಯುಧದ ಹೊಡೆತ ಬಿದ್ದ ಭೂಮಿ. ಅತಿತಪ್ತಳು–ಬಹುವಾಗಿ ಉರಿಯುವವಳು. ಮೈನಾಕ–ಹಿಮವಂತನಿಂದ ಮೇನಕೆಯಲ್ಲಿ ಜನಿಸಿದ ಹಿರಿಯ ಮಗ (ನೋಡಿ: ಪುನಾಚೂ. ಪು. ೫೦೩); ಇಂದ್ರ ಪರ್ವತಗಳ ರೆಕ್ಕೆಗಳನ್ನು ಕತ್ತರಿಸುವಾಗ ದಕ್ಷಿಣ ಸಮುದ್ರದಲ್ಲಿ ಮುಳುಗಿ ರಕ್ಷಣೆ ಪಡೆದನು. ವೇದ್ಯವಾಗು–ತಿಳಿ. ಮಧುಘೃತಗಳು ಸಮವಾಗಿ ಮಿಳಿತವಾದರೆ ಸೇವಿಸುವವರಿಗೆ ವಿಷವಾಗುವಂತೆ–೧೮ ವಿಧದ ವಿರುದ್ಧ ಆಹಾರಗಳನ್ನು ಚರಕಸಂಹಿತಾಸೂತ್ರಸ್ಥಾನದ ೨೬ನೆಯ ಅಧ್ಯಾಯದಲ್ಲಿ ಹೇಳಿದೆ (ಮಧುಸರ್ಪಿಃ ಸಮಘೃತಂ ಮಾತ್ರಯಾ ಸದ್ವಿರುದ್ಧ್ಯತೇ).

ಪು. ೧೬೩-೬೬ : ಕೃತಘ್ನ–ಮಾಡಿದ ಉಪಕಾರವನ್ನು ಮರೆಯವವನು. ಹೆಬ್ಬೇಲಿ–ದೊಡ್ಡಬೇಲಿ (ಹಿರಿದು + ಬೇಲಿ). ಸಂಗ್ರಹಿಸು–ಸ್ವಾಧೀನಕ್ಕೆ ತಂದುಕೊಳ್ಳು. ಪಾರಾವತ–ಪಾರಿವಾಳ. ಚಕೋರ–ಬೆಳುದಿಂಗಳು ಕುಡಿಯುವುದೆಂದು ಹೇಳಲಾಗುವ ಒಂದು ಕಾಲ್ಪನಿಕ ಪಕ್ಷಿ.

ದಶಮಾಶಯ

ಅಶ್ವಿನೀನಕ್ಷತ್ರವು ಕಳೆದು ಬರುವ ಸಮಯವು–ಅಶ್ವಿನಿಯಾದ ಕೂಡಲೇ ಬರುವ ಭರಣಿ ಕೃತ್ತಿಕಾ ನಕ್ಷತ್ರಗಳು ಯಾವುದೇ ಕೆಲಸಕ್ಕೆ ಒಳ್ಳೆಯದಲ್ಲವೆಂಬುದರಿಂದ ಈ ಮಾತು ಹೇಳಿದೆ. ವಿಕಲ್ಪ ತೋರು–ಬೇರೆಯಾಗಿ ತೋರು, ಸಂದೇಹವುಂಟಾಗು. ಕರವಸ್ತ್ರ–ಮೇಲುವಸ್ತ್ರ, ಟವೆಲ್. ಬತ್ತಲೆಕುದುರೆ–ಜೀನು ತಡಿ ಹಾಕದ ಕುದುರೆ. ಕಂಚುಕಿ–ದ್ವಾರಪಾಲಕ. ತಿಲೋತ್ತಮೆ–ಕಶ್ಯಪನಿಂದ ಪ್ರಾಥೆ ಎಂಬವಳಲ್ಲಿ ಜನಿಸಿದ ಅಪ್ಸರೆ ; ಮಿಕ್ಕ ಅಪ್ಸರೆಯರಿಗಿಂತ ಸುಂದರಿಯೆಂದು ಹೆಸರಾದವಳು (ಪುನಾಚೂ. ಪು. ೨೬೩). ವಾಮಹಸ್ತ–ಎಡಗೈ. ಬೇಟ–ಪ್ರೇಮ, ಪ್ರೇಮಚೇಷ್ಟೆ. ಅಪರ್ಯುಷಿತ ಯೌವನಶಾಲಿ–ನವಯೌವನಶಾಲಿ. ಲೇಖನಮುಖ–ಪತ್ರದ ಮೂಲಕ. ಸ್ವೇದಬಿಂದು–ಬೆವರುಹನಿ. ಆಸನ್ನಮೃತಿ–ಸ್ವಲ್ಪ ಕಾಲದಲ್ಲಿಯೇ ಉಂಟಾಗುವ ಸಾವು. ಮಾಲತೀಕುಸುಮ–ಜಾಜಿಹೂ. ಮೃದ್ವಂಗಿನಿ–ಕೋಮಲಶರೀರಿ. ಘಾಸಿ–ನೋವು, ಬೆದರಿಕೆ. ರತಿಕಲಾಪ್ರೌಢಿಮೆ–ಸಂಭೋಗದಲ್ಲಿ ಚತುರತೆ. ದಾವಾನಲಶಿಖಿ–ಕಾಡುಕಿಚ್ಚಿನ ಜ್ವಾಲೆ. ಮೃಗರಾಜ–ಸಿಂಹ. ತಕ್ಷಕನಿಂದ ದಷ್ಟನಾದ ಪರೀಕ್ಷಿದ್ರಾಯನಂತೆ–ಮುನಿಯ ವಿಷಯದಲ್ಲಿ ಅನುಚಿತವಾಗಿ ನಡೆದುಕೊಂಡ ಪರೀಕ್ಷಿತ್ ರಾಜನು ಶಾಪಗ್ರಸ್ತನಾಗಿ, ಸಮುದ್ರಮಧ್ಯದಲ್ಲಿ ಉನ್ನತಸೌಧದಲ್ಲಿದ್ದರೂ ಏಳನೆಯ ದಿನ ಸೂಕ್ಷ್ಮರೂಪದಲ್ಲಿ ಹಣ್ಣಿನೊಳಗೆ ಸೇರಿದ ತಕ್ಷಕನ ಮೂಲಕ ಸರ್ಪದಷ್ಟನಾಗಿ ಸತ್ತನು (ನೋಡಿ: ಪುನಾಚೂ. ೩೪೮-೪೯). ಕಿಂದಮ ಮುನಿಯ ಶಾಪದಿಂದ . . . ಪಾಂಡುರಾಯನಂತೆ–ಜಿಂಕೆಯ ರೂಪದಿಂದ ಹೆಂಡತಿಯೊಂದಿಗೆ ಕ್ರೀಡಿಸುತ್ತಿದ್ದಾಗ ಕಿಂದಮಮುನಿಯನ್ನು ಕುಂತಿ ಮಾದ್ರಿಯರೊಂದಿಗೆ ಕಾಡಿಗೆ ಬೇಟೆಗೆ ಬಂದಿದ್ದ ಪಾಂಡುರಾಜನು ಬಾಣ ಪ್ರಯೋಗಮಾಡಿ ಕೊಂದನು ; ಆತ ನಿಜರೂಪ ತಳೆದು, ಪತ್ನಿಯೊಂದಿಗೆ ಸಂಪರ್ಕ ಪಡೆದಾಗ ಪಾಂಡುವೂ ಸಾಯಲೆಂದು ಕೋಪದಿಂದ ಶಾಪವಿತ್ತನು. ವಕ್ಷಸ್ಥಳ–ಎದೆ.

ಪು. ೧೬೭-೬೮ : ಛಾದರ–ಹೊದಿಕೆ (ಪಾರಸಿ. ಚಾದರ್; ಹಿಂದಿ, ಮರಾಠಿ. ಚದ್ದರ್,

ಚಾದರ್). ಭೃಗುಪತನ–ಬೆಟ್ಟದ ಕಡಿದಾದ ಪ್ರದೇಶದಿಂದ ಕೆಳಕ್ಕೆ ಬೀಳುವುದು. ಮಹತ್ತರವಾದ ಪಾಪ ಮಾಡಿದವರು ಹಾಗೆ ಬಿದ್ದರೆ ಪಾಪಪರಿಹಾರವೆಂದು ಶಾಸ್ತ್ರಗಳಲ್ಲಿ ಹೇಳಿದೆ. ವಾರಾಂಗನೆ–ವೇಶ್ಯೆ. ಅಧರಕ್ಷತ–ಕೆಳದುಟಿಯನ್ನು ಕಚ್ಚಿದ್ದರಿಂದ ಉಂಟಾದ ಗಾಯ. ಕುಚಮಂಡಲ–ಮೊಲೆಗಳ ಪ್ರದೇಶ. ಸೆಳ್ಳುಗುರು–ಚೂಪಾದ ಉಗುರು. ಓಸರಿಸು–ಸರಿಪಡಿಸಿಕೊಳ್ಳು. ಕುರುಳು–ಮುಂಗುರುಳು. ಕೊಳ್ಳೆ ಕೊಡು–ಸೂರೆಯಾಗಲು ಅವಕಾಶಮಾಡು. ಹರಿದಾರಿ–ಸು. ಮೂರು ಮೈಲಿ ದೂರ. ಜೀನು ಮಾಡು–ಕುಳಿತುಕೊಳ್ಳಲು ಜೀನುಹಾಕು. ಅರ್ಧಯೋಜನ–ಎರಡು ಹರಿದಾರಿ ದೂರ, ಸು. ಆರು ಮೈಲಿ. ತಿಟ್ಟು–ದಿಣ್ಣೆ. ಪ್ರಾಪ್ಯಸ್ಥಳ–ಸೇರುವ ಜಾಗ. ಇಪ್ಪತ್ತುಗಳಿಗೆ–ಎಂಟು ಗಂಟೆಯ ಹೊತ್ತು (ಗಳಿಗೆ =೨೪ ನಿಮಿಷ).

ಪು. ೧೬೯-೭೦ : ವಿಕಲ್ಪ–ಪರ್ಯಾಯ. ಪುಷ್ಪವಾಟಿ–ಹೂದೋಟ. ವಾಮಕರ–ಎಡಗೈ. ಮುಂಜೆರಗು–ಸೆರಗಿನ ತುದಿ, ಮುಂಭಾಗ. ಇದ್ದಂತೆ ಹೇಳಿದರೆ ಸಮ– ರೂಢಿಯ ಮಾತಿನ ರೀತಿ ಇಲ್ಲಿದೆ. ವಾಕ್ಯೋಲ್ಲಂಘನ–ಆಡಿದ ಮಾತು ಮೀರುವುದು. ಪ್ರಬಲವಿರೋಧ–ಬಲಿಷ್ಠರೊಂದಿಗೆ ವೈಮನಸ್ಯ. ತವಕ–ಕಾತರ. ಕುಕ್ಕುಟಾಚಾರಂಗೆಯ್ಯು–ಕೋಳಿಗೆ ಇಷ್ಟವಿಲ್ಲದಿದ್ದರೂ ಅದು ಕೂಗುತ್ತಾ ಓಡುತ್ತಿದ್ದರೂ ಹುಂಜವು ಬಿಡದೆ ಅದನ್ನು ಬೆನ್ನಟ್ಟಿಕೊಂಡು ಹೋಗಿ ಮೇಲೆ ಬಿದ್ದು ಅದನ್ನು ಕೂಡುವುದು ಎಂಬುದನ್ನು ಈ ಮಾತು ಹೇಳುತ್ತದೆ. ಪರ್ವತರಾಜನು ವಿಷಕನ್ಯೆಯ ವಿಷಯದಲ್ಲಿ ಮಾಡಿದ್ದಾದರೂ ಹೀಗೆಯೇ. ಕವಿಯ ಈ ಮಾತಿಗೆ ಪ್ರೇರಣೆ ಬಹುಶಃ ವಾಲ್ಮೀಕಿ ರಾಮಾಯಣದಲ್ಲಿ ರಾವಣ-ಮಹಾಪಾರ್ಶ್ವ ಸಂವಾದದ ಈ ಮಾತು (ಯುದ್ಧಕಾಂಡ, ಸರ್ಗ ೧೩, ಪದ್ಯ ೪): ಬಲಾತ್ ಕುಕ್ಕುಟವೃತ್ತೇನ ವರ್ತಸ್ವ ಸುಮಹಾಬಲ | ಆಕ್ರಮ್ಯಾಕ್ರಮ್ಯ ಸೀತಾಂ ವೈ ತಯಾ ಭುಂಕ್ಷ್ವ ರಮಸ್ವ ಚ || (ಮಹಾಬಲನೇ, ಹುಂಜ ಮಾಡುವ ಹಾಗೆ ಬಲಾತ್ಕಾರ ಮಾಡು ; ಸೀತೆಯ ಮೇಲೇರಿ ಹೋಗಿ ಹೋಗಿ ಅವಳನ್ನು ಅನುಭವಿಸು, ರಮಿಸು). ಈ ಶ್ಲೋಕದ ಕಡೆಗೆ ನನ್ನ ಗಮನವನ್ನು ಸೆಳೆದವರು ಪ್ರೊ. ಕೆ. ಎಸ್. ನಾರಾಯಣಾಚಾರ್ಯರು. ಲೋಭಬುದ್ಧಿ– ದುರಾಸೆಯ ಬುದ್ಧಿ. ಶುಕವಾಕ್ಯಶ್ರವಣ–ಗಿಳಿಯ ದನಿ ಕೇಳಿಸಿಕೊಳ್ಳುವುದು. ಶುಕಶಾರಿಕಾ ನಿನಾದ–ಗಂಡು ಹೆಣ್ಣು ಗಿಳಿಗಳ ದನಿ. ಕದಳೀಸ್ತಂಭ–ಬಾಳೆಯ ಕಾಂಡ. ಆಕುಲಿತನಾಗು– ಖಿನ್ನನಾಗು. ಗೊತ್ತುಗಾರ–ಯಜಮಾನ, ಮೇಲ್ವಿಚಾರಕ.

ಪು. ೧೭೧-೭೪ : ಶ್ಲೇಷ್ಮರಭಸದಿಂದ ಶುಷ್ಕವಾಗು–ಕಫದ ಒತ್ತಡದಿಂದ ಒಣಗು. ತಗುಲಿರು–ಸಿಕ್ಕಿಕೊಂಡಿರು. ತಾರಕಮಂತ್ರ–ರಕ್ಷಾಮಂತ್ರ. ನಿರ್ವಾಹ– ಕಾರ್ಯಕ್ಷಮತೆ. ಶ್ವಾಸ–ಉಸಿರು. ಕಲಕಲವುಂಟಾಗು–ಕೋಲಾಹಲವುಂಟಾಗು. ಏತದರ್ಥ–ಅದೇ ಅರ್ಥ, ಅದೇ ಕಾರಣ. ಮಹೋರಗ–ಭಯಂಕರ ಸರ್ಪ. ವ್ಯವಸಾಯ–ವರ್ತನೆ, ಉದ್ಯೋಗ. ಪ್ರಮಾದಕಾರ್ಯ–ದುಡುಕಿನ ಕೆಲಸ. ಪ್ರಾಜ್ಞಂಮನ್ಯ–ಅವಿವೇಕಿ, ಬುದ್ಧಿಹೀನ. ಯತ್ನೀಕರಿಸು–ಪ್ರಯತ್ನಿಸು.

ಏಕಾದಶಾಶಯ

ಕಾಲಾಧೀನ–ಮೃತ. ಸುಖಸನ್ನಿ–ಹೆಚ್ಚಾದ ರತಿಸುಖ ಕಾರಣವಾಗಿ ಉಂಟಾಗುವ ಬುದ್ಧಿಭ್ರಮಣೆ. ದೂರ್ವಾಂಕರ–ಹುಲ್ಲಿನೆಸಳು. ಹಸಿರು ಮರಳಿಕೊಳ್ಳು–(ಸಾಯುವ ಕಾಲದಲ್ಲಿ)

ಮ್ಮೆ ಹಸಿರುಗಟ್ಟು. ಕಂಚುಕಿ-ಸೇವಕ. ಜ್ಞಾತಿ-ಸೋದರಸಂಬಂಧಿ. ಪಂಚತ್ವ-ಸಾವು. ಮಹಾಪ್ರಮಾದ-ದೊಡ್ಡ ಅಚಾತುರ್ಯ.

ಪು. ೧೭೫-೭೬ : ಗಣಿತೆ-ಲೆಕ್ಕಾಚಾರ (ಸಂಖ್ಯೆ ಕಂಡು ಹಿಡಿಯುವುದು) ಅಸು-ಪ್ರಾಣ. ಕುರುಜು-ವಿಗ್ರಹಾದಿಗಳನ್ನಿಡಲು ಮಾಡಿದ ಅಲಂಕಾರಮಂಟಪ, ಸಣ್ಣಮಂಟಪ. ಚಳಯ-ಸಿಂಪಡಿಕೆ. ವಾದ್ಯಗಳಂ ಬಾಜಿಸುವ ಸೂತ್ರದ ಬೊಂಬೆಗಳ ಸಾಲುಗಳು-ಮುಮ್ಮಡಿಯವರ ಕಾಲದ ಒಂದು ಜಾನಪದಕಲೆಯನ್ನು ಇಲ್ಲಿ ಗುರುತಿಸಬಹುದಾಗಿದೆ.

ಪು. ೧೭೭-೭೮ : ಪ್ರತಿವಾದಿ-ಪ್ರತಿಕಕ್ಷಿ. ಫಲ-ಬಹುಮಾನ, ಪ್ರಯೋಜನ. ವೀಳಯವಂ ಕೊಡಿಸು-ಮಾಡಿದ ಸಹಾಯ ಉಪಕಾರಗಳಿಗಾಗಿ ತಾಂಬೂಲ ಕೊಡಿಸುವುದು. ಮೂಲಾನುಮೂಲ ತಿಳಿ-ಕಾರಣ ಉಪಕಾರಣಗಳನ್ನು, ಅಡಿಬುಡಗಳನ್ನು ತಿಳಿ. ಸುಕೃತ-ಪುಣ್ಯ. ವತ್ಸಲಾಯನ ಸುಳ್ಳುಪ್ರಮಾಣ ಮಾಡುತ್ತಿದ್ದಾನೆ, ಇಲ್ಲಿ. ಚಂದ್ರಗುಪ್ತನಲಂಕರಿಸುವ-ಚಂದ್ರಗುಪ್ತನು ತೊಡುವಂತಹ ಎಂದು ಇಲ್ಲಿ ಆಶಯ. ಸಿಂಹಪೀಠ-ಸಿಂಹಾಸನ. ಗಜಾರೂಢನಾಗಿ-ಆನೆಯನ್ನೇರಿದವನಾಗಿ. ಕೀಲು-ಬೆಣೆ.

ಪು. ೧೭೯-೮೦ : ಕೊಡತಿ-ಬಡಿಯುವ ಒಂದು ಕಬ್ಬಿಣದ ಉಪಕರಣ. ಹುದುಗಿಸಿ-ಮುಚ್ಚಿರಿಸಿ. ಭಲ್ಲದವರು-ಈಟಿ ಹಿಡಿದವರು. ಕುಮಾರಭವನ-ಯುವರಾಜಕುಮಾರರಿಗಾಗಿ ಇರುವ ಮನೆ. ಉಷಃಕಾಲ-ಅರುಣೋದಯದ ವೇಳೆ. ಸಾಣೆಮಾಡು-ಉಜ್ಜಿ ಹರಿತಗೊಳಿಸು. ನಿಲಗನ್ನಡಿ-ಪುರುಷಾಕೃತಿಯನ್ನು ಪೂರ್ತಿ ಪ್ರತಿಬಿಂಬಿಸುವ ದೊಡ್ಡ ಕನ್ನಡಿ. ಶಸ್ತ್ರಪಾಣಿ-ಕೈಯಲ್ಲಿ ಆಯುಧ ಹಿಡಿದವನು. ತೃಣಕಾಷ್ಠಗಳು-ಹುಲ್ಲು ಕಡ್ಡಿಗಳು. ಇತ್ತಂಡ-ಎರಡು ಕಡೆ. ಅಡರಿ-ಕವಿದುಕೊಂಡು. ಶೋಧಿಸು-ಹುಡುಕು. ವರಹ-ಒಂದು ಗೊತ್ತಾದ ಬೆಲೆಯ ಚಿನ್ನದ ನಾಣ್ಯ. ಪಣ್ಯಾಂಗನೆ-ಬೆಲೆವೆಣ್ಣು, ವೇಶ್ಯೆ. ಭವನಪಾಲಕ-ಮನೆವೆಗ್ಗಡೆ, ಮನೆವಾರ್ತೆ ನೋಡಿಕೊಳ್ಳುವವನು. ಚಿತ್ರಾಜ್ಞೆ-ಚಿತ್ರಹಿಂಸೆಯ ಅಪ್ಪಣೆ. ಪರ್ಣಶಾಲೆ-ಎಲೆಗಳಿಂದಲೂ ಗರಿಗಳಿಂದಲೂ ಕಟ್ಟಿರುವ ವಾಸದ ಸಣ್ಣಮನೆ. ಅನುವರ್ತಿಸು-ಅನುಸರಿಸು.

ಪು. ೧೮೧-೮೨ : ಅರವಚಿಕೆ-ಅಜೀರ್ಣ (<ಸಂ. ಅರೋಚಕ). ಹಸ್ತವಂ ಪಿಡಿದು ನಾಡಿಗತಿಗಳಂ ನೋಡು-ರೋಗದ ಸ್ವರೂಪ ತೀವ್ರತೆಗಳನ್ನು ಗುರುತಿಸಲು ಅನುಸರಿಸುವ ಒಂದು ಕ್ರಮ ; ಕೈಯ ಮಣಿಕಟ್ಟಿನೆಡೆಯ ನಾಡಿಸ್ಥಾನದ ಮಿಡಿತವನ್ನು ಪರೀಕ್ಷಿಸಿ ಗುರುತಿಸಲಾಗುತ್ತದೆ. ಸಂಪ್ರದಾಯಸ್ಥ-ತಲೆಮಾರುಗಳಿಂದ ವೈದ್ಯವೃತ್ತಿ ನಡಸುವ ಕುಲಕ್ಕೆ ಸೇರಿದವನೆಂದು ಇಲ್ಲಿ ಆಶಯ. ವೆಗ್ಗಳವಾಗು-ಹೆಚ್ಚಾಗು. ಪಿತ್ತಾಧಿಕ್ಯದಿಂದ ಅಗ್ನಿದೀಪನವು ತಪ್ಪಿ ಅರವಚಿಕೆ ಉಂಟಾಗಿ ಇದೆ-ಪಿತ್ತಕೋಶದಲ್ಲಿ ಹುಟ್ಟುವ ಪಿತ್ತರಸದ ಏರುಪೇರಿನಿಂದ ಹಸಿವಾಗದೆ ಬಾಯಿಗೆ ರುಚಿ ಎನಿಸದಿರುವುದು. ಕಲ್ಕ-ಅರೆದು ಮಾಡಿದ ಔಷಧದ ಮಂದವಾದ ದ್ರವ. ಉಪದ್ರ-ಬಾಧೆ. ಯೋಗಚೂರ್ಣ-ರಹಸ್ಯವಾಗಿ ಸಾವುಂಟು ಮಾಡುವ ವಿಷದ ಹುಡಿ (ಯೋಗ ಶಬ್ದದ ವಿಶೇಷಾರ್ಥಕ್ಕೆ ನೋಡಿ : ಕೆ. ಎಚ್. ಧ್ರುವ, ೧೯೨೩. ಪು. ೧೨೩-೨೪); 'ಕಲ್ಪಿತಮನೇನ ಯೋಗಚೂರ್ಣಮಿಶ್ರಿತಮೌಷಧಂ ಚಂದ್ರಗುಪ್ತಾಯ' (ಮುದ್ರಾರಾ. ೨-೧೫ರ ಮುಂದೆ). ಕಂಥೆ-ಜೋಳಿಗೆ, ಕವುದಿ. ವಿಷಚುಂಬಿನೀ-ರಾಸಾಯನಿಕ ಕ್ರಿಯೆಯಿಂದ ಹೀರಿ ವಿಷವನ್ನು ಪತ್ತೆಮಾಡುವ ಒಂದು ಬಗೆಯ ಕಲ್ಲು. ವಿವರ್ಣವಾಗು-ಬಣ್ಣಗೆಡು.

ಪಾಚಕ–ಅಡಿಗೆಯವನು. ಮುಹೂರ್ತ–ಸ್ವಲ್ಪಹೊತ್ತು. ಶ್ರೇಯಶ್ಚಿಂತಕ–ಹಿತೈಷಿ. ಪಿತಾಮಹ–ತಾತ. ಆಯುಷ್ಮಂತ–ದೀರ್ಘಾಯು. ಹೆತ್ತಪ್ಪಾಜಿ–ಹೆತ್ತ ತಂದೆಯೆಂದು ಅರ್ಥವಲ್ಲ, ತಾತನೆಂದೇ ಅರ್ಥ. ಭುಜಾರ್ಜಿತ–ಸ್ವಶೌರ್ಯದಿಂದ ಸಂಪಾದಿಸಿದ್ದು. ಬಾಧ್ಯತೆ–ಹಕ್ಕುದಾರಿಕೆ. ಬುದ್ಧಿಮತಿ–ಬುದ್ಧಿಯ ಮಾತು. ಖಡ್ಗಘಾಯದಲ್ಲಿ ಬಾಣ ಬಂದು ನಟ್ಟುಕೊಂಡಂತೆ–ಒಂದು ದುಃಖದ ಜೊತೆಗೇ ಇನ್ನೊಂದು ದುಃಖ ಬರುವುದನ್ನು ಸೂಚಿಸುವ ದೃಷ್ಟಾಂತ; ಹೋಲಿಸಿ : 'ಗಂಡಸ್ಯೋಪರಿ ಸ್ಫೋಟಕಂ' (=ಕುರುವಿನ ಮೇಲೆ ಬೊಕ್ಕೆ).

ಪು. ೧೮೩-೮೪ : ಜೀತಗಾರ–ಕೂಲಿಯಾಳು, ಜೀತದಾಳು. ಸೀಗೇಬೇಲಿ–ಸೀಗೆ ಸಸ್ಯದ ಹಂಬುಗಳು ಒಂದಕ್ಕೊಂದು ಹೆಣೆದುಕೊಂಡು ದಟ್ಟವಾಗಿ ಬೇಲಿಯಂತಾಗುವುದು. ಕಳ್ಳಬಂಟರು–ಹಣಕ್ಕಾಗಿ ಕಳ್ಳ ಕೆಲಸಗಳನ್ನು ಬೇರೆಯವರಿಗೆ ಮಾಡಿಕೊಡುವವರು. ರಾಜಗೃಹ–ಅರಮನೆ. ಹಜಾರ–ತೊಟ್ಟಿ, ಪಡಸಾಲೆ. ಪಗುದಿ–ಸಾಮಂತರು ಅಧಿರಾಜರಿಗೆ ಒಪ್ಪಿಸುವ ಕಪ್ಪಕಾಣಿಕೆ. ನಿತಂಬಿನೀ–ಸ್ತ್ರೀ. ಕಂಠೀರವ–ಸಿಂಹ. ಕೈಕೂಳು–ಭಿಕ್ಷೆ. ಮೇಟಿಯಾಗಿ–ಯಜಮಾನನಾಗಿ. ಪರುಷವಾಕ್ಯ–ಕಠಿನವಾದ ಮಾತು. ಶೀಕರ–ತುಂತುರುಹನಿ. ಅರವಿಂದ ರೇಣು–ತಾವರೆ ಪರಾಗ. ಕಂದಮೂಲಾಶನ–ಗೆಡ್ಡೆ ಬೇರುಗಳ ಆಹಾರ. ಕೂಪ–ಹೊಂಡ, ಬಾವಿ. ಅಂತರಿಸು–ಬಿಡು, ತ್ಯಜಿಸು. ಚೇಟಿ–ಸೇವಕಿ. ಫಲಪರ್ಣ–ಹಣ್ಣು ಮತ್ತು ಸೊಪ್ಪು. ಸೂತಿಕಾಗೃಹ–ಹೆರಿಗೆಮನೆ. ಮಾತೃವಿಮುಕ್ತನು–ತಾಯಿಯಿಲ್ಲದವನು.

ಪು. ೧೮೫-೮೬ : ಸಂಪುಟ–ಸಣ್ಣಪೆಟ್ಟಿಗೆ. ದತ್ತಪುತ್ರ, ಸ್ವೀಕೃತಪುತ್ರ–ಇತರರಿಂದ ಶಾಸ್ತ್ರೋಕ್ತವಾಗಿ ಸ್ವೀಕಾರಮಾಡಿದ ಮಗ. ಗೋಷ್ಪಾದಮಾತ್ರ–ಹಸುವಿನ ಕಾಲು ಎಷ್ಟು ಜಾಗ ಹಿಡಿಯುವುದೋ ಅಷ್ಟು ಮಾತ್ರ ಜಾಗ, ತೀರ ಸ್ವಲ್ಪಪ್ರಮಾಣದ ಜಾಗ. ಚೋರ–ಕಳ್ಳ.

ವಲ್ಕಲಾಂಚಲ–ನಾರುಡೆಯ ಅಂಚು. ನಿಸೃತ–ಸೋರುವ. ತಮಾಲ–ಹೊಂಗೆ. ಕೃತಮಾಲ–ಕಕ್ಕೆಗಿಡ. ತಾಲ–ತಾಳೆ. ಹಿಂತಾಲ–ಒಂದು ಬಗೆಯ ತಾಳೆ, ಕಿರಿತಾಳೆ. ವಕುಳ–ಪಗಡೆಗಿಡ. ಪುನ್ನಾಗ–ಸುರಹೊನ್ನೆ. ಚಂಪಕ–ಸಂಪಿಗೆ. ಸಾಲ–ಸರ್ಜವೃಕ್ಷ. ಲೋಧ್ರ–ಅರಗಿನ ಮರ. ಚಂದನ–ಶ್ರೀಗಂಧ. ಪೂಗ–ಅಡಕೆ. ನಾಳಿಕೇರ–ತೆಂಗು. ಕರ್ಕಂಧು–ಎಲಚಿಗಿಡ, ಬದರಿ. ಕಪಿತ್ಥ–ಬೇಲ. ಪ್ರಿಯಾಳ–ಮೊರಟೀ ಗಿಡ. ಪನಸ–ಹಲಸು. ಕದಳಿ–ಬಾಳೆ. ದಾಡಿಮ–ದಾಳಿಂಬೆ. ಶಿಖಾಗ್ರ–ಮರದ ಕೊಂಬೆಯ ತುದಿ. ಅಜಗರವೃತ್ತಿ–ಹೆಬ್ಬಾವಿನಂತೆ ತಾನಾಗಿ ಬಂದದ್ದರಲ್ಲಿ ತೃಪ್ತಿಪಟ್ಟುಕೊಂಡು ಬಾಳುವುದು. ಶಯನವಂ ಮಾಡು–ಮಲಗು. ಪರಮಹಂಸರು–ಯೋಗಿಗಳು. ವದನ–ಬಾಯಿ. ಪಲ್ಲವಾಂಜಲಿ–ಚಿಗುರುಗಳ ಬೊಗಸೆ. ಉನ್ಮದ–ಸೊಕ್ಕಿದ. ಮಧುಕರ–ದುಂಬಿ. ಜಡಜನ್ಮ–ಪಂಚಭೂತಾತ್ಮಕವಾದ ಹುಟ್ಟು. ಮುಮುಕ್ಷು–ಮೋಕ್ಷ ಬಯಸುವ ಜೀವಿ.

ಅವಿಚ್ಛಿನ್ನಾಧ್ಯಯನ–ನಿರಂತರವಾದ ವ್ಯಾಸಂಗ. ಮುಖರಿತ–ಧ್ವನಿಯಿಂದ ಕೂಡಿದುದು. ಸಮಿತ್ಕುಶ–ಅರಳಿಕಡ್ಡಿ ಮತ್ತು ದರ್ಭೆ. ನೇತ್ರಜಾಡ್ಯ–ಕಣ್ಣಿನ ಆಲಸ್ಯ, ಬೇಸರ. ಕ್ರತುಶಾಲೆ–ಯಜ್ಞಮಂಟಪ. ಆಜ್ಯಾಹುತಿ–ತುಪ್ಪದ ಆಹುತಿ.

ಪು. ೧೮೭-೮೮ : ಪರಂಪರೆ–ಶ್ರೇಣಿ. ದುರಿತ–ಪಾಪ. ಚರುಗಂಧ–ಹವಿಸ್ಸಿನ (ಹೋಮಕ್ಕೆ ಸಿದ್ಧಪಡಿಸಿದ ಅನ್ನ) ಪರಿಮಳ. ಆಘ್ರಾಣಿಸು–ಮೂಸಿ ನೋಡು. ಅರ್ಧಪಕ್ವ

ಪುರೋಡಾಶ–ಅರೆಬೆಂದ ಹವಿಸ್ಸು (ತುಪ್ಪದಲ್ಲಿ ಹುರಿದು ನೀರಲ್ಲಿ ನೆನಸಿದ ಹಿಟ್ಟು). ಪ್ರಮುದಿತರು–ಸಂತುಷ್ಟರು.

ಶೃಂಗ–ಕೊಂಬು. ಪುಷ್ಕರಾಗ್ರ–ಆನೆಯ ಸೊಂಡಿಲ ತುದಿ. ಸೇಚನಂಗೈ–ಸಿಂಪಡಿಸು. ಕರಿಕಲಭ–ಆನೆಯ ಮರಿ. ವನವರಾಹ–ಕಾಡುಹಂದಿ. ಪಕ್ಷಮಾರುತ–ರೆಕ್ಕೆಗಳ ಗಾಳಿ. ಪ್ರಜ್ವಲನಂಗೈ–ಉರಿಗೊಳಿಸು. ಅವಿರತ ಶ್ರವಣಾಗೃಹೀತ ವಷಟ್ಕಾರರವ–ನಿರಂತರವಾಗಿ ಕಿವಿಗೆ ಬೀಳುವ ಮಂತ್ರಾಕ್ಷರ (ಯಜ್ಞದಲ್ಲಿ ದೇವತೆಗಳನ್ನು ಉದ್ದೇಶಿಸಿ ಹವಿಸ್ಸನ್ನು ಅರ್ಪಿಸುವಾಗ ಹೇಳುವುದು). ಉದ್ಘುಷ್ಯಮಾಣ–ಗಟ್ಟಿಯಾಗಿ ಘೋಷಿಸಿ ಹೇಳುವ. ರಥಂತರ ಸಾಮ–ಶಿವನನ್ನು ಸ್ತುತಿಸುವ ಸಾಮವೇದದ ಒಂದು ಭಾಗ. ಮೃಗೀಜಿಹ್ವಾಪಲ್ಲವ–ಹೆಣ್ಣುಜಿಂಕೆಯ ಚಿಗುರಿನಂತಹ ನಾಲಗೆ. ಋಕ್ಷಶಾಬಕ–ಕರಡಿಯ ಮರಿ. ಸ್ವಾಭಾವಿಕ ವೈರ–ಜನ್ಮಸಹಜವಾದ ದ್ವೇಷ. (ಉದಾ. ಹಾವು-ಮುಂಗಸಿ, ಬೆಕ್ಕು-ಇಲಿ ಇ.). ಇಂದೀವರ –ಕನ್ನೈದಿಲೆ, ತಾವರೆ. ಮಯೂರಬರ್ಹ–ನವಿಲುಗರಿ, ಸೋಗೆ. ದೂರ್ವಾ–ಗರುಕೆ. ಪನ್ನಗ–ಹಾವು. ವ್ಯಾಘ್ರಶಿಶು–ಹುಲಿಮರಿ. ಗೋವತ್ಸ–ಹಸುವಿನ ಕರು. ಮೃಣಾಳಮೂಲ–ತಾವರೆ ದಂಟಿನ ಬುಡ. ಪುಚ್ಛ–ಬಾಲ. ಕದಂಬ–ಸಮೂಹ.

ಡೋಲಾಲತೆ–ಉಯ್ಯಾಲೆಯಾಗಿ ತೂಗುವ ಬಳ್ಳಿ. ಚಮರೀವಾಲ–ಚಮರೀಮೃಗದ ಬಾಲ. ಮಂಡಲಾಕಾರಮಾಗಿ–ಸುರಳಿ ಸುತ್ತಿದ ಆಕೃತಿಗಳಲ್ಲಿ. ಜಟಾಭಾರ–ಜಡೆಗಳ ಸಮೂಹ, ದಟ್ಟಣೆ. ಟಿಟ್ಟಿಭಮಿಥುನ–ಲಕುಮುಕಿ ಹಕ್ಕಿಯ (ಬಾನಾಡಿ ಹಕ್ಕಿಯ) ಗಂಡು ಹೆಣ್ಣಿನ ಜೋಡಿ. ನೀವಾರ–ಕಾಡುನೆಲ್ಲು, ಕಾಡುನವಣೆ. ದಂತೋಲೂಖಲರು–ಹಲ್ಲುಗಳೇ ಒರಳುಕಲ್ಲಾದವರು. ವತ್ಸ–ಕರು. ಕ್ಷೀರಫೇನ–ಹಾಲಿನ ನೊರೆ. ಫೇನಪರು–ನೊರೆ ಕುಡಿದು ಜೀವಿಸುವವರು. ಸಮಾಧಿನಿಷ್ಠ–ಸಮಾಧಿಜ್ಞಾನದಲ್ಲಿ ಲೀನರಾದವರು.

ಸಂತರಣ ಸೇತು–ದಾಟುವ ಸೇತುವೆ. ಉಪಶಾಂತಿ–ತಾಳ್ಮೆ, ಸಹನೆ. ಮೂಲಭೂತರು –ಬೇರು (ಕಾರಣ) ಆಗಿರುವವರು. ಲೋಭಾರ್ಣವ–ಐಹಿಕಕಾಂಕ್ಷೆಯೆಂಬ ಸಮುದ್ರ. ನಿಕಷೋಪಲ–ಸಾಣೆಯ ಕಲ್ಲು. ಕಲಿಕಲ್ಮಷ–ಕಲಿಯುಗದ ಕಳಂಕ. ಲಿಪ್ತವಾಗು–ತೊಡೆದಿರು. ಇಟ್ಟಣೆಕಿ ನೋಡು–ಸ್ವಲ್ಪವಾದರೂ ಇಣಕಿ ನೋಡು.

ಇಲ್ಲಿಂದ ಮುಂದೆ ಆಶ್ರಮವರ್ಣನೆ ಶ್ಲೇಷಾಲಂಕಾರದ ಸಾಂಪ್ರದಾಯಿಕ ಗದ್ಯಸರಣಿಯಲ್ಲಿ ಬಂದಿದೆ. ಹೊಸಸಂವಿಧಾನದಲ್ಲಿ ಕಥೆಯನ್ನು ಹೇಳುವಾಗಲೂ ಹಳೆಯ ಪ್ರಬಂಧ ಕಾವ್ಯಗಳ ಶೈಲಿಲಕ್ಷಣದಿಂದ ಒಂದು ಬಗೆಯ ಗಾಂಭೀರ್ಯವನ್ನು ಕೃತಿಗೆ ತರುವ ಪ್ರಯತ್ನ ಇಲ್ಲಿ ಕಾಣುತ್ತದೆ.

ಬ್ರಹ್ಮನಂತೆ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿ ಪೂಜ್ಯವಾಗಿದೆ. ವಿಷ್ಣುವಿನಂತೆ ನರಸಿಂಹ ವರಾಹಾವತಾರಗಳನ್ನುಳ್ಳುದು (ಸಿಂಹ ಮತ್ತು ಕಾಡುಹಂದಿಗಳಿಂದ ಕೂಡಿದ್ದು). ಸಾಂಖ್ಯ ದರ್ಶನದಂತೆ ಕಪಿಲಮುನಿಯಿಂದ ಸ್ಥಾಪಿತವಾದುದು (ಕಾಡುಹಸುಗಳಿಂದ ಕೂಡಿದುದು). ಮಲಿನತೆ ಎನ್ನುವುದು ಹೋಮಾಗ್ನಿಯ ಹೊಗೆಯ ಸಾಲಿನಲ್ಲಿದೆ. ಮುಖದ ಕೆಂಪು ಗಿಣಿಗಳ ಕೊಕ್ಕುಗಳಲ್ಲಿದೆ. ತೀಕ್ಷ್ಣತೆ ದರ್ಭೆಹುಲ್ಲಿನ ತುದಿಯಲ್ಲಿದೆ. ಚಂಚಲತೆ ಎಂದರೆ ಎಲೆಗಳ ಅಲುಗಾಟ ಬಾಳೆತೋಟಗಳಲ್ಲಿದೆ. ಕಣ್ಣಿನ ಕೆಂಪು ಕೋಗಿಲೆಗಳ ಕಣ್ಣುಗಳಲ್ಲಿದೆ. ಕುತ್ತಿಗೆ ಭಾಗದಲ್ಲಿ ಹಿಡಿದುಕೊಳ್ಳುವುದು ಕಮಂಡಲುವಿನಲ್ಲಿದೆ. ಮೊಲೆ ಮುಟ್ಟುವುದು ಎಂದರೆ

ಕೆಚ್ಚಲು ಹಿಡಿಯುವುದು ಹಸುಗಳ ಹಾಲು ಕರೆಯುವಾಗ ಉಂಟು. ಪಕ್ಷಪಾತ ಎಂದರೆ ಪುಕ್ಕಗಳುದುರುವುದು ಕಾಡುಕೋಳಿಗಳಲ್ಲಿದೆ. ಭ್ರಾಂತಿ ಎಂದರೆ ಸುತ್ತುವುದು ಅಗ್ನಿಗೆ ಪ್ರದಕ್ಷಿಣೆ ಬರುವಾಗ ಉಂಟು. ರಾಮನ ಪ್ರೀತಿಯು ರಾಮಾಯಣದಲ್ಲಿದೆ. (ಜನರಿಗೆ ಸ್ತ್ರೀಯರ ವಿಷಯದಲ್ಲಿ ಅತ್ಯಾಶೆಯಿಲ್ಲ, ರಾಮೆ–ಸ್ತ್ರೀ). ಶಕುನಿಯ ವಧೆ ಮಹಾಭಾರತ ದಲ್ಲಿದೆ (ಹಕ್ಕಿಗಳ ವಧೆ ಆ ಆಶ್ರಮದಲ್ಲಿಲ್ಲ. ಶಕುನಿ–ಹಕ್ಕಿ). ಎಳೆಯ ಹಕ್ಕಿಗಳು ಕೆಳಗೆ ಬೀಳುವುದು ಮರಗಳಲ್ಲಿ ಕಾಣುತ್ತದೆ (ಬ್ರಾಹ್ಮಣರ ಪತನವೆಂಬುದು ಆಶ್ರಮದಲ್ಲಿಲ್ಲ. ದ್ವಿಜ–ಬ್ರಾಹ್ಮಣ). ಗೋರಿಗೆ ಎಂದರೆ ಬೇಟೆಗಾರರ ಸಂಗೀತದ ಮೋಡಿಗೆ ಮರುಳಾಗಿ ಬಲಿಯಾಗುವುದು ಜಿಂಕೆಗಳಲ್ಲಿದೆ (ಆಶ್ರಮವಾಸಿಗಳಲ್ಲಿ ಸಂಗೀತದ ವ್ಯಾಮೋಹವಿಲ್ಲ). ಬಿಲ್ವಪತ್ರೆಯ ಕಾಯಿಯ ಆಸೆ ಕೋತಿಗಳಲ್ಲಿದೆ (ಸಂಪತ್ತಿನ ಪ್ರಯೋಜನದ ಕಾಂಕ್ಷೆ ಅಲ್ಲಿ ಆಶ್ರಮವಾಸಿಗಳಿಗಿಲ್ಲ). ಹೆಡೆಯ ಮೇಲಿನ ಪ್ರೀತಿ ಹಾವುಗಳಲ್ಲಿ ಉಂಟು (ಜನರು ಭೋಗ ಗಳ ಮೇಲೆ ಆಸೆಯುಳ್ಳವರಲ್ಲ). ನರ್ತನರೀತಿ ನವಿಲುಗಳಲ್ಲಿದೆ (ಆಶ್ರಮವಾಸಿಗಳಲ್ಲಿ ನಾಟ್ಯದ ವ್ಯಾಮೋಹವಿಲ್ಲ). ಕೆಳಮುಖವಾಗಿ ಸಾಗುವುದು ಮರದ ಬೇರುಗಳಲ್ಲಿದೆ (ಅಧೋಗತಿ ಜನರ ಶೀಲದಲ್ಲಿಲ್ಲ).

ವಾಪೀಹಂಸ–ಕೊಳದ ಹಂಸ. ನೀವಾರ ಬಲಿ–ಕಾಡುನೆಲ್ಲು ಅಥವಾ ಕಾಡುನವಣೆಯ ಅನ್ನದಿಂದ ಸಿದ್ಧಮಾಡಿದ ಬಲಿ. ವಾಚಿಸು–ಪಠಿಸು. ಶ್ರಾದ್ಧಕಲ್ಪ–ಶ್ರಾದ್ಧದ ವಿಧಿವತ್ತಾದ ಪ್ರಯೋಗ. ಉಪನಿಷತ್ತು–ವೇದವಾಙ್ಮಯದಲ್ಲಿ ಬ್ರಹ್ಮನ ಸ್ವರೂಪವನ್ನು ನಿರೂಪಿಸುವ ಜ್ಞಾನಕಾಂಡ, ವೇದಾಂತಸಾಹಿತ್ಯ. ಶತರುದ್ರೀಯ–ಯಜುರ್ವೇದದಲ್ಲಿ ಬರುವ ಪ್ರಸಿದ್ಧ ವಾದ ಶಿವಸ್ತೋತ್ರ. ಮಹಾಮಂತ್ರಂಗಳು–ಪಂಚಾಕ್ಷರಿ ಷಡಕ್ಷರಿ ಮುಂತಾದ ತಾರಕ ಮಂತ್ರಗಳು. ಹರಿ ಹರ ಪಿತಾಮಹ–ವಿಷ್ಣು ಶಿವ ಮತ್ತು ಬ್ರಹ್ಮ. ಸಾಂಖ್ಯ–ಷಡ್ದ ರ್ಶನಗಳಲ್ಲಿ ಒಂದು, ಕಪಿಲ ಇದರ ಆಚಾರ್ಯ. ಯೋಗ–ಷಡ್ದರ್ಶನಗಳಲ್ಲಿ ಒಂದು, ಪತಂಜಲಿ ಇದರ ಆಚಾರ್ಯ. ಶಾಸ್ತ್ರ–ತರ್ಕ ವೇದಾಂತ ಮೀಮಾಂಸಾ ವ್ಯಾಕರಣ ಜ್ಯೋತಿಷ ಧರ್ಮಶಾಸ್ತ್ರ ಎಂಬ ಆರು ಶಾಸ್ತ್ರಗಳು. ಪಾಷಂಡ ಮಂತ್ರಕ್ರಿಯೆ–ವೈದಿಕ ಸಂಪ್ರದಾಯ ವಿರೋಧಿಯಾದ ಮಂತ್ರಗಳ ಆಚರಣೆ.

ಕೈವಲ್ಯ–ಮುಕ್ತಿ. ಕರಗತವಾಗು–ಕೈವಶವಾಗು. ಸಾಲೋಕ್ಯಾದಿ ಮುಕ್ತಿಗಳು–ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ ಎಂಬ ನಾಲ್ಕು. ಸಂಘ–ಸಮೂಹ. ವಾನಪ್ರಸ್ಥ–ತಪಸ್ಸು ಪೂಜೆ ಮೊದಲಾದವುಗಳಲ್ಲಿ ನಿರತವಾಗಿ ಶೇಷಾಯುಷ್ಯವನ್ನು ಕಳೆಯಲು ಬ್ರಹ್ಮಚರ್ಯ ಗೃಹಸ್ಥ ಈ ಆಶ್ರಮಗಳನ್ನು ಮುಗಿಸಿದ ಮೇಲೆ ವ್ಯಕ್ತಿ ಕಾಡಿಗೆ ಹೋಗಿ ನೆಲಸುವುದು. ಮಧ್ಯಾಹ್ನಮಾರ್ತಾಂಡಾವಲೋಕನ–ನಡುಹಗಲ ಸೂರ್ಯನನ್ನು ನೋಡುವುದು.

ಪು. ೧೮೯-೧೯೨ : ಜ್ಞಾನಯೋಗ–ಭಕ್ತಿಯೋಗ ಕರ್ಮಯೋಗಗಳ ಹಾಗೆ ಜ್ಞಾನ ಯೋಗವೆಂಬುದು ಜ್ಞಾನಮಾರ್ಗದಿಂದ ಸಿದ್ಧಿಪಡೆಯಲು ಉದ್ದೇಶಿತವಾದ ಒಂದು ಸಾಧನೆಯ ಪದ್ಧತಿ. ಅನುಚರ–ಸೇವಕ. ತ್ರಿಷವಣಸ್ನಾನ–ಪ್ರಾತಃಕಾಲ ಮಧ್ಯಾಹ್ನ ಸಾಯಂ ಕಾಲಗಳೆಂಬ ಮೂರು ಹೊತ್ತುಗಳಲ್ಲಿ ಮಾಡುವ ಸ್ನಾನ. ಕ್ಷುತ್ಪಿಪಾಸೆ–ಹಸಿವು ಬಾಯಾರಿಕೆ. ಶಮನಗೊಳಿಸು–ಇಂಗಿಸು, ನಿವಾರಿಸು. ಆಯುಃಕಲೆ–ಆಯುಸ್ಸಿನ ಅಂಶ. ನಿತ್ಯಕರ್ಮ–ಸ್ನಾನ ಸಂಧ್ಯಾವಂದನೆ ಮತ್ತು ದೇವತಾರ್ಚನೆಗಳೆಂಬ ನಿತ್ಯವಿಧಿಗಳು. ಶುದ್ಧಾಚಮನವಂ

ಮಾಡು–ಆತ್ಮಶುದ್ಧಿಗಾಗಿ ಅಂಗೈಗುಳಿಯಲ್ಲಿ ಶುದ್ಧೋದಕವನ್ನು ಹಾಕಿಕೊಂಡು ಮಂತ್ರಪೂರ್ವಕವಾಗಿ ಕುಡಿಯುವುದು. ಸ್ಥಿರಾಸನವಂ ಬಲಿ–ಅಲುಗಾಡದ ಹಾಗೆ ಕುಳಿತುಕೊಳ್ಳುವ ಒಂದು ಆಸನ ಹಾಕು. ಶ್ವಾಸವಂ ನಿರೋಧಿಸು–ಉಸಿರನ್ನು ಕಟ್ಟು. ಸುಷುಮ್ನಾಮಾರ್ಗ–ಇಡಾ ಪಿಂಗಳಾ ಸುಷಮ್ನಾ ಎಂಬ ದೇಹದ ಪ್ರಮುಖ ನಾಡಿಗಳಲ್ಲಿ ಒಂದಾದ ಬೆನ್ನುಹುರಿಯಲ್ಲಿರುವ ನಾಡಿಯ ಮಾರ್ಗ. ನಿರ್ವಿಕಲ್ಪಬ್ರಹ್ಮ–ಭೇದಭಾವವಿಲ್ಲದ, ಮಾರ್ಪಾಟಿಲ್ಲದ ಅತೀತ ದೈವಿಕಶಕ್ತಿ. ಏಕರಸವಾಗು–ತಾದಾತ್ಮ್ಯಹೊಂದು. ಬ್ರಹ್ಮರಂಧ್ರ–ನಡುನೆತ್ತಿಯಲ್ಲಿರುವ ಸೂಕ್ಷ್ಮವಾದ ರಂಧ್ರ ; ಗರ್ಭದಲ್ಲಿ ಶರೀರರಚನೆಯೆಲ್ಲ ಆದ ಮೇಲೆ ಚೈತನ್ಯವು ಈ ಮಾರ್ಗದಿಂದ ಪ್ರವೇಶಿಸುವುದೆಂದೂ ಸಾಯುವಾಗ ಈ ಮಾರ್ಗದಿಂದ ಜೀವ ಹೋದವರಿಗೆ ಬ್ರಹ್ಮಲೋಕಪ್ರಾಪ್ತಿಯೆಂದೂ ಐತರೇಯ ಮತ್ತು ಕಠಶ್ರುತಿಗಳಲ್ಲಿ ಹೇಳಿದೆ. ಭವ–ಸಂಸಾರ. ಬಲಿದಿರು–ದೃಢವಾಗಿ ಹಾಕಿಕೊಂಡಿರು. ಛಿದ್ರ–ಸಂದು, ಅವಕಾಶ. ಯೋಗವಟ್ಟ–ಯೋಗಿ ಧ್ಯಾನಕಾಲದಲ್ಲಿ ಕುಳಿತುಕೊಳ್ಳಲು ಅನುಕೂಲವಾಗುವಂತೆ ಬೆನ್ನು ಮತ್ತು ಮೊಳಕಾಲುಗಳನ್ನು ಸೇರಿಸಿ ಸುತ್ತಿಕೊಳ್ಳುವ ಬಟ್ಟೆ. ರತ್ನತಾಟಂಕ–ರತ್ನದ ಕರ್ಣಕುಂಡಲ. ಅನರ್ಘ್ಯ–ಅಮೂಲ್ಯ. ಮುಕ್ತಾಹಾರ–ಮುತ್ತಿನ ಸರ. ಕ್ಷಾಳನಂಗೈ–ತೊಳೆ. ಔಪಾಸನಾಗ್ನಿ–ಬೆಳಗ್ಗೆ ಮತ್ತು ಸಂಜೆ ಮಾಡುವ ಅಗ್ನಿಕಾರ್ಯಕ್ಕಾಗಿ ಗೃಹಸ್ಥನ ಮನೆಯಲ್ಲಿ ಸದಾ ಉರಿಯುತ್ತಿರುವ ಅಗ್ನಿ. ಅನುಗಮನ–ಸಹಗಮನ, ಮೃತನಾದ ಪತಿಯೊಡನೆ ಸತಿ ಚಿತೆಯೇರುವುದು. ರಾಜಯೋಗ–ನಾಲ್ಕು ಬಗೆಯ ಯೋಗಮಾರ್ಗಗಳಲ್ಲಿ ಒಂದು ; ಸುಲಭವಾಗಿ ಅಭ್ಯಾಸ ಮಾಡಬಹುದಾದ ಒಂದು ಯೋಗ. ಭೋಜನಶೇಷ–ತಿಂದು ಉಳಿದುದು.

ದ್ವಾದಶಾಶಯ

ಬಾಷ್ಪದ ಕೋಡಿ–ಕಣ್ಣೀರಿನ ಕಾಲುವೆ. ವಿದೇಶಗತನಾಗು–ಬೇರೆ ದೇಶಕ್ಕೆ ತೆರಳು. ಕಾಲಾಧೀನರಾಗು–ಮೃತರಾಗು. ನಂಜು ತಟ್ಟು–ವಿಷದ ಸೋಂಕು ತಗಲು. ಕಡಮೆ ಅಲ್ಪ ಪ್ರಯತ್ನಗಳು–ಉಳಿದ ಸಾಮಾನ್ಯಪ್ರಯತ್ನಗಳು.

ಪು. ೧೯೩-೯೬ : ಪೌರುಷ–ಪುರುಷಪ್ರಯತ್ನ. ಪಿತೃಕ್ಲೇಶ–ತಂದೆಯ ವಿಯೋಗದ ನೋವು. ಲೋಕಾಂತರಸ್ಥ–ಮೃತ. ಭೋಗಸ್ತ್ರೀ–ಉಪಪತ್ನಿ, ಬಂಗಾರದವಳು. ಅಕ್ಷಮಾಲೆ–ಜಪಸರ. ನಿಷ್ಕಂಟಕವಾಗು–ನಿರ್ಬಾಧಕವಾಗು. ಪಿತೃಕರ್ಮ–ಅಪರಕರ್ಮ. ದುಷ್ಟ ಮಾರ್ಜಾಲ–ಕೆಟ್ಟಬೆಕ್ಕು. ಉಷ್ಣೋದಕ–ಬಿಸಿನೀರು. ಈ ಹೀನವಾದ ಉಪಮಾನ ಬಾಗುರಾಯಣನ ಕ್ಷುದ್ರಬುದ್ಧಿಯನ್ನೂ ಅವನ ಮೇಲೆ ಆಗಿರುವ ಚಾಣಕ್ಯನ ಪ್ರಭಾವವನ್ನೂ ಹೇಳುತ್ತದೆ. ಅನುವರ್ತಿಸು–ಅನುಸರಿಸು. ಸರ್ವಾಧಿಕಾರ–ಮೈಸೂರು ಒಡೆಯರ ಕಾಲದ ಪ್ರಧಾನಹುದ್ದೆಯನ್ನು ಹೇಳುವ ಮಾತು ಇದು. ಕರ್ತೃ–ಒಡೆಯ.(ಸಂ. <ಕರ್ತೃ).

ಪು. ೧೯೭-೨೦೦ : ತಕ್ಕೈಸು–ಆಲಿಂಗಿಸು. ಮಜ್ಜನಗೃಹ–ಸ್ನಾನದ ಮನೆ. ಲೋಕದವರು–ಲೌಕಿಕರು, ಸಾಮಾನ್ಯಜನ. ಅವಲಂಬ–ಅವಲಂಬನೆ. ಛದ್ಮನೆ–ಕಪಟ, ಮೋಸ. ಮಕುಟಮಣಿಪ್ರಭಾನೀರಾಜತಮಾದ–ಕಿರೀಟರತ್ನದ ಕಾಂತಿಯಿಂದ ಬೆಳಗುವ. ಸಮಯೋಚಿತಜ್ಞ–ಯಾವ ವೇಳೆ ಹೇಗೆ ಮಾತಾಡುವುದು ಎಂಬುದನ್ನು ತಿಳಿದವನು. ವಿಹಿತ–ಸೂಕ್ತ. ತುರಾಯಿ–ಪೇಟ ಮೊದಲಾದವುಗಳಿಗೆ ಸಿಕ್ಕಿಸುವ ಅಲಂಕಾರದ ಕುಚ್ಚು. ಉಷ್ಣೀಷಧಾರಣೆ–

ಶಿರೋವೇಷ್ಟನ (ಪಾಗು, ಪೇಟ) ಧರಿಸುವುದು. ಕಟಕ–ಕಡಗ. ಅಂಗುಲೀಯಕ–ಉಂಗುರ. ಆಯಕಟ್ಟು–ಪೂರ್ಣವಾದ ಆಯವ್ಯಯದ ಅಧಿಕೃತವಾದ ಏರ್ಪಾಡು. ಕಟ್ಟುಕರಣಿಕ–ದಫ್ತರುಗಳನ್ನು ನೋಡಿಕೊಳ್ಳುವ ಅಥವಾ ಶಾಸನಬದ್ಧವಾದ ಆಜ್ಞೆ ಏರ್ಪಾಡುಗಳನ್ನು ಬರೆದುಕೊಳ್ಳುವ ಗುಮಾಸ್ತ. ಬೇಹಿನ ಚಾವಡಿ–ಗುಪ್ತಚರ್ಯೆ ಕೆಲಸದ ಮೇಲ್ವಿಚಾರಣೆಯ ಇಲಾಖೆ (ಚಿಕ್ಕದೇವರಾಜರ ಕಾಲದಿಂದ ಚಾಲ್ತಿಯಲ್ಲಿ ಬಂದ ಒಡೆಯರ ಒಂದು ಆಡಳಿತ ವ್ಯವಸ್ಥೆ). ಗೊತ್ತುಗಾರ–ವ್ಯವಸ್ಥಾಪಕ. ಸರ್ವಾಧಿಕಾರಿ–ರಾಜನ ಪರವಾಗಿ ರಾಜ್ಯವ್ಯವಹಾರಗಳನ್ನು ನೋಡಿಕೊಳ್ಳುವ ಪ್ರಧಾನ ಅಧಿಕಾರಿ.

ತ್ರಯೋದಶಾಶಯ

ಪು. ೨೦೧-೨೦೪ : ಸಮ್ಮಾನ–ಗೌರವ, ಮರ್ಯಾದೆ. ದಾಪಿನಾನೆ–ಪಳಗಿಸಿದ ಆನೆ. ಕಟ್ಟಿ ಇರಿಸು–ಥೈಲಿಗಳನ್ನಾಗಿ ಮಾಡು. ಕರಣಿಕ–ಗುಮಾಸ್ತೆ. ಬೊಕ್ಕಸ–ಭಂಡಾರ, ಕೋಶಾಗಾರ. ಮೊಹರು–ಒಂದು ಬಗೆಯ ಚಿನ್ನದ ನಾಣ್ಯ (ಪಾರ. ಮುಹರ್, ಮರಾಠಿ. ಮೋಹರ್, ಮೋಹೋರ್). ಹುಂಡಿಕಾಗದ–ಹಣ ಕೊಡುವಂತೆ ನಮೂದಿಸಿದ ಪತ್ರ, ಹಣದ ಅಧಿಕೃತ ದಾಖಲೆಪತ್ರ. ಪ್ರಸ್ಥಾನವಂ ಮಾಡು–ಪ್ರಯಾಣವನ್ನು ಮಾಡು. ಉಪಾಧಿ–ನಿಮಿತ್ತ, ಕಾರ್ಯಾಂತರ. ಸಲಾಮಿಗೆ ಕಳುಹಿಸು–(ಪ್ರತಿನಿಧಿಗಳನ್ನು) ಗೌರವನಿವೇದನೆಗೆ ಕಳುಹಿಸಿಕೊಡು (ಹೈದರ್-ಟಿಪ್ಪು ಆಳ್ವಿಕೆಯ ಕಾಲದ ರಿವಾಜು ಎಂದು ವಿದಿತ); 'ಸಲಾಮಿಗೆ ಹೋಗು', 'ಸಲಾಮಿಗೆ ಬರು' ಇವೂ ಹೀಗೆಯೇ.

ಮುಖ ತೊರೆದುಹೋಗು–ಬಾಂಧವ್ಯದ ಋಣ ತಪ್ಪಿಹೋಗು. (೧೨ ವರ್ಷಗಳ ಬಳಿಕ ಸಮೀಪಬಂಧುಗಳು ಪರಸ್ಪರವಾಗಿ ಭೇಟಿಯಾಗುವುದಾದರೆ ಅದಕ್ಕೆ ಶಾಸ್ತ್ರವಿಧಿಯನ್ನು ಆಚರಿಸಿ ಆಮೇಲೆ ಭೇಟಿಯಾಗಬೇಕು ಎಂದು ಪ್ರತೀತಿ). ಕೀಕಟದೇಶ–ಗೊಂಡಾರಣ್ಯ ಪ್ರದೇಶ. ಪಂಜಿನ ಕಳ್ಳರು–ರಾತ್ರಿಯ ವೇಳೆಯಲ್ಲಿ ಪಂಜು ಹಿಡಿದುಕೊಂಡು ಗುಂಪಾಗಿ ನುಗ್ಗಿ ಬಂದು ತುಡುಗುಮಾಡುವವರು, ರಾತ್ರಿಯ ವೇಳೆಯ ದರೋಡೆಕೋರರು. ಮುಖಾಶೀಗ್ರಾಮ–ತಾನು ಮಾಡಿದ ಸೇವೆಗೆ ಪ್ರತಿಯಾಗಿ ರಾಜನಿಂದ ಪಡೆದ ಇನಾಂ ಗ್ರಾಮ ಅಥವಾ ಭೂಮಿ. ಅತಂತ್ರವಾಗು–ದಿಕ್ಕಿಲ್ಲವಾಗು. ಆರೋಗ್ಯಸ್ನಾನ–ಕಾಯಿಲೆ ವಾಸಿಯಾದ ಮೇಲೆ ಮಾಡುವ ಸ್ನಾನ. ಕ್ಷಯಸೂತಕನಿವೃತ್ತಿ–ಸಾವಿನ ಸಂಬಂಧವಾದ ಮೈಲಿಗೆ ಕಳೆಯುವುದು.

ಮಾತೃ–ತಾಯಿ. ಪ್ರಾಣೋತ್ಕ್ರಮಣಸಮಯ–ಪ್ರಾಣ ಹೋಗುವ ಸಮಯ. ಸರ್ವಪ್ರಾಯಶ್ಚಿತ್ತ–ಊರ್ಧ್ವೋಚ್ಛಿಷ್ಟ, ಅಧೋಚ್ಛಿಷ್ಟ, ಅಂತರಾಮರಣ, ಅಸ್ನಾನಮರಣ, ಖಟ್ವಾದಿ ಮರಣ, ಪರ್ಯುಷಿತ ಶವದಹನ ಎಂಬ ಆರು ವಿಧದ ದೋಷಗಳಿಗೆ ಪ್ರಾಯಶ್ಚಿತ್ತಗಳು. ಪ್ರಥಮದರ್ಶನ–ಮೊದಲ ಸಲ ಕಾಣಿಸಿಕೊಳ್ಳುವುದು. ಮಂಕುಬೂದಿ–ತಾಂತ್ರಿಕಸಿದ್ಧಿ ಪಡೆಯಲು ಇಲ್ಲವೆ ಇಂದ್ರಜಾಲಿಗರು ಜನರ ಮನಸ್ಸನ್ನು ವಶಪಡಿಸಿಕೊಳ್ಳಲು ಪ್ರಯೋಗಿಸುವರೆಂದು ನಂಬಲಾಗುವ ಮಂತ್ರದ ಬೂದಿ, ವಶೀಕರಣಭಸ್ಮ; ತಾತ್ಪರ್ಯಾರ್ಥ ಮೋಸ ಮಾಡುವುದು, ವಂಚಿಸುವುದು ಎಂದು. ವ್ಯಾಜಾಂತರ–ಬೇರೆ ಬೇರೆ ನೆಪ. 'ಮುಖವಂ ತಪ್ಪಿಸಿಕೊಳ್ಳು'–ಕಾಣಿಸಿಕೊಳ್ಳದಿರು. ವ್ಯಸನಾಭ್ಯುದಯ–ಆಪತ್ತು

ಸಂಪತ್ತುಗಳು.

ಪು. ೨೦೫-೨೦೬ : 'ಆಯುಧಗಳಂ ಮುಟ್ಟಿಸಿಕೊಳ್ಳು'-ಯೋಧರಿಂದ ಪ್ರಮಾಣ ಮಾಡಿಸಿಕೊಳ್ಳುವ ಒಂದು ಕ್ರಮ. ಕೃತಸಂಕೇತರು–ಮೊದಲೇ ಏರ್ಪಾಟು ಮಾಡಿಕೊಂಡವರು. ಪುಂಡುಪಾಳೆಯಗಾರ–ತುಂಟನಾದ ತುಂಡರಸು. 'ಡಂಗುರವಂ ಹಾಕಿಸಿ ಸಾರಿಸು' –ಸಂಚಾರದ ರಸ್ತೆ, ಕೂಡುಜಾಗಗಳಲ್ಲಿ ತಮಟೆ ಮೊದಲಾದ ವಾದ್ಯಗಳನ್ನು ಬಾರಿಸಿ ಅಥವಾ ಜಾಗಟೆ ಬಡಿದು ಯಾವುದಾದರೂ ಒಂದು ವಿಷಯವನ್ನು ಸಾರ್ವಜನಿಕರ ಗಮನಕ್ಕೆ ತರುವುದು. 'ಚಿತ್ತಕ್ಕೆ ವೇದ್ಯವಾಗು'–ಮನವರಿಕೆಯಾಗು. ಸೇನಾರಂಜಕ–ಸೇನೆಯನ್ನು ಸಂತೋಷದಲ್ಲಿಡುವವನು. ಭರವಸ–ನಂಬಿಕೆ.

ಪು. ೨೦೭-೨೦೮ : ನಿಯಾಮಕ–ಕೆಲಸ ಹೇಳುವವನು, ನಿಯಮಿಸುವವನು. ನಿರ್ವಾಹಾನುಗುಣ್ಯವಾಗಿ–ಕಾರ್ಯನಿರ್ವಹಣೆಗೆ ಅನುಗುಣವಾಗಿ. ವಾಸಗೃಹ–ವಾಸದ ಮನೆ. ಓಲಗ–ಸಭಾಗೃಹ. ಹಜಾರ–ಅಂಗಳ. ದೀನಾನಾಥವಿಪನ್ನರು–ಬಡವರು, ನೋಡಿಕೊಳ್ಳುವ ಜನರಿಲ್ಲದವರು ಮತ್ತು ಕಷ್ಟಕ್ಕೆ ಸಿಕ್ಕಿದವರು. ವಿತರಣಶಾಲಿ–ಉದಾರಿ. ಸೇನಾನಿವೇಶ–ಸೈನ್ಯ ನಿಲ್ಲುವ ಸ್ಥಾನ. ಅನುಗುಣ್ಯವಲ್ಲದ–ಅರ್ಹತೆಗೆ ಯೋಗ್ಯವಲ್ಲದ. ಮನುಷ್ಯವಾಸಿ–ಯೋಗ್ಯತೆ, ಪ್ರಸಿದ್ಧಿ.

ಪು. ೨೦೯-೨೧೦ : ಪ್ರತ್ಯಾಶೆ–ತಾನು ಬಯಸಿದ್ದು ತನಗೆ ದೊರೆಯುವುದೆಂಬ ನಂಬಿಕೆ. ಮೂಲೋತ್ಪಾಟನಂಗೆಯ್–ಬೇರುಸಹಿತ ಕೀಳು, ಸಂಪೂರ್ಣವಾಗಿ ನಾಶಮಾಡು. ಧ್ರುವಜಲ –ಸ್ಥಿರವಾದ ನೀರಿನ ನೆಲೆ. ಪ್ರಾಧಾನ್ಯಶಸ್ತ್ರ–ಪ್ರಧಾನಪದವಿಯ ಲಾಂಛನವಾದ ಶಸ್ತ್ರ. ಅನ್ಯಾದೃಶ–ಬೇರೆ ಕಡೆ ಕಾಣದಿರುವುದು. ಅರ್ಥಾರ್ಥಿ–ದ್ರವ್ಯಾಪೇಕ್ಷಿ. ಚಿತ್ರಪಟಗಳಂ ತೋರಿಸಿ–ಚಿತ್ರಪಟಗಳ ಮೂಲಕ ಜನರನ್ನು ರಂಜಿಸುತ್ತ, ಅವರ ಗಮನ ಅವುಗಳ ಮೇಲೆ ಇದ್ದಾಗ ಅವರನ್ನು ಮೋಸ ಮಾಡುತ್ತಿದ್ದುದು ಶತಮಾನಗಳಿಂದ ಉಂಟು ಎನ್ನುವುದಕ್ಕೆ ಪ್ರಾಚೀನವಾದ ಕನ್ನಡ ಸಾಹಿತ್ಯದ ಕೃತಿಗಳಲ್ಲಿ ನಿದರ್ಶನಗಳುಂಟು (ಉದಾಹರಣೆಗೆ : 'ವಡ್ಡಾರಾಧನೆ'ಯಲ್ಲಿ ಸುಕುಮಾರ ಸ್ವಾಮಿಯ ಕಥೆ ನೋಡಬಹುದು); ಸ್ವರ್ಗನರಕಗಳ ಚಿತ್ರಪಟಗಳನ್ನು ಈಚಿನ ಕೆಲವು ದಶಕಗಳ ಹಿಂದೆ ಸಂಪ್ರದಾಯಸ್ಥರ ಮನೆಗಳಲ್ಲಿ ಕಾಣಬಹುದಾಗಿತ್ತು. ಸುಕೃತಿಗಳು–ಪುಣ್ಯಶಾಲಿಗಳು. ಪ್ರಾಪ್ಯಸ್ಥಾನ–ಸೇರಬೇಕಾದ ಸ್ಥಾನ. ಮರಾಳಪಕ್ಷಿ–ಹಂಸ. ಭಾವಚಿತ್ರವು–ಈ ಶಬ್ದದ ಪ್ರಯೋಗ ಗಮನಾರ್ಹ. ಪ್ರತಿಕೃತಿ–ಬಣ್ಣದ ಚಿತ್ರ ಎಂಬರ್ಥದಲ್ಲಿ ಈ ಮಾತು ಇಲ್ಲಿ ಬಂದಿದೆ. ಲೋಕಾಯತಮತಸ್ಥ–೬ವಿಧದ ನಾಸ್ತಿಕದರ್ಶನಗಳಲ್ಲಿ ಒಂದಾದ ಚಾರ್ವಾಕಮತಕ್ಕೆ ಸೇರಿದವನು, ನಿರೀಶ್ವರವಾದಿ ಅಥವಾ ಅನಾತ್ಮವಾದಿ. ಬುದ್ಧಮತಸ್ಥ–ಬೌದ್ಧಮತಾನುಯಾಯಿ. ಅಂತರಗೃಹ–ಒಳಮನೆ.

ಪು. ೨೧೧-೧೨ : ಕಂಕಣರವದಿಂ ಮುಖರಿತಮಾದ–ಬಳೆಯ ಸದ್ದಿನಿಂದ ಸದ್ದು ಹೆಚ್ಚಿದ. ನಂದರ, ಅಮಾತ್ಯ ರಾಕ್ಷಸರ ಭಾವಚಿತ್ರಗಳು–ಮುಮ್ಮಡಿಯವರ ಕಾಲದಲ್ಲಿ ಬರಸಲಾದ ಗಣ್ಯರ ಭಾವಚಿತ್ರಗಳು ಉಂಟು ಎನ್ನುವುದನ್ನಿಲ್ಲಿ ಗಮನಿಸಬಹುದು. ವ್ಯಕ್ತಿಯ ಆಕೃತಿಯನ್ನು ಎದೆಯ ಮಟ್ಟದವರೆಗೆ ತೋರಿಸುವ ಚಿತ್ರಗಳು, ಇವು. ಈ ಶಬ್ದದ ಬಳಕೆ ಮೊದಲು 'ನವಮೋಹನ ತರಂಗಿಣಿ'ಯಲ್ಲಿ ಆಗಿದೆ (ನೋಡಿ : ಕನ್ನಡ ನಿಘಂಟು, ಸಂ. ೭). ವ್ಯಕ್ತವಾದ–ಎದ್ದುಕಾಣುವ. ಅಷ್ಟಕೋಣದ ಮೊಹರ–ಎಂಟು ಮೂಲೆಗಳಿರುವ

ಮುದ್ರೆಯುಂಗುರ. ಪ್ರಚ್ಛನ್ನರಾಗಿ–ಮೈಮರಸಿಕೊಂಡವರಾಗಿ. ಸೂಲಗಿತ್ತಿ–ಹೆರಿಗೆ ಮಾಡಿಸುವ ಹೆಂಗುಸು. ತಳವಾರ–ನಗರರಕ್ಷಕ, ಕಾವಲುಗಾರ. ದಿನಗಟ್ಟೆ–ದಿನದಿನದ ಗೊತ್ತು ಪಾಡು. ಪ್ರಸವಿಸು–ಹೆರು. ಪ್ರಸವಗೃಹ–ಹೆರಿಗೆಮನೆ. ಪ್ರಸವವೇದನೆ–ಹೆರಿಗೆನೋವು. ಅರುವೆ–ಉಡುವ ಇಲ್ಲವೆ ಹೊದೆಯುವ ಒಂದು ಸಾಮಾನ್ಯವಾದ ಬಟ್ಟೆ.

ಪು. ೨೧೩-೧೪ : ವೈದೀಕರ ಅಕ್ಷರ–ಬ್ರಾಹ್ಮಣರು ಸಾಂಪ್ರದಾಯಿಕವಾಗಿ ಬರೆಯುತ್ತಿದ್ದ ಹಳೆಯ ಬರೆವಣಿಗೆಯ ರೂಢಿ, ಸ್ಫುಟವಲ್ಲದ ಬರೆವಣಿಗೆ. ಪ್ರಾಕೃತವಾಕ್ಯದಿಂದ ಬರೆದು . . . ಚಿತ್ರಬಂಧಗಳೂ ಆಗುತ್ತಲಿದೆ (ವಿವರಣೆಗೆ ನೋಡಿ : 'ಕನ್ನಡ ಚಿತ್ರಕಾವ್ಯ' ದಲ್ಲಿ ೭ನೆಯ 'ಗತಿಚಿತ್ರ' ಎಂಬ ಭಾಗ, ಪು. ೩೪೯-೯೦). ಪದ್ಧತಿ–ಅರ್ಥವಾಗುವಂತೆ ಸಂಯೋಜಿಸಿ ಓದುವ ಕ್ರಮ. ವಿಸ್ಮೃತವಾಗು–ಮರೆತುಹೋಗು. ಕಾರ್ಯಘಟನೆ–ಕೆಲಸವನ್ನು ಕೈಗೂಡಿಸುವುದು. ಪರಲೋಕಕ್ರಿಯೆ–ಉತ್ತರಕ್ರಿಯೆ, ಶ್ರಾದ್ಧಾದಿ ವಿಧಿಗಳು. ಪಾತ್ರರು–ಯೋಗ್ಯರು, ಸಂಗ್ರಹಿಸು–ಕೂಡಿಸು, ಸೇರಿಸು. ವಿಪ್ರ–ಬ್ರಾಹ್ಮಣ. ಸ್ವಲ್ಪಮಾತು–ಸಣ್ಣ ವಿಚಾರ.

ಪು. ೨೧೫-೧೬ : ಸಂಪುಟ–ಸಣ್ಣಪೆಟ್ಟಿಗೆ. ಪ್ರೇಷಿತನಾಗು–ಕಳಿಸಲ್ಪಡು. ಶೂಲಕ್ಕೆ ಹಾಕು–ಹಳೆಯ ಕಾಲದ ಮರಣದಂಡನೆಯ ವಿಧಿ. ಶೂಲವೆಂಬುದು ಮರಣದಂಡನೆಗೆ ಒಳಗಾದವರನ್ನು ಹತ್ತಿಸಿ ಕೊಲ್ಲಲು ನಟ್ಟಿರುವ ಮೊನಚಾದ ಕಬ್ಬಿಣದ ತುದಿಯಿರುವ ಕಂಬ ಅಥವಾ ಮರದ ದಸಿ. ಅಪರಾಧಿಗಳನ್ನು ಅದರ ಮೇಲೆ ಹತ್ತಿಸಿದರೆ ಮೊನೆ ಚುಚ್ಚಿ ಅವರು ಮೃತರಾಗುತ್ತಿದ್ದರೆಂದು ತೋರುತ್ತದೆ. ದಂಡಕ ದಂಡಪಾಶಕ ಅನ್ವರ್ಥನಾಮಗಳಾಗಿಯೂ ಇರುವ ಅಂಕಿತನಾಮಗಳು. ಮಲಿನವಾಗು–ಕೊಳಕಾಗು. ನಿರುಪಾಧಿಕ–ತೊಂದರೆಯಿಲ್ಲದ್ದು. ಶರತ್ಕಾಲದ ಚಂದ್ರ–ಆಶ್ವಯುಜ ಕಾರ್ತಿಕ ಮಾಸಗಳನ್ನು ಒಳಕೊಂಡ ಕಾಲ ಶರದೃತುವಿನ ಕಾಲ. ಅದು ಮಳೆಗಾಲದ ನಂತರ ಬರುವ ಋತು. ಆಗ ಆಕಾಶ ನಿರ್ಮಲವಾಗಿದ್ದು ಚಂದ್ರನ ಬೆಳಕು ಚೆನ್ನಾಗಿರುತ್ತದೆ.

ಪು. ೨೧೭-೧೮ : ಅನೃತ–ಸುಳ್ಳು. ಎರಡುಮಾತು–ಬದಲಾಯಿಸಿ ಹೇಳಿದ ಮಾತು. 'ಶಿರಸ್ಸಿನ ಮೇಲೆ ಸರ್ಪಬಾಧೆಯು. ಪರ್ವತಪ್ರಾಂತ್ಯದಲ್ಲಿ ವಿಷಹರ ಔಷಧ'–ತಪ್ಪಿಸಿಕೊಳ್ಳಲಾಗದ ಆಪತ್ತನ್ನು ಹೇಳುವ ಅಲಂಕಾರೋಕ್ತಿ. ರಾಜಕೋಶ–ರಾಜನ ಬೊಕ್ಕಸ. ಎಳಗಂದಿ ಕರುವಿದ್ದೆಡೆಗೆ ಬರುವಂತೆ–ಹೊಸದಾಗಿ ಕರು ಹಾಕಿದ ಹಸು ಅಥವಾ ಬೇರೆ ಪ್ರಾಣಿ ಕರುವಿದ್ದ ಕಡೆಗೆ ತಪ್ಪದೆ ಬರುವ ಹಾಗೆ. ಶೂಲಸ್ಥಾನ–ಶೂಲಕ್ಕೆ ಹಾಕುವ ಸ್ಥಾನ, ಸಾಮಾನ್ಯವಾಗಿ ಶ್ಮಶಾನಭೂಮಿ. ಚಂಡಾಲ–ವಧೆಯ ಕ್ರೂರಕಾರ್ಯದಲ್ಲಿ ನಿಯುಕ್ತನಾದ ನೀಚಕುಲದ ವ್ಯಕ್ತಿ. ಘಾತಕ–ಕೊಲೆಗಡಿಕ ವ್ಯಕ್ತಿ. ಪಲಾಯನಂಗೈ–ಓಡಿಹೋಗು.

ಪು. ೨೧೯-೨೦ : ವಟು, ವಟುಕ–ಉಪನಯನವಾದ ಬಾಲಕ. ಗುಸುಗುಟ್ಟು–ಗುಸುಗುಸು ಎನ್ನು, ತಮ್ಮತಮ್ಮಲ್ಲೇ ಮಾತಾಡಿಕೊಳ್ಳು. ರಾಮಸೇತು–ಲಂಕೆಯ ಮುತ್ತಿಗೆಗಾಗಿ ರಾಮನು ನಿರ್ಮಿಸಿದ ಸೇತು, ಧನುಷ್ಕೋಟಿ. ಸೇತುಬಂಧನ–ಸೇತುವೆ ಕಟ್ಟುವುದು. ಛಾಗಪುಚ್ಛಕ–ಈ ಅಂಕಿತನಾಮದ ಅರ್ಥ 'ಆಡಿನ ಬಾಲ'ಎಂದು. ಈ ಶಬ್ದದೊಂದಿಗೆ ಶುನಃಪುಚ್ಛ, ಶುನೋಲಾಂಗೂಲ, ಶುನಶ್ಶೇಫ ಇಂಥವನ್ನು ಹೋಲಿಸಬಹುದು.

ಚತುರ್ದಶಾಶಯ

ಜಲಾಸಾರ–ಮಳೆ. ಆರ್ದ್ರಗಳಾಗಿ–ತೊಯ್ದು. ಪುಳಿನರಾಶಿ–ಮರಳಿನ ರಾಶಿ. ಸಾರಸ ಪಕ್ಷಿ–ನೀರುಹಕ್ಕಿ. ಬಿಳಿನೈದಿಲೆ–ಕನ್ನೈದಿಲೆ, ಚೆನ್ನೈದಿಲೆ ಇವುಗಳ ಹಾಗೆ ಈ ಮಾತು ಪ್ರಸಿದ್ಧವಲ್ಲ. ಬಹುಶಃ ಇದು ಒಂದು ರೂಪಕ. ದಿಙ್ಮುಖಶೋಭಾವಿಶೇಷ–ದಿಗಂತಗಳ ಚೆಲುವಿನ ವಿಶೇಷತೆ. ಕೌಮುದೀ ಮಹೋತ್ಸವ–ಕಾರ್ತಿಕ ಮಾಸದಲ್ಲಿ ಹುಣ್ಣಿಮೆಯಂದು ನಡೆಯುವ ಶರದೃತುವಿನ ಉತ್ಸವ. ಬೆಳುದಿಂಗಳ ರಾತ್ರಿಯಲ್ಲಿ ಬಿಳಿಯುಡುಗೆ ಉಟ್ಟು, ಬಿಳಿಯ ಭಕ್ಷ್ಯ ಭೋಜ್ಯಗಳನ್ನು ಅಟ್ಟು ಊಟಮಾಡುವ ಪದ್ಧತಿ ಪಶ್ಚಿಮಭಾರತದಲ್ಲಿ ಉಂಟು. ಹಾಡು ಕುಣಿತಗಳಿರುತ್ತವೆ. ಬಡವ ಬಲ್ಲಿದ ಭೇದವಿಲ್ಲದೆ ಕೃಷ್ಣ-ಗೋಪಿಕೆಯರ ರಾಸನೃತ್ಯ ನಡೆಯುವುದುಂಟು.

ವರ್ಷವರ್ಧಂತೀ ಉತ್ಸವ–ವರ್ಷದ ಹುಟ್ಟುಹಬ್ಬ. ಮುಮ್ಮಡಿಯವರ ಕಾಲದಲ್ಲಿ ಶ್ರೀನಿವಾಸನೆಂಬ ಕವಿ (ಸು. ೧೮೩೦) ರಚಿಸಿದ 'ಕೃಷ್ಣರಾಜ ವರ್ಷವರ್ಧಂತೀ ಶತಕ' ಎಂಬುದೊಂದು ಸಮಕಾಲೀನ ಕೃತಿಯಿದೆ. ಬಹುಳ ಪಂಚಮಿ–ಕೃಷ್ಣಪಕ್ಷದ ಐದನೆಯ ದಿನ. ಸುಗಾಂಗವೆಂಬ ಪ್ರಾಸಾದ–ನಂದರ ಅರಮನೆ, 'ಗಂಗಾನದಿಯ ಚೆಲುವಿನ ನೋಟ' ಎಂದು ಅರ್ಥ. ಮುಕ್ತಾಮಣಿ–ಮುತ್ತು. ಮಣಿಮಂಜೀರ–ರತ್ನದ ಕಾಲಂದಿಗೆ.

ಪು. ೨೨೧-೨೨ : ಮಾನಶಾಲಿ–ಆತ್ಮಗೌರವವಿರುವವನು. ಅಭಿಜ್ಞ–ಬಲ್ಲವನು. ಮಂತ್ರರಹಸ್ಯ–ರಾಜನೀತಿಯ ರಹಸ್ಯ. ಅಪ್ರಾಜ್ಞ–ಬುದ್ಧಿವಂತನಲ್ಲದವನು. ಅನಾಪ್ತ–ಪರಿಚಯವಿಲ್ಲದವನು. ಪ್ರಮಾದ–ಅಚಾತುರ್ಯ, ತಪ್ಪು. ಮಹತ್ತಾಗಿ–ದೊಡ್ಡದಾಗಿ. ಶಮನ–ಆರಿಸುವುದು. ಅವಶ್ಯ–ವಶವನ್ನು ಮೀರಿದ್ದು, ಅಶಕ್ಯ. ದಂಡಿನ ಉಕ್ಕಡ–ಸೇನೆಯ ಠಾಣ್ಯದ ಪ್ರವೇಶಸ್ಥಳ.

ಪು. ೨೨೩-೨೪ : ಸೌಜನ್ಯವಾಗಿ–ಅನ್ಯೋನ್ಯವಾಗಿ, ಸಮರಸವಾಗಿ–ಆರಂಭ ಮತ್ತು ಪರ್ಯವಸಾನ–ಮೊದಲು ಮತ್ತು ಕೊನೆ. ಅಸುರಸಂಘ–ರಾಕ್ಷಸರ ಗುಂಪು. ಅರ್ಹತ–ಜೈನ. ನಾಸ್ತಿಕಮತ–ವೇದಗಳನ್ನು ಒಪ್ಪದ, ದೈವಾಸ್ತಿಕ್ಯವನ್ನು ಮನ್ನಿಸದ ಅವೈದಿಕಮತ. ದಂಡನೀತಿ–ರಾಜನೀತಿ. ದಾಪಿನ ಆನೆ–ಸಾಕಿದ ಆನೆ, ಪಳಗಿಸಿದ ಆನೆ. ವನಗಜ–ಕಾಡಾನೆ. ಮೂಲಮಂ ಛೇದಿಸು–ಬೇರು ಅಥವಾ ಬುಡವನ್ನು ಕತ್ತರಿಸು. ಶಾಖೋಪಶಾಖೆ–ಕೊಂಬೆ ರೆಂಬೆಗಳು.

ಪು. ೨೨೫-೨೬ : ಉತ್ಪನ್ನವಾಗು–ನಷ್ಟವಾಗು. ಎಡೆತಿಟ್ಟು–ದಂಡೆ. ಮಲೆತು ನಡೆ–ಸೊಕ್ಕಿ ನಡೆ. ಪ್ರತ್ಯವಾಯ–ಪಾಪ, ದೋಷ. ಪರ್ಯವಸಾನವಾಗು–ಕೊನೆಗೊಳ್ಳು. ಕಶ್ಮಲಚಿತ್ತ–ಕಳಂಕಿತವಾದ ಮನಸ್ಸು. ಧರ್ಮದಾರ್ಢ್ಯ–ಧರ್ಮದ ಗಟ್ಟಿತನ. ದಂಡವತ್ಪ್ರಣಾಮ–ಸಾಷ್ಟಾಂಗ ನಮಸ್ಕಾರ. ವರುಷಾಕಾಲ–ಮಳೆಗಾಲ. ಪುರುಷಗಜಯುಗ್ಮ–ಗಂಡಾನೆಗಳ ಜೋಡಿ. ಕರೇಣು–ಹೆಣ್ಣಾನೆ. ನಾಗಸರ–ಪುಂಗಿ. ಗಾರುಡಿಗ–ಹಾವಾಡಿಗ. ಪ್ರಾಕೃತ ಗದ್ಯವಂ ರಚಿಸುವ ಕವಿ–ಜನಸಾಮಾನ್ಯರು ರಚಿಸಬಹುದಾದ ಪ್ರಾಕೃತಭಾಷೆಯೆಂಬ ಆಡುಮಾತಿನಲ್ಲಿ ಗದ್ಯರಚನೆ ಮಾಡುವ ಕವಿ. ಪ್ರಾಕೃತಕವಿತ್ವ–ಇಲ್ಲಿ ಕವಿತ್ವವೆಂದರೆ, ಗದ್ಯನಿಬದ್ಧವಾದ ಕಾವ್ಯವೆಂದರ್ಥ. ಚೀಟು–ಬರೆದ ಕಾಗದ. ಮಧು–ಜೇನು. ವಾಮನೇತ್ರ–ಎಡಗಣ್ಣು (ಗಂಡಸರಿಗೆ ಎಡಗಣ್ಣು ಅದುರುವುದು ಅಪಶಕುನವೆಂದು ನಂಬಿಕೆ).

ಪು. ೨೨೭-೨೮ : ಭಾರವಾಸಿ–ಭಾರವಾದುದು. ಹಾಸಿಗೆವೂಳಿಗದವನು–ಸೆಜ್ಜೆವಳ. 'ಲೋಕದಲ್ಲಿ ಅಧಮರಾದ ಪುರುಷರು . . . ಕಾರ್ಯನಿರ್ವಾಹವನ್ನೇ ಮಾಡುವರು'–ಇದು ಭರ್ತೃಹರಿಯ ನೀತಿಶತಕದ ಈ ಪದ್ಯದ ಅನುವಾದ :"ಆರಭ್ಯತೇ ನ ಖಲು ವಿಘ್ನಭಯೇನ ನೀಚೈಃ | ಆರಭ್ಯ ವಿಘ್ನನಿಹತಾ ವಿರಮಂತಿ ಮಧ್ಯಾಃ | ವಿಘ್ನೈಃ ಪುನಃಪುನರಪಿ ಪ್ರತಿಹನ್ಯ ಮಾನಾಃ | ಪ್ರಾರಬ್ಧಮುತ್ತಮಗುಣಾ ನ ಪರಿತ್ಯಜಂತಿ ||" ವಿಘಾತಕ–ವಿಘ್ನಕಾರಕ. ಕಾರ್ಯಘಾತವಾಗು–ಕೆಲಸ ಕೆಡು. ಚಾಪಲ್ಯ–ಚಂಚಲಬುದ್ಧಿ.

ಪು. ೨೨೯-೩೦ : ಅನ್ಯತ್ರ–ಬೇರೆ ಕಡೆ. ವ್ಯಾಘ್ರಮುಖಗ್ರಸ್ತವಾಗು–ಹುಲಿಯ ಬಾಯಿಗೆ ಸಿಕ್ಕು. ನಾಮಾಂಕಿತ–ಹೆಸರಿನ ಗುರುತು. ಪಟ್ಟಸಾಲೆ–ಪಡಸಾಲೆ, ಜಗುಲಿ. ಮಾರ್ಗಶ್ರಮ–ದಾರಿ ನಡೆದುದರಿಂದ ಉಂಟಾದ ಆಯಾಸ. ವಚನಕೋಲಾಹಲಧ್ವನಿ–ಮಾತಿನ ಅಬ್ಬರ.

ಪು. ೨೩೧-೩೨ : ಸ್ತುತಿಪಾಠಕ–ಹೊಗಳುಭಟ್ಟ. ಆಜ್ಞಾಭಂಗ–ಆಜ್ಞೆ ಮೀರುವುದು.

ಪಂಚದಶಾಶಯ

ದೇಶಾಂತರ–ಬೇರೆ ದೇಶ. ಧಣಿ–ಯಜಮಾನ. ವಾಕ್ಕಲಹ–ಮಾತಿನ ಜಗಳ. ಪ್ರಾಸಾದ–ಸೌಧ, ಉಪ್ಪರಿಗೆ. ವೀಧಿ–ಬೀದಿ (ಸಂ. ವೀಥಿ ಶುದ್ಧರೂಪ). ವೈತಾಳಿಕ–ಹೊಗಳು ಭಟ್ಟ. ಯಜಮಾನರು–ಕುಟುಂಬ ಅಥವಾ ಕೇರಿಯ ಹಿರಿಯ ವ್ಯಕ್ತಿಯನ್ನು, ಮುಖ್ಯಸ್ಥನನ್ನು ಉದ್ದೇಶಿಸಿ ಸಾಮಾನ್ಯವಾಗಿ ಬಳಸುವ ಮಾತು (ಸಂ. ಯಜಮಾನ–ಯಜ್ಞಮಾಡುವವನು).

ಪು. ೨೩೩-೩೪ : ಅವಿಚ್ಛಿನ್ನವಾಗಿ–ಭಂಗವಿಲ್ಲದೆ. ಅಭಿಜ್ಞ–ಬಲ್ಲವನು. ಅಪ್ರಬುದ್ಧ–ತಿಳಿವಳಿಕೆ ಸಾಲದವನು. ಅಜೇಯ–ಜಯಿಸಲಶಕ್ಯವಾದವನು. ಸಮಿತ್ಕುಶಾಸ್ತರಣ–ಸಮಿತ್ತು ಮತ್ತು ದರ್ಭೆಯ ಹಾಸಿಗೆ. ದಾರುಪಾತ್ರ–ಮರದ ಪಾತ್ರೆ. ಕೃಷ್ಣಾಜಿನ–ಜಿಂಕೆಯ ಚರ್ಮ. ಕುಮಾರಕ–ಮಗ. ಕುಶಾಸನ–ದರ್ಭೆಯ ಪೀಠ. ವಂದ್ಯಮಾನ–ನಮಸ್ಕರಿಸಲ್ಪಡುವವನು. ಕಪರ್ದೀಶ್ವರ–ಜಟಾಜೂಟನಾದ ಶಿವ. ಮುಹೂರ್ತಮಾಡಿ ಇರು–ಆಸನದಲ್ಲಿ ಕುಳಿತಿರು. ಅವಸರದವನು–ಅರಸನಿಗೆ ಸಂದರ್ಭಾನುಗುಣವಾಗಿ ಕೆಲಸಕ್ಕೆ ಒದಗುವ ಆಳು. ಉಪಾಸ್ಯಮಾನನಾಗು–ಪೂಜಿತನಾಗು, ಗೌರವವನ್ನು ಸ್ವೀಕರಿಸಿದವನಾಗು. ಭದ್ರಪೀಠ–ಮಂಗಳಕರವಾದ ಆಸನ.

ಪು. ೨೩೫-೩೬ : ವೃಷಳ-ಶೂದ್ರ (ಶೂದ್ರಾಶ್ಚಾವರವರ್ಣಾಶ್ಚ ವೃಷಲಾಶ್ಚ ಜಘನ್ಯಜಾಃ, ಅಮರ ಕೋಶ, ಶೂದ್ರವರ್ಗ; ಶೂದ್ರೋಂತ್ಯವರ್ಣೋ ವೃಷಲೋ ಪದ್ಯಃ, ಅಭಿಧಾನ ರತ್ನಮಾಲೆ, ೪೫೨ ಇ.). ಈ ಶಬ್ದದ ಪ್ರಯೋಗ 'ಮುದ್ರಾರಾಕ್ಷಸ' ನಾಟಕದಲ್ಲಿಯೂ ಇದ್ದು, ಇದರ ರೂಪ ಅರ್ಥಗಳ ಬಗೆಗೆ ಗೋವಿಂದ ಪೈಗಳ 'ವಿಶಾಖದತ್ತನ ಮುದ್ರಾ ರಾಕ್ಷಸ ನಾಟಕದಲ್ಲಿಯ ವೃಷಲ ಎಂಬ ಶಬ್ದ' ಎಂಬ ಲೇಖನವನ್ನು ಓದಬಹುದು (ಗೋವಿಂದ ಪೈ ಸಂಶೋಧನಸಂಪುಟ, ಉಡುಪಿ, ೧೯೯೫, ಪು. ೧೦೭೭-೮೧). ಪೋಲು ವೆಚ್ಚ–ದುಂದುಖರ್ಚು. ಆರ್ಜಿಕ–ಸಂಪಾದಿಸುವವನು. ಮಂಡಲ–ಸಮೂಹ. ಕೈಕಾಗದ–ಸ್ವತಃ ಬರೆದು ಕಳಿಸಿದ ಪತ್ರ.

ಪು. ೨೩೭-೩೮ : ಅಧರಸ್ಪಂದಮಾತ್ರ–ತುಟಿಚಲನೆಯಷ್ಟರಿಂದ. ಮುಖಚೇಷ್ಟೆ–ಮುಖದ ಚಲನವಲನ. ಅರ್ಥಾಂತರ–ಬೇರೆ ಅರ್ಥ. ಪರಿಹಾಸವಚನ–ಹಾಸ್ಯೋಕ್ತಿ.

ಮತ್ತರು–ಸೊಕ್ಕಿದವರು. ಕುಮಾರಸಂತತಿ–ರಾಜಕುಮಾರನ ಕಡೆಯಿಂದ ಬೆಳೆದ ಸಂತಾನ. ತೀಕ್ಷ್ಣದಂಡನೆ–ಕಠಿನ ಶಿಕ್ಷೆ. ಉಪೇಕ್ಷಾವಂತ–ಅಸಡ್ಡೆ ಮಾಡುವವನು.

ಪು. ೨೩೯-೪೦ : ಪ್ರಾಧಾನ್ಯಮಾಡು–ಪ್ರಧಾನಿಯ ಅಥವಾ ಅಮಾತ್ಯನ ಪದವಿಯಲ್ಲಿ ಕೆಲಸ ನಿರ್ವಹಿಸು. ಪ್ರಜ್ಞಾಬಲ–ಬುದ್ಧಿವಂತಿಕೆ. ಸಂಗ್ರಹಿಸು–ಸ್ವಾಧೀನಕ್ಕೆ ತಂದುಕೊಳ್ಳು. ಗತಪ್ರಾಣ–ಮೃತ. ಛೇದನ–ನಷ್ಟ. ಉಭಯತಾಪಿ–ಎರಡು ದೃಷ್ಟಿಯಿಂದಲೂ (ಉಭಯ ತೋಽಪಿ ಎಂಬುದರ ಜನರೂಢಿಯ ರೂಪ). ನವಾರ್ಬುದ–೯೦ ಕೋಟಿ (ಅರ್ಬುದ= ಹತ್ತು ಕೋಟಿ). ವೇತಾಳ–ಬೇತಾಳ. ಪ್ರಾಧಾನ್ಯಶಸ್ತ್ರ–ಪ್ರಧಾನ ಪದವಿಯ ಲಾಂಛನವಾದ ಶಸ್ತ್ರ. ಗಜನಿಷ್ಠದೋಷ–ಆನೆಯಲ್ಲಿರುವ ದೋಷ. ನಿರಾಕರಿಸು–ತೊಲಗಿಸು.

ಷೋಡಶಾಶಯ

ಪು. ೨೪೧-೪೨ : ಪ್ರತೀಹಾರಿ–ದ್ವಾರಪಾಲಕ. ಶಿರೋವೇದನೆ–ತಲೆನೋವು. ಅರೆ ಘಳಿಗೆ–ಸ್ವಲ್ಪ ಹೊತ್ತು. ಪ್ರತಿಕೂಲ–ವ್ಯತಿರಿಕ್ತ. ಪ್ರತಿಕ್ರಿಯೆ–ಪ್ರತೀಕಾರ, ವಿರುದ್ಧವಾದ ಕಾರ್ಯ. ವಾಮಭುಜ–ಎಡಭುಜ (ಇದು ಅದುರುವುದು ಗಂಡಸರ ಅಪಶಕುನದ ಒಂದು ಲಕ್ಷಣ ಎಂದು ತಿಳಿಯಲಾಗುತ್ತದೆ). ಪೂರ್ವೋತ್ತರವಿರೋಧ–ಹಿಂದು ಮುಂದಿನ ವಿಷಯಗಳಿಗೆ ಹೊಂದಿಕೆಯಿಲ್ಲದೆ ಹೋಗುವುದು. ಹೊರಚ್ಚುಮಾಡು–ಹೊರಹೋಗು ವಂತೆ ಮಾಡು. ಸಂವಾದ–ಸಂಭಾಷಣೆ

ಪು. ೨೪೩-೪೪ : ಘಟಿಕ–ಗಟ್ಟಿಗ (ಘಟನೆಮಾಡುವ, ಸಂಘಟಿಸುವ ಸಾಮರ್ಥ್ಯ ಉಳ್ಳವನು). ಸಮಯಾಂತರ–ಬೇರೆ ಸಂದರ್ಭ. ಹೊಂಚಿ ಆಲ್ಯೈಸು–ಮರೆಯಲ್ಲಿದ್ದು ಕೇಳು, ಆಲಿಸು ('ಆಲ್ಯೈಸು' ರೂಪ ವಿಚಾರಾರ್ಹ; ಬಹುಶಃ ಆರ್ಯೈಸು>ಆಲ್ಯೈಸು). ಗದ್ಯಸ್ತುತಿ–ಬಿರುದಾವಳಿಯ ಗದ್ಯದಲ್ಲಿ ಸ್ತುತಿಸುವುದು. ಪ್ರಸಂಗಸಂಗತಿ–ಸಂದರ್ಭ ಒದಗಿಬರು ವುದು. ಪ್ರಾಧಾನ್ಯ–ಸರ್ವಾಧಿಕಾರತ್ವ.

ಪು. ೨೪೫-೪೬ : ಹೊರತಟ್ಟು–ಹೊರಗೆ ಅಟ್ಟು, ಹೊರತುಪಡಿಸು. ತೀಕ್ಷ್ಣಪ್ರತಿಜ್ಞೆ–ಕಠಿನವಾದ ಶಪಥ. ಸಂಗತವಾಗಿ–ಹೊಂದಿಕೊಳ್ಳುವುದಾಗಿ. ಸರ್ವಾತ್ಮನಾ–ಏನೇ ಆದರೂ. ಕೃತಘ್ನ–ಮಾಡಿದ ಉಪಕಾರವನ್ನು ನೆನೆಯದವನು. ಮೃದುಪ್ರತಿಜ್ಞೆ–ಉದ್ದೇಶಿತ ವ್ಯಕ್ತಿಗೆ ಹೆಚ್ಚು ಬಾಧಕವಾಗದ ಹಾಗೆ ಮಾಡುವ ಸಾಮಾನ್ಯಶಪಥ. ಉಪಾರ್ಜಿತವಾದ–ಸಂಪಾದಿ ಸಿದ.

ಪು. ೨೪೭-೪೮ : ವ್ಯಸನಕಾಲ–ವಿಪತ್ಕಾಲ. ಮಂತ್ರಿವ್ಯಸನ–ಮಂತ್ರಿಯ ಮಂತ್ರಾ ಲೋಚನೆಯ ಸಹಾಯವಿಲ್ಲದೆ ಒದಗಿದ ವಿಪತ್ತು. ವ್ಯಸನಕೂಟ–ವಿಪತ್ತಿನ ಬರುವಿಕೆ, ಸಂಘಟನೆ. ಸ್ತನ್ಯಪಾನ–ಮೊಲೆಹಾಲು ಕುಡಿಯುವುದು. ಸ್ತನ್ಯ–ಮೊಲೆಹಾಲು. ಮಂತ್ರಿ ಸಿದ್ಧಿ–ಮಂತ್ರಿಯ ನೆರವಿನ ಸಿದ್ಧಿ. ಶತ್ರುವ್ಯಸನ–ಶತ್ರುವಿನ ವಿಪತ್ತು.

ಸಪ್ತದಶಾಶಯ

ನಿಷ್ಕಾಸ–ಉಚ್ಚಾಟನೆ, ತೊಲಗಿಸುವುದು. 'ಧರ್ಮನಿಯತರಿಗೆ ಜಯವಾಗಲಿ'–ಇದು ನಾಟಕೀಯ ವ್ಯಂಗ್ಯೋಕ್ತಿ. ರಾಕ್ಷಸನ ಪಕ್ಷ ಅಧರ್ಮನಿಯತವೆಂದೂ ಅದು ಅಳಿಯುವುದು

ನಿಶ್ಚಯವೆಂದೂ, ಚಂದ್ರಗುಪ್ತನ ಪಕ್ಷ ಧರ್ಮನಿಯತವೆಂದೂ ಅದಕ್ಕೆ ಜಯ ಸಿದ್ಧ ವೆಂದೂ ಇಲ್ಲಿಯ ಇಂಗಿತ. ಏಕವಾಕ್ಯತೆ–ಎಲ್ಲರ ಅಭಿಪ್ರಾಯವೂ ಒಂದೇ ಆಗಿರುವುದು. ಸ್ವ ಆಶ್ರಿತರಂ ಬಿಟ್ಟು–ತನ್ನನ್ನು ಆಶ್ರಯಿಸಿದವರನ್ನು ಎಂದು ಇಲ್ಲಿ ಆಶಯವಲ್ಲ, ತನಗೆ ಆಶ್ರಯದಾತರಾಗಿದ್ದವರನ್ನು ಬಿಟ್ಟು ಎಂದು ಆಶಯ. ದಂಡು–ಸೈನ್ಯ, ಸೈನ್ಯದ ಪಾಳೆಯ. ಉಕ್ಕಡಕ್ಕೆ ಉಂಡಿಗೆಯಂ ಕೊಡುವ ಅಧಿಕಾರ–ಸುಂಕದ ಕಟ್ಟೆ ಅಥವಾ ಊರ ಹೆಬ್ಬಾಗಿಲಿ ನಲ್ಲಿ ಬಂದು ಹೋಗುವವರಿಗೆ ಗುರುತಿನ ಮುದ್ರೆ ಕೊಡುವ ಅಧಿಕಾರ. ವಪನ–ಕ್ಷೌರ. 'ವಪನವಂ ಮಾಡಿಕೊಂಡ ಬಳಿಕ ಆಯುಷ್ಕರ್ಮಕ್ಕೆ ದಿನ ಹೇಗಿರುವದೆಂದು ಕೇಳುವವನಂತೆ' –ಇದು ಹಳೆಯ ಕಾಲದ ಪ್ರಸಿದ್ಧವಾದ ಗಾದೆ. 'ತಲೆಯಂ ಕಿರಿಯಿಸಿ ದಿವಸಮನಲಸದೆ ಬೆಸಗೊಳ್ವನಂತು' ಎಂದು 'ಕವಿರಾಜಮಾರ್ಗ'ದ ಮಾತು (೩-೧೪೫). ಹರಿಕಾರ–ಸಂದೇಶ ವಾಹಕನಾದ ದೂತ. ಅಕಾಲಮೇಘ–ಮಳೆಗಾಲದಲ್ಲಿ ಅಲ್ಲದೆ ಬೇರೆ ಕಾಲದಲ್ಲಿ ಕಾಣಿಸಿ ಕೊಳ್ಳುವ ಮೋಡ.

ಪು. ೨೫೧-೫೨ : ಉಂಡಿಗೆ ಚಾವಡಿ–ಉಕ್ಕಡದಲ್ಲಿ ಗುರುತಿನ ಮುದ್ರೆ ಕೊಡುವ ಕಛೇರಿ. ಚಿಕ್ಕದೊರೆ–ರಾಜಕುಮಾರ. ವ್ಯಾಜಾಂತರ–ಬೇರೆ ನೆಪ. ಸೌಗತ–ಬುದ್ಧ. ಕೌತೂಹಲ– ಕುತೂಹಲ.

ಪು. ೨೫೩-೫೪ : ಪಿತೃಮೃತ–ತಂದೆಯ ಸಾವು. ದ್ವಿಗುಣ–ಎರಡು ಪಟ್ಟು. ಗೂಢ ಶತ್ರುತ್ವ–ರಹಸ್ಯವಾದ ವೈರ. ಪ್ರತ್ಯಕ್ಷರಾಕ್ಷಸ–ನಿಜವಾದ ರಾಕ್ಷಸ. ಗತವೃತ್ತಾಂತ–ಕಳೆದು ಹೋದ ಸಮಾಚಾರ. ಪುರಸ್ಕರಿಸು–ಒಪ್ಪಿಕೊಳ್ಳು, ಮನ್ನಿಸು. ಅಸಹ್ಯತೆ–ಸಹಿಸದಿರುವಿಕೆ.

ಪು. ೨೫೫-೫೬ : ದಟ್ಟಿ–ಸುತ್ತಿ ಉಟ್ಟ ಪಂಚೆ, ಮುಂಡು. ಲಕೋಟು ಕಾಗದ–ಲಕೋಟೆ, ಒಳಗೆ ಬರೆದ ಕಾಗದವಿರಿಸಿ ಹೊರಗೆ ಕಾಣದಂತೆ ಮುಚ್ಚಿರುವ ಪತ್ರ. ಉಂಡಿಗೆ–ಗುರುತು ಕಾಗದ, ರಹದಾರಿಪತ್ರ. ಗವಾಕ್ಷ–ಕಿಟಕಿ. ಉಚ್ಚಾಟನೆ–ಓಡಿಸುವುದು. ಸಾವಕಾಶವಿಲ್ಲದೆ– ಕಾಲಾವಕಾಶವಿಲ್ಲದೆ. ಪ್ರತಿಪಕ್ಷಿಯಾದ ಪುರುಷ–ಚಾಣಕ್ಯ. ಮುಖವಚನ–ಬಾಯಿಮಾತು. ನೆಪ್ಪು–ಗುರುತು. ಕಶೆ–ಬಾರುಕೋಲು. ಕಶಾಪ್ರಹಾರ–ಬಾರುಕೋಲಿನ ಏಟು. ಕಕ್ಷಗತ ವಾಗು–ಕಂಕುಳಲ್ಲಿರುವುದಾಗು.

ಪು. ೨೫೭-೬೦ : ಗಂಟುಕಶೆ–ನಡುನಡುವೆ ಗಂಟು ಹಾಕಿದ ಬಾರುಕೋಲು. ಯಥಾರ್ಥ ವಾಗಿ–ಇದ್ದುದು ಇದ್ದಂತೆ. ಪ್ರತೀಕ್ಷಿಸು–ನಿರೀಕ್ಷಿಸು. ಮುಖಪ್ರಸಾದ–ಮುಖದ ಪ್ರಸನ್ನತೆ. ವಿಹ್ವಲನಾಗು–ಕಳವಳಿಸು. ಬಿಡಿಮಾತು–ಸಣ್ಣಮಾತು, ಅಗೌರವದ ಮಾತು. ಲಘುತ್ವ ಬುದ್ಧಿ–ಹಗುರವಾದ ಭಾವನೆ, ತುಚ್ಛವಾದ ಭಾವನೆ. ಲಾಭಭ್ರಾಂತಿ–ಲಾಭವಾಗುತ್ತಿದೆ ಎಂಬ ಭ್ರಮೆ. ಸಂಪುಟ–ಭರಣಿ, ಸಣ್ಣಪೆಟ್ಟಿಗೆ. ಪ್ರಭುಕಟಾಕ್ಷ–ದೊರೆಯ ಕೃಪೆ. ಕ್ರಯ ಲಬ್ಧವಾಗು–ಮಾರಾಟವಾಗಿ ದೊರಕು. ಪ್ರೇಷಿತರಾಗು–ಕಳುಹಿಸಲ್ಪಡುವರಾಗು. ತ್ವರಿತ ದಿಂದ–ತುರ್ತುಕಾರಣದಿಂದ.

ಪು. ೨೬೧-೬೪ : ಬಾಧ್ಯ–ಜವಾಬ್ದಾರ. ವ್ಯಾಜಸ್ತುತಿ–ಸ್ತುತಿಯ ರೂಪದಲ್ಲಿ ನಿಂದೆ ಮಾಡುವುದು. ಅರ್ಥಾಂತರ–ಬೇರೆ ಅರ್ಥ. ಚೇಷ್ಟೆ–ವರ್ತನೆ, ಅಂಗದ ಚಲನೆ. ಅಪಾತ್ರ ವ್ಯಯ–ಯೋಗ್ಯರಲ್ಲದವರಿಗೆ ಖರ್ಚು ಮಾಡುವುದು. ಪಾತ್ರ–ವ್ಯಕ್ತಿ. ಆತತಾಯಿ–ಪಾತಕಿ (ಇವರು ೬ ವಿಧ : ಬೆಂಕಿಯಿಡುವವನು, ವಿಷವಿಡುವವನು, ಕೊಲೆಗಡುಕ, ಹಣ ಕದಿಯು

ವವನು, ಆಸ್ತಿ ಅಪಹರಿಸುವವನು, ಇನ್ನೊಬ್ಬನ ಹೆಂಡತಿಯನ್ನು ಅಪಹರಿಸುವವನು. ವಸಿಷ್ಠಸ್ಮೃತಿ ೩-೧೯, ಮನುಸ್ಮೃತಿ ೮-೩೫೦). ತದನುಗುಣಫಲ-ಅದಕ್ಕೆ ಅನುಗುಣವಾದ ಫಲ. ಪ್ರಕಾರಾಂತರ-ಬೇರೆ ರೀತಿ. ಶತ್ರುಪ್ರಯೋಗ-ಶತ್ರುಗಳ ಮೋಸದ ಪರಿಣಾಮ.

ಪು. ೨೬೫-೬೬ : 'ಐದು ಸೊನ್ನೆಗಳಂ ಹಾಕು'-ಈ ಪದ್ಧತಿ ಒಡೆಯರ ಕಾಲದ ರಾಜನೀತಿಯಲ್ಲಿದ್ದಿರಬಹುದು. 'ಐವರೊಂದಿಗೆ ವ್ಯವಹಾರ ಮುಗಿಯಿತು, ಇನ್ನು ಅವರ ಸಂಬಂಧವಿಲ್ಲ' ಎಂದು ತಿಳಿಸಲು ಸಾಂಕೇತಿಕವಾಗಿ ಶೂನ್ಯದ ಪ್ರತೀಕವಾಗಿ ಸೊನ್ನೆ ಬಳಸುತ್ತಿದ್ದಿರಬಹುದು. ದೊಡ್ಡ ಹಳ್ಳದಲ್ಲಿ ಹೂಳಿಸು . . . ಸಂಹರಿಸಿ-ಒಡೆಯರ ಕಾಲದಲ್ಲಿ ಪ್ರಚಲಿತವಿದ್ದ ಸಾಮಾನ್ಯಶಿಕ್ಷೆಗಳು, ಇವು. ಪಾಟಲೀಪುರಕ್ಕೆ ಅಗಳಿನಂತೆ ಬಳಸಿಕೊಂಡು ಇರುವ ಮಹಾನದಿ-ಮಗಧರಾಜ್ಯಕ್ಕೆ ಪಶ್ಚಿಮದಲ್ಲಿ ಸರಹದ್ದಾಗಿರುವ ಶೋಣಾನದಿ. ಧೂಳೀನಿಕುರುಂಬ-ದೂಳಿನ ದಟ್ಟಣೆ. ಪಂಕಪ್ರಾಯ-ಕೆಸರುಮಯ. ಮೂರುಯಾಮ-ರಾತ್ರಿಯ ಮೂರು ಜಾವ ಎಂದರೆ ಮೂರು ಪ್ರಹರಗಳ ಹೊತ್ತು, ಒಂಬತ್ತು ಗಂಟೆ (ಜಾವ=ಮೂರು ಗಂಟೆ) . ಹೊಸಮಸೆ ಅಲಗು-ಹೊಸದಾಗಿ ಹರಿತಗೊಳಿಸಿದ ಕತ್ತಿ. ಮದ್ಯಪಾಯಿ-ಕುಡುಕ. ಅನನ್ವಯವಾಗಿ-ಒಂದಕ್ಕೊಂದು ಸಂಬಂಧವಿಲ್ಲದ ಹಾಗೆ. ಅಡ್ಡಮುಖನಾಗು-ಮುಖ ತಿರುಗಿಸಿದವನಾಗು. ಅರಿಷ್ಟ-ಕೇಡು, ವಿಪತ್ತು. ಅಸಂಗತಪ್ರಲಾಪ- ಅಸಂಬದ್ಧಪ್ರಲಾಪ. ಶತ್ರುಗ್ರಸ್ತನಾಗು-ಶತ್ರುವಿನ ಹಿಡಿತಕ್ಕೆ ಸಿಕ್ಕು. ವಿನಷ್ಟರಾಗು- ಹಾಳಾಗು. ಮೃಷಾಪವಾದಗ್ರಸ್ತ-ಸುಳ್ಳಿನ ಅಪಖ್ಯಾತಿಗೆ ಗುರಿಯಾದವನು.

ಪು. ೨೬೯-೭೨ : ಉಪಶಾಂತಿ-ಸಹನೆ, ತಾಳ್ಮೆ. ವಿಕಲ್ಪ-ಪರ್ಯಾಯ.

ಅಷ್ಟಾದಶಾಶಯ

ಸುಹೃಜ್ಜನ-ಮಿತ್ರಸಮೂಹ. ಮೊಬ್ಬು-ಮಂಪರು. ಅಂದಳ-ಮೇನೆ. ಸಾಂಗಿಕವ್ರಣ-ಸಂಸರ್ಗದೋಷದಿಂದ ಉಂಟಾದ ಹುಣ್ಣು (ಸಂಗ > ಸಾಂಗಿಕ). ಪ್ರಕೋಪಿಸು-ಕೆರಳು. ಲುಬ್ಧ-ಜಿಪುಣ. ಪಂಚತ್ವ-ಸಾವು. ಅತಿಭಾಷೆ-ಮೀರಿದ ಮಾತು, ಹೆಚ್ಚು ಮಾತು. ಮಿಡುಕು-ದುಃಖಿಸು. ಕಳತ್ರ-ಹೆಂಡತಿ. ಕ್ಷೇತ್ರ-ಹೊಲಗದ್ದೆ ತೋಟ ಮುಂತಾದುವು. ಜಪಾಸನ-ಜಪ ಮಾಡುವುದಕ್ಕೆ ಅನುಕೂಲವಾಗುವಂತೆ ಹಾಕುವ ಆಸನ, ಪದ್ಮಾಸನ. ವಿಪ್ರಯುಗ್ಮಧೇನು-ಇಬ್ಬರು ಬ್ರಾಹ್ಮಣರು ಮತ್ತು ಹಸು. ನಿಯತವನ್ನಾಚರಿಸುವ ಸಮಯ-ಸಂಧ್ಯಾವಂದನೆಯ ಹೊತ್ತು. ವಿಜಯೋಽಸ್ತು-ವಿಜಯವಾಗಲಿ.

ಪು. ೨೭೩-೭೪ : ಅಲ್ಪಾಧಿಕಾರಿ-ಕಡಮೆ ಯೋಗ್ಯತೆಯವನು, ಸಾಮಾನ್ಯ ಅರ್ಹತೆಯುಳ್ಳವನು. ವ್ಯಧಿಕರಣ-ವಿರೋಧ, ವ್ಯತ್ಯಾಸ, ವೈಪರೀತ್ಯ. ಹೆಚ್ಚಕ್ಕರವಂ ನುಡಿ-ಮೀರಿ ಮಾತನಾಡು, ಅಧಿಕಪ್ರಸಂಗ ಮಾಡು. ಆದಾನನಿದಾನ-ರೋಗಿ ಸ್ವೀಕರಿಸುತ್ತಿರುವ ಆಹಾರ ಪಾನೀಯಗಳು ಹಾಗೂ ರೋಗದ ಮೂಲಕಾರಣ. ವಧ್ಯಸ್ಥಾನ-ಕೊಲ್ಲುವ ಸ್ಥಳ. ಚಿತ್ರಮಂಟಪ-ಚಮತ್ಕಾರಜನಕವಾಗಿ ನಿರ್ಮಿಸಿರುವ ಅಲಂಕಾರಮಂಟಪ. ಗಳಿತವಯಸ್ಕಳು-ಯೌವನ ಕಳೆದುಹೋದವಳು. ಪಣ್ಯಾಂಗನಾಂಗ-ಬೆಲೆವೆಣ್ಣಿನ, ಎಂದರೆ ವೇಶ್ಯೆಯ ಅಂಗ. ತೃಷ್ಣಾತುರ-ಬಾಯಾರಿದವನು. ಕುಣಿಕೆ-ಉರುಲು. ಜನನಾರಭ್ಯ-ಹುಟ್ಟಿದುದು ಮೊದಲುಗೊಂಡು. ಡಾಂಭಿಕ-ಶ್ರೀಮಂತಿಕೆಯನ್ನು ಪ್ರದರ್ಶಿಸುವವನು. ಮಿತ್ರವ್ಯಸನ-ಸ್ನೇಹಿತನ

ಸಂಬಂಧವಾದ ಕಷ್ಟ. ವಿಯೋಗ–ಅಗಲಿಕೆ. ಭಾಷೆ–ಮಾತು. ಬಲವದ್ವಿರೋಧ–ಪ್ರಬಲ ರೊಂದಿಗೆ ಉಂಟಾದ ವಿರೋಧ. ಮಾರ್ಗಸ್ಥ–ದಾರಿಹೋಕ.

ಪು. ೨೭೫-೭೬ : ಪ್ರಾಣಗಳು–ಪಂಚಪ್ರಾಣಗಳು, ಎಂದರೆ ವಾಯುಗಳು (ಪ್ರಾಣ-ಹೃದಯ, ಅಪಾನ-ಗುದ, ವ್ಯಾನ-ಸರ್ವಾಂಗ, ಉದಾನ-ಕಂಠ, ಸಮಾನ-ನಾಭಿ). ವಿಮಾನಸ್ಥ ದೂತರು–ಸ್ವರ್ಗಕ್ಕೆ ಕೊಂಡೊಯ್ಯುವ ಪರಲೋಕದ ಧರ್ಮದೇವತೆಯ ದೂತರು. ಗೃಹ ಸೋಪಸ್ಕರ–ಮನೆಯ ಪಾತ್ರೆ ಪದಾರ್ಥಗಳು ಮುಂತಾದುವು. ಅಶ್ಲೀಲ–ಅಮಂಗಳಕರವಾದುದು, ಕೆಟ್ಟದ್ದು. ಶಿಬಿರಾಯನಿಗೆ ಉಂಟಾದಂತೆ–ಮರೆಹೊಕ್ಕವರನ್ನು ಕಾಪಾಡುವುದು ಮುಖ್ಯವ್ರತವಾಗಿದ್ದವನು ದೊರೆ ಶಿಬಿರಾಯ. ಚಂದ್ರವಂಶದ ದೊರೆ ಇವನು. ಒಮ್ಮೆ ಇಂದ್ರನೂ ಅಗ್ನಿಯೂ ಇವನನ್ನು ಪರೀಕ್ಷಿಸಲು ಗಿಡುಗ ಪಾರಿವಾಳಗಳ ರೂಪ ತಳೆದು ಬಂದರು. ಪಾರಿವಾಳ ಶಿಬಿಯನ್ನು ಮರೆಹೊಕ್ಕಿತು. ಗಿಡುಗ ತನ್ನ ಆಹಾರ ಬಿಟ್ಟುಕೊಡುವಂತೆ ಕೇಳಿತು. ಆಗ ಶಿಬಿ ಗಿಡುಗನಿಗೆ ತನ್ನ ದೇಹದಿಂದ ಪಾರಿವಾಳದ ತೂಕದ ಮಾಂಸವನ್ನು ತೆಗೆದುಕೊಳ್ಳುವಂತೆ ಹೇಳಿದನು. ಇದನ್ನು ಮೆಚ್ಚಿದ ಇಂದ್ರಾದಿಗಳು ಅವನಿಗೆ ವರವಿತ್ತರು (ಮಹಾಭಾರತ, ವನಪರ್ವ, ೧೯೭-೨೬-೨೮). ಖಡ್ಗಪಾಣಿ–ಕತ್ತಿ ಹಿಡಿದ ಕೈಯುಳ್ಳುವನು.

ಪು. ೨೭೭-೮೦ : ಸಂವಾದ–ಸಂಭಾಷಣೆ. ಎಕ್ಕದ ಹೂವಿನ ಮಾಲೆ ಹಾಕಿಸಿ–ಸಾಮಾನ್ಯವಾಗಿ ಕೊಲೆ, ಬಲಿಗಳಿಗಾಗಿ ಕೊಂಡೊಯ್ಯುವಾಗ ಎಕ್ಕದ ಹೂ ಮಾಲೆ ಹಾಕಲಾಗುತ್ತದೆ. ಪರುಷ–ಕಠೋರ. ತಾರತಮ್ಯ–ಚಿಕ್ಕದು-ದೊಡ್ಡದು, ಸಾಧು-ಕ್ರೂರಿ ಎಂದು ಮುಂತಾದ ಹೆಚ್ಚು ಕಡಮೆ. ಆಯುಷ್ಮಂತ– ಚಿಕ್ಕವರನ್ನು ದೊಡ್ಡವರು ಕರೆಯುವ ಮಾತು. ಪರಾರ್ಥವಾಗಿ–ಇತರರ ಸಲುವಾಗಿ. ಉರಸ್ತಾಡನ–ಎದೆಯೆದೆ ಬಡಿದುಕೊಳ್ಳುವುದು. ಛಾಯಾವಲಂಬನದಿಂದ–ನೆರಳಿನಲ್ಲಿ, ಆಶ್ರಯದಲ್ಲಿ. ವಿಹಿತ–ಸೂಕ್ತವಾದುದು. ಚಂದನದಾಸನು ಬೌದ್ಧಮತಸ್ಥನಾದರೂ–ರಾಕ್ಷಸನು ಬ್ರಾಹ್ಮಣನಾದರೂ ಬೌದ್ಧರ ಪಕ್ಷಪಾತಿಯೆಂದು 'ಮುದ್ರಾರಾಕ್ಷಸ' ನಾಟಕದ ಕೆಲವರು ವಿಮರ್ಶಕರು ತಿಳಿಯುತ್ತಾರೆ ; ನಿರ್ವ್ಯಾಜಮೈತ್ರಿಗೆ ಮತಧರ್ಮಗಳ ಅಡ್ಡಿಯಿಲ್ಲ ಎಂದು ತಿಳಿದರೂ ಸಾಕಾಗುತ್ತದೆ. ಪ್ರಾಕಾರ–ಕೋಟೆಯ ಸುತ್ತುಗೋಡೆ. ಚಂಡಾಲರು–ವಧೆಯ ಕೆಲಸಕ್ಕೆ ನಿಯುಕ್ತರಾದ ಕೆಳಜಾತಿಯ ಜನ.

ಪು. ೨೮೧-೮೨ : ನೀತಿಕೌಶಲ್ಯ–ನೀತಿನಿಪುಣ. ವಾರೆ–ಓರೆ. ಆವಾಸಭೂತ–ಆಶ್ರಯ ಸ್ಥಾನದಂತಿರುವವನು. ಪ್ರೇಷಿತರಾಗು–ಕಳುಹಿಸಲ್ಪಡುವವರಾಗು. ಯೂಥಪತಿ–ಸಲಗ, ಹಿಂಡಿನ ಮುಖ್ಯವಾದ ಆನೆ. ನಿರ್ವಾಹ–ಕಾರ್ಯಕ್ಷಮತೆ, ನಿರ್ವಾಹಿ–ಕಾರ್ಯಕ್ಷಮತೆಯುಳ್ಳವನು. ಈಶ್ವರಸಂಘಟನೆ–ದೈವಯೋಗ. ಕ್ಷುದ್ರನದಿ–ಸಣ್ಣಹೊಳೆ. ಪೂರ್ವಾಭಿಮಾನ–ಹಳೆಯ ಅಭಿಮಾನ. ಬದಲುಮಾತು–ಎದುರುಮಾತು.

ಪು. ೨೮೫-೮೮ : ಅನ್ಯಾದೃಶವು–ಬೇರೆ ಕಡೆ ಕಂಡುಬಾರದ್ದು. ಶೆಟ್ಟಿತನ–ವ್ಯಾಪಾರೀ ಸಂಸ್ಥೆ ಅಥವಾ ಶ್ರೇಣಿಯ ಅಧ್ಯಕ್ಷಶ್ರೇಷ್ಠಿಯ ಪದವಿ (ಸಂ.ಶ್ರೇಷ್ಠಿ>ಪ್ರಾ. ಸೆಟ್ಠಿ>ಕ. ಸೆಟ್ಟಿ). ಕೂಪಾರಾಮ–ಬಾವಿ ಮತ್ತು ತೋಟ. ಅರವಟ್ಟಿಗೆ–ಮಾರ್ಗಮಧ್ಯೆ ದಾರಿಹೋಕರಿಗೆ ಬಾಯಾರಿಕೆ ಕಳೆಯಲೆಂದು ವ್ಯವಸ್ಥೆಮಾಡಿದ ನೀರು, ಪಾನಕ, ಮಜ್ಜಿಗೆ ಮೊದಲಾದವುಗಳ ಉಚಿತ ವಿತರಣೆಯ ಮನೆ. ತೋಪು–ಗುಂಪಾಗಿ ಬೆಳಸಿದ ಮರಗಳ ನೆಲೆ. ಪುಷ್ಪವಾಟಿಕೆ–

ಹೂದೋಟ. ವಾರಾಂಗನಾಚರಣಮಂಜೀರ–ವೇಶ್ಯೆಯರ ಕಾಲಿನ ಅಂದುಗೆ. ಸಾಮಗ್ರಿಯ –ಸಜ್ಜು, ಸಲಕರಣೆ (<ಸಂ. ಸಾಮಗ್ರೀ, ಸಾಮಗ್ರ್ಯ). ಚಳಯ–ಸಿಂಪಡಿಕೆ. ಕಾಳಾಗರು–ಕಪ್ಪು ಅಗಿಲುಚಕ್ಕೆ. ಕದಲೀಸ್ತಂಭ–ಬಾಳೆಯ ಕಂಬ. ಮಂಜು–ಮನೋಹರ. ಸ್ವಸ್ತಿ ವಾಚನಧ್ವನಿ–ವೇದೋಕ್ತವಾಗಿ ಶುಭಕೋರುವ ಮಂತ್ರಗಳ ಪಠನ. ಮುದಿತ ಭುಜಂಗ ನಿಕರ–ಸಂತುಷ್ಟರಾದ ವಿಟರ ಸಮೂಹ. ಭೋಗವತಿ–ನಾಗಲೋಕ. ಧಾರಾಯಂತ್ರ–ತಾಪ ನಿವಾರಣೆಗೆ ಏರ್ಪಡಿಸಿದ ತಣ್ಣೀರಿನ ಕಾರಂಜಿ ; ಅದನ್ನು ಅಳವಡಿಸಿದ ಮನೆ ಧಾರಾಗೃಹ. ಗಗನಾಭೋಗ–ಆಕಾಶದ ಹರಹು. ಪ್ರಾಸಾದವಾತಾಯನ–ಉಪ್ಪರಿಗೆಯ ಗವಾಕ್ಷ. ಷೋಡಶ ಮಹಾದಾನ–ನೋಡಿ :'ಶ್ರೀವತ್ಸ ನಿಘಂಟು'. ಮಾಣಿಕ್ಯ–ಕೆಂಪುರತ್ನ. ಉಷ್ಣೀಷ –ತಲೆಯುಡುಗೆ, ಶಿರೋಭೂಷಣ. ಶ್ವೇತಚ್ಛತ್ರ–ಬೆಳ್ಗೊಡೆ. ಸುವಾಸಿನಿ–ಮುತ್ತೈದೆ.

ಪು. ೨೮೯-೯೦ : ಓಲೈಸು–ಓಲಗಿಸು, ಸೇವಿಸು. ಸೌರಭ್ಯ–ಸುಗಂಧ. ಅಮೃತಾವಿರ್ಭಾವ ದಿನ–ಕ್ಷೀರಸಾಗರವನ್ನು ಸುರಾಸುರರು ಮಥಿಸಿದಾಗ, ಅಮೃತ ಕಾಣಿಸಿಕೊಂಡ ದಿನ. ಬ್ರಾಹ್ಮಣರಿಗೆ ಭೂದಾನಶಾಸನಂಗಳಂ ಕೊಡುತ್ತಿರಲು–ಇದು ಮುಮ್ಮಡಿಯವರ ಕಾಲದಲ್ಲಿ ವಿಶೇಷ ಪ್ರಚಲಿತವಿತ್ತು. ಬಡತನವೆಂಬುವದು . . . ಇಂದ್ರಿಯಗಳಲ್ಲಿಯೇ ಇರುತ್ತಿದ್ದವು–ಬಡತನ ಹೆಂಗುಸರ ಸೊಂಟದ ಭಾಗದಲ್ಲಿದೆ (ಬಡವಾದ ನಡುವುಳ್ಳವರು), ಜನರಲ್ಲಿ ಬಡತನವಿಲ್ಲ. ವಕ್ರತೆ ಸ್ತ್ರೀಯರ ತೆಳುಹುಬ್ಬುಗಳಲ್ಲಿ ಉಂಟು, ಜನರ ಸ್ವಭಾವದಲ್ಲಿಲ್ಲ. ಕಠಿನತೆ ಸ್ತ್ರೀಯರ ಮೊಗ್ಗಿನಂಥ ಮೊಲೆಗಳಲ್ಲಿ ಉಂಟು (ನವಯೌವನವತಿಯರು), ಜನರ ಸ್ವಭಾವದಲ್ಲಿಲ್ಲ. ಕೊಲ್ಲುವುದು ಎನ್ನುವುದು ಪಗಡೆಯಾಟದಲ್ಲಿ ಉಂಟು (ಕಾಯಿ ಕೊಲ್ಲುವುದು), ಜನರ ವರ್ತನೆಯಲ್ಲಿಲ್ಲ. ಚಂಚಲತೆಯೆನ್ನುವುದು ಹೆಂಗುಸರ ಕಡೆಗಣ್ಣಿನಲ್ಲಿದೆ, ಜನರ ಮನೋನಿಶ್ಚಯದಲ್ಲಿಲ್ಲ. ಕುಟಿಲತೆಯನ್ನುವುದು ಸ್ತ್ರೀಯರ ಕೂದಲರಾಶಿಯಲ್ಲಿದೆ (ಗುಂಗುರು ಕೂದಲುಳ್ಳವರು), ಜನರ ಸ್ವಭಾವದಲ್ಲಿಲ್ಲ. ನಿಗ್ರಹವೆನ್ನುವುದು ಇಂದ್ರಿಯಗಳ ಪ್ರವರ್ತನೆಯಲ್ಲಿ ಉಂಟು (ಸಂಯಮಶಾಲಿಗಳು), ಜನರು ಯಾರನ್ನೂ ಹಿಂಸಿಸುತ್ತಿರಲಿಲ್ಲ (ನಿಗ್ರಹ-ಹಿಂಸೆ, ಶಿಕ್ಷೆ, ದಮನ). ವಿಪತ್ಪ್ರವಾಹಮಗ್ನನಾಗು –ಕಷ್ಟಗಳ ಪ್ರವಾಹದಲ್ಲಿ ಮುಳುಗಿ ಹೋಗು. ಪ್ರಾಕೃತವಾಕ್ಯ–ಜನಸಾಮಾನ್ಯದ ಮಾತು. ಓಸರ–ಭಂಗ. ಸನ್ನೆ–ಮೀಟುಗೋಲು, ಮೀಟಿ ಎತ್ತುವ ಕಬ್ಬಿಣದ ತೆಳುವಾದ ಗಡಾರಿ. ಸ್ತಂಭ–ಕಂಬ. ಪಡಗು–ಹಡಗು. ವೀಕ್ಷಣಕ–ಚಲನಗತಿಯನ್ನು ಕಣ್ಣಿಟ್ಟು ಕಾಯುವವನು. ಪೂರ್ಣತಟಾಕ–ತುಂಬಿದ ಕೆರೆ. ಹ್ರಾಸ–ಗ್ಲಾನಿ. ನಾಶ. ಕೋಶಗೃಹ–ಭಂಡಾರ. ಪರತ್ರ–ಪರಲೋಕ.

ಪು. ೨೯೧-೯೪ : ಖಂಡಿತ–ಅಪ್ರಿಯವಾದರೂ ಇದ್ದುದು ಇದ್ದಂತೆ ಹೇಳುವ ಮಾತು. ಬೀಜಾವಾಪನಾದಿಯಾಗಿ–ಬಿತ್ತನೆ ಮೊದಲುಗೊಂಡು. ವೃಷ್ಟಿ–ಮಳೆ. ಜಾಡ್ಯ–ಜಡತೆ, ಶುಷ್ಕತೆ. ಆಕರಿಸು–ವಸೂಲು ಮಾಡು, ತೆಗೆದುಕೋ. ರಿಕ್ತರು–ದರಿದ್ರರು. ಪಾದಾಕ್ರಾಂತರು –ಕಾಲಿಗೆ ಬೀಳುವವರು. ಪಠಿಸು–ಓದು, ಮನನ ಮಾಡು. ಅಲ್ಪಮೇಧಸ್ವಿ– ಕಡಮೆ ಬುದ್ಧಿಶಾಲಿ. ಅಂಧ–ಅಜ್ಞಾನಿ, ಗಾಢಸುಪ್ತ–ಗಾಢವಾದ ಮರವು, ಅಜ್ಞಾನ. ಅಂಧಕ–ಕುರುಡ. ನೇತ್ರಪ್ರಕಾಶ–ಕಣ್ಣಿನ ಬೆಳಕು. ಲೋಷ್ಟಸಮಾನ–ಮಣ್ಣಿನ ಹೆಂಟೆಗೆ ಸದೃಶ. ಕಾಷಾಯ–ಸಂನ್ಯಾಸಿಗಳು ತೊಡುವ ಕಾವಿಬಟ್ಟೆ. ಪ್ರಸ್ಥಾನಂಗೆಯಿಸು–ಪ್ರಯಾಣಮಾಡಿಸು.

ವಾತಾಯನಸ್ಥನಾರೀನಿಕುರುಂಬ–ಕಿಟಕಿಯ ಬಳಿಯಿರುವ ಹೆಂಗುಸರ ಗಂಪು. ನಯನಾಪಾಂಗವೀಕ್ಷಣ–ಕಣ್ಣಿನ ಕಡೆಗಣ್ಣಿನ ನೋಟ. ಓರೆನೋಟ. ಛತ್ರಪಙ್ಕ್ತಿ–ಕೊಡೆಗಳ ಸಾಲು. ಮಯೂರಪಿಂಛಿಕಾ–ನವಿಲುಗರಿಯ ಸೋಗೆ. ಕ್ರತು–ಯಾಗ.

ಉಪಸಂಹಾರ ಶ್ಲೋಕಗಳು : ಚಾಮರಾಜನ ಮಗನಾದ ಕೃಷ್ಣಭೂಮಿಪನು ಚಿರಕಾಲ ಜೀವಿಸಲಿ. ಅವನ ಕಡೆಗಣ್ಣಿನ ನೋಟವೆಂಬ ಅಂಕುರಗಳ ಗುಂಪು ಕವಿಗಳಿಗೆ ಕಲ್ಪವೃಕ್ಷವಾಗಿದೆ (೧). ೧೭೪೫ ಎಂಬ ಸಂಖ್ಯೆಯ ಶಾಲಿವಾಹನ ವರ್ಷಗಳು ಕಳೆಯುತ್ತಿರಲು, ನಾರಾಯಣನಿಂದ ಮುದ್ರಾಮಂಜೂಷವೆಂಬ ಕಾವ್ಯವು ರಚಿಸಲ್ಪಟ್ಟಿತು (೨). ಬೇರೆಯವರ ಗುಣದ ಹನಿಯನ್ನು ಸಮುದ್ರವನ್ನಾಗಿ ಮಾಡಿಕೊಂಡು ಅಲ್ಲಿಯೇ ವಿಹರಿಸುವ, ಮತ್ಸರವನ್ನು ತಿಳಿಯದ, ಒಳ್ಳೆಯವರಾದ ವಿದ್ವಾಂಸರಿಗೆ ನಮಸ್ಕಾರವಿರಲಿ (೩).

ಈ ಪದ್ಯಗಳಲ್ಲಿ ಕೊನೆಯದು ಸ್ವರಚಿತವಲ್ಲ ; ಅದರ ಆಕರ ರಾಮಚಂದ್ರನೆಂಬ ಕವಿಯ 'ಸರಸಕವಿ ಕುಲಾನಂದ'ವೆಂಬ ಭಾಣ (ದಶರೂಪಕಗಳಲ್ಲಿ ಒಂದು ಪ್ರಕಾರ) ಎಂಬುದಾಗಿ ತಿಳಿಯುತ್ತದೆ (ಡಿ.ವಿ.ಜಿ., 'ಜೀವನ ಸೌಂದರ್ಯ ಮತ್ತು ಸಾಹಿತ್ಯ', ಡಿ.ವಿ.ಜಿ ಕೃತಿಶ್ರೇಣಿ, ಸಂಪುಟ ೧, ೧೯೮೭, ಪು. ೯).

ಕೆಲವು ಆಕರಗಳ ಸೂಚಿ

Bhattacharya, S.

Mudrarakshasa (Sanskrit), Encyclopaedia of Indian Literature, Vol. 3, Sahitya Akademi, New Delhi, 1989, pp. 2771-72.

Dhruva, K. H.

Mudrarakshasa or The Signet Ring by Visakhadatta, The Oriental Book-Supplying Agency, Poona, 1923.

Om Prakash

On the Identity of Parvataka, Journal of Indian History, The University of Kerala, Trivandrum, 47-1, 1969, pp. 115-26.

Pandit, R. S.

Mudra-Rakshasa or The Signet Ring (English Tr.), New Book Company, Hornby Road, Bombay, 1944.

Raghavan, V. (Ed.)

Mudrarakshasa Nataka Katha of Mahadeva, The Saraswathi Mahal Series, I, Tanjore, 1946.

Sarma, D.

Mudrarakshasa-Purvasankathanakam, Bikaner, 1945.

Sathianathaier, R.

A Political and Cultural History of India, Vol.I, Ancient India, S.Viswanathan, Madras, 1964.

Historical notes on the Mudrarakshasa, Journal of Oriental Research, xii, pp. 147-58.

Seth, H. C.

Identification of Parvataka and Porus, Indian Historical Quarterly, 17-2, 1941, pp. 172-79.

Sheshagiri Rao, L. S.

Kempunarayana, Encyclopaedia of Indian Literature, Vol. 3, New Delhi, 1989, p. 2052

Sircar, D. C.

Studies in the Geography of Ancient and Medieval India, Motilal Banarsidass, Delhi, 1971 (2nd ed.).

Suniti Kumar Chatterji (Ed.)

The Cultural Heritage of India, Vol. 5, Languages and Literatures, The Ramakrishna Mission, Calcutta, 1991, p. 251, p. 516.

Telang, K. T. (Ed.)

Mudrarakshasa by Visakhadatta, Bombay Sanskrit Series, No. xxvii, Bombay. 1884 ; Poona, 1935 (8th ed.).

ಕೃಷ್ಣಭಟ್ಟ ಕೆ. (ಅನು.)

'ಕೌಟಲ್ಯನ ಅರ್ಥಶಾಸ್ತ್ರ', ಸಮಾಜ ಪುಸ್ತಕಾಲಯ, ಭಗತಸಿಂಗ ಬೀದಿ, ಧಾರವಾಡ, ೧೯೬೨.

ಕೃಷ್ಣಶಾಸ್ತ್ರೀ ಎ. ಆರ್.

'ಕರ್ನಾಟಕ ಮುದ್ರಾರಾಕ್ಷಸ ನಾಟಕಂ'—ಮೋ. ರಾಮಶೇಷ ಶಾಸ್ತ್ರಿ (ಗ್ರಂಥವಿಮರ್ಶೆ), ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ; ೧೭-೧. ಏ. ೧೯೩೨. ಪು. ೭೦-೭೫.

ವರರುಚಿಯ ವೃತ್ತಾಂತ, 'ಕಥಾಮೃತ', ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು-೪, ೧೯೫೨ (ದ್ವಿ. ಮುದ್ರಣ ೧೯೬೮),ಪು. ೨-೮.

ವಿಶಾಖದತ್ತ, 'ಸಂಸ್ಕೃತ ನಾಟಕ', ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೩೭, ಪು. ೧೫೦-೬೪.

ಗೋವಿಂದ ಪೈ ಎಂ.

ವಿಶಾಖದತ್ತನ ಮುದ್ರಾರಾಕ್ಷಸ ನಾಟಕದಲ್ಲಿಯ ವೃಷಲ ಎಂಬ ಶಬ್ದ, 'ಗೋವಿಂದ ಪೈ ಸಂಶೋಧನ ಸಂಪುಟ', ಉಡುಪಿ, ೧೯೯೫, ಪು. ೧೦೭೭-೮೧. (ಇಂಗ್ಲಿಷ್ ರೂಪ: M. Govinda Pai, Indiana, Studies in Indian Culture, History and Civilisations, Udupi, 1997, pp. 719-30)

ಜವರೇಗೌಡ ದೇ.

'ಗದ್ಯಶೈಲಿ', ಡಿ. ವಿ. ಕೆ. ಮೂರ್ತಿ, ಮೈಸೂರು, ೧೯೭೬.

ನರಸಿಂಹಾಚಾರ್ ಡಿ. ಎಲ್.

ಚಾಣಾಕ್ಯರಿಸಿಯ ಕಥೆ, 'ವಡ್ಡಾರಾಧನೆ', ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ೧೯೪೯, ಪು. ೧೭೨-೮೪.

ದೇವಿಚಂದ್ರಗುಪ್ತನಾಟಕ, 'ಪೀಠಿಕೆಗಳು ಲೇಖನಗಳು',ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೭೧, ಪು. ೫೨೫-೨೭.

ನಾಯಕ ಹಾ. ಮಾ. (ಪ್ರ. ಸಂ.)

'ಮುಮ್ಮಡಿ ಕೃಷ್ಣರಾಜ ಒಡೆಯರು', ಕನ್ನಡ ಅಧ್ಯಯನ ಸಂಸ್ಥೆ,ಮೈಸೂರು, ೧೯೭೦.

ಭೀಮರಾವ ಚಿಟಗುಪ್ಪಿ

ಕೆಂಪುನಾರಾಯಣ, 'ವಾಗ್ದೇವಿಯ ಭಾಂಡಾರ ಒಡೆದ ಕನ್ನಡ ಕವಿಗಳು', ದ್ವೈಪಾಯನ ಟ್ರಸ್ಟ್, ಮುಂಬಯಿ, ೧೯೭೪.

ಮುಗಳಿ ರಂ. ಶ್ರೀ.

ಕನ್ನಡ ಸಾಹಿತ್ಯದ ಇತಿಹಾಸ, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೬ (ತೃ. ಮುದ್ರಣ), ಪು. ೧೮೧

ಮುತ್ತಣ್ಣ ಐ. ಮಾ.

೧೯ನೆಯ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ, ಉಷಾ ಪ್ರೆಸ್, ಮೈಸೂರು, ೧೯೬೯, ಪು. ೪೬೪-೬೫

ರಾಮಶೇಷ ಶಾಸ್ತ್ರಿ, ಮೋಟಗಾನಹಳ್ಳಿ

'ಕರ್ನಾಟಕ ಮುದ್ರಾರಾಕ್ಷಸ ನಾಟಕಂ' ಕೆ. ಎನ್. ನರಸಿಂಹಯ್ಯ ಪ್ರೆಸ್, ಮೈಸೂರು, ೧೯೩೧

ವೆಂಕಟರಾಮಯ್ಯ ಸಿ. ಕೆ.

ಕೆಂಪುನಾರಾಯಣ, ಕನ್ನಡ ನುಡಿ, ೨೬-೪, ಏ. ೧೯೬೩, ಪು. ೭೮-೮೦

ವೆಂಕಟಾಚಲ ಶಾಸ್ತ್ರೀ ಟಿ. ವಿ.

ಕೆಂಪುನಾರಾಯಣ : ಒಂದು ಟಿಪ್ಪಣಿ, ಸಂಶೋಧನ ವ್ಯಾಸಂಗ ೨-೧, ೧೯೯೦, ಪು. ೮-೯; 'ಶ್ರೀಮುಖ', ಟಿ. ವಿ. ವೆಂ. ಶಾಸ್ತ್ರೀ ಅಭಿನಂದನಗ್ರಂಥ, ಮೈಸೂರು, ೧೯೯೭, ಪು. ೨೩೫-೩೭

'ಚಿಕ್ಕದೇವರಾಜ'—ಮ. ನ. ಮೂರ್ತಿ (ವಸ್ತುವಿಶ್ಲೇಷಣೆ), ಕನ್ನಡ ನುಡಿ, ೧೭-೪, ಏ. ೧೯೫೪, ಪು. ೭೩-೭೫; 'ಹೊಸಗನ್ನಡ. ಸಾಹಿತ್ಯ: ಕೆಲವು ನೋಟಗಳು', ಅಪರ್ಣಾ ಪ್ರಕಾಶನ, ಮೈಸೂರು, ೧೯೮೨, ಪು. ೯೮-೧೦೩

ಶಂಕರನಾರಾಯಣ ಉಡುಪ

'ಮುದ್ರಾಮಂಜೂಷ : ಒಂದು ಸಮಗ್ರ ಅಧ್ಯಯನ'(ಅಪ್ರಕಟಿತ ಪಿಎಚ್. ಡಿ. ಮಹಾಪ್ರಬಂಧ), ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೧೯೯೫.

ಶಂಕರನಾರಾಯಣ ರಾವ್ ಎಚ್. ಎಂ.

'ಕೆಂಪುನಾರಾಯಣ : ಕವಿ ಮತ್ತು ಕೃತಿ', ಗೀತಾ ಬುಕ್ ಹೌಸ್, ಮೈಸೂರು, ೧೯೭೭

ಮಹಾದೇವ-ರವಿನರ್ತಕ, 'ಉಪಾಯನ', ಪ್ರೊ. ಡಿ. ಎಲ್. ನರಸಿಂಹಾಚಾರ್ ಸಂಭಾವನಾಗ್ರಂಥ, ಬೆಂಗಳೂರು, ೧೯೬೭, ಪು. ೪೬೬-೭೩

ಶ್ರೀಕಂಠಯ್ಯ ತೀ. ನಂ.
'ರಾಕ್ಷಸನ ಮುದ್ರಿಕೆ', ಕಾವ್ಯಾಲಯ, ಮೈಸೂರು, ೧೯೪೨

ಶ್ರೀನಿವಾಸ ಹಾವನೂರ
'ಹೊಸಗನ್ನಡ ಅರುಣೋದಯ', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೪, ಪು. ೫೩೧-೩೨

ಸಣ್ಣಯ್ಯ ಬಿ. ಎಸ್.
'ದೇವಚಂದ್ರ ವಿರಚಿತ ರಾಜಾವಳೀಕಥಾಸಾರ', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೮, ಪು. ೮೦-೯೩

ಸ್ಟೀವೆನ್‌ಸನ್ ಜೆ.
'ಮುದ್ರಾಮಂಜೂಷವು ಎಂಬುವ ಚಂದ್ರಗುಪ್ತ ಚಾಣಕ್ಯರ ಚರಿತ್ರೆಯು', ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು, ೧೯೪೫ರ ಪರಿಷ್ಕರಣ ಮತ್ತು ಇತರ ಪರಿಷ್ಕರಣಗಳು.

ವೆಂಕಟನಾಥಾಚಾರ್ಯ ಎನ್. ಎಸ್.
'ಶ್ರೀವಿಷ್ಣುಗುಪ್ತವಿರಚಿತಮ್ ಕೌಟಲೀಯಾರ್ಥಶಾಸ್ತ್ರಮ್', ಪ್ರಾಚ್ಯವಿದ್ಯಾಸಂಶೋಧನಾಲಯಃ, ಮೈಸೂರು ವಿಶ್ವವಿದ್ಯಾನಿಲಯಃ, ಮೈಸೂರು, ೧೯೮೬ (ಪಂ. ಮುದ್ರಣ).

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿ ಸ್ಥಾಪಿಸಿರುವ ಸಂಸ್ಥೆಯಾಗಿದೆ. ವಿಶೇಷವಾಗಿ ಜನಪ್ರಿಯ ಪ್ರಕಾರಕ್ಕೆ ಸೇರಿದ ಪುಸ್ತಕಗಳನ್ನು ಪ್ರಕಟಿಸಿ, ಜನಸಾಮಾನ್ಯರಿಗೆ ಸುಲಭ ದರದಲ್ಲಿ ತಲುಪಿಸಬೇಕೆನ್ನುವುದು ಪ್ರಾಧಿಕಾರದ ಆಶಯವಾಗಿದೆ. ಸೃಜನಶೀಲ ಸಾಹಿತ್ಯಪ್ರಕಾರಕ್ಕೆ ಸೇರಿದ ಕೃತಿಗಳನ್ನು ಪ್ರಕಟಿಸಿರುವುದು ಹೆಚ್ಚಿಲ್ಲವಾದರೂ, ಪ್ರಕಟಿಸಿರುವಷ್ಟು ಮೌಲಿಕವಾದದ್ದಾಗಿದೆ. ಉಳಿದಂತೆ ವಿಮರ್ಶೆ, ಜೀವನಚರಿತ್ರೆ, ಶಾಸ್ತ್ರವಿಷಯ ಕುರಿತಾದ ಗ್ರಂಥಗಳು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳನ್ನು ಹೊರತರಲಾಗಿದೆ. ಹಳಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕುಮಾರವ್ಯಾಸ ಭಾರತವನ್ನು ಹೊರತುಪಡಿಸಿದರೆ ಇತರೆ ಯಾವುದೇ ಪ್ರಾಚೀನ ಸಾಹಿತ್ಯಕೃತಿಗಳನ್ನು ಹೊರತರುವಲ್ಲಿ ಪ್ರಾಧಿಕಾರವಾಗಲೀ, ಅಕಾಡೆಮಿಗಳಾಗಲೀ ಈವರೆಗೆ ಪ್ರಯತ್ನ ಮಾಡಿದಂತಿಲ್ಲ. ಕನ್ನಡ ಸಾಹಿತ್ಯದ ಪ್ರಾಚೀನಗ್ರಂಥಗಳನ್ನು ಈವರೆಗೂ ಹೆಚ್ಚು ಪ್ರಕಟಿಸಿರುವುದು ರಾಜ್ಯದ ವಿಶ್ವವಿದ್ಯಾಲಯಗಳೇ ಎನ್ನಬಹುದು.

ಕನ್ನಡಿಗರಿಗೆ ಪ್ರಾಚೀನ ಕನ್ನಡ ಗದ್ಯಕೃತಿಗಳು ಸುಲಭ ದರದಲ್ಲಿ, ಪರಿಶುದ್ಧ ರೂಪದಲ್ಲಿ ದೊರೆಯಬೇಕೆಂಬ ಆಶಯದಿಂದ ಹಳಗನ್ನಡ, ನಡುಗನ್ನಡದ ಹತ್ತು ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಲಾಯಿತು. ನಾಡಿನ ಹಿರಿಯ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಅವರು ಈ ಮಾಲೆಯ ಸಂಪಾದನಕಾರ್ಯದ ನೇತೃತ್ವ ವಹಿಸಲು ಒಪ್ಪಿಕೊಂಡು, ಸಕಾಲದಲ್ಲಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ